# ಕರ್ನಾಟಕದ ವೀರಶೈವಪರಂಪರೆಯ ಚಿತ್ರಕಲೆ

ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನಾ ಮಹಾಪ್ರಬಂಧ



ಸಂಶೋಧಕರು
ಬಿ.ಎಂ.ಪಾಟೀಲ

ಮಾರ್ಗದರ್ಶಕರು
ಡಾ.ಎಸ್.ಸಿ.ಪಾಟೀಲ
ಡೀನ್ ಲಲಿತಕಲಾ ನಿಕಾಯ.
ಮುಖ್ಯಸ್ಥರು ದೃಶ್ಯಕಲಾ ವಿಭಾಗ



ಲಲಿತಕಲಾ ನಿಕಾಯ,
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ - ೫೮೩೨೭೬
೨೦೧೨

# ಕರ್ನಾಟಕದ ವೀರಶೈವ ಪರಂಪರೆಯ ಚಿತ್ರಕಲೆ

**ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನಾ ಮಹಾಪ್ರಬಂಧ**

ಸಂಶೋಧಕರು
**ಬಿ.ಎಂ. ಪಾಟೀಲ**

ಮಾರ್ಗದರ್ಶಕರು
**ಡಾ. ಎಸ್. ಸಿ. ಪಾಟೀಲ**
ಡೀನ್, ಲಲಿತಕಲಾ ನಿಕಾಯ,
ಮುಖ್ಯಸ್ಥರು, ದೃಶ್ಯಕಲಾ ವಿಭಾಗ

ಲಲಿತಕಲಾ ನಿಕಾಯ
**ದೃಶ್ಯಕಲಾ ವಿಭಾಗ**
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩೨೭೬

೨೦೧೨

# ಪ್ರಮಾಣ ಪತ್ರ

**ಕರ್ನಾಟಕದ ವೀರಶೈವಪರಂಪರೆಯ ಚಿತ್ರಕಲೆ** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಹೆಚ್.ಡಿ ಪದವಿಗಾಗಿ ದೃಶ್ಯಕಲಾ ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರಾದ **ಡಾ. ಎಸ್. ಸಿ. ಪಾಟೀಲ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದ ದೃಶ್ಯಕಲಾ ವಿಭಾಗಕ್ಕೆ ಈ ಮಹಾಪ್ರಬಂಧವನ್ನು ಸಲ್ಲಿಸುತ್ತಿದ್ದೇನೆ.

ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಇನ್ನಿತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲ ಎಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ಹಂಪಿ, ವಿದ್ಯಾರಣ್ಯ
ದಿನಾಂಕ : ೨೪.೧೨.೨೦೧೨

24/12/12

**(ಬಿ. ಎಂ. ಪಾಟೀಲ)**
ಸಂಶೋಧನ ವಿದ್ಯಾರ್ಥಿ
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

# ದೃಢೀಕರಣ ಪತ್ರ

**ಬಿ. ಎಂ. ಪಾಟೀಲ** ಇವರು ನನ್ನ ಮಾರ್ಗದರ್ಶನದಲ್ಲಿ **ಕರ್ನಾಟಕದ ವೀರಶೈವಪರಂಪರೆಯ ಚಿತ್ರಕಲೆ** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಹೆಚ್.ಡಿ ಪದವಿಗಾಗಿ ಸಿದ್ಧಪಡಿಸಿದ್ದು, ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದ ದೃಶ್ಯಕಲಾ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ.

ಸದರಿ ಮಹಾಪ್ರಬಂಧವು ಮೂಲ ಸಂಶೋಧನ ಕೃತಿಯಾಗಿದ್ದು, ಇದರ ಯಾವುದೇ ಭಾಗ ಮತ್ತು ವಿಷಯವನ್ನು ಯಾವುದೇ ಉದ್ದೇಶಕ್ಕೆ ಬಳಸಿಕೊಂಡಿಲ್ಲ ಮತ್ತು ಈ ಮೊದಲು ಎಲ್ಲಿಯೂ ಪ್ರಕಟಗೊಂಡಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ ಮತ್ತು ದೃಶ್ಯಕಲಾ ವಿಭಾಗದ ಮೂಲಕ ಈ ಮಹಾಪ್ರಬಂಧವನ್ನು ಸಲ್ಲಿಸಲಾಗುತ್ತಿದೆ.

ಸ್ಥಳ : ಹಂಪಿ, ವಿದ್ಯಾರಣ್ಯ

24/12/12

**(ಡಾ. ಎಸ್. ಸಿ. ಪಾಟೀಲ)**
ಮಾರ್ಗದರ್ಶಕರು
ಡೀನ್, ಲಲಿತಕಲಾ ನಿಕಾಯ
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

# ಪರಿವಿಡಿ

ಅಧ್ಯಾಯ : ಒಂದು

# ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ



# ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಯಾವುದೇ ಒಂದು ದೇಶದ ಸಂಸ್ಕೃತಿ ಹಾಗೂ ಜನಾಂಗದ ಇತಿಹಾಸವನ್ನು ತಿಳಿಸುವ ಮಹತ್ವದ ಸಾಧನವಾಗಿ ಚಿತ್ರಕಲೆಯು ರೂಪುಗೊಂಡಿದೆ. ಅದು ಪ್ರಾಚೀನ ಸಂಸ್ಕೃತಿಯನ್ನು ಪ್ರತಿಬಿಂಬಿಸುವುದರ ಜೊತೆಗೆ ಆನಂದವನ್ನು ನೀಡುತ್ತದೆ. ಒಂದು ಚಿತ್ರ ಇಲ್ಲವೇ ಶಿಲ್ಪಕಲಾಕೃತಿ ಸಾವಿರಾರು ವರ್ಷಗಳ ಇತಿಹಾಸವನ್ನು ನಮ್ಮ ಕಣ್ಮುಂದೆ ನಿಲ್ಲಿಸುವ ಶಕ್ತಿಯನ್ನು ಪಡೆದಿದೆ. ಮಾನವನ ಮೊದಲ ಭಾಷೆ ಚಿತ್ರಕಲೆಯಿಂದಲೇ ಆರಂಭವಾಯಿತು. ಹಾಗೆಯೇ ಲಿಪಿಯ ಉಗಮಕ್ಕಿಂತ ಮೊದಲೇ ಚಿತ್ರಕಲೆ ಆರಂಭವಾಯಿತು ಎಂಬುದು ತಿಳಿದುಬರುತ್ತದೆ. ಲಲಿತ ಕಲೆಗಳು ಆಯಾ ಕಾಲದ ಸಾಂಸ್ಕೃತಿಕ ಇತಿಹಾಸವನ್ನು ತಮ್ಮಲ್ಲಿ ಒಡಮೂಡಿಸಿಕೊಂಡಿರುತ್ತವೆ. ಅಂತೆಯೇ ಕ್ರಿಸ್ತಪೂರ್ವ ಸಾವಿರಾರು ವರ್ಷಗಳ ಹಿಂದಿನ ಕಾಲದಲ್ಲಿ ಅಂದರೆ ಶಿಲಾಯುಗದ ಮೊದಲ ಅವಧಿಯಲ್ಲಿಯೇ ಮಾನವ ಚಿತ್ರ ಬರೆಯಲು ತಿಳಿದುಕೊಂಡಿದ್ದ. ಆತ ಚಿತ್ರಗಳನ್ನು ಮೂಳೆಗಳ ಮೇಲೆ, ಕಲ್ಲುಗಳ ಮೇಲೆ, ಗವಿಯೊಳಗಿನ ಗೋಡೆಗಳ ಮೇಲೆ ಬರೆದ. ಆಗಿನ ಚಿತ್ರಗಳು ಉತ್ತಮ ಮಟ್ಟದವು ಆಗಿದ್ದವು. ಆ ವೇಳೆಗಾಗಲೇ ಚಿತ್ರ ಬರೆಯುವುದರಲ್ಲಿ ಕೈ ಪಳಗಿತ್ತು. ಅದು ಪ್ರಾಚೀನ ನಾಗರಿಕತೆಯೊಂದರ ಅಂತಿಮ ಘಟ್ಟವೇ ಆಗಿರಬಹುದು.[೧]

ಕಲೆಯು ದಿಢೀರನೆ ಹುಟ್ಟಿಬರಲಿಲ್ಲ ಅಥವಾ ಇಂಥ ಕಾಲದಲ್ಲಿ ಹುಟ್ಟಿತು ಎಂದು ಹೇಳಲಿಕ್ಕಾಗುವುದೂ ಇಲ್ಲ. ಚಿತ್ರವಿರುವ ಕಲ್ಲನ್ನೋ, ಮಣ್ಣನ್ನೋ ಪರೀಕ್ಷೆಗೆ ಒಳಪಡಿಸಿ ಕಾಲಗಣನೆ ಮಾಡಿಕೊಂಡು ಚಿತ್ರಕಲಾ ರಚನೆಯ ಕಾಲವಿದೆಂದು ಗುರುತಿಸಬಹುದು. ಮನುಷ್ಯನ ಭಾಷೆ ಹುಟ್ಟುವ ಪೂರ್ವದಲ್ಲಿ ಸಂಪರ್ಕ ಸಾಧನವಾಗಿ ಚಿತ್ರಗಳು ಗುಹೆಗಳಲ್ಲಿ, ಬಂಡೆಗಳ ಮೇಲೆ ಕೊರೆಯಲ್ಪಟ್ಟವು ಎಂದು ವಿದ್ವಾಂಸರು ಹೇಳಿರುವರು. ಕ್ರಿ. ಶ. ಪೂರ್ವ ೪೦,೦೦೦ ದಿಂದ ೧೦೦೦ ವರ್ಷಗಳ ವರೆಗಿನ ಅವಧಿಯಲ್ಲಿ ಸಹರಾದಲ್ಲಿ ಕೃಷಿ, ಯುದ್ಧ, ಮಂತ್ರ, ಮಾಟಗಳಿಗೆ ಸಂಬಂಧಿಸಿದ ಚಿತ್ರಗಳಿದ್ದವೆಂದು[೨] ಡಾ. ಶಿವರಾಮ ಕಾರಂತರು ವಿವರಿಸುತ್ತಾರೆ.

**ಸ್ವಪ್ರಯೋಜನಕ್ಕಾಗಿ ಮಾಡಿದ ತಾಂತ್ರಿಕ ಹಿನ್ನೆಲೆ :**

ತನ್ನ ದೈನಂದಿನ ಬದುಕು ಸುಸೂತ್ರವಾಗಿ ಸಾಗುವ ಸಲುವಾಗಿ ಪ್ರಾಚೀನ ಮಾನವ ನಿಸರ್ಗದ ಮೊರೆ ಹೊಕ್ಕು, ಅಗೋಚರ ಶಕ್ತಿಗಳ ಆರಾಧನೆಗೆ ತೊಡಗಿ, ಆರಾಧಿಸಲು ಚಿತ್ರ ರಚನೆಗೆ ಕೈ ಹಾಕಿರುವ ಸಾಧ್ಯತೆ ಇದೆ. ಕೆಲವು ಗವಿಗಳು ತೀರ ದುರ್ಗಮವಾಗಿದ್ದು, ಪ್ರವೇಶಿಸಲು ಅಸಾಧ್ಯವಾದ ಸ್ಥಳಗಳಲ್ಲಿ, ಬೆಳಕು ಸಹ ಪ್ರವೇಶಿಸದ ಈ ಗವಿಗಳಲ್ಲಿ ಚಿತ್ರಗಳಿರುವುದನ್ನು ನೋಡಿದರೆ ಅವು ತಾಂತ್ರಿಕ ಹಿನ್ನೆಲೆಯಲ್ಲಿ ರಚಿಸಲ್ಪಟ್ಟಿದ್ದು, ತಮ್ಮ ಉದ್ದೇಶ ಈಡೇರಿಸಿಕೊಳ್ಳಲು ಆರಾಧನೆ ಮಾಡಿರಬೇಕು. ಈಗಲೂ ಮಾಟ, ಮಂತ್ರ, ಭಾನಾಮತಿಯನ್ನು ತಾಂತ್ರಿಕರು

---

೧. ಡಾ. ದೇ. ಜವರೇಗೌಡ / ನಿರಂಜನ : ಸಂ.: ಜ್ಞಾನಗಂಗೋತ್ರಿ', ಸಂಪುಟ– ೫ : ಕಲೆ ಸಾಹಿತ್ಯ : ಪು. ೧೭

೨. ಡಾ. ಶಿವರಾಮ ಕಾರಂತರು : ಕರ್ನಾಟಕದಲ್ಲಿ ಚಿತ್ರಕಲೆ, ಪು. ೬

ಗೌಪ್ಯ ಸ್ಥಳಗಳಲ್ಲಿ ಸಾಧನೆ, ಆರಾಧನೆ ಮಾಡುತ್ತಿರುವುದನ್ನು ಮನಗಾಣಬಹುದಾಗಿದೆ.[೩] ತನ್ನ ಅಂದಿನ ಅವಶ್ಯಕತೆಯಾದ ಪ್ರಾಣಿಗಳ ಬೇಟೆ, ಅವುಗಳ ವಶೀಕರಣದ ಅಂಗವಾಗಿ ಒಂದು ರೀತಿಯಲ್ಲಿ ವಶೀಕರಣದ ಪೂಜಾವಿಧಾನದ ಕುರುಹಾಗಿ ಈ ಚಿತ್ರಗಳನ್ನು ಬಿಡಿಸಿರುವುದು ಕಂಡುಬರುತ್ತದೆ.

ಮಾನವನ ಮನರಂಜನೆಯ ಹಿನ್ನೆಲೆಯಲ್ಲಿ, ತಾಂತ್ರಿಕ ಹಿನ್ನೆಲೆಯಲ್ಲಿ ಹಾಗೂ ಧಾರ್ಮಿಕ ಹಿನ್ನೆಲೆಯಲ್ಲಿ ಸಂಪರ್ಕ ಸಾಧನವಾಗಿ ಚಿತ್ರಕಲೆಯು ಬೆಳೆದುಬಂದಿತು.

ನಾಗರಿಕತೆ ಅರಳಿದ ನೈಲ್‌ನದಿ, ಯುಫ್ರೆಟಿಸ್, ಸಿಂಧೂ ನದಿ ತೀರಗಳಲ್ಲಿ ಗ್ರೀಸ್, ರೋಮ್, ಚೀನಾ, ಭಾರತಗಳಲ್ಲಿ ಶ್ರೇಷ್ಠವಾದ ಚಿತ್ರ ಶಿಲ್ಪಗಳ ಕಲೆಯ ಕುರಿತು ಬಹಳಷ್ಟು ದಾಖಲೆಗಳು ದೊರೆತಿವೆ. ಆಯಾ ರಾಷ್ಟ್ರೀಯ ಜೀವನ ಮತ್ತು ಸಂಸ್ಕೃತಿಯ ಅಧ್ಯಯನಕ್ಕೆ ಅವು ಮೂಲ ಆಕರ ಸಾಧನಗಳಾಗಿವೆ.

ಜಗತ್ತಿನ ಪ್ರಕೃತಿಯ ಆಗು ಹೋಗುಗಳಲ್ಲಿ ಮಾನವಾತೀತ ಶಕ್ತಿಯ ಕೈವಾಡದ ಕಲ್ಪನೆ ಪ್ರಾಯಶಃ ಭಯದಿಂದಲೇ ಮೂಡಿಕೊಂಡಿದೆ. ಹುಟ್ಟು ಸಾವುಗಳಂತಹ ಆಶ್ಚರ್ಯಗಳು ಮಾನವನ ಮನಸ್ಸಿನ ಮೇಲೆ ಅಗಾಧ ಪರಿಣಾಮ ಬೀರಿವೆ. ಅವನ ಚಿಂತನೆಗೆ ರೆಕ್ಕೆ ನೀಡಿವೆ. ಕರ್ಮ, ಪುನರ್ಜನ್ಮ, ಮೋಕ್ಷಗಳೆಂಬ ಕಲ್ಪನೆಗೆ ಹಾದಿ ಮಾಡಿವೆ. ವಿವಿಧ ದರ್ಶನಗಳನ್ನು ರೂಪಿಸಿವೆ. ಪರಮಾತ್ಮನನ್ನು ಸೃಷ್ಟಿಸಿ ಆತ್ಮ ಪರಮಾತ್ಮಗಳ ಸ್ವರೂಪ ಮತ್ತು ಸಂಬಂಧಗಳ ಕುರಿತು, ಆಶಯಗಳ ಈಡೇರಿಕೆಗೆ ದೇವರನ್ನು ತೃಪ್ತಿಪಡಿಸುವ ಆಕಾರ ನೀಡಿ, ಅದಕ್ಕೆ ಪೂರಕವಾಗಿ ಪ್ರತಿಮೆ, ಆಲಯ, ದೇವತಾ ಸಮುಚ್ಚಯ, ದೇವತಾ ಆಖ್ಯಾನ, ಶಿಲ್ಪಚಿತ್ರ, ಸಾಹಿತ್ಯಗಳ ರಚನೆಯನ್ನು ಪೋಷಿಸಿವೆ. ಆದುದರಿಂದ ಮಾನವಸಂಸ್ಕೃತಿಯಷ್ಟೇ ಧರ್ಮವು ಪ್ರಾಚೀನತಮವಾಗಿದೆ. ಅಂದಿನಿಂದಲೇ ಅದು ಲೌಕಿಕ ಮತ್ತು ಅಲೌಕಿಕಗಳ ನಡುವಣ ಕೊಂಡಿಯಾಗಿ ವರ್ತಿಸುತ್ತ ಬಂದಿದೆ. "ಜಗತ್ತಿನಾದ್ಯಂತ ಕಾಲ, ದೇಶಗಳಿಗೆ ಅನುಗುಣವಾಗಿ ವಿಭಿನ್ನ ಧರ್ಮ, ಆಚರಣೆಗಳು ಬೆಳೆದು ಬಂದಿವೆ. ಅವುಗಳಲ್ಲಿ ಕೆಲವು ತಮ್ಮ ಅನ್ವಯಿಕತೆಯನ್ನು ಕಾರಣಾಂತರಗಳಿಂದಾಗಿ ಕಳೆದುಕೊಂಡು, ಕಾಲದಲ್ಲಿ ಲೀನವಾಗಿವೆ. ಇನ್ನು ಕೆಲವು ತತ್ವ, ದರ್ಶನ, ಆಚರಣೆ, ಚಿಂತನೆಗಳಲ್ಲಿ ಬಲ ಸಂವರ್ಧಿಸಿಕೊಂಡು ಬದಲಾಗುತ್ತಿರುವ ಸಾಂಸ್ಕೃತಿಕ ಪರಿಸರಕ್ಕೆ ಒಗ್ಗಿಕೊಂಡು ಜೀವಂತವಾಗಿ ಉಳಿದು ಮುನ್ನಡೆಯುತ್ತಿವೆ".

ಭಾರತದಲ್ಲಿ ಮೂಡಿ ಬೆಳೆದ ಧರ್ಮಗಳಾದ ವೈದಿಕ, ಶೈವ, ವೈಷ್ಣವ, ಬೌದ್ಧ, ಜೈನ ಮುಂತಾದ ಹಲವು ಧರ್ಮಗಳು ಭಾರತದ ಸಂಸ್ಕೃತಿ ಮತ್ತು ನಾಗರಿಕತೆಯನ್ನು ಸಮೃದ್ಧಗೊಳಿಸಿವೆ. ಅಂಥವುಗಳಲ್ಲಿ ಶೈವಧರ್ಮ ಅತೀ ಪ್ರಾಚೀನತಮ ಧರ್ಮಗಳಲ್ಲಿ ಒಂದೆಂಬುದಾಗಿ ಗುರುತಿಸಿಕೊಂಡಿದೆ. ವೇದ, ಆಗಮಕಾಲಗಳಿಂದಲೂ ದೇವತಾ ಸಮುಚ್ಚಯಗಳಲ್ಲಿ ರುದ್ರ-ಶಿವರ ಹೆಸರು ಗಣನೀಯ ಪ್ರಮಾಣದಲ್ಲಿ ಗೋಚರಿಸುತ್ತದೆ. ಬಹುಶಃ ಸಿಂಧೂ ನಾಗರಿಕತೆಯ ಕಾಲದ ಧರ್ಮದಲ್ಲಿ ಆಗಲೇ ಶೈವಧರ್ಮದ ಮುದ್ರೆ ಬಲವಾಗಿತ್ತು. ರುದ್ರ-ಶಿವನು

೩. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪು. ೪೪, ೪೫

ಕ್ರಮೇಣ ಜನಪ್ರಿಯ ದೇವತೆಯಾಗಿ ಬೆಳೆದುಬಂದಿದ್ದು, ಆನಂತರದಲ್ಲಿ ಅವನೊಂದಿಗೆ ಹಲವು ದೇವತೆಗಳು ಸಮೀಕರಿಸಲ್ಪಟ್ಟು, ಶೈವ ದೇವತಾಖ್ಯಾನ ಮತ್ತು ಆಚರಣೆಗಳು ಕ್ರೂಢೀಕೃತಗೊಳ್ಳತೊಡಗಿದವು. ಪ್ರಾಚೀನ ಕಾಲದಿಂದ ಇಂದಿನವರೆಗೂ ಭಾರತದಲ್ಲಿ ಶಿವೋಪಾಸನೆ ಅತ್ಯಂತ ಜನಪ್ರಿಯವಾಗಿ ಉಳಿದಿದೆ.[೪] ಶೈವಧರ್ಮವು ಹಳ್ಳಿ-ಹಳ್ಳಿಗೂ ತಲುಪಿ ಇಂದಿಗೂ ಹಳ್ಳಿಗರನ್ನು ತನ್ನ ಆಕರ್ಷಣೀಯ ಮೇರೆಯೊಳಗೆ ಹಿಡಿದಿಟ್ಟುಕೊಂಡಿದೆ.

ಕುತೂಹಲಕಾರಿಯಾದ ಈ ಧರ್ಮ ಬೆಳೆದು ಬಂದ ರೀತಿಯೂ ಅಷ್ಟೇ ಕುತೂಹಲಕಾರಿಯಾಗಿದೆ. ಶೈವಧರ್ಮವು ಅವಶ್ಯಕತೆಗೆ ತಕ್ಕಂತೆ ಹೊಸ ಹೊಸ ವೈಚಾರಿಕ ಬದಲಾವಣೆಗಳನ್ನು ತನ್ನ ಪ್ರವಾಹದಲ್ಲಿ ಸೇರಿಸಿಕೊಂಡು ಮುನ್ನಡೆದಿದೆ. ಆ ಪ್ರವಾಹದಲ್ಲಿ ಲೀನವಾಗಿರುವ ಅನೇಕಾನೇಕ ಶೈವ ಆಚಾರ, ವಿಚಾರಗಳು ಹಲವಾರು ಸಲ ಸ್ಪಷ್ಟ ವ್ಯಾಖ್ಯಾನವನ್ನು ಮೀರಿ ನಿಂತಿವೆ. ಶಿವನನ್ನೇ ಪರಮೋಚ್ಚ ದೈವವೆಂದು ಪರಿಗಣಿಸಿದ್ದ ಹಲವು ಪಂಥಗಳು ಆಗಿಹೋಗಿವೆ. ಅವುಗಳಲ್ಲಿ ಗತದಲ್ಲಿದ್ದ ವೀರಶೈವ ಪಂಥವು ಆಚರಣೆ ನಂಬುಗೆಗಳನ್ನು ತನ್ನೊಳಗೆ ಉಳಿಸಿ ಬೆಳೆಸಿಕೊಂಡು ಬಂದಿದೆ. ಇಂತಹ ಶೈವ, ವೀರಶೈವ ಧರ್ಮದ ಇತಿಹಾಸ ಕುರಿತು ಹಲವಾರು ವಿದ್ವಾಂಸರು ಪಾಂಡಿತ್ಯಪೂರ್ಣವಾಗಿ ಅಧ್ಯಯನ ಮಾಡಿದ್ದಾರೆ ಹಾಗೂ ವಿವಿಧ ಲೇಖನ ಮತ್ತು ಗ್ರಂಥಗಳ ಮೂಲಕ ತಿಳಿಯಪಡಿಸಿದ್ದಾರೆ.

ಭಾರತದಲ್ಲಿ ರಾಜಕೀಯ ಇತಿಹಾಸದಂತೆ ಧಾರ್ಮಿಕ ಇತಿಹಾಸವೂ ಪ್ರಾಮುಖ್ಯತೆ ಪಡೆದುಕೊಂಡಿದೆ. ಧರ್ಮವು ಜನರಲ್ಲಿ ಹಾಸುಹೊಕ್ಕಾಗಿರುವ ಒಂದು ಬೇರಾಗಿದೆ. ಸಿಂಧೂ ಸಂಸ್ಕೃತಿಯ ಕಾಲದಿಂದಲೂ ಭಾರತದಲ್ಲಿ ಶೈವ ಧರ್ಮದ ಕುರಿತು ಅನೇಕ ವಿದ್ವಾಂಸರು ಅಧ್ಯಯನ ನಡೆಸಿದ್ದಾರೆ. ಆದರೆ ಧರ್ಮದೊಂದಿಗೆ ಬೆಳೆದು ಬಂದ ಚಿತ್ರಕಲೆಯ ಕುರಿತು ಅಧ್ಯಯನಗಳಾಗಿರುವುದು ಅಪರೂಪವೇ ಸರಿ. ಈ ಚಿತ್ರಕಲೆಯ ಭಾಗವಾಗಿರುವ ಶಿಲಾ ಚಿತ್ರಗಳು, ಭಿತ್ತಿ ಚಿತ್ರಗಳು, ಹಸ್ತಪ್ರತಿ ಚಿತ್ರಗಳು ಬೆಳೆದುಬಂದಿವೆ. ಕಲೆಯ ಜೀವವಿಕಾಸದಲ್ಲಿ ಮಾನವನೊಂದಿಗೆ ಇದ್ದು, ಅವನೊಂದಿಗೆ ಬೆಳೆದು ಬಂದ ಕಲೆ ಪ್ರಕೃತಿ ಮೂಲವಾದುದಾದರೆ, ಕಾಲಘಟ್ಟದ ಅಂತರದಲ್ಲಿ ಬರುವ ಸಾಹಿತ್ಯವು ಬುದ್ಧಿಜನ್ಯವಾದುದಾಗಿದೆ. ಈ ಕಾಲಘಟ್ಟಗಳ ಅಂತರವನ್ನು ಮೀರಿ ಒಂದೆಡೆಯಲ್ಲಿ ಕೂಡಿಕೊಂಡಿರುವ ಸಾಹಿತ್ಯ ಮತ್ತು ಚಿತ್ರಕಲೆಗಳು ಸಹಜವಾಗಿ ಬೆಳೆದುಕೊಂಡು ಬಂದಿವೆ. ನಮ್ಮ ಪ್ರಾಚೀನ ಭಿತ್ತಿಚಿತ್ರಗಳು, ಹಸ್ತಪ್ರತಿಗಳು ಇದಕ್ಕೆ ನಿದರ್ಶನವಾಗಿ ಅಲ್ಲಲ್ಲಿ ಕಂಡುಬರುತ್ತವೆ.

ಇಂದಿನ ಆಧುನಿಕ, ಸಾಂಸ್ಕೃತಿಕ ಜೀವನದಲ್ಲೂ ಕಲೆ ಮತ್ತು ಸಾಹಿತ್ಯಗಳು ಒಂದರೊಳಗೊಂದು ಬೆರೆಯುತ್ತ, ಒಂದು ಮತ್ತೊಂದನ್ನು ಅಭಿವ್ಯಕ್ತಿಗಾಗಿ ಆಶ್ರಯಿಸಿಕೊಂಡಿವೆ. ನಮ್ಮ ಪ್ರಾಚೀನ ಕವಿಗಳು, ಲಿಪಿಕಾರರು, ಚಿತ್ರಕಲಾವಿದರು ಕರ್ನಾಟಕದ ಭಿತ್ತಿಚಿತ್ರ ಮತ್ತು ಹಸ್ತಪ್ರತಿಗಳಲ್ಲಿ ಕೂಡಿಕೊಂಡು ಮಹತ್ವದ ಕಲಾಕೃತಿಗಳ ರಚನೆಯನ್ನು ಮಾಡಿರುವರು. ಸಹಬಾಳ್ವೆಯ ಬದುಕನ್ನು ಸಾಧಿಸಿ ತೋರಿಸಿದ್ದಾರೆ. ಜನಜೀವನದ ಸಾಂಸ್ಕೃತಿಕ ಬದುಕಿನ ಅಂಗಗಳಾಗಿರುವ

---

೪. ಡಾ. ಎಸ್. ಎನ್. ಕಡಪಟ್ಟಿ – ಪ್ರಾಚೀನ ಕರ್ನಾಟಕದಲ್ಲಿ ಶೈವಧರ್ಮ, ಪು. ೨

ಚಿತ್ರ, ಶಿಲ್ಪ, ಸಂಗೀತಗಳನ್ನು ಕುರಿತು ವ್ಯಾಪಕ ಉಳುಮೆಯ ಕಾರ್ಯವನ್ನು ಮಾಡದ ಕಾರಣ ಇಂದು ನಾವು ನಮ್ಮ ನಾಡಿನ ಅನೇಕ ಕಲಾಪ್ರಕಾರಗಳನ್ನು ಗಮನಿಸಲಾರದೆ ಬಾಡಿಹೋಗುತ್ತಿವೆ. ಉಳಿದ ಕೆಲವು ಹಳೆಯ ಉಳಿಕೆಗಳು ಕೆಲವು ಜನರ ಮನೆಯ ಬದುಕಾಗಿ, ಕುಲದ ಕಸುಬಾಗಿ ಉಳಿದುಕೊಂಡು ಬಂದಿವೆ. ಈ ಕಲೆಗಳು ಅಲ್ಲಲ್ಲಿ ಮನೆ, ಅರಮನೆ, ಮಠ, ದೇವಾಲಯಗಳಲ್ಲಿ ಹಸ್ತಪ್ರತಿಗಳು ಮತ್ತು ಭಿತ್ತಿಚಿತ್ರಗಳಲ್ಲಿ ಇರುವುದನ್ನು ಕಾಣುತ್ತೇವೆ. ಈ ಕಾರಣಕ್ಕಾಗಿ ಬಹುಶಃ ನಮ್ಮ ನಾಡಿನ ಸಾಹಿತ್ಯಕ್ಕೆ ದಕ್ಕಿದ ಜನಸ್ಪಂದನೆ ಕಲಾಪ್ರಕಾರಕ್ಕೆ ಲಭಿಸಲಿಲ್ಲ. ಇಂದಿಗೂ ಕಲೆ ಎಂಬುದು ಕೇವಲ ನೋಡುವ ವಸ್ತುವಾಗಿ ಉಳಿದುಕೊಂಡಿದೆ. ಕಲೆಯನ್ನು ನೋಡುವ, ಅಧ್ಯಯನಕ್ಕೆ ಒಳಪಡಿಸುವ, ಅದರೊಳಗೆ ಲಯಗೊಳ್ಳುವ ಸಂಸ್ಕಾರವನ್ನಾಗಲಿ, ಮಾನಸಿಕ ತರಬೇತಿಯನ್ನಾಗಲಿ ನೀಡದ ಕಾರಣ ನಮ್ಮ ನಾಡಿನ ಕಲೆಗಳು ಕೇವಲ ಮನರಂಜನೆಯ ಮಾಧ್ಯಮಗಳಾಗಿ ಉಳಿದುಕೊಂಡಿವೆ. ಈ ಕಹಿ ಸತ್ಯ ಕರ್ನಾಟಕದ ಧಾರ್ಮಿಕ ಚಿತ್ರಗಳಿಗೂ ಅನ್ವಯಿಸುತ್ತದೆ.

ಕನ್ನಡಿಗರ ಸಮಗ್ರ ಬದುಕಿನ ಆಕರ ಜನಜೀವನದ ಅಧ್ಯಯನಕ್ಕೆ ಒಳಪಡದೆ, ಕೇವಲ ಭಾಷಾಶಾಸ್ತ್ರದ ಇಲ್ಲವೆ ಸಾಹಿತ್ಯದ ಹಂತಕ್ಕೆ ಸೀಮಿತಗೊಂಡಂತಿದೆ. ಉದಾಹರಣೆಗೆ ಹೇಳುವುದಾದರೆ – ಕಾಗದ ಅಥವಾ ತಾಳೆಗರಿಯೊಳಗಿನ ಮತ್ತು ಉದ್ಧರಣೆ ವಚನಗಳಲ್ಲಿಯ "ಪದದ" ಕುರಿತು ಚಿಂತನ-ಮಂಥನ, ದೂರಾನ್ವಯಗಳ ಕಾರ್ಯ ನಡೆದಂತೆ, ಆ ಕಾವ್ಯ (ಪದ)ದ ಪಕ್ಕದಲ್ಲಿರುವ ಸಮಾನಾರ್ಥವಾಗಿ ರೂಪು ತಾಳಿರುವ "ಚಿತ್ರಗಳ" ಕುರಿತು ಅದರ ಭಾವರಸಗಳಾಗಲಿ, ಕನಿಷ್ಟ ರೇಖಾವಿನ್ಯಾಸವಾಗಲಿ, ಅಲಂಕಾರಗಳಾಗಲಿ ನಮ್ಮ ಜಿಜ್ಞಾಸುಗಳ ಮನಕ್ಕೆ ತಲುಪಿರುವುದು ತುಂಬಾ ಕಡಿಮೆಯೆನಿಸುತ್ತದೆ. ಇಂತಹ ಕಾರಣಗಳಿಂದಾಗಿಯೇ "ಕರ್ನಾಟಕದ ವೀರಶೈವ ಪರಂಪರೆಯ ಚಿತ್ರಕಲೆ"ಯನ್ನು ಅಧ್ಯಯನ ಮಾಡುವ ಉದ್ದೇಶ ಹೊಂದಲಾಗಿದೆ.

**ಅಧ್ಯಯನದ ಉದ್ದೇಶ:**

ಇತಿಹಾಸದಲ್ಲಿ ಕಲೆಯು ತನ್ನದೇ ಆದ ವ್ಯಾಕರಣದೊಂದಿಗೆ ಸಾರ್ವತ್ರಿಕವಾಗಿ ಸೌಂದರ್ಯದ ಹಿನ್ನೆಲೆಯಲ್ಲಿ ಅಂತಾರಾಷ್ಟ್ರೀಯ ಮಾಧ್ಯಮವಾಗಿ ಬೆಳೆದುಕೊಂಡು ಬಂದಿದೆ. ಕಲೆಯು ಆಯಾ ಸಂದರ್ಭದಲ್ಲಿ ಧಾರ್ಮಿಕ ಹಿನ್ನೆಲೆಯಲ್ಲಿ ಶೈವ, ಬೌದ್ಧ, ಜೈನ, ವೈಷ್ಣವ, ಪಾರ್ಸಿ (ಮುಸ್ಲಿಂ) ಮತಗಳಲ್ಲಿಯಾಗಲಿ ಇಲ್ಲವೇ ರಾಜಕೀಯ ಹಿನ್ನೆಲೆಯಲ್ಲಿ ಶಾತವಾಹನ, ವಾಕಾಟಕ, ಚಾಲುಕ್ಯ, ರಾಷ್ಟ್ರಕೂಟ, ಚೋಳ, ಹೊಯ್ಸಳ, ವಿಜಯನಗರ ಹಾಗೂ ವಿಜಯನಗರೋತ್ತರ ಕಲಾಶೈಲಿಗಳಾಗಿ ಬೆಳೆದು ಬಂದಿದೆ. ಧಾರ್ಮಿಕ, ಮತ, ಪಂಥಗಳ ಪರಂಪರೆ ಎನ್ನುವುದನ್ನು ಗುರುತಿಸುತ್ತ ಬಂದಿದೆಯೇ ಹೊರತು, ಕಲೆಯನ್ನು ಧಾರ್ಮಿಕ ಹಾಗೂ ರಾಜಕೀಯ ಹಿನ್ನೆಲೆಯಲ್ಲಿ ನೋಡುವುದಿಲ್ಲ. ಏಕೆಂದರೆ ಇಲ್ಲಿ ಕೆಲವೊಮ್ಮೆ ವಿಷಯವು ಗೌಣವಾಗಿ, ಸಂಕೇತಗಳು ಪ್ರಧಾನವಾಗಿ ಕಲೆಯು ತನ್ನದೇ ಆದ ಭಾಷ್ಯದೊಂದಿಗೆ ಸೌಂದರ್ಯದ ಹಿನ್ನೆಲೆಯಲ್ಲಿ ಜಗತ್ತಿನ ಮಾಧ್ಯಮವಾಗಿ ಬೆಳೆದುಬಂದಿದೆ.

ಪ್ರಾಚೀನ ಭಾರತದಲ್ಲಿ ಚಿತ್ರಕಲೆಯ ಕುರಿತು ಪ್ರಾಸ್ತಾವಿಕವಾಗಿಯಲ್ಲದೆ ಕೆಲವು ಸಲ ಚಿತ್ರಕಲೆಯ ವಿಷಯವಾಗಿಯೇ ಸಾಹಿತ್ಯ ಗ್ರಂಥಗಳು ರಚನೆಗೊಂಡಿವೆ. ನಮ್ಮ ಭಾರತೀಯ ಸಂಸ್ಕೃತಿಯನ್ನು ಪ್ರತಿನಿಧಿಸುವ

ಅಧಿಕಾರ ಬಹಳ ಮಟ್ಟಿಗೆ ಭಾರತೀಯ ಲಲಿತಕಲೆಗಳಿಗೆ ಇದೆ.[೫] ಲಲಿತ ಕಲೆಗಳಲ್ಲಿ ಪ್ರಧಾನವಾದ ಕಲೆ ಚಿತ್ರಕಲೆ. ಇದು ನಮ್ಮ ಸಂಸ್ಕೃತಿಯಲ್ಲಿ ಅಧಿಕ ಮನ್ನಣೆ ಪಡೆದು ವಿವಿಧ ಕಾಲಘಟ್ಟಗಳಲ್ಲಿ ಬೆಳವಣಿಗೆಯನ್ನು ಹೊಂದುತ್ತ ಬಂದಿದೆ. ಪ್ರದೇಶನಿಷ್ಠ ಮತ್ತು ಜನಾಂಗನಿಷ್ಠ ವೈಶಿಷ್ಟ್ಯಗಳನ್ನು ಹೊಂದಿ ರಾಜಾಶ್ರಯವಲ್ಲದೇ ವಿವಿಧ ಧರ್ಮಗಳ ಗುರುಗಳು, ಶರಣರು, ಸಾಧು ಸಂತರ ಧಾರ್ಮಿಕ ಹಿನ್ನೆಲೆಯಲ್ಲಿಯೂ ಕಾಣಿಸಿಕೊಂಡಿದೆ. ಶೈವ ಅರಸರ ಕಾಲದಲ್ಲಿ ಶೈವಕಲೆ, ಬೌದ್ಧ ಅರಸರ ಕಾಲದಲ್ಲಿ ಬೌದ್ಧ ಕಲೆ, ಜೈನ ಅರಸರ ಕಾಲದಲ್ಲಿ ಜೈನ ಕಲೆ, ಮೊಘಲ್ ಅರಸರ ಕಾಲದಲ್ಲಿ ಮೊಘಲ್ ಕಲೆ, ಸುಲ್ತಾನ ಅರಸರ ಕಾಲದಲ್ಲಿ ದಖ್ಖನ್ ಕಲೆ, ರಜಪೂತ ಅರಸರ ಕಾಲದಲ್ಲಿ ರಜಪೂತ ಕಲೆ ಅಲ್ಲದೇ ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ, ವಿಜಯನಗರ, ಮೈಸೂರು ಇತ್ಯಾದಿ ವಿವಿಧ ಪ್ರದೇಶಗಳಲ್ಲಿ ಆಯಾ ಹೆಸರಿನ ಕಲೆಯಾಗಿ, ಕಲಾ ಶೈಲಿಯಾಗಿ ಬೆಳೆದುಬಂದಿದೆ. ಈ ಕಲೆಯು ಐತಿಹಾಸಿಕವಾಗಿ, ಚಾರಿತ್ರಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ ಹಾಗೂ ಧಾರ್ಮಿಕವಾಗಿಯೂ ಬೆಳೆದುಬಂದಿದ್ದು, ಪ್ರಸ್ತುತ ವೀರಶೈವ ಪರಂಪರೆಯ ಚಿತ್ರಕಲೆಯೂ ಇದಕ್ಕೆ ಹೊರತಾದುದಲ್ಲ.

ಯಾವುದೇ ದೇಶದ ಅಥವಾ ಈ ನಾಡಿನ ಕಲೆ ಒಮ್ಮೆಲೆ ಪರಿಪೂರ್ಣತೆಯ ಹಂತವನ್ನು ತಲುಪಿಲ್ಲ. ಅವು ಪರಿಪಕ್ವತೆಯ ಹಂತವನ್ನು ಮುಟ್ಟುವುದಕ್ಕೆ ಶತಶತಮಾನಗಳುದ್ದಕ್ಕೂ ಸಾವಿರಾರು ಕಲಾವಿದರು, ಪ್ರತಿಭಾವಂತರು ಅವಿರತವಾಗಿ ಮಾಡಿದ ಪ್ರಯತ್ನ ಇರುತ್ತದೆ. ಹಾಗೆಯೇ ನಾಡಿನ ಪ್ರಜೆಗಳ ಹಾಗೂ ಅವರ ಪ್ರತಿನಿಧಿಗಳಾಗಿರುತ್ತಿದ್ದ ಅರಸರ, ಮಾಂಡಲಿಕರ, ನಾಯಕರ ಆಶ್ರಯವಲ್ಲದೇ, ಗುರುಗಳ ಪ್ರೋತ್ಸಾಹದೊಂದಿಗೆ ಪಾಲನೆ-ಪೋಷಣೆ ಇರುತ್ತವೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ವೀರಶೈವ ಪರಂಪರೆಯ ಚಿತ್ರಕಲೆಯ ಅಧ್ಯಯನವನ್ನು ಕೈಗೊಂಡಿದ್ದು, ಕರ್ನಾಟಕದ ಮತಧರ್ಮಗಳಲ್ಲಿ ವೀರಶೈವವೂ ಒಂದು ಪ್ರಮುಖ ಪಂಥವಾಗಿದ್ದು "ವೀರಶೈವ ಎಂಬುದು ಒಂದು ಜಾತಿಯಲ್ಲ, ಅದು ಒಂದು ತತ್ವವನ್ನು ಅವಲಂಬಿಸಿರುವ ಪಂಥ".

ಯಸ್ಯೈವಂ ಶಾಂಭವೀ ದೀಕ್ಷಾ ಜಾತಾ ಗುರುಕೃಪಾವಶಾತ್ ।
ಪೂರ್ವಂ ಜಾತ್ಯಾದಿಕಂ ಸತ್ಯಂ ನ ಸ್ಮರೇತ್ಪ್ರಾಕೃತಂ ಹಿ ತತ್ ।
ಅಪ್ರಾಕೃತಸ್ಯ ಭಕ್ತಸ್ಯ ಗುರುಹಸ್ತಾಮಲಾಂಬುಜಾತ್ ।
ಪುನರ್ಜಾತಸ್ಯಾತ್ಮಜನ್ಮ ಜಾತ್ಯಾದಿನ ಚ ಕಲ್ಪಯೇತ್ ॥
ಭಕ್ತಸ್ಯ ಪ್ರಾಕ್ತನಂ ಜನ್ಮನಾಮ ಜಾತ್ಯಾದಿಕಂ ಚ ಯತ್ ।
ಪೃಚ್ಛೇದ್ವಾ ಕಥಯೇದ್ವಾಪಿ ಸ ವೈ ಪಾತಕಿನಾಂ ವರಃ ।
ತಸ್ಮಾತ್ಸರ್ವ ಪ್ರಯತ್ನೇನ ಮಮ ಲಿಂಗಾಂಗ ಸಂಗಿನಂ ।
ಮಾಮೇವ ಮನುತೇ ಯಸ್ತು ಸೋಪಿ ಮುಚ್ಯೇತ ಬಂಧನಾತ್ ॥

(-ಸೂ ೫-೬೩-೬೮)

೫. ಡಾ. ಎಸ್. ಸಿ. ಪಾಟೀಲ : ವರ್ಣ ಸಂಚಯ : ವಿಜಯ ಚಿತ್ರಕಲಾ ಮಹಾವಿದ್ಯಾಲಯ. ಇಳಕಲ್. ಪು. ೨೫

ಶ್ರೀ ಗುರು ಕೃಪೆಯಿಂದ ಶಿವದೀಕ್ಷೆಯಾದವರಲ್ಲಿ ಪೂರ್ವದ ಜಾತ್ಯಾದಿಗಳನ್ನು ವಿಚಾರಿಸಬಾರದು. ಗುರುಹಸ್ತದಲ್ಲಿ ಹುಟ್ಟಿದ ಅಪ್ರಾಕೃತ ಭಕ್ತನಿಗೆ ಜನ್ಮ ಜಾತಿಗಳನ್ನು ಇಲ್ಲಿ ಕಲ್ಪಿಸಲಾಗದು. ಎಲ್ಲ ಬಗೆಯಿಂದ ನನ್ನ ಲಿಂಗಾಂಗ ಸಂಗಿಯಾದವನನ್ನು ನನ್ನ ಸ್ವರೂಪನೇ ಎಂದು ಅರಿತವನು ಬಂಧಮುಕ್ತನಾಗುವನು. ಜಾತ್ಯತೀತವಾದವು ವೀರಶೈವ ಮತದಲ್ಲಿ ಅಂದೇ ಇದ್ದಿತು. ಇಲ್ಲಿ ವರ್ಣಗಳಿಗೂ ಅವಕಾಶವಿಲ್ಲ. ಗುರುವಿನಿಂದ ದೀಕ್ಷೆಯಾದ ವೀರಶೈವನಿಗೆ ಪೂರ್ವಜನ್ಮವಾಗಲಿ, ಜಾತಿಯಾಗಲಿ ಇರುವುದಿಲ್ಲ,[೧] ಎಲ್ಲರೂ ಸರಿಸಮಾನರು.

ಲಿಂಗವಂತಿಕೆ ವೀರಶೈವದ ಮುಖ್ಯ ಲಕ್ಷಣವೆಂದರೆ ಶಿವಲಿಂಗವನ್ನು ಮಸ್ತಕ, ಕಂಠ, ಹೃದಯ ಭಾಗದಲ್ಲಿ ಧರಿಸುವುದರೊಂದಿಗೆ ಲಿಂಗವು ಪರಶಿವಬ್ರಹ್ಮದ ಪ್ರತೀಕವೆಂದು ತಿಳಿಯಲಾಗಿದೆ. ಶಿವಲಿಂಗವನ್ನು ಪೀಠ ಅಥವಾ ವೇದಿಕೆಯ ಮೇಲೆ ಇಟ್ಟು ಅಥವಾ ಸ್ಥಾಪಿಸಿ ಆರಾಧಿಸುವುದು ಶೈವಧರ್ಮ. ಅದೇ ಶಿವಲಿಂಗವನ್ನು ಗುರುಮುಖದಿಂದ ಶಿವದೀಕ್ಷೆಯಲ್ಲಿ ಪಡೆದು ಶರೀರದ ಮೇಲೆ ಧರಿಸುವುದು ವೀರಶೈವ ಧರ್ಮವಾಗಿದೆ. ಅಂತರಂಗದಲ್ಲಿ ಪ್ರಾಣಲಿಂಗ ಮತ್ತು ಭಾವಲಿಂಗವೆಂದೂ, ಬಾಹ್ಯದಲ್ಲಿ ಇಷ್ಟಲಿಂಗವೆಂದೂ ಭಾವಿಸಿ, ತ್ರೈವಿಧೋಪಾಸನೆಯ ಕ್ರಮದಂತೆ ಎಂದರೆ ಇಷ್ಟಲಿಂಗದಲ್ಲಿ ಪ್ರಾಣಲಿಂಗ, ಭಾವಲಿಂಗಗಳನ್ನು ಏಕೀಕರಿಸಿ ಲಿಂಗವನ್ನು ವಾಮಹಸ್ತದಲ್ಲಿಟ್ಟು ಪೂಜಿಸಿ "ಶಿವೋಹಂ ಭಾವದಿಂದ ಶಿವನೇ ನಾನು" ಎಂದು ಅನುಸಂಧಾನ ಮಾಡುವುದು ವೀರಶೈವ ಉಪಾಸನಾ ಪದ್ಧತಿಯಾಗಿದೆ.

ಈ ಶಿವಲಿಂಗೋಪಾಸನವು ಕೇವಲ ಕರ್ನಾಟಕಕ್ಕೆ ಅಥವಾ ಭಾರತಕ್ಕೆ ಸೀಮಿತವಾದುದಲ್ಲ. ಅದು ಅತ್ಯಂತ ಪುರಾತನವಾದುದು. ಸಿಂಧೂ ನದಿಯ ಕಣಿವೆ, ಈಜಿಪ್ತ, ಸುಮೇರಿಯನ್ ಮತ್ತು ಅಸ್ಸೀರಿಯನ್ ಸಂಸ್ಕೃತಿಗಳನ್ನು ಒಳಗೊಂಡ ಮೆಡಿಟರೇನಿಯನ್ ಸಮುದ್ರದವರೆಗೂ ಹಬ್ಬಿತ್ತೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಅಷ್ಟೇ ಅಲ್ಲದೇ ಉತ್ತರ ಆಫ್ರಿಕಾ, ಬ್ಯಾಬಿಲೋನಿಯಾ (ಟರ್ಕಿ), ಬ್ರೆಜಿಲ್, ಅಮೇರಿಕಾ, ಗ್ರೀಸ್, ಸ್ಕಾಟಲ್ಯಾಂಡ್, ಜಿನೀವಾ, ಕಾಬೂಲ್ ಮುಂತಾದ ಕಡೆಗಳಲ್ಲಿ ಶಿವಲಿಂಗಗಳು, ನಂದಿವಾಹನ, ಗಣಪತಿ, ಪಾರ್ವತಿ ಮುಂತಾದ ಶೈವ ಮೂರ್ತಿಗಳು ಇರುವುದು ತಿಳಿದುಬರುತ್ತದೆ.[೨]

ಹರಪ್ಪ ಮೋಹೆಂಜೋದಾರೋದಲ್ಲಿ ದೊರೆತಿರುವ ವಸ್ತುಗಳಲ್ಲಿ ಯೋಗಾರೂಢ ಶಿವಯೋಗಿ, ಶಿವಲಿಂಗ, ವೃಷಭ, ಅಶ್ವತ್ಥವೃಕ್ಷ, ತಾಂತ್ರಿಕ ಚಿಹ್ನೆಗಳಾದ ಚಕ್ರ, ತ್ರಿಕೋನ, ಶಿವ, ಪಶುಪತಿ ಮುಂತಾದವುಗಳು ಸೇರಿವೆ. ಅಲ್ಲಿ ದೊರೆತಿರುವ ಶಿವಲಿಂಗಗಳಲ್ಲಿ ದೊಡ್ಡವುಗಳನ್ನು ಅಂದಿನ ಜನರು ಪೀಠ ಅಥವಾ ವೇದಿಕೆಗಳಲ್ಲಿ ಇಟ್ಟು ಪೂಜಿಸುತ್ತಿದ್ದಿರಬೇಕು. ಸಣ್ಣವುಗಳನ್ನು ಶರೀರದ ಮೇಲೆ ಧರಿಸುತ್ತಿದ್ದಿರಬೇಕೆಂದು ಊಹಿಸಬಹುದಾಗಿದೆ.

ಭಾರತೀಯ ಸಂಸ್ಕೃತಿಯನ್ನು ಸಾರುವ ಅತ್ಯಂತ ಪ್ರಾಚೀನ ಪಳೆಯುಳಿಕೆಗಳನ್ನು ಹೊಂದಿರುವ ಹರಪ್ಪ ಮೋಹೆಂಜೋದಾರೋದಲ್ಲಿ ಶೈವ ಮತ್ತು ವೀರಶೈವ ಸಂಸ್ಕೃತಿಗಳನ್ನು ಪ್ರತಿಪಾದಿಸುವ ಅಂಶಗಳು ಹಾಗೂ

---

೧. ಸಂ. ಎಂ. ಜಿ. ನಂಜುಂಡಾರಾಧ್ಯ – ಶಿವಾಗಮ ಸೌರಭ, ಡಾ. ಶ್ರೀ ಜ.ಚ.ನಿ.–ಲೇ–"ಸೂಕ್ಷ್ಮಾಗಮದಲ್ಲಿ ಸುಸ್ಪಷ್ಟ ವೀರಶೈವ ವಿಧಾನ", ಪು. ೫

೨. ಡಾ. ಎಸ್. ಶ್ರೀಕಂಠಶಾಸ್ತ್ರಿಗಳು : ಭಾರತೀಯ ಸಂಸ್ಕೃತಿ', ಪು. ೪೯, ಮೈಸೂರು ವಿಶ್ವವಿದ್ಯಾಲಯ, ಮೈಸೂರು

ಧಾರ್ಮಿಕ ವಸ್ತುಗಳು ದೊರೆತಿದ್ದು, ಅದರಲ್ಲಿಯ ಚಿತ್ರಶಿಲ್ಪ ಉಬ್ಬು ಕೆತ್ತನೆಗಳು ಪ್ರಮಾಣಬದ್ಧವಾಗಿ ರಚನೆಗೊಂಡ ಹಂತಗಳನ್ನು ಗಮನಿಸಿದರೆ ಈ ನಾಗರಿಕತೆಗಿಂತಲೂ ಪೂರ್ವದಲ್ಲಿಯೇ ಈ ಚಿತ್ರಶಿಲ್ಪ ಉಬ್ಬುಗೆತ್ತನೆಯಂತಹ ಕಲೆಗಳು ಬೆಳೆದುಬಂದಿವೆ ಎಂಬುದು ತಿಳಿದುಬರುತ್ತದೆ. ಈ ಸಿಂಧೂ ಸಂಸ್ಕೃತಿಯು ಪ್ರಾಚೀನ ಭಾರತದ ದ್ರಾವಿಡ ಸಂಸ್ಕೃತಿ ಆಗಿದ್ದು, ಅದರಲ್ಲಿ "ವೀರಶೈವ"ದ ನೆಲೆಯಿದ್ದುದು ಸಂಶೋಧನೆಯಿಂದ ತಿಳಿದುಬರುತ್ತದೆ. ಯುರೋಪಿನಲ್ಲಿ ಮೆಡಿಟರೇನಿಯನ್ ತೀರದ ಜನರು "ಇಷ್ಟಪ್ರಾಪ್ತಿ ಮತ್ತು ಅನಿಷ್ಟ ನಿವಾರಣೆಗಾಗಿ ಲಿಂಗವನ್ನು ಕೊರಳಲ್ಲಿ ಕಟ್ಟಿಕೊಳ್ಳುತ್ತಿದ್ದರೆಂದೂ, ಇದನ್ನು ಭಾರತದ ಮೂಲ ನಿವಾಸಿಗಳಿಂದ ಕಲಿತುಕೊಂಡಿರಬೇಕೆಂದು ಫ್ರಿಲಸ್ಕಿ ಅವರ ಮತವಾಗಿದೆ. ಒಟ್ಟಿನಲ್ಲಿ ಮೋಹೆಂಜೋದಾರೋ ಮತ್ತು ಹರಪ್ಪಾ ನಿವಾಸಿಗಳು ಲಿಂಗವನ್ನು ಧರಿಸುತ್ತಿದ್ದಂತೆ ಮೆಡಿಟರೇನಿಯನ್ ತೀರದಲ್ಲೂ ಲಿಂಗವನ್ನು ಕೊರಳಲ್ಲಿ ಕಟ್ಟಿಕೊಳ್ಳುತ್ತಿದ್ದರು[೮]. ಇದರಿಂದ ಹರಪ್ಪಾ ಮತ್ತು ಮೊಹೆಂಜೋದಾರೋ ಸಂಸ್ಕೃತಿ ಪ್ರಾಚೀನವಾಗಿದ್ದು, ಈ ಸೈಂಧವ ಸಮಾಜದಲ್ಲಿ ಲಿಂಗಧಾರಣವಿದ್ದುದು ಸ್ಪಷ್ಟವಾಗುತ್ತದೆ.

ವೀರಶೈವ ಮತವು ವೇದ, ಶಾಸ್ತ್ರ, ಪುರಾಣಗಳಲ್ಲಿಯೂ, ಕಾಮಿಕಾದಿ ಆಗಮಗಳಲ್ಲಿಯೂ ಪ್ರತಿಪಾದಿತವಾಗಿದೆ. ಅಷ್ಟೆ ಅಲ್ಲದೆ ವಿಷ್ಣು, ಬ್ರಹ್ಮಾದಿ ದೇವತೆಗಳು, ಗೌತಮಾದಿ ಮುನಿಗಳೂ ಲಿಂಗಧಾರಿಗಳಾಗಿದ್ದರೆಂದೂ ಹಾಗೂ ಮಾಧವಾಚಾರ್ಯರ "ಶಂಕರ ವಿಜಯ"ಗಳಲ್ಲಿ ವಿಷಯವನ್ನು ಪ್ರಸ್ತಾಪಿಸಿದಂತೆ – ಶ್ರೀ ಶಂಕರಾಚಾರ್ಯರು ಗೋಕರ್ಣ ಕ್ಷೇತ್ರದಲ್ಲಿರುವ ವೀರಶೈವ ನಿಷ್ಠರಾದ ಶ್ರೀ ನೀಲಕಂಠ ಶಿವಾಚಾರ್ಯರೊಂದಿಗೆ ವೀರಶೈವ ಮತದ ವಿಚಾರವನ್ನು ಕುರಿತು ಆಗಲೇ ವಾದ ಮಾಡಿರುವರೆಂದು ತಿಳಿದುಬರುತ್ತದೆ.

ವೀರಶೈವ ಮತದಲ್ಲಿ ಶಿವದೀಕ್ಷೆ, ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲ ರೂಪವಾದ ಲಿಂಗಾಂಗ ಸಾಮರಸ್ಯ ಎಂಬಿವು ಸಾಧನ ಚತುಷ್ಟಯವಾಗಿವೆ. "ಶಿವದೀಕ್ಷಾ" ಎಂಬುದು ವೀರಶೈವ ಮತದ ಅತೀ ಮುಖ್ಯವಾದ ಸಂಸ್ಕಾರವಾಗಿದೆ. ಆರ್ಯರ ಏಕೇಶ್ವರ ವಾದ, ದ್ರಾವಿಡರ ಭಕ್ತಿಮಾರ್ಗ ಎರಡೂ ವೀರಶೈವರ ಲಿಂಗಪೂಜೆಯಲ್ಲಿ ಅಡಗಿವೆ. ವೀರಶೈವ ಮತವು ಶೈವ ಧರ್ಮದ ಶಾಖೆಗಳಾದ ಸಾಮಾನ್ಯ ಶೈವ, ಮಿಶ್ರಶೈವ, ಶುದ್ಧಶೈವ, ಅನುಶೈವ, ಮಹಾಶೈವ ಎಂಬ ಪ್ರಭೇದಗಳಲ್ಲಿ ಸೇರಿದೆ. ಶಿವಾಗಮಗಳು ಹೇಳುವ ಸಪ್ತ ಶೈವಗಳಲ್ಲಿ ವೀರಶೈವವು ಅತ್ಯಂತ ಶ್ರೇಷ್ಠತಮವಾದುದು.[೯] ಲಿಂಗಧಾರಣವು ವೀರಶೈವರ ಮುಖ್ಯ ಚಿಹ್ನೆಯಾದರೂ, ಲಿಂಗಧಾರಿಗಳೆಲ್ಲರೂ ವೀರಶೈವರೆನಿಸುವುದಿಲ್ಲ. ಇದು ಚಮತ್ಕಾರದ ಸಂಗತಿಯಾಗಿದ್ದು, ಯಾವನು ಶಿವದೀಕ್ಷಾ ಸಂಸ್ಕಾರದಿಂದ ಪರಿಶುದ್ಧನಾಗದೇ, ಲಿಂಗಧಾರಣ ವಿಧಿಯಿಂದ ಸಂಸ್ಕರಿಸಲ್ಪಡದೇ, ತನ್ನ ಮನಸ್ಸಿಗೆ ಬಂದಂತೆ ಲಿಂಗವೊಂದನ್ನು ಕಟ್ಟಿಕೊಂಡು ತಿರುಗುವನೋ ಅವನು ಸಾಮಾನ್ಯ ಶೈವನೆನಿಸುವನು.

---

೮. ಟಿ. ಎನ್. ಮಲ್ಲಪ್ಪ : ವೀರಶೈವದ ಉಗಮ ಮತ್ತು ಪ್ರಗತಿ, ರಾವ್ ಬಹಾದ್ದೂರ್, ಧರ್ಮ ಪ್ರವರ್ತಕ, ಗುಬ್ಬಿ ತೋಟದಪ್ಪನವರ ಧರ್ಮ ಸಂಸ್ಥೆ, ಬೆಂಗಳೂರು, ಪು. ೬೧, ೬೨.

೯. ಬಿ. ಶಿವರಾಮಮೂರ್ತಿ ಶಾಸ್ತ್ರಿಗಳು : ವೀರಶೈವ ಸಾಹಿತ್ಯ ಮತ್ತು ಇತಿಹಾಸ, ಲೇಖನ, "ಲಿಂಗಧಾರಣ ಮತ್ತು ಶಿವದೀಕ್ಷೆ", ಪು. ೧೬೮

ಹೀಗೆ ವೀರಶೈವ ಸಾಹಿತ್ಯ ಬೆಳೆದಂತೆ ಭಾರತೀಯರ ಜೀವನದ ಎಲ್ಲಾ ಆವಿಷ್ಕಾರಗಳಲ್ಲಿಯೂ ಆಧ್ಯಾತ್ಮ ಹಾಸುಹೊಕ್ಕಾಗಿ ಸೇರಿಕೊಂಡಿದೆ. ಲಲಿತ ಕಲೆಗಳು ಈ ನಿಯಮದಿಂದ ಹೊರತಾಗಿಲ್ಲ. "ಮನಸ್ಸಿಗೆ ಶಾಂತ ಸ್ಥಿತಿಯನ್ನು ತಂದೊದಗಿಸಿ ರಸಾನುಭವದ ಮೂಲಕ ದಿವ್ಯ ಸತ್ಯದರ್ಶನ ಮೂಡಿಸುವುದೇ ಭಾರತೀಯ ಲಲಿತ ಕಲೆಗಳ ಗುರಿಯಾಗಿದೆ"[೧೦] ಎಂದು ಅ.ನ. ಕೃಷ್ಣರಾಯ್ ಅವರು ಹೇಳಿರುವರು.

ಮಾನವನ ಸಂಸ್ಕೃತಿಯ ಒಂದು ಭಾಗವಾಗಿಯೇ ಚಿತ್ರಕಲೆ ಇತರ ಆಕರಗಳಿಗಿಂತ ಬೇರೆಯಾಗಿದ್ದು, ಇದು ನಮ್ಮ ಸಾಂಸ್ಕೃತಿಕ ಇತಿಹಾಸವನ್ನು ಪುನರ್ ರಚಿಸಲು ಹೇಗೆ ಸಹಾಯ ಮಾಡುತ್ತದೆ? ಎಂಬುದನ್ನು ತಿಳಿದುಕೊಳ್ಳಬಹುದಾಗಿದೆ. ಭಿತ್ತಿಚಿತ್ರ ಮತ್ತು ಹಸ್ತಪ್ರತಿ ಚಿತ್ರಗಳ ಪರಂಪರೆಯನ್ನು ನಮ್ಮ ಪೂರ್ವಜರು ಧರ್ಮ ಪ್ರಚಾರದ ಸಾಧನವಾಗಿ, ಸಮಾಜವನ್ನು ರೂಪಿಸುವಲ್ಲಿ ಹೇಗೆ ಬಳಸಿಕೊಂಡಿರುವರು ಎಂಬುದನ್ನು ನೋಡುವುದರ ಜೊತೆಗೆ ಹಸ್ತಪ್ರತಿ ಚಿತ್ರ ಮತ್ತು ಭಿತ್ತಿ ಚಿತ್ರಗಳ ಶೈಲಿ ಕಾಲದಿಂದ ಕಾಲಕ್ಕೆ ಬದಲಾಗಿರುವುದು, ಚಿತ್ರಗಳ ಶೈಲಿ, ತಂತ್ರ, ವಿನ್ಯಾಸ, ಚಿತ್ರ ಸಂಯೋಜನಾ ರೀತಿಯನ್ನು ತಿಳಿದುಕೊಳ್ಳುವುದರೊಂದಿಗೆ ಈ ಚಿತ್ರಕಲೆಯು ಧರ್ಮದೊಂದಿಗೆ ಹೇಗೆ ನಿಕಟ ಸಂಬಂಧವನ್ನು ಹೊಂದಿದೆ ಎಂಬುದರ ಕುರಿತು ಅಧ್ಯಯನ ಮಾಡಲು ತುಂಬಾ ಮಹತ್ವದ ವಿಷಯವಾಗಿದೆ. ಕಲೆಗಳು ಆಯಾ ಭಾಗದ ಮೂಲ ಸಂಸ್ಕೃತಿಯೊಂದರ ಕಡೆಗೆ ಬೆರಳು ಮಾಡುತ್ತ ಇತಿಹಾಸದ ಹಲವು ಕಾಲಘಟ್ಟಗಳಲ್ಲಿ ನಡೆದ ಸಾಂಸ್ಕೃತಿಕ ಸಂಘರ್ಷಗಳ ಕಡೆಗೆ ನಮ್ಮ ಗಮನ ಸೆಳೆಯುತ್ತವೆ. ಕಲಾ ಪ್ರಕಾರಗಳು, ಅವುಗಳ ಅಭಿವ್ಯಕ್ತಿಯ ರೂಪಗಳು ಇಲ್ಲಿ ಪುರಾವೆಗಳಾಗಿ ಉಳಿಯುತ್ತವೆ. ನಮ್ಮ ಪ್ರಾಚೀನರ ಈ ಅಮೂಲ್ಯ ಸಾಂಸ್ಕೃತಿಕ ಸಂಪತ್ತು ದಿನದಿಂದ ದಿನಕ್ಕೆ ನಾಶವಾಗುತ್ತಿರುವ ಈ ಸಂದರ್ಭದಲ್ಲಿ ಇವುಗಳ ವ್ಯಾಪಕ ಅಧ್ಯಯನದ ಅವಶ್ಯಕತೆ ಇಂದು ತುಂಬಾ ಮಹತ್ವದ್ದಾಗಿದೆ. ಚಿತ್ರಕಲೆಯ ಮುಖಾಂತರ ಮಾನವ ತನ್ನ ಧರ್ಮ ಮತ್ತು ಸಂಸ್ಕೃತಿಯನ್ನು ಹೇಗೆ ವ್ಯಕ್ತಗೊಳಿಸಿದ್ದಾನೆ? ಎಂಬುದನ್ನು ಅರಿಯುವುದೂ ಕೂಡಾ ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ. ಈ ಉದ್ದೇಶ ಈಡೇರಿಸುವ ನಿಟ್ಟಿನಲ್ಲಿ ಪ್ರಸ್ತುತ ಅಧ್ಯಯನ ಒಂದು ಪುಟ್ಟ, ಪ್ರಾಮಾಣಿಕ ಪ್ರಯತ್ನವಾಗಿದೆ. ವೀರಶೈವ ಪರಂಪರೆಯ ಚಿತ್ರಕಲೆಯ ಕುರಿತು ಕೆಲವೇ ಕೆಲವು ಸಂಶೋಧನಾ ಲೇಖನಗಳು ಬಂದಿವೆ. ಈ ಲೇಖನಗಳು ಹಸ್ತಪ್ರತಿ ಚಿತ್ರಗಳ ಕುರಿತು ಮಾಹಿತಿ ಒದಗಿಸುತ್ತವೆ. ಆದರೆ ಕರ್ನಾಟಕದ ವೀರಶೈವ ಪರಂಪರೆಯ ಚಿತ್ರಗಳ ಕುರಿತು ಸಮಗ್ರ ಅಧ್ಯಯನ, ಅವುಗಳ ಕುರಿತು ಒಂದೆಡೆ ದಾಖಲಿಸುವ ಹಾಗೂ ಸಂಗ್ರಹಿಸುವ ಮತ್ತು ಚಿತ್ರಗಳ ಸಂರಕ್ಷಣಾ ಕ್ರಮ, ಆಪತ್ತುಗಳ ಕುರಿತು ಅಧ್ಯಯನದ ಅವಶ್ಯಕತೆಯನ್ನು ಗಮನಿಸಿ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಸಂಸ್ಕೃತಿಯನ್ನು ಅರಿಯಲು ಇರುವ ಆಕರಗಳಲ್ಲಿ ಚಿತ್ರಕಲೆಗೆ ಒಂದು ವಿಶಿಷ್ಟವಾದ ಸ್ಥಾನವಿದೆ. ಆ ದಿಸೆಯಲ್ಲಿ ಚಿತ್ರಕಲೆಯ ಮುಖಾಂತರ ಮಾನವ ತನ್ನ ಸಂಸ್ಕೃತಿಯನ್ನು ಹೇಗೆ ವ್ಯಕ್ತಗೊಳಿಸಿದ್ದಾನೆ ಎಂಬುದು

---

೧೦. ಡಿ.ಪಿ.ಜಿ : ಸಂ. : ಸಂಸ್ಕೃತಿ ಲೇಖನ, ಸಂಸ್ಕೃತಿ ಮತ್ತು ಲಲಿತಕಲೆಗಳು: ಅ.ನ. ಕೃಷ್ಣರಾಯ್, ಪು. ೭೬

ಅಥವಾ ಸಂಸ್ಕೃತಿಯ ಒಂದು ಭಾಗವೇ ಆಗಿರುವ ಚಿತ್ರಕಲೆ ಇತರ ಆಕರಗಳಿಗಿಂತ ಬೇರೆಯಾಗಿ ಇದು ನಮ್ಮ ಸಾಂಸ್ಕೃತಿಕ ಇತಿಹಾಸವನ್ನು ಪುನರ್ ರಚಿಸಲು ಹೇಗೆ ಸಹಾಯ ಮಾಡುತ್ತದೆ ಎಂಬುದನ್ನು ಚಿತ್ರಕಲಾ ಅಧ್ಯಯನದಿಂದ ಕಂಡುಕೊಳ್ಳಬಹುದಾಗಿದೆ[೧೧]. ಎಂದಿರುವ ಡಾ. ಎಸ್.ಸಿ.ಪಾಟೀಲರ ಅಭಿಪ್ರಾಯವನ್ನು ಇಲ್ಲಿ ಗಮನಿಸಲಾಗಿದೆ.

ಕಲೆಗಳ ಪ್ರದರ್ಶನ ಸಂದರ್ಭದ ಹಿಂದಿನ ಆಶಯಗಳಲ್ಲಿ ಕಲೆಗಳು ಆ ಭಾಗದ ಮೂಲ ಸಂಸ್ಕೃತಿಯೊಂದರ ಕಡೆಗೆ ಬೆರಳು ಮಾಡುತ್ತ ಇತಿಹಾಸದ ಹಲವು ಕಾಲಘಟ್ಟಗಳಲ್ಲಿ ನಡೆದಿರಬಹುದಾದ ಸಾಂಸ್ಕೃತಿಕ ಸಂಘರ್ಷಗಳ ಕಡೆಗೆ ನಮ್ಮ ಗಮನ ಸೆಳೆಯುತ್ತದೆ. ಅಲ್ಲದೇ ಸಾಂಸ್ಕೃತಿಕ ಇತಿಹಾಸದ ಸಂದರ್ಭದಲ್ಲಿ ಇವು ಮಹತ್ವದ ಆಕರಗಳಾಗುವ ಸಾಧ್ಯತೆಯಿದೆ[೧೨] ಎಂದು ಡಾ. ಹಿ.ಚಿ. ಬೋರಲಿಂಗಯ್ಯ ಹೇಳಿರುವರು.

ಹಸ್ತಪ್ರತಿಗಳು ಅರಸರ ಸಪ್ತಸಂತಾನದ ಕರ್ತವ್ಯಗಳಲ್ಲಿ ಒಂದೆಂದೋ, ಶಾಸ್ತ್ರದಾನ ಗ್ರಂಥಪ್ರತಿಷ್ಠೆಯ ಪೂರ್ಣ ಪ್ರತೀಕವೆಂದೋ, ವೀರಶೈವ ಧರ್ಮ ಪೀಠಾರೋಹಣ ಪ್ರಸಂಗದ ಜ್ಞಾನದುಡುಗೊರೆಗಳೆಂದೋ, ಬದುಕಿನ ಸ್ವಸುಖದ, ಪರಸುಖದ ಕಾಮಧೇನುಗಳೆಂದೋ ಭಾವಿಸಿ ಇಂದಿನವರೆಗೂ ಕನ್ನಡಿಗರು ಅವುಗಳನ್ನು ಪೂಜ್ಯಭಾವನೆಯಿಂದ ಸಂರಕ್ಷಿಸಿಕೊಂಡು ಬಂದಿದ್ದಾರೆ[೧೩] ಎಂದು ಡಾ. ಬಿ.ಕೆ.ಹಿರೇಮಠ ಅವರು ಅಭಿಪ್ರಾಯಪಟ್ಟಿರುವರು.

ಭಾರತೀಯ ಚಿತ್ರಕಲಾ ಪರಂಪರೆಯಲ್ಲಿ ಕರ್ನಾಟಕದ ಭಿತ್ತಿಚಿತ್ರಗಳಿಗೆ ತನ್ನದೇ ಆದ ಮಹತ್ವದ ಸ್ಥಾನವಿದೆ. ಇಲ್ಲಿ ಪ್ರಾಗೈತಿಹಾಸಿಕ ಕಾಲದಿಂದಲೂ ಈ ಚಿತ್ರಗಳು ಬೆಳೆದು ಬಂದಿವೆ. ಐತಿಹಾಸಿಕ ಕಾಲವನ್ನು ನೋಡಿದಾಗ ಕದಂಬರಿಂದ ಮೈಸೂರು ಒಡೆಯರ ಕಾಲದವರೆಗೂ ಈ ನೆಲದಲ್ಲಿ ಭಿತ್ತಿಚಿತ್ರ ಪರಂಪರೆ ಬೆಳೆದು ಬಂದಿದೆ. ದಕ್ಷಿಣ ಭಾರತದಲ್ಲೇ ಅಂದರೆ ಅತ್ಯಂತ ಹೆಚ್ಚು ಭಿತ್ತಿಚಿತ್ರಗಳು ಕರ್ನಾಟಕದಲ್ಲಿವೆ. ಅಲ್ಲದೇ ಶೈಲಿ, ವಿನ್ಯಾಸ, ವಸ್ತು ವಿಷಯಗಳಲ್ಲಿಯೂ ವೈವಿಧ್ಯ ಇದೆ. ಈ ವೈವಿಧ್ಯಕ್ಕೆ ಕರ್ನಾಟಕದ ಸಾಂಸ್ಕೃತಿಕ ಪರಂಪರೆ ಮತ್ತು ಭೌಗೋಳಿಕ ಹಿನ್ನೆಲೆ ಕಾರಣವಾಗಿದೆ[೧೪] ಎಂದು ಡಾ. ಯಾದಪ್ಪ ಪರದೇಶಿ ಅವರು ಹೇಳಿರುವರು.

ಈಚೆಗೆ ಪಾಶ್ಚಾತ್ಯ ಸಂಸ್ಕೃತಿಯ ದಟ್ಟನೆರಳು ನಮ್ಮ ಸಂಸ್ಕೃತಿಯ ಮೇಲೆ ಹರಡುತ್ತಿದ್ದಂತೆ, ನಮ್ಮ ಇಡೀ ಬದುಕನ್ನು ಅಂಕೆಯಲ್ಲಿಟ್ಟುಕೊಂಡಿದ್ದ ಧರ್ಮಗಳ ಹಿಡಿತ ಸಡಿಲುಗೊಂಡಿತು. ಬದುಕಿನ ಮೌಲ್ಯಗಳು ವ್ಯತ್ಯಸ್ತಗೊಂಡು ಭೌತಿಕ ಜೀವನವೇ ಪ್ರಧಾನ ಸ್ಥಾನ ಪಡೆಯಿತು. ಇದರ ಪರಿಣಾಮವಾಗಿ ನಮ್ಮ ಪ್ರಾಚೀನರು ಬದುಕಿನ ಹಿಂದೆ ಗೂಢವಾಗಿಟ್ಟುಕೊಂಡು ಬಂದಿದ್ದ ಮೌಲ್ಯಗಳು ಅಲುಗಾಡಿದವು: ಪೂರ್ವಿಕರು ಉಳಿಸಿಕೊಂಡು ಬಂದಿದ್ದ

---

೧೧. ಡಾ. ಎಸ್.ಸಿ.ಪಾಟೀಲ: ವರ್ಣ ಸಂಚಯ: ಪ್ರಸ್ತಾವನೆ ಪುಟ–೧.

೧೨. ಡಾ. ಹಿ.ಚಿ.ಬೋರಲಿಂಗಯ್ಯ (ಸಂ): ಕರ್ನಾಟಕ ಕಲೆಗಳ ಕೋಶ: ಪುಟ–೩.

೧೩. ಡಾ ಬಿ.ಕೆ.ಹಿರೇಮಠ: ಕನ್ನಡ ಹಸ್ತಪ್ರತಿಗಳು: ಒಂದು ಅಧ್ಯಯನ: ಪುಟ–೧.

೧೪. ಡಾ. ಯಾದಪ್ಪ ಪರದೇಶಿ: ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ: ಒಂದು ಅಧ್ಯಯನ: ಅ.ಪ್ರ.ಸಂ.ಮಹಾಪ್ರಬಂಧ. ಕ.ವಿ.ವಿ. ಹಂಪಿ, ಪುಟ–೪.

ಸಾಂಸ್ಕೃತಿಕ ಸಂಪತ್ತು ಅಲಕ್ಷಿತವಾಗತೊಡಗಿತು. ಅಂತಹುಗಳಲ್ಲಿ ಭಿತ್ತಿಚಿತ್ರ ಮತ್ತು ಹಸ್ತಪ್ರತಿ ಚಿತ್ರಗಳ ಸಂಪತ್ತು ಅಲಕ್ಷಿತವಾಗಿದೆ.

ಈ ಹಿನ್ನೆಲೆಯಲ್ಲಿ ಯಾವುದೇ ಕಲೆ, ಕಲಾಪ್ರಕಾರಗಳು ನಿರ್ದಿಷ್ಟ ಜ್ಞಾನದ ಚೌಕಟ್ಟಿನಲ್ಲಿ ಹುಟ್ಟು ಹಾಕಲ್ಪಡುವುದಿಲ್ಲ. ಸಾಂದರ್ಭಿಕ ಅನುಭವ, ಅಭಿವ್ಯಕ್ತಿಯಿಂದ ಅವು ಬೆಳೆಯುತ್ತ ಬಂದಿವೆ. ಅಂದರೆ ಮಾನವನ ಸಾಂಸ್ಕೃತಿಕ ಇತಿಹಾಸದಲ್ಲಿ, ಒಂದೇ ಉದ್ದೇಶಕ್ಕಾಗಿ ಕತೆ ಹುಟ್ಟಿಕೊಂಡಿರದೇ ವಿವಿಧ ಕಾರಣಗಳಿಗಾಗಿ ಅದು ರೂಪುಗೊಂಡು ತನ್ನ ದಿಗಂತವನ್ನು ವಿಸ್ತರಿಸಿಕೊಂಡಿದೆ. ಹೀಗೆ ಹಲವು ಕುತೂಹಲಗಳನ್ನು ಹುಟ್ಟಿಸುವ ಕಲೆಗಳು. ನಮ್ಮ ಧಾರ್ಮಿಕ ಸಾಂಸ್ಕೃತಿಕ ಅಧ್ಯಯನಕ್ಕೆ ಪ್ರಧಾನ ಆಕರಗಳಾಗಿರುವುದರಿಂದ ಭಿತ್ತಿ ಚಿತ್ರಗಳಲ್ಲಿ ಮತ್ತು ಹಸ್ತ ಪ್ರತಿಚಿತ್ರಗಳಲ್ಲಿ ವೀರಶೈವ ಪರಂಪರೆಯನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

ಕರ್ನಾಟಕದ ವೀರಶೈವ ಹಸ್ತಪ್ರತಿ ಚಿತ್ರ ಮತ್ತು ಭಿತ್ತಿಚಿತ್ರಕಲೆಯ ಅಧ್ಯಯನವು ನಿರ್ಮಾತೃಗಳ ಇತಿಹಾಸ, ಪೋಷಕರ ಉದ್ದೇಶ ತಿಳಿಸುವುದರೊಂದಿಗೆ ವೀರ ಶೈವ ಹಸ್ತಪ್ರತಿ ಚಿತ್ರಗಳು ಮತ್ತು ಭಿತ್ತಿಚಿತ್ರಗಳು ರಚನೆಗೊಂಡ ರೀತಿ, ಭಿತ್ತಿ ಫಲಕ ಮತ್ತು ಹಸ್ತಪ್ರತಿ ಪತ್ರದ ಸಿದ್ಧತಾ ವಿಧಾನ, ಚಿತ್ರ ರಚನೆ, ವರ್ಣಗಳ ತಯಾರಿಕೆ, ಚಿತ್ರರಚನಾ ಪರಿಕರಗಳು ಮತ್ತು ಚಿತ್ರ ಸಾಹಿತ್ಯ ಕ್ಷೇತ್ರದ ಹಲವಾರು ತಾಂತ್ರಿಕ ಅಂಶಗಳನ್ನು ತಿಳಿಸುತ್ತ ಈ ವೀರಶೈವ ಭಿತ್ತಿಚಿತ್ರ ಮತ್ತು ಹಸ್ತಪ್ರತಿ ಚಿತ್ರಕಲೆಯನ್ನು ಒಂದು ವ್ಯವಸ್ಥಿತ ಅಧ್ಯಯನಕ್ಕೆ ಒಳಪಡಿಸಿ ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಿದ್ದು, ಸಂಸ್ಕೃತಿಯನ್ನು ಅರಿಯಲು ಇರುವ ಆಕರಗಳಲ್ಲಿ, ಚಿತ್ರಕಲೆಗೆ ಒಂದು ವಿಶಿಷ್ಟವಾದ ಸ್ಥಾನವಿದೆ. ಆ ದಿಸೆಯಲ್ಲಿ ಚಿತ್ರಕಲೆಯ ಮುಖಾಂತರ ಮಾನವ ತನ್ನ ಸಂಸ್ಕೃತಿಯನ್ನು ಹೇಗೆ ವ್ಯಕ್ತಗೊಳಿಸಿದ್ದಾನೆ? ಎಂಬುದು ಅಥವಾ ಧಾರ್ಮಿಕ ಸಂಸ್ಕೃತಿಯ ಒಂದು ಭಾಗವೇ ಆಗಿರುವ ಚಿತ್ರಕಲೆಯು ಇತರ ಆಕರಗಳಿಗಿಂತ ಬೇರೆಯಾಗಿ ಇದ್ದು ನಮ್ಮ ವೀರಶೈವ ಸಂಸ್ಕೃತಿಯ ಇತಿಹಾಸವನ್ನು ಪುನರ್ ರಚಿಸಲು ಹೇಗೆ ಸಹಾಯ ಮಾಡುತ್ತದೆ ಎಂಬುದನ್ನು ಈ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

ವೀರಶೈವ ಭಿತ್ತಿಚಿತ್ರ ಹಾಗೂ ಹಸ್ತಪ್ರತಿ ಚಿತ್ರಕಲಾ ಪರಂಪರೆಯನ್ನು ನಮ್ಮ ಪೂರ್ವಜರು ಧರ್ಮಪ್ರಚಾರದ ಸಾಧನವಾಗಿ ಸಮಾಜವನ್ನು ರೂಪಿಸುವಲ್ಲಿ, ಮನೋರಂಜನೆಗಾಗಿ ವೈಯಕ್ತಿಕ ಭಾವನೆಗಳ ಕಲಾತ್ಮಕ ಅಭಿವ್ಯಕ್ತಿಗಾಗಿ, ಧಾರ್ಮಿಕ ರಾಜಕೀಯ ಉದ್ದೇಶಗಳಿಗಾಗಿ, ಹೇಗೆ ಬಳಸಿಕೊಂಡಿರುವರು ಎಂಬುದನ್ನು ನೋಡುವುದರ ಜೊತೆಗೆ, ವೀರಶೈವ ಭಿತ್ತಿಚಿತ್ರ ಮತ್ತು ಹಸ್ತಪ್ರತಿಚಿತ್ರಗಳ ತಂತ್ರ, ಶೈಲಿ ಕಾಲದಿಂದ ಕಾಲಕ್ಕೆ ಬದಲಾಗುತ್ತ ಬೆಳೆದು ಬಂದ ಬಗೆಯನ್ನು, ವೀರಶೈವ ಭಿತ್ತಿಚಿತ್ರ ಮತ್ತು ಹಸ್ತಪ್ರತಿ ಚಿತ್ರಗಳ ಅಧ್ಯಯನದಿಂದ ತಿಳಿದುಕೊಳ್ಳಲು ಪ್ರಸ್ತುತ ಅಧ್ಯಯನವು ತುಂಬಾ ಮಹತ್ವದ್ದಾಗಿದೆ. ಈ ಹತ್ತಾರು ಉದ್ದೇಶಗಳ ಹಿನ್ನೆಲೆಯಲ್ಲಿ "ಕರ್ನಾಟಕದ ವೀರಶೈವ ಪರಂಪರೆಯ ಚಿತ್ರಕಲೆ"ಯ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಕರ್ನಾಟಕದ ಭಿತ್ತಿ ಚಿತ್ರ ಮತ್ತು ಹಸ್ತಪ್ರತಿಗಳಿಗೆ ಇರುವ ಆಪತ್ತುಗಳನ್ನು ವೈಜ್ಞಾನಿಕವಾಗಿ ಹೇಗೆ ನಿವಾರಿಸಬಹುದು ಹಾಗೂ ಸರಿಯಾದ ಪರಿಪಾಲನೆಯ ಕ್ರಮಗಳನ್ನು ಮತ್ತು ವರ್ಣನಾತ್ಮಕ ಸೂಚಿಯನ್ನು

ನಿರ್ಮಿಸುವ ರೀತಿಯನ್ನು ಚರ್ಚಿಸುವುದರೊಂದಿಗೆ ವೀರಶೈವ ಭಿತ್ತಿಚಿತ್ರ ಮತ್ತು ಹಸ್ತಪ್ರತಿ ಚಿತ್ರಗಳ ಕುರಿತು ಮುಂಬರಲಿರುವ ಅಧ್ಯಯನ ಶೀಲರಿಗೆ ಅನುಕೂಲವಾಗುವಂತೆ ಈಗ ಲಭ್ಯವಿರುವ ವೀರಶೈವ ಭಿತ್ತಿ ಚಿತ್ರವಿರುವ ಹಾಗೂ ವೀರಶೈವ ಹಸ್ತಪ್ರತಿಗಳಿರುವ ಭಂಡಾರಗಳ ವಿವರವನ್ನು ಒದಗಿಸುವ ಉದ್ದೇಶವನ್ನು ಹೊಂದಿ ಅಧ್ಯಯನ ಮಾಡಲಾಗಿದೆ.

## ಚಿತ್ರಕಲಾ ಕ್ಷೇತ್ರದಲ್ಲಿ ಇಲ್ಲಿಯವರೆಗೆ ನಡೆದ ಅಧ್ಯಯನಗಳು

### ಕರ್ನಾಟಕದ ವೀರಶೈವ ಚಿತ್ರಕಲೆಯ ಕುರಿತು ಇಲ್ಲಿಯವರೆಗೆ ನಡೆದ ಅಧ್ಯಯನಗಳು :

ಮಾನವ ಸಂಸ್ಕೃತಿಯಲ್ಲಿ ಕಲೆಗೆ ಅಗ್ರಸ್ಥಾನವಿದ್ದು, ಆ ಕಾಲದಿಂದಲೂ ಕಲೆ ಮನುಷ್ಯನ ಕೈ ಹಿಡಿದುಕೊಂಡೇ ಬಂದಿದೆ. ಭಿತ್ತಿಗಳಲ್ಲಿ ಮತ್ತು ಹಸ್ತಪ್ರತಿಗಳಲ್ಲಿ ಚಿತ್ರರಚನೆ ಒಂದು ಕಲೆಯಾಗಿ ಬೆಳೆದು ಬಂದಿದೆ. ವಿವಿಧ ಭಾಷೆಗಳಲ್ಲಿ ಕಾಣಸಿಗುವ ಹಸ್ತಪ್ರತಿಗಳು "ಕಾವ್ಯ, ಸಾಹಿತ್ಯ, ಲೌಕಿಕ ಶಾಸ್ತ್ರ ಸಾಹಿತ್ಯ, ಆಗಮಿಕ ಶಾಸ್ತ್ರ ಸಾಹಿತ್ಯ ಈ ಎಲ್ಲ ಪ್ರಕಾರಗಳಲ್ಲಿ ಚಿತ್ರಕಲೆಯು ಒಂದು ಪರಂಪರೆಯೆಂಬಂತೆ ಬಿಂಬಿತವಾಗಿದೆ. ಹೀಗಾಗಿ ಇದಕ್ಕೆ ಸುದೀರ್ಘ ಇತಿಹಾಸವಿದೆ.[೧೫] ಆ ಇತಿಹಾಸದ ಭಾಗವಾಗಿ ವಿದ್ವಾಂಸರ ಅಧ್ಯಯನಕ್ಕೆ ಒಳಗಾದ ಕೆಲವು ಸಚಿತ್ರ ಹಸ್ತಪ್ರತಿಗಳನ್ನು ಇಲ್ಲಿ ಗಮನಿಸಲಾಗಿದೆ.

ಚಿತ್ರಕಲೆಯನ್ನೇ ಕುರಿತು ಹೇಳುವ ಶಾಸ್ತ್ರಗ್ರಂಥಗಳು ಎರಡು ರೀತಿಯಲ್ಲಿ ಸಿಗುತ್ತವೆ. ೧. ಚಿತ್ರ ಪ್ರಧಾನ ಶಾಸ್ತ್ರ ಗ್ರಂಥಗಳು, ೨. ಚಿತ್ರ ಪ್ರಾಸಂಗಿಕ ಶಾಸ್ತ್ರಗ್ರಂಥಗಳು ಎಂದು. ಉದ್ಧರಣೆಗಳು, ಶಿವಾನುಭವ ಶಾಸ್ತ್ರ, ಆತ್ಮೋದ್ಧರಣ ಸಾಹಿತ್ಯ, ವೃಷಭೇಂದ್ರ ವಿಳಾಸ, ಶಿವನಿಧಿ, ರಾಘವಾಂಕ ಚರಿತೆ, ಸಕೀಲಗಳು, ಚೆನ್ನಬಸವ ಪುರಾಣ, ಬಸವ ಪುರಾಣ, ಅಭಿಲಷಿತಾರ್ಥ ಚಿಂತಾಮಣಿ, ವಿಷ್ಣು ಧರ್ಮೋತ್ತರಪುರಾಣ, ಸಮರಾಂಗಣ ಸೂತ್ರ, ಶಿವತತ್ವ ರತ್ನಾಕರ ಮುಂತಾದ ವಿಶ್ವಕೋಶಗಳಂತಹ ರಚನೆಗಳು ಪ್ರಧಾನ ಕೃತಿಗಳಾದರೆ, ನಾಟ್ಯಶಾಸ್ತ್ರ, ಕಾಮಸೂತ್ರ, ಪಂಚದಶಿ, ನಾರದಸೂತ್ರ, ಕನ್ನಡದ ಹಸ್ತಪ್ರತಿಗಳು ಮುಂತಾದವುಗಳು ಚಿತ್ರಕಲೆಯ ಕುರಿತು ಬಂದಂತಹ ಪ್ರಾಸಂಗಿಕ ಕೃತಿಗಳು. ಇಲ್ಲೆಲ್ಲಾ ಭಿತ್ತಿ ರಚನೆ, ಬಣ್ಣಗಳ ತಯಾರಿಕೆ, ಆಕೃತಿಗಳ ಲಕ್ಷಣ ಕುರಿತಂತೆ ತಾಂತ್ರಿಕ ವಿವರಗಳನ್ನು ಚಿತ್ರಕಲೆಯ ವೈಜ್ಞಾನಿಕ ಹಿನ್ನೆಲೆಯಲ್ಲಿ ನಿರೂಪಿಸಲಾಗಿದೆ.

ವೀರಶೈವ ಪರಂಪರೆಯ ಚಿತ್ರಕಲೆಯ ಕುರಿತು ಲೇಖನಗಳು ಮತ್ತು ಸಂಕ್ಷಿಪ್ತ ಪ್ರಮಾಣದ ವಿವರಣೆಗಳು ಪ್ರಕಟಣೆಗೊಂಡಿರುವುದನ್ನು ಹೊರತುಪಡಿಸಿದರೆ, ಪ್ರತ್ಯೇಕ ಅಧ್ಯಯನಗಳು ನಡೆದಿಲ್ಲವೆಂದೇ ಹೇಳಬಹುದಾಗಿದೆ. ವೀರಶೈವ ತತ್ವಗಳನ್ನು ಪ್ರತಿಪಾದಿಸುವ ಉದ್ಧರಣೆ ಸಾಹಿತ್ಯದ ಕುರಿತು ಪ್ರಪ್ರಥಮವಾಗಿ ಗುರುತಿಸಿದವರು ರಾಯಚೂರು ಜಿಲ್ಲೆಯ ಕವಿತಾಳದ ಕಲ್ಮಠ ಶ್ರೀ ಮ. ನಿ. ಪ್ರಣವಸ್ವರೂಪಿ ಪೂಜ್ಯ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು, ೧೮-೧೨-೧೯೫೭ರಲ್ಲಿ 'ಶಿವಾನುಭವ ಶಾಸ್ತ್ರ' ಎಂಬ ಗ್ರಂಥವನ್ನು ಮುದ್ರಿಸಿ ಪ್ರಚಾರ

---

೧೫. ಡಾ. ಕೆ. ರವೀಂದ್ರನಾಥ : ಉದ್ಧರಣೆ ಸಾಹಿತ್ಯ : ಪ್ರಸ್ತಾವನೆ, ಪು. ೯

ಮಾಡಿದುದು ಬಹು ಸ್ತುತ್ಯರ್ಹವಾದುದು. ಇದರಲ್ಲಿ ವಾಚ್ಯದೊಂದಿಗೆ ರೇಖಾಚಿತ್ರಗಳನ್ನೂ ಸಹಿತ ಮುದ್ರಣ ಮಾಡಿರುವುದು (ಉದ್ಧರಣಿಯ ೩೩ ಚಿತ್ರಗಳನ್ನು ಒಳಗೊಂಡಿದೆ) ಉತ್ತಮವಾಗಿದೆ.[೧೬] ಆದರೆ ಈ ಚಿತ್ರಗಳ ಮೂಲ ರಚನಾಕಾರರ ಬಗ್ಗೆಯಾಗಲಿ, ಈ ಚಿತ್ರಗಳು ರಚನೆಯಾದ ಕಾಲವಾಗಲಿ, ಇಲ್ಲವೆ ರಚನೆಗೊಂಡ ಚಿತ್ರದ ಬಗೆಗಾಗಲಿ ಏನನ್ನೂ ತಿಳಿಸದೇ ಇರುವುದು ವಿಷಾದನೀಯವಾಗಿದೆ. ಆದರೆ ಹಳೆಯದಾದ ಉದ್ಧರಣಿ ಪಟಲ ಮತ್ತು ವಾಚ್ಯವನ್ನು ಇಟ್ಟುಕೊಂಡು ರಚನೆಗೊಂಡ "ಶಿವಾನುಭವ ಶಾಸ್ತ್ರ" ಎಂಬ ಗ್ರಂಥವಾಗಿ ಪ್ರಥಮಬಾರಿಗೆ ಹೊರಬಂದಿರುವುದು ನಮ್ಮ ವೀರಶೈವರ ಸುದೈವವೆಂದೇ ಹೇಳಬಹುದಾಗಿದೆ.

**'ಉದ್ಧರಣಿ ಸಾಹಿತ್ಯ:**

ಡಾ. ಜ.ಚ.ನಿ ಅವರು ಈ ಉದ್ಧರಣಿ ಸಾಹಿತ್ಯದಲ್ಲಿ ಉದ್ಧರಣಿ ಚಿತ್ರಗಳ ಕುರಿತು ಹೀಗೆ ಹೇಳಿರುವರು–

ಉದ್ಧರಣಿಗಳು–ಚಿತ್ರಕ್ಕೆ–ಚಿತ್ರವೂ ಅಹುದು: ಸಾಹಿತ್ಯಕ್ಕೆ–ಸಾಹಿತ್ಯವೂ ಅಹುದು: ಶಾಸ್ತ್ರಕ್ಕೆ–ಶಾಸ್ತ್ರವೂ ಅಹುದು: ಗಣಿತಕ್ಕೆ–ಗಣಿತವೂ ಅಹುದು: ಜ್ಯೋತಿಷ್ಯಕ್ಕೆ–ಜ್ಯೊತಿಷ್ಯವೂ ಆಗಿದೆ. ಗಣಕನಾಗದೆ, ವರ್ಣಜ್ಞನಾಗದೆ, ವಸ್ತುವಿವೇಕವುಳ್ಳವನಾಗದೆ ಉದ್ಧರಣಿಯನ್ನು ರೂಪಿಸಲು ಸಾಧ್ಯವಿಲ್ಲ. ದೃಷ್ಟಿ, ಮನ, ಬುದ್ಧಿ, ಭಾವಗಳ ಕೇಂದ್ರೀಕರಣವೇ ಉದ್ಧರಣಿಗಳ ಉದ್ದೇಶವಾಗಿದೆ.[೧೭] ಇಂತಹ ಹಸ್ತಪ್ರತಿ ಚಿತ್ರಕಾರನಾದವನು ಉನ್ನತ ಅಧ್ಯಯನ, ಪವಿತ್ರ ಸಂಸ್ಕಾರ, ಸಾತ್ವಿಕ ಮನೋಧರ್ಮಗಳ ಕಲ್ಪನೆ ಹೊಂದಿರಬೇಕಾಗುತ್ತದೆ ಎಂದಿರುವರು.

**ಕನ್ನಡ ಹಸ್ತಪ್ರತಿಗಳು : ಒಂದು ಅಧ್ಯಯನ :**

ಡಾ. ಬಿ. ಕೆ. ಹಿರೇಮಠ ಅವರು ೧೯೯೨ರಲ್ಲಿ ತಮ್ಮ ಪಿಎಚ್.ಡಿ.ಯ ಮಹಾಪ್ರಬಂಧದಲ್ಲಿ ಈ ಉದ್ಧರಣಿ ಪಟಲದ ಕುರಿತು ಹಾಗೂ ಈ ಚಿತ್ರಕಲಾವಿದನ ಕಲಾಕೌಶಲ್ಯವನ್ನು ಸಾರಿ ಹೇಳುವ ಇಲ್ಲಿಯ ಚಿತ್ರಗಳಲ್ಲಿಯ ನಯವಾದ ರೇಖಾವಿನ್ಯಾಸ, ಸಾಂಪ್ರದಾಯಿಕ ಸಮೃದ್ಧ ನಕ್ಷಾರಚನೆಗಳು, ವರ್ಣವೈವಿಧ್ಯದ ಬೆಡಗು, ಚಿತ್ರ ಸಂಯೋಜನೆಯಲ್ಲಿ ವ್ಯಕ್ತವಾದ ಕಲಾಪ್ರೌಢಿಮೆ ಮೆಚ್ಚಬೇಕಾದವುಗಳು. ಇದು ಎಲ್ಲ ದೃಷ್ಟಿಯಿಂದಲೂ ಕಲಾವಸ್ತುವಿನ ಸ್ಥಾನ ಪಡೆಯುತ್ತಿದ್ದು, ಉದ್ಧರಣಿ ಚಿತ್ರಗಳನ್ನು ಶಾಸ್ತ್ರಸಂಬಂಧಿ ಚಿತ್ರಗಳೆಂದು ಪರಿಗಣಿಸಿದ್ದು, ಆಧ್ಯಾತ್ಮ ದೃಷ್ಟಿಯಿಂದಲೂ ಇವು ತುಂಬಾ ಮಹತ್ವದವು ಎನಿಸಿವೆ[೧೮] ಎಂದಿರುವರು. ಅಲ್ಲದೆ ಡಾ. ಬಿ. ಕೆ. ಹಿರೇಮಠರು ಧಾರ್ಮಿಕ ಚಿತ್ರಗಳ ಬಗ್ಗೆ ಈವರೆಗೂ ಯಾರೂ ಅಧ್ಯಯನಕ್ಕೆ ಒಳಪಡಿಸದ ಸಂದರ್ಭದಲ್ಲಿ ಪ್ರಥಮಬಾರಿಗೆ ಧಾರ್ಮಿಕ ಹಿನ್ನೆಲೆಯಲ್ಲಿ ಕಲಾಕೃತಿಗಳನ್ನು ಅಧ್ಯಯನಕ್ಕೆ ಒಳಪಡಿಸಿದ್ದು ವಿಶೇಷವಾಗಿದೆ. ಅದರಲ್ಲೂ ವೀರಶೈವ ಕಲಾಕೃತಿಗಳ ಕುರಿತು ವಿಶೇಷವಾಗಿ ಪ್ರಸ್ತಾಪಿಸಲಾಗಿದೆ. ಪತ್ರಮಾಧ್ಯಮದ ವರ್ಣಚಿತ್ರಗಳು, ಫಲಕಮಾಧ್ಯಮದ ವರ್ಣಚಿತ್ರಗಳು ಎಂದು ವಿಂಗಡಿಸಿಕೊಂಡು ಅಧ್ಯಯನ ಮಾಡಿರುವರು.

---

೧೬. ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು : ಶಿವಾನುಭವ ಶಾಸ್ತ್ರ : ಪು. ೩, ೪
೧೭. ಡಾ. ಜ.ಚ.ನಿ. : ಉದ್ಧರಣಿ ಸಾಹಿತ್ಯ : ಲೇಖನ : ಪು. ೩
೧೮. ಡಾ. ಬಿ. ಕೆ. ಹಿರೇಮಠ : ಕನ್ನಡ ಹಸ್ತಪ್ರತಿಗಳು – ಒಂದು ಅಧ್ಯಯನ : ಪು. ೧೯೫

**ಜನಪದ ಚಿತ್ರಕಲೆ :**

ಡಾ. ಎಸ್. ಸಿ. ಪಾಟೀಲರಿಂದ ೧೯೯೩ರಲ್ಲಿ ಹೊರಬಂದ ಪಿಎಚ್.ಡಿ. ಮಹಾಪ್ರಬಂಧದಲ್ಲಿ, ಈ ಉದ್ಧರಣಿ ಚಿತ್ರಗಳು ಆಧ್ಯಾತ್ಮಿಕ ಹಿನ್ನೆಲೆಯಲ್ಲಿ ನಿರ್ಮಾಣಗೊಂಡದ್ದು ವಿಶಿಷ್ಟ ರೀತಿಯ (ಅನೇಕ ಚಿತ್ರಗಳ) ಸಂಯೋಜನೆಯ ಈ ತಾಂತ್ರಿಕ ಚಿತ್ರಗಳು ಉದ್ಧರಣಿ ಪಟಲಗಳಲ್ಲಿ ವಿಶೇಷವಾಗಿ ಮೂಡಿಬಂದಿವೆ.[೧೯]

**ಉದ್ಧರಣಿ ಸಾಹಿತ್ಯ :**

ಡಾ. ಕೆ. ರವೀಂದ್ರನಾಥರು ೨೦೧೧ರಲ್ಲಿ "ಉದ್ಧರಣಿ ಸಾಹಿತ್ಯ" ಸಂಪಾದನೆಗೆ ಸಚಿತ್ರ ಹಸ್ತಪ್ರತಿಯೊಂದನ್ನು ಶಾಸ್ತ್ರೀಯವಾಗಿ ಸಂಪಾದಿಸಿದ್ದು, "ಉದ್ಧರಣಿಗಳು ಎಂದರೆ ಲಿಂಗಾಯತ ತತ್ವಗಳ ರಹಸ್ಯವನ್ನು ತಿಳಿಸುವ ಒಂದು ಸಾಧನವಾಗಿದೆ. ರೋಗ, ಭಯ ಮುಂತಾದ ಭವ ಬಂಧನಗಳ ಪರಿಹಾರಕ್ಕಾಗಿ ಇಲ್ಲವೇ ಅಧೋಮುಖಿಯಾದ ಜೀವಿಯನ್ನು ಊರ್ಧ್ವಮುಖಿಗೊಳಿಸುವ ಉತ್ಕರ್ಷಕ ಸಿದ್ಧಾಂತ ತತ್ವ ಮತ್ತು ತಂತ್ರಸಾಹಿತ್ಯ ಇದಾಗಿದೆ"[೨೦] ಎಂದಿರುವರು. ಉದ್ಧರಣಿಯ ಉಗಮ, ಅರ್ಥ, ಸ್ವರೂಪ, ಉದ್ಧರಣಿಗಳ ಬಣ್ಣ ತಯಾರಿಕೆ, ತಾತ್ವಿಕತೆಯ ಕುರಿತು ಸಂಕ್ಷಿಪ್ತವಾಗಿ ವಿವರಿಸಿರುವರು. ಇದು ವೀರಶೈವ ಸಾಹಿತ್ಯದ ದೃಷ್ಟಿಯಿಂದ ಉತ್ತಮವಾದ ಕೃತಿಯಾಗಿದೆ.

ಕನ್ನಡದ ಹಸ್ತಪ್ರತಿಗಳಲ್ಲಿ ಚಿತ್ರ ರಚನೆಯು ಅಲಂಕಾರಿಕವಾಗಿಯೂ ಮತ್ತು ವಿಷಯಾಧಾರಿತವಾಗಿಯೂ ರೂಪಗೊಂಡಿದೆ. ಹಸ್ತಪ್ರತಿಗಳ ಕಟ್ಟುಗಳ ಮೇಲೆ, ಕಡತಗಳ ಪಟ್ಟಿಕೆಗಳ ಮೇಲೆ, ತಾಳೆಗರಿಗಳ ಆರಂಭಿಕ ಗರಿಗಳ ಮೇಲೆ ರೇಖೆಗಳಿಂದಲೋ, ವರ್ಣಗಳಿಂದಲೋ ಬರೆದ ಚಿತ್ರಗಳನ್ನು ಅಲಂಕಾರಿಕ ಚಿತ್ರಗಳೆಂದೂ, ಹಸ್ತಪ್ರತಿಗಳಲ್ಲಿ ಬರುವ ಕಾವ್ಯ, ಶಾಸ್ತ್ರಕ್ಕೆ ಸಂಬಂಧಿಸಿದ ಚಿತ್ರಗಳು ರಚನೆ ಆಗಿರುವುದನ್ನು ಕಾಣುತ್ತೇವೆ. ಇವುಗಳನ್ನು ವಿಷಯಾಧಾರಿತ ಚಿತ್ರ ಪ್ರತಿಗಳು ಎಂದು ಕರೆಯಲಾಗುತ್ತದೆ. ಇಂತಹ ಸಚಿತ್ರ ಹಸ್ತಪ್ರತಿಗಳಲ್ಲಿ ವೀರಶೈವ ಪರಂಪರೆಗೆ ಸಂಬಂಧಿಸಿದಂತೆ ಕಂಡುಬರುವ ಕೆಲವು ಹಸ್ತಪ್ರತಿಗಳನ್ನು ಇಲ್ಲಿ ಗಮನಿಸಬಹುದು.

**"ವೃಷಭೇಂದ್ರ ವಿಳಾಸ" :**

"ವೃಷಭೇಂದ್ರ ವಿಳಾಸವು" ಒಂದು ಯಕ್ಷಗಾನ ಕೃತಿಯಾಗಿದೆ. ಈ ಗ್ರಂಥದಲ್ಲಿ ಬಸವಣ್ಣನವರ ಜೀವನವೇ ಚಿತ್ರರೂಪದಲ್ಲಿ ಮೈತಳೆದು ನಿಂತಿದೆ. ಈ ಕಲಾಕೃತಿಗಳು ಪುಟ ಪುಟಗಳಲ್ಲೂ ಬಣ್ಣ ಬಣ್ಣದ ಚಿತ್ರಗಳ ರಾಶಿಯಾಗಿದ್ದು, ಒಂದು ಪುಟಕ್ಕೆ ಒಂದು ಅಥವಾ ಎರಡು ಚಿತ್ರಗಳನ್ನು ಮಾತ್ರ ಬಿಡಿಸಲಾಗಿದೆ. ಈ ಹಸ್ತಪ್ರತಿಯ ೩೪೪ ಪುಟಗಳಲ್ಲಿ ಒಟ್ಟು ೫೭೫ ಚಿತ್ರಗಳು ಅಡಕಗೊಂಡಿವೆ. ಪುಟದ ಬಹುಭಾಗವನ್ನು ಚಿತ್ರಗಳೇ ವ್ಯಾಪಿಸಿದ್ದು, ಅವುಗಳ ಕೆಳಗಡೆ ಅಥವಾ ಮೇಲ್ಗಡೆ ಅಥವಾ ಮಧ್ಯದಲ್ಲಿ ಪಠ್ಯವನ್ನು ಬರೆಯಲಾಗಿದೆ".[೨೧] ಇದು ಸಚಿತ್ರ ಪಠ್ಯ

---

೧೯. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ : ಪು. ೬೧
೨೦. ಡಾ. ಕೆ. ರವೀಂದ್ರನಾಥ : ಉದ್ಧರಣಿ ಸಾಹಿತ್ಯ : ಪು. ೧೬
೨೧. ಜ. ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು : ವೃಷಭೇಂದ್ರ ವಿಳಾಸ

ವರ್ಗಕ್ಕೆ ಸೇರುತ್ತದೆ. ದಪ್ಪದಾದ ಹಳೆಯ ಕಾಗದದಲ್ಲಿ ಒಂದಡಿಗಿಂತ ಸ್ವಲ್ಪ ಹೆಚ್ಚು ಉದ್ದವಾಗಿಯೂ, ಅರ್ಧ ಅಡಿಗಿಂತಲೂ ಸ್ವಲ್ಪ ಹೆಚ್ಚು ಅಗಲವಾಗಿಯೂ ಇದೆ. ಈ ಕೃತಿಯನ್ನು ಸುತ್ತೂರು ಕ್ಷೇತ್ರದ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಸಂಪಾದಿಸಿಕೊಟ್ಟಿದ್ದಾರೆ. ಈ ಸಚಿತ್ರ ಪತ್ಯವು ನಾಲ್ಕುವರ್ಣಗಳಲ್ಲಿ ಮುದ್ರಿತವಾಗಿದ್ದು, ಇದೊಂದು ವಿನೂತನ ಪ್ರಕಟಣೆಯಾಗಿದ್ದು ತಮ್ಮ ಕಲಾಭಿಜ್ಞತೆಯನ್ನು ಮೆರೆದಿದ್ದಾರೆ. ಸಾಹಿತ್ಯ ಹಾಗೂ ಚಿತ್ರಕಲಾ ಪ್ರಪಂಚಗಳೆರಡಕ್ಕೂ ನೀಡಿದ ಅಪೂರ್ವ ಕೊಡುಗೆಯಿದಾಗಿದೆ.

**ಶಿವನಿಧಿ :**

ಶ್ರೀ ತತ್ವ ನಿಧಿಯಲ್ಲಿ "ಶಿವನಿಧಿ"ಯು ಮೂರನೆಯದು. ಇದರಲ್ಲಿ ಒಟ್ಟು ೫೭೩ ಶ್ಲೋಕಗಳಿವೆ, ೧೬೪ ದೇವತಾ ಮೂರ್ತಿಗಳ ಚಿತ್ರಗಳನ್ನು ರಚಿಸಲಾಗಿದೆ. ಪರಶಿವನ ಪಂಚವಿಂಶತಿ ಲೀಲಾಮೂರ್ತಿಗಳನ್ನು ಚಿತ್ರಿಸಿ ವರ್ಣಿಸಲಾಗಿದೆ. ವೀರಭದ್ರ, ಭೈರವ, ಸುಬ್ರಹ್ಮಣ್ಯ, ಗಣಪತಿ, ಏಕಾದಶ ರುದ್ರರು ವಿವಿಧ ಭಾವಭಂಗಿಗಳಲ್ಲಿ ಚಿತ್ರಿಸಿರುವರು. ಶಿವನಿಧಿಯಲ್ಲಿ ದೇವತೆಗಳು ಹಿಡಿದಿರುವ ಆಯುಧಗಳು ಬಗೆಬಗೆಯವಾಗಿವೆ. ಅಲ್ಲದೆ ವಾದ್ಯ ವಿಶೇಷಗಳನ್ನು ಮನೋಹರವಾಗಿ ಚಿತ್ರಿಸಲಾಗಿದೆ.[೨೨] ಮೂಲಶ್ಲೋಕಗಳಿಗೆ ಅನುಸಾರವಾಗಿ ಚಿತ್ರಗಳನ್ನು ಅತ್ಯಾಕರ್ಷಕವಾಗಿ ಕಾಗದದ ಮೇಲೆ ಚಿತ್ರಿಸಲಾಗಿದೆ. ಶಿವನಿಗೆ ಸಂಬಂಧಿಸಿದ ವಿಶ್ವಕೋಶ"ವನ್ನೇ ನಮ್ಮ ಕಣ್ಮುಂದೆ ಇರಿಸುವಲ್ಲಿ ಮೈಸೂರಿನ ಮಹಾರಾಜರಾಗಿದ್ದ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಸ್ವತಃ ಬರೆಯುವುದರೊಂದಿಗೆ ಕೆಲವು ಚಿತ್ರಗಳನ್ನು ಅವರೇ ರಚಿಸಿ ಅಂದವಾಗಿ ಬಹುವರ್ಣಗಳಲ್ಲಿ ಮುದ್ರಿಸಿ ಸಂಪಾದಿಸಿಕೊಟ್ಟ ಅವರ ಕಾರ್ಯ ಪ್ರವೃತ್ತಿಯು ಪ್ರಶಂಸನೀಯ ಹಾಗೂ ಸ್ತುತ್ಯರ್ಹವಾಗಿದೆ. ಈ ಗ್ರಂಥವೂ ಕೂಡಾ ಸಾಹಿತ್ಯ ಮತ್ತು ಚಿತ್ರಕಲಾ ಕ್ಷೇತ್ರಕ್ಕೆ ನೀಡಿದ ಅಪೂರ್ವ ಕೊಡುಗೆಯಾಗಿದೆ.

**ರಾಘವಾಂಕ ಚರಿತೆ :**

೧೭ನೇ ಶತಮಾನದ ಕೊನೆಯ ಭಾಗದಲ್ಲಿ ಪ್ರತಿ ಮಾಡಿರಬಹುದಾದ ರಾಘವಾಂಕನ ಚರಿತೆಯು ಒಂದು ಕಾಗದದ ಪ್ರತಿಯಾಗಿದ್ದು, ನಂ. ೧೧೧೭ ಎಂದು ನಮೂದಿಸಿದ್ದು, ಇದು ಕನ್ನಡ ಅಧ್ಯಯನ ಪೀಠ, ಕ.ವಿ.ವಿ. ಧಾರವಾಡದಲ್ಲಿದೆ. ಇದರಲ್ಲಿ ರಾಘವಾಂಕನ ಜೀವನಕ್ಕೆ ಸಂಬಂಧಿಸಿದ ವರ್ಣಚಿತ್ರಗಳ ವಿವರಗಳು ದೊರೆಯುತ್ತವೆ. ಇದರಲ್ಲಿ ಪ್ರಭುದೇವ, ಸಿದ್ಧರಾಮ, ರಾಘವಾಂಕ, ಹರಿಹರ, ಚಿಕ್ಕನಂಜಾರ್ಯ, ಚೆನ್ನವೀರಾಂಬಿಕೆ, ಮಹಾದೇವ, ರುದ್ರಾಣಿ, ಪ್ರತಾಪರುದ್ರ, ವಿರೂಪಾಕ್ಷ ಪಂಡಿತ, ಕೆರೆಯ ಪದ್ಮರಸರ ಕುರಿತಂತೆ ೩೫ ಆಕರ್ಷಕ ವರ್ಣಚಿತ್ರಗಳಿವೆ.[೨೩]

---

೨೨. ಡಾ. ಕೆ. ವಿ. ರಮೇಶ (ಕನ್ನಡ ಅನುವಾದ) :ಪ್ರ. ಸಂ.: ಶಿವನಿಧಿ : ಪು. xxiii

೨೩. ಡಾ. ಬಿ. ಕೆ. ಹಿರೇಮಠ : ಕನ್ನಡ ಹಸ್ತಪ್ರತಿಗಳು – ಒಂದು ಅಧ್ಯಯನ : ಪು. ೧೯೪

**ಸಕೀಲಗಳು :**

ಕಾರ್ಯಕಾರಣಸಂಬಂಧವನ್ನು ತಿಳಿಸುವ ಸಕೀಲಗಳು ಅಷ್ಟವಿಧ, ನೂರೆಂಟು, ಇನ್ನೂರಾ ಹದಿನಾರು ಪ್ರಕಾರಗಳಲ್ಲಿವೆ. ಶಿವಶರಣರ ಚಿತ್ರಗಳನ್ನೊಳಗೊಂಡ ಹಸ್ತಪ್ರತಿಯು ನಾಗಮಂಡಲ ತಾಲೂಕಿನ ದೊಡ್ಡಬೆಲೆಯ ದೊಡ್ಡ ಮಠದಲ್ಲಿ ದೊರೆತಿದೆ. ಇದನ್ನು ಡಾ. ಎಂ. ಚಿದಾನಂದಮೂರ್ತಿ ಅವರು ಪ್ರಕಟಿಸಿದ್ದಾರೆ. ಬಸವಣ್ಣ-ಹಡಪದ ಅಪ್ಪಣ್ಣ, ಮಡಿವಾಳ ಮಾಚಿದೇವ-ಮೊಲ್ಲೆಬೊಮ್ಮ, ಚೆನ್ನಬಸವಣ್ಣ-ರೇಚಣ್ಣ, ಸಿದ್ಧರಾಮ-ಬಿಲ್ಲೇಶ ಮುಂತಾದವರನ್ನು ಆಯಾ ಸ್ಥಲಗಳಿಗೆ ಅನ್ವಯಿಸಿ ದೃಷ್ಟಾಂತವಾಗಿ ಚಿತ್ರಿಸಿರುವುದು ಪ್ರಶಂಸಾರ್ಹವೆಂದು ಡಾ. ಎಂ. ಚಿದಾನಂದ ಮೂರ್ತಿಯವರು ಅಭಿಪ್ರಾಯಪಡುತ್ತಾರೆ.[೨೪]

**ಚೆನ್ನಬಸವ ಪುರಾಣ :**

ಸುಮಾರು ೧೬ನೆಯ ಶತಮಾನದಲ್ಲಿ ರಚಿತವಾದ ವಿರೂಪಾಕ್ಷ ಪಂಡಿತಕೃತ "ಚೆನ್ನಬಸವ ಪುರಾಣವು" ಮುದ್ರಣಗೊಳ್ಳುವುದಕ್ಕಿಂತ ಪೂರ್ವದಲ್ಲಿ ಮೂಲಗ್ರಂಥದ ಹಸ್ತಪ್ರತಿಗಳನ್ನು ಮೇಲಿಂದ ಮೇಲೆ ಸಿದ್ಧಪಡಿಸಲಾಗಿದ್ದು, ಹೀಗೆ ಸಿದ್ಧಪಡಿಸುವಾಗ ಪುರಾಣದ ಕಥಾವಸ್ತುವಿನ ಸನ್ನಿವೇಶಗಳಿಗೆ ಸಂಬಂಧಿಸಿದಂತೆ ಸಾಂದರ್ಭಿಕ ಚಿತ್ರಗಳನ್ನು ಬರೆಯಿಸಿ ಗ್ರಂಥಕ್ಕೆ ಸೇರಿಸಲಾಗಿದೆ.[೨೫] ಇದು ಕರ್ನಾಟಕ ವಿ. ವಿ. ಧಾರವಾಡದ ಗ್ರಂಥಾಲಯದಲ್ಲಿದೆ. "ಚೆನ್ನಬಸವ ಪುರಾಣ"ದ ಹಸ್ತಪ್ರತಿಯು ಗುಲಬರ್ಗಾ ಜಿಲ್ಲೆಯ ಕಸಬಾ ಲಿಂಗಸೂರಿನ ಗುರುಪಾದಪ್ಪ ಶೆಟ್ಟಿಯವರ ಮನೆಯಲ್ಲಿ ಡಾ. ಮಲ್ಲಿಕಾರ್ಜುನ ಬಾಗೋಡಿ ಅವರಿಗೆ ದೊರೆತಿದ್ದು, ಇದರಲ್ಲಿ ಶಿವನ ಲೀಲೆಗಳಿಗೆ ಸಂಬಂಧಿಸಿದ ಚಿತ್ರಗಳು ರಚನೆಗೊಂಡಿವೆ.[೨೬] ಈ ಎಲ್ಲ ಚಿತ್ರಗಳನ್ನು ಮೊದಲನೆಯ ಬಾನಯ್ಯನು ರಚಿಸಿರುವನು ಎಂದಿರುವರು.

೧೯೭೧ ರಲ್ಲಿ ಪ್ರಕಟವಾದ ಕೆ.ಆರ್.ಶ್ರೀನಿವಾಸನ್ ಅವರ "ಟೆಂಪಲ್ಸ್ ಆಫ್ ಸೌತ್ ಇಂಡಿಯಾ"[೨೭] ಕೃತಿಯಲ್ಲಿ ದಕ್ಷಿಣ ಭಾರತದ ಕೆಲವು ದೇವಾಲಯಗಳಲ್ಲಿ ರಚನೆಯಾದ ಭಿತ್ತಿಚಿತ್ರಗಳ ಮಾಹಿತಿಯನ್ನು ಕೊಡುತ್ತಾರೆ.

೧೯೬೨ ರಲ್ಲಿ ಪ್ರಕಟವಾದ ಪಿ.ಆರ್.ತಿಪ್ಪೇಸ್ವಾಮಿ ಅವರು "ಬೆಳೆದು ಬಂದ ಭಾರತದ ಚಿತ್ರಕಲೆ"[೨೮] ಪುಸ್ತಕದಲ್ಲಿ ಅಜಂತಾ, ಎಲ್ಲೋರಾ, ಬದಾಮಿ ಭಿತ್ತಿಚಿತ್ರಗಳ ವಿವರಗಳನ್ನು ಸಾಂದರ್ಭಿಕವಾಗಿ ಉಲ್ಲೇಖಿಸಿದ್ದಾರೆ. ೧೯೬೮ ರಲ್ಲಿ ಪ್ರಕಟವಾದ ಡಾ. ಎಚ್.ತಿಪ್ಪೇರುದ್ರಸ್ವಾಮಿ ಅವರು "ಕರ್ನಾಟಕ ಸಂಸ್ಕೃತಿ ಸಮೀಕ್ಷೆ"[೨೯] ಪುಸ್ತಕದಲ್ಲಿ ಕರ್ನಾಟಕದ ಭಿತ್ತಿಚಿತ್ರ ಪರಂಪರೆಯನ್ನು ಬದಾಮಿ ಚಾಲುಕ್ಯರಿಂದ ಮೈಸೂರು ಅರಸರವರೆಗೆ ಕೆಲವು ಭಿತ್ತಿಚಿತ್ರ

---

೨೪. ಡಾ. ಎಂ. ಚಿದಾನಂದ ಮೂರ್ತಿ : ಸಕೀಲಗಳು

೨೫. ಶ್ರೀ ವೀರಭದ್ರಪ್ಪ ಹಾಲಭಾವಿ, ಶ್ರೀ ಶಿವಲಿಂಗಪ್ಪ ಎಸ್. ಬಸವನಾಳ :ಸಂ.: ವಿರೂಪಾಕ್ಷ ಪಂಡಿತ ಕೃತ ಚೆನ್ನಬಸವ ಪುರಾಣ : ಪು. ೩

೨೬. ಚಂದ್ರಶೇಖರ ಎಂ. : ವಿರೂಪಾಕ್ಷ ಪಂಡಿತ ವಿರಚಿತ ಚೆನ್ನಬಸವ ಪುರಾಣ : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೨೭. K.R.Srinivasan: Temples of South India :

೨೮. ಪಿ.ಆರ್.ತಿಪ್ಪೇಸ್ವಾಮಿ: ಬೆಳೆದು ಬಂದ ಭಾರತದ ಚಿತ್ರಕಲೆ: ಕಲಾಕ್ಷೇತ್ರ, ಮೈಸೂರು.

೨೯. ಡಾ. ಹೆಚ್.ತಿಪ್ಪೇರುದ್ರಸ್ವಾಮಿ: ಕರ್ನಾಟಕ ಸಂಸ್ಕೃತಿ ಸಮೀಕ್ಷೆ: ಕೃಷ್ಣಮೂರ್ತಿಪುರಂ, ಮೈಸೂರು.

ನೆಲೆಗಳನ್ನು ಚರ್ಚಿಸಿದ್ದಾರೆ. ೧೯೭೦ ರಲ್ಲಿ ಪ್ರಕಟವಾದ ಅ.ನ.ಕೃಷ್ಣರಾಯ್ ಅವರು "ಚಿತ್ರಕಲೆ"[೩೦] ಪುಸ್ತಕದಲ್ಲಿ ಭಾರತೀಯ ಚಿತ್ರಕಲೆ, ಸಂಸ್ಕೃತಿ, ಲಲಿತಕಲೆಗಳ ಕುರಿತು ಚರ್ಚಿಸಿದ್ದಾರೆ.

೧೯೭೫ ರಲ್ಲಿ ಪ್ರಕಟಗೊಂಡ ಶ್ರೀ ಎಸ್.ಶ್ರೀಕಂಠಶಾಸ್ತ್ರಿಗಳವರು "ಭಾರತೀಯ ಸಂಸ್ಕೃತಿ"[೩೧] ಪುಸ್ತಕದಲ್ಲಿ ಭಿತ್ತಿಚಿತ್ರ ಶಿಲ್ಪಿಗಳ ಕುರಿತಾಗಿ ವಿಶ್ಲೇಷಿಸಿದ್ದಾರೆ. ೧೯೭೯ ರಲ್ಲಿ ಪ್ರಕಟಗೊಂಡ ಎಂ.ಎಸ್.ನಾಗರಾಜ್‌ರವರ "ಭಾರತೀಯ ಕಲೆಗಳಲ್ಲಿ ಕಿರಾತಾರ್ಜುನೀಯ ಪ್ರಸಂಗ"[೩೨] ಕೃತಿಯಲ್ಲಿ ಭಾರತೀಯ ಶಿಲ್ಪ ಮತ್ತು ಭಿತ್ತಿ ಚಿತ್ರಗಳಲ್ಲಿ ರಚನೆಯಾಗಿರುವ ಕಿರಾತಾರ್ಜುನೀಯ ಪ್ರಸಂಗಗಳ ಕುರಿತು ತೌಲನಿಕ ಚರ್ಚೆ ಇದೆ. ೧೯೭೯ ರಲ್ಲಿ ಪ್ರಕಟಗೊಂಡ ಬಿ.ಪಿ.ಬಾಯಿರಿ ಅವರು "ಭಾರತೀಯ ಚಿತ್ರಕಲೆ"[೩೩] ಯಲ್ಲಿ ಬಾದಾಮಿಯ ಭಿತ್ತಿಚಿತ್ರಗಳ ಕುರಿತು ಬರೆದಿರುವರು.

೧೯೮೨ ರಲ್ಲಿ ಪ್ರಕಟಗೊಂಡ ಆರ್.ಎನ್.ಸಾಲತ್ತೊರೆ ಅವರು "ವಿಜಯನಗರ ಕಲೆ"[೩೪] ಬಗ್ಗೆ ಬರೆದಿದ್ದು ಅದರಲ್ಲಿ ಭಿತ್ತಿ ಚಿತ್ರಗಳ, ಭಿತ್ತಿ ವಸ್ತು ವಿಷಯವನ್ನು ಕುರಿತು ಹೇಳಿರುವರು. ೧೯೮೩ ರಲ್ಲಿ ಪ್ರಕಟಗೊಂಡ ಬಿ.ವಿ.ಕೆ. ಶಾಸ್ತ್ರಿ ಅವರ "ಕರ್ನಾಟಕದ ಭಿತ್ತಿಚಿತ್ರಗಳು"[೩೫] ಎಂಬ ಪುಸ್ತಕದಲ್ಲಿ ಬದಾಮಿ, ಹಂಪಿ, ಮೈಸೂರು, ಹರದನಹಳ್ಳಿ, ಶ್ರವಣಬೆಳಗೊಳ, ಮುಡುಕುತೊರೆ ಮುಂತಾದ ಸ್ಥಳಗಳ ಭಿತ್ತಿಚಿತ್ರಗಳ ಬಗ್ಗೆ ಹೇಳಲಾಗಿದೆ.

೧೯೮೫ ರಲ್ಲಿ ಪ್ರಕಟಗೊಂಡ ಸಿ.ಶಿವರಾಮ ಮೂರ್ತಿ ಅವರು "ವಿಜಯನಗರ ಪೇಂಟಿಂಗ್ಸ್"[೩೬] ಎಂಬ ಪುಸ್ತಕದಲ್ಲಿ ಹಂಪೆಯ ವಿರೂಪಾಕ್ಷ ದೇವಾಲಯದ ಮಂಟಪದ ಚಿತ್ರಗಳ, ಲೇಪಾಕ್ಷಿಯ ಚಿತ್ರಗಳ ಕುರಿತು ಮಾಹಿತಿ ನೀಡಿರುವರು.

೧೯೯೫ ರಲ್ಲಿ ಪ್ರಕಟಗೊಂಡ ಬಸವರಾಜ್ ಉಪ್ಪಿನ್ ಅವರ "ಬಾನಯ್ಯ ಗರುಡಾದ್ರಿ"[೩೭] ಎಂಬ ಕಿರು ಪುಸ್ತಕದಲ್ಲಿ ಸುರಪುರದ ಭಿತ್ತಿಚಿತ್ರಕಲೆಯ ಬಗ್ಗೆ ಹೇಳಲಾಗಿದೆ.

ಡಾ. ಶಿವರಾಮ ಕಾರಂತರ "ಕರ್ನಾಟಕದಲ್ಲಿ ಚಿತ್ರಕಲೆ"[೩೮] ಪುಸ್ತಕದಲ್ಲಿ ಬಾದಾಮಿ, ನರಗುಂದ, ನಿಪ್ಪಾಣಿ, ಅಥಣಿ, ಶ್ರವಣಬೆಳಗೊಳ, ಹಂಪಿ, ವಿಜಾಪುರದ ಭಿತ್ತಿಚಿತ್ರಗಳ ಬಗ್ಗೆ ಬರೆದಿರುವರು. ಇದೇ ಪುಸ್ತಕ ಇಂಗ್ಲೀಷ್ ಭಾಷೆಯಲ್ಲಿಯೂ ಪ್ರಕಟಗೊಂಡಿದೆ.

---

೩೦. ಅ.ನ.ಕೃಷ್ಣರಾಯ್: ಚಿತ್ರಕಲೆ ವಿದ್ಯಾನಿಧಿ ಬುಕ್ ಡಿಪೋ, ಮೈಸೂರು.
೩೧. ಎಸ್.ಶ್ರೀಕಂಠಶಾಸ್ತ್ರಿ: ಭಾರತೀಯ ಸಂಸ್ಕೃತಿ: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
೩೨. ಎಂ.ಎಸ್.ನಾಗರಾಜ್ : ಭಾರತೀಯ ಕಲೆಗಳಲ್ಲಿ ಕಿರಾತಾರ್ಜುನೀಯ ಪ್ರಸಂಗ
೩೩. ಬಿ.ಪಿ. ಬಾಯರಿ : ಭಾರತೀಯ ಚಿತ್ರಕಲೆ : ಸಮಾಜ ಪುಸ್ತಕಾಲಯ, ಧಾರವಾಡ.
೩೪. R.N.Saletore: Vijay Nagar Art
೩೫. ಬಿ.ವಿ.ಕೆ.ಶಾಸ್ತ್ರಿ: ಕರ್ನಾಟಕದ ಭಿತ್ತಿಚಿತ್ರಗಳು: ಕರ್ನಾಟಕ ಲಲಿತ ಕಲಾ ಅಕಾಡೆಮಿ ಬೆಂಗಳೂರು.
೩೬. ಸಿ.ಶಿವರಾಮಮೂರ್ತಿ: ವಿಜಯನಗರ ಪೇಂಟಿಂಗ್ಸ್
೩೭. ಬಸವರಾಜ್ ಉಪ್ಪಿನ್: ಬಾನಯ್ಯ ಗುರುಡಾದ್ರಿ: ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.
೩೮. ಡಾ. ಶಿವರಾಮ ಕಾರಂತರು: ಕರ್ನಾಟಕದಲ್ಲಿ ಚಿತ್ರಕಲೆ: ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೯೯೮ ರಲ್ಲಿ ಪ್ರಕಟಗೊಂಡ ಡಾ. ಅ.ಲ.ನರಸಿಂಹನ್ ಅವರ "ಕರ್ನಾಟಕದ ಭಿತ್ತಿಚಿತ್ರ ಪರಂಪರೆ"[೩೯] ಪುಸ್ತಕದಲ್ಲಿ ಚಿತ್ರಕಲೆಯಲ್ಲಿ ಧಾರ್ಮಿಕ ವಿಷಯಗಳು ಕಲಾಚಿಂತನೆಗಳ ಕುರಿತು ಬರೆಯಲಾಗಿದೆ.

೨೦೦೦ ರಲ್ಲಿ ಡಾ. ಯಾದಪ್ಪ ಪರದೇಶಿ ಅವರು ಪಿಹೆಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ "ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ: ಒಂದು ಅಧ್ಯಯನ"[೪೦] ದಲ್ಲಿ ಭಿತ್ತಿ ಚಿತ್ರಕಲೆಯ ಇತಿಹಾಸ, ಭಿತ್ತಿಸಿದ್ಧತೆ, ಭಿತ್ತಿಚಿತ್ರಕಲೆಯ ಪರಿಕರಗಳು, ಭಿತ್ತಿಚಿತ್ರ ರಚನಾ ವಿಧಾನ, ಭಿತ್ತಿಚಿತ್ರಕಲೆಯ ಪೋಷಕರು, ಭಿತ್ತಿಚಿತ್ರಕಲೆಯ ಆಪತ್ತು ಮತ್ತು ಸಂರಕ್ಷಣೆ ಹೀಗೆ ಸಮಗ್ರ ಅಧ್ಯಯನವನ್ನು ಮಾಡಿರುವರು.

೨೦೦೩ ರಲ್ಲಿ ಡಾ. ಬಿ.ಆರ್.ಹಿರೇಮಠರ ಪ್ರಧಾನ ಸಂಪಾದಕತ್ವದಲ್ಲಿ ಡಾ. ಎಸ್.ಸಿ.ಪಾಟೀಲ ಮತ್ತು ಸತ್ಯಾನಂದ ಪಾತ್ರೋಟ ಅವರು ಸಂಪಾದಿಸಿರುವ "ನಿಜದ ನೆಲೆ" ಈ ಗ್ರಂಥವು ಹಲವಾರು ವಿಷಯಗಳನ್ನೊಳಗೊಂಡ ಮಹಾನ್ ಕೃತಿಯಾಗಿದೆ. ಇದರಲ್ಲಿ ಸುಮಾರು ೧೩೭ ವಿವಿಧ ವಿಷಯಗಳ ಮೇಲೆ ವಿವಿಧ ಲೇಖನಗಳನ್ನು ಹೊಂದಿದ ಬಹುದೊಡ್ಡ ಆಕರ ಗ್ರಂಥವಾಗಿದೆ, ಈ ಗ್ರಂಥವು ಡಾ. ಬಿ.ಕೆ.ಹಿರೇಮಠ ಅವರ ಅಭಿನಂದನಾ ಗ್ರಂಥವಾಗಿದೆ[೪೧]. ಇದು ಚಿತ್ರಕಲಾ ಕ್ಷೇತ್ರಕ್ಕೆ ಮಹತ್ವದ ಕೊಡುಗೆಯಾಗಿದೆ.

೨೦೦೩ ರಲ್ಲಿ ಡಾ. ಸ್ನೇಹಾ ಭೂಸನೂರಮಠ ಅವರು "ವೀರಶೈವ ಹಸ್ತಪ್ರತಿಗಳು – ಚಿತ್ರಕಲೆ"[೪೨] ವಿಷಯ ಕುರಿತು ಸಿದ್ಧಪಡಿಸಿದ ಲೇಖನದಲ್ಲಿ ಶಿವಯೋಗ ಮಂದಿರದಲ್ಲಿರುವ ಹಸ್ತಪ್ರತಿಗಳಲ್ಲಿರುವ ಚಿತ್ರಗಳ ಬಗೆಗೆ ಮತ್ತು ಹಸ್ತಪ್ರತಿ ಫಲಕಗಳ ಮೇಲಿರುವ ಚಿತ್ರಗಳ ಬಗೆಗೆ ವಿಷಯವನ್ನು ಪ್ರಕಟಿಸಿದ್ದಾರೆ.

೨೦೦೩ ರಲ್ಲಿ ಡಾ. ಕೆ.ರವೀಂದ್ರನಾಥ್ ಅವರು "ಉದ್ಧರಣಿಗಳು ಚಿತ್ರಕಲೆ[೪೩] ಈ ಲೇಖನದಲ್ಲಿ ಉದ್ಧರಣಿ ಚಿತ್ರಗಳ ಬಗೆಗೆ ವಿಶೇಷ ಮಾಹಿತಿಯನ್ನು ನೀಡಿರುವರು.

೨೦೦೩ ರಲ್ಲಿ ಡಾ. ಬಿ.ವ್ಹಿ.ಮಲ್ಲಾಪೂರ ಅವರು "ವೀರಶೈವ ಸಾಹಿತ್ಯ – ಚಿತ್ರಕಲೆ[೪೪] – ಲೇಖನದಲ್ಲಿ ವೀರಶೈವ ಧರ್ಮದ ಹಿನ್ನೆಲೆ, ಶಿವಶರಣರ ಕುರಿತು ಬರೆದಿರುವರು.

೨೦೦೩ ರಲ್ಲಿ ಡಾ. ಎಫ್.ಡಿ.ಹಳ್ಳಿಕೇರಿಯವರು "ಸಚಿತ್ರ ಹಸ್ತಪ್ರತಿಗಳು–ಸ್ವರೂಪ ಮತ್ತು ಸಂಪಾದನೆ"[೪೫] ಲೇಖನದಲ್ಲಿ ಹಸ್ತಪ್ರತಿಗಳ ಬಗ್ಗೆ ವಿವರಿಸಿರುವರು.

---

೩೯. ಡಾ. ಅ.ಲ.ನರಸಿಂಹನ್: ಕರ್ನಾಟಕ ಭಿತ್ತಿ ಚಿತ್ರ ಪರಂಪರೆ: ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು.
೪೦. ಡಾ. ಯಾದಪ್ಪ ಪರದೇಶಿ: ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ: ಒಂದು ಅಧ್ಯಯನ: ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.
೪೧. ಡಾ. ಎಸ್.ಸಿ.ಪಾಟೀಲ ಮತ್ತು ಸತ್ಯಾನಂದ ಪಾತ್ರೋಟ: ಸಂ: ನಿಜದ ನೆಲೆ: ಬಸವೇಶ್ವರ ವಿದ್ಯಾವರ್ಧಕ ಸಂಘ, ಬಾಗಲಕೋಟ
೪೨. ಅದೇ ಪುಸ್ತಕ, ಡಾ. ಸ್ನೇಹಾ ಭೂಸನೂರಮಠ: ಲೇಖನ : ವೀರಶೈವ ಹಸ್ತಪ್ರತಿಗಳು – ಚಿತ್ರಕಲೆ: ಪುಟ–೫೬.
೪೩. ಅದೇ ಪುಸ್ತಕ, ಡಾ. ಕೆ.ರವೀಂದ್ರನಾಥ: ಲೇಖನ: ಉದ್ಧರಣಿ–ಚಿತ್ರಗಳು: ಪುಟ–೭೧.
೪೪. ಅದೇ ಪುಸ್ತಕ, ಡಾ. ಬಿ.ವ್ಹಿ.ಮಲ್ಲಾಪೂರೆ: ಲೇಖನ: ವೀರಶೈವ ಸಾಹಿತ್ಯ–ಚಿತ್ರಕಲೆ: ಪುಟ–೧೧೩.
೪೫. ಅದೇ ಪುಸ್ತಕ, ಡಾ. ಎಫ್.ಡಿ.ಹಳ್ಳೀಕೇರಿ: ಲೇಖನ: ಸಚಿತ್ರ ಹಸ್ತಪ್ರತಿಗಳು–ಸ್ವರೂಪ ಮತ್ತು ಸಂಪಾದನೆ: ಪುಟ–೯೩.

ಕೆಲವು ಮಹತ್ವದ ಕೃತಿಗಳ ಮೂಲಕ ಭಿತ್ತಿ ಚಿತ್ರ ಹಾಗು ಹಸ್ತಪ್ರತಿಗಳಲ್ಲಿನ ಚಿತ್ರ ಸಾಹಿತ್ಯದ ವ್ಯಾಪ್ತಿಯನ್ನು ಸಂಕ್ಷಿಪ್ತವಾಗಿ ಪರಿಚಯಿಸಲಾಗಿದೆ. ಈ ಕೃತಿಗಳ ಸಾಧಕ-ಬಾಧಕಗಳ ಮೌಲ್ಯಮಾಪನವನ್ನು ಹಸ್ತಪ್ರತಿ ಚಿತ್ರಕಲೆಯ ಅಧ್ಯಾಯದಲ್ಲಿ ಹಾಗು ಭಿತ್ತಿಚಿತ್ರಕಲಾ ಅಧ್ಯಾಯದಲ್ಲಿ ಮಾಡಲಾಗುವುದು. ಕರ್ನಾಟಕದ ವೀರಶೈವ ಪರಂಪರೆಯ ಚಿತ್ರಕಲೆಯ ಹಿನ್ನೆಲೆಯಲ್ಲಿ ಸಚಿತ್ರ ಹಸ್ತಪ್ರತಿಗಳ ಮತ್ತು ಭಿತ್ತಿಚಿತ್ರಗಳ ಸ್ಥೂಲ ಪರಿಚಯವನ್ನು, ಅವುಗಳ ರಚನಾ ಇತಿಹಾಸದ ಹಲವು ಮಜಲುಗಳನ್ನು ಇಲ್ಲಿ ಕಟ್ಟಿಕೊಡಲಾಗಿದೆ.

ಇದುವರೆಗೆ ನೋಡಿದಂತೆ ವೀರಶೈವ ಭಿತ್ತಿಚಿತ್ರಗಳ ಬಗ್ಗೆ ಮತ್ತು ವೀರಶೈವ ಹಸ್ತಪ್ರತಿ ಚಿತ್ರಗಳ ಬಗ್ಗೆ ಅಲ್ಲಲ್ಲಿ ಕೆಲವು ಪರಿಚಯಾತ್ಮಕ ಲೇಖನಗಳು ಬಂದಿವೆಯೇ ಹೊರತು, ಧಾರ್ಮಿಕ ಹಿನ್ನೆಲೆಯಲ್ಲಿ ವೀರಶೈವ ಪರಂಪರೆಗೆ ಸಂಬಂಧಿಸಿದಂತೆ ಇದುವರೆಗೆ ಚಿತ್ರಗಳ ಸಮಗ್ರ ಅಧ್ಯಯನಗಳು ನಡೆದಿಲ್ಲ. ಇದನ್ನು ಗಮನದಲ್ಲಿರಿಸಿಕೊಂಡು ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

**ಅಧ್ಯಯನದ ಸ್ವರೂಪ :**

ಪ್ರಸ್ತುತ ಅಧ್ಯಯನವನ್ನು ಎಂಟು ಅಧ್ಯಾಯಗಳನ್ನಾಗಿ ವಿಂಗಡಿಸಿಕೊಂಡಿದ್ದು, ಪ್ರತಿಯೊಂದು ಅಧ್ಯಾಯವೂ ವಿಸ್ತೃತವಾದ ವಿವರಣೆಯನ್ನೊಳಗೊಂಡಿದೆ.

''ಮೊದಲನೆಯ ಅಧ್ಯಾಯ''ದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಹಾಗೂ ವೈಧಾನಿಕತೆಯನ್ನೊಳಗೊಂಡಿದೆ. ಇದುವರೆಗೆ ನಡೆದ ಅಧ್ಯಯನ ಮತ್ತು ಆಕರ ಸಾಮಗ್ರಿಗಳ ಸಮೀಕ್ಷೆ ಇರುವುದು.

“ಎರಡನೆಯ ಅಧ್ಯಾಯ”ದಲ್ಲಿ ಕರ್ನಾಟಕದ ವೀರಶೈವ ಧರ್ಮ, ಸಂಸ್ಕೃತಿ, ಚಿತ್ರಕಲೆಯ ನೆಲೆ ಹಿನ್ನೆಲೆಯ ಕುರಿತು ಭೌಗೋಳಿಕ, ಧಾರ್ಮಿಕ, ರಾಜಕೀಯ ಹಾಗೂ ಐತಿಹಾಸಿಕ ಮಹತ್ವಗಳೊಂದಿಗೆ ಸಾಂಸ್ಕೃತಿಕ ಪರಿಸರ, ಧಾರ್ಮಿಕ ವಿವರಗಳನ್ನು ಉಲ್ಲೇಖಿಸುವುದಲ್ಲದೇ, ವೀರಶೈವ ಧರ್ಮವನ್ನು ಚಿತ್ರಗಳ ಮೂಲಕ ಕಟ್ಟಿಕೊಡುವ ಪ್ರಯತ್ನವನ್ನು ಮಾಡಲಾಗಿದೆ.

“ಮೂರನೆಯ ಅಧ್ಯಾಯ”ಲ್ಲಿ ಕರ್ನಾಟಕದ ವೀರಶೈವ ಹಸ್ತಪ್ರತಿ ಚಿತ್ರಕಲೆಯಲ್ಲಿ ಉದ್ಧರಣಿ ಪಟಲಗಳು, ಶಿವಾನುಭವ ಶಾಸ್ತ್ರ, ಉದ್ಧರಣಿ ಸಾಹಿತ್ಯ, ವೃಷಭೇಂದ್ರ ವಿಳಾಸ, ಶಿವನಿಧಿ, ಚೆನ್ನಬಸವ ಪುರಾಣ, ಬಸವ ಪುರಾಣ, ಬರುವ ವೀರಶೈವ ಚಿತ್ರಗಳ ಕುರಿತಾದ ವಿಶ್ಲೇಷಣೆ ಮಾಡಲಾಗಿದೆ.

“ನಾಲ್ಕನೆಯ ಅಧ್ಯಾಯ”ದಲ್ಲಿ ಕರ್ನಾಟಕದ ವೀರಶೈವ ಭಿತ್ತಿಚಿತ್ರ ಕಲೆಯು ಹರಪ್ಪಾ ಮೊಹಂಜೋದಾರೋ, ಚಾಲುಕ್ಯ, ರಾಷ್ಟ್ರಕೂಟರು, ಚೋಳ, ಹೊಯ್ಸಳ, ವಿಜಯನಗರ ಹಾಗೂ ವಿಜಯನಗರೋತ್ತರಗಳಾದ ಮೈಸೂರು, ದಖ್ಖನ್, ಸುರಪುರ ಮುಂತಾದ ಪ್ರಾದೇಶಿಕ ಚಿತ್ರಗಳಲ್ಲಿ ಬರುವ ವೀರಶೈವ ಭಿತ್ತಿಚಿತ್ರಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.

"ಐದನೆಯ ಅಧ್ಯಾಯ"ದಲ್ಲಿ ಕರ್ನಾಟಕದ ವೀರಶೈವ ಸಂಕೀರ್ಣ ಚಿತ್ರಕಲೆಯು ವಾಡೆ, ಅರಮನೆ, ಮಠ, ದೇವಾಲಯ, ಮಂದಿರಗಳಲ್ಲಿ ಬರುವ ಬಿಡಿಚಿತ್ರಗಳ ಹಾಗೂ ಕಾಗದ, ಬಟ್ಟೆ (ಕ್ಯಾನ್ವಾಸ್) ಮರ ಮಾಧ್ಯಮದ ಚಿತ್ರಗಳ ಕುರಿತು ವಿಶ್ಲೇಷಿಸಲಾಗಿದೆ.

"ಆರನೆಯ ಅಧ್ಯಾಯ"ದಲ್ಲಿ ಕರ್ನಾಟಕದ ವೀರಶೈವ ಚಿತ್ರಕಲೆಯ ಪ್ರಮುಖ ಲಕ್ಷಣಗಳು, ಅಂದಿನ ಸಂದರ್ಭದಲ್ಲಿ ಕಲಾವಿದನ ಮೇಲೆ ಆದ ಧರ್ಮದ ಪ್ರಭಾವ, ಪ್ರೇರಣೆ, ಕಲಾಕೃತಿಗಳಲ್ಲಿಯ ಶೈಲಿ, ತಂತ್ರಗಾರಿಕೆ ಇವುಗಳ ಕುರಿತು ಅಧ್ಯಯನ ಮಾಡಲಾಗಿದೆ.

"ಏಳನೆಯ ಅಧ್ಯಾಯ"ದಲ್ಲಿ ಕರ್ನಾಟಕದ ವೀರಶೈವ ಪರಂಪರೆಯ ಚಿತ್ರಕಲೆಯ ಸ್ಥಿತಿಗತಿಯನ್ನು ಹಾಗೂ ಅವುಗಳಿಗೆ ಒದಗಿದ ಆಪತ್ತುಗಳು ಮತ್ತು ಸಂರಕ್ಷಣೆಗೆ ಅನುಸರಿಸಬೇಕಾದ ಕ್ರಮದ ಕುರಿತು ವಿವರಿಸಲಾಗಿದೆ.

"ಎಂಟನೆಯ ಅಧ್ಯಾಯ"ದಲ್ಲಿ ಪ್ರಸ್ತುತ ಈ ಮಹಾಪ್ರಬಂಧದ ಎಲ್ಲ ಅಧ್ಯಾಯಗಳ ಅಧ್ಯಯನದ ಫಲಿತಗಳನ್ನು ಪ್ರಸ್ತುತಪಡಿಸಲಾಗಿದೆ.

**ಅಧ್ಯಯನದ ವ್ಯಾಪ್ತಿ :**

ಪ್ರಸ್ತುತ ವೀರಶೈವ ಪರಂಪರೆಯ ಹಿನ್ನೆಲೆಯಲ್ಲಿ ಬೆಳೆದುಬಂದಿರುವ ಚಿತ್ರಕಲೆಯನ್ನು ಪ್ರಮುಖವಾಗಿಟ್ಟುಕೊಂಡು ಅಧ್ಯಯನ ಮಾಡಲಾಗಿದೆ. ಸಾಂಸ್ಕೃತಿಕ ಕರ್ನಾಟಕ ಈಗಿನ ರಾಜಕೀಯ ಕರ್ನಾಟಕಕ್ಕಿಂತಲೂ ಹಿರಿದಾದುದು ಆಗಿತ್ತು. ಉತ್ತರದ ಗುಜರಾತ್‌ವರೆಗೂ ತಮ್ಮ ರಾಜ್ಯವನ್ನು ರಾಷ್ಟ್ರಕೂಟರು, ಚಾಲುಕ್ಯರು ಆಕ್ರಮಿಸಿಕೊಂಡಿದ್ದರು. ದಕ್ಷಿಣದಲ್ಲಿ ಮಧುರೈವರೆಗೂ, ಪೂರ್ವದಲ್ಲಿಯ ಆಂಧ್ರ ಪ್ರದೇಶವೂ ಸೇರಿದಂತೆ ದಕ್ಷಿಣ ಭಾರತದಾದ್ಯಂತ ವಿಜಯ ನಗರ ಸಾಮ್ರಾಜ್ಯವು ವಿಸ್ತರಿಸಿಕೊಂಡಿತ್ತು. ಅಂತೆಯೇ ಧಾರ್ಮಿಕ ಹಿನ್ನೆಲೆಯಲ್ಲಿ ಉತ್ತರದ ಸಿಂಧೂ ಸಂಸ್ಕೃತಿಯು, ದಕ್ಷಿಣದ ಕನ್ಯಾಕುಮಾರಿಯವರೆಗೂ ಬೆಳೆದು ಬಂದಿದೆ. ಆದರೆ ಪ್ರಸ್ತುತ ಅಧ್ಯಯನವು ಇಂದಿನ ಕರ್ನಾಟಕದ ವೀರಶೈವ ಪರಂಪರೆಯ ಚಿತ್ರಕಲೆಗೆ ಸೀಮಿತಗೊಂಡರೂ, ಅವಶ್ಯಕತೆ ಬಿದ್ದಲ್ಲಿ ಕರ್ನಾಟಕೇತರ ಪ್ರದೇಶದಲ್ಲಿರುವ ವೀರಶೈವ ಪರಂಪರೆಯ ಚಿತ್ರಕಲೆಯನ್ನು ಅಧ್ಯಯನಕ್ಕೆ ಅಳವಡಿಸಿಕೊಳ್ಳಲಾಗಿದೆ ಹಾಗೂ ಅಲ್ಲಲ್ಲಿ ಅಧ್ಯಯನಕ್ಕೆ ಪೂರಕವಾಗಿ ಬೌದ್ಧ, ಜೈನ, ವೈಷ್ಣವ ಪರಂಪರೆಯ ಚಿತ್ರಕಲೆಯನ್ನು ಬಳಸಿಕೊಂಡು ಅಧ್ಯಯನ ನಡೆಸಲಾಗಿದೆ. ಇತಿಹಾಸ ಕಾಲದ ಚಿತ್ರಕಲಾ ಪಳೆಯುಳಿಕೆಗಳು, ಭಿತ್ತಿ ಚಿತ್ರಗಳು, ಹಸ್ತಪ್ರತಿಗಳು, ಉದ್ಧರಣಿ ಪಟಲಗಳು, ಬಿಡಿ ಚಿತ್ರಗಳು, ವೀರಶೈವ ಧರ್ಮ ಸಂಸ್ಕೃತಿಯೊಂದಿಗೆ ಹೇಗೆ ಬೆಳೆದು ಬಂದವು ಎಂಬುದನ್ನು ವಿಶಿಷ್ಟವಾಗಿ ಮತ್ತು ವ್ಯವಸ್ಥಿತವಾಗಿ ಕಟ್ಟಿಕೊಡುವ ಪ್ರಯತ್ನ ಪ್ರಸ್ತುತ ಅಧ್ಯಯನದ ವ್ಯಾಪ್ತಿಯಾಗಿದೆ.

**ಅಧ್ಯಯನದ ವೈಧಾನಿಕತೆ :**

ಈ ಅಧ್ಯಯನಕ್ಕೆ ಎರಡು ರೀತಿಯ ವಿಧಾನಗಳನ್ನು -ಬಳಸಿಕೊಳ್ಳಲಾಗಿದೆ.

೧. ಮೂಲ ಆಕರ ಸಾಮಗ್ರಿಗಳು.

೨. ಆನುಷಂಗಿಕ ಆಕರ ಸಾಮಗ್ರಿಗಳು.

**ಅ. ೧. ಮೂಲ ಆಕರ ಸಾಮಗ್ರಿಗಳು :**

ಮೂಲ ಆಕರ ಸಾಮಗ್ರಿಗಳಲ್ಲಿ ಕ್ಷೇತ್ರಕಾರ್ಯ ಅತಿಮುಖ್ಯವಾದ ಅಂಶವಾಗಿದ್ದು, ಅಧ್ಯಯನಕ್ಕೆ ಅಗತ್ಯವಾಗಿ ಬೇಕಾಗಿರುವಂತಹುದು ಒಂದು ನಾಡಿನ ಸಂಸ್ಕೃತಿ, ಧಾರ್ಮಿಕ ಇತಿಹಾಸ, ಕಲೆಯ ವಿಷಯಗಳ ಬಗ್ಗೆ ಸಂಶೋಧನೆ ಮಾಡುವಾಗ ಕ್ಷೇತ್ರಕಾರ್ಯ ಮುಖ್ಯವಾಗುತ್ತದೆ. ಇದು ಮೂಲ ಆಕರ ಸಾಮಗ್ರಿಗಳಿಂದ ಮಾಹಿತಿ ಸಂಗ್ರಹಿಸಲು ಸುಲಭ ಮಾರ್ಗವಾಗಿದೆ. ಈ ಅಧ್ಯಯನಕ್ಕೆ ಮೂಲ ಆಕರ ಸಾಮಗ್ರಿಯಾಗಿ ಮೂಲ ಹಸ್ತಪ್ರತಿಗಳು, ಉದ್ಧರಣಿಗಳು, ಭಿತ್ತಿಚಿತ್ರಗಳನ್ನು ಬಳಸಿಕೊಳ್ಳಲಾಗಿದೆ. ಈ ಕೆಳಗಿನಂತೆ ವರ್ಗೀಕರಣ ಮಾಡಿಕೊಳ್ಳಲಾಗಿದೆ.

೧. ವೀರಶೈವ ಹಸ್ತಪ್ರತಿ ಭಂಡಾರಗಳು.

೨. ವೀರಶೈವ ಭಿತ್ತಿಚಿತ್ರಗಳು.

೩. ಸಂದರ್ಶನ.

೪. ಸಂಭಾಷಣೆ.

೫. ಛಾಯಾ ಚಿತ್ರಣ.

**೧. ವೀರಶೈವ ಹಸ್ತಪ್ರತಿ ಭಂಡಾರಗಳು :**

ಕರ್ನಾಟಕದಾದ್ಯಂತ ಇರುವ ಹಲವಾರು ವಿಶ್ವವಿದ್ಯಾಲಯಗಳು, ಮಠ-ಮಂದಿರಗಳು ಮತ್ತು ವೈಯಕ್ತಿಕ ಸಂಗ್ರಹಾಲಯಗಳಲ್ಲಿ ಇರುವ ತಾಳೆಗರಿ, ಕಾಗದ ಪ್ರತಿ, ಕಲ್ಲಚ್ಚಿನ ಪ್ರತಿಗಳಲ್ಲಿ ಹುಡುಕುವುದಕ್ಕಾಗಿ ಆಯಾ ಸಂಘ, ಸಂಸ್ಥೆಗಳು ಪ್ರಕಟಿಸಿರುವ ವರ್ಣನಾತ್ಮಕ ಸೂಚಿಗಳನ್ನು ಅಧ್ಯಯನ ಮಾಡಿರುವುದು ಮತ್ತು ಮೂಲ ಕಲಾಕೃತಿಗಳನ್ನು ಅವಲೋಕಿಸಿರುವುದು ಹಾಗೂ ವೀರಶೈವ ಹಸ್ತಪ್ರತಿಗಳ ಚಿತ್ರಗಳನ್ನು ಸಂಗ್ರಹಿಸಲಾಗಿದೆ.

**೨. ವೀರಶೈವ ಭಿತ್ತಿಚಿತ್ರಗಳು :**

ಕರ್ನಾಟಕದಾದ್ಯಂತ ಇರುವ ವೀರಶೈವ ಭಿತ್ತಿ ಚಿತ್ರಗಳನ್ನು ಆಧರಿಸಿ ಗುಹೆ, ದೇವಾಲಯ, ಮಠ, ಅರಮನೆ, ವಾಡೆಗಳಲ್ಲಿರುವ ಭಿತ್ತಿಚಿತ್ರಗಳನ್ನು ಅಧ್ಯಯನ ಮಾಡಲಾಗಿದ್ದು, ಮೂಲ ಆಕರ ಸಾಮಗ್ರಿಯಾಗಿ ಮೂಲ ಭಿತ್ತಿ ಚಿತ್ರಗಳನ್ನೇ ಬಳಸಿಕೊಳ್ಳಲಾಗಿದೆ. ಅದಕ್ಕಾಗಿ ಕ್ಷೇತ್ರಕಾರ್ಯ ಮಾಡಿದ್ದು, ಭಿತ್ತಿ ಚಿತ್ರಗಳ ಮೂಲ ಸ್ಥಳದಲ್ಲಿಯೇ ಹೋಗಿ ಎದುರಿಗೆ ಕುಳಿತು ಅದಕ್ಕೆ ಸಂಬಂಧಿಸಿದ ಮಾಹಿತಿ ಬರೆದುಕೊಳ್ಳಲಾಗಿದೆ. ಮೂಲ ಚಿತ್ರಗಳು ಲಭ್ಯವಿಲ್ಲದಿದ್ದಲ್ಲಿ ಅವುಗಳನ್ನು ಪ್ರತಿಮಾಡಿದ ಛಾಯಾಚಿತ್ರಗಳನ್ನು ಮಾಡಿಸಿ ಸಂಗ್ರಹಿಸಲಾಗಿದೆ.

೩. ಸಂದರ್ಶನ :

ಪ್ರಸಕ್ತ ಅಧ್ಯಯನಕ್ಕೆ ಸಂಬಂಧಿಸಿದಂತೆ ವಿಷಯಕ್ಕನುಗುಣವಾಗಿ ಪ್ರಕಟಿತ ಪುಸ್ತಕಗಳ ಬದಲಾಗಿ ಮೌಖಿಕ ಸಾಹಿತ್ಯಗಳೇ ಹೆಚ್ಚಿಗೆ ದೊರೆಯುತ್ತವೆ. ಅಲ್ಲದೇ ಭಿತ್ತಿಚಿತ್ರ ಮತ್ತು ಹಸ್ತಪ್ರತಿಗಳಲ್ಲಿದ್ದ ವೀರಶೈವ ಚಿತ್ರಕಲೆ ಇರುವ ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಮಠ, ಮಂದಿರ, ವಾಡೆ, ಅರಮನೆ, ದೇವಾಲಯಗಳಲ್ಲಿಯ ಪೂಜಾರಿಗಳೊಂದಿಗೆ ಹಾಗೂ ಮಠದ ಸ್ವಾಮಿಗಳೊಂದಿಗೆ, ಮನೆಯ ವಾರಸುದಾರರೊಂದಿಗೆ, ವೀರಶೈವ ಧರ್ಮಕ್ಕೆ ಸಂಬಂಧಿಸಿದಂತೆ ಮತ್ತು ಚಿತ್ರಕಲೆಯ ಕುರಿತು ಮಾಹಿತಿ ಸಂಗ್ರಹಿಸಿದ್ದು, ಹಾಗೆಯೇ ವೀರಶೈವ ಸಾಹಿತ್ಯ, ಹಸ್ತಪ್ರತಿ, ಚಿತ್ರಗಳು, ಭಿತ್ತಿಚಿತ್ರಗಳನ್ನು ಅರಿತ ವಿದ್ವಾಂಸರನ್ನು, ತಜ್ಞರನ್ನು ಸಂದರ್ಶಿಸಿ ವಿಷಯವನ್ನು ದಾಖಲಿಸಿಕೊಳ್ಳಲಾಗಿದೆ.

೪. ಸಂಭಾಷಣೆ :

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಚಿತ್ರಕಲಾವಿದರನ್ನು ಸಂದರ್ಶಿಸಿದಾಗ ಕೆಲವು ಕಲಾವಿದರು ಸಾಹಿತ್ಯವಲಯದ ಪರಿಚಯ ಆಗಿರುವುದಕ್ಕಿಂತ ಹೆಚ್ಚಾಗಿ ಕಲಾತ್ಮಕ ಭಾವನೆಗಳನ್ನು ವ್ಯಕ್ತಗೊಳಿಸುತ್ತಿರುತ್ತಾರೆ. ಅಂಥಹ ವಿವರಗಳನ್ನು ಭಿತ್ತಿಚಿತ್ರ, ಉದ್ಧರಣಿ ಚಿತ್ರ ಮತ್ತು ಹಸ್ತಪ್ರತಿಯಲ್ಲಿಯ ವೀರಶೈವ ಪರಂಪರೆಯ ಚಿತ್ರಗಳ ಕುರಿತು ಅವರು ಹೇಳುವ ಅಭಿಪ್ರಾಯಗಳನ್ನು ಧ್ವನಿಮುದ್ರಣ (ಟೇಪ್ ರಿಕಾರ್ಡರ್)ದ ಮೂಲಕ ಸಂಗ್ರಹಿಸಿಕೊಂಡು ವಿಷಯವನ್ನು ದಾಖಲಿಸಿಕೊಳ್ಳಲಾಗಿದೆ.

೫. ಛಾಯಾಚಿತ್ರಣ :

ಕರ್ನಾಟಕದಾದ್ಯಂತ ಚದುರಿಕೊಂಡಿರುವ ವೀರಶೈವ ಪರಂಪರೆಯ ಭಿತ್ತಿಚಿತ್ರಗಳು, ಉದ್ಧರಣಿ ಚಿತ್ರಗಳು, ಹಸ್ತಪ್ರತಿ ಚಿತ್ರಗಳು, ಮಠ, ಮಂದಿರ, ವಾಡೆ, ಅರಮನೆ, ದೇವಾಲಯಗಳು, ರಾಜ್ಯದ ವಿಶ್ವವಿದ್ಯಾಲಯಗಳ ಹಸ್ತಪ್ರತಿ ಭಂಡಾರಗಳಲ್ಲಿ ಹಾಗೂ ವೈಯಕ್ತಿಕ ಸಂಗ್ರಹಾಲಯಗಳಲ್ಲಿರುವ ಕಲಾಕೃತಿಗಳನ್ನು ಸೂಕ್ತವಾದ ಬೆಳಕಿನಲ್ಲಿಟ್ಟು ಛಾಯಾಚಿತ್ರಣ ಮಾಡಿಕೊಳ್ಳಲಾಗಿದೆ.

ಆ.೨. ಆನುಷಂಗಿಕ ಆಕರ ಸಾಮಗ್ರಿ :

ಪ್ರಸ್ತುತ ಪ್ರಬಂಧ ರಚಿಸುವಲ್ಲಿ ಇದು ಎರಡನೆಯ ವಿಧಾನವಾಗಿದೆ. ಇದರಲ್ಲಿ ಪ್ರಕಟಿತ, ಅಪ್ರಕಟಿತ ಸಾಹಿತ್ಯ ಕೃತಿಗಳು, ಸಂಪುಟಗಳು, ಅಭಿನಂದನಾ ಗ್ರಂಥಗಳು, ವಿಶ್ವಕೋಶಗಳು, ಅನುವಾದ ಗ್ರಂಥಗಳು, ಸಂಶೋಧನಾ ಪ್ರಬಂಧಗಳು, ದೇಶಿ, ವಿದೇಶಿ ಪ್ರವಾಸಿಗರ ಬರಹಗಳು, ಸಂಶೋಧನಾ ಲೇಖನಗಳು, ಗೆಝೇಟಿಯರ್‌ಗಳು ವೀರಶೈವ ಧರ್ಮದ ಕುರಿತು ಆಗಮಗಳು, ಉಪನಿಷತ್ತುಗಳು, ಪುರಾಣಗಳಿಂದ ವಿಷಯವನ್ನು ಸಂಗ್ರಹಿಸಿ ಕರ್ನಾಟಕದ ವೀರಶೈವ ಪರಂಪರೆಯ ಚಿತ್ರಕಲೆಯ ಅಧ್ಯಯನಕ್ಕೆ ಈ ಸಾಮಗ್ರಿಗಳನ್ನು ಬಳಸಿಕೊಳ್ಳಲಾಗಿದೆ. ಹಾಗೆಯೇ ಬೇರೆ ಬೇರೆ ಸ್ಥಳಗಳಲ್ಲಿನ ಗ್ರಂಥಾಲಯಗಳಿಗೆ ಬೇಟಿ ನೀಡಿ ಅಧ್ಯಯನ ಮಾಡಲಾಗಿದೆ.

ಹೀಗೆ ಆನುಷಂಗಿಕ ಆಕರ ಮಾಹಿತಿಗಳನ್ನು ಸಂಗ್ರಹಿಸಿಕೊಂಡು ಪ್ರಸ್ತುತ ಈ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ಅಧ್ಯಾಯ : ಎರಡು

# ಕರ್ನಾಟಕದ ವೀರಶೈವ ಧರ್ಮ, ಸಂಸ್ಕೃತಿ, ಮತ್ತು ಚಿತ್ರಕಲೆಯ ನೆಲೆ, ಹಿನ್ನೆಲೆ



# ಕರ್ನಾಟಕದ ವೀರಶೈವ ಧರ್ಮ, ಸಂಸ್ಕೃತಿ ಮತ್ತು ಚಿತ್ರಕಲೆಯ ನೆಲೆ, ಹಿನ್ನೆಲೆ

**ಭಾರತದ ಮೂಲನಿವಾಸಿಗಳು ವ್ರಾತ್ಯರು:**

ಭಾರತದ ಮೂಲ ನಿವಾಸಿಗಳಲ್ಲಿ ಮುಖ್ಯರಾದವರು ವ್ರಾತ್ಯರು. ಅವರನ್ನು ಕುರಿತು ಆಳವಾಗಿ ಅಭ್ಯಸಿಸಿದವರು ಶ್ರೀ ರಾಧಾಕೃಷ್ಣ ಚೌಧರಿಯವರು. ಇವರು ಬರೆದ "The Vratyas in Ancient India" ಎಂಬ ಗ್ರಂಥದಲ್ಲಿ ಉಲ್ಲೇಖಿಸಿರುವಂತೆ,

"ವ್ರಾತ್ಯೋ ವಾ ಇದಮಗ್ರ ಅಸೀತ್" ಎಂದರೆ ಜಗತ್ತಿನಲ್ಲಿ ಪ್ರಪ್ರಥಮದಲ್ಲಿ ಇದ್ದವನು ವ್ರಾತ್ಯ ಎಂದು ಹೇಳಿದೆ.

> ವ್ರಿಯಂತೆ ದೇಹೇನ ಇತಿ ವ್ರತಾಃ ತೇಷಾಂ
> ಸಮೂಹಾಃ ವ್ರಾತಾಃ ಜೀವ ಸಮೂಹಾಃ
> ತೇಷಾಂ ಪತಿಃ ವ್ರಾತ್ಯಃ ಪರಮೇಶ್ವರಃ
>
> – ಅಥರ್ವಕಾಂ. ೧೫

ಎಂದರೆ "ದೇಹ ಧಾರಣ ಮಾಡಿರುವ ಜೀವರಿಗೆ ವ್ರಾತಾಃ ಎಂದು ಹೆಸರು. ಅಂಥಹ ಜೀವಸಮೂಹಕ್ಕೆ ಪತಿಯಾದ ಪರಮೇಶ್ವರನೇ ವ್ರಾತ್ಯ ಎಂದು ಅಥರ್ವಭಾಷಾ ಭಾಷ್ಯದಲ್ಲಿ ವ್ಯಾಖ್ಯಾನಿಸಿದೆ"[೧]

ಶಿವಸಹಸ್ರನಾಮ ಭಾಷ್ಯದಲ್ಲಿ "ಪಶುಪತಿ" ಶಬ್ದಕ್ಕೆ ನೀಡಿರುವ ನಿರ್ವಚನವೂ ಇದನ್ನು ಹೋಲುತ್ತದೆ. ಅಲ್ಲಿ "ಹುಟ್ಟು ಸಾವುಗಳ ಭವಚಕ್ರಕ್ಕೆ ಒಳಗಾಗಿರುವ ಜೀವರು ಪಶುಗಳು. ಅವರಿಗೆ ಪತಿಯಾದವನು ಪಶುಪತಿ" ಎಂದಿದೆ.

"ವ್ರಾತ್ಯರು ಬ್ರಾಹ್ಮಣೇತರರು. ಪ್ರಾಚೀನ ಶಿವೋಪಾಸಕರು, ಯೋಗಿಗಳ ಸಂಪ್ರದಾಯಕ್ಕೆ ಸೇರಿದವರು" ಎಂದು ಹಲವಾರು ವಿದ್ವಾಂಸರು ಅಭಿಪ್ರಾಯಪಟ್ಟಿರುವರು.

"ವ್ರಾತ್ಯರು ಜನೋಪಕಾರಿಗಳು: ಲೋಕ ಕಲ್ಯಾಣಕ್ಕಾಗಿ ಎಲ್ಲ ದಿಕ್ಕುಗಳಲ್ಲಿಯೂ ಸಂಚರಿಸುತ್ತಿದ್ದರು". ಪಾಶುಪತದಲ್ಲಿದ್ದ "ಯೋಗಿವರ್ಯರು, ಚರಜಂಗಮರು, ಸ್ವಯಂ ಪರಮೇಶ್ವರನೇ ತನ್ನ ಹಣೆಗಣ್ಣು ಮತ್ತು ವಾಮಭಾಗದಲ್ಲಿದ್ದ ಗಿರಿಜೆಯನ್ನು ದೂರವಿಟ್ಟು, ಸಾಮಾನ್ಯ ಮಾನವರಂತೆ "ಜಂಗಮ" ರೂಪ ಧರಿಸಿ ಸಂಚರಿಸುತ್ತಾನೆ" ಎಂದು ಆಗಮಗಳು ಅವನನ್ನು ವರ್ಣಿಸಿವೆ. ವ್ರಾತ್ಯರು ಕರ್ಮ ಮಾಡದವರು, ಯಾಗ ಮಾಡದವರು. ಲಿಂಗ ಪೂಜಾಸಕ್ತರು ಆಗಿದ್ದರು. ವ್ರಾತ್ಯರಿಗೆ ಪಾಶುಪತ ವ್ರತವೇ ಮುಖ್ಯ.

---

೧. ಸಂ. ಎಂ.ಜಿ.ನಂಜುಂಡಾರಾಧ್ಯ: ಶಿವಾಗಮ ಸೌರಭ: ಡಾ. ಜ.ಚ.ನಿ. ಅವರ ರನ್ನಹಬ್ಬದ ನೆನಪಿನ – ಸಂಪುಟ: ಪುಟ xxiii.

ಅಹಿಂಸಾವಾದಿಗಳಾಗಿದ್ದರು. ಲಿಂಗಯೋಗ ನಿರತರಾಗಿ, ಶಿವಸಾಮರಸ್ಯ ರೂಪವಾದ ಶಾಶ್ವತ ಮುಕ್ತಿಯನ್ನು ಬಯಸುವವರು.

ಆರ್ಯರು ಸಿಂಧೂ ಕಣಿವೆಗೆ ಕಾಲಿಡುವ ಮುನ್ನವೇ ಅಲ್ಲಿ ನೆಲೆಸಿದ್ದ "ಆದಿನಿವಾಸಿಗಳು ಸುಸಂಸ್ಕೃತರಾಗಿದ್ದರು. ಅವರ ಮತಾಚರಣೆಗಳು, ತತ್ವಜ್ಞಾನ ಶಿಲ್ಪ, ವಾಸ್ತುಶಿಲ್ಪ, ಚಿತ್ರಕಲೆ, ನಾಟ್ಯ, ಸಂಗೀತ ಮತ್ತು ಸಾಹಿತ್ಯಗಳು ಅವರಲ್ಲಿ ಸಾಕಷ್ಟು ಬೆಳೆದಿದ್ದವು ಎಂಬುದು ಅಂದಿನ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತಿರುವ ಆಗಮಗಳಲ್ಲಿ ಅಭಿವ್ಯಕ್ತವಾಗಿವೆ. ಮೇಲಾಗಿ ವ್ರಾತ್ಯರಲ್ಲಿ ಜಾತಿಪದ್ಧತಿ ಇರಲಿಲ್ಲ. ಅವರು ಸಮಾಜದಲ್ಲಿ ಹಿಂದುಳಿದಿದ್ದ ಆದಿಜನಾಂಗಗಳನ್ನು ಸಂಸ್ಕರಿಸಿ, ತಮ್ಮಲ್ಲಿ ಸೇರಿಸಿಕೊಂಡು ಒಂದು ಸಾಂಸ್ಕೃತಿಕ ಗಣರಾಜ್ಯವನ್ನೇ ಸ್ಥಾಪಿಸಿದ್ದರು.[೨] ಇದರಿಂದ ಶೈವಮತವು ಒಂದು ಜನಪ್ರಿಯ ಮತವಾಯಿತು" ಎಂಬ ಮಾತುಗಳು ಸಿಂಧೂ ನಿವಾಸಿಗಳ ಸಾಂಸ್ಕೃತಿಕ ಪ್ರಗತಿಗೆ ನಿದರ್ಶನವಾಗಿವೆ.

ಸಿಂಧೂ ಕಣಿವೆಯ ನಾಗರಿಕತೆಯಲ್ಲಿ ಶಿವನ ಉಲ್ಲೇಖವಿದೆ. ಜಗತ್ತಿನ ಸೃಷ್ಟಿ-ಸ್ಥಿತಿ-ಲಯಗಳ ಕರ್ತೃ ಶಿವ. ಅಲ್ಲಿ ಶಿವನನ್ನು ಅಲೆಮಾರಿ (ಜಂಗಮ) ವ್ರಾತ್ಯ ದೇವತೆ ಎಂದು ಕರೆಯಲಾಗಿದೆ. ಶಿವನು ನಿಷಾದರಿಗೆ ಸೇರಿದವನು. ಅವನು ರುದ್ರನ ಸ್ವರೂಪದಲ್ಲಿ (ಆರ್ಯರ) ವೇದಗಳಲ್ಲಿ ಕಾಣಿಸಿಕೊಂಡಿದ್ದಾನೆ. "ಮೊದಮೊದಲು ಶಿವನಿಗೆ ವೈದಿಕಯಾಗದಲ್ಲಿ ಯಾವ ಸ್ಥಾನವೂ ಇರಲಿಲ್ಲ. ವೈದಿಕ ದೇವತೆಗಳಲ್ಲಿ ಶಿವನಿಗೆ ಅಧ್ಯಕ್ಷಪದವಿ ದೊರೆತಿದ್ದು ದಕ್ಷಯಾಗದ ತರುವಾಯ. ವ್ರಾತ್ಯರ ದೇವತೆಯಾದ ಶಿವನು ವೈದಿಕ ದೇವತೆಗಳ ಗುಂಪಿಗೆ ಸೇರಬೇಕಾದರೆ ಉಗ್ರಹೋರಾಟದ ಅಗತ್ಯವಿತ್ತು.[೩] ಅನಂತರ ವ್ರಾತ್ಯರಿಗೆ ಸಂದ ಗೌರವ ಅಪಾರ. ಮಗಧವು ವ್ರಾತ್ಯ ಸಂಸ್ಕೃತಿಯ ತೊಟ್ಟಿಲು, ಅಥರ್ವವೇದವು ವ್ರಾತ್ಯವೇದವೆಂದೇ ಹೆಸರಾಗಿದೆ."

ಶಿವಶಕ್ತಿ ಉಪಾಸನೆ ಸಾಂಖ್ಯರ ಪ್ರಕೃತಿ ಮತ್ತು ಪುರುಷ ತತ್ವದ ತಿರುಳು. ತಂತ್ರಗಳು ಇದನ್ನು ಬೆಳೆಸಿದವು. ಶಿವಶಕ್ತಿ ಉಪಾಸನೆಯು ಬಂದಿದ್ದು ವ್ರಾತ್ಯರಿಂದ.

**ಭಾರತೀಯ ಸಂಸ್ಕೃತಿಯ ನವೋದಯ:**

ವ್ರಾತ್ಯರು ತಮ್ಮದೇ ಆದ ಪ್ರತ್ಯೇಕ ಭಾಷೆ ಮತ್ತು ಪದ್ಧತಿಗಳನ್ನು ಹೊಂದಿದ್ದರು. ಕಾತ್ಯಾಯನನು - "ವ್ರಾತ್ಯರು ನಾಟ್ಯ, ಹಾಡುಗಾರಿಕೆ, ಸಂಗೀತಾದಿ ಲಲಿತಕಲೆಗಳಲ್ಲಿ ನುರಿತಿದ್ದರು. ತಾವು ಕಲಿತಿದ್ದನ್ನು ಇತರರಿಗೆ ಬೋಧಿಸುವ ಸಾಮರ್ಥ್ಯ ಅವರಿಗಿತ್ತು"[೪] ಎನ್ನುತ್ತಾನೆ.

---

೨. Dr. Radhakrishna Choudharya: The Vratyas in Ancient India Varanasi: Page 56, 61.
೩. Radhakrishna Choudhary: The Vratyas in Ancient India Varanasi: Page 51..
೪. ಸಂ. ಎಂ.ಜಿ.ನಂಜುಂಡಾರಾಧ್ಯ: ಶಿವಾಗಮ ಸೌರಭ: ಪುಟ xxix.

### ಭಾರತೀಯ ಸಂಸ್ಕೃತಿ ದರ್ಶನ

ಕ್ರಿ.ಶ. ೧೯೨೬ ರಿಂದ ೧೯೪೦ರ ವರೆಗೆ ಸಿಂಧೂ ನದಿಯ ಕಣಿವೆಯಲ್ಲಿ ಹರಪ್ಪಾ ಮೊಹೆಂಜೋದಾರೋ ಪ್ರದೇಶದಲ್ಲಿ ನಡೆಸಿದ ಭೂ ಸಂಶೋಧನೆಯಲ್ಲಿ ದೊರೆತಿರುವ ಅವಶೇಷಗಳ ಆಧಾರದ ಮೇಲೆ ವಿದ್ವಾಂಸರ ಅಭಿಪ್ರಾಯಗಳು.

ವೇದ ಪೂರ್ವವೆಂದಿರುವ ಆರ್ಯರು ಭಾರತವನ್ನು ಪ್ರವೇಶ ಮಾಡುವ ಮುನ್ನ ದ್ರಾವಿಡರು ಭಾರತದ ಮೂಲ ನಿವಾಸಿಗಳು, ಅಲ್ಲಿ ನೆಲೆಸಿದ್ದರೆಂದೂ ಅನಂತರ ಕ್ರಿ.ಪೂ ಸುಮಾರು ೧೫೦೦ ರಲ್ಲಿ ಆರ್ಯರು ಭಾರತವನ್ನು ಪ್ರವೇಶಿಸಿ, ಭಾರತದ ಮೂಲ ನಿವಾಸಿಗಳಾದ ದ್ರಾವಿಡರನ್ನು ಭಾರತದ ದಕ್ಷಿಣಕ್ಕೆ ಅಟ್ಟಿದರೆಂದೂ, ಅಲ್ಲಿದ್ದ ಸಂಸ್ಕೃತಿ ವೈದಿಕವಾಗಿದ್ದು ಆರ್ಯರ ಸಂಸ್ಕೃತಿಗಿಂತ ಬೇರೆ ಆಗಿತ್ತೆಂದೂ ಅಭಿಪ್ರಾಯಪಟ್ಟಿರುವರು. ಆದರೆ ಈ ಸಿದ್ಧಾಂತವನ್ನು ವಿರೋಧಿಸಿದವರಲ್ಲಿ ಖ್ಯಾತ ಸಂಶೋಧಕ ಡಾ. ಎಸ್.ಶ್ರೀಕಂಠಶಾಸ್ತ್ರಿಗಳೂ ಒಬ್ಬರು. ಅವರು ಕರ್ನಾಟಕ ಸರಕಾರವು ೧೯೬೨ ರಲ್ಲಿ ಪ್ರಕಟಿಸಿದ "ಭಾರತೀಯ ಸಂಸ್ಕೃತಿ ದರ್ಶನ" ಎಂಬ ಸಂಪುಟಕ್ಕೆ ಬರೆದ "ಹರಪ್ಪಾ ಮೊಹೆಂಜೋದಾರೋ" ಎಂಬ ಲೇಖನದಲ್ಲಿ ಸೈಂಧವ ಸಂಸ್ಕೃತಿಯ ಸ್ವರೂಪವನ್ನು ಸಂಗ್ರಹಿಸಿ ಸೈಂಧವ ಸಂಸ್ಕೃತಿ ವೇದಪೂರ್ವದ್ದಲ್ಲ. ಅದರಲ್ಲಿ ಋಗ್ವೇದ ಮತ್ತು ಅಥರ್ವಣ ವೇದದಲ್ಲಿ ಹೇಳಿರುವ ಅಂತ್ಯೇಷ್ಟಿ (ಪು. ೧೭) ಹಾಗೂ ಭೂತೋಚ್ಚಾಟನೆಗಾಗಿ ಅಥವಾ ರೋಗನಿವಾರಣೆಗಾಗಿ, ಅಥರ್ವವೇದದಲ್ಲಿ ಉಕ್ತವಾದ ಮಂತ್ರಗಳುಳ್ಳ ತಾಯತ (ಯಂತ್ರ)ಗಳನ್ನು ಧರಿಸುತ್ತಿದ್ದ ಪ್ರಸ್ತಾಪವಿದೆ (ಪು. ೧೬). ಮುದ್ರಿಕೆಗಳ ಮೇಲೆ ದಾರಪೋಣಿಸುವುದಕ್ಕಾಗಿ ರಂಧ್ರಗಳಿವೆ. ಇಲ್ಲಿಯ ಪಟ್ಟಣಗಳಲ್ಲಿ ಪ್ರತಿಯೊಂದು ಮನೆಯಲ್ಲಿಯು ಮಾತೃದೇವತಾ ಪೂಜೆಗೆ ಒಂದು ಕೋಣೆ ಸೀಮಿತವಾಗಿತ್ತು. ಮಾತೃ ದೇವತಾವಿಗ್ರಹಗಳಲ್ಲಿ ಕನ್ಯಾ, ಯೋಧ, ಮಗುವನ್ನು ಎತ್ತಿಕೊಂಡ ತಾಯಿ, ನಗ್ನ ನೃತ್ಯಗಾರ್ತಿ, ಸಪ್ತ ಮಾತೃಕಾ ದೇವತೆಗಳು ಮುಖ್ಯವಾದುವು. ಪುರುಷ ದೇವತಾ ವಿಗ್ರಹಗಳಲ್ಲಿ ಯೋಗಿ, ಪಶುಗಳಿಂದ ಸುತ್ತುವರಿದ ಶಿವ, ಪಶುಪತಿ, ಫಲಕಗಳು, ವೃಷಭ, ಲಿಂಗಗಳು, ಪಾಣಿಪಟ್ಟಗಳು ದೊರೆತಿರುವುದರಿಂದ ಅವೈದಿಕ ಶೈವ ಮತವೇ ಪ್ರಧಾನವಾಗಿದ್ದುದು ತಿಳಿದು ಬರುತ್ತದೆ. ಸಾಲಿಗ್ರಾಮಗಳು, ಶಂಖ ಮತ್ತು ತುಳಸಿ, ಬೃಂದಾವನ, ಗರುಡ, ಅಶ್ವಥಗಳಿರುವುದರಿಂದ ವೈಷ್ಣವ ಮತ್ತು ಮಾತೃದೇವತಾ ವಿಗ್ರಹಗಳಿರುವುದರಿಂದ ಶಾಕ್ತ ತಾಂತ್ರಿಕ ಮತವೂ ಇದ್ದಿತೆಂದು ಹೇಳಬೇಕಾಗುತ್ತದೆ.[೫] "ಸೈಂಧವ ಸಂಸ್ಕೃತಿಯು ಋಗ್ವೇದ ಮತ್ತು ಅಥರ್ವಣ ವೇದಗಳಲ್ಲಿ ಉಕ್ತವಾದ ಕೆಲವು ವಿಚಾರಗಳನ್ನು ಒಳಗೊಂಡಿರುವುದರಿಂದ ಅದನ್ನು ವೇದಪೂರ್ವದ್ದೆಂದು ಹೇಳಲಾಗುವುದಿಲ್ಲ." ಎಂದು ಅಭಿಪ್ರಾಯಪಟ್ಟಿದ್ದಾರೆ.

### ಸೈಂಧವ ಸಂಸ್ಕೃತಿಯಲ್ಲಿ ಲಿಂಗಧಾರಣ

ಸೈಂಧವ ಸಂಸ್ಕೃತಿಯಲ್ಲಿ ದೊರತಿರುವ ಹಲವು ಬಗೆಯ ಶಿವಲಿಂಗಗಳ ಕುರಿತು ವಿದ್ವಾಂಸರು ಹೀಗೆ ಅಭಿಪ್ರಾಯ ಪಟ್ಟಿರುವರು. ಸಣ್ಣಲಿಂಗಗಳನ್ನು ಇಂದಿನ ವೀರಶೈವರಂತೆ ದೇಹದ ಮೇಲೆ ಧರಿಸುತ್ತಿರಬೇಕೆಂದು,

೫. ಡಾ. ಎಸ್.ಶ್ರೀಕಂಠಶಾಸ್ತ್ರಿಗಳು: ಭಾರತೀಯ ಸಂಸ್ಕೃತಿ ದರ್ಶನ: ಲೇಖನ: ಹರಪ್ಪಾ ಮೋಹೆಂಜೋದಾರೋ": ಪುಟ ೧೬, ೧೭.

ದೊಡ್ಡದಾದ ಲಿಂಗಗಳನ್ನು ಮನೆಯ ಪೀಠದ ಮೇಲಿಟ್ಟು ಪೂಜೆಗಾಗಿ ಉಪಯೋಗಿಸುತ್ತಿದ್ದರೆಂದು ಸರ್. ಜಾನ್ ಮಾರ್ಷಲ್ ಅವರು ಅಭಿಪ್ರಾಯಪಟ್ಟಿರುವರು.

ಇದೇ ವಿಷಯವನ್ನು ಕುರಿತು ಡಾ. ಶಂಭಾ ಜೋಷಿಯವರು ತಮ್ಮ "ಶಿವರಹಸ್ಯ" ಎಂಬ ಸಣ್ಣ ಹೊತ್ತಿಗೆಯಲ್ಲಿ ಪುಟ ೨೪, ೨೫ ರಲ್ಲಿ ಪ್ರಸ್ತಾಪಿಸಿದ್ದಾರೆ.

ಯುರೋಪಿನಲ್ಲಿ "ಮೆಡಿಟರೇನಿಯನ್ ತೀರದ ಜನರು ಇಷ್ಟಪ್ರಾಪ್ತಿ ಮತ್ತು ಅನಿಷ್ಟ ನಿವಾರಣೆಗಾಗಿ ಲಿಂಗವನ್ನು ಕೊರಳಲ್ಲಿ ಕಟ್ಟಿಕೊಳ್ಳುತ್ತಿದ್ದರೆಂದೂ ಯುರೋಪಿನ ಆರ್ಯರು ಇದನ್ನು ಭಾರತದ ಮೂಲ ನಿವಾಸಿಗಳಿಂದ ಕಲಿತಿರಬೇಕು" ಎಂಬುದು ಪ್ರಿಲಸ್ಕಿ ಅವರ ಮತವಾಗಿದೆ.[೬] ಒಟ್ಟಿನಲ್ಲಿ ಮೊಹೆಂಜೋದಾರೋ-ಹರಪ್ಪಾ ನಿವಾಸಿಗಳು ಲಿಂಗವನ್ನು ಧರಿಸುತ್ತಿದ್ದಂತೆ, ಮೆಡಿಟರೇನಿಯನ್ ತೀರದಲ್ಲೂ ಲಿಂಗವನ್ನು ಕೊರಳಲ್ಲಿ ಕಟ್ಟಿಕೊಳ್ಳುತ್ತಿದ್ದರು. ಇದರಿಂದಾಗಿ ಸೈಂಧವ ಸಮಾಜದಲ್ಲಿ ಲಿಂಗಧಾರಣವಿದ್ದುದು ಸ್ಪಷ್ಟವಾಗುತ್ತದೆ."

ಹರಪ್ಪಾ ಮೊಹೆಂಜೋದಾರೋದ ಕಣಿವೆಯಲ್ಲಿ ದೊರೆತಿರುವ ಹಲವು ಬಗೆಯ ಶಿವಲಿಂಗಗಳ ಚಿತ್ರಗಳನ್ನು "ಶಿವಾಂಕ" ಪುಟ ೪೫೨ ರಲ್ಲಿ ಪ್ರಕಟಿಸಲಾಗಿದೆ. ಶಿವಲಿಂಗಗಳು, ಶಿವ, ಪಶುಪತಿ, ಮುಂತಾದ ಮೂರ್ತಿಗಳನ್ನು ಸಿದ್ಧಪಡಿಸಬೇಕಾದರೆ, ಶಿಲ್ಪ ಶಾಸ್ತ್ರವು ಇದ್ದಿರಬೇಕು, ಅಷ್ಟೇ ಅಲ್ಲದೆ ಅಂಥ ಮೂರ್ತಿಗಳಿಗೆ ಪ್ರಾಣ ಪ್ರತಿಷ್ಠಾದಿಗಳನ್ನು ಮಾಡಿ, ಅವುಗಳನ್ನು ಪೂಜಾಯೋಗ್ಯಗಳನ್ನಾಗಿ ಮಾಡುವ, ಆಗಮ ಶಾಸ್ತ್ರಗಳನ್ನು ಮತ್ತು ಅವನ್ನು ಬೋಧಿಸುವ ಆಗಮಿಕಾಚಾರ್ಯರ ಅಸ್ತಿತ್ವವನ್ನು ಹಾಗೂ ಈ ಚಿತ್ರ ಶಿಲ್ಪಗಳನ್ನು ರಚಿಸಿದ ಕಲಾವಿದನ ಜಾಣ್ಮೆ ಮೆಚ್ಚುವಂಥಹದು.

ಎರಡನೆಯದಾಗಿ ಈ ಸೈಂಧವ ನಾಗರಿಕರ ಮನೆಗಳಲ್ಲಿ ಪೀಠಗಳ ಮೇಲಿಟ್ಟು ಪೂಜಿಸುವ ಸ್ಥಾವರ ಲಿಂಗಗಳೂ, ಶರೀರದ ಮೇಲೆ ಧಾರಣ ಮಾಡಿಕೊಳ್ಳುವ ಇಷ್ಟಲಿಂಗಗಳೂ ಇದ್ದುದರಿಂದ ಆಗಲೇ ಶೈವ ಮತ್ತು ವೀರಶೈವ ಆಗಮಗಳು ಬಳಕೆಯಲ್ಲಿದ್ದವು ಎಂಬುದು ಸ್ಪಷ್ಟವಾಗುತ್ತದೆ.

ಮೂರನೆಯದು "ಈ ಸೈಂಧವ ಸಂಸ್ಕೃತಿ ವಿಶಾಲವಾದ ಅಂದಿನ ನಗರಗಳಲ್ಲಿ ಸಾರ್ವಜನಿಕವಾದ ದೇವಾಲಯಗಳು ಇರುವ ಕುರಿತು ಒಂದಾದರೂ ಸುಳಿವು ದೊರೆತಿಲ್ಲದಿರುವುದರಿಂದ, ಅಂದಿನ ಜನರ ದೇವತಾರಾಧನೆಯ ಪದ್ಧತಿಯು ಕೇವಲ ವೈಯಕ್ತಿಕವಾಗಿಯೂ, ಮನೆಗಳಿಗೆ ಮಾತ್ರ ಸೀಮಿತವಾಗಿತ್ತೆಂಬುದು ತಿಳಿದು ಬರುತ್ತದೆ.[೭] ಮೇಲಾಗಿ ಇಂದು ಭಾರತದಾದ್ಯಂತ ವ್ಯಾಪಿಸಿರುವ ಸ್ವಯಂಭುಲಿಂಗ: ಮತ್ತು ಜ್ಯೋತಿರ್ಲಿಂಗ: ಮುಂತಾದ ಸಾರ್ವಜನಿಕ ದೇವಾಲಯಗಳ ರಚನೆಯು ಆನಂತರದ ಕಾಲಗಳಲ್ಲಿ ಆರಂಭವಾಗಿ ತತ್ಸಂಬಂಧವಾದ ಆಗಮಶಾಸ್ತ್ರಗಳು ಸಿದ್ಧವಾಗಿರಬೇಕೆಂದು ಊಹಿಸಿದರೆ ತಪ್ಪಾಗದು.

---

೬. ಟಿ.ಎನ್.ಮಲ್ಲಪ್ಪ: ವೀರಶೈವದ ಉಗಮ ಮತ್ತು ಪ್ರಗತಿ: ಪುಟ ೬೧, ೬೨ ಗುಬ್ಬಿ ತೋಟದಪ್ಪನವರ ಧರ್ಮಸಂಸ್ಥೆ, ಬೆಂಗಳೂರು.

೭. ಸಂ. ಎಂ.ಜಿ.ನಂಜುಂಡಾರಾಧ್ಯ: ಶಿವಾಗಮ ಸೌರಭ: ಡಾ. ಜ.ಚ.ನಿ. ಅವರ ರನ್ನ ಹಬ್ಬದ ನೆನಪಿನ ಸಂಪುಟ: ಪುಟ ೧೨.

"ಪಶುಪತಿಮತ ಅನಾದಿವೀರಶೈವವೆಂದು ಆಗಮಗಳು ನಿರೂಪಿಸಿವೆ. ಪಶುಪತಿಮತ ನಿರ್ಮಾಪಕ ರುದ್ರನೆಂದು ಹಿಂದೆ ಹೇಳಲಾಗಿದೆ. ಅದರ ಅನುಯಾಯಿಗಳು ರುದ್ರಗಣರು ಮತ್ತು ಮರುದ್ಗಣರು. ರುದ್ರಪಶುಪತಿಯು ಸಿಂಧೂ ತೀರದ ಸಂಸ್ಕೃತಿಯನ್ನು, ನಾಗರಿಕತೆಯನ್ನು ರೂಪಿಸಿದ ಅಗ್ರಮಾನ್ಯ ಪುರುಷನು. ರುದ್ರಸಂಸ್ಕೃತಿಯೇ ಸಿಂಧೂತೀರದ ಸಂಸ್ಕೃತಿ.[೮] ಹರಪ್ಪಾ ಮೊಹೆಂಜೋದಾರೋ ಜನಾಂಗ ವಿಶೇಷವಾಗಿ ರುದ್ರಪಶುಪತಿಯ ಆರಾಧಕರಾಗಿದ್ದರು. ರುದ್ರಪಶುಪತಿಯ ಹಲವು ಭಂಗಿಯ ಭಾವಚಿತ್ರಗಳು ಹರಪ್ಪ ಮೊಹೆಂಜೋದಾರೋಗಳ ಉತ್ಖನನದಲ್ಲಿ ದೊರೆತಿವೆ".

ಆದ್ದರಿಂದ ಹೇದೇವಿ, ಒಂದೇ ಜನ್ಮದಲ್ಲಿ ಮುಕ್ತಿಯನ್ನು ಕೊಡುವ ವೀರಶೈವವು ಎಲ್ಲಕ್ಕಿಂತಲೂ ಶ್ರೇಷ್ಠವಾದದ್ದು. ಲಿಂಗಧಾರಣಮಂತ್ರದಿಂದ ಇಲ್ಲಿ ಶಿವತ್ವವು ಲಭ್ಯವಾಗುತ್ತಿದೆ. ಶಂಕರನಿಗಿಂತ ಅಧಿಕ ದೈವವಿಲ್ಲ, ಕೈಲಾಸಕ್ಕಿಂತ ಮಿಗಿಲಾದ ಲೋಕವಿಲ್ಲ. ಮುಕ್ತಿಗಿಂತ ಅಧಿಕವಾದ ಪದವಿಯಿಲ್ಲವೆಂದು ನಿರ್ಧರಿಸಿ, ಆಗಮೋಕ್ತವಿಧಾನದಿಂದ ಪಂಚಸಿಂಹಾಸನಾರೂಢರಾದ ಆಚಾರ್ಯರಿಂದ ಶಿವದೀಕ್ಷೆ ಪಡೆದು ಧನ್ಯರಾಗಬೇಕೆಂದು ಶಿವನು ಶಿವೆಗೆ ಹೇಳಿರುವನು.

ಹೀಗೆ ಪಂಚಾಚಾರ್ಯರು, ಇವರ ಪ್ರತಿನಾಮಗಳು ಯುಗಭೇದದಿಂದ ಬೇರೆ ಬೇರೆ ನಾಮಗಳಿಂದ ಬೆಳೆದುಬಂದಿದ್ದು ಹಿಂದೆ ಹೇಳಿದ ವೇದೋಕ್ತವಾದ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ ಮತ್ತು ಈಶಾನಮುಖಗಳಿಂದ ಉದ್ಭವಿಸಿದರು.[೯] ಇವರು ವೀರಶೈವ ಮತೋದ್ಧಾರಕ್ಕಾಗಿ ಅವತರಿಸಿದವರು, ಅವರ ಮೂಲಕ ಈ ಧರ್ಮ ಪ್ರಚಾರವಾಯಿತು.

"ಯದಾ ಯದಾ ಹಿ ಧರ್ಮಸ್ಯ ಹಾನಿಃ ಶೈವಸ್ಯ ಜಾಯತೇ।
ತದಾ ತದಾವತಾರೋಽಯಂ ಗಣೇಶಾನಾಂ ಮಹೀತಲೇ॥"

ಶೈವಧರ್ಮ ಪ್ರಸಾರಕ್ಕೆ ಯಾವಾಗ ಹಾನಿ ಸಂಭವಿಸುವುದೋ ಆಯಾ ಕಾಲಗಳಲ್ಲಿ ಈ ಭೂಮಿಯಲ್ಲಿ ಪ್ರಮಥಗಣರು ಅವತರಿಸುವರು ಎಂದು ಶಂಕರ ಸಂಹಿತೆ, ಧರ್ಮೋದ್ಧಾರಕ್ಕಾಗಿ ಪ್ರಮಥರು ಆಗಾಗ್ಗೆ ಅವತರಿಸುವರೆಂದು ತಿಳಿಸಿದೆ, ಹಾಗೆ ಅವತರಿಸಿದ ಮಹಾಪುರುಷರೇ ರೇಣುಕಾಚಾರ್ಯರೆಂದೂ ಬಸವಾದಿ ಪ್ರಮಥರೆಂದೂ ತಿಳಿದು ಬರುತ್ತದೆ.[೧೦]

**ವೀರಶೈವದ ಉಗಮ: ಶಿವಾಗಮಗಳು**

ಹಿಂದೂ ಧರ್ಮದ ಹಿರಿಮೆಯಲ್ಲಿ ಮುಂದೆ ಬಂದಿರುವ "ವೀರಶೈವ ಮತವು ವೈದಿಕ ವಾಙ್ಮಯದಲ್ಲಿ ವೈದಿಕೋತ್ತಮವಾಗಿದ್ದು, ಜಾತ್ಯತೀತ ವರ್ತನೆಯಿಂದ ಲಿಂಗಭೇದವಿಲ್ಲದ ಅಹಿಂಸಾತ್ಮಕವಾಗಿರುವ ವೀರಶೈವವು

---

೮. ಸಂ. ಎಂ.ಜಿ.ನಂಜುಂಡಾರಾಧ್ಯ: ಶಿವಾಗಮ ಸೌರಭ: ಲೇಖನ ಡಾ. ಜ.ಚ.ನಿ : ಚಂದ್ರಜ್ಞಾನಾಗಮದಲ್ಲಿ ಲಿಂಗವಂತ ಪಾಶುಪತ ಧರ್ಮ: ಪು. ೧೩೫.
೯. ಪ್ರೊ. ಎಂ.ಜಿ.ನಂಜುಂಡಾರಾಧ್ಯ : ಶಿವಾಗಮ ಸೌರಭ: ಲೇಖನ: ಶೈವಾಗಮಗಳನ್ನು ಕುರಿತು: ಪು ೨೩-೨೬.
೧೦. ಶ್ರೀ ಕಾಶಿಜಗದ್ಗುರುಗಳು ಡಾ. ಚಂದ್ರಶೇಖರ ಶಿವಾಚಾರ್ಯರ ಸ್ವಾಮಿಗಳು: ವೀರಶೈವ ಪಂಚಪೀಠ ಪರಂಪರೆ: ಮುನ್ನುಡಿ ii.

ಮಾನವರಿಗೆಲ್ಲ ಆವಾಸವೆನಿಸಿ ಸಮುದ್ರದಂತೆ ಗಂಭೀರವಾಗಿದೆ. ಆದ ಕಾರಣವಿದು ವಿಶ್ವಧರ್ಮವೇ ಆಗಿದೆ. ವೇದಗಳೂ ಆಗಮಗಳೂ ಸರ್ವಲೋಕೋಪಕಾರಕಗಳಾಗಿವೆ. ವೀರಶೈವರಿಗೆ ವೇದವು ಮುಖ್ಯವಾಗಿದ್ದು ಅದರ ಅರ್ಥದಂತೆ ಸ್ಪಷ್ಟ ವಿವರಣೆಯುಳ್ಳ ಶಿವಾಗಮಗಳು ಮುಖ್ಯವಾಗಿವೆ.

"ಅರೇ ಅಸ್ಯ ಮಹತೋ ಭೂತಸ್ಯ ನಿಶ್ವಸಿತಮೇತ–
–ದೃಗ್ವೇದೋ ಯಜುರ್ವೇದ ಸ್ಸಾಮವೇದೋಥರ್ವಣಃ"

ಈ ಉಪನಿಷದ್ವಚನದಂತೆ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದಗಳು ಪರಶಿವನ ಉಸಿರಾಗಿರುತ್ತವೆ. ಆದುದರಿಂದ ಇವು ಅಸ್ಪಷ್ಟೋಚ್ಚಾರ ಉಳ್ಳವುಗಳಾಗಿವೆ. ವೇದಗಳಲ್ಲಿ ಪ್ರತಿಪಾದಿತವಾದ ವೀರಶೈವವು ಅಸ್ಪಷ್ಟವಾಗಿದ್ದರೂ ಶಿವಾಗಮಗಳಲ್ಲಿ ಸ್ಪಷ್ಟವಾಗಿದೆ. ಈ ಬಗ್ಗೆ ಕ್ರಿ.ಶ. ೧೪೦೦ ರಲ್ಲಿದ್ದ ಶ್ರೀ ನೀಲಕಂಠ ಶಿವಾಚಾರ್ಯರು ಕ್ರಿಯಾಸಾರದಲ್ಲಿ ಹೀಗೆ ಹೇಳಿರುವರು :

"ಕಾಮಿಕಾದ್ಯಾ ವಾತುಲಾಂತಾ ಶಿವೇನೋಕ್ತಾ ಶಿವಾಗಮಾಃ॥
ಈಶಾನವಕ್ತ್ಯ ಸಂಜಾತಾಸ್ಸಾಕ್ಷಾದ್ದೇವಸ್ಯ ಶೂಲಿನಃ॥೨॥
ತಾಲ್ವೋಷ್ಠದಂತ ವ್ಯಾಪಾರ ಪುರಸ್ಸರಮಿಮೇ ಸಮೇ॥[೧೧]

(ಕ್ರಿ.ಸಾ. ಉ. ೨೯)

"ಕಾಮಿಕವೇ ಮೊದಲ್ಗೊಂಡು ವಾತುಲಾಗಮವೇ ಕಡೆಯುದಾದ ೨೮ ಶಿವಾಗಮಗಳು ಸಾಕ್ಷಾತ್‌ಈಶಾನಮುಖದಿಂದ ತಾಲು ಔಷ್ಠದಂತೆ ವ್ಯಾಪಾರ ಪುರಸ್ಕೃತವಾಗಿವೆ" ಎಂದಿರುವರು.

ಶ್ರೀ ರೇಣುಕಾಚಾರ್ಯರು ಸಿದ್ಧಾಂತ ಶಿಖಾಮಣಿಯಲ್ಲಿ ಹೀಗೆ ಹೇಳಿರುವರು :

"ಸಿದ್ಧಾಂತಾಖ್ಯೇ ಮಹಾತಂತ್ರೇ ಕಾಮಿಕಾದ್ಯೇ ಶಿವೋದಿತೇ॥
ನಿರ್ದಿಷ್ಟ ಮುತ್ತರೇ ಭಾಗೇ ವೀರಶೈವ ಮತಂ ಪರಂ"॥[೧೨]

– ಸಿ.ಶಿ.ಪ ೫ ಶ್ಲೋ. ೧೪

ಸಿದ್ದಾಂತವೆಂಬುದು ಶಿವಾಗಮದ ಪರ್ಯಾಯನಾಮವು, ಕಾಮಿಕಾಗಮವೇ ಮೊದಲಾದ ಶಿವೋಕ್ತ ಸಿದ್ಧಾಂತಾಖ್ಯವಾದ ಮಹಾತಂತ್ರದಲ್ಲಿ ಉತ್ತರ ಭಾಗದಲ್ಲಿ ಪರವಾದ ವೀರಶೈವವು ನಿರ್ದಿಷ್ಟವಾಗಿದೆ." ಎಂದು ಅಪ್ಪಣೆಗೈದಿರುವರು. ಆದ ಕಾರಣ ವೀರಶೈವದ ಉಗಮವು ಶಿವಾಗಮಗಳಿಂದಲೇ ಎಂಬುದು ಸ್ಪಷ್ಟವಾಗುತ್ತದೆ.

ಶಿವಾಗಮಗಳಿಗೆ ಸಾಕ್ಷಾತ್ ಮಹೇಶ್ವರನೇ ಕರ್ತನೆಂಬುದಕ್ಕೆ "ಸೂತ ಸಂಹಿತೆ"ಯು ಹೀಗೆ ಹೇಳಿದೆ :

ಅಷ್ಟಾದಶ ಪುರಾಣಾನಾಂ ಕರ್ತಾ ಸತ್ಯವತೀಸುತಃ॥
ಕಾಮಿಕಾದಿ ಪ್ರಭೇದಾನಾಂ ಯಥಾ ದೇವೋ ಮಹೇಶ್ವರಃ॥[೧೩]

೧೧. ಶ್ರೀ ಗೌರಿನಾಥ ಶಾಸ್ತ್ರಿಗಳು: ಸ್ವಾತಂತ್ರ್ಯದ ಅನಾದಿತ್ವ: ಪುಟ ೩.
೧೨. ಶ್ರೀ ಗೌರಿನಾಥ ಶಾಸ್ತ್ರಿಗಳು: ಸ್ವಾತಂತ್ರ್ಯದ ಅನಾದಿತ್ವ: ಪುಟ ೫
೧೩. ಶ್ರೀ ಗೌರಿನಾಥ ಶಾಸ್ತ್ರಿಗಳು: ಸ್ವಾತಂತ್ರ್ಯದ ಅನಾದಿತ್ವ: ಪುಟ ೬

ಎಂಬುದಾಗಿ ಸಾರಿದೆ. ಇದರ ಅರ್ಥವು – "ಸತ್ಯವತೀಸುತನಾದ ವ್ಯಾಸಮುನಿಯು ೧೮ ಪುರಾಣಗಳಿಗೆ ಹೇಗೆ ಕರ್ತನೋ ಹಾಗೆ ಕಾಮಿಕ ಮೊದಲಾದ ಪ್ರಭೇದವುಳ್ಳ ಶಿವಾಗಮಗಳಿಗೆ ಮಹೇಶ್ವರನು ಕರ್ತನಾಗಿದ್ದಾನೆ" ಎಂಬುದು ಆಗಿದೆ.

ಶೈವಂ ಸಪ್ತವಿಧಂ ಪುಣ್ಯಂ ವೀರಶೈವಾದಿ ಭೇದತಃ ।
ವೀರಶೈವಂ ತಥಾನಾದಿ ಶೈವಮಾದಿ ಪರಂತತಃ ॥
ಅನುಶೈವಂ ಮಹಾಶೈವಂ ಯೋಗಶೈವಂ ತು ಷಷ್ಠಕಂ ।
ಸಪ್ತಮಂ ಜ್ಞಾನಶೈವಾಖ್ಯಂ ತತ್ರಸರ್ವೋತ್ತಮೋತ್ತಮಂ ॥
ವೀರಶೈವಮಿತೀಶಾನಿ ತದಂಗಾನೀತರಾಣಿ ತು...... ।
ನ ವೀರಶೈವಸದೃಶಂ ಮತಮಸ್ತಿ ಜಗತ್ತ್ರಯೇ ।
ಸರ್ವಭೋದಪ್ರದಂ ಪುಣ್ಯಂ ಶಿವಸಾಯುಜ್ಯದಾಯಕಂ ॥

– ಪಾರಮೇಶ್ವರಾಗಮ

ಏಳುಶೈವಗಳಲ್ಲಿ ವೀರಶೈವವೇ ಮೊದಲಿನದು, ಉಳಿದವುಗಳು ವೀರಶೈವ ಭೇದಗಳು. ಅವು ಅನಾದಿಶೈವ, ಆದಿಶೈವ, ಅನುಶೈವ, ಮಹಾಶೈವ, ಯೋಗಶೈವ, ಜ್ಞಾನಶೈವ ಎಂಬುವುಗಳು. ಅವುಗಳಲ್ಲಿ ಸರ್ವೋತ್ತಮವಾದುದು ವೀರಶೈವ! ಉಳಿದವುಗಳು ವೀರಶೈವದ ಅಂಗಗಳು.[೧೪] ವೀರಶೈವಾಂಗಗಳು ಗಾಣಪತ್ಯ, ವೈರಭದ್ರ, ಭೈರವ, ಶರಭ, ನಾಂದಿಕೇಶ್ವರ, ಕೌಮಾರ, ಪೈಶಾಚ ಎಂದಿದೆ. ವೀರಶೈವಕ್ಕೆ ಸಮಾನವಾದುದು ಮೂರು ಲೋಕಗಳಲ್ಲಿಲ್ಲ. ವೀರಶೈವವು ಇಹದ ಸರ್ವಭೋಗಗಳನ್ನು, ಪರದ ಶಿವಸಾಯುಜ್ಯಯೋಗವನ್ನು ಉಂಟು ಮಾಡುತ್ತದೆ. ಇದರಿಂದಾಗಿ ಇದು ಎಲ್ಲಕ್ಕಿಂತಲೂ ಮಿಗಿಲು. ಸರ್ವೋತ್ಕೃಷ್ಟವಾದ ಈ ವೀರಶೈವವೇ ಅನಾದಿ ಪಾಶುಪತ ಮತ. ಅದರ ಉತ್ಪಾದಕನು ರುದ್ರದೇವನು. ಆತನು ಅನಾದಿಗುರುವಾಗಿ ಲಿಂಗವಾಗಿ ಜಂಗಮನಾಗಿ ಅನಾದಿ ಪಶುಪತಿಮತವನ್ನು ರೂಪಿಸಿದ್ದಾನೆ.

**ಆಗಮಗಳ ಕಾಲದಿಂದ ಬಂದ ವೀರಶೈವ ಮಠಗಳ ಪರಿಕಲ್ಪನೆ:**

ವೇದ ಪೂರ್ವಕಾಲೀನ ಸಂಸ್ಕೃತಿಯಲ್ಲಿ ಮಠಗಳಿರಲಿಲ್ಲ. ಆದರೆ ಋಷಿಗಳ ಆಶ್ರಮಗಳೇ ಗುರುಕುಲಗಳಾಗಿದ್ದವು ಎಂಬುದು ಸ್ಪಷ್ಟವಾಗುತ್ತದೆ. ವೇದೋತ್ತರ ಕಾಲದಲ್ಲಿ ಈ ಆಶ್ರಮಗಳು "ಛತ್ರಗಳಾದವು" ಧರ್ಮಕಾರ್ಯಗಳು ಇಲ್ಲಿನ ಚಟುವಟಿಕೆಗಳಾಗಿ, ಆ ಛತ್ರಗಳು "ಮಠ"ಗಳಾಗಿ ಮಾರ್ಪಟ್ಟಂತೆ ತೋರುತ್ತವೆ. ಆದರೂ ಹರಪ್ಪ ಮೋಹೆಂಜೋದಾರೋ ಉತ್ಖನನದಲ್ಲಿ ಈವರೆಗೆ ದೊರೆತ ಶಿವ, ಪಶುಪತಿ, ಯೋಗಮುದ್ರೆ, ನಂದಿ ಮುಂತಾದ ಚಿತ್ರಗಳು ಧಾರ್ಮಿಕ ಹಿನ್ನೆಲೆಯುಲ್ಲಿ ರಚನೆಗೊಂಡಿದ್ದು, ಶೈವ ವೀರಶೈವ

೧೪. ಎಂ.ಜಿ.ನಂಜುಂಡಾರಾಧ್ಯ: ಶಿವಾಗಮಸೌರಭ: ಡಾ. ಜ.ಚ.ನಿ: ಚಂದ್ರಜ್ಞಾನಾಗಮದಲ್ಲಿ – ಲಿಂಗವಂತ ಪಾಶುಪತ ಧರ್ಮ: ಲೇಖನ: ಪುಟ ೧೩೩.

ಸಂಕೇತಗಳಾಗಿವೆಯಾದರೂ ಇಲ್ಲಿ ಮಠಗಳು ಸಾರ್ವಜನಿಕ ಸ್ಥಳಗಳಲ್ಲಿದ್ದವು ಎಂಬುದು ಇನ್ನೂ ಸಂಶೋಧನೆಯ ವಿಷಯವಾಗಿಯೇ ಉಳಿದಿದೆ.

ಮೊದಲು ಆಮರ್ಧಕವೆಂಬ ಮಠವಿತ್ತು. ನಂತರ ಪಂಚಮಠಗಳು ಉದಯಿಸಿದವು. ಪಂಚಬ್ರಹ್ಮ ಋಷಿಗಳು – ಕಶ್ಯಪ, ಕೌಶಿಕ, ಭಾರದ್ವಾಜ, ಗೌತಮ, ಅತ್ರಿಋಷಿಗಳೊಡನೆ ಐದು ಮಠಾಧಿಪತಿಗಳು ಸೇರಿ ಶೈವಾಗಮ ಪ್ರಚಾರವನ್ನು ಮಾಡಿದರು. ಭರತಖಂಡದ ಮಧ್ಯಭಾಗದ ಮಂದಾಹಾಳೀಶ ಕ್ಷೇತ್ರಕ್ಕೆ – "ದೂರ್ವಾಸ"ರು ಮಠಾಧಿಪತಿ(೨) ಪೂರ್ವಭಾಗದ ಆಮರ್ಧಕ ಕ್ಷೇತ್ರಕ್ಕೆ – "ರುರು" ಮಠಾಧಿಪತಿ (೩) ದಕ್ಷಿಣ ಭಾಗದ – ಪುಷ್ಪಗಿರಿ ಕ್ಷೇತ್ರಕ್ಕೆ – "ದಧೀಚಿ" ಮಠಾಧಿಪತಿ (೪) ಉತ್ತರ ಭಾಗದ – ಗೋಳಕ ಕ್ಷೇತ್ರಕ್ಕೆ "ಶ್ವೇತ" ಮಠಾಧಿಪತಿ (೫) ಪಶ್ಚಿಮ ಭಾಗದ – ರಣಭದ್ರ ಕ್ಷೇತ್ರಕ್ಕೆ "ಉಪಮನ್ಯು" ಮಠಾಧಿಪತಿ ಹೀಗೆ ಐವರು ಮಠಾಧಿಪತಿಗಳಾಗಿ ನೇಮಕಗೊಂಡು ಇವರೊಂದಿಗೆ "ಅಗಸ್ತ್ಯರು" ಸೇರಿದ್ದರೆಂಬುದು ತಿಳಿದು ಬರುತ್ತದೆ.[೧೫]

ಆಗಮಗಳ ಕಾಲಕ್ಕೆ ಬಂದರೆ "ವೀರಶೈವ ಮಠಗಳ" ಪರಿಕಲ್ಪನೆ ವೀರಾಗಮದಲ್ಲಿ ಹೆಚ್ಚು ವಿಸ್ತಾರವಾಗಿ ನೂರಾರು ಶ್ಲೋಕಗಳಲ್ಲಿ ವರ್ಣಿತವಾಗಿದೆ. ವಿಶ್ವಮಾನವತಾವಾದಿಗಳಾದ "ಆಚಾರ್ಯ ರೇಣುಕರು" ಮಾನವ ಕುಲದ ಅಸ್ತಿತ್ವಕ್ಕೆ ಅಡಿಗಲ್ಲನ್ನು ಇರಿಸಿದರು. ಭಾರತದ ಕ್ರಾಂತಿಕಾರರಲ್ಲಿ ರೇಣುಕ ಭಗವತ್ಪಾದರಿಗೆ ಎಲ್ಲ ದೃಷ್ಟಿಯಿಂದಲೂ ಅಗ್ರ ತಾಂಬೂಲ ಸಲ್ಲುತ್ತದೆ. ಬುದ್ಧನಿಗಿಂತಲೂ ಪೂರ್ವದಲ್ಲಿ ಪ್ರಬುದ್ಧ ಕ್ರಾಂತಿಯನ್ನು ಮಾಡಿದ ಮಹಾನುಭಾವರೆಂದರೆ ಶ್ರೀ ರೇಣುಕರು. ರೇಣುಕರಿಗಿಂತ ಪೂರ್ವದಲ್ಲಿ ಕ್ರಾಂತಿಕಾರರೆಂದರೆ "ಭದ್ರ ರುದ್ರರು" ರುದ್ರನಿಗೆ ಪೂರ್ವದಲ್ಲಿ ಯಾರಿಲ್ಲ.[೧೬]

ವೀರಶೈವ ಧರ್ಮದ ಮುಖಾಂತರ ಮಾನವೀಯ ಕ್ರಾಂತಿಯನ್ನು ಮುಂದುವರೆಸಿ ಸಫಲರಾದವರು ಶ್ರೀ ರೇಣುಕರು. "ನ ವೀರಶೈವಸದೃಶಂ ಮತಮಸ್ತಿ ಜಗತ್ತ್ರಯೇ"। ಎಂದೆನಿಸಿ ಸಫಲರಾದರು. ಈ ವಿಶಾಲಭಾವದ ಕೀರ್ತಿವಾರ್ತೆ ಅಚ್ಚಳಿಯದೇ ಅರಳಿ ನಿಂತಿದ್ದ ಕಾರಣ ಮುಂದೆ ಬರುವ ಜಾತವೇದ ಮುನಿಗಳ ಪ್ರಭಾವದಿಂದಾಗಿ ಬಸವಣ್ಣನವರು ವೀರಶೈವ ಧರ್ಮವನ್ನು ಸ್ವೀಕರಿಸಿದರು.

ಮಂಟಪ ರಚನೆಗೆ ಒಂದು ಪುರಾತನತೆಯುಂಟು, ಪರಂಪರೆಯುಂಟು. ಮಂಟಪರಚನೆ ರುದ್ರದೇವನಿಂದ ಮೊದಲಾಗಿ ಭದ್ರ, ಚಂದ್ರಗೂಡ, ಶಿವಾಚಾರ್ಯ, ದೇವರದಾಸಿಮಯ್ಯ. ರೇವಣಸಿದ್ದ, ಬಸವಣ್ಣ ಕೊನೆಯದಾಗಿ ರಚಿಸಿದ ಇತಿಹಾಸವುಂಟು. ಆದರೆ "ಚಿಚ್ಚಕ್ತಿಜ್ಞಾನ ನಿಲಯಗಳನ್ನು ಭಾರತದಾದ್ಯಂತ ಪ್ರಭಾವಪೂರ್ಣಕ್ರಾಂತಿ, ಉತ್ಕ್ರಾಂತಿಗಳನ್ನು ಮಾಡಿದ ಕೀರ್ತಿ ಶ್ರೀ ರೇಣುಕಾಚಾರ್ಯರಿಗೆ ಮಾತ್ರ ಸಲ್ಲುತ್ತದೆ. ಈ ಚಿಚ್ಚಕ್ತಿ ಜ್ಞಾನ ನಿಲಯು"ಗಳಲ್ಲಿ ವೀರಮಾಹೇಶ್ವರರು, ವೀರಾಚಾರರು, ರುದ್ರಗಣರು ಮೊದಲಾದವರು ಚಿಚ್ಚಕ್ತಿ

---

೧೫. (ಸಂ) ಎಂ.ಜಿ.ನಂಜುಂಡಾರಾಧ್ಯ: ಶಿವಾಗಮ ಸೌರಭ: ಪು೧ ೫೭

೧೬. ಡಾ. ಜ.ಚ.ನಿ. : ವೀರಾಗಮ : ಪು. ೬೭

ಜ್ಞಾನೋಪಾಸಕರಾಗಿದ್ದರು. ಚಿಚ್ಛಕ್ತಿ ಜ್ಞಾನಕ್ಕೆ ಮಿಗಿಲಾದ ಜ್ಞಾನವಿಲ್ಲ. ಅನುಭವವಿಲ್ಲ. "ಈ ಚಿಚ್ಛಕ್ತಿ ಜ್ಞಾನ ನಿಲಯಗಳು ಅನುಭವ ಮಂಟಪಗಳಿಗಿಂತ ಎತ್ತರದವುಗಳಾಗಿದ್ದವು" ಅವರು ಸರ್ವ ಸಾಮಾನ್ಯರೊಡನಿದ್ದು ಕಾಯಕ ಮಾಡಿ ಜನರನ್ನು ಉದ್ಧರಿಸುತ್ತಿದ್ದರು. ಅಲ್ಲದೇ ಪರಾತ್ಪರ ರುದ್ರಗಣರಿದ್ದರು. ಕಾಲಾಗ್ನಿ ರುದ್ರರಿದ್ದರು. ಆಚಾರ್ಯರೊಡನೆ ರಹಸ್ಯ ತತ್ವಸಂಧಾನಕ್ಕೆ ಸಲ್ಲುವ ಸಾಮರ್ಥ್ಯವುಳ್ಳ ವೀರಭಕ್ತರಿದ್ದರು. ಧಾರ್ಮಿಕರು, ಸಾತ್ವಿಕರು, ಪ್ರಸಾದಿಗಳು, ಧ್ಯಾನತತ್ಪರರು, ಸರ್ವಜ್ಞರು, ಷಟ್‌ಸ್ಥಲಬ್ರಹ್ಮರು ಇದ್ದರು. ಅಲ್ಲದೇ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶ್ರೌತರು, ಸ್ಮಾರ್ತರು, ಕರ್ಮವಾದವನ್ನು ಖಂಡಿಸುವವರು ಆ "ಪುಣ್ಯವತಿ ಪಟ್ಟಣ"ದಲ್ಲಿದ್ದರು. ಹೀಗೆ ನಾನಾ ಬಗೆಯ ಸಮರ್ಥರಿದ್ದರೆಂದು ವೀರಾಗಮದಲ್ಲಿ ಸುಮಾರು ಐವತ್ತು ಶ್ಲೋಕಗಳಲ್ಲಿ ಬಣ್ಣಿಸಲಾಗಿದೆ.[೧೭]

"ಶಿವಾಚಾರ್ಯರ ಧರ್ಮ, ತತ್ವ, ಸಂಸ್ಕೃತಿಯನ್ನು ಆದಿಕಾಲದ ಆಗಮ ಸಾಹಿತ್ಯ ತನ್ನೊಳಗಿರಿಸಿಕೊಂಡಂತೆ ಆಧುನಿಕ ಕಾಲದ ವಚನ ಸಾಹಿತ್ಯ ಶಿವಶರಣರ ಸಂಸ್ಕೃತಿಯನ್ನು ತನ್ನೊಳಗಿರಿಸಿಕೊಂಡಿದೆ." ಇವೆರಡೂ ಮಾನವನ ಎರಡು ಕಣ್ಣುಗಳಿದ್ದಂತೆ, ಇವೆರಡೂ ಬೇಕು! ಕೆಲವು ಜನ ಪುರಾತನ ಪರಂಪರೆ, ಸಾಹಿತ್ಯ, ಸಂಸ್ಕೃತಿ ಬೇಕಿಲ್ಲವೆಂದು ಬಯಸುತ್ತಾರೆ. ಇದರಿಂದ ಸಮಾಜದ ಒಡಕು ತಪ್ಪಿದ್ದಲ್ಲ. ಶಾಂತಿ, ಸಮಾಧಾನ, ಸಮನ್ವಯಭಾವಗಳು ಉಂಟಾಗುವುದಿಲ್ಲ. ಇದರಿಂದ ಸಮಗ್ರ ಆರಾಧನೆ, ಸಹಕಾರವಿಲ್ಲದೇ ಘರ್ಷಣೆಗಳು ತಲೆ ಎತ್ತುತ್ತವೆ. ಆದ್ದರಿಂದ ಮೌಲ್ಯಗಳು ಹಿಂದಿನವಾದರೇನು? ಇಂದಿನವಾದರೇನು? ಶಿವಾಚಾರ್ಯರದಾದರೇನು? ಶಿವಶರಣರದ್ದಾದರೇನು? ಒಂದೇ ಮುಖದ ಎರಡು ಕಣ್ಣುಗಳೆಂದು ಅರಿತು ಭಾವೈಕ್ಯದಿಂದ ಬಾಳಿದರೆ ಲೇಸೆಂಬುದನ್ನು ಡಾ. ಜ.ಚ.ನಿ. ಅವರು ಹೇಳುತ್ತಾರೆ."[೧೮]

ಭಾರತದ ದಕ್ಷಿಣಾಪಥವು ಅತಿ–ಪ್ರಾಚೀನ ಕಾಲದಿಂದ ಶೈವ ವೀರಶೈವ ಧರ್ಮಕ್ಕೆ ಆಗರವಾಗಿದೆ. ಪೌರಾಣಿಕ ಯುಗದಲ್ಲಿ ಶೈವ ಧರ್ಮದ ಪ್ರಾಬಲ್ಯವು ವಿಪುಲವಾಗಿತ್ತೆಂದು ಪುರಾಣ ಪುರುಷರ ಚರಿತ್ರೆಯಿಂದ ವಿದಿತವಾಗುವುದು. ರಾವಣನ ತಾಯಿಯಾದ ಕೈಕಸಿಯು ಪ್ರತಿದಿವಸ ಮಳಲಲಿಂಗವನ್ನು ಮಾಡಿ ಪೂಜಿಸುತ್ತಿದ್ದಳೆಂದು: ಅದಕ್ಕಾಗಿ ರಾವಣನು ಪರಮೇಶ್ವರನಿಂದ ಪ್ರಾಣಲಿಂಗವನ್ನು ಪಡೆದು ಗೋಕರ್ಣ ಕ್ಷೇತ್ರದಲ್ಲಿ ಸ್ಥಾಪಿಸಿದ್ದು, "ಮಹಾಬಲೇಶ್ವರಲಿಂಗ" ವೆಂಬ ಅಭಿಧಾನದಿಂದ ಈಗಲೂ ಪೂಜೆಗೊಳ್ಳುತ್ತಲಿದೆಯೆಂಬುದು ಹಾಗೂ ರಾಮಾಯಣ ಕಾಲದಲ್ಲಿ ಶ್ರೀರಾಮನು ರಾಮೇಶ್ವರಲಿಂಗವನ್ನು ಪ್ರತಿಷ್ಠಾಪಿಸಿ, ಶಿವನನ್ನು ಆರಾಧಿಸಿ ರಾವಣನನ್ನು ಜಯಿಸಲು ಸಮರ್ಥನಾದನೆಂಬುದು, ಶೈವ ಧರ್ಮದ ಹೆಚ್ಚಳವನ್ನು ಸಾರುವ ಆಧಾರಗಳಾಗಿವೆ".

ಇತಿಹಾಸಯುಗದಲ್ಲಿ ಪ್ರಬಲ ರಾಜಮನೆತನಗಳಾದ ಚೋಳ, ಚೇರ, ಪಾಂಡ್ಯ, ಪಲ್ಲವ, ಬಾಣ, ಕದಂಬ, ಚಾಲುಕ್ಯ, ರಾಷ್ಟ್ರಕೂಟ, ವಿಜಯನಗರ, ಕೆಳದಿ, ಕಿತ್ತೂರು ಮೊದಲಾದವರು ಶೈವ, ವೀರಶೈವ ಧರ್ಮವನ್ನು ಪೋಷಿಸಿದರೆಂಬುದು ಅವರು ಕೆತ್ತಿಸಿದ ಶಿಲಾಶಾಸನಗಳು, ಕಟ್ಟಿಸಿದ ಗುಡಿಗಳು, ಇವುಗಳಲ್ಲಿಯ ಶಿಲ್ಪ ವಾಸ್ತುಶಿಲ್ಪ

೧೭. ಡಾ. ಜ.ಚ.ನಿ. : ವೀರಾಗಮ : ಪು. ೯೯

೧೮. ಡಾ. ಜ.ಚ.ನಿ. : ವೀರಾಗಮ: ಪು. ೧೩೩.

ಭಿತ್ತಿ ಚಿತ್ರಗಳಿಂದ ಸ್ಪಷ್ಟವಾಗುವುದು. ಆಧುನಿಕ ಕಾಲದಲ್ಲಿಯೂ ಕೂಡಾ ದಕ್ಷಿಣ ಭಾರತದಲ್ಲಿ ಶಿವಾಲಯಗಳು ವೀರಶೈವ ಮಠಗಳು ವಿಪುಲವಾಗಿ ಬೆಳೆದು ಬಂದಿದ್ದು ಇಡೀ ದಕ್ಷಿಣ ಭಾರತವು ವೀರಶೈವ ಧರ್ಮಕ್ಕೆ ಭದ್ರವಾದ ಕೋಟೆಯಾಗಿದೆ.

"ಷಟ್‌ಸ್ಥಲ ಬ್ರಹ್ಮ ಸಂಸ್ಕಾರ ಪ್ರಾಣಲಿಂಗಾಂಗಯೋಗಿನಾಂ ।
ಏಕೋತ್ತರ ಶತಸ್ಥಾನಂ ದೀಕ್ಷಾ ದೇಹ ಸ್ವರೂಪಿಣಾಂ ॥
ಭೂರುದ್ರಾಣಾಂ ಪವಿತ್ರಾಣಿ ಮಠ ಶೈವಾನ್ವಿತಾನ್ಯಪಿ"[೧೯]

ಎಂಬ ಶ್ಲೋಕ ವೀರಶೈವ ತತ್ವಾಚರಣೆಗೆ ಮಠಗಳು ಮೂಲನೆಲೆಯನ್ನೊದಗಿಸಿರಬೇಕೆಂಬುದನ್ನು ಸೂಚಿಸುತ್ತದೆ. ಅರ್ಚನ, ಅರ್ಪಣ, ಅನುಭಾವ, ಆತಿಥ್ಯ, ಅನ್ನದಾಸೋಹ, ಜ್ಞಾನದಾಸೋಹ ಇವುಗಳಿಗೆ ಮಠಗಳು ನೆಲೆಯಾದವು. ದಾಸೋಹದಂತೆ "ತತ್ವಕರ್ಮ" ಅಂದರೆ ಸತ್ಯ ಶುದ್ಧ ಕಾಯಕವನ್ನು ಈ ಮಠಗಳು ಎತ್ತಿ ಹಿಡಿದಿದ್ದವು.

ಪ್ರಾಚೀನ ಕರ್ನಾಟಕದ ಮಟ್ಟಿಗೆ ಹೇಳಬೇಕಾದರೆ ಲಕುಲೀಶ, ಪಾಶುಪತ, ಕಾಳಾಮುಖ ಶೈವಮುನಿಗಳು ಇಲ್ಲಿ ದೇವಸ್ಥಾನಗಳನ್ನು ನೋಡಿಕೊಳ್ಳುತ್ತಿದ್ದರು. ಶೈವಮಠಗಳು ಇದ್ದವು ಎಂಬುದು ಹಾಗೂ ಇವು ಶಂಕರಾಚಾರ್ಯರ ಪೂರ್ವದಲ್ಲಿ ಇದ್ದವು ಎಂಬುದು ಶಾಸನಗಳಿಂದ ತಿಳಿದುಬರುತ್ತದೆ. ಕರ್ನಾಟಕದಲ್ಲಿ ಬಳ್ಳಿಗಾವಿ, ಶ್ರೀಶೈಲ, ಹೂಲಿ, ಇಟಗಿ, ಸೂಡಿ, ಸುತ್ತೂರು (ಮೈಸೂರಿನ) ಮುಂತಾದ ಸ್ಥಳಗಳಲ್ಲಿ ಶೈವಮಠಗಳು ಅತ್ಯಂತ ಉಚ್ಛ್ರಾಯ ಸ್ಥಿತಿಯಲ್ಲಿದ್ದು ಕಾರ್ಯನಿರ್ವಹಿಸುತ್ತಿದ್ದವೆಂದು ತಿಳಿದು ಬರುತ್ತದೆ. ಬಳ್ಳಿಗಾವಿಯ "ಕೋಡಿಮಠ" ಬಹಳ ಪ್ರಸಿದ್ಧವಾಗಿತ್ತು. ಧರ್ಮ, ಶಾಸ್ತ್ರ, ತತ್ವ, ನಾಟಕ, ಚಿತ್ರ, ಸಂಗೀತ ಮುಂತಾದ ಅನೇಕ ವಿಷಯಗಳನ್ನು ಅಲ್ಲಿ ಕಲಿಸಲಾಗುತ್ತಿತ್ತು ಎಂಬುದು ತಿಳಿದು ಬರುತ್ತದೆ.

ಕರ್ನಾಟಕದಲ್ಲಿ ಬೆಳಗಾವಿ ಜಿಲ್ಲೆಯ ಮುರಗೋಡ ಗ್ರಾಮದ ಬಳಿ ಇರುವ "ಸೊಗಲದಲ್ಲಿಯ ತಪೋವನದಲ್ಲಿ" ಶಿಕ್ಷಣ ಪಡೆಯುತ್ತಿದ್ದ ವಿದ್ಯಾರ್ಥಿಗಳ ಊಟೋಪಚಾರಕ್ಕೆಂದು "ಕಂಚಿಯಬ್ಬೆ" ಎಂಬುವವಳು ಕ್ರಿ.ಶ. ೯೮೪ ರಲ್ಲಿ ತನ್ನ ಭೂಮಿಯನ್ನು ದಾನ ಮಾಡಿದ್ದು ಶಾಸನದಿಂದ ತಿಳಿದು ಬರುತ್ತದೆ. ಕ್ರಿ.ಶ. ೧೧೨೧ ರಲ್ಲಿ ಇನ್ನಷ್ಟು ಭೂಮಿಯನ್ನು ಅದೇ ತಪೋವನಕ್ಕೆ ದಾನ ಮಾಡಿದ ಅಂಶವು ಗಮನಾರ್ಹವಾದುದಾಗಿದೆ.

ಚೋಳರ ಕಾಲದಲ್ಲಿ ವಿಪುಲವಾಗಿ ಶಿವಾಲಯಗಳೂ ಶಿವಾಚಾರ್ಯರ ಮಠಗಳು ಸ್ಥಾಪಿತವಾಗಿ, ವೀರಶೈವ ಧರ್ಮದ ಪ್ರಸಾರ ಮತ್ತು ಉನ್ನತಿ ವಿಪುಲವಾಗಿ ಆಯಿತೆಂಬುದು ಚೋಳರ ಇತಿಹಾಸದ ಅವಲೋಕನದಿಂದ ಮನದಟ್ಟಾಗುವುದು. ಸುತ್ತೂರುಮಠದ ಉಗಮವು ಚೋಳರ ಕಾಲದಲ್ಲಿ ಆಗಿದೆಯೆಂದು ಸುತ್ತೂರಿನಲ್ಲಿರುವ ನಂಜನಗೂಡು ಶಿಲಾಶಾಸನ ನಂ. ೧೬೪. ಇದರಲ್ಲಿ "ಶಕವರ್ಷ ೯೫೫ ನೆಯ ಅಂಗಿರಸ ಸಂವತ್ಸರ ಕಾರ್ತಿಕ ಮಾಸದ ಪೂರ್ಣಿಮೆಯಲ್ಲಿ ರಾಜೇಂದ್ರ ಚೋಳ ದೇವರೂ ಶ್ರೋತ್ರಿಯ ಗ್ರಾಮದ ಮಹಾಜನರು, ರಾಜಗುರುಗಳಾದ

೧೯. ಡಾ. ಸಂಗಮೇಶ ಸವದತ್ತಿ ಮಠ: ವೀರಶೈವ ವಿನ್ಯಾಸ: ಪುಟ. ೩.

ಈಶಾನ ಒಡೆಯರ್ಗೆ ದತ್ತಿಯನ್ನು ಕೊಟ್ಟಂತೆ ಉಲ್ಲೇಖವಿದೆ".[೨೦] ಶಾಸನದ ಈಶಾನ ಈಶ್ವರ ಒಡೆಯರು ಈ ಮಠದ ದ್ವಿತೀಯ ಸ್ವಾಮಿಗಳಾಗಿದ್ದರು.

ರೇವಣಸಿದ್ಧರು ಚೋಳರಾಜರಿಗೆ ಗುರುಗಳೂ, ಸಂಬಂಧಿಕರೂ ಆಗಿದ್ದರೆಂದೂ "ರೇವಣಸಿದ್ಧೇಶ್ವರ ಚರಿತ್ರೆ" ಯಿಂದ ತಿಳಿದು ಬರುತ್ತದೆ. ದಕ್ಷಿಣ ಭಾರತದಲ್ಲಿ "ರೇವಣಸಿದ್ಧ"ರಿಂದಲೇ ವೀರಶೈವ ಧರ್ಮದ ಪ್ರಸಾರವಾಯಿತು. ಸುತ್ತೂರುಮಠದಲ್ಲಿಯ ರೇವಣಸಿದ್ಧರ ಸಂಪ್ರದಾಯ ಮತ್ತು ಈಶಾನ ಈಶ್ವರ ಒಡೆಯರ ಸ್ಥಾನಾಧಿಪತ್ಯ- ಇವು "ರೇವಣಸಿದ್ಧರ ಚರಿತ್ರೆ'ಯಲ್ಲಿ (ಚೋಳ-ರೇವಣಸಿದ್ಧರ ಸಂಬಂಧದ) ಕುರಿತು ಬರುವುದು. ಈಶಾನ ಈಶ್ವರ ಒಡೆಯರು ಸುತ್ತೂರಿನ ಸೋಮೇಶ್ವರ ದೇವಾಲಯದ ಸ್ಥಾಪನಾಚಾರ್ಯರಾಗಿದ್ದರೆಂಬುದು ಶಾಸನದಿಂದ ತಿಳಿಯುವದು. ಈ ಶಾಸನವು ಸುತ್ತೂರು ಮಠದ ಆವರಣದಲ್ಲಿರುವ ಸೋಮೇಶ್ವರ ದೇವಾಲಯದಲ್ಲಿದೆ. ಈ ಶಾಸನದ ಕಾಲವು ಕ್ರಿ.ಶ. ೧೦೩೯ ಅಕ್ಟೋಬರ್ ೨೩ನೆಯ ತಾರೀಖು ಎಂದಿದೆ. ಇಲ್ಲಿಯ ಇನ್ನೂ ಒಂದೆರಡು ಶಾಸನಗಳಲ್ಲಿ ಈಶಾನ ಈಶ್ವರ ಗುರುಳ ಹೆಸರಿನ ಉಲ್ಲೇಖವಿದೆ."[೨೧] ಆದುದರಿಂದ ಈಗಿನ ಮೈಸೂರು ಜಿಲ್ಲೆಯ ಸುತ್ತೂರು ಮಠದ ಅಸ್ತಿತ್ವವು ಸುಮಾರು ಒಂದು ಸಾವಿರ ವರುಷಗಳಿಂದ ನಡೆಯುತ್ತ ಬಂದಿದೆ ಎನ್ನಬಹುದಾಗಿದೆ.

೧೧ನೇ ಶತಮಾನದಲ್ಲಿ ಜೇಡರದಾಸಿಮಯ್ಯ, ಕೊಂಡಗುಳಿ ಕೇಶಿರಾಜ, ರೇವಣಸಿದ್ಧೇಶ್ವರ, ಏಕಾಂತರಾಮಯ್ಯ ಮುಂತಾದ ಶಿವಶರಣರು ಆಗ ವೀರಶೈವದ ಪ್ರಚಾರವನ್ನು ಕೈಗೊಂಡರು. ಇವರು ಮಹಾಪ್ರಭಾವಿಶರಣರಾಗಿದ್ದರು. ಜೈನ ಮತ್ತು ವೈದಿಕ ಧರ್ಮಗಳನ್ನು ವಿರೋಧಿಸಿ, ಜನಪರವಾದ ವೀರಶೈವ ಧರ್ಮದ ಪ್ರಚಾರ ಕೈಗೊಂಡರು. ಶ್ರೇಷ್ಠ ಕಾಳಾಮುಖಗುರುಗಳೂ ವೀರಶೈವವನ್ನು ಅಲಂಕರಿಸಿದರು.[೨೨] ಇದಕ್ಕೆ ಶಾಸನಾಧಾರವನ್ನು ಶ್ರೀ ಎಂ.ಜಿ.ನಂಜುಂಡಾರಾಧ್ಯರು ಮತ್ತು ಡಾ. ಜಿ.ಎಸ್.ದೀಕ್ಷಿತರು ಗುರುತಿಸಿದ್ದಾರೆ. ೧೨ನೆಯ ಶತಮಾನದಲ್ಲಿ ಈ ವೀರಶೈವ ಧರ್ಮವನ್ನು ಜನತೆಯ ಹತ್ತಿರಕ್ಕೆ ಬಹುಬೇಗನೆ ತಂದವರು ಬಸವೇಶ್ವರರು. ವೀರಶೈವ ವಾತಾವರಣದಲ್ಲಿ ತನ್ನನ್ನು ತಾನು ಒಂದಾಗಿಸಿಕೊಂಡು ಅದ್ಭುತ ಕತೃತ್ವ ಶಕ್ತಿಯಿಂದ ಚುಂಬಕದಂತೆ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಇರುವ ಶರಣರನ್ನೆಲ್ಲಾ ತನ್ನೆಡೆಗೆ ಸೆಳೆದುಕೊಂಡು ವೀರಶೈವಕ್ಕೊಂದು ಹೊಸ ಆಯಾಮವನ್ನು ನೀಡಿದರು. ಇದರಿಂದಾಗಿ ಎಲ್ಲ ಮಠಗಳು ವೀರಶೈವ ಮಠಗಳಾಗಿ ಪರಿವರ್ತನೆಗೊಂಡವು. ಸವದತ್ತಿ ತಾಲೂಕಿನ "ಹೂಲಿ ಶೈವ ಮಠವು" ಆ ವೇಳೆಗಾಗಲೇ ದಕ್ಷಿಣದ ಕಾಶಿ ಎನಿಸುತ್ತಿದ್ದು, ಈ ಸುಪ್ರಸಿದ್ಧ ಶೈವ ಮಠವು ವೀರಶೈವ ಮಠವಾಗಿ ಪರಿವರ್ತನೆಯಾದುದನ್ನು ಡಾ. ಎಸ್.ಸಿ.ನಂದೀಮಠ ಅವರು ಗುರುತಿಸಿದ್ದಾರೆ.[೨೩]

---

೨೦. ಶ್ರೀ ಎಂ.ಜಿ.ನಂಜುಂಡಾರಾಧ್ಯ: ಶಿವರಾತ್ರಿ ಶಿವಾಚಾರ್ಯ: ಪುಟ ೨೬-೨೭.
೨೧. ಶ್ರೀ ಎಂ.ಜಿ.ನಂಜುಂಡಾರಾಧ್ಯ: ಶಿವರಾತ್ರಿ ಶಿವಾಚಾರ್ಯ: ಪುಟ ೨೯.
೨೨. ಡಾ. ಸಂಗಮೇಶ ಸವದತ್ತಿ ಮಠ: ವೀರಶೈವ ವಿನ್ಯಾಸ: ಪುಟ-೧೭
೨೩. ಡಾ. ಸಂಗಮೇಶ ಸವದತ್ತಿ ಮಠ: ವೀರಶೈವ ವಿನ್ಯಾಸ: ಪುಟ ೧೮.

ಕಲ್ಯಾಣ ಕ್ರಾಂತಿಯ ನಂತರ ಶರಣರೆಲ್ಲ ದಿಕ್ಕು ದಿಕ್ಕಿಗೆ ಚದುರಿಹೋದರು. ಸೂತ್ರಧಾರಿ ಬಸವಣ್ಣನು ಐಕ್ಯನಾದ. ಚದುರಿದ ಶರಣರು ತಮಗೆ ಅನುಕೂಲವಾದ ಸ್ಥಳಗಳಲ್ಲಿ ನೆಲೆನಿಂತರು. ಅಲ್ಲಿದ್ದ ಗುರುಸ್ಥಲದ ಮಠಗಳಲ್ಲಿ ತಮ್ಮೊಡನೆ ತಂದಿದ್ದ ವಚನದ ಕಟ್ಟುಗಳನ್ನು ಬಿಚ್ಚಿ, ಆ ಮಠಗಳ ಮೂಲಕ ವೀರಶೈವ ಧರ್ಮ, ತತ್ವಗಳ ಪ್ರಸಾರ ಕಾರ್ಯ ನಡೆಸಿದರು. ರಾಜಕೀಯ ಸ್ಥಿತ್ಯಂತರಗಳು ನಡೆದು, ವಿಜಯನಗರದ ಅರಸನಾದ ಪ್ರೌಢದೇವರಾಯ, ಅವನ ದಂಡನಾಯಕ ಲಕ್ಕಣ್ಣನವರ ನಿರಂತರ ಪ್ರೋತ್ಸಾಹದಿಂದಾಗಿ ವೀರಶೈವ ಸಾಹಿತ್ಯ, ಧರ್ಮ, ತತ್ವಪ್ರಚಾರಕ್ಕೆ ಪುಷ್ಟಿದೊರೆತು ಮತ್ತೆ ವೀರಶೈವ ಪುರುಜ್ಜೀವನಗೊಳ್ಳುವಂತಾಯಿತು. ಇದೇ ಕಾಲಕ್ಕೆ "ವಿರಕ್ತ ತೋಂಟದಾರ್ಯರ" ನೇತೃತ್ವದಲ್ಲಿ ನೂರಾರು ವಿರಕ್ತರು ಈ ಕಾರ್ಯಕ್ಕೆ ಸಂಪೂರ್ಣ ಕಂಕಣಬದ್ಧರಾದರು. ನೂರೊಂದು ವಿರಕ್ತರು ನಾಡಿನಾದ್ಯಂತ ಸಂಚರಿಸಿ, ತಾವು ಪ್ರಭುಸಂಪ್ರದಾಯವರೆಂದು ಹೇಳಿ, ಹೋದಡೆಗಳಲ್ಲೆಲ್ಲ ವಿರಕ್ತಮಠಗಳನ್ನು ಸ್ಥಾಪಿಸಿದರು. ಈ ಮಠಗಳಲ್ಲಿ ತಮ್ಮ ಶಿಷ್ಯರನ್ನು ಮಠಾಧಿಪತಿಗಳನ್ನಾಗಿ ಮಾಡಿದರು. ಈ ವಿರಕ್ತ ಮಠಗಳು ವೀರಶೈವಕ್ಕೆ ಉತ್ತಮ ಕಾಣಿಕೆಯನ್ನು ನೀಡುವಂತೆ ಜಾಗೃತೆ ವಹಿಸಿದರು.[೨೪] ಒಂದೆಡೆ ಗುರುಸ್ಥಲದ ಮಠಗಳು, ಇನ್ನೊಂದೆಡೆ ವಿರಕ್ತ ಮಠಗಳು ಹೀಗೆ ವೀರಶೈವಕ್ಕೆ ಎರಡು ಕಣ್ಣು ಮೂಡಿದಂತಾಗಿ ಧರ್ಮ ತತ್ವ ಸಾಂಸ್ಕೃತಿಕ ಚಟುವಟಿಕೆ ಇತ್ಯಾದಿ ಕಾರ್ಯಗಳು ಹೆಚ್ಚಿನ ಸಂಖ್ಯೆಯಲ್ಲಿ ನಡೆಯತೊಡಗಿದವು.

ಆದರೆ ೧೯ ಮತ್ತು ೨೦ನೆಯ ಶತಮಾನ ಪೂರ್ವಾರ್ಧದಲ್ಲಿ ಗುರು – ವಿರಕ್ತರಲ್ಲಿ ಭಿನ್ನಾಭಿಪ್ರಾಯಗಳು ಪ್ರಾರಂಭವಾಗಿ ಒಣಪ್ರತಿಷ್ಠೆಯನ್ನೇ ಪ್ರಮುಖವಾಗಿ ಮಾಡಿಕೊಂಡು ಬೆಳೆಯತೊಡಗಿದವು. ಆಧುನಿಕ ಕಾಲದಲ್ಲಿಯೂ ವೀರಶೈವ ಮಠಗಳು ಶಿಕ್ಷಣ ಮತ್ತು ಸಾಹಿತ್ಯಾಭಿವೃದ್ಧಿಗೆ ಎದ್ದು ಕಾಣುವ ರೀತಿಯುಲ್ಲಿ ಶ್ರಮಿಸುತ್ತಿರುವುದನ್ನು ಕಾಣಬಹುದಾಗಿದೆ. ವೀರಶೈವ ಮಠಗಳು ಸಾಹಿತ್ಯಕೃತಿಗಳ ಪ್ರಕಟಣೆ, ಸಾಹಿತಿಗಳಿಗೆ, ಕಲಾವಿದರಿಗೆ ಸನ್ಮಾನ, ಕಲಾಕೃತಿಗಳಿಗೆ ಬಹುಮಾನ, ಸಂಸ್ಮರಣ, ಸಂಭಾವನಾ ಗ್ರಂಥಗಳು, ಶಿಲ್ಪ, ವಾಸ್ತು ಶಿಲ್ಪ, ಬಿಡಿಚಿತ್ರಗಳು, ಭಿತ್ತಿ ಚಿತ್ರಗಳು ರಚನೆಗೊಂಡವು. ಹೀಗೆ ಹಲವಾರು ಬಗೆಯ ಚಟುವಟಿಕೆಗಳನ್ನು ಕೈಗೊಂಡು ಈಗಿನ ವೀರಶೈವ ಮಠಗಳು ಒಂದಿಲ್ಲೊಂದು ರೀತಿಯಲ್ಲಿ ಕಾರ್ಯ ಪ್ರವೃತ್ತವಾಗಿವೆ.

ಹೀಗೆ ವೀರಶೈವ ಮಠಗಳು ದೀನದಲಿತರನ್ನೊಳಗೊಂಡ ಮಾನವ ಸಮಾಜದ ಎಲ್ಲ ವರ್ಗಗಳ ಜನರಿಗೂ ಮುಟ್ಟುವಂತೆ ಸಾಮಾಜಿಕ ಸುಧಾರಣೆಗಳನ್ನು ಮಾಡುತ್ತ ಬಂದಿರುವುದು ಮತ್ತು ವೀರಶೈವ ಸಾಹಿತ್ಯ ರಚನೆ, ಅಧ್ಯಯನ, ಅಧ್ಯಾಪನಗಳಿಗೆ ಪ್ರಾಮುಖ್ಯ ನೀಡಿವೆ. ವೀರಶೈವ ಮಠಗಳಲ್ಲಿ ಸೃಜನಶೀಲತೆ, ವಿಮರ್ಶೆ, ಟೀಕೆ, ಅಧ್ಯಯನ, ಸಂಕಲನ, ಸಂಪಾದನೆ ಮಾಡುವುದರೊಂದಿಗೆ, ತಾಡೋಲೆಗ್ರಂಥಗಳು, ಶರಣರ ವಚನಗಳು, ಹಸ್ತಪ್ರತಿಗಳನ್ನು ಸಂಗ್ರಹಿಸಿಟ್ಟುಕೊಂಡಿರುವರು. ಅಧ್ಯಯನ ಅಧ್ಯಾಪನಗಳಿಗೆ ಇವುಗಳನ್ನು ಬಳಸಿಕೊಳ್ಳಲಾಗಿದೆ. ತಮ್ಮ ಮಠದಲ್ಲಿ ಈ ಕೆಲಸ ಸಾಧ್ಯವಾಗದಿದ್ದಾಗ ಬೇರೆ ಮಠಗಳಿಗೆ ಇಲ್ಲವೇ ಸಂಸ್ಥೆಗಳಿಗೆ ಅಥವಾ

---

೨೪. ಡಾ. ಸಂಗಮೇಶ ಸವದತ್ತಿ ಮಠ: ವೀರಶೈವ ವಿನ್ಯಾಸ: ಪುಟ ೧೩.

ವಿಶ್ವವಿದ್ಯಾಲಯಗಳಿಗೆ, ಹಿರಿಯ ವಿದ್ವಾಂಸರಿಗೆ ಅವುಗಳನ್ನು ನೀಡಿರುವರು. ಇವಲ್ಲದೇ ಮಠದಲ್ಲಿಯ ಭಿತ್ತಿ ಚಿತ್ರಗಳು, ಸಚಿತ್ರ ಹಸ್ತಪ್ರತಿಗಳು, ಚಿತ್ರ ಶಿಲ್ಪ, ವಾಸ್ತು ಶಿಲ್ಪ ಇತ್ಯಾದಿಗಳನ್ನೆಲ್ಲ ಅಧ್ಯಯನಕ್ಕೆ ಒದಗಿಸಿರುವರು.

**ಚಿತ್ರಕಲೆಯ ನೆಲೆ ಹಿನ್ನೆಲೆ:**

ಮಾನವನ ಆಧ್ಯಾತ್ಮಿಕ ಜೀವನದಲ್ಲಿ ರಸಗಳ ಅವಶ್ಯಕತೆಯನ್ನು ಗ್ರಹಿಸಿದ ಆಗಮ ಉಪನಿಷತ್ತುಗಳು ಅವುಗಳಿಗೆ ದೈವತ್ವದ ಸ್ಥಾನವನ್ನು ಕೊಟ್ಟಿವೆ. ಭಾರತೀಯರ ಜೀವನದ ಎಲ್ಲಾ ಆವಿಷ್ಕಾರಗಳಲ್ಲಿಯೂ ಆಧ್ಯಾತ್ಮ ಹಾಸುಹೊಕ್ಕಾಗಿ ಸೇರಿಕೊಂಡಿದೆ. ಲಲಿತಕಲೆಗಳು ಈ ನಿಯಮದಿಂದ ದೂರವಾಗಿಲ್ಲ. "ಭಾರತೀಯ ಶಿಲ್ಪ, ವಾಸ್ತು ಶಿಲ್ಪ, ಸಂಗೀತ, ಚಿತ್ರಕಲೆ, ಭಾರತೀಯರ ಆಧ್ಯಾತ್ಮಿಕ ಜೀವನದ ಹೊರಮುಖಗಳಾಗಿವೆಯೆಂದು ನಾವು ನಿಸ್ಸಂಕೋಚವಾಗಿ ಹೇಳಬಹುದು. ಭಾರತೀಯರ ಜೀವನ ವಿಕಾಸವಾದಂತೆ ಭಾರತೀಯರ ಲಲಿತ ಕಲೆಗಳು ವಿಕಾಸವಾದುದನ್ನು ನಾವು ನೋಡಬಹುದು.

ಪಾಶ್ಚಾತ್ಯರು – ಪ್ರಕೃತಿಯ ಪ್ರತಿಕೃತಿ ಹಾಗೂ ಸಮಕಾಲೀನ ಪರಿಸ್ಥಿತಿಯ ಪ್ರತಿಬಿಂಬವೇ ಕಲೆಯೆಂದು ತಿಳಿದಿರುವರು. ಈ ದೃಷ್ಟಿಯನ್ನು ಭಾರತೀಯರು ಒಪ್ಪುವುದಿಲ್ಲ. "ಭಾರತೀಯ ಕಲಾವಿದರು" – ಜೀವನವನ್ನು ಹಸನು ಮಾಡುವುದಕ್ಕೆ, ಕ್ಷೋಭೆಯನ್ನು ನಿವಾರಿಸಿ ಶಾಂತಿ ಸ್ಥಾಪಿಸುವುದಕ್ಕೆ, ಮಾನವನಿಗೆ ಸ್ವಸ್ವರೂಪ ಜ್ಞಾನವನ್ನುಂಟು ಮಾಡಿಕೊಡುವುದಕ್ಕೆ, ಜೀವನವನ್ನು ಕಲ್ಮಶಗೊಳಿಸುತ್ತಿದ್ದ. ಅರಿಷಡ್ವರ್ಗಗಳ ಉಪಟಳ ತೊಲಗಿಸುವುದಕ್ಕೆ, ಭಾರತೀಯ ಕಲಾವಿದರು ಪ್ರಯತ್ನಿಸಿದರು. "ಭಾರತೀಯ ಕಲಾವಿದ ಕೇವಲ ಅನುಕರಣಪ್ರಿಯನಾಗದೇ, ಚೇತೋಹಾರಿ ಜೀವನದ ಸೃಷ್ಟಿಕರ್ತನೂ, ಸಮ್ಯಕ್ ಜೀವನದ ವ್ಯಾಖ್ಯಾತನೂ ಆದ. ಪ್ರಕೃತಿಯ ಹೊರಮೈಗೆ ಬೆರಗಾಗಿ ಅದರ ಪ್ರತಿ ಮಾಡುವುದಕ್ಕಿಂತ, ಪ್ರಕೃತಿಯ ಸುಪ್ತರಹಸ್ಯಗಳನ್ನು ಭೇದಿಸಿ, ಜೀವನದ ನಿರಂತರ ಬೆಳವಣಿಗೆಗೆ ಅದರಿಂದ ಯಾವ ಬಗೆಯಲ್ಲಿ ಶಕ್ತಿ ಮತ್ತು ಸ್ಫೂರ್ತಿಯನ್ನು ಪಡೆಯಬಹುದೆಂಬುದನ್ನು ತಿಳಿದಿದ್ದು, ಭಾರತೀಯರ ಜೀವನದಲ್ಲಿ ಕಲಾವಿದ ಕೇವಲ ಬಿಂಬಗ್ರಾಹಿಯಲ್ಲ: ಅವನು ದಾರ್ಶನಿಕನೂ ಗುರುವೂ ಆಗಿದ್ದಾನೆ."[೨೫]

ವೈದಿಕ, ಶೈವ, ವೀರಶೈವ, ಬೌದ್ಧ ಜೈನವನ್ನು ಪ್ರತಿಪಾದಿಸುವ ಶಿಲ್ಪ, ವಾಸ್ತುಶಿಲ್ಪ, ಚಿತ್ರಗಳ ಮಹೋನ್ನತಿಯು ಗಾಂಧಾರ, ಸಾಂಚಿ, ಅಮರಾವತಿಗಳಲ್ಲದೇ ದಕ್ಷಿಣದ ವಿಂಧ್ಯಪರ್ವತದಲ್ಲಿರುವ ಅಜಂತಾ, ಚಾಲುಕ್ಯ, ರಾಷ್ಟ್ರಕೂಟ ಮತ್ತು ಚೋಳ, ಹೊಯ್ಸಳ, ವಿಜಯನಗರಗಳಲ್ಲಿ ಹಾಗೂ ವಿಜಯನಗರೋತ್ತರಗಳಲ್ಲಿಯೂ ಕಂಡುಬರುತ್ತದೆ. ಜೀವನ ಭವ್ಯತೆಯ ಆರಾಧನೆ, ಸತ್ಯಾನುಷ್ಠಾನದ ಬಗ್ಗೆ ಅಚಲವಾದ ಶ್ರದ್ಧೆ, ಪರೋಕ್ಷ ಜೀವನದ ಬಗ್ಗೆ ಕೌತುಕ ಮತ್ತು ಕುತೂಹಲ ಈ ಕಾಲದ ಎಲ್ಲ ಲಲಿತ ಕಲೆಗಳಲ್ಲಿಯೂ ಮೂರ್ತೀಭವಿಸಿದೆ. ಜೀವನದ ಸರ್ವತೋಮುಖ ಅಭಿವೃದ್ಧಿಯನ್ನು ಗುರಿಯಾಗಿಟ್ಟುಕೊಂಡಿರುವ ಭಾರತೀಯ ಚಿತ್ರಕಲೆಯು ಜಾನಪದ ಮತ್ತು ಶಿಷ್ಟಪದವೆಂದು ಎರಡು ರೀತಿಯಲ್ಲಿ ಬೆಳೆದು ಬಂದರೂ ಅವು ಮೂಲಭೂತ ಆಧ್ಯಾತ್ಮಿಕ ದೃಷ್ಟಿಯನ್ನು ಬಿಡಲಿಲ್ಲ. ಭಾರತೀಯ

---

೨೫. ಸಂ. ಡಿ.ವಿ.ಜಿ.: ಸಂಸ್ಕೃತಿ: ಲೇಖನ: ಸಂಸ್ಕೃತಿ ಮತ್ತು ಲಲಿತಕಲೆಗಳು: ಅ.ನ.ಕೃಷ್ಣರಾಯ್: ಪುಟ ೭೮.

ಚಿತ್ರಕಲೆಗಳು ಹೊಸ ಹೊಸ ಆವಿಷ್ಕಾರಗಳನ್ನು ತನ್ನ ವಿರಾಟ್ ಗರ್ಭದಲ್ಲಿ ಅಡಗಿಸಿಕೊಳ್ಳುತ್ತಾ ಬಂದಿತು. ಭಾರತೀಯ ಸಂಸ್ಕೃತಿ ವೈವೀಧ್ಯಪೂರ್ಣವಾಗಿದ್ದರೂ ಒಂದೇ ಉದ್ದೇಶವನ್ನು ಹೊಂದಿರುವುದನ್ನು ಕಾಣಬಹುದಾಗಿದೆ.

ಭಾರತೀಯ ಸಂಸ್ಕೃತಿಗೆ ತೀರ ಭಿನ್ನವಾದ ಇಸ್ಲಾಂ ಸಂಸ್ಕೃತಿ ಭಾರತವನ್ನು ಪ್ರವೇಶಿಸಿದಾಗ, ಭಾರತೀಯ ಸಂಸ್ಕೃತಿಯ ಅಸ್ತಿತ್ವವೇ ನಾಮಾವಶೇಷವಾಗಬೇಕಿತ್ತು. ಮಧ್ಯಪ್ರಾಚ್ಯ ರಾಷ್ಟ್ರಗಳನ್ನು ಇಸ್ಲಾಂ ಕಬಳಿಸಿದಂತೆ ಭಾರತವನ್ನು ಕಬಳಿಸಬೇಕಾಗಿತ್ತು. ಆದರೆ ಈ ಕಾಲದಲ್ಲಿ ಭಾರತ ತನ್ನ ವೈಶಿಷ್ಟ್ಯವನ್ನು ಕಾಯ್ದುಕೊಂಡಿತು. ದಕ್ಷಿಣ ಭಾರತದ ಶಿಲ್ಪ ಚಿತ್ರಕಲೆಗಳು ಮುಸ್ಲಿಂ ಸಂಸ್ಕೃತಿಗೆ ವಶವಾಗಲಿಲ್ಲ. ಮುಸ್ಲಿಂರ ರಾಜಕೀಯ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಪ್ರಭಾವವನ್ನು ವಿಜಯನಗರ ಸಾಮ್ರಾಜ್ಯವು ಎದುರಿಸಿ, ಅಪ್ಪಟ ಹಿಂದೂರಾಷ್ಟ್ರದ ಸಂಸ್ಕೃತಿಯನ್ನೇ ಪರಿಪೋಷಿಸಿಕೊಂಡು ಬಂದಿತು. ದಕ್ಷಿಣ ಭಾರತದ ಸಂಗೀತ, ಶಿಲ್ಪ, ವಾಸ್ತು ಶಿಲ್ಪ, ಚಿತ್ರಗಳ ಮೇಲೆ ಇಸ್ಲಾಂ ಯಾವ ಪ್ರಭಾವವನ್ನೂ ಬೀರಲು ಸಾದ್ಯವಾಗಲಿಲ್ಲ. ವಿಜಯನಗರ ಸಾಮ್ರಾಜ್ಯ ಪತನಾನಂತರದ ದಿನಗಳಲ್ಲಿ ಸುಲ್ತಾನರ ಪ್ರಾಬಲ್ಯ ಹೆಚ್ಚಾದಂತೆ, ದಕ್ಷಿಣ ಭಾರತವನ್ನೆಲ್ಲಾ ಆವರಿಸಿದ ವಿಜಯನಗರ ಹಿಂದೂ ಸಂಸ್ಕೃತಿಯ ಕಲೆಯೊಂದಿಗೆ ಮುಸ್ಲಿಮರ ಪರ್ಷಿಯನ್ ಶೈಲಿಯು ಮಿಶ್ರಣಗೊಂಡು "ದಖ್ಖನ್" ಕಲೆಯಾಗಿ ಮಾರ್ಪಟ್ಟಿತು. ಉತ್ತರದಲ್ಲಿ "ಮೊಘಲ್‌ಕಲೆಯು ಬೆಳವಣಿಗೆ ಹೊಂದಿತು. ಆದಾಗ್ಯೂ ಭಾರತ ತನ್ನ ವೈಶಿಷ್ಟ್ಯವನ್ನು ಕಾಯ್ದುಕೊಂಡಿತು. ವೈದಿಕ ಧರ್ಮಗಳ ವೈಶಿಷ್ಟ್ಯಗಳಿಂದ ವಸ್ತುಗಳನ್ನು ಆಯ್ದುಕೊಂಡು ಚಿತ್ರಗಳನ್ನು ಬರೆದ ಉಸ್ತಾದ್ ಮನ್ಸೂರ್, ಫಾರೂಕ್, ಅಬ್ದುಲ್, ಸಮದ್, ಸೈಯದ್ ಅಲಿ, ಹಿಂದೂ ಸಂಸ್ಕೃತಿಯ ಉತ್ಕಟಾಭಿಮಾನಿಯಾಗಿದ್ದ ಮೊಘಲ್ ದೊರೆ ಅಕ್ಬರ್ – ವೇದೋಪನಿಷತ್ತುಗಳನ್ನು ನಿತ್ಯ ಪಾರಾಯಣ ಮಾಡುತ್ತಿದ್ದನು"[೨೬] ಎಂಬುದು ವಿಶೇಷವಾಗಿದೆ.

೧೫ನೇ ಶತಮಾನದಲ್ಲಿ ಮುಸ್ಲಿಂ ಸಂಸ್ಕೃತಿಯನ್ನು ವಿರೋಧಿಸಿ ಪುನರುಜ್ಜೀವನಗೊಂಡ "ಉದ್ಧರಣಿಗಳು" ವೀರಶೈವ ಸಿದ್ಧಾಂತ ಮತ್ತು ತತ್ವಗಳನ್ನು ಪ್ರತಿಪಾದಿಸುವ ಚಿತ್ರ ಮತ್ತು ಸಾಹಿತ್ಯಗಳೊಡನೆ ಉತ್ಕೃಷ್ಟವಾಗಿ ಬೆಳೆದು ಬಂದಿರುವುದು ವಿಶೇಷವಾಗಿದೆ.

ಹದಿನಾರನೆಯ ಶತಮಾನದ ಪೂರ್ವದಲ್ಲಿ ಭಾರತೀಯರು ಭೋಗವನ್ನು ನಿರಾಕರಿಸಲಿಲ್ಲವಾದರೂ ಅದಕ್ಕೆ ಅನವಶ್ಯಕ ಪ್ರಾಧಾನ್ಯ ಕೊಟ್ಟಿರಲಿಲ್ಲ, ಆ ಕಾಲದ ಶಿಲ್ಪಚಿತ್ರ, ಸಂಗೀತಗಳು ತ್ಯಾಗ, ವೈರಾಗ್ಯಗಳನ್ನೇ ಹೆಚ್ಚಾಗಿ ಪ್ರತಿಪಾದಿಸಿವೆ. ಹದಿನಾರನೆಯ ಶತಮಾನದ ತರುವಾಯ ಶಿಲ್ಪ ಚಿತ್ರಗಳಲ್ಲಿ ಭೋಗಕ್ಕೆ ಪ್ರಾಧಾನ್ಯ ದೊರೆತಿದೆ. ಸುಲ್ತಾನ್ ಮತ್ತು ಮೊಘಲ್ ಸಂಸ್ಕೃತಿಯ ಪ್ರಭಾವ ಸಮಕಾಲೀನ ಕಲಾಕೃತಿಗಳಲ್ಲಿ ಎದ್ದು ಕಾಣುತ್ತದೆ. ಹದಿನೇಳು ಮತ್ತು ಹದಿನೆಂಟನೆಯ ಶತಮಾನದಲ್ಲಿ ಹುಟ್ಟಿಕೊಂಡಿದ್ದ "ಕಾಂಗ್ರಾ ಅಥವಾ ಪಹರಿಕಲಂ" ಭಾರತೀಯ ಸಂಸ್ಕೃತಿಯ ವಿಶಿಷ್ಟಗುಣಗಳನ್ನು ರಕ್ಷಿಸುವ ಪ್ರ ಯತ್ನ ಮಾಡಿದವು. ದೈಹಿಕ ಸೌಂದರ್ಯವನ್ನು ಅಂಗೀಕರಿಸಿದ

---

೨೬. ಸಂ. ಡಿ.ಪಿ.ಜಿ.: ಸಂಸ್ಕೃತಿ: ಲೇಖನ: ಸಂಸ್ಕೃತಿ ಮತ್ತು ಲಲಿತಕಲೆಗಳು: ಅ.ನ.ಕೃಷ್ಣರಾಯ್: ಪುಟ ೮೦.

ಪಹರಿ ಕಲಮ್. ಮೊಘಲ್ ಚಿತ್ರಕಾರರಂತೆ ಅದನ್ನು ಕೇವಲ ರಾಜ–ರಾಣಿಯರ ವಿಲಾಸಕ್ಕೆ ಮಾತ್ರ ಬಳಸದೇ. ರಾಧಾ–ಕೃಷ್ಣರ ನಿರ್ಮಲ ಪ್ರೇಮವನ್ನು ಚಿತ್ರಿಸಿತು. ದೇಹಸೌಂದರ್ಯ ಅದರ ಆರಾಧನೆ. ಪಾಪಸಂಕೇತವೆಂಬ ಭಾವನೆಯನ್ನು ಪಹರಿ ಚಿತ್ರಕಾರರು ಒಪ್ಪುತ್ತಿರಲಿಲ್ಲ. ಸಚ್ಚಿದಾನಂದ ಸ್ವರೂಪನಾದ ಭಗವಂತ ಆನಂದಮಯನಾಗಿದ್ದಾನೆ. ಭಗವದಾನಂದವು, ದೈಹಿಕ ಮತ್ತು ಮಾನಸಿಕ ಎರಡು ರೂಪದಲ್ಲಿಯೂ ಅಭಿವ್ಯಕ್ತವಾಗುತ್ತದೆ ಎಂಬುದು ಪಹರಿ ಚಿತ್ರಕಲಾವಿದರ ವಾದವಾಗಿತ್ತು. ಈ ಚಿತ್ರಕಲೆ ನಿರ್ದೇಶಿಸಿದ ಈ ಉಚ್ಚವರ್ಗದ ಸೌಂದರ್ಯೋಪಾಸನೆ, ಸಮಕಾಲೀನ ಕಾವ್ಯ ಸಾಹಿತ್ಯಗಳ ಮೇಲೂ ಪ್ರತಿಧ್ವನಿಸಿತು. ಇದರಿಂದಾಗಿ ಹೊರಗಿನವರ ಪ್ರಭಾವಕ್ಕೆ ಮನಸೋಲದ ಭಾರತೀಯ ಶಿಲ್ಪ ಚಿತ್ರಕಲೆಗಳು ಈವರೆಗೂ ಮುಂದುವರೆದುಕೊಂಡು ಬಂದಿವೆ.

ಹದಿನೆಂಟನೆಯ ಶತಮಾನದಲ್ಲಿ ಕಡಲಾಚೆಯಿಂದ ಪಾಶ್ಚಾತ್ಯ ಸಂಸ್ಕೃತಿಯು ಭಾರತಕ್ಕೆ ಬಂದಿತು. ಅವರಲ್ಲಿ ಬೆಳೆದಿದ್ದ ಯಾಂತ್ರಿಕ ನಾಗರಿಕತೆ ಭಾರತಕ್ಕೂ ಕಾಲಿಟ್ಟಿತು. "ಯಂತ್ರ ಯುಗದ ನಾಗರಿಕತೆಯ ಗುರಿ ಶಾಂತಿಯಾಗಿರಲಿಲ್ಲ: ಅಶಾಂತಿಯಾಗಿತ್ತು. ಅದು ಮನಸ್ಸನ್ನು ಅರಳಿಸಲು ಹವಣಿಸಲಿಲ್ಲ: ಕೆರಳಿಸಲು ಹವಣಿಸಿತು. ಮಾನವನಲ್ಲಿ ನಿಸರ್ಗಜನ್ಯವಾಗಿದ್ದ ನಂಬಿಕೆಗಳನ್ನು ಬಲಪಡಿಸಲೆತ್ನಿಸಲಿಲ್ಲ: ಅಪನಂಬಿಕೆಗಳನ್ನು ಹುಟ್ಟಿಸಲೆತ್ನಿಸಿತು. ಪ್ರಾಪಂಚಿಕ ಜೀವನಕ್ಕೆ ಯಂತ್ರಯುಗವಿತ್ತ ಪ್ರಾಧಾನ್ಯ ಎಂದರೆ – ಎರಡು ಮಹಾಯುದ್ಧಗಳಿಗೂ ಅಟಂಬಾಂಬ್‌ನಂತಹ ಪ್ರಳಯಾಯುಧದ ನಿರ್ಮಾಣಕ್ಕೂ ಕಾರಣವಾಯಿತು. ಈ ಯಂತ್ರಜೀವನ ಹಾಗೂ ಭೋಗದ ಪರಾಕಾಷ್ಠೆಯ ದೆಸೆಯಿಂದ ಪಾಶ್ಚಾತ್ಯ ಜಗತ್ತನ್ನು ಪ್ರಳಯದ ಮಡಿಲಿಗೆ ಹಾಕಿದವು. ಪಾಶ್ಚಾತ್ಯರ ಈ ನಾಗರಿಕತೆಯ ಪ್ರಭಾವವನ್ನು ಸಮಕಾಲೀನ ಭಾರತೀಯರ ಜೀವನ ಮತ್ತು ಲಲಿತ ಕಲೆಗಳ ಮೇಲೆ ಸ್ಪಷ್ಟವಾಗಿ ನಾವು ಕಾಣಬಹುದಾಗಿದೆ."[೨೭] ಉದಾಹರಣೆಗಾಗಿ, ನಾಟಕದ ಸ್ಥಾನಕ್ಕೆ ಬಂದಿರುವ ಸಿನೇಮಾಗಳು, ಭಾರತೀಯ ಶಾಸ್ತ್ರೀಯ ಸಂಗೀತವನ್ನು ಭ್ರಷ್ಟವನ್ನಾಗಿಸಲು ಸಿನೇಮಾ, ಜಾಜ್ ಮತ್ತು ಪಾಪ್ ಸಂಗೀತಗಳು, ಸಿಮೆಂಟ್ ಮನೆಗಳು, ಮನೆಗಳನ್ನು ಅಲಂಕರಿಸಲು ಬಂದ ಪ್ಲಾಸ್ಟಿಕ್ ವಸ್ತುಗಳು, ಗಾಜಿನ ಕೊಳವೆ, ತೋರಣಗಳು, ಚಿತ್ರಕಲಾವಿದ ರಾಜಾ ರವಿವರ್ಮನ ಲಕ್ಷ್ಮಿ, ಸರಸ್ವತಿ, ತಿಲೋತ್ತಮೆಯರ ಚಿತ್ರಗಳು ನಮ್ಮ ಅವನತಿಯ ಸಂಕೇತಗಳಾಗಿವೆ. ಅಸ್ಥಿರ ಮನಸ್ಥಿತಿಯ ಪ್ರತೀಕಗಳಾಗಿವೆ.

ಆಂಗ್ಲರ ಒಂದೂವರೆ ಶತಮಾನಗಳ ಪ್ರಭುತ್ವ ಭಾರತೀಯ ಲಲಿತಕಲೆಗಳನ್ನು ಅಲ್ಲೋಲ ಕಲ್ಲೋಲ ಮಾಡಿಬಿಟ್ಟಿತು. ಸಾವಿರಾರು ವರ್ಷಗಳಿಂದ ಬೆಳೆದು ಬಂದಿದ್ದ ಸಂಪ್ರದಾಯ ಮತ್ತು ಸಂಸ್ಕೃತಿಯಲ್ಲಿ ಭಾರತೀಯರು ನಂಬಿಕೆ ಕಳೆದುಕೊಂಡಿದ್ದರು: ಹೊಸದಾಗಿ ಬಂದಿದ್ದ ವಿಲಾಸಯುತ ಸಂಪ್ರದಾಯವನ್ನು ಸಂಪೂರ್ಣವಾಗಿ ಜೀರ್ಣಿಸಿಕೊಳ್ಳಲೂ ಆಗದೇ, ಅಸಮರ್ಥರಾಗಿ ತ್ರಿಶಂಕು ಸ್ಥಿತಿಯಲ್ಲಿ ಭಾರತೀಯರು ಸಿಕ್ಕು ತೊಳಲಾಡುತ್ತಿರುವಾಗ,

---

೨೭. ಸಂ. ಡಿ.ವಿ.ಜಿ.: ಸಂಸ್ಕೃತಿ: ಲೇಖನ: ಸಂಸ್ಕೃತಿ ಮತ್ತು ಲಲಿತಕಲೆಗಳು: ಅ.ನ.ಕೃಷ್ಣರಾಯ್: ಪುಟ ೮೨.

ಭಾರತೀಯ ಲಲಿತಕಲೆಗಳ ಅಮರತ್ವವನ್ನು ಪುನರುಜ್ಜೀವನಗೊಳಿಸಿದವರು ಬಾಬೂ ಅವನೀಂದ್ರನಾಥ್ ಠಾಗೋರ್ ಅವರು. ಅವರಿಗೆ ಬೆನ್ನೆಲುಬಾಗಿ ನಿಂತವರು ಶ್ರೀ ಇ.ಬಿ.ಹ್ಯಾವೆಲ್ ಮತ್ತು ಡಾ. ಆನಂದ ಕುಮಾರಸ್ವಾಮಿಯವರು. ಅಜಂತಾ ಎಲ್ಲೋರಾ ಬದಾಮಿ ಸಿತ್ತನ್‌ವಾಸಲ್ ಬಾಘ್ ಗುಹಾಂತರ ದೇವಾಲಯಗಳ ಸಂಪ್ರದಾಯಗಳು ಪಹರಿ ಜಯಪೂರ ಕಲಂ ಹಾಗೂ ಮೊಘಲ್ ಸಂಪ್ರದಾಯಗಳ ಕಡೆಗೂ ಚಿತ್ರಕಾರರ ಲಕ್ಷಸೆಳೆದು, ಪ್ರಾಚೀನ ಅರ್ವಾಚೀನಗಳಿಗೆ ಅವನೀಂದ್ರನಾಥರು ಸೇತುವೆ ಕಟ್ಟಿದರು. ಪ್ರಾಚೀನ ಪರಿಶುದ್ಧತೆಯನ್ನು ಉಳಿಸಿಕೊಂಡು ಆಧುನಿಕ ಚಿತ್ರಕಾರರು ಅವುಗಳನ್ನು ಆಧುನಿಕ ಅವಶ್ಯಕತೆಗಳಿಗೆ ಹೊಂದಿಸಿಕೊಳ್ಳಬಹುದಾದ ಮಾರ್ಗವನ್ನು ಅವನೀಂದ್ರನಾಥರು ತೋರಿಸಿಕೊಟ್ಟರು.

ಹದಿನೆಂಟನೆಯ ಶತಮಾನದ ನಂತರ ಈವರೆಗೂ ಭಾರತದಲ್ಲಿ ಪಟ್ಟಣಗಳ ಕೃತಕನಾಗರಿಕತೆಯ ಬೆಳವಣಿಗೆಯಿಂದಾಗಿ ಪಟ್ಟಣಗಳಿಗೂ ಹಳ್ಳಿಗಳಿಗೂ ವಿಶೇಷ ಅಂತರವೇರ್ಪಟ್ಟಿತು. ಪಟ್ಟಣಗಳ ಅಭಿರುಚಿಗೆ ತಕ್ಕಂತೆ ಚಿತ್ರ. ಸಂಗೀತ ವಾಸ್ತುಶಿಲ್ಪ ಸಾಹಿತ್ಯಗಳು ಬೆಳೆದಂತೆ, ಹಳ್ಳಿಗಳಲ್ಲಿಯೂ ವಿಶಿಷ್ಟವಾದ ಚಿತ್ರ, ಸಂಗೀತ, ವಾಸ್ತುಶಿಲ್ಪ, ಸಾಹಿತ್ಯಗಳು ಬೆಳೆದವು. ರಜಪೂತ ಸಂಪ್ರದಾಯದ ಬುಡಕಟ್ಟಿಗೆ ಸೇರಿದ ಚಿತ್ರಕಲೆಯು ಪಟ್ಟಣಗಳನ್ನು ಸೇರಿ "ಜಯಪುರ ಕಲಂ" ಆಗಿದ್ದು: ಹಳ್ಳಿಗಳನ್ನು ಸೇರಿ "ಪಹರಿ ಕಲಂ" ಆಗಿ ಬೆಳೆದು ಬಂದಿದ್ದು ಗಮನಾರ್ಹವಾಗಿದೆ.

ಈ.ಬಿ.ಹ್ಯಾವೆಲ್, ಡಾ. ಆನಂದಕುಮಾರಸ್ವಾಮಿ ಅವರ ಮಾರ್ಗದರ್ಶನ ಮತ್ತು ಅವನೀಂದ್ರನಾಥ ಠಾಗೋರ್ ಅವರ ನೇತೃತ್ವದಲ್ಲಿ ನಂದಲಾಲ್ ಭೋಸ್, ಗಗನೇಂದ್ರನಾಥ ಠಾಗೋರ, ಮುಜುಮ್‌ಧಾರ್ ಹಾಲ್ದಾರ್, ಕೆ.ವೆಂಕಟಪ್ಪ ಮುಂತಾದ ಕಲಾವಿದರು ಪಟ್ಟಣಗಳ ಕಲೆಯಿಂದ ಹೆಚ್ಚಾಗಿ ಸ್ಫೂರ್ತಿ ಪಡೆದು ಚಿತ್ರಕಲೆಯ ಪುನರುಜ್ಜೀವನಕ್ಕೆ ಕಾರಣರಾದರೆ, ಜ್ಯಾಮಿನಿ ರಾಯ್ ಅಮೃತಾ ಶೇರ್‌ಗಿಲ್ ಅವರು ಹಳ್ಳಿಗರ ಚಿತ್ರಕಲೆಯಿಂದ ಸ್ಫೂರ್ತಿ ಪಡೆದು ಕಲೆಯ ಪುನರುಜ್ಜೀವನಕ್ಕೆ ಕಾರಣರಾದರು.

"ಯಾಂತ್ರಿಕ ನಾಗರಿಕತೆಯಲ್ಲಿ ಪಾಶ್ಚಾತ್ಯರು ದೊರಕಿಸಿಕೊಂಡ ಸಿದ್ಧಿಗಿಂತಲೂ. ಶ್ರೇಷ್ಠವಾದ ಸಿದ್ಧಿಯನ್ನು ಭಾರತೀಯರು ಆಧ್ಯಾತ್ಮದಲ್ಲಿ ದೊರಕಿಸಿಕೊಂಡಿರುವರು". ತಮ್ಮ ಗಳಿಕೆಯನ್ನು ತಿರಸ್ಕರಿಸಿ ಪಾಶ್ಚಾತ್ಯ ನಾಗರಿಕತೆಯ ಮೃಗಜಲದ ಬೆನ್ನಟ್ಟುವುದರಿಂದ ಭಾರತದ ಉತ್ಕರ್ಷ ಸಾಧಿಸುವುದಿಲ್ಲ. ಪಾಶ್ಚಾತ್ಯರ ಮಾನಸ ಪುತ್ರತ್ವವನ್ನು ಅಂಗೀಕರಿಸಿ, ಭಾರತ ಸ್ವಧರ್ಮ ನೀಗಿಸಿಕೊಂಡು ಪರಧರ್ಮಕ್ಕೆ ಆಧೀನವಾದರೆ, ತನಗೂ ಲೋಕಕ್ಕೂ ನಿಷ್ಪ್ರಯೋಜಕವಾಗುತ್ತದೆ.

**ಭಾರತೀಯರ ಲಲಿತಕಲೆಗಳ ಪ್ರೇರಕಶಕ್ತಿಯ ಸೂತ್ರಗಳು:**

೧) ಭಾರತೀಯರ ಜೀವನದಲ್ಲಿ ಆಧ್ಯಾತ್ಮಕ್ಕೆ ವಿಶಿಷ್ಟ ಸ್ಥಾನವಿದೆ. ಜಗತ್ತಿನ ಯಾವ ರಾಷ್ಟ್ರವೂ ಭಾರತದಂತೆ ಆಧ್ಯಾತ್ಮಕ್ಕೆ ಈ ಸ್ಥಾನವನ್ನಿತ್ತಿಲ್ಲ.

೨) ಭಾರತೀಯ ಸಾಹಿತ್ಯ ಲಲಿತಕಲೆಗಳು ಭಾರತದ ಆಧ್ಯಾತ್ಮಿಕ ಸಿದ್ದಿಯ ಪ್ರತೀಕಗಳಾಗಿವೆ.

೩) ಭಾರತೀಯ ಲಲಿತಕಲೆಗಳು "ಜೀವಶಿವರ"ಲ್ಲಿರುವ ಅಂತರವನ್ನು ಹೋಗಲಾಡಿಸಿ, ಜೀವವನ್ನು ಶಿವನನ್ನಾಗಿ ಮಾರ್ಪಡಿಸುವ ಪ್ರಯತ್ನ ನಡೆಸಿದೆ.

೪) ಭಾರತೀಯ ಲಲಿತಕಲೆಗಳು ಅನೇಕತ್ವವನ್ನು ನಿರಾಕರಿಸದಿದ್ದರೂ, ಅವುಗಳನ್ನು ಕಟ್ಟಿಕೂಡಿಸುವ ಏಕಸೂತ್ರಕ್ಕೆ ಪ್ರಾಧಾನ್ಯ ಕೊಟ್ಟಿದೆ.

೫) ಭಾರತೀಯರ ಲಲಿತ ಕಲೆಗಳು ಶಾಂತಿದಾಯಕ ಮತ್ತು ಇಹ ಜೀವನವನ್ನು ರಾಗದ್ವೇಷ ರಹಿತವನ್ನಾಗಿ ಮಾಡುವುದೇ ಅವುಗಳ ಗುರಿಯಾಗಿದೆ.

೬) ಭಾರತೀಯ ಲಲಿತಕಲೆಗಳು ವರ್ಗ, ಜಾತಿ, ಮತ, ರಾಷ್ಟ್ರಗಳ ಸೊತ್ತಲ್ಲ, ಅವು ವಿಶ್ವದ ಮಹಾನಿಧಿ. ಅವುಗಳ ಪರಮಗುರಿ ಲೋಕಕಲ್ಯಾಣವೇ ವಿನಾ ಜಾತಿ, ಮತ, ವರ್ಗಗಳ ಕಲ್ಯಾಣವಲ್ಲ.[೨೮]

ಭಾರತೀಯ ಲಲಿತಕಲೆಗಳು ಪರಂಪರಾಗತ ಸಂಪ್ರದಾಯದ ಭದ್ರಬುನಾದಿಯ ಮೇಲೆ ಬೆಳೆಯಬೇಕಾದುದು ಅತ್ಯಾವಶ್ಯಕ, ಕ್ರಿಯಾಶಾಲಿಯಾದ ಕಲಾವಿದನ ಪ್ರತಿಭಾ ವಿಲಾಸಕ್ಕೆ ಸಂಪ್ರದಾಯ ಅಡ್ಡಿಯನ್ನೊದಗಿಸಿಲ್ಲ. ಸಾವಿರಾರು ವರುಷಗಳಿಂದ ಯಾವ ನಿತ್ಯ ತತ್ವಗಳನ್ನು ಹಿರಿಯರು ಆರಾಧಿಸಿಕೊಂಡು ಬಂದರೋ ಆ ತತ್ವ ಸಮರ್ಥನೆಯನ್ನಷ್ಟೇ ಸಂಪ್ರದಾಯ ಬಯಸುವುದು. "ತತ್ವ ಸಮರ್ಥನೆಯಲ್ಲಿ ಕ್ರಿಯಾಶಾಲಿಯಾದ ಕಲಾವಿದ ಸ್ವತಂತ್ರ ಮಾರ್ಗ ನಿರ್ದೇಶಿಸಿದರೆ ಸಂಪ್ರದಾಯ ಬೇಡವೆನ್ನುವುದಿಲ್ಲ. ಜಗತ್ತಿನ ಹಿತವನ್ನೇ ಗುರಿಯಾಗಿಟ್ಟುಕೊಂಡು ಸಹಸ್ರಾರು ವರುಷಗಳ ಸಾಮಾಜಿಕ, ರಾಜಕೀಯ, ಧಾರ್ಮಿಕ ವಿಚಾರಕ್ರಾಂತಿಯನ್ನು ಮೈಗೂಡಿಸಿಕೊಂಡು ಬೆಳೆದು ಬಂದಿರುವ ಭಾರತೀಯ ಲಲಿತಕಲೆಗಳು ಭಾರತಕ್ಕಾಗಿ, ವಿಶ್ವಕ್ಕಾಗಿ ಬದುಕಬೇಕು, ಬಾಳಬೇಕು ಬೆಳಗಬೇಕು"[೨೯] ಎನ್ನುವ ಶ್ರೀ ಅ.ನ.ಕೃಷ್ಣರಾಯರ ಮಾತುಗಳು ಅತ್ಯಂತ ಮಾರ್ಮಿಕವಾಗಿವೆ.

**ವೀರಶೈವ ಹಸ್ತಪ್ರತಿಚಿತ್ರ ಮತ್ತು ಭಿತ್ತಿಚಿತ್ರಗಳಿರುವ ನೆಲೆಗಳು:**

ಭಾರತೀಯ ಮೂಲನಿವಾಸಿಗಳಾದ ವ್ರಾತ್ಯರು ನೆಲೆಸಿರುವ ಸಿಂಧೂಕೊಳ್ಳದಿಂದಲೇ ಅಂದರೆ ಹರಪ್ಪ ಮತ್ತು ಮೊಹೆಂಜೋದಾರೋದಲ್ಲಿ ದೊರೆತಿರುವ ಶೈವ ಮತ್ತು ವೀರಶೈವ ಚಿತ್ರಶಿಲ್ಪಗಳಾದ ಹಲವು ಬಗೆಯ ಶಿವಲಿಂಗಗಳು ನಂದಿ, ಸಪ್ತ ಮಾತೃಕಾ ದೇವತೆಗಳು, ಪುರುಷ ದೇವತೆಗಳಾದ ಶಿವ, ಪಶುಪತಿ, ಯೋಗಿ, ಗುರುವಿನ ಭಾವಚಿತ್ರ ಮತ್ತು ಶಿಲ್ಪಗಳು[೩೦] ದೇವಾಲಯ ಅವುಗಳಗೋಡೆ, ಮುಚ್ಚಿಗೆಯಲ್ಲಿ ಬೆಳೆದು ಬಂದ ಭಿತ್ತಿಚಿತ್ರಗಳು ಇರುವ ಕುರಿತು ಶಾಸನೋಲ್ಲೇಖಗಳು ಹೀಗಿವೆ– ಹಾಸನ ತಾಲೂಕಿನ ಜಕ್ಕನ ಹಳ್ಳಿಯಲ್ಲಿರುವ ಕಾಳೇಶ್ವರ ದೇವಾಲಯದ ಮಾಳಿಗೆ ಗೋಡೆ ಹಾಗೂ ಕಂಬಗಳನ್ನು ಒಂದನೆ ಬಲ್ಲಾಳ ಹೆಗ್ಗಡೆ ಕಾಳಿಮಯ್ಯನು

---

೨೮. ಸಂ. ಡಿ.ವಿ.ಜಿ.: ಸಂಸ್ಕೃತಿ: ಲೇಖನ: ಸಂಸ್ಕೃತಿ ಮತ್ತು ಲಲಿತಕಲೆಗಳು: ಅ.ನ.ಕೃಷ್ಣರಾಯ್: ಪುಟ ೮೫.
೨೯. ಸಂ. ಡಿ.ವಿ.ಜಿ.: ಸಂಸ್ಕೃತಿ: ಲೇಖನ: ಸಂಸ್ಕೃತಿ ಮತ್ತು ಲಲಿತಕಲೆಗಳು: ಅ.ನ.ಕೃಷ್ಣರಾಯ್: ಪುಟ ೮೬.
೩೦. Henrich Zimmer: - The Art of Indian Asia: Volume No. 11.

ಚಿತ್ರ ರಚನೆ ಮಾಡಿಸಿ ಅಲಂಕರಿಸಿದ್ದಾನೆ.[೩೧] ಗದುಗಿನ ತ್ರಿಕೂಟೇಶ್ವರ ದೇವಾಲಯದ ಸಂಕೀರ್ಣದಲ್ಲಿಯ ಸರಸ್ವತಿ ಗುಡಿಯ ಗೋಡೆಯ ಮೇಲೆ ಇರುವ ಶಾಸನವು, ಅಲ್ಲಿನ ಸ್ಥಾನಾಚಾರ್ಯನಾಗಿದ್ದ ಕ್ರಿಯಾಶಕ್ತಿ ಪಂಡಿತ ಅನೇಕ ಚಿತ್ರ ಶಾಸ್ತ್ರಾದಿ ಪಂಡಿತನಾಗಿದ್ದನೆಂದು ಹೇಳುತ್ತದೆ.[೩೨] ಕ್ರಿ.ಶ. ೧೦೮೨ರ ಕುರ್ತುಕೋಟಿಯ ಶಾಸನ ತುರಿಕೆರೆ ಪಟ್ಟಣದ ಕಂಟದಬೊಮ್ಮನ ಮಗನಾದ ಅಯ್ಯಣ ವಿಶ್ವಕರ್ಮನಿಗೂ ಮಿಗಿಲೆಂದು ಭೂತಳ ಕೊಂಡಾಡುತ್ತಿತ್ತೆಂದು ವರ್ಣಿಸುತ್ತದೆ.[೩೩] ಕೃಷ್ಣರಾಜ ಪೇಟೆಯ ಮಾಳಗುಂದದ ಕ್ರಿ.ಶ. ೧೧೧೬ರ ಶಾಸನವು ದೇವರ ಪ್ರತಿಷ್ಠೆ ಮಾಡಿಸಿದ ಹೊಯ್ಸಳಾಚಾರಿ ಕುಲದವರ ವಿಭಿನ್ನ ಕಲಾ ಸಾಧನೆಯನ್ನು ಸ್ವಸ್ತಿ ಸಮಸ್ತ ಪ್ರಶಸ್ತಿ ಸಹಿತರಪ್ಪ ಶ್ರೀ ಮನುಮಯ ವಿಶ್ವಕರ್ಮ ತೋಟಕಾಚಾರ್ಯರಪ್ಪ ಹಸ್ತಕುಶಲತೆಯೊಳು ಹೇಮಕರ್ಮ ಲೋಹ ಕರ್ಮ ಶಿಲಾಕರ್ಮ, ರತ್ನಕರ್ಮ, ಕಾಷ್ಠಕರ್ಮ, ಚಿತ್ರಕರ್ಮ, ಪತ್ರಕರ್ಮ, ಪ್ರತಿಮಾ ಲಕ್ಷಣ ಸಮಸ್ತ ಹಸ್ತಕುಶಲತೆಯುಳ್ಳ ವಿಶ್ವಕರ್ಮ ನಿರ್ಮಿತಪ್ಪ ಗವರಾಚಾರ್ಯನಾತನ ಪುತ್ರ.... ಎಂದು ಮುಂತಾಗಿ ಬಣ್ಣಿಸುತ್ತದೆ.[೩೪] ಹೀಗೆ ಭಿತ್ತಿಚಿತ್ರಗಳ ಉಲ್ಲೇಖವಿದೆ.

ಚಾಲುಕ್ಯರ ಬಾದಾಮಿಯಲ್ಲಿ, ರಾಷ್ಟ್ರಕೂಟರ ಎಲ್ಲೋರಾದಲ್ಲಿ, ಚೋಳರು, ವಿಜಯನಗರದ ಹಂಪೆಯ ವಿರೂಪಾಕ್ಷ ದೇವಾಲಯ, ವಿಜಯನಗರೋತ್ತರವಾದ ಸುರಪುರದ ರುದ್ರಾಕ್ಷಿಮಠ, ಅಣ್ಣಪ್ಪಯ್ಯನಮಠ, ಧಾರವಾಡದ ಅಮ್ಮಿನಭಾವಿ ಪಂಚಗ್ರಹಮಠ, ನವಲಗುಂದದ ಪಂಚಗ್ರಹಮಠ, ನಿಪ್ಪಾಣಿಕರ್‌ವಾಡೆ, ಬಿ.ಕೆ.ಹಳ್ಳಿ, ಮಹಾಲಿಂಗಪುರ ತುಮಕೂರು ಜಿಲ್ಲೆಯ ಶಿಬಿ, ಶಿರಾದ ದೇವಾಲಯಗಳು, ರಂಗಮ್‌ಪೇಟೆ, ಹಿರಿಯೂರು ಹೀಗೆ ವೀರಶೈವ ಪರಂಪರೆಯ ಭಿತ್ತಿಚಿತ್ರಗಳು ಇರುವ ನೆಲೆಗಳಾಗಿವೆ.

ಹಸ್ತಪ್ರತಿಗಳಲ್ಲಿ ಚಿತ್ರಕಲೆಯನ್ನೇ ಕುರಿತು ಹೇಳುವ ಶಾಸ್ತ್ರಗ್ರಂಥಗಳು ಎರಡು ರೀತಿಯಲ್ಲಿ ಸಿಗುತ್ತವೆ. ಅವು ಚಿತ್ರ ಪ್ರಧಾನ ಶಾಸ್ತ್ರಗ್ರಂಥಗಳು ಮತ್ತು ಪ್ರಾಸಂಗಿಕ ಚಿತ್ರ ಶಾಸ್ತ್ರಗ್ರಂಥಗಳು. ಅಭಿಲಷಿತಾರ್ಥ ಚಿಂತಾಮಣಿ, ಶಿವತತ್ವರತ್ನಾಕರ, ಸಕೀಲಗಳು, ರಾಘವಾಂಕ ಚರಿತೆ, ಶಬರಶಂಕರ ವಿಳಾಸ, ಸಿದ್ದಲಿಂಗೇಶ್ವರ ಪುರಾಣ, ಸೌಗಂಧಿಕಾ ಪರಿಣಯ, ಕರಣಹಸಿಗೆ, ಚನ್ನಬಸವಪುರಾಣ, ಬಸವಪುರಾಣಗಳಲ್ಲಿ ಪ್ರಾಸಂಗಿಕ ಚಿತ್ರಗಳು ಇದ್ದರೆ, ಚಿತ್ರಕಲೆಯನ್ನೇ ಪ್ರಧಾನವಾಗಿಟ್ಟುಕೊಂಡು ರಚನೆಗೊಂಡ ಸಚಿತ್ರಹಸ್ತಪ್ರತಿಗಳು "ವೃಷಭೇಂದ್ರ ವಿಳಾಸ" ಶಿವಾನುಭವ ಸಾಹಿತ್ಯ, ಶಿವನಿಧಿ, ಉದ್ಧರಣಿ ಪಟಲ, ಉದ್ಧರಣಿ ಸಾಹಿತ್ಯಗಳು ವೀರಶೈವ ತತ್ವಗಳನ್ನೇ ಪ್ರಮುಖವಾಗಿಟ್ಟುಕೊಂಡು ರಚನೆಗೊಂಡಿವೆ.

ಬದಾಮಿಯ ಶಿವಯೋಗ ಮಂದಿರ, ಧರ್ಮಸ್ಥಳ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಗುಲಬುರ್ಗಾ ವಿಶ್ವವಿದ್ಯಾಲಯ, ಮೈಸೂರು ವಿಶ್ವವಿದ್ಯಾಲಯ, ಮೈಸೂರಿನ

೩೧. ಬಿ.ವಿ.ಕೆ.ಶಾಸ್ತ್ರಿ: ಕರ್ನಾಟಕದ ಭಿತ್ತಿಚಿತ್ರಗಳು: ಪುಟ. ೪

೩೨. ಸುಧಾ: ೩೦ ಸಪ್ಟೆಂಬರ್ ೧೯೭೯: ಗದುಗಿನ ಸರಸ್ವತಿ ದೇವಾಲಯದ ಶಿಲ್ಪ ಕ್ರಿಯಾಶಕ್ತಿ: ಪುಟ. ೧೬, ೧೭.

೩೩. ಡಾ. ಎಂ.ಎಂ.ಕಲಬುರ್ಗಿ: ಶಾಸನ ವ್ಯಾಸಂಗ ೧: ಪುಟ ೫೨.


೩೪. ಡಾ. ಎಂ.ಎಂ.ಕಲಬುರ್ಗಿ: ಶಾಸನ ವ್ಯಾಸಂಗ ೧: ಪುಟ ೫೪.

ಓರಿಯಂಟಲ್ ಲೈಬ್ರಿ, ಬೆಂಗಳೂರು ವಿಶ್ವವಿದ್ಯಾಲಯಗಳ ಹಸ್ತಪ್ರತಿ ಭಂಡಾರಗಳು, ಗದಗದ ತೋಂಟದಾರ್ಯಮಠ, ಹುಬ್ಬಳ್ಳಿಯ ಮೂರುಸಾವಿರಮಠ, ಮೈಸೂರಿನ ಸುತ್ತೂರು ಮಠ, ಬೆಳಗಾವಿಯ ನಾಗನೂರುಮಠಗಳಲ್ಲಿ ವೀರಶೈವ ಹಸ್ತಪ್ರತಿ ಚಿತ್ರಗಳನ್ನು ಸಂಗ್ರಹಿಸಿರುವರು.

ಭಾರತೀಯ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸುವಲ್ಲಿ ವೀರಶೈವ ಧರ್ಮ ಮತ್ತು ಲಲಿತಕಲೆಗಳು, ಅದರಲ್ಲೂ ಚಿತ್ರಕಲೆ ವಹಿಸಿದ ಪಾತ್ರ ತುಂಬಾ ಮೌಲಿಕವಾದುದು. ಪ್ರಸ್ತುತ ಈ ದಿಸೆಯಲ್ಲಿ ಅಧ್ಯಯನ ಕೈಗೊಳ್ಳಲಾಗಿದೆ.

## ಅಧ್ಯಾಯ : ಮೂರು

# ಕರ್ನಾಟಕದ ವೀರಶೈವ ಹಸ್ತಪ್ರತಿ ಚಿತ್ರಕಲೆ



## ಅಧ್ಯಾಯ : ಮೂರು

# ಕರ್ನಾಟಕದ ವೀರಶೈವ ಹಸ್ತಪ್ರತಿ ಚಿತ್ರಕಲೆ

ತನ್ನ ಭಾವನೆಗಳನ್ನು ಮಾತುಗಳ ಮುಖಾಂತರ ಹೊರ ಹಾಕಿದಾಗ ಆ ಮಾತುಗಳು ಚಿರಂತನವಾಗಿ ಉಳಿಯಬೇಕೆಂಬ ಆಕಾಂಕ್ಷೆಯಿಂದಾಗಿ ಅದಕ್ಕೆ ಲಿಪಿರಕ್ಷೆಯನ್ನು ಕೊಡಲಾಯಿತು. ಅದೇ ಬರಹ, ಬರವಣಿಗೆಯಾಗಿ ಕಾಲದುದ್ದಕ್ಕೂ ಬೇರೆ ಬೇರೆ ಉದ್ದೇಶವನ್ನು ಮತ್ತು ಬೇರೆ ಬೇರೆ ಮಾಧ್ಯಮವನ್ನು ಆಶ್ರಯಿಸಿ ಪ್ರಕಟಗೊಂಡು ಭಿನ್ನ ಭಿನ್ನ ಹೆಸರುಗಳಿಂದ ಗುರುತಿಸಲ್ಪಟ್ಟಿದೆ. ಕಲ್ಲಿನ ಮೇಲೆ ಕೆತ್ತಿದ ಬರಹ ಶಾಸನ, ತಾಳೆಗರಿ ಕಾಗದಗಳ ಮೇಲೆ ಬರೆಯಲಾದುದು ಗ್ರಂಥ ಅಥವಾ ಹೊತ್ತಿಗೆ, ತೆಳುವಾದ ತಾಮ್ರದ ತಗಡಿನ ಮೇಲೆ ಬರೆದುದು ಯಂತ್ರಗಳೆಂದು ಇತ್ಯಾದಿ. ಮೂಲತಃ ಇವೆಲ್ಲ ಬರಹಗಳೇ ಆಗಿದ್ದರೂ ಲೇಖನದ ಉದ್ದೇಶ ಮತ್ತು ಲೇಖನ ಸಾಮಗ್ರಿಗಳ ಭಿನ್ನತೆಗಳು ಈ ಬೇರೆ ಬೇರೆ ಹೆಸರುಗಳಿಗೆ ಕಾರಣವಾದುದನ್ನು ಹಾಗೂ ವೈವಿಧ್ಯಪೂರ್ಣ ಲೇಖನರಾಶಿಗೆ "ಹಸ್ತಪ್ರತಿ"ಗಳೆಂದು ನಾವು ಕರೆಯುತ್ತಿದ್ದೇವೆ.

ಯುರೋಪ್ ದೇಶಗಳಲ್ಲಿ "ಕೈ ಬರಹದ" ಅರ್ಥ "Manuscript" ರೂಢಿಗೆ ಬರಲು ಕೈಬರಹವಲ್ಲದ ಇನ್ನೊಂದು ಪದ್ಧತಿ ಅಸ್ತಿತ್ವಕ್ಕೆ ಬಂದಿದ್ದು ಆ ಇನ್ನೊಂದು ಬರಹ ಪದ್ಧತಿ ಎಂದರೆ "ಯಂತ್ರಗಳ ಮೂಲಕ ಬರಹವನ್ನು ಬಳಕೆಗೆ ತಂದು"ದರ ಹಿನ್ನೆಲೆಯಲ್ಲಿ Manuscript ಎಂದಾಗಿದೆ.

ಬ್ರಿಟಾನಿಕಾ ವಿಶ್ವಕೋಶವು ಬರಹಗಳೆಲ್ಲವನ್ನು "ದಾಖಲೆಗಳು (Documents)" ಎಂದು ಒಟ್ಟಾಗಿ ಗ್ರಹಿಸಿದೆ. ಯಾವುದೇ ಒಂದು ಸಂಗತಿಯನ್ನು ನಿವೇದಿಸಲು ಅಥವಾ ದಾಖಲುಗೊಳಿಸಲು ಶಾಶ್ವತವಾದ ಮತ್ತು ಬಿರುಸಾದ ಸಾಮಗ್ರಿಗಳ ಮೇಲೆ ಕೆತ್ತಿರುವುದನ್ನು ಶಾಸನವೆಂದು" ವಿವರಿಸಿದರೆ, "ಮೃದುವಾದ ಸಮತಲದ ಪಪಿರಸ್, ಹದವಾಡಿದ ಚರ್ಮದ ಕಾಗದ ಮತ್ತು ಕಾಗದ ಇತ್ಯಾದಿ ಸಾಮಗ್ರಿಗಳ ಮೇಲೆ ವರ್ಣವನ್ನುಪಯೋಗಿಸಿಕೊಂಡು ಲೇಖನಿ, ಗಲಗಿನಿಂದ ಇಲ್ಲವೇ ಕುಂಚದಿಂದ ಬರೆಯಲಾದವುಗಳನ್ನು ಹಸ್ತಪ್ರತಿ" ಗಳೆಂದು ಗುರುತಿಸಿ "ಇವು ಶಾಸನಗಳಿಗಿಂತ ಭಿನ್ನವಾದವುಗಳು" ಎನ್ನುತ್ತದೆ.[೧]

ಹಸ್ತಪ್ರತಿಗಳ ಚರಿತ್ರೆಯನ್ನು ಬರೆಯುವವರು ಕರ್ನಲ್ ಕೋಲಿನ್ ಮೆಕೆಂಝಿಯನ್‌ನ ಕುರಿತು ವಿವರಿಸದೇ ಮುಂದುವರೆಯುವಂತಿಲ್ಲ. ಇವನು ಸ್ಕಾಟ್‌ಲೆಂಡಿಗೆ ಹೊಂದಿಕೊಂಡಂತಿರುವ "ಲೀವೀಸ್" ಎಂಬ ದ್ವೀಪದಲ್ಲಿ ಜನಿಸಿದನು. ಇವನು ಭಾರತಕ್ಕೆ ಬಂದದ್ದು ನಮ್ಮ ರಾಷ್ಟ್ರದ ಮೋಜಣಿದಾರನಾಗಿ. ಆದರೆ ಆ ಮಣಿಹವನ್ನು ಮಾಡುವುದರ ಜೊತೆಗೆ ಭಾರತೀಯ ಸಂಸ್ಕೃತಿಯ ಮೋಜಣಿಯನ್ನು ಮಾಡಿದನು. ಹದಿಮೂರು ಭಾಷೆಯ ಹಸ್ತಪ್ರತಿಗಳು, ಶಾಸನಗಳು, ಸ್ಥಳಪುರಾಣ, ಕೈಫಿಯತ್, ಬಖೈರ್, ರಾಜವಂಶಗಳ ಚರಿತ್ರೆ, ಚಿತ್ರಗಳು, ನಕ್ಷೆಗಳು,

---

೧. ವಿವರವಾದ ಮಾಹಿತಿಗೆ ನೋಡಿ: Britanica Encycolopeadia: Vol. 12: Page-277..

ಚಿನ್ನ, ಬೆಳ್ಳಿ, ತಾಮ್ರದ ನಾಣ್ಯಗಳು, ವಿವಿಧ ಬಗೆಯ ಲೋಹದ ಮೂರ್ತಿಗಳು ಮುಂತಾದ ಪ್ರಾಚೀನ ವಸ್ತುಗಳನ್ನು ಸಂಗ್ರಹಿಸಿದನು. ಭಾರತೀಯ ಸಂಸ್ಕೃತಿಗೆ ಮಾರು ಹೋಗಿದ್ದ ಈತನು ಸುಮಾರು ೧೫೦ ಕ್ಕೂ ಹೆಚ್ಚು ಕನ್ನಡ ಹಸ್ತಪ್ರತಿಗಳನ್ನು ಸಂಗ್ರಹಿಸಿದನೆಂಬುದಾಗಿ ತಿಳಿದುಬರುತ್ತದೆ.[೨]

ತಾಳೆಯ ಮರದಿಂದ ತಾಳೆಯ ಗರಿ, ತಾಳೆಯ ಓಲೆ, ತಾಡವಾಲೆ ಪತ್ರ ಹೀಗೆ ಅನೇಕ ಹೆಸರುಗಳಿಂದ ಗುರುತಿಸುತ್ತಿದ್ದು, ಇದರಲ್ಲಿ "ತಾಳೆ" ಮತ್ತು "ಶ್ರೀ ತಾಳೆ"ಯೆಂಬ ಎರಡು ಬಗೆಯ ತಾಳೆಯ ಗರಿಗಳನ್ನು ಸೂಕ್ತ ಕಾಲದಲ್ಲಿ ಬಿಡಿಸಿಕೊಂಡು ಬಂದು, ಹದಗೊಳಿಸಿ ಬರವಣಿಗೆಗಾಗಿ ಉಪಯೋಗಿಸುತ್ತಿದ್ದರು. ಶ್ರೀ ತಾಳೆಯು ತಾಳೆಗಿಂತ ಹೆಚ್ಚು ಉಪಯುಕ್ತವಾದುದು. ಇದು ಹೆಚ್ಚು ವಿಶಾಲವಾಗಿ (ಉದ್ದ+ಅಗಲ) ಇರುವುದರಿಂದ ಇದರ ಬಳಕೆಯನ್ನು ಹೆಚ್ಚಾಗಿ ಮಾಡಿರುವರು. ಶ್ರೀ ತಾಳೆಯು ಕರ್ನಾಟಕ, ಕೇರಳ, ತಮಿಳುನಾಡು, ಕಡಲ ತೀರಗಳಲ್ಲಿ ವಿಶೇಷವಾಗಿ ಬೆಳೆಯಲಾಗುತ್ತದೆ. ದಕ್ಷಿಣ ಭಾರತದಲ್ಲಷ್ಟೆ ಅಲ್ಲ, ಉತ್ತರ ಭಾರತದ ಗುಜರಾತ ಮತ್ತು ಪಂಜಾಬ ಪ್ರದೇಶಗಳಲ್ಲಿಯೂ ಬೆಳೆಯಲಾಗುತ್ತದೆ.

ಸಿದ್ಧಗೊಂಡ ಓಲೆಗಳ ಮೇಲೆ ಡಬ್ಬಣದಂತಹ ಕಂಠದಿಂದ ಅಕ್ಷರಗಳನ್ನು ಕೊರೆದು ಮನೆ ತುಂಬುವದೂ, ನೂರಾರು ಓಲೆಗಳನ್ನು ಜೋಡಿಸಿ ಕೆಳಗೊಂದು ಮೇಲೆ ಒಂದು ಹಲಗೆಯನ್ನಿಟ್ಟುಕೊಂಡು ದಾರದಿಂದ ಕಟ್ಟುವುದೂ ಒಂದು ಕಲೆ. ದಾರಗಳನ್ನು ಪೋಣಿಸುವುದಕ್ಕಾಗಿ ಓಲೆಗರಿಗಳಲ್ಲಿ ಸಮಾನಾಂತರವಾಗಿ ರಂಧ್ರ ಮಾಡಲಾಗುತ್ತದೆ. ಇಂತಹ ಕಟ್ಟುಗಳಿಗೆ "ಓಲೆಯ ಕಟ್ಟು" ಅಥವಾ "ರಕ್ಷಾ ಕವಚ" ಎಂದು ಕರೆಯುವ ವಾಡಿಕೆ ಇದೆ. ಈ ಓಲೆಯ ಪ್ರತಿಗಳು ಬರಹದೊಂದಿಗೆ ರೇಖಾಚಿತ್ರಗಳು ವರ್ಣಚಿತ್ರಗಳು ನಕ್ಷಾಚಿತ್ರಗಳನ್ನು ಒಳಗೊಂಡಿರುತ್ತವೆ. ಇವುಗಳನ್ನು ಹಿಂದಿನ ಕಾಲದಲ್ಲಿ "ಸಾಲಿಮಠಗಳಲ್ಲಿ ತಾಳೆಪತ್ರಗಳನ್ನು ಬರವಣಿಗೆಗೆ ಸಿದ್ಧಗೊಳಿಸುವುದನ್ನು ಇತರ ಕಾಯಕಗಳೊಂದಿಗೆ ಹೇಳಿಕೊಡುತ್ತಿದ್ದರು"[೩] ಎಂಬುದಾಗಿ ತಿಳಿದು ಬರುತ್ತದೆ. ಲೇಖನಯೋಗ್ಯವಾದ ಫಲಕಗಳನ್ನು ಮಾಡಿ ಮಾರಾಟ ಮಾಡುವುದೂ ಪ್ರಾಚೀನ ಕಾಲದಲ್ಲಿ ಒಂದು ಕಾಯಕವಾಗಿತ್ತು. "ನಿಜಲಿಂಗ ಚಿಕ್ಕಯ್ಯ" ಎಂಬ ವಚನಕಾರನು ಓಲೆಗಳನ್ನು ತಯಾರಿಸಿಕೊಂಡು ಅವುಗಳನ್ನು ಊರೂರು ತಿರುಗಿ ಮಾರುವ ಕಾಯಕ ಮಾಡುತ್ತಿದ್ದನು. ಲಕ್ಕಣ್ಣ ದಂಡೇಶನು "ಶಿವತತ್ವ ಚಿಂತಾಮಣಿ"ಯ ನೂತನ ಶರಣರ ಸುದೀರ್ಘ ಪಟ್ಟಿಯಲ್ಲಿ ಓಲೆಯ ಕಾಯಕದವರನೇಕರು ಸೇರಿದ್ದಾರೆ. ಓಲೆಯ ಪುಸ್ತಕಗಳು ಒಳ್ಳೆಯ ಕಾಗದದ ಹಸ್ತಪ್ರತಿಗಳಿಗಿಂತ ಹೆಚ್ಚು ಕಾಲ ಬಾಳಿಕೆ ಬರುತ್ತವೆ ಎಂದೂ ಹೇಳಲಾಗುತ್ತದೆ.

ಪ್ರಾಚೀನ ಕರ್ನಾಟಕದಲ್ಲಿ ಹಿರೇಮಠ, ಸಾಲಿಮಠ, ಮಂದಿರ, ಬಸದಿ, ಭವನ ಚಿತ್ರ, ಮಹಾಮನೆ, ಅರಮನೆಗಳಲ್ಲಿ ಅನ್ನದಾಸೋಹವಲ್ಲದೇ ಜ್ಞಾನದಾಸೋಹವೂ ನಡೆಯುತ್ತಿತ್ತು. ಇದರ ಜೊತೆಗೆ ಗ್ರಂಥದಾನ ಕಾರ್ಯವೂ ನಡೆಯುತ್ತಿತ್ತೆಂದು ತಿಳಿದು ಬರುತ್ತದೆ. ಗ್ರಂಥದಾನ ಮಾಡುವುದು ಅನ್ನದಾನದಷ್ಟೇ ಪುಣ್ಯ ಕಾರ್ಯವೆಂಬ ನಂಬಿಕೆ ನಮ್ಮ ಪೂರ್ವಜರಲ್ಲಿ ರೂಢಮೂಲವಾಗಿದ್ದಿತು.

---

೨. ಅಜ್ಜೀಬಳ ರಾ.ಗ. : ಕರ್ನಲ್ ಮೆಕೆಂಜಿ : ಪುಟ ೧೮ : ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.
೩. ಡಾ. ಬಿ.ಕೆ.ಹಿರೇಮಠ : ಕನ್ನಡ ಹಸ್ತಪ್ರತಿಗಳು : ಒಂದು ಅಧ್ಯಯನ : ಪುಟ ೪೬.

ಕನ್ನಡದ ಮಟ್ಟಿಗೆ ಹೇಳುವುದಾದರೆ ಡಾ. ಎಂ.ಎಂ.ಕಲಬುರ್ಗಿಯವರು ತಮ್ಮ "ಹಸ್ತಪ್ರತಿಗಳು": ಅದರ ವಿವಿಧ ಮುಖಗಳು" ಎಂಬ ಲೇಖನದಲ್ಲಿ ಇನ್ನುಳಿದ ಬರಹದ ದಾಖಲೆಗಳಿಂದ ಹಸ್ತಪ್ರತಿಗಳನ್ನು ಬಿಡಿಸಿ ತೋರಿಸುವ ಮೊದಲ ಪ್ರಯತ್ನ ಮಾಡಿರುವರು. ಹಸ್ತಪ್ರತಿಯೆಂದರೇನು? ಎಂಬ ಪ್ರಶ್ನೆಯನ್ನೆತ್ತಿ "ತಲೆಮಾರಿನಿಂದ ತಲೆಮಾರಿಗೆ ಸಾಗಿ ಬಂದ ಭೌತಿಕ ಮತ್ತು ಸಾಂಸ್ಕೃತಿಕ ಜ್ಞಾನ ಸಂಪತ್ತು, ಒಂದು ಕಾಲಕ್ಕೆ ಶ್ರುತಿಪಾತಳಿಯಿಂದ ಲಿಪಿ ಮಾಧ್ಯಮದ ಮೂಲಕ ಕೃತಿಪಾತಳಿಗೆ ಇಳಿದು ಬಂದಿತು. ಮುಂದೆ ಈ ಕೃತಿಸಾಹಿತ್ಯ ಅಲ್ಪ ಕಾಲದಲ್ಲಿ ಅಳಿದು ಹೋಗುವ ಬಹುಕಾಲ ಉಳಿದು ನಿಲ್ಲುವ ವರ್ಗದಲ್ಲಿಯೇ ಶಿಲೆ, ಸುಟ್ಟ ಮಣ್ಣು, ಲೋಹಫಲಕಗಳಂಥ ಭಾರವಾದ ವಸ್ತು ವಲ್ಲದ ವಸ್ತ್ರ ಪಟ, ವೃಕ್ಷ ಪತ್ರ, ಕಾಗದಗಳಂಥ ಹಗುರ ವಸ್ತುಗಳ ಮೇಲೆ ಬರೆದ ಕೈ ಬರಹಗಳು ಮಾತ್ರ ಹಸ್ತಪ್ರತಿಗಳ ವರ್ಗದಲ್ಲಿ ಸೇರುತ್ತವೆ."[೪] ಎಂದು ಹಸ್ತಪ್ರತಿ ವ್ಯಾಖ್ಯೆಯ ಸ್ವರೂಪದ ಸುಳಿವನ್ನು ನೀಡಿರುವರು.

ಡಾ. ಬಿ.ಕೆ.ಹಿರೇಮಠ ಅವರು "ಭಾರವಲ್ಲದ ಲೇಖ್ಯ ವಸ್ತುವಿನ ಮೇಲೆ ಕೈಯಿಂದ ಬರೆದ ಜೀವನಾವಶ್ಯಕ ಜ್ಞಾನ ಪ್ರಧಾನವಾದ ಕೃತಿ ಮತ್ತು ಅದರ ಪ್ರತಿಕೃತಿಗಳೇ ಹಸ್ತಪ್ರತಿಗಳು"[೫] ಎಂದು ವ್ಯಾಖ್ಯಾನಿಸಿರುವರು. ಈ ಮೇಲಿನ ವಿವರಣೆಗಳಿಂದ ಹಸ್ತಪ್ರತಿಗಳ ಅರ್ಥ ಮತ್ತು ಸ್ವರೂಪವನ್ನು ತಿಳಿಯಬಹುದಾಗಿದ್ದು ಈ ಹಸ್ತಪ್ರತಿಗಳ ಕಥಾ ವಸ್ತುವಿಗೆ ಸಂಬಂಧಿಸಿದ ಮತ್ತು ಸನ್ನಿವೇಶಕ್ಕನುಗುಣವಾಗಿ ಚಿತ್ರಿಸಲಾದ ಚಿತ್ರಗಳಿಗೆ "ಹಸ್ತಪ್ರತಿ ಚಿತ್ರ"ಗಳೆಂದು ಕರೆಯಬಹುದಾಗಿದೆ.

ಕಲೆ ಮತ್ತು ಸಾಹಿತ್ಯಗಳು ಮಾನವನ ಬದುಕಿನ ಸಾಧನೆಯ ಎರಡು ಉನ್ನತ ಶಿಖರಗಳು ಕಲೆಯು ಜೀವ ವಿಕಾಸದಲ್ಲಿ ಮಾನವನೊಂದಿಗೆ ಇದ್ದು, ಅವನೊಂದಿಗೆ ಬೆಳೆದು ಬಂದಿದೆ. ಕಾಲಘಟ್ಟದ ಅಂತರದಲ್ಲಿ ಬರುವ ಸಾಹಿತ್ಯವು ವಿಕಸಿತ ಮಾನವನ ಬುದ್ಧಿಜನ್ಯವಾದುದಾಗಿದೆ. ಕಲೆ ಮತ್ತು ಸಾಹಿತ್ಯಗಳು ಮೂಲದಲ್ಲಿ ವಿಭಿನ್ನ ಕ್ಷೇತ್ರಗಳಾಗಿ ಕಂಡರೂ ಆಂತರ್ಯದಲ್ಲಿ ಅವು ಅವಿಚ್ಛಿನ್ನವಾಗಿ ಭಾವಾಭಿವ್ಯಕ್ತಿಯ ಮಾಧ್ಯಮದ ನೆಲೆಗಳಾಗಿವೆ.

ಇತಿಹಾಸದಾಚೆಯ ಮಾನವನ ಬದುಕು, ಹೋರಾಟ, ಉಳಿಯುವಿಕೆಯ ಸಂಕಲ್ಪಗಳು ಅಭಿವ್ಯಕ್ತಿಗೊಂಡು ಮಾಧ್ಯಮವಾಗಿ ಬೆಳೆದು ಬಂದಿದ್ದು ಚಿತ್ರಕಲೆಯಾದರೆ, ಇತಿಹಾಸದ ಕಾಲಘಟ್ಟದಲ್ಲಿ ದೇಶೀಯ ಬದುಕಿನಲ್ಲಿ ಟಂಕಿಸಿದ ಪದಗಳ ಗಡಿಯಲ್ಲಿ ಬೆಳೆದಿರುವುದು ಸಾಹಿತ್ಯವಾಗುತ್ತದೆ. ಈ ಕಾಲಘಟ್ಟಗಳ ಅಂತರವನ್ನು ಮೀರಿ ಒಂದೆಡೆಯಲ್ಲಿ ಸಂಗಮಿಸಿರುವ ಚಿತ್ರಕಲೆ ಸಾಹಿತ್ಯದ ಜೊತೆ ಜೊತೆಯಲ್ಲಿ ಸಹಜವಾಗಿ ಬೆಳೆದು ಬಂದಿದೆ. ನಮ್ಮ ಪ್ರಾಚೀನ ಹಸ್ತಪ್ರತಿಗಳು ಇದಕ್ಕೆ ನಿದರ್ಶನವಾಗಿವೆ. ಹಸ್ತಪ್ರತಿ ಗಳಲ್ಲಿ ಚಿತ್ರ ಮತ್ತು ಸಾಹಿತ್ಯಗಳು ಒಂದೆಡೆ ಇರುವ ಹಸ್ತಪ್ರತಿಗಳನ್ನು "ಹಸ್ತಪ್ರತಿ ಚಿತ್ರ ಕಲೆ ಇಲ್ಲವೇ ಸಚಿತ್ರ ಪ್ರತಿಗಳು" ಎಂದು ಕರೆಯುತ್ತೇವೆ. ಪ್ರಾಚೀನ ಕಾಲದ ಪುರಾಣ, ಕಾವ್ಯಗಳ ಕಥಾವಸ್ತುವಿನ ಸನ್ನಿವೇಶಗಳಿಗೆ ಸಂಬಂಧಿಸಿದಂತೆ, ಚಿತ್ರಗಳನ್ನು ಬರೆಯಿಸಿ ಮೂಲಗ್ರಂಥಕ್ಕೆ

---

೪. ಡಾ. ಎಂ.ಎಂ.ಕಲಬುರ್ಗಿ: ಹಸ್ತಪ್ರತಿ ಶಾಸ್ತ್ರ : ಲೇಖನ: ಹಸ್ತಪ್ರತಿಗಳು: ಅದರ ವಿವಿಧ ಮುಖಗಳು : ಪುಟ ೨೫

೫. ಡಾ. ಬಿ.ಕೆ.ಹಿರೇಮಠ: ಕನ್ನಡ ಹಸ್ತಪ್ರತಿಗಳು: ಒಂದು ಅಧ್ಯಯನ : ಪುಟ ೧೦.

ಸೇರಿಸಲಾಗಿದೆ. ಹೀಗೆ ಗ್ರಂಥದ ಕಥಾವಸ್ತುವಿಗೆ ಸಂಬಂಧಪಟ್ಟಂತೆ ರಚನೆಗೊಂಡ ಚಿತ್ರಗಳೂ ಸಹ ಹಸ್ತಪ್ರತಿ ಚಿತ್ರಕಲೆಯ ವ್ಯಾಪ್ತಿಗೆ ಒಳಪಡುತ್ತವೆ. ಈ ರೀತಿಯ ಚಿತ್ರಿತ ಹಸ್ತಪ್ರತಿಗಳಲ್ಲಿ ಸಾಹಿತ್ಯ ಮತ್ತು ಚಿತ್ರಕಲೆ ಎರಡೂ ಸರಿಸಮನಾಗಿ ಗುರುತಿಸಲ್ಪಡುತ್ತವೆ.

ಇಂದಿನ ಆಧುನಿಕ ಮಾನವನ ನಾಗರಿಕ ಮತ್ತು ಸಾಂಸ್ಕೃತಿಕ ಜೀವನದಲ್ಲೂ ಕಲೆ ಮತ್ತು ಸಾಹಿತ್ಯಗಳು, ಒಂದರೊಳಗೊಂದು ಬೆಳೆದು ಹೆಣೆದುಕೊಂಡಿರುವಂತೆ ಒಂದು ಮತ್ತೊಂದನ್ನು ಅಭಿವ್ಯಕ್ತಿಗಾಗಿ ಆಶ್ರಯಿಸಿಕೊಂಡಿದೆ. ಧ್ವನಿ ಮತ್ತು ಲಿಪಿಮಾಧ್ಯಮಗಳ ಮುಖಾಂತರ ಕಲ್ಪಿತ ಪದಗಳ ಮಿತಿಯಲ್ಲಿ ಸಾಹಿತ್ಯವು ಆಯಾ ದೇಶೀಯ ನೆಲೆಗಳಲ್ಲಿ ತನ್ನ ಆಶಯಗಳನ್ನು, ಭಾವನೆಗಳನ್ನು ಬಿತ್ತರಿಸುತ್ತಿದ್ದರೆ ಚಿತ್ರಕಲೆಯು ದೇಶೀಯ ಮತ್ತು ಅನ್ಯ ದೇಶೀಯ ಸೀಮಿತ ಶಬ್ದಕೋಶಗಳ ಗಡಿಯನ್ನು ಮತ್ತು ಇತಿಹಾಸದ ಕಾಲಮಾನವನ್ನು ದಾಟಿಕೊಂಡು ತನ್ನ ಆಶಯಗಳನ್ನು ಸಮುದಾಯಕ್ಕೆ ಬಿತ್ತರಿಸಬಲ್ಲುದಾಗಿದೆ. "ಸಾಹಿತ್ಯದ ಕೃತಿಯೊಂದನ್ನು ಆಯಾ ದೇಶೀಯ ಭಾಷಿಕ ಪದಕೋಶಗಳ ಮುಖಾಂತರ ಅಧ್ಯಯನ ಮಾಡಬಹುದು. ಆದರೆ ಅದರಂತೆ ಪಾರಿಭಾಷಿಕ ಶಬ್ದಕೋಶಗಳ ಮಿತಿಯಲ್ಲಿ ನಾವು ಆ ದೇಶೀಯ ಕಲಾಕೃತಿಗಳನ್ನು ಆಗಲಿ ಅಥವಾ ಕಲಾಕೃತಿಗಳೊಳಗಿನ ರಸಾನುಭೂತಿಯನ್ನಾಗಲಿ, ಆಂತರಿಕ ತುಡಿತವನ್ನಾಗಲಿ ಪಡೆಯಲಾರವು". ಹತ್ತು ಪುಟಗಳ ಸಾಹಿತ್ಯಿಕ ವಿವರವನ್ನು ಒಂದು ಚಿತ್ರವು ವಿವರಿಸುವಂತೆ ಎರಡು ಸಾಲುಗಳ ಸಾಹಿತ್ಯಿಕ ಬೆಡಗನ್ನು ಒಂದು ಚಿತ್ರವು ವಿವರಿಸಲಾರದೇ ಉಳಿಯಲೂಬಹುದು. ಆದುದರಿಂದ ಮಾನವನ ಕಲಾತ್ಮಕ ಮತ್ತು ಸಾಹಿತ್ಯಿಕ ಸಂವಹನದ ಬೆಳವಣಿಗೆಯಲ್ಲಿ ಕಲೆ ಮತ್ತು ಸಾಹಿತ್ಯಗಳ ಪರಸ್ಪರ ಕೊಡುಕೊಳ್ಳುವಿಕೆಯಿಂದ ಇವೆರಡರ ಅಂತರ್ ಶಿಸ್ತೀಯ ಅಧ್ಯಯನದ ಅನಾವರಣವೊಂದು ನೆಲೆಗೊಳ್ಳುತ್ತದೆ.[೬] ಇಂತಹ ಕಲೆ ಮತ್ತು ಸಾಹಿತ್ಯದ ಸೇತು ಬಂಧನದ ಕಾರ್ಯವನ್ನು ನಮ್ಮ ಪ್ರಾಚೀನ ಕವಿಗಳು, ಲಿಪಿಕಾರರು, ಚಿತ್ರಕಲಾವಿದರು ಕರ್ನಾಟಕದ ಹಸ್ತಪ್ರತಿಗಳ ರಚನೆಯಲ್ಲಿ ಕೂಡಿಕೊಂಡು ಕೆಲಸ ಮಾಡಿ ಸಹಬಾಳ್ವೆಯ ಬದುಕನ್ನು ಸಾಧಿಸಿ ತೋರಿಸಿದ್ದಾರೆ. ಈ ರೀತಿಯಾಗಿ ಕಲೆ ಮತ್ತು ಸಾಹಿತ್ಯಗಳನ್ನು ಕಲಾವಿದರು ಹಾಗೂ ಸಾಹಿತಿಗಳು ಒಂದೆಡೆ ಸೇರಿ ಮಾಡಿರುವ ಕಾರ್ಯವೇ "ಸಚಿತ್ರ ಹಸ್ತಪ್ರತಿಗಳು".

ಭಾರತೀಯರ ಸಾಹಿತ್ಯ ಮತ್ತು ಕಲಾ ಪರಂಪರೆಗಳಲ್ಲಿ ಕರ್ನಾಟಕದ ಹಸ್ತಪ್ರತಿ ಚಿತ್ರಕಲೆಗೆ ತನ್ನದೇ ಆದ ಮಹತ್ವದ ಸ್ಥಾನವಿದೆ. "ಹಸ್ತಪ್ರತಿ ಚಿತ್ರಕಲೆ ಎಂದರೆ ನಮ್ಮ ಪೂರ್ವಜರು ಬಿಟ್ಟು ಹೋದ ಸಾಂಸ್ಕೃತಿಕ ಬದುಕಿನ ದಾಖಲೆಯಾಗಿದೆ". ಇಂತಹ ಹಸ್ತಪ್ರತಿ ಚಿತ್ರಗಳನ್ನು ರಚಿಸುವ ಮೂಲಕ ಕನ್ನಡದ ಹಸ್ತಪ್ರತಿಗಳಿಗೆ ರಾಷ್ಟ್ರಮಟ್ಟದ ಮಹತ್ವವನ್ನು ಗಳಿಸಿಕೊಟ್ಟ ಕೀರ್ತಿ ಕರ್ನಾಟಕದ ಪ್ರಮುಖ ಧರ್ಮಗಳದ್ದಾಗಿದೆ. ಕನ್ನಡ ನಾಡಿನ ಜನತೆ ಪೋಷಕರಾಗಿ, ಬರಹಗಾರರಾಗಿ, ಚಿತ್ರ ರಚನಾಕಾರರಾಗಿ ಹಸ್ತಪ್ರತಿ ನಿರ್ಮಾಣ ಕಾರ್ಯವನ್ನು ಜೀವಂತವಾಗಿಟ್ಟು ನಮ್ಮ ನಾಡನ್ನು ಅಪಾರವಾದ ಹಸ್ತಪ್ರತಿ ಭಂಡಾರವನ್ನಾಗಿಸಿದ್ದಾರೆ. ಇದು ವ್ಯಕ್ತಿಯಿಂದ

---

೬. ಡಾ. ಎಚ್.ಎನ್.ಚಿತ್ರಗಾರ: ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ – ಒಂದು ಅಧ್ಯಯನ : ಅಪ್ರಕಟಿತ ಪಿ.ಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ ಪುಟ–೨.

ವ್ಯಕ್ತಿಗೆ, ಜನಾಂಗದಿಂದ ಜನಾಂಗಕ್ಕೆ ಬಳುವಳಿಯಾಗಿ ಧರ್ಮದತ್ತಿಯಾಗಿ ಉಳಿದುಕೊಂಡು ಬಂದಿದೆ. ಇಂಥಹ ಹಸ್ತಪ್ರತಿಗಳನ್ನು ಅರಸರ ಸಪ್ತ ಸಂತಾನದ ಕರ್ತವ್ಯಗಳಲ್ಲಿ ಒಂದೆಂದೋ ಶಾಸ್ತ್ರದಾನ ಗ್ರಂಥಪ್ರತಿಷ್ಠೆಯ ಪುಣ್ಯ ಪ್ರತೀಕವೆಂದೋ ಧರ್ಮಪೀಠಾರೋಹಣ ಪ್ರಸಂಗದ ಜ್ಞಾನ ದುಡುಗೊರೆಗಳೆಂದೋ ಬದುಕಿನ ಸ್ವಸುಖದ ಪರಸುಖದ ಕಾಮಧೇನುಗಳೆಂದೋ ಭಾವಿಸಿ ಇಂದಿನವರೆಗೂ ಕನ್ನಡಿಗರು ಅವುಗಳನ್ನು ಪೂಜ್ಯಭಾವನೆಯಿಂದ ಸಂರಕ್ಷಿಸಿಕೊಂಡು ಬಂದಿದ್ದಾರೆ. ಕನ್ನಡಿಗರು ಕಲಾಕಾರರಾಗಿ ಇವುಗಳನ್ನು ಬರೆಯಿಸುವುದೊಂದಿಗೆ ಕಲಾ ಪೋಷಕರಾಗಿದ್ದಾರೆ. ಹಸ್ತಪ್ರತಿ ನಿರ್ಮಿಸುವುದರೊಂದಿಗೆ ಈ ಪರಂಪರೆಯನ್ನು ಜೀವಂತವಾಗಿರಿಸುವುದರ ಜೊತೆಗೆ ನಮ್ಮ ನಾಡನ್ನು ಸಾಂಸ್ಕೃತಿಕ ಸಂಪದ್ಭರಿತ ಪ್ರದೇಶವನ್ನಾಗಿ ಮಾಡಿದ್ದಾರೆ. ಪ್ರಸ್ತುತ ಪ್ರಕಟಿತ ಸಾಹಿತ್ಯಕ್ಕೆ ಆಕರಗಳಾಗಿದ್ದ ಈ ಹಸ್ತಪ್ರತಿಗಳು ಅವುಗಳಿಗೆ ಪೂರಕವಾಗಿ ಅಥವಾ ಪಾಠಕ್ಕೆ ಅರ್ಥಕೊಡಲು ಈ ಹಸ್ತಪ್ರತಿಗಳಲ್ಲಿಯ ಚಿತ್ರಗಳು ಆಯಾ ಕಾಲಘಟ್ಟಗಳ ಪರಿಮಿತಿಯಲ್ಲಿ ರಚಿಸಲ್ಪಟ್ಟಿರುವ ಆಯಾ ಭಾಗದ ಜನಜೀವನ, ಕಲೆ, ಸಾಹಿತ್ಯ ಮತ್ತು ಧಾರ್ಮಿಕ ಸಂಸ್ಕೃತಿಯನ್ನು ಸಾರುವ ಕಲಾಕೋಶಗಳಂತಿವೆ.

**ಹಸ್ತಪ್ರತಿಗಳ ಪೋಷಣೆ, ಪ್ರಚಾರ ಮತ್ತು ಪೋಷಕರು:**

ಶಾತವಾಹನರಿಂದ ಕೆಳದಿಯ ಅರಸರವರೆಗೂ ಬಂದ ರಾಜ-ಮಹಾರಾಜರ ಆಶ್ರಯದೊಂದಿಗೆ ಶೈವ, ವೀರಶೈವ, ಬೌದ್ಧ, ಜೈನ, ವೈಷ್ಣವ ಧರ್ಮಗಳಿಗೆ ಸಂಬಂಧಿಸಿದ ಹಸ್ತಪ್ರತಿಗಳು ರಚನೆಗೊಂಡು ಪೋಷಣೆ ಹೊಂದಿದವು ಹಾಗೂ ಅವುಗಳ ಅಭಿವೃದ್ಧಿಗೆ ಕಾರಣರಾಗಿರುವರು.[೭] ಕರ್ನಾಟಕದಲ್ಲಿ ಉತ್ಕರ್ಷ ಹೊಂದಿದ ಪ್ರಮುಖ ಧರ್ಮಗಳ ಹಿನ್ನೆಲೆಯಲ್ಲಿ ರಚನೆಗೊಂಡ ಹಸ್ತಪ್ರತಿಗಳು.

**ಜೈನರು:**

ಹಸ್ತಪ್ರತಿ ರಚನೆ, ಪೋಷಣೆ ಹಾಗೂ ಅಭಿವೃದ್ಧಿಗಳನ್ನು ಧಾರ್ಮಿಕ ಕಾರ್ಯವೆಂಬಂತೆ ಭಾವಿಸಿ ಅದರಲ್ಲಿ ಧರ್ಮೀಯರೆಲ್ಲರನ್ನು ಸಕ್ರಿಯವಾಗಿ ತೊಡಗಿಸಿಕೊಂಡು ಬಂದ ಉಜ್ವಲವಾದ ಪರಂಪರೆ ಜೈನರಲ್ಲಿದೆ. ಚತುರ್ವಿಧ ದಾನಗಳಲ್ಲಿ ಒಂದಾದ ಶಾಸ್ತ್ರದಾನವೇ ಅದರ ಮುಖವಾಗಿದ್ದು ಇದು ಕವಿಗಳ ಪ್ರತಿಭೆಗೆ, ಶಾಸ್ತ್ರಕಾರರ ವಿದ್ವತ್ತಿಗೆ, ದೊರೆ- ಧರ್ಮದರ್ಶಿಗಳ ಶ್ರದ್ಧೆಗೆ ಎಲ್ಲಕ್ಕೂ ಮಿಗಿಲಾದ ಅವಕಾಶವನ್ನು ನೀಡುತ್ತ ಬಂದಿದೆ.

**ವೀರಶೈವರು:**

ಜೈನರಿಗೆ ಸರಿಸಮನಾಗಿ ಹಸ್ತಪ್ರತಿ ಪೋಷಣೆ ಗೈದವರೆಂದರೆ ವೀರಶೈವರು. ಹಸ್ತಪ್ರತಿಗಳ ರಚನೆ ಹಾಗೂ ಪ್ರಸರಣ ಕಾರ್ಯವನ್ನು ಅತ್ಯಂತ ವ್ಯವಸ್ಥಿತವಾಗಿ ಮಾಡಿದರು. ಶರಣರ ಸಾಹಿತ್ಯವನ್ನು ಹಾಗೂ ಶರಣರನ್ನು ಕುರಿತಾದ ಸಾಹಿತ್ಯವನ್ನು ಪೋಷಿಸಿಕೊಂಡು ಬಂದಿರುವ ದೊಡ್ಡ ಪರಂಪರೆಯನ್ನೇ ನಿರ್ಮಿಸಿರುವರು.

---

೭. ಡಾ. ಬಿ.ಕೆ.ಹಿರೇಮಠ : ಕನ್ನಡ ಹಸ್ತಪ್ರತಿಗಳು : ಒಂದು ಅಧ್ಯಯನ : ಪುಟ ೧೧೪.

ಹಸ್ತಪ್ರತಿಯು ಜನತೆಯ ಪೋಷಣೆಗೆ ಒಳಪಟ್ಟಿದ್ದು ಬಸವಾದಿಶಿವಶರಣರ ಆಂದೋಲನದ ಫಲವಾಗಿ ಸಾಮಾನ್ಯರ ಶಿಕ್ಷಣ ಹಾಗೂ ಅಭಿವೃದ್ಧಿಗೆ ಮುಕ್ತವಾದ ಅವಕಾಶವನ್ನು ಕಲ್ಪಿಸಿಕೊಟ್ಟಿತು. ಹಸ್ತಪ್ರತಿಗೆ ಸಾರ್ವತ್ರಿಕ ಸ್ವರೂಪವನ್ನು ಕೊಟ್ಟಿತು. ಅನೇಕ ಶರಣ ಶರಣೆಯರು ವಚನ ರಚನೆಗೆ ತೊಡಗಿ ಹಸ್ತಪ್ರತಿಗಳನ್ನು ರಚಿಸಿ ಜ್ಞಾನ ವಿತರಣೆ ಮಾಡಿದ್ದನ್ನು ಸೂಚಿಸುತ್ತದೆ. ಮಹಾಮನೆಗೆ ಬಂದಿದ್ದ ಜಂಗಮರು ದ್ವಾರಪಾಲಕರಿಂದಾಗಿ ಬಸವಣ್ಣನವರಿಗೆ ದರ್ಶನ ಕೊಡದೆ ಮರಳಿದಾಗ ಅವರ ಜೊತೆಗೇ ಬಸವಣ್ಣನವರ ಜೀವ ಹೊರಟು ಹೋಯಿತು ಎಂಬ ಸಂದರ್ಭವನ್ನು ಭೀಮಕವಿಯು[೮]

> ಇಂದಿನೀಶಾರ್ಚನೆಯುಚಿತವೇ
> ನೆಂದು ತಿಳಿಯಿರೆ ಗೀತದವಸರ
> ಎಂದರೆಯಿರೆ ವಚನ ಭಂಡಾರದ ಕವಳಿಗೆಗಳ
> ತಂದು ನೋಡಿರೆ......

ಎಂದು ಮುಂತಾಗಿ ಚಿತ್ರಿಸುವಲ್ಲಿ ಕವಳಿಗೆಗಳಿಂದ ತುಂಬಿದ "ವಚನ ಭಂಡಾರ"ದ ಸ್ಪಷ್ಟ ಕಲ್ಪನೆ ಕೊಡುತ್ತಾನೆ. ಅದರಂತೆ ಭಂಡಾರಿ ಶಾಂತಯ್ಯನ ಮೇಲ್ವಿಚಾರಣೆಯಲ್ಲಿ ಅನುಭವಮಂಟಪದಲ್ಲಿದ್ದ ಹಸ್ತಪ್ರತಿಗಳ ಸಂಗ್ರಹ ದೊಡ್ಡ ಪ್ರಮಾಣದಲ್ಲಿತ್ತು ಎಂಬುದು ತಿಳಿಯುತ್ತದೆ.

ಅನುಭವ ಮಂಟಪದಲ್ಲಿ 'ಶರಣರ ಧಾರ್ಮಿಕ ಸಂವಾದಗಳು' ಎಲ್ಲರ ಒಪ್ಪಿಗೆಯನ್ನು ಪಡೆದ ಅನಂತರ ಅವುಗಳನ್ನು ಕೂಡಲೇ ಬರೆಸಿ ಕರಣಿಕರ ಸಂಘದವರಿಂದ ಪ್ರತಿಮಾಡಿಸಿ ವಚನ ಭಂಡಾರಕ್ಕೆ ಕಳಿಸಿಕೊಡುವ ನಿರ್ದಿಷ್ಟ ಯೋಜನೆ ಅವರದಾಗಿತ್ತು ಎಂದು ಶ್ರೀ ಉತ್ತಂಗಿಯವರ ವಿವರಣೆಯಿಂದ ತಿಳಿಯುತ್ತದೆ.[೯] ನೂರೊಂದು ವಿರಕ್ತರು, ಲಕ್ಕಣ್ಣ ದಂಡೇಶ, ಜಕ್ಕಣಾರ್ಯ, ಕೇತಿಶೆಟ್ಟಿ ಅಂಥವರೆಲ್ಲ ಅಧಿಕಾರ, ಸಂಪತ್ತು ಉಳ್ಳವರು ಹಸ್ತಪ್ರತಿಗಳ ಅಭಿವೃದ್ಧಿಗೆ ಆಶ್ರಯದಾತರಾಗಿದ್ದರೆಂದು[೧೦] ವೀರಶೈವಾಮೃತ ಪುರಾಣ ಕಾಂಡ ೮ ಸಂ. ೨೨. ಪುಟ ೫೨ರಲ್ಲಿ ನಮೂದಾಗಿದೆ.

ವೀರಶೈವ ಸಂಪಾದನಾ ಪರಂಪರೆಯ ಚಟುವಟಿಕೆಗಳೆಲ್ಲವೂ ಕನ್ನಡ ಹಸ್ತಪ್ರತಿಗಳ ಪೋಷಣೆಗೆ ಪೂರಕವಾದವುಗಳೇ ಆಗಿವೆ. ಅದರಲ್ಲಿಯೂ ವೀರಶೈವ ಸಾಹಿತ್ಯದ ಹಸ್ತಪ್ರತಿಗಳ ಹೆಚ್ಚಳಿಕೆಗೆ ಈ ಪರಂಪರೆಯ ಕಾಣಿಕೆ ಅದ್ವಿತೀಯವಾದುದು. ಅದರಂತೆ ವೀರಶೈವರಲ್ಲಿ ಶರಣರ ವಚನಗಳ ಕಟ್ಟುಗಳನ್ನೇ ದೇವರೆಂದು ಪರಿಭಾವಿಸಿ ಅವುಗಳನ್ನು ಪೂಜಿಸುತ್ತಾ ಬಂದ "ಕೊಡೇಕಲ್ಲ ಬಸವಣ್ಣ"ನ ಪರಂಪರೆಯೊಂದಿದೆ. ವಿಶೇಷವಾಗಿ

---

೮. ಭೀಮಕವಿ: ಬಸವಪುರಾಣ : ಸಂಧಿ ೩೪, ಪದ್ಯ ೪೫.
೯. ಡಾ. ಬಿ.ಕೆ.ಹಿರೇಮಠ: ಕನ್ನಡ ಹಸ್ತಪ್ರತಿಗಳು: ಒಂದು ಅಧ್ಯಯನ : ಪುಟ ೧೨೦.
೧೦. ಡಾ. ಬಿ.ಕೆ.ಹಿರೇಮಠ: ಕನ್ನಡ ಹಸ್ತಪ್ರತಿಗಳು: ಒಂದು ಅಧ್ಯಯನ : ಪುಟ ೧೨೦.

ಕಾಲಜ್ಞಾನದ ವಚನಗಳನ್ನೇ ಸಾರುವ ಈ ಪರಂಪರೆಯ ಗುಡಿಗಳಲ್ಲಿ ಪೀಠದ ಮೇಲೆ ಹಸ್ತಪ್ರತಿಗಳನ್ನೇ ಇಟ್ಟು ವಸ್ತ್ರವನ್ನು ಹೊದಿಸಿ ನಿತ್ಯವೂ ಪೂಜಿಸುವ ಕ್ರಮ ಈಗಲೂ ಇದ್ದುದು ತಿಳಿದು ಬರುತ್ತದೆ.

**"ಪೀಠಾರೋಹಣದ ಉಡುಗೊರೆ":** ಕಲ್ಯಾಣದ ಅನುಭವ ಮಂಟಪದಲ್ಲಿ ಹಸ್ತಪ್ರತಿಗಳ ಪೋಷಣೆ, ಪ್ರಸರಣ ಕಾರ್ಯವು ಪ್ರಾರಂಭವಾಗಿ, ಕಲ್ಯಾಣ ಕ್ರಾಂತಿಯ ನಂತರ ನಾಡಿನ ಹಳ್ಳಿಹಳ್ಳಿಗಳಲ್ಲಿರುವ ಮಠಗಳಲ್ಲಿ ಮಠದ ಸ್ವಾಮಿಗಳು ಅವರ ಶಿಷ್ಯಮಕ್ಕಳು ಭಕ್ತ ಸಮುದಾಯಗಳೆಲ್ಲ ಒಗ್ಗೂಡಿ ಹಸ್ತಪ್ರತಿಗಳ ರಚನೆ, ರಕ್ಷಣೆ ಹಾಗೂ ಸಂಚಲನ ಕಾರ್ಯಗಳಲ್ಲಿ ಪಾಲ್ಗೊಳ್ಳುತ್ತಾ ಬಂದಿರುವುದೊಂದು ದೊಡ್ಡ ಪರಂಪರೆ ಆಗಿದೆ. ಗ್ರಂಥಕಾಣಿಕೆಯ ಸ್ವರೂಪದಲ್ಲಿ ಪುರಾಣ ಚರಂತಿಗೆ ಮತ್ತು ವೀರಶೈವ ಮಠಗಳ ಅಧಿಕಾರವನ್ನು ವಹಿಸಿಕೊಡುವಾಗ ಪ್ರತಿಯೊಬ್ಬ ಸ್ವಾಮಿಗೂ ಮೊದಲ ಕಾಣಿಕೆಯಾಗಿ ಗುರುವಾದವನು ಹಸ್ತಪ್ರತಿಗಳನ್ನು ಕೊಡುತ್ತಾನೆ. ಈ ಬಗ್ಗೆ "ನಿರಂಜನವಂಶರತ್ನಾಕರ" ಗ್ರಂಥದಲ್ಲಿ ಹೀಗೆ ಹೇಳಿದೆ :

ಮಠಸ್ಥರಾದ ಆ ಮೂರ್ತಿಗಳಲ್ಲಿ ಸ್ಥಲಕೂಡಿ ಶಾಸ್ತ್ರಸಂಪಾದನೆಯು ಮಾಡಿಕೊಂಡ ಗಣವರರು ಈ ಬುಡಕಟ್ಟಿನ ಚರಮೂರ್ತಿಗಳಿಂದ ಚರಂತಿಗೆ ಪುಸ್ತಕವೆಂದರೆ ಚೆನ್ನ ಬಸವಪುರಾಣ ಮುಂತಾದ ಶಿವಪುರಾಣಗಳನ್ನು ತಮ್ಮಿಂದ ಷಟ್‌ಸ್ಥಲ ಜ್ಞಾನೋಪದೇಶವಂ ಪಡೆದು ಷಟ್‌ಸ್ಥಲಾಶ್ರವಂ ಹೊಂದಿದ ತಮ್ಮಯ ಶಿಶ್ಯೋತ್ತವನಿಗೆ ಭಕ್ತಗಣವರರ ಮಧ್ಯದ ಆ ಪುಸ್ತಕಗಳು ಕೊಟ್ಟು ಸ್ವಯಾಸನವಂ ಕೊಟ್ಟರೆ ಪುರಾಣ ಚರಂತಿಗೆ ಎಂತಲೂ ಈ ಎರಡು ನಾಮಗಳು ಇವರಿಗೆ ಬರುತ್ತವೆ. ಈ ಚರಮೂರ್ತಿಗಳು ತಮ್ಮ ಮರಿಗಳಿಗೆ ಸ್ಥಲಂ ಕೂಡಿಸಿ ಶಿವಾನುಭವಶಾಸ್ತ್ರವಂ" ಸಂಪಾದಿಸಿ ವಿರಕ್ತರಂ ಮಾಡಿಕೊಳ್ಳುವುದಕ್ಕೆ ಬರುವದಿಲ್ಲವು. ಈ ಚರಮೂರ್ತಿಗಳು ಪೂಜೆಗೆ ವಂದನೆಗೆ ಬಾಧ್ಯರು. ಯಾರು ಭಾಧ್ಯರು ಎಂದರೆ ಪ್ರಭು ಚೆನ್ನಬಸವರಾಜೇಂದ್ರರು ಶಿವಮೂರ್ತಿಯಾದ ಸೊನ್ನಲಿಗೆಯ ಸಿದ್ಧರಾಮೇಶರಿಗೆ ನಿರೂಪಿಸಿದ ಗುಹೇಶ್ವರನ ವಚನ ಕರಣಹಸಿಗೆ, ಮಿಶ್ರಾರ್ಪಣ, ಸಿದ್ಧರಾಮೇಶ್ವರ, ಮಂತ್ರಗೋಪ್ಯ, ಅಕ್ಕಗಳ ಸೃಷ್ಟಿಯ ವಚನ, ಪ್ರಭುದೇವರ ಸೃಷ್ಠಿಯ ವಚನ, ಸಿದ್ಧೇಶ್ವರನ ವಚನ, ಮಂತ್ರ ಗೋಪ್ಯ, ಶೂನ್ಯಸಂಪಾದನೆ, ಮುಂತಾದವುಗಳ ಸಂಗ್ರಹಿಸಿದ ಪುಸ್ತಕದ ಸಭಾಮಧ್ಯದಲ್ಲಿ ಆ ಶಿವಾನುಭವ ಚರಂತಿಗೆ ತೆಗೆದುಕೊಂಡು ಗುರುವರನ ಕಡೆಯಿಂದ ಆ ಶಾಸ್ತ್ರವಂ ಶಿಷ್ಯೋತ್ತಮನು ಶಿವಮಂತ್ರ ಗುರುಪ್ರಸಾದ ಮುಖನಾದ ಅಂಗಲಿಂಗ ಸಾಮರಸ್ಯ ಮುಂತಾಗಿ ೩೬ ತತ್ವಂಗಳಂ ತಿಳಿದಾತನು ಶಾಸ್ತ್ರವಂ ಗುರುಗಳಿಂ ಶ್ರವಣಗೊಂಡಾತನಾದ ವಿರಕ್ತನೆ ಶಾಸ್ತ್ರದ ಕಟ್ಟು ಹಿಡಿಯಬೇಕು.... ಈತನಿಗೆ ಶಿವಾನುಭವಶಾಸ್ತ್ರವೇ ಆಗಲಿ, ಪುರಾಣ ಪುಸ್ತಕವೇ ಆಗಲಿ ಇವುಗಳನ್ನು ಗುರುಗಳಾದ ಚರಮೂರ್ತಿಗಳು ಸಭೆಯಲ್ಲಿ ಕೊಟ್ಟು ತಮ್ಮ ಆಸನದಲ್ಲಿ ಕುಳ್ಳಿರಿಸಿಕೊಳ್ಳಲು ಆ ಗಣವರನೆ ಚರಮೂರ್ತಿ ಎನಿಸುವನು.[೧೧]

೧೧. (ಸಂ) ಫ.ಗು.ಹಳಕಟ್ಟಿ: ನಿರಂಜನ ವಂಶರತ್ನಾಕರ : ಪುಟ ೪೦, ೪೧, ೪೨.

**ಶಾಸ್ತ್ರದಾನ:**

ಕೆಳದಿ ನೃಪ ವಿಜಯದಲ್ಲಿ ಶಾಶ್ವತ ಧರ್ಮ, ಕೀರ್ತಿಗಳನ್ನು ಸಂಪಾದಿಸಿ ರಾಜ್ಯ ಗೈದ ಬಸವ ನರೇಂದ್ರನ ಕಾಲದಲ್ಲಿ ನಡೆದ ಶಾಸ್ತ್ರದಾನದ ಅಪೂರ್ವ ನಿದರ್ಶನವೊಂದು ಕಾಣಸಿಗುತ್ತದೆ. ಈತನು ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮ ಮೂರ್ತಿಗಳಿಗೆ ಪ್ರಸಾದ ಸಂತೃಪ್ತಿ ಗೈದು ವಸ್ತ್ರ ಕಂಬಳಿ ಕಂಥೆ ಶಿವದಾರ ವಿಭೂತಿಯಾಧಾರ ಭಸ್ಮರುದ್ರಾಕ್ಷಿ ಮುಂತಾಗಿ ಇಚ್ಛಾ ಪದಾರ್ಥಗಳ ಜೊತೆಗೆ ಅವರೆಲ್ಲರಿಗೂ "ಶಿವಶಾಸ್ತ್ರ ಲಿಖಿತ ಪುಸ್ತಕ" ಗಳನ್ನು ಕೊಡಮಾಡಿ ಮೆರವಣಿಗೆ ಮಹೋತ್ಸವವನ್ನು ಮಾಡಿಸಿದಂತೆ ತಿಳಿದು ಬರುತ್ತದೆ.[೧೨] ಇದು ವೀರಶೈವ ಚರಿತ್ರೆಯಲ್ಲಿಯೇ ವಿನೂತನವಾದ ಶಾಸ್ತ್ರದಾನದ ಶಿಖರ ಸದೃಶ ಉದಾಹರಣೆಯೆನಿಸಿದೆ.

**ಮಠಗಳ ಆಸರೆ:**

ಮಠಗಳು ವೀರಶೈವ ಹಸ್ತಪ್ರತಿಗಳ ಪಾಲನೆ, ಪೋಷಣೆ ಮಾಡಿಕೊಂಡು ಬಂದಿವೆ. ಪ್ರಾಚೀನ ಶೈಕ್ಷಣಿಕ ಮಠಗಳು, ಬೆಳಗಾವಿ ಜಿಲ್ಲೆಯ ಹೂಲಿ ಮಠ (ಸವದತ್ತಿ), ಶಿವಮೊಗ್ಗ ಜಿಲ್ಲೆಯ ಕೋಡಿಮಠ (ಬಳ್ಳಿಗಾವೆ), ವಿಜಾಪುರ ಜಿಲ್ಲೆಯ –ಸಾಲೊಟಗಿಮಠ (ಇಂಡಿ), ಶ್ರೀಶೈಲ, ಇಟಗಿ, ಸೂಡಿಮಠಗಳು, ಮೈಸೂರು ಜಿಲ್ಲೆಯ ಸುತ್ತೂರು ಆಗಲೇ ಪ್ರಸಿದ್ಧವಾಗಿದ್ದವು. ಇವು ಬರೆ ಧಾರ್ಮಿಕ ಕೇಂದ್ರಗಳಾಗಿರದೇ ಪ್ರಖ್ಯಾತ ವಿದ್ಯಾಕೇಂದ್ರಗಳಾಗಿದ್ದವು ಎಂಬುದಾಗಿ ಶಾಸನಗಳಿಂದ ತಿಳಿದು ಬರುತ್ತದೆ. ಈ ಗುರುಗಳನ್ನು "ವಿದ್ಯಾಬ್ಧಿ", "ಸಾಹಿತ್ಯವಿದ್ಯಾಪ್ರವೀಣರ್", "ಸರ್ವಜ್ಞ ಕಲ್ಪರ್" ಎಂದು ಶಾಸನಗಳು ಹೊಗಳಿವೆ. ಕೋಡಿಮಠದ ಶಾಸನವನ್ನು ನೋಡಿದರೆ ಇಲ್ಲಿ ಕಲಿಸಲಾಗುತ್ತಿದ್ದ ವಿದ್ಯೆಯ ವ್ಯಾಪಕತೆ ಮತ್ತು ವೈವಿಧ್ಯದ ಅರಿವಾಗುತ್ತದೆ. ಹಸ್ತಪ್ರತಿಗಳ ರಚನೆ, ಅಭಿವೃದ್ಧಿ ಕಾರ್ಯಗಳು ಆಚಾರ್ಯ ವರ್ಗದ ಸ್ವತ್ತೆಂದು ತಿಳಿಯಲಾಗಿದ್ದರಿಂದ ಅವು ಒಂದು ಪರಿಮಿತಿಯಲ್ಲಿಯೇ ಬೆಳೆದು ಬಂದವು".

೧೧ ಮತ್ತು ೧೨ನೇ ಶತಮಾನದಲ್ಲಿ ಉತ್ತರ ಕರ್ನಾಟಕವು ಶರಣರ ಆಂದೋಲನಕ್ಕೆ ನಾಂದಿಯಾಯಿತು. ಈ ಅವಧಿಯಲ್ಲಿ ಹಸ್ತಪ್ರತಿಗಳು ಅತ್ಯಧಿಕವಾಗಿ ರೂಪುಗೊಂಡವು. ಇದರಿಂದಾಗಿ ಜೈನಹಸ್ತಪ್ರತಿಗಳು ಕರ್ನಾಟಕದ ದಕ್ಷಿಣ ಭಾಗಕ್ಕೆ ಮತ್ತು ಪಶ್ಚಿಮ ಭಾಗಕ್ಕೆ ಹಾಗೂ ಮಹಾರಾಷ್ಟ್ರದ ಗಡಿಭಾಗಕ್ಕೆ ಹಂಚಿಹೋದವು. ಕಲ್ಯಾಣಕ್ರಾಂತಿಯ ನಂತರ ವೀರಶೈವ ಹಸ್ತಪ್ರತಿಗಳು ಉತ್ತರ ಕನ್ನಡದ ಉಳುವಿ, ಆಂಧ್ರದ ಶ್ರೀಶೈಲದತ್ತ ಸಂಚಲನಗೊಂಡವು. ಮತ್ತೆ ವಿಜಯನಗರ ಅರಸ ಪ್ರೌಢದೇವರಾಯನ ಕಾಲದಲ್ಲಿ ವಿಜಾಪುರ, ಧಾರವಾಡ, ಬಳ್ಳಾರಿ, ರಾಯಚೂರು, ಜಿಲ್ಲೆಗಳಲ್ಲಿ ಬೆಳೆಯುತ್ತ ಇಡೀ ಕರ್ನಾಟಕದಾದ್ಯಂತ ಬೆಳೆದು ಬಂದವು.

ಭೌಗೋಲಿಕವಾಗಿ ಡಾ. ಬಿ.ಕೆ.ಹಿರೇಮಠ ಅವರು ಹೀಗೆ ವಿಂಗಡಿಸಿದ್ದಾರೆ.[೧೩]

೧) **ವೀರಶೈವ ಹಸ್ತಪ್ರತಿಗಳು:** ವಚನಗಳು, ಪುರಾಣಗಳು, ಟೀಕಾ ಸಾಹಿತ್ಯಗಳು, ನಾಂದ್ಯಗಳು, ಉದ್ಧರಣೆಗಳು, ಮುಂತಾದ ವೀರಶೈವ (ಸಾಹಿತ್ಯ) ಹಸ್ತಪ್ರತಿಗಳು ಉತ್ತರ ಕರ್ನಾಟಕದ ಭಾಗಗಳನ್ನು ಗುರುತಿಸಿದ್ದು.

---

೧೨. ಡಾ. ಬಿ.ಕೆ.ಹಿರೇಮಠ: ಕನ್ನಡ ಹಸ್ತಪ್ರತಿಗಳು: ಒಂದು ಅಧ್ಯಯನ : ಪುಟ ೧೨೨.
೧೩. ಡಾ. ಬಿ.ಕೆ.ಹಿರೇಮಠ: ಕನ್ನಡ ಹಸ್ತಪ್ರತಿಗಳು: ಒಂದು ಅಧ್ಯಯನ : ಪುಟ ೧೨೮, ೧೨೯.

**೨. ದಾಸಸಾಹಿತ್ಯದ ಹಸ್ತಪ್ರತಿಗಳು:** ರಾಯಚೂರು ಜಿಲ್ಲೆಯ ಬಹುಭಾಗವನ್ನು ಗುರುತಿಸಿದ್ದು.

**೩. ವೈಷ್ಣವ ಹಸ್ತಪ್ರತಿಗಳು:** ದಕ್ಷಿಣ ಕರ್ನಾಟಕದ ಕೆಲವು ಭಾಗಗಳನ್ನು ಗುರುತಿಸಿದ್ದು.

**೪. ಜೈನ ಹಸ್ತಪ್ರತಿಗಳು:** ಮಹಾರಾಷ್ಟ್ರ ಕರ್ನಾಟಕದ ಗಡಿಭಾಗ ಹಾಗೂ ದಕ್ಷಿಣ ಕನ್ನಡ ಜಿಲ್ಲೆ (ಕರಾವಳಿ ಪ್ರದೇಶ) ಎಂದು ಗುರುತಿಸಲಾಗಿದೆ.

ಚರಿತ್ರೆಯಲ್ಲಿ ಎದುರಾಗುವ ಸಂದರ್ಭ ಸನ್ನಿವೇಶಗಳಿಗೆ ತಕ್ಕಂತೆ ಪ್ರತಿಸ್ಪರ್ಧಿಗಳಾದ ಮತಗಳು ಪಂಥಗಳು ಪುನಶ್ಚೇತನಕ್ಕಾಗಿಯೋ ಹೋರಾಡಬೇಕಾದ ಸಂದರ್ಭದಲ್ಲಿ ಹಸ್ತಪ್ರತಿಗಳ ರಚನೆಯನ್ನು ಹೆಚ್ಚಿಸಿದ್ದು ಕಂಡು ಬರುತ್ತದೆ. ೧೨ನೆಯ ಶತಮಾನದ ನಂತರ ಜೈನರಲ್ಲಿಯೂ ೧೫ನೆಯ ಶತಮಾನದ ನಂತರ ವೀರಶೈವರಲ್ಲಿಯೂ ಕಾಣಬಹುದಾಗಿದೆ.

ಹಸ್ತಪ್ರತಿ ಪೋಷಕರಲ್ಲಿ ಮತ್ತೆ ಮೂರು ಭಾಗಗಳನ್ನು ಮಾಡಬಹುದಾಗಿದೆ.

**೧. ರಾಜಶಕ್ತಿ:** ರಾಜ–ಮಹಾರಾಜರು ಹಾಗೂ ಅಧಿಕಾರಸ್ಥ ಪರಿವಾರದವರು.

**೨. ಧರ್ಮಶಕ್ತಿ:** ಮಠಾಧಿಕಾರಿಗಳು, ಗುರುವರ್ಗ, ಶಿಷ್ಯಬಳಗದವರು.

**೩. ಪ್ರಜಾಶಕ್ತಿ:** ಸಮಾಜದಲ್ಲಿ ವಿವಿಧ ಕಾಯಕಗಳನ್ನಾಶ್ರಯಿಸಿದ ಪೋಷಕಬಳಗ. ಹೀಗೆ ಹಸ್ತಪ್ರತಿಗಳು ಜ್ಞಾನ ಪರಂಪರೆಯನ್ನು ಕಾಪಾಡಿಕೊಂಡು ಬಂದಿದ್ದು ಅದರೊಂದಿಗೆ ಧಾರ್ಮಿಕ ಶ್ರದ್ಧೆ, ನಂಬಿಕೆ, ವಿಶ್ವಾಸಗಳು ಒಡಮೂಡಿ ಬೆಳೆದುಕೊಂಡು ಬಂದಿದ್ದನ್ನು ನೋಡುತ್ತೇವೆ.

**ಚಿತ್ರಕಲಾ ವಿನ್ಯಾಸಕ್ಕೆ ಕಾರಣ:**

ಹಸ್ತಪ್ರತಿಗಳ ಸುರಕ್ಷತೆಯ ದೃಷ್ಟಿಯಿಂದ ಅಲಿಖಿತಗರಿಗಳನ್ನು ಮೇಲೆ ಹಾಗೂ ಕೆಳಗೆ ಜೋಡಿಸಿರುವುದು ರಕ್ಷಣೆಯ ದೃಷ್ಟಿಯಿಂದ ಸಹಜವಾದುದೇ. ಆದರೆ ಇಂಥಹ ಅಲಿಖಿತ ಪತ್ರಗಳೇ ವಿನ್ಯಾಸಕಾರರ ಕಲ್ಪನೆ ಅರಳುವುದಕ್ಕೆ ಕಾರಣವಾಗಿದೆ. ಅನೇಕ ಸುಂದರ ಚಿತ್ರಗಳಿಗೆ ರೇಖಾಚಿತ್ರ, ಜ್ಯಾಮಿತಿಚಿತ್ರ, ನಕ್ಷಾಚಿತ್ರಗಳಿಗೆ ಜನ್ಮಕೊಟ್ಟವು. ಹೀಗೆ ಹಸ್ತಪ್ರತಿಗಳ ರಕ್ಷಣಾ ಸಮಸ್ಯೆಗಳು ಮೂಲತಃ ಹಸ್ತಪ್ರತಿಗಳ ಕಲಾವಿನ್ಯಾಸಕ್ಕೆ ಬುನಾದಿಯಾಗಿ ಪರಿಣಮಿಸಿರಬಹುದು. ಈ ಕುರಿತು ಡಾ. ಬಿ.ಕೆ.ಹಿರೇಮಠರು ಮೂರು ಭಾಗಗಳಾಗಿ ವಿಂಗಡಿಸಿಕೊಂಡದ್ದು (೧) ಹಸ್ತಪ್ರತಿಗಳ ಒಟ್ಟು ರೂಪರೇಖಾ ವಿನ್ಯಾಸ (೨) ಹಸ್ತಪ್ರತಿಗಳ ಬರಹದ ವಿನ್ಯಾಸ (೩) ಹಸ್ತಪ್ರತಿಗಳ ಚಿತ್ರಕಲಾ ವಿನ್ಯಾಸ ಎಂದು ಅಭ್ಯಾಸವನ್ನು ಸವಿಸ್ತಾರವಾಗಿ ಮಾಡಿರುವದನ್ನು ಗಮನಿಸಬೇಕಾಗುತ್ತದೆ.

**ಹಸ್ತಪ್ರತಿಗಳ ಚಿತ್ರಕಲಾ ವಿನ್ಯಾಸ:**

ನಮ್ಮ ಪ್ರಾಚೀನರು ಹಸ್ತಪ್ರತಿಗಳನ್ನು ಕಲಾಪೂರ್ಣವಾಗಿ ಅಲಂಕರಿಸುತ್ತ ಬಂದಿದ್ದರೂ ನಾವು ಮಾತ್ರ ಅವುಗಳನ್ನು ಕಾವ್ಯ ಇಲ್ಲವೆ ಶಾಸ್ತ್ರ ದೃಷ್ಟಿಯಿಂದ ನೋಡಿ ಕೆಲಸ ಮಾಡುತ್ತ ಬಂದಿದ್ದೇವೆಯೇ ಹೊರತು.

ಅಲ್ಲಿಯ ಕಲಾಪ್ರಜ್ಞೆಯನ್ನು ಪರಿಶೀಲಿಸುವ ಪ್ರಯತ್ನದತ್ತ ಬೆನ್ನು ತಿರುಗಿಸುತ್ತಲೇ ಬಂದಿದ್ದೇವೆ. ಬಹಳಷ್ಟು ಅನ್ಯಾಯವನ್ನು ಕಲಾಕ್ಷೇತ್ರಕ್ಕೆ ಮಾಡಿದ್ದು ಇತ್ತೀಚೆಗೆ ಹಸ್ತಪ್ರತಿಗಳ ಅಧ್ಯಯನವು ಶಾಸ್ತ್ರೀಯವಾಗಿ ಬೆಳೆಯುತ್ತಿರುವ ಇಂದಿನ ಸಂದರ್ಭದಲ್ಲಿ ವಿದ್ವಾಂಸರ ದೃಷ್ಟಿ ಹಸ್ತಪ್ರತಿಗಳಲ್ಲಿನ ಚಿತ್ರಕಲಾ ಸಂಪತ್ತಿನತ್ತ ಹರಿಯುತ್ತಿರುವುದು ಸ್ವಾಗತಾರ್ಹವಾದುದು. ಇಂಥಹ ಕಲಾಪೂರ್ಣವಾದ ಹಸ್ತಪ್ರತಿಗಳ ಸಂಖ್ಯೆಯು ಒಟ್ಟು ಹಸ್ತಪ್ರತಿಗಳ ಮೊತ್ತಕ್ಕೆ ಹೋಲಿಸಿದಾಗ ಕಡಿಮೆಯೆಂದೆನಿಸಿದರೂ ಅವುಗಳು ಅಲಕ್ಷಿಸುವಂಥವುಗಳಲ್ಲ ಎಂಬುದು ಈಗೀಗ ಮನದಟ್ಟಾಗುತ್ತಿದೆ.

**ಪತ್ರಚ್ಛೇದನ ಕಲೆ:**

ಪ್ರಾಚೀನ ಕಾಲದಲ್ಲಿ ತಾಳೆಗರಿಯ ಮೇಲೆ ಕಂಠದಿಂದ ಕೊರೆದು ರೇಖಾಚಿತ್ರ ಬಿಡಿಸುತ್ತಿದ್ದರು. ಇದಕ್ಕೆ "ಪತ್ರಚ್ಛೇದ" ಎಂಬ ಪರಿಭಾಷೆ ಬಳಕೆಯಲ್ಲಿತ್ತು. ವಾತ್ಸಾಯನನ ಕಾಮಸೂತ್ರದಲ್ಲಿ ಬರುವ ೬೪ ಕಲೆಗಳ ಬಗ್ಗೆ ಹೇಳುತ್ತ ಕರ್ಮಾಶ್ರಯದಲ್ಲಿ "ಪತ್ರಚ್ಛೇದ್ಯಮ್" ಎಂದು ಯಶೋಧರನು ಕಲೆಯ ಬಗ್ಗೆ ಹೇಳುತ್ತಾನೆ. "ಅರ್ಜುನನು ಬಾಲ್ಯದಲ್ಲಿ ಚಿತ್ರಕರ್ಮ, ಪತ್ರಚ್ಛೇಧ, ಗೃಹಗಣಿತ ರತ್ನ ಪರೀಕ್ಷೆಗಳೊಳಂ.... ಸರ್ವಜ್ಞ ಮಹೇಂದ್ರಜಾಣನುಂ"[೧೪] ಆದನೆಂದು ಪಂಪನು ಹೇಳುತ್ತಾನೆ. ರಾಜಕುಮಾರ ರಾಜಕುಮಾರಿಯರಿಗೆ ಬಾಲ್ಯಾವಸ್ಥೆಯಲ್ಲಿ "ಚಿತ್ರ ಕರ್ಮ" (Painting) ಮತ್ತು "ಪತ್ರಚ್ಛೇದ" (Engraving on palm leaf) ಗಳನ್ನು ಅಭ್ಯಾಸ ಮಾಡಿಸಿದುದು ಸೂಕ್ತವೆನಿಸುತ್ತದೆ. ತಾಳೆಗರಿಗಳ ಮೇಲೆ ಕಂಠ, ಕೈವಾರ ಹಾಗೂ ರೇಖಾಪಟ್ಟಿ ಮುಂತಾದ ಸಾಧನಗಳಿಂದ ನಕ್ಷೆ, ಚಿತ್ರರಚನೆಗಳನ್ನು ಮಾಡುವ ಈ "ಪತ್ರಚ್ಛೇದನ" ಕಲೆಯು ಪ್ರಾಚೀನ ಕಾಲದಿಂದಲೂ ಉಳಿದುಕೊಂಡು ಬಂದ ಒಂದು ಅಪರೂಪವಾದ ಕಲೆ, ದಕ್ಷಿಣ ಭಾರತದಲ್ಲಿ ತಾಳೆಗರಿಗಳ ಮೇಲೆ ಕಂಟದಿಂದ ಬರೆಯುವದೊಂದು ವೈಶಿಷ್ಟ್ಯವಾಗಿರುವಂತೆ ಈ "ಪತ್ರಚ್ಛೇದನ"ವೂ ಒಂದು ದಕ್ಷಿಣ ಭಾರತೀಯರ ವಿಶಿಷ್ಟ ಕಲೆಯಾಗಿದೆ.[೧೫]


**ಹಸ್ತಪ್ರತಿ ಚಿತ್ರರಚನೆಗಳ ವಿಂಗಡನೆ:**

ಕನ್ನಡ, ಸಂಸ್ಕೃತ, ಪ್ರಾಕೃತ ಭಾಷೆಗಳಲ್ಲಿ ಕಾಣಸಿಗುವ ಹಸ್ತಪ್ರತಿಗಳು ಕಾವ್ಯ ಸಾಹಿತ್ಯ, ಲೌಕಿಕ ಶಾಸ್ತ್ರ ಸಾಹಿತ್ಯ, ಆಗಮಿಕಶಾಸ್ತ್ರ ಸಾಹಿತ್ಯ ಪ್ರಕಾರಗಳಲ್ಲಿವೆ. ಈ ಎಲ್ಲಾ ಪ್ರಕಾರಗಳಲ್ಲಿಯೂ "ಚಿತ್ರಕಲೆಯು ಒಂದು ಪರಂಪರೆ" ಎಂಬಂತೆ ಬಿಂಬಿತವಾಗಿದೆ. ಹೀಗಾಗಿ ಹಸ್ತಪ್ರತಿ ಚಿತ್ರಕಲೆಗೆ ಸುದೀರ್ಘ ಇತಿಹಾಸವಿದೆ. ಆ ಇತಿಹಾಸದ ಭಾಗವಾಗಿ ವಿದ್ವಾಂಸರ ಅಧ್ಯಯನಕ್ಕೆ ಒಳಗಾದ ಕೆಲವು ಸಚಿತ್ರ ಹಸ್ತಪ್ರತಿಗಳನ್ನು ಇಲ್ಲಿ ಗಮನಿಸಲಾಗಿದೆ. ವೀರಶೈವ ಚಿತ್ರಕಲೆಯನ್ನೇ ಕುರಿತು ಹೇಳುವ ಶಾಸ್ತ್ರ ಗ್ರಂಥಗಳಲ್ಲಿ (೧) ಚಿತ್ರಕಲಾ ಪ್ರಧಾನ ಶಾಸ್ತ್ರ ಗ್ರಂಥಗಳು (೨) ಚಿತ್ರಕಲಾ ಪ್ರಾಸಂಗಿಕ ಶಾಸ್ತ್ರ ಗ್ರಂಥಗಳು ಎಂದು ಎರಡು ರೀತಿಯಲ್ಲಿ ಅಧ್ಯಯನಕ್ಕೊಳಪಡಿಸಿದ್ದು, ಕಾಲಗರ್ಭದಲ್ಲಿ ಹೂಳಿಹೋದ ಅಸಂಖ್ಯಾತ ಹಸ್ತಪ್ರತಿಗಳೊಡನೆ ಪತ್ರಚ್ಛೇದನಕಲೆಯ ಉತ್ಕೃಷ್ಟ ಮಾದರಿಗಳು

---

೧೪. ಪಂಪ: ಪಂಪಭಾರತ : ಅಧ್ಯಾಯ ೨ ಪದ್ಯ ೩೪.
೧೫. ಡಾ. ಬಿ.ಕೆ.ಹಿರೇಮಠ: ಕನ್ನಡ ಹಸ್ತಪ್ರತಿಗಳು: ಒಂದು ಅಧ್ಯಯನ : ಪುಟ ೧೬೬

ಅಳಿದು ಹೋಗಿರಬಹುದು. ಆದರೂ ಪರಂಪರಾಗತವಾಗಿ ಕನ್ನಡಿಗರು ಉಳಿಸಿಕೊಂಡು ಬಂದ, ವೀರಶೈವ ಹಸ್ತಪ್ರತಿ ಚಿತ್ರರಚನೆಗಳನ್ನು ಮುಂದಿರಿಸಿಕೊಂಡು, ಅಭ್ಯಾಸದ ಅನುಕೂಲಕ್ಕಾಗಿ ಅವುಗಳನ್ನು ವಿಂಗಡಿಸಿಕೊಂಡು ನಕ್ಷೆಯನ್ನು ಈ ಕೆಳಗಿನಂತೆ ತಯಾರಿಸಿಕೊಳ್ಳಲಾಗಿದೆ.






**೧. ಶಾಸ್ತ್ರ ಸಂಬಂಧಿ ಚಿತ್ರಗಳು:**

ಧಾರ್ಮಿಕ ಇಲ್ಲವೇ ಮಾಂತ್ರಿಕ ಮಹತ್ವವುಳ್ಳ ಕೆಲವು ಸಂಗತಿಗಳನ್ನು ರಹಸ್ಯವಾಗಿ ಹೇಳಲಾಗಿದೆ. ಕೆಲವು ಚಿತ್ರ ಅಥವಾ ಸಾಂಕೇತಿಕ ಚಿತ್ರಗಳೂ ಶಾಸ್ತ್ರಗಳ ವಿವರಣೆಗಾಗಿ ಕೊಡ ಮಾಡುವ ಆಕೃತಿಗಳೂ ಮಂತ್ರ, ತಂತ್ರ, ಯಂತ್ರಾದಿಗಳಲ್ಲಿನ ಚಿತ್ರಸಂಕೇತಗಳೂ ಶಕುನಾದಿಗಳನ್ನು ಕಂಡುಕೊಳ್ಳುವ, ರೋಗಾದಿ ಕಾಡಾಟಗಳ ಪರಿಹಾರ ಸೂಚಿತ ರಹಸ್ಯ ಚಿತ್ರಗಳೂ ಈ ಗುಂಪಿಗೆ ಸೇರುತ್ತವೆ.

ಇಂತಹ ಚಿತ್ರಗಳು ಹಸ್ತಪ್ರತಿಗೆ ಕೇವಲ ಅಲಂಕಾರಗಳಲ್ಲ, ವಿಷಯಪ್ರತಿಪಾದನೆಯ ಒಂದು ವಿಧಾನ, ಸಾಧನ, ಇಲ್ಲಿ ಚಿತ್ರೋದಾಹರಣೆಗಳು ಅನಿವಾರ್ಯವಾಗಿ ಬರುತ್ತಿದ್ದು, ಹಸ್ತಪ್ರತಿ ಲೇಖಕರು ಕೇವಲ ಬರಹಗಾರರಾಗಿರದೆ ಪತ್ರಚ್ಛೇದನ ಕಲೆಯನ್ನು ಬಲ್ಲವರಾಗಿರಬೇಕಾಗುತ್ತಿತ್ತು. ಇಂತಹವುಗಳನ್ನು ತಲೆಮಾರಿನಿಂದ ತಲೆಮಾರಿಗೆ ಸಾಗಿಸಿಕೊಂಡು ಬಂದವರು ಬಲ್ಲಿದರಾದ ಬರಹಗಾರರು. ಲೋಕ ಕಲ್ಯಾಣದ ದೃಷ್ಟಿಯಿಂದ ಇಂಥ ಶಾಸ್ತ್ರ ವಿದ್ಯೆಗಳನ್ನು ಕರಗತ ಮಾಡಿಕೊಂಡಿರುತ್ತಿದ್ದ ಸ್ವಾಮಿಗಳು, ಆಚಾರ್ಯರು, ಮಠದೇವರುಗಳು ಮೊದಲಾದವರೆ ಬರವಣಿಗೆಯ ಜೊತೆಗೆ ಇಂತಹ ಚಿತ್ರರಚನೆಗಳನ್ನು ಮಾಡಲು ಸಮರ್ಥರಾಗಿರುತ್ತಿದ್ದರು. ಈ ಬಗೆಯ ಚಿತ್ರ ರಚನೆಗಳನ್ನು ಒಳಗೊಂಡ ಪ್ರಾತಿನಿಧಿಕ ಹಸ್ತಪ್ರತಿಗಳಲ್ಲಿನ ಕೆಲವು ಉದಾಹರಣೆಗಳನ್ನು ಇಲ್ಲಿ ನೋಡಬಹುದಾಗಿದೆ.

ದೇವಾಲಯಗಳ ಮುಂಭಾಗದಲ್ಲಿ ಕಂಗೊಳಿಸುತ್ತಿರುವ ಮಾನಸ್ತಂಭಗಳನ್ನು ಈ ಗರಿಗಳಲ್ಲಿ ಬಿಡಿಸಿ ತೋರಿಸಲಾಗಿದೆ. ಸ್ತಂಭದ ಪೀಠ ಮೇಲಿನ ಸ್ತಂಭ ರಚನೆ. ಅದಕ್ಕೂ ಮೇಲಿರುವ ಮಂಟಪ ಈ ಪ್ರಮುಖ ಭಾಗಗಳೆಲ್ಲವನ್ನು ಪ್ರಮಾಣಬದ್ಧವಾಗಿ ರಚಿಸಿ ತೋರಿಸಲಾದ ಹಸ್ತಪ್ರತಿಯಿದು. ಚಿತ್ರಿತ ಮಾನಸ್ತಂಭಗಳೆಲ್ಲ ಒಂದರಂತೆ ಒಂದಿರದೆ ವೈವಿಧ್ಯಪೂರ್ಣವಾಗಿವೆ. ಸ್ತಂಭದ ಸ್ಥೂಲವಾದ ನಕ್ಷೆಯನ್ನು ಮಾತ್ರ ಚಿತ್ರಿಸದೆ ಪೀಠದ ಭಾಗ, ಅಲ್ಲಿನ ನಕ್ಷಾವಿವರಗಳು, ಪೀಠಭಾಗದಲ್ಲಿ ಮತ್ತು ಪೀಠದ ಮೇಲ್ಗಡೆಯಲ್ಲಿ ಬರಬೇಕಾದ ವಿವಿಧ ಹಂತಗಳು, ಅವುಗಳ ವಿಶಿಷ್ಟವಾದ ರಚನೆ, ಆಕಾರಾದಿಗಳು ಮುಂದೆ ಸಣ್ಣದಾಗುತ್ತ ಮೇಲೇಳುವ ಸ್ತಂಭದ ಮಧ್ಯ ಮಧ್ಯ ಬರುವ ಪಟ್ಟಿಗಳು ಅಲ್ಲಿನ ನಕ್ಷಾ ವಿವರಗಳು, ಸ್ತಂಭದ ಶಿರೋಭಾಗದಲ್ಲಿ ವಿಜೃಂಭಿಸುವ ಕುಂಭದಾಕೃತಿ, ಮಂಟಪದಾಕೃತಿಗಳು ಅಪರೂಪವಾಗಿ ಚಿತ್ರಿಸಲ್ಪಟ್ಟಿವೆ. ಓಲಾಡುವ ಘಂಟೆ, ಸರಪಳಿ ಒಂದಕ್ಕೊಂದು ಪೂರಕವಾಗಿವೆ. ಇಡೀ ಮಾನಸ್ತಂಭ, ಪೀಠ, ಮಂಟಪದ ಸೊಬಗನ್ನೇ ತಾಳೆಗರಿಗಳಲ್ಲಿ ಎರಕ ಹಾಕಿದಂತಿದೆ. ಚಿತ್ರ, ಶಿಲ್ಪ, ವಾಸ್ತು ಶಿಲ್ಪಗಳ ಸುಂದರ ಸಮನ್ವಯ ಆಕೃತಿಗಳಾಗಿವೆ. ಹೀಗೆ ಹಸ್ತಪ್ರತಿಗಳಲ್ಲಿ, ದೇವಸ್ಥಾನಗಳಲ್ಲಿ ನಡೆಯುತ್ತಿರುವ ವೈಭವದ ಪೂಜೆಗಳಿಗೆ ಬೇಕಾಗುವ ಅಲಂಕರಣದ ವಸ್ತು ಸಾಧನ ಸಾಮಗ್ರಿಗಳ ಚಿತ್ರ ವಿವರಗಳು ಇರುವುದು ಕಂಡು ಬರುತ್ತದೆ.[೧೬]

**ವೀರಶೈವ ತತ್ವಕೋಷವಾಗಿರುವ ಉದ್ಧರಣೆಗಳು:**

ಓಲೆಗರಿಗಳಲ್ಲಿನ ಚಿತ್ರರಚನೆಗಳು ವೀರಶೈವ ತತ್ವಗಳನ್ನು ಪ್ರತಿಪಾದಿಸುವ ಶಾಸ್ತ್ರೋಕ್ತ ಚಿತ್ರಗಳಾಗಿವೆ. "ಉದ್ಧರಣಿ ಪಟಲಗಳು ಮತ್ತು ಉದ್ಧರಣಿ ವಾಚ್ಯ"ವನ್ನೊಳಗೊಂಡ ಅನೇಕ ಹಸ್ತಪ್ರತಿಗಳು ಲಭ್ಯವಾಗಿವೆ. ಇವು "ಪತ್ರಚ್ಛೇದನ ಕಲೆಯ" ಉತ್ತಮ ಉದಾಹರಣೆ ಆಗಿರುವುದಲ್ಲದೇ ವೀರಶೈವರ ಅಪೂರ್ವ ಕೊಡುಗೆಗಳಾಗಿವೆ. ಈ ಪಟಲಗಳಲ್ಲಿ ಯಂತ್ರಗಳಂತಿರುವ ಚೌಕೋನ, ತ್ರಿಕೋನ, ವರ್ತುಲ, ಆಯತ ಮುಂತಾದ ಜ್ಯಾಮಿತಿಯ ಆಕಾರಗಳನ್ನು ಒಳಗೊಂಡಂತೆ ಮಾನವ, ಪ್ರಾಣಿ, ಪಕ್ಷಿ, ಜಲಚರಗಳನ್ನೊಳಗೊಂಡ ಚಿತ್ರಗಳು ಇಲ್ಲಿ ಕಂಡು ಬರುತ್ತವೆ. ಅಲ್ಲದೇ ಸಾಂಕೇತಿಕ ನಕ್ಷೆಗಳು, ಬೀಜಾಕ್ಷರಗಳು, ಚಕ್ರಗಳು, ಕಮಲದಳಗಳನ್ನು ಮತ್ತು ಮಂತ್ರದ ಬೀಜಾಕ್ಷರಗಳನ್ನು ಒಳಗೊಂಡಿರುವ ಅನುಪಮವಾದ ಕಲಾಕೃತಿಗಳಾಗಿವೆ. ಅಷ್ಟೇ ಅಲ್ಲದೆ ಪ್ರಾಣಿದೇಹ, ಮನುಷ್ಯಮುಖ ಹೀಗೆ ಇಲ್ಲಿನ ಸಂಕೇತಗಳು ವೀರಶೈವ ತತ್ವಗಳ ರಹಸ್ಯವನ್ನು ತಿಳಿಸಿಕೊಡುವ ಸಾಧನಗಳಾಗಿ ಹೊರಹೊಮ್ಮಿವೆ.

ಈ ಹಸ್ತಪ್ರತಿ ಚಿತ್ರಕಾರನ ಕಲಾಕೌಶಲ್ಯವನ್ನು ಸಾರಿ ಹೇಳುವ ಇಲ್ಲಿನ ನಯವಾದ ರೇಖಾವಿನ್ಯಾಸ, ಸಾಂಪ್ರದಾಯಿಕ ಸಮೃದ್ಧವಾದ ನಕ್ಷಾ ರಚನೆಗಳು, ವರ್ಣವೈವಿಧ್ಯದ ಬೆಡಗು ಚಿತ್ರ ಸಂಯೋಜನೆಯಲ್ಲಿ ವ್ಯಕ್ತವಾದ ಕಲಾಪ್ರೌಢಿಮೆ ಮೆಚ್ಚಬೇಕಾದವುಗಳು. ಹಸ್ತಪ್ರತಿ ವರ್ಣಚಿತ್ರಗಳಲ್ಲಿ ಸಾಮಾನ್ಯವಾಗಿ ಮೂಲವರ್ಣಗಳನ್ನೇ

---

೧೬. ಡಾ. ಬಿ.ಕೆ.ಹಿರೇಮಠ: ಕನ್ನಡ ಹಸ್ತಪ್ರತಿಗಳು: ಒಂದು ಅಧ್ಯಯನ : ಪುಟ ೧೭೩.

ಹೆಚ್ಚೂ ಕಡಿಮೆ ನೇರವಾಗಿ ಬಳಸಿರುವುದು ಕಂಡು ಬಂದರೂ ಇಲ್ಲಿ ಮೂಲವರ್ಣಗಳೊಂದಿಗೆ ಮಿಶ್ರಣ ಮಾಡಿದ ವರ್ಣಗಳನ್ನೂ ಬಳಕೆ ಮಾಡಿಕೊಂಡಿರುವುದು ಕಂಡು ಬರುತ್ತದೆ. ಈ ಕಲಾವಿದರು ಉಷ್ಣವರ್ಣ (Warm Colour) ಗಳನ್ನು ಬಳಸಿಕೊಂಡರೂ ಕೂಡಾ, ಒಟ್ಟು ಚಿತ್ರದಲ್ಲಿನ ವರ್ಣ ಹಂಚಿಕೆ (Colour distribution) ಯಿಂದಾಗಿ, ಇಡೀ ಚಿತ್ರ ಕಣ್ಣಿಗೆ ಸುಂದರವಾಗಿರುವಂತೆ ಚಿತ್ರಿಸಿದ್ದು ಗಮನಾರ್ಹವಾಗಿದೆ. ಈ ಚಿತ್ರಕಲಾವಿದ ಉದ್ಧರಣಿಗಳ ಮೂಲ ಉದ್ದೇಶವನ್ನು ಮರೆಯದೇ ಚಿತ್ರಿಸಿರುವುದೊಂದು ಅವನ ಹೆಗ್ಗಳಿಕೆಯಾಗಿದೆ. ಪತ್ರಮಾಧ್ಯಮದ ವರ್ಣಚಿತ್ರಗಳನ್ನೊಳಗೊಂಡ ಹಸ್ತಪ್ರತಿಗಳಲ್ಲಿಯೇ ಅದ್ವಿತೀಯಾಗಿ ನಿಲ್ಲುವ ಈ ಉದ್ಧರಣಿಗಳು ಪ್ರಮುಖ ಕಲಾವಸ್ತುಗಳಾಗಿ ರೂಪುಗೊಂಡಿವೆ.

ಮಾನವ ಬೆಳೆಯುತ್ತಾ ಹೋದಂತೆ ತನ್ನ ಬದುಕಿನ ಹತ್ತಿರದ ಎಲ್ಲಾ ವ್ಯವಹಾರಗಳನ್ನು ತಾನು ಅರಿತು ನುರಿತು ಭಾಷಾಮಾಧ್ಯಮದ ಮಿತಿಯಲ್ಲಿ ನಿರ್ವಹಿಸುತ್ತಿರುತ್ತಾನೆ. ಕಾವ್ಯ, ಕಥೆಗಳಂತಹ ಭಾಷಾಮಾಧ್ಯಮಗಳ ಮಿತಿಯಲ್ಲಿ ದಾಖಲೆಗೊಳಿಸುತ್ತಲೂ ಬಂದಿದ್ದಾನೆ. ಮಾನವನ ಸಾರಸ್ವತ ಬೆಳವಣಿಗೆಯ ಹಂತದ ನಂತರದಲ್ಲಿ ಮಾತಿನ ಧ್ವನಿ ಘನೀಕರಣಗೊಳ್ಳುತ್ತಾ ಶಬ್ದದ ವಚನ ನಿರ್ವಚನಗೊಳ್ಳುತ್ತದೆ. ಬದುಕು ಬಯಲನ್ನು ಪ್ರವೇಶಿಸುತ್ತಿರುವಂತೆ ಭೌತದಾಚೆಗೆ ಆತ ನಿಲ್ಲುತ್ತಾನೆ. ಆಗ ಅಲ್ಲಿ ಅಮೂರ್ತದ ಅನುಭಾವದ ಅನುಭವವನ್ನು ಮೂರ್ತಗೊಳಿಸಲು ವರ್ಣಚಿತ್ರವನ್ನು ಮಾಧ್ಯಮವಾಗಿ ಬಳಸಿಕೊಳ್ಳುತ್ತಾನೆ. ಈ ರೀತಿಯ "ಭಾಷೆಗೆ ಮೀರಿದ ಭೌತದಾಚೆಯ ಬಯಲು ಬದುಕನ್ನು ವ್ಯಕ್ತಪಡಿಸುವಂತಹ. ಅಂತರಂಗದ ಅರಿವಿನ ಅನುಭಾವದ ಹೊರರೂಪಗಳನ್ನೇ ನಾವು ಉದ್ಧರಣಿಗಳೆಂದು ಕರೆಯಬಹುದಾಗಿದೆ".

ಇಂಥ ತಾಂತ್ರಿಕ ಮತ್ತು ತಾತ್ವಿಕ ಚಿತ್ರಗಳು ವೀರಶೈವರಲ್ಲಿ "ಉದ್ದರಣಿ"ಗಳೆಂದೂ, ಭಾಗವತರಲ್ಲಿ – "ಮಂಡಲ"ಗಳೆಂದೂ, ಬೌದ್ಧರಲ್ಲಿ "ಟಂಕಾ ಚಿತ್ರ"ಗಳೆಂದೂ (ಟಿಬೇಟಿನ ಲಾಮಾಗಳು ಧ್ಯಾನಕ್ಕಾಗಿ ಬಳಸಿಕೊಳ್ಳುವ). ಯೋಗದಲ್ಲಿ "ಕುಂಡಲಿನಿ"ಗಳೆಂದೂ, ತನ್ನದೇ ಆದ ಧಾರ್ಮಿಕ ಹಿನ್ನೆಲೆಯಲ್ಲಿ ತಾಂತ್ರಿಕತೆಯೊಂದಿಗೆ ಹಾಗೂ ವೈಚಾರಿಕವಾಗಿ ಬೆಳವಣಿಗೆ ಹೊಂದುತ್ತಾ ಬಂದಿದೆ.

**ಉದ್ಧರಣಿ ವಾಚ್ಯ ಮತ್ತು ಚಿತ್ರಗಳು ಸಂಗ್ರಹ:**

ಧಾರವಾಡ, ಹಂಪೆ, ಬೆಂಗಳೂರು, ಮೈಸೂರು, ಗುಲಬರ್ಗಾ ವಿಶ್ವವಿದ್ಯಾಲಯಗಳ ಕನ್ನಡ ಅಧ್ಯಯನ ಪೀಠ ಮತ್ತು ಹಸ್ತ ಪ್ರತಿ ವಿಭಾಗಗಳಲ್ಲಿ ಹಾಗೂ ಧರ್ಮಸ್ಥಳದ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನಾ ಪ್ರತಿಷ್ಠಾನ, ಶಿವಯೋಗಮಂದಿರ, ಗದಗ ತೋಂಟದಾರ್ಯಮಠ, ಬೆಳಗಾವಿಯ ನಾಗನೂರುಮಠಗಳಲ್ಲಿ ಉದ್ಧರಣಿ ಪಟಲ ಮತ್ತು ವಾಚ್ಯಗಳು ದೊರೆಯುತ್ತವೆ.

**ಉದ್ಧರಣಿ ವಾಚ್ಯ ಮತ್ತು ಪಟಲಗಳ ಉಗಮ:**

ಪೂಜ್ಯ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ೧೯೫೭ ರಲ್ಲಿಯೇ ಪ್ರಕಟಿಸಿದ "ಶಿವಾನುಭವಶಾಸ್ತ್ರ"ದಲ್ಲಿ ಅನಾದಿಭಕ್ತೋದ್ಧರಣಿಯ ಆರಂಭದಲ್ಲಿ ಸ್ವತಃ ಉದ್ಧರಣಿಕಾರನೇ ಸ್ಪಷ್ಟಪಡಿಸಿದ್ದು "ಶ್ರೀ ವೀರಶೈವ ಸಿದ್ಧಾಂತ

ಸ್ಥಾಪನಾಚಾರ್ಯರಪ್ಪ ಆದ್ಯರನುಮತದಿಂದ ಉದ್ಧರಿಸಿದ ಕುಟಿಲ, ಕುಹಕ, ಮಂತ್ರ, ತಂತ್ರಗಳಲ್ಲದ, ಶಿವಜ್ಞಾನ ಸಾಧನವಪ್ಪ, ಶಿವಮಂತ್ರನ್ಯಾಸ, ಶಿವತತ್ವಸ್ಥಾಪಿತ, ಶಿವಲಿಂಗಾಂಗ ಸಂಬಂಧ ಪ್ರತಿಪಾದಕಾಗಮ ಗ್ರಂಥಾರ್ಥ ವಾಚ್ಯಗಳಿಂದ ಕೆಲವು ವಚನಗಳಿಂದ ಸಂಗ್ರಹಿಸಿದ ಉದ್ಧರಣೆ ಪಟಲವಿದು. ಶಿವಲಿಂಗಾಂಕಿತ ಶಾಸನವಿದುವೆಂದು ಶಿವಶರಣರ ವಧರಿಪುದು"[೧೭] ಎಂಬುದಾಗಿ ತಿಳಿಸಿರುವರು.

ಪೂಜ್ಯ ಶ್ರೀ ಡಾ. ಜ.ಚ.ನಿ. ಅವರು ಉದ್ಧರಣೆಗಳ ಉಗಮ, ಆಗಮ, ಆಗಮಗಳಲ್ಲಿ ಉದ್ಧರಣೆಗಳ ಶಬ್ದಚಿತ್ರಗಳಿವೆ, ವರ್ಣವಿನ್ಯಾಸ ನಿರೂಪಣೆ ಇದೆ, ಮಂತ್ರಾಕ್ಷರವಿನ್ಯಾಸವಿದೆ. ಅಕ್ಷರ, ಆಕೃತಿ, ವರ್ಣ, ಅರ್ಥ, ಭಾವ, ಅನುಭಾವಗಳ ನಿರೂಪಣೆ ಶಿವಾಗಮ ಸಾಹಿತ್ಯದಲ್ಲಿ ಸೃಜನಗೊಂಡಿದೆ. ವೀರಶಿವಾಗಮ ಸಾಹಿತ್ಯವು ಅನಾದಿ ವೀರಶೈವ ತತ್ವಗಳಿಗೆ ತಕ್ಕ ಚಕ್ರಗಳನ್ನು, ವರ್ಣಗಳನ್ನು, ಆಕೃತಿಗಳನ್ನು ರೂಪಿಸಿ, ಉದ್ಧರಣೆಗಳಿಗೆ ಉಪಯುಕ್ತವಾದ ಆಕರವನ್ನು ಸೃಜಿಸಿದೆ. ಅರ್ಥಗರ್ಭಿತವಾದ, ಭಾವಪೂರ್ಣವಾದ, ಮಂತ್ರಮಯವಾದ ಸಂಕೇತಗಳನ್ನು ಸೃಜಿಸಿದೆ, ನಿರ್ವಚನಗಳನ್ನು ಉಗಮಿಸಿದೆ[೧೮] ಎಂದಿರುವರು.

ಡಾ. ಕೆ.ರವೀಂದ್ರನಾಥ ಅವರು ೨೦೧೦ ರಲ್ಲಿ ಪ್ರಕಟಿಸಿದ "ಉದ್ಧರಣೆ ಸಾಹಿತ್ಯ"ದಲ್ಲಿ "ಅನಾದಿಭಕ್ತೋದ್ಧರಣೆಯಲ್ಲಿರುವ ಉದ್ಧರಣೆಕಾರನ ಹೇಳಿಕೆ"ಯನ್ನು ಹಾಗೂ ಲಿಂಗಷಡಕ್ಷರೋದ್ಧರಣೆ ಮತ್ತು ಪಂಚಮೂರ್ತಿ ಲಿಂಗೋದ್ಧರಣೆಗಳ ಪೂರ್ಣ ಪಾಠ ತೋಂಟದ ಸಿದ್ದಲಿಂಗಯತಿಗಳ ವಚನಗಳೇ ಆಗಿರುವುದನ್ನು ಲಕ್ಷಿಸಬೇಕು. ಈ ಹಿನ್ನೆಲೆಯಲ್ಲಿ ವೀರಶೈವ ತತ್ವಗಳನ್ನು ಧಾರ್ಮಿಕ ನೆಲೆಯಲ್ಲಿ ನಿರ್ವಚಿಸುವ ಕಾಲವೆನಿಸಿದ ಬಸವೋತ್ತರ ಯುಗದಲ್ಲಿ ಅಂದರೆ ೧೫ನೆಯ ಶತಮಾನದಿಂದೀಚೆಗೆ ಉದ್ಧರಣೆ ಸಾಹಿತ್ಯ ರಚನೆ ಆಗಿರಬೇಕೆಂದು ಅಭಿಪ್ರಾಯ ಪಟ್ಟಿರುವರು[೧೯].

ಶ್ರೀ ಚಂದ್ರಶೇಖರ ಶಾಸ್ತ್ರಿಗಳು, ರಾಯಚೂರು ಇವರು "ಶಿವಾನುಭವಶಾಸ್ತ್ರ" ಗ್ರಂಥದ ಮುನ್ನುಡಿಯಲ್ಲಿ "ಶ್ರೀ ಮದ್ವೀರಶೈವ ಸಿದ್ಧಾಂತ ಸ್ಥಾಪನಾಚಾರ್ಯರಿಂದಲೂ, ಆದ್ಯರ ಅನುಮತದಿಂದಲೂ ಉದ್ಧರಿಸಿ ಕುಟಿಲ, ಕುಹಕ, ಯಂತ್ರ, ತಂತ್ರಗಳಲ್ಲದ, ಮಹಾಶಿವಾನುಭವ ಜ್ಞಾನ ಸಾಧನವಪ್ಪ, ಶಿವಮಂತ್ರನ್ಯಾಸ, ಶಿವತತ್ವ ಸ್ಥಾಪಿತ, ಶಿವಲಿಂಗಾಂಗ ಸಂಬಂಧ ಪ್ರತಿಪಾದಕವಾದ ಕೆಲವು ಶಿವಾಗಮಗಳ ವಚನಗಳಿಂದಲೂ, ಕೆಲವು ಶಿವಶರಣರ ವಚನಗಳಿಂದಲೂ ಸಂಗ್ರಹಿಸಿ, ಇದಕ್ಕೆ "ಶಿವಾನುಭವಶಾಸ್ತ್ರ" ಎಂಬ ಹೆಸರನ್ನು ಕೊಡಲಾಗಿದೆ[೨೦] ಎಂದಿರುವರು.

ವೀರಶೈವ ಮತ್ತು ಲಿಂಗಾಯತ ಪದಗಳ ಬಳಕೆ ಹಾಗೂ ಈ ಉದ್ಧರಣೆ ಸಾಹಿತ್ಯ ಮತ್ತು ಚಿತ್ರಗಳ ಉಗಮವು ೧೫ನೆಯ ಶತಮಾನಕ್ಕೆ ತರುವ ಡಾ. ಕೆ.ರವೀಂದ್ರನಾಥರ ಅಭಿಪ್ರಾಯ ಸೂಕ್ತವಲ್ಲವೆಂದು ತಿಳಿದುಬರುತ್ತದೆ.

---

೧೭. ಪೂಜ್ಯ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು: ಶಿವಾನುಭವಶಾಸ್ತ್ರ : ಪುಟ ೧

೧೮. ಡಾ. ಬಿ.ವಿ. ಶಿರೂರ : (ಗೌರವ ಅಭಿನಂದನಾಗ್ರಂಥ) : ಪೂಜ್ಯ ಶ್ರೀ ಡಾ. ಜ.ಚ.ನಿ. : ಉದ್ಧರಣೆ ಸಾಹಿತ್ಯ : ಲೇಖನ: ಪುಟ ೧೫೬

೧೯. ಡಾ. ಕೆ.ರವೀಂದ್ರನಾಥ: ಉದ್ಧರಣೆ ಸಾಹಿತ್ಯ : ಪುಟ ೧೯.

೨೦. ಶ್ರೀ ಚಂದ್ರಶೇಖರ ಶಾಸ್ತ್ರಿಗಳು: ಶಿವಾನುಭವಶಾಸ್ತ್ರ : ಮುನ್ನುಡಿ ಪುಟ iii.

ಕಾರಣ ಉದ್ಧರಣೆಗಳ ಉಗಮವನ್ನು "ಅನಾದಿ ಭಕ್ತೋದ್ಧರಣೆಯ ಪ್ರಾರಂಭದಲ್ಲಿ ಉದ್ಧರಣೆಕಾರನೇ ಸ್ಪಷ್ಟ ಪಡಿಸಿರುವಂತೆ. "ಶಿವಲಿಂಗಾಂಗ ಸಂಬಂಧ ಪ್ರತಿಪಾದಕಾಗಮ"ವೆನ್ನುವುದರಲ್ಲಿಯೇ ಸ್ಪಷ್ಟತೆ ಇದೆ. ಡಾ. ಜ.ಚ.ನಿ.ಅವರೂ ಈ ಉದ್ಧರಣೆಗಳ ಉಗಮ ಆಗಮಕಾಲದ್ದೆಂದು ಅಭಿಪ್ರಾಯಪಟ್ಟಿರುವುದನ್ನು ತಮ್ಮ ಉದ್ದರಣೆ ಸಾಹಿತ್ಯದಲ್ಲಿ ತಾವೇ ತಿಳಿಸಿರುವರು. ಅದಾಗ್ಯೂ ಉದ್ಧರಣೆಗಳ ಉಗಮ ೧೨ನೆಯ ಶತಮಾನವೆಂದಿದ್ದು ಪ್ರಶ್ನಾರ್ಥಕವಾಗಿಯೇ ಉಳಿಯುತ್ತದೆ. ಶ್ರೀ ಚಂದ್ರಶೇಖರ ಶಾಸ್ತ್ರಿಗಳು "ಶಿವಾನುಭವ ಶಾಸ್ತ್ರ"ದ ಮುನ್ನುಡಿಯಲ್ಲಿ ಅತ್ಯಂತ ಸ್ಪಷ್ಟವಾಗಿಯೇ ಹೇಳಿರುವರು. ಉದ್ಧರಣೆಗಳ ಉಗಮ ಶಿವಾಗಮಗಳ ಕಾಲದ್ದೆಂದೂ ಕೆಲವು ಶಿವಶರಣರ ವಚನಗಳಿಂದಲೂ ರಚನೆಗೊಂಡಿವೆ ಎಂದು ಹೇಳಿರುವರು. ಜೊತೆಗೆ ನನ್ನ ಗಮನಕ್ಕೂ ಬಂದಿರುವಂತೆ "ಶಿವಾಗಮ ಸೌರಭ"ದಲ್ಲಿ ಬರುವ "ಶಾಂಭವಿ ಚಕ್ರೋದ್ಧರಣೆ"ಯ ಪಟಲ ಮತ್ತು ವಾಚ್ಯಗಳೊಂದಿಗೆ ವಿವರಣೆ ಬಂದಿರುವುದು[೨೧]. ಇದೇ ಗ್ರಂಥದಲ್ಲಿ "ಮಹಾಲಿಂಗೋದ್ಧರಣೆ"ಯ ವಾಚ್ಯ ಮತ್ತು ಪಟಲಗಳೊಂದಿಗೆ ವಿವರಣೆ ಬಂದಿರುವುದು[೨೨].

ಈ ಹಿನ್ನೆಲೆಯಲ್ಲಿ ಉದ್ಧರಣೆ ಸಾಹಿತ್ಯ ಮತ್ತು ಚಿತ್ರಗಳು ಉಗಮವಾದ ಕಾಲ ಆಗಮಗಳೇ ಆಗಿದ್ದುದು ಸ್ಪಷ್ಟವಾಗಿದೆ. ಆದರೆ ಕೆಲವು ಶಿವಶರಣರ ವಚನಗಳಿಂದಲೂ ಈ ಉದ್ಧರಣೆಗಳು ರೂಪುಗೊಂಡಿವೆ ಅನ್ನುವುದೂ ಸರಿಯಾಗಿಯೇ ಇದೆ. ಆಗಮಗಳಲ್ಲಿ ಶೈವರ ಸ್ಥಾವರಲಿಂಗ, ವೀರಶೈವರ ಇಷ್ಟಲಿಂಗಗಳ ಕಲ್ಪನೆಯನ್ನು ನೀಡಿದವರೇ ಆದಿ ರೇಣುಕಾಚಾರ್ಯರು ಎಂಬುದಕ್ಕೆ ಇಂದಿನ ಅನೇಕ ಸಂಶೋಧನೆಗಳಿಂದಾಗಿ ತಿಳಿದು ಬರುತ್ತದೆ. ಹರಪ್ಪಾ ಮೋಹೆಂಜೋದಾರೋದಲ್ಲಿ ದೊರೆತ ಆಧಾರಗಳು ಮತ್ತು ಆಗಮಗಳಲ್ಲಿಯ ಉಲ್ಲೇಖಗಳು ಶೈವ ವೀರಶೈವ, ಸ್ಥಾವರ ಲಿಂಗ, ಇಷ್ಟಲಿಂಗ, ಕಾಯಕ, ದಾಸೋಹ, ಚಿಚ್ಛಕ್ತಿ ನಿಲಯಗಳು, ಮಠಗಳು ಈ ಕಲ್ಪನೆಗಳೆಲ್ಲ ಪೂರ್ವದೆಂದು ಹಲವಾರು ವಿದ್ವಾಂಸರು ಈಗಾಗಲೇ ಅಭಿಪ್ರಾಯ ಪಟ್ಟಿರುವರು. ಈಗ ಈ "ಉದ್ಧರಣೆಗಳು ಆಗಮಗಳ ಸಾಲಿಗೆ ಸೇರುತ್ತವೆ ಎಂಬುದು ಮೇಲಿನ ಆಧಾರಗಳಿಂದ ದೃಢವಾಗುತ್ತದೆ. ಆದರೆ ಬಸವಯುಗದಿಂದಲೇ ಮೇಲಿನ ಎಲ್ಲವೂ ಕಾರ್ಯರೂಪಕ್ಕೆ ಬಂದಿತು ಅನ್ನುವುದು ಹಳೆಯ ಮಾತಾಯಿತು ಅಷ್ಟೇ. ಬಸವಯುಗದಲ್ಲಿ ಇವುಗಳಿಗೆಲ್ಲ ಕ್ರಾಂತಿಕಾರಕ ಚಾಲನೆಯನ್ನು ನೀಡಲಾಯಿತು. ವೀರಶೈವ ಪರಂಪರೆಗೆ ಪುನರುಜ್ಜೀವನ ನೀಡಿದ್ದು ಬಸವಯುಗ ಅನ್ನುವುದು ಅಷ್ಟೇ ಸತ್ಯವಾದದ್ದು" ಆಗಿದೆ. ಸರ್ವರನ್ನು ಆತ್ಮೋನ್ನತಿಯ ದಿವ್ಯಪಥದಲ್ಲಿ ಒಯ್ಯುವ, ದಿವ್ಯ ತೇಜೋಮೂರ್ತಿಗಳು ಯುಗಯುಗದಲ್ಲೂ ಅವತರಿಸುತ್ತಾ ಬಂದಿದ್ದಾರೆ.

"ಯದಾ ಯದಾ ಹಿ ಧರ್ಮಸ್ಯ ಹಾನಿ: ಶೈವಸ್ಯ ಜಾಯತೇ।
ತದಾ ತದಾವತಾರೋಯಂ ಗಣೇಶಾನಾಂ ಮಹೀತಲೇ॥"

೨೧. (ಸಂ) ಎಂ.ಜಿ.ನಂಜುಂಡಾರಾಧ್ಯ: ಶಿವಾಗಮಸೌರಭ : ಪುಟ ೨೧೨, ೨೧೩.
೨೨. (ಸಂ) ಎಂ.ಜಿ.ನಂಜುಂಡಾರಾಧ್ಯ: ಶಿವಾಗಮಸೌರಭ : ಪುಟ ೨೨೪, ೨೨೫.

ಶೈವ ಧರ್ಮ ಪ್ರಸಾರಕ್ಕೆ ಯಾವಾಗ ಹಾನಿ ಸಂಭವಿಸುವುದೋ ಆಯಾ ಕಾಲಗಳಲ್ಲಿ ಈ ಭೂಮಿಯಲ್ಲಿ ಪ್ರಮಥಗಣರು ಅವತರಿಸುವರು ಎಂದು "ಶಂಕರ ಸಂಹಿತೆ"ಯಲ್ಲಿ ಧರ್ಮೋದ್ಧಾರಕ್ಕಾಗಿ ಪ್ರಮಥರು ಆಗಾಗ್ಗೆ ಅವತರಿಸುವರೆಂದು ತಿಳಿಸಿದೆ. ಹಾಗೆ ಅವತರಿಸಿದ ಮಹಾಪುರುಷರೇ ಆದಿ ಜಗದ್ಗುರು ರೇಣುಕಾಚಾರ್ಯರೆಂದೂ, ಜಗಜ್ಯೋತಿ ಬಸವಣ್ಣನವರೆಂದೂ ಅಭಿಪ್ರಾಯಪಡಬಹುದಾಗಿದೆ[೨೩]. ಈ ಮೇಲಿನ ಆಧಾರಗಳಿಂದಾಗಿ ವೀರಶೈವ ಉದ್ಧರಣಿಗಳ ಉಗಮ ಆಗಮಗಳ ಕಾಲದ್ದೆಂದು ದೃಢವಾಗುತ್ತವೆ.

**ಉದ್ಧರಣಿಯ ವ್ಯಾಖ್ಯಾನಗಳು:**

ಡಾ. ಜ.ಚ.ನಿ. ಅವರು, ಈ ಉದ್ಧರಣಿಗಳಿಗೆ ಅಧೋಮುಖಿಯಾದ ಜೀವಿಯನ್ನು ಊರ್ಧ್ವಮುಖಿಗೊಳಿಸುವ ಉತ್ಕರ್ಷಕ ಸಿದ್ಧಾಂತ ತತ್ವ ಮತ್ತು ತಂತ್ರ ಸಾಹಿತ್ಯ ಇದಾಗಿದೆ ಎನ್ನುತ್ತ ಉದ್ಧರಣಿಗಳು ದೃಶ್ಯ ಶ್ರವ್ಯದಿಂದೊಡಗೂಡಿದ ಸಾಹಿತ್ಯವಾಗಿದೆ ಹಾಗೂ ಉದ್ಧರಣಿ ಸಾಹಿತ್ಯ ವಾಚ್ಯವೂ ಹೌದು, ವರ್ಣಮಯವೂ ಹೌದು, ರೂಪದೃಷ್ಟಿಯಿಂದ ಅಂಕಿ ಅಕ್ಷರ ವರ್ಣಪ್ರಧಾನ ಸಾಹಿತ್ಯ, ಸಮನ್ವಯ ದೃಷ್ಟಿಯಿಂದ ಸಾಂಖ್ಯ ಯೋಗ ಮೀಮಾಂಸೆ ಮತ್ತು ಜ್ಯೋತಿಷ್ಯಗಳ ಲಕ್ಷಣವುಳ್ಳ ಸಾಹಿತ್ಯ ಎಂದಿದ್ದು ಉದ್ಧರಣಿಕಾರನು ವರ್ಣಜ್ಞನಾಗದೆ ವಸ್ತುವಿವೇಕವುಳ್ಳವನಾಗದೇ ಉದ್ಧರಣಿಯನ್ನು ರೂಪಿಸಲು ಸಾಧ್ಯವಿಲ್ಲ. ದೃಷ್ಟಿ, ಮನ, ಬುದ್ಧಿ, ಭಾವಗಳ ಕೇಂದ್ರೀಕರಣವೇ ಉದ್ಧರಣಿಗಳ ಉದ್ದೇಶ[೨೪] ಎಂದಿರುವರು.

ಡಾ. ಬಿ.ಕೆ.ಹಿರೇಮಠರು, ಈ ಉದ್ಧರಣಿಯ ಚಿತ್ರಗಳಲ್ಲಿನ ಪ್ರತಿಯೊಂದು ರಚನೆಗೂ ಆಕೃತಿಗಳಿಗೂ ಇರುವ ಅರ್ಥವತ್ತಾದ ವಿವರಣೆಯನ್ನು ಗಮನಿಸಿದರೆ, ಇಲ್ಲಿನ ಸಂಕೇತಗಳು ಶರಣರ ಬೆಡಗಿನ ವಚನಗಳಿಗೆ ತೀರಾ ಹತ್ತಿರವಾಗಿ ಕಾಣುತ್ತವೆ. ಇಂತಹ ಹಲವಾರು ಸಂಕೇತಗಳೇ ಚಿತ್ರವಾಗಿ ಮೂಡಿ ನಿಲ್ಲುವ ಈ ಕೃತಿಗಳು ಕಣ್ಣಿಗೆ ಒಗಟಾಗಿ ಕಂಡರೂ ಇವು ಕೇವಲ ಕಲ್ಪನೆಯ ಅಥವಾ ಭ್ರಮೆಯ ಚಿತ್ರಗಳಲ್ಲ. ಇವುಗಳನ್ನು ಅನುಭಾವದ ನಿಲುಗನ್ನಡಿಗಳೆಂದೇ ಹೇಳಬೇಕಾಗುತ್ತದೆ. ಈ ಕಾರಣಕ್ಕಾಗಿ ಉದ್ಧರಣಿಗಳನ್ನು ಚಿತ್ರಸಾಹಿತ್ಯ ಶಾಸ್ತ್ರಕ್ಕೆ ಸಂಬಂಧಿಸಿದವು ಎಂದು ಹೇಳುತ್ತಾರೆ. ಅಲ್ಲದೇ ಇವುಗಳನ್ನು ರಚಿಸುವವನಿಗೆ ಉನ್ನತ ಅಧ್ಯಯನ, ಪರಿಶ್ರಮ, ಹಲವು ವಿಷಯಗಳ ಜ್ಞಾನ, ಸಂಸ್ಕಾರಗಳಿರುವುದನ್ನು ಗಮನಿಸಬಹುದಾಗಿದೆ[೨೫] ಎಂದಿರುವರು.

ಡಾ. ಎಸ್.ಸಿ.ಪಾಟೀಲ ಅವರು, ಈ ಉದ್ಧರಣಿ ಚಿತ್ರಗಳು "ಶಿಷ್ಟ ಜನಪದ" ಚಿತ್ರಕಲೆಯ ಲಕ್ಷಣಗಳನ್ನು ಈ ದಿಸೆಯಲ್ಲಿ ಅಧ್ಯಯನ ಮಾಡುವವರಿಗೆ ಸಾಕಷ್ಟು ಸಾಮಗ್ರಿಯಿದೆಯೆಂಬುದನ್ನು ಮರೆಯಬಾರದು ಎಂದಿರುವರು.

ಇವು ಜನಪದದ ಅಂಶಗಳನ್ನು ಮತ್ತು ಶಿಷ್ಟಪದ ಅಂಶಗಳನ್ನು ಒಳಗೊಂಡ ಚಿತ್ರಗಳಾಗಿವೆ. ಈ ಚಿತ್ರಗಳ ರಚನಾ ವಿನ್ಯಾಸ ಮತ್ತು ವರ್ಣಗಾರಿಕೆ ಜನಪದ ಚಿತ್ರಕಲೆಯಷ್ಟು ಮುಕ್ತವೂ ಅಲ್ಲ. ಶಿಷ್ಟಪದ ಚಿತ್ರಕಲೆಯಷ್ಟು

---

೨೩. ಜ.ಷ.ಬ್ರ.ಡಾ. ಚಂದ್ರಶೇಖರ ಶಿವಾಚಾರ್ಯರು: ವೀರಶೈವ ಪಂಚಪೀಠ ಪರಂಪರೆ : ಮುನ್ನುಡಿ ii.
೨೪. ಡಾ. ಜ.ಚ.ನಿ. : ಉದ್ಧರಣಿ ಸಾಹಿತ್ಯ : ಪುಟ ೧೬೫
೨೫. ಡಾ. ಬಿ.ಕೆ.ಹಿರೇಮಠ: ಕನ್ನಡ ಹಸ್ತಪ್ರತಿಗಳು: ಒಂದು ಅಧ್ಯಯನ : ಪುಟ ೧೯೭.

ಪ್ರಮಾಣಬದ್ಧವೂ ಅಲ್ಲ, ಚಿತ್ರಗಳಲ್ಲಿಯ ಕರ್ತೃತ್ವ ಜ್ಞಾತವೂ ಆಗಿರಬಹುದು. ಅಜ್ಞಾತವೂ ಆಗಿರಬಹುದಾಗಿದೆ[೨೬]. ಈ ದಿಸೆಯಲ್ಲಿ ಅಧ್ಯಯನ ಮಾಡುವವರಿಗೆ ಸಾಕಷ್ಟು ಸಾಮಗ್ರಿಯಿದೆಯೆಂಬುದನ್ನು ಮರೆಯಬಾರದು ಎಂದಿರುವರು.

ಡಾ. ಕೆ.ರವೀಂದ್ರನಾಥ ಅವರು, ವೀರಶೈವ ಸಾಹಿತ್ಯವನ್ನು ಅರ್ಪಣ, ಅರ್ಚನ, ಅನುಭಾವ, ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲ ಮತ್ತು ಸಕೀಲ ಸಾಹಿತ್ಯವೆಂದು ವರ್ಗೀಕರಿಸಲಾಗಿದೆ. ಇವುಗಳ ಜೊತೆಗೆ ಚಿತ್ರಪ್ರಧಾನವಾದ ಉದ್ಧರಣೆಗಳು ವೀರಶೈವರ ಶಾಸ್ತ್ರ, ಸಾಹಿತ್ಯ ಹಾಗೂ ಚಿತ್ರ ಪರಂಪರೆಗೆ ವಿಶೇಷ ಕೊಡುಗೆ ಆಗಿರುವುದನ್ನು ಗಮನಕ್ಕೆ ತರುತ್ತ, ಉದ್ಧರಣೆಗಳು ಪರಿಪೂರ್ಣವಾಗಿ ಚಿತ್ರಗಳಿಂದೊಡಗೂಡಿದ ರಚನೆಗಳಾಗಿವೆ. ಇವು ವೀರಶೈವ ತತ್ವಗಳ ರಹಸ್ಯವನ್ನು ತಿಳಿಸುವ ಒಂದು ಸಾಧನವಾಗಿವೆ[೨೭] ಎಂದಿರುವರು.

ಡಾ. ಎಫ್.ಟಿ.ಹಳ್ಳಿಕೇರಿ ಅವರು ವೀರಶೈವ ತತ್ವಗಳಾದ ಅಷ್ಠಾವರಣ ಭಕ್ತ, ಜಂಗಮ ಶೂನ್ಯಲಿಂಗ, ಮಹಾಲಿಂಗ, ಭಾವಲಿಂಗ, ನವಚಕ್ರ, ಪಂಚೀಕರಣ ಷಡಕ್ಷರಿ, ಬಸವಾಕ್ಷರ, ಪ್ರಣವ, ಕುಂಡಲಿನಿ ಮೊದಲಾದವುಗಳ ಸ್ವರೂಪವನ್ನು ಸಾಂಕೇತಿಕವಾಗಿ ತಿಳಿಸುವುದೇ ಇವುಗಳ ಮುಖ್ಯ ಉದ್ದೇಶವಾಗಿದೆ. ಈ ಉದ್ದೇಶಕ್ಕನುಗುಣವಾಗಿ ಆಯಾ ಉದ್ಧರಣೆಗಳು ವೀರಶೈವಶಾಸ್ತ್ರ, ಸಾಹಿತ್ಯ ಹಾಗೂ ಚಿತ್ರ ಪರಂಪರೆಗೆ ವಿಶೇಷ ಕೊಡುಗೆ ಆಗಿರುವುದನ್ನು ಗಮನಕ್ಕೆ ತರುತ್ತ ಉದ್ದರಣೆಗಳು ಪರಿಪೂರ್ಣವಾಗಿ ಚಿತ್ರಗಳಿಂದೊಡಗೂಡಿದ ರಚನೆಗಳಾಗಿವೆ. ಇವು ವೀರಶೈವ ತತ್ವಗಳ ರಹಸ್ಯವನ್ನು ತಿಳಿಸುವ ಒಂದು ಸಾಧನವಾಗಿವೆ, ಈ ಉದ್ದೇಶಕ್ಕಾನುಗುಣವಾಗಿ ಆಯಾ ಉದ್ಧರಣೆಗಳನ್ನು ಚಿತ್ರಗಳ ಮೂಲಕ ಬಿಡಿಸಲಾಗಿದೆ[೨೮] ಎಂದಿರುವರು.

ಸ್ವಾಮಿ ಸ್ವಹಾನಂದರು, ಉದ್ಧರಣೆಯೊಳಗಿನ ಚಿತ್ರಗಳು ಸಾಂಕೇತಿಕ ಸ್ವರೂಪದಲ್ಲಿಯೇ ರೂಪಗೊಂಡು. ಅಪಾರ ಅರ್ಥವನ್ನು ಪಾರಮಾರ್ಥಿಕತತ್ವಗಳನ್ನು ಸಾಂಕೇತಿಸಿಕೊಂಡಿವೆ ಎಂದು ವಿವರಿಸುತ್ತ "ಸಂಕೇತವೆಂಬುದು ನಾವು ಆಧ್ಯಾತ್ಮಸ್ವರೂಪದಲ್ಲಿ ಗುರುತಿಸಿಕೊಳ್ಳುವ ಅಂಕಿತವಾಗಿದೆ. ಗ್ರೀಕ್ ಮೂಲಕ Symbolon ಪದದ ಅರ್ಥವೂ ಕೂಡಾ ಇದನ್ನೇ ಹೇಳುತ್ತದೆ. ನೀನು ಯಾವುದನ್ನು ತಿಳಿದಿರುವಿ ಅದನ್ನು ಉಲ್ಲೇಖಿಸು, ಸಾಂಕೇತಿಕತೆಯು ಕಾಣಲಾರದ್ದನ್ನು ಕಾಣುವ ಜಗತ್ತಿಗೆ ಪ್ರತಿನಿಧಿಸುವ ಪ್ರಾತಿನಿಧಿಕವಾಗಿರುತ್ತದೆ"[೨೯] ಎಂದಿರುವರು.

ಶ್ರೀ ಚಂದ್ರಶೇಖರ ಶಾಸ್ತ್ರಿಗಳವರು, ಶಿವಾನುಭವಶಾಸ್ತ್ರವು ಶಕ್ತಿವಿಶಿಷ್ಟಾದ್ವೈತ ಮತಾವಲಂಬಿಗಳಿಗೂ, ಗುರುಸ್ಥಲ, ಷಟ್‌ಸ್ಥಲದ ಮೂರ್ತಿಗಳಿಗೂ, ಪಟ್ಟಚರಾಧಿಕಾರಿಗಳಿಗೂ, ಮಹಾಶಿವಯೋಗಿಗಳಿಗೂ ಹಾಗೂ ಗುರುಕರ ಸಂಜಾತರಿಗೂ, ಪರಮಪ್ರಯೋಜನಕಾರಿಯಾಗಿರುವುದೆಂದೂ ಹೇಳುತ್ತ, ಶಿವಾನುಭವಿಯು ಗುರುಮುಖದಿಂದ

---

೨೬. ಡಾ. ಎಸ್.ಸಿ.ಪಾಟೀಲ: ಕರ್ನಾಟಕದ ಜನಪದ ಚಿತ್ರಕಲೆ: ಪುಟ ೬೩, ೬೪

೨೭. ಡಾ. ಎಸ್.ಸಿ.ಪಾಟೀಲ: ಸತ್ಯಾನಂದಪಾತ್ರೋಟ: ನಿಜದ ನೆಲೆ: ಡಾ. ಕೆ.ರವೀಂದ್ರನಾಥ: ಲೇಖನ: ಉದ್ಧರಣೆಗಳು: ಚಿತ್ರಕಲೆ: ಪುಟ ೭೨.

೨೮. ಡಾ. ಎಸ್.ಸಿ.ಪಾಟೀಲ: ಸತ್ಯಾನಂದಪಾತ್ರೋಟ: ನಿಜದ ನೆಲೆ: ಡಾ. ಎಫ್.ಟಿ.ಹಳ್ಳಿಕೇರಿ: ಲೇಖನ: ಸಚಿತ್ರ ಹಸ್ತಪ್ರತಿಗಳು: ಸ್ವರೂಪ ಮತ್ತು ಸಂಪಾದನೆ: ಪುಟ ೫೧.

೨೯. ಡಾ. ಎಚ್.ಎನ್.ಚಿತ್ರಗಾರ: ಕರ್ನಾಟಕ ಹಸ್ತಪ್ರತಿ ಚಿತ್ರಕಲೆ – ಒಂದು ಅಧ್ಯಯನ: ಪುಟ. ೧೭೨.

ಅಂಗಾಂಗಗಳಲ್ಲೆಲ್ಲ ಸಂಬಂಧಿಸುವ ಮಂತ್ರಾಕ್ಷರಗಳನ್ನು ತಿಳಿದುಕೊಂಡು ನ್ಯಾಸವನ್ನು ಮಾಡಿಕೊಳ್ಳಬೇಕು. ಮಂತ್ರಮಯನಾಗಿ ಮಂತ್ರವನ್ನು ಜಪಿಸಬೇಕು. ಈ ಮಂತ್ರಶಾಸ್ತ್ರವು ಬಹುರಹಸ್ಯವಾಗಿರುವುದರಿಂದ ಗುರುಮುಖದಿಂದಲೇ ತಿಳಿದುಕೊಂಡು ಆಚರಿಸುವುದು ಬಹಳ ಯೋಗ್ಯವೆಂದಿರುವರು[೩೦].

ಒಟ್ಟಾರೆಯಾಗಿ ಉದ್ಧರಣೆ ಚಿತ್ರಗಳು ವೀರಶೈವ ತತ್ವಗಳ ರಹಸ್ಯವನ್ನು ತಿಳಿಸುವ ಒಂದು ಸಾಧನವಾಗಿದ್ದು, ಈ ಚಿತ್ರಗಳ ವಿನ್ಯಾಸವೂ ಜನಪದ ಚಿತ್ರಗಳಷ್ಟು ಮುಕ್ತವೂ ಅಲ್ಲ. ಶಿಷ್ಟಪದ ಚಿತ್ರಗಳಷ್ಟು ಪ್ರಮಾಣಬದ್ಧವೂ ಅಲ್ಲ. ಆದರೆ ವೀರಶೈವ ತತ್ವಗಳೊಂದಿಗೆ ತಂತ್ರಗಳನ್ನು ಪ್ರಮುಖವಾಗಿಟ್ಟುಕೊಂಡು ರಚನೆಯಾದ ಈ ಚಿತ್ರಗಳು ಸಂಕೇತ ಪ್ರಧಾನವಾಗಿದ್ದು ಕಣ್ಣಿಗೆ ಒಗಟಾಗಿ ಕಂಡುಬರುತ್ತವೆ. ಧರ್ಮದ ಹಿನ್ನೆಲೆಯನ್ನು ಅರಿಯದವರಿಗೆ ಈ ಉದ್ಧರಣೆ ಚಿತ್ರಗಳು ಕಲ್ಪನೆಯ ಮತ್ತು ಭ್ರಮೆಯ ಚಿತ್ರಗಳಾಗಿ, ಒಗಟಾಗಿ ಕಂಡು ಬಂದರೆ, ಧರ್ಮವನ್ನು ಅರಿತವರಿಗೆ ವೀರಶೈವ ತತ್ವವನ್ನು ಪ್ರತಿಪಾದಿಸುವ ಅನುಭಾವದ ನಿಲುಗನ್ನಡಿಗಳಂತೆ ಕಂಡು ಬರುತ್ತವೆ. ಈ "ಉದ್ಧರಣೆ ಚಿತ್ರಗಳು" ವೀರಶೈವ ಶಾಸ್ತ್ರಕ್ಕೆ ಸಂಬಂಧಿಸಿದ್ದು, ಈ ಚಿತ್ರಗಳನ್ನು ರಚಿಸುವ ಕಲಾವಿದನು ಉನ್ನತ ಅಧ್ಯಯನ, ಪರಿಶ್ರಮ ಹಾಗೂ ಹಲವು ವಿಷಯಗಳ ಕುರಿತು ಜ್ಞಾನ, ಸಂಸ್ಕಾರಗಳನ್ನು ಪಡೆಯುವುದು ಅನಿವಾರ್ಯವಾಗಿತ್ತು ಎಂಬುದು ತಿಳಿದುಬರುತ್ತದೆ". ಕಲಾವಿದನ ದೃಷ್ಟಿ, ಮನಸ್ಸು, ಬುದ್ಧಿ, ಭಾವಗಳ ಕೇಂದ್ರೀಕರಣವೇ ಉದ್ಧರಣೆಗಳ ಉದ್ದೇಶವೆನ್ನುವ ಡಾ. ಜ.ಚ.ನಿ. ಅವರ ಅಭಿಪ್ರಾಯ ಉತ್ಕೃಷ್ಟವೂ ವಾಸ್ತವವೂ ಆಗಿದೆ. ಈ ವರೆಗೆ ಬಂದಿರುವ ಉದ್ಧರಣೆ ಗ್ರಂಥಗಳು ಕೆಳಗಿನಂತಿವೆ.

**ಶಿವಾನುಭವಶಾಸ್ತ್ರ:**

"ಶಿವಾನುಭವಶಾಸ್ತ್ರ" ಎಂಬ ಕಿರುಗ್ರಂಥವನ್ನು ಬಹುಶಃ ಪ್ರಥಮ ಬಾರಿಗೆ ೮.೧೨.೧೯೫೭ ರಲ್ಲಿ ರಾಯಚೂರು ಜಿಲ್ಲೆಯ ಕವಿತಾಳದ ಕಲ್ಮಠದ ಶ್ರೀ ಮ.ನಿ.ಪ್ರಣವಸ್ವರೂಪಿ ಪೂಜ್ಯ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಪ್ರಕಟಗೊಳಿಸಿರುವರು. ಈ ಕಿರುಗ್ರಂಥವು ೮೮ ಪುಟಗಳನ್ನು ಹೊಂದಿದ್ದು, ಮೂವತ್ಮೂರು ಉದ್ಧರಣೆ ವರ್ಣಚಿತ್ರಗಳನ್ನು ಆ ಸಂದರ್ಭದಲ್ಲಿಯೇ ಪ್ರಕಟಗೊಳಿಸಿದ್ದು ವಿಶೇಷವಾಗಿದೆ. (ಅವರ ಮಠದಲ್ಲಿಯೇ ಇದ್ದ ವರ್ಣಚಿತ್ರಗಳುಳ್ಳ ಉದ್ಧರಣೆ ಪಟಲದಿಂದ ಆಯ್ದುಕೊಳ್ಳಲಾಗಿದೆ) ಈ ಗ್ರಂಥದ ಅಳತೆ ೮.೬ ಇಂಚು ಉದ್ದವಾಗಿಯೂ ೫.೬ ಇಂಚು ಅಗಲವಾಗಿಯೂ ಇದೆ. ಇಪ್ಪತ್ಮೂರು ಉದ್ಧರಣೆ ಚಿತ್ರಗಳ ವಾಚ್ಯದ ವಿವರಣೆಯನ್ನು ಸ್ಥೂಲವಾಗಿ ಮಾಡಿರುವರು. ಇದರಲ್ಲಿ ವೀರಶೈವ ಧರ್ಮ ಮಂತ್ರದ ಪ್ರಾಚೀನತೆಗೆ ಹಲವು ನಿದರ್ಶನವನ್ನು ಕಾಣಬಹುದಾಗಿದೆ. ಇಲ್ಲಿ ಲಿಂಗಾಂಗದ ಸಕೀಲಗಳೆಲ್ಲವೂ ಸಂಪೂರ್ಣವಾಗಿ ಪ್ರತಿಪಾದಿತವಾಗಿವೆ. ಇದರ ಮೂಲ ಪ್ರತಿ ನಮಗೆ ದೊರೆಯದಿದ್ದರೂ ಉದ್ಧರಣೆಯ ೩೩ ರೇಖಾಚಿತ್ರವನ್ನೊಳಗೊಂಡ ನಕಲು (Zerox) ಪ್ರತಿಯು ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿ ಸಂಗ್ರಹಿತವಾಗಿದೆ. ಇದರಲ್ಲಿ ಕಲಾವಿದರ ಕುರಿತಾಗಲಿ,ಕಲಾಕೃತಿಯ

---

೩೦. ಶ್ರೀ ಡಾ. ಚಂದ್ರಶೇಖರ ಶಾಸ್ತ್ರಿಗಳು: ಶಿವಾನುಭವಶಾಸ್ತ್ರ: ಮುನ್ನುಡಿ ಪುಟ iv.

ಕುರಿತಾಗಲಿ, ವರ್ಣಗಳ ಕುರಿತಾಗಲಿ ಏನನ್ನೂ ಹೇಳಲಾಗಿಲ್ಲ. ಆ ಸಂದರ್ಭದಲ್ಲಿ ಉದ್ಧರಣಿ ಸಾಹಿತ್ಯದೊಂದಿಗೆ ಚಿತ್ರಗಳನ್ನು ಸೇರಿಸಿ ಮುದ್ರಿಸಿರುವುದು ವೀರಶೈವರ ಸುದೈವವೆಂದೇ ಹೇಳಬಹುದಾಗಿದೆ.

**ಉದ್ಧರಣಿ ಸಾಹಿತ್ಯ:**

ಕನ್ನಡ ವಿಶ್ವವಿದ್ಯಾಲಯ ಹಂಪಿಯ, ಹಸ್ತಪ್ರತಿ ವಿಭಾಗದ ಈಗಿನ ಮುಖ್ಯಸ್ಥರೂ ಆದ ಡಾ. ಕೆ.ರವೀಂದ್ರನಾಥ ಅವರು ಬರೆದಿರುವ "ಉದ್ಧರಣಿ ಸಾಹಿತ್ಯ"ದ ಕಿರುಗ್ರಂಥವು ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿಯಿಂದ ೨೦೧೦ ರಲ್ಲಿ ಪ್ರಕಟಣೆಗೊಂಡಿದೆ. ಈ ಕಿರುಗ್ರಂಥವು ೭೪ ಪುಟಗಳನ್ನು ಹೊಂದಿದ್ದು, ೨೪ ವರ್ಣರಂಜಿತವಾದ ಉದ್ಧರಣಿ ಚಿತ್ರಗಳೊಂದಿಗೆ ಪ್ರಕಟಣೆಗೊಂಡಿದೆ. ಈ ಗ್ರಂಥದ ಅಳತೆ ೮.೬ ಇಂಚು ಉದ್ದವಾಗಿದ್ದು. ೫.೬ ಇಂಚು ಅಗಲವಾಗಿರುವುದು. ಈ ಗ್ರಂಥದಲ್ಲಿ ೨೩ ಉದ್ಧರಣಿ (ಚಿತ್ರಗಳ) ಗಳ ಸಾಹಿತ್ಯದ ಕುರಿತು ಬರೆಯಲಾಗಿದ್ದು, ಸಚಿತ್ರ ಹಸ್ತಪ್ರತಿಗಳ ಇತಿಹಾಸ, ಉದ್ಧರಣಿ ಸಾಹಿತ್ಯದ ಅರ್ಥ, ಸ್ವರೂಪ, ಉಗಮ, ಬಣ್ಣ ತಯಾರಿಕೆ, ತಾತ್ವಿಕತೆಗಳ ಕುರಿತು ಸಂಕ್ಷಿಪ್ತವಾಗಿ ಬರೆಯಲಾಗಿದೆ. ಈ ಉದ್ಧರಣಿ ಸಾಹಿತ್ಯಕ್ಕೆ ಉದ್ಧರಣಿ ಪಟಲವನ್ನು ಬೆಂಗಳೂರಲ್ಲಿ ಇರುವ ಕೋಟಿಲಿಂಗಶಾಸ್ತ್ರಿ ಕುಮಾರ ಶರಭಯ್ಯನವರು ಬರೆದುಕೊಟ್ಟಿದ್ದು, ಕಂಪ್ಲಿಯಲ್ಲಿರುವ ಕಲ್ಗುಡಿ ದೊಡ್ಡಪ್ಪನವರಿಗೆ, ಉದ್ಧರಣಿ ವಾಚ್ಯದ ವಹಿ ರುಜು ಎಂಬ ಉಲ್ಲೇಖವಿದೆ. ಇದನ್ನು ಪ್ರತಿ ಮಾಡಿದವನು ಶರಭಯ್ಯ. ಇದರ ಮೂಲಗಾತ್ರ ೧೨" x ೯.೫" ಅಳತೆಯನ್ನು ಹೊಂದಿದೆ. ಈ ಉದ್ಧರಣೆ ಇಲ್ಲಿಯೂ ಕೂಡಾ ಕಲಾಕೃತಿಗಳ ಬಗ್ಗೆ ಯಾಗಲಿ, ಕಲಾವಿದರ ಬಗ್ಗೆಯಾಗಲಿ, ಏನನ್ನೂ ಹೇಳಿಲ್ಲ. ಇದು ಕಲಾವಿದರ ಕೆಲಸವಾದರೂ, ದಾಖಲೆಯಾಗಿ ಕಲಾಕೃತಿಗಳನ್ನು ಉಳಿಸಿಕೊಂಡಿದ್ದು ಸಂತೋಷದ ವಿಷಯ. ಆದರೆ ರಚನೆ ಮಾಡಿದ ಕಲಾವಿದ ಗೌಣವಾಗಿರುವುದರಿಂದ ಕಲಾಕೃತಿಯ ಮೂಲ ಸತ್ವ ನಮಗೆ ಇಂದಿಗೂ ದೊರೆಯದೇ ಹೋಗುತ್ತದೆ. ವರ್ಣಗಳ ಬಗ್ಗೆ ಹೇಳಿರುವುದು ವಿಶೇಷವಾಗಿದೆ. ಆದರೆ ಉದ್ಧರಣೆ ಸಾಹಿತ್ಯವು ವೀರಶೈವ ತತ್ವಗಳು ಅನ್ನುವ ಬದಲು ಲಿಂಗಾಯತ ತತ್ವಗಳು ಎಂದು ಬಳಕೆ ಮಾಡಿರುವುದು ಅನಗತ್ಯ ಅಥವಾ ಅಸಮಂಜಸವಾಗಿರಬಹುದು ಅನ್ನುವದನ್ನು ಬಿಟ್ಟರೆ, ಧಾರ್ಮಿಕ ಹಾಗೂ ಸಾಹಿತ್ಯಕ ದೃಷ್ಟಿಯಲ್ಲಿ ಉತ್ತಮ ಕೃತಿಯಾಗಿ ರೂಪುಗೊಂಡಿರುವುದು ಸಂತೋಷದಾಯಕವಾಗಿದೆ.

**ಉದ್ಧರಣಿ ಚಿತ್ರಗಳು:**

ಉದ್ಧರಣಿಗಳು ಕರ್ನಾಟಕದ ಚಿತ್ರಕಲೆಯ ಹಲವಾರು ಪದ್ಧತಿಗಳನ್ನು ಬಿಂಬಿಸುವ ಮಹತ್ವ ಪೂರ್ಣ ಆಸ್ತಿಗಳಾಗಿವೆ. ರೇಖೆ, ವರ್ಣ ಸಂಯೋಜನೆಯ ಹೊಂದಾಣಿಕೆಗಳು, ರೂಪ, ಆಕಾರಗಳ ಜೋಡಣೆ, ಸಂಕೇತಗಳ ಬಳಕೆ ವಿಶಿಷ್ಟವಾಗಿ ಮೂಡಿ ಬಂದಿವೆ. ಇವುಗಳಲ್ಲಿ ಚಿತ್ರಕಲೆಯು ಸಾಧಿಸಬೇಕಾದ ಹಾಗೂ ಮುಟ್ಟಬೇಕಾದ ಗುರಿಯನ್ನು ತಲುಪಿದ್ದು ಕಂಡುಬರುತ್ತದೆ. ನಿಶ್ಚಿತ ಸ್ಥಾನಗಳಲ್ಲಿ ಮಂತ್ರಾಕ್ಷರ ಸಮನ್ವಿತವಾಗಿ ಶೋಭಿಸುವ ಲಿಂಗೋದ್ಧರಣಿ, ವೃಷಭೋದ್ಧರಣಿ, ಜಂಗಮೋದ್ಧರಣಿ, ಊರ್ಧ್ವಕುಂಡಲಿನಿ, ಅಧೋಕುಂಡಲಿನಿ, ಶಕ್ತಿಯುದ್ಧರಣಿ ಮುಂತಾದವುಗಳು ಮಾತಿಗತೀತವಾದ ಅನುಭವ ನೀಡುವ ಚಿತ್ರಕೃತಿಗಳೆನಿಸಿವೆ.

ಕೆಂಪು, ಹಳದಿ, ನೀಲಿ, ಹಸಿರು ವರ್ಣಗಳನ್ನು ತುಂಬಿ ಚಿತ್ರಿಸಲಾದ ಅಧೋಕುಂಡಲಿನಿ, ಊರ್ಧ್ವಕುಂಡಲಿನಿ ಉದ್ಧರಣಿ ಚಿತ್ರಗಳು ತುಂಬಾ ಕುತೂಹಲಜನ್ಯವಾಗಿವೆ. ಜಿಂಕೆಯ ಮುಖ, ಎದೆಯಿಂದ ನಡುವಿನವರೆಗೆ ಸ್ತ್ರೀ ದೇಹ, ನಡುವಿನಿಂದ ಕೆಳಗೆ ಪ್ರಾಣಿಯಾಕಾರ ಹೊಂದಿರುವ ಈ ಚಿತ್ರದಲ್ಲಿ ಖಡ್ಗ, ರುಂಡಗಳು, ಜಲಚರಗಳು, ಮೀನು, ವ್ಯಾಘ್ರ, ಸಿಂಹ ಆಕಳು, ಹರಿಣಿ ಈ ಎಲ್ಲವುಗಳೂ ಅರ್ಥಪೂರ್ಣವಾದ ಸಾಂಕೇತಿಕ ಚಿತ್ರಣಗಳಾಗಿವೆ.

**ಚಿತ್ರದ ಸಾಂಕೇತಿಕ ವಿವರಗಳು :**

ಅಹಂಕಾರ, ಮಮಕಾರಗಳೆಂಬೆರಡು ಕೋಡು ಎಂಬತ್ನಾಲ್ಕು ಲಕ್ಷ ಜೀವರಾಶಿ ಶಿವನರಿಯದ ಪ್ರಾಣಿಗಳ ಸುಡುತ್ತಿಹೆನೆಂಬ ಜಿಂಕನಮೊರೆ ತನ್ನರಿದೆ ನೆಂಬವರಿಗೆ ಮುಕ್ತಿ ತೋರುವೆನೆಂಬ ಮೂಗುತಿ ಶಿವಲಿಖಿತವ ದುರ್ಲಿಖಿತವ ಬರೆವುದಕ್ಕೆ ವಾಲೆ, ಕಂಠ ವಿಷ ಅಮೃತವೆಂಬೆರಡು ಕೈಯಲ್ಲಿ ಕುಂಭಗಳು. ಸಿಂಹನಾದ ನಡು ವಿಷ ಅಮೃತ ತಲೆಮೂಲೆಗಳು ಶಿವಪಥಕ್ಕೆ ಹೆಜ್ಜೆಯನಿಟ್ಟು ಮರಳದಿಹೆವೆಂಬ ಚಲವಾದ ವ್ಯಾಘ್ರ ಪಾದಂಗಳು ಮುಂದಿಹವು ದಶವಾಯುಗಳೇ ತುರಗದ ಪಾದಹಿದಳಲು ಬಲನು ಕಾಲಮೃತ್ಯು ಎಡನು ಅಪಮೃತ್ಯು ಬಾಲವೇ ಕುಂಡಲಿಯ ಸರ್ಪ ಅಧೋ ಮುಖವ ನೋಡುತಿಹುದು ಸರ್ವಕಂಠಕಂಗಳೆ ಕಠಾರಿ ತಲೆಕೆಳಗಾಗಿಹುದು ಆ ಕಠಾರಿ ಮೊನೆ ಮೇಲಾಗಿ ಇಹುದು ಆ ಕುಂಡಲಿ ಮುಖ. ಊರ್ಧ್ವವಾಗಿಹುದು ಚತುರ್ವಿಧ ಪದಗಳೆ ನಾಲ್ಕು ಮೊಲೆಗಳು ಅದಕ್ಕೆ ಭ್ರಮಣ ಜೀವನೆಂಬ ಮೀನು ಅರ್ಧಮಾಯಾಶಕ್ತಿ ಅರ್ಧಚಿತ್‌ಶಕ್ತಿ ಮಾಯಾಮುಖದಿಂದ ಬ್ರಹ್ಮ, ವಿಷ್ಣು, ಅಧಿದೇವತೆಗಳು ನಿರ್ಮಿತಂಗಳು ಊರ್ಧ್ವಮುಖದಿಂದ ಪ್ರಮಥಗಣಂಗಳು ನಿರ್ಮಿತ ಮಾಯೆಯ ಹೊಟ್ಟೆ ಆ ಹೊಟ್ಟೆಯಿಂದ ಜನನವು ಆ ಮಾಯಾಬೀಜ ಊರ್ಧ್ವ ಚಿದಗ್ನಿಯಿಂದ ಹುರಿಯಲು ಭವನಾಸ್ತಿ.... ಎಂದು ಉದ್ಧರಣೆ ಸಾಹಿತ್ಯದಲ್ಲಿ ಹೇಳಲ್ಪಟ್ಟಿದ್ದು ಡಾ. ಬಿ.ಕೆ.ಹಿರೇಮಠ ಅವರು ಮುಂದುವರೆದು "ಈ ಉದ್ಧರಣಿಯ ಚಿತ್ರಗಳಲ್ಲಿನ ಪ್ರತಿಯೊಂದು ರಚನೆಗೂ ಆಕೃತಿಗಳಿಗೂ ಇರುವ ಅರ್ಥವತ್ತಾದ ವಿವರಣೆಯನ್ನು ಗಮನಿಸಿದರೆ ಇಲ್ಲಿನ ಸಂಕೇತಗಳು ಶರಣರ ಬೆಡಗಿನ ವಚನಗಳಿಗೆ ತೀರ ಹತ್ತಿರದವಾಗಿ ಕಾಣುತ್ತವೆ. ಇಂಥ ಹಲವಾರು ಸಂಕೇತಗಳೇ ಚಿತ್ರವಾಗಿ ಮೂಡಿ ನಿಲ್ಲುವ ಈ ಕೃತಿಗಳು ಕಣ್ಣಿಗೆ ಒಗಟಾಗಿ ಕಂಡರೂ ಇವು ಕೇವಲ ಕಲ್ಪನೆಯ ಅಥವಾ ಭ್ರಮೆಯ ಚಿತ್ರಗಳಲ್ಲ. ಇವುಗಳನ್ನು ಅನುಭಾವದ ನಿಲುಗನ್ನಡಿಗಳೆಂದೇ ಹೇಳಬೇಕಾಗುತ್ತದೆ."[೩೧]

## ವೀರಶೈವ ಷಟ್‌ಸ್ಥಲ ಸಿದ್ಧಾಂತ ಮತ್ತು ಉದ್ಧರಣಿ ಚಿತ್ರಗಳು

ವೀರಶೈವ ಧರ್ಮವು ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಸಿದ್ಧಾಂತಗಳ ಹಿನ್ನೆಲೆಯಲ್ಲಿ ಪ್ರತಿಪಾದಿತವಾಗಿ ಆಚರಣೆಗೆ ಒಳಪಟ್ಟಿರುತ್ತದೆ.

**ಅಷ್ಟಾವರಣಗಳು:** ಅಷ್ಟಾವರಣಗಳು ಎಂದರೆ

(೧) ಗುರು (೨) ಲಿಂಗ (೩) ಜಂಗಮ (೪) ಪಾದೋದಕ (೫) ಪ್ರಸಾದ (೬) ವಿಭೂತಿ (೭) ರುದ್ರಾಕ್ಷಿ (೮) ಮಂತ್ರ ಎಂಬ (ಎಂಟು) ಅಷ್ಟಾವರಣಗಳಾಗಿವೆ.

೩೧. ಡಾ. ಬಿ.ಕೆ.ಹಿರೇಮಠ: ಕನ್ನಡ ಹಸ್ತಪ್ರತಿಗಳು: ಒಂದು ಅಧ್ಯಯನ: ಪುಟ ೧೯೬, ೧೯೭

**ಪಂಚಾಚಾರಗಳು:** ಪಂಚಾಚಾರಗಳು ಎಂದರೆ

(೧) ಲಿಂಗಾಚಾರ (೨) ಸದಾಚಾರ (೩) ಶಿವಾಚಾರ (೪) ಭೃತ್ಯಾಚಾರ (೫) ಗಣಾಚಾರ ಎಂಬ ಐದು ಪಂಚಾಚಾರಗಳಾಗಿವೆ.

**ಷಟ್‌ಸ್ಥಲ ಸಿದ್ಧಾಂತ:** ಷಟಸ್ಥಲ ಸಿದ್ಧಾಂತವೆಂದರೆ

(೧) ಭಕ್ತ (೨) ಮಹೇಶ (೩) ಪ್ರಸಾದಿ (೪) ಪ್ರಾಣಲಿಂಗಿ (೫) ಶರಣ (೬) ಐಕ್ಯ ಎಂಬ ಆರು ಸ್ಥಲಗಳಾಗಿವೆ. ಈ ಷಟ್‌ಸ್ಥಲ ಸಿದ್ದಾಂತವನ್ನು ಎರಡು ಭಾಗಗಳಾಗಿ ವಿಂಗಡಿಸಿಕೊಂಡು ವಿವರಣೆಯನ್ನು ಪ್ರತಿಪಾದಿಸಲಾಗಿದೆ.

ಷಟ್‌ಸ್ಥಲ ಸಿದ್ದಾಂತ

(೧) ೩೬ ಸ್ಥಲಗಳ ಕ್ರಮ          (೨) ಏಕೋತ್ತರ ಶತಸ್ಥಲ ಕ್ರಮ

ಎಂದು ವಿಭಾಗಿಸಿದ್ದು ಏಕೋತ್ತರ ಶತಸ್ಥಲ ಕ್ರಮವು ಬಹಳ ದೀರ್ಘವಾಗಿದ್ದು. "೩೬ ಸ್ಥಲಗಳ ಕ್ರಮವು ಅದರಲ್ಲೇ ಅಂತರ್ಗತವಾಗಿದೆ." ಇದು ಸಂಶೋಧಿತ ವಿಚಾರವಾಗಿದ್ದು. ಅದರಿಂದಾಗಿಯೆ ಏಕೋತ್ತರ ಶತಸ್ಥಲ ಕ್ರಮದ ಷಟ್‌ಸ್ಥಲ ಸಿದ್ಧಾಂತವನ್ನು ತಿಳಿದರೆ. ಪರಿಪೂರ್ಣವಾಗಿ ಷಟ್‌ಸ್ಥಲ ಸಿದ್ದಾಂತವನ್ನು ತಿಳಿದ ಹಾಗಾಗುತ್ತದೆ. ಏಕೋತ್ತರ ಶತಸ್ಥಲವು ೪೪ ಅಂಗಸ್ಥಲಗಳನ್ನು ಹಾಗೂ ೫೭ ಲಿಂಗ ಸ್ಥಲಗಳನ್ನು ಹೊಂದಿದೆ. ಪ್ರಮುಖವಾಗಿ ಈ ಏಕೋತ್ತರ ಶತಸ್ಥಲ ಕ್ರಮದ ಷಟ್‌ಸ್ಥಲ ಸಿದ್ದಾಂತವನ್ನು ಮೂರು ಗ್ರಂಥಗಳು ಪ್ರತಿಪಾದಿಸುತ್ತವೆ.

೧) ಶ್ರೀ ರೇಣುಕಾಚಾರ್ಯ ಶ್ರೀ ಸಿದ್ದಾಂತ ಶಿಖಾಮಣಿ

೨) ಶ್ರೀ ಮಹಾಲಿಂಗದೇವರ ಏಕೋತ್ತರ ಶತಸ್ಥಲ

೩) ಶ್ರೀ ಫ.ಗು.ಹಳಕಟ್ಟಿಯವರ ವಚನಶಾಸ್ತ್ರ ಸಾರ – ಭಾಗ–೨ ರಲ್ಲಿನ ಏಕೋತ್ತರ ಶತಸ್ಥಲ

ಶ್ರೀ ಮಹಾಲಿಂಗದೇವರ ಹಾಗೂ ಶ್ರೀ ಫ.ಗು.ಹಳಕಟ್ಟಿಯವರ ಗ್ರಂಥಗಳು ಬಸವಾದಿ ಶರಣರ ವಚನಗಳನ್ನು ಏಕೋತ್ತರ ಶತಸ್ಥಲ ಕ್ರಮಗಳಿಗೆ ಅನ್ವಯ ಮಾಡಿವೆ. ಇವು ಅನುಭಾವಗಳಾಗಿವೆ. ಆದರೆ ಶ್ರೀ ರೇಣುಕಾಚಾರ್ಯರ ಶ್ರೀ ಸಿದ್ದಾಂತ ಶಿಖಾಮಣಿ ಗ್ರಂಥವು ಸಂಸ್ಕೃತ ಮಂತ್ರಗಳನ್ನು (೧೪೩೨ ಶ್ಲೋಕಗಳು) ಹೊಂದಿದ್ದು ಇದೊಂದು ಶಾಸ್ತ್ರ ಗ್ರಂಥವಾಗಿದೆ. ಈ ಸಂಸ್ಕೃತ ಶ್ಲೋಕಗಳಿಗೆ ಈಗ ಕನ್ನಡ ಭಾಷೆಯಲ್ಲಿ ವಾಚ್ಯರ್ಥಗಳು (Verbation) ದೊರಕುತ್ತದೆ.

ಶ್ರೀ ಸಿದ್ಧಾಂತ ಶಿಖಾಮಣಿ ಗ್ರಂಥವು ಷಟ್‌ಸ್ಥಲ ಸಿದ್ಧಾಂತ ಪ್ರತಿಪಾದನೆಯಲ್ಲಿ ಪಂಚಾಚಾರ, ಅಷ್ಟಾವರಣಗಳು ಅಂತರ್ಗತವಾಗಿದ್ದು ಬಸವಾದಿ ಶರಣರ ವಚನಗಳಲ್ಲಿಯೂ ಷಟ್‌ಸ್ಥಲ ಸಿದ್ಧಾಂತವು, ಪಂಚಾಚಾರ, ಅಷ್ಟಾವರಣಗಳು ಅಂತರ್ಗತವಾಗಿ ಆಚರಣೆಯಲ್ಲಿಯ ಅನುಭಾವಗಳಾಗಿಯೂ ಪ್ರತಿಪಾದಿತವಾಗಿವೆ.[೩೨]

---

೩೨. ಡಾ. ಎಸ್.ಆರ್.ಸಿದ್ಧಲಿಂಗಪ್ಪ: ಲಿಂಗಾಂಗ ಸಾಮರಸ್ಯ: ಪುಟ ೩೧.

ಇನ್ನು ಮೂಲಭೂತವಾಗಿ ಬಸವಾದಿ ಶರಣರ ವಚನಗಳು ಪಂಚಾಚಾರ ಸ್ಥಲಗಳಲ್ಲಿ ಪ್ರತಿಪಾದಿತವಾಗಿವೆ. ಪಂಚಾಚಾರ ಸ್ಥಲಗಳೆಂದರೆ ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದಗಳಾಗಿವೆ. ಈ ಪಂಚಾಚಾರ ಸ್ಥಲಗಳು ಉಪಾಧಿಕ ನಿರುಪಾಧಿಕ ನೆಲೆಗಳಲ್ಲಿ ಪ್ರತಿಪಾದಿತವಾಗುತ್ತವೆ. ನಿರುಪಾಧಿಕವೆಂದರೆ – ತತ್ವಗಳ ನೆಲೆಗಳಾಗಿವೆ. ಉಪಾಧಿಕವೆಂದರೆ – ತತ್ವಾಧಾರಿತ ವ್ಯಕ್ತಿಗಳಾಗಿರುವದು. ನಿರುಪಾಧಿಕಗಳಾಗಿ (1) ಗುರುವೆಂದರೆ – ನಿರಾಕಾರ ಲಿಂಗತತ್ವ (2) ಲಿಂಗವೆಂದರೆ ಸಾಕಾರಲಿಂಗತತ್ವ (3) ಜಂಗಮವೆಂದರೆ – ಜೀವಾತ್ಮ ಅಥವಾ ಲಿಂಗತತ್ವವೇ ಆಗಿರುವ ಜೀವಾತ್ಮ, ಇಲ್ಲವೇ ಜ್ಞಾನಜಂಗಮ (4) ಪಾದೋದಕವೆಂದರೆ – ಸಾಧಕನಿಗೆ ಆಗುವ ಜ್ಞಾನಿಯ ಪರಿಚಯ (5) ಪ್ರಸಾದವೆಂದರೆ – ಸಾಧಕನಿಗೆ ಆ ಜ್ಞಾನಿಯ ಪರಿಚಯದಿಂದ ಆಗುವ ಲಿಂಗತತ್ವದ ಜ್ಞಾನ. ಈ ಐದು ಪಂಚಾಚಾರ ಸ್ಥಲಗಳು ಜಾಗತಿಕ ಮಟ್ಟದ ಎಲ್ಲಾ ಧರ್ಮಗಳಲ್ಲಿದ್ದು ಅವುಗಳ ಮೂಲಕ ಸಾಧಕರು ತಮ್ಮ ಆಧ್ಯಾತ್ಮ ವಿದ್ಯೆಯ ಸಾಧನೆಗಳನ್ನು ಮಾಡುವುದರಿಂದ ಜಾಗತಿಕ ಮಟ್ಟದ ಎಲ್ಲಾ ಧರ್ಮಗಳಿಗೆ ಈ ಬಸವಾದಿ ಶರಣರ ವಚನವಾಙ್ಮಯವು "ಅನುಭವ ಶಾಸ್ತ್ರ"ವಾಗುತ್ತದೆ. ಆದರೆ ಬಿಡಿ ಬಿಡಿಯಾದ ವಚನಗಳಿಂದ ವೀರಶೈವ ಲಿಂಗಾಯತ ಧರ್ಮದ ಪಂಚಾಚಾರ, ಅಷ್ಟಾವರಣ ಹಾಗೂ ಷಟ್‌ಸ್ಥಲ ಸಿದ್ಧಾಂತಗಳ ವಿವರಗಳನ್ನು ತಿಳಿಯಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಮೇಲಿನ ಮೂರೂ ಗ್ರಂಥಗಳನ್ನು ಪರಸ್ಪರ ಪೂರಕವಾಗಿ "ಶಾಸ್ತ್ರ ಹಾಗೂ ಅನುಭಾವ"ಗಳಾಗಿ ಅಧ್ಯಯನ ಮಾಡಬೇಕಾಗುತ್ತದೆ.[೩೩]

ಲಿಂಗತತ್ವ ಸಾಧನೆಯನ್ನು ಸಾಧಕರು ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗಗಳ ನೆಲೆಯಲ್ಲಿ ಸಾಧಿಸಬೇಕಾಗುತ್ತದೆ. ಈ ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗಗಳ ವಿವರಗಳನ್ನು ಷಟ್‌ಸ್ಥಲ ಸಿದ್ಧಾಂತದ ಮೂಲಕವೇ ಪಡೆಯಬೇಕಾಗುತ್ತದೆ. ಈ ಷಟ್‌ಸ್ಥಲ ಸಿದ್ಧಾಂತದ ಕುರಿತು ಅಲ್ಲಮಪ್ರಭುಗಳು ತಮ್ಮ ವಚನದಲ್ಲಿ ಹೀಗೆ ಹೇಳಿರುವರು:[೩೪]

*** ಅಲ್ಲಮ ಪ್ರಭುಗಳ ವಚನದಲ್ಲಿ ಷಟ್‌ಸ್ಥಲ ಸಿದ್ಧಾಂತ:**

ಪ್ರಥಮದಲ್ಲಿ ವಸ್ತು ಅನಿರ್ವಾಚ್ಯವಾಗಿದ್ದಿತ್ತು
ಆ ಅನಿರ್ವಾಚ್ಯವಾಗಿದ್ದ ಪರವಸ್ತು
ತನ್ನ ಲೀಲೆಯಿಂದ ತಾನೇ ಪರಬ್ರಹ್ಮವೆಂಬ ನಾಮವಾಯಿತ್ತು।
ಆ ನಾಮವನೆಯ್ದಿ ಕುಳವಾಯಿತ್ತು
ಆ ಕುಳದಿಂದ ಆತ್ಮನೆಂಬ ಲಿಂಗಸ್ಥಲವಾಯಿತ್ತು
ಆ ಸ್ಥಳ ಕುಳದೊಳಗೆಯ್ದಿ ಸ್ಥಳ ಕುಳವೆಂಬ ಎರಡಿಲ್ಲದೆ ನಿಂದಿತ್ತು
ಅದೆಂತೆಂದಡೆ:
ವಾಙ್ಮನಕ್ಕ ಗೋಚರವಾದ ಪರಬ್ರಹ್ಮದಿಂದಾಯಿತ್ತು "ಭಾವ"

೩೩. ಡಾ. ಎಸ್.ಆರ್.ಸಿದ್ಧಲಿಂಗಪ್ಪ: ಲಿಂಗಾಂಗ ಸಾಮರಸ್ಯ: ಪುಟ ೩೨.
೩೪. ಡಾ. ಎಸ್. ಆರ್. ಸಿದ್ಧಲಿಂಗಪ್ಪ : ಲಿಂಗಾಂಗ ಸಾಮರಸ್ಯ : ಪುಟ ೨೧೯.

ಭಾವದಿಂದಾಯಿತ್ತು "ಜ್ಞಾನ" ಜ್ಞಾನದಿಂದಾಯಿತ್ತು "ಮನ"
ಮನದಿಂದಾಯಿತ್ತು "ಬುದ್ಧಿ" ಬುದ್ಧಿಯಿಂದಾಯಿತ್ತು "ಚಿತ್ತ"
"ಚಿತ್ತ"ದಿಂದಾಯಿತ್ತು "ಅಹಂಕಾರ"
ಇಂತ ಅಹಂಕಾರ, ಚಿತ್ತ, ಬುದ್ಧಿ, ಮನ, ಜ್ಞಾನ, ಭಾವ ಎಂದು ಆರಾಧವು
ಈ ಆರೂ ಕೆಟ್ಟಲ್ಲದೆ ವಾಙ್ಮನಕ್ಕೋಚರವಾದ ಪರಬ್ರಹ್ಮವಾಗಬಾರದು
ಇದ ಕೆಡಿಸುವುದಕ್ಕೆ ಆರು ಸ್ಥಲವಾದವು
ಅವಾವೆಂದಡೆ:
ಅಹಂಕಾರ ಅಡಗಿದಾಗ "ಭಕ್ತ ಸ್ಥಲ"
ಚಿತ್ತದ ಗುಣ ಕೆಟ್ಟಾಗ "ಮಹೇಶ್ವರ ಸ್ಥಲ"
ಬುದ್ದಿಯ ಗುಣ ಕೆಟ್ಟಾಗ "ಪ್ರಸಾದಿ ಸ್ಥಲ"
ಮನೋಗುಣ ಅಳಿದಾಗ "ಪ್ರಾಣಲಿಂಗಿಸ್ಥಲ"
ಜೀವನ ಗುಣ ಸಂದಾಗ "ಶರಣ ಸ್ಥಲ"
ಭಾವ ನಿರ್ಭಾವವಾದಾಗ "ಐಕ್ಯಸ್ಥಲ"
ಇಂತು ಷಟ್‌ಸ್ಥಲವಾಗಿ ವಾಙ್ಮನಕ್ಕೆ ಅಗೋಚರವಾದ "ಬ್ರಹ್ಮವೇ ಆತ್ಮನು"
ಆ ಆತ್ಮನಿಂದ "ಆಕಾಶ" ಹುಟ್ಟಿತ್ತು, ಆ ಆಕಾಶದಿಂದ "ವಾಯು" ಹುಟ್ಟಿತ್ತು
ಆ ವಾಯುವಿನಿಂದ "ಅಗ್ನಿ" ಹುಟ್ಟಿತ್ತು, ಆ ಅಗ್ನಿಯಿಂದ "ಅಪ್ಪು" ಹುಟ್ಟಿತ್ತು
ಆ ಅಪ್ಪುವಿನಿಂದ "ಪೃಥ್ವಿ" ಹುಟ್ಟಿತ್ತು.
ಇಂತು ಕುಳ ಸ್ಥಳವಾಗಿ ಸ್ಥಳಕುಳವಾದ ವಿವರವೆಂತೆಂದಡೆ:
ಪೃಥ್ವಿ ಅಪ್ಪುವಿನೊಳಡಗಿ, ಅಪ್ಪು ಅಗ್ನಿಯೊಳಡಗಿ
ಅಗ್ನಿ ವಾಯುವಿನೊಳಡಗಿ, ವಾಯು ಆಕಾಶದೊಳಡಗಿ
ಆಕಾಶ ಆತ್ಮನೊಳಡಗಿತ್ತು, ಆತ್ಮ ಪರಶಿವನಲ್ಲಿ ಅಡಗಿತ್ತು
ಇಂತು ಷಡಂಗವಡಗಿದ ಪರಿ ಎಂತೆಂದೊಡೆ:
ಪೃಥ್ವೀ ಭವೇತ್ ಜಲೇ ಜಲೇ ಮಗ್ನಾಜಲಂಗ್ರಸ್ತಂ ಮಹಾಗ್ನಿನಾ।
ವಾಯೋರಸ್ತಮಿತಂ ತೇಜೋ ವ್ಯೋಮ್ನಿ ವಾತೋ ವಿಲೀಯತೇ ॥
ವ್ಯೋಮಾತ್ಮಾನಿ ವಿಲೀನಂ ಸ್ಯಾತ್ ಆತ್ಮಾ ಪರಶಿವೇ ಪದೇ"॥
ಎಂದುದಾಗಿ
"ಆತ್ಮನು ಪರಬ್ರಹ್ಮದೊಳಡಗಿ" ನಿಂದಿತ್ತು ಗುಹೇಶ್ವರಾ ॥೬೭೫॥

– ಅಲ್ಲಮ ಪ್ರಭುಗಳು

ಈ ಷಟ್‌ಸ್ಥಲ ಸಿದ್ಧಾಂತವನ್ನು ಪ್ರತಿಪಾಧಿಸುವ ಚಿತ್ರಗಳೇ ಉದ್ಧರಣಿ ಚಿತ್ರಗಳಾಗಿವೆ. ಅವುಗಳನ್ನು ಈ ಕೆಳಗೆ ಹೇಳಲಾಗಿದೆ:

ಈ ಹಿನ್ನೆಲೆಯಲ್ಲಿ ಉದ್ಧರಣಿ ಚಿತ್ರಗಳು ವೀರಶೈವ ತತ್ವಗಳನ್ನು ಸಿದ್ಧಾಂತವನ್ನು ಪ್ರತಿಪಾದಿಸುವ ಅನುಭವದ ನಿಲುಗನ್ನಡಿಗಳಾಗಿ ನಿಲ್ಲುವಂತೆ ಮಾಡಿದ ಕಲಾವಿದನಲ್ಲಿ ಉನ್ನತ ಅಧ್ಯಯನ, ಪರಿಶ್ರಮ, ಹಲವು ವಿಷಯಗಳ ಜ್ಞಾನ, ಸಂಸ್ಕಾರಗಳಿರುವುದನ್ನು ಮನಗಾಣಬಹುದಾಗಿದೆ.

ಈ ಉದ್ಧರಣಿ ಚಿತ್ರಗಳು "ಶಿವಾಗಮಗಳಲ್ಲಿ" ರೂಪುಗೊಳ್ಳುವುದರೊಂದಿಗೆ (ಪ್ರಾರಂಭವಾಗಿ) ಹಸ್ತಪ್ರತಿಗಳಲ್ಲಿ ವಾಚ್ಯ ಮತ್ತು ಪಟಲಗಳ ಮೂಲಕ ಬೆಳೆಯುತ್ತಾ ಬಂದು, ನಂತರ ಹಸ್ತಪ್ರತಿ ಗ್ರಂಥಗಳಿಂದ ಹೊರಬಂದು ಪ್ರತ್ಯೇಕವಾಗಿ ಉದ್ಧರಣಿ ವಾಚ್ಯ ಮತ್ತು ಪಟಲಗಳಾಗಿ ರೂಪುಗೊಂಡವು. ಇಂತಹ ಚಿತ್ರಗಳು ಮತ್ತು ಸಾಹಿತ್ಯ ವಿಶೇಷವಾಗಿ ಮಠಗಳಲ್ಲಿ ರಚನೆಯಾಗುತ್ತ, ಗುರುಗಳು ತಮ್ಮ ಶಿಷ್ಯರಿಗೆ ಅಥವಾ ಮರಿಗಳಿಗೆ ಪಟ್ಟಗಟ್ಟುವ ಸಂದರ್ಭದಲ್ಲಿ, ಈ ಉದ್ಧರಣಿ ವಾಚ್ಯ ಮತ್ತು ಪಟಲಗಳನ್ನು ನೀಡಿ ದೀಕ್ಷೆಯನ್ನು ನೀಡುವ ಪದ್ಧತಿಯೂ ಜಾರಿಯಲ್ಲಿತ್ತು. ಈ ಉದ್ಧರಣಿ ವಾಚ್ಯ ಮತ್ತು ಪಟಲಗಳು ಜ್ಞಾನವಾಹಕಗಳಾಗಿ ಹೊರಹೊಮ್ಮಿದ್ದವು. ಪಟ್ಟಕ್ಕೆ ಬಂದ ಸ್ವಾಮಿಗಳು ಈ ಉದ್ಧರಣಿ ಚಿತ್ರಗಳನ್ನು ನೋಡಿ ಸಾಹಿತ್ಯವನ್ನು ಓದುವುದರೊಂದಿಗೆ ವೀರಶೈವರಲ್ಲಿಯ ಅರ್ಪಣ, ಅರ್ಚನ, ಅನುಭಾವ, ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲ ಮತ್ತು ಸಕೀಲ ಸಾಹಿತ್ಯಗಳನ್ನು ಅರಿಯುತ್ತಿದ್ದರು. ಈ ಉದ್ಧರಣಿ ಚಿತ್ರಗಳು ದೃಶ್ಯ ಮಾಧ್ಯಮದ ಮುಖಾಂತರ ತೋರ್ಪಡಿಸುವುದರೊಂದಿಗೆ ಆಧ್ಯಾತ್ಮಿಕ ಮತ್ತು ಬೌದ್ಧಿಕ ಮಟ್ಟವನ್ನು ಹೆಚ್ಚಿಸುವವು ಎಂದು ಇವುಗಳ ರಚನೆ ಭರದಿಂದ ಸಾಗಿತು. ವೀರಶೈವ ತತ್ವಗಳ ರಹಸ್ಯವನ್ನು ತಿಳಿಸುವ ಸಾಧನಗಳಾಗಿ ಬೆಳೆದುಬಂದವು. ೧೪ ಮತ್ತು ೧೫ನೇ ಶತಮಾನದ ಹೊತ್ತಿಗೆ ಇಸ್ಲಾಂ ಸಂಸ್ಕೃತಿ ನಮ್ಮ ಭಾರತವನ್ನು ಪ್ರವೇಶಿಸಿತು. ಈ ಸಂಸ್ಕೃತಿಯನ್ನು ಪ್ರಬಲವಾಗಿ ವಿರೋಧಿಸಿ ಹಿಂದೂ ಸಂಸ್ಕೃತಿಯನ್ನು ಬೆಳೆಸುವತ್ತ ಮುನ್ನಡೆದ ವಿಜಯನಗರ ಸಾಮ್ರಾಜ್ಯವು ವೀರಶೈವತತ್ವಗಳನ್ನು ಪ್ರತಿಪಾದಿಸುವ ಈ ಉದ್ಧರಣಿ ಪಟಗಳನ್ನು ವಿಜಯನಗರ ಅರಸರು ವಿರೂಪಾಕ್ಷ ದೇವಾಲಯದ ಮುಖಮಂಟಪದಲ್ಲಿ "ಶಿವಪಾರ್ವತಿ ಕಲ್ಯಾಣ" (ಗಿರಿಜಾ ಕಲ್ಯಾಣ) ಈ ಸಂಯೋಜನೆಯಲ್ಲಿ ಇಂತಹ ಉದ್ಧರಣಿ ಚಿತ್ರಗಳನ್ನು ಬಳಸಿದ್ದು ಇನ್ನೊಂದು ಕಡೆ ವಿರೂಪಾಕ್ಷ ದೇವಾಲಯದ ಗರ್ಭಗುಡಿಯ ಪ್ರವೇಶ ದ್ವಾರದ ಮೇಲಿರುವ ಶಿವಪಾರ್ವತಿಯರ ಚಿತ್ರಗಳ ಎಡ ಮತ್ತು ಬಲಭಾಗಗಳಲ್ಲಿ ಈ ಉದ್ಧರಣಿ ಚಿತ್ರಗಳನ್ನು ಬಳಸಿರುವರು. ಈ ಉದ್ಧರಣಿ ಚಿತ್ರಗಳು ಭಿತ್ತಿಚಿತ್ರಗಳಾಗಿ ರೂಪುಗೊಂಡವು. ಇನ್ನೊಂದೆಡೆ ಪಟಲ ಚಿತ್ರಗಳಾಗಿ, ಸುರುಳಿ ಚಿತ್ರಗಳಾಗಿ ಮಠಗಳು ಪುನರುಜ್ಜೀವನಗೊಳಿಸುವ ಕಾರ್ಯವನ್ನು ಮಾಡಿದವು. ರಾಯಚೂರು ಜಿಲ್ಲೆಯ ಕವಿತಾಳದ ಕಲ್ಮಠ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಪ್ರತ್ಯೇಕ ಗ್ರಂಥರೂಪದಲ್ಲಿ "ಶಿವಾನುಭವಶಾಸ್ತ್ರ"ವೆಂದು ೧೯೫೮ ರಲ್ಲಿ ಪ್ರಥಮ ಬಾರಿಗೆ ಪ್ರಕಟಿಸಿದರು. ಇತ್ತೀಚೆಗೆ ೨೦೧೦ ರಲ್ಲಿ ಡಾ. ಕೆ. ರವೀಂದ್ರನಾಥ ಅವರು ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಪ್ರಸಾರಾಂಗದಿಂದ "ಉದ್ಧರಣಿ ಸಾಹಿತ್ಯ"ವೆಂಬ ಗ್ರಂಥವನ್ನು ಪ್ರಕಟಿಸಿರುವರು. ಹೀಗೆ ಉದ್ಧರಣಿ

ಪಟಚಿತ್ರಗಳು ಹಸ್ತಪ್ರತಿಗಳಿಂದ ಭಿತ್ತಿಚಿತ್ರಗಳಾಗಿ ಇತ್ತೀಚೆಗೆ ಮಣಿಪಾಲದ ಶೆಣೈ ಅವರು ತಮ್ಮ ಕಲಾಗ್ರಾಮದಲ್ಲಿಯ ಮಠದಲ್ಲಿ ಈ ಉದ್ಧರಣಿಗಳನ್ನು ಭಿತ್ತಿಚಿತ್ರಗಳನ್ನಾಗಿ ಶ್ರೀ ವಿಜಯ್ ಹಾಗರಗುಂಡಗಿ ಅವರಿಂದ ರಚಿಸಲ್ಪಟ್ಟಿವೆ ಅನ್ನುವುದು ವಿಶೇಷವಾಗಿದೆ.

**ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣಿ ಚಿತ್ರಗಳು:**

ಕರ್ನಾಟಕದಲ್ಲಿ ಉದ್ಧರಣಿ ವಾಚ್ಯ ಮತ್ತು ಪಟಲಗಳು ಹೇರಳವಾಗಿದ್ದು ಬಹುತೇಕ ಉದ್ಧರಣಿ ಸಾಹಿತ್ಯ ಮತ್ತು ಚಿತ್ರಗಳು ಉತ್ತರ ಕರ್ನಾಟಕದಲ್ಲಿಯೇ ರಚನೆಗೊಂಡಿರುವುದು ತಿಳಿದು ಬರುತ್ತದೆ. ಬಹುಶಃ ೧೧ ಮತ್ತು ೧೨ನೆಯ ಶತಮಾನದಲ್ಲಿ ಅತ್ಯಂತ ಉನ್ನತ ಮಟ್ಟವನ್ನು ತಲುಪಿದ ವೀರಶೈವ ಧರ್ಮ, ಸಂಸ್ಕೃತಿ, ಆಚಾರ ವಿಚಾರ, ನಡತೆಗಳು ಹಸ್ತಪ್ರತಿ ಶಾಸ್ತ್ರದೊಂದಿಗೆ ಹಸ್ತಪ್ರತಿ ಚಿತ್ರಗಳೂ ಬೆಳೆದು ಬಂದಿರುವ ಸಾಧ್ಯತೆಗಳಿವೆ. ಈ ಅವಧಿಯಲ್ಲಿ ವೀರಶೈವ ಧರ್ಮದ ಎಲ್ಲ ಮಜಲು (ಹಂತ) ಗಳೂ ಪುನರುಜ್ಜೀವನಗೊಂಡಂತೆ ಈ ಉದ್ಧರಣಿ ಚಿತ್ರಗಳೂ ಪುನರುಜ್ಜೀವನಗೊಂಡಿವೆ ಎಂದು ಅಭಿಪ್ರಾಯಪಡಬಹುದಾಗಿದೆ. ದೇಶದಾದ್ಯಂತ ಇರುವ ಶರಣರನ್ನು ಲೋಹಚುಂಬಕದಂತೆ ಆಕರ್ಷಿಸಿರುವ ಜಗಜ್ಯೋತಿ ಬಸವಣ್ಣನವರು ತಮ್ಮ ಆಚಾರ, ವಿಚಾರ, ನಡತೆಗಳ ಮೂಲಕ ಇಡೀ ಉತ್ತರ ಕರ್ನಾಟಕವೇ ವೀರಶೈವ ಶರಣ-ಶರಣೆಯರಿಂದ ಪ್ರಬಲರಾಗಿದ್ದ ಅವಧಿಯಾಗಿತ್ತು ಎಂಬುದು ಇತಿಹಾಸದಿಂದ ತಿಳಿದು ಬರುತ್ತದೆ. ಈಗ ದೊರಕುತ್ತಿರುವ ಹಾಗೂ ದೊರಕಿರುವ ಉದ್ಧರಣಿ ವಾಚ್ಯ ಮತ್ತು ಪಟಲಗಳು ಬಹುತೇಕ ಉತ್ತರ ಕರ್ನಾಟಕದ ಮಠಗಳಲ್ಲಿ, ಭಕ್ತರ ಮನೆಗಳಲ್ಲಿ ದೊರಕಿದವುಗಳಾಗಿದ್ದು ಆನಂತರದಲ್ಲಿ ದಕ್ಷಿಣ ಕರ್ನಾಟಕದತ್ತ ಸಾಗಿಸಿರುವುದು ಕಂಡು ಬರುತ್ತದೆ. ಈ ಉದ್ಧರಣಿ ವಾಚ್ಯ ಮತ್ತು ಚಿತ್ರಗಳು ಶಿವಾಗಮಗಳಲ್ಲಿ ರೂಪುಗೊಂಡು ೧೨ನೇ ಶತಮಾನದ ಅವಧಿಯಲ್ಲಿ ಪಟಲಗಳಾಗಿ ರಚನೆಗೊಳ್ಳುತ್ತ, ಕಲ್ಯಾಣ ಕ್ರಾಂತಿಯ ನಂತರ ಮಠಗಳು ಪುನಃರಚನೆಯ ಕಾರ್ಯವನ್ನು ಮಾಡುತ್ತ ಬಂದಿವೆ. ಈ ಉದ್ಧರಣಿ ಚಿತ್ರಗಳನ್ನು ಪರಿಶೀಲಿಸಿದಾಗ ತಾತ್ವಿಕವಾಗಿ ಒಂದೇ ವಿಷಯವನ್ನು ಹೊಂದಿದ್ದರೂ ಆಕಾರ ಆಕೃತಿ ವರ್ಣಗಾರಿಕೆಯಲ್ಲಿ ಭಿನ್ನತೆಗಳು ಕಂಡುಬರುತ್ತವೆ. ಇದಕ್ಕೆ ಪ್ರಮುಖ ಕಾರಣ, ಈ ಉದ್ಧರಣಿ ಚಿತ್ರಗಳ ರಚನೆಯ ಕಾಲ ಸ್ಥಳ ಕಲಾವಿದರು ಬದಲಾವಣೆ ಆದಂತೆ ಕಲಾಕೃತಿಗಳೂ ಬದಲಾವಣೆ ಆಗಿರುವುದು ಕಂಡು ಬರುತ್ತದೆ.

ವೀರಶೈವ ಧರ್ಮ, ಸಂಸ್ಕೃತಿಗಳೊಂದಿಗೆ ವಟುಗಳಿಗೆ ಆಧ್ಯಾತ್ಮಿಕ ತರಬೇತಿ ನೀಡುವ ಪ್ರಮುಖ ಕೇಂದ್ರವಾಗಿ ಬೆಳೆದು ಬಂದ ಬಾದಾಮಿಯ "ಶಿವಯೋಗ ಮಂದಿರ"ದಲ್ಲಿ ಧರ್ಮಕ್ಕೆ ಸಂಬಂಧಿಸಿದಂತೆ ಹಸ್ತಪ್ರತಿಗಳನ್ನು ಸಂಗ್ರಹಿಸಿಡಲಾಗಿದೆ. ಇದರಲ್ಲಿ ಉದ್ಧರಣಿ ಪಟಲಗಳನ್ನೂ ಸೃಜಿಸಿರುವುದು ಮತ್ತು ಸಂಗ್ರಹಿಸಿರುವುದು ಕಂಡು ಬರುತ್ತಿದ್ದು ಈಗ ಬಹುತೇಕ ಈ ಉದ್ಧರಣಿಯ ಸುರುಳಿಗಳನ್ನು ಕರ್ನಾಟಕದ ಇತರ ಭಾಗಗಳಲ್ಲಿಯೂ ಕಾಣುವಂತಾಗಿದೆ. ರಾಯಚೂರಿನ ಕವಿತಾಳ ಕಲ್ಮಠ, ಗದುಗಿನ ತೋಂಟದಾರ್ಯಮಠ, ಬೆಳಗಾವಿಯ ನಾಗನೂರುಮಠ ಹಾಗೂ ಈ ಭಾಗದ ಕೆಲವು ಭಕ್ತರ ಮನೆಗಳಲ್ಲಿಯೂ ಈ ಉದ್ಧರಣಿ ಚಿತ್ರಗಳು ಕಂಡು ಬರುತ್ತವೆ.

ಆನಂತರದಲ್ಲಿ ಬಹುಶಃ ಸಂರಕ್ಷಣೆಯ ಹಿನ್ನೆಲೆಯಲ್ಲಿ ಹಸ್ತಾಂತರಗೊಂಡಿರಬಹುದಾದ ಈ ಉದ್ಧರಣೆ ಸುರಳಿಗಳು, ಪಟಲಗಳು, ಧಾರವಾಡ, ಹಂಪಿ, ಗುಲಬರ್ಗಾ, ಬೆಂಗಳೂರು, ಮೈಸೂರು ವಿಶ್ವವಿದ್ಯಾಲಯಗಳಲ್ಲದೇ ಧರ್ಮಸ್ಥಳದಲ್ಲಿಯೂ ಸಂಗ್ರಹಿಸಲ್ಪಟ್ಟಿವೆ. ನನ್ನ ಅಧ್ಯಯನಕ್ಕೆ ಬಳಸಿಕೊಂಡ ಉದ್ಧರಣೆ ಪಟಲಗಳು ಈ ಕೆಳಗಿನಂತಿವೆ:

**ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ:**

**ಉದ್ಧರಣೆ ಪಟಲ ೧ :**

ಡಾ. ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ವಿಭಾಗದಲ್ಲಿ ಸಂಗ್ರಹಿಸಿಡಲಾದ ಉದ್ಧರಣೆ ಪಟಲದ ಸುರುಳಿಯು ಬರೀ ಚಿತ್ರಗಳಿಂದಲೇ ತುಂಬಿಕೊಂಡಿದ್ದು ಈ ಉದ್ಧರಣೆ ಪಟಲದ ಉದ್ದ ೫೬೫ ಸೆಂಟಿಮೀಟರ್ ಆಗಿದ್ದು, ಇದರ ಅಗಲವು ೩೧ ಸೆಂಟಿ ಮೀಟರ್ ಆಗಿದೆ. ಇದರಲ್ಲಿ ಒಟ್ಟು ೨೪ ಚಿತ್ರಗಳು ರಚನೆಗೊಂಡಿವೆ. ಇದನ್ನು ಶ್ರೀ ಸಿ.ನಾ.ಪಾಟೀಲ-ತಳಕಲ್, ಘಂಟೀಕೇರಿ ಓಣಿ, ಹುಬ್ಬಳ್ಳಿ ಇವರಿಂದ ಪಡೆದು ಸಂಗ್ರಹಿಸಿಡಲಾಗಿದೆ.

**ಉದ್ಧರಣೆ ಪಟಲ ೨ :**

ಇದೇ ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿ ಸಂಗ್ರಹಿಸಿಡಲಾದ "ಶಿವಾನುಭವ ಶಾಸ್ತ್ರ"ದ ಉದ್ಧರಣೆ ಸಾಹಿತ್ಯವನ್ನು ೧೮.೧೨.೧೯೫೭ ರಲ್ಲಿ ರಾಯಚೂರಿನ ಕವಿತಾಳ ಕಲ್ಮಠದ ಶ್ರೀ ಮ.ನಿ.ಪ್ರ.ಸ್ವ. ಸಿದ್ಧಲಿಂಗ ಮಹಾಸ್ವಾಮಿಗಳು. ತಮ್ಮ ಮಠದಲ್ಲಿಯ ವರ್ಣರಂಜಿತವಾದ ಉದ್ಧರಣೆ ಪಟಲವನ್ನು ಗ್ರಂಥವಾಗಿ ಮುದ್ರಿಸಿರುವರು. ಈ ಗ್ರಂಥದಲ್ಲಿ ೩೩ ಉದ್ಧರಣೆ ಚಿತ್ರಗಳನ್ನು ಪ್ರಕಟಿಸಿದ್ದು ನನಗೆ ಸಿಕ್ಕ ಪಟಲ ಚಿತ್ರಗಳಲ್ಲಿಯೇ ಹೆಚ್ಚು ಚಿತ್ರಗಳಿರುವ ಪಟಲವಾಗಿದೆ. ನನಗೆ ಅದರ ಮೂಲಪ್ರತಿ ದೊರೆತಿಲ್ಲ. ಅದರ ನಕಲು (Zerox) ಪ್ರತಿಯನ್ನು ಕರ್ನಾಟಕ ವಿಶ್ವವಿದ್ಯಾಲಯವು ಸಂಗ್ರಹಿಸಿದ್ದು ಇವೆರಡನ್ನೂ ನನ್ನ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

*** ಕನ್ನಡ ವಿಶ್ವವಿದ್ಯಾಲಯ ಹಂಪಿ :**

ಶ್ರೀ ಗುರುಬಸವಲಿಂಗಾಯ ನಮಃ। ಉದ್ಧರಣೆಯ ವಾಚ್ಯ ಬರೆಯುವುದಕ್ಕೆ ಶುಭ ಮಸ್ತು ಪ್ಲವಂಗ ಸಂವತ್ಸರದ ಚೈತ್ರ ಶುದ್ಧ೨ಯಿಂದುವಾರದಲ್ಲು ಬೆಂಗಳೂರಲ್ಲಿರುವ ಕೋಟಿ ಲಿಂಗಶಾಸ್ತ್ರಿ ಕುಮಾರ ಶರಬಯ್ಯನವರು ಬರೆದು ಕೊಟ್ಟಿದ್ದು ಕಂಪ್ಲಿಯಲ್ಲಿರುವ ಕಲ್ಗುಡಿ ದೊಡ್ಡಪ್ಪನವರಿಗೆ ಉದ್ದರಣೆಯ ವಾಚ್ಯ ವಹಿರುಜು (ಹಸ್ತಪ್ರತಿ ಸೂಚಿ – ಕ.ವಿ.ವಿ. ಹಂಪೆ) ಎಂದಿದೆ.

**ಉದ್ಧರಣೆ ಪಟಲ ೧:**

ಹಸ್ತಪ್ರತಿ ವಿಭಾಗದಲ್ಲಿ ಸಂಗ್ರಹಿಸಿಡಲಾದ ಉದ್ಧರಣೆ ಪಟಚಿತ್ರಗಳು ಬಿಡಿಬಿಡಿಯಾಗಿದ್ದು ಈ ಪಟಚಿತ್ರದ ಅಳತೆಯು ೧' x ೧' ಅಡಿ ಆಗಿದ್ದು ಇದರಲ್ಲಿ ಚಿತ್ರಗಳು ರಚನೆಗೊಂಡಿವೆ. ಇದನ್ನು ಒಂದರ ಮೇಲೆ

ಒಂದರಂತೆ ಜೋಡಿಸಿ ಬಟ್ಟೆಯಲ್ಲಿ ಕಟ್ಟಿಡಲಾಗಿದೆ. ಈ ಉದ್ಧರಣಿ ಚಿತ್ರಗಳನ್ನು ಬೆಳಗಾವಿಯ ನಾಗನೂರು ಮಠದಿಂದ ಪಡೆದು ಸಂಗ್ರಹಿಸಿಡಲಾಗಿದೆ.

**ಉದ್ಧರಣೆ ಪಟಲ ೨ :**

ಹಸ್ತಪ್ರತಿ ವಿಭಾಗದಲ್ಲಿ ಸಂಗ್ರಹಿಸಿಡಲಾದ ಇನ್ನೊಂದು ಉದ್ಧರಣಿ ಪಟಲವು ಸುರುಳಿಯಾಗಿದ್ದು ೫೭೦ x ೩೦ ಸೆಂಟಿ ಮೀಟರ್ ಆಗಿದ್ದು ಇದರಲ್ಲಿ ಚಿತ್ರಗಳು ರಚನೆಗೊಂಡಿವೆ. ಈ ಉದ್ಧರಣಿ ಚಿತ್ರಗಳ ಸುರುಳಿಯನ್ನು ಗದಗದ ಮಾನ್ವಿ ಬ್ರದರ್ಸ್ ಅವರಿಂದ ಸಂಗ್ರಹಿಸಿಡಲಾಗಿದೆ.

**ಉದ್ಧರಣೆ ಪಟಲ ೩ :**

ಹಸ್ತಪ್ರತಿ ವಿಭಾಗದಲ್ಲಿ ಸಂಗ್ರಹಿಸಿಡಲಾದ ತಾಳೆ ಓಲೆಗರಿ ಚಿತ್ರಗಳನ್ನು ಸಂಗ್ರಹಿಸಿದ್ದು, ಈ ತಾಳೆ ಓಲೆಗರಿಗಳ ಅಳತೆ ೬ x ೨.೬ ಇಂಚು ಅಳತೆಯಲ್ಲಿದ್ದು, ಇವುಗಳ ಮೇಲೆ ಚಿತ್ರಗಳು ರಚನೆಗೊಂಡಿವೆ. ಇವುಗಳನ್ನು ಒಂದರ ಮೇಲೆ ಒಂದರಂತೆ ಜೋಡಿಸಿ ಬಟ್ಟೆಯಲ್ಲಿ ಕಟ್ಟಿಡಲಾಗಿದೆ. ಈ ಉದ್ಧರಣೆ ಚಿತ್ರಗಳನ್ನು ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ವಿಭಾಗದಲ್ಲಿ ಸಂಗ್ರಹಿಸಿಡಲಾಗಿದೆ.

**ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ:**

**ಉದ್ಧರಣೆ ಪಟಲ :**

ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ವಿಭಾಗದಲ್ಲಿ: ಸಂಗ್ರಹಿಸಿಡಲಾದ ಉದ್ಧರಣಿ ವಾಚ್ಯ ಮತ್ತು ಪಟಚಿತ್ರಗಳಲ್ಲಿಯ ಚಿತ್ರಗಳು ಜಾನಪದ ಅಂಶಗಳೊಂದಿಗೆ ರಚನೆಗೊಂಡಿದ್ದು ಒಟ್ಟು ನೂರಾರು ಚಿತ್ರಗಳಿವೆ. ಅದರಲ್ಲಿ ಪ್ರಬುದ್ಧ ಅಪ್ರಬುದ್ಧಗಳೆರಡೂ ಅಂಶಗಳು ಕಂಡುಬರುತ್ತವೆ. ಇವುಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

**ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು:**

**ಉದ್ಧರಣೆ ಪಟಲ :**

ಕನ್ನಡ ಅಧ್ಯಯನ ಪೀಠ – ಹಸ್ತಪ್ರತಿ ವಿಭಾಗದಲ್ಲಿ: ಸಂಗ್ರಹಿಸಿಡಲಾದ ಉದ್ದರಣಿ ಪಟಲವು ಸುರುಳಿಯಾಗಿದ್ದು, ಉದ್ಧರಣೆ ಪಟಲ ೭೫೦ x ೩೦ ಸೆಂಟಿ ಮೀಟರ್ ಆಗಿದ್ದು ಇದರಲ್ಲಿ ಚಿತ್ರಗಳಿವೆ. ಈ ಉದ್ಧರಣಿ ಪಟಲ ಶಕೆ ಶಾಲಿವಾಹನ ೧೭೮೯ನೇ ಪ್ರವರ್ಧಮಾನಕ್ಕೆ ಸಲ್ಲುವ ಪ್ರಭು ಸಂವತ್ಸರದ ಚೈತ್ರ ಶುದ್ಧ ೧ ಶುಕ್ರವಾರ ತಾಸು ೩ಕ್ಕೆ ರೇವತಿ ನಕ್ಷತ್ರದಲ್ಲಿ ಬರೆದು ಹಾರನಳ್ಳಿ ಚೆನ್ನಬಸಪ್ಪನವರು ಬರಸಿದ್ದು ಕಾಳುಗೊಂಡದ ಭದ್ರಶೆಟ್ಟಪ್ಪನು ಆದ್ಯಂತ ಬರೆದು ಮುಗಿಸಿದ್ದು ಅಂದರೆ ೧೮೬೭ ರಲ್ಲಿ ಬರೆಸಲಾಗಿದೆ ಎಂಬುದು ತಿಳಿದು ಬರುತ್ತದೆ. ದಾವಣಗೇರಿಯ ಶ್ರೀ ಉಮಾಪತಿ ಅವರು ಈ ಉದ್ಧರಣಿ ಪಟಲವನ್ನು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ನೀಡಿರುವರು ಎಂಬುದು ತಿಳಿದು ಬರುತ್ತದೆ.

**ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನಾ ಪ್ರತಿಷ್ಠಾನ ಶ್ರೀ ಕ್ಷೇತ್ರ ಧರ್ಮಸ್ಥಳ:**

**ಉದ್ಧರಣೆ ಪಟಲ ಸಂಖ್ಯೆ ೧:**

ಇದು ಉದ್ಧರಣೆ ವಾಚ್ಯ ಮತ್ತು ಪಟಲವನ್ನು ಹೊಂದಿದ್ದು ಸುರುಳಿಯಾಕಾರದಲ್ಲಿದೆ. ಇದು ೧೪೬೦ ಸೆಂಟಿ ಮೀಟರ್ ಉದ್ದವಾಗಿದ್ದು. ೩೧.೫ ಸೆಂಟಿ ಮೀಟರ್ ಅಗಲವಾಗಿದೆ. ಈ ಸುರುಳಿಯು ಉದ್ದರಣೆ ಸಾಹಿತ್ಯ ಮತ್ತು ಚಿತ್ರಗಳೆರಡನ್ನೂ ಹೊಂದಿದ್ದು ಗಾತ್ರದಲ್ಲಿಯೂ ದೊಡ್ಡದಾಗಿದೆ. ಚಿತ್ರಗಳು ಮಾತ್ರವಿದ್ದು ಉಳಿದಂತೆ ಈ ಚಿತ್ರಗಳೊಂದಿಗೆ ವಾಚ್ಯವೂ ಇದೆ.

**ಉದ್ಧರಣೆ ಪಟಲ ಸಂಖ್ಯೆ ೩:**

ಇದು ಉದ್ಧರಣೆ ಪಟಲ ಮಾತ್ರವಾಗಿದ್ದು ಸುರುಳಿಯಾಕಾರದಲ್ಲಿದೆ. ಇದು ೫೬೫ ಸೆಂಟಿ ಮೀಟರ್ ಉದ್ದವಾಗಿದ್ದು, ೩೧ ಸೆಂಟಿ ಮೀಟರ್ ಅಗಲವಾಗಿದೆ. ಈ ಸುರುಳಿಯಲ್ಲಿ ಉದ್ಧರಣೆ ಚಿತ್ರಗಳಷ್ಟೆ ಇವೆ. ಗಾತ್ರದಲ್ಲಿ ಚಿಕ್ಕದಾಗಿದ್ದರೂ ಮೊದಲಿನ ಸುರಳಿಗಿಂತಲೂ ಹೆಚ್ಚು ಅಂದರೆ ೨೭ ಚಿತ್ರಗಳನ್ನು ಹೊಂದಿದೆ.

ಈ ಉದ್ಧರಣೆ ಚಿತ್ರಗಳನ್ನು ಶ್ರೀ ಉಮಾಪತಿ ಶಾಸ್ತ್ರಿಗಳೇ ಕೊಟ್ಟಿರುವುದಾಗಿ ತಿಳಿದುಬರುತ್ತದೆ.

ಮೇಲಿನ ಈ ಎಲ್ಲ ಉದ್ಧರಣೆ ಚಿತ್ರಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಈ ಭಿನ್ನ ಸ್ವರೂಪದ, ವಿಭಿನ್ನ ವರ್ಣಗಳ ಉದ್ಧರಣೆ ಚಿತ್ರಗಳನ್ನು ಕಾಗದದ ಪ್ರತಿಗಳ ಮೇಲೆ, ತಾಳೆಗರಿಗಳ ಮೇಲೆ ಚಿತ್ರಿಸಲಾಗಿದೆ.

**ಉದ್ಧರಣೆ ವಾಚ್ಯ ಮತ್ತು ಪಟಲಗಳು ಗ್ರಂಥರೂಪದಲ್ಲಿ ಬಂದಿರುವುದು:**

**"ಶಿವಾನುಭವಶಾಸ್ತ್ರ"**

* ೧೯೫೮ ರಲ್ಲಿ ರಾಯಚೂರು ಜಿಲ್ಲೆಯ ಕವಿತಾಳ ಕಲ್ಮಠದ ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳು ೩೩ ಚಿತ್ರಗಳನ್ನೊಳಗೊಂಡ ೮೮ ಪುಟಗಳುಳ್ಳ ೮".೬ x ೫".೬ ಇಂಚುಗಳ ಉದ್ದ ಅಗಲವಿರುವ "ಶಿವಾನುಭವಶಾಸ್ತ್ರ" ಕಿರುಗ್ರಂಥವನ್ನು ಪ್ರಕಟಿಸಿದ್ದಾರೆ. ಇದರಲ್ಲಿ ವಾಚ್ಯದ ಬಗ್ಗೆ ಬರೆಯಲಾಗಿದೆ. ಚಿತ್ರಕಲಾವಿದರ ಬಗ್ಗೆ ಆಗಲಿ, ಚಿತ್ರದ ಕುರಿತಾಗಲಿ ಏನನ್ನೂ ಹೇಳಿಲ್ಲ. ಆದರೆ ವರ್ಣರಂಜಿತವಾದ ಚಿತ್ರಗಳನ್ನು ಅಚ್ಚು ಮಾಡಿಸಿರುವುದು ತಿಳಿದು ಬರುತ್ತದೆ. ನನಗೆ ಮೂಲಗ್ರಂಥ ದೊರೆತಿಲ್ಲವಾದರೂ ನಕಲು ಪ್ರತಿ ದೊರತಿದೆ.

**ಉದ್ಧರಣೆ ಸಾಹಿತ್ಯ:**

* ೨೦೧೦ ರಲ್ಲಿ ಡಾ. ಕೆ.ರವೀಂದ್ರನಾಥರವರು ೨೪ ಉದ್ಧರಣೆ ಚಿತ್ರಗಳನ್ನೊಳಗೊಂಡ ೭೪ ಪುಟಗಳುಳ್ಳ ೮".೬ x ೫".೬ ಇಂಚುಗಳ ಉದ್ದ ಮತ್ತು ಅಗಲವಿರುವ "ಉದ್ಧರಣೆ ಸಾಹಿತ್ಯ"ವನ್ನು ಕಿರುಗ್ರಂಥರೂಪದಲ್ಲಿ ಪ್ರಕಟಿಸಿದ್ದಾರೆ. ಇದರಲ್ಲಿ ವರ್ಣಗಳ ಬಗ್ಗೆ ಮತ್ತು ಒಂದೆರಡು ಚಿತ್ರಗಳ ಕುರಿತೂ ಪ್ರಾಸ್ತಾವಿಕವಾಗಿ ಹೇಳಿರುವುದು ವಿಶೇಷವಾಗಿದೆ.

* ೧೯೮೬ ರಲ್ಲಿ ಡಾ. ಜ.ಚ.ನಿ. ಅವರು ಬರೆದ ಉದ್ಧರಣಿ ಸಾಹಿತ್ಯ ಲೇಖನದಲ್ಲಿ ಉದ್ಧರಣಿ ವಾಚ್ಯ ಮತ್ತು ಚಿತ್ರಗಳು ಹಾಗೂ ಚಿತ್ರ ಕಲಾವಿದನ ಪ್ರೌಢಿಮೆಯನ್ನು ಕುರಿತು ವಿವರಿಸಿರುವುದು ಔಚಿತ್ಯ ಪೂರ್ಣವಾಗಿದೆ.
* ೧೯೯೨ ರಲ್ಲಿ ಡಾ. ಬಿ.ಕೆ.ಹಿರೇಮಠರು ಸ್ವತಃ ಕಲಾವಿದರೂ (ಸಾಹಿತಿಗಳೂ) ಆಗಿರುವುದರಿಂದ ಉದ್ಧರಣಿ ಚಿತ್ರಗಳಲ್ಲಿ ಅಧೋಕುಂಡಲಿನಿ ಮತ್ತು ಊರ್ಧ್ವ ಕುಂಡಲಿನಿ ಚಿತ್ರಗಳ ಕುರಿತು ಬರೆದಿದ್ದು ಅತ್ಯಂತ ಅರ್ಥಪೂರ್ಣವಾಗಿ ತಿಳಿಸಿರುವರು. ಅವರು ಕನ್ನಡ ಹಸ್ತಪ್ರತಿ ಅಧ್ಯಯನ ಮಹಾಪ್ರಬಂಧದಲ್ಲಿ ಪ್ರಸ್ತಾಪಿಸಿರುವರು.

ಇದನ್ನು ಹೊರತು ಪಡಿಸಿದರೆ ಉದ್ಧರಣಿ ಚಿತ್ರಗಳ ಬಗ್ಗೆ ವಿಶೇಷವಾದ ಅಧ್ಯಯನವನ್ನು ಈವರೆಗೂ ಯಾರೂ ಕೈಗೊಂಡಿಲ್ಲದಿರುವುದು ಹಾಗೂ ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಹಿನ್ನೆಲೆಯಲ್ಲಿ ಈ ಉದ್ಧರಣಿ ಚಿತ್ರಗಳ ಕುರಿತು ಇಲ್ಲಿ ಅಧ್ಯಯನವನ್ನು ಮಾಡಲಾಗಿದೆ. ಆದರೂ ಈ ವಿಷಯದ ಕುರಿತು ಇನ್ನೂ ಹೆಚ್ಚಿನ ಅಧ್ಯಯನ ಮಾಡಬಹುದಾದಷ್ಟು ಕಲಾತಂತ್ರಗಳು, ವಸ್ತು ವಿಷಯಗಳಿವೆ ಎಂದು ಹೇಳಬಹುದಾಗಿದೆ.

ಈ ಮೇಲಿನ ಎಲ್ಲ ವಿಷಯ ವಸ್ತು ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡು ಉದ್ಧರಣಿ ಚಿತ್ರಗಳ ಕುರಿತು ಅಧ್ಯಯನವನ್ನು ಈ ಭಿನ್ನ ಸ್ವರೂಪದ ವಿಭಿನ್ನ ವರ್ಣದ ಉದ್ಧರಣಿ ಚಿತ್ರ ಸಂಯೋಜನೆಯಲ್ಲಿ ಸಾಮ್ಯ ವೈಷಮ್ಯದ ಕುರಿತು ಇಲ್ಲಿ ಅಧ್ಯಯನ ಮಾಡಲಾಗಿದೆ.

**ಉದ್ಧರಣಿ ಚಿತ್ರಗಳ ಅರ್ಥ ಸ್ವರೂಪ:**

ಸಂಕೇತ, ಸಂಖ್ಯೆ, ರೇಖೆ, ಹೂವು, ಬಳ್ಳಿ, ಪ್ರಾಣಿ, ಲಿಂಗ, ತತ್ವಯುಕ್ತ ಆಧ್ಯಾತ್ಮದ ರಹಸ್ಯವನ್ನು ಸ್ಫುರಿಸುವ ಉದಾತ್ತವಾದ ಉದ್ಧರಣಿ ಪಟಲವಾಗಿದೆ. ಬೀಜಾಕ್ಷರಗಳು ಮತ್ತು ಸಾಂಕೇತಿಕ ನಕ್ಷೆಗಳು, ಷಟ್‌ಚಕ್ರಗಳು ಇಲ್ಲಿ ಪ್ರಧಾನ ಪಾತ್ರ ವಹಿಸುತ್ತವೆ. ಯೋಗದ ಪರಿಭಾಷೆಯನ್ನು ಇಲ್ಲಿ ಅರ್ಥವತ್ತಾದ ಚಿತ್ರಗಳ ರೂಪದಲ್ಲಿ ರಚಿಸಲಾಗಿದೆ[೩೫] ಎಂದು ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರು ಹೇಳಿರುವರು. ವೀರಶೈವರ ಅರ್ಚನೆ, ಅರ್ಪಣ, ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಗಳು ಸಂಕೇತಯುಕ್ತ ಅನುಭಾವದ ನಿಲುಗನ್ನಡಿಯಾಗಿ ಈ ಉದ್ಧರಣಿ ಪಟಲವು ಸೃಷ್ಟಿಯಾಗಿದೆ. ಮೇಲ್ನೋಟಕ್ಕೆ ವರ್ಣರಂಜಿತವಾದ ಸುಂದರ (ಚಿತ್ರ) ಪಟಲದಂತೆ ಕಂಡುಬರುತ್ತಿದ್ದರೂ ಆ ಚಿತ್ರಗಳೊಳಗಿರುವ ಅಂಕಿ, ಅಕ್ಷರ, ಚಿಹ್ನೆ, ಪ್ರಾಣಿ, ಪಕ್ಷಿಗಳು ನಿಸರ್ಗದ ವಸ್ತುಗಳು ರೇಖೆಗಳಿಂದ ವರ್ಣಗಳಿಂದ ತುಂಬಿಕೊಂಡು ವಿಶಿಷ್ಟವಾಗಿ ಧಾರ್ಮಿಕ ಚಿತ್ರಗಳಾಗಿ ಮೂಡಿ ಬಂದಿವೆ.

ಅಂತರಂಗವನ್ನು ಅರಿತುಕೊಳ್ಳಲು ಅನುವು ಮಾಡಿಕೊಡುವ ಸಾಂಕೇತಿಕ ದೃಶ್ಯ ಸಾಹಿತ್ಯ, ಸಾಂಖ್ಯ ಯೋಗ, ಮೀಮಾಂಸೆ ಮತ್ತು ಜ್ಯೋತಿಷ್ಯಗಳ ಸಮನ್ವಯವೇ ಈ ಉದ್ಧರಣಿ ಸಾಹಿತ್ಯವಾಗಿದೆ. ವೀರಶೈವ ಸ್ವಯಾನುಭೂತ ಸಕೀಲ ಸಮನ್ವಿತ ಸಾಹಿತ್ಯ[೩೬] ಇದಾಗಿದೆ ಎಂದು ಡಾ. ಜ.ಚ.ನಿ. ಅವರು ಹೇಳಿರುವರು.

---

೩೫. ಡಾ. ಎಚ್.ತಿಪ್ಪೇರುದ್ರಸ್ವಾಮಿ: ಕರ್ನಾಟಕ ಸಂಸ್ಕೃತಿ ಸಮೀಕ್ಷೆ ಪುಟ ೭೬೫.
೩೬. (ಸಂ) ಡಾ. ಬಿ.ವಿ.ಶಿರೂರ: ಗೌರವ: ಲೇಖನ: ಡಾ. ಜ.ಚ.ನಿ.: ಉದ್ಧರಣಿ ಸಾಹಿತ್ಯ: ಪುಟ. ೧೫೩.

ಇದು ಬ್ರಹ್ಮಾಂಡ ಪಿಂಡಾಂಡ ಯುಕ್ತವಾದ ಶಿವಯೋಗ ಸಾಧನದ ಮೋಕ್ಷ ದೀಕ್ಷೆಯನ್ನು ಸರಳವಾಗಿ ಪಡೆಯುವಂತೆ ಮಾಡುವುದು, ಅಂತರಂಗವನ್ನು ವಿಕಾಸಗೊಳಿಸಿ ಪಾರಮಾರ್ಥಿಕ ಸಿದ್ಧಿಯನ್ನುಂಟು ಮಾಡುವುದು.

ಉದ್ಧರಣಿ ಉಪಾಸನೆಯ ಒಂದು ತಂತ್ರ ಮನನ ಭಾವಗಳನ್ನು, ಕಾಯಕರಣಗಳನ್ನು ಕೇಂದ್ರೀಕರಿಸುವ, ಸೂಚ್ಯ ಸೂತ್ರ ಪ್ರವೃತ್ತಿಯನ್ನು ನಿಯಂತ್ರಿಸುವ, ವಿಕೃತಿಯಿಂದ ದೂರ ಸರಿಸುವ, ಕುಟಿಲಯಂತ್ರ ಮನಸ್ಸನ್ನು ಮನನಕ್ಕೆ, ಮತಿಯನ್ನು ವಿಚಾರಕ್ಕೆ ಹಚ್ಚುವ ಅಕ್ಷರಮಂತ್ರ, ನವಚಕ್ರಗಳ ನಿರ್ಣಯಕ್ಕೆ ಬೇಕಾದ ದೃಶ್ಯಸಂಕೇತತತ್ವಗಳ ಪಂಚೀಕರಣವನ್ನು ಉದ್ಧರಿಸುವ ಸೂತ್ರ. ಅಂಗ-ಲಿಂಗ, ಶಕ್ತಿ-ಭಕ್ತಿ, ಮಂತ್ರ, ಮುಂತಾದವು ಸಕೀಲಗಳನ್ನು ಪಂಚೀಕರಿಸಲು ಅನುವಾಗುವ ಪಟಲ (ಸಾಹಿತ್ಯ), ಅರ್ಪಣ, ಮಿಶ್ರಾರ್ಪಣ, ಕ್ರಿಯೆ, ಜ್ಞಾನ, ಸೃಷ್ಟಿ-ದೃಷ್ಟಿ, ಪದಾರ್ಥ-ಪ್ರಸಾದ, ಹಸ್ತ-ಮುಖಗಳ ಪಂಚೀಕರಣವನ್ನು ಬೋಧಿಸುವ ವರ್ಣ, ವಿಜ್ಞಾನಸಾಧನವಾಗಿದೆ. ಅಂತರಂಗದ ಆಕೃತಿಗಳನ್ನು ಅಭಿವ್ಯಕ್ತೀಕರಿಸುವ ಪಟಲಗಳಾಗಿವೆ.

ಇಂತಹ ಉದ್ಧರಣಿಯು ಕನ್ನಡ ಸಾಹಿತ್ಯದಲ್ಲಿ ಭಿನ್ನವಾಗಿ ಬರಹ ರೂಪದಲ್ಲಿ ಹಾಗೂ ಸಂಕೇತ ಪ್ರಧಾನವಾಗಿ ರೇಖೆ ಮತ್ತು ವರ್ಣಗಳಲ್ಲಿ ರಚನೆಗೊಂಡಿರುವ ಆಕೃತಿ ಆಕಾರಗಳಿಂದ ಅಭಿವ್ಯಕ್ತಗೊಂಡು, ಇದರ ರೂಪ ಶಿವಮಯ ಅಕ್ಷರಮಂತ್ರವಾಗಿದ್ದು ಶಿವಯೋಗ ಜ್ಞಾನ ನೀಡುವ ಅಂತರ್ ಚಿಂತನೆಯ ಜ್ಞಾನ, ಕಲೆ, ಸೃಷ್ಠಿಕಲೆ, ಭಕ್ತಿ ಕಲೆ, ಆಚಾರಕಲೆ, ಶೂನ್ಯಕಲೆ, ಧ್ಯಾನಕಲೆ, ವರ್ಣಕಲೆಗಳಿಂದ ಕೂಡಿದ ವಿವಿಧ ರೂಪಕ, ಹೋಲಿಕೆಗಳ ಸುಂದರ ವರ್ಣರಂಜಿತ ಪ್ರಕೃತಿದತ್ತ ಚಿತ್ರಕಲೆಗಳ ಸಂಪುಟ ಸಾಹಿತ್ಯವಾಗಿದೆ. ಇಡೀ ಜೀವನವನ್ನು ಕಲಾತ್ಮಕವಾಗಿ ಸಾಗಿಸಿ ಶೂನ್ಯಕ್ಕೇರುವ ಬಗೆಯನ್ನು ಚಿತ್ರರೂಪದಲ್ಲಿ ಸರಳವಾಗಿ ತಿಳಿಸುವ ಉದ್ದೇಶದಿಂದಲೇ ಮೂಡಿ ಬಂದಿರುವದು. ಈ ಚಿತ್ರಗಳಲ್ಲಿ ಭಕ್ತಿ ಭಾವಗಳ ಸಂಪತ್ತಿದೆ. ಆಧ್ಯಾತ್ಮಿಕ ಶಕ್ತಿ ಇದೆ. ಬೀಜದಂತಿರುವ ಅದೃಶ್ಯ ಕಾರಣದ ಅಂದರೆ ಮೂಲವಸ್ತುವಿನ ವೃಕ್ಷದಂತಿರುವ ದೃಶ್ಯದ ಪ್ರಜ್ಞೆಯುಂಟಾಗುತ್ತದೆ. ವರ್ಣವಿನ್ಯಾಸದ ಉದ್ಧರಣಿಯ ಅಧ್ಯಯನ ಆರಾಧನೆಗಳಲ್ಲಿ ನೇತ್ರ, ಮನ, ಪ್ರಾಣಗಳ ಧಾರಣವಾಗುತ್ತದೆ. ಉದ್ಧರಣಿಗಳ ಉಗಮ ಆಗಮಗಳಿಂದ ಎಂಬ ಡಾ. ಜ.ಚ.ನಿ. ಅವರ ಅಭಿಪ್ರಾಯದಂತೆ ಇಲ್ಲಿ ಶಬ್ದಾರ್ಥ, ಮಂತ್ರಗಳ ಅಕ್ಷರಗಳು ಯೋಗಕ್ಕೆ ತಕ್ಕಂತೆ ಭಿನ್ನ ಬಿನ್ನ ರೀತಿಯಲ್ಲಿ ವಿನ್ಯಾಸಗೊಂಡಿವೆ. ಜಂಗಮದಿಂದ ಸ್ಥಾವರಕ್ಕೆ ರೂಪಾಂತರ ಹೊಂದಿದಂತೆ ಇಲ್ಲಿ ಎಲ್ಲವನ್ನು ಮೂರ್ತ ರೂಪವಾಗಿ ಸಂಕೇತಿಸಿ ಭಕ್ತಿ ಅನುಭಾವ ಮಂತ್ರ ಮಹಿಮೆ ತಂತ್ರಯುಕ್ತವಾಗಿ ವೈಜ್ಞಾನಿಕ ದೃಷ್ಟಿಕೋನದಿಂದ ಚಕ್ರ, ದಳ, ಪ್ರಣವ ವೃಷಭ, ಸರ್ಪ, ಆಮೆ, ಮೀನು, ಮೊಸಳೆ, ಸ್ಥಾವರಲಿಂಗ, ಜಂಗಮಮೂರ್ತಿ, ಹೂವು, ಬಳ್ಳಿ, ಚಿಗರೆ ಮುಖ, ಮಾನವ, ಸ್ತ್ರೀದೇಹ ಹಾಗೂ ಪ್ರಾಣಿ ದೇಹ ಹೀಗೆ ಸಂಕೇತಿಸುವ ಚಿತ್ರಗಳು, ಬಸವಾಕ್ಷರತ್ರಯ ವಿನ್ಯಾಸ, ವಿವಿಧ ಮಂತ್ರಗಳಿಂದ ಕೂಡಿದ್ದು ವರ್ಣರಂಜಿತವಾಗಿ ಚಿತ್ರಪಟಗಳು ಸೃಷ್ಟಿಗೊಂಡಿರುವುದು ಶಿವಯೋಗಜ್ಞಾನ ತಿಳಿಸುವ ಆಚಾರ ವಿಚಾರವನ್ನು ಅರಿತು ಅಳವಡಿಸಿ ಆರಾಧನೆ ಮಾಡುವಂತಹವುಗಳಾಗಿವೆ.

ಉದ್ಧರಣಿ ಅರ್ಥ ಉತ್+ಹರಣ ಆಗಿದ್ದು "ಉತ್" ಎಂದರೆ ಮೇಲೆ, ಎತ್ತರಕ್ಕೆ ಎಂದೂ "ಹರಣ" ಎಂದರೆ ಅಪಹರಿಸು, ಕೊಂಡೊಯ್ಯುವದು ಎಂದಾಗುತ್ತದೆ. "ಉದ್ಧರಣಿ" ಎಂದರೆ ಆತ್ಮವನ್ನು ಉದ್ಧರಿಸು,

ಜೀವವನ್ನು ಮೇಲಕ್ಕೆತ್ತು, ಉನ್ನತ ಸಾಧನೆ ಮಾಡಿಸು, ಹುಟ್ಟು ಸಾವುಗಳಿಂದ ಮುಕ್ತಿಯುಂಟು ಮಾಡು, ಸಂಸಾರವೆಂಬ ಮಾಯಾಪಾಶದಿಂದ ಬಿಡಿಸಿ ಮೇಲಕ್ಕೆತ್ತಿ ನಿಜಜ್ಞಾನದಲ್ಲಿರಿಸಿ, ಶಿವಯೋಗದಲ್ಲಿ ತೇಜೋಮಯನನ್ನಾಗಿಸುವುದು, ಲಿಂಗಾಂಗಸಂಗಿಯಾಗಿಸುವುದು ಉದ್ಧರಣೆಯ ಅರ್ಥವಾಗಿದೆ. "ಉದ್ಧರಣೆಗಳು ಶಿವಾಗಮಗಳಿಂದ ಹುಟ್ಟಿ ಸರಳವಾಗಿ ದೃಶ್ಯ ಹಾಗೂ ಶ್ರವ್ಯದ ಮೂಲಕ ಶಿವಯೋಗ ಸಂಪೂರ್ಣತೆಯನ್ನುಂಟು ಮಾಡಿ ಆತ್ಮವನ್ನು ಪರಿಪೂರ್ಣವಾಗಿ ಮಾಡುತ್ತವೆ.

ವೀರಶೈವ ಶರಣರು ಈ ಪ್ರಯೋಗವನ್ನು ಸರಳವಾಗಿ ಅನಕ್ಷರಸ್ಥರೂ ಅರ್ಥ ಮಾಡಿಕೊಳ್ಳುವಂತೆ ಸೃಷ್ಟಿಸಿದರು. ಭಕ್ತಿ ಕ್ಷೇತ್ರದಲ್ಲಿ ಇದೊಂದು ಮಾಧ್ಯಮವಾಗಿ ಕೆಲಸ ಮಾಡಿದಂತಿದೆ. ಇಂದಿನ ಸಮೂಹ ಮಾಧ್ಯಮಗಳಂತೆ ಈ ಉದ್ಧರಣೆಗಳು ಅಂದಿನ ಶರಣರ ಭಕ್ತಿಯ ಸಮೂಹಮಾಧ್ಯಮವಾಗಿ, ಆತ್ಮೋದ್ಧರಣೆಯ ಮಾರ್ಗಸೂಚಿಗಳಾಗಿ ಮೂಡಿ ಬಂದಿವೆ.

## ಉದ್ಧರಣೆ ಚಿತ್ರಗಳು

**೧. ಅನಾದಿ ಭಕ್ತೋದ್ಧರಣೆ:**

**ವಾಚ್ಯ ವಸ್ತು ವಿಷಯ:**

ಈ ಉದ್ಧರಣೆ ಮೂರು ಪುಟದ ವ್ಯಾಪ್ತಿ ಹೊಂದಿದೆ. ಆದಿ "ಶ್ರೀ ವೀರಶೈವ ಸಿದ್ಧಾಂತ ಸ್ಥಾಪನಾಚಾರ್ಯರಪ್ಪ ಆಧ್ಯರ ಅನುಮತದಿಂದ ಉದ್ಧರಿಸಿದ ಕುಟಿಲ ಕುಹಕ ಯಂತ್ರಗಳಲ್ಲದ। ಶಿವಜ್ಞಾನ ಸಾಧನವಪ್ಪ ಶಿವಮಂತ್ರಂ ನ್ಯಾಸ ಶಿವತತ್ವ ಸ್ಥಾಪಿತ। ಶಿವಲಿಂಗಾಂಗ ಸಂಬಂಧ ಪ್ರತಿಪಾದಕಾಗಮ ಗ್ರಂಥಾರ್ಥ ವಾಚ್ಯಂಗಳಿಂ। ಕೆಲವು ವಚನಗಳಿಂ ಸಂಗ್ರಹಿಸಿದ ಉದ್ಧರಣೆಯ ಪಟಲವಿದು ಶಿವಲಿಂಗಾಂಕಿತ ಶಾಸನವೆಂದು ಶಿವಶರಣರವಧರಿಸುವುದು। ಪ್ರಥಮದಲ್ಲಿ ಅನಾದಿ ಭಕ್ತನ ಉದ್ಧರಣೆಯ ಸಂಬಂಧ॥ ಎಂದು ಪ್ರಾರಂಭವಾಗಿ.

ಅನಾದಿ ಭಕ್ತನ ನಿಲುವು: ಸತ್ ಚಿತ್ ಆನಂದ ನಿತ್ಯಪರಿಪೂರ್ಣ ಅಖಂಡ ಬ್ರಹ್ಮ ಸ್ವರೂಪಮಪ್ಪ (೧) ಗುರು (೨) ಲಿಂಗ (೩) ಜಂಗಮ (೪) ಪ್ರಸಾದ (೫) ಪಾದೋದಕ (೬) ಭಕ್ತಿಗಳೆಂಬ ಷಡ್ವ್ರತಾಚಾರವು ಆಚಾರ, ನಿಷ್ಠೆ, ಜ್ಞಾನ, ಅನುಭವ, ಸಮರಸ, ಸಾವಧಾನವಳವಟ್ಟು.

**ಅಂಗಸಂಬಂಧವನ್ನುದ್ಧರಿಸುವ ಕ್ರಮ:**

ಪತ ಮಧ್ಯದಲ್ಲಿ ಒಂದಂಗುಲ ಪರಮಾಣದ ಚೌಕವನ್ನು ಬರೆದು ನಡುಮಧ್ಯದಲ್ಲಿ ಮೇಲ್ಗಡೆ ಹಕಾರ ಪ್ರಣವವನ್ನು, ವಾಮಭಾಗದಲ್ಲಿ ಆಕಾರದ, ಪೂರ್ವಭಾಗದಲ್ಲಿ ಉಕಾರವ, ಪಶ್ಚಿಮಭಾಗದಲ್ಲಿ ಮಕಾರವ, ದಕ್ಷಿಣ ಭಾಗದಲ್ಲಿ ಓಂಕಾರದನಾದೊಡೆ ಮಧ್ಯದ ಚೌಕದ ಅಷ್ಟ ದಿಕ್ಕುಗಳಲ್ಲಿ ಮಧ್ಯಚೌಕ ಪ್ರಮಾಣದ ಮನೆಗಳು ನಾಲ್ಕು ನಾಲ್ಕಾಗಿ ಮೂವತ್ತೆರಡು ಮನೆಗಳು ಬರೆದು ಅವುಗಳ ಮೇಲೆರಡು ಮನೆಗಳನ್ನು ಬರೆದು "ನ"ಕಾರಾದಿ ಷಡಕ್ಷರಂಗಗಳಂ ಬರೆದವರಲ್ಲಿ (೧) ಅಖಂಡತ್ವವೇ ಭಕ್ತ (೨) ಪರಿಪೂರ್ಣತ್ವವೇ ಗುರು (೩) ನಿತ್ಯತ್ವವೇ

ಲಿಂಗ (೪) ಚಿತ್ಪ್ರಕಾಶವೇ ಜಂಗಮ (೫) ಪರಮಾನಂದವೇ– ಪ್ರಸಾದ (೬) ಚಿದ್ರಸವೇ – ಪಾದೋದಕ ಎಂಬ ಆರು ವಿಧಗಳು ಭಕ್ತನ ಲಕ್ಷಣಗಳು. ಅಂತೆಯೇ "ನ" ಕಾರಾದಿ, “ಮ”ಕಾರಾದಿ “ಶಿ” ಕಾರಾದಿ, “ವ”ಕಾರಾದಿ, “ಯ”ಕಾರಾದಿ, “ಓಂ”ಕಾರಿಯಾದ ಷಡಕ್ಷರಿ ಮಂತ್ರಗಳನ್ನು ಬರೆದು ಮೂಲೆಗಳಲ್ಲಿ ಈಶಾನ್ಯ ದಳದಲ್ಲಿ ನಕಾರವ ಅಲ್ಲಿ ಗುರು, ಅಗ್ನಿ ದಳದಲ್ಲಿ ಮಕಾರವ ಅಲ್ಲಿ ಲಿಂಗವು, ದಕ್ಷಿಣದ ಮನೆಗಳೆರಡರಲ್ಲಿ ಶಿಕಾರ, ವಕಾರಗಳಲ್ಲಿ ಜಂಗಮ, ಪ್ರಸಾದವು, ನೈಋತ್ಯದಲ್ಲಿ ಯಕಾರವ ಅಲ್ಲಿ ಪಾದೋದಕ, ವಾಯವ್ಯ ದಳದಲ್ಲಿ ಆಕಾರದಲ್ಲಿ ವಿಭೂತಿ, ಉತ್ತರದ ಮನೆಗಳಲ್ಲಿ ಉಕಾರವ ಮಕಾರವ ಬರೆದು ರುದ್ರಾಕ್ಷಿ ಪಂಚಾಕ್ಷರಿಯ ಸಂಬಂಧಿಸಲು ಇವು ಅಷ್ಟಾವರಣವೆನಿಸಿಹವು. ಈ ರೀತಿಯಾಗಿ ರೂಪುಗೊಂಡಿದೆ.[೩೭] ಹೆಚ್ಚಿನ ವಿವರವನ್ನು ಅನುಬಂಧದಲ್ಲಿ ನೋಡಬಹುದಾಗಿದೆ.

*** ಉದ್ಧರಣ ಸಾಹಿತ್ಯದಲ್ಲಿಯ ಚಿತ್ರ:**

೧.೧ : ೧' x ೧' ಅಡಿ ಅಳತೆ ಇರುವ ಈ ಕಾಗದದಲ್ಲಿ ಅನಾಧಿಭಕ್ತೋದ್ಧರಣಿ ಚಿತ್ರವನ್ನು ಜಲವರ್ಣದಲ್ಲಿ ರಚಿಸಲಾಗಿದೆ. ಈ ಕಾಗದಪಾತಳಿಗೆ ಕಂದುಗೆಂಪುವರ್ಣವನ್ನು ತಿಳುವಾಗಿ ಲೇಪಿಸಲಾಗಿದೆ. ಪಥಮಧ್ಯದಲ್ಲಿ ೨"x೨" ಇಂಚುಳ್ಳ ಚೌರಸವನ್ನು ರಚಿಸಿಕೊಂಡು, ಈ ಚೌರಸದ ಅಷ್ಟದಿಕ್ಕುಗಳಲ್ಲಿ ಸಮಾನವಾದ ೨"x೨" ಇಂಚು ಅಳತೆಯುಳ್ಳ ಚೌರಸಗಳನ್ನು ರಚಿಸಲಾಗಿದೆ. ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ ದಿಕ್ಕುಗಳ ಮೇಲ್ಗಡೆ ಮಧ್ಯದಲ್ಲಿ ೧"x೧" ಇಂಚುಗಳುಳ್ಳ ಎರಡೆರಡು ಚೌರಸಗಳನ್ನು ರಚಿಸಲಾಗಿದ್ದು ಈ ಒಟ್ಟು ಚಿತ್ರದ ಅಂಚಿನ ಪ್ರತಿಯೊಂದು ಮೂಲೆಗಳಿಗೂ ಎಲೆಗಳನ್ನು ತೋರಿಸಲಾಗಿದೆ. ಈ ಚಿತ್ರದ ಮೇಲ್ಗಡೆಯ ಬಲಭಾಗದಲ್ಲಿ ಸೂರ್ಯನನ್ನು, ಎಡಭಾಗದಲ್ಲಿ ಚಂದ್ರನನ್ನು ರಚಿಸಲಾಗಿದೆ. ಮಧ್ಯದ ಚೌರಸಿನಲ್ಲಿ (ಪೂರ್ವ, ಪಶ್ಚಿಮ ಭಾಗವಾಗಿ) ೩ ಆಯತಗಳನ್ನು ಮಾಡಿಕೊಂಡು ಮಧ್ಯದ ಆಯತದಲ್ಲಿ ಮತ್ತೆ ಮೂರು ಅಡ್ಡವಾಗಿ ವಿಭಾಗಿಸಲಾಗಿದೆ. ಈ ಮಧ್ಯದ ಆಯತಕ್ಕೆ ಕಪ್ಪು ನೀಲಿ ವರ್ಣವನ್ನು ಬಳಿಯಲಾಗಿದ್ದು ಅದರ ಎಡಬಲಗಳ ಆಯತಕ್ಕೆ ಕೆಂಪು ವರ್ಣವನ್ನು ಲೇಪಿಸಲಾಗಿದೆ. ಇದರ ಸುತ್ತಲೂ ಇರುವ ಚೌರಸಗಳಿಗೆ ಹಳದಿವರ್ಣವನ್ನು ಲೇಪಿಸಲಾಗಿದೆ. ಅಂಚಿನಲ್ಲಿರುವ ಎಲೆಗಳನ್ನು ಕೆಂಪು ಮತ್ತು ನೀಲಿವರ್ಣದಿಂದ ತುಂಬಲಾಗಿದೆ. ಸೂರ್ಯ ಚಂದ್ರರನ್ನು ಮತ್ತು ಉದ್ಧರಣಿಯ ಹೆಸರನ್ನು ರೇಖಾಚಿತ್ರಗಳಿಂದ ಪೂರ್ತಿಗೊಳಿಸಲಾಗಿದೆ. ಈ ಒಟ್ಟು ಚಿತ್ರದ ಅಂಚಿಗೆ ಹೂವು ಬಳ್ಳಿಗಳಿಂದ ನಕ್ಷೆಯನ್ನು ಮಾಡಿ ಅಲಂಕರಿಸಲಾಗಿದೆ. ಈ ಚೌರಸ ಆಯತಗಳಲ್ಲಿ ಷಡಕ್ಷರಗಳು, ಅಷ್ಟಾವರಣಗಳ ಕುರಿತು ಬರೆಯಲಾಗಿದೆ.

**ಕ.ವಿ.ವಿ. ಹಂಪೆಯ ಕಾಗದದ ಪ್ರತಿ : ಚಿತ್ರ – ೧.೨:**

ಈ ಅನಾದಿಭಕ್ತೋದ್ಧರಣಿ ಚಿತ್ರವನ್ನು ಕಾಗದದಲ್ಲಿ ರೇಖಾಚಿತ್ರದಿಂದಲೇ ಪೂರ್ಣಗೊಳಿಸಲಾಗಿದೆ. ದಪ್ಪ ಮತ್ತು ತೆಳು ರೇಖೆಗಳಿಂದ ಅಲಂಕಾರಯುಕ್ತವಾಗಿ ಚೌರಸ, ಆಯತ ಮತ್ತು ಎಲೆಗಳು ಅಂದವಾಗಿ

೩೭. ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು: ಶಿವಾನುಭವಶಾಸ್ತ್ರ : ಪುಟ ೨ ಮತ್ತು ೩.

ಪ್ರಮಾಣಬದ್ಧವಾಗಿ ರಚಿಸಲ್ಪಟ್ಟಿದ್ದು, ಇವುಗಳಲ್ಲಿ ಷಡಕ್ಷರಗಳು ಅಷ್ಟಾವರಣಗಳನ್ನು ಗುರುತಿಸಲಾಗಿದೆ. ಈ ಚಿತ್ರದ ಅಂಚಿನಲ್ಲಿ ಹೂವಿನ ದಳದ ಅಲಂಕಾರವಿದ್ದು ತೆಳುವಾದ ಜಲವರ್ಣ ಕೆಂಪು ಮತ್ತು ಹಸಿರು ವರ್ಣವನ್ನು ಬಳಸಲಾಗಿದೆ. ತಾಳೆ ಓಲೆಗರಿ ಚಿತ್ರ:

*** ಕ. ವಿ. ವಿ. ಹಂಪೆಯ ತಾ೨ ಓಲೆಗರಿ ಚಿತ್ರ ೧.೩:**

ತಾಳೆ ಓಲೆಗರಿಯ ಮೇಲಿನ ಚಿತ್ರವೂ ಸುಂದರವಾಗಿ ಮೂಡಿ ಬಂದಿದ್ದು ಇಲ್ಲಿ ಎರಡು ಉದ್ಧರಣಿ ಚಿತ್ರಗಳನ್ನು ರಚಿಸಲಾಗಿದೆ. ಅದರಲ್ಲಿ ಅನಾದಿಭಕ್ತೋದ್ಧರಣಿ ಚಿತ್ರವನ್ನು ರೇಖಾ ಪ್ರಧಾನವಾಗಿ ಚಿತ್ರಿಸಲಾಗಿದ್ದು ಪ್ರಮಾಣಬದ್ಧವಾದ ಚೌರಸ, ಆಯತಗಳನ್ನು, ಮೂಲೆಗಳಿಗೆ ಎಲೆಗಳನ್ನು ರಚಿಸಲಾಗಿದ್ದು ಪ್ರತಿಯೊಂದು ಆಕಾರಗಳಲ್ಲೂ ಷಡಕ್ಷರಗಳು ಮತ್ತು ಅಷ್ಟಾವರಣಗಳನ್ನು ಗುರುತಿಸಲಾಗಿದೆ. ಈ ಚಿತ್ರದ ಬಲಬದಿಯಲ್ಲಿ ಆಯತಾಕಾರವನ್ನು ಮಾಡಿಕೊಂಡು ಭಕ್ತನೋರ್ವನು ಎಡಗಾಲನ್ನು ಮಡಚಿಕೊಂಡು ಬಲಗಾಲ ಮೇಲೆ ನಿಂತುಕೊಂಡು ಎಡಗೈ ಮೇಲೆ ಮಾಡಿ ಬಲಗೈ ಮಡಚಿಟ್ಟುಕೊಂಡಿದ್ದು ಎದುರು ಗಡೆಯ ಅನಾದಿ ಭಕ್ತೋದ್ಧರಣಿಯ ಚಿತ್ರ ನೋಡುತ್ತಿರುವಂತಿದೆ. ಇಂತಹದೆ ಚಿತ್ರ ಇದರ ಕೆಳಗಡೆ ಇದೆ. ಈ ಉದ್ಧರಣಿ ಚಿತ್ರವು ಎರಡು ಓಲೆಗರಿಗಳಲ್ಲಿ ರಚನೆಗೊಂಡಿದ್ದರೂ ಎರಡನ್ನೂ ಕೂಡಿಸಿದಾಗ ಪ್ರಮಾಣಬದ್ಧವಾದ ಉದ್ಧರಣಿ ಚಿತ್ರ ಕಾಣುವುದು ಈ ಒಟ್ಟು ಚಿತ್ರದ ಅಂಚಿನಲ್ಲಿ ಹೂವುಗಳಿಂದ ನಕ್ಷೆಯನ್ನು ಮಾಡಲಾಗಿದೆ. ಕಪ್ಪು ವರ್ಣದಿಂದ ಪೂರ್ತಿಗೊಳಿಸಲಾಗಿದ್ದು ಇದೊಂದು ರೇಖಾಪ್ರಧಾನ ಚಿತ್ರವಾಗಿದೆ.

*** ಗು.ವಿ.ವಿ. ಗುಲಬರ್ಗಾದಲ್ಲಿ ದೊರೆತ ಚಿತ್ರ: ೧.೪:**

ಈ ಅನಾದಿ ಭಕ್ತೋದ್ಧರಣಿ ಚಿತ್ರವನ್ನು ೧' x ೧' ಅಡಿ ಇರುವ ಅಳತೆಯ ಕಾಗದದಲ್ಲಿ ಜಲವರ್ಣದಿಂದ ಚಿತ್ರಿಸಲಾಗಿದೆ. ಕಾಗದದ ಚಿತ್ರಪಾತಳಿಗೆ ಕಂದುಗೆಂಪುವರ್ಣವನ್ನು ಲೇಪಿಸಲಾಗಿದ್ದು ಇಲ್ಲಿಯೂ ಚಿತ್ರವನ್ನು ಮೇಲಿನಂತೆ ರಚಿಸಲಾಗಿದ್ದು ಕೆಂಪುವರ್ಣದ ರೇಖೆಗಳಿಂದ ಪೂರ್ತಿಗೊಳಿಸಲಾಗಿದೆ. ಈ ಚಿತ್ರದ ಮೂಲೆಗಳಲ್ಲಿರುವ ಎಲೆಗಳನ್ನು ಕೆಂಪು ವರ್ಣದಿಂದ ಪೂರ್ತಿಗೊಳಿಸಲಾಗಿದ್ದು, ಪ್ರಮುಖ ಚೌರಸವೊಂದರ ಮೂಲೆಗಳಲ್ಲಿರುವ ನಾಲ್ಕೂ ಎಲೆಗಳನ್ನು ಹಸಿರುಮಿಶ್ರಿತ ಕಪ್ಪು ವರ್ಣದಲ್ಲಿ ಚಿತ್ರಿಸಲಾಗಿದೆ. ಈ ಉದ್ಧರಣಿ ಚಿತ್ರದ ಹಿನ್ನೆಲೆಯೂ ಕಪ್ಪು ಹಸಿರು ವರ್ಣದಲ್ಲಿ ಇರುವುದರಿಂದ ಹಿನ್ನೆಲೆಯ ತಿಳಿ ಕಂದುಗೆಂಪುವರ್ಣದ ರೇಖೆಗಳಿಂದ ಬೇರ್ಪಡಿಸಲಾಗಿದೆ. ಈ ಕಲಾಕೃತಿಯ ಅಂಚು ತಿಳಿ ಕಂದುಗೆಂಪು ವರ್ಣದಲ್ಲಿದ್ದು ಮೇಲ್ಗಡೆ ಭಾಗ ಹಳದಿವರ್ಣದ ಹಿನ್ನೆಲೆ ಹೊಂದಿದ್ದು ಚಿತ್ರದ ಮೇಲ್ಭಾಗದ ಅಂಚಿನಲ್ಲಿ ಈ ಉದ್ಧರಣಿ ಚಿತ್ರದ ಒಟ್ಟು ಆಕಾರವನ್ನು ಪ್ರತಿನಿಧಿಸುವಂತಹ ಚಿತ್ರಗಳನ್ನು ಐದು ಮಾಡಿದ್ದು ಎಡಬಲ ಮೂಲೆಗಳು ಖಾಲಿಯಾಗಿವೆ. ಉಳಿದ ಮೂರು ಅಂಚುಗಳನ್ನು ಹೂವು ಬಳ್ಳಿ ನಕ್ಷೆಗಳಿಂದ ಅಲಂಕರಿಸಲಾಗಿದೆ.

*** ಧರ್ಮಸ್ಥಳದಲ್ಲಿ ದೊರೆತ ಚಿತ್ರ : ೧.೫:**

ಈ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನಾ ಪ್ರತಿಷ್ಠಾನ, ಶ್ರೀ ಕ್ಷೇತ್ರದಲ್ಲಿ ದೊರೆತಿರುವ ೧'೧' ಅಡಿ ಇರುವ ಈ ಅನಾದಿ ಭಕ್ತೋದ್ಧರಣಿ ಚಿತ್ರವು ವಿಶೇಷವಾಗಿದ್ದು ಅಲಂಕಾರಿಕ ರಥವೊಂದರಲ್ಲಿ ಚಿತ್ರಿಸಿದ್ದು ಎಡಬಲಗಳಲ್ಲಿ ಅಲಂಕಾರಿಕ ಕಂಬಗಳು ಮಧ್ಯದ ಚೌರಸಾಕಾರದ ಹಿನ್ನೆಲೆಯಲ್ಲಿ ಕೆಂಪುವರ್ಣವನ್ನು ಲೇಪಿಸಲಾಗಿದೆ. ಅದರ ಮೇಲ್ಗಡೆ ಕಂದುಗೆಂಪು ವರ್ಣದಿಂದ ಅನಾದಿ ಭಕ್ತೋದ್ಧರಣಿಯ ಚಿತ್ರವನ್ನು ರೇಖೆಗಳಿಂದ ಬರೆಯಲಾಗಿದೆ. ಈ ಚಿತ್ರಿತ ಒಟ್ಟು ಭಾಗವನ್ನು ಹಳದಿವರ್ಣದಿಂದ ತುಂಬಲಾಗಿದ್ದು ಈ ಚಿತ್ರದ ಮೂಲೆಗಳಲ್ಲಿರುವ ಎಲೆಗಳನ್ನು ಅರ್ಧಭಾಗ ಹಳದಿ, ಅರ್ಧಭಾಗ ಕಂದುಗೆಂಪು ವರ್ಣದಲ್ಲಿ ಚಿತ್ರಿಸಲಾಗಿದೆ. ಒಟ್ಟಾರೆ ಈ ಚಿತ್ರದ ಅಂಚಿನಲ್ಲಿ ಹೂವು ಎಲೆಗಳ ನಕ್ಷೆಯಿಂದ ಪೂರ್ತಿಗೊಳಿಸಲಾಗಿದೆ. ಇಲ್ಲಿ ರಚನೆಗೊಂಡ ಚೌರಸ ಆಯತ ಎಲೆ ಆಕಾರಗಳಲ್ಲಿ ಷಡಕ್ಷರಗಳು, ಅಷ್ಟಾವರಣಗಳ ಕುರಿತು ಬರೆಯಲಾಗಿದೆ.

*** ಬೆಂ. ವಿ.ವಿ. ಬೆಂಗಳೂರಿನಲ್ಲಿ ದೊರೆತ ಚಿತ್ರ "೧.೬:**

ಬೆಂಗಳೂರು ವಿಶ್ವವಿದ್ಯಾಲಯದ ಹಸ್ತಪ್ರತಿ ವಿಭಾಗದಲ್ಲಿ ದೊರೆತ ಈ ಅನಾದಿ ಭಕ್ತೋದ್ಧರಣಿ ೧'x೧' ಅಡಿ ಅಳತೆ ಇರುವ ಚಿತ್ರವಾಗಿದೆ. ಈ ಚೌರಸದ ಹಿನ್ನೆಲೆಯನ್ನು ಹಸಿರು ವರ್ಣದಿಂದ ಲೇಪಿಸಿದ್ದು, ಮಧ್ಯದ ಚೌರಸವು ಕೆಂಪು ವರ್ಣದಲ್ಲಿ ಹಾಗೂ ಈ ಚೌರಸದ ನಾಲ್ಕೂ ದಿಕ್ಕುಗಳಲ್ಲಿರುವ ಚೌರಸಗಳಿಗೆ ಹಳದಿ ವರ್ಣವನ್ನು ಮತ್ತು ಮಧ್ಯದ ಚೌರಸದ ಮೂಲೆಗಳಲ್ಲಿರುವ ಚೌರಸಗಳನ್ನು ಕೆಂಪುವರ್ಣದಿಂದ ತುಂಬಲಾಗಿದೆ. ಹಳದಿ ಚೌರಸದ ಅಂಚಿನ ಮೇಲ್ಗಡೆಯ ಎರಡು ಚೌರಸಗಳು ಕೆಂಪುವರ್ಣವನ್ನು ಹೊಂದಿದ್ದು ಈ ಚಿತ್ರದ ಅಂಚಿನ ಮೂಲೆ ಮತ್ತು ಮಧ್ಯದಲ್ಲಿರುವ ಎಲೆಗಳನ್ನು ತಿಳಿಗುಲಾಬಿ ವರ್ಣದಲ್ಲಿ ರಚಿಸಲಾಗಿದೆ. ಈ ಚಿತ್ರದ ಹಿನ್ನೆಲೆಯಲ್ಲಿ ಹಸಿರಿನ ಅಂಚಿನಲ್ಲಿ ಹಳದಿ ವರ್ಣದ ಪಟ್ಟಿಯಿದ್ದು ಅದರಲ್ಲಿ ಅಲಂಕಾರಿಕ ನಕ್ಷೆಯನ್ನು ಬಳಸಲಾಗಿದೆ. ಇಲ್ಲಿ ರಚನೆಗೊಂಡ ಚೌರಸ ಆಯತ, ಎಲೆಗಳಲ್ಲಿ ಷಡಕ್ಷರಗಳು, ಅಷ್ಟಾವರಣಗಳನ್ನು ಬರೆಯಲಾಗಿದೆ.

*** ಕ.ವಿ.ವಿ. ಧಾರವಾಡದಲ್ಲಿ ದೊರೆತ ಚಿತ್ರ ೧.೭:**

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದ ಹಸ್ತಪ್ರತಿ ವಿಭಾಗದಲ್ಲಿ ದೊರೆತ ಈ ಅನಾದಿ ಭಕ್ತೋದ್ಧರಣಿ ೧'x೧' ಅಡಿ ಅಳತೆಯಲ್ಲಿ ಚಿತ್ರಿತವಾಗಿದೆ. ಈ ಚಿತ್ರದ ಹಿನ್ನೆಲೆಯಲ್ಲಿ ಹಸಿರು ವರ್ಣವನ್ನು ಲೇಪಿಸಲಾಗಿದೆ. ಚಿತ್ರದ ಮಧ್ಯದಲ್ಲಿರುವ ಚೌರಸವನ್ನು ಬಿಳಿವರ್ಣದಿಂದ, ನಂತರದ ಚೌರಸವನ್ನು ಹಳದಿವರ್ಣದಿಂದ, ಆನಂತರದ ಚೌರಸವನ್ನು ಹಸಿರುವರ್ಣದಿಂದ, ತದನಂತರದ ಚೌರಸವನ್ನು ಬಿಳಿಯ ವರ್ಣದಿಂದ, ಅದಕ್ಕೆ ಹೊಂದಿಕೊಂಡು ನಾಲ್ಕೂ ದಿಕ್ಕುಗಳಲ್ಲಿ ಎರಡೆರಡು ಚೌರಸಗಳಿದ್ದು ಅವುಗಳಿಗೆ ಕೆಂಪು ವರ್ಣವನ್ನು ತುಂಬಲಾಗಿದೆ. ಚಿತ್ರದ ಅಂಚಿನ ಮೂಲೆಗಳಲ್ಲಿರುವ ಎಲೆಗಳನ್ನು ಹಳದಿ ವರ್ಣದಿಂದ ಚಿತ್ರಿಸಲಾಗಿದೆ. ಕೆಂಪು ಮತ್ತು ಬಿಳಿ ವರ್ಣಗಳಿಂದ ಚಿತ್ರದ ರೇಖೆಗಳನ್ನು ಎಳೆಯಲಾಗಿದೆ. ಇದರಲ್ಲಿಯೂ ಕೂಡಾ ಚೌರಸ, ಆಯತ ಮತ್ತು ಎಲೆಗಳಲ್ಲಿ ಷಡಕ್ಷರಗಳು,

ಅಷ್ಟಾವರಣಗಳನ್ನು ಬರೆಯಲಾಗಿದೆ. ಈ ಉದ್ಧರಣಿ ಚಿತ್ರಕ್ಕೆ ಮಾಡಿನಾಕಾರದಲ್ಲಿ ಅಲಂಕಾರಿಕ ನಕ್ಷೆಗಳಿಂದ ಚಿತ್ರಿಸಲಾಗಿದೆ. ಹೀಗೆ ವಿಭಿನ್ನವಾಗಿ ವಿಶಿಷ್ಟವಾಗಿ ಉದ್ಧರಣಿ ಚಿತ್ರಗಳು ಮೂಡಿ ಬಂದಿವೆ.

## ೨. ಜ್ಞಾನ ಅಷ್ಟಾವರಣೋದ್ಧರಣಿ:

**ವಾಚ್ಯ ವಸ್ತು ವಿಷಯ:**

ಅಷ್ಟಾವರಣ ಧರಿಸಿದ ಭಕ್ತನು ಭಕ್ತಿ ಭಾವಭರಿತನಾದ ಕಾರಣ ಭಕ್ತನೆನಿಸಿಕೊಂಡ ಬಳಿಕ ಭಕ್ತಿಯೆಂಬ ದ್ವ್ಯಕ್ಷರಕ್ಕೆ ನಿರ್ವಚನ: ಶ್ರದ್ಧೆ ವಿಶ್ವಾಸದಿಂ ಭಕಾರವಾಯಿತು. ನಿರ್ವಂಚಕತ್ವದಿಂ ಕಕಾರವಾಯಿತು. ದೃಢನಿಷ್ಠೆಯಿಂದ ತಯೆಂಬಕ್ಷರವಾಯಿತು ಇಂತಪ್ಪ ಸ್ವರೂಪದರಿವನುಳ್ಳಾತನಾದ ಕಾರಣಜ್ಞಾನಿಯೆನಿಸಿಕೊಂಡನು. ಆ ಜ್ಞಾನ ಶಬ್ಧಕ್ಕೆ ನಿರ್ವಚನ: ಶಿವತತ್ವ ವರ್ಧನವ ಮಾಡುವುದರಿಂ ಜ್ಞಾಕಾರವಾಯಿತು. ಸಂಸಾರ ಪ್ರಪಂಚ ಲಘ ಲೋಪವ ಮಾಡುವುದರಿಂ ನಕಾರವಾಯಿತು. ಇಂತಪ್ಪ ಸ್ವರೂಪವನರಿದಾಚರಿಸುವಾತನೀಗ ಅನಾದಿ ಭಕ್ತನೆನಿಸಿಕೊಂಡನು. ಇಂತಪ್ಪ ಭಕ್ತನ ಮನವೇ ಲಿಂಗ ತನ್ಮನದ ಜ್ಞಾನವೇ ಜಂಗಮ. ಆ ಜ್ಞಾನದ ಪರಿಪೂರ್ಣವೇ ಗುರು, ತದ್ಭಕ್ತನೇ ಶೇಷ ಅಜ್ಞಾನದ ಸಾರವೇ ಪಾದೋದಕ ಆ ಜ್ಞಾನದ ಪ್ರಕಾಶವೇ ವಿಭೂತಿ. ಆ ಮಾಯಾಕರಣಂಗಳ ಮೇಲೆ ಕರೆದ ಜ್ಞಾನ ಸಾರಾಮೃತ ದೃಷ್ಟಿಯೇ ರುದ್ರಾಕ್ಷಿ, ಆ ಭಕ್ತನ ನಾಮವೇ ಮಂತ್ರ: ಇಂತಹ ಭಕ್ತನೇ ಪರಬ್ರಹ್ಮವೆಂದು ಶರಣೆಂದವರೇ ಧನ್ಯರು. ಅನಾದಿ ಭಕ್ತನ ಜ್ಞಾನಾಷ್ಟಾವರಣೋದ್ಧರಣಿಯ ಸಂಬಂಧ ಸಮಾಪ್ತಂ ಮಂಗಳಮಹಾಃ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಎಂದು ಮುಕ್ತಾಯ ಹೊಂದಿರುವುದು.[೩೮] ಹೆಚ್ಚಿನ ವಿವರವನ್ನು ಅನುಬಂಧದಲ್ಲಿ ನೋಡಬಹುದಾಗಿದೆ.

*** ಉದ್ಧರಣಿ ಸಾಹಿತ್ಯದಲ್ಲಿಯ ಚಿತ್ರ ೨.೧:**

ಈ "ಜ್ಞಾನ ಅಷ್ಟಾವರಣೋದ್ಧರಣೆ" ಚಿತ್ರವನ್ನು ೧'x೧' ಅಡಿ ಅಳತೆಯಲ್ಲಿ ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ಈ ಚಿತ್ರದ ಪಾತಳಿಗೆ ಕೆಂಪುವರ್ಣವನ್ನು ಲೇಪಿಸಲಾಗಿದ್ದು ಪಥಮಧ್ಯದಲ್ಲಿ ಬಿಂದುವಿನಿಂದ ತ್ರಿಜ್ಯದ ಸಹಾಯದಿಂದ ವೃತ್ತವೊಂದನ್ನು ರಚಿಸಿದ್ದು, ಅದರಿಂದ ಅಷ್ಟದಳಗಳನ್ನು ರಚಿಸಿ, ಈ ಅಷ್ಟದಳಗಳ ತುದಿಯಿಂದ ತುದಿಗೆ ಅರ್ಧವರ್ತುಳಗಳನ್ನು ರಚಿಸಿ, ಈ ಅರ್ಧ ವರ್ತುಳಗಳು ಎಂಟಾಗಿ ಅವುಗಳನ್ನು ಕರ್ಣಗಳಾಗಿ ವಿಭಾಗಿಸಿ, ಅವುಗಳಲ್ಲಿ ಅಷ್ಟಾವರಣಗಳನ್ನು ಗುರುತಿಸಲಾಗಿದೆ. ಈ ಅರ್ಧ ವರ್ತುಳಗಳ ಪರಿಧಿಗೆ ತಾಗುವಂತೆ ಒಂದು ವೃತ್ತವನ್ನು ರಚಿಸಲಾಗಿದ್ದು ಇದನ್ನು ಕಪ್ಪು ನೀಲಿ ವರ್ಣದಿಂದ ತುಂಬಲಾಗಿದೆ. ಮಧ್ಯದಲ್ಲಿಯ ವೃತ್ತವನ್ನೂ ಇದೇ ಕಪ್ಪು ನೀಲಿವರ್ಣದಿಂದ ತುಂಬಿದ್ದು ಈ ಮಧ್ಯದ ವೃತ್ತದಿಂದ ಮೇಲಿನ ಅರ್ಧವರ್ತುಳದವರೆಗೆ ಹಳದಿ ವರ್ಣವನ್ನು ತುಂಬಿ ಅಷ್ಟದಳಗಳಾಗಿ ರೂಪಿಸಲಾಗಿದೆ.

---

೩೮. ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು: ಶಿವಾನುಭವಶಾಸ್ತ್ರ : ಪುಟ ೭.

ಅವುಗಳ ಮಧ್ಯದಲ್ಲಿ ಒಂದರಂತೆ ಕೆಂಪುವರ್ಣದ ಅಷ್ಟದಳಗಳನ್ನು ವೃತ್ತದಿಂದ ಮೇಲ್ಗಡೆ ರಚಿಸಲಾಗಿದೆ. ಈ ಕಲಾಕೃತಿಯ ಅಂಚಿಗೆ ಹೂವು ಬಳ್ಳಿಗಳ ನೈಸರ್ಗಿಕ ನಕ್ಷೆಗಳನ್ನು ಬಳಸಲಾಗಿದೆ.

*** ಕ.ವಿ.ವಿ. ಹಂಪಿಯ ಕಾಗದದ ಪ್ರತಿ ಚಿತ್ರ ೨.೨:**

ಈ "ಜ್ಞಾನ ಅಷ್ಟಾವರಣೋದ್ಧರಣಿ" ಚಿತ್ರವನ್ನು ೧'x೧' ಅಡಿ ಅಳತೆಯಲ್ಲಿ ಅಷ್ಟ ಭುಜವನ್ನು ಮಾಡಿಕೊಂಡು ಕಾಗದದ ಮೇಲೆ ಜಲವರ್ಣದಿಂದ ರಚಿಸಲಾಗಿದ್ದು ಈ ಅಷ್ಟ ಭುಜದ ಒಳಗಡೆ ತೆಳುವಾದ (ಆಕಾಶ) ನೀಲಿವರ್ಣವನ್ನು ಲೇಪಿಸಿ, ಬಿಳಿ ವರ್ಣದಿಂದ ಹೂವು ಎಲೆಬಳ್ಳಿಗಳ ನಕ್ಷೆಯನ್ನು ಮಾಡಿದ್ದು ಇದರ ಮಧ್ಯದಲ್ಲಿ ಚಿತ್ರವನ್ನು ರಚಿಸಲಾಗಿದೆ. ಈ ಚಿತ್ರದ ಮಧ್ಯದಲ್ಲಿ ಐದು ದಳಗಳ ಹೂವನ್ನು ಬಿಳಿ ವರ್ಣದಲ್ಲಿ ರಚಿಸಿದ್ದು ಅದರ ಸುತ್ತಲೂ ಕಪ್ಪು ವರ್ಣದ ವೃತ್ತವನ್ನು ಅದಕ್ಕೆ ಮತ್ತೊಂದು ವೃತ್ತವನ್ನು ನೀಲಿವರ್ಣದಿಂದ ರಚಿಸಲಾಗಿದೆ. ಈ ವೃತ್ತದ ಕರ್ಣಗಳ ಸಹಾಯದಿಂದ ಚೌರಸವನ್ನು ರಚಿಸಿ ಈ ಚೌರಸದ ಭುಜಗಳನ್ನು ದ್ವಿಭಾಗಿಸಿ ಮತ್ತೊಂದು ಚೌರಸವನ್ನು ರಚಿಸಿದಾಗ ಮೊದಲಿನ ಚೌರಸದಲ್ಲಿ ಅಷ್ಟಭುಜಗಳು ದೊರೆಯುತ್ತವೆ. ಈ ಅಷ್ಟಭುಜಗಳ ಒಳಗಡೆ ಕೆಂಪು ವರ್ಣವನ್ನು ತುಂಬಲಾಗಿದೆ. ಈ ಅಷ್ಟಭುಜದ ಮೂಲೆಗೊಂದರಂತೆ ಹೂವಿನ ದಳಗಳನ್ನು ರಚಿಸಿ ಎಂಟು ದಳಗಳಾಗಿ ರೂಪಿಸಿ ಅವುಗಳಿಗೆ ಬಿಳಿಯ ವರ್ಣವನ್ನು ತುಂಬಲಾಗಿದೆ. ಈ ದಳಗಳಲ್ಲಿ ಅಷ್ಟಾವರಣಗಳನ್ನು ಬರೆಯಲಾಗಿದೆ. ಈ ಅಷ್ಟ ದಳಗಳ ತುದಿಯಿಂದ ತುದಿಗೆ ಅರ್ಧ ವೃತ್ತಗಳನ್ನು ರಚಿಸಿ, ಅದರಲ್ಲಿ ನೀಲಿ ವರ್ಣವನ್ನು ತುಂಬಲಾಗಿದೆ. ಕಪ್ಪು ವರ್ಣದಿಂದ ರೇಖೆಗಳನ್ನು ಬರೆಯಲಾಗಿದೆ. ಈ ಚಿತ್ರವನ್ನು ಜ್ಯಾಮಿತಿಯ ಜ್ಞಾನವುಳ್ಳವನು ಮಾತ್ರ ರಚಿಸಲು ಸಾಧ್ಯವಾಗುತ್ತದೆ.

*** ಕ. ವಿ. ವಿ. ಹಂಪಿಯ ತಾಳೆಓಲೆಗರಿ ಚಿತ್ರ: ೨.೩:**

ಈ ತಾಳೆ ಓಲೆಗರಿಯ ಮೇಲಿನ ಚಿತ್ರವು ಸುಂದರವಾಗಿ ಮೂಡಿ ಬಂದಿದೆ. ಈ ಓಲೆಗರಿಯ ಮೇಲೆ ಎರಡು ಚಿತ್ರಗಳನ್ನು ಮಾಡಿದ್ದು ೧ನೇ ಮತ್ತು ೨ನೆಯ ಉದ್ಧರಣಿ ಚಿತ್ರಗಳಿವೆ. ಎರಡನೆಯ "ಜ್ಞಾನ ಅಷ್ಟಾವರಣೋದ್ಧರಣಿ" ಚಿತ್ರವನ್ನು ರೇಖಾಪ್ರಧಾನವಾಗಿ ಚಿತ್ರಿಸಲಾಗಿದ್ದು ಮಧ್ಯದಲ್ಲಿ ಒಂದು ವೃತ್ತವನ್ನು ರಚಿಸಿ ಅದರಿಂದ ಅಷ್ಟದಳವುಳ್ಳ ಚಿತ್ರವನ್ನು ರಚಿಸಿದ್ದು ಅದರ ಹಿನ್ನೆಲೆಯಲ್ಲಿ ವೃತ್ತಕ್ಕೆ ಕಪ್ಪುವರ್ಣವನ್ನು ಬಳಸಿರುವುದರಿಂದ ಅಷ್ಟದಳದ ಹೂವು ಅಂದವಾಗಿ ಕಾಣುತ್ತದೆ. ಅಷ್ಟಕೋನಗಳನ್ನು ಬರೆದು ಅವುಗಳ ಮಧ್ಯದಲ್ಲಿ ಅಷ್ಟಾವರಣಗಳನ್ನು ಬರೆಯಲಾಗಿದೆ. ಈ ಚಿತ್ರದ ಮೇಲೆ ಮತ್ತು ಕೆಳಭಾಗದಲ್ಲಿ ವ್ಯಕ್ತಿ ಚಿತ್ರಗಳು, ಮಧ್ಯದಲ್ಲಿ ವೃಕ್ಷವನ್ನು ತೋರಿಸಲಾಗಿದೆ. ಚಿತ್ರದ ಎಡಬದಿಗೆ ಹೂವಿನ ಅಲಂಕಾರಿಕ ನಕ್ಷೆಯ ಅಂಚಿಯೊಂದಿಗೆ ಮೇಲ್ಗಡೆ ಮತ್ತು ಕೆಳಗಡೆ ವ್ಯಕ್ತಿಗಳಿಬ್ಬರು ಬಲಗಾಲನ್ನು ಮೇಲ್ಗಡೆ ಮಡಿಚಿ ಎಡಗಾಲನ್ನು ನೆಲಕ್ಕೂರಿ ನಿಂತಿರುವ ಚಿತ್ರಗಳಿವೆ. ಬಲಗೈಯಲ್ಲಿರುವ ಹೂವನ್ನು ನೋಡುತ್ತ ನಿಂತಿರುವ ಚಿತ್ರಗಳು ಇಲ್ಲಿದ್ದು ಬೇರೆ ಎರಡು ಓಲೆಗರಿಗಳ ಮೇಲೆ ಚಿತ್ರಿಸಿದ್ದರೂ ಒಂದೇ ಚಿತ್ರವಾಗಿ ಕಾಣುವಂತೆ ಸುಂದರವಾಗಿ ಚಿತ್ರಿಸಿರುವರು.

*** ಗು.ವಿ.ವಿ. ಗುಲಬರ್ಗಾದಲ್ಲಿ ದೊರೆತ ಚಿತ್ರ: ೨.೪:**

ಈ ಜ್ಞಾನ ಅಷ್ಟಾವರಣೋದ್ಧರಣಿ ಚಿತ್ರವನ್ನು ೧'x೧' ಅಡಿ ಅಳತೆ ಇರುವ ಕಾಗದದಲ್ಲಿ ಜಲವರ್ಣದಿಂದ ರಚಿಸಲಾಗಿದೆ. ಈ ಕಾಗದದ ಚಿತ್ರ ಪಾತಳಿಗೆ ಕಂದು ಗೆಂಪು ತಿಳಿ ಬಣ್ಣದಿಂದ ತುಂಬಿದ್ದು ಸುತ್ತಲೂ ಒಂದು ಇಂಚು ಅಳತೆಯಲ್ಲಿ ಪಟ್ಟಿಯನ್ನು ಹಾಕಿಕೊಂಡು ಅದರಲ್ಲಿ ನೈಸರ್ಗಿಕ ನಕ್ಷೆಯನ್ನು ಬಳ್ಳಿಯಂತೆ ಬಳಸಲಾಗಿದೆ. ಇದರ ಮಧ್ಯದ ಸ್ವಲ್ಪ ಮೇಲ್ಭಾಗದಲ್ಲಿ ಅಷ್ಟದಳಗಳನ್ನು ಬಿಡಿಬಿಡಿಯಾಗಿ ಒಂದಕ್ಕೊಂದು ತಗುಲದಂತೆ ಕೆಂಪು ವರ್ಣದಿಂದ ರೇಖಾಚಿತ್ರವನ್ನು ಬರೆಯಲಾಗಿದ್ದು ಈ ಬಲ್ಬಿನ ಆಕಾರದಲ್ಲಿರುವ ದಳಗಳಲ್ಲಿ ಗುಣಾಕಾರದ ಚಿಹ್ನೆಯನ್ನು ಕಪ್ಪುವರ್ಣದಿಂದ ಮಾಡಿದ್ದು ಅಷ್ಟಾವರಣವನ್ನು ಬರೆಯಲಾಗಿದೆ. ಈ ಅಷ್ಟದಳಗಳು ಎದ್ದು ಕಾಣುವಂತೆ ಹಿನ್ನೆಲೆಯಲ್ಲಿ ಕಪ್ಪುವರ್ಣ ಬಳಸಲಾಗಿದೆ. ಈ ಅಷ್ಟದಳದ ಹೂವಿಗೆ ವೃತ್ತವೊಂದನ್ನು ರಚಿಸಲಾಗಿದೆ. ಈ ವೃತ್ತದಿಂದ ಮೇಲ್ಗಡೆ ಮತ್ತು ಕೆಳಗಡೆ ಅಲಂಕಾರಿಕ ರೇಖೆಯನ್ನು ನೇರವಾಗಿ ಎಳೆದಿದ್ದು, ಈ ಗೆರೆಗೆ ಎಡಬಲಗಳಲ್ಲಿ ಕಪ್ಪು ವರ್ಣದಿಂದ ಎಲೆಗಳನ್ನು ರಚಿಸಲಾಗಿದೆ. ಹಿನ್ನೆಲೆಯಲ್ಲಿ ದಟ್ಟ ಕೆಂಪು ವರ್ಣವನ್ನು ಬಳಸಲಾಗಿದೆ.

*** ಧರ್ಮಸ್ಥಳದಲ್ಲಿ ದೊರೆತ ಚಿತ್ರ : ೨.೫:**

ಈ "ಜ್ಞಾನ ಅಷ್ಟಾವರಣೋದ್ಧರಣಿ" ಚಿತ್ರವು ರೇಖಾ ಪ್ರಧಾನವಾದುದಾಗಿದೆ. ಚಿತ್ರದ ಮಧ್ಯದಲ್ಲಿ ನಕ್ಷತ್ರಾಕಾರದ ಅಷ್ಟದಳಗಳನ್ನು ಹೊಂದಿದ್ದು ಇದಕ್ಕೆ ಹೊಂದಿಕೊಂಡು ಚೌರಸವನ್ನು ರಚಿಸಿದ್ದು ಈ ಚೌರಸದ ಮೂಲೆಗಳಿಗೆ ಅಭಿಮುಖವಾಗಿ ಮತ್ತೊಂದು ಚೌರಸ ರಚಿಸಿದ್ದು, ಎರಡೂ ಚೌರಸದ ಎಂಟು ಮೂಲೆಗಳಿಗೆ ಎಂಟು ವೃತ್ತಗಳ ದಳಗಳನ್ನು ರಚಿಸಲಾಗಿದೆ. ಈ ವೃತ್ತಗಳ ದಳಗಳಲ್ಲಿ ಗುಣಾಕಾರ ಚಿಹ್ನೆಯನ್ನು ಬರೆಯಲಾಗಿದ್ದು ಅವುಗಳಲ್ಲಿ ಅಷ್ಟಾವರಣಗಳನ್ನು ಬರೆಯಲಾಗಿದೆ. ಈ ಎಂಟೂ ದಳಗಳಿಗೆ ಹೊಂದುವಂತೆ ವೃತ್ತದ ಪಟ್ಟಿಯನ್ನು ರಚಿಸಲಾಗಿದೆ. ಈ ವೃತ್ತದ ಎಡಬಲಗಳಲ್ಲಿ ಮೂರು ಹೂವುಗಳಿರುವ ಗಿಡಗಳನ್ನು ಮಾಡಲಾಗಿದೆ.

*** ಬೆಂ.ವಿ.ವಿ. ಬೆಂಗಳೂರಿನಲ್ಲಿ ದೊರೆತ ಚಿತ್ರ : ೨.೬ :**

ಈ "ಜ್ಞಾನ ಚಕ್ರೋದ್ಧರಣಿ" ಚಿತ್ರವನ್ನು ೧'x೧' ಅಡಿ ಅಳತೆಯಲ್ಲಿ ಕಾಗದದ ಮೇಲೆ ಜಲವರ್ಣದಲ್ಲಿ ರಚಿಸಲಾಗಿದೆ. ಈ ಚೌರಸಕ್ಕೆ ಕೆಂಪುವರ್ಣದ ಪಟ್ಟಿಯನ್ನು ಸುತ್ತಲೂ ಮಾಡಿದ್ದು ಒಳಗಡೆ ನೀಲಿವರ್ಣವನ್ನು ತುಂಬಲಾಗಿದೆ. ಈ ಚೌರಸದ ಮಧ್ಯದಲ್ಲಿ ಷಟ್‌ಭುಜವನ್ನು ಬಿಳಿವರ್ಣದಲ್ಲಿ ರಚಿಸಿದ್ದು, ಈ ಭುಜಗಳಿಗೆ ಹೊಂದಿಕೊಂಡು ತ್ರಿಕೋನಗಳನ್ನು ಹಸಿರುವರ್ಣದಲ್ಲಿ ರಚಿಸಲಾಗಿದೆ. ಈ ಆರೂ ತುದಿಗಳಿಗೆ ತಾಗುವಂತೆ ಕೆಂಪುವರ್ಣದ ಷಡ್ಭುಜವನ್ನು ರಚಿಸಲಾಗಿದೆ. ಈ ಷಡ್ಭುಜಗಳಿಗೆ ಷಟ್‌ಕೋನಗಳನ್ನು ಬಿಳಿ ವರ್ಣದಲ್ಲಿ ರಚಿಸಲಾಗಿದೆ. ಇವುಗಳ ತುದಿಗೆ ಕೆಂಪು ವರ್ಣವನ್ನು ತುಂಬಲಾಗಿದೆ. ಈ ಬಿಳಿವರ್ಣದ ಭಾಗದಲ್ಲಿ ಗುಣಾಕಾರ ಚಿಹ್ನೆಯುಳ್ಳ ಪಟ್ಟಿಯನ್ನು ಕಪ್ಪು ರೇಖೆಗಳಿಂದ ಎಳೆದು ಷಡಕ್ಷರಗಳನ್ನು ಬರೆಯಲಾಗಿದೆ.

*** ಕ.ವಿ.ವಿ. ಧಾರವಾಡದಲ್ಲಿ ದೊರೆತ ಚಿತ್ರ : ೨.೬:**

ಈ "ಜ್ಞಾನ ಅಷ್ಟಾವರಣೋದ್ಧರಣಿ" ಚಿತ್ರವನ್ನು ೧' x ೧' ಅಡಿ ಅಳತೆಯಲ್ಲಿ ಕಾಗದದ ಮೇಲೆ ಜಲವರ್ಣದಿಂದ ರಚಿಸಲಾಗಿದೆ. ಈ ಚೌರಸದ ಅಂಚನ್ನು ಅಲಂಕಾರಿಕ ನಕ್ಷೆಗಳಿಂದ ರಚಿಸಲಾಗಿದ್ದು ಚೌರಸದ ಹಿನ್ನೆಲೆಯನ್ನು ನೀಲಿವರ್ಣದಿಂದ ತುಂಬಲಾಗಿದೆ. ಇದರ ಮಧ್ಯದಲ್ಲಿ ಬಿಳಿವರ್ಣದಲ್ಲಿ ಅಷ್ಟಭುಜವನ್ನು ರಚಿಸಲಾಗಿದ್ದು ಈ ಭುಜಗಳಿಗೆ ಹೊಂದಿಕೊಂಡು ಹೂವಿನ ದಳಗಳನ್ನು ಕೆಂಪುವರ್ಣದಿಂದ ರಚಿಸಲಾಗಿದೆ. ಈ ಅಷ್ಟದಳಗಳ ತುದಿಯಿಂದ ಮತ್ತೊಂದು ದಳದ ತುದಿಗೆ ಹೂವಿನ ದಳದ ಆಕಾರವಾಗಿ ಕೂಡಿಸಲಾಗಿದೆ. ಹೀಗೆ ಒಟ್ಟು ಮತ್ತೆ ಎಂಟು ದಳಗಳ ಹೂವು ಸಿದ್ಧವಾಗಿದ್ದು ಇದಕ್ಕೆ ಹಳದಿ ವರ್ಣವನ್ನು ತುಂಬಲಾಗಿದೆ. ಕೆಂಪುವರ್ಣದ ರೇಖೆಗಳನ್ನು ಗುಣಾಕಾರ ಚಿಹ್ನೆಯಲ್ಲಿ ಎಳೆಯಲಾಗಿದೆ. ಅವುಗಳಲ್ಲಿ ಕಪ್ಪು ವರ್ಣದಿಂದ ಅಷ್ಟಾವರಣಗಳನ್ನು ಬರೆಯಲಾಗಿದೆ. ಈ ದಳಗಳ ತುದಿಗೆ ತಾಗುವಂತೆ ಒಂದು ವೃತ್ತದ ಪಟ್ಟಿಯನ್ನು ಬಿಳಿಯ ವರ್ಣದಲ್ಲಿ ಅಲಂಕಾರಗೊಳಿಸಲಾಗಿದೆ. ದಳಗಳ ಮಧ್ಯದಲ್ಲಿ ಗುಲಾಬಿವರ್ಣವನ್ನು ತುಂಬಲಾಗಿದೆ.

ಹೀಗೆ ವಿಭಿನ್ನವಾಗಿ ವಿಶಿಷ್ಟವಾಗಿ ಜ್ಞಾನ ಅಷ್ಟಾವರಣೋದ್ಧರಣಿ ಚಿತ್ರವು ಕಂಡುಬರುತ್ತದೆ.

### ೩. ಅನಾದಿ ಜಂಗಮೋದ್ಧರಣಿ:

**ವಾಚ್ಯ ವಸ್ತು ವಿಷಯ:**

ಸರ್ವಾಚಾರ ಸಂಪತ್ತೋ ಅಂಗವಾಗಿ ಸಕಲ ಕಲಾಮೂರ್ತಿಗಳ ಗರ್ಭೀಕರಿಸಿಕೊಂಡು ಅಷ್ಟಾವರಣದಿಂದಲಂಕೃತವಾಗಿ ವಿರಾಜಿಸುವ ಅನಾದಿಭಕ್ತನ ಅಂತರಂಗದಲ್ಲಿ ಶಿವಧರ್ಮವೆಂಬ ಕಂದದೊಡನೆ ಕೂಡಿದ ಸುಜ್ಞಾನವೆಂಬ ನಾಳಮನುಳ್ಳಚಂದ್ರ ಸೂರ್ಯರ ಹೋಲುವ ಕಾಂತಿಯಿಂದೆಸೆವ ನಿತ್ಯೈಶ್ವರ್ಯವೆಂಬ ದಳಾಷ್ಟಕಂಗಳಂ, ವೈರಾಗ್ಯವೆಂಬ ಕರ್ಣಿಕೆಯಿಂ ಶ್ರೀ ರುದ್ರಗಣಂಗಳೆಂಬ ಕಿಂಜಲ್ಕಂಗಳಿಂದೊಪ್ಪುವ ಹೃತ್ಕಮಲ ಮಧ್ಯದಲ್ಲಿ ಶ್ವೇತ, ರಕ್ತ, ಕೃಷ್ಣವರ್ಣವನುಳ್ಳ ಚಂದ್ರಸೂರ್ಯಾಗ್ನಿ ಮಂಡಲತ್ರಯದ ಮೇಲೆ ಅ, ಉ, ಮಾಕ್ಷರತ್ರಯವೇಕವಾದ ಪ್ರಣವಪೀಠಾಗ್ರದಲ್ಲಿ ಧ್ಯಾನಾರ್ಹಸ್ವರೂಪವಾಗಿ ಚಿನ್ಮಯ, ಚಿದ್ರೂಪ, ಚಿದಾನಂದ ಸುಜ್ಞಾನಭರಿತವೆನಿಸಿ ಸಕಲತತ್ವವೂ ಗರ್ಭೀಕೃತವಾದ ಅನಾದಿ ಜಂಗಮದ ಅಂಗ ಸಂಬಂಧವನುದ್ಧರಿಸುವ ಕ್ರಮವನ್ನು ತಿಳಿಸಲಾಗಿದೆ.[೩೯] ಹೀಗೆ ಅನಾದಿಜಂಗಮೋದ್ಧರಣಿಯನ್ನು ವಿವರಿಸಲಾಗಿದೆ. ಈ ಕುರಿತು ಹೆಚ್ಚಿನ ವಿವರವನ್ನು ಅನುಬಂಧದಲ್ಲಿ ನೋಡಬಹುದಾಗಿದೆ.

*** ಉದ್ಧರಣಿ ಸಾಹಿತ್ಯದಲ್ಲಿಯ ಚಿತ್ರ : ೩.೧:**

ಈ "ಅನಾದಿ ಜಂಗಮೋದ್ಧರಣಿ" ಚಿತ್ರವನ್ನು ೧'x೧' ಅಡಿ ಅಳತೆಯಲ್ಲಿ ಕಾಗದದ ಮೇಲೆ ಜಲವರ್ಣದಿಂದ ರಚಿಸಲಾಗಿದೆ. ಪೂರ್ವಮುಖವಾಗಿರುವ ಲಿಂಗದ ಕೆಳಗಡೆ ಮೂರು ಮೂರು ಸೆಂಟಿ ಮೀಟರ್‌ಗಳ ಚೌರಸವನ್ನು

---

೩೯. ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು: ಶಿವಾನುಭವಶಾಸ್ತ್ರ : ಪುಟ ೮.

ರಚಿಸಿಕೊಂಡು ಅದರಲ್ಲಿ ೧ x ೧ ಸೆಂಟಿ ಮೀಟರ್‌ಗಳ ಮನೆಗಳನ್ನು ಮಾಡಿ ಇದರ ಕೆಳಗಡೆ ಎಡಬಲಗಳಲ್ಲಿ ಒಂದೊಂದು ಮನೆಗಳನ್ನು ಹೆಚ್ಚಿಸಿಕೊಂಡು, ಮತ್ತೆ ಅದರ ಕೆಳಗಡೆ ಮತ್ತೊಂದು ಮನೆಯನ್ನು ಹೆಚ್ಚಿಸಿಕೊಂಡು ಇದರ ಸಮಾಂತರವಾಗಿ ಕೆಳಗಡೆ ಇನ್ನೆರಡು ಅಂದರೆ ಒಟ್ಟು ಮೂರು ಮನೆಗಳನ್ನು ಎಡಬಲಗಳಲ್ಲಿ ಹೆಚ್ಚಿಸಿ ಕೊಳ್ಳಲಾಗಿದೆ. ಚಿತ್ರದ ಮಧ್ಯದಿಂದ ಅದರ ಕೆಳಗಡೆ ಒಂದು ಮನೆ ಕಡಿಮೆ ಮಾಡಿದ್ದು, ಮತ್ತೆ ಅದರ ಕೆಳಗಡೆ ಒಂದು ಮನೆ ಎಡಬಲಗಳಲ್ಲಿ ಕಡಿಮೆ ಮಾಡುತ್ತ ಬಂದು ಕೊನೆಗೆ ಮಧ್ಯದ ಮೂರು ಮನೆಗಳಲ್ಲಿ ನಡುವಿನ ಮನೆ ಬಿಟ್ಟು ಉಳಿದೆರಡು ಮನೆಗಳನ್ನು ಕಾಲುಗಳಂತೆ ಒಂದೊಂದು ಮನೆ ಮಾಡಿ ಚಿತ್ರಿಸಲಾಗಿದೆ. ಈ ಚಿತ್ರದ ಮೇಲ್ಗಡೆಯ ಮಧ್ಯದಲ್ಲಿ ಕಪ್ಪು ವರ್ಣದ ಲಿಂಗದಾಕಾರವನ್ನು ಮಾಡಲಾಗಿದ್ದು ಅದರ ಕೆಳಗಡೆಯಲ್ಲಿ ಮೂರು ಮನೆಗಳ ಕೆಳಗಡೆಯ ಕಾಲುಗಳವರೆಗೂ ಕೇಸರಿ ವರ್ಣವನ್ನು ತುಂಬಲಾಗಿದೆ. ಅದರ ಎಡಬಲಗಳಲ್ಲಿರುವ ಮನೆಗಳಿಗೆ ಹಳದಿ ವರ್ಣವನ್ನು ತುಂಬಲಾಗಿದೆ. ಈ ಚಿತ್ರದ ಮಧ್ಯ ಭಾಗದಲ್ಲಿ ಲಿಂಗುವಿನ ಕಪ್ಪು ಬಣ್ಣವನ್ನು ತುಂಬಲಾಗಿದೆ. ಈ ಅನಾದಿ ಜಂಗಮೋದ್ಧರಣಿ ಚಿತ್ರದ ಮೇಲ್ಗಡೆಯ ಒಂದು ಮೂಲೆಯನ್ನು ಕೆಳಗಡೆಯ ಒಂದು ಮೂಲೆಯನ್ನು ಹೊರತುಪಡಿಸಿ ಉಳಿದೆಲ್ಲ ಮೂಲೆಗಳಿಗೆ ಕೆಂಪು ವರ್ಣದ ಎಲೆಗಳನ್ನು ಅಂದರೆ ೧೦ ಎಲೆಗಳನ್ನು ರಚಿಸಲಾಗಿದೆ. ಲಿಂಗುವಿನ ಬಲಭಾಗದಲ್ಲಿ ಕೆಂಪುವರ್ಣದಿಂದ ಸೂರ್ಯನನ್ನು ಮತ್ತು ಲಿಂಗದ ಎಡಬದಿಯಲ್ಲಿರುವ ಚಂದ್ರನನ್ನು ಹಳದಿ ವರ್ಣದಲ್ಲಿ ಚಿತ್ರಿಸಲಾಗಿದೆ. ಈ ಒಟ್ಟು ಚಿತ್ರದ ಅಂಚಿನಲ್ಲಿ ನೈಸರ್ಗಿಕ ಬಳ್ಳಿಯ ನಕ್ಷೆಯಿಂದ ಕಲಾಕೃತಿಯನ್ನು ಪೂರ್ತಿಗೊಳಿಸಲಾಗಿದೆ.

*** ಕ.ವಿ.ವಿ. ಹಂಪಿಯ ತಾಳೆ ಓಲೆಗರಿ ಚಿತ್ರ : ೩.೨:**

ಈ ತಾಳೆಓಲೆಗರಿ ಮೇಲಿನ ಚಿತ್ರವೂ ಸುಂದರವಾಗಿ ಮೂಡಿಬಂದಿದೆ. ಈ ಓಲೆಗರಿಯ ಮೇಲೆ ಅನಾದಿ ಜಂಗಮೋದ್ಧರಣಿ ಚಿತ್ರವನ್ನು ರಚಿಸಿದ್ದು ಕಪ್ಪುವರ್ಣದ ರೇಖಾಚಿತ್ರವಾಗಿದೆ. ಇದರಲ್ಲಿಯೂ ಕಾಗದದ ಮೇಲೆ ರಚಿಸಿದಂತೆ ಚಿತ್ರ ರಚಿಸಲಾಗಿದೆ. ಪೂರ್ವಕ್ಕೆ ಮುಖ ಮಾಡಿರುವ ಲಿಂಗದ ಎಡಬಲಗಳಲ್ಲಿ ವೃಷಭವು ಎದುರುಬದುರಾಗಿ ಕುಳಿತಿರುವ ಚಿತ್ರವಿದೆ. ಈ "ಅನಾದಿ ಜಂಗಮೋದ್ಧರಣಿ"ಯ ಚಿತ್ರದ ಎಡಬಲಗಳಲ್ಲಿ ಅಲಂಕಾರಿಕ ನಕ್ಷೆಯ ಅಂಚುಗಳೆರಡರ ಮಧ್ಯದಲ್ಲಿ ಪೂಜಾ ನಿರತನಾದ ಜಂಗಮನ ಚಿತ್ರವೊಂದಿದ್ದು, ವೃಕ್ಷವೊಂದರ ಮೇಲೆ ಕಟ್ಟೆಯಂತಿದ್ದು ಇದರ ಮೇಲೆ ಜಂಗಮ ಒಂದು ಕಾಲನ್ನು ಮಡಚಿಕೊಂಡು ಕುಳಿತಿದ್ದು, ಇನ್ನೊಂದು ಕಾಲನ್ನು ಕೆಳಗಡೆ ಬಿಟ್ಟಿರುವನು. ಕೆಳಗಡೆ ಇರುವ ಪಾದಕ್ಕೆ ನಮಸ್ಕರಿಸುವಂತೆ ಭಕ್ತನ ಚಿತ್ರವೊಂದಿದೆ. ಜಂಗಮನ ಎದುರಿನಲ್ಲಿ ವ್ಯಕ್ತಿಯೊಬ್ಬ ಒಂದು ಕಾಲನ್ನು ಮಡಿಚಿಕೊಂಡು, ಮತ್ತೊಂದು ಕಾಲಮೇಲೆ ನಿಂತು ನೋಡುತ್ತಿರುವ ದೃಶ್ಯವಿದೆ. ಇಂತಹದೇ ಚಿತ್ರಗಳು ಕೆಳಗಿನ ಓಲೆಗರಿಗಳಲ್ಲಿಯೂ ಚಿತ್ರಿಸಲ್ಪಟ್ಟಿವೆ. ಈ ಎರಡೂ ತಾಳೆಓಲೆಗರಿ ಚಿತ್ರವನ್ನು ಸುಂದರವಾಗಿ ವ್ಯಕ್ತಿಗಳ ಸಮೇತ ಚಿತ್ರಿಸಲಾಗಿದೆ.

*** ಗು.ವಿ.ವಿ. ಗುಲಬರ್ಗಾದಲ್ಲಿ ದೊರೆತ ಚಿತ್ರ : ೩.೩:**

ಈ ಅನಾದಿ ಜಂಗಮೋದ್ಧರಣಿ ಚಿತ್ರವನ್ನು ೧ x ೧ ಅಡಿ ಅಳತೆಯಲ್ಲಿ ಕಾಗದದ ಮೇಲೆ ಜಲವರ್ಣದಿಂದ ರಚಿಸಲಾಗಿದೆ. ತಿಳಿಜಾಂಬಳಿವರ್ಣದ ಹಿನ್ನೆಲೆಯಲ್ಲಿ ಅನಾದಿ ಜಂಗಮೋದ್ಧರಣಿಯ ಚಿತ್ರವನ್ನು ಬರೆಯಲಾಗಿದ್ದು ರೇಖಾಪ್ರಧಾನವಾಗಿಯೇ ಇರುವ ಈ ಚಿತ್ರ ಆಕಾರ, ಗಾತ್ರ, ಪ್ರಮಾಣಗಳಾಗಲಿ, ವರ್ಣಗಾರಿಕೆಯಾಗಲಿ ಅಷ್ಟೊಂದು ಸೂಕ್ತವಾಗಿ ನುರಿತ ಕಲಾವಿದನ ಕಲಾಕೃತಿ ಎನಿಸುತ್ತಿಲ್ಲ. ಆದರೆ ಒಟ್ಟಾರೆ ಆಕಾರ ಅನಾದಿ ಜಂಗಮೋದ್ಧರಣಿ ಚಿತ್ರವನ್ನು ಪ್ರತಿನಿಧಿಸುತ್ತದೆ. ತಾತ್ವಿಕ ಹಿನ್ನೆಲೆಯಲ್ಲಿಯೇ ರಚನೆಗೊಂಡಿದೆ. ಜಾನಪದ ಕಲಾವಿದರಂತೆ ಕಲಾಕೃತಿ ರೂಪುಗೊಂಡಿದೆ. ಇಲ್ಲಿ ಚಿತ್ರದ ಎಲ್ಲಾ ಮೂಲೆಗಳಿಗೆ ಎಲೆಗಳನ್ನು ಮಾಡಲಾಗಿದೆ. ಒಟ್ಟು ೧೬ ಎಲೆಗಳಿಗೆ ಕೆಂಪು ಮಿಶ್ರಿತ ಕಪ್ಪು ವರ್ಣವನ್ನು ಬಳಸಲಾಗಿದೆ. ವರ್ಣಗಾರಿಕೆಯಲ್ಲೂ ವಿಶೇಷವಾದ ಚಿತ್ರಗಳೆಂದು ಕಂಡುಬರುವುದಿಲ್ಲ.

*** ಧರ್ಮಸ್ಥಳದಲ್ಲಿ ದೊರೆತ ಚಿತ್ರ : ೩.೪:**

ಈ ಅನಾದಿ ಜಂಗಮೋದ್ಧರಣಿ ಚಿತ್ರವನ್ನು ೧' x ೧' ಅಡಿ ಅಳತೆಯಲ್ಲಿ ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ಸುಂದರವಾದ ಅಲಂಕಾರಿಕ ನಕ್ಷೆಯನ್ನೊಳಗೊಂಡ ರಥದ ಮಧ್ಯ ಭಾಗದಲ್ಲಿ ಚಿತ್ರವನ್ನು ರಚಿಸಲಾಗಿದ್ದು ಅನಾದಿ ಜಂಗಮೋದ್ಧರಣಿ ಚಿತ್ರವನ್ನು ರೇಖಾಪ್ರಧಾನವಾಗಿ ಚಿತ್ರಿಸಲಾಗಿದೆ. ಚಿತ್ರದ ಹಿನ್ನೆಲೆಯಲ್ಲಿ ಕೆಂಪು ವರ್ಣದ ಲೇಪನ ಮಾಡಿದ್ದು ಅದರ ಮೇಲೆ ಕಪ್ಪುವರ್ಣದ ರೇಖೆಗಳೊಂದಿಗೆ ಸಂಪೂರ್ಣ ಚಿತ್ರವನ್ನು ಪೂರ್ತಿಗೊಳಿಸಿದ್ದು ಕಂಡು ಬರುತ್ತದೆ. ಈ ಅನಾದಿ ಜಂಗಮೋದ್ಧರಣಿ ಚಿತ್ರಕ್ಕಿಂತಲೂ ಕಲಾವಿದನಿಗೆ ಈ ಚಿತ್ರದ ಎಡಬಲಗಳಲ್ಲಿರುವ ಅಲಂಕಾರಿಕ ಕಂಬಗಳು ಮತ್ತು ಮೇಲ್ಗಡೆಯ ರಥದ ಚಿತ್ರಕ್ಕೆ ಹೆಚ್ಚು ಶ್ರಮವಹಿಸಿದಂತೆ ಕಂಡುಬರುತ್ತದೆ. ಯಾಕೆಂದರೆ ನಕ್ಷೆಗಳು, ಆಕಾರಗಳು, ವಿಂಗಡಣೆ, ವರ್ಣಗಾರಿಕೆ ಎಲ್ಲವೂ ಉತ್ಕೃಷ್ಟವಾಗಿ ಮೂಡಿ ಬಂದಿವೆ.

*** ಬೆಂ.ವಿ.ವಿ. ಬೆಂಗಳೂರಿನಲ್ಲಿ ದೊರೆತ ಚಿತ್ರ : ೩.೫:**

ಈ ಕಲಾಕೃತಿಯನ್ನು ೧' x ೧' ಅಡಿ ಅಳತೆಯ ಕಾಗದದ ಮೇಲೆ ಜಲವರ್ಣದಿಂದ ರಚಿಸಲಾಗಿದೆ. ನನಗೆ ದೊರೆತಿರುವ ಅನಾದಿ ಜಂಗಮೋದ್ಧರಣಿ ಚಿತ್ರಗಳಲ್ಲಿಯೇ ವಿಭಿನ್ನವಾಗಿ ಚಿತ್ರಿಸಿದ್ದು ಲಿಂಗದ ಕೆಳಗಿನ ಭಾಗ ಚೌರಸ ಆಕಾರದಲ್ಲಿದ್ದು ಈ ಚಿತ್ರದಲ್ಲಿ ಆಯತ ಆಕಾರದಲ್ಲಿದೆ. ಈ ಚಿತ್ರದಲ್ಲಿ ಆರು ಮನೆಗಳೂ ಕಡಿಮೆ ಆಗಿವೆ ಎಂಬುದನ್ನು ಗಮನಿಸುತ್ತ ಉಳಿದಂತೆ ಎಲ್ಲವೂ ಆಕಾರ, ಆಕೃತಿ, ವರ್ಣಗಾರಿಕೆಯ ದೃಷ್ಟಿಯಿಂದ ಉತ್ತಮ ಕಲಾಕೃತಿಯಾಗಿದೆ. ಲಿಂಗವನ್ನು ಹಳದಿ ವರ್ಣದಲ್ಲಿ, ಕೆಳಗಿನ ಎರಡೂ ಕಾಲುಗಳನ್ನು ಕೆಂಪು ವರ್ಣದಲ್ಲಿ ಚಿತ್ರಿಸಲಾಗಿದೆ. ಉಳಿದಂತೆ ಈ ಚಿತ್ರದಲ್ಲಿ ಬರುವ ಎಲ್ಲ ಮನೆಗಳಿಗೆ ಒಂದು ಕೆಂಪು, ಮತ್ತೊಂದು ಹಳದಿ ಹೀಗೆ ಸಮಪ್ರಮಾಣದಲ್ಲಿ ವರ್ಣಗಳನ್ನು ಬಳಸಲಾಗಿದೆ. ಪ್ರತಿಯೊಂದು ಮೂಲೆಗೂ ಎಲೆಗಳನ್ನು

ಜಾಂಬಳಿವರ್ಣದಿಂದ ಚಿತ್ರಿಸಲಾಗಿದೆ. ಈ ಚಿತ್ರದ ಹಿನ್ನೆಲೆಯಲ್ಲಿ ಹಸಿರುವರ್ಣವನ್ನು ಬಳಿಯಲಾಗಿದೆ. ಈ ಚಿತ್ರದ ಅಂಚಿನಲ್ಲಿ ಹಳದಿವರ್ಣದ ಅಲಂಕಾರಿಕ ಪಟ್ಟಿಯಿದ್ದು ಮೂಲೆಗಳಲ್ಲಿ ಅಲಂಕಾರಿಕವಾಗಿ ಕೆಂಪುವರ್ಣದ ನಕ್ಷೆಯನ್ನು ಬಳಸಲಾಗಿದೆ.

*** ಕ.ವಿ.ವಿ. ಧಾರವಾಡದಲ್ಲಿ ದೊರೆತ ಚಿತ್ರ: ಚಿತ್ರ ೩.೬:**

ಈ ಕಲಾಕೃತಿಯನ್ನು ೧' x ೧' ಅಡಿ ಅಳತೆಯ ಕಾಗದದ ಮೇಲೆ ಜಲವರ್ಣದಿಂದ ರಚಿಸಲಾಗಿದೆ. "ಅನಾದಿ ಜಂಗಮೋದ್ಧರಣೆ ಚಿತ್ರ"ವು ಆಕಾರ ಗಾತ್ರ ಪ್ರಮಾಣ ಹಾಗೂ ವರ್ಣಗಾರಿಕೆಯ ದೃಷ್ಟಿಯಿಂದ ಉತ್ತಮ ಕಲಾಕೃತಿಯಾಗಿ ರೂಪುಗೊಂಡಿದೆ. ಪೂರ್ವಕ್ಕೆ ಮುಖ ಮಾಡಿರುವ ಲಿಂಗವನ್ನು ಕೆಂಪು ವರ್ಣದಲ್ಲಿ ಮಾಡಿದ್ದು ಕೆಳಗಿನ ಚೌರಸದಲ್ಲಿರುವ ಮನೆಯನ್ನು ಕೆಂಪು ಮತ್ತು ಬಿಳಿ ವರ್ಣವನ್ನು ಒಂದೊಂದರಲ್ಲಿ ತುಂಬಿ ಅಂದವಾಗಿಸಿರುವರು. ಅದರ ಕೆಳಗಿನ ಎರಡು ಸಾಲುಗಳಲ್ಲಿ ಒಂದುಮನೆ ಹಳದಿ ಮತ್ತೊಂದು ಬಿಳಿ ಹೀಗೆ ಕ್ರಮವಾಗಿ ತುಂಬಿರುವರು. ಅದರ ಕೆಳಗಿನ ಮಧ್ಯಭಾಗದಲ್ಲಿರುವ ಚೌರಸದಲ್ಲಿಯ ಮನೆಗಳನ್ನು ಹಸಿರು ವರ್ಣದಿಂದ ತುಂಬಿದ್ದಾರೆ. ಅದರ ಎಡಬಲಗಳಲ್ಲಿರುವ ಚೌರಸದ ಮನೆಗಳನ್ನು ಕ್ರಮವಾಗಿ ಕೆಂಪು ಬಿಳಿ ವರ್ಣಗಳಿಂದ ತುಂಬಲಾಗಿದೆ. ಇವುಗಳ ಕೆಳಗಿರುವ ಎರಡೂ ಸಾಲುಗಳಲ್ಲಿಯ ಮನೆಗಳನ್ನು ಕ್ರಮವಾಗಿ ಹಳದಿ (ಹಸಿರು ಮಿಶ್ರಣದ) ಮತ್ತು ಬಿಳಿ ವರ್ಣಗಳನ್ನು ತುಂಬಿ ಪೂರ್ತಿಗೊಳಿಸಲಾಗಿದೆ. ಇವುಗಳ ಕೆಳಗಿರುವ ಕಾಲುಗಳೆರಡಕ್ಕೂ ಹಳದಿ ವರ್ಣವನ್ನು ತುಂಬಲಾಗಿದೆ. ಈ ಆಕೃತಿಯ ಮೂಲೆಗಳ ಎಡಬಲಗಳಲ್ಲಿರುವ ಒಟ್ಟು ಹತ್ತೂ ಎಲೆಗಳಿಗೆ ಬಿಳಿ ನೀಲಿ ಮಿಶ್ರಿತವರ್ಣವನ್ನು ತುಂಬಿ ಕಲಾಕೃತಿಯನ್ನು ಪೂರ್ಣಗೊಳಿಸಲಾಗಿದೆ. ಈ ಇಡೀ ಕಲಾಕೃತಿಯ ಹೊರರೇಖೆಯನ್ನು ಕಪ್ಪುವರ್ಣದಿಂದ ರಚಿಸಲಾಗಿದೆ. ಈ ಕಲಾಕೃತಿಯ ಹಿನ್ನೆಲೆಯಲ್ಲಿ ಹಳದಿ ಮತ್ತು ಕೇಸರಿ ವರ್ಣಗಳ ಮಿಶ್ರಣವು ವಿಶಿಷ್ಟ ರೀತಿಯಲ್ಲಿ ಮೂಡಿ ಬಂದಿದ್ದು, ಕಲಾಕೃತಿಯ ಮುಂದುಗಡೆಯ ಮಾಡಿನ ಆಕಾರದ ಕಮಾನನ್ನು ಕೆಂಪು ವರ್ಣದಿಂದ ತುಂಬಿದ್ದು ಅದರಲ್ಲಿ ಹಳದಿ ವರ್ಣದಿಂದ ಹೂವು ಬಳ್ಳಿಯನ್ನು ಮಾಡಲಾಗಿದೆ.

### ೪. ಅನಾದಿ ಜಂಗಮ ಮೂರ್ತಿ ಉದ್ಧರಣೆ

**ವಾಚ್ಯ ವಸ್ತು ವಿಷಯ:**

ಪಾದತಳದಲ್ಲಿ – ಅತಳಲೋಕ, ಪಾದೋರ್ಧ್ವದಲ್ಲಿ–ವಿತಳಲೋಕ, ಜಂಘೆಯಲ್ಲಿ–ಸುತಳಲೋಕ, ಜಾನುವಿನಲ್ಲಿ–ಮಹೀತಳಲೋಕ, ಊರುವಿನಲ್ಲಿ–ತಳಾತಳಲೋಕ, ಗುಹ್ಯದಲ್ಲಿ–ರಸಾತಳಲೋಕ, ಕಟಿಯಲ್ಲಿ–ಪಾತಾಳಲೋಕ, ನಾಭಿಯಲ್ಲಿ–ಭೂಲೋಕ, ಕುಕ್ಷಿಯಲ್ಲಿ–ಭುವರ್ಲೋಕ, ಹೃದಯದಲ್ಲಿ–ಸುವರ್ಲೋಕ, ವಕ್ಷದಲ್ಲಿ–ಮಹರ್ಲೋಕ, ಕಂಠದಲ್ಲಿ–ಜನೋಲೋಕ, ಲಲಾಟದಲ್ಲಿ–ತಪೋಲೋಕ, ಮೂರ್ಧ್ನದಲ್ಲಿ–ಸತ್ಯಲೋಕ. ಇಂತಿವಾದಿಯಾಗಿ ಬ್ರಹ್ಮಾಂಡದ ಗುಣಂಗಳೆಲ್ಲವ ತನುಗುಣಂಗಳಲ್ಲಿ ಅಡಗಿಸಿಕೊಂಡು ನಾನಾ ಜಗಮುತ್ಪತ್ತಿ

ಸ್ಥಿತಿಲಯ ರಹಿತನಾಗಿ ಗುಣತ್ರಯರೂಪವಾದ ತ್ರಿಮೂರ್ತ್ಯಾತ್ಮಕವೆನಿಪ ಜಂಗಮವೆಂಬಕ್ಷರತ್ರಯವೆ ನಾಮಸಂಜ್ಞೆಯಾಗಿ ಮತ್ತಂ–ದೀರ್ಘವೇ–ಶಿರಸ್ಸು, ಬಿಂದುವೇ–ಮುಖ, ಹ್ರಸ್ವಶೃಂಗಗಳೇ–ಭುಜಂಗಳು, ಹಕಾರವೇ–ದೇಹ, ಅಮೃತರೇಖೆಯೇ ಪದಂಗಳಿಂತಪ್ಪ ಮಂತ್ರವಿಗ್ರಹ ಮೂರ್ತಿಯ ಶಿರದಲ್ಲಿ–ಓಂಕಾರ, ತ್ವಕ್ಕಿನಲ್ಲಿ–ವಕಾರ, ಶೃತಿಪುಟದಲ್ಲಿ–ಯಕಾರ, ನೇತ್ರಯುಗ್ಮದಲ್ಲಿ–ಶಿಕಾರ, ಜಿಹ್ವೆಯಲ್ಲಿ–ಮಕಾರ, ನಾಸಾಪುಟದಲ್ಲಿ–ನಕಾರ, ಬಳಿಕೀ ಷಡಕ್ಷರಿಯೇ–ಮುಖ, ಭುಜಯುಗ್ಮ–ದೇಹ, ಮಧ್ಯಪಾದದ್ವಯ ಷಡಾಧಾರಂಗಳಲ್ಲಿ ಸಂಬಂಧವಾಗಿರ್ಪಕಾರಣ ಹಸ್ತ, ಪಾದ, ಅಂಗುಲಿಗಳಲ್ಲಿ ಪಂಚಾಕ್ಷರಂ ನ್ಯಾಸವಾಗಿರ್ಪವು. ಇಂತೀ ಮುವತ್ತೆಂಟು ಪ್ರಣವಸ್ವರೂಪವಾಗಿ ತನ್ನ ತಾ ಸ್ಮರಿಸಿಕೊಳ್ಳುತ್ತಿರ್ದ ಜಂಗಮದ ಜಪಪೂಜಾ ಲಕ್ಷಣವನ್ನು ಹೇಳುತ್ತಿರುವುದು.[೪೦] ಹೀಗೆ "ಅನಾದಿ ಜಂಗಮಮೂರ್ತಿ ಉದ್ಧರಣಿ"ಯನ್ನು ಕುರಿತು ವಿವರಿಸಲಾಗಿದೆ. ಈ ಕುರಿತು ಹೆಚ್ಚಿನ ವಿವರವನ್ನು ಅನುಬಂಧದಲ್ಲಿ ನೋಡಬಹುದಾಗಿದೆ.

*** ಉದ್ಧರಣಿ ಸಾಹಿತ್ಯದಲ್ಲಿಯ ಚಿತ್ರ : ೪.೧:**

ಈ ಕಲಾಕೃತಿಯನ್ನು 1x1 ಅಡಿ ಅಳತೆಯ ಕಾಗದದ ಮೇಲೆ ಜಲವರ್ಣದಿಂದ ರಚಿಸಲಾಗಿದೆ. ಹಳದಿ ವರ್ಣದ ಪೀಠವೊಂದರ ಮೇಲೆ ಪದ್ಮಾಸನದಲ್ಲಿ ಕುಳಿತಿರುವ "ಅನಾದಿ ಜಂಗಮ ಮೂರ್ತಿಯು" ಎಡಗೈಯಲ್ಲಿ ಇಷ್ಟಲಿಂಗವನ್ನು ಇಟ್ಟುಕೊಂಡಿದ್ದು, ಬಲಗೈಯಲ್ಲಿ ರುದ್ರಾಕ್ಷಿಯ ಸರವನ್ನು ಹಿಡಿದುಕೊಂಡು ಜಪವನ್ನು ಮಾಡುತ್ತಿದ್ದ ಧ್ಯಾನಾಸಕ್ತನಾಗಿರುವಂತೆ ಅವನ ಕಣ್ಣುಗಳು ಅರೆಮುಚ್ಚಿರುವುದು ಕಂಡು ಬರುತ್ತದೆ. ಕೊರಳಲ್ಲಿ ಹಸಿರು ವರ್ಣದ ಶಲ್ಯವನ್ನು ಹಾಕಿದ್ದು ಎಡಬಲ ಮೊಳಕಾಲುಗಳ ಹಿಂದುಗಡೆಯಲ್ಲಿ ಅಲಂಕಾರಿಕವಾಗಿ ಬಿಚ್ಚಿಕೊಂಡಿದ್ದು ಹಳದಿವರ್ಣದ ಅಂಚನ್ನು ಹೊಂದಿದೆ. ಕೊರಳಲ್ಲಿ ಆಭರಣ ಹಾಗೂ ರುದ್ರಾಕ್ಷಿಯ ಸರಗಳನ್ನು ಧರಿಸಿದ್ದು, ತಲೆಯ ಮೇಲೆ ಕಿರೀಟವನ್ನು ಹಾಗೂ ಭುಜಕವಚವನ್ನು ಧರಿಸಿರುವುದು ಕಂಡು ಬರುತ್ತದೆ. ಕಿರೀಟದಲ್ಲಿಯೇ ಅಲಂಕಾರಿಕವಾಗಿ ಕೂದಲುಗಳು ಮೇಲ್ಮುಖವಾಗಿ ಹರಡಿಕೊಂಡಿರುವುದು ಕಂಡುಬರುತ್ತದೆ. ಭುಜಕವಚದಲ್ಲಿ ಅಲ್ಲಲ್ಲಿ ಹೂವುಗಳನ್ನು ಮಾಡಿದ್ದು ಹಳದಿವರ್ಣದಲ್ಲಿ ಮಾಡಿದ ಇವು ಕಪ್ಪುವರ್ಣದ ರೇಖೆಗಳಿಂದ ಕಿರೀಟ ಮತ್ತು ಭುಜಕವಚವನ್ನು ಅಲಂಕಾರಿಕ ನಕ್ಷೆಯಿಂದ ಸುಂದರಗೊಳಿಸಿರುವರು. ಅದರಂತೆ ಎರಡೂ ಕೈಗಳ ಮುಂಗೈಗಳಲ್ಲಿ ಹಾಗೂ ತೋಳುಗಳಲ್ಲಿ ಹಳದಿವರ್ಣದ ಆಭರಣಗಳನ್ನು ಧರಿಸಲಾಗಿದೆ. ಸೊಂಟದ ಸುತ್ತಲೂ ಆಭರಣವೊಂದು ಹಾವಿನಂತೆ ಸುತ್ತಿಕೊಂಡಿರುವುದು ಕಂಡು ಬರುತ್ತದೆ. ಈ ಜಂಗಮಮೂರ್ತಿಯು ಕಂದು ಗೆಂಪುವರ್ಣದಲ್ಲಿದ್ದು ಮೈಕೈಗಳೆಲ್ಲ ತುಂಬಿಕೊಂಡಿದ್ದು ಅಂಗರಚನಾ (Anotomy) ಶಾಸ್ತ್ರವನ್ನು ಚೆನ್ನಾಗಿ ಬಲ್ಲ ಕಲಾವಿದ ಜಂಗಮ ಮೂರ್ತಿಯನ್ನು ತ್ರಿಮಾನ (ದುಂಡುತನ)ದಲ್ಲಿ ತೋರಿಸಿದ್ದಾನೆ. ಆಕಾರ ಗಾತ್ರ ಪ್ರಮಾಣ ಬದ್ಧವಾಗಿವೆ. ಈ ಜಂಗಮಮೂರ್ತಿಯ ತಲೆಯ ಬಲಭಾಗದಲ್ಲಿ ಕೆಂಪುವರ್ಣದ ಸೂರ್ಯ

೪೦. ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು: ಶಿವಾನುಭವಶಾಸ್ತ್ರ : ಪುಟ ೧೨

ವೃತ್ತಾಕಾರದಲ್ಲಿದ್ದು, ಅದರ ಕೆಳಗಡೆ ಹಳದಿವರ್ಣದ ಕಮಂಡಲ, ಅದರ ಕೆಳಗಡೆ ಹಳದಿ ವರ್ಣದ ದಂಡವಿದೆ. ಎಡಭಾಗದ ಮೇಲ್ಗಡೆ ಹಳದಿವರ್ಣದ ಚಂದ್ರ ಅರ್ಧ ವೃತ್ತಾಕಾರದಲ್ಲಿದ್ದು ಅದರ ಕೆಳಗಡೆ ಪೂಜಾಸಾಮಗ್ರಿಯೊಂದಿದೆ. ಈ ಜಂಗಮಮೂರ್ತಿಯು ಷಡಕ್ಷರಿ ಮಂತ್ರದ ಬೀಜಾಕ್ಷರಗಳಿಂದ ಪರಿಪೂರ್ಣಗೊಂಡಿದೆ. ಓಂ=ಹಣೆಯ ಮಧ್ಯದಲ್ಲಿ, ನ=ಎಡಭುಜದಲ್ಲಿ, ಮಃ= ಬಲಭುಜದಲ್ಲಿ, ಶಿ=ನಾಭಿಯ ಕೆಳಭಾಗದಲ್ಲಿ, ವಾ=ಬಲಗಾಲಿನ ಮಂಡೆಯಲ್ಲಿ, ಯ=ಎಡಗಾಲಿನ ಮಂಡೆಯಲ್ಲಿದ್ದು ಕರಣ ಪ್ರಸಾದ ಪೂಜೆಯಲ್ಲಿ ಜಂಗಮರ ಈ ಭಾಗಗಳನ್ನು ಪತ್ರಿ, ಪುಷ್ಪ, ವಿಭೂತಿ, ಗಂಧಗಳಿಂದ ಪೂಜಿಸುವುದನ್ನು ಗಮನಿಸಿದರೆ, ವೀರಶೈವರ ಪೂಜಾಕ್ರಮ ವ್ಯಕ್ತಿರೂಪದ ಸ್ಥಾವರ ಪೂಜೆಯ ಬದಲಾಗಿ ತತ್ವರೂಪದ ಜಂಗಮ ಪೂಜೆಯಾಗಿರುವುದು ಇದರಿಂದ ತಿಳಿದು ಬರುತ್ತದೆ.

ವೀರಶೈವ ಷಟ್‌ಸ್ಥಲವನ್ನು ತೋರಿಸಿರುವ ಈ ಅನಾದಿ ಜಂಗಮ ಮೂರ್ತಿ ಉದ್ಧರಣಿಯಲ್ಲಿ ಅಂಗಸ್ಥಲ, ಚಕ್ರಗಳು, ದಳಗಳು, ಪ್ರಣವಾಕ್ಷರಗಳನ್ನು ಕೆಳಗಿನಂತೆ ತೋರಿಸಲಾಗಿದೆ:

| ಕ್ರ.ಸಂ. | ಅಂಗಸ್ಥಲ | ಚಕ್ರಗಳು | ದಳಗಳು | ಪ್ರಣವಾಕ್ಷರ |
|---|---|---|---|---|
| ೧ | ಭಕ್ತಸ್ಥಲ | ಆಧಾರ ಚಕ್ರ | ನಾಲ್ಕು ದಳ | "ನ"ಕಾರ |
| ೨ | ಮಹೇಶಸ್ಥಲ | ಸ್ವಾಧಿಷ್ಠಾನ ಚಕ್ರ | ಆರು ದಳ | "ಮ:"ಕಾರ |
| ೩ | ಪ್ರಸಾದಿಸ್ಥಲ | ಮಣಿಪುರ ಚಕ್ರ | ಹತ್ತು ದಳ | "ಶಿ"ಕಾರ |
| ೪ | ಪ್ರಾಣಲಿಂಗಿಸ್ಥಲ | ಅನಾಹತ ಚಕ್ರ | ಹನ್ನೆರಡು ದಳ | "ವಾ"ಕಾರ |
| ೫ | ಶರಣ ಸ್ಥಲ | ವಿಶುದ್ಧಿ ಚಕ್ರ | ಹದಿನಾರು ದಳ | "ಯ"ಕಾರ |
| ೬ | ಐಕ್ಯ ಸ್ಥಲ | ಅಗ್ನಿ ಚಕ್ರ | ಎರಡು ದಳ | ಓಂಕಾರ |

*** ಕ.ವಿ.ವಿ. ಹಂಪೆಯ ತಾಳೆಓಲೆಗರಿ ಚಿತ್ರ : ೪.೨:**

ಈ ತಾಳೆಓಲೆಗರಿಯ ಮೇಲಿನ ಚಿತ್ರವು ಸುಂದರವಾಗಿ ಮೂಡಿ ಬಂದಿದೆ. ಈ ಓಲೆಗರಿಗಳ ಮೇಲೆ ರಚಿಸಿದ ಅನಾದಿ ಜಂಗಮ ಮೂರ್ತಿಯು ಪದ್ಮಾಸನದಲ್ಲಿ ಕುಳಿತಿದ್ದು ಕಪ್ಪುವರ್ಣದ ರೇಖಾಪ್ರಧಾನ ಚಿತ್ರವಾಗಿದೆ. ಪೂಜಾ ನಿರತನಾದ ಈ ಜಂಗಮ ಮೂರ್ತಿಯಲ್ಲಿ ಅಂಗಸ್ಥಲ, ಚಕ್ರಗಳು, ದಳಗಳು, ಪ್ರಣವಾಕ್ಷರಗಳನ್ನು ತೋರಿಸಲಾಗಿದೆ. ಈ ಜಂಗಮ ಮೂರ್ತಿಯನ್ನು ಒಂದು ಮಾಡಿನಾಕಾರದ ಕಮಾನಿನಲ್ಲಿ ಕೂಡ್ರಿಸಿದ್ದು ಈ ಕಮಾನನ್ನು ಅಲಂಕಾರಿಕ ನಕ್ಷೆಯನ್ನು ಬಳಸಿ ಸುಂದರವಾಗಿ ತೋರಿಸಲಾಗಿದೆ. ಈ ಮಾಡಿನ ಎಡಬಲಗಳಲ್ಲಿ ಚೌರಸಾಕಾರದ ಅಂಚಿನ ಮಧ್ಯದಲ್ಲಿ ಲಿಂಗಪೂಜಾ ನಿರತ ಜಂಗಮ ಮೂರ್ತಿಯು ಕಟ್ಟೆಯ ಮೇಲೆ ಕುಳಿತು, ಒಂದು ಕಾಲನ್ನು ಮಡಚಿಕೊಂಡಿದ್ದು ಇನ್ನೊಂದು ಕಾಲನ್ನು ಕೆಳಗೆ ಬಿಡಲಾಗಿದೆ. ಈ ಕಾಲಿಗೆ ನಮಸ್ಕರಿಸುತ್ತಿರುವ

ಭಕ್ತನೊಬ್ಬ ಕೆಳಗಡೆ ಕುಳಿತಿರುವನು. ಇನ್ನೊಬ್ಬ ಗಿಡದ ಕೆಳಗಡೆ ನಿಂತು ನೋಡುತ್ತಿರುವ ದೃಶ್ಯವಿದೆ. ಕುಳಿತಿರುವ ಜಂಗಮನ ಎಡಬಲಗಳಲ್ಲಿ ಗಿಡಮರಗಳಿವೆ. ಇಂತಹದೇ ಚಿತ್ರ ಕೆಳಗಿನ ಇನ್ನೊಂದು ಓಲೆಗರಿಯ ಮೇಲೆಯೂ ಇದ್ದು ಗರಿಯ ಎಡಬಲಗಳಲ್ಲಿ ಚಿತ್ರಿಸಲಾಗಿದೆ. ಒಟ್ಟಾರೆ ಈ ತಾಳೆಓಲೆಗರಿಗಳೆರಡರ ಮೇಲೆಯೂ ಸುಂದರವಾಗಿ ರೇಖಾಪ್ರಧಾನವಾದ ಚಿತ್ರವನ್ನು ಚಿತ್ರಿಸಲಾಗಿದೆ.

*** ಗು.ವಿ.ವಿ. ಗುಲಬರ್ಗಾದಲ್ಲಿ ದೊರೆತ ಚಿತ್ರ : ೪.೩:**

ಈ ಕಲಾಕೃತಿಯನ್ನು ೧' x ೧' ಅಡಿ ಅಳತೆಯ ಕಾಗದದ ಮೇಲೆ ಜಲವರ್ಣದಿಂದ ರಚಿಸಲಾಗಿದೆ. ಚಿತ್ರದ ಹಿನ್ನೆಲೆಯಲ್ಲಿ ಕೆಂಪು ವರ್ಣವನ್ನು ಲೇಪಿಸಲಾಗಿದೆ. ಕಪ್ಪು ವರ್ಣವನ್ನೇ ಪ್ರಧಾನವಾಗಿ ಬಳಸಿರುವರು. ಪದ್ಮಾಸನದಲ್ಲಿ ಕುಳಿತಿರುವ ಈ ಅನಾದಿ ಜಂಗಮ ಮೂರ್ತಿಯು ಕೋರೆಮಿಸೆಯನ್ನು ಹೊಂದಿದ್ದು ಕಪ್ಪುವರ್ಣದಲ್ಲಿಯೇ ವಿಭೂತಿಯನ್ನು ಧರಿಸಿಕೊಂಡಿರುವುದು. ತಲೆಯ ಕೂದಲುಗಳನ್ನು ನವಿಲು ಗರಿಯಂತೆ ಕಪ್ಪು ವರ್ಣದಲ್ಲಿ ಮೊಳಕೈವರೆಗೆ ಎಡಬಲಗಳಲ್ಲಿ ಹರಡಿಕೊಂಡಿರುವುದು. ತಲೆಗೆ ಕಿರೀಟವನ್ನು ಬಿಡಿಬಿಡಿಯಾದ ನಕ್ಷೆಗಳಿಂದ ಮಾಡಿರುವುದು, ಕೊರಳ ಹಾಗೂ ಭುಜದ ಹಿಂದುಗಡೆ ಅಂಟಿಕೊಂಡಂತೆ ತೋರಿಸಿದ ಶಲ್ಯ ಎಲ್ಲವೂ ಜಾನಪದ ಚಿತ್ರಗಳನ್ನು ಹೋಲುವಂತೆ ಇದ್ದು ಇದು ಕಲೆಯ ತಾಂತ್ರಿಕ ದೃಷ್ಟಿಯಿಂದ ಸೊರಗಿದರೂ ಆಕಾರ, ಗಾತ್ರಗಳಲ್ಲಿ ಹಾಗೂ ಷಟ್‌ಸ್ಥಲಗಳನ್ನು ಸೂಚಿಸುವ ದಳಗಳು, ಸ್ಥಲಗಳನ್ನು ವಿವಿಧ ವರ್ಣಗಳಲ್ಲಿ ತೋರಿಸಿರುವುದು ವಿಶೇಷವಾಗಿದೆ. ಈ ಮೂರ್ತಿಯ ಬಲಭಾಗದಲ್ಲಿ ಸೂರ್ಯ, ಎಡಭಾಗದಲ್ಲಿ ಚಂದ್ರರನ್ನು ತೋರಿಸಲಾಗಿದೆ.

*** ಧರ್ಮಸ್ಥಳದಲ್ಲಿ ದೊರೆತ ಚಿತ್ರ ; ೪.೪:**

ಈ ಕಲಾಕೃತಿಯನ್ನು ೧' x ೧' ಅಡಿ ಅಳತೆಯ ಕಾಗದದ ಮೇಲೆ ಜಲವರ್ಣದಿಂದ ರಚಿಸಲಾಗಿದೆ. ಹಳದಿ ಮತ್ತು ಹಸಿರು ವರ್ಣದ ಪೀಠವೊಂದರ ಮೇಲೆ ಪದ್ಮಾಸನದಲ್ಲಿ ಕುಳಿತಿರುವ ಅನಾದಿಜಂಗಮ ಮೂರ್ತಿ ಉದ್ಧರಣಿ ಚಿತ್ರವು ಚಿತ್ರಕಲಾ ತಾಂತ್ರಿಕ ದೃಷ್ಟಿಯಿಂದ, ಆಕಾರ, ಗಾತ್ರ, ಪ್ರಮಾಣ, ಹಾವ, ಭಾವಗಳ ದೃಷ್ಟಿಯಲ್ಲಿ ಆಗಲಿ, ವರ್ಣಗಾರಿಕೆಯ ದೃಷ್ಟಿಯಿಂದಲೂ ತಾತ್ವಿಕ ದೃಷ್ಟಿಯಿಂದಲೂ ಉತ್ತಮವಾಗಿ ರೂಪುಗೊಂಡಿದೆ. ಸೀಮಿತ ವರ್ಣಗಳಿದ್ದರೂ ಬಳಕೆ ಮಾಡಿಕೊಂಡಿರುವ ರೀತಿ ಉತ್ತಮವಾಗಿದೆ. ಈ ಮೂರ್ತಿಯ ಮೀಸೆಗಳು, ತಲೆಗೂದಲು ಸುರುಳಿಯಾಗಿ ಮೇಲ್ಮುಖವಾಗಿ ಹೊರಳಿದ್ದು ಈ ಮೂರ್ತಿಯ ಆವೇಶವನ್ನು ಸೂಚಿಸುತ್ತಿದ್ದರೂ ಅಲಂಕಾರಿಕವಾದ ಕಿರೀಟ ಭುಜಕವಚಗಳು ರುದ್ರಾಕ್ಷಿ ಆಭರಣಗಳು ಅಂದವಾಗಿ ಮೂಡಿಬಂದಿವೆ. ಇಷ್ಟಲಿಂಗವನ್ನು ಬಿಳಿಯದಾಗಿ ತೋರಿಸಿದ್ದು ಕೆಂಪು ವಿಭೂತಿಯ ಮೂರು ಬೆರಳು ಹಚ್ಚಿರುವುದು, ಸ್ಥಲಗಳನ್ನು ಸೂಚಿಸುವ ಎಲ್ಲ ದಳಗಳನ್ನು ಬಿಳಿಯ ವರ್ಣದಲ್ಲಿಯೇ ತೋರಿಸಲಾಗಿದೆ. ಆದರೂ ಕಪ್ಪು ವರ್ಣದ ಶಕ್ತಿಶಾಲಿಯಾದ ರೇಖೆಗಳಿಂದಾಗಿ ಎಲ್ಲವೂ ಸ್ಪಷ್ಟವಾಗಿ ಕಂಡುಬರುತ್ತವೆ. ಈ ಜಂಗಮಮೂರ್ತಿಯ ಬಲಭಾಗದಲ್ಲಿ ಹಿಂದುಗಡೆ ದಂಡವಿದ್ದು

ಅದರ ಮೇಲ್ಗಡೆ ಸೂರ್ಯನನ್ನು ವೃತ್ತದಲ್ಲಿ ಕಣ್ಣು, ಬಾಯಿ, ಮೂಗುಗಳನ್ನು ತೋರಿಸಲಾಗಿದೆ. ಎಡಬದಿಯಲ್ಲಿ ಚಂದ್ರನನ್ನು ಅರ್ಧ ವೃತ್ತದಲ್ಲಿ ಮುಖ ತೋರಿಸಿದ್ದು ಕೆಳಗಡೆ ಕುಂಡಲವೊಂದನ್ನು ಮಾಡಲಾಗಿದೆ. ಒಟ್ಟಾರೆಯಾಗಿ ಈ ಮೂರ್ತಿಯು ಸುಂದರವಾಗಿ ಭಕ್ತಿ ಭಾವನೆಯನ್ನು ವ್ಯಕ್ತಪಡಿಸುತ್ತಿದೆ.

*** ಧರ್ಮಸ್ಥಳದಲ್ಲಿಯ ಕಾಗದದ ಪ್ರತಿ : ಚಿತ್ರ ೪.೪.೧:**

ಧರ್ಮಸ್ಥಳದಲ್ಲಿ ಇನ್ನೊಂದು ಚಿತ್ರವು ದೊರತಿದ್ದು ಇಲ್ಲಿ ಅಲಂಕಾರಿಕ ರಥದ ಮದ್ಯದಲ್ಲಿ ಮಹಿಳಾ ಜಂಗಮ ಮೂರ್ತಿಯಾಗಿ ಚಿತ್ರಿಸಿದ್ದು ಹಸಿರು ಸೀರೆಯನ್ನುಟ್ಟಿದ್ದು ಕೆಂಪು ಎದೆಗವಚ ಧರಿಸಿರುವಳು. ಪದ್ಮಾಸನದಲ್ಲಿ ಕುಳಿತು ಲಿಂಗಪೂಜೆಯಲ್ಲಿ ನಿರತಳಾಗಿರುವಳು. ಎಡಬಲಗಳಲ್ಲಿ ಅಲಂಕಾರಿಕ ಕಂಬಗಳಿದ್ದು ಹಿನ್ನೆಲೆಯನ್ನು ಕೆಂಪುವರ್ಣದಿಂದ ತುಂಬಲಾಗಿದೆ. ಜಂಗಮ ಮೂರ್ತಿಯ ಎಲ್ಲ ಧಾರ್ಮಿಕ ಅಂಶಗಳು ಈ ಮಹಿಳಾ ಜಂಗಮ ಮೂರ್ತಿಯಲ್ಲಿ ಕಂಡು ಬರುತ್ತಿದ್ದು, ವೀರಶೈವ ಧರ್ಮದಲ್ಲಿ ಪುರುಷರಷ್ಟೇ ಪ್ರಮುಖವಾಗಿ ಮಹಿಳೆಯರನ್ನು ತೋರಿಸಿರುವುದು ಈ ಚಿತ್ರಗಳಿಂದ ದೃಢವಾಗುತ್ತದೆ. ಆಕಾರ, ಗಾತ್ರ, ಪ್ರಮಾಣಗಳ ದೃಷ್ಟಿಯಿಂದಲೂ ಉತ್ತಮ ಕಲಾಕೃತಿಯಾಗಿದೆ. ಬಟ್ಟೆಯನ್ನು ಧರಿಸಿರುವುದೂ ಈ ಮೂರ್ತಿಯ ವೈಶಿಷ್ಟ್ಯವಾಗಿದೆ.

*** ಬೆಂ.ವಿ.ವಿ. ಬೆಂಗಳೂರಿನಲ್ಲಿ ದೊರೆತ ಚಿತ್ರ : ೪.೫:**

ಇದೊಂದು "ಮಹಿಳಾ ಜಂಗಮಮೂರ್ತಿ" ಉದ್ಧರಣಿ ಚಿತ್ರವಾಗಿದ್ದು ೧' x ೧' ಅಡಿ ಅಳತೆಯಲ್ಲಿ ಕಾಗದದಲ್ಲಿ ರಚನೆಗೊಂಡಿದೆ. ಹಳದಿವರ್ಣದ ಅಲಂಕಾರಿಕ ಅಂಚನ್ನು ಹೊಂದಿದ್ದು, ಚಿತ್ರದ ಹಿನ್ನೆಲೆಗೆ ಕಂದುಗೆಂಪು ವರ್ಣವನ್ನು ಲೇಪಿಸಲಾಗಿದೆ. ಪದ್ಮಾಸನದಲ್ಲಿ ಕುಳಿತಿರುವ ಈ ಮೂರ್ತಿಗೆ ತಿಳಿ ಗುಲಾಬಿ ವರ್ಣವನ್ನು ತುಂಬಲಾಗಿದೆ. ಕೆಂಪುವರ್ಣದ ಹೊರರೇಖೆಗಳು ಅಷ್ಟೊಂದು ಶಕ್ತಿಶಾಲಿಯಾಗಿ ಕಂಡು ಬರುವುದಿಲ್ಲವಾದರೂ ವ್ಯಕ್ತಿಯ ಆಕಾರ ಪ್ರಮಾಣ ಗಾತ್ರಗಳು ಸುಂದರವಾಗಿ ಮೂಡಿ ಬಂದಿವೆ. ವರ್ಣಗಾರಿಕೆಯಲ್ಲೂ ಸೊರಗಿದ ಈ ಚಿತ್ರ ಎಡಗೈಯಲ್ಲಿರುವ ಇಷ್ಟಲಿಂಗವನ್ನು ಹುಡುಕುವಂತಿದೆ. ಬಲಗೈಯಲ್ಲಿ ರುದ್ರಾಕ್ಷಿಮಾಲೆ ಕಾಣುತ್ತದೆ. ಈ ಮಹಿಳಾ ವ್ಯಕ್ತಿಯ ಭುಜಕವಚವು ಹಳದಿ ವರ್ಣದಲ್ಲಿ ಎದ್ದು ಕಾಣುತ್ತಿದ್ದು ಷಟ್‌ಸ್ಥಲಗಳನ್ನು ಸೂಚಿಸುವ ದಳಗಳಿಗೂ ಸೂಕ್ತ ವರ್ಣಗಳಿಲ್ಲದೆ ಆಭರಣಗಳಂತೆ ಕಾಣುತ್ತಿವೆ. ಮುಖದ ಹಿಂದುಗಡೆ ಕಪ್ಪು ಕೂದಲುಗಳಿರುವುದರಿಂದ ಮುಖ ಮಾತ್ರ ಎದ್ದು ಕಾಣುತ್ತಿದೆ. ತಲೆಯ ಎಡಬಲಗಳಲ್ಲಿ, ಕೆಳಮುಖವಾಗಿ ಚಿತ್ರಿಸಿರುವ ಕಮಲದ ಹೂವುಗಳಿಗೂ ತಿಳಿ ಗುಲಾಬಿ ವರ್ಣವನ್ನು ತುಂಬಲಾಗಿದೆ. ಉಳಿದಂತೆ ಎಲ್ಲ ಧಾರ್ಮಿಕ ಅಂಶಗಳು ಈ ಮಹಿಳಾ ಜಂಗಮ ಮೂರ್ತಿಯಲ್ಲಿ ಕಂಡುಬರುತ್ತವೆ.

*** ಕ.ವಿ.ವಿ. ಧಾರವಾಡದಲ್ಲಿ ದೊರೆತ ಚಿತ್ರ : ೪.೬:**

ಇದೊಂದು ಮಹಿಳಾ ಜಂಗಮ ಮೂರ್ತಿ ಉದ್ದರಣಿ ಚಿತ್ರವಾಗಿದ್ದು, ೧' x ೧' ಅಡಿ ಅಳತೆಯಲ್ಲಿ ಕಾಗದದ ಮೇಲೆ ಜಲವರ್ಣದಿಂದ ರಚಿಸಲಾಗಿದೆ. ಈ ಚಿತ್ರದ ಹಿನ್ನೆಲೆಯಲ್ಲಿ ಕೆಂಪು ವರ್ಣವನ್ನು ಲೇಪಿಸಿದ್ದು

ಮುನ್ನೆಲೆಯಲ್ಲಿ ಮಾಡಿನ ಕಮಾನ ಆಕಾರದಲ್ಲಿ ನೀಲಿವರ್ಣದಿಂದ ಅಲಂಕರಿಸಲಾಗಿದ್ದು, ಹಳದಿ ವರ್ಣದ ಪೀಠವೊಂದರ ಮೇಲೆ ಪದ್ಮಾಸನದಲ್ಲಿ ಕುಳಿತಿರುವ ಮಹಿಳಾಜಂಗಮ ಮೂರ್ತಿಯು ಪ್ರಮಾಣ, ಗಾತ್ರಗಳಲ್ಲಿ ಸೊರಗಿರುವ ಈ ಚಿತ್ರ ಆಕಾರದಲ್ಲಿ ಸುಧಾರಿಸಿದ್ದು, ಎಡಗೈಯಲ್ಲಿರುವ ಇಷ್ಟಲಿಂಗ, ಬಲಗೈಯಲ್ಲಿರುವ ರುದ್ರಾಕ್ಷಿ ಮಾಲೆ, ಸ್ಥಲಗಳನ್ನು ಸೂಚಿಸುವ ದಳಗಳು, ಕೊರಳಲ್ಲಿಯ ರುದ್ರಾಕ್ಷಿ ಸರಗಳನ್ನು ಸ್ಪಷ್ಟವಾಗಿ ತೋರಿಸುವ ಉದ್ದೇಶ ಸಫಲವಾಗಿದೆ. ಈ ಮಹಿಳಾ ಜಂಗಮ ಮೂರ್ತಿಗೆ ವಸ್ತ್ರಗಳನ್ನಾಗಲಿ, ಆಭರಣಗಳನ್ನಾಗಲಿ ಅಲಂಕಾರಿಕವಾಗಿ ತೋರಿಸಲು ಹೋಗದೇ ಇರುವುದು ವಿಶೇಷವಾಗಿದೆ. ಉಳಿದ ಜಂಗಮ ಮೂರ್ತಿ ಉದ್ಧರಣಿಗಳಂತೆ ಎಲ್ಲ ಧಾರ್ಮಿಕ ಅಂಶಗಳು ಈ ಮಹಿಳಾ ಜಂಗಮ ಮೂರ್ತಿಯಲ್ಲಿಯೂ ಕಂಡು ಬರುತ್ತದೆ.

### ೫. ಮಕುಟೋದ್ಧರಣಿ

**ವಾಚ್ಯ ವಸ್ತು ವಿಷಯ:**

ಸಕಲ ನಿಷ್ಕಲ ಸ್ವಭಾವ ಚಾರಿತ್ರವನ್ನೊಳಗೊಂಡು ನಿರಾಲಂಬ ನಿಜ ಚೈತನ್ಯ ಸ್ವರೂಪನಾದ ಅನಾದಿ ಜಂಗಮದ ಮಕುಟೋದ್ಧರಣಿಯ ಸಂಬಂಧವೆಂತೆಂದೊಡೆ: ಮಧ್ಯಸ್ಥಾನದ ಶಿವಲಿಂಗಾಕೃತಿಯೇ ಶಿಖಾಗ್ರದ ಶೂನ್ಯಲಿಂಗ, ಸಪ್ತಾವರಣದ ರೇಖೆಗಳೇ ಶಿರಜಟಾಬಂಧ ಅಷ್ಟೋತ್ತರ ಶತದಳ ನ್ಯಾಸಂಗಳೇ ಕೇಶಕೋಶಂಗಳು, ಇವೆಲ್ಲ ಮಂತ್ರಾಕ್ಷರ ಸಂಬಂಧವನ್ನು ಹೊಂದಿದ. ರೀತಿಯೆಂದರೆ ಮಧ್ಯದಲ್ಲಿರುವ ಶಿವಲಿಂಗದ ವೃತ್ತದಿಂದ ಮೇಲ್ಗಡೆ ವೃತ್ತದ ಸುತ್ತಲೂ ೮ ದಳಗಳನ್ನು ರಚಿಸಿ ಅದರಲ್ಲಿ ಒಂದೊಂದು ದಳದಲ್ಲಿ ಒಂದೊಂದು ಅಕ್ಷರವನ್ನು ಬರೆಯುವರು. ಬ.ಸ.ವ. ಹ್ರಾಂ, ಹ್ರೀಂ, ಹ್ರೂಂ, ಹ್ರೇಂ, ಹ್ರೌಂ ಎಂಬ ಬಕಾರಾದಿ ಹ್ರೌಂಕಾರಾಂತ್ಯವಾದ ಅಷ್ಟಾಕ್ಷರಗಳನ್ನು ಬರೆಯುವರು. ಅದರ ಮೇಲಿನ ವೃತ್ತದಲ್ಲಿ ೧೨ ದಳಗಳನ್ನು ಬರೆಯುವದು. ಅದರಲ್ಲಿ ಹ್ರಃ, ಹ್ರಾಂ, ಅ, ಉ, ಮ, ಓಂ, ನ, ಮಃ, ಶಿ, ವಾ, ಯ, ಓಂ, ಎಂಬ ಹ್ರಕಾರಾದಿ ನಕಾರಂತ್ಯವಾದ ದ್ವಾದಶಾಕ್ಷರಂ ನ್ಯಾಸವಾಗಿಹವು. ಅದರ ಮೇಲಿನ ವೃತ್ತದಲ್ಲಿ ಷೋಡಶದಲಗಳಲ್ಲಿ ಹ್ರಾಂ, ಹ್ರೀಂ, ಹ್ರೂಂ, ನ, ಮಃ, ಶಿ, ವಾ, ಯ, ಓಂ, ಹ್ರೀಂ ನ, ಮ, ಶಿ, ವಾ, ಯ, ಓಂ, ಎಂಬ (೧೬) ಹದಿನಾರು ಅಕ್ಷರಗಳನ್ನು ಬರೆಯಲಾಗಿದೆ. ಅದರ ಮೇಲಿನ ವೃತ್ತದಲ್ಲಿ ವಿಂಶತಿದಳಂಗಳಲ್ಲಿ ವಾ, ಯ, ಓಂ, ಹ್ರಾಂ, ಹ್ರಿಂ, ನ, ಮಃ, ಶಿ, ವಾ, ಯ, ಓಂ, ಹ್ರಾಂ, ಹ್ರಿಂ, ಹ್ರೂಂ, ಹ್ರೈಂ, ನ, ಮಃ, ಶಿ, ವಾ, ಯ, ಕಾರದವರೆಗೆ ೨೦ ಅಕ್ಷರಗಳಿರುವವು. ಇವು ಮೂಲಮಂತ್ರಂಗಳೆನಿಸುವವು. ಇದರ ಮೇಲಿನ ವೃತ್ತದ ೨೪ ದಳಗಳಲ್ಲಿ ಅ, ಆ, ಇ, ಈ, ಉ, ಊ, ಋ, ೠ, ಎ, ಏ, ಐ, ಒ, ಓ, ಔ, ಅಂ, ಅಃ, ಕ, ಖ, ಗ, ಘ, ಙ, ಚ, ಛ, ಜ ಎಂಬ ಅಕಾರಾದಿ ಜಕಾರಾಂತ್ಯವಾದ ಚತುರ್ವಿಂಶತಿ ದಳಂಗಳಲ್ಲಿ ನ್ಯಾಸವಾಗಿಪ್ಪವು. ಇದರ ಮೇಲಿನ ವೃತ್ತದಲ್ಲಿ ಇಪ್ಪತೆಂಟು ದಳಗಳಲ್ಲಿ ಝ, ಞ, ಟ, ಠ, ಡ, ಢ, ಣ, ತ, ಥ ದ, ಧ, ನ, ಪ ಫ, ಬ, ಭ, ಮ, ಯ, ರ, ಲ, ವ, ಶ, ಷ, ಸ, ಹ, ಳ, ಕ್ಷ ಅವಾಗ್ಜವೆಂದೊಡೆ ವಾಚ್ಯಕ್ಕೆ ಬಾರದ ನಿರಂಜನ ಹಕಾರವು ನಾದಬಿಂದು ಸಮೇತವಾಗಿ ಸರ್ವಮಂತ್ರ

ತತ್ವಾಧಾರಮಪ್ಪುದರಿಂದ ಅಂತ್ಯನ್ಯಾಸ ಋಕಾರಾದಿ ಕ್ಷಕಾರಾಂತ್ಯವಾದ ೨೮ ಅಕ್ಷರಗಳು ದಳದೊಳಗೆ ಇರುವವು. ಇವುಗಳಲ್ಲಿ ಎಲ್ಲ ಮಂತ್ರಗಳು ಅಂತರ್ಗತವಾಗಿರುವುದರಿಂದ ಬೀಜಾಕ್ಷರ ಮಂತ್ರಗಳಾಗಿವೆ.[೪೧] ಈ ಕುರಿತು ಹೆಚ್ಚಿನ ವಿವರವನ್ನು ಅನುಬಂಧದಲ್ಲಿ ನೋಡಬಹುದಾಗಿದೆ.

*** ಉದ್ಧರಣ ಸಾಹಿತ್ಯದಲ್ಲಿಯ ಚಿತ್ರ : ೫.೧:**

೧ x ೧ ಅಡಿ ಅಳತೆಯ ಕಾಗದದ ಮೇಲೆ ಜಲವರ್ಣದಿಂದ ಮಕುಟೋದ್ಧರಣಿಯನ್ನು ಚಿತ್ರಿಸಲಾಗಿದೆ. ಚಿತ್ರದ ಹಿನ್ನೆಲೆಯಲ್ಲಿ ನೀಲಿ ವರ್ಣವನ್ನು ಲೇಪಿಸಲಾಗಿದೆ. ಚಿತ್ರಿತ ಹಾಳೆಯ ಮಧ್ಯದಲ್ಲಿ ಶೂನ್ಯಲಿಂಗವನ್ನು ಕೆಂಪುವರ್ಣದಲ್ಲಿ ರಚಿಸಲಾಗಿದೆ. ಈ ಶೂನ್ಯ ಲಿಂಗದ ತಳ ಮತ್ತು ಮೇಲ್ಗಡೆಯ ತುದಿಗಳಿಗೆ ತಾಗುವಂತೆ ಒಂದು ವೃತ್ತದ ಪಟ್ಟಿಯನ್ನು ಕೆಂಪು ವರ್ಣದಲ್ಲಿ ರಚಿಸಲಾಗಿದ್ದು, ಅದರಲ್ಲಿ ೮ ಹಳದಿ ವರ್ಣದ ದಳಗಳನ್ನು ರಚಿಸಲಾಗಿದ್ದು ೨ನೆಯ ಕೆಂಪು ವರ್ಣದ ವೃತ್ತದ ಪಟ್ಟಿಯಲ್ಲಿ ೧೨ ಹಳದಿ ವರ್ಣದ ದಳಗಳನ್ನು ರಚಿಸಲಾಗಿದೆ. ೩ನೆಯ ಕೆಂಪು ವರ್ಣದ ವೃತ್ತದ ಪಟ್ಟಿಯಲ್ಲಿ ೧೬ ಹಳದಿ ವರ್ಣದ ದಳಗಳನ್ನು ರಚಿಸಲಾಗಿದೆ. ೪ನೆಯ ಕೆಂಪು ವರ್ಣದ ವೃತ್ತದ ಪಟ್ಟಿಯಲ್ಲಿ ೨೦ ಹಳದಿ ವರ್ಣದ ದಳಗಳನ್ನು ರಚಿಸಲಾಗಿದೆ. ೫ನೆಯ ಕೆಂಪು ವರ್ಣದ ವೃತ್ತದ ಪಟ್ಟಿಯಲ್ಲಿ ೨೪ ಹಳದಿವರ್ಣದ ದಳಗಳನ್ನು ರಚಿಸಲಾಗಿದೆ. ೬ನೆಯ ಕೆಂಪುವರ್ಣದ ವೃತ್ತದಲ್ಲಿ ೨೮ ಹಳದಿವರ್ಣದ ದಳಗಳನ್ನು ರಚಿಸಲಾಗಿದೆ. ಈ ಆರೂ ವೃತ್ತಗಳು ಚೌರಸದ ನಾಲ್ಕೂ ಬದಿಗಳಿಗೆ ತಗುಲಿದ್ದು ಉಳಿದ ನಾಲ್ಕೂ ಮೂಲೆಗಳಿಗೆ ನೀಲಿ ವರ್ಣವನ್ನು ತುಂಬಲಾಗಿದೆ. ಈ ಮಕುಟೋದ್ಧರಣಿಯ ದಳಗಳಲ್ಲಿ ಮೇಲೆ ತಿಳಿಸಿದಂತೆ ಅಕ್ಷರಗಳನ್ನು ಬರೆಯಲಾಗಿದೆ. ಈ ಚಿತ್ರದ ಅಂಚುಗಳನ್ನು ಅಲಂಕಾರಿಕ ನಕ್ಷೆಯಿಂದ ರಚಿಸಲಾಗಿದೆ.

**ಕ. ವಿ. ವಿ. ಹಂಪಿಯ ಕಾಗದದ ಪ್ರತಿ: ಚಿತ್ರ ೫.೨:**

೧ x ೧ ಅಡಿ ಅಳತೆಯ ಕಾಗದದ ಮೇಲೆ ಜಲವರ್ಣದಿಂದ ಮಕುಟೋದ್ಧರಣಿಯ ಚಿತ್ರವನ್ನು ಚಿತ್ರಿಸಲಾಗಿದೆ. ಆಯತಾಕಾರದ ಮಧ್ಯದಲ್ಲಿ ಶೂನ್ಯ ಲಿಂಗವನ್ನು ಚಿತ್ರಿಸಿ ಇದು ಬಿಳಿ ವರ್ಣದಲ್ಲಿದ್ದು ಕಪ್ಪು ರೇಖೆಯಿಂದ ಸುಂದರವಾಗಿ ಚಿತ್ರಿಸಲಾಗಿದೆ. ಲಿಂಗದ ತುದಿ ಮತ್ತು ತಳಗಳಿಗೆ ತಾಗುವಂತೆ ವೃತ್ತವೊಂದನ್ನು ರಚಿಸಿ ಅದರ ಒಳಗಡೆ ತಿಳಿ ನೀಲಿ ವರ್ಣವನ್ನು ತುಂಬಲಾಗಿದೆ. ಈ ವೃತ್ತದ ಪಟ್ಟಿಯನ್ನು ಬಿಳಿ ಮತ್ತು ತೆಳು ನೀಲಿ ವರ್ಣಗಳಿಂದ ತುಂಬಲಾಗಿದ್ದು ಇದರಲ್ಲಿ ೮ ಬಿಳಿ ವರ್ಣದ ದಳಗಳನ್ನು ರಚಿಸಲಾಗಿದೆ. ಇದರ ಮೇಲೆ ಕಂದು ಗೆಂಪು ಮತ್ತು ಹಸಿರು ವರ್ಣದ ವೃತ್ತದ ಪಟ್ಟಿಯನ್ನು ರಚಿಸಿ ಅದರಲ್ಲಿ ಸುತ್ತಲೂ ೧೨ ಬಿಳಿಯ ವರ್ಣದ ದಳಗಳನ್ನು ರಚಿಸಲಾಗಿದೆ. ಇದರ ಮೇಲೆ ಮತ್ತೊಂದು ತಿಳಿ ಗೆಂಪುವರ್ಣದ ಪಟ್ಟಿಯ ವೃತ್ತವನ್ನು ರಚಿಸಿಕೊಂಡು ಸುತ್ತಲೂ ಬಿಳಿಯ ವರ್ಣದ ೧೬ ದಳಗಳನ್ನು ಬರೆಯಲಾಗಿದೆ. ಇದರ ಮೇಲೆ ಮತ್ತೊಂದು

೪೧. ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು: ಶಿವಾನುಭವಶಾಸ್ತ್ರ : ಪುಟ ೧೪.

ವೃತ್ತದ ಪಟ್ಟಿಯನ್ನು ಕಂದುಗೆಂಪು, ಹಸಿರು ಬಣ್ಣದಿಂದ ರಚಿಸಲಾಗಿದ್ದು, ಇದರ ಸುತ್ತಲೂ ಬಿಳಿಯ ವರ್ಣದ ೨೦ ದಳಗಳನ್ನು ಬರೆಯಲಾಗಿದೆ. ಇದರ ಮೇಲೆ ಮತ್ತೊಂದು ವೃತ್ತ ಪಟ್ಟಿಯನ್ನು ತಿಳಿಕಂದು ಗೆಂಪುವರ್ಣದಿಂದ ಚಿತ್ರಿಸಲಾಗಿದ್ದು ಇದರ ಮೇಲೆ ಬಿಳಿ ವರ್ಣದ ೨೪ ದಳಗಳನ್ನು ಬರೆಯಲಾಗಿದೆ. ಕೊನೆಯ ವೃತ್ತಪಟ್ಟಿಯನ್ನು ಕಂದು ಗೆಂಪು ಮತ್ತು ಹಸಿರು ವರ್ಣದಿಂದ ತುಂಬಿದ್ದು ಅದರ ಮೇಲೆ ಬಿಳಿ ವರ್ಣದ ೨೮ ದಳಗಳನ್ನು ಚಿತ್ರಿಸಲಾಗಿದೆ. ಈ ಆರೂ ವೃತ್ತಗಳು ಆಯತದ ಎರಡು ಬದಿಗೆ ತಾಗಿದ್ದು ಇನ್ನುಳಿದ ಎರಡು ಭಾಗಕ್ಕೆ ಹಿನ್ನೆಲೆಯಾಗಿ ತಿಳಿಗೆಂಪು ವರ್ಣವನ್ನು ತುಂಬಲಾಗಿದೆ. ಈ ಚಿತ್ರದ ಎಡಬಲಭಾಗದಲ್ಲಿ ಅಲಂಕಾರಿಕವಾಗಿ ಹೂವು ಬಳ್ಳಿಯನ್ನು ಮಾಡಲಾಗಿದೆ. ಕಂದುಗೆಂಪು ವರ್ಣದಿಂದ ಆಯತದ ಪಟ್ಟಿಯನ್ನು ರಚಿಸಲಾಗಿದೆ. ಮಕುಟೋದ್ಧರಣಿ ಚಿತ್ರಗಳಲ್ಲಿಯೇ ಇದು ಚೆನ್ನಾಗಿ ರೂಪುಗೊಂಡಿದೆ.

*** ಗು.ವಿ.ವಿ. ಗುಲಬರ್ಗಾದಲ್ಲಿ ದೊರೆತ ಚಿತ್ರ: ೫.೩:**

೧ x ೧ ಅಡಿ ಅಳತೆಯ ಕಾಗದದ ಮೇಲೆ ಜಲವರ್ಣದಿಂದ ಮಕುಟೋದ್ಧರಣಿಯ ಚಿತ್ರವನ್ನು ಚಿತ್ರಿಸಲಾಗಿದೆ. ಆಯತಾಕಾರದ ಹಿನ್ನೆಲೆಗೆ ತಿಳಿ ಕಂದು ಗೆಂಪುವರ್ಣವನ್ನು ಬಳಿಯಲಾಗಿದೆ. ಈ ಆಯತದ ಮಧ್ಯದಲ್ಲಿ ಶೂನ್ಯ ಲಿಂಗವನ್ನು ಬರೆಯಲಾಗಿದ್ದು ಅದಕ್ಕೆ ಹೊಂದುವಂತೆ ವೃತ್ತ ಪಟ್ಟಿಕೆಗಳನ್ನು ರಚಿಸಿಕೊಂಡಿದ್ದು ಅದರಲ್ಲಿ ೮ ದಳಗಳನ್ನು, ೨ನೇ ಪಟ್ಟಿಕೆಯಲ್ಲಿ ೧೨ ದಳಗಳನ್ನು, ೩ನೆಯ ಪಟ್ಟಿಕೆಯಲ್ಲಿ ೧೬ ದಳಗಳು, ೪ನೆಯ ಪಟ್ಟಿಕೆಯಲ್ಲಿ ೨೦ ದಳಗಳು, ೫ನೆಯ ಪಟ್ಟಿಕೆಯಲ್ಲಿ ೨೪ ದಳಗಳು, ೬ನೆಯ ಪಟ್ಟಿಕೆಯಲ್ಲಿ ೨೮ ದಳಗಳನ್ನು ರಚಿಸಲಾಗಿದೆ. ಇಡೀ ಈ ಮುಕುಟೋದ್ಧರಣಿಯ ಚಿತ್ರಕ್ಕೆ ಕಡುಗೆಂಪು ವರ್ಣವೊಂದನ್ನೇ ಬಳಿಯಲಾಗಿದ್ದು ಲಿಂಗ ಹಾಗೂ ದಳಗಳನ್ನು ತಿಳಿ ವರ್ಣದಲ್ಲಿ ತೋರಿಸಲಾಗಿದ್ದು ರೇಖಾಚಿತ್ರ ಚೆನ್ನಾಗಿ ಮೂಡಿ ಬಂದರೂ ವರ್ಣಗಾರಿಕೆಯಲ್ಲಿ ಸೂಕ್ಷ್ಮತೆ ಇಲ್ಲದಂತಾಗಿದೆ. ಈ ಮುಕುಟೋದ್ಧರಣಿಯ ದಳಗಳಲ್ಲಿ ಮೇಲೆ ತಿಳಿಸಿದಂತೆ ಅಕ್ಷರಗಳನ್ನು ಬರೆಯಲಾಗಿದೆ.

*** ಧರ್ಮಸ್ಥಳದಲ್ಲಿ ದೊರೆತ ಚಿತ್ರ: ಚಿತ್ರ ೫.೪:**

೧ x ೧ ಅಡಿ ಅಳತೆಯ ಕಾಗದದ ಮೇಲೆ ಜಲವರ್ಣದ ರೇಖಾಚಿತ್ರವನ್ನು ರಚಿಸಲಾಗಿದೆ. ಚಿತ್ರದ ಮಧ್ಯದಲ್ಲಿ ಶೂನ್ಯ ಲಿಂಗವನ್ನು ಚಿತ್ರಿಸಿ ಅದರ ಸುತ್ತಲೂ ಆರು ವೃತ್ತ ಪಟ್ಟಿಕೆಗಳನ್ನು ರಚಿಸಿಕೊಂಡಿದ್ದು ಕ್ರಮವಾಗಿ ೮, ೧೨, ೧೬, ೨೦, ೨೪, ೨೮ ದಳಗಳನ್ನು ಮಾಡಿಕೊಂಡು ಆಯಾ ದಳಗಳಿಗೆ ಆಯಾ ಅಕ್ಷರಗಳನ್ನು ಮೇಲೆ ತಿಳಿಸಿದಂತೆ ಬರೆಯಲಾಗಿದೆ. ಈ ಆರೂ ವೃತ್ತ ಪಟ್ಟಿಕೆಗಳ ಕೊನೆಯಲ್ಲಿ ಕೆಂಪು ವರ್ಣದ ವೃತ್ತ ಪಟ್ಟಿಕೆಯನ್ನು ರಚಿಸಲಾಗಿದೆ. ಒಟ್ಟಾರೆ ರೇಖಾಚಿತ್ರವನ್ನು ಕಪ್ಪು ಮತ್ತು ಕೆಂಪು ವರ್ಣದಿಂದ ರಚಿಸಲಾಗಿದೆ. ಈ ಚಿತ್ರದ ಎಡ ಬಲಗಳಲ್ಲಿ ಅಲಂಕಾರಿಕ ಹೂ ಗಿಡಗಳನ್ನು ಚಿತ್ರಿಸಲಾಗಿದೆ.

*** ಕ.ವಿ.ವಿ. ಧಾರವಾಡದಲ್ಲಿ ದೊರೆತ ಚಿತ್ರ: ೫.೫:**

ಈ ಕಲಾಕೃತಿಯನ್ನು ೧' x ೧' ಅಡಿ ಅಳತೆಯ ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ಚೌರಸದಲ್ಲಿ ಹಳದಿ ಮಿಶ್ರಿತ ಹಸಿರು ವರ್ಣದ ಹಿನ್ನೆಲೆಯನ್ನು ತುಂಬಲಾಗಿದ್ದು ಮಧ್ಯದಲ್ಲಿ ಹಳದಿ ವರ್ಣದ ಶೂನ್ಯಲಿಂಗವನ್ನು ಚಿತ್ರಿಸಿದ್ದು ಅದರ ಸುತ್ತಲೂ ಒಂದು ವೃತ್ತವನ್ನು ರಚಿಸಿ ಒಳಗಡೆ ಕೆಂಪುವರ್ಣವನ್ನು ತುಂಬಲಾಗಿದೆ. ಇದರ ಮೇಲ್ಗಡೆ ತಿಳಿ ನೀಲಿ ವರ್ಣದ ವೃತ್ತ ಪಟ್ಟಿ ಇದ್ದು ಅದರಲ್ಲಿ ೮ ತಿಳಿ ಗುಲಾಬಿ ವರ್ಣದ ದಳಗಳನ್ನು ಚಿತ್ರಿಸಲಾಗಿದೆ. ಇದರ ಮೇಲ್ಗಡೆಯಲ್ಲಿ ಕೆಂಪು ವರ್ಣದ ವೃತ್ತ ಪಟ್ಟಿ ಇದ್ದು ಇದರ ಮೇಲೆ ೧೬ ದಳಗಳನ್ನು ಚಿತ್ರಿಸಿದ್ದು ಇದರ ಮೇಲ್ಗಡೆ ಹಸಿರು ಮಿಶ್ರಿತ ಹಳದಿ ವೃತ್ತ ಪಟ್ಟಿ ಇದ್ದು ಅದರ ಮೇಲೆ ೨೦ ದಳಗಳನ್ನು ಚಿತ್ರಿಸಿದ್ದು ಇದರ ಮೇಲ್ಗಡೆ ಹಳದಿಮಿಶ್ರಿತ ಕೆಂಪು ವೃತ್ತ ಪಟ್ಟಿಕೆ ಇದ್ದು ಅದರ ಮೇಲೆ ೨೪ ದಳಗಳನ್ನು ಚಿತ್ರಿಸಿದ್ದು ಅದರ ಮೇಲ್ಗಡೆ ಕಪ್ಪುಗೆಂದು ವರ್ಣದ ವೃತ್ತ ಪಟ್ಟಿಕೆ ಇದ್ದು ಇದರ ಮೇಲೆ ೨೮ ದಳಗಳನ್ನು ಚಿತ್ರಿಸಿದ್ದು ಈ ಎಲ್ಲ ದಳಗಳಲ್ಲಿ ಮೇಲೆ ಹೇಳಿದ ಅಕ್ಷರಗಳನ್ನು ನ್ಯಾಸ ಮಾಡಲಾಗಿದ್ದು ಇದರ ಅಂಚನ್ನು ಹಳದಿ ಕೆಂಪು ವರ್ಣದ ಅಲಂಕಾರಿಕ ವೃತ್ತವನ್ನು ರಚಿಸಲಾಗಿದೆ. ಈ ಮಕುಟೋದ್ಧರಣಿಯ ರೇಖಾಚಿತ್ರದ ಹಿನ್ನೆಲೆಯಲ್ಲಿಯೂ ವರ್ಣಗಳ ಮಿಶ್ರಣ ಹಾಗೂ ಬಳಕೆಯ ಹಿನ್ನೆಲೆಯೂ ಉತ್ತಮವಾಗಿ ರೂಪುಗೊಂಡಿದೆ.

## ೬. ಶೂನ್ಯ ಲಿಂಗೋದ್ಧರಣಿ

**ವಾಚ್ಯ ವಸ್ತು ವಿಷಯ:**

ಲಿಂಗಾಕಾರವಪ್ಪಂತೆ ಪೂರ್ವಾಪರಕ್ಕೆ ನೀಳರೇಖೆಗಳಾರನು ದಕ್ಷಿಣೋತ್ತರಕ್ಕೆ ಅಡ್ಡ ರೇಖೆಗಳೆಂಟನು ಮೇಲೆ ಗೋಳಕಾಕಾರವನು ಬರೆಯಲು ಗೋಳಕಕ್ಕೆ ಎರಡು ಊರ್ಧ್ವ ಪೀಠಕ್ಕೊಂಭತ್ತು ಅಧಃಪೀಠಕ್ಕೊಂಬತ್ತು ಮನೆಗಳು ಪುಟ್ಟುವವು. ಇದರ ಮಂತ್ರನ್ಯಾಸಕ್ರಮಃ ಗೋಳಕದ ಮನೆಯಲ್ಲಿ ನ್ಯಾಸವಾದ "ಹ"ಕಾರವೇ- ನಿರಂಜನ-ತತ್ವ, ಅದರ ಕೆಳಗಣ ಮನೆಯ ನಾಳದಲ್ಲಿ ನ್ಯಾಸವಾದ "ಕ್ಷ"ಕಾರವೇ- ಶೂನ್ಯ ತತ್ವ, ಅದರ ಕೆಳಗಣ ಮೂರು ಮನೆಗಳೇ ವರ್ತುಳ, ಅಲ್ಲಿ ನ್ಯಾಸವಾದ "ಬಸವಾ"ಕ್ಷರವೇ ನಿಷ್ಕಲ ತತ್ವ, ಅದರ ದಕ್ಷಿಣದ ಮನೆಯಲ್ಲಿ ನ್ಯಾಸವಾದ "ಮ"ಕಾರವೇ- ಸದಾಶಿವತತ್ವ. ಅದರ ಕೆಳಗಣ ಮೂರು ಮನೆಗಳೇ ವರ್ತುಳ ದಂಡ. ಅಲ್ಲಿ ನ್ಯಾಸವಾದ "ಯ"ಕಾರ-ಓಂಕಾರ ಮಕಾರಂಗಳೆ ಮಹಾಸಾದಾಖ್ಯ, ಶಿವಸಾದಾಖ್ಯ, ಅಮೂರ್ತ ಸಾದಾಖ್ಯ. ಅದರ ಕೆಳಗಣ ಮನೆಯ ಮಧ್ಯ ಅಲ್ಲಿ ನ್ಯಾಸವಾದ "ಅ"ಕಾರವೇ-ರುದ್ರತತ್ವ. ಇಂತಿವು ಊರ್ಧ್ವ ಮುಖನ್ಯಾಸ ಶಿವಬೀಜಂಗಳೆಂದರಿವುದು. ಅದರ ಕೆಳಗಣ ಮನೆಯಲ್ಲಿ ನ್ಯಾಸವಾದ "ಶಿ"ಕಾರವೇ-ಇಚ್ಛಾಶಕ್ತಿ, ಅದರ ಕೆಳಗಣ ಮೂರು ಮನೆಗಳೇ-ಖಂಡಿಕಾದಂಡ, ಅಲ್ಲಿ ನ್ಯಾಸವಾಗಿರ್ಪ "ನ"ಕಾರ, "ಓಂ"ಕಾರ, "ಮ"ಕಾರವೇ- ಕ್ರಿಯಾಶಕ್ತಿ, ಚಿಚ್ಛಕ್ತಿ, ಜ್ಞಾನಶಕ್ತಿ. ಅದರ ಕೆಳಗಣ ಮನೆಗಳೇ ಶಕ್ತಿ ಪೀಠ, ಅಲ್ಲಿ ನ್ಯಾಸವಾದ ನ. ಮಃ. ಶಿ. ವಾ.

ಯ ಎಂಬ ಪಂಚಾಕ್ಷರಂಗಳೇ-ಪಂಚಶಕ್ತಿ, ಇಂತಿವು ಅಧೋಮುಖನ್ಯಾಸ ಶಕ್ತಿ ಬೀಜಂಗಳೆಂದರಿವುದು.[೪೨] ಈ ಶೂನ್ಯ ಲಿಂಗೋದ್ಧರಣಿಯ ಕುರಿತು ಹೆಚ್ಚಿನ ವಿವರವನ್ನು ಅನುಬಂಧದಲ್ಲಿ ನೋಡಬಹುದಾಗಿದೆ.

*** ಉದ್ಧರಣಿ ಸಾಹಿತ್ಯದಲ್ಲಿಯ ಚಿತ್ರ : ೬.೧:**

೧ x ೧ ಅಡಿ ಅಳತೆಯ ಕಾಗದದ ಮೇಲೆ ಜಲವರ್ಣದಿಂದ "ಶೂನ್ಯ ಲಿಂಗೋದ್ಧರಣಿ"ಯ ಚಿತ್ರವನ್ನು ಚಿತ್ರಿಸಲಾಗಿದೆ. ಹಾಳೆಯ ಮಧ್ಯದಲ್ಲಿ ೬" x ೮" ಇಂಚುಗಳುಳ್ಳ ಆಯತವನ್ನು ರಚಿಸಿಕೊಂಡು ಅದರ ಮಧ್ಯದಲ್ಲಿ ಎತ್ತರಕ್ಕೆ ೧" x ೧" ಇಂಚಿನ ಎಂಟು ಮನೆಗಳನ್ನು ಮಾಡಿಕೊಂಡು ಅದರ ಮೇಲ್ಗಡೆ ಅರ್ಧಗೋಲಾಕಾರವನ್ನು ಮಾಡಿಕೊಳ್ಳಲಾಗಿದೆ. ಮೇಲಿನಿಂದ ಎರಡು ಮನೆಗಳ ಕೆಳಗಡೆ ಎಡಬಲಗಳಲ್ಲಿ ಎರಡೆರಡು ಮನೆಗಳನ್ನು ಮಾಡಿಕೊಂಡು ಅದರ ಕೆಳಗಡೆ ಎಡಬಲಗಳಲ್ಲಿ ಒಂದೊಂದು ಮನೆಯನ್ನು ಮಾಡಿಕೊಂಡಿದ್ದು ಅದರಿಂದ ಮತ್ತೆ ಎರಡು ಮನೆಗಳ ಕೆಳಗಡೆಯ ಎಡಬಲಗಳಲ್ಲಿ ಒಂದೊಂದು ಮನೆಯನ್ನು ಮಾಡಿಕೊಂಡು ಅದರ ಕೆಳಗಡೆಯ ಎಡಬಲಗಳಲ್ಲಿ ಎರಡೆರಡು ಮನೆಗಳನ್ನು ಮಾಡಿಕೊಳ್ಳಲಾಗಿದೆ. ಹೀಗೆ ರಚನೆಗೊಂಡ ಶೂನ್ಯಲಿಂಗವನ್ನು ಹಳದಿ ವರ್ಣದಿಂದ ಚಿತ್ರಿಸಲಾಗಿದೆ. ಮೇಲ್ಗಡೆಯ ಅರ್ಧಗೋಲಾಕಾರವನ್ನು ಕೆಂಪುವರ್ಣದಿಂದ ಚಿತ್ರಿಸಲಾಗಿದೆ. ಈ ಶೂನ್ಯಲಿಂಗದ ಬಲಬದಿಯಲ್ಲಿ ಮೇಲ್ಗಡೆ ಕೆಂಪುವರ್ಣದ ವೃತ್ತವನ್ನು ಸೂರ್ಯನನ್ನಾಗಿಯೂ ಚಿತ್ರಿಸಿದ್ದು ಅದರ ಕೆಳಗಡೆ ೧೨ ದಳಗಳುಳ್ಳ ಚಕ್ರವನ್ನು ರಚಿಸಿದ್ದು ಅದರಲ್ಲಿ ೬ ದಳಗಳು ಕೆಂಪುವರ್ಣದಲ್ಲಿದ್ದು, ೬ ದಳಗಳನ್ನು ಹಳದಿ ವರ್ಣದಲ್ಲಿ ಚಿತ್ರಿಸಲಾಗಿದೆ. ಲಿಂಗುವಿನ ಮಧ್ಯ ಭಾಗದಲ್ಲಿ ೧೨ ದಳಗಳುಳ್ಳ ಕೆಂಪು ವರ್ಣದ ಚಿಕ್ಕದಾದ ಚಿತ್ರವಿದೆ. ಮತ್ತೆ ಲಿಂಗುವಿನ ಕೆಳಭಾಗದಲ್ಲಿ ದೊಡ್ಡದಾದ ೧೨ ದಳಗಳ ಚಿತ್ರವಿದ್ದು, ಅದರಲ್ಲಿ ೬ ಕೆಂಪು ವರ್ಣದ ದಳದ ಚಿತ್ರವಿದ್ದು ೬ ಹಳದಿ ವರ್ಣದ ದಳದ ಚಿತ್ರಗಳಿವೆ. ಈ ಲಿಂಗುವಿನ ಎಡಬದಿಯಲ್ಲಿ ಮೇಲ್ಗಡೆ ಅರ್ಧಚಂದ್ರನನ್ನು ಹಳದಿ ವರ್ಣದಲ್ಲಿ ಚಿತ್ರಿಸಲಾಗಿದ್ದು ಕೆಳಗಡೆಯಲ್ಲಿ ಬಲಗಡೆಯಲ್ಲಿರುವಂತೆ ಮೇಲೆ ಮತ್ತು ಕೆಳಗೆ ದೊಡ್ಡದಾದ ೧೨ ದಳದ ಚಕ್ರಗಳು ಮಧ್ಯದಲ್ಲಿ ಚಿಕ್ಕದಾದ ೧೨ ದಳದ ಚಕ್ರವನ್ನು ಚಿತ್ರಿಸಲಾಗಿದೆ. ಮೇಲೆ ಹೇಳಿದಂತೆ ದಳಗಳಲ್ಲಿ ಅಕ್ಷರಗಳನ್ನು ನ್ಯಾಸ ಮಾಡಲಾಗಿದೆ. ಈ ಕಲಾಕೃತಿಯು ಆಕಾರ ಗಾತ್ರ ಪ್ರಮಾಣಗಳೊಂದಿಗೆ ತಾತ್ವಿಕವಾಗಿಯೂ ಉತ್ತಮವಾಗಿದೆ.

*** ಕ. ವಿ. ವಿ. ಹಂಪೆಯ ಕಾಗದದ ಪ್ರತಿ: ಚಿತ್ರ ೬.೨:**

ಈ ಕಲಾಕೃತಿಯನ್ನು ೧' x ೧' ಅಡಿ ಅಳತೆಯ ಕಾಗದದ ಮೇಲೆ ಜಲವರ್ಣ ಮಿಶ್ರಮಾದ್ಯಮದಲ್ಲಿ ರಚಿಸಲಾಗಿದೆ. ಶೂನ್ಯ ಲಿಂಗೋದ್ಧರಣಿ ಚಿತ್ರವನ್ನು ವಿಭಿನ್ನವಾಗಿ ಸಂಯೋಜನೆ ಮಾಡಿದ್ದು ಆಯತಾಕಾರದ ಮಧ್ಯದಲ್ಲಿ ಗುಡಿಯ ಚಿತ್ರವನ್ನು ಮಾಡಿ ಅದರ ಎರಡು ಬದಿಗಳು ಹಾಗೂ ಮೇಲಿನ ಗುಮ್ಮಟ ಭಾಗವೂ ಕಾಣುವಂತೆ ಚಿತ್ರಿಸಿದ್ದು ಒಂದು ಬದಿಯಲ್ಲಿ ಗುಡಿಯ ಕಮಾನನ್ನು ಮಾಡಿ ಅದರ ಮಧ್ಯದಲ್ಲಿ ಶೂನ್ಯ ಲಿಂಗವನ್ನು

೪೨. ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು: ಶಿವಾನುಭವಶಾಸ್ತ್ರ : ಪುಟ ೧೭.

ಮೇಲೆ ಹೇಳಿದಂತೆ ರಚಿಸಿದ್ದು ಬಿಳಿಯದಾದ ಮನೆಗಳ ಹೊರರೇಖೆಗಳು ಕಂದು ಗೆಂಪಾಗಿದ್ದು ಒಳಗಡೆ ಅಕ್ಷರನ್ಯಾಸ ಮಾಡಲಾಗಿದೆ. ಈ ಲಿಂಗದ ಎಡಬಲಗಳಲ್ಲಿ ಕಮಾನಿನ ಮೇಲಿಂದ ನಕ್ಷತ್ರ ಆಕಾರದ ಹೂವುಗಳನ್ನು ಸಾಲು ಸಾಲಾಗಿ ಕೆಳಗಡೆ ಬಿಡಲಾಗಿದೆ. ಲಿಂಗದ ಮೇಲ್ಭಾಗದಲ್ಲಿ ಕಮಾನಿನ ಒಳಭಾಗ ತಿಳಿನೀಲಿಯನ್ನು ತುಂಬಲಾಗಿದ್ದು ಅದರಲ್ಲೂ ಹೂವುಗಳ ಸರಗಳನ್ನು ಲಿಂಗದ ಮೇಲಿಂದ ಎಡಬಲಭಾಗಗಳಲ್ಲಿ ಇಳಿಬಿಡಲಾಗಿದೆ. ಕೆಳಗಿನ ಭಾಗ ಲಿಂಗದ ಹಿಂದುಗಡೆ ಜಾಂಬಳಿವರ್ಣವನ್ನು ತುಂಬಲಾಗಿದೆ. ಅದರ ಬದಿಯ ಕಮಾನಿನ ಮಧ್ಯದಲ್ಲಿ ನಂದಿಯು ಕುಳಿತುಕೊಂಡಿದ್ದು ಕಮಾನಿನ ಮೇಲಿನಿಂದ ಎಲೆಗಳ ಬಳ್ಳಿಯನ್ನು ಕೆಳಗೆ ಇಳಿಬಿಡಲಾಗಿದೆ. ಲಿಂಗ ಮತ್ತು ನಂದಿಯನ್ನು ಕಟ್ಟೆಯ ಮೇಲೆ ಇರುವಂತೆ ಚಿತ್ರಿಸಲಾಗಿದೆ. ಈ ಗುಡಿಯ ತುದಿಯ ಅಂಚಿನ ಎಡಬಲಗಳಲ್ಲಿ ಹಸಿರುವರ್ಣದ ಗಿಳಿಗಳು ಕುಳಿತಿವೆ. ಈ ಗುಡಿಯ ಬಲಭಾಗದಲ್ಲಿ ಮೇಲ್ಗಡೆ ಒಂದು ವೃತ್ತವನ್ನು ರಚಿಸಿ ಅದರಲ್ಲಿ ದಳಗಳನ್ನು ಮಾಡಿದ್ದು ಅಷ್ಟೊಂದು ಸ್ಪಷ್ಟವಾಗಿ ಕಾಣುತ್ತಿಲ್ಲ. ಕೆಳಗಡೆ ಎಡಬಲಗಳಲ್ಲಿ ಹೂವಿನ ಕುಂಡಲಗಳನ್ನು ಚಿತ್ರಿಸಲಾಗಿದೆ. ಈ ಕಲಾಕೃತಿಯಲ್ಲಿ ಪಾರದರ್ಶಕ ವರ್ಣಗಳ ಬಳಕೆಯನ್ನು ಮಾಡಿದ್ದು ಅದರ ಮೇಲೆ ಡ್ರಾಯಿಂಗ್ ಮಾಡಲಾಗಿದೆ. ಇದೊಂದು ಮಿಶ್ರಮಾಧ್ಯಮದ ಸಂಯೋಜನೆಯೊಂದಿಗೆ ವಿಶಿಷ್ಟವಾಗಿ ಮೂಡಿ ಬಂದಿದೆ.

*** ಕ.ವಿ.ವಿ. ಹಂಪೆಯ "ತಾಳೆಓಲೆಗರಿ ಚಿತ್ರ" : ೬.೩:**

ಈ ತಾಳೆಓಲೆಗರಿ ಚಿತ್ರವು ಸುಂದರವಾಗಿ ಮೂಡಿ ಬಂದಿದೆ. ಈ ಎರಡು ಓಲೆಗರಿಗಳ ಮೇಲೆ ರಚಿಸಿದ ಶೂನ್ಯ ಲಿಂಗೋದ್ಧರಣಿ ಚಿತ್ರವು ಕಪ್ಪುವರ್ಣದ ರೇಖಾಚಿತ್ರವಾಗಿದೆ. ಇಲ್ಲಿ ದೇವಾಲಯದ ಗರ್ಭಗುಡಿಯ ಅಲಂಕಾರಿಕ ನಕ್ಷೆಯ ಬಾಗಿಲಿನ ಮಧ್ಯದಲ್ಲಿ ಪೀಠವೊಂದರ ಮೇಲೆ ಸ್ಥಾಪನೆಗೊಂಡ ಶೂನ್ಯಲಿಂಗವನ್ನು ಮೇಲೆ ತಿಳಿಸಿದಂತೆ ರಚಿಸಿ ಅಕ್ಷರಗಳನ್ನು ಆಯಾ ಮನೆಗಳಲ್ಲಿ ನ್ಯಾಸ ಮಾಡಿರುವರು. ಈ ಲಿಂಗದ ಮೇಲ್ಭಾಗ ಮತ್ತು ಕೆಳಭಾಗದ ಎಡಬಲಗಳಲ್ಲಿ ಪುಷ್ಪಗುಚ್ಛವನ್ನು ಮಾಡಲಾಗಿದೆ. ಈ ದೇವಾಲಯದ ಬಾಗಿಲುಗಳ ಎಡಬಲಗಳಲ್ಲಿ ಮೇಲೆ ಮತ್ತು ಕೆಳಗೆ ಪಟ್ಟಿಕೆಗಳನ್ನು ಮಾಡಿಕೊಂಡು ಚಿತ್ರಿಸಲಾಗಿದೆ. ಬಾಗಿಲದಿಂದ ಮೊದಲಿನ ಪಟ್ಟಿಕೆ (ಕಮಾನಿ)ಯಲ್ಲಿ ಮುನಿಯೊಬ್ಬ ಒಂದು ಕಾಲನ್ನು ಮೇಲೆತ್ತಿಕೊಂಡು ಒಂದೇ ಕಾಲಿನ ಮೇಲೆ ನಿಂತುಕೊಂಡಿದ್ದು ಒಂದು ಕೈ ಮುಂದೆ ಮಾಡಿ ಏನನ್ನೊ ನೋಡುತ್ತ ನಿಂತಿರುವಂತಿದೆ. ಅದರ ಹಿಂದಿನ ಪಟ್ಟಿಕೆಯಲ್ಲಿ ಮಂಡೆಗಾಲೂರಿ ಕುಳಿತಿರುವಂತೆ ಚಿತ್ರಿಸಲಾಗಿದೆ. ಅಲಂಕಾರಿಕ ಅಂಚುಗಳಿಂದಾಗಿ ಈ ಚಿತ್ರಗಳು ಸುಂದರವಾಗಿ ಮೂಡಿ ಬಂದಿವೆ.

*** ಗು.ವಿ.ವಿ. ಗುಲಬರ್ಗಾದಲ್ಲಿ ದೊರೆತ ಚಿತ್ರ : ೬.೪:**

ಈ ಕಲಾಕೃತಿಯನ್ನು ೧' x ೧' ಅಡಿಯ ಅಳತೆಯಲ್ಲಿ ಜಲವರ್ಣದಲ್ಲಿ ರಚಿಸಲಾಗಿದೆ. ಆಯತಾಕಾರದ ಮಧ್ಯದಲ್ಲಿ ಈ ಶೂನ್ಯ ಲಿಂಗವನ್ನು ಹಿಂದೆ ತಿಳಿಸಿದಂತೆ ಚಿತ್ರಿಸಲಾಗಿದೆ. ಇಲ್ಲಿ ಕಲಾವಿದನಿಗೆ ರೇಖೆಯ ಮೇಲೆ

ಆಗಲಿ, ವರ್ಣಗಳ ಮೇಲೆ ಆಗಲಿ ಅಂತಹ ಹಿಡಿತವಿದ್ದಂತೆ ಕಂಡುಬರುವುದಿಲ್ಲ. ಈ ಶೂನ್ಯಲಿಂಗವನ್ನು ಹಳದಿವರ್ಣದಲ್ಲಿ ರಚಿಸಿದ್ದು ಮೇಲಿನ ಅರ್ಧಗೋಲಾಕೃತಿಯ ಭಾಗವನ್ನು ಕಪ್ಪುವರ್ಣದಿಂದ ತುಂಬಲಾಗಿದೆ. ಹಿನ್ನೆಲೆಯಾಗಿ ಪಾರದರ್ಶಕ ಕಂದುಗೆಂಪು ವರ್ಣವನ್ನು ಬಳಸಲಾಗಿದೆ. ಎರಡೂ ಬದಿಗೆ ಅಂಚುಗಳಿದ್ದು ಅದರಲ್ಲಿಯ ನಕ್ಷೆಗಳೂ ಅಷ್ಟಕ್ಕಷ್ಟೆ. ಆದರೆ ಒಟ್ಟಾರೆ ಆಕಾರ ಮಾತ್ರ ಶೂನ್ಯಲಿಂಗವನ್ನು ಹೋಲುತ್ತಿದ್ದು ಅಕ್ಷರವಿನ್ಯಾಸವನ್ನು ಮೇಲಿನಂತೆ ಮಾಡಲಾಗಿದೆ.

*** ಧರ್ಮಸ್ಥಳದಲ್ಲಿ ದೊರೆತ ಚಿತ್ರ: ೬.೫:**

ಈ ಕಲಾಕೃತಿಯನ್ನು ೧ x ೧ ಅಡಿ ಅಳತೆಯ ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ಚಿತ್ರದ ಹಿನ್ನೆಲೆಯನ್ನು ಕೆಂಪು ವರ್ಣದಿಂದ ತುಂಬಲಾಗಿದ್ದು ಅಲಂಕಾರಿಕ ರಥದ ಮಧ್ಯದ ಕಮಾನಿನ ಮಧ್ಯದಲ್ಲಿ ಶೂನ್ಯ ಲಿಂಗವನ್ನು ಮೇಲೆ ತಿಳಿಸಿದಂತೆ ಹಳದಿ ವರ್ಣದಲ್ಲಿ ಚಿತ್ರಿಸಲಾಗಿದ್ದು ಕೆಂಪು ಕಪ್ಪು ವರ್ಣದಿಂದ ಶೂನ್ಯ ಲಿಂಗದ ಮನೆಗಳನ್ನು ರೇಖೆಗಳಿಂದ ಮಾಡಲಾಗಿದ್ದು ಲಿಂಗದ ಕೆಳಗಡೆ ಪೀಠವನ್ನು ಮಾಡಿದ್ದು ಲಿಂಗದ ಮನೆಗಳಲ್ಲಿ ಅಕ್ಷರ ನ್ಯಾಸ ಮಾಡಲಾಗಿದೆ. ಕಮಾನಿನ ಮಧ್ಯ ಭಾಗದಿಂದ ಸೇವಂತಿಗೆ ಹೂವಿನ ಮಾಲೆಯು ಕೆಳಮುಖವಾಗಿ ಬಂದು ಲಿಂಗದ ಎಡಬಲಗಳಲ್ಲಿ ಇಳಿಬಿದ್ದಿದ್ದು ಲಿಂಗದ ಮಧ್ಯದ ಎಡಬಲಗಳಲ್ಲಿ ದೊಡ್ಡದಾದ ಹೂವು ಮತ್ತು ಎಲೆಗಳನ್ನು ತೋರಿಸಲಾಗಿದೆ. ಈ ಶೂನ್ಯ ಲಿಂಗದ ಎಡಬಲಗಳಲ್ಲಿ ಅಲಂಕಾರಿಕವಾದ ಕಂಬಗಳನ್ನು ತೋರಿಸಲಾಗಿದೆ.

*** ಬೆಂ. ವಿ. ವಿ. ಬೆಂಗಳೂರಿನಲ್ಲಿ ದೊರೆತ ಚಿತ್ರ: ೬.೬:**

ಈ ಕಲಾಕೃತಿಯನ್ನು ೧ x ೧ ಅಡಿ ಅಳತೆಯ ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ಆದರೆ ಈ ಅಳತೆಯಲ್ಲಿ ಮೂರು ಚಿತ್ರಗಳನ್ನು ತೋರಿಸುವುದರಿಂದ ಈ ಶೂನ್ಯ ಲಿಂಗೋದ್ಧರಣೆಯನ್ನು ಚಿಕ್ಕದಾಗಿ ಚಿತ್ರಿಸಲಾಗಿದೆ. ಕೆಂಪು ವರ್ಣದ ಪಟ್ಟಿಯ ಅಂಚನ್ನು ಹೊಂದಿದ್ದು ಹಿನ್ನೆಲೆಯಲ್ಲಿ ಹಸಿರು ವರ್ಣವನ್ನು ಬಳಿಯಲಾಗಿದೆ. ಮೊದಲು ತಿಳಿಸಿದಂತೆ ಇಲ್ಲಿಯೂ ಶೂನ್ಯ ಲಿಂಗೋದ್ಧರಣೆಯನ್ನು ಚಿತ್ರಿಸಲಾಗಿದೆ. ನೀಲಿವರ್ಣವನ್ನು ತುಂಬಿದ್ದು ಕಪ್ಪು ವರ್ಣದಿಂದ ಮನೆಗಳನ್ನು ಗುರುತಿಸಲಾಗಿದೆ. ಹಾಗೂ ಅಕ್ಷರನ್ಯಾಸವನ್ನು ಮಾಡಲಾಗಿದೆ. ಈ ಶೂನ್ಯ ಲಿಂಗಕ್ಕೆ ಮೇಲ್ಗಡೆ ಅರ್ಧ ಗೋಲವನ್ನು ಮಾಡಿಲ್ಲದಿರುವುದು ತಿಳಿದು ಬರುತ್ತದೆ.

*** ಕ.ವಿ.ವಿ. ಧಾರವಾಡದಲ್ಲಿ ದೊರೆತ ಚಿತ್ರ : ೬.೭:**

ಈ ಕಲಾಕೃತಿಯನ್ನು ೧' x ೧' ಅಡಿ ಅಳತೆಯ ಕಾಗದದ ಮೇಲೆ ಜಲವರ್ಣದಲ್ಲಿ ಚಿತ್ರಿಸಲಾಗಿದೆ. ಆಯತಾಕಾರದಲ್ಲಿ ಆಯತ ಮತ್ತು ಚೌರಸದ ಮಾಡುಗಳನ್ನು ರಚಿಸಿಕೊಂಡಿದ್ದು ಹಾಳೆಯ ಮಧ್ಯದಲ್ಲಿ ಚೌರಸಾಕಾರದ ಮಾಡನ್ನು ರಚಿಸಿ ಅದರ ಮಧ್ಯದಲ್ಲಿ ಶೂನ್ಯಲಿಂಗೋದ್ಧರಣೆಯನ್ನು ಈ ಹಿಂದೆ ಹೇಳಿದಂತೆ ಚಿತ್ರಿಸಿದ್ದು ಪೀಠವನ್ನು ಹಳದಿ ವರ್ಣದಲ್ಲಿ ಚೌಕಳಿ ನಕ್ಷೆಯನ್ನು ಅಲಂಕಾರಿಕವಾಗಿ ಮಾಡಲಾಗಿದ್ದು ಅದರ

ಮೇಲೆ ಶೂನ್ಯಲಿಂಗವನ್ನು, ಕೆಳಗಿನ ಐದು ಮನೆಗಳನ್ನು ಹಾಗೂ ಮೇಲಿನ ಐದು ಮನೆಗಳನ್ನು ಹಾಗೂ ಲಿಂಗದ ಮಧ್ಯದ ಒಂದು ಮನೆಯನ್ನು ಕೆಂಪು ವರ್ಣದಿಂದ ತುಂಬಿದ್ದು, ಕೆಳಗಿನಿಂದ ಮೇಲಿನ ಎರಡು ಮನೆಗಳನ್ನು ಹಳದಿವರ್ಣದಿಂದ ಚಿತ್ರಿಸಲಾಗಿದೆ. ಈ ಮಾಡಿನ ಒಳಗಡೆ ತಿಳಿ ನೀಲಿವರ್ಣವನ್ನು ತುಂಬಲಾಗಿದ್ದು ಲಿಂಗದ ಮೇಲ್ಭಾಗದ ಮತ್ತು ಮಧ್ಯಭಾಗದ ಎಡಬಲಭಾಗಗಳಲ್ಲಿ ಅಲಂಕಾರಿಕ ಹೂವುಗಳನ್ನು ರಚಿಸಲಾಗಿದೆ. ಈ ಮಾಡಿನ ಕಮಾನಿನ ಮೇಲ್ಭಾಗಕ್ಕೆ ಹಸಿರು ನೀಲಿವರ್ಣವನ್ನು ತುಂಬಿದ್ದು ಹಳದಿ ಕೆಂಪುವರ್ಣದ ನಕ್ಷೆಯನ್ನು ಮಾಡಲಾಗಿದೆ. ಈ ಮಾಡಿನ ಎಡಬಲಗಳಲ್ಲಿ ಆಯತಾಕಾರವಾಗಿ ಉದ್ದವಾದ ಮಾಡುಗಳನ್ನು ಮಾಡಿ ಹಿನ್ನೆಲೆಯಲ್ಲಿ ಕೆಂಪುವರ್ಣವನ್ನು ತುಂಬಲಾಗಿದೆ. ಮೇಲ್ಗಡೆ ಹಳದಿವರ್ಣದ ಕಮಾನನ್ನು ಮಾಡಲಾಗಿದೆ. ಈ ಚಿತ್ರದ ಅಂಚಿನಲ್ಲಿ ನೀಲಿವರ್ಣದ ನಕ್ಷೆಯಲ್ಲಿ ಬಿಳಿ ಹೂಗಳನ್ನು ಚಿತ್ರಿಸಲಾಗಿದೆ. ಈ ಎಲ್ಲ ಶೂನ್ಯ ಲಿಂಗೋದ್ಧರಣೆಗಳು ಆಕಾರ ಗಾತ್ರ ಪ್ರಮಾಣ ವರ್ಣಗಾರಿಕೆಯ ದೃಷ್ಟಿಯಿಂದ ಉತ್ತಮ ಕಲಾಕೃತಿಯಾಗಿದೆ.

## ೭. ಚಿದಂಬರೋದ್ಧರಣೆ

**ವಾಚ್ಯ ವಸ್ತು ವಿಷಯ:**

ಅನಾದಿ ಭಕ್ತನ ಹೃತ್ಕಮಲಕರ್ಣಿಕಾ ಪೀಠದಲ್ಲಿ ಸ್ವತಸಿದ್ಧವಾಗಿರ್ಪರ ನಿರಂಜನ ಜಂಗಮದ ಮಕುಟದಿಂ ಜನಿಸಿದ ಶೂನ್ಯ ಲಿಂಗದಿಂದಾದ ಚಿದಂಬರವನುದ್ಧರಿಸುವ ಕ್ರಮವೆಂತೆಂದೊಡೆ: ನವರಂಗ ಚೌಕದೋಪಾದಿಯಲ್ಲಿ ಲಕ್ಷಿಸಿ ಪೂರ್ವಾಪರೋತ್ತರ ದಕ್ಷಿಣಕ್ಕೆ ದ್ವಾದಶ ರೇಖೆಗಳಂ ಅದರ ತುದಿಯಲ್ಲಿ ತ್ರಿಶೂಲಂಗಳಂ ಆ ಅಗ್ರದಲ್ಲಿ ಶ್ರಿಕಾರಂಗಳಂ ಮದ್ಯ ಚೌಕದಲ್ಲಿ ವೃತ್ತದ್ವಯಂಗಳಂ ಬರೆಯಲು ಯಂತ್ರನ್ಯಾಸ ಮುಗಿಯಿತು. ವರ್ಣೋದಯನ್ಯಾಸಕ್ರಮಃ ದಿವ್ಯನಾದ ನಿರಾವರಣ ಬಿಂದು, ನಿರೂಪಮಕಲೆ, ಈ ತ್ರಿವಿಧಸ್ವರೂಪವು ಕಲೆಸಿ ಅವಾಗ್ಜ ಪ್ರಣವವಾಯಿತು. ಆ ಪ್ರಣವನಾದ ಚೈತನ್ಯವೇ "ಬ"ಕಾರವಾಯಿತು. ಆ ಬಕಾರ ಚಿನ್ನಾದವೇ– "ಅ"ಕಾರ, ಚಿದ್ಬಿಂದುವೇ– "ಉ"ಕಾರ, ಚಿತ್ಕಳೆಯೇ– "ಮ"ಕಾರ, ಈ ತ್ರಿವಿಧವೇಕವಾಗಿ "ಓಂಕಾರವಾಯಿತು". ಆ ಓಂಕಾರದ ಪಂಚಾಕೃತಿಗಳಿಂದುದಯವಾದ ಪಂಚಾಕ್ಷರವೇ ಲೋಮವಿಲೋಮದಿಂ, ಸಕೀಲ ಸಂಬಂಧದಿಂ, ಅವಾಗ್ಜಂಗೂಡಿ ನೂರ ಮೂವತ್ತಾರು ವರ್ಣಂಗಳಾದವು ಇದರೊಳು "ಹ"ಕಾರವನೇ ಮಧ್ಯ ವೃತ್ತದಲ್ಲಿ (೧) ನ, ಮ: ಶಿ, ವಾ, ಯ (೨) ಯ, ವ, ಶಿ, ಮ: ನ (೩) ಶಿ, ವಾ, ಯ, ನ, ಮಃ ಎಂಬ ಪಂಚವರ್ಣಂಗಳಂ, ಮೇಲಣ ವೃತ್ತದಲ್ಲಿ ಪೂರ್ವದಿಕ್ಕು ಒಳಗೊಂಡು ಬಲಪ್ರದಕ್ಷಿಣವಾಗಿ ಬರೆದು ಬಳಿಕ "ಅಗ್ನಿ ದಿಕ್ಕಿನ ಮನೆಗಳಿಪ್ಪತ್ತೈದ"ರಲ್ಲಿ (೧) ನ, ಮ: ಶಿ, ವಾ, ಯ (೨) ವಾ, ಯ, ನ, ಮ: ಶಿ (೩) ಮ: ಶಿ, ವಾ, ಯ, ನ, (೪) ಯ, ನ, ಮ: ಶಿ, ವಾ (೫) ಶಿವಾಯನಮಃ ಎಂಬ ಪಂಚ ವಿಂಶತಿ ವರ್ಣಂಗಳಂ, "ಯಮ ದಿಕ್ಕಿನ ಮನೆಗಳೈದ"ರಲ್ಲಿ ಹ್ರಿಂ, ಶ್ರಿಂ, ಕ್ಷುಂ, ಸೌಂ, ಕ್ಲಿಂ, ಎಂಬ ಪಂಚವರ್ಣಂಗಳಂ, "ನೈಋತ್ಯ ದಿಕ್ಕಿನ ಮನೆಗಳಿಪ್ಪತ್ತೈದ"ರಲ್ಲಿ (೧) ಯ, ವಾ, ಶಿ, ಮ: ನ (೨) ಶಿ, ಮ: ನ, ಯ, ವಾ (೩) ನ, ಯ, ವಾ, ಶಿ, ಮ: (೪) ವಾ, ಶಿ, ಮ: ನ, ಯ (೫) ಮ: ನ, ಯ, ವಾ, ಶಿ ಎಂಬ ಪಂಚವಿಂಶತಿ ವರ್ಣಂಗಳಂ, "ವರುಣದಿಕ್ಕಿನ ಮನೆಗಳೈದ"ರಲ್ಲಿ

[illegible]

ಕ್ಲಿಂ, ಸೌಂ, ಓಂ, ಹ್ರೀಂ, ಕ್ಷುಂ ಎಂಬ ಪಂಚವರ್ಣಂಗಳಂ "ವಾಯವ್ಯ ದಿಕ್ಕಿನ ಮನೆಗಳಿಪ್ಪತ್ತೈದ"ರಲ್ಲಿ – (೧) ನ, ವಾ, ಮ: ಯ, ಶಿ (೨) ಮ: ಯ, ಶಿ, ನ, ವಾ (೩) ಶಿ, ನ, ವಾ, ಮ: ಯ (೪) ವಾ, ಮ: ಯ, ಶಿ, ನ (೫) ಯ, ಶಿ, ನ, ವಾ, ಮ: ಎಂಬ ಪಂಚವಿಂಶತಿ ವರ್ಣಂಗಳಂ, "ಕುಬೇರ ದಿಕ್ಕಿನ ಮನೆಗಳೈದ"ರಲ್ಲಿ ಓಂ, ಹ್ರೀಂ, ಕ್ಷುಂ, ಕ್ಲೀಂ, ಸೌಂ ಎಂಬ ಪಂಚವರ್ಣಂಗಳಂ, "ಈಶಾನ್ಯ ದಿಕ್ಕಿನ ಮನೆಳಿಪ್ಪತ್ತೈದ"ರಲ್ಲಿ (೧) ಶಿ, ಯ, ಮ: ವಾ, ನ (೨) ವಾ, ನ, ಶಿ, ಯ, ಮ: (೩) ಯ, ಮ: ವಾ, ನ, ಶಿ, (೪) ನ, ಶಿ, ಯ, ಮ: ವಾ (೫) ಮ" ವಾ, ನ, ಶಿ, ಯ ಎಂಬ ಪಂಚ ವಿಂಶತಿ ವರ್ಣಂಗಳಂ, "ಇಂದ್ರ ದಿಕ್ಕಿನ ಮನೆಗಳೈದ"ರಲ್ಲಿ ಕ್ಷುಂ, ಕ್ಲಿಂ, ಸೌಂ, ಶ್ರೀಂ, ಹ್ರಿಂ ಎಂಬ ಪಂಚ ವರ್ಣಂಗಳಂ ಬರೆಯಲು ವರ್ಣವಿನ್ಯಾಸ ಮುಗಿಯಿತು. ಇನ್ನು ತತ್ವಸಂಬಂಧಃ ಪಂಚ ಶಕ್ತಿ, ಪಂಚಕಲೆ, ಪಂಚಸಾದಾಖ್ಯ, ಪಂಚಮುಖ, ಪಂಚಮೂರ್ತಿ, ಈ ಇಪ್ಪತ್ತೈದು ಅಗ್ನಿ ದಿಕ್ಕಿನ ಮನೆಗಳ ವರ್ಣಸ್ವರೂಪ–ಮಹೇಶ್ವರನ ನಿರ್ಗುಣಮೂರ್ತಿ ಇಪ್ಪತ್ತೈದು ನೈಋತ್ಯ ದಿಕ್ಕಿನ ಮನೆಗಳ ವರ್ಣಸ್ವರೂಪ– ಪಂಚನಾದ ಈಶ್ವರಾಷ್ಟಕರುದ್ರರೇಕಾದಶ, ನಿಜಾತ್ಮ ತತ್ವ ಈ ಇಪ್ಪತ್ತೈದು ನೈಋತ್ಯ ದಿಕ್ಕಿನ ಮನೆಗಳ ವರ್ಣಸ್ವರೂಪವು – ಆತ್ಮ ತತ್ವವಿಪ್ಪತ್ತೈದು, ಈಶಾನ್ಯ ದಿಕ್ಕಿನ ಮನೆಗಳ ವರ್ಣಸ್ವರೂಪವು–ತ್ರಿತತ್ವ ಸಂಬಂಧವಾದ ಮೂವತ್ತಾರು ತತ್ವಂಗಳು ಮಧ್ಯ ವೃತ್ತದ ಹಕಾರವಾದಿಯಾಗಿ ಮೇಲಣ ವೃತ್ತದ ನಕಾರವ ಬಳಿಗೊಂಡು ಇಂದ್ರ ದಿಕ್ಕು ಮೊದಲಾದ ನಾಲ್ಕು ದಿಕ್ಕಿನ ಮನೆಗಳ ವರ್ಣ ಸ್ವರೂಪವೆಂದರಿವುದು.[೪೩] ಈ ಚಿದಂಬರೋದ್ಧರಣಿಯ ಕುರಿತು ಹೆಚ್ಚಿನ ವಿವರವನ್ನು ಅನುಬಂಧದಲ್ಲಿ ನೋಡಬಹುದಾಗಿದೆ.

*** ಉದ್ಧರಣೆ ಸಾಹಿತ್ಯದಲ್ಲಿಯ ಚಿತ್ರ : ೭.೧:**

ಈ "ಚಿದಂಬರೋದ್ಧರಣಿ" ಚಿತ್ರವನ್ನು ೧' x ೧' ಅಡಿ ಅಳತೆಯಲ್ಲಿ ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ೨" x ೨" ಇಂಚು ಅಳತೆಯುಳ್ಳ ಚೌರಸವನ್ನು ಹಾಳೆಯ ಮಧ್ಯದಲ್ಲಿ ರಚಿಸಿಕೊಂಡಿದ್ದು, ಚೌರಸದ ನಾಲ್ಕೂ ಭುಜಗಳಿಗೆ ತಗಲುವಂತೆ ಒಂದು ವೃತ್ತವನ್ನು ಹಾಗೂ ಮತ್ತೊಂದು ಚಿಕ್ಕದಾದ ವೃತ್ತವನ್ನು ರಚಿಸಿಕೊಳ್ಳಲಾಗಿದೆ. ಈ ಮಧ್ಯದ ಚೌರಸದ ನಾಲ್ಕೂ ಭುಜಗಳಿಂದ ೧/೨" ಇಂಚುಗಳಂತೆ ಸಮಾನಾಂತರವಾಗಿ ೫ ರೇಖೆಗಳನ್ನು ಎಳೆದು ಪ್ರತಿಯೊಂದು ಭುಜದಿಂದಲೂ ಐದ್ಯೆದು ಮನೆಗಳು ಸಿದ್ಧವಾಗಿಸಿಕೊಂಡಾಗ. ಈ ಚೌರಸದ ಮೂಲೆಗಳಲ್ಲಿ ಉಂಟಾಗುವ ಚೌರಸಗಳಲ್ಲಿ ೧/೨ x ೧/೨ ಇಂಚುಗಳ ಚಿಕ್ಕ ಚಿಕ್ಕ ೨೫ ಮನೆಗಳು ಸಿದ್ಧಗೊಳ್ಳುತ್ತವೆ. ಈ ನಾಲ್ಕೂ ಮೂಲೆಗಳಲ್ಲಿ ಉಂಟಾದ ಚೌರಸಗಳ ಹೊರಬದಿಯಲ್ಲಿ ಬಂದ ರೇಖೆಗಳಿಗೆ ತ್ರಿಶೂಲಗಳನ್ನು ರಚಿಸಲಾಗಿದೆ. ಅವುಗಳ ಮುಂದೆ ಶ್ರೀ ಎಂದು ಬರೆಯಲಾಗಿದೆ. ಮಧ್ಯದ ಚೌರಸದಿಂದ ಹೊರಟ ಐದ್ಯೆದು ಮನೆಗಳು ಆಯತಾಕಾರದಲ್ಲಿ ರೂಪುಗೊಂಡಿವೆ. ಇದು ಅಧಿಕ (+) ಚಿಹ್ನೆಯನ್ನು ಹೋಲುತ್ತದೆ. ಚಿತ್ರದ ಮಧ್ಯದಲ್ಲಿರುವ ಚಿಕ್ಕ ವೃತ್ತವನ್ನು ಹಳದಿ ವರ್ಣದಿಂದ ತುಂಬಲಾಗಿದ್ದು ಅದರಿಂದ ದೊಡ್ಡ ವೃತ್ತವನ್ನು

೪೩. ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು: ಶಿವಾನುಭವಶಾಸ್ತ್ರ : ಪುಟ ೨೧.

[illegible]

[illegible]

[illegible]

[illegible]

[illegible]

[illegible]

[illegible]

ಕೆಂಪುವರ್ಣದಿಂದ ತುಂಬಲಾಗಿದೆ. ಈ ವೃತ್ತಕ್ಕೆ ತಗುಲಿದ ಚೌರಸಕ್ಕೆ ಕಪ್ಪು ನೀಲಿ ವರ್ಣವನ್ನು ತುಂಬಲಾಗಿದೆ. ಈ ಚೌರಸದ ಭುಜಗಳಿಂದ ಹೊರಟ ಆಯತಾಕಾರದ ಐದೂ ಮನೆಗಳಿಗೆ ಹಳದಿ ವರ್ಣವನ್ನು ತುಂಬಲಾಗಿದ್ದು ಅಧಿಕ (+) ಚಿಹ್ನೆಯಂತೆ ಕಂಡು ಬರುತ್ತದೆ. ಮೂಲ ಚೌರಸದ ಮೂಲೆಗಳಲ್ಲುಂಟಾದ ನಾಲ್ಕೂ ಚೌರಸಗಳಿಗೆ ಕೆಂಪು ವರ್ಣವನ್ನು ತುಂಬಲಾಗಿದೆ. ಈ ಚೌರಸಗಳ ಹೊರಗಿನ ಎರಡೂ ಭುಜಗಳಲ್ಲಿರುವ ತ್ರಿಶೂಲಗಳಿಗೆ ಕಪ್ಪು ನೀಲಿ ವರ್ಣವನ್ನು ತುಂಬಲಾಗಿದೆ. ಕಪ್ಪು ನೀಲಿ ವರ್ಣದಿಂದ ರೇಖೆಗಳನ್ನು ಎಳೆಯಲಾಗಿದೆ. ಮೇಲೆ ತಿಳಿಸಿದಂತೆ ಎಲ್ಲಿ ಮನೆಗಳಿಗೂ ಅಕ್ಷರನ್ಯಾಸ ಮಾಡಲಾಗಿದೆ. ಈ ಚಿತ್ರಕ್ಕೆ ಸುತ್ತಲೂ ನೈಸರ್ಗಿಕ ನಕ್ಷೆಗಳಿಂದ ಅಂಚನ್ನು ಮಾಡಲಾಗಿದೆ. ಆಕಾರ, ಗಾತ್ರ, ಪ್ರಮಾಣಗಳು ವರ್ಣ ಸಮತೋಲನದೊಂದಿಗೆ ಸುಂದರವಾಗಿ ರಚಿಸಲಾಗಿದೆ.

*** ಕ.ವಿ.ವಿ. ಹಂಪಿಯ ಕಾಗದದ ಪ್ರತಿ: ಚಿತ್ರ ೭.೨:**

ಈ ಚಿದಂಬರೋದ್ಧರಣಿಯ ಚಿತ್ರವನ್ನು ೧' x ೧' ಅಡಿ ಅಳತೆಯಲ್ಲಿ ಕಾಗದದ ಮೇಲೆ ಜಲವರ್ಣದಿಂದ ರಚಿಸಲಾಗಿದ್ದು ಚೌರಸದ ಮಧ್ಯದಲ್ಲಿರುವ ವೃತ್ತವನ್ನು ಬಿಳಿಯ ವರ್ಣದಿಂದ ತುಂಬಿದ್ದು, ಚಿಕ್ಕ ವೃತ್ತದಿಂದ ದೊಡ್ಡ ವೃತ್ತಕ್ಕೆ ೧೫ ಭಾಗಗಳನ್ನು ಗುರುತಿಸಿಕೊಂಡು, ಅದರಲ್ಲಿ ಅಕ್ಷರನ್ಯಾಸ ಮಾಡಿರುವುದು ಕಂಡು ಬರುತ್ತದೆ. ಇದು ಇಲ್ಲಿರುವ ಚಿದಂಬರೋದ್ಧರಣಿಗಳಲ್ಲಿಯೇ ವಿಶಿಷ್ಟವಾಗಿದ್ದುದಾಗಿ ಕಂಡು ಬರುತ್ತದೆ. ಈಗಾಗಲೇ ಹೇಳಿದಂತೆ ವೃತ್ತಕ್ಕೆ ತಗುಲಿಕೊಂಡಿರವ ಚೌರಸ ಅವುಗಳ ಭುಜಕ್ಕೆ ತಕ್ಕಂತೆ ೫ ಆಯತಗಳು ಮೂಲೆಗಳಲ್ಲಿ ಉಂಟಾಗುವ ಚೌರಸಗಳು ಅದರಲ್ಲಿ ೨೫ ಮನೆಗಳು ಹೀಗೆ ಇದ್ದು ಮಧ್ಯದ ಚೌರಸದಲ್ಲಿ ಕಪ್ಪು ವರ್ಣವನ್ನು ತುಂಬಲಾಗಿದೆ. + ಚಿಹ್ನೆಯಲ್ಲಿರುವ ಆಯತದ ಮನೆಗಳಿಗೆ ತೆಳುಗೆಂಪು ವರ್ಣವನ್ನು ಚೌರಸಗಳಿಗೆ ತೆಳುಜಾಂಬಳಿ ಅಥವಾ ಬಿಳಿ ವರ್ಣವನ್ನು ಬಳಸಿದ್ದು ಕಪ್ಪು ವರ್ಣದಿಂದ ಚಿತ್ರದ ಎಲ್ಲ ರೇಖೆಗಳನ್ನು ಬರೆದಿದ್ದು ಸುತ್ತಲೂ ನೀಲಿ ಮಿಶ್ರಿತ ಹಸಿರು ವರ್ಣದ ಪಟ್ಟಿಯನ್ನು ಚಿತ್ರಿಸಲಾಗಿದೆ. ಈ ಚೌರಸದ ಎಡಬಲಗಳಲ್ಲಿ ಅಲಂಕಾರಿಕ ಬಳ್ಳಿಯನ್ನು ಮಾಡಲಾಗಿದೆ. ಚಿತ್ರಿತ ಮನೆಗಳಲ್ಲಿ ಅಕ್ಷರ ವಿನ್ಯಾಸ ಮಾಡಲಾಗಿದ್ದು ಅತ್ಯಂತ ಸ್ಪಷ್ಟವಾಗಿ ಚಿತ್ರದ ವಿನ್ಯಾಸ, ಅಕ್ಷರಗಳ ವಿನ್ಯಾಸವು (ತೆಳವಾದ) ಪಾರದರ್ಶಕ ವರ್ಣಗಳ ಬಳಕೆಯಿಂದಾಗಿ ಸುಂದರವಾಗಿ ಈ ಚಿತ್ರವು ಮೂಡಿ ಬಂದಿದೆ.

*** ಕ. ವಿ. ವಿ. ಹಂಪೆಯ ತಾಳೆಓಲೆಗರಿ ಚಿತ್ರ : ೭.೩:**

ಈ ತಾಳೆಓಲೆಗರಿ ಮೇಲಿನ ಚಿತ್ರವು ಸುಂದರವಾಗಿ ಮೂಡಿ ಬಂದಿದೆ. ಈ ಓಲೆಗರಿಗಳ ಮದ್ಯದಲ್ಲಿ ಚಿದಂಬರೋದ್ಧರಣಿಯನ್ನು ಚಿತ್ರಿಸಿದ್ದು, ಕಪ್ಪು ಇಂಕಿನಿಂದ ಸ್ಪಷ್ಟ ರೇಖೆಗಳ ಮೂಲಕ ಮೇಲೆ ತಿಳಿಸಿದ ವಿಧಾನಗಳಿಂದ ಚಿತ್ರವನ್ನು ರಚಿಸಲಾಗಿದೆ. ಈ ಚಿತ್ರದ ಎಡಬಲಗಳಲ್ಲಿ ಅಲಂಕಾರಿಕ ನಕ್ಷೆಗಳುಳ್ಳ ಅಂಚಿನ ಚೌಕಟ್ಟುಗಳನ್ನು ರಚಿಸಿಕೊಂಡು ಅವುಗಳ ಮಧ್ಯದಲ್ಲಿ ಶಿವದೇವಾಲಯವನ್ನು ಮಾಡಿದ್ದು ಕೆಳಗಿನ ಮತ್ತು ಮೇಲಿನ ಅಂತಸ್ತುಗಳಲ್ಲಿ

[illegible]

ಖಾಲೀ ಕಮಾನುಗಳಿದ್ದು, ನಡುವಿನ ಅಂತಸ್ತಿನಲ್ಲಿ ಶಿವಲಿಂಗವಿದೆ. ಎದುರಿನಲ್ಲಿ ಭಕ್ತನೋರ್ವ ನಿಂತಿದ್ದು. ಅವನ ಹಿಂದುಗಡೆ ವೃಕ್ಷವೊಂದಿದೆ. ಇದೇ ರೀತಿ ಚಿತ್ರವನ್ನು ಕೆಳಗಿನ ಓಲೆಗರಿಗಳಲ್ಲಿಯೂ ಎಡಬಲಗಳಲ್ಲಿ ಚಿತ್ರಿಸಲಾಗಿದೆ.

*** ಗು.ವಿ.ವಿ. ಗುಲಬರ್ಗಾದಲ್ಲಿ ದೊರೆತ ಚಿತ್ರ : ೭.೪:**

ಈ ಚಿದಂಬರೋದ್ಧರಣಿ ಚಿತ್ರವನ್ನು ೧' x ೧' ಅಡಿ ಅಳತೆ ಇರುವ ಕಾಗದದಲ್ಲಿ ಜಲವರ್ಣದಿಂದ ರಚಿಸಲಾಗಿದೆ. ಈ ಕಾಗದದ ಮಧ್ಯದಲ್ಲಿರುವ ಚೌರಸವನ್ನು ಕೆಂಪುವರ್ಣದಲ್ಲಿ ತುಂಬಲಾಗಿದ್ದು ಕಪ್ಪುವರ್ಣದ ವೃತ್ತವನ್ನು ಮಾಡಲಾಗಿದೆ. ಈ ವರ್ಣಗಳ ಬಳಕೆಯನ್ನು ಮಾಡುವಾಗ ಸೂಕ್ಷ್ಮತೆ, ಕ್ರಮಬದ್ಧತೆ ಕಂಡು ಬರುವುದಿಲ್ಲ. ಜನಪದವಾಗಿಯೇ ಕಂಡು ಬರುವ ಈ ಚಿತ್ರ ರೇಖೆಗಳಲ್ಲಿಯೂ ನಿಖರತೆ ಕಂಡುಬರುವುದಿಲ್ಲವಾದರೂ ಚಿತ್ರವನ್ನು ರಚಿಸುವ ವಿಧಾನ, ಆ ಮನೆಗಳ ರಚನೆ ಎಲ್ಲವೂ ಮೇಲೆ ತಿಳಿಸಿದಂತಾಗಿದೆ. ಅಕ್ಷರಗಳ ವಿನ್ಯಾಸ ಸರಿಯಾಗಿದ್ದು ಮೂಲಚೌರಸದಿಂದ ಹೊರಗಡೆಯ ಚೌರಸದ ವಿನ್ಯಾಸಕ್ಕೆ ಕಂದು ಗೆಂಪು ವರ್ಣವನ್ನು ಪಾರದರ್ಶಕವಾಗಿ ಬಳಕೆ ಮಾಡಲಾಗಿದೆ.

*** ಧರ್ಮಸ್ಥಳದಲ್ಲಿ ದೊರೆತ ಚಿತ್ರ : ೭.೫:**

ಈ ಚಿದಂಬರೋದ್ಧರಣಿಯನ್ನು ೧' x ೧' ಅಡಿ ಅಳತೆ ಇರುವ ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ಅಲಂಕಾರಿಕ ರಥದ ಮಧ್ಯದಲ್ಲಿ ಈ ಚಿದಂಬರೋದ್ಧರಣಿಯನ್ನು ಚಿತ್ರಿಸಲಾಗಿದೆ. ಈ ಚಿತ್ರದ ಮಧ್ಯದಲ್ಲಿಯ ವೃತ್ತವನ್ನು ಕೆಂಪುವರ್ಣದಲ್ಲಿ ರಚಿಸಿದ್ದು ಅದರ ಮೇಲಿನ ವೃತ್ತವನ್ನು ಹಳದಿವರ್ಣದಿಂದ ರಚಿಸಿದ್ದು ಚೌರಸಕ್ಕೆ ಕೆಂಪು ವರ್ಣವನ್ನು ತುಂಬಲಾಗಿದೆ. ಚೌರಸದ ಭುಜದಿಂದ ಹೊರಡುವ ೫ ಆಯತ ಮನೆಗಳನ್ನು ಕಪ್ಪು ಹಸಿರು ಬಣ್ಣದಿಂದ ತುಂಬಲಾಗಿದ್ದು ಮೂಲಚೌರಸದ ಮೂಲೆಯಲ್ಲಿರುವ ಚೌರಸಗಳನ್ನು ಬಿಳಿಯ ವರ್ಣದಲ್ಲಿ ತುಂಬಲಾಗಿದ್ದು ಕಪ್ಪು ವರ್ಣದ ರೇಖೆಗಳನ್ನು ಎಳೆಯಲಾಗಿದ್ದು, ಹೊರಗಡೆಯ ತ್ರಿಶೂಲಗಳಿಗೆ ಹಳದಿ ವರ್ಣವನ್ನು ತುಂಬಲಾಗಿದೆ. ಚಿತ್ರದ ಹಿನ್ನೆಲೆಯಲ್ಲಿ ಹಳದಿಯಲ್ಲಿ ಬಿಳಿಯ ವರ್ಣ ಸೇರಿಸಿ ಬಳಿಯಲಾಗಿದೆ. ಈ ಚಿತ್ರದ ಎಡಬಲಗಳಲ್ಲಿ ಅಲಂಕಾರಿಕ ಕಂಬಗಳಿವೆ. ಒಟ್ಟಾರೆ ಚಿತ್ರವು ಆಕರ್ಷಕ ವರ್ಣಗಳಿಂದ ಸುಂದರವಾಗಿ ಮೂಡಿ ಬಂದಿದೆ ಅಕ್ಷರಗಳನ್ನು ಮೇಲಿನಂತೆ ನ್ಯಾಸಗೊಳಿಸಲಾಗಿದೆ.

*** ಕ.ವಿ.ವಿ. ಧಾರವಾಡದಲ್ಲಿ ದೊರೆತ ಚಿತ್ರ : ೭.೬:**

ಈ ಚಿದಂಬರೋದ್ಧರಣಿಯನ್ನು ೧' x ೧' ಅಡಿ ಅಳತೆಯ ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ಅಲಂಕಾರಿಕ ಮಾಡಿನ ಮಧ್ಯದಲ್ಲಿ ಈ ಚಿತ್ರವನ್ನು ಚಿತ್ರಿಸಲಾಗಿದೆ. ಈ ಚಿತ್ರದ ಮಧ್ಯದಲ್ಲಿಯ ಚಿಕ್ಕ ವೃತ್ತವನ್ನು ಕೆಂಪು ಬಿಳಿ ವರ್ಣಗಳಿಂದ ತುಂಬಿದ್ದು ಅದರ ನಂತರದ ವೃತ್ತವನ್ನು ಹಳದಿ ವರ್ಣದಿಂದ ತುಂಬಲಾಗಿದೆ. ಈ ವೃತ್ತಕ್ಕೆ ಹೊಂದಿಕೊಂಡಿರುವ ಚೌರಸವನ್ನು ಕೆಂಪು ವರ್ಣದಿಂದ ತುಂಬಲಾಗಿದೆ. ಈ

ಚೌರಸದ ಭುಜಗಳಿಂದ ಹೊರಟ ಹಳದಿವರ್ಣವನ್ನು ಐದೂ ಮನೆಗಳನ್ನು ದಾಟಿ ಅಂಚಿನ ದಡದವರೆಗೂ ಬೆಳೆಸಲಾಗಿದೆ. ಇದರ ಬದಿಯಲ್ಲಿರುವ ನಾಲ್ಕೂ ಚೌರಸಗಳಿಗೆ ಬಿಳಿಯಲ್ಲಿ ಕೆಂಪುವರ್ಣವನ್ನು ಸೇರಿಸಿ ತುಂಬಲಾಗಿದೆ. ಕೆಂಪು ವರ್ಣದ ರೇಖೆಗಳನ್ನು ಬರೆಯಲಾಗಿದ್ದು, ಕಪ್ಪು ವರ್ಣದ ಅಕ್ಷರಗಳನ್ನು ಬರೆಯಲಾಗಿದ್ದು ಚಿತ್ರದ ಅಂಚಿಗೆ ಕಪ್ಪು ಹಸಿರು ವರ್ಣದ ಪಟ್ಟಿಯನ್ನು ರಚಿಸಲಾಗಿದ್ದು ತ್ರಿಶೂಲಗಳನ್ನು ಹಳದಿವರ್ಣದಲ್ಲಿ ತೋರಿಸಲಾಗಿದೆ. ಇದರ ಎಡಬಲಗಳಲ್ಲಿ ಹಾಗೂ ಮೇಲೆ ಮಾಡಿನ ಒಳಭಾಗದ ಕೆಂಪು ಮಿಶ್ರಿತ ಬಿಳಿ ವರ್ಣವನ್ನು ಲೇಪಿಸಲಾಗಿದ್ದು ಚಿತ್ರದ ಎಡಬಲಗಳಲ್ಲಿ ನೀಲಿ ಹೂವಿನ ಬಳ್ಳಿಯನ್ನು ಇಳಿಬಿಡಲಾಗಿದೆ. ಮಾಡಿನ ಮುಂದಿನ ಕಮಾನು ಭಾಗವನ್ನು ಹಸಿರುವರ್ಣದಲ್ಲಿ ಮತ್ತು ಹಸಿರುಮಿಶ್ರಿತ ಬಿಳಿಯ ವರ್ಣವನ್ನು ತುಂಬಿದ್ದು ಇದರಲ್ಲಿ ಕೆಂಪುವರ್ಣದ ಹೂವುಗಳನ್ನು ಎರಡು ಬದಿಗಳಲ್ಲಿ ರಚಿಸಲಾಗಿದೆ.

## ೮. ಷಡ್ಬ್ರಂಹ್ಮೋದ್ಧರಣಿ

**ವಾಚ್ಯ ವಸ್ತು ವಿಷಯ:**

ಸರ್ವ ಮಂತ್ರಧಾರಣವಾಗಿ ಸಕಲ ತತ್ವಂಗಳ ಗರ್ಭೀಕರಿಸಿಕೊಂಡಿರ್ಪ ಚಿದಂಬರದಿಂದುದಯಿಸಿದ ಶಿವಶಕ್ತಿ ಸಂಪುಟವಾದುದೇ ಘನಕೆ ಘನವಾದ ಪರಬ್ರಹ್ಮ, ಆ ಪರಬ್ರಹ್ಮವೇ ಷಡ್ವಿಧವಾಗಿರ್ಪುದದನುದ್ಧರಿಸುವ ಕ್ರಮವೆಂತೆಂದೊಡೆ: ("ಷಡ್" ಎಂದರೆ ಆರು, ಬ್ರಹ್ಮ ಎಂದರೆ ದೇವರು ಎಂದರ್ಥ)

*** ಶಿವಾನುಭವಶಾಸ್ತ್ರದಲ್ಲಿಯ ಚಿತ್ರ : ೮.೧**

ಎತ್ತರಕ್ಕೆ ಒಂಬತ್ತು ರೇಖೆಗಳನ್ನು, ಅಡ್ಡವಾಗಿ ಎಂಟು ರೇಖೆಗಳನ್ನು ಎಳೆದಾಗ ಕೆಳಗಿನಿಂದ ಮೇಲಕ್ಕೆ ಏಳು ಮನೆಗಳನ್ನು ಅಡ್ಡದಾಗಿ ಎಂಟು ಮನೆಗಳನ್ನು ರಚಿಸಲಾಗಿದ್ದು ಒಟ್ಟು ೫೬ ಮನೆಗಳು ಸಿದ್ಧವಾಗುತ್ತವೆ, ಚಿತ್ರದ ಎಡಗಡೆ ಮೂಲೆಯ ಅಂದರೆ ಮೊದಲ ಸಾಲಿನ ಕೊನೆಯ ಎರಡು ಮನೆಗಳನ್ನು ಖಾಲಿಯಾಗಿಟ್ಟು ಉಳಿದ ೫೪ ಮನೆಗಳಲ್ಲಿ ಅಕ್ಷರಗಳನ್ನು ನ್ಯಾಸ ಮಾಡಲಾಗಿದೆ.

* ಮೊದಲ ಮೇಲಿನ ಮನೆಗಳ ಸಾಲಿನಲ್ಲಿ: (೧) ಪರಬ್ರಹ್ಮ (೨) ವಿಜ್ಞಾನ ಬ್ರಹ್ಮ (೩) ಆನಂದ ಬ್ರಹ್ಮ (೪) ಕಲಾಬ್ರಹ್ಮ (೫) ಪಿಂಡಬ್ರಹ್ಮ (೬) ಮೂರ್ತಿಬ್ರಹ್ಮ ಎಂಬ ಷಡ್ವಿದ ಬ್ರಹ್ಮವನ್ನು ಬರೆಯುವದು.
* ಎಂಟನೆಯ ಸಾಲಿನಲ್ಲಿ ಮೊದಲ ಮನೆಬಿಟ್ಟು ಕೆಳಗಿನ ಮನೆಗಳಲ್ಲಿ ಕ್ರಮವಾಗಿ: (೧) ಚಿಚ್ಛಕ್ತಿ (೨) ಆದಿಶಕ್ತಿ (೩)ಪರಶಕ್ತಿ (೪) ಇಚ್ಛಾಶಕ್ತಿ (೫) ಜ್ಞಾನಶಕ್ತಿ (೬) ಕ್ರಿಯಾಶಕ್ತಿ ಎಂಬ ಷಡ್ವಿಧ ಶಕ್ತಿಗಳನ್ನು ಬರೆಯುವದು
* ಏಳನೆಯ ಸಾಲಿನಲ್ಲಿ ಮೊದಲ ಮನೆಬಿಟ್ಟು ಕೆಳಗಿನ ಮನೆಗಳಲ್ಲಿ ಕ್ರಮವಾಗಿ: (೧) ಶಿವಾಂಗ (೨) ಯೋಗಾಂಗ (೩) ಭೂತಾಂಗ (೪) ಕಾಮಾಂಗ (೫) ವಿದ್ಯಾಂಗ (೬) ಕರ್ಮಾಂಗ ಎಂಬ ಷಡ್ವಿಧಾಂಗಮಗಳನ್ನು ಬರೆಯುವದು.

* ಮೊದಲ ಸಾಲಿನ ಎರಡನೆಯ ಮನೆಯಿಂದ ಕೆಳಗಡೆ ಕ್ರಮವಾಗಿ: (೧) ಶಿವ (೨) ಕರ್ತಾರ (೩) ಕ್ಷೇತ್ರಜ್ಞ (೪) ಭಾವ (೫) ಚೈತನ್ಯ (೬) ಅಂತರ್ಯಾಮಿ ಎಂಬ ಷಡ್ವಿಧ ಮೂರ್ತಿಗಳನ್ನು ಬರೆಯುವದು.
* ಎರಡನೆ ಸಾಲಿನ ಎರಡನೆಯ ಮನೆಯಿಂದ ಕೆಳಗಡೆ ಕ್ರಮವಾಗಿ: (೧) ಸದಾಶಿವ (೨) ಶಬ್ದ (೩) ಆಕಾಶ (೪)ಜ್ಞಾನ (೫) ಶ್ರೋತ್ರ (೬) ವಾಕ್ಕು ಎಂಬ ಷಟ್‌ತತ್ವಂಗಳನ್ನು ಬರೆಯುವದು.
* ಮೂರನೇ ಸಾಲಿನ ಎರಡನೆಯ ಮನೆಯಿಂದ ಕೆಳಗಡೆ ಕ್ರಮವಾಗಿ: (೧) ಈಶ್ವರ (೨) ಸ್ಪರ್ಶನ (೩) ವಾಯು (೪) ಮನ (೫) ತ್ವಕ್ಕು (೬) ಪಾಣಿ ಎಂಬ ಷಟ್‌ತತ್ವಗಳನ್ನು ಬರೆಯುವದು.
* ನಾಲ್ಕನೆಯ ಸಾಲಿನ ಎರಡನೆಯ ಮನೆಯಿಂದ ಕೆಳಗೆ ಕ್ರಮವಾಗಿ: (೧) ರುದ್ರ (೨) ರೂಪು (೩) ತೇಜ (೪) ಅಹಂಕಾರ (೫) ನೇತ್ರ (೬) ಪಾದ ಎಂಬ ಷಟ್‌ತತ್ವಗಳನ್ನು ಬರೆಯುವುದು.
* ಐದನೆಯ ಸಾಲಿನ ಎರಡನೆಯ ಮನೆಯಿಂದ ಕೆಳಗೆ ಕ್ರಮವಾಗಿ: (೧) ವಿಷ್ಣು (೨) ರಸ (೩) ಅಪ್ಪು (೪) ಬುದ್ಧಿ (೫) ಜಿಹ್ವೆ (೬) ಗುಹ್ಯ ಎಂಬ ಆರು ಷಟ್‌ತತ್ವಗಳನ್ನು ಬರೆಯುವುದು.
* ಆರನೆಯ ಸಾಲಿನ ಎರಡನೆಯ ಮನೆಯಿಂದ ಕೆಳಗೆ ಕ್ರಮವಾಗಿ: (೧) ಬ್ರಹ್ಮ (೨) ಗಂಧ (೩) ಪೃಥ್ವಿ (೪) ಚಿತ್ತ (೫) ಘ್ರಾಣ (೬) ಪಾಯು ಎಂಬ ಷಟ್‌ತತ್ವಗಳನ್ನು ಬರೆಯುವದು. ಈ ಷಡ್‌ಬ್ರಹ್ಮೋದ್ಧರಣಿಯ ಹೆಚ್ಚಿನ ವಿವರವನ್ನು ಅನುಬಂಧದಲ್ಲಿ ನೋಡಬಹುದಾಗಿದೆ.[೪೪]

* **ಉದ್ಧರಣೆ ಸಾಹಿತ್ಯದಲ್ಲಿಯ ಚಿತ್ರ: ೮.೧:**

ಈ "ಷಡ್‌ಬ್ರಹ್ಮೋದ್ಧರಣಿ" ಚಿತ್ರವನ್ನು ೧ x ೧ ಅಡಿ ಅಳತೆಯಲ್ಲಿ ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ಈ ಪೇಪರಿನ ಮಧ್ಯದಲ್ಲಿ ಎತ್ತರಕ್ಕೆ ಒಂಬತ್ತು ರೇಖೆಗಳನ್ನು, ಅಡ್ಡದಾಗಿ ಎಂಟು ರೇಖೆಗಳನ್ನು ಎಳೆದಾಗ ಕೆಳಗಿನಿಂದ ಮೇಲಕ್ಕೆ ಏಳು ಮನೆಗಳು ಮತ್ತು ಬಲದಿಂದ ಎಡಕ್ಕೆ ಎಂಟು ಮನೆಗಳಿದ್ದು, ಹೀಗೆ ಒಟ್ಟು ೮ x ೭=೫೬ ಮನೆಗಳು ಸಿದ್ಧವಾಗುತ್ತವೆ. ಚಿತ್ರದ ಎಡಗಡೆಯ ಮೂಲೆಯ ಅಂದರೆ ಮೊದಲ ಸಾಲಿನ ಕೊನೆಯ ಎರಡು ಮನೆಗಳನ್ನು ಖಾಲಿಯಾಗಿಟ್ಟು ಉಳಿದ ೫೪ ಮನೆಗಳಲ್ಲಿ ಅಕ್ಷರಗಳನ್ನು ಮೇಲೆ ತಿಳಿಸಿದಂತೆ ನ್ಯಾಸ ಮಾಡಲಾಗಿದೆ. ಈ ಕಲಾಕೃತಿಗೆ ಪಾರದರ್ಶಕವಾಗಿ ಕಂದುಗೆಂಪುವರ್ಣವನ್ನು ತೆಳುವಾಗಿ ಲೇಪಿಸಲಾಗಿದೆ. ಗುಲಾಬಿ ಮತ್ತು ಕಪ್ಪು ವರ್ಣದ ಹೂವು ಬಳ್ಳಿಗಳನ್ನು ನಾಲ್ಕೂ ಬದಿಗಳಲ್ಲಿ ಚಿತ್ರಿಸಲಾಗಿದ್ದು ಚಿತ್ರದ ನಾಲ್ಕೂ ಮೂಲೆಗಳಲ್ಲಿ ಹೂವುಗಳನ್ನು ಚಿತ್ರಿಸಲಾಗಿದೆ. ಚಿತ್ರದ ಮನೆಗಳ ರೇಖೆಗಳನ್ನು ಕಪ್ಪು ವರ್ಣದಿಂದೊಮ್ಮೆ ಗುಲಾಬಿ ವರ್ಣದಿಂದೊಮ್ಮೆ ಎಳೆದಿದ್ದು ಬರೇ ರೇಖೆಗಳೇ ಎದ್ದು ಕಾಣುವಂತಾಗಿದೆ. ಈ ಷಡ್‌ಬ್ರಹ್ಮೋದ್ಧರಣಿ ಚಿತ್ರಕ್ಕಿಂತಲೂ ರೇಖೆಗಳು ಮತ್ತು ಅಲಂಕಾರಿಕ ನಕ್ಷೆಗಳೇ ಪ್ರಮುಖವಾಗಿ ಕಾಣುವಂತಾಗಿದೆ.

---

೪೪. ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು: ಶಿವಾನುಭವಶಾಸ್ತ್ರ : ಪುಟ ೨೯.

*** ಕ.ವಿ.ವಿ. ಹಂಪೆಯ ಕಾಗದದ ಪ್ರತಿ: ಚಿತ್ರ ೮.೩:**

ಈ "ಷಡ್‌ಬ್ರಹ್ಮೋದ್ಧರಣಿ" ಚಿತ್ರವನ್ನು ೧ x ೧ ಅಡಿ ಅಳತೆಯ ಕಾಗದದ ಮೇಲೆ ಜಲವರ್ಣದಿಂದ ರಚಿಸಲಾಗಿದೆ. ಪೇಪರಿನ ಮಧ್ಯದಲ್ಲಿ ಎತ್ತರಕ್ಕೆ ಒಂಬತ್ತು ರೇಖೆಗಳನ್ನು, ಅಡ್ಡದಾಗಿ ಎಂಟು ರೇಖೆಗಳನ್ನು ಎಳೆದಿದ್ದು ಕೆಳಗಿನಿಂದ ಮೇಲಕ್ಕೆ ಏಳು ಮನೆಗಳು ಮತ್ತು ಬಲದಿಂದ ಎಡಕ್ಕೆ ಎಂಟು ಮನೆಗಳಿದ್ದು ಹೀಗೆ ಒಟ್ಟು ೮x೭=೫೬ ಮನೆಗಳು ಸಿದ್ಧವಾಗುತ್ತವೆ. ಈ ಚಿತ್ರದಲ್ಲಿ ಐವತ್ತಾರೂ ಮನೆಗಳಲ್ಲಿ ಅಕ್ಷರನ್ಯಾಸ ಮಾಡಲಾಗಿದೆ. ಇದರಲ್ಲಿ ಎರಡು ಮನೆಗಳಿಗೆ ಅಂದರೆ ೭ ಮತ್ತು ೮ನೇ ಸಾಲಿನ ಮೊದಲಿನ ಎರಡೂ ಮನೆಗಳಿಗೆ ಸಾದಾಖ್ಯ ಬ್ರಹ್ಮ, ಸಾವಿತ್ರಿ ಬ್ರಹ್ಮ ಎರಡು ಹೆಸರಗಳನ್ನು ಬರೆಯಲಾಗಿದೆ. ಈ ಚಿತ್ರ ಪಾತಳಿಯು ಹಾಗೆ ಬಿಳಿಯ ವರ್ಣವನ್ನೇ ಉಳಿಸಿಕೊಂಡು ಕಂದು ಗೆಂಪು ವರ್ಣದಿಂದ ಅಂದವಾಗಿ ಮನೆಗಳನ್ನು ಮಾಡಲಾಗಿದೆ. ಅಕ್ಷರಗಳನ್ನು ಕಪ್ಪು ವರ್ಣದಲ್ಲಿ ಬರೆಯಲಾಗಿದ್ದು ಸ್ಪಷ್ಟವಾಗಿ ಕಾಣುತ್ತವೆ. ಈ ಚಿತ್ರದ ಎಡಬಲಗಳಲ್ಲಿ ಕೆಂಪು ಹೂವು, ಹಸಿರುವರ್ಣದ ಎಲೆಗಳಿಂದ ಬಳ್ಳಿಯನ್ನು ಚಿತ್ರಿಸಲಾಗಿದೆ. ಈ ಎಲ್ಲ ಚಿತ್ರಗಳ ಹೊರಗೆ ಅಷ್ಟಭುಜದಾಕಾರದಲ್ಲಿ ಕಂದುಗೆಂಪು ವರ್ಣದಿಂದ ಚೌಕಟ್ಟು ಹಾಕಲಾಗಿದೆ. ಈ ಚಿತ್ರವು ಸ್ಪಷ್ಟವಾಗಿ ಅಂದವಾಗಿ ಮೂಡಿ ಬಂದಿದೆ.

*** ಕ.ವಿ.ವಿ. ಹಂಪೆಯ ತಾಳೆಓಲೆಗರಿ ಚಿತ್ರ ೮.೩:**

ಈ ತಾಳೆಓಲೆಗರಿಗಳೆರಡರ ಮೇಲೆ ಮೂರು ಚಿತ್ರಗಳನ್ನು ಚಿತ್ರಿಸಿದ್ದು "ಷಡ್‌ಬ್ರಹ್ಮೋದ್ಧರಣಿ"ಯ ಚಿತ್ರವನ್ನು ಓಲೆಗರಿಯ ಬಲಭಾಗದಲ್ಲಿ ಚಿತ್ರಿಸಲಾಗಿದ್ದು ಮೇಲಕ್ಕೆ ೭ ಮನೆಗಳನ್ನು, ಎಡದಿಂದ ಬಲಕ್ಕೆ ೮ ಮನೆಗಳನ್ನು ರಚಿಸಲಾಗಿದ್ದು ಒಟ್ಟು ೫೭ ಮನೆಗಳು ರಚನೆಗೊಂಡಿದ್ದು ಅದರಲ್ಲಿ ಮೊದಲನೆ ಸಾಲಿನ ಕೊನೆಯ ಎರಡು ಮನೆಗಳನ್ನು ಖಾಲಿಯಾಗಿ ಬಿಟ್ಟಿದ್ದು ಉಳಿದ ಎಲ್ಲ ೫೪ ಮನೆಗಳಿಗೆ ಅಕ್ಷರವಿನ್ಯಾಸ ಮಾಡಲಾಗಿದೆ. ಈ ಚಿತ್ರವನ್ನು ಕಪ್ಪುವರ್ಣದ ರೇಖಾ ಚಿತ್ರದಿಂದ ಪೂರ್ತಿಗೊಳಿಸಿದ್ದು, ಚಿತ್ರದ ಬಲಬದಿಯಲ್ಲಿ ಅಲಂಕಾರಿಕ ಹೂವುಗಳನ್ನು ಮೇಲಿನಿಂದ ಕೆಳಗಿನವರೆಗೆ ಚಿತ್ರಸಲಾಗಿದೆ. ಇವುಗಳ ಎರಡೂ ಬದಿಗಳಲ್ಲಿ ನಕ್ಷಾ ಚಿತ್ರಗಳಿಂದ ಅಂಚನ್ನು ಸುಂದರವಾಗಿ ಚಿತ್ರಿಸಲಾಗಿದೆ.

*** ಗು.ವಿ.ವಿ. ಗುಲಬರ್ಗಾದಲ್ಲಿ ದೊರೆತ ಚಿತ್ರ : ೮.೪:**

ಈ "ಷಡ್‌ಬ್ರಹ್ಮೋದ್ಧರಣಿ ಚಿತ್ರ"ವನ್ನು ೧' x ೧' ಅಡಿ ಅಳತೆಯ ಕಾಗದದ ಮೇಲೆ ಚಿತ್ರಿಸಲಾಗಿದ್ದು ಈ ಹಾಳೆಯ ಮಧ್ಯದಲ್ಲಿ ಎತ್ತರಕ್ಕೆ ಒಂಬತ್ತು ರೇಖೆಗಳನ್ನು, ಅಡ್ಡದಾಗಿ ಎಂಟು ರೇಖೆಗಳನ್ನು ಎಳೆಯಲಾಗಿದ್ದು ಕೆಳಗಿನಿಂದ ಮೇಲಕ್ಕೆ ಏಳು ಮನೆಗಳು ಎಡದಿಂದ ಬಲಕ್ಕೆ ಎಂಟು ಮನೆಗಳು ನಿರ್ಮಾಣವಾಗಿದ್ದು ಒಟ್ಟು ೮x೭=೫೬ ಮನೆಗಳು ಸಿದ್ಧವಾಗಿದ್ದು ಮೊದಲನೆ ಸಾಲಿನ ಕೊನೆಯ ಎರಡು ಮನೆಗಳನ್ನು ಖಾಲಿಬಿಟ್ಟು ಉಳಿದ ೫೪ ಮನೆಗಳಲ್ಲಿ ಅಕ್ಷರಗಳ ನ್ಯಾಸ ಮಾಡಲಾಗಿದೆ. ಹಳದಿ ವರ್ಣದ ಲೇಪನವನ್ನು ಮಾಡಿದ್ದು ಕಪ್ಪು ವರ್ಣದಿಂದ ರೇಖೆಗಳನ್ನು ಬರೆಯಲಾಗಿದೆ. ಈ ಚಿತ್ರದ ರೇಖೆಯಲ್ಲಿ ನಿಖರತೆ ಇಲ್ಲ. ವರ್ಣಗಾರಿಕೆಯಲ್ಲಿ ವೈಶಿಷ್ಟ್ಯತೆಗಳಿಲ್ಲವಾದರೂ ತಾತ್ವಿಕ ದೃಷ್ಟಿಯಿಂದ ಅಕ್ಷರವಿನ್ಯಾಸ, ಮನೆಗಳ ರಚನೆಯ ಕ್ರಮವೆಲ್ಲ ಸರಿಯಾಗಿವೆ.

*** ಧರ್ಮಸ್ಥಳದಲ್ಲಿ ದೊರೆತ ಚಿತ್ರ : ೮.೫:**

ಈ **"ಷಡ್‌ಬ್ರಹ್ಮೋದ್ಧರಣಿ"** ಚಿತ್ರವನ್ನು ೧' x ೧' ಅಡಿ ಅಳತೆಯ ಕಾಗದದ ಮೇಲೆ ಚಿತ್ರಿಸಲಾಗಿದ್ದು ಈ ಹಾಳೆಯಲ್ಲಿ ಅಲಂಕಾರಿಕ ರಥದ ಕೆಳಗಡೆ ಈ ಚಿತ್ರವನ್ನು ಬರೆಯಲಾಗಿದ್ದು, ಎತ್ತರಕ್ಕೆ ಒಂಬತ್ತು ರೇಖೆಗಳನ್ನು, ಅಡ್ಡದಾಗಿ ಎಂಟು ರೇಖೆಗಳನ್ನು ಎಳೆಯಲಾಗಿದ್ದು ಕೆಳಗಿನಿಂದ ಮೇಲಕ್ಕೆ ಏಳು ಮನೆಗಳು, ಬಲದಿಂದ ಎಡಕ್ಕೆ ಎಂಟು ಮನೆಗಳನ್ನು ರಚಿಸಲಾಗಿದ್ದು ಒಟ್ಟು ೮ x ೭=೫೬ ಮನೆಗಳಿದ್ದು ಮೊದಲನೆಯ ಸಾಲಿನ ಕೊನೆಯ ಎರಡು ಮನೆಗಳನ್ನು ಖಾಲಿ ಬಿಟ್ಟಿದ್ದು ಉಳಿದ ೫೪ ಮನೆಗಳಲ್ಲಿ ಅಕ್ಷರ ನ್ಯಾಸ ಮಾಡಲಾಗಿದೆ. ಇದರಲ್ಲಿ ಬರುವ ೫೬ ಮನೆಗಳನ್ನು ಒಂದು ಹಳದಿ ಮತ್ತೊಂದು ಕೆಂಪು ಹೀಗೆ ಕ್ರಮವಾಗಿ ಚಿತ್ರಿಸಲಾಗಿದೆ. ಮೇಲ್ಗಡೆ ಅಂದವಾದ ರಥವಿದ್ದರೆ ಕೆಳಗಡೆ ಮತ್ತು ಎಡಬಲಗಳಲ್ಲಿ ಹೂವು ಎಲೆಗಳ ನಕ್ಷೆಯ ಅಂಚನ್ನು ಹಾಕಲಾಗಿದೆ.

*** ಬೆಂ.ವಿ.ವಿ. ಬೆಂಗಳೂರಲ್ಲಿ ದೊರೆತ ಚಿತ್ರ : ೮.೬:**

ಈ "ಷಡ್‌ಬ್ರಹ್ಮೋದ್ಧರಣಿ"ಯ ಚಿತ್ರವನ್ನು ೧' x ೧' ಅಡಿ ಅಳತೆಯ ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ಎತ್ತರಕ್ಕೆ ಒಂಬತ್ತು ರೇಖೆಗಳನ್ನು ಅಡ್ಡದಾಗಿ ಎಂಟು ರೇಖೆಗಳನ್ನು ಎಳೆದಿದ್ದು ಕೆಳಗಿನಿಂದ ಮೇಲಕ್ಕೆ ಏಳು ಮನೆಗಳು, ಬಲದಿಂದ ಎಡಕ್ಕೆ ಎಂಟು ಮನೆಗಳನ್ನು ಹೊಂದಿದ್ದು ಒಟ್ಟು ೮ x ೭=೫೬ ಮನೆಗಳನ್ನು ಮಾಡಿದ್ದು ಈ ಚಿತ್ರದಲ್ಲಿ ೭ & ೮ ನೇ ಸಾಲಿನ ಮೊದಲಿನ ಸಾಲಿನ ಕೊನೆಯ ಎರಡು ಮನೆಗಳಲ್ಲಿ ಕ್ರಮವಾಗಿ ಸಾದಾಖ್ಯಬ್ರಹ್ಮ, ಸಾವಿತ್ರಿ ಬ್ರಹ್ಮವೆಂದು ಹೆಸರುಗಳನ್ನು ಗುರುತಿಸಲಾಗಿದೆ. ಉಳಿದಂತೆ ಮೇಲೆ ತಿಳಿಸಿದಂತೆ ಅಕ್ಷರವಿನ್ಯಾಸ ಮಾಡಲಾಗಿದ್ದು ಪ್ರತಿಯೊಂದು ಮನೆಗೆ ಕೆಂಪು ಮತ್ತು ಹಳದಿ ಹೀಗೆ ಕ್ರಮವಾಗಿ ವರ್ಣವನ್ನು ತುಂಬಲಾಗಿದೆ. ಈ ಚಿತ್ರದ ಸುತ್ತಲೂ ಹಸಿರುವರ್ಣದ ಅಂಚನ್ನು ರಚಿಸಲಾಗಿದೆ.

*** ಕ.ವಿ.ವಿ. ಧಾರವಾಡದಲ್ಲಿ ದೊರೆತ ಚಿತ್ರ : ೮.೭:**

ಈ "ಷಡ್‌ಬ್ರಹ್ಮೋದ್ಧರಣಿ" ಚಿತ್ರವನ್ನು ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದ್ದು, ಬಿಳಿಯ ಕಾಗದದ ಮೇಲೆ ಕೆಂಪುವರ್ಣದ ರೇಖೆಗಳಿಂದ ಕೆಳಗಿನಿಂದ ಮೇಲಕ್ಕೆ ಏಳು ಮನೆಗಳನ್ನು, ಎಡದಿಂದ ಬಲಕ್ಕೆ ಎಂಟು ಮನೆಗಳನ್ನು ರಚಿಸಲಾಗಿದ್ದು, ಮೊದಲ ಸಾಲಿನ ಕೊನೆಯ ಎರಡು ಮನೆಗಳನ್ನು ಖಾಲಿಬಿಟ್ಟು, ಉಳಿದ ೫೪ ಮನೆಗಳ ಅಕ್ಷರನ್ಯಾಸ ಮಾಡಲಾಗಿದೆ. ಕಪ್ಪುವರ್ಣದ ಅಂಚನ್ನು ಹಾಕಿದ್ದು ಸುತ್ತಲೂ ತಿಳಿಹಸಿರು ವರ್ಣ ತುಂಬಲಾಗಿದ್ದು ಅದರಲ್ಲಿ ಕೆಂಪು ಹೂವುಗಳನ್ನು ಚಿತ್ರಿಸಲಾಗಿದೆ.

## ೯. ಪಂಚಮೂರ್ತಿಲಿಂಗೋದ್ಧರಣಿ

**ವಾಚ್ಯ ವಸ್ತು ವಿಷಯ :**

ನಿಷ್ಕಲ ಪರಶಿವನಿಂದ ಪಂಚಮೂರ್ತಿ ಲಿಂಗೋದ್ಧರಣಿಯ ಸಂಬಂಧವೆಂತೆಂದೊಡೆ ನಿಷ್ಕಲ ಶಿವನ ಮಧ್ಯದಲ್ಲಿ ಚಿಚ್ಛಕ್ತಿಯುದಯಿಸಿದಳು ಎಂದು ಪ್ರಾರಂಭವಾಗುವ ವಚನವು ಆತ್ಮ ಸೃಷ್ಟಿ ಹಾಗೂ ಶಿವನ ಐದು

ಮುಖಗಳ ಸೃಷ್ಟಿಯ ನಿರೂಪಣೆಯಿರುವುದು. ಪ್ರಾಣ ಲಿಂಗಿಯ ಮಧ್ಯದಲ್ಲಿ ಈಶ್ವರ, ಈ ಈಶ್ವರನ ಮಧ್ಯದಿಂದ ಮಹಾಸಾದಾಖ್ಯದ ಸೃಷ್ಟಿ, ಶಿವನ ಸಾದಾಖ್ಯದ ಸೃಷ್ಟಿ, ಅಮೂರ್ತಿ ಸಾದಾಖ್ಯದ ಸೃಷ್ಟಿ, ಮೂರ್ತಿಸಾದಾಖ್ಯದ ಸೃಷ್ಟಿ, ಕರ್ಮಸಾದಾಖ್ಯದ ಸೃಷ್ಟಿ ಇಂತಿವೆಲ್ಲವು ಶಿವನ ನೆನಹು ಮಾತ್ರದಿಂದ ಲಾದವಯ್ಯ ಮಹಲಿಂಗ ಗುರುಶಿವಸಿದ್ಧೇಶ್ವರ ಪ್ರಭುವೆ ಪಂಚಮೂರ್ತಿ ಲಿಂಗೋದ್ಧರಣೆಯ ಸಂಬಂಧವನ್ನು ಸಮಾಪ್ತ ಮಾಡಲಾಗಿದೆ.[೪೫] ಈ ಚಿತ್ರದ ಕುರಿತು ಹೆಚ್ಚಿನ ವಿವರವನ್ನು ಅನುಬಂಧದಲ್ಲಿ ನೋಡಬಹುದಾಗಿದೆ.

* **"ಶಿವಾನುಭವಶಾಸ್ತ್ರ"ದಲ್ಲಿ ದೊರೆತ ಚಿತ್ರ : ೯.೧:**

ಈ "ಪಂಚಮೂರ್ತಿ ಲಿಂಗೋದ್ಧರಣಿ" ಚಿತ್ರವನ್ನು ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ಈ ಹಾಳೆಯ ಮೇಲೆ ಎತ್ತರಕ್ಕೆ ಹತ್ತು (೧೦) ರೇಖೆಗಳನ್ನು, ಅಡ್ಡದಾಗಿ ಏಳು (೭) ರೇಖೆಗಳನ್ನು ಎಳೆದಾಗ ಕೆಳಗಿನಿಂದ ಮೇಲಕ್ಕೆ ಆರು (೬) ಮನೆಗಳು, ಬಲದಿಂದ ಎಡಕ್ಕೆ ಒಂಬತ್ತು (೯) ಮನೆಗಳು ನಿರ್ಮಾಣವಾಗಿ ಒಟ್ಟು ೯ x ೬=೫೪ ಮನೆಗಳು ಸಿದ್ಧವಾಗುತ್ತವೆ.

* ಮೊದಲನೆಯ ಸಾಲಿನಲ್ಲಿ ಕ್ರಮವಾಗಿ: (೧) ನಿಷ್ಕಲ ಶಿವನ ಮಧ್ಯದಲ್ಲಿ (೨) ಚಿಚ್ಛಕ್ತಿ (೩) ಶಾಂತ್ಯತೀತೋತ್ತರ ಕಲೆ (೪) ಮಹಾಲಿಂಗ (೫) ನಿರ್ಮುಕ್ತ ಸಾದಾಖ್ಯ (೬) ಪಶುಪತಿಯಂಬ ಕಲಾಮೂರ್ತಿ (೭) ಶಿವನೆಂಬ ಐಕ್ಯ (೮)ಉಪಮಾತೀತನು (೯) ಆತ್ಮನು.
* ಎರಡನೆಯ ಸಾಲಿನಲ್ಲಿ ಕ್ರಮವಾಗಿ: (೧) ನಿಷ್ಕಲ ಶಿವನ ಮಧ್ಯದಲ್ಲಿ (೨) ಪರಶಕ್ತಿ (೩) ಶಾಂತ್ಯಾತೀತ ಕಲೆ (೪)ಪ್ರಸಾದಲಿಂಗ (೫) ಶಿವಸಾದಾಖ್ಯ (೬) ಮಹಾದೇವನೆಂಬ ಕಲಾಮೂರ್ತಿ (೭) ಕ್ಷೇತ್ರಜ್ಞನೆಂಬ ಶರಣ (೮)ಸದಾಶಿವನು (೯) ಆಕಾಶ.
* ಮೂರನೆಯ ಸಾಲಿನಲ್ಲಿ ಕ್ರಮವಾಗಿ: (೧) ನಿಷ್ಕಲ ಶಿವನ ಮಧ್ಯದಲ್ಲಿ (೨) ಆದಿಶಕ್ತಿ (೩) ಶಾಂತಿಯೆಂಬ ಕಲೆ (೪)ಜಂಗಮ ಲಿಂಗ (೫) ಆ ಮೂರ್ತಿಸಾದಾಖ್ಯ (೬) ಭೀಮೇಶ್ವರನೆಂಬ ಕಲಾಮೂರ್ತಿ (೭) ಕರ್ತಾರನೆಂಬ ಪ್ರಾಣಲಿಂಗಿ (೮) ಈಶ್ವರ (೯) ವಾಯು
* ನಾಲ್ಕನೆಯ ಸಾಲಿನಲ್ಲಿ ಕ್ರಮವಾಗಿ : (೧) ನಿಷ್ಕಲ ಶಿವನ ಮಧ್ಯದಲ್ಲಿ (೨) ಇಚ್ಛಾಶಕ್ತಿ (೩) ವಿದ್ಯಯಂಬ ಕಲೆ (೪)ಶಿವಲಿಂಗ (೫) ಮೂರ್ತಿ ಸಾದಾಖ್ಯ (೬) ಮಹಾರುದ್ರನೆಂಬ ಕಲಾಮೂರ್ತಿ (೭) ಭಾವನೆಂಬ ಪ್ರಸಾದಿ (೮)ರುದ್ರ (೯) ಅಗ್ನಿ
* ಐದನೆಯ ಸಾಲಿನಲ್ಲಿ ಕ್ರಮವಾಗಿ: (೧) ನಿಷ್ಕಲ ಶಿವನ ಮಧ್ಯದಲ್ಲಿ (೨) ಜ್ಞಾನ ಶಕ್ತಿ (೩) ಪ್ರತಿಷ್ಠಯೆಂಬ ಕಲೆ (೪)ಗುರುಲಿಂಗ (೫) ಕರ್ತೃಸಾದಾಖ್ಯ (೬) ಶರ್ವನೆಂಬ ಕಲಾ ಮೂರ್ತಿ (೭) ಚೈತನ್ಯನೆಂಬ ಮಹೇಶ್ವರ (೮) ವಿಷ್ಣು (೯) ಅಪ್ಪು.

೪೫. ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು : ಶಿವಾನುಭವಶಾಸ್ತ್ರ : ಪುಟ ೩೨

* ಆರನೆಯ ಸಾಲಿನಲ್ಲಿ ಕ್ರಮವಾಗಿ: (೧) ನಿಷ್ಕಲ ಶಿವನ ಮಧ್ಯದಲ್ಲಿ (೨) ಕ್ರಿಯಾಶಕ್ತಿ (೩) ನಿವೃತ್ತಿಯೆಂಬ ಕಲೆ (೪)ಆಚಾರಲಿಂಗ (೫) ಕರ್ಮಸಾದಾಖ್ಯ (೬) ಭವನೆಂಬ ಕಲಾಮೂರ್ತಿ (೭) ಅಂತರ್ಯಾಮಿಯೆಂಬ ಭಕ್ತ (೮) ಬ್ರಹ್ಮ (೯) ಪೃಥ್ವಿ

ಈ ಕುರಿತು ಶಿವಾನುಭವ ಶಾಸ್ತ್ರದಲ್ಲಿ ಚಿತ್ರವಿವರಣಿಯನ್ನು ನೋಡಬಹುದಾಗಿದೆ.

*** ಉದ್ಧರಣಿ ಸಾಹಿತ್ಯದಲ್ಲಿಯ ಚಿತ್ರ : ೯.೨:**

ಈ "ಪಂಚ ಮೂರ್ತಿ ಲಿಂಗೋದ್ಧರಣಿ" ಚಿತ್ರವನ್ನು ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ಈ ಹಾಳೆಯ ಮೇಲೆ ಎತ್ತರಕ್ಕೆ ಹತ್ತು ರೇಖೆಗಳನ್ನು, ಅಡ್ಡದಾಗಿ ಏಳು ರೇಖೆಗಳನ್ನು ಎಳೆದಾಗ ಕೆಳಗಿನಿಂದ ಮೇಲಕ್ಕೆ ಆರು ಮನೆಗಳು, ಬಲದಿಂದ ಎಡಕ್ಕೆ ಒಂಬತ್ತು ಮನೆಗಳು ನಿರ್ಮಾಣವಾಗಿ ಒಟ್ಟು ೯ x ೬=೫೪ ಮನೆಗಳು ಸಿದ್ಧವಾಗಿವೆ. ಮೇಲಿನ ಚಿತ್ರದಲ್ಲಿ ಹೇಳಿದಂತೆ ಆಯಾ ಮನೆಗಳಲ್ಲಿ ನವತತ್ವಗಳನ್ನು ನ್ಯಾಸ ಮಾಡಲಾಗಿದೆ.

ಈ ಚಿತ್ರದ ಹಿನ್ನೆಲೆಯಲ್ಲಿ ಪಾರದರ್ಶಕವಾದ ಕಂದುಗೆಂಪು ವರ್ಣವನ್ನು ಬಳಸಲಾಗಿದೆ. ಗುಲಾಬಿ ಮತ್ತು ಕಪ್ಪುವರ್ಣದಲ್ಲಿ ಹೊರರೇಖೆಗಳನ್ನು ಹಾಗೂ ನಾಲ್ಕೂ ಭುಜಗಳಲ್ಲಿರುವ ಅಲಂಕಾರಿಕ ನಕ್ಷೆಗಳನ್ನು ಮಾಡಿನ ಆಕಾರದಲ್ಲಿ ಚಿತ್ರಿಸಲಾಗಿದೆ. ಚಿತ್ರದ ನಾಲ್ಕೂ ಮೂಲೆಗಳಲ್ಲಿ ಹೂವಿನ ಚಿತ್ರವನ್ನು ಮಾಡಲಾಗಿದೆ. ಇವುಗಳಿಗೂ ಅಂದವಾಗಿ ಚೌಕಟ್ಟುಗಳನ್ನು, ಮಾಡುಗಳ ಆಕಾರಗಳಲ್ಲಿ ಸೃಷ್ಟಿಸಲಾಗಿದೆ.

*** ಕ.ವಿ.ವಿ. ಹಂಪೆಯ ಕಾಗದದ ಪ್ರತಿ: ಚಿತ್ರ ೯.೩**

ಈ "ಪಂಚಮೂರ್ತಿಲಿಂಗೋದ್ಧರಣಿ"ಯ ಚಿತ್ರವನ್ನು ಕಾಗದದ ಮೇಲೆ ಕಂದು ಗೆಂಪುವರ್ಣದಿಂದ ದಪ್ಪದಾದ ಮತ್ತು ತೆಳುವಾದ ರೇಖೆಗಳನ್ನು ಬಳಸಿ ಒಟ್ಟು ೫೪ ಮನೆಗಳನ್ನು ರಚಿಸಿಕೊಂಡಿದ್ದು ಹಿನ್ನೆಲೆಯಾಗಿ ಪೇಪರಿನ ಬಿಳಿಯ ಭಾಗವನ್ನು ಹಾಗೇ ಉಳಿಸಿಕೊಂಡಿದ್ದು ಈ ಮೇಲೆ ಹೇಳಿದಂತೆ ಆಯಾ ಮನೆಗಳಲ್ಲಿ ನವತತ್ವಗಳನ್ನು ನ್ಯಾಸ ಮಾಡಲಾಗಿದೆ. ಈ ಚಿತ್ರದ ಸುತ್ತಲೂ ಹಳದಿ ಮತ್ತು ಕೇಸರಿ ಮಿಶ್ರ ವರ್ಣಗಳ ಹಿನ್ನೆಲೆಯನ್ನು ಹೊಂದಿದ್ದು ಅದರ ಮೇಲೆ ಹೂವು ಬಳ್ಳಿ ಎಲೆಗಳನ್ನು ಹಸಿರು ಕೆಂಪು ವರ್ಣಗಳಿಂದ ರಚಿಸಲಾಗಿದ್ದು ಸುತ್ತಲೂ ಅಲಂಕಾರಿಕ ಚೌಕಟ್ಟನ್ನು ಮಾಡಲಾಗಿದೆ.

*** ಕ.ವಿ.ವಿ. ಹಂಪೆಯ ತಾಳೆಓಲೆಗರಿ ಚಿತ್ರ : ೯.೪:**

ತಾಳೆಓಲೆಗರಿಯೊಂದರ ಮೇಲೆ "ಪಂಚಮೂರ್ತಿ ಲಿಂಗೋದ್ಧರಣಿ" ಚಿತ್ರವನ್ನು ಕಪ್ಪುವರ್ಣದಿಂದ ಚಿತ್ರಿಸಲಾಗಿದೆ. ಒಟ್ಟು ೫೪ ಮನೆಗಳನ್ನು ರಚಿಸಿಕೊಂಡಿದ್ದು. ಆಯಾ ಮನೆಗಳಲ್ಲಿ ನವತತ್ವಗಳನ್ನು ಬರೆಯಲಾಗಿದ್ದು ಈ ಚಿತ್ರದ ಬಲಬದಿಗೆ ಆಯತಾಕಾರದ ನಕ್ಷೆಗಳ ಮಧ್ಯದಲ್ಲಿ ಹೂವುಗಳಿಂದ ಅಲಂಕೃತವಾಗಿ ಚಿತ್ರಿಸಲಾಗಿದೆ.

*** ಗು.ವಿ.ವಿ. ಗುಲಬರ್ಗಾದಲ್ಲಿ ದೊರೆತ ಚಿತ್ರ: ೯.೫:**

ಈ "ಪಂಚಮೂರ್ತಿ ಲಿಂಗೋದ್ಧರಣಿ"ಯ ಚಿತ್ರವನ್ನು ಕಾಗದದ ಮೇಲೆ ಚಿತ್ರಿಸಿದ್ದು ಕಂದು ಗೆಂಪು ವರ್ಣವನ್ನು ಪಾರದರ್ಶಕವಾಗಿ ಬಳಿಯಲಾಗಿದೆ, ಅದರ ಮೇಲೆ ಕಪ್ಪು ವರ್ಣದ ರೇಖೆಗಳಿಂದ ಒಟ್ಟು ೫೪ ಮನೆಗಳನ್ನು ರಚಿಸಿಕೊಂಡು ಈ ಮೇಲೆ ಹೇಳಿದಂತೆ ಆಯಾ ಮನೆಗಳಲ್ಲಿ ನವತತ್ವಗಳನ್ನು ಬರೆಯಲಾಗಿದೆ. ಈ ಚಿತ್ರದ ಸುತ್ತಲೂ ತಿಳಿ ಗುಲಾಬಿವರ್ಣದ ಅಂಚನ್ನು ರಚಿಸಲಾಗಿದೆ. ಅಂಚಿನಲ್ಲಿ ತಿಳಿಗೆಂಪು, ಹಸಿರು, ನೀಲಿ ಬಣ್ಣಗಳ ಪಟ್ಟಿಯನ್ನು ಬರೆಯಲಾಗಿದೆ.

*** ಧರ್ಮಸ್ಥಳದಲ್ಲಿ ದೊರೆತ ಚಿತ್ರ : ೯.೬:**

ಈ "ಪಂಚ ಮೂರ್ತಿಲಿಂಗೋದ್ಧರಣಿ"ಯ ಚಿತ್ರವನ್ನು ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ಅಲಂಕಾರಿಕವಾದ ರಥದ ಕೆಳಗಡೆ ಒಟ್ಟು ೫೪ ಮನೆಗಳನ್ನು ರಚಿಸಿಕೊಂಡಿದ್ದು ಈ ಎಲ್ಲ ಮನೆಗಳಿಗೆ ಕ್ರಮವಾಗಿ ಕೆಂಪು, ನಂತರ ಹಳದಿವರ್ಣಗಳನ್ನು ತುಂಬಲಾಗಿದೆ. ಅದರ ಮೇಲೆ ಕಪ್ಪುವರ್ಣದಲ್ಲಿ ನವತತ್ವಗಳನ್ನು ಬರೆಯಲಾಗಿದೆ. ಈ ಎಲ್ಲ ೫೪ ಮನೆಗಳನ್ನು ಬಿಳಿಯ ವರ್ಣದಿಂದ ರೇಖೆಗಳನ್ನು ಬರೆಯಲಾಗಿದೆ. ಚಿತ್ರದ ಅಂಚಿನ ನಾಲ್ಕೂ ಬದಿಯಲ್ಲಿ ಬಿಳಿ ಮತ್ತು ನೀಲಿ ವರ್ಣದ ಹೂವುಗಳು ಹಸಿರುವರ್ಣದ ಎಲೆ ಬಳ್ಳಿಗಳನ್ನು ಚಿತ್ರಿಸಲಾಗಿದೆ.

*** ಬೆಂ. ವಿ.ವಿ. ಬೆಂಗಳೂರಿನಲ್ಲಿ ದೊರೆತ ಚಿತ್ರ : ೯.೭:**

ಈ "ಪಂಚಮೂರ್ತಿ ಲಿಂಗೋದ್ಧರಣಿ"ಯ ಚಿತ್ರವನ್ನು ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ಒಟ್ಟು ೫೪ ಮನೆಗಳನ್ನು ರಚಿಸಿಕೊಂಡು ಈ ಎಲ್ಲ ಮನೆಗಳಿಗೆ ಕ್ರಮವಾಗಿ ಕೆಂಪು, ನಂತರ ಹಳದಿ ವರ್ಣಗಳನ್ನು ತುಂಬಲಾಗಿದೆ. ಅದರ ಮೇಲೆ ಕಪ್ಪು ವರ್ಣದಿಂದ ನವತತ್ವಗಳನ್ನು ಮೇಲೆ ತಿಳಿಸಿದಂತೆ ಆಯಾ ಮನೆಗಳಲ್ಲಿ ಬರೆಯಲಾಗಿದೆ. ಈ ಎಲ್ಲ ೫೪ ಮನೆಗಳನ್ನು ಬಿಳಿಯ ವರ್ಣದಿಂದ ರೇಖೆಗಳನ್ನು ಎಳೆಯಲಾಗಿದೆ. ಚಿತ್ರದ ಸುತ್ತಲೂ ಹಸಿರು ಪಟ್ಟಿಯನ್ನು ಎಳೆಯಲಾಗಿದೆ. ಅದರ ಅಂಚಿಗೆ ಹಳದಿ ವರ್ಣದ ಪಟ್ಟಿ ಇದ್ದು ಅದರ ಮೇಲೆ ಕೆಂಪು ವರ್ಣದ ನಕ್ಷೆಯನ್ನು ಬರೆಯಲಾಗಿದೆ.

*** ಕ.ವಿ.ವಿ. ಧಾರವಾಡದಲ್ಲಿ ದೊರೆತ ಚಿತ್ರ : ೯.೮:**

ಈ "ಪಂಚ ಮೂರ್ತಿಲಿಂಗೋದ್ಧರಣಿ"ಯ ಚಿತ್ರವನ್ನು ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ಒಟ್ಟು ೫೪ ಮನೆಗಳನ್ನು ರಚಿಸಿಕೊಂಡು ಆಯತಾಕಾರದಲ್ಲಿ ಸುತ್ತಲೂ ಇರುವ ಮನೆಗಳಿಗೆ ಹಸಿರು ವರ್ಣವನ್ನು, ಅದರ ನಂತರ ಒಳಗಡೆಯಲ್ಲಿ ಬರುವ ಆಯತಾಕಾರದ ಮನೆಗಳಿಗೆ ಕೆಂಪುವರ್ಣವನ್ನು, ಅದರ ಒಳಗಡೆಯ ಆಯತದಲ್ಲಿರುವ ಮನೆಗಳಿಗೆ ಹಸಿರುವರ್ಣವನ್ನು ತುಂಬಲಾಗಿದೆ. ಈ ಎಲ್ಲ ೫೪ ಮನೆಗಳನ್ನು ಕೆಂಪು ವರ್ಣದಲ್ಲಿ ಎರಡೆರಡು ರೇಖೆಗಳಿಂದ ಗುರುತಿಸಿದ್ದು ಕಪ್ಪು ವರ್ಣದಿಂದ ನವತತ್ವಗಳನ್ನು ಆಯಾ ಮನೆಗಳಲ್ಲಿ

ಮೇಲೆ ಹೇಳಿದಂತೆ ಬರೆಯಲಾಗಿದೆ. ಚಿತ್ರದ ಸುತ್ತಲೂ ಕಪ್ಪು ಹಸಿರು ಬಣ್ಣದ ಪಟ್ಟಿಯನ್ನು ಬರೆಯಲಾಗಿದ್ದು ಅದರ ಮೇಲೆ ತಿಳಿ ಹಸಿರಿನಿಂದ ನಕ್ಷೆಯನ್ನು ಮಾಡಲಾಗಿದೆ.

### ೧೦. ಶಾಂಭವೀ ಚಕ್ರೋದ್ಧರಣೆ

**"ವಾಚ್ಯ ವಸ್ತು ವಿಷಯ":**

ಶಾಂಭವೀಚಕ್ರವನ್ನುದ್ಧರಿಸುವ ಲಕ್ಷಣವನ್ನು ಅಕ್ಷರಂಗಳ ಬರೆವ ಕ್ರಮವನು. ಅಧಿದೈವಂಗಳನು ಸಮ್ಯ ಜ್ಞಾನ ಸಾಧನ : ಸಂಪತ್ತನು : ಶೃತಿ ಗುರುವಚನಂಗಳು ಸಂಕ್ಷೇಪ ಮಂತ್ರವಾಗಿ ನಿರೂಪಿಸಲ್ಪಟ್ಟಿದ್ದು. ವರ್ಣ ಚಕ್ರವಿನ್ಯಾಸ : ತತ್ವಜ್ಞಾನಿಗಳು ಸುಸ್ಥಲದಲ್ಲಿ ವಾತುಲ ತಂತ್ರ ವಿಧಾನದ ಭೂರ್ಜ ಪತ್ರದಲ್ಲಿ ೧೨ ಅಂಗುಲ ವಿಸ್ತಾರ ಹೊಂದಿರುವ ಗೋರೋಚನ, ಕುಂಕುಮ ರಸ, ಕಸ್ತೂರಿ, ಕರ್ಪೂರ, ಅಗರು, ಶ್ರೀಗಂಧಗಳೊಡನೆ ಕೂಡಿದಾಗ ಆಗುವ ವರ್ಣಗಳನ್ನು ಹೇಳಿರುವರು. ಅವು ರಕ್ತವರ್ಣದ ಸೂತ್ರದಿಂದ ಮೂಡಣದಿಕ್ಕು ಪಡುವಣ ದಿಕ್ಕು ಹಿಡಿದು, ಹಾಗೆ ಎರಡು ಸೂತ್ರಗಳನ್ನು ತೆಂಕಣ ಬಡಗಣ ಹಿಡಿದು, ಹಾಗೆ ಎರಡು ಸೂತ್ರಗಳ ಜೊತೆ ಕೂಡಿ ನಾಲ್ಕು ಸೂತ್ರವಾದ ಚಕ್ರಕ್ಷೇತ್ರವು ಗುಣಿತ ಪ್ರಮಾಣಕ್ಕೆ ೧೪೪ ಅಂಗುಲವಿರುವುದು. ನಂತರ ಚತುರಾಶ್ರಯದ ಮಧ್ಯದಲ್ಲಿ ಪೂರ್ವ, ಪಶ್ಚಿಮ ಉತ್ತರ ದಕ್ಷಿಣ ೬ ಅಂಗುಲವಿದ್ದು ಮಧ್ಯಸ್ಥಾನದೊಳಗೆ ಕಪ್ಪೆಯಾಕಾರ ಮೊನೆಯೂರಿ ಮತ್ತೊಂದು ಮೊನೆಗೆ ಬತ್ತಿಯ ಸುತ್ತಿ ೨ ಅಂಗುಲ ಪ್ರಮಾಣವಿರುವಂತೆ ಮಾಡಿ ಪೀತವರ್ಣದಿಂದ ಇರುವುದು ಕರ್ಣಿಕಾವೃತ್ತದ ಹೊರಪ್ರದೇಶದಲ್ಲಿ ಒಂದು ವೃತ್ತವಿದ್ದು ೩ ಅಂಗುಲ ಪ್ರಮಾಣದಿಂದ ಶಕ್ತಿವರ್ಣದಿಂದಿರುವುದು. ಮತ್ತೊಂದು ವೃತ್ತವು ೫ ಅಂಗುಲ ಪ್ರಮಾಣವಿದ್ದು ಶ್ವೇತವರ್ಣದಿಂದ ಮತ್ತೊಂದು ವೃತ್ತ ಅದು ಒಂದನೊಂದು ಬಳಸಿಕೊಂಡಂತೆ ಇರಲು ಮಧ್ಯದಲ್ಲಿ ವರ್ಣತ್ರಯಾತ್ಮಕವಾದ ವೃತ್ತತ್ರಯಂಗಳೂ ಮಂಡಲತ್ರಯಂಗಳೆನಿಸಿಕೊಂಡಿವೆ.

ಕರ್ಣಿಕಾವೃತ್ತದಲ್ಲಿ ರಂಧ್ರವಂ ಮಾಡಿ ಶ್ವೇತವರ್ಣದಿಂ ಕೇಸರಸಹಿತವಾದ ನಾಲ್ಕೆಸಳನು ಅದರಮೇಲೆ ಒಂದನೆಯ ವೃತ್ತದಿಂದ ಅಷ್ಟದಿಕ್ಕಿನಲ್ಲಿ ಅಷ್ಟಪತ್ರಂಗಳನ್ನು ಅದರ ಹೊರಗಣ ಎರಡನೆಯ ವೃತ್ತದಲ್ಲಿ ಎಂಟುದಳಗಳನ್ನು ಎಂಟು ಉಪದಳಗಳನ್ನು ಮಾಡಿ ಅದರ ಹೊರಗಡೆ ಮೂರನೆಯ ಆವರಣದಲ್ಲಿ ರಕ್ತವರ್ಣದಿಂದ ಹದಿನಾರು ದಳಗಳನ್ನು ಹದಿನಾರು ಉಪದಳಗಳನ್ನು ಬಾಹ್ಯ ವೃತ್ತದಲ್ಲಿ ಮೂವತ್ತೆರಡು ಮುಖಾಕಾರಗಳನ್ನು ಸುತ್ತಿರಲು ಚಕ್ರವಿನ್ಯಾಸವಾಗಿರುವುದು.[೪೬]

*** ಉದ್ಧರಣೆ ಸಾಹಿತ್ಯದಲ್ಲಿಯ ಚಿತ್ರ : ೧೦.೧ :**

ಈ "ಶಾಂಭವಿ ಚಕ್ರೋದ್ಧರಣೆ"ಯ ಚಿತ್ರವನ್ನು ೧' x ೧' ಅಡಿ ಅಳತೆಯ ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ಕಾಗದದ ಮಧ್ಯದಲ್ಲಿ ೧ ಇಂಚು ಅಳತೆ ವೃತ್ತವನ್ನು ರಚಿಸಿ ಅದಕ್ಕೆ ಕೆಂಪುವರ್ಣವನ್ನು ತುಂಬಿ ಇದಕ್ಕೆ ೧ ಇಂಚಿನ ಅಂತರದಲ್ಲಿ ಒಂದು ಮೊದಲನೆಯ ವೃತ್ತವನ್ನು ರಚಿಸಿ ಅದಕ್ಕೆ ಹಳದಿ ವರ್ಣವನ್ನು ತುಂಬಿ

೪೬. ಶ್ರೀ ಸಿದ್ಧಲಿಂಗಮಹಾಸ್ವಾಮಿಗಳು : ಶಿವಾನುಭವ ಶಾಸ್ತ್ರ : ಪುಟ ೩೪

ಅದರಲ್ಲಿ ನಾಲ್ಕು ದಿಕ್ಕುಗಳಿಗೆ ನಾಲ್ಕು ಬಿಳಿವರ್ಣದ ದಳಗಳನ್ನು ಮಾಡುವುದು. ಈ ವೃತ್ತದಿಂದ ೧ ಇಂಚಿನ ಮತ್ತೊಂದು ಎರಡನೆಯ ವೃತ್ತವನ್ನು ರಚಿಸಿ ಅದಕ್ಕೆ ಕೆಂಪುವರ್ಣವನ್ನು ತುಂಬುವುದು. ಅದರಲ್ಲಿ ಬಿಳಿಯ ವರ್ಣದ ೪ ದಳಗಳನ್ನು ಚಿತ್ರಿಸುವುದು. ಇದಕ್ಕೆ ಹೊಂದಿಕೊಂಡು ೧ ಇಂಚಿನ ಅಂತರದ ಮೂರನೆಯ ವೃತ್ತವನ್ನು ರಚಿಸಿ ಅದಕ್ಕೆ ನೀಲಿ ವರ್ಣವನ್ನು ತುಂಬುವುದು. ಅದರಮೇಲೆ ೧೬ ದಳಗಳನ್ನು ಬಿಳಿಯ ವರ್ಣದಿಂದ ಚಿತ್ರಿಸಲಾಗಿದೆ. ಅದಕ್ಕೆ ಹೊಂದಿಕೊಂಡು ೧ ಇಂಚಿನ ಅಂತರದ ಮತ್ತೊಂದು (ನಾಲ್ಕನೆಯ) ವೃತ್ತವನ್ನು ರಚಿಸಿದ್ದು ಅದರಲ್ಲಿ ಬಿಳಿಯ ವರ್ಣವನ್ನು ತುಂಬಿದ್ದು ಅದರಲ್ಲಿ ೩೨ ದಳಗಳನ್ನು ಕೆಂಪು ವರ್ಣದಲ್ಲಿ ರಚಿಸಿದ್ದು ಅದಕ್ಕೆ ಹತ್ತಿಕೊಂಡು ೧ ಇಂಚಿನ ವೃತ್ತವನ್ನು ರಚಿಸಿದ್ದು ಅದಕ್ಕೆ ಕೆಂಪುವರ್ಣದಿಂದ ತುಂಬಿದ್ದು ಅದರ ಮೇಲೆ ೬೪ ದಳಗಳನ್ನು ನೀಲಿವರ್ಣದಲ್ಲಿ ತುಂಬಿದ್ದು ಈ ಚಿತ್ರದ ಹಿನ್ನೆಲೆಗೆ ಹಳದಿ ವರ್ಣವನ್ನು ಬಳಸಲಾಗಿದೆ.

ಅಕ್ಷರ ವಿನ್ಯಾಸವನ್ನು ಕೆಳಗಿನಂತೆ ಮಾಡಲಾಗಿದೆ.

* ಮೊದಲನೆಯ ಸುತ್ತಿನ ದಳಗಳಲ್ಲಿಯ ಅಕ್ಷರಗಳು : ೧) ಸ ೨) ಆ ೩) ಐ ೪) ಕ್ಷ ಇವುಗಳಿಂದ “ಸ”ಕಾರ – ಅಂಬಿಕೆ, “ಆ”ಕಾರ – ಗಣಾದಿ, “ಐ”ಕಾರ – ಈಶ್ವರಿ, “ಕ್ಷ” ಕಾರ – ಮನೋನ್ಮನಿ ಇವುಗಳನ್ನು ದಳಗಳ ಬದಿಯಲ್ಲಿ ಬರೆಯುವುದು.

* ಎರಡನೆಯ ಸುತ್ತಿನ ದಳಗಳಲ್ಲಿಯ ಅಕ್ಷರಗಳು : ೧) ಸ ೨) ಕ್ಷ ೩) ಶ ೪) ವ ೫) ಲ ೬) ರ ೭) ಯ ೮) ಮ. ಇವುಗಳಿಂದ “ಸ”ಕಾರ – ವಾಮೆ, “ಷ”ಕಾರ – ಜ್ಯೇಷ್ಠೆ, “ಶ”ಕಾರ–ರೌದ್ರಿ, “ವ”ಕಾರ – ಮನೋನ್ಮನಿ ಇವುಗಳನ್ನು ದಳಗಳ ಬದಿಯಲ್ಲಿ ಬರೆಯುವದು.

* ಮೂರನೆಯ ಸುತ್ತಿನ ದಳಗಳಲ್ಲಿಯ ಅಕ್ಷರುಗಳು : ೧) ಅ ೨) ಆ ೩) ಇ ೪) ಈ ೫) ಟ ೬) ಆ ೭) (ಋ) ರು ೮) (ೠ)ರೂ ೯) ಉ ೧೦) ಊ ೧೧)ಏ ೧೨) ಐ ೧೩) ಓ ೧೪) ಔ ೧೫) ಅಂ ೧೬) ಅಃ

ಅಕಾರ – ವೃಶಭೇಶ್ವರ, ಆಕಾರ – ಗಣೇಶ್ವರ, ಇಕಾರ – ಭೃಂಗೇಶ್ವರ, ಈಕಾರ – ಮಹಾಕಾಳ, ಟಕಾರ – ನಂದೀಶ್ವರ, ಆಕಾರ – ಚಂಡೇಶ್ವರ, ರುಕಾರ – ಉಮೇಶ್ವರ, ರೂಕಾರ – ಪಶುಪತಿ ಉಕಾರ – ಉಗ್ರ, ಊಕಾರ–ಭೀಮ, ಏಕಾರ–ಸೋಮ, ಐಕಾರ–ಮಹಾದೇವ, ಓಕಾರ – ರುದ್ರ, ಔಕಾರ – ಸರ್ವ, ಅಂ–ಭವ, ಅಃ – ಷಣ್ಮುಖ, ದಳಗಳ ಬದಿಯಲ್ಲಿ ಬರೆಯುವದು.

* ನಾಲ್ಕನೆಯ ಸುತ್ತಿನ ದಳದಲ್ಲಿಯ ಅಕ್ಷರಗಳು : ೧) ಇ ೨) ಸ ೩) ಭೃ ೪) ಅಂ, ೫) ಅ ೬) ಪೂ ೭) ವಿ ೮) ದ ೯) ಯ ೧೦) ಭಾ ೧೧) ಪು ೧೨) ಬ ೧೩) ನೈ ೧೪) ದೌ ೧೫) ಸು ೧೬) ಅ ೧೭) ವ ೧೮) ಅ ೧೯) ಗಂ, ೨೦) ವೇ ೨೧) ವಾ ೨೨) ನಾ ೨೩) ಮು ೨೪) ಸೋ ೨೫) ಕು ೨೬) ಅ ೨೭) ದಿ ೨೮) ಅ ೨೯) ಈ ೩೦) ಪ ೩೧) ಜ ೩೨) ಸಂ.

ಇಂದ್ರ, ಸತ್ಯ, ಭೃಂಗಿ, ಅಂತರ್ಲಕ್ಷ, ಅಗ್ನಿ, ಪೂಹ, ವಿಧಿ, ದಮ, ಯಮ, ಭಾಸ್ಕರ, ಪುಷ್ಪದತ್ತ, ಬಲ್ಲಾಟ, ನೈಋತ್ಯ, ದೌವಾರಿಕ, ಸುಗ್ರೀವ, ಅರುಣ, ವರುಣ, ಅಸುರ, ಗಂಹಾರ, ವೇಗ, ವಾಯವ್ಯ, ನಾಗ, ಮುಖ್ಯ, ಸೋಮ, ಕುಬೇರ, ಅಘೋರ, ದಿಶೆ, ಅದಿತೆ, ಈಶಾನ, ಪರ್ಜನ್ಯ, ಜಯಂತ, ಸಂಕ್ರ ಎಂದಿವೆ. ಇವನ್ನು ದಳದ ಬದಿಯಲ್ಲಿ ಬರೆಯಲಾಗಿದೆ.

***ಕ.ವಿ.ವಿ. ಹಂಪೆಯ ತಾಳೆ ಓಲೆಗರಿ ಚಿತ್ರ : ೧೦.೨ :**

ತಾಳೆ ಓಲೆಗರಿಗಳೆರಡರ ಮೇಲೆ "ಶಾಂಭವಿ ಚಕ್ರೋದ್ಧರಣಿ" ಚಿತ್ರವನ್ನು ಬಿಡಿಸಲಾಗಿದ್ದು ಕಪ್ಪುವರ್ಣದ ರೇಖಾಪ್ರಧಾನ ಚಿತ್ರವಾಗಿದೆ. ೧ ಇಂಚಿನ ವೃತ್ತವನ್ನು ರಚಿಸಿಕೊಂಡು ಸಮಾನಾಂತರವಾಗಿ ೧ ಇಂಚಿನಂತೆ ನಾಲ್ಕು ವೃತ್ತಗಳನ್ನು ರಚಿಸಿಕೊಂಡು ಒಂದನೇ ವೃತ್ತದಲ್ಲಿ ೪ ದಳಗಳನ್ನು, ೨ನೇ ವೃತ್ತದಲ್ಲಿ ೮ ದಳಗಳನ್ನು, ೩ನೇ ವೃತ್ತದಲ್ಲಿ ೧೬ ದಳಗಳನ್ನು, ನಾಲ್ಕನೇ ವೃತ್ತದಲ್ಲಿ ೩೨ ದಳಗಳನ್ನು ಚಿತ್ರಿಸಿ ಅವುಗಳ ಮೇಲೆ ಮೊದಲಿನ ಚಿತ್ರದಲ್ಲಿ ಹೇಳಿದಂತೆ ಅಕ್ಷರಗಳನ್ನು ಬರೆಯಲಾಗಿದೆ. ಈ ಚಿತ್ರದ ಬಲಬದಿಗೆ ಹೂವಿನ ಸಮೂಹ ಪಟ್ಟಿಯೊಂದನ್ನು ಚಿತ್ರಿಸಲಾಗಿದೆ.

*** ಗು.ವಿ.ವಿ. ಗುಲಬರ್ಗಾದಲ್ಲಿ ದೊರೆತ ಚಿತ್ರ : ೧೦.೩:**

ಈ ಕಲಾಕೃತಿಯು 1'x1' ಅಡಿಅಳತೆಯ ಕಾಗದದ ಮೇಲೆ ಜಲವರ್ಣದಿಂದ ರಚನೆಯಾಗಿದ್ದು "ಈ ಶಾಂಭವೀ ಚಕ್ರೋದ್ಧರಣಿ" ಚಿತ್ರವನ್ನು ೧ ಇಂಚಿನ ಒಂದು ವೃತ್ತವನ್ನು ರಚಿಸಿಕೊಂಡು ಇದಕ್ಕೆ ಹೊಂದಿಕೊಂಡು ೧ ಇಂಚು ಅಳತೆಯುಳ್ಳ ನಾಲ್ಕು ವೃತ್ತಗಳನ್ನು ರಚಿಸಿಕೊಂಡು ಮೂಲ ವೃತ್ತದಲ್ಲಿ ತಿಳಿಕಂದುಗೆಂಪು ವರ್ಣವನ್ನು ತುಂಬಿದ್ದು, ಮೊದಲಿನ ವೃತ್ತಕ್ಕೆ ಕೆಂಪು ಕಂದು ವರ್ಣವನ್ನು ತುಂಬಿ ಅದರ ಮೇಲಿನ ನಾಲ್ಕು ದಳಗಳಿಗೆ ತಿಳಿಕಂದುಗೆಂಪು ವರ್ಣವನ್ನು ತುಂಬಲಾಗಿದೆ. ಎರಡು ಮತ್ತು ಮೂರನೆಯ ವೃತ್ತವನ್ನು ನೀಲಿಮಿಶ್ರಿತ ತಿಳಿಗುಲಾಬಿವರ್ಣವನ್ನು ತುಂಬಲಾಗಿದ್ದು, ಎರಡನೆಯ ವೃತ್ತದ ಮೇಲೆ ೮ ದಳಗಳನ್ನು ಬರೆದು ತಿಳಿ ಕಂದು ಗೆಂಪು ವರ್ಣವನ್ನು ಲೇಪಿಸಲಾಗಿದೆ. ಮೂರನೆಯ ವೃತ್ತದ ಮೇಲೆ ೧೬ ದಳಗಳನ್ನು ಬರೆದು ತಿಳಿ ಕಂದುಗೆಂಪು ವರ್ಣವನ್ನು ಲೇಪಿಸಲಾಗಿದೆ. ನಾಲ್ಕನೆಯ ವೃತ್ತಕ್ಕೆ ತಿಳಿಗೆಂಪುವರ್ಣವನ್ನು ತುಂಬಿದ್ದು, ಅದರ ಮೇಲೆ ೩೨ ದಳಗಳನ್ನು ಬರೆದು ಅವಕ್ಕೆ ತಿಳಿ ಕಂದುಗೆಂಪು ವರ್ಣವನ್ನು ಲೇಪಿಸಲಾಗಿದೆ. ಈ ಚಿತ್ರದ ಸುತ್ತಲೂ ನೀಲಿವರ್ಣದ ಪಟ್ಟಿಯನ್ನು ಮಾಡಲಾಗಿದೆ. ಚಿತ್ರದ ಹೊರಭಾಗಕ್ಕೆ ಕಂದುಗೆಂಪು ವರ್ಣವನ್ನು ಬಿಳಿಯ ವರ್ಣದಲ್ಲಿ ಮಿಶ್ರಣಮಾಡಿ ಹಿನ್ನೆಲೆಗೆ ತುಂಬಲಾಗಿದೆ. ಇದರ ಮೇಲೆ ಕೆಂಪು ಮತ್ತು ನೀಲಿ ವರ್ಣಗಳ ಚುಕ್ಕೆಗಳನ್ನು ಇಡಲಾಗಿದೆ.

*** ಧರ್ಮಸ್ಥಳದಲ್ಲಿ ದೊರೆತ ಚಿತ್ರ : ೧೦.೪ :**

ಈ "ಶಾಂಭವೀಚಕ್ರೋದ್ಧರಣಿ"ಯ ಚಿತ್ರವನ್ನು ೧'x೧' ಅಡಿ ಅಳತೆಯ ಕಾಗದದ ಮೇಲೆ ಚಿತ್ರಿಸಲಾಗಿದ್ದು ಅರ್ಧ ಇಂಚಿನ ವೃತ್ತವನ್ನು ಮೊದಲು ರಚಿಸಿಕೊಂಡು ಇದರ ಮೇಲೆ ೧/೨ ಇಂಚಿನ ಸಮಾಂತರ ಅಳತೆಯುಳ್ಳ

ನಾಲ್ಕು ವೃತ್ತಗಳನ್ನು ರಚಿಸಿಕೊಂಡು ಮೂಲವೃತ್ತದಲ್ಲಿ ಇಪ್ಪೆ ಎಲೆವರ್ಣವನ್ನು ತುಂಬಿದ್ದು ಇದರ ಮೇಲ್ಗಡೆ ಮೊದಲನೆ ವೃತ್ತವನ್ನು ಹಳದಿವರ್ಣದಿಂದ ತುಂಬಲಾಗಿದೆ. ಅದರ ಮೇಲೆ ನಾಲ್ಕು ದಳಗಳನ್ನು ಬರೆದು ಅದಕ್ಕೆ ಇಪ್ಪೆ ಎಲೆ ವರ್ಣವನ್ನು ತುಂಬಲಾಗಿದೆ. ಅದಕ್ಕೆ ಹೊಂದಿಕೊಂಡಿರುವ ಎರಡನೆಯ ವೃತ್ತಕ್ಕೆ ಕೆಂಪುವರ್ಣವನ್ನು ತುಂಬಿದ್ದು ಅದರ ಮೇಲೆ ಎಂಟು ದಳಗಳನ್ನು ಬರೆಯಲಾಗಿದ್ದು ಬಿಳಿಯ ವರ್ಣವನ್ನು ತುಂಬಲಾಗಿದೆ. ಮೂರನೆಯ ವೃತ್ತಕ್ಕೆ ನೀಲಿವರ್ಣವನ್ನು ತುಂಬಿದ್ದು ಅದರ ಮೇಲೆ ಹದಿನಾರು ದಳಗಳನ್ನು ಬರೆಯಲಾಗಿದ್ದು ಬಿಳಿಯವರ್ಣವನ್ನು ತುಂಬಲಾಗಿದೆ. ನಾಲ್ಕನೆಯ ವೃತ್ತಕ್ಕೆ ಬಿಳಿಯ ವರ್ಣವನ್ನು ತುಂಬಿದ್ದು ಕೆಂಪುವರ್ಣದಿಂದ ತುಂಬಿದ ಮೂವತ್ತೆರಡು ದಳಗಳನ್ನು ಬರೆಯಲಾಗಿದೆ. ಮೇಲೆ ಹೇಳಿದಂತೆ ಆಯಾ ದಳಗಳಿಗೆ ಅಕ್ಷರಗಳನ್ನು ಬರೆಯಲಾಗಿದೆ. ಈ ಚಿತ್ರಕ್ಕೆ ತಗಲುವಂತೆ ಅಲಂಕಾರಿಕ ವೃತ್ತವನ್ನು ರಚಿಸಿದ್ದು ಅದಕ್ಕೆ ತಗಲುವಂತೆ ಒಂದು ಚೌರಸವನ್ನು ಕೆಂಪುವರ್ಣಗಳಿಂದ ರಚಿಸಿದ್ದು ಈ ಚಿತ್ರದ ನಾಲ್ಕು ಮೂಲೆಗಳಲ್ಲಿ ಇಪ್ಪೆ ಎಲೆ ವರ್ಣವನ್ನು ತುಂಬಿದ್ದು ಮೂಲೆಗಳಿಗೊಂದೊಂದು ಹೂವನ್ನು ರಚಿಸಲಾಗಿದೆ. ಈ ಚೌರಸದ ರೇಖೆಗಳನ್ನು ೨' ಅಳತೆಯಷ್ಟು ಮುಂದುವರಿಸಿ ಮತ್ತೊಂದು ಚೌರಸನ್ನು ರಚಿಸಿಕೊಂಡು ಈ ಚೌರಸದ ಪಟ್ಟಿಯಲ್ಲಿ ಅಷ್ಟದಿಕ್ಪಾಲಕರಾದ – ಇಂದ್ರ. ಅಗ್ನಿ, ಯಮ, ನೈಋತ್ಯ, ವರುಣ, ವಾಯವ್ಯ, ಕುಬೇರ, ಈಶಾನರೆಲ್ಲ ತಮ್ಮ ವಾಹನಗಳ ಮೇಲೆ ಹೊರಟಿದ್ದು ಅವರ ಹಿಂದು ಮುಂದುಗಡೆ ದೇವಗಣರು ಇರುವ ಚಿತ್ರಗಳು ಕಿರುರೂಪದಲ್ಲಿ ಅತ್ಯಂತ ಸುಂದರವಾಗಿ ಮೂಡಿಬಂದಿವೆ. ವಿವಿಧ ಆಯುಧಗಳನ್ನು ಹಿಡಿದು, ವಿವಿಧ ವಸ್ತ್ರ ಧರಿಸಿ ಹೊರಟಿರುವ ದೃಶ್ಯವನ್ನು ಚೆನ್ನಾಗಿ ಚಿತ್ರದಲ್ಲಿ ಕಲಾವಿದ ಹಿಡಿದಿಟ್ಟಿರುವುದು ಅದ್ಭುತವಾಗಿದೆ.

*** ಬೆಂ. ವಿ. ವಿ. ಬೆಂಗಳೂರಿನಲ್ಲಿ ದೊರೆತ ಚಿತ್ರ : ೧೦.೫ :**

ಈ "ಶಾಂಭವೀ ಚಕ್ರೋದ್ಧರಣಿ"ಯ ಚಿತ್ರವನ್ನು ೧' x ೧' ಅಡಿ ಅಳತೆಯ ಕಾಗದದ ಮೇಲೆ ಚಿತ್ರಿಸಲಾಗಿದ್ದು ಮೂಲ ವೃತ್ತದ ಭಾಗಕ್ಕೆ ತಿಳಿ ಗುಲಾಬಿ ವರ್ಣವನ್ನು ತುಂಬಲಾಗಿದೆ. ಮೊದಲಿನ ವೃತ್ತವನ್ನು ಕೆಂಪು ವರ್ಣದಿಂದ ತುಂಬಿದ್ದು ಅದರ ಮೇಲೆ ತಿಳಿಗುಲಾಬಿವರ್ಣದ ನಾಲ್ಕು ದಳಗಳನ್ನು ಚಿತ್ರಿಸಲಾಗಿದೆ. ೨ನೆಯ ವೃತ್ತಕ್ಕೆ ನೀಲಿವರ್ಣವನ್ನು ತುಂಬಲಾಗಿದೆ. ಅದರ ಮೇಲೆ ತಿಳಿಗುಲಾಬಿವರ್ಣದ ಎಂಟು ದಳಗಳನ್ನು ಚಿತ್ರಿಸಲಾಗಿದೆ. ಮೂರನೆಯ ವೃತ್ತಕ್ಕೆ ಕಂದಗೆಂಪು ವರ್ಣವನ್ನು ತುಂಬಿದ್ದು ಅದರ ಮೇಲೆ ತಿಳಿಗುಲಾಬಿಯ ಹದಿನಾರು ದಳಗಳನ್ನು ಚಿತ್ರಿಸಲಾಗಿದೆ. ನಾಲ್ಕನೆಯ ವೃತ್ತಕ್ಕೆ ತಿಳಿ ಗುಲಾಬಿ ವರ್ಣವನ್ನು ತುಂಬಲಾಗಿದ್ದು ಮೂವತ್ತೆರಡು ದಳಗಳನ್ನು ಅದೇ ವರ್ಣದಲ್ಲಿ ಚಿತ್ರಿಸಿದ್ದು ವ್ಯತ್ಯಾಸ ಕಂಡು ಬರುವುದಿಲ್ಲ. ಕಂದು ಗೆಂಪುವರ್ಣದ ಹೊರರೇಖೆ ಹಾಕಿ ಬೇರ್ಪಡಿಸಿ ತೋರಿಸಲಾಗಿದೆ. ಈ ಮೊದಲೆ ಹೇಳಿದಂತೆ ಈ ದಳಗಳಲ್ಲಿ ಅಕ್ಷರಗಳನ್ನು ಬರೆಯಲಾಗಿದೆ. ಈ ಚಕ್ರದ ಸುತ್ತಲೂ ನೀಲಿ ವರ್ಣವನ್ನು ಹಿನ್ನೆಲೆಯಾಗಿ ಹಾಕಿದ್ದು ಈ ಶಾಂಭವೀ ಚಕ್ರದ ಸುತ್ತಲೂ ಅಷ್ಟದಿಕ್ಪಾಲಕರು ತಮ್ಮ ವಾಹನಗಳ ಮೇಲೆ ಹೊರಟಿದ್ದು ಈ ಚಕ್ರದ ಸುತ್ತಲೂ ದೇವಗಣರು ನಿಂತಿದ್ದು ಇವರ ಮೇಲಿನ ಬಟ್ಟೆ ಕೆಂಪು ವರ್ಣದ್ದು, ಕೆಳಗೆ ಬಿಳಿಯ ಕುರ್ತಾದಂತಹ ಬಟ್ಟೆಯಿದ್ದು ಸೈನಿಕರಂತೆ ಸಮವಸ್ತ್ರ ಧರಿಸಿ ನಿಂತಿರುವ

ಚಿತ್ರವಾಗಿದೆ. ಒಟ್ಟಾರೆಯಾಗಿ ಶಾಂಭವೀ ಚಕ್ರದೊಂದಿಗೆ ಅಷ್ಟ ದಿಕ್ಪಾಲಕರು ಪ್ರಾಣಿಗಳು ವ್ಯಕ್ತಿಗಳ ಸಮೂಹದಿಂದಾಗಿ ವೈಶಿಷ್ಟ್ಯಪೂರ್ಣವಾಗಿ ಈ ಚಿತ್ರವು ರೂಪುಗೊಂಡಿದೆ.

*** ಕ.ವಿ.ವಿ. ಧಾರವಾಡದಲ್ಲಿ ದೊರೆತ ಚಿತ್ರ : ೧೦.೬:**

ಈ "ಶಾಂಭವೀ ಚಕ್ರೋದ್ಧರಣಿ"ಯ ಚಿತ್ರವನ್ನು ೧' x ೧' ಅಡಿ ಅಳತೆಯ ಕಾಗದದ ಮೇಲೆ ಮೂಲ ವೃತ್ತಕ್ಕೆ ಕೆಂಪು ಮಿಶ್ರಿತ ಬಿಳಿವರ್ಣವನ್ನು ತುಂಬಿದ್ದು ಇದರ ಮೇಲ್ಗಡೆ ಹಳದಿವರ್ಣದ ಮೊದಲ ಸುತ್ತಿನ ವೃತ್ತದ ಮೇಲೆ ಬಿಳಿ ವರ್ಣದ ೪ ದಳಗಳನ್ನು ಚಿತ್ರಿಸಲಾಗಿದೆ. ಕೆಂಪು ವರ್ಣದ ಎರಡನೆಯ ವೃತ್ತದ ಸುತ್ತಿನ ಮೇಲೆ ಬಿಳಿವರ್ಣದ ೮ ದಳಗಳನ್ನು ಚಿತ್ರಿಸಲಾಗಿದೆ. ಮೂರನೆಯ ಸುತ್ತಿನ ವೃತ್ತಕ್ಕೆ ನೀಲಿ ವರ್ಣವನ್ನು ತುಂಬಿದ್ದು ಅದರ ಮೇಲೆ ಬಿಳಿ ವರ್ಣದ ೧೬ ದಳಗಳನ್ನು ಚಿತ್ರಿಸಿದ್ದು, ನಾಲ್ಕನೆಯ ಸುತ್ತಿನ ವೃತ್ತಕ್ಕೆ ತಿಳಿ ಗುಲಾಬಿ ವರ್ಣವನ್ನು ತುಂಬಿದ್ದು ಅದರ ಮೇಲೆ ೩೨ ದಳಗಳನ್ನು ಹಳದಿ ವರ್ಣದಲ್ಲಿ ಚಿತ್ರಿಸಲಾಗಿದೆ. ಇದರಲ್ಲಿ ಐದನೆಯ ವೃತ್ತವನ್ನು ಹಳದಿ ಮಿಶ್ರಿತ ಕೆಂಪು ವರ್ಣದಲ್ಲಿ ಚಿತ್ರಿಸಿದ್ದು, ಬಿಳಿವರ್ಣದ ಮೂವತ್ತೆರಡು ದಳಗಳನ್ನು ಚಿತ್ರಿಸಲಾಗಿದೆ. ಈ ಚಿತ್ರಕ್ಕೆ ಅಲಂಕಾರಿಕ ನಕ್ಷೆಯ ಸುತ್ತನ್ನು ಮಾಡಲಾಗಿದೆ. ಅದರ ಹಿನ್ನೆಲೆಯಲ್ಲಿ ಹಸಿರುಕಪ್ಪು ವರ್ಣವನ್ನು ತುಂಬಿದ್ದು ಮಾಡಿನ ಆಕಾರದಲ್ಲಿ ಗೆರೆಗೆರೆಗಳನ್ನು ಅಡ್ಡವಾಗಿ ಎಳೆದು ಅಲಂಕಾರಿಕವಾಗಿ ಚಿತ್ರಿಸಲಾಗಿದೆ.

## ೧೧. ಗೋಮುಖೋದ್ಧರಣಿ

**ವಾಚ್ಯ ವಸ್ತು ವಿಷಯ :**

ಶೂನ್ಯಲಿಂಗ ಉದ್ಧರಣಿಯಲ್ಲಿ – ಶೂನ್ಯಲಿಂಗವು ಶಿವಮಯವಾದದ್ದು, ಅದು ಕಾಲಾಗ್ನಿಯ ಹಾಗೆ ಕಾಂತಿಯಿಂದ ಕೋಟಿ ಮಿಂಚುಗಳಷ್ಟು ಬೆಳಕು ಪ್ರಕಾಶಿಸುತ್ತದೆ. ಗೋಮುಖ ಆಕಾರವಾಗಿ ಸಂಪೂರ್ಣವಾಗಿ ಉತ್ಸಾಹದಿಂದ ಭಕ್ತಿಭಾವದಿಂದ ತುಂಬಿ ಅನಾದಿ ಜಂಗಮದ ಎಡಗೈಯಲ್ಲಿ ಲಿಂಗವು ಸ್ಥಾಪಿತವಾಗಿ ಉದ್ಧರಿಸುವುದು ಎಂದಿದೆ. ವೃಷಭೋದ್ಧರಣಿಯಲ್ಲಿ – ವೃಷಭೇಶ್ವರನ ಮುಖವೇ ಗೋಮುಖ, ಬಿಂದುವೇ ಪೀಠ, ಹುಂಕಾರನಾದವೇ ಶಿಖಾಗ್ರದ ತೇಜೋಮಯಲಿಂಗ, ಇಂತೀನಾದಬಿಂದು ಸಂಯುಕ್ತವಾದುದೇ ಶಿವಲಿಂಗ. ಆ ಶಿವಲಿಂಗವು ವೃಷಭೇಶ್ವರನ ಸಮ್ಮುಖದಲ್ಲಿ ಅಗಲದಿರ್ಪಕಾರಣ ಲಿಂಗಾವಲೋಕನ ದರ್ಶನಾಕಾಂಕ್ಷೆ ಉಳ್ಳವರಿಗೆ ವೃಷಭ ಪುರುಷ ಎಂದು ವಿವರಿಸಲಾಗಿದೆ. ಜಂಗಮ ಮೂರ್ತಿ ಉದ್ಧರಣಿಯಲ್ಲಿ ಹೀಗೆ ಗೋಮುಖೋದ್ಧರಣಿಯ ಕುರಿತು ಪ್ರಸ್ತಾಪಿಸಲ್ಪಟ್ಟಿದ್ದು ಪ್ರತ್ಯೇಕವಾದ ವಾಚ್ಯ ದೊರತಿಲ್ಲವಾದ್ದರಿಂದ ಚಿತ್ರದ ಕುರಿತು ಇಲ್ಲಿ ವಿಶ್ಲೇಷಿಸಲಾಗಿದೆ.

***"ಶಿವಾನುಭವ ಶಾಸ್ತ್ರ" ದಲ್ಲಿ ದೊರೆತ ಚಿತ್ರ : ೧೧.೧ :**

"ಗೋಮುಖೋದ್ಧರಣಿ" ಚಿತ್ರವನ್ನು ಕಾಗದದ ಮೇಲೆ ರೇಖಾಪ್ರಧಾನವಾಗಿ ಚಿತ್ರಿಸಲಾಗಿದೆ. ಕಾಗದದ ಮೇಲ್ಭಾಗದಲ್ಲಿ ೨ ಇಂಚು ಅಗಲವಾಗಿ, ಒಂದು ಇಂಚು ದಪ್ಪವಾಗಿರುವಂತೆ ಆಯತವನ್ನು ರಚಿಸಿಕೊಂಡು

ಇಂತಹ ಒಟ್ಟು ಏಳು ಮನೆಗಳನ್ನು ಪೂರ್ವೋತ್ತರವಾಗಿ ರಚಿಸಿಕೊಂಡಿದ್ದು ಕೆಳಗಿನಿಂದ ಮೇಲಕ್ಕೆ ಒಂದೊಂದು ಮನೆಗಳಲ್ಲಿ ಷಡಕ್ಷರಿ ಮಂತ್ರಗಳ ಅಕ್ಷರನ್ಯಾಸಮಾಡಿದ್ದು ನ, ಮಃ, ಶಿ, ವಾ, ಯ, ಓಂ, ಎಂದು ಆರು ಮನೆಗಳಲ್ಲಿ ಗುರುತಿಸಿದ್ದು ಮೇಲಿನ ಆಯತದಲ್ಲಿ ಸರಿಯಾದ ನಾಲ್ಕು ಭಾಗಗಳನ್ನು ಮಾಡಿ ಮೇಲಿನ ಎರಡು ಮನೆಗಳಲ್ಲಿ "ಸಂ" ಮತ್ತು "ಹಂ" ಎಂದು, ಕೆಳಗಿನ ಎರಡು ಮನೆಗಳ ಎಡಬಲಗಳಲ್ಲಿ ಒಂದೊಂದು ಮನೆಗಳನ್ನು ಮಾಡಿಕೊಂಡು ಒಂದನೇ ಮನೆಯಲ್ಲಿ "ಕ್ಷಂ" ಇದ್ದರೆ ಅದರ ಬದಿಯಲ್ಲಿ ಇದೇ ಅಕ್ಷರ ಕೆಳಮುಖವಾಗಿದೆ. ಮೂರನೇ ಮನೆಯಲ್ಲಿ "ಅಂ" ಅಕ್ಷರ ಇದ್ದರೆ ಅದರ ಬದಿಯಲ್ಲಿ ಅದೇ ಅಕ್ಷರ ಕೆಳಮುಖವಾಗಿದೆ. ಈ ನಾಲ್ಕೂ ಮನೆಗಳ ಕೆಳಗಡೆ "ಓಂ" ಮನೆಯಿಂದ "ನ" ಮನೆಯವರೆಗೆ ಎಡಬಲಗಳಲ್ಲಿ ಇಪ್ಪತ್ತೆರಡು (೨೨) ಮನೆಗಳಂತೆ ಎರಡೆರಡು ಸಾಲುಮನೆಗಳನ್ನು ಮೂಲ ಮನೆಗಳ ಎಡಬಲಗಳಲ್ಲಿ ರಚಿಸಲಾಗಿದೆ. ಒಂದು ಸಾಲಿನಲ್ಲಿ ಬರೆದ ೨೨ ಅಕ್ಷರಗಳನ್ನು ಇನ್ನೊಂದು ಸಾಲಿನಲ್ಲಿ ತಲೆ ಕೆಳಗಾಗಿ ಬರೆಯಲಾಗಿದೆ. ಹೀಗೆ ಎರಡು ಬದಿಗೆ ಮಾಡಲಾಗಿದ್ದು, ಕೆಳಗಿನ ಭಾಗದಲ್ಲಿ ಕೊನೆಯ ಎರಡು ಮನೆಗಳ ರೇಖೆಗಳನ್ನೇ ಅರ್ಧ ವೃತ್ತಾಕಾರವಾಗಿ ಮತ್ತೊಂದು ಬದಿಯ ಕೊನೆಯ ಎರಡು ಮನೆಗಳಿಗೆ ಕೂಡಿಸಲಾಗಿದೆ. ಅವುಗಳಲ್ಲಿ ಮತ್ತೆ ನಾಲ್ಕು ಭಾಗಗಳನ್ನು ಮಾಡಿಕೊಂಡು ಮೇಲ್ಗಡೆ ಅಕ್ಷರಗಳನ್ನು ಬರೆದಿದ್ದು ಆ ಅಕ್ಷರಗಳೇ ಕೆಳಮುಖವಾಗಿ ಕೆಳಗಡೆಯ ನಾಲ್ಕರಲ್ಲಿ ಬರೆಯಲಾಗಿದೆ. ಹೀಗೆ ಚಿತ್ರವನ್ನು ಬರೆಯಲಾಗಿದ್ದು ಇವುಗಳಲ್ಲಿ ಅಕ್ಷರನ್ಯಾಸ ಮಾಡಿದ್ದು ಕೆಳಗಿನಂತಿದೆ.

* ಒಂದನೆಯ ಸಾಲಿನಲ್ಲಿ : ಸಂ. ಹಂ.
* ಎರಡನೆಯ ಸಾಲಿನಲ್ಲಿ : "ಕ್ಷಂ" ಬದಿಯಲ್ಲಿ ಇದೇ ಅಕ್ಷರ ಕೆಳಮುಖವಾಗಿದೆ. ಅಂತೆಯೇ "ಅಂ" ಅಕ್ಷರ ಬರೆಯಲಾಗಿದ್ದು ಬದಿಯಲ್ಲಿ ಈ ಅಕ್ಷರ ಕೆಳಮುಖವಾಗಿದೆ.
* ಮೂರನೆಯ ಸಾಲಿನ ಮಧ್ಯದ ಮೂಲ ಮನೆಗಳಲ್ಲಿ : ಕೆಳಗಿನಿಂದ ಮೇಲಕ್ಕೆ ನ, ಮಃ, ಶಿ, ವಾ, ಯ, ಓಂ, ಎಂಬ ಷಡಕ್ಷರಿ ಮಂತ್ರಾಕ್ಷರಗಳ ವಿನ್ಯಾಸ ಮಾಡಲಾಗಿದೆ.
* ೧) ಮೂಲಮನೆಯ ಎಡಗಡೆಯಲ್ಲಿ : ಆಂ, ಇಂ, ಈಂ, ಉಂ, ಊಂ, ಋ, ೠ, ಲ್ರಂ, ಲ್ರೂಂ, ಎಂ, ಐಂ, ಓಂ, ಔಂ, ಅಂ, ಅಃ, ಕಂ, ಖಂ, ಗಂ, ಘಂ, ಜಂ, ಚಂ, ಛಂ, ಒಟ್ಟು ೨೨ ಅಕ್ಷರಗಳನ್ನು ಹೊಂದಿದ್ದು ಅದರ ಬದಿಯ ಸಾಲುಗಳಲ್ಲಿ ಆಯಾ ಅಕ್ಷರಗಳನ್ನು ತಲೆಕೆಳಗಾಗಿ ಬರೆಯಲಾಗಿದೆ.
* ೨) ಮೂಲಮನೆಯ – ಕೆಳಗಡೆಯ ಗೋಲಾಕಾರದಲ್ಲಿ : ಜಂ, ಝಂ, ಞಂ, ಟಂ, ಎಂದು ನಾಲ್ಕು ಅಕ್ಷರಗಳನ್ನು ಬರೆದಿದ್ದು ಕೆಳಗಡೆಯ ನಾಲ್ಕು ಮನೆಗಳಲ್ಲಿ ಆಯಾ ಅಕ್ಷರಗಳನ್ನು ತಲೆಕೆಳಗೆ ಮಾಡಿ ಬರೆಯಲಾಗಿದೆ.
* ೩) ಮೂಲಮನೆಯ – ಬಲಗಡೆಯಲ್ಲಿ : ಠಂ, ಡಂ, ಢಂ, ಣಂ, ತಂ, ಥಂ, ದಂ, ಧಂ, ನಂ, ಪಂ, ಫಂ, ಬಂ, ಭಂ, ಮಂ, ಯಂ, ರಂ, ಲಂ, ವಂ, ಶಂ, ಕ್ಷಂ, ಸಂ, ಳಂ, ಎಂದು ೨೨ ಅಕ್ಷರಗಳನ್ನು ಹೊಂದಿದ್ದು ಅದರ ಬದಿಯ ಸಾಲಿನಲ್ಲಿ ಆಯಾ ಅಕ್ಷರಗಳನ್ನು ತಲೆಕೆಳಗಾಗಿ ಬರೆಯಲಾಗಿದೆ.

ಹೀಗೆ ಗೋಮುಖೋದ್ಧರಣಿಯ ಚಿತ್ರವನ್ನು ಬರೆಯಲಾಗಿದೆ. ಇದರಲ್ಲಿ ಮೂಲ ಷಡಕ್ಷರಿ ಮಂತ್ರಗಳ ಸುತ್ತಲೂ ಕನ್ನಡದ ೫೨ ಅಕ್ಷರಗಳ ನ್ಯಾಸ ಮಾಡಲಾಗಿದೆ.

*** ಕ.ವಿ.ವಿ. ಹಂಪಿಯಲ್ಲಿ ದೊರೆತ ಚಿತ್ರ : ೧೧.೨ :**

ಈ "ಗೋಮುಖೋದ್ಧರಣಿ" ಚಿತ್ರ ಕಾಗದದ ಮೇಲೆ ಮಿಶ್ರ ಮಾಧ್ಯಮದಲ್ಲಿ ರಚಿಸಿದ್ದಾಗಿದೆ. ಮಧ್ಯದ ಮನೆಗಳು ತಿಳಿಹಸಿರು ತಿಳಿಗೆಂಪು ವರ್ಣದಲ್ಲಿದ್ದು ಮೊದಲಿನ ಮನೆ ಬಿಳಿಯ ವರ್ಣದಲ್ಲಿದೆ. ಕೆಳಗಿನ ಮನೆಯಲ್ಲಿ ಹೂವನ್ನು ತೆಗೆದಿದ್ದು ಅದರ ಕೆಳಗಿನ ಮನೆಗಳಲ್ಲಿ ಷಡಕ್ಷರಿಮಂತ್ರದ ಅಕ್ಷರಗಳನ್ನು ನ್ಯಾಸಮಾಡಿದ್ದು ಆರೂ ಅಕ್ಷರಗಳಿರುವ ಹಿನ್ನೆಲೆಯನ್ನು ಬಿಳಿವರ್ಣದಿಂದ ಹೂವಿನ ಆಕಾರದಲ್ಲಿ ಮಾಡಲಾಗಿದೆ. ಈ ಮೂಲ ಮನೆಗಳ ಎಡಬಲಗಳಲ್ಲಿ ಎರಡು ಸಾಲುಗಳ ಬದಲಿ ಮೂರು ಮೂರು ಸಾಲುಗಳಲ್ಲಿ ಚಿಕ್ಕ ೨೨ ಮನೆಗಳನ್ನು ಮಾಡಿದ್ದು ಅಕ್ಷರನ್ಯಾಸವಿರುವ ಎರಡು ಮನೆಗಳನ್ನು ಬಿಳಿವರ್ಣದಲ್ಲಿದ್ದು ನಡುವಿನ ಮನೆಗಳನ್ನು ತಿಳಿಹಳದಿ, ಹಸಿರು, ಕೆಂಪುವರ್ಣದಲ್ಲಿ ರಚಿಸಲಾಗಿದೆ. ಕೆಳಗಿನ ಅರ್ಧಗೋಲಾಕಾರದಲ್ಲಿಯ ನಾಲ್ಕು ಮನೆಗಳಲ್ಲಿ ನಡುವಿನ ಎರಡು ಮನೆಗಳನ್ನು ಬಿಳಿಯ ವರ್ಣ, ಪಕ್ಕದ ಮನೆಗಳನ್ನು ಕೆಂಪುವರ್ಣದಲ್ಲಿ ಚಿತ್ರಿಸಲಾಗಿದೆ. ಈ ಗೋಮುಖೋದ್ಧರಣಿಯ ಚಿತ್ರದ ಎಡಬಲಗಳಲ್ಲಿ ಚೌರಸದಲ್ಲಿ ಕಪ್ಪು ವರ್ಣದ ರೇಖೆಗಳಿಂದ ಚಿತ್ರಿಸಿದ್ದು ಕೆಳಗಿನ ಅರ್ಧಭಾಗದಲ್ಲಿ ಬಿಳಿಯದಾಗಿ ಹೂವುಗಳನ್ನು ಚಿತ್ರಿಸಿದ್ದು ಮೇಲಿನ ಉಳಿದರ್ಧಭಾಗದಲ್ಲಿ ಚೌರಸಾಕಾರದಲ್ಲಿ ರೇಖಾಚಿತ್ರಗಳನ್ನು ಮಾಡಲಾಗಿದೆ. ಅಂಚಿಗೆ ಹಳದಿ ವರ್ಣದ ಪಟ್ಟಿ ಇದ್ದು ಅದರ ಮೇಲೆ ಡ್ರಾಯಿಂಗ್ ಮಾಡಲಾಗಿದೆ.

*** ಕ.ವಿ.ವಿ. ಹಂಪೆಯ ತಾಳೆಗರಿ ಚಿತ್ರ : ೧೧.೩ :**

ತಾಳೆ ಓಲೆಗರಿ ಎರಡರ ಮೇಲೆ ಕಪ್ಪು ವರ್ಣದ ರೇಖಾಚಿತ್ರದಲ್ಲಿ ಚಿತ್ರಿಸಲಾಗಿದ್ದು, "ಗೋಮುಖೋದ್ಧರಣಿ" ಯನ್ನು ಈ ಗರಿಯ ಎಡಭಾಗದಲ್ಲಿ ಆಯತವನ್ನು ಮಾಡಿಕೊಂಡು ಅದರಲ್ಲಿ ಚಿತ್ರಿಸಲಾಗಿದೆ. (ಬಲಗಡೆ ಒಂದು ಮುಖೋದ್ಧರಣಿ ಇದೆ.) ಚಿತ್ರದ ವಿನ್ಯಾಸವನ್ನು ಮೇಲೆ ತಿಳಿಸಿದಂತೆ ಚಿತ್ರಿಸಲಾಗಿದ್ದು ಅಕ್ಷರವಿನ್ಯಾಸವನ್ನು ಹಾಗೇ ಮಾಡಲಾಗಿದೆ. ಈ ಚಿತ್ರದ ಮೇಲ್ಗಡೆಯ ಮೂಲೆಗಳಲ್ಲಿ ದಳಗಳನ್ನು ಧ್ವಜದಂತೆ ಮಾಡಲಾಗಿದೆ. ಈ ಚಿತ್ರದ ಎಡಬಲಗಳಲ್ಲಿ ವೃಕ್ಷವೊಂದರ ಕೆಳಗಡೆ ಕಟ್ಟೆಯ ಮೇಲೆ ಕುಳಿತಿರುವಂತಹ ವ್ಯಕ್ತಿಯ ಚಿತ್ರವನ್ನು ತೆಗೆಯಲಾಗಿದ್ದು ಕೆಳಗಿನ ತಾಳೆಗರಿಯ ಎಡಬಲಗಳಲ್ಲಿ ಇಂತಹದೇ ಚಿತ್ರಗಳನ್ನು ಚಿತ್ರಿಸಲಾಗಿದೆ.

*** ಗು.ವಿ.ವಿ. ಗುಲಬರ್ಗಾದಲ್ಲಿ ದೊರೆತ ಚಿತ್ರ : ೧೧.೪:**

ಈ "ಗೋಮುಖೋದ್ಧರಣಿ ಚಿತ್ರ" ವನ್ನು ಜಂಗಮ ಮೂರ್ತಿ ಉದ್ಧರಣಿ ಚಿತ್ರದೊಂದಿಗೆ ಚಿತ್ರಿಸಲಾಗಿದೆ. ಇದನ್ನು ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ಚಿತ್ರದ ಬಲಬದಿಯಲ್ಲಿ ಕೆಂಪುವರ್ಣದ ಹಿನ್ನೆಲೆಯಲ್ಲಿ ಜಂಗಮಮೂರ್ತಿ ಉದ್ಧರಣಿ ಚಿತ್ರವನ್ನು ಮಾಡಿದ್ದು ಇದರ ಎಡಗಡೆ ಆಯತಾಕಾರದಲ್ಲಿ ಕಪ್ಪು ವರ್ಣದ ಹಿನ್ನೆಲೆಯಲ್ಲಿ "ಗೋಮುಖೋದ್ಧರಣಿಯ ಚಿತ್ರ"ವನ್ನು ರಚಿಸಲಾಗಿದೆ. ಚಿತ್ರದ ವಿನ್ಯಾಸವನ್ನು ಮೊದಲೇ ಹೇಳಿದಂತೆ

*** ಕ.ವಿ.ವಿ. ಹಂಪಿಯ ವರ್ಣಚಿತ್ರ : ೧೨.೩ :**

ಈ "ಮಹಾಲಿಂಗೋದ್ಧರಣಿ" ಯನ್ನು ಕಾಗದದ ಮೇಲೆ ರೇಖಾಪ್ರಧಾನವಾಗಿ ಮಿಶ್ರಮಾಧ್ಯಮದಲ್ಲಿ ರಚಿಸಲಾಗಿದೆ. ಮೇಲೆ ಚಿತ್ರದ ವಿವರಣೆಯನ್ನು ಮಾಡಿದಂತೆ ಕಪ್ಪುವರ್ಣದ ರೇಖೆಗಳಿಂದ ಚಿತ್ರಿಸಲಾಗಿದೆ. ಮಹಾಲಿಂಗೋದ್ಧರಣಿಯ ಚಿತ್ರದ ಮನೆಗಳಲ್ಲಿ ಮೇಲೆ ಹೇಳಿದಂತೆ ಇಲ್ಲಿಯೂ ಅಕ್ಷರ ವಿನ್ಯಾಸವನ್ನು ಮಾಡಲಾಗಿದೆ. ಖಾಲಿ ಇರುವ ಮನೆಗಳಿಗೆ ಕೆಂಪುವರ್ಣವನ್ನು ತುಂಬಲಾಗಿದೆ. ಈ ಕಲಾಕೃತಿಯ ವೈಶಿಷ್ಟ್ಯವೆನ್ನುವಂತೆ ಲಿಂಗುವಿನ ಮೇಲ್ಭಾಗದಲ್ಲಿ ಅರ್ಧವೃತ್ತಾಕಾರದ ಬದಲಿಗೆ ಶಿವನ ಮುಖವನ್ನೇ ಚಿತ್ರಿಸಲಾಗಿದೆ. ಹಣೆಯಲ್ಲಿ ಇಷ್ಟಲಿಂಗವನ್ನು ಧರಿಸಿದ್ದು, ಕೋರೆಮೀಸೆಗಳನ್ನು ಹೊಂದಿದ ಮುಖ, ಹಾಗೂ ಬುಜದ ಭಾಗವನ್ನು ತೋರಿಸಿರುವುದು ದೊರೆತ ಉದ್ಧರಣಿ ಚಿತ್ರಗಳಲ್ಲಿಯೇ ವಿಶೇಷವಾದುದಾಗಿದೆ. ಈ ಶಿವಮೂರ್ತಿಯ ಎಡಬಲಗಳಲ್ಲಿ ನಾಗರ ಹಾವುಗಳು ಹೆಡೆಬಿಚ್ಚಿಕೊಂಡು ಕುಳಿತಿವೆ. ಹಸಿರು ಕೆಂಪುವರ್ಣದಿಂದ ನಕ್ಷೆಗಳನ್ನು ಮಾಡಿದ್ದು ಶಿವನ ತಲೆಯ ಮೇಲಿಂದ ಎಡಬಲಗಳಲ್ಲಿ ಹೂವಿನ ಮಾಲೆಯನ್ನು ಚಿತ್ರಿಸಲಾಗಿದೆ. ಕಂದಗೆಂಪು ವರ್ಣದ ಪಟ್ಟಿಯನ್ನು ಸುತ್ತಲೂ ಹಾಕಲಾಗಿದೆ.

*** ಗು. ವಿ.ವಿ. ಗುಲಬರ್ಗಾದಲ್ಲಿ ದೊರೆತ ಚಿತ್ರ : ೧೨.೪ :**

ಈ "ಮಹಾಲಿಂಗೋದ್ಧರಣಿ" ಚಿತ್ರವನ್ನು ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದ್ದು ಮೇಲೆ ಹೇಳಿದಂತೆ ಚಿತ್ರವನ್ನು ಇಲ್ಲಿಯೂ ರಚಿಸಲಾಗಿದ್ದು ಇಲ್ಲಿ ರಚನೆಗೊಂಡ ಮನೆಗಳಲ್ಲಿಯೂ ಮೇಲೆ ಹೇಳಿದಂತೆ ಅಕ್ಷರವಿನ್ಯಾಸವನ್ನು ಮಾಡಲಾಗಿದೆ. ಆದರೆ, ವರ್ಣವಿನ್ಯಾಸದಲ್ಲಿ ಬದಲಾವಣೆ ಇದ್ದು ಇಲ್ಲಿ ರಚನೆಗೊಂಡ ಮನೆಗಳಿಗೆ ಹಳದಿ, ಕೆಂಪು ಮತ್ತು ಕಪ್ಪು ವರ್ಣಗಳನ್ನು ತುಂಬಲಾಗಿದೆ. ಲಿಂಗುವಿನ ಮೇಲ್ಗಡೆ ಭಾಗದಲ್ಲಿ ಮಧ್ಯದ ಅರ್ಧ ವರ್ತುಳಾಕಾರಕ್ಕೆ ಕಪ್ಪು ವರ್ಣವನ್ನು, ಅದರ ಬದಿಗೆ ಹಳದಿ ವರ್ಣವನ್ನು, ಅದರ ಬದಿಗೆ ಕೆಂಪು ವರ್ಣವನ್ನು ತುಂಬಲಾಗಿದೆ. ಈ ಲಿಂಗುವಿನ ಸುತ್ತಲೂ ಗುಲಾಬಿ ವರ್ಣವನ್ನು ತುಂಬಲಾಗಿದೆ. ಈ ಲಿಂಗುವಿನ ಹಿಂದುಗಡೆಯ ಎಡಬಲಗಳಲ್ಲಿ ಕಪ್ಪುವರ್ಣದ ನಾಗರಹಾವುಗಳನ್ನು ಲಿಂಗುವಿನ ಮೇಲೆ ಹಾಗೂ ಮಧ್ಯದಲ್ಲಿ ಮೇಲ್ಮುಖ ಮಾಡಿಕೊಂಡು ನಿಂತುಕೊಂಡ ಹಾಗೆ ಚಿತ್ರಿಸಲಾಗಿದೆ. ಚಿತ್ರದ ಹಿನ್ನೆಲೆಯಲ್ಲಿ ಹಳದಿ ವರ್ಣವನ್ನು ಲೇಪಿಸಲಾಗಿದೆ. ಚಿತ್ರದ ಅಂಚಿಗೆ ಅಲಂಕಾರಿಕ ನಕ್ಷೆಯನ್ನು ಬರೆಯಲಾಗಿದೆ.

*** ಧರ್ಮಸ್ಥಳದಲ್ಲಿ ದೊರೆತ ಚಿತ್ರ : ೧೨.೫ :**

ಈ "ಮಹಾಲಿಂಗೋದ್ಧರಣಿ"ಯನ್ನು ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ಚಿತ್ರರಚನೆಯ ವಿಧಾನವನ್ನು ಮೇಲೆ ತಿಳಿಸಿದಂತೆ ಅನುಸರಿಸಿ ಕಂದುಗೆಂಪುವರ್ಣದಲ್ಲಿ ರೇಖೆಗಳನ್ನು ಎಳೆದು ಚಿತ್ರಿಸಲಾಗಿದೆ. ಹಿನ್ನೆಲೆಯಲ್ಲಿ ಬಿಳಿಯ ವರ್ಣವನ್ನು ಬಳಸಲಾಗಿದೆ. ರಚನೆಗೊಂಡಿರುವ ಮನೆಗಳಲ್ಲಿ ಅಕ್ಷರಗಳನ್ನು ಕಪ್ಪುವರ್ಣದಿಂದ ಬರೆಯಲಾಗಿದೆ. ಲಿಂಗದ ಮೇಲಿನ ತುದಿಯನ್ನು ಕೇಸರಿವರ್ಣದಲ್ಲಿ ಅರ್ಧವೃತ್ತದಲ್ಲಿ ಚಿತ್ರಿಸಲಾಗಿದೆ. ಅದರ ಬದಿಯಲ್ಲಿ ಹಳದಿವರ್ಣವನ್ನು, ಮತ್ತದರ ಬದಿಯಲ್ಲಿ ಹಸಿರುವರ್ಣವನ್ನು ಅರ್ಧವೃತ್ತದಲ್ಲಿ ತುಂಬಲಾಗಿದೆ.

[illegible]

ಕೆಂಪು ರೇಖೆಗಳ ಮೂಲಕ ಚಿಕ್ಕಮನೆಗಳನ್ನು ಬರೆದು ಅವುಗಳಲ್ಲಿ ೫೨ ಅಕ್ಷರಗಳನ್ನು ಮೇಲೆ ಹೇಳಿದಂತೆ ವಿನ್ಯಾಸ ಮಾಡಲಾಗಿದೆ. ಈ ಗೋಮುಖೋದ್ಧರಣಿ ಚಿತ್ರದ ಸುತ್ತಲೂ ಅಲಂಕಾರಿಕ ನಕ್ಷಾ ಪಟ್ಟಿಯನ್ನು ಚಿತ್ರಿಸಲಾಗಿದೆ.

## ೧೨. ಮಹಾಲಿಂಗೋದ್ಧರಣಿ

**"ವಾಚ್ಯ ವಸ್ತು ವಿಷಯ" :**

ಸರ್ವಮಂತ್ರ ದೇವತಾಮಯವಾದ ಶಿವಚಕ್ರವೆಂಬುದು ಶಿವತತ್ವವಾದ ನಿಜನಿವಾಸವೆನಿಸಿ ಶರಣರಲ್ಲಿ ಅಂತರ್ಗತವಾದ ಶಿವತತ್ವವೇ ನಾದಲಿಂಗ ಬಿಂದು ಪೀಠ ತೇಜೋಮೂರ್ತಿಯಾಗಿ ಆದ್ಯಂತ ರಹಿತವೆನಿಸಿ ಸ್ಥೂಲ ಸೂಕ್ಷ್ಮ ಭರಿತನಾಗಿ ಶಿವಶರಣರಲ್ಲಿ ಕರತಳಾಮಳಕವಾಗಿ ಪ್ರಕಾಶಿಸುತಿರ್ಪ ಮಹಾಲಿಂಗಾಕಾರವಾಗಿಹುದು. ಆ ಲಿಂಗಲಕ್ಷಣವನ್ನುದ್ಧರಿಸುವ ಭೇದವ ಶಿವಾಗಮಗಳಿಂದ ವಿಸ್ತರಿಸಲಾಯಿತು. ಹದಿನೆಂಟು ಸೂತ್ರಗಳು ಪೂರ್ವದಿಂದ ಪಶ್ಚಿಮಕ್ಕೆ ಇರುವವು. ದಕ್ಷಿಣೋತ್ತರವಾಗಿ ಹದಿನೇಳು ಪಂಕ್ತಿಗಳನ್ನುಳ್ಳ ಲಿಂಗದಾಕಾರವಾಗಿಹುದು. ಕಮಲ ಪೀಠದಿಂದ ಕೆಳಮಧ್ಯದಲ್ಲಿ "ಆಧಾರಸ್ಥಾನ"ದಲ್ಲಿ : ನಾಲ್ಕು ಚೌಕ(ಕೋಷ್ಠ) ಮನೆಗಳಲ್ಲಿ ೧) ವ ೨) ಶ ೩) ಷ ೪) ಸ, ಎಂಬ ಈ ನಾಲ್ಕು ಅಕ್ಷರಗಳು ಇರುವವು. ಇದರ ಮೇಲುಗಡೆ ಆರು ಚೌಕ ಮನೆಗಳಲ್ಲಿ ೧) ಬ ೨) ಭ ೩) ಮ, ೪) ಯ ೫)ರ ೬) ಲ ಎಂಬ ಆರು ಅಕ್ಷರಗಳು, ಇದರ ಮೇಲುಗಡೆ ಮನೆಗಳು "ಮಣಿಪೂರಕ ಸ್ಥಾನ"ವಾಗಿರುವವು. ಆ ಸ್ಥಾನದ ಹತ್ತುಮನೆಗಳಿಗೆ ೧) ಡ, ೨) ಢ ೩) ಣ ೪) ತ, ೫) ಥ, ೬) ದ, ೭) ಧ, ೮) ನ, ೯) ಪ, ೧೦) ಫ ಎಂಬ ಹತ್ತು ಅಕ್ಷರಗಳು, ಇದರ ಮೇಲಿನ ಊರ್ಧ್ವ ಕಮಲ ಆಕಾರ ಮೂರ್ತಿಯ ಹೃದಯದಲ್ಲಿ ಹನ್ನೆರಡು ಮನೆಗಳಲ್ಲಿ ೧) ಕ, ೨) ಖ, ೩) ಗ, ೪) ಘ, ೫) ಙ, ೬) ಚ ೭) ಛ, ೮) ಜ ೯) ಝ, ೧೦)ಞ ೧೧) ಟ ೧೨) ಠ ಎಂಬ ಹನ್ನೆರಡು ಅಕ್ಷರಗಳು ಇರುವವು. ಇದರ ಮೇಲಿನ ಊರ್ಧ್ವ ಪೀಠಿಕೆಯ ಕಂಠಸ್ಥಾನದಲ್ಲಿ ಹದಿನಾರು ಮನೆಗಳಿದ್ದು ೧) ಅ ೨)ಆ ೩) ಇ ೪) ಈ ೫) ಉ ೬) ಊ ೭) ಋ ೮) ೠ ೯) ಌ ೧೦) ೡ ೧೧) ಎ ೧೨) ಐ ೧೩) ಓ ೧೪) ಔ ೧೫) ಅಂ ೧೬) ಅಃ ಎಂಬ ಷೋಡಕ್ಷಾಕ್ಷರಂಗಳು, ಅದರಿಂದ ಮೇಲಿನ ಆದ್ಯ ಪ್ರಾದಾರಿಕೆಯೆಂಬ ಆಜ್ಞಾ ಚಕ್ರದಲ್ಲಿ ನಾಲ್ಕು ಚೌಕ ಮನೆಗಳು, ಮಧ್ಯದಲ್ಲಿ ಎರಡು ದಳಗಳಲ್ಲಿ ಹಂ, ಸ, ೨ ಅಕ್ಷರಗಳು ಹಾಗೂ ಹಂ, ಕ್ಷಂ ಈ ಎರಡು ವರ್ಣಗಳು ಇರುವವು. ಕಳಸದ ಮೇಲ್ಭಾಗದಲ್ಲಿ ಬಿಂದುಸೂತ್ರಗಳಾದ ಶ್ರೇಷ್ಠ ಬಿಂದು, ಶ್ರೇಷ್ಠ ವಿದ್ಯ, ಶಬ್ದತತ್ವ, ಶಬ್ದಬ್ರಹ್ಮ, ಶಿವತತ್ವ, ಷಡ್ವಿಧ ಬೀಜ, ಶಿವಲಿಂಗ, ಪೀಠ, ಯೋಗಪೀಠ, ಮಂತ್ರಪೀಠ, ವ್ಯೋಮಶಕ್ತಿ, ವಿದ್ಯಾಶಕ್ತಿ, ವಾಗೀಶ್ವರಿ, ಅನಾಹತೆ, ಅಮೋಘ ವಾಕುಗಳಾಗಿವೆ. ಈ ಬಿಂದು ಸೂತ್ರಗಳು ಮೇಲ್ಮುಖ ಸ್ಥಳವಾದ ಹದಿನೆಂಟು ರೇಖೆಗಳು. ಈ ಕುರಿತು ಹೆಚ್ಚಿನ ವಿವರವನ್ನು ಅನುಬಂಧದಲ್ಲಿ ನೋಡಬಹುದಾಗಿದೆ.[೪೭]

---

೪೭. ಶ್ರೀ ಸಿದ್ಧಲಿಂಗಮಹಾಸ್ವಾಮಿಗಳು : ಶಿವಾನುಭವಶಾಸ್ತ್ರ : ಪುಟ ೬೪

*** ಶಿವಾಗಮ ಸೌರಭದಲ್ಲಿ ದೊರೆತ ಚಿತ್ರ : ೧೨.೧ :**

ಈ "ಮಹಾಲಿಂಗೋದ್ಧರಣಿಯ ಚಿತ್ರ" ಶಿವಾಗಮ ಸೌರಭದ ಗ್ರಂಥದಲ್ಲಿ ವಾಚ್ಯ ಸಹಿತ ಪಟಲವು ಪ್ರಕಟವಾಗಿದೆ. ಈ ಚಿತ್ರವು ರೇಖಾಚಿತ್ರವಾಗಿದೆ. ಕಾಗದದ ಮಧ್ಯದಲ್ಲಿ ಮೇಲಿನಿಂದ ಅರ್ಧ ಇಂಚು ಅರ್ಧ ಇಂಚು (½" x ½) ಗಳ ಚೌರಸವನ್ನು ರಚಿಸಿಕೊಂಡು ಸಮಾಂತರ ಚೌರಸಗಳನ್ನು ಕೆಳಮುಖವಾಗಿ ೧೬ (ಹದಿನಾರು) ಮನೆಗಳನ್ನು ರಚಿಸಿಕೊಂಡಿದ್ದು ಮೇಲಿನ ಎರಡು ಮನೆಗಳನ್ನು ಬಿಟ್ಟು ಕೆಳಗಡೆ ಇರುವ ನಾಲ್ಕು ಚೌರಸಗಳಿಗೆ ಬಲಗಡೆ ಮತ್ತು ಎಡಗಡೆ ಎರಡೆರಡು ಚೌರಸಗಳನ್ನು ಬೆಳೆಸಿಕೊಳ್ಳಲಾಗಿದೆ. ಅದರ ಕೆಳಗಡೆಯ ಚೌರಸಕ್ಕೆ ಎಡ ಮತ್ತು ಬಲಭಾಗದಲ್ಲಿ ಎಂಟೆಂಟು ಚೌರಸಗಳನ್ನು ರಚಿಸಿಕೊಂಡಿದ್ದು ಅದರ ಕೆಳಗಡೆಯ ಚೌರಸಕ್ಕೆ ಎಡ ಮತ್ತು ಬಲಭಾಗದಲ್ಲಿ ಆರಾರು ಚೌರಸಗಳನ್ನು ರಚಿಸಿಕೊಳ್ಳಲಾಗಿದೆ. ಅದರ ಕೆಳಗಡೆಯ ಚೌರಸಕ್ಕೆ ಎರಡೂ ಬದಿಗೆ ಐದೈದು ಚೌರಸಗಳನ್ನು ರಚಿಸಿಕೊಳ್ಳಲಾಗಿದೆ. ಅದರ ಕೆಳಗಡೆಯ ಚೌರಸಕ್ಕೆ ಎಡಬಲಗಳಲ್ಲಿ ಮೂರುಮೂರು ಚೌರಸಗಳನ್ನು ರಚಿಸಿಕೊಳ್ಳಲಾಗಿದೆ. ಅದರ ಕೆಳಗಿನ ಎರಡು ಚೌರಸಕ್ಕೆ ಎಡಬಲಗಳಲ್ಲಿ ಎರಡೆರಡು ಚೌರಸಗಳನ್ನು ರಚಿಸಿಕೊಳ್ಳಲಾಗಿದೆ. ಅದರ ಕೆಳಗಡೆಯ ಚೌರಸಕ್ಕೆ ಮೂರುಮೂರು ಚೌರಸಗಳನ್ನು ರಚಿಸಿಕೊಳ್ಳಲಾಗಿದೆ. ಅದರ ಕೆಳಗಿನ ಚೌರಸಕ್ಕೆ ಐದೈದು ಚೌರಸಗಳನ್ನು ರಚಿಸಿಕೊಂಡಿದ್ದು ಅದರ ಕೆಳಗಿನ ಚೌರಸಕ್ಕೆ ಆರಾರು ಚೌರಸಗಳನ್ನು ರಚಿಸಿಕೊಳ್ಳಲಾಗಿದೆ. ಅದರ ಕೆಳಗಿನ ಚೌರಸಕ್ಕೆ ಎಂಟು ಎಂಟು ಚೌರಸಗಳನ್ನು ರಚಿಸಿಕೊಳ್ಳಲಾಗಿದೆ. ಅದರ ಕೆಳಗಡೆಯಲ್ಲಿ ಮದ್ಯದ ಚೌರಸ ಬಿಟ್ಟು ಎಡಬಲದ ಚೌರಸಗಳನ್ನು ರಚಿಸಿಕೊಳ್ಳಲಾಗಿದೆ. ಮಧ್ಯದ ಮೇಲಿನ ಚೌರಸದ ತುದಿಯನ್ನು ಅರ್ಧಗೋಲಾಕಾರವಾಗಿ ಮಾಡಿದ್ದು ಎಡಬಲಗಳಲ್ಲಿದ್ದ ಎರಡು ಚೌರಸಗಳ ರೇಖೆಗಳನ್ನು ಮೇಲ್ಗಡೆ ಒಯ್ದು ಅರ್ಧವೃತ್ತಗಳನ್ನಾಗಿ ಮಾಡಲಾಗಿದೆ. ಈ ರೀತಿಯಲ್ಲಿ "ಮಹಾಲಿಂಗೋದ್ಧರಣಿ" ಯನ್ನು ರಚಿಸಿಕೊಂಡು ಇನ್ನು ಅಕ್ಷರ ವಿನ್ಯಾಸವನ್ನು ಮಾಡಿಕೊಳ್ಳುವುದು.

೧ ನೇ ಸಾಲಿನಲ್ಲಿ – ಹ

೨ ನೇ ಸಾಲಿನಲ್ಲಿ – ಕ್ಷ

೩ ನೇ ಸಾಲಿನಲ್ಲಿ – ಹ್ರಾಂ, ಬ, ಸ, ವ, ಹ್ರೈಂ,

೪ ನೇ ಸಾಲಿನಲ್ಲಿ – ಹ್ರೀಂ, ಅ, ಉ, ಮ, ಹ್ರಾಂ,

೫ ನೇ ಸಾಲಿನಲ್ಲಿ – ಹ್ರೊಂ, – ಓಂ – ಹ್ರಃ

೬ ನೇ ಸಾಲಿನಲ್ಲಿ – ಹಂ – ಸ

೭ ನೇ ಸಾಲಿನಲ್ಲಿ – ಅ, ಆ, ಇ, ಈ, ಉ, ಊ, ಋ, ೠ, ಯ, ಇ, ಇ, ಏ, ಐ, ಓ, ಔ, ಅಂ, ಅಃ

೮ ನೇ ಸಾಲಿನಲ್ಲಿ – ಕ, ಖ, ಗ, ಘ, ಙ, ಚ, ವಾ ಛ, ಜ, ಝ, ಞ, ಟ, ಠ

೯ ನೇ ಸಾಲಿನಲ್ಲಿ – ಡ, ಢ, ಣ, ತ, ಥ, ಶಿ, ದ, ಧ, ನ, ಪ, ಫ

೧೦ ನೇ ಸಾಲಿನಲ್ಲಿ – ಬ, ಭ, ಮ, ಮಃ, ಯ, ರ, ಲ.

೧೧ ನೇ ಸಾಲಿನಲ್ಲಿ – ವ, ಶ, ನ, ಷ, ಸ.

ಲಿಂಗ ಮಧ್ಯದಿಂದ ಏರಿಕೆ ಕ್ರಮದಲ್ಲಿ (ತಿರುವುಮುರುವಾಗಿ) ಬರೆಯುವದು

೧೨ ನೇ ಸಾಲಿನಲ್ಲಿ – ವ, ಶ, ನ, ಷ, ಸ

೧೩ ನೇ ಸಾಲಿನಲ್ಲಿ – ಬ, ಭ, ಮ, ಮಃ, ಯ, ರ, ಲ

೧೪ ನೇ ಸಾಲಿನಲ್ಲಿ – ಡ, ಢ, ಣ, ತ, ಥ, ಶಿ, ದ, ಧ, ನ, ಪ, ಫ

೧೫ ನೇ ಸಾಲಿನಲ್ಲಿ – ಕ, ಖ, ಗ, ಘ, ಙ, ಚ, ದಾ, ಛ, ಜ, ಝ, ಞ, ಟ, ಠ

೧೬ ನೇ ಸಾಲಿನಲ್ಲಿ – ಅ, ಆ, ಇ, ಈ, ಉ, ಊ, ಋ, ೠ, ಯ, ಇ, ಞ, ಏ, ಐ, ಓ, ಔ, ಅಂ, ಅಃ.

೧೭ ನೇ ಸಾಲಿನಲ್ಲಿ – ಕ್ಷ, ಳ.

ಹೀಗೆ ಅಕ್ಷರಗಳನ್ನು ನ್ಯಾಸ ಮಾಡಿರುವರು.

*** "ಉದ್ಧರಣೆ ಸಾಹಿತ್ಯ"ದಲ್ಲಿಯ ವರ್ಣಚಿತ್ರ : ೧೨.೨ :**

ಈ "ಮಹಾಲಿಂಗೋದ್ಧರಣೆಯನ್ನು" ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ಮೇಲೆ ಚಿತ್ರದ ವಿವರಣೆಯನ್ನು ಮಾಡಿದಂತೆ ಚಿತ್ರಿಸಲಾಗಿದ್ದು ಮೇಲಿನ "ಕ್ಷ"ಕಾರ ಮನೆಯಿಂದ ಕೆಳಗಿನ "ಳ" ಮತ್ತು "ಕ್ಷ" ಕಾರಗಳ ಮನೆಗಳನ್ನು ಹಳದಿ ವರ್ಣದಿಂದ ತುಂಬಿದ್ದು ಮೇಲ್ಗಡೆ "ಹ" ಕಾರದ ಮನೆಯನ್ನೊಳಗೊಂಡ "ಕ್ಷ" ಕಾರದ ಮನೆ ಹೊರತುಪಡಿಸಿ ಅರ್ಧವೃತ್ತಾಕಾರದಲ್ಲಿ ಕೆಂಪುವರ್ಣವನ್ನು ತುಂಬಲಾಗಿದೆ. ಅದಕ್ಕೆ ಹೊಂದಿಕೊಂಡು ಕಪ್ಪುವರ್ಣದ ಅರ್ಧ ವೃತ್ತಾಕಾರವನ್ನು ರಚಿಸಲಾಗಿದೆ. ಈ ಚಿತ್ರದಲ್ಲಿ ಅಕ್ಷರ ವಿನ್ಯಾಸವನ್ನು ಮೇಲಿನ ವಿವರಣೆಯಂತೆ ಮಾಡಲಾಗಿದೆ. ಈ ಮಹಾಲಿಂಗೋದ್ಧರಣೆಯ ಬಲಭಾಗದಲ್ಲಿ ಕೆಂಪು ವರ್ಣದಸೂರ್ಯನನ್ನು, ಎಡಭಾಗದಲ್ಲಿ ಅರ್ಧವೃತ್ತಾಕಾರದ ಹಳದಿವರ್ಣದ ಚಂದ್ರನನ್ನು ಚಿತ್ರಿಸಲಾಗಿದೆ. ಈ ಲಿಂಗುವಿನ ಮೇಲ್ಭಾಗದ ಎಡಬಲಗಳಲ್ಲಿ ಹಾಗೂ ಮಧ್ಯಭಾಗದ ಎಡಬಲಗಳಲ್ಲಿ ಹನ್ನೆರಡು ದಳಗಳ ವೃತ್ತಗಳಿದ್ದು ಅವುಗಳಲ್ಲಿ ಆರು ಕೆಂಪು ದಳಗಳನ್ನು ಆರು ಹಳದಿ ದಳಗಳನ್ನು ಚಿತ್ರಿಸಲಾಗಿದೆ. ಈ ಹೂವುಗಳಿಗೆ ಹಾಗೂ ಚಂದ್ರನಿಗೆ ಕಪ್ಪು ವರ್ಣದ ಹೊರರೇಖೆಗಳನ್ನು ಎಳೆಯಲಾಗಿದೆ. ಚಿತ್ರದ ಹಿನ್ನೆಲೆಯಲ್ಲಿ ತಿಳಿಗಂದು ಗೆಂಪು ವರ್ಣವನ್ನು ಪಾರದರ್ಶಕವಾಗಿ ಬಳಿಯಲಾಗಿದೆ. ಈ ಲಿಂಗುವಿನ ಬದಿಯಲ್ಲಿ ೧೧ ಮಂತ್ರಗಳು, ೩೬ ತತ್ವಗಳು, ೩೮ ಕಲೆಗಳು, ೫೨ ವರ್ಣಗಳು ಎಂದು ಸಾಂಕೇತಿಕವಾಗಿ ಬರೆಯಲಾಗಿದೆ.

ಚಿತ್ರಿಸಿದ್ದು ಅಕ್ಷರವಿನ್ಯಾಸವನ್ನು ಹಾಗೇ ಮಾಡಲಾಗಿದೆ. ವರ್ಣವಿನ್ಯಾಸದಲ್ಲಿ ವಿಶೇಷತೆಯನ್ನು ಹೊಂದಿದ್ದು ಮಧ್ಯದಲ್ಲಿಯ ಷಡಕ್ಷರಿ ಮಂತ್ರಾಕ್ಷರಗಳನ್ನು ಹೊಂದಿದ ಮನೆಗಳಿಗೆ ಹಳದಿವರ್ಣವನ್ನು ತುಂಬಿದ್ದು ಇದರ ಸುತ್ತಲೂ ಇರುವ ಮನೆಗಳನ್ನು ಕೆಂಪುವರ್ಣದಲ್ಲಿ ರಚಿಸಲಾಗಿದ್ದು ಅದರ ಎಡಬಲಗಳಲ್ಲಿಯ ಮನೆಗಳಿಗೆ ಹಳದಿ ವರ್ಣವನ್ನು ತುಂಬಲಾಗಿದೆ. ಮೇಲ್ಗಡೆಯ ಎರಡು ಮನೆಗಳಿಗೆ ಹಳದಿವರ್ಣವನ್ನು ತುಂಬಲಾಗಿದೆ. ಮೇಲ್ಗಡೆಯ ಮೂಲೆಗಳಿಗೆಲ್ಲ ಕೆಂಪು ವರ್ಣದ ದಳಗಳನ್ನು ಧ್ವಜಗಳಂತೆ ಚಿತ್ರಿಸಲಾಗಿದೆ. ಇಲ್ಲಿ ವಿಶೇಷವಾಗಿ ಹಳದಿವರ್ಣದ ರೇಖೆಯನ್ನು ಮೇಲಿನ ಅಂಚಿನಿಂದ ಜಂಗಮ ಮೂರ್ತಿಯ ತಲೆಯಲ್ಲಿಂದ ಕೆಳಗಡೆ ಬಂದ ರೇಖೆಯು ಗೋಮುಖೋದ್ಧರಣೆಯ ಮೇಲ್ಗಡೆಯಿಂದ ಕೆಳಗಡೆ ಬಂದಿದ್ದು ಅಂಚಿನ ಹೊರಗಡೆ ಹೋಗಿದೆ. ಅಂದರೆ ಬಹುಶಃ ಇದರ ಅರ್ಥ ಲಿಂಗೋದ್ಧರಣಿಯಿಂದ ಜಂಗಮಮೂರ್ತಿ ಉದ್ಧರಣಿ. ಇದರಿಂದ ಗೋಮುಖೋದ್ಧರಣಿ ನಂತರ ವೃಷಭೋದ್ಧರಣಿಯಲ್ಲಿ ಪ್ರವಹಿಸುವ ಸೂಚನೆಯನ್ನು ನೀಡುತ್ತಿರುವ ಸಂಕೇತವಾಗಿರಬಹುದು.

*** ಧರ್ಮಸ್ಥಳದಲ್ಲಿ ದೊರೆತ ಚಿತ್ರ : ೧೧.೫ :**

ಈ "ಗೋಮುಖೋದ್ಧರಣಿ ಚಿತ್ರ" ವನ್ನು ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ದ್ವಾರಬಾಗಿಲಿನಂತಿರುವ ಅಲಂಕಾರಿಕ ನಕ್ಷೆಯುಳ್ಳ ಕಮಾನು, ಅವುಗಳ ಕೆಳಗಡೆಯ ಎಡಬಲಗಳಲ್ಲಿ ಅಲಂಕಾರಿಕ ನಕ್ಷೆ ಹೊಂದಿದ ಕಂಬಗಳು. ಇವುಗಳ ಮಧ್ಯದಲ್ಲಿ ಕಾವಿವರ್ಣದ ಹಿನ್ನೆಲೆಯನ್ನು ಹೊಂದಿದ್ದು, ಮಧ್ಯದಲ್ಲಿರುವ ಷಡಕ್ಷರ ವಿನ್ಯಾಸದ ಮನೆಗಳನ್ನು ಹಿನ್ನೆಲೆಯ ವರ್ಣದಲ್ಲಿ ಗುರುತಿಸಲಾಗಿದ್ದು ಅದರ ಸುತ್ತಲೂ ಇರುವ ಮನೆಗಳನ್ನು ಹಾಗೂ ಕೆಳಗಿನ ಮನೆಗಳನ್ನು ಗೋಲಾಕಾರ ಸಹಿತ ಹಳದಿವರ್ಣದಲ್ಲಿ ಗುರುತಿಸಲಾಗಿದೆ. ಕಂದುಗೆಂಪು ವರ್ಣದ ರೇಖೆಗಳಿಂದ ಚಿತ್ರಿಸಲಾಗಿದೆ. ಮೇಲ್ಗಡೆಯ ಎಲ್ಲ ಮೂಲೆಗಳಲ್ಲಿಯೂ ಒಂದೊಂದು ದಳಗಳನ್ನು ಹಳದಿಮಿಶ್ರಿತ ಹಸಿರು ವರ್ಣದಲ್ಲಿ ಧ್ವಜಗಳಂತೆ ಚಿತ್ರಿಸಲಾಗಿದೆ. ಚಿತ್ರಿಸುವ ವಿಧಾನ ಮತ್ತು ಅಕ್ಷರಗಳ ನ್ಯಾಸವನ್ನು ಮೇಲಿನಂತೆ ಚಿತ್ರಿಸಲಾಗಿದೆ. ಒಟ್ಟಾರೆ ಈ ಚಿತ್ರವು ವರ್ಣಗಾರಿಕೆಯಲ್ಲಿ ತಾತ್ವಿಕವಾಗಿ ಪ್ರಮಾಣಬದ್ಧವಾಗಿ ಅಲಂಕಾರಿಕವಾಗಿಯೂ ಇದ್ದು ಈ ಗೋಮುಖೋದ್ಧರಣಿ ಚಿತ್ರ ಸುಂದರವಾಗಿ ಮೂಡಿಬಂದಿದೆ.

*** ಕ.ವಿ.ವಿ. ಧಾರವಾಡದಲ್ಲಿ ದೊರೆತ ಚಿತ್ರ : ೧೧.೬ :**

ಈ "ಗೋಮುಖೋದ್ಧರಣಿ ಚಿತ್ರ" ವನ್ನು ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ತಿಳಿಗೆಂಪು ವರ್ಣದ ಅಂಚಿನ ಮಧ್ಯದಲ್ಲಿ ತಿಳಿನೀಲಿ ವರ್ಣವನ್ನು ತುಂಬಲಾಗಿದ್ದು ನೀಲಿವರ್ಣದ ಅಡ್ಡಲಾಗಿ ಗೆರೆಗಳನ್ನು ಹಾಕಿದ್ದು ಕಾಗದದ ಮಧ್ಯದಲ್ಲಿ ಷಡಕ್ಷರಿ ಮಂತ್ರಾಕ್ಷರಗಳಿರುವ ಮನೆಗಳಿಗೆ ಹಳದಿ ಕೆಂಪು ವರ್ಣವನ್ನು ಕ್ರಮವಾಗಿ ಕೆಳಗಿನ ಗೋಲಾಕಾರದ ಭಾಗದವರೆಗೂ ತುಂಬಲಾಗಿದ್ದು ಈ ಮಂತ್ರಾಕ್ಷರಗಳ ಸುತ್ತಲೂ ಕೆಂಪು ವರ್ಣದ ಹೂವಿಗೆ ರೇಖೆಗಳನ್ನು ಹಾಕಲಾಗಿದೆ. ಇದರ ಸುತ್ತಲೂ ತಿಳಿಗುಲಾಬಿವರ್ಣವನ್ನು ತುಂಬಿದ್ದು ಅದರಲ್ಲಿ

ಕೇಸರಿವರ್ಣದ ರೇಖೆಗಳನ್ನು ಬಳಸಲಾಗಿದೆ. ಈ ಲಿಂಗುವಿನ ಮೇಲೆ ನಾಗರಾಜ ಹೆಡೆ ಬಿಚ್ಚಿಕೊಂಡಿದ್ದು ಅದರ ಮೇಲೆ ಮತ್ತೊಂದು ಹಾವು ಹೆಡೆ ಬಿಚ್ಚಿಕೊಂಡು ಕುಳಿತಿದೆ. ಅವುಗಳ ಬಾಲವು ಲಿಂಗದ ಎಡಬಲಗಳಲ್ಲಿ ತಳುಕಾಗಿದ್ದು ಹಿನ್ನೆಲೆಯಲ್ಲಿ ಲಿಂಗದ ತಳದವರೆಗೂ ಬಂದಿವೆ. ಮತ್ತೆರಡು ಹಾವುಗಳು ಲಿಂಗದ ಕೆಳಗೆ ಎಡಬಲಗಳಲ್ಲಿ ಹೆಡೆ ಬಿಚ್ಚಿಕೊಂಡಿದ್ದು ಇವುಗಳ ಬಾಲ ಲಿಂಗದ ಮೇಲೆ ಕೂಡಿಕೊಂಡಿವೆ. ಈ ಹಾವುಗಳನ್ನು ಬಿಳಿಯ ವರ್ಣದಿಂದ ಚಿತ್ರಿಸಲಾಗಿದೆ. ಅವುಗಳ ಮೇಲೆ ಕಪ್ಪುವರ್ಣದ ಚುಕ್ಕೆಗಳನ್ನು ಮಾಡಲಾಗಿದೆ. ಇವೆಲ್ಲವನ್ನು ಅಲಂಕಾರಿಕ ರಥದ ಮದ್ಯದಲ್ಲಿ ತೋರಿಸಲಾಗಿದೆ. ಲಿಂಗದ ಹಿನ್ನೆಲೆಯಲ್ಲಿ ಕಪ್ಪು ನೀಲಿವರ್ಣವನ್ನು ತುಂಬಲಾಗಿದೆ. ಲಿಂಗುವಿನ ಎಡಬಲಗಳಲ್ಲಿ ಅಲಂಕಾರಿಕ ಕಂಬಗಳಿವೆ. ಹೀಗೆ ಸಮತೋಲನ ವರ್ಣಗಳು, ಪ್ರಮಾಣಬದ್ಧವಾದ ಆಕಾರಗಳು, ಅಲಂಕಾರಿಕ ರಥಗಳಿಂದಾಗಿ ಮಹಾಲಿಂಗೋದ್ಧರಣಿಯು ವಿಶಿಷ್ಟವಾಗಿ ರೂಪುಗೊಂಡಿದೆ.

*** ಕ.ವಿ.ವಿ. ಧಾರವಾಡದಲ್ಲಿ ದೊರೆತ ಚಿತ್ರ : ೧೨.೬:**

ಈ "ಮಹಾಲಿಂಗೋದ್ಧರಣಿ" ಚಿತ್ರವನ್ನು ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ಮೇಲೆ ಚಿತ್ರರಚನೆಯ ವಿಧಾನದ ಕುರಿತು ಹೇಳಲಾಗಿದ್ದು ಅಂತೆಯೇ ಇಲ್ಲಿಯೂ ಚಿತ್ರಿಸಲಾಗಿದೆ. ವರ್ಣಗಾರಿಕೆಯಲ್ಲಿ ಬದಲಾವಣೆ ಹೊಂದಿದ್ದು ಇಲ್ಲಿ ರಚನೆಗೊಂಡ ಮನೆಗಳ ಒಂದು ಸಾಲನ್ನು ಕೆಂಪಾಗಿ, ಇನ್ನೊಂದು ಸಾಲು ಹಳದಿವರ್ಣದಲ್ಲಿ ಹೀಗೆ ಕ್ರಮವಾಗಿ ಎಲ್ಲ ಸಾಲುಗಳನ್ನು ವರ್ಣದಿಂದ ತುಂಬಲಾಗಿದೆ. ಈ ಲಿಂಗದ ಹೊರರೇಖೆಯನ್ನು ಕೆಂಪು ವರ್ಣದಿಂದ ಎಳೆಯಲಾಗಿದೆ. ಲಿಂಗದ ಹಿಂದುಗಡೆಯಲ್ಲಿ ಮೇಲಿನ ಗೋಳಕ್ಕೆ ಹೊಂದಿಕೊಂಡು ಅದಕ್ಕಿಂತಲೂ ದೊಡ್ಡದಾಗಿ ಏಳು ಹೆಡೆಗಳುಳ್ಳ ನಾಗರಾಜನನ್ನು ಬಿಳಿಯ ವರ್ಣದಲ್ಲಿ ರಚಿಸಿದ್ದು, ಕೆಂಪು ವರ್ಣದಿಂದ ಹೊರರೇಖೆಗಳನ್ನು ಎಳೆಯಲಾಗಿದೆ. ಈ ಹೆಡೆಗಿಂತಲೂ ಚಿಕ್ಕದಾದ ಬಾಲವನ್ನು ಲಿಂಗುವಿನ ಮಧ್ಯದಲ್ಲಿ ಹಾವು ಮಡಿಚಿಕೊಂಡಿದ್ದು, ಹಿನ್ನೆಲೆಯಾಗಿ ನೀಲಿವರ್ಣವನ್ನು ಬಳಿಯಲಾಗಿದೆ. ಮಾಡಿನ ಆಕಾರದಲ್ಲಿ ಮೇಲ್ಗಡೆ ಕೆಂಪುವರ್ಣವನ್ನು ಲೇಪಿಸಿ ಹಳದಿ ವರ್ಣದ ಅಂಚನ್ನು ಮಾಡಲಾಗಿದೆ.

## ೧೩. ವೃಷಭೋದ್ಧರಣಿ

**"ವಾಚ್ಯ ವಸ್ತು ವಿಷಯ" :**

ಜಗತ್ತಿನ ಆನಂದಕ್ಕೆ ಕಾರಣವಾದ ಪುರುಷ ಭಕ್ತ ನಂದಿಕೇಶ್ವರನು ಧರ್ಮವಾಹನನೆನಿಸಿ ವೃಷಭೇಶ್ವರನಾಗಿರುವನು. ಈ ವೃಷಬೇಶ್ವರನ ಭಕ್ತಿ ರೂಪ ಲಕ್ಷಣ ಪ್ರಭಾವಗಳ ಕುರಿತು ಈ ಉದ್ಧರಣಿ ವಾಚ್ಯವು ಹೇಳುತ್ತಿದೆ.

ಶೃಂಗಗಳು – "ಅ, ಟ," ಕಾರಗಳು, ಮುಖ – "ಮ"ಕಾರ, ಶಿರಸ್ಸು–ಓಂಕಾರ, ಕರ್ಣ–"ಯ" ಕಾರ, ಚರ್ಮ(ತ್ವಕ್ಕು) – "ವ" ಕಾರದಿಂದ, ಕಣ್ಣುಗಳು – "ಶಿ"ಕಾರ, ಮೂಗು – "ನ" ಕಾರ, ದಂತಗಳು – ಬಿಂದು ಕಳೆಗಳು, ನಾಲಿಗೆ – "ಮ"ಕಾರ, ಸ್ವರನಾದ – ಓಂಕಾರ.

* **"ಬಸವಾಕ್ಷರತ್ರಯಗಳು" :-** ಕೊರಳು, ಇಣಿಡುಬ್ಬು, ಬೆನ್ನುಸುಳಿ,

* **"ಸಪ್ತಕೋಟಿ ಮತ್ರಗಳು"** : ಹ್ರುಂ, ಹ್ರಿಂ, ಹ್ರುಂ, ಹ್ರೈಂ, ಹ್ರಾಂ, ಹ್ರಃ ಇವು ಬಾಲ ಪೃಷ್ಠ ವೃಷಣ, ಗುಹ್ಯ, ಹೊಕ್ಕಳು, ಗರ್ಭ, ಸಪ್ತಕೋಟಿ ಮಂತ್ರಗಳು ರೋಮಗಳಾಗಿವೆ.

* ೧) ನಾಲ್ಕು ಚರಣಗಳು : ಪರೆ, ಪಶ್ಯಂತಿ, ಮಧ್ಯಮೆ, ವೈಖರಿ

* ೨) ನಾಲ್ಕು ಯುಗಗಳು : ಕೃತಯುಗ, ತ್ರೇತಾಯುಗ, ದ್ವಾಪರಯುಗ, ಕಲಿಯುಗ,

* ೩) ನಾಲ್ಕು ವೇದಗಳು : ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ.

* ೪) ನಾಲ್ಕು ಪಾದಗಳು : ಕ್ರಿಯಾಪಾದ, ಚರ್ಯಾಪಾದ, ಯೋಗಪಾದ, ಗ್ಲಾನಪಾದ.

* ೫) ನಾಲ್ಕು ಫಲಗಳು : ಉದಾತ್ತ, ಅನುದಾತ್ತ, ಸ್ವರಿತ, ಪ್ರಚಯ

* ೬) ನಾಲ್ಕು ಪುರುಷಾರ್ಥಗಳು : ಧರ್ಮ, ಅರ್ಥ, ಕಾಮ, ಮೋಕ್ಷ.

* **ನವಚಕ್ರಗಳು :**

ಪಶ್ಚಿಮ, ಶಿಖಾ, ಬ್ರಹ್ಮ, ಜ್ಞಾನ, ವಿಶುದ್ಧಿ, ಅನಾಹತ, ಮಣಿಪೂರಕ, ಸ್ವಾಧಿಷ್ಠಾನ, ಆಧಾರ ಚಕ್ರಗಳು ಅಂಗದಲ್ಲಿ – ದಿವ್ಯ ಕ್ಷೇತ್ರಗಳು, ಪ್ರಾಣದಲ್ಲಿ – ಪರಂಜ್ಯೋತಿರ್ಲಿಂಗಗಳು, ವೇದಂಗಳೇ – ಅಂಗ, ಪರಮ ವೀರಶೈವಾಗಮವೇ – ಪ್ರಾಣ, ಇಂತಪ್ಪ ಸರ್ವಜ್ಞತ್ವಮೂರ್ತಿಯಾದ ವೃಷಭೇಶ್ವರನ ಭಕ್ತಿ ಸಾರೋದ್ಧಾರ ಪ್ರಭಾವಗಳ ಕುರಿತು ತಿಳಿಸಲಾಗಿದೆ.[೪೮] ಈ ಕುರಿತು ಹೆಚ್ಚಿನ ವಿವರವನ್ನು ಅನುಬಂಧದಲ್ಲಿ ನೋಡಬಹುದಾಗಿದೆ.

* **ಉದ್ಧರಣೆ ಸಾಹಿತ್ಯ ದಲ್ಲಿಯ ಚಿತ್ರ : ೧೩.೧:**

ಈ ವೃಷಭೋದ್ಧರಣೆ ಚಿತ್ರವನ್ನು ೧' x ೧' ಅಡಿ ಅಳತೆಯ ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ಕಾಗದದ ಮಧ್ಯದಲ್ಲಿ ವೃಷಭದ ಚಿತ್ರವನ್ನು ರಚಿಸಿದ್ದು ಬಿಳಿಯ ವರ್ಣಕ್ಕೆ ನೀಲಿವರ್ಣದ ಛಾಯೆಯೊಂದಿಗೆ ಸುಂದರವಾಗಿ ವೃಷಭವನ್ನು ಎದುರಿಗೆ ನೋಡುತ್ತಿರುವಂತೆ ಚಿತ್ರಿಸಲಾಗಿದೆ. ಈ ವೃಷಭವು ತನ್ನ ಬಾಲವನ್ನು ಮೇಲಕ್ಕೆತ್ತಿಕೊಂಡು ನಿಂತಿದೆ. ವೃಷಭವನ್ನು ಅಲಂಕರಿಸಿದ್ದು : ನೀಲಿ ಮತ್ತು ಕೆಂಪು ಪಟ್ಟಿಗಳುಳ್ಳ ಜೂಲಕ್ಕೆ ಹಳದಿ ವರ್ಣದ ಅಂಚನ್ನು ಹಾಕಲಾಗಿದೆ. ಕೆಳಗಡೆ ಗಂಟೆ ಮತ್ತು ತಡಿಗಳನ್ನು ಜೋತುಬಿಟ್ಟಿದ್ದು ಕೊರಳಲ್ಲಿ ಹಳದಿವರ್ಣದ ಗೆಜ್ಜೆಸರ ಹಾಗೂ ಜೂಲವನ್ನು ಕಟ್ಟಿದ ಪಟ್ಟಿಯನ್ನು ಗೆಜ್ಜೆಯ ಸರದಂತೆ ಹಳದಿವರ್ಣದಲ್ಲಿ ಚಿತ್ರಿಸಲಾಗಿದೆ. ಹಣೆಯ ಪಟ್ಟಿ ಮಗಾಡವನ್ನು ಹಳದಿಯ ವರ್ಣದಲ್ಲಿ ಚಿತ್ರಿಸಲಾಗಿದ್ದು, ಕೋಡುಗಳಿಗೆ ಕೊಂಬೆಣಸನ್ನು ಹಳದಿ ವರ್ಣದಲ್ಲಿ ಚಿತ್ರಿಸಲಾಗಿದೆ. ತಾತ್ವಿಕವಾಗಿ : ವೃಷಭದ ಶೃಂಗಗಳಲ್ಲಿ – ಅ.ಟ.ಕಾರಗಳು ಮುಖದಲ್ಲಿ – ಮಕಾರ, ಶಿರಸ್ಸಿನಲ್ಲಿ – ಓಂಕಾರ, ಕರ್ಣಗಳಲ್ಲಿ–ಯಕಾರ, ತ್ವಕ್ಕಿನಲ್ಲಿ – ವಕಾರ, ಕಣ್ಣುಗಳಲ್ಲಿ – ಶಿ ಕಾರ,

೪೮. ಶ್ರೀ ಸಿದ್ಧಲಿಂಗಮಹಾಸ್ವಾಮಿಗಳು : ಶಿವಾನುಭವಶಾಸ್ತ್ರ : ಪುಟ ೪೧

ಮೂಗಿನಲ್ಲಿ – ನ ಕಾರ, ನಾಲಿಗೆಯಲ್ಲಿ – ಮ ಕಾರ, ಸ್ವರನಾದದಲ್ಲಿ – ಓಂಕಾರಗಳನ್ನು ಬರೆಯಲಾಗಿದೆ. ಕೊರಳು, ಇಣಿಬೆನ್ನು ಸುಳಿಯಲ್ಲಿ – ಬಸವಾಕ್ಷರಗಳನ್ನು ಬರೆಯಲಾಗಿದೆ. ಬಾಲ, ಪೃಷ್ಠ, ವೃಷಣ, ಗುಹ್ಯ, ಹೊಕ್ಕಳು, ಗರ್ಭಗಳಲ್ಲಿ – ಸಪ್ತಕೋಟಿ ಮಂತ್ರಗಳು ರೋಮಗಳಾಗಿವೆ. ವೃಷಭದ ಗುಹ್ಯದಿಂದ ನವಚಕ್ರಗಳು ದೇಹದ ಮೇಲೆ ಹಾಯ್ದು ಮುಖದ ಆಚೆಯಿಂದ ಕೋಡುಗಳ ಮೇಲೆ ಪಶ್ಚಿಮಚಕ್ರಗಳವರೆಗೆ ಈ ನವ ಚಕ್ರಗಳು ಹರಡಿಕೊಂಡಿದ್ದು, ಹಳದಿ ವರ್ಣದ ದಳಗಳನ್ನು ಕೆಂಪುವರ್ಣದ ರೇಖೆಗಳಿಂದ ಗುರುತಿಸಲಾಗಿದ್ದು ಕಪ್ಪುವರ್ಣದಿಂದ ದಳಗಳ ಅಕ್ಷರಗಳನ್ನು ಬರೆಯಲಾಗಿದೆ. ಈ ವೃಷಭದ ನಾಲ್ಕೂ ಕಾಲುಗಳಿಗೆ ಆಭರಣಗಳ ಸುತ್ತೋಲೆಗಳನ್ನು ಚಿತ್ರಿಸಲಾಗಿದೆ.

ವೃಷಭದ ನಾಲ್ಕೂ ಕಾಲುಗಳ ಕೆಳಗಡೆಯಲ್ಲಿ ನಾಲ್ಕು ಭಾಗಗಳನ್ನು ಮಾಡಿಕೊಂಡು ಒಂದನೇ ಭಾಗದ ಮೇಲೆ ನರನನ್ನು, ಕಂದುಗೆಂಪು ವರ್ಣದ ರುಂಡವೊಂದನ್ನು ಚಿತ್ರಿಸಿದ್ದು ಹಳದಿವರ್ಣದ ಹಣೆಯ ಪಟ್ಟಿ, ಕಿವಿಯೋಲೆಗಳನ್ನು ಹಾಗೂ ಕಪ್ಪು ವರ್ಣದ ಕೋರೆಮೀಸೆಯನ್ನು ಹೊಂದಿದ್ದು, ಇವನ ತಲೆಯ ಮೇಲೆ ವೃಷಭವು ತನ್ನ ಬಲಗಾಲನ್ನು ಇಟ್ಟಿದ್ದು ಎಡಗಾಲನ್ನು ಎರಡನೆಯ ಮನೆಯ ಮೇಲೆ, ಹಿಂದಿನ ಎಡಗಾಲನ್ನು ಮೂರನೆಯ ಮನೆಯ ಮೇಲೆ, ಹಿಂದಿನ ಬಲಗಾಲನ್ನು ನಾಲ್ಕನೆಯ ಮನೆಯ ಮೇಲೆ ಇಡಲಾಗಿದೆ. ಕೆಳಗಿನ ಈ ನಾಲ್ಕು ಮನೆಗಳಲ್ಲಿ ಆರು ಸಾಲುಗಳನ್ನು ಮಾಡಿಕೊಂಡಿದ್ದು ಅವುಗಳಲ್ಲಿ ನಾಲ್ಕು ಚರಣಗಳು, ನಾಲ್ಕು ಯುಗಗಳು, ನಾಲ್ಕು ವೇದಗಳು, ನಾಲ್ಕು ಪಾದಗಳು, ನಾಲ್ಕು ಫಲಗಳು, ನಾಲ್ಕು ಪುರುಷಾರ್ಥಗಳನ್ನು ಬರೆಯಲಾಗಿದೆ. ಹೀಗೆ ವೃಷಬೋದ್ಧರಣಿ ಚಿತ್ರವನ್ನು ಅಂದವಾಗಿ ಪ್ರಮಾಣಬದ್ಧವಾಗಿ ಚಿತ್ರಿಸಲಾಗಿದೆ.

*** ಕ.ವಿ.ವಿ. ಹಂಪೆಯ ತಾಳೆ ಓಲೆಗರಿ ಚಿತ್ರ : ೧೩.೨ :**

ತಾಳೆಓಲೆಗರಿಯ ಮೇಲೆ "ವೃಷಬೋದ್ಧರಣಿ"ಯ ಚಿತ್ರವನ್ನು ಚಿತ್ರಿಸಲಾಗಿದ್ದು, ಕಪ್ಪುವರ್ಣದ ರೇಖಾ ಪ್ರಧಾನವಾಗಿದೆ. ಓಲೆಗರಿಯ ಮಧ್ಯದಲ್ಲಿ ವೃಷಭವನ್ನು ಚಿತ್ರಿಸಲಾಗಿದ್ದು ಈ ಚಿತ್ರದಲ್ಲಿ ವೃಷಭದ ಜೂಲವನ್ನು ಪಕ್ಷಿಯ ರೆಕ್ಕೆಯಂತೆ ಅಲಂಕಾರಿಕವಾಗಿ ಚಿತ್ರಿಸಲಾಗಿದೆ. ಉಳಿದಂತೆ ಮೇಲೆ ಹೇಳಿದ ಅಂಶಗಳನ್ನು ಹೊಂದಿದ್ದು, ತಾತ್ವಿಕವಾಗಿ ನೋಡಿದರೆ ನವ ಚಕ್ರಗಳನ್ನು ಇಲ್ಲಿ ತೋರಿಸಲಾಗಿಲ್ಲ. ಉಳಿದಂತೆ ಅಕ್ಷರವಿನ್ಯಾಸವನ್ನು ಆಯಾ ಸ್ಥಳಗಳಲ್ಲಿ ಮಾಡಿದ್ದು, ಕೆಳಗಡೆ ನಾಲ್ಕು ಭಾಗಗಳನ್ನು ಮಾಡಿದ್ದು ಅಲಂಕಾರಿಕವಾಗಿ ಪೀಠದಂತೆ ಮಾಡಲಾಗಿದೆ. ಈ ವೃಷಭದ ಮೇಲೆ ಹೂವಿನ ಸರವನ್ನು ಅಡ್ಡಲಾಗಿ ಕಟ್ಟಿದ್ದು ಅಲ್ಲಲ್ಲಿ ಮೂರು ಹೂವಿನ ಹಾರಗಳನ್ನು ಕೆಳಗಡೆ ಜೋತುಬಿಡಲಾಗಿದೆ. ಎಡಬಲಗಳಲ್ಲಿ ಅಲಂಕಾರಿಕ ನಕ್ಷೆಗಳ ಚೌಕಟ್ಟನ್ನು ರಚಿಸಿಕೊಂಡಿದ್ದು ಈ ಚೌಕಟ್ಟಿನ ಮದ್ಯದಲ್ಲಿ ನಂದಿಯು ಎರಡೂ ಕೈಗಳಲ್ಲಿ ಸರಗಳನ್ನು ಹಿಡಿದುಕೊಂಡಿದ್ದು ಒಂದು ಗೆಜ್ಜೆಸರ ಇನ್ನೊಂದು ಹೂವಿನ ಹಾರದಂತಿರುವುದನ್ನು ಗಮನಿಸಬಹುದಾಗಿದೆ. ಇವನ ಹಿಂದುಗಡೆಯಲ್ಲಿ ಭಕ್ತನೊಬ್ಬ ಒಂದೇ ಕಾಲಿನ ಮೇಲೆ ನಿಂತುಕೊಂಡಿದ್ದು ಇನ್ನೊಂದು ಕಾಲನ್ನು ಮಡಿಚಿಕೊಂಡಿರುವನು. ಕೈಗಳಲ್ಲಿ ತಂಬೂರಿಯಂಥ

ವಸ್ತುವೊಂದನ್ನು ಹಿಡಿದುಕೊಂಡಿರುವನು. ಇಂತಹ ಚಿತ್ರಗಳು ವೃಷಭದ ಎಡಬಲಗಳಲ್ಲಿದ್ದು ಎರಡೂ ತಾಳೆ ಓಲೆಯ ಮೇಲೆ ನಾಲ್ಕು ಚಿತ್ರಗಳನ್ನು ಚಿತ್ರಿಸಲಾಗಿದೆ.

*** ಗು. ವಿ.ವಿ.ಗುಲಬರ್ಗಾದಲ್ಲಿ ದೊರೆತ ಚಿತ್ರ : ೧೩.೩ :**

ಈ ವೃಷಭೋದ್ಧರಣಿಯ ಚಿತ್ರವನ್ನು ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ಕಾಗದದ ಮಧ್ಯದಲ್ಲಿ ವೃಷಭನ ಚಿತ್ರವನ್ನು ಬರೆಯಲಾಗಿದ್ದು, ಹಳದಿ ಅಂಚನ್ನು ಮಾಡಿಕೊಂಡಿದ್ದು, ಹಿನ್ನೆಲೆಯಾಗಿ ಕೆಂಪುವರ್ಣವನ್ನು ಲೇಪಿಸಲಾಗಿದೆ. ಈ ಚಿತ್ರದಲ್ಲಿ ವೃಷಭದ ಜೂಲವನ್ನು ಮತ್ತು ಆಭರಣಗಳನ್ನು ಹಳದಿಪಟ್ಟಿಯಂತೆ ಚಿತ್ರಿಸಲಾಗಿದೆ. ನವಚಕ್ರಗಳನ್ನು ಕೆಂಪು, ಕಪ್ಪು, ಹಳದಿವರ್ಣಗಳಲ್ಲಿ ರಚಿಸಿದ್ದು ತಾತ್ವಿಕವಾಗಿಯಾಗಲಿ, ಅಲಂಕಾರಿಕವಾಗಿಯಾಗಲಿ ಸುಂದರವಾಗಿ ರಚನೆಗೊಂಡಿಲ್ಲ. ವೃಷಭವನ್ನು ತಿಳಿಬೂದು ವರ್ಣದಿಂದ ತುಂಬಲಾಗಿದ್ದು, ಕಪ್ಪು, ಕೆಂಪುವರ್ಣದಿಂದ ಹೊರರೇಖೆಗಳನ್ನು ಹಾಕಲಾಗಿದೆ. ಈ ವೃಷಭದಿಂದ ಕೆಳಗಡೆ ಅಂತರದಲ್ಲಿ ನಾಲ್ಕು ಮನೆಗಳನ್ನು ಮಾಡಿಕೊಂಡು ಹಳದಿ ಕೆಂಪು ವರ್ಣಗಳ ಪಟ್ಟಿಯನ್ನು ರಚಿಸಲಾಗಿದೆ. ವೃಷಭದ ಹಿಂದಿನ ಎಡಗಾಲಮೇಲೆ ಲಿಂಗದ ಚಿತ್ರವನ್ನು ವಿಶೇಷವಾಗಿ ಬಿಡಿಸಲಾಗಿದೆ. ಒಟ್ಟಾರೆ ಈ ವೃಷಭೋದ್ಧರಣಿಯ ಚಿತ್ರಕ್ಕೆ ರಂಜಕವರ್ಣವನ್ನು ಬಳಸಿದ್ದು ತಾತ್ವಿಕವಾಗಿ ಸೊರಗಿದಂತೆ ಕಂಡುಬರುತ್ತಿದೆ.

*** ಧರ್ಮಸ್ಥಳದಲ್ಲಿ ದೊರೆತ ಚಿತ್ರ : ೧೩.೪:**

ಈ "ವೃಷಭೋದ್ಧರಣಿ"ಯ ಚಿತ್ರವನ್ನು ಕಾಗದದ ಮೇಲೆ ಜಲವರ್ಣದಲ್ಲಿ ಚಿತ್ರಿಸಲಾಗಿದೆ. ಹಳದಿವರ್ಣದ ಚೌಕಟ್ಟೊಂದನ್ನು ಚಿತ್ರಿಸಿದ್ದು ಕಪ್ಪುವರ್ಣದ ಎರಡೆರಡು ರೇಖೆಗಳನ್ನು ಹಾಕಿ ಅಲಂಕರಿಸಲಾಗಿದೆ. ಕೆಳಗಡೆಯ ಪಟ್ಟಿಯಲ್ಲಿ ನಾಲ್ಕು ಮನೆಗಳನ್ನು ಮಾಡಿಕೊಂಡು, ಕಪ್ಪುವರ್ಣದಿಂದ ಮನೆಗಳನ್ನು ವಿಂಗಡಿಸಿಕೊಂಡು ಅಕ್ಷರಗಳನ್ನು ಬರೆಯಲಾಗಿದೆ. ಇವುಗಳ ಮೇಲೆ ನಿಂತುಕೊಂಡಿರುವ ವೃಷಭಕ್ಕೂ ಹಳದಿವರ್ಣವನ್ನು ತುಂಬಿದ್ದು ಕಪ್ಪುವರ್ಣದ ರೇಖೆಗಳಿಂದಲೇ ಆಭರಣಗಳನ್ನು, ನವಚಕ್ರಗಳನ್ನು ಹಾಗೂ ಜೂಲವನ್ನು ಚಿತ್ರಿಸಲಾಗಿದೆ. ಬಲಗಾಲ ಕೆಳಗಿನ ನರನನ್ನು ಹಳದಿವರ್ಣದಲ್ಲಿ ಚಿತ್ರಿಸಲಾಗಿದೆ. ಈ ವೃಷಭದ ಹಿನ್ನೆಲೆಯಲ್ಲಿ ಕೆಂಪುವರ್ಣವನ್ನು ಲೇಪಿಸಲಾಗಿದೆ. ಎರಡೇ ವರ್ಣವನ್ನು ಬಳಸಿದ್ದರೂ ವರ್ಣಗಳ ಬಳಕೆಯು ಉತ್ತಮವಾಗಿದ್ದು ರೇಖೆಗಳ ಮೇಲೆಯೂ ಪ್ರಭುತ್ವವನ್ನು ಸಾಧಿಸಿದ್ದು ತಿಳಿದುಬರುತ್ತದೆ.

*** ಬೆಂ.ವಿ.ವಿ. ಬೆಂಗಳೂರಿನ ಚಿತ್ರ : ೧೩.೫ :**

ಈ "ವೃಷಭೋದ್ಧರಣಿ" ಯ ಚಿತ್ರವನ್ನು ಕಾಗದದ ಮೇಲೆ ಜಲವರ್ಣದಲ್ಲಿ ಚಿತ್ರಿಸಲಾಗಿದೆ. ಹಳದಿವರ್ಣದ ಸುತ್ತಲೂ ಚೌಕಟ್ಟೊಂದನ್ನು ಚಿತ್ರಿಸಿದ್ದು ಅದರ ಮೇಲೆ ಹಸಿರು ಎಲೆಗಳನ್ನು ಕೆಂಪು ಹೂವುಗಳನ್ನು ಚಿತ್ರಿಸಲಾಗಿದೆ. ಕೆಳಗಿನ ಪಟ್ಟಿಯಲ್ಲಿ ನಾಲ್ಕು ಮನೆಗಳನ್ನು ವಿಂಗಡಿಸಿಕೊಂಡು ಕಪ್ಪು ವರ್ಣದಿಂದ ಅಕ್ಷರನ್ಯಾಸ ಮಾಡಲಾಗಿದೆ. ಇದರ ಮೇಲ್ಗಡೆ ಚೌರಸದ ಭಾಗವನ್ನು ಕೆಂಪುವರ್ಣದಿಂದ ತುಂಬಲಾಗಿದೆ. ಅದರ ಮಧ್ಯದಲ್ಲಿ ಬಿಳಿಬೂದುವರ್ಣದ

ವೃಷಭವನ್ನು ರಚಿಸಲಾಗಿದ್ದು ಹಸಿರುವರ್ಣದ ಜೂಲವನ್ನು, ಕೇಸರಿವರ್ಣದ ಅಂಚಿನ ಪಟ್ಟಿಯನ್ನು ಚಿತ್ರಿಸಲಾಗಿದ್ದು ಹಣೆಗಟ್ಟು, ಗೆಜ್ಜೆಗಳನ್ನು ಕೇಸರಿವರ್ಣದಲ್ಲಿ ಮಾಡಲಾಗಿದೆ. ಬಲಗಾಲಿನ ಕೆಳಗಿರುವ ನರನನ್ನು ತಿಳಿಗುಲಾಬಿ ವರ್ಣದಲ್ಲಿ ರಚಿಸಲಾಗಿದೆ. ಮೇಲಿನ ಎರಡೂ ಬದಿಗಳಲ್ಲಿ ಹಾಗೂ ಮಧ್ಯದಲ್ಲಿ ಅಲಂಕಾರಿಕ ಹೂವು ಮತ್ತು ಎಲೆಗಳನ್ನು ಕೆಳಮುಖವಾಗಿ ಚಿತ್ರಿಸಲಾಗಿದೆ. ತಾತ್ವಿಕವಾಗಿ ಅಕ್ಷರನ್ಯಾಸಗಳು ಹೆಚ್ಚಾಗಿ ಕಂಡು ಬರುವುದಿಲ್ಲ. ನವಚಕ್ರಗಳನ್ನು ಮಾಡಿಲ್ಲ. ಒಟ್ಟಾರೆ ಚಿತ್ರವು ಚೆನ್ನಾಗಿ ಮೂಡಿಬಂದಿದೆ.

*** ಕ.ವಿ.ವಿ. ಧಾರವಾಡ ಚಿತ್ರ : ೧೩.೬ :**

ಈ "ವೃಷಭೋದ್ಧರಣಿ" ಯ ಚಿತ್ರವನ್ನು ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ತಿಳಿಗೆಂಪು ಮತ್ತು ತಿಳಿನೀಲಿವರ್ಣದ ಚೌರಸಾಕಾರದ ಪಟ್ಟಿಗಳನ್ನು ಮಾಡಿಕೊಂಡು, ಮೇಲ್ಗಡೆ ಕಪ್ಪುನೀಲಿವರ್ಣದ ಚೌಕಟ್ಟಿನ ಕಮಾನಿನಂತೆ ಮಾಡಿಕೊಂಡಿದ್ದು ಈ ಚೌರಸದ ಒಳಗಡೆ ಕೆಂಪು ವರ್ಣವನ್ನು ಲೇಪಿಸಲಾಗಿದೆ. ಅದರ ಮದ್ಯದಲ್ಲಿ ಬಿಳಿ ವರ್ಣದ ವೃಷಭವನ್ನು ಚಿತ್ರಿಸಿದ್ದು ಕಪ್ಪು ಕೋಡುಗಳಿದ್ದು ಕೆಂಪು ವರ್ಣದ ಜೂಲವನ್ನು ನೀಲಿ ಚೌರಸಗಳನ್ನು ರಚಿಸಿದ್ದು ಕೆಂಪು ಅಂಚಿನ ಪಟ್ಟಿಯಲ್ಲಿ ಹಳದಿ ವರ್ಣದ ತ್ರಿಕೋನಗಳನ್ನು ಮಾಡಿದ್ದು ವೃಷಭದ ಇಣಿಯ ಮೇಲೂ ಹೊದಿಸಲಾಗಿದೆ. ಹಳದಿ ಹಸಿರು ಮತ್ತು ಕೆಂಪು ನೀಲಿವರ್ಣದ ನಕ್ಷೆಗಳೊಂದಿಗೆ ಪಟ್ಟಿಗಳನ್ನು ಗೆಜ್ಜೆಯನ್ನು ಮಾಡಲಾಗಿದೆ. ಹಿಂದಿನ ಬಲಗಾಲದೊಡೆಯ ಮೇಲೆ ಲಿಂಗದ ಚಿತ್ರವನ್ನು ನೀಲಿವರ್ಣದಲ್ಲಿ ಮಾಡಲಾಗಿದೆ. ನಾಲ್ಕೂ ಕಾಲುಗಳಿಗೆ ಸುತ್ತೋಲೆಗಳನ್ನು ಹಾಕಲಾಗಿದೆ. ಬಲಗಾಲನ್ನು ಮೇಲಕ್ಕೆತ್ತಿದ್ದರೂ ಕೆಳಗಡೆ ನರನ ತಲೆ ಇರದಿರುವುದು ಕಂಡುಬರುತ್ತದೆ. ವೃಷಭದ ಮೇಲೆ ಅಕ್ಷರನ್ಯಾಸ ಅಷ್ಟೊಂದು ಮಾಡದಿರುವುದು ಕಂಡುಬರುತ್ತದೆ. ಹಾಗೂ ನವಚಕ್ರದ ವಿನ್ಯಾಸವೂ ಕಂಡುಬರುತ್ತಿಲ್ಲ. ಈ ಚೌರಸದ ಕೆಳಗಡೆ ಮಂಟಪ ಆಕಾರದಲ್ಲಿ ರಚನೆ ಮಾಡಿಕೊಂಡಿದ್ದು ಇದಕ್ಕೆ ತಿಳಿಗುಲಾಬಿ ವರ್ಣವನ್ನು ತುಂಬಲಾಗಿದ್ದು ಅದರ ಮೇಲೆ ನಾಲ್ಕು ಭಾಗಗಳನ್ನು ಮಾಡಿಕೊಂಡು ಆರೂ ಮನೆಗೆ ಹಳದಿ ಬಿಳಿ ವರ್ಣದ ಸಾಲು ಪಟ್ಟಿಗಳನ್ನು ರಚಿಸಿಕೊಂಡು ಅದರಲ್ಲಿ ಅಕ್ಷರವಿನ್ಯಾಸ ಮಾಡಲಾಗಿದೆ. ಈ ವೃಷಭೋದ್ಧರಣಿಯ ಚಿತ್ರ ತಾತ್ವಿಕ ಅಕ್ಷರನ್ಯಾಸಗಳ ದೃಷ್ಟಿಯಿಂದ ಸೊರಗಿದ್ದರೂ ಚಿತ್ರದ ತಾಂತ್ರಿಕ ದೃಷ್ಟಿಯಿಂದ ಉತ್ತಮವಾಗಿ ಮೂಡಿಬಂದಿದೆ.

## ೧೪. ನವಚಕ್ರೋದ್ಧರಣಿ

**ವಾಚ್ಯ ವಸ್ತು ವಿಷಯ :**

ಇಂತಪ್ಪ ಪರಮಕಾರಣ ಪುರುಷನಾದ ನಂದಿನಾಮಾಂಕಿತ ವೃಷಭಲಿಂಗ ಮೂರ್ತಿ ಬಸವೇಶ್ವರನು ಷಟ್ ಸ್ಥಲಾನುಭಾವ ಸಂಪನ್ನನೆನಿಸಿ ಸದ್ಭಕ್ತಿ ಸ್ಥಲವನುವಾಗಿ ಜಂಗಮ ಪ್ರಾಣಾವಧಾನಲಿಂಗ ಚೈತನ್ಯ ವಿಡಿದಿರ್ಪಕಾರಣ ತತ್ಪ್ರಾಣಲಿಂಗ ಪ್ರತಿಷ್ಠ ಸಂಬಂಧವಪ್ಪ ಶಿವಲಕ್ಷಣ ಲಕ್ಷಿಕವಾದ ನವಚಕ್ರ ಭೇದವೆಂತೆಂದೊಡೆ.[೪೯] ಎಂದು ಪ್ರಾರಂಭಿಸಿದ್ದು ಹೆಚ್ಚಿನ ವಿವರಗಳಿಗಾಗಿ ಅನುಬಂಧದಲ್ಲಿ ನೋಡಬಹುದಾಗಿದೆ.

೪೯. ಶ್ರೀ ಸಿದ್ಧಲಿಂಗಮಹಾಸ್ವಾಮಿಗಳು : ಶಿವಾನುಭವಶಾಸ್ತ್ರ : ಪುಟ ೪೪

ಹೃದಯ ಕಮಲದ ಮಧ್ಯಭಾಗದಲ್ಲಿ ಶ್ರೇಷ್ಠ ಪ್ರಣವಯುಕ್ತ ಜ್ಞಾನ ಚೈತನ್ಯದಿಂದ ಅಣುಚಕ್ರ ಹುಟ್ಟಿ ಆ ಅಣುಚಕ್ರದಿಂದ ಈ ನವಚಕ್ರಗಳಾದವು ಅವು ಕೆಳಗಿನಂತಿವೆ. ಇವು ನವಲಿಂಗ ಸಕೀಲಗಳ ಕುರಿತು ಪಂಚೀಕರಣದಲ್ಲಿ ತಿಳಿಸಲಾಗಿದೆ.[೫೦]

| ಕ್ರ. ಸ್ಥಲಗಳು | ಚಕ್ರಗಳು | ದಳಗಳು | ದಳಸ್ಥ ಅಕ್ಷರ | ಪ್ರಣವ | ಲಿಂಗ |
|---|---|---|---|---|---|
| ೧. ಭಕ್ತಸ್ಥಲ | ಆಧಾರಚಕ್ರ (ಬಂಗಾರವರ್ಣ) | ನಾಲ್ಕು ದಳ | ವ, ಶ, ಷ, ಸ (೪ ಅಕ್ಷರ) | "ನ" ಕಾರ | ಆಚಾರಲಿಂಗ |
| ೨. ಮಹೇಶ್ವರಸ್ಥಲ | ಸ್ವಾಧೀಷ್ಠಾನಚಕ್ರ (ಹಸಿರುವರ್ಣ) | ಆರುದಳ | ಬ, ಭ, ಮ, ಯ, ರ, ಲ (೬ಅ) | "ಮ" ಕಾರ | ಗುರುಲಿಂಗ |
| ೩. ಪ್ರಸ್ಥಾದಿಸ್ಥಲ | ಮಣಿಪುರಕಚಕ್ರ (ಕಪ್ಪುವರ್ಣ) | ಹತ್ತುದಳ | ಡ, ಢ, ಣ, ತ, ಥ, ದ, ಧ, ನ, ಪ. ಫ (೧೦ ಅಕ್ಷರ) | "ಶಿ" ಕಾರ | ಶಿವಲಿಂಗ |
| ೪. ಪ್ರಾಣಲಿಂಗಸ್ಥಲ | ಅನಾಹತ ಚಕ್ರ (ಕುಂಕುಮವರ್ಣ) | ಹನ್ನೆರಡುದಳ | ಕ, ಖ, ಗ, ಘ, ಙ, ಚ, ಛ, ಜ,ಝ,ಞ,ಟ.ಠ (೧೨ ಅಕ್ಷರ) | "ವ" ಕಾರ | ಜಂಗಮಲಿಂಗ |
| ೫. ಶರಣಸ್ಥಲ | ವಿಶುದ್ಧಿ ಚಕ್ರ (ಬಿಳಿ ವರ್ಣ) | ಹದಿನಾರುದಳ | ಅ, ಆ, ಇ, ಈ, ಉ, ಊ, ಋ, ೠ, ಎ, ಏ, ಐ, ಒ, ಓ, ಔ, ಅಂ. ಅಃ. | "ಯ" ಕಾರ | ಪ್ರಸಾದಲಿಂಗ |
| ೬. ಐಕ್ಯಸ್ಥಲ | ಅಗ್ನಿಚಕ್ರ (ಮಿಂಚಿನವರ್ಣ) | ಎರಡುದಳ | ಹಂ, ಕ್ಷಂ | "ಓಂ" ಕಾರ | ಮಹಾಲಿಂಗ |
| ೭. ನಿಃಕಲಸ್ಥಲ | ಬ್ರಹ್ಮರಂಧ್ರಚಕ್ರ (ಜ್ಯೋತಿವರ್ಣ) | ಸಹಸ್ರದಳ | ಸೋ ಹಂ | "ಅ" ಕಾರ | ಇಷ್ಟಲಿಂಗ |
| ೮. ನಿರಂಜನಸ್ಥಲ | ಶಿಖಾಚಕ್ರ (ಮಹಾಜ್ಯೋತಿವರ್ಣ) | ಮೂರುದಳ | ಹ್ರಾಂ, ಹ್ರೀಂ, ಹ್ರೂಂ | "ಉ"ಕಾರ | ಪ್ರಾಣಲಿಂಗ |
| ೯. ನಿಃಶೂನ್ಯಸ್ಥಲ | ಪಶ್ಚಿಮಚಕ್ರ (ಕಾಣದವರ್ಣ) | ಏಕದಳ | ಓಂ | "ಮ"ಕಾರ | ಭಾವಲಿಂಗ |

ಹೃದಯಕಮಲದ ಮದ್ಯಭಾಗದಲ್ಲಿ ಶ್ರೇಷ್ಠ ಪ್ರಣವಯುಕ್ತ ಜ್ಞಾನ ಚೈತನ್ಯದಿಂದ ಅಣುಚಕ್ರ ಹುಟ್ಟಿ ಆ ಅಣುಚಕ್ರ ದಿಂದ ಈ ನವಚಕ್ರಗಳಾದವು. ಅವು ಕೆಳಗಿನಂತಿವೆ. ಈ ನವಲಿಂಗ ಸಕೀಲಗಳ ಕುರಿತು ಪಂಚೀಕರಣದಲ್ಲಿ ತಿಳಿಸಲಾಗಿದೆ.[೫೧]

***ಉದ್ಧರಣೆ ಸಾಹಿತ್ಯದಲ್ಲಿಯ ಚಿತ್ರ : ೧೪.೧ :**

ಈ "ನವಚಕ್ರೋದ್ಧರಣಿ" ಚಿತ್ರವನ್ನು ೧' x ೧' ಅಡಿ ಅಳತೆಯ ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ಈ ಚಿತ್ರದ ಹಿನ್ನೆಲೆಯಲ್ಲಿ ಕಪ್ಪು ಮಿಶ್ರಿತ ಹಳದಿವರ್ಣದ ವೃತ್ತವನ್ನು ಮಾಡಿದ್ದು ಹಳದಿವರ್ಣದ

೫೦. ಶ್ರೀ. ಶಿವಯೋಗಿಗಳು : ಪಂಚೀಕರಣ : ನವಲಿಂಗ ಸಕೀಲ : ಪುಟ ೨

೫೧. ಶ್ರೀ ಶಿವಯೋಗಿಗಳು : ಪಂಚೀಕರಣ :ನವಲಿಂಗ ಸಕೀಲ : ಪುಟ ೨

ನಾಲ್ಕು ಎಲೆಗಳನ್ನು ಮಾಡಲಾಗಿದೆ. "ಸ್ವಾಧಿಷ್ಠಾನಚಕ್ರ" ದಲ್ಲಿರುವ ಕೆಂಪುವರ್ಣದ ವೃತ್ತದ ಮೇಲೆ ಬಿಳಿಯ ವರ್ಣ ಅರ್ಧ ವೃತ್ತವಿದ್ದು ಇವುಗಳ ಹಿಂದಿನಿಂದ ಹಸಿರುವರ್ಣದ ಆರು ದಳಗಳನ್ನು ಚಿತ್ರಿಸಲಾಗಿದೆ. "ಮಣಿಪುರಚಕ್ರ"ದಲ್ಲಿ ಕೆಂಪುವರ್ಣದ ತ್ರಿಕೋನವನ್ನು ರಚಿಸಿ ಅದರ ಕೆಳಗಡೆ ಕಪ್ಪುವರ್ಣದ ವೃತ್ತವನ್ನು ರಚಿಸಲಾಗಿದೆ. ಈ ವೃತ್ತದ ಎಡಬಲಗಳಲ್ಲಿ ದಳಗಳನ್ನು ಹಸಿರುಮಿಶ್ರಿತ ಕಪ್ಪು ವರ್ಣದಲ್ಲಿ ಚಿತ್ರಿಸಲಾಗಿದೆ. "ಅನಾಹತ ಚಕ್ರ"ದಲ್ಲಿರುವ ಆರು ಮುಖದ ನಕ್ಷತ್ರಾಕಾರವನ್ನು ಜಾಂಬಳಿ ವರ್ಣದಲ್ಲಿ ತುಂಬಿದ್ದು ಹಿಂದುಗಡೆಯಲ್ಲಿ ಹಸಿರುವರ್ಣದ ವೃತ್ತವಿದೆ. ಈ ವೃತ್ತದ ಮೇಲೆ ನಾಲ್ಕು ದಳಗಳು, ವೃತ್ತದ ಹೊರಗಡೆ ಅಂಟಿಕೊಂಡಂತಹ ಎಂಟು ದಳಗಳು, ಒಟ್ಟು ೧೨ ದಳಗಳನ್ನು ಕೆಂಪು ವರ್ಣದಲ್ಲಿ ರಚಿಸಲಾಗಿದೆ. ವಿಶುದ್ಧಿ ಚಕ್ರದಲ್ಲಿ ಹಳದಿಮಿಶ್ರಿತ ಜಾಂಬಳಿಯ ವೃತ್ತವೊಂದನ್ನು ರಚಿಸಿದ್ದು ಅದರ ಸುತ್ತಲೂ ಬಿಳಿಯ ೧೬ ದಳಗಳನ್ನು ಚಿತ್ರಿಸಲಾಗಿದೆ. "ಅಗ್ನಿಚಕ್ರದಲ್ಲಿ ಕಪ್ಪು ಮಿಶ್ರಿತ ಜಾಂಬಳಿಯ ವರ್ಣದ ವೃತ್ತವೊಂದನ್ನು ರಚಿಸಿದ್ದು, ಅದರ ಎಡಬಲಗಳಲ್ಲಿ ಒಂದೊಂದನ್ನು ತಿಳಿನೀಲಿವರ್ಣದಿಂದ ಚಿತ್ರಿಸಲಾಗಿದೆ. "ಬ್ರಹ್ಮರಂಧ್ರಚಕ್ರ"ದಲ್ಲಿ ಹಳದಿವರ್ಣದಿಂದ ಚಿಕ್ಕವೃತ್ತ ರಚಿಸಿ ಅದೇ ವರ್ಣದ ಮೂರು ಎಲೆಗಳನ್ನು ಚಿತ್ರಿಸಲಾಗಿದೆ. ಅದರ ಹಿಂದುಗಡೆ ಕೆಂಪುವರ್ಣದಲ್ಲಿ ವೃತ್ತವನ್ನು ರಚಿಸಿಕೊಂಡಿದ್ದು ಅದರ ತುದಿಗೆ ಸುತ್ತಲೂ ಐದು ದಳಗಳನ್ನು ಅದೇ ವರ್ಣದಲ್ಲಿ ಚಿತ್ರಿಸಲಾಗಿದೆ. ಅದರ ಹಿಂದುಗಡೆಯಲ್ಲಿ ಹಸಿರು ವರ್ಣದ ವೃತ್ತವನ್ನು ರಚಿಸಿದ್ದು ಅದರ ತುದಿಗೆ ಹದಿನಾರು ಕೆಂಪುವರ್ಣದ ದಳಗಳನ್ನು ರಚಿಸಿದ್ದು ಹಿನ್ನೆಲೆಯಲ್ಲಿ ಕಪ್ಪುವರ್ಣದ ವೃತ್ತದ ಪಟ್ಟಿಯನ್ನು ರಚಿಸಲಾಗಿದೆ. ಅದಕ್ಕೆ ತಾಗಿಕೊಂಡು ಕೆಂಪುವರ್ಣ ವೃತ್ತವನ್ನು ರಚಿಸಲಾಗಿದ್ದು ಅದರ ಮೇಲೆ ಕೆಂಪುವರ್ಣದೆಳೆಗಳನ್ನು, ಹೀಗೆ ಸಹಸ್ರದಳಗಳನ್ನು ಚಿತ್ರಿಸಬೇಕು. "ಶಿಖಾಚಕ್ರ"ದಲ್ಲಿ ಕೆಂಪುವರ್ಣದ ಚಿಕ್ಕ ವೃತ್ತವಿದ್ದು ಅದರ ಮೇಲೆ ಹಳದಿ ವರ್ಣದ ತ್ರಿಕೋನವನ್ನು ರಚಿಸಲಾಗಿದೆ. ತ್ರಿಕೋನದ ಮೂರು ಮೂಲೆಗಳಿಂದ ಮೂರು ಹಳದಿ ಎಲೆಗಳನ್ನು ಮಾಡಲಾಗಿದೆ. "ಪಶ್ಚಿಮ ಚಕ್ರ"ದಲ್ಲಿ ಹಳದಿವೃತ್ತವನ್ನು ರಚಿಸಿ ಏಕದಳವನ್ನು ಹಳದಿವರ್ಣದಲ್ಲಿ ಚಿತ್ರಿಸಲಾಗಿದೆ. ಈ ಒಂಭತ್ತು ಚಕ್ರಗಳನ್ನು ಹಳದಿವರ್ಣದಿಂದ ರಚಿಸಿದ ಪಟ್ಟಿಯು ಕಂಡುಬರುತ್ತದೆ. ಇದಕ್ಕೆ ಸುತ್ತಲೂ ನೈಸರ್ಗಿಕ ಅಲಂಕಾರಿಕ ನಕ್ಷೆಯ ಅಂಚನ್ನು ರಚಿಸಲಾಗಿದೆ.

*** ಕ.ವಿ.ವಿ. ಹಂಪಿಯಲ್ಲಿ ದೊರೆತ ಚಿತ್ರ : ೧೪.೨:**

ಈ "ನವಚಕ್ರೋದ್ಧರಣಿ" ಚಿತ್ರ ೧' x ೧' ಅಡಿ ಅಳತೆಯ ಕಾಗದದ ಮೇಲೆ ಮಿಶ್ರವರ್ಣ ಹಾಗೂ ರೇಖಾ ಚಿತ್ರಗಳ ಮಿಶ್ರಮಾಧ್ಯಮದ ಚಿತ್ರವಾಗಿದ್ದು "ಆಧಾರಚಕ್ರ"ವು ಕೆಂಪುವರ್ಣದ ಹಿನ್ನೆಲೆಯಲ್ಲಿದ್ದು ಅದರ ಮೇಲೆ ತಿಳಿನೀಲಿವರ್ಣದ ಸಣ್ಣ ವೃತ್ತ, ಅದರ ಮಧ್ಯದಲ್ಲಿ ಚೌರಸಾಕಾರದ ಬಿಳಿವರ್ಣವಿದೆ. ಈ ಸಣ್ಣ ವೃತ್ತಕ್ಕೆ ನಾಲ್ಕು ಬಿಳಿವರ್ಣದ ದಳಗಳಿವೆ. " ಸ್ವಾಧಿಷ್ಠಾನ ಚಕ್ರವು" ತಿಳಿಹಸಿರುವರ್ಣದ ವೃತ್ತದಲ್ಲಿ ಕೆಂಪುವರ್ಣದ ಸಣ್ಣ ವೃತ್ತವನ್ನು ಮಾಡಿಕೊಂಡಿದ್ದು ಅದಕ್ಕೆ ಆರು ಬಿಳಿವರ್ಣದ ದಳಗಳನ್ನು ರಚಿಸಲಾಗಿದೆ. ಕೆಂಪುವೃತ್ತದ ಮದ್ಯದಲ್ಲಿ ಬಿಳಿವರ್ಣದ ಅರ್ಧವೃತ್ತವನ್ನು ರಚಿಸಲಾಗಿದೆ. "ಮಣಿಪೂರಕ ಚಕ್ರ"ವು ಕೆಂಪುವರ್ಣದಿಂದ ರಚಿಸಿದ ಕಪ್ಪು ವರ್ಣದ ಹಿನ್ನೆಲೆಯಲ್ಲಿ ನೀಲಿವರ್ಣದ ಹತ್ತು ದಳಗಳನ್ನು ಚಿತ್ರಿಸಲಾಗಿದ್ದು ಮಧ್ಯದಲ್ಲಿ ಕೆಂಪು ವರ್ಣದ ಸಣ್ಣ

ವೃತ್ತವನ್ನು ಮಾಡಲಾಗಿದ್ದು ಅದರ ಮೇಲೆ ತ್ರಿಕೋನಾಕಾರಕ್ಕೆ ಬಿಳಿವರ್ಣವನ್ನು ತುಂಬಲಾಗಿದೆ. "ಅನಾಹತ ಚಕ್ರ"ವು ಕೆಂಪುವರ್ಣದ ವೃತ್ತವನ್ನು ರಚಿಸಿಕೊಂಡು ಹಳದಿವರ್ಣದ ಹನ್ನೆರಡು ದಳಗಳನ್ನು ಚಿತ್ರಿಸಲಾಗಿದ್ದು ಮಧ್ಯದಲ್ಲಿ ಹಸಿರುವೃತ್ತ, ಅದರ ಮದ್ಯದಲ್ಲಿ ಹಳದಿವರ್ಣದ ವೃತ್ತವನ್ನು ರಚಿಸಲಾಗಿದೆ. "ವಿಶುದ್ಧಿ ಚಕ್ರ" ಕೆಂಪು ಮತ್ತು ಒಳಗಡೆ ಬಿಳಿವರ್ಣಗಳೆರಡರ ವೃತ್ತವನ್ನು ರಚಿಸಿಕೊಂಡು ಕಪ್ಪುವರ್ಣದ ಹಿನ್ನೆಲೆಯಲ್ಲಿ ಕಪ್ಪುವರ್ಣವನ್ನು ತುಂಬಿ ಅದರ ಮೇಲೆ ತಿಳಿನೀಲಿವರ್ಣದ ಹದಿನಾರು ದಳಗಳನ್ನು ರಚಿಸಿದ್ದು ಮಧ್ಯದಲ್ಲಿ ಬಿಳಿಯ ವೃತ್ತವನ್ನು ರಚಿಸಲಾಗಿದೆ. ಈ ಎಲ್ಲಾ ಚಕ್ರಗಳನ್ನು ಒಂದರ ಮೇಲೊಂದು ತುದಿಗಳನ್ನು ಇಟ್ಟಂತೆ ಚಿತ್ರಿಸಲಾಗಿದೆ. "ಅಗ್ನಿಚಕ್ರ"ವು ಕೆಂಪುವೃತ್ತದಲ್ಲಿ ರಚನೆಗೊಂಡಿದ್ದು ತಿಳಿಹಸಿರುವರ್ಣದ ಎರಡು ದಳಗಳನ್ನು ಹೊಂದಿದೆ. ಮಧ್ಯದಲ್ಲಿ ಚಿಕ್ಕ ವೃತ್ತವನ್ನು ಬಿಳಿವರ್ಣದಲ್ಲಿ ಮಾಡಲಾಗಿದೆ. "ಬ್ರಹ್ಮರಂಧ್ರ ಚಕ್ರ"ವು ಈ ಎಲ್ಲ ಚಕ್ರಗಳಿಗಿಂತ ದೊಡ್ಡದಾಗಿದ್ದು ಮಧ್ಯದಲ್ಲಿ ಚಿಕ್ಕ ಕೆಂಪುವರ್ಣದ ವೃತ್ತವಿದ್ದು ಅದಕ್ಕೊಂದು ಚಿಕ್ಕದಾದ ಬಿಳಿವರ್ಣದ ವೃತ್ತವಿದೆ. ಕೆಂಪುವೃತ್ತದಲ್ಲಿ ಮೂರು ಬಿಳಿಯ ದಳಗಳಿವೆ. ನಂತರ ತಿಳಿಹಸಿರು ವರ್ಣವನ್ನು ತುಂಬಿದ ವೃತ್ತವಿದ್ದು ಐದು ದಳಗಳನ್ನು ಬಿಳಿಯ ವರ್ಣದಲ್ಲಿ ಮಾಡಲಾಗಿದೆ. ಈ ಹಸಿರು ವೃತ್ತಕ್ಕೆ ಹತ್ತಿಕೊಂಡು ಹದಿನಾರು ದಳಗಳನ್ನು ಗುರುತಿಸಲಾಗಿದೆ. ನಂತರ ತಿಳಿಗೆಂಪುವರ್ಣದಲ್ಲಿ ರಚನೆಗೊಂಡ ದಳಗಳಲ್ಲಿ ಮೂವತ್ತೆರಡು ದಳಗಳನ್ನು ಚಿತ್ರಿಸಲಾಗಿದೆ. ಆನಂತರ ನೀಲಿವರ್ಣದ ವೃತ್ತವನ್ನು ರಚಿಸಲಾಗಿದೆ. "ಶಿಖಾ ಚಕ್ರ"ವನ್ನು ಬಿಳಿವರ್ಣದ ಚಿಕ್ಕವೃತ್ತ, ಅದರ ನಂತರ ಕೆಂಪುವರ್ಣದ ವೃತ್ತವನ್ನು ರಚಿಸಲಾಗಿದ್ದು ತಿಳಿಹಸಿರು ವರ್ಣದ ಮೂರು ದಳಗಳನ್ನು ಚಿತ್ರಿಸಲಾಗಿದೆ. "ಪಶ್ಚಿಮ ಚಕ್ರ"ವು ಕೆಂಪುವರ್ಣದ ದಳವನ್ನು ಚಿತ್ರಿಸಲಾಗಿದ್ದು ಅದರ ಮಧ್ಯದಲ್ಲಿ ಬಿಳಿವರ್ಣದ ಚಿಕ್ಕ ಎಲೆಯನ್ನು ಮಾಡಲಾಗಿದೆ. ಈ ಚಿತ್ರದ ಮುಕ್ಕಾಲು ಭಾಗ ಹಿನ್ನೆಲೆಯಲ್ಲಿ ಕಪ್ಪು ಇಂಕಿನ ರೇಖಾಚಿತ್ರವಿದ್ದು ಕಾಲುಭಾಗದಲ್ಲಿ ಆಕಾಶವರ್ಣ ನೀಲಿ ಮತ್ತು ಬಿಳಿವರ್ಣವನ್ನು ತುಂಬಲಾಗಿದೆ. ಒಟ್ಟಾರೆ ಈ ಚಿತ್ರವು ಸ್ಪಷ್ಟವಾಗಿ ಮೂಡಿಬಂದಿದೆ.

*** ಕ.ವಿ.ವಿ. ಹಂಪೆಯ ತಾಳೆಓಲೆಗರಿ ಮೇಲಿನ ಚಿತ್ರ : ೧೪.೩:**

ಈ "ನವಚಕ್ರೋದ್ಧರಣೆ" ಚಿತ್ರವನ್ನು ತಾಳೆಓಲೆಗರಿಗಳ ಮೇಲೆ ಕಪ್ಪುವರ್ಣದ ರೇಖೆಗಳಿಂದ ಪೂರ್ತಿಗೊಳಿಸಲಾಗಿದೆ. "ಆಧಾರಚಕ್ರ"ದ ವೃತ್ತಕ್ಕೆ ನಾಲ್ಕು ಎಲೆಗಳನ್ನು ಮಾಡಲಾಗಿದೆ. ವೃತ್ತದಲ್ಲಿ ಚೌರಸ ಮಾಡಲಾಗಿದೆ. "ಸ್ವಾಧಿಷ್ಠಾನ ಚಕ್ರ" ದ ಮಧ್ಯದಲ್ಲಿ ಅರ್ಧವೃತ್ತ, ಅದಕ್ಕೊಂದು ವೃತ್ತವನ್ನು ಮಾಡಿದ್ದು ಆರು ಎಲೆಗಳಿವೆ. "ಮಣಿಪುರ ಚಕ್ರ"ವು ಮದ್ಯದಲ್ಲಿ ತ್ರಿಕೋನ ರಚಿಸಿದ್ದು ಅದಕ್ಕೊಂದು ವೃತ್ತವನ್ನು ರಚಿಸಿದ್ದು ಅದಕ್ಕೆ ಹತ್ತು ದಳಗಳನ್ನು ರಚಿಸಲಾಗಿದೆ. "ಅನಾಹತ ಚಕ್ರ"ಕ್ಕೆ ಮಧ್ಯದಲ್ಲಿ ಪ್ರಣವ ಬರೆದು ಅದಕ್ಕೊಂದು ವೃತ್ತ, ಅದಕ್ಕೆ ಹನ್ನೆರಡು ದಳಗಳನ್ನು ಬರೆಯಲಾಗಿದೆ. "ವಿಶುದ್ಧಿ ಚಕ್ರ"ಕ್ಕೆ ಆಯತಾಕಾರವನ್ನು ರಚಿಸಿದ್ದು ಅದಕ್ಕೆ ಒಂದು ವೃತ್ತವನ್ನು ಮಾಡಿ ಈ ವೃತ್ತಕ್ಕೆ ಹದಿನಾರು ದಳಗಳನ್ನು ಬರೆಯಲಾಗಿದೆ. "ಅಗ್ನಿಚಕ್ರ"ಕ್ಕೆ ಚಿಕ್ಕದಾಗಿ ಒಂದರಲ್ಲೊಂದು ವೃತ್ತವನ್ನು ರಚಿಸಿ ಅದಕ್ಕೆರಡು ದಳಗಳನ್ನು ಬರೆಯಲಾಗಿದೆ. "ಬ್ರಹ್ಮರಂಧ್ರ ಚಕ್ರ"ಕ್ಕೆ ಒಂದನೇ ವೃತ್ತಕ್ಕೆ ಮೂರು ದಳಗಳನ್ನು, ಎರಡನೇ ವೃತ್ತಕ್ಕೆ ಐದು ದಳಗಳನ್ನು, ಮೂರನೇ ವೃತ್ತಕ್ಕೆ ಹದಿನಾರು ದಳಗಳನ್ನು ಹಾಗೂ

ನಾಲ್ಕನೇ ವೃತ್ತಕ್ಕೆ ಮೂವತ್ತೆರಡು ದಳಗಳನ್ನು ಬರೆಯಲಾಗಿದೆ. "ಶಿಖಾಚಕ್ರ" ಕ್ಕೆ ಚಿಕ್ಕದಾದ ವೃತ್ತವನ್ನು ರಚಿಸಿಕೊಂಡು ಮೂರು ದಳಗಳನ್ನು ಬರೆಯಲಾಗಿದೆ. "ಪಶ್ಚಿಮ ಚಕ್ರ"ಕ್ಕೆ ಏಕದಳವನ್ನು ಚಿತ್ರಿಸಲಾಗಿದೆ. ಚಿತ್ರದ ಅಂಚಿಗೆ ನಕ್ಷೆಯ ಪಟ್ಟಿಯನ್ನು ಬರೆದಿದ್ದು ಚಿತ್ರದ ಎಡಭಾಗದಲ್ಲಿ ಅಲಂಕಾರಿಕ ನಕ್ಷೆಯ ಪಟ್ಟಿಯ ಮಧ್ಯದಲ್ಲಿ ವೃಕ್ಷವೊಂದರ ಕೆಳಗೆ ವ್ಯಕ್ತಿಯೊಬ್ಬ ನಿಂತಿರುವ ಚಿತ್ರವನ್ನು ಬಿಡಿಸಲಾಗಿದೆ. ಇಂತಹ ಚಿತ್ರವನ್ನು ಕೆಳಗಿನ ಓಲೆಗರಿಯ ಮೇಲೂ ಚಿತ್ರಿಸಲಾಗಿದೆ.

*** ಗು.ವಿ.ವಿ. ಗುಲಬರ್ಗಾದಲ್ಲಿಯ ಚಿತ್ರ : ೧೪.೪ :**

ಈ "ನವಚಕ್ರೋದ್ಧರಣಿ" ಚಿತ್ರವನ್ನು ಕಾಗದದ ಮೇಲೆ ಜಲವರ್ಣದಲ್ಲಿ ಚಿತ್ರಿಸಲಾಗಿದೆ. ಚಿತ್ರದ ಹಿನ್ನೆಲೆಗೆ ತಿಳಿ ನೀಲಿವರ್ಣವನ್ನು ತುಂಬಲಾಗಿದೆ. "ಆಧಾರ ಚಕ್ರ"ವು ಕೆಂಪುವರ್ಣದ ಹಿನ್ನೆಲೆಯನ್ನು ಹೊಂದಿದ್ದು ಹಳದಿವರ್ಣದ ನಾಲ್ಕುದಳಗಳನ್ನು ಚಿತ್ರಿಸಲಾಗಿದೆ. "ಸ್ವಾಧಿಷ್ಠಾನ ಚಕ್ರ"ವು ಕೆಂಪು ವರ್ಣದಲ್ಲಿದ್ದು ಮಧ್ಯದ ವೃತ್ತವನ್ನು ತಿಳಿನೀಲಿ ವರ್ಣವನ್ನು ತುಂಬಿದ್ದು ಕಪ್ಪುಗೆರೆಗಳಿಂದ ಅರ್ಧವೃತ್ತಾಕಾರದ ಚಿತ್ರವನ್ನು ಬರೆಯಲಾಗಿದೆ. ಈ ವೃತ್ತದ ದಡದಲ್ಲಿ ಆರು ಎಲೆಗಳನ್ನು ಕಪ್ಪುವರ್ಣದಲ್ಲಿ ಚಿತ್ರಿಸಲಾಗಿದೆ. "ಮಣಿಪೂರಕ ಚಕ್ರ"ವನ್ನು ಕೆಂಪು ವರ್ಣದಲ್ಲಿ ರಚಿಸಲಾಗಿದೆ. ಅದರ ಮಧ್ಯದಲ್ಲಿ ಸಣ್ಣವೃತ್ತವನ್ನು, ಅದರಲ್ಲಿ ತ್ರಿಕೋನವನ್ನು ರೇಖೆಗಳಿಂದ ಬರೆಯಲಾಗಿದ್ದು ವೃತ್ತದ ದಡದಲ್ಲಿ ಹತ್ತು ದಳಗಳನ್ನು ಕಪ್ಪುವರ್ಣದಲ್ಲಿ ಮಾಡಲಾಗಿದೆ. "ಅನಾಹತಚಕ್ರ"ವನ್ನು ಕೆಂಪುವರ್ಣದಲ್ಲಿ ರಚಿಸಿದ್ದು ಕಪ್ಪು ವರ್ಣದ ರೇಖೆಗಳಿಂದ ನಡುವಿನಲ್ಲಿ ಪ್ರಣವದ ಚಿತ್ರ ಬರೆದಿದ್ದು ಅದರ ಸುತ್ತಲೂ ಚಿಕ್ಕ ವೃತ್ತ ಮಾಡಿ ಅದಕ್ಕೆ ಹನ್ನೆರಡು ದಳಗಳನ್ನು ಕಪ್ಪು ವರ್ಣದ ರೇಖೆಗಳಿಂದ ಪೂರ್ತಿಗೊಳಿಸಲಾಗಿದೆ. "ವಿಶುದ್ಧಿ ಚಕ್ರ"ದ ಮಧ್ಯದಲ್ಲಿ ತಿಳಿನೀಲಿವರ್ಣದ ವೃತ್ತ, ಅದರಲ್ಲಿ ಆಯತಾಕಾರದ ಚಿತ್ರ, ಅದಕ್ಕೊಂದು ಕೆಂಪು ವರ್ಣದ ವೃತ್ತ, ಅದರ ಹೊರಗಡೆ ಕಪ್ಪು ವರ್ಣದ ವೃತ್ತವನ್ನು ರಚಿಸಲಾಗಿದ್ದು ಅದರಲ್ಲಿ ಹಳದಿವರ್ಣದಲ್ಲಿ ದಳಗಳನ್ನು ಮಾಡಲಾಗಿದೆ. ಆದರೂ ಸ್ಪಷ್ಟತೆ ಇಲ್ಲ. "ಅಗ್ನಿ ಚಕ್ರ" ದಲ್ಲಿ ಕೆಂಪುವೃತ್ತ, ಅದಕ್ಕೆ ಎರಡು ಹಳದಿವರ್ಣದ ದಳಗಳನ್ನು ರಚಿಸಲಾಗಿದೆ. "ಬ್ರಹ್ಮರಂಧ್ರ ಚಕ್ರ" ಕ್ಕೆ ಹಸಿರುವರ್ಣವನ್ನು ತುಂಬಿದ್ದು ಮಧ್ಯದಲ್ಲಿ ಚಿಕ್ಕದಾದ ಕಪ್ಪುವೃತ್ತ, ಅದರಿಂದ ನಾಲ್ಕು ವೃತ್ತಗಳನ್ನು ರಚಿಸಿಕೊಂಡು ಕೆಂಪುವರ್ಣದ ದಳಗಳನ್ನು ಬರೆಯಲಾಗಿದೆ. "ಶಿಖಾಚಕ್ರ" ಹಳದಿವರ್ಣದ ತ್ರಿಕೋನ, ಅದಕ್ಕೆ ಕೆಂಪುವರ್ಣದ ರೇಖೆಯನ್ನು ಮಾಡಿ ಮೂರು ಮೂಲೆಗಳಿಗೆ ಒಂದರಂತೆ ಕಪ್ಪು ಹಸಿರುವರ್ಣದ ಎಲೆಗಳನ್ನು ಮಾಡಲಾಗಿದೆ. "ಪಶ್ಚಿಮ ಚಕ್ರ"ವು ಕೆಂಪು ವರ್ಣದ ವೃತ್ತ. ಅದಕ್ಕೊಂದು ಹಳದಿ ದಳವನ್ನು ಮಾಡಲಾಗಿದೆ. ಈ ಚಿತ್ರದಲ್ಲಿ ದಳಗಳ ಅಕ್ಷರಗಳನ್ನು ಆಯಾ ಚಕ್ರಗಳ ಎಡಬಲಗಳಲ್ಲಿ ಬರೆಯಲಾಗಿದೆ.

*** ಧರ್ಮಸ್ಥಳದಲ್ಲಿ ದೊರೆತ ಚಿತ್ರ : ೧೪.೫ :**

ಈ "ನವಚಕ್ರೋದ್ಧರಣಿ"ಯನ್ನು ಒಂದರ ಕೆಳಗೊಂದರಂತೆ ಚಕ್ರಗಳನ್ನು ಉದ್ದಕ್ಕೆ ಎರಡು ಸಾಲುಗಳಾಗಿ ಚಿತ್ರಿಸಲಾಗಿದೆ. ಮೇಲ್ಗಡೆ ಕಮಾನಿನಾಕಾರದಲ್ಲಿ ಹಳದಿ ವರ್ಣವನ್ನು ತುಂಬಿಕೊಂಡು ಕೆಳಗಡೆ ತಿಳಿನೀಲಿವರ್ಣವನ್ನು

ತುಂಬಲಾಗಿದೆ. ಕೆಳಗಡೆಯ "ಆಧಾರಚಕ್ರ"ವನ್ನು ಹಳದಿ ವರ್ಣದಲ್ಲಿ "ಸ್ವಾಧಿಷ್ಠಾನಚಕ್ರ" ವನ್ನು ಹಸಿರುವರ್ಣದಲ್ಲಿಯೂ "ಮಣಿಪೂರಕ ಚಕ್ರ"ವನ್ನು ನೀಲಿವರ್ಣದಲ್ಲಿಯೂ "ಅನಾಹತ ಚಕ್ರ"ವನ್ನು ಕೆಂಪು ವರ್ಣದಲ್ಲಿ ಆಯಾ ದಳಗಳೊಂದಿಗೆ ಚಿತ್ರಿಸಲಾಗಿದೆ. "ವಿಶುದ್ಧಿ ಚಕ್ರ"ವನ್ನು ಮಧ್ಯದಲ್ಲಿ ಬಿಳಿಯ ವೃತ್ತ, ನಂತರದಲ್ಲಿ ಕೆಂಪು ವೃತ್ತವನ್ನು ಮಾಡಿಕೊಂಡು ಸುತ್ತಲೂ ಬಿಳಿಯ ವರ್ಣಗಳಲ್ಲಿ ದಳಗಳನ್ನು ರಚಿಸಿ ಕಪ್ಪು ವರ್ಣದ ರೇಖೆಗಳಿಂದ ಗುರುತಿಸಲಾಗಿದೆ. "ಅಗ್ನಿಚಕ್ರ"ವನ್ನು ಕೆಂಪುವರ್ಣದಲ್ಲಿ ಚಿತ್ರಿಸಲಾಗಿದೆ. "ಬ್ರಹ್ಮರಂಧ್ರ ಚಕ್ರ"ದಲ್ಲಿ ತಿಳಿಗೆಂಪು ವರ್ಣದ ಚಿಕ್ಕ ವೃತ್ತವನ್ನು ಮಾಡಿಕೊಂಡು ಅದಕ್ಕೆ ಕೆಂಪುವರ್ಣದ ನಾಲ್ಕು ವೃತ್ತಗಳನ್ನು ಮಾಡಲಾಗಿದೆ. ಕಪ್ಪುರೇಖೆಗಳಿಂದ ದಳಗಳನ್ನು ಚಿತ್ರಿಸಲಾಗಿದೆ. ಅದರ ಮೇಲಿನ "ಶಿಖಾಚಕ್ರ"ದಲ್ಲಿ ಕೆಂಪುವರ್ಣದಲ್ಲಿ ೩ ದಳಗಳಾಗಿ ಚಿತ್ರಿಸಲಾಗಿದೆ. ಅದರ ಮೇಲ್ಗಡೆ ಪಶ್ಚಿಮ ಚಕ್ರವನ್ನು ಏಕದಳದಲ್ಲಿ ಕೆಂಪುವರ್ಣದಿಂದ ಚಿತ್ರಿಸಲಾಗಿದೆ. ಈ ಚಿತ್ರದ ಎಡಭಾಗದಲ್ಲಿ ಇಂತಹದೇ ಒಂಭತ್ತು ಚಕ್ರಗಳನ್ನು ಅದೇ ವರ್ಣದಿಂದ ತುಂಬಿಕೊಂಡು ಸಮಾಂತರವಾಗಿ ಚಿತ್ರಿಸಲಾಗಿದ್ದು "ಅನಾಹತಚಕ್ರ"ದ ವೃತ್ತದಲ್ಲಿ ನಾಲ್ಕು ದಳಗಳನ್ನು, ಹೊರಗಡೆಯಲ್ಲಿ ಎಂಟುದಳಗಳನ್ನು ಚಿತ್ರಿಸಿದ್ದು, ಈ ನವಚಕ್ರಗಳಲ್ಲಿಯೇ ವಿಶೇಷವಾಗಿರುವಂತೆ ಈ ಚಕ್ರದ ಎಡಭಾಗದಲ್ಲಿ ಹುಲಿ, ಚಿರತೆ, ಆನೆ, ಡೈನೋಸಾರದಂತಹ ಪ್ರಾಣಿಗಳಿದ್ದರೆ ಈ ಚಕ್ರದ ಬಲಭಾಗದಲ್ಲಿಯೂ ನಾಲ್ಕು ಪ್ರಾಣಿಗಳನ್ನು ಕರಡಿ, ಚಿರತೆ, ಜಿಂಕೆ ಕುದುರೆಯಂತಹ ಚಿತ್ರಗಳನ್ನು ರಚಿಸಿರುವುದು ಕಂಡುಬರುತ್ತದೆ. ಒಂದೇ ಕಮಾನಿನ ಎದುರುಗಡೆಯಲ್ಲಿ ನವಚಕ್ರಗಳ ಎರಡು ಸಾಲುಗಳನ್ನು ಚಿತ್ರಿಸಲಾಗಿದೆ.

*** ಬೆಂ. ವಿ.ವಿ. ಬೆಂಗಳೂರಿನಲ್ಲಿಯ ಚಿತ್ರ : ೧೪.೬ :**

ಕಾಗದದ ಮೇಲೆ ಜಲವರ್ಣದಿಂದ "ನವಚಕ್ರೋದ್ಧರಣಿ" ಚಿತ್ರವನ್ನು ಚಿತ್ರಿಸಲಾಗಿದೆ. "ಆಧಾರಚಕ್ರ"ದ ಹಳದಿವರ್ಣದ ವೃತ್ತಕ್ಕೆ ತಿಳಿಗುಲಾಬಿವರ್ಣದ ೪ ದಳಗಳನ್ನು ರಚಿಸಲಾಗಿದೆ. "ಸ್ವಾಧಿಷ್ಠಾನ ಚಕ್ರ"ವನ್ನು ಹಳದಿವರ್ಣದ ವೃತ್ತವನ್ನು ಮಾಡಿಕೊಂಡು ಮಧ್ಯದಲ್ಲಿ ಬಿಳಿವರ್ಣದ ಅರ್ಧವೃತ್ತವನ್ನು ರಚಿಸಲಾಗಿದ್ದು ಅದರ ಅಂಚಿಗೆ ತಿಳಿಗುಲಾಬಿಯ ೬ ದಳಗಳನ್ನು ರಚಿಸಲಾಗಿದೆ. "ಮಣಿಪೂರಕ ಚಕ್ರ"ದ ವೃತ್ತವನ್ನು ಕೆಂಪುವರ್ಣದಿಂದ ತುಂಬಲಾಗಿದೆ. ಮಧ್ಯದಲ್ಲಿ ತಿಳಿಗುಲಾಬಿವರ್ಣದ ತ್ರಿಕೋನವನ್ನು ಹಾಗೂ ವೃತ್ತದ ಅಂಚಿನಲ್ಲಿರುವ ೧೦ ದಳಗಳನ್ನು ಇದೇ ವರ್ಣದಲ್ಲಿ ರಚಿಸಲಾಗಿದೆ. "ಅನಾಹತಚಕ್ರ"ದಲ್ಲಿ ಮಧ್ಯದ ವೃತ್ತಕ್ಕೆ ಹಳದಿವರ್ಣವನ್ನು ತುಂಬಲಾಗಿದ್ದು ಅದರಲ್ಲಿ ತಿಳಿಗುಲಾಬಿಯಿಂದ ಪ್ರಣವವನ್ನು ಬರೆಯಲಾಗಿದೆ. ಇದಕ್ಕೆ ಹೊಂದಿಕೊಂಡು ಕೆಂಪುವರ್ಣದ ವೃತ್ತಪಟ್ಟಿಯನ್ನು ಮಾಡಿಕೊಂಡು ತಿಳಿಗುಲಾಬಿವರ್ಣದ ದಳಗಳನ್ನು ರಚಿಸಲಾಗಿದೆ. "ವಿಶುದ್ಧಿಚಕ್ರ"ವನ್ನು ಹಳದಿವರ್ಣದ ವೃತ್ತವನ್ನು ಮಾಡಿ, ಅದಕ್ಕೆ ಕೆಂಪುವರ್ಣದ ವೃತ್ತಪಟ್ಟಿಯನ್ನು ಮಾಡಿ, ಅದರ ಅಂಚಿನಲ್ಲಿ ತಿಳಿಗುಲಾಬಿ ವರ್ಣದ ೧೬ ದಳಗಳನ್ನು ರಚಿಸಲಾಗಿದೆ. "ಅಗ್ನಿಚಕ್ರ"ವನ್ನು ಹಳದಿವರ್ಣದ ವೃತ್ತಕ್ಕೆ ತಿಳಿಗುಲಾಬಿವರ್ಣದ ಎರಡು ದಳಗಳನ್ನು ಚಿತ್ರಿಸಲಾಗಿದೆ. "ಬ್ರಹ್ಮರಂಧ್ರ ಚಕ್ರ" ದಲ್ಲಿ ಹಳದಿವರ್ಣದ ಚಿಕ್ಕ ವೃತ್ತಕ್ಕೆ ಅದೇ ವರ್ಣದ ೩ ದಳಗಳನ್ನು ಮಾಡಲಾಗಿದೆ. ಅದರ ನಂತರದಲ್ಲಿ ಕೆಂಪುವರ್ಣದ ಎರಡು

ವೃತ್ತದ ಪಟ್ಟಿಕೆಗಳನ್ನು ರಚಿಸಿ ಅದೇ ವರ್ಣದ ದಳಗಳನ್ನು ಕಪ್ಪುರೇಖೆಗಳಿಂದ ರಚಿಸಲಾಗಿದೆ. ಕೊನೆಯ ವೃತ್ತವನ್ನು ತಿಳಿಗುಲಾಬಿವರ್ಣದಲ್ಲಿ ಚಿತ್ರಿಸಲಾಗಿದ್ದು ಅದೇ ವರ್ಣದಲ್ಲಿ ಕಪ್ಪು ಗೆರೆಗಳಿಂದ ದಳಗಳನ್ನು ಗುರುತಿಸಲಾಗಿದೆ. "ಶಿಖಾಚಕ್ರ"ವನ್ನು ಕೆಂಪುವರ್ಣದ ತ್ರಿಕೋನವನ್ನು ರಚಿಸಿ ತಿಳಿಗುಲಾಬಿ ವರ್ಣದ ಮೂರು ಎಲೆಗಳನ್ನು ರಚಿಸಲಾಗಿದೆ. "ಪಶ್ಚಿಮಚಕ್ರ" ತಿಳಿಗುಲಾಬಿ ವರ್ಣದಿಂದ ಒಂದು ದಳವನ್ನು ಚಿತ್ರಿಸಲಾಗಿದೆ. ಈ ಚಕ್ರಗಳ ಹಿನ್ನೆಲೆಯಲ್ಲಿ ಹಸಿರುವರ್ಣವನ್ನು ಲೇಪಿಸಲಾಗಿದೆ. ಕೆಂಪುವರ್ಣದ ಪಟ್ಟಿಯನ್ನು ಅಂಚಿಗೆ ಹಾಕಲಾಗಿದೆ.

*** ಕ.ವಿ.ವಿ. ಧಾರವಾಡದ ಚಿತ್ರ : ೧೪.೭ :**

ಈ ನವಚಕ್ರಗಳ ಎರಡು ಸಾಲುಗಳನ್ನು ಮೇಲಿನಿಂದ ಕೆಳಗಡೆ ಉದ್ದವಾಗಿ ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ಮೇಲ್ಗಡೆ ಎರಡು ಕಮಾನುಗಳನ್ನು ಹಳದಿವರ್ಣದಲ್ಲಿ ರಚಿಸಿಕೊಂಡಿದ್ದು ಕೆಳಗಡೆಯ ಭಾಗದಲ್ಲಿ ತಿಳಿನೀಲಿವರ್ಣವನ್ನು ಲೇಪಿಸಲಾಗಿದೆ. ಈ ಎರಡು ಕಮಾನಿನ ಮಾಡಗಳನ್ನು ಒಂದರ ಬದಿಗೊಂದನ್ನು ರಚಿಸಿಕೊಂಡು ಅವುಗಳಲ್ಲಿ ನವಚಕ್ರಗಳ ಚಿತ್ರವನ್ನು ಬರೆಯಲಾಗಿದೆ. ಧರ್ಮಸ್ಥಳದ ನವಚಕ್ರಗಳಿಗಿಂತಲೂ ಅಲಂಕಾರಿಕವಾಗಿ ವರ್ಣವಿನ್ಯಾಸದಲ್ಲಿಯೂ ವಿಶಿಷ್ಟವಾಗಿ ದಳಗಳನ್ನು ಬರೆಯಲಾಗಿದೆ. ಹಳದಿ, ನೀಲಿ, ಕೇಸರಿ, ಕೆಂಪು, ಕಪ್ಪುವರ್ಣಗಳನ್ನು ಮಿತವಾಗಿ ಬಳಸಿರುವುದರಿಂದ ಒಟ್ಟಾರೆ ಚಿತ್ರವು ಸೌಂದರ್ಯಾತ್ಮಕವಾಗಿ ರಚನೆಗೊಂಡಿದೆ. ಈ ನವಚಕ್ರಗಳ ಎಡಬಲಗಳಲ್ಲಿ ಹೂವುಗಳನ್ನು, ವೃತ್ತಗಳನ್ನು ವಿವಿಧ ವರ್ಣದಲ್ಲಿ ರಚಿಸಿದ್ದು, ಅತಿಯಾದ ಅಲಂಕಾರಿಕ ವರ್ಣ ಚಿತ್ರವಾಗಿಯೂ ಕಂಡುಬರುತ್ತದೆ.

## ೧೫. ತತ್ವಪಂಚೀಕರಣೋದ್ಧರಣೆ

**ವಾಚ್ಯ ವಸ್ತು ವಿಷಯ :**

ನವಚಕ್ರಭೇದ ಪರೀಕ್ಷಿತನಾದ ಶಿವಯೋಗಿಯ ಅಂಗ ಸಂಬಂಧವಾದ ತತ್ವಪಂಚೀಕರಣೋತ್ಪತ್ತಿ ನಿರ್ದೇಶವೆಂತೆಂದೊಡೆ : ಅಪ್ರತಿಮ ನಿತ್ಯನಿರಂಜನ ಪರಶಿವನ ಸ್ವಲೀಲಾನಂದದ ನೆನೆಹೆ ಪರಶಕ್ತಿ ಸಮೇತವಾಗಿ ನಾದಮೂರ್ತಿಯಾಗಿ ತೋರ್ಪುದೆ ಅನುಪಮ ಮಹಾಘನಲಿಂಗ. ಆ ಲಿಂಗದ ಚಿಚ್ಚೈತನ್ಯ ಪ್ರಭಾವವೇ ಮೂರ್ತಿಗೊಂಡು ಸರ್ವಲಕ್ಷಣ ಸಂಪನ್ನನೆನಿಪ ಸದಾಶಿವನಾದಂ ಆ ಸದಾಶಿವನ ಸ್ವಲೀಲಾರ್ಥವಾಗಿ ಗೌಪ್ಯಮುಖದಿಂದಾತ್ಮನುದಯವಾದ  ಕೂಡಲೆ ಆ ಪಂಚವಕ್ತ್ರದಿಂ ಪಂಚಭೂತಂಗಳುದಯಿಸಿ ತತ್ವಾತ್ಮಕ ಶರೀರವಾಯಿತು. ಇಂತೀ ಶರೀರ ಸಂಬಂಧವಾದ ಆತ್ಮ ತತ್ವಭೂತ ಗುಣಂಗಳ ವಿವರ.[೫೨]

*** ಆಕಾಶದಂಶಗಳು :**

೧) ಆತ್ಮನಲ್ಲಿ – ಭಾವವಿರುವುದು

೨) ಆಕಾಶದಲ್ಲಿ – ಜ್ಞಾನವಿರುವುದು

೫೨. ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು : ಶಿವಾನುಭವಶಾಸ್ತ್ರ  : ಪುಟ ೫೨

೩) ವಾಯುವಿನಲ್ಲಿ – ಮನವಿರುವುದು

೪) ಅಗ್ನಿಯಲ್ಲಿ – ಬುದ್ಧಿಯಿರುವುದು

೫) ಅಪ್ಪುವಿನಲ್ಲಿ – ಚಿತ್ತವಿರುವುದು

೬) ಪೃಥ್ವಿಯಲ್ಲಿ – ಅಹಂಕಾರವಿರುವುದು

ಹೀಗೆ ಆಕಾಶದಿಂದಾರಂಭಿಸಿ ಅಂಶಗಳಿರುವುದು ಈ ಪಂಚಭೂತಗಳೊಳಗೆ ಐದೈದು ಅಂಶ ಒಳಗೊಂಡಿರುವುದು ಈ ಕೆಳಗಿನಂತಿವೆ:

*** ವಾಯುವಿನಂಶಗಳು :**

೧) ಆತ್ಮನಲ್ಲಿ – ಚೇತನವಿರುವುದು

೨) ಆಕಾಶದಲ್ಲಿ – ಸಮಾನವಿರುವುದು

೩) ವಾಯುವಿನಲ್ಲಿ – ವ್ಯಾನವಿರುವುದು

೪) ಅಗ್ನಿಯಲ್ಲಿ – ಉದಾನವಿರುವುದು

೫) ಅಪ್ಪುವಿನಲ್ಲಿ – ಅಪಾನವಿರುವುದು

೬) ಪೃಥ್ವಿಯಲ್ಲಿ – ಪ್ರಾಣವಿರುವುದು

ಇವು ವಾಯು ಮಹಾಭೂತದಲ್ಲಿರುವ ಐದೈದು ಅಂಶಗಳಾಗಿವೆ.

*** ಅಗ್ನಿಯ ಅಂಶಗಳು :**

೧) ಆತ್ಮನಲ್ಲಿ – ಹೃದಯವಿರುವುದು

೨) ಆಕಾಶದಲ್ಲಿ – ಶ್ರೋತ್ರ (ಕಿವಿ)ವಿರುವುದು

೩) ವಾಯುವಿನಲ್ಲಿ – ತ್ವಕ್ಕು(ಚರ್ಮ) ಇರುವುದು

೪) ಅಗ್ನಿಯಲ್ಲಿ – ನೇತ್ರವಿರುವುದು

೫) ಅಪ್ಪುವಿನಲ್ಲಿ – ಜಿಹ್ವೆ(ನಾಲಿಗೆ) ಇರುವುದು

೬) ಪೃಥ್ವಿಯಲ್ಲಿ – ಘ್ರಾಣ(ಪ್ರಾಣ) ಇರುವುದು.

ಇವು ಅಗ್ನಿ ಮಹಾಭೂತದಲ್ಲಿರುವ ಐದೈದು ಅಂಶಗಳಾಗಿವೆ.

*** ಅಪ್ಪು(ನೀರು)ವಿನಂಶಗಳು :**

೧) ಆತ್ಮನಲ್ಲಿ – ತೃಪ್ತಿ ಇರುವುದು

೨) ಆಕಾಶದಲ್ಲಿ – ಶಬ್ದವಿರುವುದು

೩) ವಾಯುವಿನಲ್ಲಿ – ಸ್ಪರ್ಶವಿರುವುದು

೪) ಅಗ್ನಿಯಲ್ಲಿ – ರೂಪವಿರುವುದು

೫) ಅಪ್ಪುವಿನಲ್ಲಿ – ರಸವಿರುವುದು

೬) ಪೃಥ್ವಿಯಲ್ಲಿ – ಗಂಧವಿರುವುದು

ಇವು ಅಪ್ಪು ಮಹಾಭೂತದಲ್ಲಿರುವ ಐದ್ಯೆದು ಅಂಶಗಳು ಆಗಿವೆ.

*** ಪೃಥ್ವಿಯಲ್ಲಿಯಂಶಗಳು :**

೧) ಆತ್ಮನಲ್ಲಿ – ಮನನವಿರುವುದು

೨) ಆಕಾಶದಲ್ಲಿ – ವಾಕ್ಕಿರುವುದು

೩) ವಾಯುವಿನಲ್ಲಿ – ಪಾಣಿಇರುವುದು

೪) ಅಗ್ನಿಯಲ್ಲಿ – ಪಾದವಿರುವುದು

೫) ಅಪ್ಪುವಿನಲ್ಲಿ – ಗುಹ್ಯವಿರುವುದು

೬) ಪೃಥ್ವಿಯಲ್ಲಿ – ವಾಯುವಿರುವುದು

ಇವು ಪೃಥ್ವಿ ಮಹಾಭೂತದಲ್ಲಿರುವ ಐದ್ಯೆದು ಅಂಶಗಳಾಗಿವೆ, ಹೀಗೆ ಪಂಚಭೂತ ತತ್ವಗಳಿಂದ ದೇಹವಾಗಿರುವುದನ್ನು ಈ "ತತ್ವ ಪಂಚೀಕರಣ ಉದ್ಧರಣೆ" ಹೇಳುವುದು. ಮುಂದೆ ಆತ್ಮ ಪಂಚೀಕರಣವು ಈ ಕೆಳಗಿನಂತಿದೆ:

*** ಆತ್ಮನ ಪಂಚೀಕೃತಿಗಳು :**

೧) ಆತ್ಮನಲ್ಲಿ – ಆಕಾಶಭಾವವಿರುವುದು

೨) ಆತ್ಮನಲ್ಲಿ – ವಾಯುಚೇತನವಿರುವುದು

೩) ಆತ್ಮನಲ್ಲಿ – ಅಗ್ನಿ ಹೃದಯವಿರುವುದು

೪) ಆತ್ಮನಲ್ಲಿ – ಅಪ್ಪು ತೃಪ್ತಿಯಿರುವುದು

೫) ಆತ್ಮನಲ್ಲಿ – ಪೃಥ್ವಿ ಮನನವಿರುವುದು

ಹೀಗೆ ಆತ್ಮದಲ್ಲಿರುವ ಐದ್ಯೆದು ತತ್ವ ಪಂಚಮಹಾಭೂತಗಳ ಪಂಚೀಕೃತಗಳಾಗಿವೆ.

*** ಆಕಾಶದ ಪಂಚೀಕೃತಗಳು :**

೧) ಆಕಾಶದಲ್ಲಿ – ಆಕಾಶಜ್ಞಾನವಿರುವುದು

೨) ಆಕಾಶದಲ್ಲಿ – ವಾಯುಸಮಾನವಾಗಿರುವುದು

೩) ಆಕಾಶದಲ್ಲಿ – ಅಗ್ನಿ ಶ್ರೋತ್ರವಿರುವುದು

೪) ಆಕಾಶದಲ್ಲಿ – ಅಪ್ಪುಶಬ್ದವಿರುವುದು

೫) ಆಕಾಶದಲ್ಲಿ – ಪೃಥ್ವಿವಾಕ್ಕಿರುವುದು

ಹೀಗೆ ಆಕಾಶದಲ್ಲಿರುವ ಐದೈದು ತತ್ವ ಪಂಚಮಹಾಭೂತಗಳ ಪಂಚೀಕೃತಗಳಾಗಿವೆ. "ವಾಯು"ವಿನಲ್ಲಿ – ಆಕಾಶ ಮನ, ವಾಯು ಧ್ಯಾನ, ಅಗ್ನಿ–ತ್ವಕ್ಕು, ಅಪ್ಪುಸ್ಪರ್ಶನ, ಪೃಥ್ವಿ ಪಾಣಿ, ಇಂತಿವು ವಾಯುವಿನ ಪಂಚೀಕೃತಿಗಳು. "ಅಗ್ನಿ"ಯಲ್ಲಿ – ಆಕಾಶ ಬುದ್ಧಿ, ವಾಯು ಉದಾನ, ಅಗ್ನಿ ನೇತ್ರ, ಅಪ್ಪು ರೂಪು, ಪೃಥ್ವಿ ಪಾದ, ಇಂತಿವು ಅಗ್ನಿಯ ಪಂಚೀಕೃತಿಗಳು, "ಅಪ್ಪು"ವಿನಲ್ಲಿ – ಆಕಾಶಚಿತ್ತ, ವಾಯು ಅಪಾನ, ಅಗ್ನಿಜಿಹ್ವೆ, ಅಪ್ಪುರಸ, ಪೃಥ್ವಿ ಗುಹ್ಯ ಇಂತಿವು ಅಪ್ಪುವಿನ ಪಂಚೀಕೃತಿಗಳು, ಪೃಥ್ವಿಯಲ್ಲಿ – ಆಕಾಶ ಅಹಂಕಾರ, ವಾಯುಪ್ರಾಣ, ಅಗ್ನಿಘ್ರಾಣ, ಅಪ್ಪುಗಂಧ, ಪೃಥ್ವಿ ವಾಯು ಇಂತಿವು ಪೃಥ್ವಿಯ ಪಂಚೀಕೃತಿಗಳು.

ಹೀಗೆ ತತ್ವ ಹಾಗೂ ಪಂಚಮಹಾಭೂತಗಳು ಒಂದರೊಳಗೊಂದು ಸಂಬಂಧ ಹೊಂದಿರುವವು. ಒಂದರಲ್ಲಿ ಐದೈದು ಪಂಚಮಹಾಭೂತಗಳು ರೂಪುಗೊಂಡು ಶರೀರ ಸೃಷ್ಟಿಯಾಗಿರುವ ಈ ಕ್ರಮ ಪಾರಮಾರ್ಥಿಕವಾಗಿದ್ದು ನಿಜಜ್ಞಾನದ ಅರಿವಿನ ಚರ್ಚೆ ಇದಾಗಿದೆ. ಇವೆಲ್ಲದರ ಜ್ಞಾನದ ಉಪಯೋಗ ಶರಣನಿಗೆ ಅವಶ್ಯವಾಗಿರಬೇಕು. ಹಾಗಾಗಿ ಈ ತತ್ವ ಪಂಚೀಕರಣ ಉದ್ಧರಣೆಯು ಶರಣನಾದವನಿಗೆ ದೇಹವಾದ ತತ್ವ ಪಂಚಭೂತಗಳ – ಪಂಚೀಕೃತಿಗಳ ವಿವರ ತಿಳಿಸುವುದು.

*** ಉದ್ಧರಣೆ ಸಾಹಿತ್ಯ ದಲ್ಲಿಯ ಚಿತ್ರ : ೧೫.೧ :**

ಈ "ತತ್ವ ಪಂಚೀಕರಣೋದ್ಧರಣೆ" ಚಿತ್ರವನ್ನು ಕಾಗದದ ಮೇಲೆ ಜಲವರ್ಣದಿಂದ ರಚಿಸಲಾಗಿದೆ. ಈ ಕಾಗದದ ಮೇಲೆ ಎತ್ತರಕ್ಕೆ ಏಳುರೇಖೆಗಳನ್ನು ಅಡ್ಡವಾಗಿ ಏಳು ರೇಖೆಗಳನ್ನು ಎಳೆದಾಗ ಕೆಳಗಿನಿಂದ ಮೇಲಕ್ಕೆ ಆರು ಮನೆಗಳು, ಬಲದಿಂದ ಎಡಕ್ಕೆ ಆರು ಮನೆಗಳು ನಿರ್ಮಾಣವಾಗಿ ಒಟ್ಟು ೬ x ೬ = ೩೬ ಮನೆಗಳು ಸಿದ್ಧವಾಗುತ್ತವೆ.

* ಮೊದಲನೆಯ ಸಾಲಿನಲ್ಲಿ (ಮೇಲಿನಿಂದ ಕೆಳಗಡೆಗೆ) : ೧) ಆತ್ಮ ೨) ಆಕಾಶ ೩) ವಾಯು ೪) ಅಗ್ನಿ ೫) ಅಪ್ಪು ೬) ಪೃಥ್ವಿ

* ಎರಡನೆಯ ಸಾಲಿನಲ್ಲಿ ಕ್ರಮವಾಗಿ : ಭಾವ, ಜ್ಞಾನ, ಮನ, ಬುದ್ಧಿ, ಚಿತ್ತ, ಅಹಂಕಾರಗಳು.

* ಮೂರನೆಯ ಸಾಲಿನಲ್ಲಿ ಕ್ರಮವಾಗಿ : ಚೇತನ, ಸಮಾನ, ವ್ಯಾನ, ಉದಾನ, ಅಪಾನ, ಪ್ರಾಣವಿರುವುದು.

* ನಾಲ್ಕನೆಯ ಸಾಲಿನಲ್ಲಿ ಕ್ರಮವಾಗಿ : ಹೃದಯ, ಶ್ರೋತ್ರ (ಕಿವಿ), ತ್ವಕ್ಕು (ಚರ್ಮ), ನೇತ್ರ, ಜಿಹ್ವೆ (ನಾಲಿಗೆ), ಘ್ರಾಣ (ಪ್ರಾಣ) ವಿರುವುದು.

* ಐದನೆಯ ಸಾಲಿನಲ್ಲಿ ಕ್ರಮವಾಗಿ : ತೃಪ್ತಿ, ಶಬ್ದ, ಸ್ಪರ್ಷ, ರೂಪು, ರಸ, ಗಂಧವಿರುವುದು.

* ಆರನೆಯ ಸಾಲಿನಲ್ಲಿ ಕ್ರಮವಾಗಿ : ಮನನ, ವಾಕ್, ಪ್ರಾಣಿ, ಪಾದ, ಗುಹ್ಯ, ವಾಯುವಿರುವುದು.

ಹೀಗೆ ರಚನೆಗೊಂಡ ಮೂವತ್ತಾರು ಮನೆಗಳಲ್ಲಿ ಅಕ್ಷರನ್ಯಾಸ ಮಾಡುವುದರೊಂದಿಗೆ ಈ ಚಿತ್ರದ ಹಿನ್ನೆಲೆಗೆ ಪಾರದರ್ಶಕವಾದ ಗುಲಾಬಿಮಿಶ್ರಿತ ಹಳದಿ ವರ್ಣವನ್ನು ಲೇಪಿಸಲಾಗಿದೆ. ಗುಲಾಬಿ ಮತ್ತು ಕಪ್ಪು ರೇಖೆಗಳಿಂದ ಹೊರರೇಖೆಗಳನ್ನು ಎಳೆಯಲಾಗಿದ್ದು ನಾಲ್ಕೂ ಭುಜಗಳಲ್ಲಿರುವ ಅಲಂಕಾರಿಕ ನಕ್ಷೆಗಳನ್ನು ಮಾಡಿನ ಆಕಾರದಲ್ಲಿ ಚಿತ್ರಿಸಲಾಗಿದೆ. ಈ ಚಿತ್ರದ ನಾಲ್ಕೂ ಮೂಲೆಗಳಲ್ಲಿ ಹೂವಿನ ಚಿತ್ರಗಳನ್ನು ಮಾಡಲಾಗಿದೆ. ಇವುಗಳಿಗೆಲ್ಲ ಅಂದವಾದ ಚೌಕಟ್ಟುಗಳನ್ನು ರಚಿಸಿದ್ದು ಮನೆಗಳು ಮತ್ತು ಮಾಡುಗಳು ಎದ್ದು ಕಾಣುವಂತೆ ಹೊರಗಿನ ಭಾಗಕ್ಕೆ ದಟ್ಟ ಗುಲಾಬಿವರ್ಣವನ್ನು ಬಳಸಲಾಗಿದೆ.

*** ಕ.ವಿ.ವಿ. ಹಂಪಿಯಲ್ಲಿ ದೊರೆತ ಕಾಗದದ ಪ್ರತಿ : ಚಿತ್ರ ೧೫.೨ :**

ಈ "ತತ್ವ ಪಂಚೀಕರಣೋದ್ಧರಣಿ"ಯ ಚಿತ್ರವನ್ನು ಕಾಗದದ ಮೇಲೆ ಜಲವರ್ಣದಿಂದ ಅಲಂಕಾರಿಕವಾಗಿ ಚಿತ್ರಿಸಲಾಗಿದೆ. ಕೆಳಗಿನಿಂದ ಮೇಲಕ್ಕೆ ಆರು ಮನೆಗಳು, ಬಲದಿಂದ ಎಡಕ್ಕೆ ಆರುಮನೆಗಳನ್ನು ನಿರ್ಮಿಸಿಕೊಂಡು ಒಟ್ಟು ಮೂವತ್ತಾರು ಮನೆಗಳನ್ನು ರಚಿಸಿ ಪ್ರತಿಯೊಂದು ಮನೆಯ ನಾಲ್ಕೂ ಮೂಲೆಗಳಲ್ಲಿ ಅಲಂಕಾರಿಕ ಹೂವುಗಳನ್ನು ರಚಿಸಲಾಗಿದೆ. ಈ ಮೂವತ್ತಾರು ಮನೆಗಳ ಚೌರಸದ ಎಡಬಲಗಳಲ್ಲಿ ನೀಲಿವರ್ಣವನ್ನು ಹಾಗೂ ಮೇಲೆ ಮತ್ತು ಕೆಳಗೆ ಹಳದಿವರ್ಣವನ್ನು ಲೇಪಿಸಲಾಗಿದೆ. ಅದರ ಮೇಲೆ ಹಸಿರು ಎಲೆ, ಗುಲಾಬಿವರ್ಣದ ಹೂವುಗಳನ್ನು ಹೊಂದಿದ ಬಳ್ಳಿಯನ್ನು ಚಿತ್ರಿಸಲಾಗಿದ್ದು ಸುತ್ತಲೂ ಅಷ್ಟ ಭುಜಾಕೃತಿಯಲ್ಲಿ ಕಂದುಗೆಂಪುವರ್ಣದಲ್ಲಿ ಪಟ್ಟಿಯನ್ನು ಎಳೆಯಲಾಗಿದೆ. ಮೇಲೆ ತಿಳಿಸಿದಂತೆ ಆಯಾ ಮನೆಗಳಲ್ಲಿ ಅಕ್ಷರವಿನ್ಯಾಸ ಮಾಡಲಾಗಿದೆ. ಮನೆಗಳ ಮಧ್ಯದಲ್ಲಿ ಬಿಳಿವರ್ಣವಿದ್ದು ಕಪ್ಪುವರ್ಣದ ಅಕ್ಷರಗಳು ಸ್ಪಷ್ಟವಾಗಿ ಕಾಣುತ್ತವೆ. ಒಟ್ಟಾರೆ ಈ ಚಿತ್ರವು ಈ ಚಿತ್ರವು ಸುಂದರವಾಗಿ ರೂಪುಗೊಂಡಿದೆ.

*** ಕ.ವಿ.ವಿ.ಹಂಪೆಯಲ್ಲಿಯ ತಾಳೆಓಲೆಗರಿ ಚಿತ್ರ : ೧೫.೩ :**

ತಾಳೆಗರಿಯೊಂದರ ಮೇಲೆ "ತತ್ವ ಪಂಚೀಕರಣೋದ್ಧರಣಿ" ಚಿತ್ರವನ್ನು ಕಪ್ಪುವರ್ಣದಿಂದ ರೇಖಾ ಪ್ರಧಾನವಾಗಿ ಚಿತ್ರಿಸಲಾಗಿದೆ. ಮೇಲಿನಿಂದ ಕೆಳಗೆ ಆರು ಮನೆಗಳನ್ನು ಹಾಗೂ ಎಡದಿಂದ ಬಲಕ್ಕೆ ಆರು ಮನೆಗಳನ್ನು ಒಟ್ಟು ಮೂವತ್ತಾರು ಮನೆಗಳನ್ನು ರಚಿಸಿಕೊಂಡು ಆಯಾ ಮನೆಗಳಲ್ಲಿ ಅಕ್ಷರನ್ಯಾಸ ಮಾಡಲಾಗಿದ್ದು ಈ ಚಿತ್ರದ ಬಲಬದಿಯಲ್ಲಿ ಅಲಂಕಾರಿಕ ಅಂಚಿನ ಮಧ್ಯದಲ್ಲಿ ವೃಕ್ಷವೊಂದರ ಕೆಳಗೆ ನಿಂತಿರುವ ಚಿತ್ರವಿದೆ. ಈ ವ್ಯಕ್ತಿಯು ತನ್ನ ಎಡಗೈ ಮೇಲೆ ಮಾಡಿದ್ದು ಏನನ್ನೊ ಹೇಳುತ್ತಿರುವಂತೆ ಕಾಣುತ್ತಿದೆ.

*** ಗು.ವಿ.ವಿ. ಗುಲಬರ್ಗಾದಲ್ಲಿಯ ಚಿತ್ರ : ೧೫.೪ :**

ಕಾಗದದ ಮೇಲೆ "ತತ್ವ ಪಂಚೀಕರಣೋದ್ಧರಣಿ"ಯ ಚಿತ್ರವನ್ನು ಜಲವರ್ಣದಲ್ಲಿ ಚಿತ್ರಿಸಲಾಗಿದೆ. ತಿಳಿಗುಲಾಬಿವರ್ಣದ ಹಿನ್ನೆಲೆಯನ್ನು ಹೊಂದಿದ್ದು ಕಪ್ಪುವರ್ಣದಿಂದ ರೇಖಾಪ್ರಧಾನವಾಗಿ ಚಿತ್ರಿಸಲಾಗಿದೆ. ಆಯತಾಕಾರದಲ್ಲಿ ವಿನ್ಯಾಸಗೊಳಿಸಲಾಗಿದ್ದು ಒಟ್ಟು ಮೂವತ್ತಾರು ಮನೆಗಳನ್ನು ಹೊಂದಿದೆ. ಮೇಲೆ ತಿಳಿಸಿದಂತೆ ಅಕ್ಷರನ್ಯಾಸವನ್ನು ಹೊಂದಿದ್ದು ಈ ಚಿತ್ರದ ಸುತ್ತಲೂ ಹಸಿರುವರ್ಣದ ಎಲೆಗಳನ್ನು, ಕೆಂಪುವರ್ಣದ ಹೂವುಗಳನ್ನು ಬಳ್ಳಿಯಂತೆ ಚಿತ್ರಿಸಲಾಗಿದೆ.

*** ಧರ್ಮಸ್ಥಳದಲ್ಲಿ ದೊರೆತ ಚಿತ್ರ : ೧೫.೫ :**

ಕಾಗದದ ಮೇಲೆ ರಚಿಸಿದ ಈ "ತತ್ವ ಪಂಚೀಕರಣೋದ್ಧರಣಿ" ಚಿತ್ರ ರೇಖಾಪ್ರಧಾನವಾಗಿದೆ. ಚೌರಸಾಕಾರದಲ್ಲಿ ಚಿತ್ರಿಸಲಾಗಿದೆ. ಒಟ್ಟು ಮೂವತ್ತಾರು ಮನೆಗಳನ್ನು ಹೊಂದಿದ್ದು ಕಪ್ಪು ಗೆರೆಗಳನ್ನು ಹೊಡೆದು ಅದರಿಂದಲೇ ಆಯಾ ಮನೆಗಳಲ್ಲಿ ಮೇಲೆ ಹೇಳಿದಂತೆ ಅಕ್ಷರ ವಿನ್ಯಾಸಗೊಳಿಸಲಾಗಿದೆ. ಈ ಚಿತ್ರದ ಅಂಚಿಗೆ ಕೆಂಪುವರ್ಣದ ಪಟ್ಟಿಯನ್ನು, ಅದಕ್ಕೆ ಹೊಂದಿಕೊಂಡು ಹಳದಿ ವರ್ಣದ ಪಟ್ಟಿಯನ್ನು ಬರೆದು ಅದಕ್ಕೆ ಕಪ್ಪುವರ್ಣದ ಹೊರ ರೇಖೆಗಳನ್ನು ಹಾಕಲಾಗಿದೆ.

*** ಬೆಂ. ವಿ.ವಿ. ಬೆಂಗಳೂರಿನಲ್ಲಿಯ ಚಿತ್ರ : ೧೫.೬ :**

ಕಾಗದದ ಮೇಲೆ ರಚಿಸಿದ ಈ "ತತ್ವ ಪಂಚೀಕರಣೋದ್ಧರಣಿ"ಯ ಚಿತ್ರವನ್ನು ವರ್ಣಪ್ರಧಾನವಾಗಿ ಚಿತ್ರಿಸಲಾಗಿದೆ. ಒಟ್ಟು ಮೂವತ್ತಾರು ಮನೆಗಳನ್ನು ಚಿತ್ರಿಸಲಾಗಿದ್ದು ಕ್ರಮವಾಗಿ ಕೆಂಪು ಮತ್ತು ಹಳದಿ ವರ್ಣವನ್ನು ತುಂಬಲಾಗಿದೆ. ಹಳದಿವರ್ಣದ ಪಟ್ಟಿಯಿಂದ ಮನೆಗಳನ್ನು ವಿಭಾಗಿಸಲಾಗಿದೆ. ಕಪ್ಪುವರ್ಣದ ಅಕ್ಷರಗಳನ್ನು ಮೇಲೆ ತಿಳಿಸಿದಂತೆ ವಿನ್ಯಾಸಗೊಳಿಸಲಾಗಿದೆ. ಚಿತ್ರದ ಹಿನ್ನೆಲೆಯಲ್ಲಿ ಕೆಂಪುವರ್ಣವನ್ನು ಬಳಿಯಲಾಗಿದೆ.

*** ಕ.ವಿ.ವಿ. ಧಾರವಾಡದ ಚಿತ್ರ : ೧೫.೭ :**

ಕಾಗದದ ಮೇಲೆ ರಚಿಸಿದ "ತತ್ವ ಪಂಚೀಕರಣೋದ್ಧರಣಿ" ಚಿತ್ರವನ್ನು ಜಲವರ್ಣದಲ್ಲಿ ಚಿತ್ರಿಸಲಾಗಿದೆ. ತಿಳಿನೀಲಿವರ್ಣದ ಕೆಂಪು ರೇಖೆಗಳೊಂದಿಗೆ ಒಟ್ಟು ಮೂವತ್ತಾರು ಮನೆಗಳನ್ನು ರಚಿಸಿದ್ದು, ಮೇಲೆ ತಿಳಿಸಿದಂತೆ ಎಲ್ಲ ಅಕ್ಷರಗಳನ್ನು ಆಯಾ ಮನೆಗಳಲ್ಲಿ ವಿನ್ಯಾಸಗೊಳಿಸಲಾಗಿದೆ. ಈ ಚಿತ್ರದ ಚೌರಸದ ಅಂಚಿನಲ್ಲಿ ಹಳದಿಪಟ್ಟಿಯನ್ನು, ಅದರ ಬದಿಗೆ ಕೆಂಪುವರ್ಣದ ಪಟ್ಟಿಯನ್ನು ಚಿತ್ರಿಸಲಾಗಿದೆ. ಚಿತ್ರದ ಹಿನ್ನೆಲೆಯಲ್ಲಿ ಕಾಗದದ ಬಿಳಿವರ್ಣವು ಹಾಗೆ ಉಳಿಸಿಕೊಳ್ಳಲಾಗಿದೆ.

## ೧೬. ಮಂತ್ರಪಂಚೀಕರಣೋದ್ಧರಣೆ

**ವಾಚ್ಯ ವಸ್ತು ವಿಷಯ :**

ತತ್ವ ಪಂಚೀಕರಣಗಳು ಪರಶಿವನ ಮುಖದಿಂದ ಜನಿಸಿದ ಪ್ರಣವಪಂಚಾಕ್ಷರಿಯಿಂ ನಿವೃತ್ತಿ ಮುಖವನೆಯ್ದಿದ ಮಂತ್ರ ಪಂಚೀಕರಣೋತ್ಪತ್ತಿ ನಿರ್ದೇಶವೆಂತೆಂದೊಡೆ ಎಂದು ಪ್ರಾರಂಭವಾಗುವುದು. ಶರೀರ ಇಂದ್ರಿಯಾದಿಗಳು ಪರಶಿವನ ಮುಖದಿಂದ ಹುಟ್ಟಿದ ಪ್ರಣವ ಪಂಚಾಕ್ಷರಿ ಮಂತ್ರದಿಂದ ಪಂಚೀಕರಣಗೊಳ್ಳುತ್ತಾ ಹುಟ್ಟಿಕೊಂಡಿವೆ.[೫೩] ಅವು ಕೆಳಗಿನಂತಿವೆ:

*** "ಯ"ಕಾರದಂಶಗಳು :**

೧) ಓಂ = ಭಾವ

೨) ಯ = ಜ್ಞಾನ

೩) ವಾ = ಮನ

೪) ಶಿ = ಬುದ್ಧಿ

೫) ಮ = ಚಿತ್ತ

೬) ನ = ಅಹಂಕಾರ

*** "ವ"ಕಾರದಂಶಗಳು :**

೧) ಓಂ = ಚೇತನ

೨) ಯ = ಸಮಾನ

೩) ವಾ = ವ್ಯಾನ

೪) ಶಿ = ಉದಾನ

೫) ಮ = ಪಾನ

೬) ನ = ಪ್ರಾಣ

*** "ಶಿ" ಕಾರದಂಶಗಳು :**

೧) ಓಂ = ಹೃದಯ

೨) ಯ = ಶ್ರೋತ್ರ

೩) ವಾ = ತ್ವಕ್ಕು

೪) ಶಿ = ನೇತ್ರ

೫) ಮ = ಜಿಹ್ವೆ

೬) ನ = ಘ್ರಾಣ

*** "ಮ"ಕಾರದಂಶಗಳು :**

೧) ಓಂ = ತೃಪ್ತಿ

೨) ಯ = ಶಬ್ದ

೩) ವಾ = ಸ್ಪರ್ಶನ

೪) ಶಿ = ರೂಪ

೫) ಮ = ರಸ

೬) ನ = ಗಂಧ

*** "ನ" ಕಾರದಂಶಗಳು :**

೧) ಓಂ = ಮನನ

೨) ಯ = ವಾಕ್

೩) ವಾ = ಪಾಣಿ

೪) ಶಿ = ಪಾದ

೫) ಮ = ಗುಹ್ಯ

೬) ನ = ಪಾಯು

*** "ಓಂ"ಕಾರ ಪಂಚೀಕೃತಗಳು :**

೧) ಯ = ಭಾವ

೨) ವಾ = ಚೇತನ

೩) ಶಿ = ಹೃದಯ

೪) ಮ = ತೃಪ್ತಿ

೫) ನ = ಮನನ

ಇಂತಿವು ಓಂಕಾರದ ಪಂಚೀಕೃತಗಳು

---

೫೩. ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು : ಶಿವಾನುಭವಶಾಸ್ತ್ರ : ಪುಟ ೫೪

*** "ಯ"ಕಾರ ಪಂಚೀಕೃತಗಳು**

೧) ಯ = ಜ್ಞಾನ

೨) ವಾ = ಸಮಾನ

೩) ಶಿ = ಶ್ರೋತೃ

೪) ಮ = ಶಬ್ದ

೫) ನ = ವಾಕ್ಕು

ಇಂತಿವು "ಯ"ಕಾರದ ಪಂಚೀಕೃತಗಳು

*** "ಶಿ" ಕಾರಪಂಚೀಕೃತಗಳು :**

೧) ಯ = ಬುದ್ಧಿ

೨) ವಾ = ಉದಾನ

೩) ಶಿ = ನೇತ್ರ

೪) ಮ = ರೂಪು

೫) ನ = ಪಾದ

*** "ವಾ" ಕಾರ ಪಂಚೀಕೃತಗಳು :**

೧) ಯ = ಮನ

೨) ವಾ = ವ್ಯಾನ

೩) ಶಿ = ತ್ವಕ್ಕು(ಚರ್ಮ)

೪) ಮ = ಸ್ಪರ್ಶನ

೫) ನ = ಪಾಣಿ

*** "ನ" ಕಾರ ಪಂಚೀಕೃತಗಳು :**

೧) ಯ = ಅಹಂಕಾರ

೨) ವಾ = ಪ್ರಾಣ

೩) ಶಿ = ಘ್ರಾಣ

೪) ಮ = ಗಂಧ

೫) ನ = ವಾಯು

*** "ಮ" ಕಾರ ಪಂಚೀಕೃತಗಳು :**

೧) ಯ = ಚಿತ್ತ

೨) ವಾ = ಅಪಾನ

೩) ಶಿ = ಜಿಹ್ವೆ

೪) ಮ = ರಸ

೫) ನ = ಗುಹ್ಯ

ಇವೆಲ್ಲ ಶಿವಶರಣರಿಗೆ ತಮ್ಮನ್ನು ತಾವರಿತು ಅರ್ಪಣ, ಅರ್ಚನತ್ವದ ಸಾಧನ ಉಪಕರಣ ಸಕೀಲಗಳಾಗಿವೆ. ಮನುಷ್ಯನ ದೇಹವೇ ಮಂತ್ರಮಯ, ಇಂದ್ರಿಯಾದಿ ಭಾಗಗಳೆಲ್ಲ ಯಂತ್ರದಿಂದ ಈ ಪಂಚೀಕೃತಿಯಿಂದ ಹುಟ್ಟಿವೆ. ಅದನ್ನು ಈ ಮಂತ್ರದಿಂದ ಸಂಸ್ಕರಿಸಿ ಶುದ್ಧೀಕರಿಸಿ ಶಿವಮಯವಾಗಿಸುವುದನ್ನು ತಿಳಿಸುವುದು ಈ ಮಂತ್ರ. ಪಂಚೀಕರಣೋದ್ಧರಣಿಯ ಸಂಬಂಧ ಸಮಾಪ್ತ ಮಂಗಳ ಶ್ರೀ ಶ್ರೀ ಎಂದು ಮುಕ್ತಾಯವಾಗುವುದು. ಸರಳವಾಗಿ ತಿಳಿದುಕೊಂಡು ಶರಣನು ಶಿವನಾಗುವದು ಇದರ ಉದ್ದೇಶ. ಆಕರ್ಷಕವಾಗಿ ತಂತ್ರಯುಕ್ತವಾದ ವರ್ಣರಂಜಿತ ಪಟಲ (ಚಿತ್ರ)ದಿಂದ ಸರಳವಾಗಿ ಮಂತ್ರ ತಿಳಿಯಲು ಸಹಾಯಕವಾಗುತ್ತದೆ.

*** ಉದ್ಧರಣಿ ಸಾಹಿತ್ಯದಲ್ಲಿಯ ಚಿತ್ರ : ೧೬.೧ :**

ಕಾಗದದ ಮೇಲೆ ಈ "ಮಂತ್ರ ಪಂಚೀಕರಣೋದ್ಧರಣಿ" ಚಿತ್ರವನ್ನು ಜಲವರ್ಣದಿಂದ ಚಿತ್ರಿಸಲಾಗಿದೆ. ಉತ್ತರಕ್ಕೆ ಏಳು ರೇಖೆಗಳನ್ನು, ಅಡ್ಡದಾಗಿ ಏಳು ರೇಖೆಗಳನ್ನು ಎಳೆದಾಗ ಕೆಳಗಿನಿಂದ ಮೇಲಕ್ಕೆ ಆರು ಮನೆಗಳು, ಬಲದಿಂದ ಎಡಕ್ಕೆ ಆರು ಮನೆಗಳು ನಿರ್ಮಾಣವಾಗಿ ಒಟ್ಟು ೬ x ೬ =೩೬ ಮನೆಗಳು ಸಿದ್ಧವಾಗುತ್ತವೆ.

* ಮೊದಲನೆಯ ಸಾಲಿನಲ್ಲಿ ( ಮೇಲಿನಿಂದ ಕೆಳಗಡೆಗೆ) : ೧) ಆತ್ಮ ೨) ಆಕಾಶ ೩) ವಾಯು ೪) ಅಗ್ನಿ ೫) ಅಪ್ಪು ೬) ಪೃಥ್ವಿ

* ಎರಡನೆಯ ಸಾಲಿನಲ್ಲಿ ಕ್ರಮವಾಗಿ :

ಭಾವ, ಜ್ಞಾನ, ಮನ, ಬುದ್ಧಿ, ಚಿತ್ತ, ಅಹಂಕಾರ

* ಮೂರನೆಯ ಸಾಲಿನಲ್ಲಿ ಕ್ರಮವಾಗಿ :

ಚೇತನ, ಸಮಾನ, ವ್ಯಾನ, ಉದಾನ, ಅಪಾನ, ಪ್ರಾಣ,

* ನಾಲ್ಕನೆಯ ಸಾಲಿನಲ್ಲಿ ಕ್ರಮವಾಗಿ :

ಹೃದಯ, ಶ್ರೋತ್ರ, ತ್ವಕ್ಕು, ನೇತ್ರ, ಜಿಹ್ವೆ, ಘ್ರಾಣ.

* ಐದನೆಯ ಸಾಲಿನಲ್ಲಿ ಕ್ರಮವಾಗಿ :

ತೃಪ್ತಿ, ಶಬ್ದ, ಸ್ಪರ್ಶ, ರೂಪು, ರಸ, ಗಂಧ

* ಆರನೆಯ ಸಾಲಿನಲ್ಲಿ ಕ್ರಮವಾಗಿ :

ಮನನ, ವಾಕ್ಕು, ಹಣೆ, ಪಾದ, ಗುಹ್ಯ, ಪಾಯು ಹೀಗೆ ರಚನೆಗೊಂಡ ಮೂವತ್ತಾರು ಮನೆಗಳಲ್ಲಿ ಅಕ್ಷರನ್ಯಾಸ ಮಾಡುವುದರೊಂದಿಗೆ ಈ ಚಿತ್ರದ ಹಿನ್ನೆಲೆಗೆ ಪಾರದರ್ಶಕವಾದ ಗುಲಾಬಿ ಮಿಶ್ರಿತ ಹಳದಿವರ್ಣವನ್ನು ಲೇಪಿಸಲಾಗಿದೆ. ಗುಲಾಬಿ ಮತ್ತು ಕಪ್ಪು ರೇಖೆಗಳಿಂದ ಹೊರರೇಖೆಗಳನ್ನು ಎಳೆಯಲಾಗಿದೆ. ನಾಲ್ಕೂ ಭುಜಗಳಲ್ಲಿರುವ ಅಲಂಕಾರಿಕ ನಕ್ಷೆಗಳನ್ನು ಮಾಡಿನ ಆಕಾರದಲ್ಲಿ ಚಿತ್ರಿಸಲಾಗಿದೆ. ಈ ಚಿತ್ರದ ನಾಲ್ಕೂ ಮೂಲೆಗಳಲ್ಲಿ ಹೂವಿನ ಚಿತ್ರವನ್ನು ಮಾಡಲಾಗಿದೆ. ಇವುಗಳಿಗೆಲ್ಲ ಅಂದವಾದ ಚೌಕಟ್ಟುಗಳನ್ನು ರಚಿಸಿದ್ದು ಮನೆಗಳು ಮತ್ತು ಮಾಡುಗಳು ಎದ್ದು ಕಾಣುವಂತೆ ಹೊರಗಿನ ಭಾಗಕ್ಕೆ ದಟ್ಟವಾದ ಗುಲಾಬಿ ವರ್ಣವನ್ನು ಬಳಸಲಾಗಿದೆ.

*** ಕ.ವಿ.ವಿ. ಹಂಪೆಯಲ್ಲಿ ದೊರೆತ ಕಾಗದದ ಪ್ರತಿ : ಚಿತ್ರ ೧೬.೨ :**

ಈ "ಮಂತ್ರ ಪಂಚೀಕರಣೋದ್ಧರಣಿ" ಚಿತ್ರವನ್ನು ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ಒಟ್ಟು ಮೂವತ್ತಾರು ಮನೆಗಳನ್ನು ರಚಿಸಿ ಪ್ರತಿಯೊಂದು ಮನೆಯ ಮೂಲೆಗಳಲ್ಲಿ ಹೂವುಗಳನ್ನು ಚಿತ್ರಿಸಿ ಅಲಂಕರಿಸಲಾಗಿದೆ. ಈ ಮನೆಗಳ ಚೌರಸಾಕೃತಿಯ ಎಡಬಲಗಳಲ್ಲಿ ಹಸಿರು ಎಲೆ, ಕೆಂಪು ಹೂವುಗಳಿಂದ

ಬಳ್ಳಿಯನ್ನು ಚಿತ್ರಿಸಲಾಗಿದೆ. ಮೇಲೆ ಮತ್ತು ಕೆಳಗಡೆ ಸುಳಿವುನಕ್ಷೆಗಳನ್ನು ಬಳಸಲಾಗಿದೆ. ಇಡೀ ಚಿತ್ರಕ್ಕೆ ಹಿನ್ನೆಲೆಯನ್ನು ಕಾಗದದ ಬಿಳಿಯನ್ನು ಹಾಗೆ ಉಳಿಸಿಕೊಳ್ಳಲಾಗಿದೆ. ಸುತ್ತಲೂ ಷಡ್ಭುಜಾಕೃತಿಯ ಪಟ್ಟಿಯನ್ನು ರಚಿಸಲಾಗಿದೆ. ಮೇಲೆ ಹೇಳಿದಂತೆ ಆಯಾ ಮನೆಗಳಲ್ಲಿಯಂತೆ ಅಕ್ಷರನ್ಯಾಸ ಮಾಡಲಾಗಿದೆ.

*** ಕ.ವಿ.ವಿ. ಹಂಪೆಯಲ್ಲಿಯ ತಾಳೆಓಲೆಗರಿ ಚಿತ್ರ : ೧೬.೩:**

ತಾಳೆಗರಿ ಓಲೆಯೊಂದರ ಮೇಲಿನ "ಮಂತ್ರಪಂಚಕರಣೋದ್ಧರಣಿ" ಚಿತ್ರವನ್ನು ಕಪ್ಪುವರ್ಣದಿಂದ ರೇಖಾಪ್ರಧಾನವಾಗಿ ಚಿತ್ರಿಸಲಾಗಿದೆ. ಒಟ್ಟು ಮೂವತ್ತಾರು ಮನೆಗಳನ್ನು ರಚಿಸಿಕೊಂಡು ಆಯಾ ಮನೆಗಳಲ್ಲಿ ಮೇಲೆ ತಿಳಿಸಿದಂತೆ ಇಲ್ಲಿಯೂ ಅಕ್ಷರನ್ಯಾಸ ಮಾಡಲಾಗಿದೆ. ಈ ಚಿತ್ರದ ಬಲಬದಿಯಲ್ಲಿ ಅಲಂಕಾರಿಕ ಅಂಚಿನ ಮದ್ಯದಲ್ಲಿ ವೃಕ್ಷವೊಂದರ ಕೆಳಗೆ ಮಾನವ ನಿಂತಿರುವನು. ಈ ವ್ಯಕ್ತಿಯು ತನ್ನ ಎಡಗೈ ಮೇಲ್ಗಡೆ ಮಾಡಿದ್ದು ಏನನ್ನೋ ಹೇಳುತ್ತಿರುವಂತೆ ಚಿತ್ರಿಸಲಾಗಿದೆ.

*** ಗು. ವಿ.ವಿ. ಗುಲಬರ್ಗಾದಲ್ಲಿಯ ಚಿತ್ರ : ೧೬.೪:**

ಕಾಗದದ ಮೇಲೆ "ಮಂತ್ರ ಪಂಚೀಕರಣೋದ್ಧರಣಿ" ಚಿತ್ರವನ್ನು ಜಲವರ್ಣದಿಂದ ಚಿತ್ರಿಸಲಾಗಿದೆ. ತಿಳಿಗುಲಾಬಿ ವರ್ಣದ ಹಿನ್ನೆಲೆಯನ್ನು ಹೊಂದಿದ್ದು ಕಪ್ಪುವರ್ಣದಿಂದ ರೇಖಾಪ್ರಧಾನವಾಗಿ ಚಿತ್ರಿಸಲಾಗಿದೆ. ಆಯತಾಕಾರದಲ್ಲಿ ವಿನ್ಯಾಸಗೊಳಿಸಲಾಗಿದ್ದು ಒಟ್ಟು ಮೂವತ್ತಾರು ಮನೆಗಳನ್ನು ಹೊಂದಿದೆ. ಮೇಲೆ ತಿಳಿಸಿದಂತೆ ಆಯಾ ಮನೆಗಳಲ್ಲಿ ಅಕ್ಷರ ವಿನ್ಯಾಸವನ್ನು ಮಾಡಲಾಗಿದೆ. ಈ ಚಿತ್ರದ ಸುತ್ತಲೂ ಹಸಿರುಬಣ್ಣದ ಎಲೆ, ಕೆಂಪುವರ್ಣದ ಹೂವುಗಳನ್ನು ಹೊಂದಿದ ಅಂಚು ಭಾಗ ಸುಂದರವಾಗಿ ಕಂಡುಬರುತ್ತದೆ.

*** ಧರ್ಮಸ್ಥಳದಲ್ಲಿ ದೊರೆತ ಚಿತ್ರ : ೧೬.೫.:**

ಕಾಗದದ ಮೇಲೆ ರಚಿಸಿದ ಈ "ಮಂತ್ರ ಪಂಚೀಕರಣೋದ್ಧರಣಿ" ಚಿತ್ರವನ್ನು ಜಲವರ್ಣದಲ್ಲಿ ಚಿತ್ರಿಸಲಾಗಿದೆ. ಒಟ್ಟು ಮೂವತ್ತಾರು ಮನೆಗಳನ್ನು ಹೊಂದಿದ್ದು, ಕಪ್ಪು ವರ್ಣದ ರೇಖೆಗಳಿಂದ ಚಿತ್ರಿಸಲಾಗಿದೆ. ಹಾಗೂ ಆಯಾ ಮನೆಗಳಲ್ಲಿ ಆಯಾ ಅಕ್ಷರಗಳನ್ನು ಮೇಲೆ ತಿಳಿಸಿದಂತೆ ಬರೆಯಲಾಗಿದೆ. ಈ ಚಿತ್ರದ ಅಂಚಿಗೆ ಹಳದಿ ವರ್ಣದ ಪಟ್ಟಿ, ಅದರ ಬದಿಗೆ ಕಪ್ಪು ವರ್ಣದ ಪಟ್ಟಿ, ಮತ್ತೆ ಅದರ ಬದಿಗೆ ಹಳದಿವರ್ಣದ ಪಟ್ಟಿಯನ್ನು ಬರೆಯಲಾಗಿದೆ.

*** ಬೆಂ. ವಿ.ವಿ. ಬೆಂಗಳೂರಿನಲ್ಲಿಯ ಚಿತ್ರ : ೧೬.೬ :**

ಕಾಗದದ ಮೇಲೆ ಚಿತ್ರಿಸಿದ ಈ "ಮಂತ್ರ ಪಂಚೀಕರಣೋದ್ಧರಣಿ" ಚಿತ್ರವನ್ನು ವರ್ಣಪ್ರಧಾನವಾಗಿ ಚಿತ್ರಿಸಲಾಗಿದೆ. ಒಟ್ಟು ಮೂವತ್ತಾರು ಮನೆಗಳನ್ನು ಚಿತ್ರಿಸಲಾಗಿದ್ದು, ಕೆಂಪು ಮತ್ತು ಹಳದಿ ವರ್ಣದಿಂದ ಕ್ರಮವಾಗಿ ಚಿತ್ರಿಸಲಾಗಿದ್ದು, ಹಳದಿವರ್ಣದ ಪಟ್ಟಿಗೆ ಕಪ್ಪುಗೆರೆಗಳನ್ನು ಬರೆಯಲಾಗಿದೆ. ಕಪ್ಪುವರ್ಣದ ಅಕ್ಷರಗಳನ್ನು ಆಯಾ ಮನೆಗಳಲ್ಲಿ ಬರೆಯಲಾಗಿದೆ. ಒಟ್ಟಾರೆ ಚಿತ್ರದ ಹಿನ್ನೆಲೆಯಲ್ಲಿ ಕೆಂಪುವರ್ಣವನ್ನು ಬಳಸಲಾಗಿದೆ.

*** ಕ.ವಿ.ವಿ. ಧಾರವಾಡದ ಚಿತ್ರ : ೧೬.೭ :**

ಈ "ಮಂತ್ರ ಪಂಚೀಕರಣೋದ್ಧರಣಿ ಚಿತ್ರ"ವನ್ನು ಕಾಗದದ ಮೇಲೆ ಜಲವರ್ಣದಲ್ಲಿ ರಚಿಸಲಾಗಿದೆ. ತಿಳಿನೀಲಿ ವರ್ಣದ ಪಟ್ಟಿಯೊಂದಿಗೆ ಕೆಂಪುವರ್ಣದ ರೇಖೆಗಳಿಂದ ಮೂವತ್ತಾರು ಮನೆಗಳನ್ನು ರಚಿಸಲಾಗಿದೆ. ಮೇಲೆ ತಿಳಿಸಿದಂತೆ ಆಯಾ ಮನೆಗಳಲ್ಲಿ ಆಯಾ ಅಕ್ಷರಗಳನ್ನು ಬರೆಯಲಾಗಿದೆ. ಈ ಚಿತ್ರದ ಚೌರಸದ ಸುತ್ತಲೂ ಕೆಂಪುವರ್ಣದ ಪಟ್ಟಿ, ಅದರ ಮೇಲೆ ಹಳದಿ ವರ್ಣದ ಪಟ್ಟಿಯನ್ನು ಎಳೆಯಲಾಗಿದೆ. ಬದಿಯಲ್ಲಿಯೂ ಹಳದಿವರ್ಣದ ಪಟ್ಟಿಯನ್ನು ಎಳೆಯಲಾಗಿದೆ. ಈ ಚಿತ್ರದ ಹಿನ್ನೆಲೆಯಲ್ಲಿ ಹಾಳೆಯ ಬಿಳಿಯವರ್ಣವನ್ನು ಉಳಿಸಿಕೊಂಡಿದ್ದು ಕಪ್ಪು ಅಕ್ಷರಗಳು ಎದ್ದು ಕಾಣುತ್ತವೆ.

## ೧೭. ಲಿಂಗಪಂಚೀಕರಣೋದ್ಧರಣಿ

**ವಾಚ್ಯ ವಸ್ತು, ವಿಷಯ:**

ಲಿಂಗಪಂಚೀಕರಣ ಉದ್ಧರಣಿಯು ಇಂತು ಶರಣಂಗಂಗವಾದ ಮಂತ್ರ ತತ್ವ ಕರಣಂಗಳು ಮಹಾಲಿಂಗವಾದಿಯಾದ ಪಂಚಲಿಂಗ ಸಂಬಂಧದಿಂ ತೋರ್ಪಲಿಂಗ ಪಂಚೀಕರಣ ಎಂದು ಪ್ರಾರಂಭವಾಗುವುದು. ಶರಣರ ಅಂಗಾಂಗವು ಮಂತ್ರತತ್ವದಿಂದಾದ ಶರೀರದ ಇಂದ್ರಿಯಗಳು ಮಹಾಲಿಂಗಾದಿಯಾದ ಪಂಚಲಿಂಗ ಸಂಬಂಧದಿಂದ ಲಿಂಗಪಂಚೀಕರಣಗೊಂಡು ಮಂತ್ರ ಪಂಚೀಕರಣ ಕ್ರಮದಂತೆಯೇ ಆಗಿರುವುದು. ಐದು ಲಿಂಗಗಳು ಐದೈದು ಸಲದಿಂದ ಶರೀರಾದಿ ಇಂದ್ರಿಯ ಭಾವಾದಿಬಯಕೆಗಳಲ್ಲೆಲ್ಲ ಆಗಿರುವವೆಂದು ಲಿಂಗಪಂಚೀಕರಣ ಉದ್ಧರಣಿ ತಿಳಿಸುವುದು[೫೪] ಇದು ಶಿವಶರಣವಾದವನನ್ನು ತಿಳಿದು ಅರ್ಪಣ ಸಾಧನವಾಗಿಸಿಕೊಂಡು ಶಿವತ್ವ ಹೊಂದುವುದನ್ನು ವಿವರಿಸುವ ಉದ್ಧೇಶ ಹೊಂದಿರುವುದು.

*** ಶಿವಾನುಭವು ಶಾಸ್ತ್ರದಲ್ಲಿಯ ರೇಖಾಚಿತ್ರ :ಚಿತ್ರ ೧೭.೧:**

ಈ "ಲಿಂಗ ಪಂಚೀಕರಣೋದ್ಧರಣಿ" ಚಿತ್ರ ರೇಖಾಪ್ರಧಾನವಾದ ಚಿತ್ರವಾಗಿದ್ದು ಎತ್ತರಕ್ಕೆ ಏಳು ರೇಖೆಗಳನ್ನು, ಅಡ್ಡವಾಗಿ ಏಳು ರೇಖೆಗಳನ್ನು ಎಳೆದಾಗ ಕೆಳಗಿನಿಂದ ಮೇಲಕ್ಕೆ ಆರು ಮನೆಗಳು, ಬಲದಿಂದ ಎಡಕ್ಕೆ ಆರು ಮನೆಗಳು ನಿರ್ಮಾಣವಾಗಿದ್ದು ಒಟ್ಟು ೬ x ೬ =೩೬ ಮನೆಗಳು ಸಿದ್ಧವಾಗುತ್ತವೆ.

* ಮೊದಲನೆಯ ಸಾಲಿನಲ್ಲಿ (ಮೇಲಿನಿಂದ ಕೆಳಗಡೆಗೆ) : ೧) ಮಹಾಲಿಂಗೈಕ್ಯ ೨) ಮಹಾಲಿಂಗ ಪ್ರಸಾದಲಿಂಗ ಶರಣ ಆಕಾಶ ೩) ಮಹಾಲಿಂಗ, ಜಂಗಮಲಿಂಗ, ಪ್ರಾಣಲಿಂಗ, ವಾಯು ೪) ಮಹಾಲಿಂಗ, ಶಿವಲಿಂಗ, ಪ್ರಸಾದಿ ಅಗ್ನಿ ೫) ಮಹಾಲಿಂಗ, ಗುರುಲಿಂಗ, ಮಹೇಶ್ವರ, ಅಪ್ಪು ೬) ಮಹಾಲಿಂಗ ಆಚಾರಲಿಂಗ, ಭಕ್ತ ಪೃಥ್ವಿ

೫೪. ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು : ಶಿವಾನುಭವಶಾಸ್ತ್ರ : ಪುಟ ೫೫

* ಎರಡನೆಯ ಸಾಲಿನಲ್ಲಿ ಕ್ರಮವಾಗಿ : ೧) ಪ್ರಸಾದಲಿಂಗ, ಮಹಾಲಿಂಗ, ಭಾವ ೨) ಪ್ರಸಾದಲಿಂಗ ಮಹಾಲಿಂಗ, ಸುಜ್ಞಾನ ೩) ಪ್ರಸಾದಲಿಂಗ, ಜಂಗಮಲಿಂಗ, ಸುಮನ ೪) ಪ್ರಸಾದಲಿಂಗ, ಶಿವಲಿಂಗ, ಸುಬುದ್ಧಿ ೫) ಪ್ರಸಾದಲಿಂಗ, ಗುರುಲಿಂಗ, ಸುಚಿತ್ತ ೬) ಪ್ರಸಾದಲಿಂಗ, ಆಚಾರಲಿಂಗ, ನಿರಹಂಕಾರ.

* ಮೂರನೆಯ ಸಾಲಿನಲ್ಲಿ ಕ್ರಮವಾಗಿ : ೧) ಜಂಗಮಲಿಂಗ, ಮಹಾಲಿಂಗ, ಚಿತ್ ೨) ಜಂಗಮಲಿಂಗ, ಪ್ರಸಾದಲಿಂಗ, ಸಮಾನ ೩) ಜಂಗಮಲಿಂಗ, ವ್ಯಾನ ೪) ಜಂಗಮಲಿಂಗ, ಶಿವಲಿಂಗ, ಉದಾನ ೫) ಜಂಗಮಲಿಂಗ, ಗುರುಲಿಂಗ, ಅಪಾನ ೬) ಜಂಗಮಲಿಂಗ, ಆಚಾರಲಿಂಗ ಪ್ರಾಣ.

* ನಾಲ್ಕನೆಯ ಸಾಲಿನಲ್ಲಿ ಕ್ರಮವಾಗಿ : ೧) ಶಿವಲಿಂಗ, ಮಹಾಲಿಂಗ, ಹೃದಯ ೨) ಶಿವಲಿಂಗ, ಪ್ರಸಾದಲಿಂಗ, ಶ್ರೋತೃ ೩) ಶಿವಲಿಂಗ, ಜಂಗಮಲಿಂಗ ತ್ವಕ್ಕು ೪) ಶಿವಲಿಂಗ, ನೇತ್ರ ೫) ಶಿವಲಿಂಗ, ಗುರುಲಿಂಗ ಜಿಹ್ವೆ ೬)ಶಿವಲಿಂಗ, ಆಚಾರಲಿಂಗ, ಘ್ರಾಣ.

* ಐದನೆಯ ಸಾಲಿನಲ್ಲಿ ಕ್ರಮವಾಗಿ : ೧) ಗುರುಲಿಂಗ, ಮಹಾಲಿಂಗ ತೃಪ್ತಿ ೨) ಗುರುಲಿಂಗ, ಪ್ರಸಾದಲಿಂಗ ಶಬ್ದ ೩) ಗುರುಲಿಂಗ, ಜಂಗಮಲಿಂಗ ಸ್ಪರ್ಶ, ೪) ಗುರುಲಿಂಗ, ಶಿವಲಿಂಗ, ರೂಪು ೫) ಗುರುಲಿಂಗ ರಸ ೬) ಗುರುಲಿಂಗ, ಆಚಾರಲಿಂಗ, ಗಂಧ.

* ಆರನೆಯ ಸಾಲಿನಲ್ಲಿ ಕ್ರಮವಾಗಿ : ೧) ಆಚಾರಲಿಂಗ, ಮಹಾಲಿಂಗ, ಮನನ, ೨) ಆಚಾರಲಿಂಗ ಪ್ರಸಾದಲಿಂಗ, ವಾಕ್ಕು ೩) ಆಚಾರಲಿಂಗ, ಜಂಗಮಲಿಂಗ, ಪಾಣಿ ೪) ಆಚಾರಲಿಂಗ ಶಿವಲಿಂಗ ಪಾದ ೫) ಆಚಾರಲಿಂಗ, ಗುರುಲಿಂಗ, ಗುಹ್ಯ ೬) ಆಚಾರಲಿಂಗ ಪಾಯು

ಹೀಗೆ ರಚನೆಗೊಂಡಿರುವ ಮೂವತ್ತಾರು ಮನೆಗಳಲ್ಲಿ ಅಕ್ಷರನ್ಯಾಸ ಮಾಡುವುದರೊಂದಿಗೆ ಚಿತ್ರವನ್ನು ಪೂರ್ಣಗೊಳಿಸಲಾಗಿದೆ.

* **ಉದ್ಧರಣೆ ಸಾಹಿತ್ಯದಲ್ಲಿಯ ಚಿತ್ರ : ೧೬.೨ :**

ಕಾಗದದ ಮೇಲೆ ಈ "ಲಿಂಗಪಂಚೀಕರಣೋದ್ಧರಣಿ"ಯ ಚಿತ್ರವನ್ನು ಬರೆಯಲಾಗಿದ್ದು ಜಲವರ್ಣದಲ್ಲಿ ರಚಿಸಲಾಗಿದೆ. ಕೆಳಗಿನಿಂದ ಮೇಲಕ್ಕೆ ಆರು ಮನೆಗಳನ್ನು ಹಾಗೂ ಬಲದಿಂದ ಎಡಕ್ಕೆ ಆರು ಮನೆಗಳನ್ನು ನಿರ್ಮಿಸಲಾಗಿದ್ದು ಒಟ್ಟು ೬ x ೬ =೩೬ ಮನೆಗಳನ್ನು ರಚಿಸಲಾಗಿದೆ. ಈ ಪ್ರತಿಯೊಂದು ಮನೆಗಳಲ್ಲಿ ಮೇಲೆ ಹೇಳಿದಂತೆ ಅಕ್ಷರನ್ಯಾಸ ಮಾಡಲಾಗಿದೆ. ಈ ಚಿತ್ರದ ಹಿನ್ನೆಲೆಗೆ ಪಾರದರ್ಶಕವಾದ ಗುಲಾಬಿ ಮಿಶ್ರಿತ ಹಳದಿವರ್ಣವನ್ನು ಲೇಪಿಸಲಾಗಿದೆ. ಗುಲಾಬಿ ಮತ್ತು ಕಪ್ಪು ವರ್ಣದ ರೇಖೆಗಳನ್ನು ಎಳೆಯಲಾಗಿದ್ದು ನಾಲ್ಕು ಭುಜಗಳಲ್ಲಿರುವ ಅಲಂಕಾರಿಕ ನಕ್ಷೆಗಳನ್ನು ಮಾಡಿನ ಆಕಾರದಲ್ಲಿ ಚಿತ್ರಿಸಲಾಗಿದೆ. ಈ ಚಿತ್ರದ ನಾಲ್ಕು ಮೂಲೆಗಳಲ್ಲಿ ಹೂವಿನ ಚಿತ್ರವನ್ನು ಮಾಡಲಾಗಿದೆ.

ಇವುಗಳಿಗೆಲ್ಲ ಅಂದವಾದ ಚೌಕಟ್ಟುಗಳನ್ನು ರಚಿಸಿದ್ದು ಮನೆಗಳು ಮತ್ತು ಮಾಡುಗಳು ಎದ್ದು ಕಾಣುವಂತೆ ಉಳಿದ ಹೊರಭಾಗಕ್ಕೆ ದಟ್ಟವಾದ ಗುಲಾಬಿವರ್ಣವನ್ನು ಬಳಸಲಾಗಿದೆ.

*** ಕ.ವಿ.ವಿ. ಹಂಪೆಯಲ್ಲಿ ದೊರೆತ ಕಾಗದದ ಪ್ರತಿ : ಚಿತ್ರ ೧೭.೩ :**

ಈ "ಲಿಂಗ ಪಂಚೀಕರಣೋದ್ಧರಣಿ"ಯ ಚಿತ್ರವನ್ನು ಕಾಗದದ ಮೇಲೆ ಬರೆಯಲಾಗಿದ್ದು ಜಲವರ್ಣದಲ್ಲಿ ರಚಿಸಲಾಗಿದೆ. ಒಟ್ಟು ಮೂವತ್ತಾರು ಮನೆಗಳನ್ನು ರಚಿಸಿ ಪ್ರತಿಯೊಂದು ಮನೆಯ ಮೂಲೆಗಳಲ್ಲಿ ಹೂವುಗಳನ್ನು ಅಲಂಕಾರಿಕವಾಗಿ ಚಿತ್ರಿಸಲಾಗಿದೆ. ಈ ಮೂವತ್ತಾರು ಮನೆಗಳಲ್ಲಿ ಮೇಲೆ ಹೇಳಿದಂತೆ ಆಯಾ ಮನೆಗಳಲ್ಲಿ ಅಕ್ಷರ ನ್ಯಾಸ ಮಾಡಲಾಗಿದೆ. ಈ ಮನೆಗಳೆಲ್ಲದರ ಚೌರಸ ಆಕಾರದ ಎಡಬಲಗಳಲ್ಲಿ ಹಸಿರುಎಲೆಗಳನ್ನು ಚಿತ್ರಿಸಲಾಗಿದೆ. ಹಿನ್ನೆಲೆಯಲ್ಲಿ ತಿಳಿಗುಲಾಬಿವರ್ಣವನ್ನು ತುಂಬಿದ್ದು ಮೇಲೆ ಡ್ರಾಯಿಂಗ್ ಮಾಡಲಾಗಿದೆ. ಈ ಮೂವತ್ತಾರು ಮನೆಗಳ ಹಿನ್ನೆಲೆಯ ಬಿಳಿಯ ವರ್ಣವನ್ನು ಉಳಿಸಿಕೊಂಡು ಕಪ್ಪುವರ್ಣದಲ್ಲಿ ಅಕ್ಷರಗಳನ್ನು ಬರೆಯಲಾಗಿದೆ. ಸುತ್ತಲೂ ಷಡ್ಭುಜಾಕೃತಿಯ ಪಟ್ಟಿಯನ್ನು ರಚಿಸಲಾಗಿದೆ.

*** ಕ.ವಿ.ವಿ. ಹಂಪೆಯಲ್ಲಿ ದೊರೆತ ತಾಳೆಓಲೆಗರಿ ಚಿತ್ರ : ೧೭.೪ :**

ತಾಳೆ ಓಲೆಗರಿಯೊಂದರ ಮೇಲೆ "ಲಿಂಗ ಪಂಚೀಕರಣೋದ್ಧರಣಿ"ಯ ಚಿತ್ರವನ್ನು ಕಪ್ಪು ವರ್ಣದ ರೇಖೆಗಳಲ್ಲಿ ಚಿತ್ರಿಸಲಾಗಿದೆ. ಒಟ್ಟು ಮೂವತ್ತಾರು ಮನೆಗಳನ್ನು ರಚಿಸಿಕೊಂಡು ಮೇಲೆ ತಿಳಿಸಿದಂತೆ ಆಯಾ ಮನೆಗಳಲ್ಲಿ ಅಕ್ಷರನ್ಯಾಸ ಮಾಡಲಾಗಿದೆ. ಈ ಚಿತ್ರದ ಬಲಬದಿಯಲ್ಲಿ ಅಲಂಕಾರಿಕ ಅಂಚಿನ ಮಧ್ಯದಲ್ಲಿ ವೃಕ್ಷವೊಂದನ್ನು ರಚಿಸಿ, ಅದರ ಕೆಳಗೆ ವ್ಯಕ್ತಿಯೋರ್ವನು ನಿಂತಿರುವನು. ಈ ವ್ಯಕ್ತಿಯು ತನ್ನ ಕೈಯೊಂದನ್ನು ಮೇಲ್ಗಡೆ ಮಾಡಿದ್ದು ಏನನ್ನೋ ಹೇಳುತ್ತಿರುವಂತೆ ಚಿತ್ರಿಸಲಾಗಿದೆ.

*** ಗು. ವಿ.ವಿ. ಗುಲಬುರ್ಗಾದಲ್ಲಿಯ ಚಿತ್ರ : ೧೭.೫ :**

ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಿದ ಈ "ಲಿಂಗ ಪಂಚೀಕರಣೋದ್ಧರಣಿ" ಚಿತ್ರವು ತಿಳಿಗುಲಾಬಿ ವರ್ಣದ ಹಿನ್ನೆಲೆಯನ್ನು ಹೊಂದಿದ್ದು, ಕಪ್ಪು ವರ್ಣದಿಂದ ರೇಖಾಪ್ರಧಾನವಾಗಿ ಚಿತ್ರಿಸಲಾಗಿದೆ. ಆಯತಾಕಾರದಲ್ಲಿ ವಿನ್ಯಾಸಗೊಳಿಸಲಾಗಿದ್ದು ಒಟ್ಟು ಮೂವತ್ತಾರು ಮನೆಗಳನ್ನು ಹೊಂದಿವೆ. ಈ ಮೇಲೆ ತಿಳಿಸಿದಂತೆ ಆಯಾ ಮನೆಗಳಲ್ಲಿ ಅಕ್ಷರವಿನ್ಯಾಸ ಮಾಡಲಾಗಿದೆ. ಈ ಚಿತ್ರದ ಸುತ್ತಲೂ ಹಸಿರುಬಣ್ಣದ ಎಲೆ, ಕೆಂಪುವರ್ಣದ ಹೂವುಗಳನ್ನು ಹೊಂದಿದ ಅಂಚುಭಾಗ ಸುಂದರವಾಗಿ ಕಂಡುಬರುತ್ತದೆ.

*** ಧರ್ಮಸ್ಥಳದಲ್ಲಿ ದೊರೆತ ಚಿತ್ರ : ೧೭.೬ :**

ಕಾಗದದ ಮೇಲೆ ರಚಿಸಿದ ಈ "ಲಿಂಗ ಪಂಚೀರಣೋದ್ಧರಣಿ"ಯ ಚಿತ್ರವನ್ನು ಜಲವರ್ಣದಲ್ಲಿ ಚಿತ್ರಿಸಲಾಗಿದೆ. ಒಟ್ಟು ಮೂವತ್ತಾರು ಮನೆಗಳನ್ನು ರಚಿಸಲಾಗಿದ್ದು ಈ ಮನೆಗಳ ಹೊರರೇಖೆಗಳಿಂದ, ಕಾಗದದ ಬಿಳಿಯ ವರ್ಣವನ್ನು ಹಾಗೇ ಉಳಿಸಿಕೊಳ್ಳಲಾಗಿದೆ. ಈ ಚೌರಸದ ಮಧ್ಯದ ಭಾಗದಲ್ಲಿ ಸೇವಂತಿಗೆಯ ಹೂವನ್ನು,

ಬಿಳಿಯ ವರ್ಣವನ್ನು ಉಳಿಸಿಕೊಳ್ಳಲಾಗಿದೆ. ಈ ಹೂವಿನ ಮೇಲಿನ ಭಾಗದಿಂದ ಎಡಬಲಗಳಲ್ಲಿ ಕೆಳಮುಖವಾಗಿ ಸೇವಂತಿ ಹೂವುಗಳ ಬಳ್ಳಿಗಳನ್ನು ಮಾಡಲಾಗಿದೆ. ಈ ಮಾಡಿನ ಒಳಭಾಗದಲ್ಲಿ ಕೆಂಪುವರ್ಣವನ್ನು ಹಿನ್ನೆಲೆಯಾಗಿ ಹಾಕಲಾಗಿದೆ. ಇದರಲ್ಲಿ ರಚನೆಗೊಂಡ ಮೂವತ್ತಾರು ಮನೆಗಳ ಮಧ್ಯದಲ್ಲಿ ಕಪ್ಪು ಅಕ್ಷರಗಳನ್ನು ಈ ಮೇಲೆ ತಿಳಿಸಿದಂತೆ ಆಯಾ ಮನೆಗಳಲ್ಲಿ ಬರೆಯಲಾಗಿದೆ. ಈ ಮಾಡಿನ ಮುನ್ನೆಲೆಯಾಗಿ ಮೇಲ್ಭಾಗದಲ್ಲಿ ಅಲಂಕಾರಿಕ ಕಮಾನಿನ ಚಿತ್ರವನ್ನು ಹಸಿರುವರ್ಣದಲ್ಲಿ ರಚಿಸಿದ್ದು ಕೆಂಪುವರ್ಣದ ಹೂವುಗಳನ್ನು ಚಿತ್ರಿಸಲಾಗಿದೆ. ಈ ಚಿತ್ರವು ಸುಂದರವಾಗಿ ಮೂಡಿಬಂದಿದೆ.

*** ಬೆಂ.ವಿ.ವಿ. ಬೆಂಗಳೂರಿನಲ್ಲಿ ದೊರೆತ ಚಿತ್ರ : ೧೭.೭ :**

ಕಾಗದದ ಮೇಲೆ ವರ್ಣಪ್ರಧಾನವಾಗಿ ಈ "ಲಿಂಗಪಂಚೀಕರಣೋದ್ಧರಣೆ" ಚಿತ್ರವನ್ನು ಚಿತ್ರಿಸಲಾಗಿದೆ. ಒಟ್ಟು ಮೂವತ್ತಾರು ಮನೆಗಳನ್ನು ಆಯತಾಕಾರದಲ್ಲಿ ರಚಿಸಲಾಗಿದೆ. ಈ ಮನೆಗಳನ್ನು ಕ್ರಮವಾಗಿ ಕೆಂಪು ಮತ್ತು ಹಳದಿ ವರ್ಣದಿಂದ ತುಂಬಲಾಗಿದ್ದು ಈ ಮನೆಗಳ ಅಂತಿಮ ರೇಖೆಗಳನ್ನು ಹಳದಿ ಕಪ್ಪು ವರ್ಣದ ರೇಖೆಗಳನ್ನು ಬರೆಯಲಾಗಿದೆ. ಕಪ್ಪುವರ್ಣದ ಅಕ್ಷರಗಳನ್ನು ಆಯಾ ಮನೆಗಳಲ್ಲಿ ಮೇಲೆ ತಿಳಿಸಿದಂತೆ ವಿನ್ಯಾಸಗೊಳಿಸಲಾಗಿದೆ.

*** ಕ.ವಿ.ವಿ. ಧಾರವಾಡದ ಚಿತ್ರ : ೧೭.೮ :**

ಈ "ಲಿಂಗ ಪಂಚೀಕರಣೋದ್ಧರಣೆ"ಯ ಚಿತ್ರವನ್ನು ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ಒಟ್ಟು ಮೂವತ್ತಾರು ಮನೆಗಳನ್ನು ಆಯತಾಕಾರದಲ್ಲಿ ರಚಿಸಿಕೊಂಡು ಅವುಗಳಿಗೆ ಹಳದಿ ವರ್ಣದ ಲೇಪನವನ್ನು ಮಾಡಲಾಗಿದೆ. ಕೆಂಪುವರ್ಣದ ರೇಖೆಗಳಿಂದ ಮನೆಗಳನ್ನು ಗುರುತಿಸಿಕೊಳ್ಳಲಾಗಿದೆ. ಮನೆಯ ಮಧ್ಯದಲ್ಲಿ ಕಪ್ಪುವರ್ಣದ ಅಕ್ಷರಗಳನ್ನು ಮೇಲೆ ತಿಳಿಸಿದಂತೆ ವಿನ್ಯಾಸಗೊಳಿಸಲಾಗಿದೆ. ಈ ಆಯತಾಕಾರದ ಚಿತ್ರದ ಸುತ್ತಲೂ ಕೆಂಪು ವರ್ಣದ ಹೂವುಗಳಿರುವ ಹಿನ್ನೆಲೆಯಲ್ಲಿ ಪಟ್ಟಿಗೆ ಕಪ್ಪುವರ್ಣವನ್ನು ತುಂಬಿ ಅಲಂಕಾರಿಕವಾಗಿ ಚಿತ್ರಿಸಲಾಗಿದೆ.

## ೧೮. ಷಡಕ್ಷರೋದ್ಧರಣೆ

**ವಾಚ್ಯ, ವಸ್ತು, ವಿಷಯ :**

ಇಂತಪ್ಪ ಶಿವಯೋಗಿಯ ಮನನ ಪ್ರಾಣ ರೂಪವಾದ ಮಂತ್ರ ಚೈತನ್ಯ ಜ್ಞಾನರೂಢಮಪ್ಪ ಷಡಕ್ಷರೋದ್ಧರಣೆಯ ಸಂಬಂಧವೆಂತೆಂದೊಡೆ ಪೂರ್ವಾಪರದಕ್ಷಿಣೋತ್ತರವಾಗಿ ಹದಿನಾಲ್ಕು ರೇಖೆಗಳಂ ಬರೆದು ಎಂಬತ್ತೈದು ಭವನವನುಳ್ಳ ಯಂತ್ರವೇ ಚಿದಂಗ. ಮಧ್ಯಭವನಸ್ಥಾನದ ಅವಾಗ್ಜ ಪ್ರಣವವೇ ಚಿತ್ಪ್ರಾಣಲಿಂಗ. ಆ ಲಿಂಗವ ಸ್ಮರಿಸುವ ಎಂಬತ್ನಾಲ್ಕು ಭವನಸ್ಥಾನವಾದ ಮಂತ್ರಾಕ್ಷರಂಗಳೆ ಲಿಂಗ ಜಂಗಮ ಭಾವನೆಯಿಂ ಭಜಿಸುವಲ್ಲಿ ಉಪಕರಣಸ್ವರೂಪವಾದ ವಿವರವೆಂತೆಂದೊಡೆ : ಎಂದು ಆರಂಭವಾಗಿ ಇನ್ನು "ಮಧ್ಯ"ಹ"ಕಾರ"ಕ್ಕೆ ಸಮ್ಮುಖವಾದ "ಓಂ"ಕಾರ ಸಹ "ಓಂ ನಮಃ ಶಿವಾಯ" ಎಂದು ಬಿಡದೇ ಉಚ್ಚರಿಸಲು ಪೂರ್ವದಿಂದ ದಕ್ಷಿಣಾಂತರವಾಗಿ

ಈ ೨೧ ಕ್ಕೆ ೩೬ ಪ್ರಣವಂಗಳವು, ಇವು "೩೬ ಅಂಗಸ್ವರೂಪ" ವೆಂದರಿವುದು, ಪಶ್ಚಿಮದಿಂದ ಉತ್ತರಾಂತ್ಯವಾಗಿ ೨೧ಕ್ಕೆ ೩೬ ಪ್ರಣವಂಗಳು ಇವು "೩೬ ಭಕ್ತಿಸ್ವರೂಪ"ವೆಂದರಿವುದು, ಉತ್ತರದಿಂದ ಪೂರ್ವಾಂತ್ಯವಾಗಿ ೨೧ಕ್ಕೆ ೩೬ ಪ್ರಣವಂಗಳಹವು; ಇವು "೩೬ ಪ್ರಸಾದ ಸ್ವರೂಪ" ವೆಂದರಿವುದು, ಬಳಿಕವರಲ್ಲಿ ಉಳಿದ ಸಕೀಲಂಗಳಡಗಿರ್ಪವು ಮತ್ತಂ ಇವರಲ್ಲಿ ಸಂಬಂಧವಾದುದೂ ತಿಳಿಯುವುದು ಷಡಕ್ಷರೊದ್ಧರಣಿ ಸಂಬಂಧ ಸಮಾಪ್ತ ಮಂಗಳ ಶ್ರೀ ಶ್ರೀ ಎಂದು ಮುಕ್ತಾಯವಾಗುವುದು.[೫೫]

ಶಿವಯೋಗಿಯಾದವನು ನಿತ್ಯ ಜಪಿಸುವ ಚೈತನ್ಯಯುತ ಜ್ಞಾನ ಮಯವಾದ ಷಡಕ್ಷರ ಮಂತ್ರದ ಸಂಬಂಧವೆಂದರೆ ಪೂರ್ವ ಪಶ್ಚಿಮ ದಕ್ಷಿಣೋತ್ತರವಾಗಿ ೧೪ ಗೆರೆಗಳಿದ್ದು ಒಟ್ಟು ೮೫ ಚಿಕ್ಕ ಚಿಕ್ಕ ಮನೆಗಳು ಚೌಕಾಕಾರದಲ್ಲಿರುವವು. ಅದು ಭೂಮಿಯನ್ನೊಳಗೊಂಡ ಯಂತ್ರ ಇದುವೇ "ಚಿದಂಗ" ಭೂ ಮಧ್ಯದಲ್ಲಿ ಸೃಷ್ಟಿಸ್ವರೂಪವಾದ ಪ್ರಣವವು ಚಿತ್ ಪ್ರಾಣಲಿಂಗವಾಗಿರುವುದು. ಈ ಲಿಂಗವನ್ನು ನೆನೆಯುವ ಆರಾಧಿಸುವ ೧೪ ಭವನಸ್ತವಾದ ಮಂತ್ರಾಕ್ಷರಗಳೇ ಲಿಂಗ ಜಂಗಮ ಭಾವಗಳಿಂದ ಭಕ್ತಿಯಿಂದ ಪಠಿಸುವಾಗ ಉಪಕರಣಸ್ವರೂಪವಾದ ವಿವರ ಹೀಗಿರುವುದು : ಅದು ಅಷ್ಟ ವಿಧ ಭಕ್ತಿ, ಅಷ್ಟ ವಿಧ ಅರ್ಚನೆ, ದ್ವಾದಶ ವಿಧಾರ್ಚನೆ, ಷೋಡಶೋಪಚಾರಗಳು, ಚತುರ್ವಿಂಶತಿ ಉಪಚಾರ (ಲಿಂಗ ಸಂಬಂಧಿಸಿದ ಭಕ್ತಿಗಳು), ಷೋಡಶ ಜಂಗಮಭಕ್ತಿಗಳು. ಈ ಕುರಿತು ಶಿವಯೋಗಿ ಸಾಧನ ಮಾಡುವಲ್ಲಿ ಅಳವಡಿಸಿಕೊಂಡು ಆಚರಿಸುವುದನ್ನು ಈ ಉದ್ಧರಣಿಯಲ್ಲಿ ತಿಳಿಸಿರುವುದನ್ನು ತಿಳಿಯಬಹುದು. ಅವುಗಳೆಂದರೆ ಶಿವನ ಆರಾಧನೆಯಲ್ಲಿ ಲೀನವಾಗಿ, ಶಿವನಲ್ಲಿ ಪ್ರೀತಿಯಿಂದ ಇವುಗಳನ್ನು ಅಳವಡಿಸಿಕೊಂಡು ಆರಾಧಿಸಿದಲ್ಲಿ ಶಿವಭಕ್ತಿಯಲ್ಲಿ ಮುಕ್ತಿಯಾಗುವುದು. ಶಿವಯೋಗಿ ನಿತ್ಯಕ್ರಿಯೆಯಾಗಿಸಿಕೊಂಡು ಸಾಧಕನಾಗಬೇಕು. ಇದರಿಂದ ಶಿವಶಕ್ತ ಸ್ವರೂಪವಾದ ಮೂರ್ತಿಲಿಂಗ, ಜಂಗಮ, ಭಕ್ತಿ, ಪ್ರಸಾದದ ಸಂಬಂಧ ತಿಳಿಯುತ್ತದೆ. ಷಡಕ್ಷರದಿಂದ ಶಿವಯೋಗಿಯಾಗುವನು ಎಂದು ಈ ಉದ್ಧರಣಿಯು ತಿಳಿಸುವುದು.

* **ಶಿವಾನುಭವಶಾಸ್ತ್ರದಲ್ಲಿ ದೊರೆತ ಚಿತ್ರ :೧೮.೧ :**

ಈ "ಷಡಕ್ಷರೋದ್ಧರಣಿ"ಯ ಚಿತ್ರವನ್ನು ಕಾಗದದ ಮೇಲೆ ರೇಖಾ ಪ್ರಧಾನವಾಗಿ ಚಿತ್ರಿಸಲಾಗಿದೆ. ಕಾಗದದ ಮಧ್ಯದಲ್ಲಿ "ಹ" ಕಾರಕ್ಕೆ ಚಿಕ್ಕ ಮನೆಯನ್ನು ಆಯತಾಕಾರದಲ್ಲಿ ಮಾಡಿಕೊಂಡು, ಅದರ ನಾಲ್ಕೂ ದಿಕ್ಕುಗಳಿಗೆ ಓಂ.ನ.ಮ.ಶಿ.ವಾಯ. ಅಕ್ಷರಗಳಿಗೂ ಒಂದೊಂದರಂತೆ ನಾಲ್ಕೂ ದಿಕ್ಕುಗಳಲ್ಲಿ ಮನೆಮಾಡಿಕೊಂಡು ಒಟ್ಟಿನಲ್ಲಿ "ಹ"ಕಾರದ ಮನೆಯಿಂದ ನಾಲ್ಕೂ ದಿಕ್ಕುಗಳಿಗೆ ಆರಾರು ಮನೆಗಳು ರಚನೆಗೊಂಡಿವೆ "ಯ"ಕಾರದ ಮನೆಯಿಂದ ಕೆಳಗಡೆಯ "ವಾ"ಕಾರದ ಮನೆಗೆ ಎಡಬಲಗಳಲ್ಲಿ ಮನೆ ರಚಿಸಿಕೊಳ್ಳುವುದು. ಅವುಗಳಲ್ಲಿ"ಯ" ಕಾರ ಬರೆಯುವದು. ಅದರ ಕೆಳಗಡೆ "ಶಿ" ಕಾರದ ಮನೆಯ ಎಡಬಲಗಳಲ್ಲಿ ಎರಡೆರಡು ಮನೆಗಳನ್ನು ಬರೆದು ಅಲ್ಲಿ "ವಾ", "ಯ"

೫೫. ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು : ಶಿವಾನುಭವಶಾಸ್ತ್ರ : ಪುಟ ೫೫

ಕಾರಗಳನ್ನು ಬರೆಯುವದು. ಅದರ ಕೆಳಗಡೆ "ಮ" ಕಾರದ ಮನೆಯ ಎಡಬಲಗಳಲ್ಲಿ ಮೂರು ಮೂರು ಮನೆಗಳನ್ನು ಮಾಡಿಕೊಂಡು ಶಿ, ವಾ, ಯ, ಎಂಬ ಅಕ್ಷರಗಳನ್ನು ಬರೆಯುವದು. ಅವುಗಳ ಕೆಳಗಡೆ "ನ" ಕಾರದ ಮನೆಯ ಎಡಬಲಗಳಲ್ಲಿ ನಾಲ್ಕು ನಾಲ್ಕು ಮನೆ ಮಾಡಿಕೊಂಡು ಮ, ಶಿ, ವಾ, ಯ. ಅಕ್ಷರಗಳನ್ನು ಬರೆಯುವದು. "ಓಂ" ಕಾರದ ಮನೆಯ ಎಡಬಲಗಳಲ್ಲಿ ಐದೈದು ಮನೆಗಳನ್ನು ಮಾಡಿ ಅವುಗಳಲ್ಲಿ ನ, ಮಃ, ಶಿ, ವಾ, ಯ, ಎಂಬೈದು ಅಕ್ಷರಗಳನ್ನು ಬರೆಯುವದು. "ಹ"ಕಾರದ ಮನೆಯಿಂದ ಆರಾರು ಮನೆಗಳನ್ನು ರಚನೆ ಮಾಡಿಕೊಂಡು ಅವುಗಳಲ್ಲಿ ಓಂ, ನ, ಮಃ, ಶಿ, ವಾ, ಯ ಎಂಬಾರು ಅಕ್ಷರಗಳನ್ನು ನ್ಯಾಸ ಮಾಡಲಾಗಿದ್ದು ಷಡಕ್ಷರೋದ್ಧರಣಿಯು ಸಿದ್ಧವಾಗುತ್ತದೆ.

*** ಉದ್ಧರಣಿ ಸಾಹಿತ್ಯದಲ್ಲಿ ದೊರೆತ ಚಿತ್ರ : ೧೮.೨ :**

ಈ "ಷಡಕ್ಷರೋದ್ಧರಣಿ"ಯ ಚಿತ್ರವನ್ನು ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ಕಾಗದದ ಮಧ್ಯದಲ್ಲಿ "ಹ"ಕಾರದ ಮನೆಯನ್ನು ರಚಿಸಿಕೊಂಡು, ಅದಕ್ಕೆ ಹೊಂದಿಕೊಂಡು ನಾಲ್ಕೂ ದಿಕ್ಕುಗಳಲ್ಲಿ ಹಾಗೂ ನಾಲ್ಕು ಕೋನಗಳಲ್ಲಿ ಮನೆಯನ್ನು ರಚಿಸಿಕೊಂಡು, ಆಯಾ ಮನೆಗಳಲ್ಲಿ ಅಕ್ಷರನ್ಯಾಸ ಮಾಡಲಾಗಿದೆ. ಚಿತ್ರದ ಹಿನ್ನೆಲೆಗೆ ತಿಳಿಗುಲಾಬಿ ವರ್ಣವನ್ನು ಪಾರದರ್ಶಕವಾಗಿ ತುಂಬಿದ್ದು ಚಿಕ್ಕ ಮನೆಗಳಿಗೆ ಗುಲಾಬಿ ವರ್ಣ ಮತ್ತು ಕಪ್ಪು ವರ್ಣದಿಂದ ರೇಖೆಗಳನ್ನು ಹಾಕಿ ಗುರುತಿಸಲಾಗಿದೆ. ಈ ಷಡಕ್ಷರೋದ್ಧರಣಿ ಚಿತ್ರದ ಸುತ್ತಲೂ ಕಪ್ಪುವರ್ಣದ ಎಲೆಗಳನ್ನು, ಕೆಂಪು ವರ್ಣದ ಹೂವುಗಳನ್ನು ರಚಿಸಲಾಗಿದೆ. ನಾಲ್ಕು ಮೂಲೆಗಳಿಗೆ ದಟ್ಟ ಗುಲಾಬಿವರ್ಣವನ್ನು ತುಂಬಲಾಗಿದೆ.

*** ಕ.ವಿ.ವಿ. ಹಂಪಿಯಲ್ಲಿ ದೊರೆತ ಚಿತ್ರ : ೧೮.೩ :**

ಕಾಗದದ ಮೇಲೆ ಮಿಶ್ರಮಾಧ್ಯಮದಲ್ಲಿ ರಚಿಸಲಾಗಿದೆ. ಮೇಲೆ ತಿಳಿಸಿದಂತೆ ಚಿತ್ರವನ್ನು "ಹ"ಕಾರ ಮಧ್ಯದಲ್ಲಿಟ್ಟು ರೇಖಾ ಪ್ರಧಾನವಾಗಿ ಚಿತ್ರಿಸಿದ್ದು, ಹಿನ್ನೆಲೆಯಲ್ಲಿ ಹಾಳೆಯ ಬಿಳಿಯ ವರ್ಣವಿದೆ. ಅದರಲ್ಲಿ ಅಕ್ಷರ ನ್ಯಾಸ ಮಾಡಲಾಗಿದೆ. ಈ ಷಡಕ್ಷರೋದ್ಧರಣಿಯ ಮೇಲೆ ಮತ್ತು ಕೆಳಗೆ ಗುಲಾಬಿ ತಿಳಿವರ್ಣವನ್ನು ತುಂಬಿ ಮೇಲೆ ಚೌಕಳಿ ಗೆರೆಗಳನ್ನು ಎಳೆದಿದ್ದು ಈ ಚಿತ್ರದ ಎಡಬಲಗಳಲ್ಲಿ ಡ್ರಾಯಿಂಗ್ ಕಪ್ಪುವರ್ಣದಲ್ಲಿ ಮಾಡಲಾಗಿದೆ. ಅದರಲ್ಲಿ ಬಿಳಿಯ ಎಲೆಗಳನ್ನು ಮಾಡಲಾಗಿದೆ.

*** ಕ.ವಿ.ವಿ. ಹಂಪಿಯಲ್ಲಿಯ ತಾಳೆ ಓಲೆಗರಿ ಚಿತ್ರ : ೧೮.೪ :**

ತಾಳೆ ಓಲೆಗರಿಗಳ ಮೇಲೆ ಕಪ್ಪು ವರ್ಣದಿಂದ ಚಿತ್ರಿಸಲಾಗಿದೆ. ಈ "ಷಡಕ್ಷರೋದ್ಧರಣಿ" ಚಿತ್ರವನ್ನು ಮೇಲೆ ಹೇಳಿದಂತೆ ರಚಿಸಲಾಗಿದೆ ಮತ್ತು ಆಯಾ ಮನೆಗಳಲ್ಲಿ ಅಕ್ಷರವಿನ್ಯಾಸ ಮಾಡಿದ್ದು ಈ ಚಿತ್ರದ ಮನೆಗಳ ಸುತ್ತಲೂ ಒಂದು ವೃತ್ತ ಹಾಕಿ ಅದರಲ್ಲಿ ಕಪ್ಪು ವರ್ಣ ತುಂಬಲಾಗಿದೆ. ಇದರ ಸುತ್ತಲೂ ಅಲಂಕಾರಿಕ ನಕ್ಷೆಯನ್ನು ಹಾಕಿ ಸುಂದರಗೊಳಿಸಲಾಗಿದೆ.

*** ಗು. ವಿ.ವಿ. ಗುಲಬರ್ಗಾದಲ್ಲಿಯ ಚಿತ್ರ : ೧೮.೫ :**

ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ತಿಳಿಗುಲಾಬಿವರ್ಣವನ್ನು ಹಿನ್ನೆಲೆಯಲ್ಲಿ ಹಾಕಿದ್ದು ಹಳದಿವರ್ಣದಲ್ಲಿ ಷಡಕ್ಷರೋದ್ಧರಣಿ ಚಿತ್ರವನ್ನು ರಚಿಸಲಾಗಿದೆ. ಕಪ್ಪುವರ್ಣದ ರೇಖೆಗಳಿಂದ ಚಿಕ್ಕ ಮನೆಗಳನ್ನು ರಚಿಸಿಕೊಂಡಿದ್ದು ಮೇಲಿನಂತೆ ಅಕ್ಷರವಿನ್ಯಾಸ ಮಾಡಲಾಗಿದೆ. ಈ ಚಿತ್ರದ ಹೊರ ಮೂಲೆಗಳಲ್ಲಿ ಕಂದು ಗೆಂಪುವರ್ಣದ ಎಲೆಗಳನ್ನು ಮಾಡಲಾಗಿದೆ.

*** ಧರ್ಮಸ್ಥಳದಲ್ಲಿ ದೊರೆತ ಚಿತ್ರ : ೧೮.೬ :**

ಕಾಗದದ ಮೇಲೆ ಜಲವರ್ಣದಿಂದ ಅಲಂಕಾರಿಕವಾಗಿ ಚಿತ್ರಿಸಲಾಗಿದೆ. ಆಕರ್ಷಕ ವರ್ಣಗಳೊಂದಿಗೆ ರಚನೆಗೊಂಡಿರುವ ರಥಚಿತ್ರದ ಮಧ್ಯದಲ್ಲಿ ಈ "ಷಡಕ್ಷರೋದ್ಧರಣಿ ಚಿತ್ರ"ವನ್ನು ಬಿಳಿಯ ಹಿನ್ನೆಲೆಯಲ್ಲಿ ಕೆಂಪುವರ್ಣದಿಂದ ಚಿಕ್ಕಮನೆಗಳನ್ನು ಸಿದ್ಧಪಡಿಸಲಾಗಿದೆ. ಈ ಮನೆಗಳ ಮೇಲೆ ಕಪ್ಪುವರ್ಣದಿಂದ ಅಕ್ಷರ ವಿನ್ಯಾಸವನ್ನು ಮಾಡಿ ಅದೇ ವರ್ಣದಿಂದ ಹೊರಗಡೆಯ ಮೂಲೆಗಳಿಗೆ ದಳಗಳನ್ನು ಧ್ವಜಗಳಂತೆ ಚಿತ್ರಿಸಲಾಗಿದೆ. ಚಿತ್ರಕ್ಕೆ ಹಳದಿ ವರ್ಣದ ವೃತ್ತವನ್ನು ರಚಿಸಲಾಗಿದೆ. ಈ ಚಿತ್ರದ ಎಡಬಲಗಳಲ್ಲಿ ರಥದ ಅಲಂಕಾರಿಕ ಕಂಬಗಳಿವೆ. ಮೇಲ್ಗಡೆ ರಥದ ಚಿತ್ರವು ಸುಂದರವಾಗಿ ಮೂಡಿಬಂದಿದೆ. ಈ ಉದ್ಧರಣಿ ಚಿತ್ರದ ಹಿನ್ನೆಲೆಯಲ್ಲಿ ಹಸಿರುವರ್ಣವನ್ನು ತುಂಬಲಾಗಿದೆ.

*** ಬೆಂ. ವಿ.ವಿ. ಬೆಂಗಳೂರಿನಲ್ಲಿಯ ಚಿತ್ರ : ೧೮.೭ :**

ಈ "ಷಡಕ್ಷರೋದ್ಧರಣಿ"ಯ ಚಿತ್ರವು ಹಳದಿವರ್ಣದ ಹಿನ್ನೆಲೆಯಲ್ಲಿದ್ದು ಕೆಂಪು ವರ್ಣದ ರೇಖೆಗಳನ್ನು ಹಾಕಿ ಮೇಲೆ ಹೇಳಿದಂತೆ ಚಿತ್ರಿಸಲಾಗಿದೆ. ಅದರಲ್ಲಿ ಮೇಲಿನಂತೆ ಅಕ್ಷರವಿನ್ಯಾಸವನ್ನು ಮಾಡಿದ್ದು ಚಿತ್ರದ ಹೊರಗಡೆಯ ಮೂಲೆಗೆ ಗುಲಾಬಿವರ್ಣದ ಧ್ವಜಗಳನ್ನು ಮಾಡಲಾಗಿದೆ. ಹಿನ್ನೆಲೆಗೆ ಹಸಿರುವರ್ಣವನ್ನು ತುಂಬಲಾಗಿದ್ದು ಮೂಲೆಗಳಲ್ಲಿ ಗುಲಾಬಿವರ್ಣದ ಹೂವುಗಳನ್ನು ಮಾಡಲಾಗಿದೆ. ಹಳದಿ ವರ್ಣದ ಅಂಚನ್ನು ಮಾಡಲಾಗಿದ್ದು ಮೇಲಿನ ಅಂಚನ್ನು ಕೆಂಪುವರ್ಣದಿಂದ ತುಂಬಲಾಗಿದೆ.

*** ಕ.ವಿ.ವಿ. ಧಾರವಾಡದ ಚಿತ್ರ : ೧೮.೮ :**

ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದ್ದು ಬಿಳಿಯ ಕಾಗದದ ಮೇಲೆ ಕೆಂಪುವರ್ಣದ ರೇಖೆಗಳನ್ನು ಬರೆದು ಚಿಕ್ಕ ಮನೆಗಳನ್ನು ಮೇಲೆ ಹೇಳಿದಂತೆ ಚಿತ್ರಿಸಲಾಗಿದೆ. ಈ "ಷಡಕ್ಷರೋದ್ಧರಣಿ"ಯ ಹೊರ ಮೂಲೆಗಳಲ್ಲಿ ಧ್ವಜಗಳಂತೆ ಚಿತ್ರಿಸಲಾಗಿದೆ. ಈ ಚಿತ್ರದ ಸುತ್ತಲೂ ವೃತ್ತವನ್ನು ರಚಿಸಿ ಅದರಲ್ಲಿ ಕಪ್ಪು ನೀಲಿವರ್ಣವನ್ನು ತುಂಬಿದ್ದು ಈ ವೃತ್ತದ ಹೊರಗಡೆಯ ಚೌರಸಕ್ಕೆ ಹಸಿರು ಮಿಶ್ರಿತ ಹಳದಿ ವರ್ಣವನ್ನು ತುಂಬಲಾಗಿದೆ. ನಾಲ್ಕೂ ಮೂಲೆಗಳಲ್ಲಿ ಅಲಂಕಾರಿಕ ಹೂವುಗಳನ್ನು ರಚಿಸಲಾಗಿದೆ. ಮೇಲೆ ಹೇಳಿದಂತೆ ಎಲ್ಲ ಮನೆಗಳಿಗೂ ಆಯಾ ಅಕ್ಷರಗಳನ್ನು ಬರೆಯಲಾಗಿದೆ.

## ೧೯. ಬಸವಾಕ್ಷರೋದ್ಧರಣಿ

**ವಾಚ್ಯ ವಸ್ತು ವಿಷಯ :**

ಷಡಕ್ಷರಿ ಸಂಬಂಧವರಿದ ಶಿವಯೋಗಿಯ ಪರತತ್ವಜ್ಞಾನ ಸಾಧನ ಪರಮಮುಕ್ತಿ ಸಾಧನವಪ್ಪ ಬಸವಾಕ್ಷರೋದ್ಧರಣಿಯ ಸಂಬಂಧವೆಂತೆಂದೊಡೆ : ಪರತತ್ವದ ಪರಜ್ಞಾನದ ಚೈತನ್ಯವೇ ಪರಶಕ್ತಿ, ಆ ಪರಶಕ್ತಿಯ ಸುನಾದ ಚೈತನ್ಯವೇ – "ಬ"ಕಾರ, ಚಿತ್ರ ಭಾವರಣವೇ – "ಸ"ಕಾರ, ಚಿತ್ಕಲಾತೇಜ:ಪುಂಜವೇ – "ವ"ಕಾರ ಇಂತೀ ಬಸವಾಕ್ಷರತ್ರಯಕ್ಕೆ ವಿವರ. ಶೂನ್ಯ, ನಿಷ್ಕಲ, ಶಿವ ಎಂಬ ತತ್ವತ್ರಯ, ಸತ್ ಚಿತ್ ಆನಂದವೆಂಬ ಲಕ್ಷಣತ್ರಯ, ಸದಾಶಿವ, ಈಶ್ವರ, ರುದ್ರರೆಂಬ ಮೂರ್ತಿತ್ರಯ, ಇಚ್ಛಾ ಜ್ಞಾನ ಕ್ರಿಯೆ ಎಂಬ ಶಕ್ತಿತ್ರಯ ಭವ ಮೃಡ ಹರರೆಂಬ ತ್ರಯಾವಯವ ಸ್ವರೂಪಿನಿಂ ತನುತ್ರಯ ಜೀವತ್ರಯ ಆತ್ಮತ್ರಯ ಅವಸ್ಥಾತ್ರಯ, ಮನತ್ರಯ ಭಾವ ಆತ್ಮತ್ರಯೋತ್ಪತ್ತಿ ಹೇತುವಿನಿಂದ ಸಕಲ ತತ್ವಕಾರಣವಾಗಿಹುದು, ಇಂತಿದು ಸೃಷ್ಟಿಯ ಭೇದ. ಇನ್ನು ನಿವೃತ್ತಿಯ ಲಕ್ಷಣ : ಗುರುತ್ರಯ ಲಿಂಗತ್ರಯ ಜಂಗಮತ್ರಯ, ಪ್ರಸಾದತ್ರಯ ಪಾದೋದಕತ್ರಯ, ಭಕ್ತಿತ್ರಯ, ಸ್ವರೂಪಿನಿಂ ಅಂಗತ್ರಯ, ಲಿಂಗತ್ರಯ ಅವಧಾನತ್ರಯ, ಕರುಣತ್ರಯ ಮುಖತ್ರಯ ಅರ್ಪಿತತ್ರಯ ಸಂಬಂಧದಿಂ ಸರ್ವಾಚಾರ ಸಾಧನವಾಗಿಹುದು.[೫೬]

*** ಉದ್ಧರಣೆ ಸಾಹಿತ್ಯದಲ್ಲಿಯ ಚಿತ್ರ : ೧೯.೧ :**

ಈ "ಬಸವಾಕ್ಷರೋದ್ಧರಣಿ"ಯ ಚಿತ್ರವನ್ನು ಕಾಗದದ ಮೇಲೆ ಜಲವರ್ಣದಲ್ಲಿ ರಚಿಸಲಾಗಿದೆ. ಕೆಳಗಿನಿಂದ ಮೇಲಕ್ಕೆ ಆರು ಮನೆಗಳನ್ನು ಹಾಗೂ ಬಲದಿಂದ ಎಡಕ್ಕೆ ಆರು ಮನೆಗಳನ್ನು ನಿರ್ಮಿಸಲಾಗಿದ್ದು ಒಟ್ಟು 6x6=36 ಮನೆಗಳನ್ನು ರಚಿಸಲಾಗಿದೆ. ಈ ಪ್ರತಿಯೊಂದು ಮನೆಗಳಲ್ಲಿ ಬಸವ ಅಕ್ಷರವಿನ್ಯಾಸ ಮಾಡಲಾಗಿದೆ. ಮೊದಲಿನ ಸಾಲಿನಲ್ಲಿ ಬಲದಿಂದ ಎಡಕ್ಕೆ ಬ.ಸ.ವ. ಎಂದು, ಮತ್ತೆ ಅದರ ಮುಂದೆ ಬಸವ ಎಂದು (೩+೩) ಆರೂ ಮನೆಗಳಲ್ಲಿ ಬರೆಯಲಾಗಿದೆ. ಅದರಂತೆ ಕೆಳಗಿನ ಐದೂ ಸಾಲುಗಳಲ್ಲಿ ಬರೆಯಲಾಗಿದೆ. ಈ ಚಿತ್ರದ ಹಿನ್ನೆಲೆಗೆ ಹಳದಿವರ್ಣವನ್ನು ಲೇಪಿಸಲಾಗಿದೆ. ಗುಲಾಬಿ ಮತ್ತು ಕಪ್ಪುವರ್ಣದಿಂದ ರೇಖೆಯನ್ನು ಎಳೆಯಲಾಗಿದ್ದು ನಾಲ್ಕೂ ಭುಜಗಳಲ್ಲಿರುವ ಅಲಂಕಾರಿಕ ನಕ್ಷೆಗಳನ್ನು ಮಾಡಿನ ಆಕಾರದಲ್ಲಿ ಚಿತ್ರಿಸಲಾಗಿದೆ. ಈ ಚಿತ್ರದ ನಾಲ್ಕೂ ಮೂಲೆಗಳಲ್ಲಿ ಹೂವಿನ ಚಿತ್ರವನ್ನು ಮಾಡಲಾಗಿದೆ. ಇವುಗಳಿಗೆಲ್ಲ ಅಂದವಾದ ಚೌಕಟ್ಟುಗಳನ್ನು ರಚಿಸಿದ್ದು ಮನೆಗಳು ಮತ್ತು ಮಾಡುಗಳು ಎದ್ದು ಕಾಣುವಂತೆ ಉಳಿದ ಹೊರಭಾಗಕ್ಕೆ ದಟ್ಟವಾದ ಗುಲಾಬಿ ವರ್ಣವನ್ನು ಬಳಸಲಾಗಿದೆ.

*** ಕ.ವಿ.ವಿ. ಹಂಪೆಯಲ್ಲಿ ದೊರೆತ ಚಿತ್ರ : ೧೯.೨ :**

ಈ "ಬಸವಾಕ್ಷರೋದ್ಧರಣಿ ಚಿತ್ರ"ವನ್ನು ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ಒಟ್ಟು ಮೂವತ್ತಾರು ಮನೆಗಳನ್ನು ರಚಿಸಿ ಮನೆಗಳಿಗೆ ಬಿಳಿಯ ವರ್ಣವನ್ನು ಉಳಿಸಿಕೊಂಡಿದ್ದು ಮನೆಯ ಹೊರಗಡೆ

೫೬. ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು : ಶಿವಾನುಭವಶಾಸ್ತ್ರ : ಪುಟ ೫೭

ಕಪ್ಪುವರ್ಣವನ್ನು ತುಂಬಲಾಗಿದೆ. ಈ ಚಿತ್ರದಲ್ಲಿ ಮೂವತ್ತಾರು ಮನೆಗಳಲ್ಲಿ "ಬಸವ" ಎಂದು ಬರೆಯಲಾಗಿದೆ. ಈ ಮೂವತ್ತಾರೂ ಮನೆಗಳುಳ್ಳ ಚೌರಸದ ಎಡಬಲಗಳಲ್ಲಿ ದೊಡ್ಡದಾದ ಕಮಲದ ಹೂವನ್ನು ಕೆಂಪು ವರ್ಣದಲ್ಲಿ ರಚಿಸಲಾಗಿದೆ. ಈ ಹೂವಿನ ಎಡಬಲಗಳಲ್ಲಿ ಹಸಿರು ಎಲೆಗಳನ್ನು ಚಿತ್ರಿಸಲಾಗಿದೆ. ಚಿತ್ರದ ಮೇಲ್ಗಡೆ ಹಾಗೂ ಕೆಳಗಡೆಯಲ್ಲಿ ನೈಸರ್ಗಿಕ ನಕ್ಷೆಗಳನ್ನು ಬಳಸಲಾಗಿದೆ. ಈ ಚಿತ್ರಕ್ಕೆ ಹೊರಗಡೆಯಿಂದ ಷಡ್ಭುಜಗಳ ಪಟ್ಟಿಯನ್ನು ರಚಿಸಲಾಗಿದೆ.

*** ಕ.ವಿ.ವಿ. ಹಂಪೆಯ ತಾಳೆಓಲೆಗರಿ ಚಿತ್ರ : ೧೯.೩ :**

ತಾಳೆಓಲೆಗರಿಯೊಂದರ ಮೇಲೆ "ಬಸವಾಕ್ಷರೋದ್ಧರಣಿ" ಚಿತ್ರವನ್ನು ರೇಖಾಪ್ರಧಾನವಾಗಿ ಚಿತ್ರಿಸಲಾಗಿದೆ. ಒಟ್ಟು ಮೂವತ್ತಾರು ಮನೆಗಳನ್ನು ಮಾಡಿಕೊಂಡು ಅದರಲ್ಲಿ ಬ.ಸ.ವ. ಬ.ಸ.ವ. ಎಂಬ ಆರು ಅಕ್ಷರಗಳನ್ನು ಬರೆದಿದ್ದು ಈ ಚೌರಸದ ಸುತ್ತಲೂ ಆರಾರು ಹೂವುಗಳುಳ್ಳ ಭುಜಗಳನ್ನು ಅಲಂಕಾರಿಕವಾಗಿ ಚಿತ್ರಿಸಲಾಗಿದೆ. ಈ ಚಿತ್ರದ ಸುತ್ತಲೂ ಜಾಮಿತಿ ಆಕಾರಗಳ ನಕ್ಷೆಗಳನ್ನು ಅಂದವಾಗಿ ಅಂಚಿಗೆ ಬಳಸಲಾಗಿದೆ.

*** ಧರ್ಮಸ್ಥಳದಲ್ಲಿ ದೊರೆತ ಚಿತ್ರ : ೧೯.೪ :**

ಅಲಂಕಾರಿಕ ರಥವೊಂದರ ಕೆಳಗಡೆ ಕೆಂಪುವರ್ಣ ಹಿನ್ನೆಲೆಯಲ್ಲಿ ತುಂಬಿದ್ದು ಮೇಲ್ಗಡೆ "ಓಂ" ಎಂದು ಬರೆಯಲಾಗಿದೆ. ಕೆಳಗಡೆ ಹಳದಿವರ್ಣದಲ್ಲಿ ೩೬ ಮನೆಗಳನ್ನು ರಚಿಸಿದ್ದು ಕಂದುಗೆಂಪು ವರ್ಣದಲ್ಲಿ ರೇಖೆಗಳನ್ನು ಎಳೆಯಲಾಗಿದೆ. ಬ.ಸ,ವ,ಬ,ಸ,ವ, ಎಂದು ಆರೂ ಮನೆಗಳಲ್ಲಿ ಒಂದನೇ ಸಾಲಿನಲ್ಲಿ ಬರದಿದ್ದು ಉಳಿದ ಕೆಳಗಿನ ಐದು ಸಾಲುಗಳಲ್ಲಿ ಹಾಗೇ ಬರೆಯಲಾಗಿದೆ. ಈ ಮನೆಗಳ ಕೆಳಗೆ ಹಿನ್ನೆಲೆಯಲ್ಲಿ ಕೆಂಪು ವರ್ಣವಿದ್ದು ಎಡಬಲಗಳಲ್ಲಿ ಅಲಂಕಾರಿಕ ಕಂಬಗಳಿವೆ.

*** ಕ.ವಿ.ವಿ. ಧಾರವಾಡದ ಪ್ರತಿ : ಚಿತ್ರ ೧೯.೫ :**

ಈ "ಬಸವಾಕ್ಷರೋದ್ಧರಣಿ" ಚಿತ್ರವನ್ನು ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ಮಾಡಿನಂತೆ ಮುನ್ನೆಲೆಯಲ್ಲಿ ನೀಲಿವರ್ಣದ ಕಮಾನನ್ನು ಚಿತ್ರಿಸಿದ್ದು, ಹಿನ್ನೆಲೆಯಲ್ಲಿ ಬಿಳಿಮಿಶ್ರಿತ ಗುಲಾಬಿವರ್ಣವನ್ನು ಬಳಿಯಲಾಗಿದೆ. ಈ ಮಾಡಿನ ಮೇಲ್ಗಡೆಯಲ್ಲಿ ಬಿಳಿ ಮತ್ತು ಹಳದಿವರ್ಣದ ಹೂವನ್ನು ಮಾಡಿದ್ದು, ಕೆಳಗಡೆ ಹಸಿರುವರ್ಣದ ಚೌರಸದಲ್ಲಿ ಕೆಂಪುವರ್ಣದ ರೇಖೆಗಳಿಂದ ಮೂವತ್ತಾರು ಮನೆಗಳನ್ನು ತಯಾರಿಸಿಕೊಂಡು ಒಂದೊಂದರಲ್ಲಿ ಒಂದೊಂದು ಅಕ್ಷರ ಬ.ಸ.ವ. ಬ.ಸ.ವ. ಎಂದು ಆರು ಮನೆಗಳಲ್ಲಿ ಬರದಿದ್ದು, ಕೆಳಗಿನ ಐದೂ ಸಾಲುಗಳಲ್ಲಿಯ ಮನೆಯಲ್ಲಿ ಹೀಗೆ ಬರೆಯಲಾಗಿದೆ. ಕೆಳಗಡೆ ಹಳದಿವರ್ಣದ ಪೀಠವನ್ನು ರಚಿಸಲಾಗಿದೆ. ಅದರ ಮೇಲೆ ಕೆಂಪು ರೇಖೆಗಳನ್ನು ಎಳೆಯಲಾಗಿದೆ.

## ೨೦. ನೂರೆಂಟು ಪ್ರಣವೋದ್ಧರಣೆ

*** ವಾಚ್ಯ, ವಸ್ತು, ವಿಷಯ :**

ಪರಮಮಂತ್ರ ಧ್ಯಾನಾರೂಢನಾದ ಶಿವಯೋಗಿ ನೂರೆಂಟು ಪ್ರಣವ ಸಂಬಂಧವನರಿದು ಜಪಿಸುವ ಕ್ರಮವೆಂತೆಂದೊಡೆ[೫೭] ಚಿತ್ ಸತ್ ಸುಖ ಸ್ವರೂಪವಾದ ಬಿ=ಸುನಾದ, ಸ=ಬಿಂದು, ವಾ=ಕಲಾರೂಪವಾದ ಆಟಮಾಕ್ಷರತ್ರಯ ಹಾಗೂ ಸತ್ಯಾದಿ ನಿಜಶಿವನ ಸ್ವರೂಪವುಳ್ಳ ಅ.ಉ.ಮ.=ಓಂ ಪ್ರಣವ : ನಮ: ಶಿವಾಯಓಂ, ನಮಃ ಬಸವಾಯ = ಎಂಬ ಪಂಚಾಕ್ಷರ ಮಂತ್ರವನ್ನು, ೧೨ ಪ್ರಣವಗಳನ್ನು ೯ ಸಲ ಪುನಃ ಪುನಃ ಪಠಿಸಲು ಅದು ೧೨ x ೯= ೧೦೮ ಪ್ರಣವಗಳಾಗುವುದು : ೧೦೮ ಸಲ ಈ ಪ್ರಣವ ಮಂತ್ರ ಜಪಿಸಿದಾಗ

*** ಆತ್ಮತ್ರಯಗಳು :**

೧) ಜೀವಾತ್ಮ ೨) ಅಂತರಾತ್ಮ ೩) ಪರಮಾತ್ಮ

*** ಬಸವಾಕ್ಷರ ಸ್ವರೂಪಗಳು :**

೧) ಗುರು ೨) ಲಿಂಗ ೩) ಜಂಗಮ

*** ತನುತ್ರಯ ಸ್ವರೂಪವಾಗಿರುವವು :**

೧) ಸ್ಥೂಲ=ಇಷ್ಟಲಿಂಗ, ೨) ಸೂಕ್ಷ್ಮ=ಪ್ರಾಣಲಿಂಗ, ೩) ಕಾರಣ=ಭಾವಲಿಂಗ

ಹೀಗೆ ಷಡ್ವಿಧ ಲಿಂಗಗಳಾಗಿ ಭಕ್ತನ ಶ್ರೇಷ್ಠತೆಗೈಯಲು ಸಹಕಾರಿಯಾಗುತ್ತವೆ. ನಂತರ ಸರ್ವತತ್ವಗಳೆಲ್ಲ ಮಂತ್ರಮಯವಾಗಿ ಲಿಂಗತತ್ವ ಸ್ವರೂಪವಾಗಿ ನಿಜ ಸಮಾಧಿ ಸಿಕ್ಕು ಐಕ್ಯನಾಗಿ ಸುಖ ಹೊಂದಿ ಮಹಾಲಿಂಗದಲ್ಲಿ ಸಮರಸಗೊಂಡು ಷಡ್‌ಲಿಂಗದಲ್ಲಿ ಶರೀರ ಮತ್ತು ಕ್ರಿಯೆಗಳು ಶೂನ್ಯ ಜ್ಞಾನ ಹೊಂದಿ ಪರಶಿವಯೋಗ ಸಂಭವಿಸುವುದು. ಈ ಉದ್ಧೇಶಕ್ಕಾಗಿ ೧೦೮ ಉದ್ಧರಣೆಯು ೧೨ ಪ್ರಣವವನ್ನು ೯ ಸಲ ಪುನರುಚ್ಚರಿಸುತ್ತ ೧೦೮ ಸಲ ಪಠಿಸಿದಲ್ಲಿ ನೈತಿಕತೆ ನಿಷ್ಠೆ, ಭಕ್ತಿಯಿಂದಾಗಿ ಹೃದಯದಲ್ಲಿ ಶಿವಲಿಂಗ ತೋರುವುದು.

| ಕ್ರಸಂ. | ಷಟ್ ತತ್ವಗಳು | ಪ್ರಣವ | ಅಕ್ಷರ | ಷಡ್ವಿಧ ಲಿಂಗ | ಸಂಬಂಧ |
|---|---|---|---|---|---|
| ೧ | ಭಕ್ತ | ಓಂ | ಅ | ಆಚಾರಲಿಂಗ | ಚಿತ್ತ |
| ೨ | ಮಹೇಶ್ವರ | ನ | ಉ | ಗುರುಲಿಂಗ | ಬುದ್ಧಿ |
| ೩ | ಪ್ರಸಾದಿ | ಮಃ | ಮ | ಶಿವಲಿಂಗ | ಅಹಂಕಾರ |
| ೪ | ಪ್ರಾಣಲಿಂಗ | ಶಿ | ಬ | ಜಂಗಮಲಿಂಗ | ಮನ |
| ೫ | ಶರಣ | ವಾ | ಸ | ಪ್ರಸಾದಿಲಿಂಗ | ಜ್ಞಾನ |
| ೬ | ಐಕ್ಯ | ಯ | ವ | ಮಹಾಲಿಂಗ | ಭಾವ |

ಶರಣನ ಶರೀರದಲ್ಲಿ ಹೀಗೆ ೬ ಲಿಂಗಗಳು ದೇಹದಲ್ಲಿ ಕ್ರಿಯೆಮಾಡಿ ಸಮಾಧಿಸ್ಥನಾಗುವ ಉದ್ದೇಶದಿಂದ ಈ ಉದ್ಧರಣೆಯನ್ನು ಹೇಳಿರುವುದು.

೫೭. ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು : ಶಿವಾನುಭವಶಾಸ್ತ್ರ : ಪುಟ ೫೮

*** ಉದ್ಧರಣೆ ಸಾಹಿತ್ಯದಲ್ಲಿಯ ಚಿತ್ರ : ೨೦.೧ :**

ಈ "ನೂರೆಂಟು ಪ್ರಣವೋದ್ಧರಣೆ" ಚಿತ್ರವನ್ನು ೧' x ೧' ಅಡಿ ಅಳತೆಯ ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ಮಧ್ಯದಲ್ಲಿ ಕೆಂಪುವರ್ಣದಲ್ಲಿ ಚಿಕ್ಕ ವೃತ್ತವನ್ನು ರಚಿಸಿದ್ದು ಅದಕ್ಕೆ ತಗುಲಿದರೆ ಮೊದಲನೆಯ ವೃತ್ತಪಟ್ಟಿಯನ್ನು ಕಪ್ಪು ವರ್ಣದಿಂದ ತುಂಬಲಾಗಿದ್ದು ೪(ನಾಲ್ಕು) ಹಳದಿ ದಳಗಳನ್ನು ರಚಿಸಲಾಗಿದೆ. ಅದರ ನಂತರ ಒಂದಕ್ಕೊಂದು ವೃತ್ತದ ಪಟ್ಟಿಗಳು ತಗುಲಿರುವಂತೆ ಆಯಾ ವೃತ್ತಗಳನ್ನು ಹಳದಿವರ್ಣದಿಂದ ತುಂಬಿದ್ದು ಎರಡನೆಯ ವೃತ್ತದ ಮೇಲೆ ೮ ದಳಗಳನ್ನು ಕೆಂಪುವರ್ಣದಿಂದ ರಚಿಸಲಾಗಿದೆ. ಮೂರನೇ ವೃತ್ತದಲ್ಲಿ ೧೨ ದಳಗಳನ್ನು ಕೆಂಪುವರ್ಣದಲ್ಲಿ ರಚಿಸಲಾಗಿದೆ. ನಾಲ್ಕನೆಯ ವೃತ್ತದಲ್ಲಿ ೧೬ ಕೆಂಪುವರ್ಣದ ದಳಗಳನ್ನು ತುಂಬಲಾಗಿದೆ. ಐದನೆಯ ವೃತ್ತದಲ್ಲಿ ೨೦ ದಳಗಳನ್ನು ಕೆಂಪುವರ್ಣದಲ್ಲಿ ಚಿತ್ರಿಸಲಾಗಿದೆ. ಆರನೆಯ ವೃತ್ತದಲ್ಲಿ ೨೪ ದಳಗಳನ್ನು ಕೆಂಪು ವರ್ಣದಲ್ಲಿ ಚಿತ್ರಿಸಲಾಗಿದೆ. ಏಳನೆಯ ಸುತ್ತಿನಲ್ಲಿ ೨೮ ದಳಗಳನ್ನು ಕೆಂಪುವರ್ಣದಲ್ಲಿ ಚಿತ್ರಿಸಲಾಗಿದೆ. ಈ ವೃತ್ತಕ್ಕೆ ತಗಲುವಂತೆ ಚೌರಸವನ್ನು ರಚಿಸಿದ್ದು ನಾಲ್ಕು ಮೂಲೆಗಳಿಗೆ ಕಪ್ಪು, ನೀಲಿ ವರ್ಣವನ್ನು ತುಂಬಲಾಗಿದೆ. ಈ ಕಾಗದದ ಅಂಚಿಗೆ ಅಲಂಕಾರಿಕ ನಕ್ಷಾಪಟ್ಟಿಯನ್ನು ಮಾಡಲಾಗಿದೆ. ಈ ಎಲ್ಲ ದಳಗಳ ಮೇಲೆ ಅಕ್ಷರನ್ಯಾಸ ಮಾಡಲಾಗಿದೆ.

*** ಕ.ವಿ.ವಿ. ಹಂಪೆಯ ತಾಳೆಓಲೆಗರಿ ಚಿತ್ರ : ೨೦.೨:**

ತಾಳೆಓಲೆಗರಿಗಳ ಮೇಲೆ ಕಪ್ಪುವರ್ಣದಿಂದ ಚಿತ್ರಿಸಲಾಗಿದೆ. ಈ "ನೂರೆಂಟು ಪ್ರಣವೊದ್ಧರಣೆ" ಚಿತ್ರವನ್ನು ಮೇಲೆ ಹೇಳಿದಂತೆ ಒಟ್ಟು ಏಳು ವೃತ್ತ ಪಟ್ಟಿಕೆಗಳನ್ನು ರಚಿಸಿಕೊಂಡು ಅದರ ಮೇಲೆ ಆಯಾ ವೃತ್ತಕ್ಕೆ ಮೇಲೆ ತಿಳಿಸಿದಂತೆ ದಳಗಳನ್ನು ಬರೆಯಲಾಗಿದೆ. ಈ ಚಿತ್ರದ ಕೊನೆಯ ಸುತ್ತಿನ ಪರಿಧಿಗೆ ಹತ್ತುವಂತೆ ಚೌರಸವನ್ನು ರಚಿಸಿಕೊಂಡು ಸುತ್ತಲೂ ಅಲಂಕಾರಿಕ ನಕ್ಷೆಗಳನ್ನು ಚಿತ್ರಿಸಲಾಗಿದೆ. ಈ ಚಿತ್ರದ ಎಲ್ಲ ದಳಗಳ ಮೇಲೆ ಅಕ್ಷರನ್ಯಾಸ ಮಾಡಲಾಗಿದೆ.

*** ಗು.ವಿ.ವಿ. ಗುಲಬರ್ಗಾದಲ್ಲಿಯ ಚಿತ್ರ : ೨೦.೩:**

೧' x ೧' ಅಡಿ ಅಳತೆಯ ಕಾಗದದ ಮೇಲೆ ಚೌರಸವನ್ನು ರಚಿಸಿಕೊಂಡಿದ್ದು ಅದಕ್ಕೆ ತಿಳಿಗುಲಾಬಿ ವರ್ಣವನ್ನು ಲೇಪಿಸಲಾಗಿದೆ. ಮಧ್ಯದಲ್ಲಿ ಒಂದು ಚಿಕ್ಕವೃತ್ತವನ್ನು ರಚಿಸಿ ಅದರಿಂದ ಹೊರಟ ಏಳೂ ವೃತ್ತಪಟ್ಟಿಕೆಗಳನ್ನು ಕಪ್ಪುವರ್ಣದಲ್ಲಿ ತುಂಬಲಾಗಿದ್ದು ಅದರ ಮೇಲೆ ರಚಿಸಿದ ದಳಗಳನ್ನು ಮೇಲೆ ತಿಳಿಸಿದಂತೆ ಆಯಾ ವೃತ್ತ ಪಟ್ಟಿಕೆಗಳ ಮೇಲೆ ಹಳದಿವರ್ಣದಿಂದ ಚಿತ್ರಿಸಲಾಗಿದೆ. ಈ ಮೇಲೆ ಬರೆದಂತೆ ದಳಗಳ ಮೇಲೆ ಅಕ್ಷರ ವಿನ್ಯಾಸವನ್ನು ಮಾಡಲಾಗಿದೆ.

*** ಧರ್ಮಸ್ಥಳದಲ್ಲಿ ದೊರೆತ ಚಿತ್ರ : ೨೦.೪:**

ಕಾಗದದ ಮೇಲೆ "ನೂರೆಂಟು ಪ್ರಣವೋದ್ಧರಣೆ" ಚಿತ್ರವನ್ನು ಜಲವರ್ಣದಲ್ಲಿ ರಚಿಸಲಾಗಿದೆ. ಅಲಂಕಾರಿಕ ರಥವೊಂದರ ಕೆಳಭಾಗದಲ್ಲಿ ಎರಡು ಅಲಂಕಾರಿಕ ಕಂಬಗಳನ್ನು ಚಿತ್ರಿಸಿದ್ದು ಅವುಗಳ ಮಧ್ಯದಲ್ಲಿ ನೂರೆಂಟು

ಪ್ರಣವೋದ್ಧರಣಿಯ ಚಿತ್ರವನ್ನು ಬರೆಯಲಾಗಿದೆ. ಕೆಂಪು ವರ್ಣದಲ್ಲಿ ಏಳೂ ವೃತ್ತ ಪಟ್ಟಿಕೆಗಳನ್ನು ರಚಿಸಿಕೊಂಡು ಆಯಾ ವೃತ್ತಗಳ ಪಟ್ಟಿಕೆಗಳ ಮೇಲೆ ಆಯಾ ದಳಗಳನ್ನು ಹಳದಿವರ್ಣದಲ್ಲಿ ಚಿತ್ರಿಸಲಾಗಿದೆ. ಅಂತಿಮ ವೃತ್ತಕ್ಕೆ ಹಳದಿ ರೇಖಾವೃತ್ತವನ್ನು ರಚಿಸಿದ್ದು ಎಡಬಲಗಳಲ್ಲಿರುವ ಎರಡೂ ಕಂಬಗಳ ಮಧ್ಯದಲ್ಲಿ ಕಂದುಗೆಂಪು ವರ್ಣವನ್ನು ತುಂಬಲಾಗಿದೆ. ಎಲ್ಲ ದಳಗಳ ಮೇಲೆ ಅಕ್ಷರನ್ಯಾಸ ಮೇಲೆ ತಿಳಿಸಿದಂತೆ ಮಾಡಲಾಗಿದೆ.

*** ಬೆಂ. ವಿ.ವಿ. ಬೆಂಗಳೂರಿನ ಚಿತ್ರ : ೨೦.೫:**

ಈ "ನೂರೆಂಟು ಪ್ರಣವೋದ್ಧರಣಿ" ಚಿತ್ರವನ್ನು ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ಮಧ್ಯದಲ್ಲಿ ಚಿಕ್ಕ ವೃತ್ತವನ್ನು ಕೆಂಪುವರ್ಣದಲ್ಲಿ ರಚಿಸಲಾಗಿದ್ದು ಅದಕ್ಕೆ ತಿಳಿಗುಲಾಬಿವರ್ಣದ ವೃತ್ತವನ್ನು ಮಾಡಿದ್ದು ಮತ್ತೆ ಕೆಂಪು ವೃತ್ತಪಟ್ಟಿಕೆ, ಅದಕ್ಕೆ ಹೊಂದಿಕೊಂಡು ತಿಳಿನೀಲಿವರ್ಣದ ವೃತ್ತಪಟ್ಟಿಕೆಯನ್ನು ರಚಿಸಿದ್ದು ಉಳಿದ ಎಲ್ಲ ವೃತ್ತಗಳನ್ನು ಗುಲಾಬಿವರ್ಣದ ವೃತ್ತ ಪಟ್ಟಿಕೆಗಳನ್ನು ರಚಿಸಲಾಗಿದೆ. ಹೀಗೆ ರಚನೆಗೊಂಡ ಏಳೂವೃತ್ತ ಪಟ್ಟಿಕೆಗಳಲ್ಲಿ ತಿಳಿಗುಲಾಬಿ ವರ್ಣದ ದಳಗಳನ್ನು ರಚಿಸಲಾಗಿದೆ. ಅವುಗಳ ಮೇಲೆ ಅಕ್ಷರವಿನ್ಯಾಸ ಮಾಡಲಾಗಿದೆ. ಈ ನೂರೆಂಟು ಪ್ರಣವೋದ್ಧರಣಿ ಚಿತ್ರದ ಸುತ್ತಲೂ ಹಳದಿ ವರ್ಣದ ಚೌರಸವನ್ನು ರಚಿಸಿಕೊಂಡಿದ್ದು ಚೌರಸದ ಒಳಬದಿಯಲ್ಲಿ ನಾಲ್ಕೂ ಭುಜಗಳಿಗೆ ಗುಲಾಬಿ ಹೂವು, ಹಸಿರು ಎಲೆಗಳನ್ನು ಅಲಂಕಾರಿಕವಾಗಿ ಚಿತ್ರಿಸಲಾಗಿದೆ. ಈ ಚೌರಸದ ಅಂಚುಗಳನ್ನು ಜಾಮಿತಿ ಆಕಾರದ ನಕ್ಷೆಗಳಿಂದ ಅಲಂಕರಿಸಲಾಗಿದೆ.

*** ಕ.ವಿ.ವಿ. ಧಾರವಾಡದಲ್ಲಿಯ ಚಿತ್ರ : ೨೦.೬:**

ಈ ಚಿತ್ರವನ್ನು ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದ್ದು ಹಾಳೆಯ ಮಧ್ಯದಲ್ಲಿ ತಿಳಿಗುಲಾಬಿ ವರ್ಣದ ಚಿಕ್ಕವೃತ್ತವನ್ನು ರಚಿಸಿ ೧ನೇ ವೃತ್ತ ಕೆಂಪು ವರ್ಣದಲ್ಲಿದ್ದು, ೨ನೇ ವೃತ್ತವನ್ನು ನೀಲಿವರ್ಣದಿಂದ ತುಂಬಿದ್ದು ೩ನೇ ವೃತ್ತ, ತಿಳಿಗುಲಾಬಿವರ್ಣವನ್ನು ತುಂಬಲಾಗಿದೆ. ೪ನೇ ವೃತ್ತಕ್ಕೆ ತಿಳಿನೀಲಿ ವರ್ಣವನ್ನು ತುಂಬಲಾಗಿದೆ. ೫ನೇ ವೃತ್ತವನ್ನು ತಿಳಿಗೆಂಪು ವರ್ಣದಲ್ಲಿ ಚಿತ್ರಿಸಿದ್ದು, ೬ನೇ ವೃತ್ತವನ್ನು ತಿಳಿನೀಲಿ ವರ್ಣದಿಂದ ತುಂಬಲಾಗಿದ್ದು ೭ನೇ ವೃತ್ತವನ್ನು ತಿಳಿಗೆಂಪುವರ್ಣದಿಂದ ತುಂಬಲಾಗಿದೆ. ಆಯಾ ವೃತ್ತಪಟ್ಟಿಕೆಗಳ ಮೇಲೆ ಬಿಳಿವರ್ಣದ ದಳಗಳನ್ನು ರಚಿಸಲಾಗಿದೆ. ಇವುಗಳ ಮೇಲೆ ಕಪ್ಪು ವರ್ಣದಿಂದ ಅಕ್ಷರನ್ಯಾಸ ಮಾಡಲಾಗಿದೆ. ಈ ವೃತ್ತದ ಸುತ್ತಲೂ ಚೌರಸದಲ್ಲಿ ಹಸಿರು ವರ್ಣವನ್ನು ತುಂಬಲಾಗಿದ್ದು, ಚಿತ್ರದ ಎಡಬಲಭಾಗಗಳಲ್ಲಿ ಕೆಂಪುವರ್ಣದ ಕಮಾನುಗಳನ್ನು ರಚಿಸಿದ್ದು ಈ ನೂರೆಂಟು ಪ್ರಣವೋದ್ಧರಣಿ ಚಿತ್ರವನ್ನು ಅಂದಗೊಳಿಸಲಾಗಿದೆ.

## ೨೧. ಅಧೋಕುಂಡಲಿ ಶಕ್ತಿ ಉದ್ಧರಣಿ

**ವಾಚ್ಯ ವಸ್ತುವಿಷಯ :**

ಶಿವಮಂತ್ರ ಧ್ಯಾನಪರಾಯಣನಾದ ಶಿವಯೋಗಿಯ ಕುಂಡಲಿಯೆಂಬ ಮಹಾಗಾಡಿಯನಿಪ ನಾಭಿಪ್ರದೇಶದಲ್ಲಿ ನೆಲೆಸಿ ನಿವೃತ್ತಿಮುಖವಾಗಿರ್ಪ ಕುಂಡಲಿಶಕ್ತಿಯ ಪ್ರವೃತ್ತಿ ಲಕ್ಷಣವೆಂತೆಂದೊಡೆ.[೫೮]

---

೫೮. ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು : ಶಿವಾನುಭವಶಾಸ್ತ್ರ : ಪುಟ ೫೯

ಲೌಕಿಕ ಬದುಕಿನ ಕ್ಷಣಿಕತೆಯನ್ನು ಅಜ್ಞಾನದಿಂದ ಮೋಹದ ಬದುಕೇ ಶಾಶ್ವತವೆಂದು ತಿಳಿದು ಕ್ಷಣಿಕ ಸುಖಗಳಿಗೆ ಬಲಿಯಾಗಿ ನಾಶಹೊಂದುತ್ತಿರುವಲ್ಲಿ ಯಾವ ಯಾವ ರೀತಿಯಾಗಿ ನಮ್ಮನ್ನು ಕಾಡುತ್ತಿವೆ ಎಂಬುದನ್ನು ಈ ಅಧೋಕುಂಡಲಿಯು ತಿಳಿಸುವುದು. ಅಧೋ ಎಂದರೆ ಕೆಳಗೆ, ಇಳಿಮುಖ, ನಶಿಸು, ಅವನತಿ ಹೊಂದು, ಇಲ್ಲವಾಗು, ಅಧೋಗತಿ ಹೊಂದುವುದನ್ನು ವಿವಿಧ ಜೀವಿಗಳ, ಪ್ರಾಣಿಗಳನ್ನು ರೂಪವಾಗಿ ಕೊಟ್ಟು ಒಂದೊಂದು ಸಾಂಕೇತಿಕ ಅರ್ಥವನ್ನು ಕೊಟ್ಟು ಸರಳವಾಗಿ ಭವದ ಬದುಕಿನ ಬವಣೆಯನ್ನು ತಿಳಿಸುವ ಮಾಧ್ಯಮ ಈ ಅಧೋಕುಂಡಲಿ ಶಕ್ತಿ ಉದ್ಧರಣಿ ಚಿತ್ರವಾಗಿದೆ. ಈ ಕುರಿತು ವಿವರವನ್ನು ಅನುಬಂಧದಲ್ಲಿ ನೋಡಬಹುದಾಗಿದೆ.

**ಉದ್ಧರಣಿ ಸಾಹಿತ್ಯದಲ್ಲಿಯ ಚಿತ್ರ : ೨೧.೧ :**

ಈ "ಅಧೋಕುಂಡಲಿನಿ ಉದ್ಧರಣಿ ಚಿತ್ರವನ್ನು" ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ಉದ್ಧರಣಿ ಚಿತ್ರವು ಚಿತ್ರಕಲೆಯ ದೃಷ್ಟಿಯಿಂದ ಉಳಿದ ಚಿತ್ರಗಳಿಗಿಂತ ವಿಶಿಷ್ಟವಾಗಿ ಮೂಡಿಬಂದಿದೆ. ತಾತ್ವಿಕವಾಗಿಯೂ, ಸಂಕೇತ ಪ್ರಧಾನವಾಗಿಯೂ, ಸಂಯೋಜನಾ ದೃಷ್ಟಿಯಿಂದಲೂ ಉತ್ಕೃಷ್ಟವಾಗಿ ಮೂಡಿಬಂದಿದೆ.

ಈ ಉದ್ಧರಣಿ ಚಿತ್ರದ ಮೇಲಿನ ಕಾಲುಭಾಗದಲ್ಲಿ ಅಡ್ಡವಾಗಿ ಜಲವನ್ನು ನೀಲಿಮಿಶ್ರಿತ ಕೆಂಪು ವರ್ಣದಲ್ಲಿ ತೋರಿಸಲಾಗಿದೆ. ಇಲ್ಲಿ ಜಲವರ್ಣಗಳು ಪಾರದರ್ಶಕವಾಗಿ ಮೂಡಿಬಂದಿದ್ದು, ಈ ಜಲದಲ್ಲಿ ಜಲಚರಪ್ರಾಣಿಗಳನ್ನು ಸೃಷ್ಟಿಸಲಾಗಿದೆ. ಕಪ್ಪೆ, ಮೀನು, ಹಾವು, ಏಡಿ, ಆಮೆಗಳನ್ನು ಚಿತ್ರಿಸಲಾಗಿದೆ. ನೀರು ಚಲಿಸುವಂತೆ ಕಾಣಲು ಏರಿಳಿತಗಳನ್ನು ತೋರಿಸಲಾಗಿದೆ. ಇದರಲ್ಲಿ ಚಲನೆಗೆ ನೀಡಿದ ತಂತ್ರ ವಿಶಿಷ್ಟವಾಗಿ ಮೂಡಿಬಂದಿದೆ.

ಕೆಳಗಡೆಯ ಭಾಗದಲ್ಲಿ ಕಾಡಿನ ರಾಜನಾದ ಸಿಂಹವು ಧರ್ಮದ ಸಂಕೇತವೆಂತಲೋ, ಪ್ರಾಣಿಗಳ ಅಧಿಪತಿಯಂತಲೋ ತ್ರಿಶೂಲದಂತಹ ದಂಡವೊಂದನ್ನು ಮುಂದಿನ ಎರಡೂ ಕಾಲುಗಳಲ್ಲಿ ಹಿಡಿದುಕೊಂಡಿದ್ದು ಎದುರುಗಡೆ ನೋಡುತ್ತ ಚಲಿಸುತ್ತದೆ. ಅದರ ಹಿಂದುಗಡೆ ಚಿರತೆ, ಆಕಳು, ಜಿಂಕೆಗಳು ಸಾಲು ಸಾಲಾಗಿ ಒಂದರ ಹಿಂದೆ ಒಂದರಂತೆ ಹೊರಟಿವೆ. ಇಲ್ಲಿ ಬಳಸಿರುವ ವರ್ಣಗಾರಿಕೆಯೂ ವೈಶಿಷ್ಟ್ಯಪೂರ್ಣವಾಗಿದೆ. ಸಿಂಹಕ್ಕೆ ಹಳದಿ ಪ್ರಮುಖವಾಗಿದ್ದು, ಕೆಂಪು ಮತ್ತು ನೀಲಿವರ್ಣಗಳ ಪಟ್ಟಿಗಳಿವೆ. ಚಿರತೆಯು ಬಿಳಿಬಣ್ಣದಲ್ಲಿದ್ದು, ನೀಲಿ ಮತ್ತು ಕೆಂಪು ವರ್ಣಗಳ ಚುಕ್ಕೆಗಳನ್ನು ಹೊಂದಿದೆ. ಆಕಳು ಕಂದುಗೆಂಪು ವರ್ಣವನ್ನು ಹೊಂದಿದೆ. ಜಿಂಕೆಯು ತಿಳಿಗೆಂಪು ವರ್ಣದಲ್ಲಿದ್ದು, ಕಂದುಗೆಂಪು ವರ್ಣದ ಚುಕ್ಕೆಗಳನ್ನು ಮಾಡಲಾಗಿದೆ.

ಮಧ್ಯದಲ್ಲಿ ಪ್ರಮುಖವಾಗಿ ದೊಡ್ಡದಾದ ಅಧೋಕುಂಡಲಿಯ ಚಿತ್ರವೊಂದನ್ನು ರಚಿಸಲಾಗಿದ್ದು, ಜಿಂಕೆಯ ಮುಖ, ಮಹಿಳೆಯ ಹಾಗೂ ಪ್ರಾಣಿಯ ದೇಹವನ್ನು ರಚಿಸಿದ್ದು, ಶಿರದಿಂದ ಕೆಳಗಿನ ಭಾಗ ಸ್ತ್ರೀ ದೇಹ ಮತ್ತು ಪ್ರಾಣಿ ದೇಹವನ್ನು ತೋರಿಸಲಾಗಿದೆ. ಕೆಳಗಡೆ ಮಹಿಳೆಯ ಕಾಲುಗಳೊಂದಿಗೆ ಪ್ರಾಣಿಯ ಕಾಲುಗಳನ್ನು ಚಿತ್ರಿಸಿದ್ದು, ಈ ಚಿತ್ರದ ಕೆಳಗಡೆ ತೋರಿಸಿರುವ ಪ್ರಾಣಿಗಳ ಒಂದೊಂದು ಕಾಲುಗಳನ್ನು ಪ್ರತಿನಿಧಿಸುವಂತೆ ವರ್ಣಸಮೇತ ಈ ಪ್ರಾಣಿಯ ದೇಹಕ್ಕೆ ಚಿತ್ರಿಸಲಾಗಿದೆ. ಈ ಪ್ರಾಣಿಯ ಬಾಲವನ್ನೇ ಹಾವಾಗಿ ಚಿತ್ರಿಸಿದ್ದು, ಅದು

ಪ್ರಾಣಿಯ ಬೆನ್ನಿಗೆ ಮತ್ತು ಮಹಿಳೆಯ ಸೊಂಟಕ್ಕೆ ಹೊಂದಿಕೊಂಡಿರುವಂತೆ ಚಿತ್ರಿಸಲಾಗಿದ್ದು, ಹಾವಿಗೆ ಚೂರಿಯನ್ನು ಚುಚ್ಚಿದಂತೆ ಇದ್ದು, ಹಾವು ತಲೆಕೆಳಗಾಗಿ ಮಾಡಿಕೊಂಡಿದೆ. ಮಹಿಳೆಯ ನೀಲಿ ಮಿಶ್ರಿತ ಕಪ್ಪು ಬಣ್ಣದ ರವಿಕೆಗೆ ಕೆಂಪುವರ್ಣದ ಚುಕ್ಕೆಗಳ ಅಂಚನ್ನು ಮಾಡಲಾಗಿದೆ. ಮಹಿಳೆಯ ಸೊಂಟದಿಂದ ಕೆಳಗಿರುವ ಸೀರೆಯು ಕೆಂಪು ವರ್ಣದಲ್ಲಿದ್ದು, ಕಪ್ಪುನೀಲಿ ವರ್ಣದ ಪಟ್ಟಿಗಳನ್ನು ಹಾಗೂ ಸೀರೆಯ ಕೆಳ ಅಂಚನ್ನು ಮಾಡಲಾಗಿದೆ. ಅಂಚಿನ ಮೇಲ್ಗಡೆ ಹಳದಿ ವರ್ಣದ ಪಟ್ಟಿ ಇದೆ. ಈ ಸೀರೆಯನ್ನು ಪ್ರಾಣಿಯ ಹಿನ್ನೆಲೆಯಲ್ಲೂ ತೋರಿಸಲಾಗಿದೆ. ಮಹಿಳೆಯ ದೇಹಕ್ಕೆ ಹಳದಿ ವರ್ಣವನ್ನು, ಪ್ರಾಣಿಯ ದೇಹಕ್ಕೆ ಹಳದಿಗೆಂಪು ವರ್ಣವನ್ನು ತುಂಬಲಾಗಿದೆ. ಜಿಂಕೆಯ ಮುಖಕ್ಕೆ ಕಂದುಗೆಂಪು ವರ್ಣವನ್ನು ತುಂಬಲಾಗಿದೆ. ಕೋಡುಗಳಿಗೆ ಕೆಂಪುಮಿಶ್ರಿತ ಕಪ್ಪುವರ್ಣವನ್ನು ಬಳಿಯಲಾಗಿದೆ. ಮೂಗುತಿ, ಕಿವಿಯೋಲೆ, ಕೊರಳು, ಕೈ ಕಾಲುಗಳಲ್ಲಿ ಹಳದಿ ವರ್ಣಗಳ ಆಭರಣಗಳನ್ನು ಮಾಡಲಾಗಿದೆ. ಈ ಮಹಿಳೆಯು ನಾಲ್ಕು ಕೈಗಳನ್ನು ಹೊಂದಿದ್ದು, ಮುಂದಿನ ಬಲಗೈಯಲ್ಲಿ ಬರೆಯಲು ಕಂಠವನ್ನು ಹಿಡಿದಿದ್ದು, ಅದು ಕೆಳಗಿರುವ ಕೆಂಪುವರ್ಣದ ಮಹಿಳೆಯ ತಲೆಗೆ ತಾಗುತ್ತಿದೆ. ಹಿಂದಿನ ಬಲಗೈಯಲ್ಲಿ ಕುಂಭವಿದೆ. ಮುಂದಿನ ಎಡಗೈಯಲ್ಲಿ ತಾಳೆಓಲೆಗರಿಯ ಗ್ರಂಥವೊಂದಿದೆ. ಹಿಂದಿನ ಎಡಗೈಯಲ್ಲಿ ಕುಂಭವನ್ನು ಹಿಡಿದುಕೊಂಡಿರುವಳು. ಪ್ರಾಣಿಯ ಹಿಂದುಗಡೆಯ ಮೇಲ್ಭಾಗದಲ್ಲಿ ಕೆಂಪುವರ್ಣದ ಮಹಿಳೆಯ ತಲೆ ಇದೆ. ಹಳದಿವರ್ಣದ ದಳಗಳನ್ನು ಹೊಂದಿದ ಪಟ್ಟಿಯನ್ನು ಹಣೆಗೆ ಕಟ್ಟಲಾಗಿದೆ. ಕಿವಿಯೋಲೆ, ಕೊರಳಆಭರಣಗಳು ಹಳದಿ ವರ್ಣದಲ್ಲಿವೆ. ಹೀಗೆ ಚಿತ್ರಿತವಾಗಿದೆ.

**ಸಂಕೇತ ಪ್ರಧಾನವಾಗಿರುವ ಚಿತ್ರ :**

ಈ ಚಿತ್ರದ ಬಲಗಡೆಯಲ್ಲಿ ಅಧೋಮುಖಿಯಾಗಿ ಕೆಳಗಡೆ ಇರುವ ಕೆಂಪುವರ್ಣದ ಮಹಿಳಾ ಮುಖ ಹಾಗೂ ಎಡಗಡೆಯಲ್ಲಿರುವ ಊರ್ಧ್ವ ಮುಖಿಯಾಗಿ ಮೇಲ್ಗಡೆ ಕಾಣುವ ಕೆಂಪುವರ್ಣದ ಮಹಿಳಾ ಮುಖಗಳು. ವಿಷ ಮತ್ತು ಅಮೃತ ತುಂಬಿದ ಎರಡು ಕುಂಭಗಳು. ಈ ಚಿತ್ರದ ಪ್ರಾಣಿಯ ದೇಹಕ್ಕೆ ಕೆಳಗಡೆ ಚಿತ್ರಿಸಿದ ಸಿಂಹ, ಚಿರತೆ, ಆಕಳು, ಜಿಂಕೆಯ ಒಂದೊಂದು ಕಾಲುಗಳನ್ನು ಅದೇ ವರ್ಣದೊಂದಿಗೆ ಸಾಂಕೇತಿಕವಾಗಿ ಚಿತ್ರಿಸಿದ್ದು ಈ ನಾಲ್ಕೂ ಪ್ರಾಣಿಗಳು ಹೆಣ್ಣಾಗಿರುವುದರ ಸಂಕೇತವೆಂಬಂತೆ ಈ ಪ್ರಾಣಿಗೆ ನಾಲ್ಕು ಮೊಲೆಗಳನ್ನು ಹಾಗೂ ಹಿಂದುಗಡೆ ಸೀರೆಯನ್ನು ಮಾಡಲಾಗಿದೆ. ಬಲಗಡೆಯಲ್ಲಿರುವ ವಿಷಪೂರಿತ ಹಾವಿನ ತಲೆ ಕೆಳಗಾಗಿರುವುದು. ಚೂರಿ ಚುಚ್ಚಿದಂತೆ ತೋರಿಸಿದ್ದು, ಹಿಂದಿನ ಬಲಗೈಯಲ್ಲಿ ವಿಷವನ್ನು ತುಂಬಿಕೊಂಡಿರುವ ಕುಂಭವನ್ನು ನೋಡುತ್ತಿರುವ ದೃಶ್ಯ, ಜೀವಿಯ ಅಧೋಗತಿಯನ್ನು ತೋರಿಸುತ್ತದೆ. ಹಾಗೂ ಎಡಗಡೆಯಲ್ಲಿ ಪ್ರಾಣಿಯ ಬೆನ್ನು ಮೇಲ್ಗಡೆ ಇರುವ ಮಹಿಳೆಯ ಮುಖವು ಮುಂದಿನ ಎಡಗೈಯಲ್ಲಿರುವ ತಾಳೆಗರಿ ಉದ್ಧರಣಿ ಗ್ರಂಥದಿಂದಾಗಿ ಮಹಿಳೆಯು ಊರ್ಧ್ವಮುಖವಾಗಿ ಬೆಳೆಯುತ್ತಿರುವ ಹಿನ್ನೆಲೆಯಲ್ಲಿ ಹಿಂದಿನ ಎಡಗೈಯಲ್ಲಿರುವ ಕುಂಭವು ಅಮೃತ ತುಂಬಿಕೊಂಡಿರುವುದು, ಅಧೋಮುಖಿಯಾದ ಜೀವಿಯ ಸುಖ ದುಃಖಗಳನ್ನು ಸಂಕೇತಪ್ರಧಾನವಾಗಿ ಚಿತ್ರಿಸಲಾಗಿದೆ. ಆಕಾರ, ಆಕೃತಿಗಳು ಪ್ರಮಾಣಬದ್ಧವಾಗಿ ಮೂಡಿಬಂದಿದ್ದು, ಆಕರ್ಷಕವಾದ ವರ್ಣವನ್ನು ಬಳಸಲಾಗಿದೆ.

**ಕನ್ನಡ ವಿಶ್ವವಿದ್ಯಾಲಯ, ಹಂಪಿಯಲ್ಲಿ ದೊರೆತ ಚಿತ್ರ : ೨೧.೨ :**

ಕಾಗದದ ಮೇಲೆ ಜಲವರ್ಣದಿಂದ "ಅಧೋಕುಂಡಲಿನಿ ಚಿತ್ರ"ವನ್ನು ರಚಿಸಲಾಗಿದೆ. ಗೋಲಾಕಾರದ ಮಧ್ಯದಲ್ಲಿರುವ ಜಿಂಕೆಯ ಮುಖ, ಮಹಿಳೆಯ ಮತ್ತು ಪ್ರಾಣಿಯ ದೇಹವನ್ನು ಬಿಳಿಯ ವರ್ಣದಲ್ಲಿ ಚಿತ್ರಿಸಿದ್ದು, ಹಸಿರುವರ್ಣದ ರವಿಕೆ, ಹಳದಿವರ್ಣದ ಸೀರೆ, ಕೆಂಪು ವರ್ಣದ ಅಂಚನ್ನು ಚಿತ್ರಿಸಲಾಗಿದೆ. ಕೊರಳಿಗೆ ಕಪ್ಪು ವರ್ಣದ ಆಭರಣಗಳನ್ನು ಮಾಡಲಾಗಿದೆ. ಇದರಲ್ಲಿ ಹಾವನ್ನು ಪ್ರತ್ಯೇಕವಾಗಿ ಚಿತ್ರಿಸಲಾಗಿದೆ. ಎರಡು ಕುಂಭಗಳು, ಕಂಠ ಮತ್ತು ಹಸ್ತಪ್ರತಿಗಳಿವೆ. ಕೆಳಗಡೆಯಲ್ಲಿ ಸಿಂಹ, ಚಿರತೆ, ಆಕಳು, ಜಿಂಕೆಗಳನ್ನು ರಚಿಸಲಾಗಿದೆ. ಚಿತ್ರದ ಹಿನ್ನೆಲೆಯಲ್ಲಿ ಕಪ್ಪುವರ್ಣದಲ್ಲಿ ರೇಖಾಚಿತ್ರ (ಡ್ರಾಯಿಂಗ್)ವನ್ನು ಮಾಡಿದ್ದು, ಬಿಳಿಯ ವರ್ಣದ ಚೌರಸ ರೇಖೆಗಳನ್ನು ಉಳಿಸಿಕೊಳ್ಳಲಾಗಿದೆ. ಜಿಂಕೆಯ ಮುಖದ ಹಿಂದುಗಡೆ ವಿಪರೀತವಾದ ಹಸಿರುಎಲೆ, ಕೆಂಪು ಹಳದಿವರ್ಣದ ಹೂವುಗಳನ್ನು ರಚಿಸಲಾಗಿದೆ. ಒಟ್ಟಾರೆ ಈ ಮಿಶ್ರ ಮಾಧ್ಯಮದ ಚಿತ್ರವು ಪ್ರಮಾಣಬದ್ಧವಲ್ಲದ, ವರ್ಣ ಸಾಮರಸ್ಯವಿಲ್ಲದಂತೆ ಕಲಾಕೃತಿಯನ್ನು ರಚಿಸಲಾಗಿದೆ.

**ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿಯ ಚಿತ್ರ : ೨೧.೩ :**

ಕಾಗದದ ಮೇಲೆ ಜಲವರ್ಣದಿಂದ ಈ "ಅಂಧೋಕುಂಡಲಿನೀ ಚಿತ್ರ"ವನ್ನು ಚಿತ್ರಿಸಲಾಗಿದೆ. ಜಿಂಕೆಯ ಮುಖ ಮಹಿಳೆಯ ಮತ್ತು ಪ್ರಾಣಿಯ ದೇಹವನ್ನು ಕೆಂಪು ವರ್ಣದಲ್ಲಿ ಚಿತ್ರಸಲಾಗಿದೆ. ತಿಳಿನೀಲಿ ವರ್ಣದ ರವಿಕೆ. ಮೈಗೆ ಸುತ್ತಿಕೊಂಡಿರುವ ಹಾವು, ಜಿಂಕೆಯ ತಲೆಯ ಹಿಂದುಗಡೆ ಬಾಲ ಕಾಲುಗಳ ಮಧ್ಯದಲ್ಲಿ ತಲೆಯನ್ನು ಮಾಡಲಾಗಿದೆ. ಮುಂದಿನ ಎರಡೂ ಕಾಲುಗಳಿಗೆ ಹಾವು ಸುತ್ತಿಕೊಂಡಂತಿದ್ದು, ಈ ಪ್ರಾಣಿದೇಹದ ಮಧ್ಯದಲ್ಲಿ ಮಹಿಳೆಯ ಸೊಂಟದ ಕೆಳಗಿನ ಭಾಗ ಮಾಡಿದ್ದು, ಹಸಿರುಸೀರೆ, ಹಳದಿವರ್ಣದ ಅಂಚನ್ನು ಮಾಡಲಾಗಿದೆ. ಕೆಂಪುವರ್ಣದ ಕಾಲನ್ನು ತೋರಿಸಿದ್ದು, ಆಕಳಿನ ಬೆನ್ನ ಮೇಲೆ ಬಾಲವನ್ನು ಹಾವಿನ ಹಾಗೆ ತೋರಿಸಲಾಗಿದೆ. ಹಿಂದಿನ ಎರಡೂ ಕೈಗಳಲ್ಲಿ ಕುಂಭಗಳು ಹಳದಿವರ್ಣದಲ್ಲಿವೆ. ಅವುಗಳ ಮೇಲ್ಗಡೆ ಎಡಬಲಗಳಲ್ಲಿ ಪುರುಷನ ಹಳದಿವರ್ಣದ ಮುಖಗಳಿರುವುದೂ ವಿಶೇಷವಾಗಿದೆ. ಕೆಳಗಡೆ ಜಿಂಕೆಗೆ ಕೆಂಪುವರ್ಣವಿದ್ದು, ಹುಲಿ, ಆನೆ, ಆಕಳು, ಮೀನಗಳನ್ನು ಹಳದಿವರ್ಣದಲ್ಲಿ ತೋರಿಸಲಾಗಿದೆ. ಅದರ ಕೆಳಗಡೆ ನೀರನ್ನು ನೀಲಿಮಿಶ್ರಿತ ಕಪ್ಪು ವರ್ಣದಲ್ಲಿ ತೋರಿಸಿದ್ದು, ಮೀನುಗಳು ಈಜುತ್ತಿರುವಂತೆ ಚಿತ್ರಿಸಲಾಗಿದೆ. ರೇಖಾಚಿತ್ರವಾಗಲಿ, ವರ್ಣಗಾರಿಕೆಯಾಗಲಿ ಅಷ್ಟೊಂದು ಸಫಲವಾಗಿಲ್ಲವಾದರೂ ತಾತ್ವಿಕ ದೃಷ್ಟಿಯಿಂದ ಪರವಾಗಿಲ್ಲವೆಂದೇ ಹೇಳಬಹುದಾಗಿದೆ.

**ಧರ್ಮಸ್ಥಳದಲ್ಲಿ ದೊರೆತ ಚಿತ್ರ : ೨೧.೪ :**

ಈ "ಅಧೋಕುಂಡಲಿನೀ ಉದ್ಧರಣಿ ಚಿತ್ರ"ವನ್ನು ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ಮೇಲಿನ ಕಾಲುಭಾಗದಲ್ಲಿ ಅಲಂಕಾರಿಕ ರಥವನ್ನು ಚಿತ್ರಿಸಲಾಗಿದ್ದು, ವಿಶೇಷವಾಗಿ ರಥದ ಮೂರೂ ಕಮಾನುಗಳಲ್ಲಿ ಕೆಂಪುವರ್ಣದಲ್ಲಿ ಮೂವರು ವ್ಯಕ್ತಿಗಳಿರುವರು. ಈ ರಥದ ಎಡಬಲಗಳಲ್ಲಿ ಸಿಂಹದ ಚಿತ್ರವನ್ನು ಚಿತ್ರಿಸಲಾಗಿದೆ.

ಕೆಳಗಿನ ಭಾಗದಲ್ಲಿ ಎಡಬಲಗಳಲ್ಲಿ ಅಲಂಕಾರಿಕ ಕಂಬಗಳಿವೆ. ಅದರ ಮಧ್ಯದಲ್ಲಿ ಅರ್ಧ ವೃತ್ತಾಕಾರದ ಕಂದುಗೆಂಪು ವರ್ಣದ ಹಿನ್ನೆಲೆಯಲ್ಲಿ ಅಧೋಕುಂಡಲೀ ಚಿತ್ರವನ್ನು ಚಿತ್ರಿಸಲಾಗಿದೆ. ಕೆಂಪುವರ್ಣದ ಜಿಂಕೆಯ ಮುಖ ಮಹಿಳೆಯ ದೇಹ ಕೇಸರಿವರ್ಣದ ಪ್ರಾಣಿ ದೇಹವಿದ್ದು, ಇದರ ನಾಲ್ಕೂ ಕಾಲುಗಳು ಬೇರೆ ಬೇರೆ ವರ್ಣದಲ್ಲಿದ್ದು, ಈ ಪ್ರಾಣಿಯ ಮೊಲೆಯಿಂದ ಮೀನು ಹಾಲನ್ನು ಹೀರುತ್ತಿರುವಂತಿದೆ. ಈ ಪ್ರಾಣಿಯ ಬಾಲವನ್ನು ಹಾವಿನಿಂದ ರಚಿಸಿದ್ದು, ಅದು ಕೆಳಮುಖವಾಗಿ ಮುಂದಿನ ಕಾಲುಗಳ ನಡುವೆ ಇದೆ. ಭರ್ಚಿಯೊಂದು ಹಾವಿನ ತಲೆಗೆ ತಾಗಿದಂತೆ ಇದೆ. ಕಾಲುಗಳ ಎಡಬಲಗಳಲ್ಲಿ ನೀಲಿವರ್ಣದ ಎರಡು ಪುರುಷಮುಖಗಳಿವೆ. ಮುಂದಿನ ಎಡಗೈಯಲ್ಲಿರುವ ಪುಸ್ತಕದಲ್ಲಿ ಬಲಗೈಯಲ್ಲಿರುವ ಕಂಠದಿಂದ ಬರೆಯುತ್ತಿರುವಂತೆ ಚಿತ್ರಿಸಲಾಗಿದ್ದು, ವಿಶೇಷವಾಗಿದೆ. ಈ ಅರ್ಧ ವೃತ್ತಾಕಾರದ ಹೊರಭಾಗದಲ್ಲಿ ಕಪ್ಪು ನೀಲಿವರ್ಣವನ್ನು ತುಂಬಲಾಗಿದ್ದು, ಅದರಲ್ಲಿ ಜಲಚರಪ್ರಾಣಿಯನ್ನು ತೋರಿಸಲಾಗಿದೆ. ಏಡಿ, ಮೀನು, ಹಾವು ಮುಂತಾದವುಗಳನ್ನು ಹಳದಿವರ್ಣದಲ್ಲಿ ತೋರಿಸಲಾಗಿದೆ.

**ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರಿನಲ್ಲಿ ದೊರೆತ ಚಿತ್ರ : ೨೧.೫ :**

ಕಾಗದದ ಮೇಲೆ ಜಲವರ್ಣದಲ್ಲಿ ಚಿತ್ರಿಸಲಾಗಿದೆ. ಮಾಡಿನಾಕಾರದ ಕಮಾನನ್ನು ಕೆಂಪುವರ್ಣದಲ್ಲಿ ರಚಿಸಲಾಗಿದ್ದು, ಅದರ ಹಿನ್ನೆಲೆಗೆ ಹಸಿರುವರ್ಣವನ್ನು ತುಂಬಿ "ಅಧೋಕುಂಡಲೀ ಚಿತ್ರ"ವನ್ನು ಬರೆಯಲಾಗಿದೆ. ಈ ಚಿತ್ರದಲ್ಲಿ ವಿಶೇಷವಾಗಿ ಪ್ರಾಣಿಯ ಮೇಲೆ ಕುಳಿತಿರುವಂತೆ ಮಹಿಳೆಯನ್ನು ಚಿತ್ರಿಸಲಾಗಿದೆ. ಕಂದುಗೆಂಪು ವರ್ಣದಿಂದ ಜಿಂಕೆಯ ಮುಖ ಮಹಿಳೆಯ ಮತ್ತು ಪ್ರಾಣಿದೇಹವನ್ನು ತುಂಬಲಾಗಿದ್ದು, ಹಸಿರು ರವಿಕೆ, ಕೆಂಪುಸೀರೆಯನ್ನು ಧರಿಸಿದ್ದು, ಹಳದಿವರ್ಣದ ಬಾಲವನ್ನು ಹಾವಿನ ಹಾಗೆ ಚಿತ್ರಿಸಲಾಗಿದೆ. ಅದು ಮುಖವನ್ನು ಕೆಳಗೆ ಮೂಡಿಕೊಂಡಿದೆ. ಹಿಂದಿನ ಎರಡೂ ಕೈಗಳಲ್ಲಿ ಕುಂಭಗಳನ್ನು, ಹಳದಿ ವರ್ಣದಲ್ಲಿ ರಚಿಸಿದ್ದು ಮುಂದಿನ ಬಲಗೈಯಲ್ಲಿರುವ ಕಂಠದಿಂದ ಕೆಳಗಡೆ ಇರುವ ಕಂದುಗೆಂಪು ವರ್ಣದ ಪುರುಷಮುಖವೊಂದಕ್ಕೆ ತಿವಿಯುತ್ತಿರುವಂತಿದೆ. ಎಡಗೈಯಲ್ಲಿ ಪುಸ್ತಕವನ್ನು ಹಿಡಿದುಕೊಳ್ಳಲಾಗಿದೆ. ಅದರ ಬದಿಯಲ್ಲಿ ಇನ್ನೊಂದು ಕಂದುಗೆಂಪು ವರ್ಣದ ಪುರುಷ ಮುಖವೊಂದಿದೆ. ಕಾಲುಕೆಳಗಡೆಯಲ್ಲಿ ಮೂರು ಪ್ರಾಣಿಗಳನ್ನು ಮಾಡಲಾಗಿದ್ದು ಸ್ಪಷ್ಟವಾಗಿ ಗೊತ್ತಾಗುತ್ತಿಲ್ಲ. ಒಟ್ಟಾರೆ ಅಧೋಕುಂಡಲಿನಿ ಚಿತ್ರ ಸುಂದರವಾಗಿ ಮೂಡಿಬಂದಿದೆ.

**ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಲ್ಲಿಯ ಚಿತ್ರ : ೨೧.೬ :**

ಈ "ಅಧೋಕುಂಡಲಿನೀ ಚಿತ್ರ"ವನ್ನು ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ಕಾಗದದ ಮಧ್ಯದಲ್ಲಿ ಲಿಂಗುವಿನಾಕಾರದಲ್ಲಿ ಕೆಂಪು ವರ್ಣವನ್ನು ತುಂಬಿ, ಅದರ ಮಧ್ಯದಲ್ಲಿ ಜಿಂಕೆಯ ಮುಖ, ಮಹಿಳೆಯ ದೇಹಕ್ಕೆ ಹಳದಿ ವರ್ಣವನ್ನು ತುಂಬಲಾಗಿದೆ. ವಿಶೇಷವಾಗಿ ಇಲ್ಲಿ ಪ್ರಾಣಿಯನ್ನು ಹಿನ್ನೆಲೆಯಲ್ಲಿ ಪೂರ್ಣವಾಗಿ ಚಿತ್ರಿಸಲಾಗಿದೆ. ಚಿಗರೆಯ ಕೋಡು, ಸಿಂಹದ ಮುಖ, ಹುಲಿಯ ದೇಹವನ್ನು ಚಿತ್ರಿಸಲಾಗಿದೆ. ಇದಕ್ಕೂ ಹಳದಿ ವರ್ಣವನ್ನು ತುಂಬಲಾಗಿದೆ. ಮಹಿಳೆಯ ರವಿಕೆಯನ್ನು ಕಪ್ಪು ಹಸಿರು ವರ್ಣದಲ್ಲಿ ರಚಿಸಿ ತಿಳಿ ಹಸಿರುವರ್ಣದ

ರೇಖೆಗಳನ್ನು ಹಾಕಲಾಗಿದೆ. ತಿಳಿಹಸಿರು ಸೀರೆಗೆ ಹಳದಿ ವರ್ಣದ ರೇಖೆಗಳನ್ನು ಎಳೆಯಲಾಗಿದೆ. ಹಿಂದಿನ ಎರಡೂ ಕೈಗಳಲ್ಲಿ ನೀಲಿವರ್ಣದ ಕುಂಭಗಳಿದ್ದು, ಎರಡೂ ಭುಜಗಳಿಗೆ ತಾಗುವಂತೆ ನೀಲಿವರ್ಣದ ಎರಡು ಮುಖಗಳಿವೆ. ಜಿಂಕೆಯ ಕೋಡುಗಳ ತುದಿಯಿಂದ ಹಾವಿನ ಬಾಲವಿದ್ದು ಕೆಳಗೆ ಮುಖ ಮಾಡಿಕೊಂಡು ಮೊಳಕಾಲದ ವರೆಗೆ ಬಂದಿದೆ. ಕಾಲುಗಳ ಕೆಳಗಡೆಯಲ್ಲಿ ನಾಲ್ಕು ಪ್ರಾಣಿಗಳನ್ನು ಬರೆಯಲಾಗಿದೆ. ಈ ಕೆಂಪು ಹಿನ್ನೆಲೆಯ ಲಿಂಗದಾಕಾರದ ಸುತ್ತಲೂ ನೀಲಿವರ್ಣವನ್ನು ತುಂಬಿದ್ದು, ಅದರಲ್ಲಿ ಹಾವು, ಆನೆ, ಮೀನುಗಳಲ್ಲದೆ ಮೇಲೆ ಎರಡು ಪ್ರಾಣಿಗಳನ್ನು ಚಿತ್ರಿಸಲಾಗಿದೆ. ಒಟ್ಟಾರೆ ಈ ಚಿತ್ರದಲ್ಲಿ ಆಕಾರ, ಆಕೃತಿಗಳ ಪ್ರಮಾಣದಲ್ಲಿ ಸೊರಗಿದ್ದರೂ ವರ್ಣಗಾರಿಕೆಯಲ್ಲಿ ಉತ್ತಮವಾಗಿ ಮೂಡಿಬಂದಿವೆ.

## ೨೨. ಊರ್ಧ್ವಕುಂಡಲಿ ಶಕ್ತಿ ಉದ್ಧರಣೆ ಚಿತ್ರ

**ವಾಚ್ಯ, ವಸ್ತು, ವಿಷಯ:**

ಅಕಾಲ ಮಾಯೆ, ಮೋಹ, ಜೀವಜನ ಸರ್ವಾಕಾರವಳಿದು ನಿತ್ಯನಿರ್ಣಯ ನಿರ್ಮೋಹ, ಸಜೀವ ಸುಜನ ಸತ್ತ್ರಣವಾಕಾರವಾದ ಸ್ವರೂಪ ಲಕ್ಷಣ ಸಂಬಂಧವೆಂತೆನಲು[೫೯] ಎಂದು ಪ್ರಾರಂಭವಾಗಿದೆ. ಸಂಸ್ಕೃತದ ಪದ ಊರ್ಧ್ವ ಎಂದರೆ ಮೇಲಕ್ಕೆತ್ತು, ಎತ್ತರಕ್ಕೆ, ಉನ್ನತಕ್ಕೆ ಎಂದರ್ಥ. ಅಂದರೆ ಮನುಷ್ಯನು ಭವಬಂಧನದಿಂದ ಮುಕ್ತಿ ಹೊಂದಿ ಮೇಲಕ್ಕೇರಿ ಶಿವಯೋಗ ಸಾಧಕನಾಗಿ ಮುಕ್ತಿಹೊಂದುವ ಹಂತವನ್ನು ತಿಳಿಸುವುದು. ಅಧೋಕುಂಡಲಿನಿಯಲ್ಲಿ ಹೇಳಿರುವ ಜೀವಿಗಳ, ಪ್ರಾಣಿಗಳ ಸಂಕೇತದ ಮೂಲಕ ಅಧೋಗತಿಯನ್ನು ತೋರಿಸಿದ ಹಾಗೆ ಈ ಊರ್ಧ್ವಕುಂಡಲಿನೀ ಉದ್ಧರಣೆಯಲ್ಲಿ ಅದೇ ರೀತಿಯ ಪ್ರಾಣಿಗಳ ಸಂಕೇತಗಳನ್ನಿಟ್ಟುಕೊಂಡು ಊರ್ಧ್ವಮುಖಕ್ಕೆ ಅಂದರೆ ಉನ್ನತಿಗೆರುವ ಮಾರ್ಗಗಳನ್ನು ತಿಳಿಸಲಾಗಿದೆ. ಕ್ಷಣಿಕವಾದ ಮಾಯಾಮೋಹ ಜೀವವು ಸರ್ವಕಾಲದಲ್ಲಿ ಇಲ್ಲವಾಗಿ ನಿತ್ಯ ನಿರ್ಮಲತ್ವದಿಂದ ಮೋಹವಳಿದು ಒಳ್ಳೆಯ ಜೀವವಾಗಿ ಒಳ್ಳೆಯ ಜನರೊಡನೆ ಒಳ್ಳೆಯ ಸ್ವರೂಪದಿಂದ ಇರುವುದನ್ನು ಹೇಳಲಾಗಿದೆ. ಈ ಕುರಿತು ವಿವರವನ್ನು ಅನುಬಂಧದಲ್ಲಿ ನೋಡಬಹುದಾಗಿದೆ.

*** ಉದ್ಧರಣೆ ಸಾಹಿತ್ಯದಲ್ಲಿಯ ಚಿತ್ರ : ೨೨.೧ :**

ಈ "ಊರ್ಧ್ವ ಕುಂಡಲಿ ಉದ್ಧರಣೆ ಚಿತ್ರವನ್ನು ಕಾಗದದ ಮೇಲೆ ಜಲವರ್ಣದಿಂದ ರಚಿಸಲಾಗಿದೆ. ಚಿತ್ರಕಲೆಯ ದೃಷ್ಟಿಯಿಂದ ಈ ಚಿತ್ರವು ವಿಶಿಷ್ಟವಾಗಿ ರೂಪಗೊಂಡಿದೆ. ಸಂಯೋಜನಾ ದೃಷ್ಟಿಯಿಂದಲೂ ಸಂಕೇತ ಪ್ರಧಾನವಾಗಿ ತಾತ್ವಿಕ ಹಿನ್ನೆಲೆಯಲ್ಲಿ ರೂಪುಗೊಂಡಿದೆ.

ಈ ಉದ್ಧರಣೆ ಚಿತ್ರದ ಮೇಲಿನ ಕಾಲು ಭಾಗದಲ್ಲಿ ಅಡ್ಡವಾಗಿ ಜಲವನ್ನು ತೋರಿಸಲಾಗಿದ್ದು, ನೀಲಿಮಿಶ್ರಿತ ಕೆಂಪು ವರ್ಣವನ್ನು ತುಂಬಲಾಗಿದ್ದು, ಈ ಜಲನಿರ್ಮಿತ ಭಾಗದಲ್ಲಿ ಜಲಚರ ಪ್ರಾಣಿಗಳನ್ನು ಸೃಷ್ಟಿಸಲಾಗಿದೆ.

---

೫೯. ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು : ಶಿವಾನುಭವಶಾಸ್ತ್ರ : ಪುಟ ೬೨

ಇದರಲ್ಲಿ ಕಪ್ಪೆ, ಮೀನು, ಹಾವು, ಏಡಿ, ಆಮೆಗಳನ್ನು ರಚಿಸಲಾಗಿದೆ. ಈ ಜಲಚರ ಪ್ರಾಣಿಗಳು ಹಾಗೂ ಜಲವು ಚಲಿಸುವಂತೆ ಏರಿಳಿತಗಳನ್ನು ತೋರಿಸುವ ಪ್ರಯತ್ನ ಚೆನ್ನಾಗಿ ಮೂಡಿಬಂದಿದೆ.

ಕೆಳಗಡೆ ಭಾಗದಲ್ಲಿ ಕಾಡಿನ ರಾಜನಾದ ಸಿಂಹವು ಧರ್ಮದ ಸಂಕೇತವೆಂತಲೋ ಪ್ರಾಣಿಗಳ ಅಧಿಪತಿಯೆಂತಲೋ ತ್ರಿಶೂಲದಂತಹ ದಂಡವೊಂದನ್ನು ಮುಂದಿನ ಒಂದು ಕೈಯಲ್ಲಿ ಹಿಡಿದುಕೊಂಡು ಎದುರುಗಡೆ ನೋಡುತ್ತ ಚಲಿಸುತ್ತಿದೆ. ಅದರ ಹಿಂದುಗಡೆ ಚಿರತೆ, ಆಕಳುಗಳು ಒಂದರ ಹಿಂದೊಂದರಂತೆ ಚಲಿಸುತ್ತಿದ್ದರೆ, ಇವುಗಳ ವಿರುದ್ಧ ದಿಕ್ಕಿನಲ್ಲಿ ಜಿಂಕೆಯು ತನ್ನೆರಡೂ ಮುಂದಿನ ಕಾಲುಗಳನ್ನು ಮೇಲೆತ್ತಿಕೊಂಡು ಓಡುತ್ತಿದೆ. ಹಳದಿವರ್ಣದ ಸಿಂಹಕ್ಕೆ ಕೆಂಪು ಮತ್ತು ನೀಲಿವರ್ಣಗಳ ಪಟ್ಟಿಯನ್ನು ಹಾಕಲಾಗಿದೆ. ಹಿಂದಿನ ಚಿರತೆಯು ಬಿಳಿವರ್ಣದಲ್ಲಿದ್ದು, ಕೆಂಪು ಮತ್ತು ನೀಲಿ ವರ್ಣಗಳ ಚುಕ್ಕೆಗಳನ್ನು ಇಡಲಾಗಿದೆ. ಕಂದುಗೆಂಪು ವರ್ಣದ ಆಕಳು, ಹಳದಿ ವರ್ಣದ ಜಿಂಕೆಗೆ ಕಂದುಗೆಂಪು ವರ್ಣದ ಚುಕ್ಕೆಗಳನ್ನು ಮಾಡಲಾಗಿದೆ.

ಮಧ್ಯದ ಪ್ರಮುಖ ಭಾಗದಲ್ಲಿ ದೊಡ್ಡದಾದ ಊರ್ಧ್ವ ಕುಂಡಲಿನಿಯ ಚಿತ್ರವನ್ನು ರಚಿಸಲಾಗಿದೆ. ಜಿಂಕೆಯ ಕಂದುಗೆಂಪು ವರ್ಣದ ಮುಖ, ಮಹಿಳೆಯ ಹಳದಿ ವರ್ಣದ ದೇಹವನ್ನು ರಚಿಸಿದ್ದು ಪ್ರಾಣಿಯ ದೇಹಭಾಗಕ್ಕೆ ಹಳದಿ ಮಿಶ್ರಿತ ಕೆಂಪು ವರ್ಣವನ್ನು ಬಳಿಯಲಾಗಿದೆ. ಪ್ರಾಣಿಯ ಕಾಲುಗಳನ್ನು ಕೆಳಗಿರುವ ಹುಲಿ, ಚಿರತೆ, ಆಕಳು, ಜಿಂಕೆಗಳ ಒಂದೊಂದು ಕಾಲುಗಳನ್ನು ವರ್ಣ ಸಮೇತ ಮೇಲಿನ ಪ್ರಾಣಿಗೆ ಅಂಟಿಸಲಾಗಿದೆ, ಮಹಿಳೆಯ ರವಿಕೆಗೆ ನೀಲಿ ಮಿಶ್ರಿತ ಕೆಂಪು ವರ್ಣವನ್ನು ತುಂಬಲಾಗಿದೆ. ಸೊಂಟದ ಕೆಳಗಿರುವ ಸೀರೆಯ ಹಸಿರು ವರ್ಣದಲ್ಲಿ ಪ್ರಾಣಿಯ ಹಿಂದಿನ ಬದಿಯಲ್ಲೂ ತೋರಿಸಲಾಗಿದ್ದು, ಕಪ್ಪು ವರ್ಣದ ಉದ್ದ ಗೆರೆಗಳನ್ನು ಬರೆಯಲಾಗಿದೆ. ಹಳದಿ ಮತ್ತು ಕೆಂಪು ಅಂಚುಗಳ ಪಟ್ಟಿಯನ್ನು ಸೀರೆಯ ಉದ್ದಕ್ಕೂ ಹಾಕಲಾಗಿದೆ. ಹಳದಿ ವರ್ಣದ ಕೊರಳ ಸರ, ಮೂಗುತಿ, ಕಿವಿಯೋಲೆಗಳನ್ನು ಮಾಡಲಾಗಿದೆ. ಹಿಂದಿನ ಎರಡೂ ಕೈಗಳಲ್ಲಿ ಕುಂಭಗಳನ್ನು ರಚಿಸಲಾಗಿದ್ದು, ಕೆಂಪು ವರ್ಣವನ್ನು ತುಂಬಲಾಗಿದೆ. ಚಿಗರೆಯ ಕೋಡುಗಳ ಎಡ ಬಲ ಭಾಗದಲ್ಲಿ ಕಂದುಗೆಂಪು ವರ್ಣದ ಮುಖಗಳಿದ್ದು, ಬಲಗೈಯಲ್ಲಿ ಕಂಠ ಹಾಗೂ ಎಡಗಡೆಯ ಕೈಯಲ್ಲಿ ಹಸ್ತಪ್ರತಿಯೊಂದನ್ನು ಹಿಡಿದಿರುವಳು. ಬಲಗೈಗೆ ತಾಗುವಂತೆ ಚೂರಿಯನ್ನು ಚಿತ್ರಿಸಲಾಗಿದೆ. ಪ್ರಾಣಿಯ ಬಾಲವು ಹಾವಾಗಿ ಬೆನ್ನ ಮೇಲಿಂದ ಮಹಿಳೆಯ ಬೆನ್ನ ಹಿಂದೆ ಹೋಗಿ ಜಿಂಕೆಯ ತಲೆಯ ಮೇಲೆ ಮುಖವನ್ನು ಮುಂದೆ ಮಾಡಿದೆ. ಮಹಿಳೆಯ ಕೈ, ಕಾಲುಗಳಲ್ಲಿ ಆಭರಣಗಳನ್ನು ಮಾಡಲಾಗಿದೆ. ಒಟ್ಟಾರೆ ಈ ಚಿತ್ರವು ಆಕಾರ, ಗಾತ್ರ, ಪ್ರಮಾಣ ವರ್ಣಗಾರಿಕೆಯ ದೃಷ್ಟಿಯಿಂದಲೂ ಉತ್ತಮವಾಗಿ ಮೂಡಿಬಂದಿದೆ.

*** ಕ.ವಿ.ವಿ. ಹಂಪಿಯಲ್ಲಿಯ ಚಿತ್ರ : ೨೨.೨ :**

ಕಾಗದದ ಮೇಲೆ ಜಲವರ್ಣದಲ್ಲಿ "ಊರ್ಧ್ವ ಕುಂಡಲಿನಿ"ಯ ಚಿತ್ರವನ್ನು ಮಿಶ್ರಮಾಧ್ಯಮದಲ್ಲಿ ಚಿತ್ರಿಸಲಾಗಿದೆ. ಮಧ್ಯದಲ್ಲಿರುವ ಈ ಚಿತ್ರವು ಬದಿಯ ನೋಟವನ್ನು ಸೂಚಿಸುತ್ತಿರುವುದು ವಿಶೇಷವಾಗಿದೆ. ಬಲಗಡೆಗೆ

ಹೊರಟಂತಿರುವ ಈ ಚಿತ್ರದ ಜಿಂಕೆಯ ಮುಖ, ಮಹಿಳೆಯ ದೇಹ, ಪ್ರಾಣಿಯ ದೇಹ ಹಾಳೆಯ ಬಿಳಿಯ ವರ್ಣವನ್ನೇ ಉಳಿಸಿಕೊಂಡಿದ್ದು, ನೀಲಿಯ ರವಿಕೆಗೆ ಕೆಂಪುವರ್ಣದ ಅಂಚನ್ನು ಮಾಡಲಾಗಿದೆ. ಬಿಳಿಯ ಸೀರೆಗೆ ಕೆಂಪುವರ್ಣದ ಅಂಚನ್ನು ಮಾಡಿದ್ದು, ಬಿಳಿಯ ಸೀರೆಯಲ್ಲಿ ಕಪ್ಪು ಚುಕ್ಕೆಗಳನ್ನು ಮಾಡಿ ಅಲಂಕರಿಸಲಾಗಿದೆ. ಹಳದಿವರ್ಣದ ಸೆರಗನ್ನು ತೋರಿಸಲಾಗಿದೆ. ಮಹಿಳೆಯ ನಾಲ್ಕೂ ಕೈಗಳು ಬಲಗಡೆಯಲ್ಲಿ ತೋರಿಸಿದ್ದು, ಕೈಗಳಲ್ಲಿರುವ ಕುಂಭವು ಹಿನ್ನೆಲೆಯ ಡ್ರಾಯಿಂಗ್ ಮಾಡಿದ ಕಪ್ಪು ವರ್ಣದಲ್ಲಿ ಮುಚ್ಚಿಕೊಂಡಿವೆ. ಮೂಗುತಿ, ಕಿವಿಯೋಲೆ, ಕೊರಳಲ್ಲಿಯ ಆಭರಣಗಳನ್ನು ಕಪ್ಪುವರ್ಣದಲ್ಲಿ ಮಾಡಿದ್ದುದು ಕಂಡುಬರುತ್ತದೆ. ಎದುರಿನಲ್ಲಿ ಹಾವು ಹೆಡೆ ಎತ್ತಿಕೊಂಡು ಕುಳಿತಿರುವುದನ್ನು ತೋರಿಸಲಾಗಿದೆ. ಜಿಂಕೆಯ ಮುಖದ ಹಿನ್ನೆಲೆಯಲ್ಲಿ ಹಳದಿ, ಕೆಂಪುವರ್ಣದ ಹೂವುಗಳನ್ನು ಚಿತ್ರಿಸಲಾಗಿದೆ. ಷಡ್ಭುಜಾಕೃತಿಯ ಹಿನ್ನೆಲೆಯನ್ನು ಕಪ್ಪುರೇಖೆಗಳಿಂದ ತುಂಬಿದ್ದು, ಬಿಳಿಯ ಚೌರಸ ರೇಖೆಗಳು ಕಂಡುಬರುತ್ತವೆ. ಈ ಚಿತ್ರದ ಆಕಾರ, ಆಕೃತಿ, ವರ್ಣಗಾರಿಕೆಯಲ್ಲಿ ಅಷ್ಟೊಂದು ಸೂಕ್ಷ್ಮತೆ, ಪ್ರಬುದ್ಧತೆಗಳು ಕಂಡುಬರುವುದಿಲ್ಲವಾದರೂ, ಮಿಶ್ರಮಾಧ್ಯಮದಲ್ಲಿ ಮಾಡಿರುವುದು ರೇಖಾಪ್ರಧಾನವಾಗಿ ತಾತ್ವಿಕ ಅಂಶಗಳನ್ನು ಉಳಿಸಿಕೊಂಡು ಚಿತ್ರಿಸಿದ್ದನ್ನು ಗಮನಿಸಬಹುದಾಗಿದೆ.

*** ಗು.ವಿ.ವಿ. ಗುಲಬರ್ಗಾದಲ್ಲಿಯ ಚಿತ್ರ : ೨೨.೩ :**

"ಊರ್ಧ್ವ ಕುಂಡಲಿನೀ ಚಿತ್ರ"ವನ್ನು ಕಾಗದದ ಮೇಲೆ ಜಲವರ್ಣದಲ್ಲಿ ಚಿತ್ರಿಸಲಾಗಿದೆ. ಜಿಂಕೆಯ ಮುಖ, ಮಹಿಳೆಯ ದೇಹ ಮತ್ತು ಪ್ರಾಣಿ ದೇಹಗಳನ್ನು ಕೆಂಪು ವರ್ಣದಲ್ಲಿ ಚಿತ್ರಿಸಲಾಗಿದೆ. ತಿಳಿನೀಲಿ ವರ್ಣದ ರವಿಕೆಯನ್ನು ಕಪ್ಪು ಚುಕ್ಕೆಗಳಿಂದ ಅಲಂಕರಿಸಿದ್ದು, ಸೊಂಟದ ಮಧ್ಯದಿಂದ ಕೆಳಗೆ ಕಪ್ಪು ಬಟ್ಟೆಯನ್ನು ರಚಿಸಿದ್ದು, ಕೆಳಗಡೆ ಬಿಚ್ಚಿಕೊಂಡಿರುವ ಬಟ್ಟೆ ಅಂಚಿಗೆ ಹಳದಿ ಪಟ್ಟಿಯನ್ನು ಮಾಡಲಾಗಿದೆ. ಈ ಎರಡೂ ಪಾದಗಳ ಮೇಲೆ ಹೂವುಗಳನ್ನು ಮಾಡಲಾಗಿದೆ. ವಿಶೇಷವಾಗಿ ಪ್ರಾಣಿಯ ಮಧ್ಯದಲ್ಲಿ ಮಹಿಳೆಯ ಸೊಂಟದ ಕೆಳಗಿನ ಭಾಗವನ್ನು ತೋರಿಸಿದ್ದು ಹಳದಿವರ್ಣದ ಸೀರೆಯನ್ನು ಮಾಡಿ, ಅದರಲ್ಲಿ ಕಪ್ಪು ವರ್ಣದ ಕಾಲುಗಳನ್ನು ಮಾಡಲಾಗಿದೆ. ಹಳದಿ ವರ್ಣದ ಹಾವು ಜಿಂಕೆಯ ತಲೆಯ ಮೇಲೆ ಮುಖಮಾಡಿಕೊಂಡಿದ್ದು, ಎಡಬದಿಯಿಂದ ಬಲಬದಿಗೆ ಬಂದು ಮಹಿಳೆಯ ಸೊಂಟವನ್ನು ಸುತ್ತಿಕೊಂಡು ಪ್ರಾಣಿಯ ಬೆನ್ನು ಮೇಲಿನಿಂದ ಹಿಂದಿನವರೆಗೆ ಅದೇ ಬಾಲ ಅನ್ನುವಂತೆ ಚಿತ್ರಿಸಲಾಗಿದೆ. ಪ್ರಾಣಿಯ ಕೆಚ್ಚಲು ಮೊಲೆಗಳನ್ನು ಹಳದಿ ವರ್ಣದಲ್ಲಿ ತೋರಿಸಲಾಗಿದೆ. ಹಿಂದಿನ ಎರಡೂ ಕೈಗಳಲ್ಲಿ ಕುಂಭಗಳಿದ್ದು, ಮುಂದಿನ ಒಂದು ಕೈಯಲ್ಲಿ ಕಂಠ, ಇನ್ನೊಂದು ಕೈಯಲ್ಲಿ ಹಸ್ತಪ್ರತಿ ಇದೆ. ಚಿತ್ರದ ಮೇಲ್ಗಡೆಯ ಎಡಬಲಗಳಲ್ಲಿ ಹಳದಿ ವರ್ಣದ ಪುರುಷಾಕೃತಿಯ ಮುಖಗಳನ್ನು ತೋರಿಸಲಾಗಿದೆ. ಕೆಳಗಿನ ಕಾಲುಭಾಗದಲ್ಲಿ ಜಲವನ್ನು ಅಡ್ಡವಾಗಿ ತೋರಿಸಲಾಗಿದ್ದು, ಅದರಲ್ಲಿ ಜಲಚರ ಪ್ರಾಣಿಗಳನ್ನು ಏಡಿ, ಆಮೆ, ಮೀನುಗಳನ್ನು ಚಿತ್ರಿಸಲಾಗಿದೆ. ನೀರಿಗೆ ತಿಳಿನೀಲಿ ವರ್ಣವನ್ನು, ಜಲಚರ ಪ್ರಾಣಿಗಳನ್ನು ಕಪ್ಪು ವರ್ಣದಿಂದ ರೇಖಾಪ್ರಧಾನವಾಗಿ ಚಿತ್ರಿಸಲಾಗಿದೆ. ರಂಜಕ ವರ್ಣಗಳನ್ನು ಬಳಸಲಾಗಿದೆ.

*** ಧರ್ಮಸ್ಥಳದಲ್ಲಿ ದೊರೆತ ಚಿತ್ರ : ೨೨.೪ :**

ಈ "ಊರ್ಧ್ವ ಕುಂಡಲಿನೀ" ಚಿತ್ರವನ್ನು ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ಮೇಲಿನ ಕಾಲು ಭಾಗದಲ್ಲಿ ಅಲಂಕಾರಿಕ ರಥವನ್ನು ಚಿತ್ರಿಸಲಾಗಿದೆ. ಇದರ ಕೆಳಗಿನ ಭಾಗದಲ್ಲಿ ಎಡ ಬಲಗಳಲ್ಲಿ ಅಲಂಕಾರಿಕ ರಥದ ಕಂಬಗಳಿವೆ, ಮೇಲ್ಗಡೆಯಲ್ಲಿ ಕಮಾನಿನಾಕಾರದಲ್ಲಿ ನೀಲಿ ವರ್ಣವನ್ನು ಬಳಸಿದ್ದು ಅದರಲ್ಲಿ ಜಲಚರ ಪ್ರಾಣಿಗಳನ್ನು ತೋರಿಸಲಾಗಿದೆ. ಒಳಗಡೆ ತಿಳಿ ಹಸಿರು ವರ್ಣವನ್ನು ಹಿನ್ನೆಲೆಗೆ ಬಳಿಯಲಾಗಿದ್ದು, ಕಂದುಗೆಂಪು ವರ್ಣದಲ್ಲಿ ಊರ್ಧ್ವ ಕುಂಡಲಿನೀಯನ್ನು ಚಿತ್ರಿಸಿದ್ದು, ಜಿಂಕೆಯ ಮುಖ, ಮಹಿಳೆಯ ದೇಹ ಮತ್ತು ಪ್ರಾಣಿ ದೇಹಗಳನ್ನು ಕಂದುಗೆಂಪು ವರ್ಣದಲ್ಲಿ ಚಿತ್ರಿಸಲಾಗಿದೆ. ಈ ದೇಹದ ನಾಲ್ಕೂ ಕಾಲುಗಳು ಕೆಳಗಿನ ಪ್ರಾಣಿಗಳ ಒಂದೊಂದು ಕಾಲುಗಳನ್ನು ವರ್ಣಗಳ ಸಹಿತವಾಗಿ ತೆಗೆದುಕೊಂಡು ಚಿತ್ರಿಸಲಾಗಿದೆ. ಹಿಂದಿನ ಎರಡೂ ಕೈಗಳಲ್ಲಿ ಕುಂಭಗಳನ್ನು ಮಾಡಿದ್ದು, ಕೈ ಕೆಳಗಡೆ ಎಡಬಲಗಳಲ್ಲಿ ಕಂದುಗೆಂಪು ವರ್ಣದ ಮುಖಗಳಿವೆ. ಬಲಗಡೆ ಮುಖಕ್ಕೆ ತಾಗಿದಂತೆ ಕೆಳಗಿನಿಂದ ಖಡ್ಗವನ್ನು ಹಳದಿವರ್ಣದಲ್ಲಿ ಚಿತ್ರಿಸಲಾಗಿದೆ. ಮುಂದಿನ ಎರಡೂ ಕೈಗಳಿಂದ ಹಸ್ತಪ್ರತಿಯನ್ನು ಹಿಡಿದುಕೊಂಡು, ಕಾಲುಭಾಗದಲ್ಲಿ ಪ್ರಾಣಿಗಳ ಸಮೂಹವನ್ನು ಚಿತ್ರಿಸಿದ್ದು, ಕಂದುಗೆಂಪು ವರ್ಣದ ಸಿಂಹ, ಹಳದಿ ವರ್ಣದ ಕಪ್ಪು ಚುಕ್ಕೆಗಳುಳ್ಳ ಹುಲಿ, ತಿಳಿಗೆಂಪು ವರ್ಣದಲ್ಲಿರುವ ಚಿರತೆಗೆ ಕಪ್ಪು ಪಟ್ಟಿಗಳನ್ನು ಬರೆಯಲಾಗಿದೆ. ಬಿಳಿವರ್ಣದ ಜಿಂಕೆಗೆ ಕಪ್ಪು ವರ್ಣದ ಅಲಂಕಾರದೊಂದಿಗೆ ಚಿತ್ರಿಸಲಾಗಿದೆ.

*** ಬೆಂ.ವಿ.ವಿ. ಬೆಂಗಳೂರಿನಲ್ಲಿಯ ಚಿತ್ರ : ೨೨.೫ :**

ಕಾಗದದ ಮೇಲೆ ಜಲವರ್ಣದಿಂದ "ಊರ್ಧ್ವ ಕುಂಡಲಿನೀ" ಚಿತ್ರವನ್ನು ಚಿತ್ರಿಸಲಾಗಿದೆ. ಮಾಡಿನಾಕಾರದ ಕಮಾನನ್ನು ಕೆಂಪು ವರ್ಣದಲ್ಲಿ ಚಿತ್ರಿಸಲಾಗಿದ್ದು, ಈ ಮಾಡಿನ ಒಳಭಾಗದಲ್ಲಿ ಹಸಿರು ವರ್ಣವನ್ನು ತುಂಬಲಾಗಿದೆ. ಅದರ ಮೇಲೆ ಊರ್ಧ್ವ ಕುಂಡಲಿನೀ ಚಿತ್ರವನ್ನು ಬರೆಯಲಾಗಿದೆ. ಈ ಚಿತ್ರದಲ್ಲಿ ವಿಶೇಷವಾಗಿ ಪ್ರಾಣಿಯ ಮೇಲೆ ಕುಳಿತಿರುವಂತೆ ಮಹಿಳೆಯನ್ನು ಚಿತ್ರಿಸಲಾಗಿದೆ. ತಿಳಿ ಕಂದುಗೆಂಪು ವರ್ಣದಲ್ಲಿ ಜಿಂಕೆಯ ಮುಖ, ಮಹಿಳೆಯ ಮತ್ತು ಪ್ರಾಣಿ ದೇಹವನ್ನು ತುಂಬಲಾಗಿದ್ದು, ಹಸಿರುವರ್ಣದ ರವಿಕೆಯಿದ್ದು ಹಳದಿ ವರ್ಣದ ಅಂಚನ್ನು ಹೊಂದಿದೆ. ಕೆಂಪು ಸೀರೆಯನ್ನು ಧರಿಸಿದ್ದು, ಹಳದಿ ವರ್ಣದ ಅಂಚನ್ನು ಹೊಂದಿದೆ. ಹಳದಿವರ್ಣದ ಪ್ರಾಣಿಯ ಬಾಲವು ಎಡದಿಂದ ಬಲ ಬದಿಗೆ ಜಿಂಕೆಯ ಮುಖದ ಮುಂದುಗಡೆ ಬಂದು ಬಲಗೈಯಲ್ಲಿರುವ ಕುಂಭವನ್ನು ನೋಡುತ್ತಿರುವಂತೆ ಚಿತ್ರಿಸಲಾಗಿದೆ. ಹಿಂದಿನ ಎರಡೂ ಕೈಗಳಲ್ಲಿ ತಿಳಿಗೆಂಪು ವರ್ಣದ ಕುಂಭಗಳಿವೆ. ಮುಂದಿನ ಕೈಗಳಲ್ಲಿ ಹಸ್ತಪ್ರತಿ ಮತ್ತು ಕಂಠವನ್ನು ಹಿಡಿದುಕೊಳ್ಳಲಾಗಿದೆ. ಕೆಳಗಡೆಯ ಭಾಗದಲ್ಲಿ ಒಂದೆರಡು ಪ್ರಾಣಿಗಳನ್ನು ಚಿತ್ರಿಸಲಾಗಿದೆ. ಸಿಂಹ, ಹುಲಿ, ಆಕಳು, ಚಿಗರೆಯ ಒಂದೊಂದು ಕಾಲುಗಳನ್ನು ಮೇಲಿನ ಪ್ರಾಣಿಗೆ ವರ್ಣಸಮೇತವಾಗಿ ಜೊಡಿಸಲಾಗಿದೆ.

## ೨೩. ಲಿಂಗ ಷಡಕ್ಷರೋದ್ಧರಣೆ

*** ವಾಚ್ಯ, ವಸ್ತು ವಿಷಯ :**

ಶಿವಯೋಗಿಗೆ ಲಿಂಗಷಡಕ್ಷರಿಯೇ ಪ್ರಾಣವಾಗಿ, ಅಂಗ ಷಡಕ್ಷರಿಯೇ ದೇಹವಾಗಿರ್ಪ ಭೇದವೆಂತೆಂದೊಡೆ: "ಓಂ"ಕಾರವೇ – ಶಿವ, "ಯ"ಕಾರವೇ – ಸದಾಶಿವ, "ವಾ"ಕಾರವೇ – ಈಶ, "ಶಿ"ಕಾರವೇ – ಮಹೇಶ್ವರ, "ಮ"ಕಾರವೇ – ಈಶ್ವರ, "ನ"ಕಾರವೇ – ಈಶಾನ, ಈ ಷಡಕ್ಷರವೇ ಷಡ್ವಿಧ ಮಂತ್ರ ಮೂರ್ತಿಯಾಗಿರ್ಪವು[೬೦] ಎಂದಿರುವರು. ಷಡಕ್ಷರಿ ಮಂತ್ರ ನಮಃಶಿವಾಯ ಓಂ. ಇದರಿಂದ ಲಿಂಗಸೃಷ್ಟಿ ಸಕಲಾಸಕಲ ಮಹತ್ವವನ್ನು ಉದ್ಧರಣೆಯು ತಿಳಿಸುವುದು. ಮಂತ್ರದ ಒಂದೊಂದು ಅಕ್ಷರದಿಂದ ಉತ್ಪತ್ತಿ ಹಾಗೂ ಕ್ರಿಯೆಯನ್ನು ಕುರಿತು ಮಂತ್ರದ ಮಹಿಮೆಯ ಮಹತಿಯನ್ನು ಅದು ಗರ್ಭೀಕರಿಸಿಕೊಂಡ ವಿಷಯವಿವರ ಹೀಗಿದೆ.

*** ಆರು ಮೂರ್ತಿ ಬ್ರಹ್ಮಗಳು :**

೧. "ನ"ಕಾರ – ಮೂರ್ತಿ ಬ್ರಹ್ಮ

೨. "ಮಃ"ಕಾರ – ಪಿಂಡ ಬ್ರಹ್ಮ

೩. "ಶಿ"ಕಾರ – ಕಲಾ ಬ್ರಹ್ಮ

೪. "ವಾ"ಕಾರ – ಆನಂದ ಬ್ರಹ್ಮ

೫. "ಯ"ಕಾರ – ವಿಜ್ಞಾನ ಬ್ರಹ್ಮ

೬. "ಓಂ"ಕಾರ – ಪರಬ್ರಹ್ಮ

*** ಆರು ಸಾದಾಖ್ಯಗಳು :**

೧. "ನ"ಕಾರ – ಕರ್ಮ ಸಾದಾಖ್ಯ

೨. "ಮಃ"ಕಾರ – ಕರ್ತೃ ಸಾದಾಖ್ಯ

೩. "ಶಿ"ಕಾರ – ಮೂರ್ತಿ ಸಾದಾಖ್ಯ

೪. "ವಾ"ಕಾರ – ಅಮೂರ್ತಿ ಸಾದಾಖ್ಯ

೫. "ಯ"ಕಾರ – ಶಿವ ಸಾದಾಖ್ಯ

೬. "ಓಂ"ಕಾರ – ಮಹಾ ಸಾದಾಖ್ಯ

*** ಆರು ಶಕ್ತಿಗಳು :**

೧. "ನ"ಕಾರ – ಕ್ರಿಯಾಶಕ್ತಿ

೨. "ಮಃ"ಕಾರ – ಜ್ಞಾನಶಕ್ತಿ

೩. "ಶಿ"ಕಾರ – ಇಚ್ಛಾಶಕ್ತಿ

೪. "ವಾ"ಕಾರ – ಆದಿಶಕ್ತಿ

೫. "ಯ"ಕಾರ –ಪರಾಶಕ್ತಿ

೬. "ಓಂ"ಕಾರ –ಇಚ್ಛಾಶಕ್ತಿ

*** ಆರು ವರ್ಣಗಳು :**

೧. "ನ"ಕಾರ – ಪೀತವರ್ಣ

೨. "ಮಃ"ಕಾರ – ನೀಲವರ್ಣ

೩. "ಶಿ"ಕಾರ – ಕುಂಕುಮ ವರ್ಣ

೪. "ವಾ"ಕಾರ – ಶ್ವೇತವರ್ಣ

೫. "ಯ"ಕಾರ – ಸ್ಫಟಿಕ ವರ್ಣ

೬. "ಓಂ"ಕಾರ – ಜ್ಯೋತಿವರ್ಣ

---

೬೦. ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು : ಶಿವಾನುಭವಶಾಸ್ತ್ರ : ಪುಟ ೭೧

*** ಆರು ಮುಖಗಳು :**

೧. "ನ"ಕಾರ – ಸದ್ಯೋಜಾತ ಮಂತ್ರಮೂರ್ತಿ

೨. "ಮಃ"ಕಾರ – ವಾಮದೇವ ಮಂತ್ರಮೂರ್ತಿ

೩. "ಶಿ"ಕಾರ – ಅಘೋರ ಮಂತ್ರಮೂರ್ತಿ

೪. "ವಾ"ಕಾರ – ತತ್ಪುರುಷ ಮಂತ್ರಮೂರ್ತಿ

೫. "ಯ"ಕಾರ – ಈಶಾನ್ಯ ಮಂತ್ರಮೂರ್ತಿ

೬. "ಓಂ"ಕಾರ – ಮಹಾ ಮಂತ್ರಮೂರ್ತಿ

*** ಆರು ಲಿಂಗಗಳು :**

೧. "ನ"ಕಾರ – ಆಚಾರಲಿಂಗ

೨. "ಮಃ"ಕಾರ – ಗುರುಲಿಂಗ

೩. "ಶಿ"ಕಾರ – ಶಿವಲಿಂಗ

೪. "ವಾ"ಕಾರ – ಜಂಗಮಲಿಂಗ

೫. "ಯ"ಕಾರ – ಪ್ರಸಾದಲಿಂಗ

೬. "ಓಂ"ಕಾರ – ಮಹಾಲಿಂಗ

*** ಆರು ಮುಖ ಭೇದಗಳು :**

೧. "ನ"ಕಾರ – ಸತ್

೨. "ಮ:"ಕಾರ – ಚಿತ್

೩. "ಶಿ"ಕಾರ – ಆನಂದ

೪. "ವಾ"ಕಾರ – ನಿತ್ಯ

೫. "ಯ"ಕಾರ – ಪರಿಪೂರ್ಣ

೬. "ಓಂ"ಕಾರ – ನಿರಂಜನ

ಹೀಗೆ ನ, ಮಃ, ಶಿ, ವಾ, ಯ, ಓಂ ಈ ಆರು ಷಡಕ್ಷರಿ ಮಂತ್ರಾಕ್ಷರಗಳಿಂದ ಇವೆಲ್ಲ ಆಗಿರುವವು : ನಂತರ ಲಿಂಗಗಳಾಗಿ ಮಂತ್ರಲಿಂಗವಾಗಿರುವುದರಿಂದ ಇದು ಲಿಂಗಷಡಕ್ಷರವೆಂದೂ ಹೇಳಲ್ಪಟ್ಟಿರುವುದು ಎಂದು ಮಹಾಲಿಂಗಗುರು ಶಿವ ಸಿದ್ಧೇಶ್ವರ ಪ್ರಭುವೇ ಲಿಂಗಷಡಕ್ಷರೋದ್ಧರಣೆ ಸಂಬಂಧ ಸಮಾಪ್ತ ಮಂಗಳ ಮಹಾ ಎಂದಿದೆ.

*** ಉದ್ಧರಣೆ ಸಾಹಿತ್ಯದಲ್ಲಿಯ ಚಿತ್ರ : ೨೩.೧ :**

ಈ "ಲಿಂಗ ಷಡಕ್ಷರೋದ್ಧರಣೆ ಚಿತ್ರ"ವನ್ನು ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ಈ ಕಾಗದದ ಮೇಲೆ ಎತ್ತರಕ್ಕೆ ಏಳು ರೇಖೆಗಳನ್ನು ಎಳೆದು, ಅಡ್ಡದಾಗಿ ಏಳು ರೇಖೆಗಳನ್ನು ಎಳೆದಾಗ ಕೆಳಗಿನಿಂದ ಮೇಲಕ್ಕೆ ಆರು ಮನೆಗಳು ಮತ್ತು ಬಲದಿಂದ ಎಡಕ್ಕೆ ಆರು ಮನೆಗಳಂತೆ ಚೌರಸದಲ್ಲಿ ಒಟ್ಟು ೬ x ೬ = ೬೫ ಮನೆಗಳು ಸಿದ್ಧವಾಗುತ್ತವೆ.

* ಮೊದಲನೆಯ ಸಾಲಿನಲ್ಲಿ ಬಲದಿಂದ ಎಡಕ್ಕೆ ಕ್ರಮವಾಗಿ :

೧. ಓಂ, ೨. ಯ, ೩. ವಾ, ೪. ಶಿ, ೫. ಮಃ, ೬. ನ.

* ಎರಡನೆಯ ಸಾಲಿನಿಂದ ಕ್ರಮವಾಗಿ ಆರನೆಯ ಸಾಲಿನವರೆಗೆ :

೧. ನ, ೨. ಮಃ, ೩. ಶಿ, ೪. ವಾ, ೫. ಯ, ೬. ಓಂ

ಹೀಗೆ ಷಡಕ್ಷರಿ ಮಂತ್ರಾಕ್ಷರಗಳನ್ನು ೩೬ ಚಿಕ್ಕ ಮನೆಗಳಲ್ಲಿ ನ್ಯಾಸ ಮಾಡಲಾಗಿದೆ. ಈ ಚಿತ್ರದ ಹಿನ್ನೆಲೆಗೆ ಹಳದಿ ವರ್ಣವನ್ನು ಪಾರದರ್ಶಕವಾಗಿ ಲೇಪಿಸಿದ್ದು, ಚಿತ್ರಿತವಾದ ಚೌರಸದ ನಾಲ್ಕೂ ಭುಜಗಳಲ್ಲಿ ಮಾಡದಾಕಾರದಂತೆ ಅಲಂಕಾರಿಕವಾಗಿ ಮಾಡಿಕೊಂಡು ಅದರಲ್ಲಿ ಕಪ್ಪು ವರ್ಣದ ಎಲೆಗಳನ್ನು, ಗುಲಾಬಿ ವರ್ಣದ ಹೂವುಗಳು, ಬಳ್ಳಿಯನ್ನು ಚಿತ್ರಿಸಲಾಗಿದೆ. ಈ ಚೌರಸದ ನಾಲ್ಕೂ ಮೂಲೆಗಳಲ್ಲಿ ಅಲಂಕಾರಿಕ ಮಾಡುಗಳನ್ನು ಮಾಡಿದ್ದು, ಅವುಗಳಲ್ಲಿಯೂ ಇಂತಹ ಅಲಂಕಾರಿಕ ನಕ್ಷೆಯನ್ನು ಮಾಡಲಾಗಿದೆ. ಚಿತ್ರದ ಹಿನ್ನೆಲೆಯನ್ನು ಹಾಗೇ ಉಳಿಸಿಕೊಂಡು ಕೆಂಪು ಮತ್ತು ಕಪ್ಪು ವರ್ಣಗಳಿಂದ ಚಿಕ್ಕ ಮನೆಗಳ ರೇಖೆಗಳನ್ನು ಎಳೆಯಲಾಗಿದೆ. ಹೊರಗಡೆಯಲ್ಲಿ ದಟ್ಟ ಗುಲಾಬಿ ವರ್ಣವನ್ನು ಬಳಸಲಾಗಿದ್ದು, ಮೂಲ ಚಿತ್ರವು ಎದ್ದು ಕಾಣುವಂತೆ ಚಿತ್ರಿಸಲಾಗಿದೆ.

*** ಕ.ವಿ.ವಿ. ಹಂಪಿಯ ತಾಳೆ ಓಲೆಗರಿ ಚಿತ್ರ : ೨೩.೨ :**

ತಾಳೆಗರಿಯೊಂದರ ಮೇಲೆ "ಲಿಂಗ ಷಡಕ್ಷರೋದ್ಧರಣೆಯ ಚಿತ್ರ"ವನ್ನು ಕಪ್ಪು ವರ್ಣದಿಂದ ಚಿತ್ರಿಸಲಾಗಿದ್ದು, ಎತ್ತರಕ್ಕೆ ಏಳು ರೇಖೆಗಳನ್ನು ಎಳೆದು, ಅಡ್ಡದಾಗಿ ಎಂಟು ರೇಖೆಗಳನ್ನು ಎಳೆದಾಗ ಕೆಳಗಿನಿಂದ ಮೇಲಕ್ಕೆ ಏಳು ಮನೆಗಳು, ಎಡದಿಂದ ಬಲಕ್ಕೆ ಆರು ಮನೆಗಳುಳ್ಳ ಒಟ್ಟು ೭ x ೬ = ೪೨ ಮನೆಗಳು ಸಿದ್ಧವಾಗುತ್ತವೆ. ಮೊದಲಿನ ಸಾಲು ಅಡ್ಡದಾಗಿ ೧. ಓಂ, ೨. ಯ, ೩. ವಾ, ೪. ಶಿ, ೫. ಮಃ, ೬. ನ ಎಂದು, ಎರಡನೆಯ ಸಾಲಿನಿಂದ ಏಳನೆಯ ಸಾಲಿನವರೆಗೆ ೧. ನ, ೨. ಮಃ, ೩. ಶಿ, ೪. ವಾ, ೫. ಯ, ೬. ಓಂ ಎಂದು ಅಕ್ಷರವಿನ್ಯಾಸ ಮಾಡಲಾಗಿದ್ದು, ಈ ಚೌರಸದ ಸುತ್ತಲೂ ಅಲಂಕಾರಿಕ ನಕ್ಷೆಯನ್ನು ಮಾಡಲಾಗಿದ್ದು, ಈ ಚಿತ್ರದ ಬಲಬದಿಯಲ್ಲಿ ಚೌರಸಾಕಾರದಲ್ಲಿ ಮೂರು ಅಲಂಕಾರಿಕ ಕಮಾನುಗಳನ್ನು ರಚಿಸಿದ್ದು, ಮಧ್ಯದ ಕಮಾನಿನಲ್ಲಿ ಪೀಠವೊಂದರ ಮೇಲೆ ಲಿಂಗವನ್ನು ಮಾಡಿದ್ದು, ಅದರಲ್ಲಿ ಲಿಂಗೋದ್ಭವ ಶಿವನ ಮೂರ್ತಿಯನ್ನು ಮಾಡಿದ್ದು, ಹಿಂದಿನ ಕೈಗಳಲ್ಲಿ ತ್ರಿಶೂಲ ಮತ್ತು ಅಂಕುಶಗಳಿದ್ದರೆ, ಮುಂದಿನ ಕೈಗಳಲ್ಲಿ ಲಿಂಗವನ್ನು ಹಿಡಿದುಕೊಂಡಿರುವಂತಿದೆ. ಈ ಚಿತ್ರದ ಎಡಬಲ ಕಮಾನುಗಳಲ್ಲಿ ಋಷಿ-ಮುನಿಗಳನ್ನು ಚಿತ್ರಿಸಲಾಗಿದೆ.

*** ಗು.ವಿ.ವಿ. ಗುಲಬರ್ಗಾದಲ್ಲಿಯ ಚಿತ್ರ : ೨೩.೩ :**

ಕಾಗದದ ಮೇಲೆ ಜಲವರ್ಣದಲ್ಲಿ ಚಿತ್ರಿಸಲಾಗಿದ್ದು, ಕೆಳಗಿನಿಂದ ಮೇಲ್ಗಡೆ ಏಳು ರೇಖೆಗಳು, ಎಡದಿಂದ ಬಲಕ್ಕೆ ಏಳು ರೇಖೆಗಳನ್ನು ಎಳೆದಾಗ ಒಟ್ಟು ೩೬ ಮನೆಗಳಿರುವ ಚೌರಸವನ್ನು ಕೆಂಪು ವರ್ಣದ ರೇಖೆಗಳಿಂದ (ಮನೆಗಳನ್ನು) ರಚಿಸಿಕೊಂಡು ಹಿನ್ನೆಲೆಯಲ್ಲಿ ತಿಳಿ ಗುಲಾಬಿ ವರ್ಣವನ್ನು ಪಾರದರ್ಶಕವಾಗಿ ಬಳಸಲಾಗಿದೆ. ಮೇಲೆ ಹೇಳಿದಂತೆ ಅಕ್ಷರ ನ್ಯಾಸಮಾಡಲಾಗಿದೆ. ಈ ಚೌರಸದ ಸುತ್ತಲೂ ನೀಲಿ ವರ್ಣವನ್ನು ತುಂಬಲಾಗಿದೆ. ಬಲಬದಿಯ ಅಂಚಿನಲ್ಲಿ ಕೆಂಪು ಹೂವನ್ನು ನೀಲಿ ವರ್ಣದ ಎಲೆಗಳನ್ನು ಮಾಡಲಾಗಿದೆ.

*** ಧರ್ಮಸ್ಥಳದಲ್ಲಿ ದೊರೆತ ಚಿತ್ರ : ೨೩.೪ :**

ಈ "ಲಿಂಗ ಷಡಕ್ಷರೋದ್ಧರಣಿಯ ಚಿತ್ರ"ವನ್ನು ಕಾಗದದ ಮೇಲೆ ಜಲವರ್ಣದಲ್ಲಿ ಚಿತ್ರಿಸಲಾಗಿದೆ. ಮೇಲಿನ ಭಾಗದಲ್ಲಿ ಅಲಂಕಾರಿಕ ರಥವನ್ನು ಚಿತ್ರಿಸಲಾಗಿದ್ದು, ಕೆಳಗಡೆ ಆಯತಾಕಾರದಲ್ಲಿ ಕೆಳಗಿನಿಂದ ಮೇಲಕ್ಕೆ ೮ ರೇಖೆಗಳನ್ನು ಅಡ್ಡದಾಗಿ ೭ ರೇಖೆಗಳನ್ನು ಎಳೆದಾಗ ೭ x ೬ = ೪೨ ಮನೆಗಳನ್ನು ರಚಿಸಿಕೊಳ್ಳಲಾಗಿದೆ. ಕಂದುಗೆಂಪು ವರ್ಣದಲ್ಲಿ ಹೊರ ರೇಖೆಗಳನ್ನು ಹಾಕಿಕೊಂಡು ಆಯಾ ಮನೆಗಳಿಗೆ ಮೇಲೆ ಹೇಳಿದಂತೆ ಅಕ್ಷರ ನ್ಯಾಸಮಾಡಲಾಗಿದ್ದು, ಈ ಷಡಕ್ಷರಿ ಮಂತ್ರಾಕ್ಷರಗಳನ್ನು ಕಂದುಗೆಂಪು ವರ್ಣದಲ್ಲಿ ಚಿತ್ರಿಸಲಾಗಿದೆ. ಹಿನ್ನೆಲೆಯಲ್ಲಿ ಬಿಳಿಯ ವರ್ಣವಿರುವುದರಿಂದ ಅಕ್ಷರಗಳು ಸ್ಪಷ್ಟವಾಗಿ ಕಾಣುತ್ತವೆ. ಈ ಚಿತ್ರವು ಸ್ಪಷ್ಟವಾಗಿ ಮತ್ತು ಸುಂದರವಾಗಿ ಕಾಣುತ್ತದೆ. ಸುತ್ತಲೂ ಅಲಂಕಾರಿಕ ನಕ್ಷೆಯನ್ನು ಬಳಸಲಾಗಿದೆ.

*** ಬೆಂ.ವಿ.ವಿ. ಬೆಂಗಳೂರಿನಲ್ಲಿ ದೊರೆತ ಚಿತ್ರ : ೨೩.೫ :**

ಕಾಗದದ ಮೇಲೆ ವರ್ಣ ಪ್ರಧಾನವಾಗಿಟ್ಟುಕೊಂಡು ಚಿತ್ರಿಸಲಾಗಿದೆ. ಆಯತಾಕಾರದಲ್ಲಿ ಕೆಳಗಿನಿಂದ ಮೇಲಕ್ಕೆ ಏಳು ಮನೆಗಳನ್ನು ಅಡ್ಡದಾಗಿ ಆರು ಮನೆಗಳನ್ನು ೭ x ೬ = ೪೨ ಮನೆಗಳನ್ನು ರಚಿಸಿಕೊಳ್ಳಲಾಗಿದೆ. ಕ್ರಮವಾಗಿ ಕೆಂಪು ಮತ್ತು ಹಳದಿ ವರ್ಣವನ್ನು ಮನೆಗಳಿಗೆ ತುಂಬಲಾಗಿದ್ದು, ೪೨ ಮನೆಗಳು ರೇಖೆಗಳಿಲ್ಲದೇ ವರ್ಣದ ಮುಖಾಂತರವೇ ಬೇರ್ಪಡಿಸಲಾಗಿದೆ. ಕಪ್ಪು ಅಕ್ಷರಗಳ ನ್ಯಾಸವೇ ಅಷ್ಟೊಂದು ಸ್ಪಷ್ಟತೆ ಇಲ್ಲವಾದರೂ ಆಯಾ ಮನೆಗಳಲ್ಲಿ ಅಕ್ಷರ ನ್ಯಾಸ ಮಾಡಲಾಗಿದೆ.

*** ಕ.ವಿ.ವಿ. ಧಾರವಾಡದಲ್ಲಿಯ ಚಿತ್ರ : ೨೩.೬ :**

ಈ "ಲಿಂಗ ಷಡಕ್ಷರೋದ್ಧರಣಿ ಚಿತ್ರ"ವನ್ನು ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ಆಯತಾಕಾರದಲ್ಲಿ ಕೆಳಗಿನಿಂದ ಮೇಲಕ್ಕೆ ಏಳು ಮನೆಗಳನ್ನು ಅಡ್ಡದಾಗಿ ಆರು ಮನೆಗಳನ್ನು ರಚಿಸಿಕೊಳ್ಳಲು ಕೆಳಗಿನಿಂದ ಮೇಲಕ್ಕೆ ಎಂಟು ಗೆರೆಗಳನ್ನು ಎಡದಿಂದ ಬಲಕ್ಕೆ ಏಳು ಗೆರೆಗಳನ್ನು ಎಳೆದಾಗ ೭ x ೬ = ೪೨ ಮನೆಗಳು ಸಿದ್ಧವಾಗುವವು. ಕೆಂಪು ಮತ್ತು ಕಪ್ಪು ಗೆರೆಗಳನ್ನು ಹಾಕಿ ೪೨ ಮನೆಗಳನ್ನು ಗುರುತಿಸಿಕೊಳ್ಳಲಾಗಿದೆ. ಹಿನ್ನೆಲೆ ಬಿಳಿಯದಾಗಿದ್ದು, ಅದರ ಮೇಲೆ ಕಪ್ಪು ವರ್ಣದ ಪಟ್ಟಿಯನ್ನು ಮಾಡಿಕೊಂಡು ಅದಕ್ಕೆ ಹೊಂದಿಕೊಂಡು ಹಳದಿ ವರ್ಣದ ಪಟ್ಟಿಯನ್ನು ರಚಿಸಲಾಗಿದೆ. ಈ ಪಟ್ಟಿಗಳಿಗೆ ಕೆಂಪು ವರ್ಣದ ಹೊರ ರೇಖೆಗಳನ್ನು ಹಾಕಲಾಗಿದೆ. ಈ ಚಿತ್ರದ ಎಡಬಲಗಳಲ್ಲಿ ಮಾಡುಗಳನ್ನು ಮಾಡಿಕೊಳ್ಳಲಾಗಿದೆ. ಕೆಂಪು ವರ್ಣದ ಕಮಾನುಗಳಿಗೆ ಹಿನ್ನೆಲೆಯಾಗಿ ಕಪ್ಪು ನೀಲಿ ವರ್ಣವನ್ನು ಬಳಸಲಾಗಿದೆ.

## ೨೪. ಅಂಗಷಡಕ್ಷರೋದ್ಧರಣೆ :

*** ವಾಚ್ಯ, ವಸ್ತು, ವಿಷಯ :**

ನಕಾರವೇ ಪೃಥ್ವಿ, ಮಕಾರವೇ ಅಪ್ಪು, ಶಿಕಾರವೇ ಅಗ್ನಿ ಎಂದು ಪ್ರಾರಂಭವಾಗಿ ಹಕಾರವೇ ಸುಜ್ಞಾನ ಹಸ್ತ, ಓಂಕಾರವೇ ಸದ್ಭಾವದ ಹಸ್ತ ಇಂತಿವು ಅಂಗಷಡಕ್ಷರ ಕಾಣಾ ಮಹಾಲಿಂಗ ಗುರು ಸಿದ್ಧೇಶ್ವರ ಪ್ರಭುವೇ. ಅಂಗಷಡಕ್ಷರೋದ್ಧರಣೆ ಸಮಾಪ್ತ[೬೧] ಮಂಗಳ ಮಹಾ ಎಂದು ಮುಗಿಸಿರುವರು.

ಈ ಉದ್ದರಣೆಗಳು ಷಡಕ್ಷರಿ ಮಂತ್ರ ನ, ಮಃ, ಶಿ, ವಾ, ಯ, ಓಂ ಇದರಿಂದ ಅಂಗ ಸೃಷ್ಟಿ ಕಾರ್ಯ ಹಾಗೂ ಮಂತ್ರಾಕ್ಷರದಿಂದ ಉತ್ಪತ್ತಿ ಹಾಗೂ ಕ್ರಿಯೆ ಕುರಿತು ಗರ್ಭೀಕರಿಸಿಕೊಂಡು ಉತ್ಪತ್ತಿಯಾದ ಪಿಂಡಾಂಡ ಬ್ರಹ್ಮಾಂಡದ ವಿಷಯ[೬೨] ವಿವರ ಇದರಲ್ಲಿದೆ.

*** ಪಂಚಭೂತಗಳ ಉತ್ಪತ್ತಿ :**

೧. "ನ"ಕಾರ – ಭೂಮಿ (ಪೃಥ್ವಿ)

೨. "ಮಃ"ಕಾರ – ನೀರು (ಅಪ್ಪು)

೩. "ಶಿ"ಕಾರ – ಬೆಂಕಿ (ಅಗ್ನಿ)

೪. "ವಾ"ಕಾರ – ಗಾಳಿ (ವಾಯು)

೫. "ಯ"ಕಾರ – ಆಕಾಶ

೬. "ಓಂ"ಕಾರ – ಆತ್ಮವಾಗಿರುವುದು

*** ಕಾರಣೇಶ್ವರರು**

೧. "ನ"ಕಾರ – ಬ್ರಹ್ಮ

೨. "ಮಃ"ಕಾರ – ವಿಷ್ಣು

೩. "ಶಿ"ಕಾರ – ರುದ್ರ

೪. "ವಾ"ಕಾರ – ಈಶ್ವರ

೫. "ಯ"ಕಾರ – ಸದಾಶಿವ

೬. "ಓಂ"ಕಾರ – ಮಹಾತ್ಮವಾಗಿರುವುದು

*** ಆತ್ಮರು :**

೧. "ನ"ಕಾರ – ಅಂತರ್ಯಾಮಿ

೨. "ಮಃ"ಕಾರ – ಚೈತನ್ಯ

೩. "ಶಿ"ಕಾರ – ಭಾವನೆ

೪. "ವಾ"ಕಾರ – ಕರ್ತಾರ

೫. "ಯ"ಕಾರ – ಕ್ಷೇತ್ರಜ್ಞ

೬. "ಓಂ"ಕಾರ – ಶಿವ

*** ಸ್ಥಲಗಳು :**

೧. "ನ"ಕಾರ – ಭಕ್ತ

೨. "ಮಃ"ಕಾರ –ಮಹೇಶ್ವರ

೩. "ಶಿ"ಕಾರ – ಪ್ರಸಾದಿ

೪. "ವಾ"ಕಾರ – ಪ್ರಾಲಿಂಗ

೫. "ಯ"ಕಾರ – ಶರಣ

೬. "ಓಂ"ಕಾರ – ಐಕ್ಯ

---

೬೧. ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು : ಶಿವಾನುಭವಶಾಸ್ತ್ರ : ಪುಟ ೭೨

೬೨. ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು : ಶಿವಾನುಭವಶಾಸ್ತ್ರ : ಪುಟ ೭೩

*** ಭಕ್ತಿಗಳು :**

೧. "ನ"ಕಾರ – ಸದ್ಭಕ್ತಿ

೨. "ಮಃ"ಕಾರ – ನೈಷ್ಠಿಕ ಭಕ್ತಿ

೩. "ಶಿ"ಕಾರ – ಅವಧಾನ ಭಕ್ತಿ

೪. "ವಾ"ಕಾರ – ಅನುಭಾವ ಭಕ್ತಿ

೫. "ಯ"ಕಾರ – ಆನಂದ ಭಕ್ತಿ

೬. "ಓಂ"ಕಾರ – ಸಮರಸ ಭಕ್ತಿ

*** ಸುಹಸ್ತಗಳು :**

೧. "ನ"ಕಾರ – ಸುಚಿತ್ತ ಹಸ್ತ

೨. "ಮಃ"ಕಾರ – ಸುಬುದ್ಧಿ ಹಸ್ತ

೩. "ಶಿ"ಕಾರ – ನಿರಹಂಕಾರ ಹಸ್ತ

೪. "ವಾ"ಕಾರ – ಸುಮನ ಹಸ್ತ

೫. "ಯ"ಕಾರ – ಸುಜ್ಞಾನ ಹಸ್ತ

೬. "ಓಂ"ಕಾರ – ಸದ್ಭಾವ ಹಸ್ತ

*** ತತ್ವಗಳು :**

೧. "ನ"ಕಾರ – ಆತ್ಮತತ್ವ

೨. "ಮಃ"ಕಾರ – ವಿದ್ಯಾತತ್ವ

೩. "ಶಿ"ಕಾರ – ಶಿವತತ್ವ

೪. "ವಾ"ಕಾರ – ಈಶ್ವರ ತತ್ವ

೫. "ಯ"ಕಾರ – ಸದಾಶಿವ ತತ್ವ

೬. "ಓಂ"ಕಾರ – ಪರತತ್ವ

ಹೀಗೆ ಇವೆಲ್ಲದರಿಂದ ಅಂಗವಾಗಿ ಅಂಗಷಡಕ್ಷರವಾಗಿರುವುದು ಮಂತ್ರದ ಒಂದೊಂದು ಅಕ್ಷರ ಪ್ರಣವದಿಂದ ಅಂಗವಾಗಿರುವುದನ್ನು ಸರಳವಾಗಿ ತತ್ವ ವಿವೇಚನೆ ಒಳಗೊಂಡು ಶಿವಯೋಗ ಸಾಧಕನಿಗೆ ಸರಳೀಕರಿಸಿ ನೆನಪಿನಲ್ಲಿಟ್ಟುಕೊಂಡು ಆಚರಿಸಲು ಸಹಾಯಕಾರಿಯಾಗಿದೆ.

*** ಉದ್ಧರಣೆ ಸಾಹಿತ್ಯದಲ್ಲಿಯ ಚಿತ್ರ : ೨೪.೧ :**

ಈ "ಅಂಗಷಡಕ್ಷರೋದ್ಧರಣೆ" ಚಿತ್ರವನ್ನು ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ಈ ಕಾಗದದ ಮೇಲೆ ಎತ್ತರಕ್ಕೆ ಏಳು ರೇಖೆಗಳನ್ನು ಎಳೆದು ಅಡ್ಡವಾಗಿ ಏಳು ರೇಖೆಗಳನ್ನು ಎಳೆದಾಗ ಕೆಳಗಿನಿಂದ ಮೇಲಕ್ಕೆ ಆರು ಮನೆಗಳು ಮತ್ತು ಎಡದಿಂದ ಬಲಕ್ಕೆ ಆರು ಮನೆಗಳಂತೆ ಒಟ್ಟು ಚೌರಸದಲ್ಲಿ ೬ x ೬ = ೩೬ ಮನೆಗಳು ಸಿದ್ಧವಾಗುವವು.

* ಮೊದಲನೆಯ ಸಾಲಿನಿಂದ ಕೊನೆಯ ಸಾಲಿನವರೆಗೂ ಈ ಆರು ಅಕ್ಷರಗಳನ್ನು ಆರು ಮನೆಗಳಲ್ಲಿ ಕ್ರಮವಾಗಿ ಬರೆಯಬೇಕು ೧. ನ, ೨. ಮಃ, ೩. ಶಿ, ೪. ವಾ, ೫. ಯ, ೬. ಓಂ ಎಂದು ಬರೆದು, ಅದರಂತೆ

ಕ್ರಮವಾಗಿ ಎಲ್ಲ ಸಾಲುಗಳ ಮೂವತ್ತಾರು ಮನೆಗಳಲ್ಲಿ ಅಕ್ಷರಗಳ ವಿನ್ಯಾಸ ಮಾಡಲಾಗಿದೆ. ಈ ಚಿತ್ರದ ಹಿನ್ನೆಲೆಗೆ ಹಳದಿ ವರ್ಣವನ್ನು ಪಾರದರ್ಶಕವಾಗಿ ಬಳಸಿದ್ದು ಚಿತ್ರಿತವಾದ ಚೌರಸದ ನಾಲ್ಕೂ ಭುಜಗಳಲ್ಲಿ ಮಾಡಿನಾಕಾರದಂತೆ ಅಲಂಕಾರಿಕವಾಗಿ ಮಾಡಿಕೊಂಡು ಅದರಲ್ಲಿ ಕಪ್ಪು ವರ್ಣದ ಎಲೆಗಳನ್ನು, ಗುಲಾಬಿ ವರ್ಣದ ಹೂವುಗಳನ್ನು ಬಳ್ಳಿಯೊಂದಿಗೆ ಚಿತ್ರಿಸಲಾಗಿದೆ. ಈ ಚೌರಸದ ನಾಲ್ಕೂ ಮೂಲೆಗಳಲ್ಲಿ ಅಲಂಕಾರಿಕವಾದ ಮಾಡುಗಳ ಮಧ್ಯದಲ್ಲಿ ಅಲಂಕಾರಿಕ ನೈಸರ್ಗಿಕ ನಕ್ಷೆಯನ್ನು ಮಾಡಲಾಗಿದೆ. ಚಿತ್ರವನ್ನು ಹೊರತು ಪಡಿಸಿ ಹೊರಗಡೆಯಲ್ಲಿ ಗುಲಾಬಿ ವರ್ಣವನ್ನು ದಟ್ಟವಾಗಿ ಬಳಸಲಾಗಿದ್ದು, ಮೂಲ ಚಿತ್ರವು ಎದ್ದು ಕಾಣುತ್ತದೆ. ಕೆಂಪು ಮತ್ತು ಕಪ್ಪು ವರ್ಣದ ರೇಖೆಗಳಿಂದ ಚಿಕ್ಕ ಮನೆಗಳನ್ನು ಚಿತ್ರಿಸಲಾಗಿದೆ.

*** ಕ.ವಿ.ವಿ. ಹಂಪೆಯಲ್ಲಿಯ ಚಿತ್ರ : ೨೪-೨ :**

ಕಾಗದದ ಮೇಲೆ ಜಲವರ್ಣದಲ್ಲಿ ಚಿತ್ರಿಸಿದ ಈ "ಅಂಗಷಡಕ್ಷರೋದ್ಧರಣಿ ಚಿತ್ರ"ವನ್ನು ಕಾಗದದ ಮಧ್ಯದಲ್ಲಿ ರಚಿಸಲಾಗಿದೆ. ಕೆಳಗಿನಿಂದ ಮೇಲಕ್ಕೆ ಏಳು ರೇಖೆಗಳನ್ನು ಎಡದಿಂದ ಬಲಕ್ಕೆ ಏಳು ರೇಖೆಗಳನ್ನು ಎಳೆದಾಗ ೬ x ೬ = ೩೬ ಮನೆಗಳು ಸಿದ್ಧವಾಗುತ್ತವೆ. ಈ ಆರೂ ಸಾಲುಗಳ ಮನೆಗಳಲ್ಲಿ ನ, ಮಃ, ಶಿ, ವಾ, ಯ, ಓಂ ಎಂದು ಷಡಕ್ಷರಿ ಮಂತ್ರಾಕ್ಷರಗಳನ್ನು ಕ್ರಮವಾಗಿ ೩೬ ಮನೆಗಳಲ್ಲಿ ಬರೆಯಲಾಗಿದ್ದು, ತಿಳಿನೀಲಿ ವರ್ಣ ಹಾಗೂ ಬಿಳಿಯ ವರ್ಣದ ಮೇಲೆ ಅಕ್ಷರ ನ್ಯಾಸ ಮಾಡಲಾಗಿದೆ. ಕಂದುಗೆಂಪು ವರ್ಣದಲ್ಲಿ ಮನೆಯ ಚೌರಸ ಪಟ್ಟಿಗಳನ್ನು ಮಾಡಿದ್ದು, ಅದರ ಮಧ್ಯದಲ್ಲಿ ಬಿಳಿಯ ರೇಖೆಗಳನ್ನು ಎಳೆಯಲಾಗಿದೆ. ಒಟ್ಟಾರೆ ಈ ಚೌರಸವನ್ನು ಅಲಂಕಾರಿಕವಾಗಿ ರಚಿಸಲಾಗಿದ್ದು, ಈ ಚಿತ್ರದ ಎಡಬಲಗಳಲ್ಲಿ ಕೆಂಪು ಹೂವಿನ ದಾನಿಯನ್ನು ಮಾಡಿದ್ದು, ಅದರಿಂದ ಮೇಲಕ್ಕೆ ಎಲೆ ಬಳ್ಳಿಯು ಬೆಳೆದಿದ್ದು, ತುದಿಗಳಲ್ಲಿ ಗಿಳಿಯ ಚಿತ್ರವನ್ನು ಮಾಡಲಾಗಿದೆ.

*** ಕ.ವಿ.ವಿ. ಹಂಪೆಯ ತಾಳೆ ಓಲೆಗರಿ ಚಿತ್ರ : ೨೪-೩ :**

ತಾಳೆಗರಿವೊಂದರ ಮೇಲೆ "ಅಂಗಷಡಕ್ಷರೋದ್ಧರಣಿಯ ಚಿತ್ರ"ವನ್ನು ಕಪ್ಪು ವರ್ಣದಲ್ಲಿ ಚಿತ್ರಿಸಲಾಗಿದೆ. ಎತ್ತರಕ್ಕೆ ಏಳು ರೇಖೆಗಳನ್ನು ಎಳೆದು ಅಡ್ಡದಾಗಿ ಎಂಟು ರೇಖೆಗಳನ್ನು ಎಳೆದಾಗ ಕೆಳಗಿನಿಂದ ಮೇಲಕ್ಕೆ ಏಳು ಮನೆಗಳು ಹಾಗೂ ಎಡದಿಂದ ಬಲಕ್ಕೆ ಆರು ಮನೆಗಳು ಒಟ್ಟು ೭ x ೬ = ೪೨ ಮನೆಗಳು ಸಿದ್ಧವಾಗುತ್ತವೆ. ಮೊದಲಿನ ಸಾಲಿನಿಂದ ಕೊನೆಯ ಸಾಲಿನವರೆಗೆ ಈ ಆರು ಅಕ್ಷರಗಳನ್ನು ಕ್ರಮವಾಗಿ ೧. ನ, ೨. ಮಃ, ೩. ಶಿ, ೪. ವಾ, ೫. ಯ, ೬. ಓಂ ಎಂದು ಎಲ್ಲ ಸಾಲುಗಳಲ್ಲಿಯ ಮನೆಗಳಲ್ಲಿ ಷಡಕ್ಷರಿ ಮಂತ್ರಾಕ್ಷರಗಳನ್ನು ವಿನ್ಯಾಸ ಮಾಡಲಾಗಿದೆ. ಈ ಚೌರಸದ ಸುತ್ತಲೂ ಅಲಂಕಾರಿಕೆಯ ನಕ್ಷೆಯನ್ನು ಮಾಡಲಾಗಿದ್ದು, ಈ ಚಿತ್ರದ ಎಡಬದಿಯಲ್ಲಿ ಚೌರಸಾಕಾರದಲ್ಲಿ ಮೂರು ಅಲಂಕಾರಿಕ ಕಮಾನುಗಳನ್ನು ರಚಿಸಿದ್ದು, ಮಧ್ಯದ ಕಮಾನಿನಲ್ಲಿ ಪೀಠವೊಂದರ ಮೇಲೆ ಲಿಂಗವನ್ನು ಮಾಡಿದ್ದು, ಅದರೊಳಗಿಂದ ಲಿಂಗೋದ್ಭವ ಶಿವನ ಮೂರ್ತಿಯನ್ನು ಮಾಡಿದ್ದು, ಹಿಂದಿನ ಕೈಗಳಲ್ಲಿ ತ್ರಿಶೂಲ ಮತ್ತು ಅಂಕುಶಗಳಿದ್ದರೆ ಮುಂದಿನ ಎರಡೂ ಕೈಗಳಲ್ಲಿ ಲಿಂಗವನ್ನು ಹಿಡಿದುಕೊಂಡಂತೆ

ಚಿತ್ರಿಸಲಾಗಿದೆ. ಈ ಚಿತ್ರದ ಎಡಬಲಗಳಲ್ಲಿರುವ ಕಮಾನುಗಳಲ್ಲಿ ಋಷಿಮುನಿಗಳು ಲಿಂಗೋದ್ಭವ ಮೂರ್ತಿಯನ್ನು ನೋಡುತ್ತ ನಿಂತಿರುವರು. ಈ ಚಿತ್ರವು ಸುಂದರವಾಗಿ ಮೂಡಿಬಂದಿದೆ.

*** ಗು.ವಿ.ವಿ. ಗುಲಬುರ್ಗಾದಲ್ಲಿ ದೊರೆತ ಚಿತ್ರ : ೨೪-೪ :**

ಕಾಗದದ ಮೇಲೆ ಜಲವರ್ಣದಲ್ಲಿ ಈ ಉದ್ಧರಣಿ ಚಿತ್ರವನ್ನು ಬರೆಯಲಾಗಿದ್ದು, ಕೆಳಗಿನಿಂದ ಮೇಲ್ಗಡೆ ಏಳು ಗೆರೆಗಳನ್ನು ಎಳೆದಿದ್ದು, ಎಡದಿಂದ ಬಲಗಡೆಗೆ ಏಳು ಗೆರೆಗಳನ್ನು ಎಳೆಯಲಾಗಿದ್ದು, ಕೆಳಗಿನಿಂದ ಮೇಲಕ್ಕೆ ಆರು ಮನೆಗಳನ್ನು ಮಾಡಿದ್ದು, ಎಡದಿಂದ ಬಲಕ್ಕೆ ಆರು ಮನೆಗಳನ್ನು ಮಾಡಿದ್ದು ಒಟ್ಟು ೬ x ೬ = ೩೬ ಮನೆಗಳು ಸಿದ್ಧವಾಗುತ್ತವೆ. ಈ ಚಿಕ್ಕ ಮನೆಗಳಿಗೆ ಕೆಂಪು ವರ್ಣದಿಂದ ರೇಖೆಗಳನ್ನು ಹಾಕಿ ಪೂರ್ಣಗೊಳಿಸಲಾಗಿದೆ. ಈ ಚೌರಸಕ್ಕೆ ದಪ್ಪದಾದ ಕೆಂಪು ವರ್ಣದ ಪಟ್ಟಿಯನ್ನು ಹಾಕಲಾಗಿದೆ. ಚೌರಸದ ಒಳಗಡೆ ತಿಳಿ ಗುಲಾಬಿ ವರ್ಣವನ್ನು ಪಾರದರ್ಶಕವಾಗಿ ಬಳಸಲಾಗಿದೆ. ನ, ಮಃ, ಶಿ, ವಾ, ಯ, ಓಂ ಎಂದು ಆರೂ ಸಾಲುಗಳಿಗೆ ಕ್ರಮವಾಗಿ ಕಪ್ಪು ವರ್ಣದಿಂದ ಮೂವತ್ತಾರೂ ಮನೆಗಳಲ್ಲಿ ಬರೆಯಲಾಗಿದೆ. ಈ ಚೌರಸದ ಹೊರ ಬದಿಯಲ್ಲಿ ನೀಲಿ ಕಪ್ಪು ವರ್ಣವನ್ನು ತುಂಬಲಾಗಿದೆ.

*** ಧರ್ಮಸ್ಥಳದಲ್ಲಿ ದೊರೆತ ಚಿತ್ರ : ೨೪-೫ :**

ಈ "ಲಿಂಗಷಡಕ್ಷರೋದ್ಧರಣಿ" ಚಿತ್ರವನ್ನು ಕಾಗದದ ಮೇಲೆ ಜಲವರ್ಣದಲ್ಲಿ ಚಿತ್ರಿಸಲಾಗಿದೆ. ಸುಂದರ ಅಲಂಕಾರಿಕ ನಕ್ಷಾ ಪಟ್ಟಿಯ ಚೌರಸದ ಮಧ್ಯದಲ್ಲಿ ಈ ಉದ್ಧರಣಿ ಚಿತ್ರವನ್ನು ರಚಿಸಲಾಗಿದ್ದು, ಹಿನ್ನೆಲೆಯಲ್ಲಿ ಬಿಳಿಯ ಪೇಪರಿನ ವರ್ಣವನ್ನು ಉಳಿಸಿಕೊಂಡು ಕಂದುಗೆಂಪು ವರ್ಣದಲ್ಲಿ ಕೆಳಗಿನಿಂದ ಮೇಲಕ್ಕೆ ಏಳು ರೇಖೆಗಳನ್ನು ಎಳೆದಿದ್ದು, ಎಡದಿಂದ ಬಲಭಾಗಕ್ಕೆ ಎಂಟು ರೇಖೆಗಳನ್ನು ಎಳೆದಾಗ ಕೆಳಗಿನಿಂದ ಮೇಲ್ಗಡೆಗೆ ಏಳು ಮನೆಗಳು ಎಡದಿಂದ ಬಲಕ್ಕೆ ಆರು ಮನೆಗಳು ಒಟ್ಟು ೭ x ೬ = ೪೨ ಮನೆಗಳನ್ನು ರಚಿಸಲಾಗಿದ್ದು ನ, ಮಃ, ಶಿ, ವಾ, ಯ, ಓಂ ಎಂದು ಏಳೂ ಸಾಲುಗಳಲ್ಲಿ ಕ್ರಮವಾಗಿ ಕಪ್ಪು ವರ್ಣದಿಂದ ಷಡಕ್ಷರಿ ಮಂತ್ರಾಕ್ಷರಗಳನ್ನು ಬರೆಯಲಾಗಿದೆ.

*** ಕ.ವಿ.ವಿ. ಧಾರವಾಡದಲ್ಲಿಯ ಚಿತ್ರ : ೨೪-೬ :**

ಈ "ಅಂಗಷಡಕ್ಷರೋದ್ಧರಣಿ ಚಿತ್ರ"ವನ್ನು ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ಆಯತಾಕಾರದಲ್ಲಿ ಕೆಳಗಿನಿಂದ ಮೇಲಕ್ಕೆ ಏಳು ರೇಖೆಗಳನ್ನು ಎಳೆದಿದ್ದು, ಎಡದಿಂದ ಬಲಕ್ಕೆ ಎಂಟು ರೇಖೆಗಳನ್ನು ಎಳೆದಾಗ ಕೆಳಗಿನಿಂದ ಮೇಲಕ್ಕೆ ಏಳು ಮನೆಗಳು ಎಡದಿಂದ ಬಲಕ್ಕೆ ಆರು ಮನೆಗಳಂತೆ ಒಟ್ಟು ೭ x ೬ = ೪೨ ಮನೆಗಳು ಸಿದ್ಧವಾಗುವವು. ಕೆಂಪು ಮತ್ತು ಕಪ್ಪು ವರ್ಣದ ರೇಖೆಗಳನ್ನು ಹಾಕಿ ನಾಲವತ್ತೆರಡು ಮನೆಗಳನ್ನು ಸಿದ್ಧಪಡಿಸಿಕೊಂಡು, ಈ ಚಿತ್ರದ ಹಿನ್ನೆಲೆಯು ಬಿಳಿಯ ವರ್ಣದಲ್ಲಿದ್ದು ಕಪ್ಪು ವರ್ಣದಿಂದ ಕ್ರಮವಾಗಿ ನ, ಮಃ, ಶಿ, ವಾ, ಯ, ಓಂ ಎಂದು ಏಳೂ ಸಾಲುಗಳಲ್ಲಿ ಷಡಕ್ಷರ ಮಂತ್ರಾಕ್ಷರಗಳನ್ನು ಬರೆಯಲಾಗಿದೆ. ಈ ಆಯತಾಕಾರಕ್ಕೆ

ಸುತ್ತಲೂ ಹಸಿರು ವರ್ಣದ ಪಟ್ಟಿಯನ್ನು ಮಾಡಿಕೊಂಡು ಅದಕ್ಕೆ ಹೊಂದಿಕೊಂಡು ಹಳದಿ ವರ್ಣದ ಪಟ್ಟಿಯನ್ನು ಮಾಡಲಾಗಿದೆ. ಈ ಚಿತ್ರದ ಎಡಬಲಗಳಲ್ಲಿ ಆಯತಾಕಾರದ ಚಿಕ್ಕ ಮಾಡುಗಳನ್ನು ಮಾಡಿಕೊಂಡಿದ್ದು, ಕೆಂಪುವರ್ಣದ ಕಮಾನುಗಳಿದ್ದು, ಒಳಗಡೆಯ ಹಿನ್ನೆಲೆಗೆ ಕಪ್ಪು, ನೀಲಿ ವರ್ಣವನ್ನು ತುಂಬಲಾಗಿದೆ.

## ೨೫. ಜ್ಞಾನ ಚಕ್ರೋದ್ಧರಣಿ

**ವಾಚ್ಯ, ವಸ್ತು, ವಿಷಯ :** ಶಿವಜ್ಞಾನ ಚೈತನ್ಯವೇ ಅಕ್ಷರಜ್ಞತ್ವಾದಿ ಭೇದಂಗಳನ್ನೊಳಗೊಂಡ ವ್ಯಾವೃತ್ತವಾಗಿರ್ಪರ ಕಾರಣದಿಂ ಜ್ಞಾನಚಕ್ರವೆನಿಸಿತು. ಇದನುದ್ಧರಿಸುವ ಕ್ರಮವೆಂತೆಂದೊಡೆ[೬೩] ಈ ಉದ್ಧರಣಿ ಮಧ್ಯದಲ್ಲಿ ಇರುವ "ಹ"ಕಾರ, "ಕ್ಷ"ಕಾರ, "ಓಂ"ಕಾರಗಳು ನಿರಂಜನ ಶೂನ್ಯ ನಿಷ್ಕಲ ತತ್ವಗಳಾಗಿವೆ.

* ಶಕ್ತತ್ರಯ : ಕಲಾ, ನಾದ, ಬಿಂದು.

* ಪ್ರಣವತ್ರಯ : ಅ, ಉ, ಮ ಇದು ಲಿಂಗಾಂಗ ಸಂಬಂಧವಾಗಿರುವುದು.

* "ಬಸವ" ಅಕ್ಷರತ್ರಯಗಳು : ತತ್ವತ್ರಯ, ಆತ್ಮತ್ರಯ, ಚಿತ್ಕಲಾಬಿಂದು, ನಾದತ್ರಯ, ಮಂತ್ರತ್ರಯ, ಲಿಂಗತ್ರಯ ಈ ಸ್ವರೂಪವಾಗಿರುವುದು.

* "ಮ. ಅ. ಉ. (ಓಂ) ಮಂತ್ರ ಶಕ್ತಿತ್ರಯಗಳು" : ೧. ಶಕ್ತಿತ್ರಯ, ೨. ತನುತ್ರಯ, ೩. ಸತ್ಕಲ ನಾದಬಿಂದು ತ್ರಯ, ೪. ಪ್ರಣವತ್ರಯ. ಹೀಗೆ ಅಂಗತ್ರಯ ರೂಪ ಪಡೆದಿರುವುದು. ಹಾಗೆ ನಡುವಿನ ದಳದಲ್ಲಿರುವ ಅಕ್ಷರಗಳೊಳಗೆ "ಹ್ರಃ" ಕಾರದ ಆರು ಅಕ್ಷರಗಳಿಗೆ ೬ ಆತ್ಮ, ೬ ಸಾದಾಖ್ಯ, ೬ ಪ್ರಸಾದ ಮಂತ್ರ, ೬ ಲಿಂಗ, ೬ ಅಕ್ಷರ ಪ್ರಣವ ಷಟ್‌ಸ್ಥಲ ಲಿಂಗದ ರೂಪವಾಗಿರುವುದು.

ಮುಂದೆ ನೀಳ ಚೌರಸದಲ್ಲಿ ಆರು ವಿಧದ ಮನೆಗಳ ನಡುವಿನ ಸ್ಥಳದ ಮೂಲೆಯ ಮನೆಗಳಲ್ಲಿ ಬಲಗಡೆಯಿಂದ "ಮ. ಅ. ಉ." ಈ ಕ್ಷರಗಳು.

* ಬಲಗಡೆಯ "ಮ.ಅ.ಉ" : ೧. ಲಕ್ಷಣತ್ರಯ, ೨. ವರ್ಣತ್ರಯ, ೩. ಗುಣತ್ರಯ ೪. ಮೂರ್ತಿತ್ರಯ, ೫. ತತ್ವತ್ರಯ, ೬. ಶಕ್ತಿತ್ರಯ ಹೀಗೆ ೧೮ ತತ್ವ, ೧೮ ಮಂತ್ರ, ೧೮ ಲಿಂಗ ರೂಪವಾಗಿರುವುದು.

* ಎಡಗಡೆಯ "ಮ.ಅ.ಉ." : ೧. ತನುತ್ರಯ, ೨. ಇಂದ್ರಿಯ ತ್ರಯ, ೩. ಚೇತನತ್ರಯ, ೪. ಕರಣತ್ರಯ, ೫. ಭಾವತ್ರಯ ಹೀಗೆ ೧೮ ಅಂಗಸ್ವರೂಪವಾಗಿರುವುದು.

ನಂತರ ೯ ಮನೆಗಳಲ್ಲಿರುವ ಅಕ್ಷರಗಳೊಳಗೆ ಬಲಗಡೆಯಿಂದ ಇರುವ ಷಡ್ವರ್ಣಗಳು.

* ಬಲಗಡೆಯ ಮಿಶ್ರ ಷಡ್‌ವರ್ಣಗಳು : ೧. ಷಡ್ ಲಕ್ಷಣ, ೨. ಷಡ್‌ವರ್ಣ, ೩. ಷಡ್‌ಗುಣ, ೪. ಷಣ್ಮೂರ್ತಿ, ೫. ಷಟ್‌ತತ್ವ, ೬. ಷಡ್‌ಶಕ್ತಿ ಹೀಗೆ ೩೬ ತತ್ವ, ೩೬ ಮಂತ್ರ, ೩೬ ಲಿಂಗ ಸ್ವರೂಪವಾಗಿರುವುದು.

೬೩. ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು : ಶಿವಾನುಭವಶಾಸ್ತ್ರ : ಪುಟ ೭೩

* ಎಡಗಡೆಯ ಮಿಶ್ರ ಷಡ್ವರ್ಣಗಳು : ಕರ್ಮೇಂದ್ರಿಯ ಷಡ್ವಿಧ, ೨. ವಿಷಯ ಷಡ್ವಿಧ, ೩. ಜ್ಞಾನೇಂದ್ರಿಯ ಷಡ್ವಿಧ, ೪. ವಾಯು ಷಡ್ವಿಧ, ೫. ಕರಣ ಷಡ್ವಿಧ, ೬. ಭಾವ ಷಡ್ವಿಧ ಹೀಗೆ ೩೬ ಕರಣ, ೩೬ ಪ್ರಣವ, ೩೬ ಅಂಗ ಸ್ವರೂಪವಾಗಿರುವುದು.

ಈ ರೀತಿಯಾಗಿ ಒಟ್ಟು ಕೂಡಲು : ೧೦೮ ತತ್ವ, ೧೦೮ ಕರಣ, ೧೦೮ ಮಂತ್ರ ಪ್ರಣವ, ೧೦೮ ಲಿಂಗಾಂಗಗಳಾದವು.

ಎಂದು ಈ ಜ್ಞಾನ ಲಿಂಗೋದ್ಧರಣಿಯಲ್ಲಿ ತತ್ವ ಷಡಕ್ಷರ ಷಡದ್ವಯ ಅಕ್ಷ ಸಂಬಂಧ ತಿಳಿಸಿ ಶಿವಯೋಗದ ಸಾಧನ ಮಾರ್ಗವನ್ನು ಪಟಲ ಹಾಗೂ ವಾಚ್ಯದಲ್ಲಿ ವಿವರವಾಗಿ ವಿಷಯ ನಿರೂಪಣೆ ಆಗಿರುವುದು.

ಇದೇ ರೀತಿಯಾಗಿ ತಪ್ಪದೇ ಅಡ್ಡ ಆರು ಚೌರಸ ಮನೆಗಳಲ್ಲಿ ಒಂಬತ್ತೊಂಬತ್ತು ಮನೆಗಳಿದ್ದು, ಅಲ್ಲಿ ಇರುವ ಮಿಶ್ರ ಷಡ್ವರ್ಣಗಳು ಪ್ರತಿಯೊಂದು ಮಿಶ್ರ ಸಂಖ್ಯಾಬೇದದಿಂದ ಕೂಡಿದಾಗ ೨೧೬ ತತ್ವಕಾರಣ, ೧೦೮ ಪ್ರಣವ ಮಂತ್ರದಿಂದಾಗಿ ಲಿಂಗಾಂಗ ಸಾಮರಸ್ಯವುಂಟಾಗಿ ಮುಕ್ತಿ ಸಿಗುವುದು.

* **ಲಿಂಗ ಸಕೀಲಗಳು :**

೧. ಲಿಂಗ, ೨. ಹಸ್ತ, ೩. ಶಕ್ತಿ, ೪. ಪ್ರಸಾದ.

* **ಅಂಗ ಸಕೀಲಗಳು :**

೧. ಅಂಗ, ೨. ಮುಖ, ೩. ಭಕ್ತಿ, ೪. ಪದಾರ್ಥ.

ಈ ರೀತಿಯಾಗಿ ಅಂಗ, ಲಿಂಗ, ಸಕೀಲ ಸಂಬಂಧ ಉಂಟಾಗುವುದೆಂಬುದು ತಿಳಿದುಬರುತ್ತದೆ.

ಇನ್ನು ಮೇಲಿರುವ ೧೨ ಕೃತಿಗಳ ನಡುವಿನ ಸ್ಥಲವಾದ ೧೦೮ ಮನೆಗಳಲ್ಲಿರುವ ಅಕ್ಷರಗಳು ಭಾವನಾ ಕಲಾಮೂರ್ತಿ ಭಾವನಾ ತತ್ವ ಶಿವಶಕ್ತಿ ಪ್ರಕೃತಿ ಪುರುಷರೆಂಬ ೧೦೮ ತತ್ವ, ೧೦೮ ಕರಣ, ೧೦೮ ರುದ್ರ, ೧೦೮ ಶಕ್ತಿ.

| | |
|---|---|
| * **ಲಿಂಗತ್ರಯ :** ೧. ಗುರು, ೨. ಚರ, ೩. ಪರ | – ೦೩ |
| * **ಅಂಗತ್ರಯ :** ೧. ಮಂತ್ರ, ೨. ಜ್ಞಾನ, ೩. ಪ್ರಸಾದ | – ೦೩ |
| * **ಸ್ವಶೂನ್ಯ ನಿರಾಲಂಬಸ್ಥಲ :** | – ೦೧ |
| * **ಅಂಗಸ್ಥಲ :** | – ೪೪ |
| * **ಲಿಂಗಸ್ಥಲ :** | – ೫೭ |
| | ೧೦೮ ಸ್ಥಲ |

ಸ್ವರೂಪವಾಗಿರುವುದು.

ಇದರ ಸಂಬಂಧ ಸ್ಥಳದ ವಿವರವಿರುವುದು ಹಾಗೆಯೇ ಚೌರಸದ ನಡುವೆ ಇರುವ ಸ್ಥಲದ ಆರು ಮನೆಯಲ್ಲಿರುವ ಅಕ್ಷರಗಳೆಲ್ಲ ಅಷ್ಟಮೂರ್ತಿ, ಅಷ್ಟತನ, ಅಷ್ಟಮಂತ್ರ, ಅಷ್ಟಲಿಂಗ – ಅಂಗ ಸಂಬಂಧವನ್ನು ಹಾಗೂ ಮೂರು ಮೂರು ರೀತಿಯಲ್ಲಿ ಅಷ್ಟಾವರಣ ರೂಪವಾಗಿರುವುದೆಂದು ತಿಳಿಸಿ ಇದನ್ನು ಅರಿತು ಅಳವಡಿಸಿಕೊಂಡು ಆಚರಿಸಿದ್ದೇ ಆದರೆ, ಸರ್ವಸಿದ್ಧಿ ಲಭಿಸುವುದು. ಶಿವನೊಂದಿಗೆ ಅಕ್ಷರ, ಮಂತ್ರಾಕ್ಷರ, ಪ್ರಣವಗಳ ಮೂಲಕ ಚಕ್ರಾಕಾರದ ಚಿತ್ರ ವಾಚ್ಯದಲ್ಲಿ ಹೇಳಲಾಗಿದೆ. ಇದನ್ನು ನೋಡಿ, ಕೇಳಿ, ಓದಿ ನೆನಪಿನಲ್ಲಿಟ್ಟುಕೊಂಡು, ಅಳವಡಿಸಿಕೊಂಡು ಮುಕ್ತಿಪಥ ಹೊಂದಲು, ಸಂಸ್ಕಾರ ಹೊಂದಲು ದಿವ್ಯಜ್ಞಾನ ಜ್ಯೋತಿಯಂತಿದೆ ಈ ಜ್ಞಾನಚಕ್ರೋದ್ಧರಣಿಯು.

*** ಉದ್ಧರಣಿ ಸಾಹಿತ್ಯದಲ್ಲಿಯ ಚಿತ್ರ : ೨೫-೧ :**

ಈ "ಜ್ಞಾನ ಚಕ್ರೋದ್ಧರಣಿ" ಚಿತ್ರವನ್ನು ೧' x ೧' ಅಡಿ ಅಳತೆಯ ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ಈ ಚೌರಸ ಆಕಾರಕ್ಕೆ ಹಳದಿ ವರ್ಣವನ್ನು ತುಂಬಲಾಗಿದ್ದು, ಅಂಚಿನಲ್ಲಿ ಅಲಂಕಾರಿಕ ನಕ್ಷೆಯ ಪಟ್ಟಿಯನ್ನು ಮಾಡಲಾಗಿದೆ. ಒಳಗಡೆ ಮಧ್ಯದಲ್ಲಿ ಚಿಕ್ಕದಾದ ಹಳದಿ ವರ್ಣದ ಷಟ್‌ಕೋನವನ್ನು ಚಿತ್ರಿಸಿದ್ದು, ಅದರೊಳಗೆ "ಕ್ಷ, ಹ, ಓಂ" ಎಂಬ ಅಕ್ಷರ ಬರೆಯಲಾಗಿದೆ. ಅದರ ಸುತ್ತಲೂ ಆರು ಭುಜಗಳಿಗೆ ಆರು ತ್ರಿಕೋನಗಳ ಕಂದುಗೆಂಪು ವರ್ಣದ ಮನೆಯನ್ನು ಮಾಡಿ, ಅವುಗಳಲ್ಲಿ "ವ, ಮ, ಬ, ಅ, ಸ, ವು" ಈ ಮಂತ್ರಾಕ್ಷರ ವಿನ್ಯಾಸಗೊಳಿಸಲಾಗಿದೆ. ಇದರ ಹೊರ ವೃತ್ತದಲ್ಲಿ ತ್ರಿಕೋನಾಕಾರದ ಹಳದಿ ಬಣ್ಣದ ಆರು ಮನೆಗಳನ್ನು ಮಾಡಿದ್ದು, ಅದರಲ್ಲಿ "ಓಂ, ಯ, ವಾ, ಶಿ, ಮಃ, ನ" ಎಂಬ ಷಡಕ್ಷರ ಮಂತ್ರಾಕ್ಷರಗಳನ್ನು ಬರೆಯಲಾಗಿದೆ. ಇದರ ಸುತ್ತಲೂ ಹೊರಭಾಗದಲ್ಲಿ ಹಳದಿ ವರ್ಣದ ನಕ್ಷತ್ರಾಕಾರದಲ್ಲಿ ತ್ರಿಕೋನದ ಮನೆಗಳನ್ನು ಮಾಡಿ "ಹ್ರಃ, ಹ್ರೋಂ, ಹ್ರೆಂ ಹ್ರೂಂ, ಹ್ರಿಂ, ಹ್ರಾಂ" ಅಕ್ಷರ ನ್ಯಾಸ ಮಾಡಲಾಗಿದೆ. ಈ ಹಳದಿ ತ್ರಿಕೋನಗಳ ಹಿನ್ನೆಲೆಯ ಮಧ್ಯದಲ್ಲಿ ಷಟ್ ಭುಜವನ್ನು ರಚಿಸಿ ಅದಕ್ಕೆ ಕಪ್ಪು ಹಸಿರು ವರ್ಣವನ್ನು ತುಂಬಲಾಗಿದೆ. ಈ ಹಸಿರು ವರ್ಣದ ತ್ರಿಕೋನಗಳ ಮನೆಯಲ್ಲಿ "ವು" ಅಕ್ಷರವನ್ನು ಎಲ್ಲ ಆರೂ ಕಡೆ ಬರೆಯಲಾಗಿದೆ. ಈದರ ಮೇಲ್ಗಡೆ ಷಡ್ಭುಜಾಕೃತಿಯನ್ನು ರಚಿಸಿ, ಅವುಗಳಿಗೆ ಕಂದುಗೆಂಪು ವರ್ಣವನ್ನು ತುಂಬಿ, ಅದರಲ್ಲಿ ಚೌರಸದ ಒಂಭತ್ತು ಮನೆಗಳನ್ನು ಮಾಡಿಕೊಂಡು ಅವುಗಳಲ್ಲಿ "ನ, ಮಃ, ಶಿ, ವಾ, ಯ, ಓಂ" ಎಂಬ ಷಡಕ್ಷರ ಮಂತ್ರಾಕ್ಷರವನ್ನು ಬರೆಯಲಾಗಿದೆ. ಷಡ್ಭುಜದ ಎಲ್ಲ ದಳಗಳಲ್ಲಿಯ ಮನೆಗಳಲ್ಲಿ ಅಕ್ಷರ ವಿನ್ಯಾಸ ಮಾಡಲಾಗಿದೆ. ಈ ಷಡ್ಭುಜಗಳ ತುದಿಯ ಭುಜಗಳಲ್ಲಿ ತ್ರಿಕೋನಗಳನ್ನು ಕಪ್ಪು, ಹಸಿರು ಬಣ್ಣದಿಂದ ತುಂಬಲಾಗಿದೆ. ಈ ತುದಿಗಳಿಗೆ ಹತ್ತಿಕೊಂಡು ಹನ್ನೆರಡು ಭುಜಗಳನ್ನು ಹೊಂದಿದ ವೃತ್ತವನ್ನು ರಚಿಸಿ, ಅದಕ್ಕೆ ಕಪ್ಪು, ಹಸಿರು ವರ್ಣವನ್ನು ತುಂಬಲಾಗಿದೆ. ಇದರ ಒಳಗಡೆ ಇರುವ ಹಳದಿ ವರ್ಣದಲ್ಲಿ ಚೌರಸಗಳನ್ನು ರಚಿಸಿಕೊಂಡು ಆ

ಚೌರಸದ ಮನೆಗಳಲ್ಲಿ "ನ, ಮಃ, ಶಿ, ವಾ, ಯ, ಶಿ, ವಾ, ಯ, ಓಂ, ಓಂ, ಶಿ, ವಾ, ಯ" ಹೀಗೆ ವಿಭಿನ್ನ ರೀತಿಯಲ್ಲಿ ಮಂತ್ರವನ್ನು ವಿನ್ಯಾಸಗೊಳಿಸಲಾಗಿದೆ. ಹೊರಗಡೆ ರಚಿಸಿದ (೧೨ ಭುಜಗಳುಳ್ಳ) ದ್ವಾದಶ ಚಕ್ರದ ಪಟ್ಟಿಯು ಕಪ್ಪು, ಹಸಿರು ವರ್ಣದ್ದಾಗಿದ್ದು, ಅದರ ಮೇಲೆ ೫೪ ಕೆಂಪು ದಳಗಳನ್ನು ರಚಿಸಿ, ಅವುಗಳಲ್ಲಿ ಕನ್ನಡದ ೫೪ ಅಕ್ಷರಗಳನ್ನು ಬರೆಯಲಾಗಿದೆ. ಒಂದು ಬದಿಗೆ ಸೀದಾ ಬರೆದಿದ್ದು, ಇನ್ನೊಂದು ಬದಿಗೆ ತಲೆ ಕೆಳಗಾಗಿ ಆ ಅಕ್ಷರದ ವಿನ್ಯಾಸ ಮಾಡಲಾಗಿದೆ. ಈ ನಾಲ್ಕು ಮೂಲೆಗೆ ಧ್ವಜದಂತೆ ಎರಡೆರಡು ಕಂದುಗೆಂಪು ವರ್ಣದ ದಳಗಳನ್ನು ಕಪ್ಪು ದೇಟಿನ ಎಡಬಲಗಳಲ್ಲಿ ಚಿತ್ರಿಸಲಾಗಿದೆ. ಈ ದಳಗಳ ಮೇಲೆ "ಬ, ಸ, ವ, ಅ, ಉ, ಹ, ಕ್ಷ" ಎಂಬ ಅಕ್ಷರಗಳನ್ನು ನ್ಯಾಸ ಮಾಡಲಾಗಿದೆ. ಈ ಪಟಲವು ಸಂಪೂರ್ಣ ಮಂತ್ರ ವಿನ್ಯಾಸದಿಂದ ಕೂಡಿರುವುದು. ಶಿವಯೋಗ ಸಾಧಕರು, ಯೋಗಿಗಳು ಇದನ್ನು ಕುರಿತು ನಿಜಜ್ಞಾನ ಪಡೆದು ಸಾಧಕರಾಗುವ, ಶಿವಮಯವಾಗುವ ಅರಿವಿನ ಪಟಲ ಇದಾಗಿದೆ. ಅಲ್ಲದೇ ಇದು ನೋಡಲು ಆಕರ್ಷಕವಾಗಿ ಕಾಣುತ್ತಿದೆ.

*** ಕ.ವಿ.ವಿ. ಹಂಪಿಯಲ್ಲಿಯ ಕಾಗದದ ಪ್ರತಿ : ೨೫-೨ :**

ಈ "ಜ್ಞಾನ ಚಕ್ರೋದ್ಧರಣಿಯ ಚಿತ್ರ"ವನ್ನು ೧' x ೧' ಅಡಿ ಅಳತೆಯ ಕಾಗದದ ಮೇಲೆ ಜಲವರ್ಣದಲ್ಲಿ ಚಿತ್ರಿಸಲಾಗಿದೆ. ಕಾಗದದ ಮಧ್ಯದಲ್ಲಿ ಚಿಕ್ಕದಾದ ಷಟ್‌ಭುಜಾಕೃತಿಯನ್ನು ಬಿಳಿಯ ವರ್ಣದಲ್ಲಿ ರಚಿಸಲಾಗಿ, ಷಟ್ ಭುಜಗಳಿಗೆ ಒಂದೊಂದರಂತೆ ಗುಲಾಬಿ ವರ್ಣದ ತ್ರಿಕೋನಗಳನ್ನು ರಚಿಸಲಾಗಿದೆ. ಈ ಷಟ್ ಚಕ್ರದ ತುದಿಗಳಿಗೆ ತಾಗುವಂತೆ ವೃತ್ತ ಪಟ್ಟಿಯನ್ನು ರಚಿಸಿ, ಅದಕ್ಕೆ ತಿಳಿ ನೀಲಿ ವರ್ಣವನ್ನು ತುಂಬಲಾಗಿದೆ.ಈ ವೃತ್ತಕ್ಕೆ ಷಟ್‌ಚಕ್ರವನ್ನು ಬಿಳಿ ವರ್ಣದಲ್ಲಿ ಮಾಡಿದ್ದು, ಈ ಚಕ್ರದ ಒಂದೊಂದು ತುದಿಗೆ ಎರಡೆರಡು ಗುಲಾಬಿ ವರ್ಣದ ತ್ರಿಕೋನಗಳನ್ನು ಅಂದರೆ ಒಟ್ಟು ಹನ್ನೆರಡು ತ್ರಿಕೋನಗಳನ್ನು ರಚಿಸಲಾಗಿದೆ. ಇವುಗಳ ಮಧ್ಯದಲ್ಲಿ ಒಂದೊಂದು ತಿಳಿ ನೀಲಿ ವರ್ಣದ ದಳಗಳನ್ನು ರಚಿಸಲಾಗಿದ್ದು, ಈ ದಳಗಳಿಗೆ ಹಾಗೂ ಹನ್ನೆರಡು ತ್ರಿಕೋನಗಳ ತುದಿಗಳಿಗೆ ತಾಗುವಂತೆ ನೀಲಿಯ ವೃತ್ತವನ್ನು ರಚಿಸಲಾಗಿದೆ. ಈ ವೃತ್ತಕ್ಕೆ ಹೊಂದಿಕೊಂಡು ಷಟ್‌ಚಕ್ರವನ್ನು ಜಾಂಬಳಿ ವರ್ಣದ ರೇಖೆಗಳಿಂದ ರಚಿಸಲಾಗಿದ್ದು, ಈ ಚಕ್ರದಲ್ಲಿ ತ್ರಿಕೋನಾಕಾರದಲ್ಲಿ ಗುಲಾಬಿ, ಬಿಳಿ, ನೀಲಿ ವರ್ಣಗಳನ್ನು ತುಂಬಲಾಗಿದೆ. ಈ ತ್ರಿಕೋನದ ಮಧ್ಯದಲ್ಲಿಯ ವೃತ್ತದಿಂದ ತ್ರಿಕೋನದ ತುದಿಯಲ್ಲಿ ಒಂದೊಂದು ಗುಲಾಬಿ ವರ್ಣದ ದಳಗಳಿದ್ದು, ಅದರ ತುದಿಗೆ ತಾಗುವಂತೆ ವೃತ್ತದ ಪಟ್ಟಿಯನ್ನು ಜಾಂಬಳಿ ವರ್ಣದಲ್ಲಿ ಮಾಡಿದ್ದು, ಈ ಜಾಂಬಳಿ ವೃತ್ತದ ಮಧ್ಯದಲ್ಲಿ ಒಂದು ಬಿಳಿ ವರ್ಣದ ವೃತ್ತವನ್ನು ಮಾಡಿದ್ದು, ಕೆಳಗಿನ ಪಟ್ಟಿಯಲ್ಲಿ ಬಿಳಿ ವರ್ಣದ ದಳಗಳನ್ನು ಮೇಲ್ಮುಖವಾಗಿ ಮಾಡಿದ್ದು ೫೪ ಅಕ್ಷರಗಳನ್ನು ಬರೆಯಲಾಗಿದೆ. ಮೇಲಿನ ಜಾಂಬಳಿ ವೃತ್ತದಲ್ಲಿ ಕೆಳಮುಖವಾಗಿ ಬಿಳಿಯ ವರ್ಣದಲ್ಲಿ ದಳಗಳನ್ನು ಮಾಡಲಾಗಿದೆ. ತ್ರಿಕೋನದಿಂದ ತ್ರಿಕೋನದ ಮಧ್ಯದಲ್ಲಿ ೮ ದಳಗಳಿದ್ದು, ತ್ರಿಕೋನದಲ್ಲಿ ಒಂದೊಂದು ದಳಗಳನ್ನು ಮಾಡಿದ್ದು ಒಟ್ಟು ೫೪ ದಳಗಳಾಗಿದ್ದು, ಕನ್ನಡದಲ್ಲಿಯ ಒಟ್ಟೂ ೫೪ ಅಕ್ಷರಗಳನ್ನು ಇಲ್ಲಿ ನ್ಯಾಸ ಮಾಡಲಾಗಿದೆ. ಒಟ್ಟಾರೆ ಈ ಚಿತ್ರದ ಕಲಾವಿದ ಆಕಾರ,

[illegible]

ಆಕೃತಿ, ಜಾಮಿತಿ ಆಕೃತಿಗಳ ತಜ್ಞನೇ ಆಗಿದ್ದು, ವರ್ಣಗಾರಿಕೆಯಲ್ಲೂ ಉತ್ಕೃಷ್ಟವಾದ ಜ್ಞಾನವನ್ನು ಹೊಂದಿರುವುದು ತಿಳಿದುಬರುತ್ತದೆ.

*** ಕ.ವಿ.ವಿ. ಹಂಪೆಯಲ್ಲಿಯ ತಾಳೆ ಓಲೆಗರಿ ಚಿತ್ರ : ೨೫-೩ :**

ತಾಳೆ ಓಲೆಗರಿಗಳ ಮೇಲೆ "ಜ್ಞಾನ ಚಕ್ರೋದ್ಧರಣಿಯ ಚಿತ್ರ"ವನ್ನು ಕಪ್ಪು ವರ್ಣದ ರೇಖೆಗಳಿಂದ ಚಿತ್ರಿಸಲಾಗಿದ್ದು, ಈ ಚಿತ್ರದಲ್ಲಿಯ ರೇಖೆಗಳು ಅದರಲ್ಲಿ ರಚನೆಗೊಂಡ ಮನೆಗಳಲ್ಲಿಯ ಅಕ್ಷರ ವಿನ್ಯಾಸಗಳು ಸ್ಪಷ್ಟವಾಗಿ ಕಾಣುತ್ತಿದ್ದು, ಮನೆಗಳನ್ನು ರಚಿಸಿದ ರೀತಿ, ಚಿತ್ರಿಸಿದ ವಿನ್ಯಾಸ, ರಚನೆಯ ಕ್ರಮಗಳನ್ನು ಕಂಡುಕೊಳ್ಳುವುದು ಕಷ್ಟಕರವಾಗಿದ್ದು, ಉಳಿದಂತೆ ಅಲಂಕಾರಿಕವಾಗಿ, ತಾತ್ವಿಕವಾಗಿ ರೇಖಾ ಪ್ರಧಾನ ಕಲಾಕೃತಿ ಉತ್ತಮವಾಗಿ ಮೂಡಿಬಂದಿದೆ. ಈ ಚಿತ್ರ ರಚನೆಗೊಂಡ ಚೌರಸದ ಕೋನಗಳಲ್ಲಿ ಕರ್ಣಗಳನ್ನು ಎಳೆಯಲಾಗಿದ್ದು, ಅದರ ಎಡಬಲಗಳಲ್ಲಿ ಬ, ಸ, ವ, ಅ, ಉ, ಹ, ಕ್ಷ ಎಂಬ ಅಕ್ಷರಗಳನ್ನು ಹೊರ ಬದಿಯಲ್ಲಿ ನ್ಯಾಸ ಮಾಡಲಾಗಿದೆ. ಈ ಚೌರಸದ ಎಡಬಲಗಳ್ಲಿ ಆಯತಾಕಾರದ ಅಲಂಕಾರಿಕ ನಕ್ಷೆಯ ಅಂಚುಪಟ್ಟಿಯನ್ನು ಮಾಡಿದ್ದು, ಅವುಗಳ ಮಧ್ಯದಲ್ಲಿ ವೃಕ್ಷದ ಕೆಳಗೆ ಋಷಿಯೊಬ್ಬ ನಿಂತುಕೊಂಡು ಒಂದು ಕೈ ಮೇಲೆ ಮಾಡಿ ಏನನ್ನೋ ಸೂಚಿಸುತ್ತಿರುವಂತೆ ಚಿತ್ರಿಸಲಾಗಿದೆ. ಎರಡೂ ಓಲೆಗರಿಗಳ ಮೇಲೆ ಚಿತ್ರಿಸಲಾಗಿದೆ.

*** ಗು.ವಿ.ವಿ. ಗುಲಬುರ್ಗಾದಲ್ಲಿಯ ಚಿತ್ರ : ೨೫-೪ :**

ಈ "ಜ್ಞಾನ ಚಕ್ರೋದ್ಧರಣಿಯ ಚಿತ್ರ"ವನ್ನು ೧' x ೧' ಅಡಿ ಅಳತೆಯ ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ರೇಖಾ ಚಿತ್ರವನ್ನು ಚೆನ್ನಾಗಿ ಚಿತ್ರಿಸಿದ್ದು, ವರ್ಣಗಳ ಬಳಕೆಯಲ್ಲಿ ಸೊರಗಿದ ಚಿತ್ರವಾಗಿದೆ. ಮಧ್ಯದಲ್ಲಿರುವ ಷಡ್ಭುಜವು ಷಟ್ಚಕ್ರದಲ್ಲಿ ಬೆರೆತಿದೆ, ಕಪ್ಪು ವರ್ಣದಲ್ಲಿ ಮುಚ್ಚಿಕೊಂಡಿದೆ. ಕೆಂಪು ವರ್ಣದ ಷಟ್ ದಳಗಳ ಮೇಲಿನ ಮನೆಗಳಲ್ಲಿಯ ರೇಖೆಗಳು ನಿರ್ಧಿಷ್ಟವಾಗಿಲ್ಲ, ಅಕ್ಷರ ನ್ಯಾಸವೂ ಸರಿಯಾಗಿ ಕಂಡುಬರುತ್ತಿಲ್ಲ. ಕೆಲವೊಂದು ಮನೆಗಳಲ್ಲಿ ಅಕ್ಷರಗಳೇ ಇಲ್ಲ, ಇನ್ನೂ ಕೆಲವು ಕಡೆ ಅನಗತ್ಯವಾಗಿ ಮನೆಗಳನ್ನು ರಚಿಸಲಾಗಿದೆ. ಒಟ್ಟಾರೆ ಈ ಚಿತ್ರ ಕಲಾವಿದ ಅಲಂಕಾರಿಕವಾಗಿ ಚೆನ್ನಾಗಿ ರೇಖಾ ಚಿತ್ರವನ್ನು ಮಾಡಿದ್ದರೂ, ವರ್ಣಗಳ ಬಳಕೆಯಲ್ಲಿ ಅಪ್ರಬುದ್ಧತೆ ಕಂಡುಬರುತ್ತದೆ. ಅಕ್ಷರ ವಿನ್ಯಾಸದಲ್ಲಿ ಅಂದರೆ ತಾತ್ವಿಕವಾಗಿಯೂ ಪ್ರಬುದ್ಧತೆಯನ್ನು ಹೊಂದಿದಂತೆ ಕಂಡುಬರುವುದಿಲ್ಲ. ಒಟ್ಟಾರೆ ಆ ಸಂದರ್ಭದಲ್ಲಿ ರಚನೆಯಾದ ಕಲಾಕೃತಿ ಮಾಡಿದ ಪ್ರಯತ್ನಗಳು ಉತ್ತಮವೆಂದೇ ತಿಳಿದುಬರುತ್ತದೆ.

*** ಧರ್ಮಸ್ಥಳದಲ್ಲಿ ದೊರೆತ ಚಿತ್ರ : ೨೫-೫ :**

೧ x ೧ ಅಡಿ ಅಳತೆಯ ಕಾಗದದ ಮೇಲೆ ಜಲವರ್ಣದಲ್ಲಿ ರಚಿಸಿದ ಕಲಾಕೃತಿಯಾಗಿದ್ದು, ಕಾಗದದ ಮೇಲೆ (ಆಕರ್ ಎಲೋ) ಹಳದಿ ವರ್ಣವನ್ನು ಲೇಪಿಸಲಾಗಿದ್ದು, ಕಾಗದದ ಎಡಬಲಗಳಲ್ಲಿ ನೈಸರ್ಗಿಕ ನಕ್ಷೆಯೊಂದಿಗೆ ಅಂಚನ್ನು ರಚಿಸಿಕೊಂಡು, ಮಧ್ಯದಲ್ಲಿ ಚೌರಸವನ್ನು ರಚಿಸಿಕೊಂಡು ನಾಲ್ಕೂ ಮೂಲೆಗಳಿಗೆ

ಒಂದೊಂದು ದಳಗಳನ್ನು ಮಾಡಿಕೊಳ್ಳಲಾಗಿದೆ. ಮಧ್ಯದಲ್ಲಿ ಹಿನ್ನೆಲೆಯ ಹಳದಿ ವರ್ಣದ ಮೇಲೆ ಬಹುಶಃ ಪೆನ್ನಿನಂತಹ ಅಥವಾ ಕಂಠದಂತಹ ಲೆಕ್ಕಣಿಕೆಯಿಂದ ರೇಖಾ ಪ್ರಧಾನವಾಗಿ ಕೆಂಪು ವರ್ಣದಿಂದ ಚಿತ್ರಿಸಲಾಗಿದೆ. ಅಕ್ಷರ ನ್ಯಾಸವನ್ನು ಮೇಲೆ ಹೇಳಿದಂತೆ ಬರೆಯಲಾಗಿದೆ. ಸೂಕ್ಷ್ಮ ಗೆರೆಗಳಿಂದ ರೇಖಾ ಪ್ರಾಧನವಾಗಿಯೇ ರೂಪುಗೊಂಡ ಈ ಚಿತ್ರದ ಹೊರಬದಿಯಲ್ಲಿ ಹೂವಿನಾಕೃತಿಯ ದಳಗಳಂತೆ ಕಪ್ಪು ಗೆರೆಗಳಿಂದ ಅರ್ಧ ವೃತ್ತವನ್ನು ಮಾಡಲಾಗಿದೆ. ಈ ಹೂವಿನ ದಳಗಳ ಹೊರಬದಿಯ ಚೌರಸದ ಒಳಗಡೆ ಎದ್ದು ಕಾಣುವಂತೆ ಕೆಂಪು ವರ್ಣವನ್ನು ತುಂಬಲಾಗಿದೆ. ಚೌರಸಕ್ಕೆ ಕಪ್ಪು ವರ್ಣದಿಂದ ಎರಡು ರೇಖೆಗಳನ್ನು ಸುತ್ತಲೂ ಹಾಕಲಾಗಿದೆ.

**ಕ. ವಿ. ವಿ. ಧಾರವಾಡದಲ್ಲಿಯ ಚಿತ್ರ : ೨೫-೬ :**

ಈ "ಜ್ಞಾನ ಚಕ್ರೋದ್ಧರಣಿ ಚಿತ್ರ" ವನ್ನು ೧' x ೧' ಅಡಿ ಅಳತೆಯ ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ಕಾಗದದ ಮಧ್ಯದಲ್ಲಿ ತಿಳಿಗುಲಾಬಿ ವರ್ಣದಿಂದ ಷಡ್ಭುಜಾಕೃತಿಯ ಚಿತ್ರವನ್ನು ರಚಿಸಲಾಗಿದೆ. ಈ ಆರೂ ಭುಜಗಳಿಗೆ ಬಿಳಿವರ್ಣದಲ್ಲಿ ಷಟ್‌ಚಕ್ರವನ್ನು ರಚಿಸಲಾಗಿದೆ. ಈ ಚಕ್ರದ ತ್ರಿಕೋನಗಳ ಮಧ್ಯದಲ್ಲಿ ಕೆಂಪುವರ್ಣದ ಆರುದಳಗಳನ್ನು ಚಿತ್ರಿಸಲಾಗಿದೆ. ಈ ದಳಗಳ ಮಧ್ಯದಲ್ಲಿ ಬರುವಂತೆ ಹಳದಿ ವರ್ಣದ ದಳಗಳನ್ನು ಆರು ರಚಿಸಲಾಗಿದೆ. ಈ ಹಳದಿ ದಳಗಳ ಮಧ್ಯದಲ್ಲಿ ತಿಳಿಗುಲಾಬಿ ವರ್ಣದ ಆರು ದಳಗಳನ್ನು ಚಿತ್ರಿಸಲಾಗಿದೆ. ಹಳದಿ ವರ್ಣದ ವೃತ್ತ ಪಟ್ಟಿಯನ್ನು ಈ ಗುಲಾಬಿ ದಳಗಳ ತುದಿಯಲ್ಲಿ ರಚಿಸಲಾಗಿದ್ದು, ಈ ಗುಲಾಬಿದಳಗಳ ತುದಿಯ ಮುಂದುಗಡೆ ಕಪ್ಪು ವರ್ಣದ ಚಿಕ್ಕ ಚೌರಸಗಳನ್ನು ಮಾಡಿದ್ದು, ಈ ದಳಗಳ ಮಧ್ಯದಲ್ಲಿ ಒಂದೊಂದು ಕಪ್ಪುವರ್ಣದ ಚೌರಸ್ ಮಾಡಿದ್ದು ಹಳದಿವರ್ಣದ ಪಟ್ಟಿಯಲ್ಲಿ ಬಿಳಿವರ್ಣದ ಚಿಕ್ಕ ಚಿಕ್ಕ ೫ಳ ಮನೆಗಳನ್ನು ಕೆಳಗಡೆ ಹಾಗೂ ಅದರ ಮೇಲ್ಗಡೆ ೫ಳ ಮನೆಗಳನ್ನು ರಚಿಸಿಕೊಂಡಿದ್ದು, ಕನ್ನಡ ಅಕ್ಷರಗಳನ್ನು ನ್ಯಾಸ ಮಾಡಲಾಗಿದ್ದು ಮತ್ತೊಂದು ಸಾಲಿನಲ್ಲಿ ತಲೆಕೆಳಗಾಗಿ ಅಕ್ಷರಗಳ ನ್ಯಾಸ ಮಾಡಲಾಗಿದೆ. ಈ ಹಳದಿ ವೃತ್ತದ ಸುತ್ತಲೂ ಕಪ್ಪುವರ್ಣದ ಹಾಗೂ ಹಸಿರುವರ್ಣದ ವೃತ್ತಗಳನ್ನು ಮಾಡಿದ್ದು ಈ ವೃತ್ತದ ನಾಲ್ಕೂ ದಿಕ್ಕಿನಲ್ಲಿ ಹಳದಿವರ್ಣದ ತ್ರಿಶೂಲಾಕಾರದಲ್ಲಿ ಚಿತ್ರಿಸಲಾಗಿದೆ. ಅವುಗಳ ಎಡಬಲಗಳಲ್ಲಿ ಅಕ್ಷರಗಳನ್ನು ಮೇಲಿನಂತೆ ಬರೆಯಲಾಗಿದೆ. ವೃತ್ತದ ನಾಲ್ಕೂ ಬದಿಗಳಲ್ಲಿ ಹೂವಿನಾಕಾರದಲ್ಲಿ ಕೆಂಪುವರ್ಣವನ್ನು ತುಂಬಿದ್ದು ಸುತ್ತಲೂ ಕಪ್ಪುವರ್ಣವನ್ನು ತುಂಬಲಾಗಿದ್ದು, ಚೌರಸದ ನಾಲ್ಕೂ ಮೂಲೆಗಳಲ್ಲಿ ಹೂವಿನ ಚಿತ್ರವನ್ನು ಬರೆದಿದ್ದು, ಅದರಲ್ಲಿ ಚಿತ್ರಕ್ಕೆ ಬಳಸಿದ ಎಲ್ಲ ವರ್ಣಗಳನ್ನು ಬಳಸಲಾಗಿದೆ. ಈ ಚಿತ್ರವು ಅಲಂಕಾರಿಕವಾಗಿಯೂ ಜಾಮಿತಿಕವಾಗಿಯೂ ತಾತ್ವಿಕವಾಗಿಯೂ ಸುಂದರವಾಗಿ ನಿರ್ಮಾಣವಾಗಿದೆ. ಚೌರಸದ ಸುತ್ತಲೂ ಅಲಂಕಾರಿಕ ನಕ್ಷೆಯ ಪಟ್ಟಿಯನ್ನು ಮಾಡಲಾಗಿದೆ.

ಉದ್ಧರಣಿ ವಾಚ್ಯ ದೊರೆಯದ ಚಿತ್ರಗಳು ಕೆಳಗಿನಂತಿವೆ:

೨೬. ಕಾಯಾರ್ಪಣೋದ್ಧರಣಿ

೨೭. ೧೮ ತೆರದ ಅರ್ಪಣೋದ್ಧರಣಿ

೨೮. ೬೬ ತೆರದ ಅರ್ಪಣೋದ್ಧರಣಿ

೨೯. ೪೮ ತೆರದ ಅರ್ಪಣೋದ್ಧರಣಿ

೩೦. ೩೮ ತೆರದ ಅರ್ಪಣೋದ್ಧರಣಿ

೩೧. ೧೦೮ ತೆರದ ಅರ್ಪಣೋದ್ಧರಣಿ

೩೨. ೨೧೬ ತೆರದ ಭಾವಾರ್ಪಣೋದ್ಧರಣಿ

೩೩. ಹೆಸರು ಇಲ್ಲದ ಉದ್ಧರಣಿ

ಈ ಚಿತ್ರಗಳು ನೆರಳು ಬೆಳಕಿನ ಚಿತ್ರಗಳಾಗಿವೆ. ಅವುಗಳನ್ನೂ ಬಳಸಿಕೊಳ್ಳಲಾಗಿದೆ. ಈ ಉದ್ಧರಣಿ ಚಿತ್ರಗಳನ್ನು ಅರಿತು ಅಳವಡಿಸಿಕೊಂಡು ಆಚರಿಸಿದ್ದೇ ಆದರೆ ಸರ್ವಸಿದ್ಧಿ ಲಭಿಸುವುದು. ಈ ಚಿತ್ರ ಮತ್ತು ಸಾಹಿತ್ಯವನ್ನು ನೋಡಿ, ಕೇಳಿ, ಓದಿ ನೆನಪಿನಲ್ಲಿಟ್ಟುಕೊಂಡು ಅಳವಡಿಸಿಕೊಂಡು ಮುಕ್ತಿ ಪಥ ಹೊಂದಲು, ಸಂಸ್ಕಾರ ಪಡೆಯಲು ಈ ಉದ್ಧರಣಿಗಳು ದಿವ್ಯ ಜ್ಞಾನ ಜ್ಯೋತಿಯಂತಿವೆ.

**ಉದ್ಧರಣಿ ಚಿತ್ರಗಳು ನಿತ್ಯ ತತ್ವಗಳ ಪ್ರೇರಕ ಶಕ್ತಿಯಾಗಿರುವ ಸೂತ್ರಗಳು**

* ಭಾರತೀಯರ ಜೀವನದಲ್ಲಿ "ಆಧ್ಯಾತ್ಮಕ್ಕೆ ವಿಶಿಷ್ಟ ಸ್ಥಾನವಿದೆ". ಜಗತ್ತಿನ ಯಾವ ರಾಷ್ಟ್ರವೂ ಭಾರತದಂತೆ ಆಧ್ಯಾತ್ಮಕ್ಕೆ ಈ ಸ್ಥಾನವನ್ನು ನೀಡಿಲ್ಲ.
* ಉದ್ಧರಣಿ ಸಾಹಿತ್ಯ ಹಾಗೂ ಚಿತ್ರಗಳು ಭಾರತೀಯ ಆಧ್ಯಾತ್ಮಿಕ ಸಿದ್ದಿಯ ಪ್ರತೀಕಗಳಾಗಿವೆ.
* ಉದ್ಧರಣಿ ಚಿತ್ರಗಳು ಜೀವ-ಶಿವರಲ್ಲಿರುವ ಅಂತರವನ್ನು ಹೋಗಲಾಡಿಸಿ ಜೀವನನ್ನು ಶಿವನನ್ನಾಗಿ (ಲಿಂಗಾಂಗವಾಗಿ) ಮಾರ್ಪಡಿಸುವ ಪ್ರಯತ್ನ ಅದ್ಭುತವಾದುದು.
* ಉದ್ಧರಣಿ ಚಿತ್ರಗಳು ಶಾಂತಿದಾಯಿಯಾಗಿ, ಭೌತಿಕ ಜೀವನವನ್ನು ರಾಗ-ದ್ವೇಷರಹಿತವನ್ನಾಗಿ ಮಾಡುವುದೇ ಅವುಗಳ ಗುರಿಯಾಗಿದೆ.
* ಉದ್ಧರಣಿ ಚಿತ್ರಗಳು ಅನೇಕತ್ವವನ್ನು ನಿರಾಕರಿಸದಿದ್ದರೂ ಜಾತ್ಯತೀತ ತತ್ವಗಳನ್ನು ಕಟ್ಟಿಕೂಡಿಸುವ ಏಕಸೂತ್ರಕ್ಕೆ ಪ್ರಾಧಾನ್ಯತೆ ಕೊಟ್ಟಿವೆ.
* ಉದ್ಧರಣಿ ಚಿತ್ರಗಳಲ್ಲಿ ಅಧೋಮುಖಿಯಾದ ಜೀವಿಯನ್ನು ಊರ್ಧ್ವಮುಖಗೊಳಿಸುವ ಉತ್ಕರ್ಷಕ ಸಿದ್ಧಾಂತ, ತತ್ವ ಮತ್ತು ತಂತ್ರ ಸಾಹಿತ್ಯ ಅಡಗಿದೆ.

* ಮಾನವನನ್ನು ದೇವಮಾನವನ್ನಾಗಿಸುವ ಉದ್ಧರಣಿಗಳು
* ಉದ್ಧರಣಿಯಲ್ಲಿಯ ವರ್ಣಗಳು ವಿವಿಧ ರೀತಿಯ ಸಂಕೇತಗಳನ್ನು ನೀಡುವವು. ಅದರಲ್ಲಿ ಬಳಸಿದ ಜೀವಿಗಳ ಚಿತ್ರದ ಉಲ್ಲೇಖ ಅಂಡಜ, ಉದ್ವಿಜ, ಸ್ವೇದಜ, ಜರಾಯುಜಗಳ ವಿವರಣೆ ಹೊಂದಿವೆ.
* Purification of body - mind and soul ದೇಹ, ಮನಸ್ಸು, ಆತ್ಮಗಳ ಶುದ್ಧೀಕರಣ ಕ್ರಿಯೆ ಅಧೋಕುಂಡಲಿನಿಯನ್ನು ಊರ್ಧ್ವ ಕುಂಡಲಿನಿಯನ್ನಗಿಸುವುದು. ವಿವಿಧ ಕುಂಭಕಗಳ ಸಾಧನೆ ಮಾಡುವುದು.
* ಮನಸ್ಸಿನ ಶಕ್ತಿ (Will power) ಯನ್ನು ವೃದ್ಧಿಸುವುದು. ಮನಸ್ಸಿನ ದ್ವಂದ್ವಗಳ ಆಘಾತವನ್ನು ತಪ್ಪಿಸುವುದು.
* (A Sound Mind in a Sound body) ಆರೋಗ್ಯಕರ ದೇಹದಲ್ಲಿ ಆರೋಗ್ಯಕರ ಮನಸ್ಸಿರುತ್ತದೆ.
* "ಲಿಂಗಾಂಗ ಸಾಮರಸ್ಯ" ವನ್ನುಂಟು ಮಾಡುತ್ತದೆ. ಆಧ್ಯಾತ್ಮಿಕ ಅನುಭವವನ್ನು ಅಳವಡಿಸುತ್ತವೆ.
* ಅಂತರಂಗವನ್ನು ಅರಿತುಕೊಳ್ಳಲು ಅನುಕೂಲಮಾಡಿಕೊಡುವ ಸಾಂಕೇತಿಕ ದೃಶ್ಯ ಸಾಹಿತ್ಯವಾಗಿದೆ.
* ಸಾಂಖ್ಯ, ಯೋಗ, ಮೀಮಾಂಸೆ, ಅಂಕಿ ಸಂಖ್ಯೆಗಳು, ದೀಕ್ಷಾ ಸಾಹಿತ್ಯ, ಜ್ಯೋತಿಷ್ಯಗಳ ಸಮನ್ವಯವಿರುವ ಸಮೀಕರಿಸಿಕೊಂಡ ಉದ್ಧರಣಿಗಳಾಗಿವೆ.
* ಉದ್ಧರಣಿಗಳು ವೀರಶೈವ ಸ್ವಯಾನುಭೂತ ಸಕೀಲ ಸಮನ್ವಿತ ಸಾಹಿತ್ಯವಾಗಿದೆ.
* ಉದ್ಧರಣಿ – ಉಪಾಸನೆ – ಆರಾಧನೆ ಭಕ್ತಿಯ ಒಂದು ತಂತ್ರ – ಕಾಯ, ಕಾರಣ, ಮನ, ಭಾವಗಳನ್ನು ಕೇಂದ್ರೀಕರಿಸುವ, ನಿಯಂತ್ರಿಸುವ ದೂರೀಕರಿಸುವ ಯಂತ್ರವಾಗಿದೆ.
* ವರ್ಣವಿಜ್ಞಾನ, ಸಾಹಿತ್ಯದ, ಸಾಧನವಾಗಿದೆ. ಉದ್ಧರಣಿ, ವಿನ್ಯಾಸ, ಆಕೃತಿ, ವರ್ಣ, ಅಕ್ಷರ, ತ್ರಿವಿಧ ವಿನ್ಯಾಸ, ಉದ್ಧರಣಿಯ ವಿದ್ಯೆಯು ಪ್ರತಿಭೆಯ ಕಡೆ ಒಯ್ಯುವದು.
* ಇದು ಆಧ್ಯಾತ್ಮಿಕ ಚಿಂತನೆಯ ಒಳ ಚೆಲುವಿನ ಚಿತ್ರಣ ಸಾಹಿತ್ಯವಾಗಿರುವುದು
* ವರ್ಣ ವಿನ್ಯಾಸ ಉದ್ಧರಣಿ ಚಿತ್ರಪಟಲ ಆರಾಧನೆಯಿಂದ : ನೇತ್ರ, ಮನ, ಪ್ರಾಣಗಳ ಉದಾತ್ತೀಕರಣವಾಗುತ್ತದೆ.
* ವೀರಶೈವ ಸಿದ್ಧಾಂತಗಳನ್ನು ಉದ್ಧರಿಸುವುದೇ ಉದ್ಧರಣಿಗಳ ಉದ್ದೇಶವಾಗಿರುವುದು.

ಉದ್ಧರಣೆಯ ವಾಙ್ಮಯವೂ ಅಹುದು, ವರ್ಣಮಯವೂ ಅಹುದು. ಇದನ್ನು ಅಂಗ–ಲಿಂಗ ಸಾಹಿತ್ಯವೆಂದೂ ಹೇಳಬೇಕು. ಇದು ಅಂಕಿ, ಅಕ್ಷರ, ವರ್ಣ ಪ್ರಧಾನವಾದ ಸಾಹಿತ್ಯ ಅಂತರಂಗವನ್ನು ಅರಿತುಕೊಳ್ಳಲು ಅನುವನ್ನುಂಟುಮಾಡುವ ಸಾಂಕೇತಿಕ ದೃಶ್ಯಸಾಹಿತ್ಯ, ಸಾಂಖ್ಯ ಯೋಗ, ಮೀಮಾಂಸೆ ಮತ್ತು ಜ್ಯೋತಿಷ್ಯಗಳ ಸಮನ್ವಯ ಈ ಉದ್ಧರಣೆಗಳು ಇವೆಲ್ಲಕ್ಕೂ ಮಿಗಿಲಾಗಿ ವೀರಶೈವ ಸ್ವಯಾನುಭೂತ ಸಕೀಲ ಸಮನ್ವಿತವಾಗಿವೆ.

ಇಲ್ಲಿ ಗದ್ಯ ಪದ್ಯಗಳಿಲ್ಲ, ವೇದವೇದಾಂತಗಳಿಲ್ಲ, ವಚನ-ಕವನಗಳಿಲ್ಲ. ಇವುಗಳಿಲ್ಲದಿದ್ದರೂ ಇವುಗಳಿಗಿಂತ ಆಳವಾದ, ನೀಳವಾದ ಅಂತರ್ಭಾವಗಳನ್ನು ಅರಳಿಸುವ ದೃಶ್ಯಸಾಹಿತ್ಯ : ಅಂತರ್ನೆಲೆಗಳನ್ನು ಅರಿಯುವ ದೃಶ್ಯಸಾಹಿತ್ಯ, ಬ್ರಹ್ಮಾಂಡ ಗೌಣ, ಪಿಂಡಾಂಡ ಮುಖ್ಯವಾಗಿ ವೈವಿಧ್ಯವನ್ನು ವಿಶ್ಲೇಷಿಸುವ ಸಮರ್ಥವಾದ ಚಿಂತನಶೀಲ ಉದ್ಧರಣೆಗಳು ಅಂಗರೂಪ, ಲಿಂಗ ಸ್ವರೂಪಗಳೆರಡನ್ನೂ ಅಭಿವ್ಯಕ್ತಗೊಳಿಸುವ ಸಂವಹನಶೀಲ ದೃಶ್ಯಸಾಹಿತ್ಯವಾಗಿದೆ. ಇಲ್ಲಿ ಯಂತ್ರವೆಂದರೆ ಉದ್ಧರಣೆ, ಇದರಲ್ಲಿ ಅಂತರಾತ್ಮ ದೇವತೆಯು ಮಂತ್ರಸ್ವರೂಪದಲ್ಲಿ ಮಂಡಿಸಿರುತ್ತದೆ.

ಉದ್ಧರಣೆಗಳಿಗೆ ಅವುಗಳದ್ದೇ ಆದ ಭಾಷೆಯಿದೆ, ಭಾವವಿದೆ. ಅಂಗ-ಲಿಂಗಗಳ ಅನುಭಾವವನ್ನುಂಟು ಮಾಡುವ ಸೂಚ್ಯಶಕ್ತಿಯಿದೆ. ಉದ್ಧರಣೆ ಒಂದೊಂದು ತತ್ವಜ್ಞಾನವನ್ನುಂಟುಮಾಡುತ್ತ ಅಂತರಂಗಕ್ಕೆ ಅಚ್ಚೊತ್ತುವಂತೆ ಮಾಡುತ್ತದೆ. ಒಂದು ಉದ್ಧರಣೆ ಒಂದು ಉದ್ಗ್ರಂಥವಾಗುವಷ್ಟು ವಿಚಾರವುಳ್ಳದ್ದಾಗಿರುತ್ತದೆ. ಯೋಗಶಕ್ತಿ, ಜ್ಞಾನದೀಪ್ತಿ, ತತ್ವವ್ಯಾಪ್ತಿಗಳನ್ನು ನಿಚ್ಚಳವಾಗಿ ನಿರೂಪಿಸುವ ನಿಲುವುಳ್ಳದ್ದಾಗಿರುತ್ತದೆ. ಆಧ್ಯಾತ್ಮ ತತ್ವಗಳನ್ನು ಶಿವಾದ್ವೈತ ಸಿದ್ಧಾಂತಗಳನ್ನು ಉದ್ಧರಿಸುವುದೇ ಉದ್ಧರಣೆಗಳ ಗುರಿಯಾಗಿದೆ. ಇವುಗಳ ವಿಜ್ಞಾನವನ್ನುಂಟುಮಾಡಿಕೊಡುವುದೇ ಇವುಗಳ ಸಂಕೇತ ಅಂಗದೊಳಗಿರುವ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಗಳನ್ನು ಅರ್ಪಣ, ಅರ್ಚನ, ಅನುಭವಗಳನ್ನು ಇವೆಕ್ಕೆಲ್ಲ ಆಕರವಾದ ಸತ್ಯವಸ್ತುವನ್ನು ಕಂಡುಕೊಂಡು ಶಾಂತರೂ, ಸಮಚಿತ್ತರೂ ಆಗಬೇಕೆಂಬ ಉದ್ದೇಶವೇ ಉದ್ಧರಣೆಗಳ ಯೋಚನೆ ಮತ್ತು ಯೋಜನೆ ಸ್ಥೂಲ, ಸೂಕ್ಷ್ಮ ಕಾರಣಾನುಭವಗಳನ್ನು ಅಂತರಂಗದಲ್ಲಿ ತುಂಬುವಂತೆ ಮಾಡುವ ಸಾಂಕೇತಿಕ, ಸುಂದರ, ವರ್ಣವಿನ್ಯಾಸ ಸಾಹಿತ್ಯವೇ ಉದ್ಧರಣೆಗಳ ಉದ್ದೇಶ. ಒಟ್ಟಿನಲ್ಲಿ ಹೇಳುವುದಾದರೆ ಕಲೆ-ಕಳೆಗಳೆರಡರ ನೆಲೆ ಉದ್ಧರಣೆಗಳು. ಇವುಗಳಲ್ಲಿ ಬಹಿರಂಗ, ಅಂತರಂಗ ಶಿವಸೌಂದರ್ಯಗಳ ಅಭಿವ್ಯಕ್ತಿ ಇರುತ್ತದೆ.

**ಉದ್ಧರಣೆಗಳ ಉಗಮ, ಶಿವಾಗಮ :** ಉದ್ಧರಣೆಗಳಲ್ಲಿ ವರ್ಣಗಳದ್ದೇ ಒಂದು ತತ್ವ, ಅಕ್ಷರ (ಮಂತ್ರಾಕ್ಷರ)ಗಳೇ ಜೀವಾಳ ಅಥವ ಲಿಂಗಗಳು ಆಕೃತಿಗಳೇ ಅಂಗಗಳು, ಇವುಗಳ ಸಮನ್ವಯವೇ ಸಮಷ್ಟಿ ಸ್ವರೂಪವೇ ಉದ್ಧರಣೆ! ೧೫ನೆಯ ಶತಮಾನದಿಂದೀಚೆಗೆ ಉದ್ಧರಣೆಗಳು ಹೆಚ್ಚಾಗಿ ಬೆಳೆದು ಬಂದಿವೆ. ಹೊಸಹೊಸದಾಗಿ ರೂಪಿಸುವುದೇ ಒಂದು ಕಲೆಯಾಗಿದೆ, ಒಂದು ತಪಸ್ಸಾಗಿದೆ. ವಸ್ತುವಿವೇಕದ ಶಾಸ್ತ್ರವಾಗಿ, ಧ್ಯೇಯ ಸಾಧನೆಯ ಯೋಗವಾಗಿ ಸತ್ಕ್ರಿಯೆಯಾಗಿ ಪರಿಣಮಿಸಿದಂತಿದೆ. ಒಟ್ಟಾರೆ ಉದ್ಧರಣೆಗಳ ಅಧ್ಯಯನವಿಲ್ಲದೆ ಇವುಗಳ ವೈಶಿಷ್ಟ್ಯ ವ್ಯಕ್ತವಾಗುತ್ತಿಲ್ಲ. ಇವುಗಳ ಅಧ್ಯಯನ ಆರಂಭವಾಗಬೇಕು, ಪರಿಷ್ಕರಣ ಪ್ರಕಟನೆಯ ಕಾರ್ಯವಾಗಬೇಕು.


## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ಉದ್ಧರಣೆಯ ಪ್ರಾರಂಭಿಕ ಚಿತ್ರಗಳು



ಶಿವನ ವಿರಾಟರೂಪ



ವೀರಭದ್ರ



ನಾಗಮಂಡಲ

## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ಉದ್ಧರಣೆಯ ಪ್ರಾರಂಬಿಕ ಚಿತ್ರಗಳು



ಶಿವ ಪಾರ್ವತಿ



೩.೩. ಹೆಸರಿಲ್ಲದ ಉದ್ಧರಣೆ ಚಿತ್ರ

ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
೧. ಅನಾದಿಭಕ್ತೋದ್ಧರಣೆ




ಶ್ರೀ ಮಂ.ಸಂ.ಸಂ.ಪ್ರ.ಧರ್ಮಸ್ಥಳದ ಚಿತ್ರ: ೧-೫

ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
೧. ಅನಾದಿಭಕ್ತೋದ್ಧರಣೆ



ಉದ್ಧರಣೆ ಸಾಹಿತ್ಯದಲ್ಲಿಯ ಚಿತ್ರ: ೧-೧



ಕ.ವಿ.ವಿ.ಹಂಪಿಯ ಕಾಗದದ ಚಿತ್ರ: ೧-೨



ಕ.ವಿ.ವಿ ಹಂಪಿಯ ತಾಳೆಓಲೆಗರಿ ಚಿತ್ರ: ೧-೩


# ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ೧. ಅನಾದಿಭಕ್ತೋದ್ಧರಣ



ಕ.ವಿ.ವಿ.ಧಾರವಾಡ ಚಿತ್ರ: ೧-೨



ಗು.ವಿ.ವಿ.ಗುಲಬುರ್ಗಾದ ಚಿತ್ರ: ೧-೪



ಬೆಂ.ವಿ.ವಿ.ಬೆಂಗಳೂರಿನ ಚಿತ್ರ: ೧-೬

## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
### ೨. ಜ್ಞಾನ ಅಷ್ಟಾವರ್ಣೋದ್ಧರಣೆ



ಗು.ವಿ.ವಿ.ಗುಲಬುರ್ಗಾದ ಚಿತ್ರ: ೨-೪

## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ೨. ಜ್ಞಾನ ಅಷ್ಟಾವರ್ಣೋದ್ಧರಣೆ



ಉದ್ಧರಣ್ ಸಾಹಿತ್ಯದಲ್ಲಿಯ ಚಿತ್ರ: ೨-೧



ಕ.ವಿ.ವಿ ಹಂಪಿಯ ತಾಳೆಓಲೆಗರಿ ಚಿತ್ರ ೨-೨

ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು

ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು

೧. ಜ್ಞಾನ ಅಷ್ಟಾವರ್ಣೋದ್ಧರಣೆ



ಕ.ವಿ.ವಿ.ಹಂಪಿಯ ಕಾಗದದ ಚಿತ್ರ: ೧-೧



ಕ.ವಿ.ವಿ.ಧಾರವಾಡ ಚಿತ: ೧-೨




ಶ್ರೀ ಮಂ.ಸಂ.ಸಂ.ಪ್ರ.ಧರ್ಮಸ್ಥಳದ ಚಿತ: ೧-೫

ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
೩. ಅನಾದಿಜಂಗಮೋದ್ಧರಣಿ



ಕ.ವಿ.ವಿ.ಧಾರವಾಡ ಚಿತ್ರ: ೩-೬

## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ೩. ಅನಾದಿಜಂಗಮೋದ್ಧರಣೆ



ಉದ್ಧರಣೆ ಸಾಹಿತ್ಯದಲ್ಲಿಯ ಚಿತ್ರ: ೩-೧



ಕ.ವಿ.ವಿ ಹಂಪಿಯ ತಾಳೆಓಲೆಗರಿ ಚಿತ್ರ: ೩-೨

# ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ೩. ಅನಾದಿಜಂಗಮೋದ್ಧರಣೆ



ಶ್ರೀ ಮಂ.ಸಂ.ಸಂ.ಪ್ರ.ಧರ್ಮಸ್ಥಳದ ಚಿತ್ರ: ೩-೪



ಬೆಂ.ವಿ.ವಿ.ಬೆಂಗಳೂರಿನ ಚಿತ್ರ: ೩-೫




ಗು.ವಿ.ವಿ.ಗುಲಬುರ್ಗಾದ ಚಿತ್ರ: ೩-೩

## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
### ೪. ಜಂಗಮಮೂರ್ತಿಉದ್ಧರಣೆ



ಶ್ರೀ ಮಂ.ಸಂ.ಸಂ.ಪ್ರ.ಧರ್ಮಸ್ಥಳದ ಚಿತ್ರ: ೪-೪

# ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ೪. ಜಂಗಮಮೂರ್ತಿಉದ್ಧರಣೆ



ಉದ್ಧರಣೆ ಸಾಹಿತ್ಯದಲ್ಲಿಯ ಚಿತ್ರ: ೪-೧



ಕ.ವಿ.ವಿ ಹಂಪಿಯ ತಾಳೆಓಲೆಗರಿ ಚಿತ್ರ: ೪-೨

## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ೪. ಜಂಗಮಮೂರ್ತಿಉದ್ಧರಣೆ



ಕ.ವಿ.ವಿ.ಧಾರವಾಡ ಚಿತ್ರ: ೪-೬



ಗು.ವಿ.ವಿ.ಗುಲಬುರ್ಗಾದ ಚಿತ್ರ: ೪-೩



ಬೆಂ.ವಿ.ವಿ.ಬೆಂಗಳೂರಿನ ಚಿತ್ರ: ೪-೫

ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು


ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು

## ೫೭. ಮುಕುಟೋದ್ಧರಣೆ




ಕ.ವಿ.ವಿ.ಧಾರವಾಡ ಚಿತ್ರ: ೫೭-೫೭

## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ೫೭. ಮುಕುಟೋದ್ಧರಣೆ



ಉದ್ಧರಣೆ ಸಾಹಿತ್ಯದಲ್ಲಿಯ ಚಿತ್ರ: ೫೭-೧



ಶ್ರೀ ಮಂ.ಸಂ.ಸಂ.ಪ್ರ.ಧರ್ಮಸ್ಥಳದ ಚಿತ್ರ: ೫೭-೪

## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ೨೭. ಮುಕುಟೋದ್ಧರಣೆ



ಗು.ವಿ.ವಿ.ಗುಲಬುರ್ಗಾದ ಚಿತ್ರ: ೨೭-೧




ಕ.ವಿ.ವಿ.ಹಂಪಿಯ ಕಾಗದದಚಿತ್ರ: ೨೭-೨

## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ೬. ಶೂನ್ಯಲಿಂಗೋದ್ಧರಣೆ



ಶ್ರೀ ಮಂ.ಸಂ.ಸಂ.ಪ್ರ.ಧರ್ಮಸ್ಥಳದ ಚಿತ್ರ: ೬-೫

## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ೬. ಶೂನ್ಯಲಿಂಗೋದ್ಧರಣೆ



ಉದ್ಧರಣೆ ಸಾಹಿತ್ಯದಲ್ಲಿಯ ಚಿತ್ರ: ೬-೧




ಕ.ವಿ.ವಿ ಹಂಪಿಯ ತಾಳೆಓಲೆಗರಿ ಚಿತ್ರ: ೬-೨

## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ೬. ಶೂನ್ಯಲಿಂಗೋದ್ಧರಣೆ



ಕ.ವಿ.ವಿ.ಧಾರವಾಡ ಚಿತ್ರ: ೬-೨



ಗು.ವಿ.ವಿ.ಗುಲಬುರ್ಗಾ ಚಿತ್ರ: ೬-೪



ಕ.ವಿ.ವಿ.ಹಂಪಿಯ ಕಾಗದದ ಚಿತ್ರ: ೬-೧



ಬೆಂ.ವಿ.ವಿ.ಬೆಂಗಳೂರಿನ ಚಿತ್ರ: ೬-೬

## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ೭.ಚಿದಂಬರೋದ್ಧರಣೆ




ಶ್ರೀ ಮಂ.ನಾ..ಸಂ.ಸಂ.ಪ್ರ.ಧರ್ಮಸ್ಥಳದ ಚಿತ್ರ: ೭-೫

## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ೭.ಚಿದಂಬರೋದ್ಧರಣೆ




ಕ.ವಿ.ವಿ.ಧಾರವಾಡ ಚಿತ್ರ: ೭-೬



ಕ.ವಿ.ವಿ ಹಂಪಿಯ ತಾಳೆಓಲೆಗರಿ ಚಿತ್ರ: ೭-೩


## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ೭.ಚಿದಂಬರೋದ್ಧರಣೆ



ಉದ್ಧರಣೆ ಸಾಹಿತ್ಯದಲ್ಲಿಯ ಚಿತ್ರ: ೭-೧



ಕ.ವಿ.ವಿ.ಹಂಪಿಯ ಕಾಗದದ ಚಿತ್ರ: ೭-೨



ಗು.ವಿ.ವಿ.ಗುಲಬುರ್ಗಾದ ಚಿತ್ರ: ೭-೪

## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ೮. ಷಡ್ಬ್ರಹ್ಮೋದ್ಧರಣಿ





ಶ್ರೀ ಮಂ.ಸಂ.ಸಂ.ಪ್ರ.ಧರ್ಮಸ್ಥಳದ ಚಿತ್ರ: ೮-೫

ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
೮. ಷಡ್ಬ್ರಹ್ಮೋದ್ಧರಣೆ



ಉದ್ಧರಣೆ ಸಾಹಿತ್ಯದಲ್ಲಿಯ ಚಿತ್ರ: ೮-೧




ಕ.ವಿ.ವಿ ಹಂಪಿಯ ತಾಳೆಓಲೆಗರಿ ಚಿತ್ರ: ೮-೨

## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ೮. ಷಡ್ಬ್ರಹ್ಮೋದ್ಧರಣೆ



ಕ.ವಿ.ವಿ.ಧಾರವಾಡ ಚಿತ್ರ: ೮-೨



ಗು.ವಿ.ವಿ.ಗುಲಬುರ್ಗಾದ ಚಿತ್ರ: ೮-೪




ಬೆಂ.ವಿ.ವಿ.ಬೆಂಗಳೂರಿನ ಚಿತ್ರ: ೮-೬

## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ೯. ಪಂಚಮೂರ್ತಿಲಿಂಗೋದ್ಧರಣೆ




ಉದ್ಧರಣೆ ಸಾಹಿತ್ಯದಲ್ಲಿಯ ಚಿತ್ರ: ೯-೩



ಕ.ವಿ.ವಿ ಹಂಪಿಯ ತಾಳೆಓಲೆಗರಿ ಚಿತ್ರ: ೯-೪

## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ೯. ಪಂಚಮೂರ್ತಿಲಿಂಗೋದ್ಧರಣೆ



ಕ.ವಿ.ವಿ.ಹಂಪಿಯ ಕಾಗದದ ಚಿತ್ರ: ೯-೧



ಬೆಂ.ವಿ.ವಿ.ಬೆಂಗಳೂರಿನ ಚಿತ್ರ: ೯-೨

## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ೯. ಪಂಚಮೂರ್ತಿಲಿಂಗೋದ್ಧರಣೆ




ಕ.ವಿ.ವಿ.ಧಾರವಾಡದ ಚಿತ್ರ: ೯-ಅ



ಶ್ರೀ ಮಂ.ಸಂ.ಸಂ.ಪ್ರ.ಧರ್ಮಸ್ಥಳದ ಚಿತ್ರ: ೯-ಬ

ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
೧೦. ಶಾಂಭವಿ ಚಕ್ರೋದ್ಧರಣೆ



ಶ್ರೀ ಮಂ.ಸಂ.ಸಂ.ಪ್ರ.ಧರ್ಮಸ್ಥಳದ ಚಿತ್ರ: ೧೦-೪


## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ೧೦. ಶಾಂಭವಿ ಚಕ್ರೋದ್ಧರಣೆ



ಕ.ವಿ.ವಿ.ಧಾರವಾಡ ಚಿತ್ರ: ೧೦-೬



ಕ.ವಿ.ವಿ.ಹಂಪಿಯ ಕಾಗದದ ಚಿತ್ರ: ೧೦-೨



ಗು.ವಿ.ವಿ.ಗುಲಬುರ್ಗಾದ ಚಿತ್ರ: ೧೦-೩

# ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣ ಚಿತ್ರಗಳು
## ೧೦. ಶಾಂಭವಿ ಚಕ್ರೋದ್ಧರಣೆ



ಬೇ.ವಿ.ವಿ.ಬೇಂಗಳೂರಿನ ಚಿತ್ರ: ೧೦-೩



ಕ.ವಿ.ವಿ ಹಂಪಿಯ ತಾಳೆಓಲೆಗರಿ ಚಿತ್ರ: ೧೦-೨




ಉದ್ಧರಣೆ ಸಾಹಿತ್ಯದಲ್ಲಿಯ ಚಿತ್ರ: ೧೦-೧

## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ೧೧. ಗೋಮುಖೋದ್ಧರಣೆ




ಶ್ರೀ ಮಂ.ಸಂ.ಸಂ.ಪ್ರ.ಧರ್ಮಸ್ಥಳದ ಚಿತ್ರ: ೧೧-೫

## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ೧೧. ಗೋಮುಖೋದ್ಧರಣೆ




ಕ.ವಿ.ವಿ.ಹಂಪಿಯ ಕಾಗದದ ಚಿತ್ರ: ೧೧-೧



ಕ.ವಿ.ವಿ ಹಂಪಿಯ ತಾಳೆಓಲೆಗರಿ ಚಿತ್ರ: ೧೧-೨


## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ೧೧. ಗೋಮುಖೋದ್ಧರಣೆ



ಕ.ವಿ.ವಿ.ಧಾರವಾಡ ಚಿತ್ರ: ೧೧-೨



ಗು.ವಿ.ವಿ.ಗುಲಬುರ್ಗಾದ ಚಿತ್ರ: ೧೧-೪



ಶಿವಾನುಭವ ಶಾಸ್ತ್ರ ಚಿತ್ರ: ೧೧-೧

ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
೧೨. ಮಹಾಲಿಂಗೋದ್ಧರಣೆ



ಶ್ರೀ ಮಂ.ಸಂ.ಸಂ.ಪ್ರ.ಧರ್ಮಸ್ಥಳದ ಚಿತ್ರ: ೧೨-೫

ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
೧೨. ಮಹಾಲಿಂಗೋದ್ಧರಣೆ




ಉದ್ಧರಣೆ ಸಾಹಿತ್ಯದಲ್ಲಿಯ ಚಿತ್ರ: ೧೨-೨



ಕ.ವಿ.ವಿ ಹಂಪಿಯ ತಾಳೆಓಲೆಗರಿ ಚಿತ್ರ: ೧೨-೩

## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ೧೨. ಮಹಾಲಿಂಗೋದ್ಧರಣೆ




ಶಿವಾಗಮ ಸೌರಭದಲ್ಲಿಯ ಚಿತ್ರ: ೧೨-೧



ಗು.ವಿ.ವಿ.ಗುಲಬುರ್ಗಾದ ಚಿತ್ರ: ೧೨-೪

## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ೧೨. ಮಹಾಲಿಂಗೋದ್ಧರಣೆ



ಕ.ವಿ.ವಿ.ಹಂಪಿಯ ಕಾಗದದ ಚಿತ್ರ: ೧೨-೩



ಕ.ವಿ.ವಿ.ಧಾರವಾಡ ಚಿತ್ರ ಚಿತ್ರ: ೧೨-೪

# ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ೧೩. ವೃಷಭೋದ್ಧರಣೆ



ಶ್ರೀ ಮಂ.ಸಂ.ಸಂ.ಪ್ರ.ಧರ್ಮಸ್ಥಳದ ಚಿತ್ರ: ೧೩-೪

## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ೧೩. ವೃಷಭೋದ್ಧರಣೆ




ಉದ್ಧರಣ್ ಸಾಹಿತ್ಯದಲ್ಲಿಯ ಚಿತ್ರ: ೧೩-೧



ಕ.ವಿ.ವಿ ಹಂಪಿಯ ತಾಳೆಓಲೆಗರಿ ಚಿತ್ರ: ೧೩-೨


## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ೧೩. ವೃಷಭೋದ್ಧರಣೆ



ಬೆಂ.ವಿ.ವಿ.ಬೆಂಗಳೂರಿನ ಚಿತ್ರ: ೧೩-೪



ಕ.ವಿ.ವಿ.ಧಾರವಾಡ ಚಿತ್ರ: ೧೩-೬



ಗು.ವಿ.ವಿ.ಗುಲಬುರ್ಗಾದ ಚಿತ್ರ: ೧೩-೩

ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
೧೪. ನವಚಕ್ರೋದ್ಧರಣೆ



ಶ್ರೀ ಮಂ.ಸಂ.ಸಂ.ಪ್ರ.ಧರ್ಮಸ್ಥಳದ ಚಿತ್ರ: ೧೪-


# ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ೧೪. ನವಚಕ್ರೋದ್ಧರಣೆ



ಕ.ವಿ.ವಿ.ಧಾರವಾಡ ಚಿತ್ರ: ೧೪-೭



ಶ್ರೀ ಮಂ.ಸಂ.ಸಂ.ಪ್ರ.ಧರ್ಮಸ್ಥಳದ ಚಿತ್ರ: ೧೪-೮




ಕ.ವಿ.ವಿ ಹಂಪಿಯ ತಾಳೆಓಲೆಗರಿ ಚಿತ್ರ: ೧೪-೯


# ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
### ೧೫. ತತ್ವ ಪಂಚೀಕರಣೋದ್ಧರಣೆ



ಉದ್ಧರಣೆ ಸಾಹಿತ್ಯದಲ್ಲಿಯ ಚಿತ್ರ: ೧೫-೧



ಗು.ವಿ.ವಿ.ಗುಲಬುರ್ಗಾದ ಚಿತ್ರ: ೧೫-೪



ಕ.ವಿ.ವಿ ಹಂಪಿಯ ತಾಳೆಓಲೆಗರಿ ಚಿತ್ರ: ೧೫-೨

# ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ೧೫. ತತ್ವ ಪಂಚೀಕರಣೋದ್ಧರಣೆ



ಕ.ವಿ.ವಿ.ಹಂಪಿಯ ಕಾಗದದ ಚಿತ್ರ: ೧೫-೨




ಗು.ವಿ.ವಿ.ಗುಲಬುರ್ಗಾದ ಚಿತ್ರ: ೧೫-೪




ಗು.ವಿ.ವಿ.ಗುಲಬುರ್ಗಾದ ಚಿತ್ರ: ೧೫-೪


# ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ೧೬. ಮಂತ್ರ ಪಂಚೀಕರಣೋದ್ಧರಣಿ




ಕ.ವಿ.ವಿ.ಹಂಪಿಯ ಕಾಗದದ ಚಿತ್ರ: ೧೬-೨



ಕ.ವಿ.ವಿ ಹಂಪಿಯ ತಾಳೆಓಲೆಗರಿ ಚಿತ್ರ: ೧೬-೩



ಗು.ವಿ.ವಿ.ಗುಲಬುರ್ಗಾದ ಚಿತ್ರ: ೧೬-೪

## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ೧೬. ಮಂತ್ರ ಪಂಚೀಕರಣೋದ್ಧರಣೆ



ಉದ್ಧರಣೆ ಸಾಹಿತ್ಯದಲ್ಲಿಯ ಚಿತ್ರ: ೧೬-೧



ಕ.ವಿ.ವಿ.ಧಾರವಾಡ ಚಿತ್ರ: ೧೬-೨



ಶ್ರೀ ಮಂ.ಸಂ.ಸಂ.ಪ್ರ.ಧರ್ಮಸ್ಥಳದ ಚಿತ್ರ: ೧೬-೩

## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ೧೩. ಲಿಂಗ ಪಂಚೀಕರಣೋದ್ಧರಣಿ




ಶ್ರೀ ಮಂ.ಸಂ.ಸಂ.ಪ್ರ.ಧರ್ಮಸ್ಥಳದ ಚಿತ್ರ: ೧೩-೬

## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ೧೭. ಲಿಂಗ ಪಂಚೀಕರಣೋದ್ಧರಣೆ



ಉದ್ಧರಣೆ ಸಾಹಿತ್ಯದಲ್ಲಿಯ ಚಿತ್ರ: ೧೭-೨



ಗು.ವಿ.ವಿ.ಗುಲಬುರ್ಗಾದ ಚಿತ್ರ: ೧೭-೩

# ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು

## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು

## ೧೭. ಲಿಂಗ ಪಂಚೀಕರಣೋದ್ಧರಣೆ



ಕ.ವಿ.ವಿ.ಹಂಪಿಯ ಕಾಗದದ ಚಿತ್ರ: ೧೭-೩



ಕ.ವಿ.ವಿ ಹಂಪಿಯ ತಾಳೆಓಲೆಗರಿ ಚಿತ್ರ: ೧೭-೪

## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ೧೨. ಲಿಂಗ ಪಂಚೀಕರಣೋದ್ಧರಣೆ



ಕ.ವಿ.ವಿ.ಧಾರವಾಡ ಚಿತ್ರ: ೧೨-೮



ಬೆಂ.ವಿ.ವಿ.ಬೆಂಗಳೂರಿನ ಚಿತ್ರ: ೧೨-೨

ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
೧೮. ಷಡಕ್ಷರೋದ್ಧರಣೆ




ಶ್ರೀ ಮಂ.ಸಂ.ಸಂ.ಪ್ರ.ಧರ್ಮಸ್ಥಳದ ಚಿತ್ರ: ೧೮-೬

## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ೧೮. ಷಡಕ್ಷರೋದ್ಧರಣೆ



ಉದ್ಧರಣೆ ಸಾಹಿತ್ಯದಲ್ಲಿಯ ಚಿತ್ರ: ೧೮-೨




ಶಿವಾನುಭವ ಶಾಸ್ತ್ರದಲ್ಲಿಯ ಚಿತ್ರ: ೧೮-೧




ಗು.ವಿ.ವಿ.ಗುಲಬುರ್ಗಾದ ಚಿತ್ರ: ೧೮-೩


## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ೧೮. ಷಡಕ್ಷರೋದ್ಧರಣಿ



ಕ.ವಿ.ವಿ.ಹಂಪಿಯ ಕಾಗದದ ಚಿತ್ರ: ೧೮-೩



ಬೆಂ.ವಿ.ವಿ.ಬೆಂಗಳೂರಿನ ಚಿತ್ರ: ೧೮-೨



ಕ.ವಿ.ವಿ.ಧಾರವಾಡ ಚಿತ್ರ: ೧೮-೮

## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ೧೯. ಬಸವಾಕ್ಷರೋದ್ಧರಣೆ



ಉದ್ಧರಣೆ ಸಾಹಿತ್ಯದಲ್ಲಿಯ ಚಿತ್ರ: ೧೯-೧



ಶ್ರೀ ಮಂ.ಸಂ.ಸಂ.ಪ್ರ.ಧರ್ಮಸ್ಥಳದ ಚಿತ್ರ: ೧೯-೪

ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ೧೯. ಬಸವಾಕ್ಷರೋದ್ಧರಣೆ




ಕ.ವಿ.ವಿ.ಧಾರವಾಡ ಚಿತ್ರ: ೧೯-೪




ಬೆಂ.ವಿ.ವಿ.ಬೆಂಗಳೂರಿನ ಚಿತ್ರ: ೧೯-

# ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು

## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು


### ೧೯. ಬಸವಾಕ್ಷರೋದ್ಧರಣೆ



ಕ.ವಿ.ವಿ.ಹಂಪಿಯ ಕಾಗದದ ಚಿತ್ರ: ೧೯-೨




ಕ.ವಿ.ವಿ.ಹಂಪಿಯ ತಾಳೆಓಲೆಗರಿ ಚಿತ್ರ: ೧೯-೩



ಗು.ವಿ.ವಿ.ಗುಲಬುರ್ಗಾದ ಚಿತ್ರ: ೧೯-


# ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
### ೨೦. ೧೦೮ ಪ್ರಣವೋದ್ಧರಣೆ



ಕ.ವಿ.ವಿ.ಧಾರವಾಡ ಚಿತ್ರ: ೨೦-೬




ಬೇ.ವಿ.ವಿ.ಬೇಂಗಳೂರಿನ ಚಿತ್ರ: ೨೦-೫



ಉದ್ಧರಣೆ ಸಾಹಿತ್ಯದಲ್ಲಿಯ ಚಿತ್ರ: ೨೦-೧

# ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ೨೦. ೧೦೮ ಪ್ರಣವೋದ್ಧರಣೆ



ಶ್ರೀ ಮಂ.ಸಂ.ಸಂ.ಪ್ರ.ಧರ್ಮಸ್ಥಳದ ಚಿತ್ರ: ೨೦-೪



ಗು.ವಿ.ವಿ.ಗುಲಬುರ್ಗಾದ ಚಿತ್ರ: ೨೦-೩



ಕ.ವಿ.ವಿ ಹಂಪಿಯ ತಾಳೆಓಲೆಗರಿ ಚಿತ್ರ: ೨೦-೨

ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು

ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು

## ೨೧. ಅಧೋಕುಂಡಲಿಶಕ್ತಿವುದ್ಧರಣೆ



ಶ್ರೀ ಮಂ.ಸಂ.ಸಂ.ಪ್ರ.ಧರ್ಮಸ್ಥಳದ ಚಿತ್ರ: ೨೧-೪

## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ೨೧. ಆಧೋಕುಂಡಲಶಕ್ತಿವುದ್ಧರಣೆ



ಉದ್ಧರಣೆ ಸಾಹಿತ್ಯದಲ್ಲಿಯ ಚಿತ್ರ: ೨೧-೧



ಕ.ವಿ.ವಿ ಹಂಪಿಯ ತಾಳೆಓಲೆಗರಿ ಚಿತ್ರ: ೨೧-

# ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು

## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು

## ೨೧. ಆಧೋಕುಂಡಲಿಶಕ್ತಿವುದ್ಧರಣೆ



ಕ.ವಿ.ವಿ.ಧಾರವಾಡ ಚಿತ್ರ: ೨೧-೬







ಬೇ.ವಿ.ವಿ.ಬೇಂಗಳೂರಿನ ಚಿತ್ರ: ೨೧-೪ ಕ.ವಿ.ವಿ.ಹಂಪಿಯ ಕಾಗದದ ಚಿತ್ರ: ೨೧-೨ ಗು.ವಿ.ವಿ.ಗುಲಬುರ್ಗಾದ ಚಿತ್ರ: ೨೧-೩

## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ೨೨. ಊರ್ಧ್ವಕುಂಡಲಿಶಕ್ತಿವೃದ್ಧರಣೆ



ಶ್ರೀ ಮಂ.ಸಂ.ಸಂ.ಪ್ರ.ಧರ್ಮಸ್ಥಳದ ಚಿತ್ರ: ೨೨-೪

## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
### ೨೨. ಊರ್ಧ್ವಕುಂಡಲಿಶಕ್ತಿವುದ್ಧರಣೆ



ಉದ್ಧರಣೆ ಸಾಹಿತ್ಯದಲ್ಲಿಯ ಚಿತ್ರ: ೨೨-೧



ಕ.ವಿ.ವಿ.ಹಂಪಿಯ ಕಾಗದದ ಚಿತ್ರ: ೨೨-೨

## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು

## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು

## ೨೨. ಊರ್ಧ್ವಕುಂಡಲಿಶಕ್ತಿವೃದ್ಧರಣೆ



ಬೇ.ವಿ.ವಿ.ಬೆಂಗಳೂರಿನ ಚಿತ್ರ: ೨೨-ಅ



ಗು.ವಿ.ವಿ.ಗುಲಬರ್ಗಾದಲ್ಲಿಯ ಚಿತ್ರ: ೨೨-ಬ

# ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
### ೨೩. ಲಿಂಗಷಡಕ್ಷರೋದ್ಧರಣೆ




ಶ್ರೀ ಮಂ.ಸಂ.ಸಂ.ಪ್ರ.ಧರ್ಮಸ್ಥಳದ ಚಿತ್ರ: ೨೩-೪




ಕ.ವಿ.ವಿ ಹಂಪಿಯ ತಾಳೆಓಲೆಗರಿ ಚಿತ್ರ: ೨೩-೨


## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ೨೩. ಲಿಂಗಷಡಕ್ಷರೋದ್ಧರಣೆ



ಉದ್ಧರಣೆ ಸಾಹಿತ್ಯದಲ್ಲಿಯ ಚಿತ್ರ: **೨೩-೧**



ಕ.ವಿ.ವಿ.ಧಾರವಾಡ ಚಿತ್ರ: **೨೩-೨**



ಗು.ವಿ.ವಿ.ಗುಲಬರ್ಗಾದಲ್ಲಿಯ ಚಿತ್ರ: **೨೩-೩**



ಬೆಂ.ವಿ.ವಿ.ಬೆಂಗಳೂರಿನ ಚಿತ್ರ: **೨೩-೪**

ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು

ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು


## ೨೪. ಅಂಗಷಡಕ್ಷರೋದ್ಧರಣೆ



ಕ.ವಿ.ವಿ.ಹಂಪಿಯ ಕಾಗದದ ಚಿತ್ರ: ೨೪-೧



ಕ.ವಿ.ವಿ.ಧಾರವಾಡ ಚಿತ್ರ: ೨೪-೨



ಕ.ವಿ.ವಿ ಹಂಪಿಯ ತಾಳೆಓಲೆಗರಿ ಚಿತ್ರ: ೨೪-೩

## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು

### ೨೪. ಅಂಗಷಡಕ್ಷರೋದ್ಧರಣೆ



ಉದ್ಧರಣೆ ಸಾಹಿತ್ಯದಲ್ಲಿಯ ಚಿತ್ರ: ೨೪-೧



ಶ್ರೀ ಮಂ.ಸಂ.ಸಂ.ಪ್ರ.ಧರ್ಮಸ್ಥಳದ ಚಿತ್ರ: ೨೪-೨



ಗು.ವಿ.ವಿ.ಗುಲಬರ್ಗಾದಲ್ಲಿಯ ಚಿತ್ರ: ೨೪-೪



ಬೆಂ.ವಿ.ವಿ.ಬೆಂಗಳೂರಿನ ಚಿತ್ರ: ೨೪-೫

# ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
### ೨೫. ಜ್ಞಾನಚಕ್ರೋದ್ಧರಣೆ



ಕ.ವಿ.ವಿ.ಧಾರವಾಡ ಚಿತ್ರ: ೨೫-೭

## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು

## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು

## ೨೫. ಜ್ಞಾನಚಕ್ರೋದ್ಧರಣೆ



ಉದ್ಧರಣೆ ಸಾಹಿತ್ಯದಲ್ಲಿಯ ಚಿತ್ರ: ೨೫-೧



ಕ.ವಿ.ವಿ ಹಂಪಿಯ ತಾಳೆಓಲೆಗರಿ ಚಿತ್ರ: ೨೫-೨



ಗು.ವಿ.ವಿ.ಗುಲಬರ್ಗಾದಲ್ಲಿಯ ಚಿತ್ರ: ೨೫-೪

## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ಧರಣೆ ಚಿತ್ರಗಳು
## ೨೩. ಜ್ಞಾನಚಕ್ರೋದ್ಧರಣೆ



ಕ.ವಿ.ವಿ.ಹಂಪಿಯ ಕಾಗದದ ಚಿತ್ರ: ೨೩-೧



ಬೆಂ.ವಿ.ವಿ.ಬೆಂಗಳೂರಿನ ಚಿತ್ರ: ೨೩-೨



ಶ್ರೀ ಮಂ.ಸಂ.ಸಂ.ಪ್ರ.ಧರ್ಮಸ್ಥಳದ ಚಿತ್ರ: ೨೩-೩

## "ಶ್ರೀ ತತ್ವ ನಿಧಿ"ಯ
## ತೃತೀಯಸಂಪುಟ
## ಶಿವನಿಧಿ

– ಕ.ಅ.ಪ್ರಸಂ.: ಕೆ.ವಿ.ರಮೇಶ್

ಶ್ರೀ ತತ್ವ ನಿಧಿಯ ನವನಿಧಿಗಳಲ್ಲಿ "ಶಿವನಿಧಿ"ಯು ಮೂರನೆಯದು. ಶ್ರೀ ತತ್ವನಿಧಿಯೆಂಬ ಅಪೂರ್ವ ಕೃತಿಯನ್ನು ರಚಿಸಿದವರು ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು. ಇವರು ಸ್ವಯಂ ವಿದ್ವಾಂಸರೂ ಬಹುಭಾಷಾಕೋವಿದರೂ, ಪಂಡಿತ–ಪೋಷಕರೂ ಆಗಿದ್ದರು. ಸ್ವಯಂ ಗ್ರಂಥರಚನಾಕಾರರಾಗಿ ಸುಪ್ರಸಿದ್ಧರು. ಕಲಾರಸಿಕರಾಗಿ, ಕಲಾವಿದರಾಗಿ, ಕಲಾಪೋಷಕರಾಗಿದ್ದರು. ಹೊರರಾಜ್ಯಗಳಿಂದ ಬಂದ ಕಲಾವಿದರಿಗೆ, ವಿದ್ವಾಂಸರಿಗೆ ಇವರು ಆಶ್ರಯದಾತರಾಗಿದ್ದರು. ಸ್ವತಃ ಇವರು ೫೮ ಕೃತಿಗಳನ್ನು ರಚಿಸುವಲ್ಲಿ ಸಫಲರಾಗಿದ್ದರು. ಇವರ ಕಾಲದಲ್ಲಿ ಶೈವ, ವೈಷ್ಣವ ಧರ್ಮಗಳೆರಡೂ ಸಮಾನ ಪ್ರೋತ್ಸಾಹವನ್ನು ಹೊಂದಿದ್ದು ಶ್ರೀ ಮುಮ್ಮಡಿಯವರಿಗೆ "ಕವಿಜನ ಕಾಮಧೇನು", "ಕನ್ನಡದ ಭೋಜ" ಎಂಬ ಬಿರುದುಗಳಿದ್ದವು.

**ಶ್ರೀ ತತ್ವನಿಧಿ:**

ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಸರ್ವೋತ್ಕೃಷ್ಟ ಕೃತಿಗಳಲ್ಲಿ "ಶ್ರೀ ತತ್ವನಿಧಿ" ಗ್ರಂಥವು ಅನುಪಮವಾದುದಾಗಿತ್ತು, ಈ ಕೃತಿಯಲ್ಲಿ ಮಂತ್ರ, ತಂತ್ರ, ಪುರಾಣ, ಆಗಮ, ಮೊದಲಾದ ಗ್ರಂಥಗಳಲ್ಲಿ ತಿಳಿಸಿರುವ ದೇವತಾ ಸ್ವರೂಪ, ವರ್ಣನಾ ಶ್ಲೋಕಗಳು, ಪದ್ಯಗಳು, ವಿಷಯಗಳು ಒಂದೆಡೆಯೇ ಇದ್ದು, ಇದೊಂದು ಸಂಗ್ರಹ ಗ್ರಂಥದಂತಿದೆ. ಪ್ರತಿಯೊಂದು ದೇವತೆಗೆ ಸಂಬಂಧಿಸಿದ ವಿಷಯಗಳಿಗೆ ಪ್ರತ್ಯೇಕವಾಗಿ ಒಂದೊಂದು ನಿಧಿಯೆಂದು ವಿಂಗಡಿಸಲಾಗಿದೆ. ಬೇರೆ ಬೇರೆ ವರ್ಣಗಳಿಂದ ಕೂಡಿದ ಚಿತ್ರಗಳನ್ನು ಕಲಾವಿದರಿಂದ ರಚಿಸಿಕೊಂಡಿದ್ದು, ಮುಮ್ಮಡಿಯವರ ಅಪೂರ್ವವಾದ ಮತ್ತು ಅದ್ಭುತವಾದ ಕೆಲಸವಾಗಿದೆ. ಶ್ರೀ ತತ್ವನಿಧಿಯು ಕಾಗದದ ಹಸ್ತಪ್ರತಿಯಾಗಿದ್ದು. ಇದರಲ್ಲಿ (೧) ಶಕ್ತಿನಿಧಿ (೨) ವಿಷ್ಣುನಿಧಿ (೩) ಶಿವನಿಧಿ (೪) ಬ್ರಹ್ಮನಿಧಿ (೫) ಗ್ರಹನಿಧಿ (೬) ವೈಷ್ಣವನಿಧಿ (೭) ಶೈವನಿಧಿ (೮) ಆಗಮನಿಧಿ (೯) ಕೌತುಕನಿಧಿ ಎಂದು ನವನಿಧಿಗಳಿವೆ.

**ಶಿವನಿಧಿ:**

ಶ್ರೀ ತತ್ವನಿಧಿಯಲ್ಲಿ "ಶಿವನಿಧಿ"ಯು ಮೂರನೆಯದು. ಇದರಲ್ಲಿ ಒಟ್ಟು ೫೭೩ ಶ್ಲೋಕಗಳಿವೆ. ೧೬೪ ದೇವತಾ ಚಿತ್ರಗಳನ್ನು ಚಿತ್ರಿಸಲಾಗಿದೆ. ಮಹಾ ಕೈಲಾಸ ಅಧಿಪತಿಯ ಹಾಗೂ ಕೈಲಾಸ ಪರ್ವತದ ದೀರ್ಘವರ್ಣನೆಯಿದೆ. ನಂತರ ಮಹೇಶ್ವರ ಉಮೆ ಹೀಗೆ ಮೊದಲಾದ ದೇವತೆಗಳ ಧ್ಯಾನಾದಿ ವರ್ಣನೆಗಳನ್ನು ಕೊಟ್ಟಿದ್ದಾರೆ. ಪರಶಿವನ ಪಂಚವಿಂಶತಿ ಲೀಲೆಗೆ ಸಂಬಂಧಿಸಿದಂತೆ ಚಿತ್ರಿಸಿ ವರ್ಣಿಸಲಾಗಿದೆ. ನಂದಿ, ಭೃಂಗಿ, ವೀರಭದ್ರ, ಭೈರವ, ಸುಬ್ರಹ್ಮಣ್ಯ, ಗಣಪತಿ, ಏಕಾದಶರುದ್ರರು ವಿವಿಧ ಭಾವಭಂಗಿಗಳಲ್ಲಿ ಚಿತ್ರಿತರಾಗಿದ್ದಾರೆ. ಶಿವನಿಧಿಯಲ್ಲಿ ದೇವತೆಗಳು ಹಿಡಿದಿರುವ ಆಯುಧಗಳು ಬಗೆಬಗೆಯಾಗಿವೆ. ಅಲ್ಲದೆ ವಾದ್ಯ ವಿಶೇಷಗಳೂ

ಮನೋಹರವಾಗಿ ಮೂಡಿಬಂದಿವೆ. ದೇವತೆಗಳ ಕೈಗಳಲ್ಲಿ ಬಗೆಬಗೆಯ ಮಂಗಳಕರ ವಸ್ತುಗಳು, ಧರಿಸಿರುವ ಆಭರಣಗಳು, ತೊಟ್ಟಿರುವ ಉಡುಗೆ ತೊಡುಗೆಗಳು, ತಿಂಡಿ ತಿನಿಸುಗಳು ಹಾಗೂ ಹಣ್ಣು ಹಂಪಲಗಳು ಮೊದಲಾದವುಗಳನ್ನು ನೋಡಿದಷ್ಟೂ ನೊಡಬೇಕೆನಿಸುತ್ತದೆ. ಶಿವನ ಕೈಗಳಿಗೆ ಕುತ್ತಿಗೆಗೆ ನಡುವು ಹಾಗೂ ಕಾಲುಗಳಿಗೂ ಹಾವುಗಳನ್ನು ಸುತ್ತಿಕೊಂಡಿದ್ದು, ಆನೆಯ ಚರ್ಮ, ಹುಲಿಚರ್ಮಗಳನ್ನು ತೊಟ್ಟುಕೊಂಡಿದ್ದಾನೆ. ಮೈಗೆಲ್ಲಾ ಬೂದಿಯನ್ನು ಬಳಿದುಕೊಂಡು ಕಂಗೊಳಿಸುತ್ತಿದ್ದಾನೆ. ಸದಾ ಮಂಗಳಮಯನಾಗಿ ಲೋಕದ ಚರಾಚರಾತ್ಮಕ ಜೀವಿಗಳನ್ನು ರಕ್ಷಿಸುತ್ತಿದ್ದಾನೆ. ಇಂತಹ ಶಿವನಿಧಿಯು ಅದ್ಭುತವಾಗಿ ಚಿತ್ರಣಗೊಂಡಿದೆ. ಅಲಂಕಾರಿಕ ನಕ್ಷೆಗಳು, ವೇದಿಕೆ, ಮಂಟಪದ ಕೂಡ್ರುವ ಆಸನಗಳು, ಕಿರೀಟ, ಆಭರಣಗಳಲ್ಲಿ ಅತ್ಯಂತ ಸುಂದರವಾಗಿ ಅಲಂಕಾರಿಕ ನಕ್ಷೆಗಳು ಮೂಡಿ ಬಂದಿವೆ. ಈ ಗ್ರಂಥದಲ್ಲಿ ಬರುವ ಶ್ಲೋಕಗಳಿಗೆ ಅನುಸಾರವಾಗಿ, ಚಿತ್ರಗಳನ್ನು ಅತ್ಯಾಕರ್ಷಕವಾಗಿ, ನಯನಮನೋಹರವಾಗಿ ಕಾಗದದ ಮೇಲೆ ಚಿತ್ರಗಳನ್ನು ರಚಿಸಿ, ಶಿವನಿಗೆ ಸಂಬಂಧಿಸಿದ ವಿಶ್ವಕೋಷವನ್ನೇ ನಮ್ಮ ಕಣ್ಣು ಮುಂದೆ ಇರಿಸುವಲ್ಲಿ ಅಂದಿನ ಮಹಾರಾಜರಾದ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಕಾರ್ಯ ಪ್ರಶಂಸನೀಯ ಹಾಗೂ ಸ್ತುತ್ಯರ್ಹವಾದುದಾಗಿದೆ.

ಇಲ್ಲಿ ನಿರೂಪಿತವಾದ ದೇವತೆಗಳಿಗೆ ಒಂದೊಂದು ಆಕಾರವನ್ನು ಕಲ್ಪಿಸಿ ಚಿತ್ರಿಸಿರುವುದು ಇಲ್ಲಿನ ಪ್ರಮುಖವಾದ ಅಂಶ. ಗ್ರಹ, ನಕ್ಷತ್ರ, ದಿನ, ಪಕ್ಷ, ಮಾಸ, ಋತು, ಅಯನ, ಸಂವತ್ಸರ, ನದಿ ಮೊದಲಾದ ಆಕಾರರಹಿತ ವಿಷಯಗಳಿಗೂ ಆಕೃತಿಯನ್ನು ಬರೆಸಿದ್ದಾರೆ. ದೇವತೆಗಳು, ಅವರ ತಂದೆ, ತಾಯಿ, ಹೆಂಡತಿ ಮಕ್ಕಳು ಅಲ್ಲದೆ ಅವರ ಜನ್ಮ ದಿನ ಮೊದಲಾದ ಅಂಶಗಳನ್ನು ತಿಳಿಸಿಕೊಟ್ಟಿದ್ದಾರೆ. ಇಲ್ಲಿ ಸುಮಾರು ೬೦೦೦ಕ್ಕೂ ಹೆಚ್ಚು ಶ್ಲೋಕಗಳಿವೆ. ೧೦೦೦ಕ್ಕೂ ಅಧೀಕ ಚಿತ್ರಗಳು ವರ್ಣಮಯವಾಗಿದ್ದು ಅನೇಕ ವರ್ಣಗಳನ್ನು ಬಳಸಿದ್ದು ಇಂದಿಗೂ ನವನವೀನವಾಗಿ ಕಂಗೊಳಿಸುತ್ತಿವೆ. ಜೊತೆಗೆ ಲೇಖಕರ ಮತ್ತು ಚಿತ್ರಕಲಾವಿದರ ಕಲಾನೈಪುಣ್ಯವನ್ನು ಎತ್ತಿ ತೋರಿಸುತ್ತಿವೆ.

ಮುಮ್ಮಡಿಯವರು ಮೊದಲಿಗೆ ತಾವು ಸಂಗ್ರಹಿಸಿದ ಕೃತಿಯ ಶ್ಲೋಕಗಳನ್ನು ಬೇರೊಬ್ಬ ವಿದ್ವಾಂಸರಿಂದ ಬರೆಯಿಸಿ, ನಂತರ ಚಿತ್ರಕಲಾವಿದರಿಗೆ ದೇವತೆಗಳ ಸ್ವರೂಪವನ್ನು ತಿಳಿಸಿ ಹೇಳುತ್ತಿದ್ದರು. ಚಿತ್ರಕಲಾವಿದರು ಅದನ್ನು ಕೇಳಿಕೊಂಡು ಅದರ ಚಿತ್ರವನ್ನು ಮನಸ್ಸಿಗೆ ತಂದುಕೊಂಡು ಮೊದಲಿಗೆ ರೇಖಾಚಿತ್ರಗಳನ್ನು ಬರೆದುಕೊಂಡು, ನಂತರ ಉಚಿತವಾದ ಬೇರೆಬೇರೆ ವರ್ಣಗಳನ್ನು ತುಂಬಿ ಚಿತ್ರವನ್ನು ಪೂರ್ತಿಗೊಳಿಸುತ್ತಿದ್ದರು. ಹೀಗಾಗಿ ಈ ಕೃತಿ ಹೊರಬರಲು ಅನೇಕ ವರ್ಷಗಳೇ ಹಿಡಿದಿರಬಹುದಾಗಿದೆ. ಮುಮ್ಮಡಿಯವರು ಚಿತ್ರಕಲೆಗೂ ಕಲಾವಿದರಿಗೂ ಆಶ್ರಯದಾತರಾಗಿದ್ದರು. ಚಿತ್ರಕಲೆಯಲ್ಲಿ ಖ್ಯಾತರಾದ ಅಳಸಿಂಗ್ರಯ್ಯ, ತಿಪ್ಪಾಜಯ್ಯ, ಜಾವಗಲ್ಲು ನರಸಿಂಹಯ್ಯ, ವೀರಣ್ಣ, ತಂಜಾವೂರು ಕೊಂಡಯ್ಯ ಮೊದಲಾದವರು ಮುಮ್ಮಡಿಯವರ ಕಾಲದಲ್ಲಿ ಪ್ರಸಿದ್ಧರಾದ ಚಿತ್ರಕಲಾವಿದರೆಂದು ತಿಳಿದುಬರುತ್ತದೆ.[೬೪] ಇವರೆಲ್ಲರ ಕಲಾಪ್ರೌಢಿಮೆಯನ್ನು ಶ್ರೀ ತತ್ವನಿಧಿಯಂತಹ ಶ್ರೇಷ್ಠ

೬೪. ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್ : ಶ್ರೀತತ್ವ ನಿಧಿ : ಕ. ಅನುವಾದ ಪ್ರ.ಸಂ. : ಡಾ. ಕೆ.ಎ. ರಮೇಶ್:ಶಿವನಿಧಿ : ಪುಟ xxiii

ಗ್ರಂಥಗಳಲ್ಲಿ ಇಂದಿಗೂ ನೋಡಬಹುದಾಗಿದೆ. ಇಂತಹ ಖ್ಯಾತ ಕಲಾವಿದರನ್ನು ಲೋಕಕ್ಕೆ ಪರಿಚಯಿಸಿದ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಚಿರಸ್ಮರಣೀಯರು.

**ಶಿವನಿಧಿಯ ಕಲಾಕೃತಿಗಳು:**

ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ನೇತೃತ್ವದಲ್ಲಿ ಇಡೀ ಚಿತ್ರ ಕಲಾವಿದರ ತಂಡವೆ ಒಂದಾಗಿ "ಮೈಸೂರು ಶೈಲಿಯ"ನ್ನು ಹುಟ್ಟು ಹಾಕಿದ್ದು ವೀರಶೈವ ಧಾರ್ಮಿಕ ಹಿನ್ನೆಲೆಯಲ್ಲಿ. ಅದರದೇ ಆದ ಶಾಸ್ತ್ರ ರೂಪ, ಆಕಾರ, ಆಕೃತಿ, ವರ್ಣಗಾರಿಕೆಗಳು ಆಯಾ ದೇವರುಗಳಿಗೆ ಸಂಬಂಧಿಸಿದ ಸಂಕೇತ ಪ್ರಧಾನವಾಗಿ ವಿಶಿಷ್ಟವಾಗಿ ಮೂಡಿಬಂದಿವೆ.

**ಶಿವನಿಧಿಯ ಶಿಷ್ಟ ಪರಂಪರೆಯ ಕಿರುರೂಪ ಚಿತ್ರಗಳು**

| ಅ.ನಂ. | ಕಲಾಕೃತಿಯ ಹೆಸರು | ಚಿತ್ರದ ಸಂಖ್ಯೆ | ಪುಟ ಸಂಖ್ಯೆ |
|---|---|---|---|
| ೧ | ಪರಿವಾರ ಸಹಿತ ಉಮಾಮಹೇಶ್ವರ | ೯೮b | ೧೧೧ |
| ೨. | ಗೌರಿಯ ಎದುರುಗಡೆ ನೃತ್ಯ ಮಾಡುತ್ತಿರುವ ಶಿವ | ೯೯a/೧ | ೧೧೨ |
| ೩. | ಉಮಾಮಹೇಶ್ವರರು | ೧೦೪a/೨ | ೧೨೬ |
| ೪. | ಭಕ್ತಮಾರ್ಕಂಡೆಯನ ಭಕ್ತಿಗೆ ಮೆಚ್ಚಿದ ಶಿವ | ೧೦೫b/೧ | ೧೩೧ |
| ೫. | ವಿಘ್ನೇಶ್ವರನಿಗೆ ವರಪ್ರದಾನ ಮಾಡುತ್ತಿರುವ ಶಿವ | ೧೦೮b/2 | ೧೩೮ |
| ೬. | ಉಮಾಸ್ಕಂದ ರೊಡಗೂಡಿದ ಶಿವ | ೧೦೯a/೧ | ೧೩೮ |
| ೭. | ಮಹಾಲಿಂಗೋದ್ಭವ | ೧೧೦a/೨ | ೧೪೧ |
| ೮. | ಪೂರ್ವದಿಕ್ಕಿನಲ್ಲಿರುವ ನಂದೀಶ್ವರ | ೧೨೦a/೩ | ೧೬೭ |
| ೯. | ಆಗ್ನೇಯ ದಿಕ್ಕಿನಲ್ಲಿರುವ ಮಹಾಕಾಲ | ೧೨೦a/೪ | ೧೬೭ |
| ೧೦. | ದಕ್ಷಿಣದಿಕ್ಕಿನಲ್ಲಿರುವ ಭೃಂಗಿ | ೧೨೦b/೧ | ೧೬೭ |
| ೧೧. | ನೈರುತ್ಯ ದಿಕ್ಕಿನಲ್ಲಿರುವ ಗಣೇಶ | ೧೨೦b/೨ | ೧೬೭ |
| ೧೨. | ಪಶ್ಚಿಮ ದಿಕ್ಕಿನಲ್ಲಿರುವ ವೃಷಭ | ೧೨೦b/೩ | ೧೬೮ |
| ೧೩. | ವಾಯವ್ಯ ದಿಕ್ಕಿನಲ್ಲಿರುವ ಸ್ಕಂದ | ೧೨೦b/೪ | ೧೬೮ |
| ೧೪. | ಉತ್ತರ ದಿಕ್ಕಿನಲ್ಲಿರುವ ಮಹಾದೇವಿ | ೧೨೦b/೫ | ೧೬೮ |
| ೧೫. | ಈಶಾನ್ಯ ದಿಕ್ಕಿನಲ್ಲಿರುವ ಚಂಡೇಶ | ೧೨೦b/೬ | ೧೬೮ |
| ೧೬. | ರಣವೀರಭದ್ರ | ೧೨೧b/೨ | ೧೭೦ |

**೧. ಪರಿವಾರಸಹಿತ ಉಮಾಮಹೇಶ್ವರ:**

ಈ ಚಿತ್ರವನ್ನು "ಕಾರಣಾಗಮ"ವನ್ನು ಆಧರಿಸಿ ಚಿತ್ರಿಸಲಾಗಿದೆ. ಶಿವನ ಎಡಭಾಗದಲ್ಲಿ ಪರ್ವತರಾಜನ ಮಗಳಾದ ಪಾರ್ವತಿಯು ಶಿವನ ಎಡಗಾಲಿನ ತೊಡೆಯ ಮೇಲೆ ಕುಳಿತಿದ್ದಾಳೆ. ಮುಂದುಗಡೆ ವೃಷಭವಿದೆ. ಶಿವನ ಹಿಂಭಾಗದಲ್ಲಿ ಇಂದ್ರ ಮೊದಲಾದ ದೇವತೆಗಳು ನಿಂತಿದ್ದಾರೆ. ಅವನ ಅಕ್ಕಪಕ್ಕಗಳಲ್ಲಿ ವಿಷ್ಣು ಮತ್ತು ಬ್ರಹ್ಮದೇವರಿದ್ದಾರೆ. ವಾಯವ್ಯ, ಈಶಾನ್ಯ, ಆಗ್ನೇಯ ಮತ್ತು ನೈಋತ್ಯ ದಿಕ್ಕುಗಳಲ್ಲಿ ಕ್ರಮವಾಗಿ ವೀರಭದ್ರ, ಕುಮಾರಸ್ವಾಮಿ, ಗಣಪತಿ ಮತ್ತು ಭೈರವರಿದ್ದಾರೆ. ಅಲ್ಲದೆ ಶಾಸ್ತಾ ನಂದಿ, ಚಂಡಕೇಶ್ವರ, ರಾವಣ, ಬಾಣ ಮತ್ತು ಭೃಂಗಿ ಋಷಿಗಳು ಉಮಾಮಹೇಶ್ವರನ ಸುತ್ತಲೂ ಇದ್ದಾರೆ. ಶಿವನ ಮೈವರ್ಣ ಬಿಳಿಯಾಗಿದೆ.[೬೫] ಒಟ್ಟಾರೆಯಾಗಿ ಈ ಸಂಯೋಜನೆಯಲ್ಲಿ ವೇಷಭೂಷಣಗಳು ಕಿರೀಟಗಳು ಮತ್ತು ಆಭರಣಗಳಲ್ಲಿಯ ನಕ್ಷೆಗಳು, ಹಲವಾರು ತಲೆಗಳುಳ್ಳ ಮತ್ತು ಹಲವಾರು ಕೈಗಳುಳ್ಳ ದೇವತಾ ಚಿತ್ರಗಳು, ಅವರ ಕೈಗಳಲ್ಲಿರುವ ಆಯುಧಗಳು, ಜೊತೆಗೆ ಅಲ್ಲಿಯ ಪ್ರತಿಯೊಂದು ವ್ಯಕ್ತಿಯ ಹಾವಭಾವಗಳು ವಿಶಿಷ್ಟವಾಗಿ ಮೂಡಿ ಬಂದಿವೆ. ಇದರಲ್ಲಿ ಪ್ರಮುಖವಾಗಿ ಮೈಗೆ ಬಿಳಿಯ ವರ್ಣ ಮತ್ತು ಉಳಿದಂತೆ ಹಳದಿ, ಕೆಂಪು ಹಸಿರು ವರ್ಣಗಳನ್ನು ಬಳಸಿಕೊಳ್ಳಲಾಗಿದೆ. ಜೋಡಣೆ ಮತ್ತು ಸಂಯೋಜನಾ ದೃಷ್ಟಿಯಿಂದಲೂ ಉತ್ತಮವಾಗಿ ರೂಪುಗೊಂಡಿದೆ.

**೨. ಗೌರಿಯ ಎದುರುಗಡೆ ನೃತ್ಯ ಮಾಡುತ್ತಿರುವ ಶಿವ: (ಸಭಾಪತಿ ಮೂರ್ತಿ)**

ಈ ಕಲಾಕೃತಿಯನ್ನು "ಕಾರಣಾಗಮ"ವನ್ನು ಆಧರಿಸಿ ಚಿತ್ರಿಸಲಾಗಿದೆ. ಕೈಲಾಸ ಪರ್ವತದಲ್ಲಿ ಪೀಠವೊಂದರ ಮೇಲೆ ತ್ರಿಭುವನಮಾತೆಯಾದ ಗೌರಿಯು ಕುಳಿತಿದ್ದಾಳೆ. ಆದಿ ಪುರುಷನಾದ ಮಹಾದೇವನು ತಲೆಯಲ್ಲಿ ಚಂದ್ರನನ್ನು ಧರಿಸಿದ್ದು ಗೌರಿಯ ಎದುರಿನಲ್ಲಿ ನರ್ತನ ಮಾಡುತ್ತಿದ್ದಾನೆ. ಈ ನೃತ್ಯಕ್ಕೆ ಎಲ್ಲ ದೇವತೆಗಳು ಒಂದೊಂದು ವಾದ್ಯವನ್ನು ನುಡಿಸುತ್ತಿದ್ದುದು ಕಂಡುಬರುತ್ತದೆ. ಇದೊಂದು ನೃತ್ಯ ಮತ್ತು ಸಂಗೀತಗಳು ಮೇಳವಿಸಿದ ಕಲಾಕೃತಿಯಾಗಿದ್ದು ಈಶ್ವರನು ನಾಟ್ಯ ಮಾಡುತ್ತಿರುವಾಗ ಬ್ರಹ್ಮನು ತಾಳ (ಚಳ್ಳಾಮ) ಹಿಡಿದು ತಾಳ ಹಾಕುತ್ತಲಿದ್ದಾನೆ. ವಿಷ್ಣುವು ಚರ್ಮವಾದ್ಯ ಹಿಡಿದು ಬಾರಿಸುತ್ತಿದ್ದಾನೆ. ಸರಸ್ವತಿಯು ಕೈಯಲ್ಲಿ ವೀಣೆಯನ್ನು ಹಿಡಿದುಕೊಂಡು ನುಡಿಸುತ್ತಿದ್ದಾಳೆ. ಸೂರ್ಯಚಂದ್ರರು ದಂಡಗಳನ್ನು ಹಿಡಿದುಕೊಂಡು ನಿಂತಿದ್ದಾರೆ. ತುಂಬರು ಮತ್ತು ನಾರದರು ಗಾನ ಮಾಡುತ್ತಿದ್ದಾರೆ. ನಂದಿ ಮತ್ತು ಕುಮಾರರು ನಗಾರಿಗಳನ್ನು ಬಾರಿಸುತ್ತಿದ್ದಾರೆ[೬೬] ಒಟ್ಟಾರೆಯಾಗಿ ನೃತ್ಯದ ಭಂಗಿಯ ಶಿವನನ್ನು ತದೇಕಚಿತ್ತದಿಂದ ನೋಡುತ್ತಿರುವ ಗೌರಿ, ವಾದ್ಯವನ್ನು ನುಡಿಸುತ್ತಿರುವವರೆಲ್ಲರ ದೃಷ್ಟಿಯೂ ಶಿವನತ್ತ ನೆಟ್ಟಿರುವುದು, ಹಾವಭಾವಗಳೆಲ್ಲ ಉತ್ತಮವಾಗಿ ಮೂಡಿಬಂದಿವೆ. ಆದರೆ ಸಂಯೋಜನಾ ದೃಷ್ಟಿಯಿಂದ ಹಿನ್ನಡೆಯಾಗಿದ್ದು ಬಹುಶಃ ಶಿವನನ್ನು ಪ್ರತ್ಯೇಕಗೊಳಿಸಿದ್ದು ನೃತ್ಯವನ್ನೇ ಪ್ರಮುಖವಾಗಿ ತೋರಿಸುವ

---

೬೫. ಡಾ. ಕೆ.ವಿ.ರಮೇಶ್ (ಪ್ರ.ಸಂ): ಶಿವನಿಧಿ– ತೃತೀಯ ಸಂಪುಟ: ಕನ್ನಡ ಅನುವಾದ: ಚಿತ್ರ ೯೮ ಬಿ:೩ : ಪುಟ. ೧೧೧.
೬೬. (ಪ್ರ.ಸಂ) ಡಾ. ಕೆ.ವಿ.ರಮೇಶ್: ಶಿವನಿಧಿ– ತೃತೀಯ ಸಂಪುಟ: ಕನ್ನಡ ಅನುವಾದ: ಚಿತ್ರ ೯೯ಎ :೧ : ಪುಟ. ೧೧೨.

ಉದ್ದೇಶದಿಂದಲೋ ಏನೋ, ಕುಳಿತಿರುವ ಗೌರಿ, ಶಿವ, ವಾದ್ಯವನ್ನು ನುಡಿಸುತ್ತಿರುವ ದೇವತೆಗಳನ್ನು ಬೇರೆ ಬೇರೆಯಾಗಿ ಚಿತ್ರಿಸಿದ್ದು ಒಟ್ಟಾರೆ ಗುಂಪಾಗಿ ಕಾಣದೆ ಪ್ರತ್ಯೇಕಗೊಳಿಸಿದಂತಾಗಿದೆ. ಆದರೆ ವರ್ಣಗಳ ದೃಷ್ಟಿಯಲ್ಲಿ ವರ್ಣವಿನ್ಯಾಸ, ಸಮತೋಲನಗಳು ಸುಂದರವಾಗಿದ್ದು ಬಿಳಿ, ಹಳದಿ, ಕೆಂಪು ಮತ್ತು ಹಸಿರು ಬಣ್ಣಗಳ ಬಳಕೆಯನ್ನು ಮಾಡಲಾಗಿದೆ.

**೩. ಉಮಾಮಹೇಶ್ವರರು:**

ಈ ಕಲಾಕೃತಿಯನ್ನು ಶೈವಾಗಮದ ಕಾರಣಾಗಮವನ್ನು ಆಧರಿಸಿ ಚಿತ್ರಿಸಲಾಗಿದೆ. ಉಮಾದೇವಿ ಸಹಿತನಾದ ಉಮಾಮಹೇಶ್ವರನ ಸ್ವರೂಪವಿದೆ. ಸಿಂಹಾಸನದಲ್ಲಿ ಬಲಗಾಲನ್ನು ಕೆಳಗಡೆ ಬಿಟ್ಟು ಎಡಗಾಲನ್ನು ಮಡಚಿಕೊಂಡಿದ್ದು ಎಡಗಾಲ ಮೇಲೆ ಉಮೆಯನ್ನು ಕೂಡಿಸಿಕೊಂಡಿದ್ದು, ಹಿಂದಿನ ಎರಡೂ ಕೈಗಳಲ್ಲಿ ಉಳಿ ಮತ್ತು ಜಿಂಕೆಯ ಮರಿಯನ್ನು ಹಿಡಿದುಕೊಂಡಿದ್ದು, ಮುಂದಿನ ಒಂದು ಕೈ ಅಭಯಮುದ್ರೆಯನ್ನು ಹಾಗೂ ಇನ್ನೊಂದು ಕೈ ವರದ ಮುದ್ರೆಯನ್ನು ಹೊಂದಿದ್ದಾನೆ. ಕೆನ್ನೈದಿಲೆಯ ಹೂವಿನಂತಿರುವ ಸುಂದರ ಕಣ್ಣುಗಳಿಂದ ಉಮೆಯು ಶಿವನನ್ನು ನೋಡುತ್ತ ಕುಳಿತಿರುವ ಚಿತ್ರವಾಗಿದ್ದು[೬೭] ಮಹೇಶ್ವರನು ಸಂತೃಪ್ತ ಭಾವನೆ ಹೊಂದಿ ನಗುಮುಖದೊಂದಿಗೆ ಎದುರು ನೋಡುತ್ತ ಕುಳಿತಿರುವನು. ದೇಹಕ್ಕೆ ಬಿಳಿಯ ವರ್ಣವಿದ್ದು ಮಹೇಶ್ವರನ ಉಡುಗೆ ಆಭರಣಗಳು ಹಳದಿ ವರ್ಣದಲ್ಲಿದ್ದರೆ, ಕೆಂಪುವರ್ಣದ ನಕ್ಷೆಗಳನ್ನು ಹಸಿರುವರ್ಣದ ಶಲ್ಯವನ್ನು ಹಾಕಿಕೊಂಡಿರುವನು. ಉಮೆಯು ಕೆಂಪುಸೀರೆಯನ್ನುಟ್ಟಿದ್ದು ಹಳದಿ ಅಂಚು ಮತ್ತು ಆಭರಣಗಳನ್ನು, ಕಿರೀಟವನ್ನು ಹೊಂದಿರುವಳು. ಹೀಗೆ ಉಮಾಮಹೇಶ್ವರನು ತನ್ನ ಭಕ್ತರಿಗೆ ವರವನ್ನು ಕೊಡುವವನಾಗಿ ಕುಳಿತಿದ್ದಾನೆ.

**೪. ಭಕ್ತಮಾರ್ಕಂಡೇಯನ ಭಕ್ತಿಗೆ ಮೆಚ್ಚಿದ ಶಿವ: (ಅಂಗಮೂರ್ತಿಗಳು)**

ಶಿವನ ಬಲಭಾಗದಲ್ಲಿ ಮಾರ್ಕಂಡೇಯನು ಲಿಂಗಮೂಲವನ್ನು ಎರಡೂ ಭುಜಗಳಿಂದ ಹಿಡಿದುಕೊಂಡಿದ್ದು ಎರಡೂ ಕಣ್ಣುಗಳಿಂದ ನೋಡುತ್ತಿದ್ದು, ಮೈಯೆಲ್ಲಾ ವಿಭೂತಿಯನ್ನು ಬಳಿದುಕೊಂಡಿದ್ದು, ಕೊರಳಲ್ಲಿ ರುದ್ರಾಕ್ಷಿಯ ಮಾಲೆಯನ್ನು ಧರಿಸಿರುವನು. ಶಿವನನ್ನು ಪೂಜಿಸುತ್ತಿರುವಂತೆಯೂ, ಶಿವನ ಧ್ಯಾನದಲ್ಲಿ ತೊಡಗಿರುವಂತೆಯೂ ಚಿತ್ರಿಸಲಾಗಿದೆ. ಶಿವನ ಎಡಭಾಗದಲ್ಲಿ ಮೃತ್ಯುಸ್ವರೂಪನಾದ ತಲೆಯಲ್ಲಿ ಕಿರೀಟವನ್ನು ಕಿವಿಗಳಲ್ಲಿ ಕುಂಡಲಗಳನ್ನು ಹಾಕಿಕೊಂಡಿರುವ ದೊಡ್ಡದಾದ ಕೋರೆದಾಡೆಗಳುಳ್ಳ ಭಯಂಕರಾಕಾರವುಳ್ಳ ಕಾಲನಿರಬೇಕು. ಎರಡೂ ಕೈಗಳಲ್ಲಿ ದಂಡ ಮತ್ತು ಪಾಶಗಳಿರಬೇಕು. ಅವನು ಮಾರ್ಕಂಡೇಯನನ್ನು ಕೊರಳಿಗೆ ಹಗ್ಗ ಹಾಕಿ ಎಳೆಯುತ್ತಿರುವಂತೆ ಚಿತ್ರಿಸಬೇಕು. ಆ ಕಾಲನು ಕೋಣದ ಮೇಲೆ ಕುಳಿತಿರಬೇಕು ಎಂಬುದಾಗಿ ಹೇಳಲಾಗಿದೆ.[೬೮] ಆದರೆ ಇಲ್ಲಿ ಚಿತ್ರದ ಕುರಿತು ಬರೆಯುವಾಗ ಚಿತ್ರವನ್ನು ಗಂಭೀರವಾಗಿ ಪರೀಕ್ಷಿಸಿಲ್ಲವೆಂಬುದನ್ನು ತೋರಿಸುತ್ತದೆ. ಕಲಾಕೃತಿಯನ್ನು ಸರಿಯಾಗಿ ವಿಶ್ಲೇಷಿಸಿದಾಗ ಲಿಂಗದ ಬಲಭಾಗದಲ್ಲಿ ಮಾರ್ಕಂಡೇಯನು ಲಿಂಗಮೂಲವನ್ನು ಎರಡೂ ಕೈಗಳಿಂದ

೬೭. (ಪ್ರ.ಸಂ) ಡಾ. ಕೆ.ವಿ.ರಮೇಶ್: ಶಿವನಿಧಿ – ತೃತೀಯ ಸಂಪುಟ: ಕನ್ನಡ ಅನುವಾದ: ಚಿತ್ರ ೧೦೪ಎ:೨ ಪುಟ. ೧೨೬
೬೮. (ಪ್ರ.ಸಂ) ಡಾ. ಕೆ.ವಿ.ರಮೇಶ್: ಶಿವನಿಧಿ–ತೃತೀಯ ಸಂಪುಟ: ಕನ್ನಡ ಅನುವಾದ: ಚಿತ್ರ ೧೦೫ಬಿ/೧: ಪುಟ೧೩೮.

ಗಟ್ಟಿಯಾಗಿ ಹಿಡಿದುಕೊಂಡಿದ್ದು, ಲಿಂಗವನ್ನೇ ನೋಡುತ್ತಿದ್ದು ಮೈಯೆಲ್ಲಾ ವಿಭೂತಿಯನ್ನು ಬಳಿದುಕೊಂಡಿದ್ದು, ಕೊರಳಲ್ಲಿ ರುದ್ರಾಕ್ಷಿಯ ಮಾಲೆಯನ್ನು ಧರಿಸಿರುವನು. ಲಿಂಗವನ್ನು ಪೂಜಿಸುತ್ತಿರುವಂತೆಯೂ, ಶಿವನ ಧ್ಯಾನದಲ್ಲಿ ತೊಡಗಿರುವಂತೆಯೂ ಚಿತ್ರಿಸಲಾಗಿದೆ. ಲಿಂಗದ ಎಡಭಾಗದಲ್ಲಿ ಮೃತ್ಯುಸ್ವರೂಪನಾದ ತಲೆಯಲ್ಲಿ ಕಿರೀಟವನ್ನು ಕಿವಿಗಳಲ್ಲಿ ಕುಂಡಲಗಳನ್ನು ಹಾಕಿಕೊಂಡಿರುವ ದೊಡ್ಡದಾದ ಕೋರೆ ದಾಡೆಗಳುಳ್ಳ ಭಯಂಕರಾಕಾರವುಳ್ಳ ಕಾಲ ನಿರಬೇಕು, ಎರಡೂ ಕೈಗಳಲ್ಲಿ ದಂಡ ಮತ್ತು ಪಾಶಗಳಿರಬೇಕು. ಅವನು ಮಾರ್ಕಂಡೇಯನ ಕೊರಳಿಗೆ ಹಗ್ಗ ಹಾಕಿ ಎಳೆಯುತ್ತಿರುವಂತೆ ಚಿತ್ರಿಸಲಾಗಿದೆ. ಆ ಕಾಲನ ವಾಹನ ಕೋಣವು ಅವನ ಮುಂದುಗಡೆ ಲಿಂಗದ ಎದುರಿನಲ್ಲಿ ಓಡುತ್ತಿದೆ.

ಲಿಂಗೋದ್ಭವರಾದ ಶಿವಪಾರ್ವತಿಯರ ಚಿತ್ರವನ್ನು ಚಿತ್ರಿಸಲಾಗಿದೆ. ಶಿವನು ತನ್ನ ತ್ರಿಶೂಲದಿಂದ ಕಾಲನ ಎದೆಗೆ ಚುಚ್ಚಿ ಮಾರ್ಕಂಡೆಯನನ್ನು ರಕ್ಷಿಸುವ ಸನ್ನಿವೇಶವು ಅತ್ಯಂತ ಸುಂದರವಾಗಿ ಮೂಡಿ ಬಂದಿದೆ. ಇಲ್ಲಿ ಕೆಂಪು ಹಳದಿ ಹಸಿರು ವರ್ಣಗಳನ್ನು ಬಳಸಲಾಗಿದೆ. ಬಿಳಿ ಮತ್ತು ನೀಲಿವರ್ಣಗಳೂ ಬಳಸಲ್ಪಟ್ಟಿವೆ. ಉತ್ತಮವಾದ ಸಂಯೋಜನೆಯನ್ನು ಮಾಡಲಾಗಿದೆ.

**೫. ವಿಘ್ನೇಶ್ವರನಿಗೆ ವರಪ್ರದಾನ ಮಾಡುತ್ತಿರುವ ಶಿವ:**

ಈ ಕಲಾಕೃತಿಯನ್ನು ಶೈವಾಗಮದ ಕಾರಣಾಗಮವನ್ನು ಆಧರಿಸಿ ಚಿತ್ರಿಲಾಗಿದೆ. ವಿಘ್ನೇಶ್ವರನಿಗೆ ವರಪ್ರದಾನ ಮಾಡುತ್ತಿರುವ ಮಹಾದೇವನಿಗೆ ನಾಲ್ಕು ಭುಜಗಳು, ಮೂರು ಕಣ್ಣುಗಳಿದ್ದು ಜಟಾಮುಕುಟಧಾರಿ ಇವನು. ಬಲಗೈಯನ್ನು ಗಣಪತಿಯ ತಲೆಯ ಮೇಲಿಟ್ಟು ಅಭಯ ನೀಡುತ್ತಿದ್ದಾನೆ. ಎಡಗೈಯಲ್ಲಿ ವರದ ಮುದ್ರೆ ಇದೆ. ಹಿಂದಿನ ಎರಡೂ ಕೈಗಳಲ್ಲಿ ಜಿಂಕೆ ಮತ್ತು ಕೊಡಲಿಗಳಿವೆ. ಗಣಪತಿಯು ಶಿವನ ಬಲಗಡೆ ನಿಂತಿದ್ದಾನೆ.[೬೯] ಶಿವನು ಬಲಗಾಲನ್ನು ಮಡಿಚಿಕೊಂಡಿದ್ದು ಎಡಗಾಲನ್ನು ಕೆಳಗೆ ಇಳಿಬಿಟ್ಟಿದ್ದಾನೆ. ಮೈಯೆಲ್ಲಾ ಆಭರಣಗಳನ್ನು ಹಾಕಿಕೊಂಡಿದ್ದು ಹಳದಿವರ್ಣದ ಉಡುಪು ಧರಿಸಿ, ಹಸಿರುವರ್ಣದ ಶಲ್ಯವನ್ನು ಹಾಕಿಕೊಂಡಿದ್ದು ಕೆಂಪುವರ್ಣದ ಕಿರೀಟ ಹಳದಿ ವರ್ಣದ ನಕ್ಷೆಗಳಿವೆ. ಶಿವನ ಎಡಬದಿಯ ಆಸನದಲ್ಲಿ ಆಸೀನಳಾಗಿರುವ ನಗುಮೊಗದ ಪಾರ್ವತಿಯು ಬಲಗಾಲನ್ನು ಮಡಿಚಿಟ್ಟುಕೊಂಡು ಎಡಗಡೆಯ ಕಾಲನ್ನು ಕೆಳಗಡೆ ಬಿಡಲಾಗಿದೆ. ಬಲಗೈಯಲ್ಲಿ ಕೆನ್ನೈದಿಲೆಯ ಹೂವನ್ನು, ಎಡಗೈಯಲ್ಲಿ ವರದ ಮುದ್ರೆಯನ್ನು ಹಿಡಿದಿದ್ದಾಳೆ. ಒಂದೇ ಪೀಠದಲ್ಲಿ ಪರಶಿವ ಮತ್ತು ಪಾರ್ವತಿಯರನ್ನು ತೋರಿಸಲಾಗಿದೆ.

ಗಣಪತಿ ಕೆಂಪು ಬಣ್ಣದವನಾಗಿ ತಲೆಯಲ್ಲಿ ಕಿರೀಟವನ್ನು ಧರಿಸಿರುವನು. ತಂದೆ ತಾಯಿಗೆ ನಮಸ್ಕರಿಸುತ್ತಾ ನಿಂತಿದ್ದು, ಪಾಶ ಮತ್ತು ಅಂಕುಶಗಳನ್ನು ಹಿಂದಿನ ತನ್ನೆರಡು ಕೈಗಳಲ್ಲಿ ಹಿಡಿದುಕೊಂಡಿರುವನು. ಹಳದಿವರ್ಣದ ಧೋತರ, ಕೆಂಪುವರ್ಣದ ಶಲ್ಯ, ಹಳದಿವರ್ಣದ ಕಿರೀಟ ಧರಿಸಿಕೊಂಡಿರುವನು. ವರ್ಣಸಾಮರಸ್ಯ ಹೊಂದಿ ಸುಂದರ ನಕ್ಷೆಗಳಿಂದೊಡಗೂಡಿದ ಈ ದೃಶ್ಯವು ಚೆನ್ನಾಗಿ ಮೂಡಿ ಬಂದಿದೆ.

---

೬೯. (ಪ್ರಸಂ) ಡಾ. ಕೆ.ವಿ.ರಮೇಶ್: ಶಿವನಿಧಿ-ತೃತೀಯ ಸಂಪುಟ: ಕನ್ನಡ ಅನುವಾದ: ಚಿತ್ರ ೧೦೮ಬಿ:೨:ಪುಟ ೧೩೮.

**೬. ಉಮಾಸ್ಕಂದರೊಡಗೂಡಿದ ಶಿವ: (ಸೋಮಸ್ಕಂದ)**

ಈ ಕಲಾಕೃತಿಯನ್ನು ಶೈವಾಗಮದ ಕಾರಣಾಗಮವನ್ನು ಆಧರಿಸಿ ಚಿತ್ರಿಸಲಾಗಿದೆ. ಉಮಾ ಸ್ಕಂದರೊಡಗೂಡಿದ ಶಿವನ ಸ್ವರೂಪವನ್ನು ಈ ರೀತಿಯಾಗಿ ಚಿತ್ರಿಸಲಾಗಿದೆ. ಉಮಾಸ್ಕಂದೇಶ್ವರನು ಭೋಗಶಕ್ತಿಯಿಂದ ಕೂಡಿದ್ದಾನೆ. ಇವನಿಗೆ ನಾಲ್ಕು ತೋಳುಗಳು, ಮೂರು ಕಣ್ಣುಗಳು, ಜಟಾಮುಕುಟಧಾರಿ, ಸಕಲಾಭರಣಗಳನ್ನು ತೊಟ್ಟಿದ್ದಾನೆ. ತನ್ನ ಬಲಗೈ ವರಮುದ್ರೆಯನ್ನು, ಎಡಗೈಯ ಅಭಯಮುದ್ರೆಯನ್ನು ತೋರುತ್ತಿದ್ದರೆ ಹಿಂದಿನ ಬಲಗೈಯಲ್ಲಿ ಉಳಿಯನ್ನು ಎಡಗೈಯಲ್ಲಿ ಜಿಂಕೆಯನ್ನು ಹಿಡಿದುಕೊಂಡಿದ್ದಾನೆ. ಎಡಕಿವಿಯಲ್ಲಿ ಎಲೆಯನ್ನು ಬಲಕಿವಿಯಲ್ಲಿ ಮಕರಕುಂಡಲವನ್ನೂ ಧರಿಸಿದ್ದಾನೆ. ಎಡಗಾಲನ್ನು ಮಡಿಚಿಕೊಂಡಿದ್ದು ಬಲಗಾಲನ್ನು ಕೆಳಗಡೆ ಬಿಡಲಾಗಿದೆ. ತನ್ನ ಎಡಗಡೆ ಉಮಾದೇವಿಯನ್ನು ಕೂಡ್ರಿಸಿಕೊಂಡಿದ್ದಾನೆ. ಇವರಿಬ್ಬರ ಮಧ್ಯದಲ್ಲಿ ಸರ್ವಲಕ್ಷಣಗಳಿಂದ ಕೂಡಿದ ಸ್ಕಂದ ಕುಮಾರನಿದ್ದಾನೆ.[೨೦] ಶಿವನು ತನ್ನ ತಲೆಯಲ್ಲಿ ಗಂಗೆಯನ್ನು ಕಟ್ಟಿಕೊಂಡಿದ್ದು ಚಂದ್ರನನ್ನು ಧರಿಸಿದ್ದಾನೆ. ಈ ಸೋಮಸ್ಕಂದನ ಎಡಭಾಗದಲ್ಲಿ ಭೋಗಶಕ್ತಿ ಇರುವಳು. ಶಿವನ ಬಲಗಡೆಯಲ್ಲಿ ವೀರಭದ್ರನು ನಿಂತಿದ್ದಾನೆ. ಪರಶಿವನ ಇಪ್ಪತ್ತೈದು ಲೀಲಾಮೂರ್ತಿಗಳಲ್ಲಿ ಉಮಾ–ಸ್ಕಂದರೊಡಗೂಡಿದ ಮೂರ್ತಿಯು ವಿಶಿಷ್ಠವಾಗಿದ್ದು ವಿಶೇಷ ಉತ್ಸವ ಕಾಲದಲ್ಲಿ, ಮೆರವಣಿಗೆಯ ಸಮಯದಲ್ಲಿ ಸೋಮಸ್ಕಂದ ಮೂರ್ತಿಗೆ ವಿಶೇಷ ಪ್ರಾಮುಖ್ಯ ಇದೆ.

**೭. ಮಹಾಲಿಂಗೋದ್ಭವ:**

ಈ ಕಲಾಕೃತಿಯನ್ನು ಶೈವಾಗಮದ ಕಾರಣಾಗಮವನ್ನು ಆಧರಿಸಿ ಚಿತ್ರಿಸಲಾಗಿದೆ. ಲಿಂಗಾಕಾರದ ಮಧ್ಯದಲ್ಲಿ ಶಿವ ಚಂದ್ರಶೇಖರನಾಗಿ ನಿಂತಿರುವನು. ಪಾದವು ಲಿಂಗದ ನಾಳದ ಕೆಳಗಡೆ ಇದೆ. ಶಿವನು ಲಿಂಗದಿಂದ ಮೂಡಿ ಬಂದಿರುವಂತೆ ಇರುವುದರಿಂದ ಇದು ಲಿಂಗೋದ್ಭವ ಮೂರ್ತಿ ಎನಿಸಿದೆ.

ಶಿವನ ಎಡಭಾಗದಲ್ಲಿ ಬ್ರಹ್ಮನು ಹಂಸರೂಪದಿಂದ ಮೇಲೆ ಹಾರುತ್ತಿರುವನು. ಬಲಭಾಗದಲ್ಲಿ ವಿಷ್ಣುವು ವರಾಹ ರೂಪವನ್ನು ತಾಳಿ ಕೆಳಗಡೆ ಸಂಚರಿಸುತ್ತಿರುವಂತೆ ಇರುವನು. ಕೆಲವರ ಅಭಿಪ್ರಾಯದಂತೆ ಬ್ರಹ್ಮ ಮತ್ತು ವಿಷ್ಣು ಇಬ್ಬರೂ ತಮ್ಮ ನಿಜರೂಪದಲ್ಲೇ ಎರಡು ಪಾದಗಳಿಂದ ಶಿವನ ಎಡ–ಬಲ ಪಾರ್ಶ್ವಗಳಲ್ಲಿ ನಿಂತಿದ್ದಾರೆ. ಇದು ಲಿಂಗಾವತಾರ ಮೂರ್ತಿಯು. ಇದು ಸರ್ವದಾ ಎಲ್ಲರಿಗೂ ಶಾಂತಿಯನ್ನು ಉಂಟು ಮಾಡುವಂತಹದು.[೨೧]

ನೀಲಿ ವರ್ಣದ ಲಿಂಗದ ಮಧ್ಯದಲ್ಲಿ ಶಿವನ ಚಿತ್ರವು ಹಳದಿ ಮತ್ತು ಕೆಂಪುವರ್ಣದ ಉಡುಗೆ ತೊಡುಗೆಗಳು ಅಲ್ಲಲ್ಲಿ ಹಸಿರು ವರ್ಣ ಬಳಸಲಾಗಿದ್ದು ಕೆಂಪುವರ್ಣದ ಶಲ್ಯವನ್ನು ಮಾಡಲಾಗಿದೆ. ಎಡ–ಬಲಗಳಲ್ಲಿರುವ

---

೨೦. (ಪ್ರ.ಸಂ) ಡಾ. ಕೆ.ವಿ.ರಮೇಶ್: ಶಿವನಿಧಿ–ತೃತೀಯ ಸಂಪುಟ: ಕನ್ನಡ ಅನುವಾದ: ಚಿತ್ರ ೧೮೯ ಎ : ೧: ಪುಟ ೧೩೮, ೧೩೯.

೨೧. (ಪ್ರ.ಸಂ) ಡಾ. ಕೆ.ಪಿ.ರಮೇಶ್: ಶಿವನಿಧಿ–ತೃತೀಯ ಸಂಪುಟ: ಕನ್ನಡ ಅನುವಾದ: ಚಿತ್ರ ೧೨೦ಎ :೨: ಪುಟ ೧೪೧.

ವಿಷ್ಣು ಮತ್ತು ಬ್ರಹ್ಮರಿಗೆ ಹಳದಿ ವರ್ಣದ ಉಡುಗೆಗಳಿದ್ದು ಹಸಿರುವರ್ಣದ ಶಲ್ಯ ಮಾಡಲಾಗಿದೆ. ಕೆಂಪುವರ್ಣದ ಅಂಚನ್ನು ರಚಿಸಲಾಗಿದೆ.

**೮. ಪೂರ್ವದಿಕ್ಕಿನಲ್ಲಿರು ನಂದೀಶ್ವರ:**

ಈ ಕಲಾಕೃತಿಯು ಶೈವಾಗಮವನ್ನು ಆಧರಿಸಿ ಚಿತ್ರವಾಗಿದ್ದು ನಂದಿಯ ನಾಲ್ಕು ಕೈಗಳನ್ನು ಹೊಂದಿದ್ದು ಪೀಠವೊಂದರ ಮೇಲೆ ಪದ್ಮಾಸನದಲ್ಲಿ ಕುಳಿತಿರುವನು. ಮುಂದಿನ ಕೈಗಳೆರಡೂ ವರದ ಮುದ್ರೆಯನ್ನು ಮತ್ತು ಅಭಯ ಮುದ್ರೆಯನ್ನು ಹೊಂದಿದ್ದು ಹಿಂದಿನ ಕೈಗಳಲ್ಲಿ ಅಕ್ಷಯ ಮಾಲೆ ತ್ರಿಶೂಲಗಳನ್ನು ಹಿಡಿದುಕೊಂಡಿದ್ದು ನಂದಿಯ ಮೈಬಣ್ಣ ತಿಳಿಗೆಂಪು ವರ್ಣವನ್ನು ತುಂಬಲಾಗಿದೆ.[೨೨] ಹಳದಿವರ್ಣದ ಉಡುಗೆಯನ್ನುಟ್ಟಿದ್ದು ಹಸಿರು ವರ್ಣದ ಶಲ್ಯವನ್ನು ಅಡ್ಡಲಾಗಿ ಹಾಕಿಕೊಂಡಿದ್ದು ಹಿಂದುಗಡೆಯ ಕೆಂಪುವರ್ಣದ ದಿಂಬಿಗೆ ಆಧಾರವಾಗಿಟ್ಟುಕೊಂಡಿರುವ ನಂದಿಯು ಎಡಬದಿಗೆ ನೋಡುತ್ತ ಕುಳಿತಿರುವುದನ್ನು ಚಿತ್ರಿಸಲಾಗಿದೆ.

**೯. ಆಗ್ನೇಯ ದಿಕ್ಕಿನಲ್ಲಿರುವ ಮಹಾಕಾಲ :**

ಈ ಕಲಾಕೃತಿಯನ್ನು "ಶೈವಾಗಮ"ವನ್ನು ಆಧರಿಸಿ ಚಿತ್ರಿಸಲಾಗಿದೆ. ಮಹಾಕಾಲನು ನಾಲ್ಕು ಕೈಗಳನ್ನು ಹೊಂದಿದ್ದು ಪೀಠವೊಂದರ ಮೇಲೆ ಪದ್ಮಾಸನದಲ್ಲಿ ಕುಳಿತಿರುವನು. ಮುಂದಿನ ಬಲಗೈಯಲ್ಲಿ ಖಡ್ಗ ಹಿಡಿದಿದ್ದು ಹಿಂದಿನ ಕೈಯಲ್ಲಿ ತ್ರಿಶೂಲವಿದೆ. ಮುಂದಿನ ಎಡಗೈಯಲ್ಲಿ ಶರೀರವಿಲ್ಲದ ರುಂಡದ ಜುಟ್ಟಲವನ್ನು ಹಿಡಿದುಕೊಂಡಿದ್ದು ಹಿಂದಿನ ಕೈಯಲ್ಲಿ ಗುರಾಣಿಯನ್ನು ಹಿಡಿದುಕೊಂಡಿರುವನು. ಹಳದಿವರ್ಣದ ಉಡುಗೆಯಿದ್ದು ಕೆಂಪು ವರ್ಣದ ಚೀಟ ಮತ್ತು ಶಲ್ಯವನ್ನು ಅಡ್ಡಲಾಗಿ ಹಾಕಿಕೊಳ್ಳಲಾಗಿದೆ.  ಹಿಂದುಗಡೆಯ ದಿಂಬು ಹಸಿರುವರ್ಣದಲ್ಲಿದೆ. ಎದುರಿಗೆ ನೋಡುತ್ತಿರುವ ಮಹಾಕಾಲನನ್ನು ಗಂಭೀರವಾಗಿರುವಂತೆ ಚಿತ್ರಿಸಲಾಗಿದೆ.[೨೩]

**೧೦. ದಕ್ಷಿಣ ದಿಕ್ಕಿನಲ್ಲಿರುವ ಭೃಂಗಿ:**

ಈ ಕಲಾಕೃತಿಯನ್ನು "ಶೈವಾಗಮ"ವನ್ನು ಆಧರಿಸಿ ಚಿತ್ರಿಸಲಾಗಿದೆ.  ಭೃಂಗಿಯು ಎರಡು ಕೈಗಳನ್ನು ಹೊಂದಿದ್ದು ಬಲಗೈಯಲ್ಲಿ ಅಕ್ಷಮಾಲೆಯನ್ನು, ಎಡಗೈಯಲ್ಲಿ ದಂಡವನ್ನು ಹಿಡಿದುಕೊಂಡು ಎದುರುಗಡೆ ನೋಡುತ್ತಿದ್ದಾನೆ. ಇವನಿಗೆ ಮೂರು ಕಾಲುಗಳಿರುವುದು ವಿಶೇಷವಾಗಿದೆ.[೨೪] ಈ ಮೂರೂ ಪಾದಗಳ ಮೇಲೆ ನಿಂತುಕೊಂಡಿರುವನು. ಹುಲಿಯ ಚರ್ಮವನ್ನು ಸೊಂಟಕ್ಕೆ ಸುತ್ತಿಕೊಂಡಿದ್ದು  ತಲೆಗೂದಲುಗಳನ್ನು ಹಿಂದಿನ ನಡದವರೆಗೂ ಇಳಿ ಬಿಡಲಾಗಿದೆ.  ಭೃಂಗಿಯು ತೆಳುವಾಗಿ ಬಿಳಿ ಬಣ್ಣದವನಾಗಿದ್ದಾನೆ.

---

೨೨. ಡಾ. ಕೆ.ವಿ.ರಮೇಶ್(ಪ್ರ.ಸಂ): ಶಿವನಿಧಿ–ತೃತೀಯ ಸಂಪುಟ: ಕನ್ನಡ ಅನುವಾದ: ಚಿತ್ರ ೧೧೦ಎ/೩: ಪುಟ ೧೬೭.
೨೩. ಅದೇ ಚಿತ್ರ ೧೨೦ಎ/೪ ಪು ೧೬೭
೨೪. ಅದೇ ಚಿತ್ರ ೧೨೦ಬಿ/೧ ಪುಟ ೧೬೭

**೧೧. ನೈಋತ್ಯ ದಿಕ್ಕಿನಲ್ಲಿರುವ ಗಣೇಶ:**

ಈ ಕಲಾಕೃತಿಯನ್ನು "ಶೈವಾಗಮ"ದಿಂದ ಆಧರಿಸಿಕೊಂಡು ಚಿತ್ರಿಸಲಾಗಿದೆ. ವಿಘ್ನಾಧಿಪತಿಯಾದ ಗಣೇಶನು ಕುಳ್ಳದೇಹ, ಆನೆಯ ಮುಖ, ದಪ್ಪದಾದ ಹೊಟ್ಟೆ ಇದ್ದು ಇವನ ದೇಹ ಕೆಂಪುಬಣ್ಣದಿಂದ ಕೂಡಿದ್ದು ನಾಲ್ಕು ಕೈಗಳನ್ನು ಹೊಂದಿರುವನು. ಈ ಕೈಗಳಲ್ಲಿ ಹಗ್ಗ, ಅಂಕುಶ, ದಂತ, ಮಾವಿನ ಹಣ್ಣುಗಳನ್ನು ಒಂದೊಂದು ಕೈಗಳಲ್ಲಿ ಒಂದೊಂದನ್ನು ಹಿಡಿದುಕೊಂಡಿರುವನು. ಇವನ ಸೊಂಡಿಲು ಎಡಗಡೆಯಲ್ಲಿದ್ದು ಬಲಗಡೆಗೆ ಅದರ ಮುಖವಿದೆ.[೭೫] ಹಳದಿವರ್ಣದ ಉಡುಗೆ ತೊಡುಗೆ, ಆಭರಣಗಳನ್ನು ಹೊಂದಿದ್ದು ಕುಳಿತಿರುವ ಪೀಠವು ಕಪ್ಪು ಹಸಿರು ಬಣ್ಣದಲ್ಲಿದ್ದರೆ ಹಿಂದಿನ ದಿಂಬು ಕೆಂಪುವರ್ಣದಲ್ಲಿದೆ. ಹೀಗೆ ವಿಘ್ನಾಧಿಪತಿ ಗಣಪತಿಯು ಸುಂದರವಾಗಿ ಮೂಡಿ ಬಂದಿರುವನು.

**೧೨. ಪಶ್ಚಿಮದಿಕ್ಕಿನಲ್ಲಿರುವ ವೃಷಭ:**

ಈ ಕಲಾಕೃತಿಯನ್ನು "ಶೈವಾಗಮದಿಂದ" ಆಧರಿಸಿಕೊಂಡು ಚಿತ್ರಿಸಲಾಗಿದೆ. ಧರ್ಮವೇ ವೃಷಭನ ಆಕಾರದಲ್ಲಿ ಹುಟ್ಟಿರುವುದು. ಸ್ಫಟಿಕದಂತೆ ಬಿಳಿಯ ಹಾಗೂ ಶುಭ್ರ ವರ್ಣದಿಂದ ದೇಹವು ನಿರ್ಮಲನಾಗಿರುವದು.[೭೬] ಎತ್ತಿನ ರೂಪ ವೃಷಭವು ಕೆಂಪುವರ್ಣದ ಜೂಲವನ್ನು, ಕೊರಳಲ್ಲಿ ಗೆಜ್ಜೆಯ ಸರ ಮತ್ತು ಘಂಟೆಯನ್ನು ಕಟ್ಟಿಕೊಳ್ಳಲಾಗಿದ್ದು ಜೂಲಿನ ಅಂಚು ಗೆಜ್ಜೆಗಳ ಸರಗಳಿಗೆ ಅಲಂಕಾರಿಕವಾಗಿ ಹಳದಿ, ಕೆಂಪು, ಹಸಿರು ವರ್ಣಗಳನ್ನು ಬಳಸಲಾಗಿದೆ.

**೧೩. ವಾಯವ್ಯ ದಿಕ್ಕಿನಲ್ಲಿರುವ ಸ್ಕಂದ:**

ಈ ಕಲಾಕೃತಿಯನ್ನು "ಶೈವಾಗಮ"ದಿಂದ ಆಧರಿಸಿಕೊಂಡು ಚಿತ್ರಿಸಲಾಗಿದೆ. ವಾಯವ್ಯ ದಿಕ್ಕಿನಲ್ಲಿರುವ ಸ್ಕಂದನು ಬಾಲಕನ ರೂಪದಲ್ಲಿದ್ದಾನೆ. ಇವನಿಗೆ ನಾಲ್ಕು ಕೈಗಳಿದ್ದು ಕೊಡಲಿ, ಹುಂಜ ಹಿಂದಿನ ಕೈಗಳಲ್ಲಿದ್ದು ಮುಂದಿನ ಕೈಗಳು ವರದ ಮುದ್ರೆ ಮತ್ತು ಅಭಯಮುದ್ರೆಯನ್ನು ಹೊಂದಿರುವನು.[೭೭] ಮುದ್ದಾದ ಮುಖ, ಅಲಂಕಾರಿಕ ಕಿರೀಟ, ಹಳದಿ ವರ್ಣದ ಉಡುಗೆ ತೊಡುಗೆಗಳು, ಕೆಂಪುವರ್ಣದ ಶಲ್ಯ, ಹಸಿರುವರ್ಣದ ಹಿಂದಿನ ದಿಂಬು ಹೀಗೆ ಈ ಚಿತ್ರವು ಸುಂದರವಾಗಿ ಮುಡಿಬಂದಿದೆ.

**೧೪. ಉತ್ತರ ದಿಕ್ಕಿನಲ್ಲಿರುವ ಮಹಾದೇವಿ:**

ಈ ಕಲಾಕೃತಿಯನ್ನು "ಶೈವಾಗಮ"ದಿಂದ ಆಧರಿಸಿಕೊಂಡು ಚಿತ್ರಿಸಲಾಗಿದೆ. ಮಹಾದೇವಿಯು ಸಿಂಹದ ಮೇಲೆ ಕುಳಿತಿದ್ದಾಳೆ. ಈ ಸಿಂಹವು ಅಲಂಕಾರಿಕವಾಗಿ ಬಂದಿದೆ. ನೈಜತೆಯನ್ನು ಹೊಂದಿಲ್ಲ. ಮಹಾದೇವಿಯು

---

೭೫. ಡಾ. ಕೆ.ವಿ.ರಮೇಶ್ (ಪ್ರ.ಸಂ): ಶಿವನಿಧಿ–ತೃತೀಯ ಸಂಪುಟ: ಕನ್ನಡ ಅನುವಾದ: ಚಿತ್ರ ೧೨೦ಬಿ/೨ ಪುಟ ೧೬೭

೭೬. ಅದೇ ಚಿತ್ರ ೧೨೦ಬಿ/೩ ಪುಟ ೧೬೮

೭೭. ಅದೇ ಚಿತ್ರ ೧೨೦ಬಿ/೪: ಪುಟ ೧೬೮.

ಲಕ್ಷಣವಾಗಿದ್ದು ಹಸಿರುವರ್ಣದ ಸೀರೆಯನ್ನುಟ್ಟುಕೊಂಡಿದ್ದು ಆಭರಣ ಮತ್ತು ಕಿರೀಟಧಾರಿಯಾಗಿರುವಳು. ಎಡಗೈಯಲ್ಲಿ ಕನ್ನಡಿ-ಬಲಗೈಯಲ್ಲಿ ತ್ರಿಶೂಲವನ್ನು ಹಿಡಿದುಕೊಂಡಿರುವಳು.[೭೮]

**೧೫. ಈಶಾನ್ಯ ದಿಕ್ಕಿನಲ್ಲಿರುವ ಚಂಡೇಶ:**

ಈ ಕಲಾಕೃತಿಯನ್ನು "ಶೈವಾಗಮ"ದಿಂದ ಆಯ್ದುಕೊಂಡು ಚಿತ್ರಿಸಲಾಗಿದೆ. ಚಂಡೇಶ್ವರನು ನಾಲ್ಕು ಮುಖಗಳನ್ನು ಹೊಂದಿದ್ದು ನಾಲ್ಕು ತೋಳುಗಳನ್ನು ಹೊಂದಿರುವನು. ಒಂದೊಂದು ಕೈಯಲ್ಲಿ ಒಂದೊಂದು ಆಯುಧವನ್ನು, ಕಮಂಡಲ, ಜಪಮಾಲೆ, ಶೂಲ ಮತ್ತು ಪರಶುವನ್ನು ಹಿಡಿದುಕೊಂಡಿರುವನು. ಹಾವುಗಳನ್ನೇ ಆಭರಣಗಳಂತೆ ಕೊರಳು ಕೈಕಾಲುಗಳಿಗೆ ಸುತ್ತಿಕೊಂಡಿರುವುದನ್ನು ತೋರಿಸಲಾಗಿದೆ. ಕಾಲಾದಿಗಳನ್ನು ನಿಯಂತ್ರಿಸುವವನು.[೭೯] ಈ ದೇವ ಕಪ್ಪಾದ ದೇಹದ ಕಾಂತಿಯನ್ನು ಹೊಂದಿರುವನು. ಹಸಿರು, ಹಳದಿ, ಕೆಂಪು ವರ್ಣಗಳಲ್ಲಿ ಕಿರೀಟ ಮತ್ತು ಆಭರಣಗಳು, ಹಳದಿ ಮತ್ತು ಕೆಂಪು ವರ್ಣದ ಉಡುಗೆಗಳು, ಹಸಿರುವರ್ಣದ ಶಲ್ಯ, ಹಿಂದುಗಡೆಯಲ್ಲಿ ಕೆಂಪುವರ್ಣದ ದಿಂಬು, ಪ್ರಸನ್ನ ಸ್ವರೂಪನಾಗಿ ಚಂಡೇಶನು ರೂಪುಗೊಂಡಿರುವನು.

**೧೬. ರಣವೀರಭದ್ರ:**

ಈ ಕಲಾಕೃತಿಯನ್ನು "ಶೈವಾಗಮ"ದಿಂದ ಆಯ್ದುಕೊಂಡು ಚಿತ್ರಿಸಲಾಗಿದೆ. ರಣವೀರಭದ್ರನು ವೀರರೂಪವನ್ನು ಹೊಂದಿದ್ದು ಇವನದು ದೊಡ್ಡ ಶರೀರ. ಇವನ ಹದಿನಾರು ಕೈಗಳನ್ನು ಹೊಂದಿದ್ದು ಖಡ್ಗ, ಶೂಲ, ಬಿಲ್ಲು, ಚಕ್ರ, ಅಂಕುಶ, ಬತ್ತಳಿಕೆ, ನೇಗಿಲು, ಕಪಾಲ, ಡಮರುಗ, ಬಾಣ, ಶಂಖ, ಜಿಂಕೆ, ಒನಕೆ, ಕೊಡಲಿ, ಹಗ್ಗ, ಫಲಕಗಳೆಂಬ ಈ ಹದಿನಾರು ಆಯುಧಗಳನ್ನು ತನ್ನ ಕೈಗಳಲ್ಲಿ ಹಿಡಿದಿದ್ದಾನೆ. ಹಣೆಯಲ್ಲಿ ಮೂರು ಬೆರಳು ವಿಭೂತಿ ಪಟ್ಟಿಗಳಿದ್ದು ಕೋಪದಿಂದ ಇದ್ದಾನೆ. ಹೀಗಾಗಿ ರೌದ್ರಸ್ವರೂಪಿಯಾಗಿದ್ದು ಕೆಂಪು ಶ್ರೀಗಂಧವನ್ನು ಮೈಗೆ ಬಳಿದುಕೊಂಡಿದ್ದಾನೆ. ವಜ್ರ, ರತ್ನ, ಮಾಣಿಕ್ಯ ಮುಂತಾದ ಒಂಬತ್ತು ವಿಧವಾದ ರತ್ನಗಳಿಂದ ಭೂಷಿತನಾಗಿದ್ದಾನೆ. ಕೆಂಪಾದ ಕಣ್ಣುಗಳನ್ನು ಹೊಂದಿ, ಜಟಾಮುಕುಟಧಾರಿಯಾಗಿದ್ದು ತನ್ನ ಕೂದಲುಗಳನ್ನು ಮೇಲ್ಮುಖವಾಗಿ ಕಟ್ಟಿಕೊಂಡಿರುವನು. ಹೆದರಿಕೆಯನ್ನುಂಟು ಮಾಡುವ ಕೋರೆದಾಡಿಗಳಿದ್ದು, ಕಪ್ಪಾದ ದೇಹವನ್ನು ಹೊಂದಿರುವನು.

ರುದ್ರಾಕ್ಷಿ ಮಾಲೆಯನ್ನೇ ಆಭರಣವನ್ನಾಗಿ ತೊಟ್ಟಿದಾನೆ. ರುಂಡಮಾಲೆಗಳನ್ನು ಆಭರಣಗಳಂತೆ ಹಾಕಿಕೊಂಡಿದ್ದು ಮೈತುಂಬಾ ಆಭರಣಗಳನ್ನು ಹಾಕಿಕೊಂಡಿರುವನು. ಹಳದಿವರ್ಣದ ಧೋತರ, ಹಸಿರುವರ್ಣದ ಶಲ್ಯ, ಹಳದಿ ಮತ್ತು ಕೆಂಪುವರ್ಣದ ಅಂಚನ್ನು ಹೊಂದಿದ ಶಲ್ಯ ಹೊಂದಿರುವನು. ಇವನ ಪಾದಕಮಲಗಳಲ್ಲಿ ಸುಂದರವಾದ ಪಾದುಕೆಗಳು ರಾರಾಜಿಸುತ್ತವೆ. ಇವನ ದೇಹವು ಹದಿನಾಲ್ಕು ಲೋಕಗಳಿಗೂ ಹೆದರಿಕೆಯನ್ನು ಹುಟ್ಟಿಸುವಂತೆ ಇದ್ದು ತನ್ನ ಭಕ್ತರಿಗೆ ಬಯಸಿರುವುದನ್ನು ಕೊಡುವವನು. ಇವನ ಕಿವಿಗಳಲ್ಲಿ ಕರ್ಣಕುಂಡಲಗಳು

೭೮. ಡಾ. ಕೆ.ವಿ.ರಮೇಶ್ (ಪ್ರ.ಸಂ): ಶಿವನಿಧಿ-ತೃತೀಯ ಸಂಪುಟ: ಕನ್ನಡ ಅನುವಾದ: ಪುಟ ೧೬೮: ಚಿತ್ರ ೧೨೦ಜಿ/೫.
೭೯. ಅದೇ ಪುಟ ೧೬೮: ಚಿತ್ರ ೧೨೦ಬಿ/೬.

ಶೋಭಿಸುತ್ತಿವೆ. ಇವನ ಬಲಬದಿಯಲ್ಲಿ ಭದ್ರಕಾಳಿಯು ಕೆಂಪುವರ್ಣದ ಸೀರೆಯನ್ನು ಹಸಿರು ವರ್ಣದೊಂದಿಗೆ ಹಳದಿವರ್ಣದ ಅಂಚುಗಳನ್ನು ಹೊಂದಿದ್ದು ಆಭರಣ, ಕಿರೀಟವನ್ನು ಹೊಂದಿದ್ದು, ಬಲಗೈಯಲ್ಲಿ ಖಡ್ಗವನ್ನು, ಎಡಗೈಯಲ್ಲಿ ಶೂಲವನ್ನು ಹಿಡಿದುಕೊಂಡು ನಿಂತಿರುವಳು. ಅವಳ ಹಿಂದಿನ ಜಡೆ ಮೊಳಕಾಲ ಕೆಳಗಿನವರೆಗೂ ತೋರಿಸಲಾಗಿದೆ.[೮೦] ಒಟ್ಟಾರೆಯಾಗಿ ವೀರಭದ್ರ ಮತ್ತು ಭದ್ರಕಾಳಿಯ ಚಿತ್ರಗಳು ಸುಂದರವಾಗಿ ಮೂಡಿ ಬಂದಿವೆ. ರಣವೀರಭದ್ರನನ್ನು ದೊಡ್ಡವನನ್ನಾಗಿಯೂ ಭದ್ರಕಾಳಿಯನ್ನು ಚಿಕ್ಕಗಾತ್ರದಲ್ಲಿ ತೋರಿಸಲಾಗಿದೆ.

ಹೀಗೆ ಶಿವನಿಧಿಯಲ್ಲಿ ಈ ಕಿರುರೂಪ ಚಿತ್ರಗಳು ಶಿಷ್ಟ ರೂಪದ ಚಿತ್ರಗಳಾಗಿದ್ದು, ಪ್ರಮಾಣಬದ್ಧವಾಗಿ ಆಭರಣಗಳೊಂದಿಗೆ ಹಾಗೂ ಆಕರ್ಷಕವರ್ಣಗಳೊಂದಿಗೆ ಉತ್ತಮವಾಗಿ ಸಂಯೋಜನೆಯನ್ನು ಮಾಡಿರುವರು. ದೇವಾನು ದೇವತೆಗಳ ಆಕಾರ, ಗಾತ್ರ, ಹಾವ, ಭಾವಗಳು, ವೇಷ, ಭೂಷಣಗಳು, ಸಂಕೇತಪ್ರಧಾನವಾದ ಆಯುಧಗಳು, ಆಯಾ ದೇವತೆಗಳ ವಾಹನಗಳು ಅದ್ಭುತವಾಗಿ ಮೂಡಿ ಬಂದಿವೆ. ಶಿಷ್ಟ ಪರಂಪರೆಯ ಈ ಚಿತ್ರಗಳು ಮೈಸೂರು ಅರಸರಾದ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ನೇತೃತ್ವದಲ್ಲಿ ರಚನೆಗೊಂಡಿದ್ದು ಚಿತ್ರಕಲಾ ಕ್ಷೇತ್ರಕ್ಕೆ ಅದ್ವಿತೀಯ ಕೊಡುಗೆಯಾಗಿ ಈ "ಶಿವನಿಧಿ" ಗ್ರಂಥವು ಶಿವನನ್ನೇ ಪ್ರಮುಖವಾಗಿಟ್ಟು ಹಾಗೂ ಅವನ ಲೀಲೆಗಳಿಗೆ ಸಂಬಂಧಿಸಿದ್ದಾಗಿ ರೂಪುಗೊಂಡಿದೆ.

**ಶ್ರೀ ತತ್ವನಿಧಿಗೆ ಹಾಗೂ ಶಿವನಿಧಿಗೆ ಚಿತ್ರ ಬರೆದ ತಿಪ್ಪಾಜಪ್ಪನವರ ರೇಖಾಚಿತ್ರಗಳು**

| ಅ.ನಂ. | ಕಲಾಕೃತಿಗಳ ಹೆಸರು |
|---|---|
| ೧. | ಗಣಪತಿಯ ಚಿತ್ರ |
| ೨. | ಶಿವತಾಂಡವ ದೃಶ್ಯ |
| ೩. | ಕಿರಾತಾರ್ಜುನೀಯ ದೃಶ್ಯ |
| ೪. | ಮನ್ಮಥ ವಿಜಯದ ದೃಶ್ಯ |
| ೫. | ಗಣಾದಿಗಳೊಂದಿಗೆ ಶಿವನ ಸಂಸಾರದ ದೃಶ್ಯ |
| ೬. | ತ್ರಿಪುರ ಸಂಹಾರ |
| ೭. | ಶಿವಪಂಚಾಯತನ |
| ೮. | ವೀರಭದ್ರ |
| ೯. | ಕಪಾಲಭೈರವ |
| ೧೦. | ಈಶಾನ |

೮೦. (ಪ್ರಸಂ) ಡಾ. ಕೆ.ವಿ.ರಮೇಶ್: ಶಿವನಿಧಿ–ತೃತೀಯ ಸಂಪುಟ: ಕನ್ನಡ ಅನುವಾದ: ಚಿತ್ರ ೧೨೧ಬಿ/೨: ಪುಟ ೧೬೦.

**೧. ಗಣಪತಿಯ ಚಿತ್ರ:**

ಸಾಮಾನ್ಯವಾಗಿ ಎಲ್ಲ ಶಾಸ್ತ್ರ ಗ್ರಂಥಗಳಂತೆ ಗಣಪತಿಯ ಚಿತ್ರ ಹಾಗೂ ಧ್ಯಾನ, ಶ್ಲೋಕದಿಂದಲೇ ಆರಂಭವಾಗುತ್ತದೆ. ಅಂತೆಯೇ ತಿಪ್ಪಾಜಪ್ಪನವರು ರಚಿಸಿದ ಗಣಪತಿಯು ಎಡಭಾಗಕ್ಕೆ ಮುಖ ತಿರುಗಿಸಿ, ಎಡಗೈಯಲ್ಲಿ ಭಗ್ನದಂತ ಹಿಡಿದಿದ್ದು, ಬಲಗೈಯಲ್ಲಿ ಬೀಜಮಂತ್ರ ಪಠಿಸುವಂತೆ ಕೈ ಬೆಟ್ಟುಗಳನ್ನು ಇರಿಸಿ (ಹೆಬ್ಬಟ್ಟಿನ ಮೇಲೆ (ತರ್ಜನಿ) ತೋರುಬೆಟ್ಟು ಇರಿಸಿ) ದಂತೆ ಚಿತ್ರಿಸಿದೆ. ಕೆಳಗಡೆ (ಮೂಷಿಕ) ಇಲಿಯನ್ನು ವಿಶೇಷವಾಗಿ ತೀರಾ ದೊಡ್ಡದಾಗಿ ಚಿತ್ರಿಸಿದೆ. ಅಂದರೆ ಗಣಪತಿ ಹಾಗೂ ವಾಹನವನ್ನು ಬೇರೆ ಬೇರೆಯಾಗಿಯೇ ಪರಿಗಣಿಸಲಾಗಿದ್ದು ಗಣಪತಿಯ ವಿಗ್ರಹದ ಆಕಾರಕ್ಕೆ ತಕ್ಕಂತೆ ಇಲಿಯನ್ನು ಬರೆದಿದ್ದಾರೆ. ಈ ಇಲಿಯ ಚಿತ್ರ ವಿವರವಾಗಿ ಮೂಡಿಸಲು ಅನುಕೂಲವಾಗಲಿ ಎಂದು ದೊಡ್ಡದಾಗಿ ಸ್ಪಷ್ಟವಾಗಿ ಚಿತ್ರಿಸಿರುವರು. ಗಣಪತಿಯ ಮುಖ ಎಡಕ್ಕೆ ಪಾರ್ಶ್ವಗತವಾಗಿದ್ದು ಕಿರೀಟವೂ ಸೇರಿದಂತೆ ಹೇರಳವಾಗಿ ಆಭರಣಗಳನ್ನು ಬಳಸಲಾಗಿದೆ. ಉಟ್ಟಿರುವ ಧೋತರ, ವಸ್ತುಗಳಲ್ಲಿಯೂ ಅನೇಕ ನೆರಿಗೆಗಳನ್ನು ಅಂದವಾಗಿ ಚಿತ್ರಿಸಿರುವರು. ಗಣಪತಿಯನ್ನು ಸಿಂಹಾಸನದಲ್ಲಿ ಕುಳ್ಳಿರಿಸಲಾಗಿದ್ದು ಸುಂದರವಾಗಿ ರಚನೆಗೊಂಡಿದೆ.

**೨. ಶಿವತಾಂಡವದ ದೃಶ್ಯ:**

ಶಿವನ ತಾಂಡವ ನೃತ್ಯದೊಂದಿಗೆ ವೃಷಭವೂ ಮೇಲ್ಮುಖ ಮಾಡಿಕೊಂಡು ಕುಣಿಯುತ್ತಿರುವ ಅನುಭವವಾಗುತ್ತದೆ. ಪಾರ್ವತಿಯು ಸಿಂಹಾಸನದಲ್ಲಿ ಆಸೀನಳಾಗಿ ಶಿವನ ನೃತ್ಯ ಹಾಗೂ ದೇವಾನುದೇವತೆಗಳ ಸಂಗೀತವನ್ನು ಕೇಳುತ್ತಿರುವಳು. ಇಲ್ಲಿ ಸಂಗೀತ ಮತ್ತು ನೃತ್ಯದ ಸಂಗಮವೇ ಪ್ರಮುಖವಾಗಿದ್ದು ಬ್ರಹ್ಮ, ವಿಷ್ಣು, ಸರಸ್ವತಿ ಮುಂತಾದ ಶಿವಗಣಾದಿಗಳು ಶಿವನ ನೃತ್ಯಕ್ಕೆ ವಿವಿಧ ವಾದ್ಯಗಳನ್ನು ತಕ್ಕ ಹಾಗೆ ನುಡಿಸುತ್ತಿರುವ ದೃಶ್ಯ ಸುಂದರವಾಗಿ ಮೂಡಿ ಬಂದಿದೆ. ಶಕ್ತಿಯ ವಾಹನ ಸಿಂಹವನ್ನು ಪಾರ್ವತಿಯೊಂದಿಗೆ ಕೆಳಗಡೆ ಚಿತ್ರಿಸಲಾಗಿದ್ದು ಅದು ಎದುರುಗಡೆ ನೋಡುತ್ತ ಕುಳಿತುಕೊಂಡಿದ್ದರೆ ಶಿವನೊಂದಿಗೆ ಅವನ ವಾಹನ ವೃಷಭವು ನೃತ್ಯವನ್ನು ಮಾಡುತ್ತಿದೆ ಎನ್ನುವುದನ್ನು ವಿಶೇಷವಾಗಿ ತೋರಿಸಲಾಗಿದೆ.

**೩. ಕಿರಾತಾರ್ಜುನೀಯ ದೃಶ್ಯ:**

ಈ ಸಂಯೋಜನೆಯಲ್ಲಿ ಇಡೀ ಕ್ರಿಯೆ ನಾಲ್ಕಾರು ಹಂತಗಳಲ್ಲಿ ನಡೆದಿದ್ದು ಇವೆಲ್ಲವುಗಳನ್ನು ಒಂದೇ ಸಂಯೋಜನೆಯಲ್ಲಿ ನಿರೂಪಣಾ ಚಿತ್ರದಂತೆ (ನರೇಟಿವ್) ತೋರಿಸಿರುವುದೇ ವಿಶೇಷವಾಗಿದೆ. ಈ ಸಂಯೋಜನೆಯಲ್ಲಿ ಕಿರಾತ (ಶಿವ)ನ ತಪಸ್ಸು, ವರಾಹರೂಪದ ಮೂಕದಾನವ, ಅರ್ಜುನನಿಂದ ಶಿವಲಿಂಗ ಪೂಜೆ, ಶಿವಾರ್ಜುನರ ಕಾಳಗ, ಶಿವನ ಸೋಲನ್ನು ಬೇರೆ ಬೇರೆಯಾಗಿ ಚಿತ್ರಿಸಿದ್ದು ಯಾವುದೇ ಹಿನ್ನೆಲೆಯನ್ನು ಮಾಡದೇ ಆಕಾರಗಳು ಮಾತ್ರ ಇವೆ. ಬಿಲ್ಲು ಬಾಣಗಳ ಯುದ್ಧ, ಮಲ್ಲಯುದ್ಧ, ಮುಷ್ಟಿಯುದ್ಧ, ಅರ್ಜುನನು ಮಳಲಿನ ಲಿಂಗವನ್ನು ಮಾಡಿ ಪೂಜಿಸಲು ಶಿವನು ಅವನನ್ನು ಮೇಲಕ್ಕೆತ್ತುವ ತನ್ನ ನಿಜರೂಪ ತೋರಿಸುವ

ಸನ್ನಿವೇಶಗಳು ಸುಂದರವಾಗಿ ಮೂಡಿಬಂದಿವೆ. ಚಿತ್ರದ ಬಲಬದಿಯಲ್ಲಿ ಮೇಲ್ಮುಖವಾಗಿರುವ ಚೂರಿ ತಲೆಯ ತುದಿಗೆ ತಾಗಿದಂತೆ, ಅರ್ಜುನನು ತಲೆ ಕೆಳಗಾಗಿ ಕಾಲುಮೇಲಾಗಿ ತಪಸ್ಸನ್ನು ಆಚರಿಸುತ್ತಿರುವ ದೃಶ್ಯ, ಅವನ ಮುಖದ ಹತ್ತಿರ ಒಂದು ವರಾಹ ಕುಳಿತು ಮೇಲ್ಮುಖ ಮಾಡಿ ಕೂಗುತ್ತಿರುವ ದೃಶ್ಯ, ಇನ್ನೊಂದು ಬದಿಯಲ್ಲಿ ನೆಲದ ಮೇಲಿಟ್ಟಿರುವ ಅರ್ಜುನನ ಕಿರೀಟ ಹೀಗೆ ವಿವಿಧ ಹಂತಗಳನ್ನು ಸೇರಿಸಿ ಸಂಯೋಜನೆ ಮಾಡಿರುವುದು ವಿಶೇಷವಾಗಿದೆ.

**೪. ಮನ್ಮಥ ವಿಜಯದ ದೃಶ್ಯ:**

ಬೆಟ್ಟವೊಂದರ ಮೇಲೆ ಶಿವನು ತಪಸ್ಸು ಮಾಡುತ್ತಿದ್ದು ಆ ಬೆಟ್ಟದ ಕೆಳಗಡೆಯಲ್ಲಿ ನಾಲ್ಕು ಜನ ಋಷಿಗಳು ವಿವಿಧ ಭಂಗಿಯಲ್ಲಿ ತಪಸ್ಸನ್ನು ಮಾಡುತ್ತಿರುವರು. ಶಿವನ ಬಲಭಾಗದಲ್ಲಿ ಪಾರ್ವತಿಯು ತನ್ನೆರಡು ಕೈಮುಗಿದು ನಿಂತಿರುವಳು, ಬೆಟ್ಟದ ಎದುರುಗಡೆಯಲ್ಲಿ ರಥದಲ್ಲಿರುವ ಮನ್ಮಥ ತನ್ನ ಬಾಣಗಳನ್ನು ಶಿವನಿಗೆ ಬಿಡುತ್ತಿರುವನು. ಅದರ ಮುಂದುಗಡೆಯಲ್ಲಿ ಶಿವನ ವಾಹನ ನಂದಿ ಮತ್ತು ಮನ್ಮಥನ ವಾಹನ ಗಿಳಿಗಳು ಯುದ್ಧಕ್ಕೆ ಸಿದ್ಧವಾದಂತೆ ಚಿತ್ರಿಸಲಾಗಿದೆ. ಶಿವನ ಬಲಗಡೆಯ ಮೇಲ್ಭಾಗದದಲ್ಲಿ ಆಕಾಶದಲ್ಲಿರುವ ದೇವಾನುದೇವತೆಗಳ ಸಮೂಹವೆಲ್ಲ ಕೈ ಮುಗಿದುಕೊಂಡು ನಿಂತಿರುವುದು, ಆಕಾಶದಲ್ಲಿಯ ಮೋಡಗಳನ್ನು ಸುಂದರವಾಗಿ ಚಿತ್ರಿಸಿರುವುದು, ಒಟ್ಟಾರೆಯಾಗಿ ವಿವಿಧ ಹಂತಗಳನ್ನು ಸೇರಿಸಿಕೊಂಡು ಸಂಯೋಜನೆಯನ್ನು ಸುಂದರವಾಗಿ ಮಾಡಲಾಗಿದೆ.

**೫. ಗಣಾದಿಗಳೊಂದಿಗೆ ಶಿವನ ಸಂಸಾರದ ದೃಶ್ಯ:**

ಸಂಯೋಜನೆಯ ಮಧ್ಯದಲ್ಲಿ ಸಿಂಹಾಸನಾರೂಢನಾಗಿರುವ ಶಿವ ಬಲಕಾಲನು ಕೆಳಗಿಟ್ಟುಕೊಂಡಿದ್ದು ಎಡಗಾಲನ್ನು ಮಡಿಚಿಕೊಂಡಿದ್ದು ಎಡತೊಡೆಯ ಮೇಲೆ ಪಾರ್ವತಿ ಆಸೀನಳಾಗಿದ್ದು ಶಿವನ ತಲೆಯಲ್ಲಿ ಗಂಗೆಯನ್ನೂ ತೋರಿಸಿದ್ದು ಅವಳಿಗೆ ನೆರಳಾಗಿ ಏಳು ಹೆಡೆಯ ಸರ್ಪವಿದೆ. ಮುಂದಿನ ಬಲಗೈ ಅಭಯ ಹಸ್ತವನ್ನು, ಹಿಂದಿನ ಬಲಗೈಯಲ್ಲಿ ತ್ರಿಶೂಲವನ್ನು ಹಿಡಿದುಕೊಂಡಿದ್ದು, ಎಡಗಡೆಯ ಮುಂದಿನ ಕೈಯಲ್ಲಿ ಪಾರ್ವತಿಯನ್ನು ಹಿಡಿದುಕೊಂಡಿದ್ದು, ಎಡಗೈ ಹಿಂದುಗಡೆ ಕೈಯಲ್ಲಿ ಜಿಂಕೆಯನ್ನು ಹಿಡಿದುಕೊಂಡು ಕುಳಿತಿರುವ ದೃಶ್ಯವಿದೆ. ಶಿವನ ಬಲಗಡೆಯಲ್ಲಿ ಗಣಪತಿ, ನಂದಿ, ಗರುಡರಾದಿಯಾಗಿ ದೇವಗಣವನ್ನು ಚಿತ್ರಿಸಿದ್ದು ಶಿವನ ಎಡಭಾಗದಲ್ಲಿ ಭೃಂಗಿ, ಕಾರ್ತಿಕರಾದಿ ದೇವಗಣವಿರುವ ಸಂಯೋಜನೆಯು ಸುಂದರವಾಗಿ ಮೂಡಿ ಬಂದಿದೆ. ಎದುರುಗಡೆಯಲ್ಲಿ ವೃಷಭನೊಂದಿಗೆ ಇತರರಿಂದೊಡಗೂಡಿದ ದೇವಸಮೂಹ ಚಿತ್ರಣ ಸುಂದರವಾಗಿ ಮೂಡಿ ಬಂದಿದೆ.

ಹೀಗೆ ತ್ರಿಪುರ ಸಂಹಾರ, ಶಿವಪಂಚಾಯತನ, ವೀರಭದ್ರ, ಕಪಾಲ ಭೈರವ, ಈಶಾನರನ್ನು ಪಂಚವಿಂಶತಿ ಲೀಲೆಯನ್ನು ಆಧರಿಸಿ ಸಂಯೋಜನೆಗಳನ್ನು ರಚಿಸಿರುವರು.

**ಕಲಾವಿದ ತಿಪ್ಪಾಜಪ್ಪನವರ ಪರಿಚಯ :**

ಮಲೆನಾಡಿನ ಸುಂದರಪರಿಸರವಾದ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿ ೧೮ನೇ ಶತಮಾನದಲ್ಲಿ ಜನಿಸಿದ ತಿಪ್ಪಾಜಪ್ಪನವರು, ಮನೆತನದ ಉದ್ಯೋಗವಾಗಿದ್ದ ಬಡಗಿತನದ ಕಾರ್ಯದಲ್ಲಿ ಅವರ ತಂದೆಯೊಂದಿಗೆ ಸಹಕಾರಿಯಾಗುತ್ತಿದ್ದರು. ಮುಂದೆ ಒಂದು ದಿನ ಕಲಾವಿದನಾಗಿ ಬೆಳೆಯಬೇಕೆನ್ನುವ ಆಶೆಯಿಂದಾಗಿ ರಥದ ಶಿಲ್ಪಗಳನ್ನು ರಚಿಸುವುದರೊಂದಿಗೆ ಸೂಕ್ಷ್ಮ ನಕ್ಷೆಯನ್ನು ಮಾಡುತ್ತ ಕ್ರಮೇಣ ಚಿತ್ರಕಲೆಯತ್ತ ವಾಲಿದ ಇವರು ಹಲವಾರು ರೇಖಾಚಿತ್ರಗಳನ್ನು ಮಾಡಿದರು. ಬಡತನದ ಕಾರಣದಿಂದಾಗಿ ಮೈಸೂರಿಗೆ ಬಂದು ಮುಮ್ಮಡಿ ಕೃಷ್ಣರಾಜ ಒಡೆಯರ ಅವರನ್ನು ಕಂಡು ತಮ್ಮ ಆಶ್ರಯದಲ್ಲಿ ಕಲಾವಿದನಾಗಿರಲು ಬಯಸಿದ್ದಾಗಿ ತಿಳಿಸಿದರು. ಆಗ ಒಡೆಯರ್ ಅವರು ಅನುಮತಿಸಿದರು. ಇಲ್ಲಿ ಹಲವಾರು ಕಲಾಕೃತಿಗಳನ್ನು ಹಸ್ತಪ್ರತಿ ಗ್ರಂಥಗಳಿಗಾಗಿ ರಚಿಸಿದರು. ರಾಜಾಶ್ರಯದಲ್ಲಿದ್ದ ಪ್ರಮುಖ ಕಲಾವಿದರಲ್ಲಿ ಇವರೂ ಒಬ್ಬರಾಗಿ ಬೆಳೆದರು. ಅಂತೆಯೇ "ಶ್ರೀತತ್ವನಿಧಿ" ಹಾಗೂ ಅದರ ಭಾಗವೇ ಆದ "ಶಿವನಿಧಿ"ಗೂ ಕಲಾಕೃತಿಗಳನ್ನು ರಚಿಸಿರುವರು. ಆ ಸಂದರ್ಭದಲ್ಲಿ ವಿಜಯನಗರೋತ್ತರ ತಂಜಾವೂರಿನ ಕಲೆ ಅತ್ಯಂತ ಪ್ರಸಿದ್ಧಿಯಲ್ಲಿತ್ತು. ಇದರ ಪ್ರಭಾವ ಹಾಗೂ ಇವರಿಗೆ ಹೊಯ್ಸಳಕಲೆ ಎಂದರೆ ತುಂಬಾ ಅಚ್ಚುಮೆಚ್ಚು. ಆ ಶಿಲ್ಪಗಳಲ್ಲಿಯ ಕುಸುರಿ ಕೆಲಸ ವಿಪರೀತ ನಕ್ಷೆಗಳ ಬಳಕೆ ಇವರನ್ನು ಆಕರ್ಷಿಸಿತ್ತು. ಅಂತೆಯೇ ಇವರ ಕಲಾಕೃತಿಗಳಲ್ಲಿ ಅದರ ಪ್ರಭಾವ ಇದ್ದರೂ ಇವರದೇ ಆದ ಸ್ವತಂತ್ರ ಶೈಲಿಯನ್ನು ಕಂಡುಕೊಳ್ಳಲು ಪ್ರಯತ್ನಿಸಿರುವುದೇ ಮೈಸೂರು ಶೈಲಿಯಾಗಿ ಬೆಳೆಯಲು ಕಾರಣವಾಯಿತು ಎನ್ನಬಹುದು.

**ಮೈಸೂರು ಶೈಲಿಗೆ ಪ್ರಮುಖ ಕಾರಣಗಳು :**

೧. ಸ್ವತಃ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಹಸ್ತಪ್ರತಿಯ ವಸ್ತು ವಿಷಯವನ್ನು ಕಲಾವಿದರಿಗೆ ಹೇಳಿ ಚಿತ್ರಿಸಲು ತಿಳಿಸುತ್ತಿದ್ದರು.

೨. ಮೈಸೂರಿನ ರಾಜಾಶ್ರಯದಲ್ಲಿರುವ ಕಲಾವಿದರೆಲ್ಲ ಒಂದೆಡೆ ಇದ್ದು ಕಲಾಕೃತಿಗಳನ್ನು ರಚಿಸುತ್ತಿರುವುದು.

೩. ಹಸ್ತಪ್ರತಿ ರಚನೆಯ ಕಾರ್ಯದಲ್ಲಿ ಎಲ್ಲ ಕಲಾವಿದರೂ ಭಾಗಿಯಾಗುವುದು ಮತ್ತು ಕಲಾಕೃತಿಗಳನ್ನು ಒಟ್ಟಿಗೆ ರಚಿಸುವುದು.

ರಾಜಾಶ್ರಯದ ಕಲಾಕೃತಿ ರಚನೆಯಲ್ಲಿ ಮತ್ತೆ ಮೂರು ಭಾಗಗಳನ್ನಾಗಿ ಮಾಡಬಹುದಾಗಿದೆ:

೧) ರೇಖಾಚಿತ್ರಗಳನ್ನು ಮಾತ್ರ ರಚನೆ ಮಾಡುವವರು.

೨) ವರ್ಣಗಳನ್ನು ಮಾತ್ರ ತುಂಬುವವರು.

೩) ರೇಖಾಚಿತ್ರಗಳಿಗೆ ಮತ್ತು ವರ್ಣಚಿತ್ರಗಳಿಗೆ ಅಂತಿಮ ರೂಪ ಕೊಡುವವರು.

ಹೀಗೆ ಮೂರು ಭಾಗಗಳನ್ನು ಮಾಡಿಕೊಂಡು ರಾಜಾಶ್ರಯದಲ್ಲಿ ಚಿತ್ರಗಳು ರಚನೆಗೊಂಡ ಹಿನ್ನೆಲೆಯಲ್ಲಿ ಅಂತಿಮವಾಗಿ ಹೊರಬರುವ ಕಲಾಕೃತಿಗಳು ಒಂದೇ ಶೈಲಿಯವಾಗಿ ಹೊರಹೊಮ್ಮಿರುವುದು ಕಂಡು ಬರುತ್ತದೆ. ಪ್ರಮುಖ ಕಲಾವಿದರು ಅಂತಿಮ ರೂಪ ಕೊಡುವ ಕಾರ್ಯ ಮಾಡುತ್ತಿದ್ದು, ಅಂತಹ ಕಲಾವಿದರಲ್ಲಿ ತಿಪ್ಪಾಜಪ್ಪ ಒಬ್ಬರಾಗಿದ್ದರು. ಇವರ ಕಲಾಕೃತಿಗಳನ್ನು ಮೆಚ್ಚಿಕೊಳ್ಳುತ್ತಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಇವರು ರಚಿಸಿದ "ಕೃಷ್ಣಾರ್ಜುನರ ಕಾಳಗ" ಕಲಾಕೃತಿಗೆ "ಬಂಗಾರದ ಪದಕ" ನೀಡಿ ತಿಪ್ಪಾಜಪ್ಪನವರನ್ನು ಸನ್ಮಾನಿಸಿದರು. ಈ ಕಲಾಕೃತಿಯನ್ನು ಜಗನ್ಮೋಹನ ಅರಮನೆಯಲ್ಲಿ ಕಾಯ್ದಿರಿಸಲಾಗಿದೆ. ಇವರು ಸಂಪ್ರದಾಯದ ಕಲೆಗೆ ಸಲ್ಲಿಸಿದ ಸೇವೆಯನ್ನು ಕಂಡು ಹಾಗೂ ಇವರು ರಚಿಸಿದ "ವಿಶ್ವ ರೂಪದರ್ಶನ" ಕಲಾಕೃತಿಗೆ ಉನ್ನತ ಕಲಾಕೃತಿ ಎಂದು ಪರಿಗಣಿಸಿ ಕರ್ನಾಟಕ ಸರಕಾರವು ಇವರನ್ನು ಗೌರವಿಸಿದೆ.

ಆದರೆ ಇವರು ಹೆಚ್ಚು ದಿನಗಳ ಕಾಲ ರಾಜಾಶ್ರಯದಲ್ಲಿ ಉಳಿಯಲಿಲ್ಲ. ಕಾರಣ ಅಲ್ಲಿಯ ಕಲಾವಿದರಲ್ಲಿ ಹೊಂದಾಣಿಕೆಯ ಗೊಂದಲದಿಂದಾಗಿ ಮತ್ತೆ ಮರಳಿ ಶಿಕಾರಿಪುರಕ್ಕೆ ಬಂದು ಕಲಾಕೃತಿಗಳನ್ನು ರಚಿಸಲು ಪ್ರಾರಂಭಿಸಿದರು.

ಇವರ ಕಲಾಕೃತಿಗಳನ್ನು "ತಿಪ್ಪಾಜಿ ಚಿತ್ರಗಾರ ಆರ್ಟ್ ಫೌಂಡೇಷನ್" "ಕರ್ನಾಟಕ ಚಿತ್ರಕಲಾ ಪರಿಷತ್" ಹಾಗೂ ಶಿವಮೊಗ್ಗ ಮತ್ತು ಮೈಸೂರುಗಳಲ್ಲಿ ಕಾಣಬಹುದಾಗಿದೆ.

ಇತ್ತೀಚೆಗೆ ತಿಪ್ಪಾಜಿ ಚಿತ್ರಗಾರ ಆರ್ಟ್ ಫೌಂಡೇಷನ್ ಎಂದು ರಜಿಷ್ಟ್ರೇಷನ್ ಮಾಡಿಸಿಕೊಂಡು "ಗ್ಯಾಲರಿ ಆಫ್ ರಸ". # ೯೩, ಬಿ.ಮುನಿನಾಗಪ್ಪ ಅರ್ಕೇಡ್, ೩ನೇ ಮುಖ್ಯ ರಸ್ತೆ, ೭ನೇ ಅಡ್ಡರಸ್ತೆ, ಚಾಮರಾಜ ಪೇಟೆ ಬೆಂಗಳೂರು-೧೮. ಇಲ್ಲಿ ಕಲಾಲಯವನ್ನು ನಿರ್ಮಿಸಲಾಗಿದೆ.

ಈ ಕಲಾ ಸಂಸ್ಥೆಯು ಶಿವಮೊಗ್ಗಾದಲ್ಲಿ ಸ್ವತಂತ್ರ ಕಲಾ ಪ್ರದರ್ಶನಾಲಯವನ್ನು ಹೊಂದಿದ್ದು, ಗುರುಕುಲ ಮಾದರಿಯ ಚಿತ್ರಕಲಾ ಶಾಲೆಯನ್ನು ಮಾಡುವುದು, ಕರ್ನಾಟಕದ ಖ್ಯಾತ ಕಲಾವಿದರ ಕಲಾಕೃತಿಗಳ ಪ್ರದರ್ಶನ ಮಾಡುವುದು, ರಾಜ್ಯ ರಾಷ್ಟ್ರ ಅಂತಾರಾಷ್ಟ್ರೀಯ ಕಲಾ ಶಿಬಿರ, ಕಲಾ ಪ್ರಾತ್ಯಕ್ಷಿಕೆಯನ್ನು ಏರ್ಪಡಿಸುವುದು, ಕಲೆಯ ಕುರಿತಾದ ವಿಚಾರಸಂಕಿರಣ ನಡೆಸುವುದು, ಕಲಾಪತ್ರಿಕೆಗಳನ್ನು ಸಂಗ್ರಹಿಸುವುದು, ರಾಜ್ಯದ ಹಿರಿಯ ಕಲಾವಿದರನ್ನು ಗುರುತಿಸುವುದು ಮತ್ತು : "ಕುಂಚಕಲಾತಪಸ್ವಿ ಶ್ರೀ ತಿಪ್ಪಾಜಿ ಚಿತ್ರಗಾರ ಪ್ರಶಸ್ತಿ"ಯನ್ನು ನೀಡುವುದು ಈ ಸಂಸ್ಥೆಯ ಉದ್ದೇಶವಾಗಿದೆ. ಅದರಂತೆ ೨೦೧೧ನೇ ಸಾಲಿನ ಈ ಪ್ರಶಸ್ತಿಯನ್ನು ಹಿರಿಯ ಸಾಂಪ್ರದಾಯಿಕ ಚಿತ್ರಕಲಾವಿದ ಶ್ರೀ ಜಿ.ಎಲ್.ಎನ್.ಸಿಂಹ ಅವರಿಗೆ ನೀಡಿ ಗೌರವಿಸಲಾಗಿದೆ.

* ತಿಪ್ಪಾಜಪ್ಪನವರ ಕಲಾಕೃತಿಗಳನ್ನು ಕರ್ನಾಟಕದ ಜನರಿಗೆ ಮೊದಲ ಬಾರಿಗೆ ಪರಿಚಯಿಸಿದವರು ದಿ.ಎನ್.ಎಸ್.ಕುಕ್ಕೆ ಅವರು. ಇವರು ಶಿವಮೊಗ್ಗಾದ ಸಂಗ್ರಹಾಲಯದಲ್ಲಿಯ ಕಲಾಕೃತಿಗಳನ್ನು ತೆಗೆದುಕೊಂಡು ಬೆಂಗಳೂರಿನಲ್ಲಿ, ತದನಂತರ ದೆಹಲಿಯಲ್ಲಿ ಪ್ರದರ್ಶಿಸಿದರು.



ಪರಿವಾರ ಸಹಿತ ಉಮಾಮಹೇಶ್ವರ



ಗೌರಿಯ ಎದುರುಗಡೆ ನೃತ್ಯ ಮಾಡುತ್ತಿರುವ ಶಿವ

## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## 'ಶಿವನಿಧಿಯ ಶಿಷ್ಯ ಪರಂಪರೆಯ ಕಿರುರೂಪ ಚಿತ್ರಗಳು'



ಉಮಾಮಹೇಶ್ವರರು



ಮಾರ್ಕಂಡೇಯನ ಭಕ್ತಿಗೆ ಮೆಚ್ಚಿದ ಶಿವ

ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
'ಶಿವನಿಧಿಯ ಶಿಷ್ಯ ಪರಂಪರೆಯ ಕಿರುರೂಪ ಚಿತ್ರಗಳು'



ವಿಘ್ನೇಶ್ವರನಿಗೆ ವರಪ್ರಧಾನ ಮಾಡುತ್ತಿರುವ ಶಿವ



ಉಮಾಸ್ಕಂದರೊಡಗೂಡಿದ ಶಿವ

## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## 'ಶಿವನಿಧಿಯ ಶಿಷ್ಯ ಪರಂಪರೆಯ ಕಿರುರೂಪ ಚಿತ್ರಗಳು'



ಮಹಾಲಿಂಗೋದ್ಭವ



ಪೂರ್ವದಿಕ್ಕಿನಲ್ಲಿರುವ ನಂದೀಶ್ವರ



ಆಗ್ನೇಯ ದಿಕ್ಕಿನಲ್ಲಿರುವ ಮಹಾಕಾಲ

ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
'ಶಿವನಿಧಿಯ ಶಿಷ್ಯ ಪರಂಪರೆಯ ಕಿರುರೂಪ ಚಿತ್ರಗಳು'



ದಕ್ಷಿಣದಿಕ್ಕಿನಲ್ಲಿರುವ ಭೃಂಗಿ



ನೈಋತ್ಯ ದಿಕ್ಕಿನಲ್ಲಿರುವ ಗಣೇಶ




ಪಶ್ಚಿಮ ದಿಕ್ಕಿನಲ್ಲಿರುವ ವೃಷಭ



ವಾಯವ್ಯ ದಿಕ್ಕಿನಲ್ಲಿರುವ ಸ್ಕಂದ

ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
'ಶಿವನಿಧಿಯ ಶಿಷ್ಯ ಪರಂಪರೆಯ ಕಿರುರೂಪ ಚಿತ್ರಗಳು'



ಉತ್ತರ ದಿಕ್ಕಿನಲ್ಲಿರುವ ಮಹಾದೇವಿ

ಈಶಾನ್ಯ ದಿಕ್ಕಿನಲ್ಲಿರುವ ಚಂಡೇಶ



ರಣವೀರಭದ್ರ


# ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ಶ್ರೀತತ್ವನಿಧಿಗೆ ಚಿತ್ರ ಬರೆದ ತಿಪ್ಪಾಜಪ್ಪನವರ ರೇಖಾಚಿತ್ರಗಳು



ಶಿವತಾಂಡವ ದೃಶ್ಯ



ಮನ್ಮಥ ವಿಜಯದ ದೃಶ್ಯ



ಕಿರಾತಾರ್ಜುನೀಯ ದೃಶ್ಯ


# ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ಶ್ರೀತತ್ವನಿಧಿಗೆ ಚಿತ್ರ ಬರೆದ ತಿಪ್ಪಾಜಪ್ಪನವರ ರೇಖಾಚಿತ್ರಗಳು



ಗಣಾದಿಗಳೊಂದಿಗೆ ಶಿವನ ಸಂಸಾರದ ದೃಶ್ಯ



ವೀರಭದ್ರ ಚಿತ್ರ



ಗಣಪತಿಯ ಚಿತ್ರ

* ಯಾವ ಕಲಾವಿದನಾದರೂ ಬ್ರಷ್‌ನ್ನು ಹಿಡಿಯಬೇಕಾದರೆ ಮೊದಲು ತಿಪ್ಪಾಜಿ ಅವರನ್ನು ನೆನಸಬೇಕೆಂದ ಇದು ಉತ್ಪ್ರೇಕ್ಷೆಯ ಮಾತಲ್ಲ ಅಮೋಘವಾದ ರೇಖಾವಿನ್ಯಾಸ ಕಲಾವಿದರನ್ನು ಬೆರಗುಗೊಳಿಸುತ್ತದೆ ಎಂದು ದಿ. ಎಸ್.ಎಸ್.ಕುಕ್ಕೆ ಅವರು ಅಭಿಪ್ರಾಯ ಪಟ್ಟಿರುವರು.

* ಖ್ಯಾತ ಕಲಾವಿದ ಆರ್.ಎಂ.ಹಡಪದ ಅವರು "ಈ ಚಿತ್ರಗಳನ್ನು ನೋಡಿ ನಾನು ಶಿವಮೊಗ್ಗೆಗೆ ಬಂದಿದ್ದು ಸಾರ್ಥಕವಾಯಿತು" ಎಂದು ಉದ್ಗಾರ ತೆಗೆದರು.

* ಇವರ ಚಿತ್ರಗಳಿಂದ ಪ್ರಭಾವಿತರಾದವರಲ್ಲಿ ಖ್ಯಾತ ಸಾಂಪ್ರದಾಯಿಕ ಚಿತ್ರಕಲಾವಿದರಾಗಿದ್ದ ದಿ. ವಾಯ್.ಸುಬ್ರಹ್ಮಣ್ಯರಾಜುರವರು ಶಿವಮೊಗ್ಗೆಗೆ ಬಂದರೆ ಈ ಚಿತ್ರಗಳನ್ನು ನೋಡದೇ ಹೋಗುತ್ತಿರಲಿಲ್ಲ.

ಹೀಗೆ ತಿಪ್ಪಾಜಪ್ಪನವರು ತನ್ನದೇ ಆದ ವಿಶಿಷ್ಟ ಶೈಲಿ, ತಂತ್ರಗಳೊಂದಿಗೆ ರಚಿಸಿದ ವೀರಶೈವ ಧರ್ಮದ ಚಿತ್ರಗಳು – ಮನ್ಮಥ ವಿಜಯ, ವೀರಭದ್ರಾವತಾರ, ಶಿವತಾಂಡವ ನೃತ್ಯ, ಶಬರಶಂಕರವಿಳಾಸ, ಶಿವಪಂಚಾಯತನ, ಗಣಾದಿಗಳೊಂದಿಗೆ ಶಿವನ ಸಂಸಾರ, ಈಶಾನ ಪ್ರಮುಖವಾದ ಕಲಾಕೃತಿಗಳಾಗಿವೆ.

## ಸುತ್ತೂರು ಮಠದಲ್ಲಿಯ ಸಚಿತ್ರ ಹಸ್ತಪ್ರತಿ

– ಸಂ. ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು

ನಾಡಿನ ಸರ್ವತೋಮುಖ ಅಭಿವೃದ್ಧಿಗಾಗಿ ತನ್ನ ಸೇವಾಕ್ಷೇತ್ರಗಳನ್ನು ಕಾಲದ ಅಗತ್ಯತೆಗಳಿಗೆ ಅನುಗುಣವಾಗಿ ವಿಸ್ತರಿಸುತ್ತಿರುವ ಧಾರ್ಮಿಕ ಪೀಠಗಳಲ್ಲಿ ಸುತ್ತೂರು ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠವೂ ಒಂದು. ಇದಕ್ಕೆ ತನ್ನದೇ ಆದ ಭವ್ಯ ಇತಿಹಾಸವಿದೆ. ಡಾ. ಶ್ರೀಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಕವಿಗಳಿಗೆ, ಕಲಾವಿದರಿಗೆ, ವಿದ್ವಾಂಸರಿಗೆ ಆಶ್ರಯದಾತರಾಗಿದ್ದರು. ಜೆ. ಎಸ್. ಎಸ್. ಮಹಾವಿದ್ಯಾಪೀಠ, ಮೈಸೂರು ಸ್ಥಾಪಿಸಿರುವ ಧಾರ್ಮಿಕ, ಶೈಕ್ಷಣಿಕ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಸಂಸ್ಥೆಗಳಲ್ಲಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ ಒಂದು ಪ್ರಮುಖ ಅಂಗಸಂಸ್ಥೆಯಾಗಿದೆ. ಹಲವಾರು ಮಹತ್ವದ ಗ್ರಂಥಗಳನ್ನು ಪ್ರಕಟಿಸಿರುವ ಈ ಸಂಸ್ಥೆಯಿಂದ ಅತ್ಯಂತ ವಿಶಿಷ್ಟವಾದ ಕೃತಿ ಹೊರಬಂದಿದ್ದು, ೧೯ನೆಯ ಶತಮಾನದಲ್ಲಿದ್ದ ನಂಜುಂಡ ಭಾಗವತನೆಂಬ ಕವಿಯಿಂದ ರಚಿತವಾದ ವೃಷಭೇಂದ್ರ ವಿಳಾಸವೆಂಬ ಕೃತಿಯನ್ನು ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಸಂಪಾದಿಸಿ ಕೊಟ್ಟಿದ್ದಾರೆ. ಈ ಸಚಿತ್ರ ಪಠ್ಯವು ನಾಲ್ಕು ವರ್ಣಗಳಲ್ಲಿ ಮುದ್ರಿತವಾಗಿದ್ದು, ಇದೊಂದು ವಿನೂತನ ಪ್ರಕಟಣೆಯಿಂದಾಗಿ ತಮ್ಮ ಕಲಾಭಿಜ್ಞತೆಯನ್ನು ಮೆರೆದಿದ್ದಾರೆ. ಸಾಹಿತ್ಯ ಹಾಗೂ ಚಿತ್ರಕಲಾ ಪ್ರಪಂಚಗಳೆರಡಕ್ಕೂ ನೀಡಿದ ಕೊಡುಗೆಯಿದು. ಅಪಾರ ಶ್ರಮ ಹಾಗೂ ಶ್ರದ್ಧೆಯಿಂದ ಈ ಪ್ರಕಟಣೆ ಮೈದುಂಬಿ ಬಂದಿದೆ. ಚಿತ್ರಕಲಾವಿದರಾದ ನಾವು ಇದಕ್ಕಾಗಿ ಪೂಜ್ಯ ಶ್ರೀಗಳಿಗೆ ಮೊದಲು ಕೃತಜ್ಞತೆಯನ್ನು ಸಲ್ಲಿಸಲೇಬೇಕು. ಏಕೆಂದರೆ ಈ ಕೃತಿಯು ಕನ್ನಡ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿದ್ದು ಹಾಗೂ ಕನ್ನಡ ಪುಸ್ತಕ ಪ್ರಕಾಶನ ಪ್ರಪಂಚದಲ್ಲಿ ಒಂದು ದಿಗ್ವಿಜಯವನ್ನೇ ಸಾಧಿಸಿದಂತಾಗಿದೆ.

**ವೃಷಭೇಂದ್ರ ವಿಳಾಸ:**

ವೃಷಭೇಂದ್ರವಿಳಾಸ ಒಂದು ಯಕ್ಷಗಾನ ಕೃತಿಯಾಗಿದೆ. ಒಟ್ಟು ೯೭೮ ಪದ್ಯಗಳು ರಾಗ ತಾಳಗಳಿಂದ ಕೂಡಿದ್ದು, ಸಮೃದ್ಧವಾಗಿವೆ. ಆದರೆ ಈ ಕೃತಿಗೆ ಅಸಾಮಾನ್ಯತೆಯನ್ನು ತಂದುಕೊಟ್ಟಿರುವುದು ಇಲ್ಲಿಯ ಬಣ್ಣ ಬಣ್ಣದ ಚಿತ್ರಗಳ ರಾಶಿ. ಒಂದು ಪುಟಕ್ಕೆ ಒಂದು ಅಥವಾ ಎರಡು ಚಿತ್ರಗಳನ್ನು ಬಿಡಿಸಲಾಗಿದೆ. ಈ ಹಸ್ತಪ್ರತಿಯ ೩೪೪ ಪುಟಗಳಲ್ಲಿ ಒಟ್ಟು ೫೭೫ ಚಿತ್ರಗಳು ಅಡಕಗೊಂಡಿವೆ. ಪುಟದ ಬಹುಭಾಗವನ್ನು ಚಿತ್ರಗಳೇ ವ್ಯಾಪಿಸಿದ್ದು, ಅವುಗಳ ಕೆಳಗಡೆ, ಮೇಲ್ಗಡೆ, ಮಧ್ಯದಲ್ಲಿ ಪಠ್ಯವನ್ನು ಬರೆಯಲಾಗಿದೆ. ಹೀಗಾಗಿ ಇದು ಸಚಿತ್ರ ಪಠ್ಯವರ್ಗಕ್ಕೆ ಸೇರುತ್ತದೆ.

ಇಂತಹ ಸಚಿತ್ರ ಪಠ್ಯಗಳ ಸಂಖ್ಯೆ ಯಾವ ಕಾಲಕ್ಕೂ ಕಡಿಮೆ. ಏಕೆಂದರೆ ಇದು ಕಾವ್ಯಕಲೆ ಮತ್ತು ಚಿತ್ರಕಲೆ ಎರಡೂ ಪ್ರತಿಭೆಗಳನ್ನು ಅಪೇಕ್ಷಿಸುತ್ತದೆ. ಇಲ್ಲಿ ಕಾವ್ಯಕಲೆಯ ನಂಜುಂಡ ಭಾಗವತನೇ ಚಿತ್ರಕಲೆ ಬಿಡಿಸುತ್ತ ಹೋಗಿರುವನೋ ಅಥವಾ ಬೇರೆಯವರು ಚಿತ್ರಕಲೆಯನ್ನು ಬಿಡಿಸಿರುವರೋ ಎಂಬುದು ಸ್ಪಷ್ಟವಾಗಿಲ್ಲವಾದರೂ ಇಲ್ಲಿ ಬಿಡಿಸಿರುವ ಚಿತ್ರಗಳು ಅದ್ಭುತವಾಗಿವೆ. ಅಕ್ಷರ ಪಠ್ಯಕ್ಕಿಂತ ಈ ಚಿತ್ರಪಠ್ಯವೇ ಇಲ್ಲಿ ಮುಖ್ಯವಾದುದು. ಹೀಗಾಗಿ ಮೂಲತಃ ರಂಗಪ್ರದರ್ಶನ ಸಂದರ್ಭದಲ್ಲಿ ನೋಡುವ, ಕೇಳುವ, ಈ ರಂಗಪಠ್ಯವು ವಾಚನ ಸಂದರ್ಭದಲ್ಲಿ ಸಾಹಿತ್ಯ ದೃಷ್ಟಿಯಿಂದ ಓದಿಸಿಕೊಳ್ಳುವ, ಚಿತ್ರಕಲಾ ದೃಷ್ಟಿಯಿಂದ ನೋಡಿಕೊಳ್ಳುವ ಪಠ್ಯವೂ ಎನಿಸಿದೆ. ಅನಕ್ಷರಸ್ಥರೂ ರಂಗಪಠ್ಯದಂತೆ ಈ ಚಿತ್ರ ಪಠ್ಯವನ್ನು ಅರ್ಥಮಾಡಿಕೊಳ್ಳಬಹುದಾಗಿದೆ.

**ವೃಷಭೇಂದ್ರ ವಿಳಾಸದ ಹಿನ್ನೆಲೆ:**

೧೨ನೇ ಶತಮಾನದ ಅಂತ್ಯ ೧೩ನೇ ಶತಮಾನದ ಪ್ರಾರಂಭದಲ್ಲಿ ಬದುಕಿದ್ದ ಹರಿಹರ ದೇವನ "ಬಸವರಾಜದೇವರ ರಗಳೆ" ಅಚ್ಚ ಕನ್ನಡದ ರಗಳೆಯ ಛಂದಸ್ಸಿನಲ್ಲಿ ಮೈದುಂಬಿ ಬಂದಿದ್ದು ಇದು ಜನಪ್ರಿಯವಾಗಿತ್ತು. ಅವನು ರಚಿಸಿದ ನೂರಾರು ರಗಳೆಗಳಿಗೆ ಇದು ಕಳಶವಿಟ್ಟಂತೆ ಇದೆ. ಇದರಲ್ಲಿ ಬರುವ ವರ್ಣನೆಗಳು, ಪವಾಡಗಳು, ಪ್ರಸಂಗಗಳು ಅದ್ಭುತವಾಗಿ ಮೂಡಿ ಬಂದಿವೆ. "ಶಿವ ಮತವನ್ನುದ್ದರಿಸುವೆ" ಎಂಬುದು ಕವಿಯ ಆಶಯವಾಗಿತ್ತು.

ಎನ್ನ ಕಣ್ಣೊಳಗೆ ಪರಿದಾಡು ಕೂಡಲಸಂಗ

ಎನ್ನ ಮನದೊಳಗೆ ಕುಣಿದಾಡು ಕೂಡಲಸಂಗ

ಈ ಅದ್ಭುತ ಕೃತಿಯನ್ನು ನೋಡಿ ಪಡಕ್ಷರದೇವನು "ಹರೀಶ್ವರಸ್ತೇನ ಕವಿಃ ಕಃ?" ಎಂದು ಉದ್ಗಾರ ತೆಗೆದನಂತೆ. ವೃಷಭೇಂದ್ರ ಎಂಬ ಮಾತಿನ ಕನ್ನಡ ರೂಪ "ಬಸವರಾಜ ದೇವರ ರಗಳೆ" ಷಡಕ್ಷರದೇವನ "ವೃಷಭೇಂದ್ರ ವಿಜಯ"ಕ್ಕೆ ಸಾಮಗ್ರಿಯನ್ನೊದಗಿಸಿತು. ಪ್ರೇರಣೆ ನೀಡಿತು. ಅದೇ ರೀತಿ ನಂಜುಂಡ ಭಾಗವತನ "ವೃಷಭೇಂದ್ರ ವಿಳಾಸಕ್ಕೆ" ಷಡಕ್ಷರ ದೇವನ ಕೃತಿ ಆಕರವಾಗಿದೆ. ಪ್ರೇರಕವಾಗಿದೆ. ಅಲ್ಲಿಯಂತೆಯೇ ಇಲ್ಲಿಯೂ

ಶಿವಶರಣರ ಕಥೆಗಳು ಹರಡಿಕೊಂಡಿವೆ. ಇಲ್ಲಿನ ನಿರೂಪಣೆ ಆಗಮೋಕ್ತವಾದುದೆಂದು ಕವಿಯ ಎಣಿಕೆ. (೧೦೨೪)

ಭಾಗವತ ಶಿಖಾಮಣಿಯಹ ದಾಸಯ್ಯ
ಭಾಗವತ ಪೌತ್ರ ನಂಜುಂಡ
ನಾಗಮೋಕ್ತ ವೃಷಭೇಂದ್ರ ವಿಳಾಸವ
ನೀಗ ರಚಿಸೆ ಗುರು ಬಲಗೊಂಡ

ತನ್ನ ಗುರುವನ್ನು ಕವಿಯು ರೇಚಾರ್ಯನೆಂದು ಹೆಸರಿಸಿ ಆತನನ್ನು ಬಣ್ಣಿಸಿದ್ದಾನೆ. ತಾನು ಬರೆದ ಈ ಯಕ್ಷಗಾನ ನಾಟಕವನ್ನು ಅವನಿಗೆ ಸಮರ್ಪಿಸಿದ್ದಾನೆ. ಈ ಚಿತ್ರವೊಂದು ಇಲ್ಲಿದೆ. ಗುರುವಿನೆದುರು ತನ್ನ ಕೃತಿಯನ್ನು ಹಿಡಿದು ಕುಳಿತಿರುವ ಚಿತ್ರ, ಮತ್ತೆ ಮಾತಿನಲ್ಲಿಯೂ ಇದರ ಒಕ್ಕಣಿಯಿದೆ. (೧.೧೮)

ಬಸವಕಲ್ಯಾಣದೊಳು
ನಿಂತುದ ವರ್ಣಿಪೆನೆಕ್ಷಗಾನದೊಳು
ಪಿಂತಣ ಸೂತ್ರಕೆ ಸರಿಬರಲು
ಬಲ್ಲಂತುಸುರಿದೆ ಬಲ್ಲಿದರೆಲ್ಲರಿ
ದುಲ್ಲಂಘಿಸದಿದ ನೋಡುವುದು
ಬಲ್ಲಿದಗುರು ರೇಚಾರ್ಯರ ಕೃಪೆಯಿಂ
ದಲ್ಲದೆ ಹೇಳಲಸಾಧ್ಯವಿದು

ಈ ರೇಚಾರ್ಯನು ಯಾರೋ ತಿಳಿಯುವದಿಲ್ಲ. ಆದರೆ ಅವನ ಚಿತ್ರವೊಂದು ಇಲ್ಲಿರುವುದು ನಮ್ಮ ಸುದೈವ.

**ಚಿತ್ರಗಳನ್ನು ಬಿಡಿಸುವ ಉದ್ದೇಶ:**

ಈ ಯಕ್ಷಗಾನ ನಾಟಕದಲ್ಲಿ ಚಿತ್ರಭಾಗವೇ ಸಿಂಹಪಾಲು. ಉಳ್ಳಿ ಸಿಪ್ಪೆಯಂಥ ಕಾಗದದ ೩೪೪ ರಷ್ಟು ಪುಟಗಳು ಬರವಣಿಗೆಗೆ ಮೀಸಲು, ಇರುವ ಚಿತ್ರಗಳು ೫೭೫. ಯಕ್ಷಗಾನದಲ್ಲಿ ಶ್ರವ್ಯ ಭಾಗದಷ್ಟೇ ಮುಖ್ಯವಾದುದು ದೃಶ್ಯಭಾಗ. ನಾಟಕದಲ್ಲಂತೂ ಇದು ಇದ್ದದ್ದೇ. ಯಕ್ಷಗಾನವನ್ನು ಕಾವ್ಯದಂತೆ ಓದಿಕೊಂಡು ಸುಖಿಸುವುದಾಗದು. ಸಂದರ್ಭಗಳು, ಸನ್ನಿವೇಶಗಳು, ವ್ಯಕ್ತಿಗಳು, ಕ್ರಿಯೆಗಳು ಎಲ್ಲವೂ ಕಣ್ಣು ಮುಂದೆ ನಿಂತಿರುವಂತಿರಬೇಕು. ಭಾವಾತ್ಮಕವಾಗಿರಬೇಕು. ಹಾಗಿದ್ದರೇನೆ ಸಹೃದಯನು ತನ್ಮಯನಾದಾನು! ಶಬ್ದವನ್ನು ಕಿವಿಯಾರೆ ಕೇಳಿ ಮನಸ್ಸಿನಲ್ಲಿ ಅರ್ಥವಾಗಿ ಪರಿವರ್ತಿಸಿಕೊಂಡ ಮಾತ್ರಕ್ಕೆ ಕಲಾನುಭವವಾಗದು. ಕಣ್ಣಿನ ಮೂಲಕ ಮನಸ್ಸನ್ನೂ, ಮನಸ್ಸಿನ ಮೂಲಕ ಹೃದಯವನ್ನು ಶಬ್ದಾರ್ಥವು ಮುಟ್ಟಿದಾಗ ಕಲೆಯ ಸುಖ. ಈ ಪ್ರಯೋಜನಕ್ಕಾಗಿ ಇಲ್ಲಿ ಚಿತ್ರಗಳನ್ನು ಬಿಡಿಸಿದ್ದಾನೆ.

ಮೊದಲು ಯಕ್ಷಗಾನವನ್ನು ಸಿದ್ಧಪಡಿಸಿ ಅನಂತರ ಮುಖ್ಯ ಪ್ರಸಂಗಗಳಿಗೆ ಚಿತ್ರಗಳನ್ನು ಅಳವಡಿಸಿಕೊಂಡ ವಿಧಾನ ಇದಲ್ಲ. ಮುಮ್ಮಡಿಯವರ ಶ್ರೀ ತತ್ವನಿಧಿಯು ಹೀಗೆ ಸಿದ್ಧವಾದುದು. ಆದರೆ ಅವರ "ಸೌಗಂಧಿಕಾ ಪರಿಣಯ" ಹಾಗಲ್ಲ. ಶಬ್ದ ಚಿತ್ರಗಳ ಜೊತೆಗೆ ರೂಪಚಿತ್ರಗಳೂ ಹೊರಹೊಮ್ಮಿವೆ. ಪ್ರತಿ ಪುಟದಲ್ಲಿಯೂ ಚಿತ್ರವಿದೆ. ಚಿತ್ರವೇ ಎದ್ದು ನಿಲ್ಲುತ್ತದೆ. ಉಳಿದದ್ದು ಚಿತ್ರದ ವಿವರಣೆಯೆನಿಸುತ್ತದೆ. ನಂಜುಂಡ ಭಾಗವತನ ಈ ಕೃತಿಯಲ್ಲೂ ಇದೇ ವಿಧಾನ. ಗ್ರಂಥರಚನೆ ಮತ್ತು ಚಿತ್ರರಚನೆಗಳು ಒಟ್ಟಿಗೆ ಸೇರಿಕೊಂಡಿವೆ. ಚಿತ್ರಗಳಲ್ಲಿ ಮಾತಿನ ಹೊಯ್ಕಾಲೆಗಳನ್ನು ಸಮರ್ಥವಾಗಿ ಪ್ರತಿಬಿಂಬಿಸಿದ್ದಾರೆ. ಚಿತ್ರವನ್ನು ಬರೆದವರೆ ಗ್ರಂಥವನ್ನು ಬರೆದರೋ ಹೇಗೆಂದು ತಿಳಿಯದು. ಆದರೆ ಪ್ರತಿಯೊಂದು ಚಿತ್ರವೂ ಪ್ರಸಂಗಗಳ ರಸಾನುಕೂಲತೆಗೆ ಸಿದ್ಧವಾಗಿದೆ. ರಂಗಭೂಮಿಯ ಮೇಲೆ ಯಕ್ಷಗಾನವಾಗಲಿ, ನಾಟಕವಾಗಲಿ ಮಾಡಬೇಕಾದ ಕೆಲಸವನ್ನು ಚಿತ್ರಗಾರ ಇಲ್ಲಿ ಅಚ್ಚುಕಟ್ಟಾಗಿ ಮಾಡಿದ್ದಾನೆ. ಶ್ರವ್ಯ – ದೃಶ್ಯ ಮಾಧ್ಯಮಗಳೆರಡೂ ಇಲ್ಲಿ ಬೆಸೆದುಕೊಂಡಿವೆ. ಚಿತ್ರಗಳಲ್ಲಿ ಕಂಡುಬರುವ ಚಾತುರ್ಯ, ರಸಜ್ಞತೆಗಳನ್ನು ಗಮನಿಸಿದಾಗ, ಯಕ್ಷಗಾನದ ಸರ್ವಾಂಗಗಳ ಪರಿಜ್ಞಾನವುಳ್ಳವನೇ ಚಿತ್ರ ರಚಿಸಿರಬೇಕೆಂದು ವೇದ್ಯವಾಗುತ್ತದೆ. ಬರವಣಿಗೆ ಅಲ್ಪವಾಗಿ ಚಿತ್ರಗಳ ಕಳೆ ರಸವತ್ತಾಗಿ ಮೂಡಿಬಂದಿದೆ. ಚಿತ್ರಗಳಲ್ಲಿರುವ ರೂಪ ನಿರ್ಮಾಣ ಅಂಗಾಭಿನಯ ವರ್ಣಸಂಯೋಜನೆ ರೇಖಾ ನಿಶ್ಚಿತಿ ಇವೆಲ್ಲ ಸೊಗಸಾಗಿವೆ. ವ್ಯಕ್ತಿಗಳ ರೂಪ ಉಡುಗೆ – ತೊಡುಗೆ, ಅಲಂಕರಣ ಹಿನ್ನೆಲೆಯ ಗೃಹೋದ್ಯಾನ ಮೊದಲಾದ ವಿವರಗಳು ಬಣ್ಣಗಳ ಬಳಕೆ ದೇವತಾ ಚಿತ್ರಣ ಇವನ್ನೆಲ್ಲ ನೋಡಿದಾಗ, ಮುಮ್ಮಡಿಯವರ ಕಾಲದಲ್ಲಿಯ ಮೈಸೂರಿನಲ್ಲಿ ಮೈದಳೆದ ಚಿತ್ರಶೈಲಿಯಲ್ಲೇ ಇವೆಲ್ಲ ಚಿತ್ರಗಳನ್ನೂ ಗುರುತಿಸಬಹುದು. ಶ್ರೀತತ್ವನಿಧಿ, ಸೌಗಂಧಿಕಾಪರಿಣಯ ಮೊದಲಾದ ಚಿತ್ರಗ್ರಂಥಗಳಲ್ಲಿರುವ ಚಿತ್ರವಿಧಾನವೇ ಪ್ರಸ್ತುತ ಯಕ್ಷಗಾನ ನಾಟಕದಲ್ಲಿಯೂ ಕಂಡುಬರುತ್ತದೆ.

**ಚಿತ್ರಕಲಾ ಕೃತಿಗಳ ವಸ್ತುವಿಷಯ :**

ಇಲ್ಲಿ ವ್ಯಕ್ತಿ ಚಿತ್ರಣಕ್ಕೆ ಅಗ್ರಪಟ್ಟ. ತಮ್ಮ ಗುರು ರೇಚಾರ್ಯನೇ ಆಗಿರಲಿ, ಧಣಿ ಲಿಂಗರಾಜ ಅರಸರೇ ಆಗಲಿ, ಅಲ್ಲಮ ಪ್ರಭುದೇವರೇ ಆಗಲಿ ಸುರಗಿ, ಘಂಟೆಯನ್ನು ಹಿಡಿದ ಮಾಚಯ್ಯನೇ ಆಗಲಿ, ಸುರಗಿಯ ಚೌಡಯ್ಯ, ಶೂಲದ ಬೊಮ್ಮಯ್ಯ, ಹರಳಯ್ಯ, ಬಾಚರಸ, ಆಯ್ದಕ್ಕಿ ಮಾರಯ್ಯ, ತೆಲುಗು ಬೊಮ್ಮಯ್ಯ, ಶರಣರಪ್ಪಣ್ಣ ಮೊದಲಾಗಿ ಶರಣರೇ ಆಗಲಿ, ಆಯಾ ವೃತ್ತಿ ಸ್ವಭಾವಗಳಿಗನುಗುಣವಾಗಿ ವ್ಯಕ್ತಿಚಿತ್ರಣ ಮಾಡಿರುವುದು ಮನೋಜ್ಞವಾಗಿದೆ. ಇನ್ನು ಅರಸರು ಅಧಿಕಾರಿಗಳು ಇವರನ್ನು ಚಿತ್ರಿಸುವಾಗ ಮೈಸೂರು ಅರಮನೆಯ ಸನ್ನಿವೇಶವೇ ಚಿತ್ರಗಾರನಿಗೆ ಆಕರ. ಅರಸರು ಕೂತ ಸಿಂಹಾಸನವಂತೂ ಅದರದ್ದೇ ಪ್ರತಿರೂಪ. ಓಲಗದ ಹಜಾರ, ಹಿಂಬದಿಯ ಕಮಾನುಗಳು, ಕಿಟಕಿಗಳು, ನೆಲದ ಮೇಲೆ ಹಾಸಿರುವ ರತ್ನಗಂಬಳಿ, ಸೋಪಾನ, ಹೆಂಗಳೆಯರ ಸೀರೆಗಳು, ಅಧಿಕಾರಿಗಳ ಉಡುಗೆ, ಉದ್ಯಾನದ ಓರಣ ಎಲ್ಲವೂ ಮೈಸೂರಿನ ರಾಜರ ಆಸ್ಥಾನದ ನೆನಪುಗಳನ್ನೇ ಮರುಕಳಿಸುತ್ತಿದ್ದು ಈ ಗ್ರಂಥ ರಚನೆಯಾದದ್ದು ಮೈಸೂರಿನಲ್ಲಿಯೇ ಎಂಬುದು ತಿಳಿದುಬರುತ್ತದೆ.

ಅಲ್ಲಮಪ್ರಭುದೇವರು, ಗುರುರೇಚಾರ್ಯರದು, ಧಣಿ ಅಳಿಯ ಲಿಂಗರಾಜ ಅರಸರ ಈ ಚಿತ್ರದಲ್ಲಿ ಭಾಗವತ ನಂಜುಂಡನ ವ್ಯಕ್ತಿ ಚಿತ್ರವೂ ಇವೆ. ಈ ಚಿತ್ರಗಳು ವ್ಯಕ್ತಿ ಚಿತ್ರಣಕ್ಕೆ ಉತ್ತಮ ನಿದರ್ಶನಗಳು, ವ್ಯಕ್ತಿಯ ಹೊರಗಣ ಆಕಾರವಷ್ಟೇ ಚಿತ್ರಗಾರನಿಗೆ ಮುಖ್ಯವಲ್ಲ. ವ್ಯಕ್ತಿಯ ಸ್ವಭಾವ, ಒಳಗಣ ಮನೋಧರ್ಮ ಇವೂ ಮುಖ್ಯ. ಇಲ್ಲಿ ಪ್ರಭುದೇವರ ಗುರುವಿನ ಧಣಿಯ ಚಿತ್ರಗಳನ್ನು ಬಿಡಿಸುವಾಗ ಅವರವರ ಆಂತರಿಕ ಸ್ವರೂಪಕ್ಕೆ ಕನ್ನಡಿ ಹಿಡಿದಿದ್ದಾನೆ.

ಇಂಥಹದ್ದೊಂದು ಸಂಪೂರ್ಣ ಸಚಿತ್ರ ಕಾವ್ಯವನ್ನು ಪರಿಶೀಲಿಸುವಾಗ ಅದರ ಸ್ವಾರಸ್ಯವನ್ನೂ ಸಾರ್ಥಕತೆಯನ್ನೂ ಮನವರಿಕೆ ಮಾಡಿಕೊಳ್ಳಬೇಕು. ಇದರಲ್ಲಿ ಸಾಹಿತ್ಯ, ಸಂಗೀತ, ಚಿತ್ರಗಳ ಭಾಗವಿದೆ. ಸಾಹಿತ್ಯದಿಂದ– ಅರ್ಥ ವ್ಯಕ್ತವಾಗುತ್ತದೆ. ಸಂಗೀತದಿಂದ – ಭಾವ ವ್ಯಕ್ತವಾಗುತ್ತದೆ, ಚಿತ್ರದಿಂದ – ಅರ್ಥ ಮತ್ತು ಭಾವಗಳ ಒಕ್ಕೂಟ ಬಯಲಾಗುತ್ತದೆ. ಮೂರೂ ಹೃದಯರಂಜನೆಯ ದಾರಿಗಳೇ.

೧. ಸಾಹಿತ್ಯದಲ್ಲಿ – ಅರ್ಥ ವ್ಯಕ್ತವಾಗಿ ಹೃದಯವನ್ನು ರಂಜಿಸುತ್ತದೆ.

೨. ಸಂಗೀತದಲ್ಲಿ – ಹೃದಯರಂಜನೆ ಮೊದಲಾಗಿ ನಂತರ ಅರ್ಥ ಭಾವಗಳನ್ನು ಮೂಡಿಸುತ್ತದೆ.

೩. ಚಿತ್ರದಲ್ಲಿ – ಅರ್ಥದ ಅಭಿವ್ಯಕ್ತಿ ಮತ್ತು ಹೃದಯರಂಜನೆ ಏಕಕಾಲದಲ್ಲಿ ಸಾಧ್ಯವಾಗುತ್ತದೆ.

ಸಾಹಿತ್ಯದಲ್ಲಿ ಭಾಷೆ ಮುಖ್ಯ, ಸಂಗೀತದಲ್ಲಿ–ಧ್ವನಿ ಮುಖ್ಯ, ಚಿತ್ರದಲ್ಲಿ– ಹಾವ ಭಾವಗಳು ಮುಖ್ಯವಾಗಿರುತ್ತವೆ. ಯಕ್ಷಗಾನದಲ್ಲಿ ರಚನೆ ಶ್ರವ್ಯಕಾವ್ಯರೂಪವಾಗಿ ಇದ್ದರೂ ದೃಶ್ಯವೇ ಅದರ ಪ್ರಯೋಜನ. ಚಿತ್ರಗಳಲ್ಲಿರುವ ಭಾವಾಭಿನಯ, ಸ್ವರೂಪಚಿತ್ರಣ, ಅಲಂಕರಣಗಳು ರಸಪೋಷಣೆಗೆ ನೆರವಾಗಿ ದೃಶ್ಯವನ್ನೇ ಎತ್ತಿಹಿಡಿಯುತ್ತವೆ. ಹೀಗೆಯೇ ಯಕ್ಷಗಾನವು ಮಹಾನಾಟಕವಾಗುವುದು.

ವೀರಶೈವೋದ್ಧಾರಕ ವೃಷಭೇಂದ್ರನ
ಚಾರುವಿಳಾಸವೆಂಬೀ ಕಥೆಯು
ಸಾರವ ತಿಳಿದರೆ ಸಂಪದಕರವು ನಿಃ
ಸಾರವರಿಯೆ ಶೂನ್ಯದ ಪರಿಯು

ಈ ದೃಷ್ಟಿಯಿರುವುದರಿಂದಲೇ ಕವಿಗೆ ವಾಸ್ತವವೆಂಬ ವಿವರಕ್ಕಾಗಲಿ ಪವಾಡವೆಂಬ ಪರಾಸಕ್ತಿಗಾಗಲಿ ನಡುವೆ ಅಷ್ಟೇನೂ ಅಂತರವಿರದು. ವೃಷಭೇಂದ್ರ ವಿಳಾಸದ ಸಾರವು, ವ್ಯವಹಾರ ಶುದ್ಧಿ : ಜೀವಕ್ಕೊಂದು ಆಲಯವನ್ನು ಒದಗಿಸುವ ಹವಣಿಕೆ. ಅದರ ನಿಃಸಾರವೆಂದು ಬಯಲು. ಪರಮಾರ್ಥ, ಸಾಂಗತ್ಯ ಈ ಯಕ್ಷಗಾನ ನಾಟಕದಲ್ಲಿ ಅಲ್ಲಲ್ಲಿ ಹೊರಸೂಸುತ್ತದೆ.

ಸ್ಕಂದ ಪುರಾಣವನ್ನು ಸೂತನು ಶೌನಕರಿಗೆ ಬಸವ ಮಹಿಮೆಯನ್ನು ಅತಿಕಾಯನೆಂಬ ಗಣಪನು ಪ್ರಮಥರ ಸಂದಣಿಗೆ ಹೇಳುತ್ತಲಿದ್ದನು.

## ವೃಷಭೇಂದ್ರ ವಿಳಾಸದ "ಜನಪದ ಶಿಷ್ಟ ಪರಂಪರೆಯ ಚಿತ್ರಕಲೆ

| ಅ.ನಂ. | ಕಲಾಕೃತಿಯ ಹೆಸರು | ಪುಟ ಸಂಖ್ಯೆ | ಕಲಾಕೃತಿಗಳ ಸಂಖ್ಯೆ |
|---|---|---|---|
| ೦೧ | ನೃಪನು ವೃಷಭನ ಇಷ್ಟಲಿಂಗವನ್ನು ತೆಗೆದುಕೊಳ್ಳುವುದು | ೧ನೇ ಸಂಧಿ/೨೦ | ೩೮ |
| ೦೨ | ನೃಪನು ಇಷ್ಟಲಿಂಗದೊಂದಿಗೆ ಭೂಮಿಯಲ್ಲಿ ಐಕ್ಯನಾಗುವುದು | ೨೦ | ೩೯ |
| ೦೩ | ವೃಷಭನ ಕೊರಳಲ್ಲಿ ಲಿಂಗವಿಲ್ಲದ್ದನ್ನು ನೋಡಿ ಬಾಗಿಲಲ್ಲಿ ತಡೆದ ಕಾಪಿಗ | ೨೧ | ೪೧ |
| ೦೪ | ಶಿವನ ಓಲಗದಲ್ಲಿ ನಂದಿ ಇಲ್ಲದಿರುವ ಕುರಿತು ವಿಚಾರಣೆ | ೨೩ | ೫೬ |
| ೦೫ | ಕಾಪಿಗನಿಗೆ ಭವಿಯಾಗಿ ಭೂಮಿಯಲ್ಲಿ ಬಿಜ್ಜಳನಾಗೆಂದ ಶಿವ | ೨೫ | ೫೯ |
| ೦೬ | ನಂದಿಗೆ ದ್ವಿತೀಯ ಶಂಭುವಾಗಿ ಕಲ್ಯಾಣದಲ್ಲಿರೆಂದು ತಿಳಿಸಿದ ಶಿವ | ೩೦ | ೬೮ |
| ೦೭ | ನಾರದನಿಗೆ ಕಲ್ಯಾಣದಲ್ಲಿ ಕೊಂಡೆಯ ಮಂಚಣ್ಣನಾಗಿರಲು ತಿಳಿಸಿದ ಶಿವ | ೩೨ | ೭೬ |
| ೦೮ | ವೀರಭದ್ರನಿಗೆ ಮಡಿವಾಳ ಮಾಚಯ್ಯನಾಗಿರುವಂತೆ ತಿಳಿಸಿದ ಶಿವ | ೩೨ | ೭೭ |
| ೦೯ | ಗಂಗೆಗೆ ಬಸವೇಶನ ಅರಸಿಯಾಗೆಂದ ಶಿವ | ೩೩ | ೮೦ |
| ೧೦ | ಮಾದಲಾಂಬಿಕೆ ಪುತ್ರರಿಲ್ಲೆಂದು ನಂದೀವ್ರತ ಮಾಡುತ್ತಿರುವುದು | ೩೯ | ೮೯ |
| ೧೧ | ಮಾದಲಾಂಬಿಕೆಯ ಕನಸಿನಂತೆ ಗರ್ಭವತಿಯಾದ ಸನ್ನಿವೇಶ | ೩೯ | ೯೦ |
| ೧೨ | ವಿಶ್ವಗುರು ಸಂಗಮೇಶನು ಇಷ್ಟಲಿಂಗವನ್ನು ಕಟ್ಟಿ ಆಶೀರ್ವದಿಸುವುದು | ೪೦ | ೯೧ |
| ೧೩ | ಕೂಡಲಸಂಗಮನ ಆಜ್ಞೆಯಂತೆ ಕಲ್ಯಾಣಕ್ಕೆ ಹೊರಟ ಬಸವೇಶ | ೬೯ | ೧೬೨ |
| ೧೪ | ಬಸವಣ್ಣ ಬ್ರಾಹ್ಮಿಲಿಪಿ ಓದಿ ಹೇಳುತ್ತಿರುವುದು | ೭೬ | ೧೭೬ |
| ೧೫ | ಭೂಮಿಯಲ್ಲಿ ರತ್ನಸಿಂಹಾಸನ ಮತ್ತು ಏಳು ಕೊಪ್ಪರಿಗೆಗಳು | ೭೭ | ೧೭೮ |
| ೧೬ | ಬಸವೇಶನೇನಿದಾಶ್ಚರ್ಯ ಬಸುರಾದಳಂತೆ ನಿಮ್ಮಕ್ಕ ನಾಗಮ್ಮ: | ೧೨೯ | ೨೬೫ |
| | ಅದಕ್ಕುತ್ತರಿಸಿತು ಗರ್ಭಶಿಶು | ೧೩೧ | ೨೬೯ |
| ೧೭ | ಚೆನ್ನಬಸವಣ್ಣನ ಜನನ | ೧೩೪ | ೨೭೧ |
| ೧೮ | ಸಂಗಮನಾಥನೊಂದಿಗೆ ಚೆನ್ನಬಸವಣ್ಣ | ೧೩೫ | ೨೭೩ |
| ೧೯ | ಇಷ್ಟಲಿಂಗವಿಲ್ಲದ್ದನ್ನು ಪ್ರಶ್ನಿಸಿದಾಗ ಮೈಯಲ್ಲೆಲ್ಲಾ ಲಿಂಗವಿರುವುದನ್ನು ತೋರಿಸಿದ ಸಿದ್ಧರಾಮ | ೧೬೪ | ೩೧೪ |
| ೨೦ | ಚೆನ್ನಬಸವಣ್ಣ ಸಿದ್ಧರಾಮನಿಗೆ ಲಿಂಗದೀಕ್ಷೆ ನೀಡುತ್ತಿರುವುದು | ೧೬೭ | ೩೧೬ |
| | | ೨ನೇ ಸಂಧಿ | |
| ೨೧ | ಬಸವಣ್ಣನು ಕೂಡಲಸಂಗಮದಲ್ಲಿ ಲಿಂಗೈಕ್ಯನಾಗುವುದು | ೨೯೩ | ೨೪೯ |
| ೨೨ | ವೀರಶೈವ ಕಾಯ್ದು ದೇವಲೋಕಕ್ಕೆ ಬಂದ ಬಸವಣ್ಣ | ೨೯೪ | ೨೫೦ |
| | | ೩ನೇ ಸಂಧಿ | |
| ೨೩ | ಶರಣರ ರಕ್ಷಣೆಗೆ ನಿಂತ ಮಡಿವಾಳ ಮಾಚಯ್ಯ ಹಾಗು ಚೆನ್ನಬಸವಣ್ಣನಿಗೆ ತನ್ನ ಮೊದಲಿನ ರೂಪ ತೋರಿಸಿದ ಮಾಚಯ್ಯ | ೩೭೪ | ೨೪೭ |
| ೨೪ | ಚೆನ್ನಬಸವಣ್ಣ, ಮೋಳಿಗೆಯ ಮಾರಯ್ಯ, ಸೊಡ್ಡಳ ಬಾಚರಸರು ಕೈಲಾಸಕ್ಕೆ ಹೊರಟಿರುವುದು | ೩೯೫ | ೨೯೯ |
| | | ೪ನೇ ಸಂಧಿ | |
| ೨೫ | ಕಲ್ಯಾಣದ ಪ್ರಮುಖ ಶರಣರೆಲ್ಲ ಶಿವನ ಒಡ್ಡೋಲಗದಲ್ಲಿರುವುದು | ೪೩೭ | ೭೬ ರಿಂದ ೮೩ |

**೧. ನೃಪನು ವೃಷಭನ ಇಷ್ಟಲಿಂಗವನ್ನು ತೆಗೆದುಕೊಳ್ಳುವುದು :**

ಒಂದು ದಿನ ನಂದೀಶ ಕೈಲಾಸದಿಂದ ಭೂಲೋಕಕ್ಕ ಮೇರುವಿನಿಂದಿಳಿದು ದಕ್ಷಿಣಮುಖವಾಗಿ ಬರುತ್ತಿರಲು ಸುಂದರವಾದ ಉದ್ಯಾನವನ್ನು ನೋಡಿ ಅಲ್ಲಿಯೇ ಕುಳಿತುಕೊಂಡಿರಲು ಅಲ್ಲಿಗೆ ಅನಿಮಿಷನೆಂಬ ನೃಪನು ಕಳೆದುಹೋದ ತನ್ನ ಇಷ್ಟಲಿಂಗವನ್ನು ಹುಡುಕುತ್ತಾ ಬಂದನು. ವೃಷಭನು ಅವನಿಂದ ವಿಷಯ ತಿಳಿದು ತನ್ನ ಇಷ್ಟಲಿಂಗವನ್ನು ನೃಪನಿಗೆ ತೋರಿಸುತ್ತಿರುವುದು, ಆ ಲಿಂಗವನ್ನು ನೃಪನು ತೆಗೆದುಕೊಳ್ಳುತ್ತಿರುವ ದೃಶ್ಯ.[೮೧]

ಈ ಕಲಾಕೃತಿಯಲ್ಲಿ ಸುಂದರವಾದ ಉದ್ಯಾನವನದಲ್ಲಿ ತನ್ನ ನಾಲ್ಕೂ ಕಾಲುಗಳನ್ನು ಮಡಚಿಕೊಂಡು ನೃಪನನ್ನು ನೋಡುತ್ತ, ತನ್ನ ನಾಲಿಗೆಯನ್ನು ಹೊರತೆಗೆದು ತನ್ನ ಇಷ್ಟಲಿಂಗವನ್ನು ತೋರಿಸುತ್ತಿರುವುದು ಹಾಗೂ ಎದುರುಗಡೆಯಲ್ಲಿರುವ ನೃಪನು ಆ ಇಷ್ಟಲಿಂಗವನ್ನು ನೋಡಿ ತೆಗೆದುಕೊಳ್ಳುತ್ತಿರುವ ದೃಶ್ಯವಿದೆ. ಇಲ್ಲಿ ನಂದಿಯು ಕೆಂಪುವರ್ಣದ ಜೂಲವನ್ನು ಮೈಮೇಲೆ ಹಾಕಿಕೊಂಡಿದ್ದು ಹಸಿರುವರ್ಣದ ಅಂಚನ್ನು ಹೊಂದಲಾಗಿದೆ. ಹಳದಿ ವರ್ಣದ ಗೆಜ್ಜೆಯ ಪಟ್ಟಿಗಳಿವೆ. ಹಣೆಯ ಮೇಲೊಂದು ಶಿವಧ್ವಜವನ್ನು ಹಾಕಿಕೊಂಡಿದ್ದರೆ ಎದುರಿನಲ್ಲಿ ನೃಪನು ಕೆಂಪು ಧೋತರ, ಹಸಿರು ಶಲ್ಯವನ್ನು ಹೆಗಲ ಮೇಲೆ ಹಾಕಿಕೊಂಡಿರುವನು. ಇದಕ್ಕೆ ಹಳದಿ ಮತ್ತು ನೀಲಿ ಅಂಚನ್ನು ಮಾಡಲಾಗಿದೆ. ಕೊರಳಲ್ಲಿ ಆಭರಣ ಹಾಗೂ ಲಿಂಗದಕಾಯಿ ಇದೆ. ಮೈಗೆಲ್ಲ ಮೂರುಬೆರಳು ವಿಭೂತಿಯನ್ನು ಹಚ್ಚಿಕೊಂಡಿರುವನು. ಇವನು ಕಿರೀಟವನ್ನು ಹಾಕಿಕೊಂಡಿದ್ದು, ರಾಜನಂತೆ ಶೋಭಿಸುತ್ತಿರುವನು. ಇದರ ಅಕ್ಕ ಪಕ್ಕದಲ್ಲಿ ಮರಗಳು, ಎರಡು ಬದಿಗಳಲ್ಲಿರುವ ನವಿಲುಗಳು, ಹಾರಾಡುತ್ತಿರುವ ಪಕ್ಷಿ. ಹೀಗೆ ಸುಂದರವಾಗಿ ಈ ಚಿತ್ರವು ಮೂಡಿಬಂದಿದೆ.

**೨. ನೃಪನು ಇಷ್ಟಲಿಂಗದೊಂದಿಗೆ ಭೂಮಿಯಲ್ಲಿ ಐಕ್ಯನಾಗುವುದು :**

ವೃಷಭನ ಇಷ್ಟಲಿಂಗವನ್ನು ನೃಪನು ತನ್ನ ಕೈಯೊಳಗೆ ತಗೆದುಕೊಂಡು ನೋಡುತ್ತಿರುವಂತೆ ನಟಿಸಿ ನಿಂತಿದ್ದು ಭೂಮಿಯಲ್ಲಿಯೇ ಅಡಗಿಬಿಡುವನು.[೮೨]

ಈ ಕಲಾಕೃತಿಯಲ್ಲಿ ಸುಂದರವಾದ ಉದ್ಯಾನವನದಲ್ಲಿರುವ ವೃಷಭನ ಎದುರಿನಲ್ಲಿರುವ ನೃಪನು ವೃಷಭನ ಇಷ್ಟಲಿಂಗವನ್ನು ಕೈಯಲ್ಲಿ ಗಟ್ಟಿಯಾಗಿ ಹಿಡಿದುಕೊಂಡಿರುವನು. ಭೂಮಿಯು ಬಾಯ್ದೆರೆದಂತೆ ತೋರಿಸಿದ್ದು ನೃಪರಾಜನ ಅರ್ಧ ದೇಹಭಾಗವು ಭುವಿಯೊಳಗೆ ಹೋಗಿರುವುದನ್ನು ತೋರಿಸಲಾಗಿದೆ. ಭೂಮಿಯನ್ನು ಕಂದುಗೆಂಪು ವರ್ಣದಲ್ಲಿ ತೋರಿಸಲಾಗಿದೆ. ಎರಡೂ ಬದಿಗೆ ಮರಗಳ ಸಾಲಿದ್ದು, ಹಿಂದುಗಡೆಯಲ್ಲಿ ಹಸಿರುವರ್ಣದ ಭೂಮಿಯನ್ನು, ನೀಲಿವರ್ಣದ ಆಕಾಶವನ್ನು ತೋರಿಸಲಾಗಿದ್ದು, ಆಕಾಶದಲ್ಲಿ ಹಕ್ಕಿಗಳು ಹಾರಾಡುವಂತೆ ಚಿತ್ರಿಸಲಾಗಿದೆ.

---

೮೧. ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು:ಸಂ.: ವೃಷಭೇಂದ್ರ ವಿಳಾಸ, ೧ನೇ ಸಂಧಿ, ಚಿತ್ರ ೩೮, ಪು. ೨೦
೮೨. ಅದೇ : ೧ನೇ ಸಂಧಿ, ಚಿತ್ರ ೩೯,ಪು..೨೦

**೩. ವೃಷಭನ ಕೊರಳಲ್ಲಿ ಲಿಂಗವಿಲ್ಲದ್ದನ್ನು ಕಂಡು ಬಾಗಿಲಲ್ಲಿ ತಡೆದ ಕಾಪಿಗ :**

ನೃಪತಿಯು ಮೋಸಗೈದನೆಂದು ಮನನೊಂದು ಬೇಸರಮಾಡಿಕೊಂಡು ಮರಳಿ ಕೈಲಾಸಕ್ಕೆ ಶಿವನ ಬಳಿಗೆ ಹೋಗಲು ಕೈಲಾಸದ ಬಾಗಿಲಲ್ಲಿರುವ ಕಾಪಿಗನು ತಡೆದು ಭವಿಗಳಾಗಿ ಶಿವನ ಬಳಿ ಹೋಗಲಾಗದು. ನೆಪಹೇಳಿ ಹೋಗುವುದನ್ನು ಸಹಿಸಲಾಗದು, ಗುರು ಕೊಟ್ಟ ಇಷ್ಟಲಿಂಗವನ್ನು ಧರಿಸದವನು ಪರಿಶುದ್ಧನಾಗುವುದಿಲ್ಲವೆಂದು ವೃಷಭನನ್ನು ಬಾಗಿಲಲ್ಲಿಯೇ ತಡೆದನು. ದ್ವಾರಪಾಲಕ ನಾನು ಪಾರಮೇಶನಯ್ಯ, ಎನಗೆ ಭವನೆ ಪಾಲನೆಂಬುದು ತಿಳಿದು ತಡೆಯ ಕಾರಣವೇನೆಂದನು. ಜಗದಿ ಧೀರ ನೀನು, ನಿನಗೆ ದಾರಿಕೊಡುವುದು ಅಂಗವೇ ಲಿಂಗವೆಂಬ ಆಗಮೋಕ್ತವಾ ನೀಡಿ ಮಂಗಳಾಕಾರ ಶಂಭು ಮಂಗಳಾತ್ಮಲಿಂಗ ಸರ್ವವೆಂದು ನೋಡುವುದು ತಪ್ಪು ನಮ್ಮೊಳಲ್ಲವೆಂದನು.[೮೩]

ಈ ಕಲಾಕೃತಿಯಲ್ಲಿ ಕೈಲಾಸದ ದ್ವಾರದ ಮುಂದುಗಡೆ ಇರುವ ದ್ವಾರಪಾಲಕನು ಮೈತುಂಬಾ ಮೂರು ಬೆರಳಿನ ವಿಭೂತಿಯನ್ನು ಧರಿಸಿಕೊಂಡಿದ್ದು, ಕೊರಳಲ್ಲಿ ಲಿಂಗವನ್ನು ಕಟ್ಟಿಕೊಂಡಿದ್ದು, ರುದ್ರಾಕ್ಷಿ ಮಾಲೆಯನ್ನು ಹಾಕೊಂಡಿರುವನು. ನಾಲ್ಕು ಕೈಗಳನ್ನು ಹೊಂದಿರುವನು, ಹಳದಿವರ್ಣದ ಆಭರಣಗಳು, ಕಿರೀಟಗಳಿದ್ದರೆ ಧೋತರವೂ ಹಳದಿವರ್ಣದಲ್ಲಿದೆ, ಸೊಂಟಕ್ಕೆ ಕೆಂಪು ವರ್ಣದ ಶಲ್ಯವಿದ್ದು, ಹಳದಿವರ್ಣದ ಅಂಚನ್ನು ಮಾಡಲಾಗಿದೆ.

ಬಾಗಿಲದತ್ತ ಬರುತ್ತಿರುವ ನಂದಿಯನ್ನು ತಡೆದಿದ್ದು, ನಂದಿಯು ಅವನನ್ನೇ ನೋಡುತ್ತ ನಿಂತಿದೆ. ನಂದಿಯು ಕೆಂಪುವರ್ಣದ ಜೂಲು, ಹಸಿರುವರ್ಣದ ಪಟ್ಟಿಯನ್ನು ಹೊಂದಿ, ಹಳದಿವರ್ಣದ ಗೆಜ್ಜೆಯ ಸರಗಳನ್ನು ಕೊರಳಿಗೆ ಕಟ್ಟಿಕೊಂಡಿದ್ದು, ಹಣೆಗೆ ಹಣೆಗಟ್ಟು ಹಳದಿವರ್ಣದಲ್ಲಿದ್ದರೆ ಕೆಂಪು (ರಿಬ್ಬಿನ್) ತುರಾಯಿಗಳನ್ನು ಕೋಡುಗಳಿಗೆ ಕಟ್ಟಲಾಗಿದೆ. ಶುದ್ಧ ಬಿಳಿಯ ವರ್ಣದ ವೃಷಭನಾಗಿರುವನು. ಹಸಿರಾದ ನೆಲವಿದ್ದು, ಎರಡೂ ಬದಿಗೆ ಗಿಡಗಳಿವೆ. ಹೀಗೆ ಈ ಕಲಾಕೃತಿಯು ಸುಂದರವಾಗಿ ಮೂಡಿಬಂದಿದೆ.

**೪. ಶಿವನ ಓಲಗದಲ್ಲಿ ನಂದಿ ಇಲ್ಲದಿರುವ ಕುರಿತು ವಿಚಾರಣೆ :**

ರತ್ನಸಿಂಹಾಸನದಲ್ಲಿ ರುದ್ರಾಕ್ಷಿ ನಾಗಾಭರಣವನ್ನು ಧರಿಸಿ ಗಜಚರ್ಮಕ ಹುಲಿಚರ್ಮವನ್ನಿಟ್ಟು ಕುಳಿತಿದ್ದು, ಎಡದೊಡೆಯ ಮೇಲೆ ಪಾರ್ವತಿಯನ್ನು ಕೂಡ್ರಿಸಿಕೊಂಡಿರುವನು. ತಲೆಯಲ್ಲಿ ಗಂಗೆಯನ್ನು ಕೂಡ್ರಿಸಿಕೊಂಡಿದ್ದು, ನಾರದ, ವೀರಭದ್ರ, ಭೃಂಗಿ, ಭೈರವ, ಗಣೇಶ, ಗಣವೃಂದವಲ್ಲದೆ ಯಕ್ಷ, ಕಿನ್ನರ, ಕಿಂಪುರುಷ, ಗರುಡ, ಗಂಧರ್ವ, ವಿದ್ಯಾಧರರು, ಸುರಸ್ತ್ರೀಯರು ಈ ಶಿವನ ಓಲಗದಲ್ಲಿರುವರು. ಶಿವನು ಎಲ್ಲರಿಗೂ ಅಭಯಹಸ್ತವನ್ನು ನೀಡುತ್ತ ಏನಿದು, ನಮ್ಮ ಸಭೆಯೊಳಗೆ ನಂದಿಯು ಕಾಣನೆಂದು ತಿಳಿಯಲು ದ್ವಾರಪಾಲಕ ದ್ವಾರದಲ್ಲಿ ತಡೆದಿರುವುದನ್ನು ಕೇಳಿ ಏಕೆ? ಎಂದು ವಿಚಾರಿಸುತ್ತಿರುವುದು.[೮೪] ಎಲ್ಲ ದೇವಗಣರಿರುವ ದೃಶ್ಯ ಸುಂದರವಾಗಿ ಮೂಡಿಬಂದಿದೆ.

---

೮೩. ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು:ಸಂ.: ವೃಷಭೇಂದ್ರ ವಿಳಾಸ, ೧ನೇ ಸಂಧಿ,ಚಿತ್ರ ೪೧, ಪು. ೨೧
೮೪. ಅದೇ: ೧ನೇ ಸಂಧಿ, ಚಿತ್ರ ೫೬, ಪು. ೨೩

ಈ ಕಲಾಕೃತಿಯಲ್ಲಿ ದೇವಲೋಕದ ದೇವಾನುದೇವತೆಗಳೆಲ್ಲ ಶಿವನ ಓಲಗದಲ್ಲಿ ಸೇರಿಕೊಂಡಿದ್ದು, ಪ್ರತಿಯೊಬ್ಬರ ವೇಷಭೂಷಣಗಳು, ಹಾವಭಾವಗಳು ಈ ಸಂಯೋಜನೆಯಲ್ಲಿ ರೂಪುಗೊಂಡಿದ್ದು ವ್ಯಕ್ತಿಗಳ ಜೋಡಣೆ, ಆಯಾ ದೇವಗಣರಿಗೆ ಸಂಕೇತ ಪ್ರಧಾನವಾಗಿ ಗುರುತಿಸುವುದು, ವರ್ಣಗಳ ಹೊಂದಾಣಿಕೆ ಮತ್ತು ವರ್ಣಗಳ ಸಾಮರಸ್ಯಗಳು ಸುಂದರವಾಗಿ ಮೇಳವಿಸಿವೆ. ಕಲಾವಿದನ ಜಾಣ್ಮೆಯನ್ನು ಈ ಹಿನ್ನೆಲೆಯಲ್ಲಿ ಅರಿಯಬಹುದಾಗಿದೆ.

**೫. ಕಾಪಿಗನಿಗೆ ಭವಿಯಾಗಿ ಭುವಿಯಲ್ಲಿ ಬಿಜ್ಜಳನಾಗೆಂದ ಶಿವ :**

ದ್ವಾರಪಾಲಕ, ನೀನು ಈ ನಂದೀಶನ ತಡೆದ ಕಾರಣವೇನು ಎಂದು ಕೇಳಲು ಕಾಪಿಗ ಭವಿಯಾಗಿ ಬಂದ ನಂದಿಯನ್ನು ನಿನಗೆ ಬಿಡುವುದಿಲ್ಲವೆಂದು ಹೇಳಿದೆನು ಎಂದು ತಿಳಿಸಿದ. ಆಗ ಕೋಪಿಸಿಕೊಂಡ ಶಿವನನ್ನು ಕಂಡು ನನ್ನ ತಪ್ಪೇನು ಎಂದು ಕೇಳಲು, ಶಿವನು ಕೇಳು, ಈತನ ಅಂಗ, ಅಂಗಮಯ ಪಾದವೇ ನಾಲ್ಕು ವೇದಗಳು, ಬೋಧದ ಸ್ವರೂಪವೇ ಧರ್ಮರೂಪವು, ಅದನ್ನರಿಯದೇ ನುಡಿದುದು ತಪ್ಪು ಎಂದು ವೃಷಭನಿಗೆ ಭವಿಯೆಂದ ಕಾರಣ ಭವಿಯಾಗಿ ಉದ್ಭವಿಸು, ಭೂಮಿಯ ಮೇಲೆ ಚಾಳಾಂಕನೃಪನ ಸುತನಾಗಿ ಕಲ್ಯಾಣದ ಅಧಿಪತಿಯಾಗಿ ಬಿಜ್ಜಳನಾಗು ಎಂದು ಹೇಳಿದ. ಈ ಶಾಪವೆಂದು ಪರಿಹಾರವಾಗುವುದೆನ್ನವುದರೊಂದಿಗೆ ನರರೊಳಗೆ ನಾನೆಂತು ಇರುವುದು. ತಪ್ಪನ್ನು ಮನ್ನಿಸು ಎಂದಾಗ ವೀರರೂಪದ ಮಡಿವಾಳ ಮಾಚಯ್ಯನ, ಧೀರಬೊಮ್ಮಯ್ಯನ, ಜಗದೇವಚಾರು ಮಲ್ಲೆಯರ ದೆಸೆಯಿಂದಿಲ್ಲಿಗೆ ಸೇರು ಹೋಗು ಎನ್ನುವನು.[೭೫]

ಈ ಕಲಾಕೃತಿಯಲ್ಲಿ ವೃಷಭನನ್ನು ಕಂಡು ಶಿವನು ಕಾಪಿಗನಿಗೆ ವೃಷಭನನ್ನು ಭವಿ ಎಂದು ಹೇಳಿ ತಡೆದಿರುವುದು ತಪ್ಪೆಂದು ತಿಳಿಹೇಳಿ ಅವನಿಗೆ ಶಾಪಕೊಡುವ ಮತ್ತು ಪರಿಹಾರದ ನೆಲೆಗಳನ್ನು ಕಂಡುಕೊಂಡ ಕಾಪಿಗನ ಹಾವಭಾವಗಳು ಇವರಿಬ್ಬರನ್ನೂ ನೋಡುತ್ತ ನಿಂತ ವೃಷಭ ಎಲ್ಲವೂ ಸುಂದರವಾಗಿ ಮೂಡಿಬಂದಿವೆ. ಶಿವ ಮತ್ತು ಕಾಪಿಗನ ವೇಷಭೂಷಣಗಳು ಒಂದೇ ಆಗಿದ್ದು, ಹೊತ್ತುಕೊಂಡಿರುವ ಶಲ್ಯಗಳು ಕೆಂಪಾಗಿದ್ದು, ಅದರ ಅಂಚುಗಳು ಶಿವನ ಶಲ್ಯೆಯಲ್ಲಿ ನೀಲಿ ಕಾಪಿಗನ ಶಲ್ಯೆಗೆ ಕೆಂಪು ಮಿಶ್ರಿತ ಹಳದಿವರ್ಣವನ್ನು ಹಾಕಿದ್ದು ವಿಶೇಷವಾಗಿ ಮೂಡಿಬಂದಿದೆ.

**೬. ನಂದಿಗೆ ದ್ವಿತೀಯ ಶಂಭುವಾಗಿ ಕಲ್ಯಾಣದಲ್ಲಿರೆಂದು ತಿಳಿಸಿದ ಶಿವ :**

ನಾರದನು ಭೂಲೋಕದ ಸುದ್ದಿಯನ್ನು ಹೇಳುತ್ತ ಪುಂಡರು, ಪ್ರಚಂಡರು, ಭಂಡರು, ಕಂಡವರನ್ನು ದೂಷಿಸುವ ಜನರು ಭೂಮಂಡಲದೊಳಗೆ ಇರುವರು. ಸಾಧುಜೀವಿಗಳಿಗೆ ದಯವಿಡಲು ನಿನ್ನ ಭಕ್ತಿಯ ನಿನ್ನ ಪೂಜೆಯ ಮಾಡುವವರನ್ನು ಕಾಣೆ, ಲೋಕವೆಲ್ಲ ಭವಿಮಯವಾಗಿದೆ ಎಂದು ನಾರದನು ಶಿವನಿಗೆ ಹೇಳಿದನು. ಆಗ ಶಿವನು ಇದಕ್ಕೆ ಪರಿಹಾರವೆಂಬಂತೆ ನಂದೀಶನನ್ನು ಕರೆದು ಭಕ್ತಜನರ ಪೋಷಣೆಗೆ ದ್ವಿತೀಯ ಶಂಭುವಾಗಿ

---

೭೫. ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು :ಸಂ.: ವೃಷಭೇಂದ್ರ ವಿಳಾಸ, ೧ನೇ ಸಂಧಿ, ಚಿತ್ರ ೫೯.ಪು. ೨೫

ಕಲ್ಯಾಣನಗರದೊಳು ಕಲ್ಯಾಣವಾಗಿ ಉದಯಿಸು. ಧರೆಯಲ್ಲಿಯ ದೂಷಕ ಜನರನ್ನು ಸರಿಪಡಿಸಿ ಶರಣರ ಪರಿವಾರವನು ಬೆರೆತು, ಹರುಷಗೊಂಡು ಚರಮೂರ್ತಿಗಳೊಂದಿಗೆ ಬೆರೆತು, ದೊರೆ ಬಿಜ್ಜಳನ ಮಂತ್ರೀಶ್ವರನಾಗಿ ಬಾಳೆಂದು ಆಶೀರ್ವದಿಸಿದನು.[೮೬]

ಈ ಕಲಾಕೃತಿಯಲ್ಲಿ ಶಿವಪಾರ್ವತಿಯರು ಸಿಂಹಾಸನರೂಢರಾಗಿದ್ದು, ಶಿವನು ಬಲಗಾಲನ್ನು ಕೆಳಗೆ ಇಳಿಬಿಟ್ಟಿದ್ದು, ಎಡಗಾಲನ್ನು ಮಡಚಿಟ್ಟುಕೊಂಡಿದ್ದು, ಎಡದೊಡೆಯ ಮೇಲೆ ಪಾರ್ವತಿಯನ್ನು ಕೂಡ್ರಿಸಿಕೊಂಡಿದ್ದು, ಹಳದಿ ವರ್ಣದ ಧೋತರ, ಹುಲಿಯ ಚರ್ಮವನ್ನು ಸುತ್ತಿಕೊಂಡಿದ್ದು, ಕೆಂಪು ಶಲ್ಯವನ್ನು ಹಾಕಿಕೊಂಡಿರುವನು. ಇದರಲ್ಲಿ ಹಳದಿ ಪಟ್ಟಿಯೊಂದಿಗೆ ನೀಲಿ ಅಂಚು ಇದೆ. ಪಾರ್ವತಿಯು ಕೆಂಪುವರ್ಣದ ಸೀರೆ, ಹಳದಿ ರವಿಕೆಯನ್ನು ತೊಟ್ಟುಕೊಂಡಿರುವಳು. ಹಿಂದುಗಡೆ ನೀಲಿವರ್ಣದ ದಿಂಬು ಹಳದಿ ಅಂಚನ್ನು ಹೊಂದಿರುವುದು ಕಂಡುಬರುತ್ತದೆ. ಎದುರುಗಡೆಯಲ್ಲಿ ವೃಷಭ (ನಂದಿ) ಶುಭ್ರ ಬಿಳಿಯ ವರ್ಣ ಹೊಂದಿದ್ದು, ಕೆಂಪುಜೂಲ, ಹಳದಿ ಮತ್ತು ಹಸಿರು ವರ್ಣದ ಪಟ್ಟಿಗಳಿವೆ. ಹಳದಿವರ್ಣದ ಗೆಜ್ಜೆಳನ್ನು ಕೊರಳಲ್ಲಿ ಕಟ್ಟಿಕೊಂಡಿದ್ದು, ಕೋಡುಗಳಿಗೆ ತುರಾಯಿ ಕಟ್ಟಿರುವಂತೆ ಚಿತ್ರಿಸಲಾಗಿದೆ.

**೭. ನಾರದನಿಗೆ ಕಲ್ಯಾಣದಲ್ಲಿ ಕೊಂಡೆಯ ಮಂಚಣ್ಣನಾಗಿರಲು ತಿಳಿಸಿದ ಶಿವ :**

ಕೊಂಡೆಯರ ಅರಸನಾದ ನಾರದ ಮುನಿತಿಲಕ ನೀನು ಕಲ್ಯಾಣದಲ್ಲಿ ಕೊಂಡೆಯ ಮಂಚಣ್ಣನಾಗಿ ಜನಿಸು. ಬಿಜ್ಜಳನಿಗೆ ವರದಿ ಒಪ್ಪಿಸುತ್ತ, ಶರಣರ ಕುರಿತು ಬಿಜ್ಜಳನ ರಾಜ್ಯದಲ್ಲಿ ನಡೆಯುವ ಸಮಗ್ರ ವರದಿಯನ್ನು ಒಪ್ಪಿಸುತ್ತ, ಕಂಡಂತಾಡುತ್ತ ನಂದೀಶನ ಕೀರ್ತಿಯನ್ನು ಹೆಚ್ಚಿಸಿ ಭೂಲೋಕದಲ್ಲಿದ್ದು ಬಾರಯ್ಯ ಎಂದು ಶಿವನು ಹೇಳಿ ಕಳುಹಿಸಿದ.[೮೭]

ಈ ಕಲಾಕೃತಿಯಲ್ಲಿ ಶಿವ ಪಾರ್ವತಿಯರು ಎಂದಿನಂತೆ ಪೀಠವೊಂದರ ಮೇಲೆ ಕುಳಿತಿದ್ದು, ಎದುರುಗಡೆಯಲ್ಲಿ ನಾರದನು ಕೈಜೋಡಿಸಿಕೊಂಡು ನಿಂತಿರುವನು. ಹುಲಿಯ ಚರ್ಮವೊಂದನ್ನು ಸೊಂಟಕ್ಕೆ ಸುತ್ತಿಕೊಂಡು ಬಲಗಡೆಯ ಭುಜ ಮತ್ತು ಕೈಗಳಲ್ಲಿ ತಂಬೂರಿಯನ್ನು ಹಿಡಿದುಕೊಂಡಿದ್ದು ತಲೆಯ ಮೇಲೆ ಸುರುಳಿಯಾಕಾರದಲ್ಲಿ ಕೂದಲುಗಳನ್ನೇ ಕಿರೀಟದ ರೂಪದಲ್ಲಿ ಕಟ್ಟಿಕೊಂಡಿದ್ದು, ಅದಕ್ಕೆ ಮೇಲ್ಗಡೆ ರುದ್ರಾಕ್ಷಿಯ ಸರವನ್ನು ಹಾಕಿಕೊಳ್ಳಲಾಗಿದೆ. ಮುಖಕ್ಕೆ ಕೋರೆಮೀಸೆ ಹಾಗೂ ದಾಡಿಗಳು ನಾರದನ ಅಂದವನ್ನು ಇಮ್ಮಡಿಗೊಳಿಸಿವೆ. ನಾರದನ ಹಿಂದೆ ಬೆನ್ನಿಗೆ ತಾಗಿಕೊಂಡು ಕೆಂಪು ವರ್ಣದ ಪಟ್ಟಿ ಪಟ್ಟಿಯನ್ನು ಮೊಳಕಾಲವರೆಗೂ ಇಳಿಸಲಾಗಿದೆ. ನಾರದನ ಹಾವಭಾವಗಳನ್ನು ಗಮನಿಸಿದರೆ ವಿನಮ್ರತೆ ಅವನ ಮುಖದಲ್ಲಿ ಕಂಡುಬರುತ್ತದೆ.

೮೬. ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು :ಸಂ.: ವೃಷಭೇಂದ್ರ ವಿಳಾಸ, ೧ನೇ ಸಂಧಿ, ಚಿತ್ರ ೬೮, ಪು. ೩೦
೮೭. ಅದೇ:, ೧ನೇ ಸಂಧಿ, ಚಿತ್ರ ೭೬, ಪು. ೩೨

**೮. ವೀರಭದ್ರನಿಗೆ ಮಡಿವಾಳ ಮಾಚಯ್ಯನಾಗಿರುವಂತೆ ತಿಳಿಸಿದ ಶಿವ :**

ಕಲ್ಯಾಣದಲ್ಲಿ ನಂದೀಶನು ಮಾಡುವ ಮಹತ್ಕಾರ್ಯಗಳಿಗೆ ಸಹಕರಿಸುತ್ತ ಪ್ರಮಥಾಗ್ರಗಣ್ಯರು ಅಲ್ಲಿ ನೆಲೆಸುವಂತೆ, ಬಾಳುವಂತೆ, ಒಳ್ಳೆಯ ದಾರಿಯಲ್ಲಿ ನಡೆಯುವಂತೆ ಆಗಲು ನೀನು ಸಹಕರಿಸು ಮತ್ತು ಈ ಹಿಂದಿನಂತೆ ಪ್ರಮಥರಿಗೆ ವೀರಗಾಸೆಯು ತಗುಲಲು ವ್ಯಕ್ತಿತ್ವವು ತೊಲಗುವುದು. ಅನ್ಯಾಯ, ಅನೀತಿಯನ್ನು ಕೊಚ್ಚಿಹಾಕಿ, ಧರ್ಮವನ್ನು ಉಳಿಸಿ ನಂದೀಶನೊಂದಿಗೆ ಸಹಕರಿಸು ಎಂದು ಹೇಳಿ ಕಲ್ಯಾಣದಲ್ಲಿ ಮಡಿವಾಳ ಮಾಚಯ್ಯನಾಗಿ ಬಸವಾದಿ ಪ್ರಮಥರ ಮಲಿನವ ತೊಳೆಯುತ್ತ ಶರಣರ ಲೇಸನೇ ಬಯಸುತ್ತ ಅವರಿಗೆ ಬರುವ ತೊಂದರೆಯನ್ನು ಹೊಸಕಿ ಹಾಕುತ್ತ ಸಹಕರಿಸಲು ತಿಳಿಸಿದ.[೮೮]

ಈ ಕಲಾಕೃತಿಯಲ್ಲಿ ಶಿಪಾರ್ವತಿಯರು ವೇದಿಕೆಯ ಮೇಲೆ ಆಸೀನರಾಗಿದ್ದು, ಶಿವನು ಬಲಗಾಲನ್ನು ಕೆಳಗೆ ಬಿಟ್ಟಿದ್ದು, ಎಡಗಾಲನ್ನು ಮಡಚಿಕೊಂಡಿದ್ದು, ಎಡದೊಡೆಯ ಮೇಲೆ ಪಾರ್ವತಿಯನ್ನು ಕೂಡ್ರಿಸಿಕೊಂಡಿದ್ದು, ಹುಲಿಯ ಚರ್ಮವನ್ನು ಸುತ್ತಿಕೊಂಡಿದ್ದು, ಕೆಂಪುವರ್ಣದ ಶಲ್ಯವನ್ನು ಹೊದ್ದುಕೊಂಡಿದ್ದು, ಹಳದಿ ಮತ್ತು ಹಸಿರುವರ್ಣದ ಪಟ್ಟಿಯನ್ನು ಹೊಂದಿದ್ದು, ಶಿವನು ಬಿಳಿಯ ವರ್ಣದವನಾಗಿರುವನು. ತಿಳಿಹಸಿರು ವರ್ಣದ ಮೈಯನ್ನು ಹೊಂದಿರುವ ಪಾರ್ವತಿ ಕೆಂಪುವರ್ಣದ ಸೀರೆಯನ್ನು ಉಟ್ಟುಕೊಂಡಿದ್ದು, ಹಳದಿವರ್ಣದ ರವಿಕೆಯನ್ನು ತೊಟ್ಟಿರುವಳು. ಶಿವ ಪಾರ್ವತಿಯರ ಹಿಂದುಗಡೆಯಲ್ಲಿ ನೀಲಿವರ್ಣವನ್ನು ಹೊಂದಿದ ಮಂಟಪದ ಹಿಂಭಾಗವಿದ್ದು ಹಳದಿವರ್ಣದ ಅಂಚನ್ನು ಹೊಂದಿದೆ. ಎದುರಿನಲ್ಲಿ ಎರಡೂ ಕೈಗಳನ್ನು ಜೋಡಿಸಿಕೊಂಡು ಹಿಂದಿನ ಕೈಗಳಲ್ಲಿ ಭರ್ಚಿ ಮತ್ತು ಬಿಲ್ಲನ್ನು ಹಿಡಿದುಕೊಂಡಿದ್ದು, ಶಿವ ಪಾರ್ವತಿಯರತ್ತ ನೋಡುತ್ತ ನಿಂತಿರುವನು. ಹಳದಿ ಧೋತರ, ಕೆಂಪು ಶಲ್ಯ, ಎರಡೂ ಬದಿಯ ತುದಿಗಳಲ್ಲಿ ಹಳದಿ ಪಟ್ಟಿ ಮತ್ತು ಹಸಿರುವರ್ಣದ ತುದಿಯನ್ನು ಹೊಂದಿದೆ. ಶಿವನ ಆಜ್ಞೆಯನ್ನು ಕೇಳುತ್ತ ನಿಂತ ವಿರಭದ್ರನ ಹಾವಭಾವಗಳು ಸುಂದರವಾಗಿ ಮೂಡಿಬಂದಿವೆ.

**೯. ಗಂಗೆಗೆ ಬಸವೇಶನರಸಿಯಾಗೆಂದು ತಿಳಿಸಿದ ಶಿವ :**

ಪಾಪಗಳನ್ನು ಕಳೆಯುವ ಗಂಗಾಭವಾನಿಯೇ ಕೇಳು, ಸಂಗಮೇಶನ ಭಕ್ತ ಬಸವೇಶನ ಅರಸಿಯಾಗಿ ಗಂಗಾಂಬಿಕೆ ಎಂಬ ಹೆಸರಿನಿಂದಿರಲು ಶಿವನು ತಿಳಿಸುವನು. ಈಶನೇ ನಿನ್ನ ಪ್ರಾಣೇಶಳಾಗುತ್ತ ಬಸವೇಶನ ಸೇರುವೆನೆಂತು ನಾಶರಹಿತ ನೀನು. ದೋಷಕಾರಿಯೇ ನಾನು ಹೇಳುವುದು ಇಂತಹ ಮಾತು. ಆಗ ಶಿವನು ಸ್ಥೂಲಕಾಯವೆನಂದಿ, ಸೂಕ್ಷ್ಮರೂಪನೆ ನಾನು. ಮೂಲ ಕಾರಣಳೇ ನೀನು. ಶೀಲವಂತಳು ದೋಷರಹಿತಳಾಗಿ ಅರಸಿಯಾಗು. ಬಿಜ್ಜಳನ ಮಂತ್ರಿ ಬಲದೇವನ ಮಗಳಾಗಿ ಜನಿಸು ಎಂದು ಹೇಳಿದ. ಆಗ ಗಂಗೆಯು ಸ್ವಾಮಿ ನಾನು ಅಲ್ಲಿ ಮಾಡುವುದೇನೆಂದು ಕೇಳುತ್ತ, ನಿನ್ನ ಕೋಮಲ ಪಾದವ ನಾ ಮರೆಯದೇ ಭಜಿಸುವೆನು ಎಂದಳು. ಆಗ ಶಿವನು ಅವಳಿಗೆ ಶಿವಶರಣರ ಸಂಘಕ್ಕೆ ಪ್ರಸಾದವ ನೀಡುತ್ತ, ಮುಕ್ತಿಪಥವನ್ನು ತೋರುತ ಬಾಡದಿರು, ಬಳಲದಿರು, ಬೇಡಿದ ವರವನೀ ಕಾಂತೆ ಎಂದು ತಿಳಿಸಿದ.[೮೯]

---

೮೮. ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು:ಸಂ.:ವೃಷಭೇಂದ್ರ ವಿಳಾಸ, ೧ನೇ ಸಂಧಿ, ಚಿತ್ರ ೭೭, ಪು. ೩೭
೮೯. ಅದೇ: ೧ನೇ ಸಂಧಿ, ಚಿತ್ರ ೮೦, ಪು. ೩೩

ಈ ಕಲಾಕೃತಿಯಲ್ಲಿ ಶಿವ ಪಾರ್ವತಿಯವರು ಪೀಠವೊಂದರಲ್ಲಿ ಆಸೀನರಾಗಿದ್ದು, ಎದುರುಗಡೆಯಲ್ಲಿ ಗಂಗೆಯು ತನ್ನೆರಡೂ ಕೈಗಳನ್ನು ಜೋಡಿಸಿ (ಕೈಮುಗಿದು)ಕೊಂಡು ನಿಂತಿರುವಳು. ಕೆಂಪು ಸೀರೆ, ಹಳದಿ ಅಂಚು, ಹಳದಿ ಮತ್ತು ಹಸಿರು ವರ್ಣಗಳ ಪಟ್ಟೆಯಿರುವ ಸೆರಗು ಕಾಣುವಂತೆ ಚಿತ್ರಿಸಲಾಗಿದೆ. ಕಿವಿಯೋಲೆ ಮೂಗುತಿಯೊಂದಿಗೆ ಕೊರಳ ಆಭರಣಗಳಿದ್ದು, ತಲೆಯ ಕೂದಲುಗಳನ್ನು ಹಿಂದುಗಡೆ ಬನ್ ಆಕಾರದಲ್ಲಿ ಕಟ್ಟಿಕೊಂಡಿದ್ದು ಹೂಮಾಲೆಯನ್ನು ತಲೆಯಲ್ಲಿ ಮುಡಿದುಕೊಂಡಿರುವಳು. ಈ ದೃಶ್ಯವು ಆಕರ್ಷಕ ವರ್ಣಗಳೊಂದಿಗೆ ಮೂಡಿಬಂದಿದೆ.

**೧೦. ಮಾದಲಾಂಬಿಕೆ ಪುತ್ರರಿಲ್ಲೆಂದು ನಂದೀ ವ್ರತ ಮಾಡುತ್ತಿರುವುದು :**

ಬಾಗೇವಾಡಿಯಲ್ಲಿ ಮಾದರಸ ಮತ್ತು ಮಾದಲಾಂಬಿಕೆಯರಿದ್ದು, ಅವರಿಗೆ ಬಹಳ ವರುಷಗಳವರೆಗೆ ಮಕ್ಕಳಾಗಿರಲಿಲ್ಲ. ಒಂದುದಿನ ಮಾದಲಾಂಬಿಕೆ ಪುತ್ರರಿಲ್ಲೆಂದು ನಂದಿವ್ರತವ ಮಾಡಿ ನಿದ್ರೆಯಲ್ಲಿ ಮಲಗಿರಲು ಕನಸಿನಲಿ ನಂದೀಶನು ಬಂದು, ನಿನ್ನ ಉದರದೊಳು ಬರುವೆನೆಂದು, ನಿನ್ನ ಮಗುವಾಗಿ ಜನಿಸುವೆನೆಂದು ಹೇಳಿದನು.[೯೦]

ಈ ಕಲಾಕೃತಿಯಲ್ಲಿ ನಂದಿಯು ಮಂಟಪದಲ್ಲಿ ಕುಳಿತಿದ್ದು, ಬಾಳೆಯ ಗಿಡಗಳನ್ನು ಎಡ ಬಲಗಳಲ್ಲಿ ಕಟ್ಟಿದ್ದು ಬಾಳೆಯ ಗೊನೆ ಮತ್ತು ಹೂವು ಬಿಟ್ಟಿದ್ದು ಮಂಟಪವನ್ನು ಅಲಂಕಾರಗೊಳಿಸಲಾಗಿದೆ. ನಂದಿಯ ಎದುರುಗಡೆಯಲ್ಲಿ ಪದ್ಮಾಸನ ಹಾಕಿಕೊಂಡು ಕುಳತಿರುವ ಮಾದಲಾಂಬಿಕೆಯ ಎಡಗೈಯಲ್ಲಿ ಹೂವು, ಪತ್ರಿಗಳಿಂದ ತುಂಬಿರುವ ತಟ್ಟೆ ಇದ್ದು, ಅದರಲ್ಲಿಯ ಹೂವನ್ನು ಬಲಗೈಯಿಂದ ನಂದಿಗೆ ಏರಿಸುತ್ತಿರುವ ದೃಶ್ಯವಿದೆ. ಕೆಂಪುಸೀರೆ, ಹಳದಿ ಅಂಚು, ಹಸಿರು ಮತ್ತು ಹಳದಿ ದಡಿಯನ್ನು ಹೊಂದಿದ್ದು, ಹಸಿರು ರವಿಕೆಯನ್ನು ತೊಟ್ಟಿರುವಳು. ಹಿಂದುಗಡೆ ತಲೆಯ ಕೂದಲುಗಳನ್ನು ಬನ್ ಆಕಾರದಲ್ಲಿ ಕಟ್ಟಿಕೊಂಡಿದ್ದು ಹೂವಮಾಲೆಯನ್ನು ಮುಡಿದುಕೊಂಡಿರುವಳು. ಅವಳ ಹಿಂದುಗಡೆಯಲ್ಲಿ ಹಣ್ಣಿನ ತಟ್ಟೆಯೊಂದನ್ನು ಹಿಡಿದುಕೊಂಡು ನಿಂತಿರುವ ಸೇವಕಿ ಇರುವಳು. ಮಾದಲಾಂಬಿಕೆಯ ಬಲಗಡೆಯಲ್ಲಿ ಒಂದು ತಟ್ಟೆಯಲ್ಲಿ ಹೂವು ಹಣ್ಣುಗಳನ್ನು ತುಂಬಿದ್ದು, ಇನ್ನೊಂದು ತಟ್ಟೆಯಲ್ಲಿ ಹೂವು ಪತ್ರೆಗಳನ್ನು ತುಂಬಿಡಲಾಗಿದೆ. ಎದುರುಗಡೆಯಲ್ಲಿ ಸೇವಕಿಯೊಬ್ಬಳು ಹಣ್ಣು ಹಂಪಲವು ತುಂಬಿದ ತಟ್ಟೆಯನ್ನು ಹಿಡಿದುಕೊಂಡು ಬರುತ್ತಿರುವಳು. ಇವಳ ಸೀರೆಯು ಜಾಂಬಳಿವರ್ಣದ್ದು, ಹಳದಿ ಮತ್ತು ಕೆಂಪು ವರ್ಣಗಳ ಅಂಚನ್ನು ಹೊಂದಿದೆ. ಒಟ್ಟಾರೆ ಸಂಯೋಜನೆಯು ಸುಂದರವಾಗಿ ಮೂಡಿಬಂದಿದೆ.

**೧೧. ಮಾದಲಾಂಬಿಕೆಯ ಕನಸಿನಂತೆ ಗರ್ಭವತಿಯಾದ ಸನ್ನಿವೇಶ :**

ಮಾದಲಾಂಬಿಕೆಯು ಮೂರು ತಿಂಗಳ ಗರ್ಭಿಣಿಯಾದಂತೆ ಸುಂದರವಾಗಿ ಚೆನ್ನಾಗಿ ಶೋಭಿಸುತ್ತಿರಲು ಮಾದರಸನು ಸಂತೋಷಗೊಂಡನು. ಶಿವನ ಕೃಪೆಯಿಂದ ದಿನಗಳು ಕಳೆದಂತೆ ಮಾದಲಾಂಬಿಕೆಯು ಸುಂದರವಾಗಿ

೯೦. ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು:ಸಂ.: ವೃಷಭೇಂದ್ರ ವಿಳಾಸ, ೧ನೇ ಸಂಧಿ, ಚಿತ್ರ ೮೯. ಪು. ೩೯

ಮೈತುಂಬಿಕೊಳ್ಳುತ್ತ ಅಂದವಾಗಿ ಕಾಣಿಸುತ್ತಿದ್ದಳು. ಆಶ್ವಯುಜ ಶುದ್ಧ ಚತುರ್ದಶಿ ಸೋಮವಾರ ರಾತ್ರಿ ಶಿವಯೋಗಗೂಡಿ ಬಸವೇಶ್ವರನು ಮಾದಲಾಂಬಿಕೆಯ ಮಗನಾಗಿ ಜನಿಸಿದ.[೯೧]

ಈ ಕಲಾಕೃತಿಯಲ್ಲಿ ಮಾದಲಾಂಬಿಕೆಯು ಪೀಠವೊಂದರ ಮೇಲೆ ಕುಳಿತಿದ್ದು, ಕೆಂಪುಸೀರೆಯನ್ನು ಉಟ್ಟು ಕೊಂಡಿದ್ದು, ಹಳದಿ ಅಂಚು, ಹಸಿರು ಮತ್ತು ಹಳದಿವರ್ಣದ ದಡಿಯನ್ನು ಚಿತ್ರಿಸಿದ್ದು, ಹಸಿರುವರ್ಣದ ರವಿಕೆ, ಅದರಲ್ಲಿ ಕಪ್ಪದಾದ ಪಟ್ಟಿಗಳನ್ನು ಹಾಕಲಾಗಿದೆ. ಮೈತುಂಬಾ ಆಭರಣಗಳನ್ನು ಹಾಕಿಕೊಂಡು ಕುಳಿತಿರುವಳು. ಪೀಠದ ಕೆಳಗಡೆಯ ಭಾಗವೂ ಕೆಂಪಾಗಿದ್ದು, ಹಿಂದುಗಡೆ ಆಧಾರವಾಗಿರುವ ದಿಂಬು ನೀಲಿವರ್ಣದಲ್ಲಿದೆ. ತಲೆಗೆ ಹೂವಿನ ಸರವನ್ನು ಕಟ್ಟಿಕೊಳ್ಳಲಾಗಿದೆ. ಅವಳ ಯೋಗಕ್ಷೇಮ ವಿಚಾರಿಸಲು ಮುಂದುಗಡೆ ಒಬ್ಬಳು, ಹಿಂದಿನಿಂದ ಒಬ್ಬಳು ಅವಳತ್ತ ಬರುತ್ತಿರುವ ಸನ್ನಿವೇಶವನ್ನು ಚಿತ್ರಿಸಲಾಗಿದೆ.

**೧೨. ವಿಶ್ವಗುರು ಸಂಗಮೇಶನು ಇಷ್ಟಲಿಂಗವನ್ನು ಕಟ್ಟಿ ಆಶೀರ್ವದಿಸುವದು :**

ವಿಶ್ವಮಯವಾದ ಗುರು ಸಂಗಮನಾಥನು ಬಸವಣ್ಣನಿಗೆ ಇಷ್ಟಲಿಂಗವನ್ನು ಕಟ್ಟಿ, ಮೈಗೆ ಭಸ್ಮವನ್ನು ಹಚ್ಚಿ ಬಸವೇಶನ ಮಸ್ತಕದ ಮೇಲೆ ಸಂಗಮನಾಥನು ತನ್ನ ಬಲಗೈ ಹಸ್ತವನ್ನಿಟ್ಟು, ಷಡಕ್ಷರಿ ಮಂತ್ರ "ಓಂ ನಮಃ ಶಿವಾಯ"ವೆಂದು ಉಪದೇಶಿಸಿದರು. ತ್ರಿಪುಂಡ್ರ ಭಸ್ಮವನ್ನು ಇರಿಸುತ್ತ, ರುದ್ರಾಕ್ಷಿ ಮಾಲೆಯನ್ನು ಹಾಕಿ ಪರಮಪಾದದ ಪೂಜೆಗೈಸುತ ಗುರುವು ತೀರ್ಥ ಪ್ರಸಾದವನ್ನಿತ್ತು ಹರಿಸಿದ ಗುರುವು.[೯೨]

ಈ ಕಲಾಕೃತಿಯಲ್ಲಿ ಎರಡು ಭಾಗಗಳನ್ನು ಮಾಡಲಾಗಿದ್ದು, ಈ ಕಲಾಕೃತಿಯ ಬಲಭಾಗದಲ್ಲಿ ಬಸವಣ್ಣನಿಗೆ ಕೂಡಲಸಂಗಮನಾಥನು ಬಸವಣ್ಣನ ತಲೆಯ ಮೇಲೆ ಬಲಗೈ ಇಟ್ಟು ಆಶೀರ್ವದಿಸುವ ಸನ್ನಿವೇಶವಿದೆ. ಬಾಲಕ ಬಸವಣ್ಣ ತನ್ನೆರಡೂ ಕಾಲುಗಳನ್ನು ಮೇಲ್ಮಾಡಿ ಮಲಗಿದ್ದು, ಎರಡೂ ಕೈಗಳಿಂದ ಏನನ್ನೋ ಹಿಡಿಯಬೇಕೆನ್ನುವ ದೃಷ್ಟಿಯಿಂದ ಎರಡೂ ಕೈಗಳು ಮುಷ್ಟಿಯನ್ನು ಮಾಡಿಕೊಂಡಿದ್ದು, ಎದುರುಗಡೆ ನೋಡುತ್ತಿದೆ. ಕೊರಳಲ್ಲಿ ಇಷ್ಟಲಿಂಗ ಮತ್ತು ರುದ್ರಾಕ್ಷಿಸರವನ್ನು ಹಾಕಿಕೊಂಡಿರುವನು. ಮುಂಗೈ ಮತ್ತು ರಟ್ಟೆಗಳಲ್ಲಿ ರುದ್ರಾಕ್ಷಿ ಮಾಲೆಗಳಿವೆ. ಕೂಡಲಸಂಗಮನಾಥನು ಮಗುವಿನ ಎದುರಿಗೆ ನಿಂತುಕೊಂಡು ಆಶೀರ್ವದಿಸುತ್ತಿದ್ದು, ಕಾವಿವರ್ಣದ ಲುಂಗಿ ಸುತ್ತಿಕೊಂಡಿದ್ದು, ಕೆಂಪುವರ್ಣದ ಶಲ್ಯವನ್ನು ಎಡಭುಜದ ಮೇಲೆ ಹಾಕಿಕೊಂಡಿದ್ದು, ಎಡಗೈಯನ್ನು ತಮ್ಮ ಎದೆಗೆ ಹಿಡಿದುಕೊಂಡಿರುವನು. ತಲೆಗೆ ಕಾವಿ ಬಟ್ಟೆಯನ್ನು ಕಟ್ಟಿಕೊಂಡಿದ್ದು, ರುದ್ರಾಕ್ಷಿ ಮಾಲೆಯನ್ನು ತಲೆಗೆ ಕಟ್ಟಿಕೊಂಡಿರುವನು. ಕೊರಳಲ್ಲಿ ರುದ್ರಾಕ್ಷಿ ಮಾಲೆ ಹಾಕಿಕೊಂಡಿದ್ದು, ಲಿಂಗವನ್ನು ಕೊರಳಲ್ಲಿ ಕಟ್ಟಿಕೊಂಡಿರುವನು. ಕೋರೆಮೀಸೆ ಮತ್ತು ದಾಡಿಗಳು, ಹಣೆಯ ಮೇಲಿನ ವಿಭೂತಿ ಕಾಂತಿಯುಳ್ಳ ಮುಖವನ್ನು ಸುಂದರವಾಗಿ ಚಿತ್ರಿಸಿರುವರು. ಚಿತ್ರದ ಎಡಭಾಗದಲ್ಲಿ ಮಾದಲಾಂಬಿಕೆ ಪಲ್ಲಂಗವೊಂದರಲ್ಲಿ ಎಡಭುಜ ಮೇಲೆ ಮಾಡಿಕೊಂಡು ಮಲಗಿರುವಳು. ಇಲ್ಲಿ ಕೆಂಪು, ಹಸಿರು, ಹಳದಿ, ಕಪ್ಪುವರ್ಣಗಳನ್ನು ಬಳಸಿದ್ದು, ಒಟ್ಟಾರೆ ಸುಂದರವಾಗಿ ಮೂಡಿಬಂದಿವೆ.

---

೯೧. ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು:ಸಂ.: ವೃಷಭೇಂದ್ರ ವಿಳಾಸ, ೧ನೇ ಸಂಧಿ, ಚಿತ್ರ ೯೦, ಪು. ೩೯

೯೨. ಅದೇ: ೧ನೇ ಸಂಧಿ, ಚಿತ್ರ ೯೧, ಪು. ೪೦

**೧೩. ಕೂಡಲಸಂಗಮನ ಆಜ್ಞೆಯಂತೆ ಕಲ್ಯಾಣಕ್ಕೆ ಹೊರಟ ಬಸವೇಶ :**

ಕಲ್ಯಾಣ ರಾಜ್ಯದರಸ ಬಿಜ್ಜಳನ ಆಜ್ಞೆಯಂತೆ ಬಸವಣ್ಣನನ್ನು ಕರೆತರಲು ಬಂದ ಮಂತ್ರಿವರ್ಯರು ಬಸವಣ್ಣನಿಗೆ ಈ ವಿಷಯ ತಿಳಿಸಲು, ಒಪ್ಪದ ಬಸವಣ್ಣ ನಿಮ್ಮ ಅರಸನ ಅಪ್ಪಣೆ ನಿಮಗೆ, ನನಗೆ ಗುರುವಪ್ಪಣೆಬೇಕೆಂದು ಹೇಳುತ್ತ ಬಸವೇಶ ಸಂಗಮನಾಥನಿಗೆ ನಿಮ್ಮ ಬಿಟ್ಟಿರಲಾಗದು. ನಾನು ಇಲ್ಲಿಯೇ ತಮ್ಮೊಂದಿಗಿರುವುದಾಗಿ, ಅವರಿಗೆ ನೀವೆ ಹೇಳಿ ಕಳುಹಿಸಿ ಎಂದು ಸಂಗಮನಾಥನಿಗೆರಗಿ ಸಲಹೆ ನೀಡೆಂದು ಕೇಳಿಕೊಂಡ. ಆಗ ಸಂಗಮನಾಥನು ಉದಯಿಸಿ ಬಸವಣ್ಣನಿಗೆ ನೀನು ಇಲ್ಲಿ ಮಾಡಬೇಕಾದ ಕೆಲಸಕ್ಕಿಂತ ಅಲ್ಲಿ ಮಾಡಬೇಕಾದ ಕಾರ್ಯ ಬಹಳವಿದೆ ಮತ್ತು ಔಚಿತ್ಯವೂ ಇರುವುದರಿಂದ ಕಲ್ಯಾಣಕ್ಕೆ ಹೊರಡು ಎಂದು ಆಜ್ಞಾಪಿಸಿದನು. ಆಗ ಬಸವಣ್ಣನು ತನ್ನ ಅಕ್ಕನಾದ ನಾಗಮ್ಮ ಮತ್ತು ಪತ್ನಿ ಗಂಗಾಂಬಿಕೆಯೊಂದಿಗೆ ಕಲ್ಯಾಣಕ್ಕೆ ಹೊರಟ ದೃಶ್ಯವಿದೆ.[೬೩]

ಈ ಕಲಾಕೃತಿಯಲ್ಲಿ ಮೇಲಿನ ಭಾಗದಲ್ಲಿ ಗುರುಸಂಗಮನಾಥನು ಬಸವಣ್ಣನಿಗೆ ಕಲ್ಯಾಣಕ್ಕೆ ಹೊರಡಲು ಆದೇಶಿಸುತ್ತಿರುವ ಸನ್ನಿವೇಶವಿದೆ. ಕೂಡಲ ಸಂಗಮದ ಲಿಂಗದಿಂದುದಯಿಸಿದ ಸಂಗಮನಾಥ ಬಲಗೈ ಮುಂದೆ ಮಾಡಿ ಆಜ್ಞಾಪಿಸುತ್ತಿರುವುದು, ಬಸವಣ್ಣ ತನ್ನೆರಡೂ ಕೈಗಳನ್ನು ಜೋಡಿಸಿ ಒಪ್ಪಿಕೊಂಡಿರುವುದಾಗಿ ಸೂಚಿಸುತ್ತಿದ್ದು, ಅಕ್ಕನಾಗಮ್ಮ ಮತ್ತು ಗಂಗಾಂಬಿಕೆಯರು ಈ ಎಲ್ಲ ದೃಶ್ಯವನ್ನು ತದೇಕಚಿತ್ತದಿಂದ ನೋಡುತ್ತ ಕುಳಿತಿರುವರು. ಗುರು ಸಂಗಮನಾಥನು ಆದೇಶಿಸಿದ್ದು, ಬಸವಣ್ಣ ಒಪ್ಪಿದ್ದು, ಸಂತೋಷದಿಂದ ನಿಂತುಕೊಂಡ ಮಂತ್ರಿಯು ತನ್ನೆರಡೂ ಕೈಜೋಡಿಸಿ ಗುರುವಿಗೆ ನಮಸ್ಕರಿಸುತ್ತಿರುವ ದೃಶ್ಯವು ಸುಂದರವಾಗಿ ಮೂಡಿಬಂದಿದೆ.

ಕೆಳಭಾಗದಲ್ಲಿರುವ ಒಂದು ಪಲ್ಲಕ್ಕಿಯಲ್ಲಿ ಅಕ್ಕನಾಗಮ್ಮನನ್ನು ಕೂಡಿಸಿಕೊಂಡು ಹೊರಟರೆ, ಇನ್ನೊಂದು ಪಲ್ಲಕ್ಕಿಯಲ್ಲಿ ಬಸವಣ್ಣ ಮತ್ತು ಗಂಗಾಂಬಿಕೆಯರನ್ನು ಕೂಡ್ರಿಸಿಕೊಂಡು ಹೊರಟಿರುವರು. ಛತ್ರಿ, ಚಾಮರಗಳೊಂದಿಗೆ ರಕ್ಷಣೆಗಾಗಿ ಭರ್ಚಿಗಳನ್ನು, ಖಡ್ಗಗಳನ್ನು ಹಿಡಿದುಕೊಂಡು ಸಾಲುಸಾಲಾಗಿ ಪಲ್ಲಕ್ಕಿಗಳನ್ನು ಹೊತ್ತುಕೊಂಡು ಹೊರಟ ಸೈನಿಕರನ್ನು ಚಿತ್ರಿಸಲಾಗಿದೆ. ಈ ಇಡೀ ಚಿತ್ರ ಸುಂದರವಾಗಿ ಮೂಡಿಬಂದಿದೆ.

**೧೪. ಬಸವಣ್ಣ ಬ್ರಾಹ್ಮಿ ಲಿಪಿ ಓದಿ ಹೇಳುತ್ತಿರುವುದು :**

ಬಸವೇಶ್ವರರನ್ನು ಮೆರವಣಿಗೆಯಲ್ಲಿ ಕರೆತರುವಾಗ ಆಕಾಶದಿಂದ ಬಿದ್ದ ಈ ಲಿಪಿಯನ್ನು ನೋಡಿ ಸಂತೋಷಭರಿತನಾದ ಬಿಜ್ಜಳ ಮಹಾರಾಜ ತನ್ನ ಆಸ್ಥಾನದ ಪಂಡಿತರಿಗೆಲ್ಲ ಅದನ್ನು ಓದಿ ಹೇಳಲು ಕೇಳಿದ. ಇದು ಯಾವ ಭಾಷೆ? ಅರ್ಥವಾಗದು ಎಂದು ಮರಳಿಕೊಡಲು ಇದನ್ನು ಯಾರಿಂದ ಓದಿಸಬೇಕೆಂದು ಮಹಾರಾಜ ಚಿಂತಿತನಾದ. ಆಗ ಮಧುವರಸನು ಬಸವಣ್ಣ ಜಾಣನೆಂದು ಹೇಳುವ ತಾವು ಅವನಿಂದಲೇ ಓದಿಸಿರಿ ಎಂದ. ಆಗ ಬಿಜ್ಜಳ ಅರಸನು ಬಸವಣ್ಣನಿಗೆ ಅದನ್ನು ನೋಡಲು ಕೊಟ್ಟ, ಅದನ್ನು ಬಸವಣ್ಣ ಸರಾಗವಾಗಿ ಓದಿದ.

---

೬೩ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು:ಸಂ.:ವೃಷಭೇಂದ್ರ ವಿಳಾಸ, ೧ನೇ ಸಂಧಿ, ಚಿತ್ರ ೧೬೨, ಪು. ೬೯

ಶ್ರೀ ಮದೈಶ್ವರ್ಯ ಸಂಪನ್ನ ಬಿಜ್ಜಳರಾಯ ಮಹಾಕೈಲಾಸಗಿರಿವಾಸ ಲಿಪಿ ಬರೆಸುತಿ ಈ ಒಕ್ಕಣಿಯನ್ನು ಪ್ರಮಥರಿಳಿವೆಚ್ಚರಿಕೆ ಎಂದು ಹೇಳುತ್ತ ಸಿಂಹಾಸನದ (ಗದ್ದುಗೆಯ) ಕೆಳಗಡೆ ಏಳು ಕೊಪ್ಪರಿಗೆ ಬಂಗಾರ, ಬೆಳ್ಳಿ, ವಜ್ರ ವೈಢೂರ್ಯಗಳು ಹಾಗೂ ಮುತ್ತಿನ ಸಿಂಹಾಸನವಿದೆ ಎಂದು ಓದಿ ಹೇಳಿದ.[೯೪]

ಈ ಕಲಾಕೃತಿಯಲ್ಲಿ ಬಿಜ್ಜಳ ಮಹಾರಾಜನು ಬಂಗಾರದ ಸಿಂಹಾಸನದಲ್ಲಿ ಆಸೀನನಾಗಿ ಬಸವೇಶನತ್ತ ನೋಡುತ್ತಿದ್ದು, ಬೆಳ್ಳಿಯ ಸಿಂಹಾಸನದಲ್ಲಿದ್ದ ಬಸವೇಶ ಲಿಪಿಯನ್ನು ಓದುತ್ತ, ಅದರ ಅರ್ಥವನ್ನು ಬಿಜ್ಜಳನಿಗೆ ಹೇಳುತ್ತಿರುವನು. ಇವರ ಎದುರುಗಡೆಯಲ್ಲಿ ಮಂತ್ರಿಗಳು, ಪಂಡಿತರು ಕೈಕಟ್ಟಿಕೊಂಡು ಬಸವಣ್ಣನು ಹೇಳುವುದನ್ನು ತದೇಕಚಿತ್ತದಿಂದ ಕೇಳುತ್ತ ನಿಂತಿರುವರು ಬಿಳಿ, ಹಳದಿ, ಕೆಂಪು, ಹಸಿರುವರ್ಣಗಳನ್ನು ಬಳಸಿಕೊಂಡು ಸಂಯೋಜನೆಯನ್ನು ಸುಂದರಗೊಳಿಸಿರುವರು.

**೧೫. ಭೂಮಿಯಲ್ಲಿರುವ ರತ್ನ ಸಿಂಹಾಸನ ಮತ್ತು ಏಳು ಕೊಪ್ಪರಿಗೆಗಳು :**

ಮಧುವರಸ ಮತ್ತು ಇತರ ಪಂಡಿತರು ಬಿಜ್ಜಳ ಮಹಾರಾಜರಿಗೆ ಈ ಪರೀಕ್ಷೆ ಆಗಿಯೇ ಬಿಡಲಿ. ಅದೆಲ್ಲ ದೊರೆತರೆ ನಾವೆಲ್ಲಾ ಬಸವಣ್ಣನಿಗೆ ವಿಧೇಯರಾಗಿರುವೆವು ಎಂದೆನ್ನುತ್ತ ಪರೀಕ್ಷಿಸಲಾಯಿತು. ಬಿಜ್ಜಳ ಮಹಾರಾಜರ ಸಿಂಹಾಸನವನ್ನು ಸರಿಸಿ ಭೂಮಿಯೊಳು ನಲವಕ್ಕು ಸಕಲ ಸಂಪದವಕ್ಕು ಸೀಮೆ ನಾಲವತ್ತೆಂಟು ಯೋಜನೆಮದಕ್ಕು ನೋಡಲಾಗಿ ರತ್ನಖಚಿತ ಸಿಂಹಾಸನ ಮತ್ತು ಏಳು ಕೊಪ್ಪರಿಗೆಗಳು ದೊರೆತದ್ದು, ಬಸವನು ಭಕ್ತ ಚಿಂತಾರತ್ನನೇ ಬಾರಯ್ಯ ಸಕಲಕ್ಕೂ ಕರ್ತ ನೀನೆ ಎಂದು ಉದ್ಗರಿಸಿದ.[೯೫]

ಈ ಕಲಾಕೃತಿಯಲ್ಲಿ ಬೆಳ್ಳಿಯ ಸಿಂಹಾಸನದಲ್ಲಿ ಮಂತ್ರಿ ಬಸವೇಶ ಆಸೀನನಾಗಿದ್ದು, ಬಂಗಾರದ ಸಿಂಹಾಸನದಲ್ಲಿ ರಾಜಾ ಬಿಜ್ಜಳನು ಆಸೀನನಾಗಿರುವನು. ಇನ್ನೊಂದು ಭಾಗದಲ್ಲಿ ಮಂತ್ರಿಗಳೂ ಪಂಡಿತರೂ ಒಟ್ಟಿಗೆ ಕೈಕಟ್ಟಿಕೊಂಡು ನೋಡುತ್ತ ನಿಂತಿರುವರು. ಎದುರಿನ ಭಾಗದಲ್ಲಿ ಇಬ್ಬರು ಕೆಲಸಗಾರರು ಗುದ್ದಿ ಮತ್ತು ಸಲಿಕೆಗಳನ್ನು ಹಿಡಿದುಕೊಂಡು ಬರುತ್ತಲಿದ್ದರೆ ನೆಲವನ್ನು ಅಗೆದು ಹೊರತೆಗೆಯಲಾಗಿದ್ದು, ಮುಂದಿನ ಸಾಲಿನಲ್ಲಿ ರತ್ನದ ಸಿಂಹಾಸನ ಮತ್ತು ಬಂಗಾರ ವರ್ಣದ ಏಳು ಕೊಪ್ಪರಿಗೆಗಳು ಇರುವುದನ್ನು ಸುಂದರವಾಗಿ ಚಿತ್ರಿಸಲಾಗಿದೆ.

**೧೬. ಬಸವೇಶನೇನಿದಾಶ್ಚರ್ಯ ಬಸುರಾದಳಂತೆ ನಿಮ್ಮಕ್ಕ ನಾಗಮ್ಮ : ಅದಕ್ಕುತ್ತರಿಸಿದ ಗರ್ಭಶಿಶು :**

ಬಸವೇಶಾ, ಏನಿದು ಆಶ್ಚರ್ಯ? ನಿಮ್ಮ ಅಕ್ಕನಾದ ಅಕ್ಕನಾಗಮ್ಮಳು ಬಸುರಾದಳಂತೆ. ಸೂರ್ಯ-ಚಂದ್ರರಿರುವವರೆಗೆ ಅಪಕೀರ್ತಿ ತಪ್ಪೀತೆ? ಎಂದು ಬಿಜ್ಜಳನು ಕೇಳಿದನು. ಹಾಗೂ ನಾಗಮ್ಮನನ್ನು ಕರೆತಂದು ಜವನಿಕೆಯೊಳು ಕುಳ್ಳಿರಿಸಿ ಏನವ್ವ ನೀನು ಗರ್ಭವಂತೆ ನಿನ್ನವಗುಣವಿದು. ಜ್ಞಾನವುಳ್ಳವಳ ಅಜ್ಞಾನವಿದು ಅಲ್ಲವೇ? ಎಂದು ಕೇಳಲು, ಅಕ್ಕನಾಗಮ್ಮನ ಗರ್ಭದಲ್ಲಿಯ ಗುಪ್ತ ಶಿಶು ಉತ್ತರಿಸಿತು!

---

೯೪ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು:ಸಂ.:ವೃಷಭೇಂದ್ರ ವಿಳಾಸ, ೧ನೇ ಸಂಧಿ, ಚಿತ್ರ ೧೭೬, ಪು. ೭೬
೯೫ ಅದೇ: ೧ನೇ ಸಂಧಿ, ಚಿತ್ರ ೧೭೮, ಪು. ೭೭

"ಅಕ್ಕನಾಗಮ್ಮಳು ಪುಣ್ಯ ಮಾಡಿರುವಳು. ಅದರ ಫಲವಾಗಿ ಶರಣಪ್ರಸಾದವನ್ನು ಸ್ವೀಕರಿಸಲು ದುರ್ಜನರನ್ನೂ, ದೂಷಕರನ್ನೂ, ಶಿವ-ಗುರುದ್ರೋಹಿಗಳನ್ನೂ (ವಧಿಸಲು) ಸಂಹರಿಸಲು ಭೂಮಿಯಲ್ಲಿ ಹುಟ್ಟಬರುವೆ ಚೆನ್ನಬಸವಣ್ಣನೆಂಬ ಹೆಸರಿನೊಂದಿಗೆ. ಮೂರು ಜಗದೊಳು ಅಚ್ಚರಿಯನು ತೋರುವೆನೆಂದು" ಅಕ್ಕನಾಗಮ್ಮನ ಉದರದಲ್ಲಿರುವ ಶಿಶು ಉತ್ತರಿಸಿತು!

ಯಾರು ಬಲ್ಲರು ಈ ವಿಚಾರವನ್ನು? ಪರಮೇಶ್ವರನ ಮಹಿಮೆ! ಗರ್ಭದಲ್ಲಿರುವ ಶಿಶು ಬಾಲನುಡಿ ಕೇಳಿ ಮನದಲ್ಲಿ ಸಂಶಯ ತಾಳದಿರಿ ಎಂದೆನ್ನುತ್ತ, ಕೆಂಡಕ್ಕ ಇರುವೆಯು ಮುತ್ತಿಕೊಳ್ಳುವುದೆ? ಪಾಪವನ್ನು ಕಂಡು ಪುಂಡರಂತೆ ಮಾತನಾಡುವುರೆ ಎಂದು ಬಿಜ್ಜಳನು ಅಕ್ಕನಾಗಮ್ಮನನ್ನು ಬೀಳ್ಕೊಟ್ಟನು.[೯೬]

**ಚಿತ್ರಣ ೧ :** ಈ ಕಲಾಕೃತಿಯಲ್ಲಿ ಸಿಂಹಾಸನಾರೂಢನಾದ ರಾಜಾ ಬಿಜ್ಜಳನಿಗೆ ಎದುರುಗಡೆ ನಿಂತಿರುವ ಕೊಂಡಿಮಂಚಣ್ಣ ಅಕ್ಕನಾಗಮ್ಮನು ಬಸುರಿಯಾದ ಸುದ್ದಿ ತಿಳಿಸುತ್ತಿರುವನು. ತನ್ನೆರಡೂ ಕೈಗಳನ್ನು ಮುಗಿದು ನಿಂತಿದ್ದು, ನೀಲವರ್ಣದ ಅಂಗಿಯನ್ನು ಹಾಕಿಕೊಂಡಿದ್ದು, ಕೆಂಪು ಟೊಪ್ಪಿಗೆಯನ್ನು ತಲೆಗೆ ಹಾಕಿಕೊಂಡಿದ್ದಾನೆ. ಕೋರೆಮೀಸೆ, ದಾಡಿಗಳಿರುವ ಮುಖದನ ಕೊಂಡಿಮಂಚಣ್ಣಾಗಿರುವನು. ಅರಸನ ಬಲಬದಿಗೆ ಬಸವೇಶ, ಎಡಬದಿಗೆ ಅಕ್ಕನಾಗಮ್ಮನಿರುವಳು.

**ಚಿತ್ರಣ ೨ :** ಈ ಕಲಾಕೃತಿಯಲ್ಲಿ ಸಿಂಹಾಸನಾರೂಢನಾದ ಬಿಜ್ಜಳನು ಅಕ್ಕನಾಗಮ್ಮನಿಗೆ ಮತ್ತು ಬಸವೇಶನಿಗೆ ಪ್ರಶ್ನಿಸುತ್ತಿರುವಂತೆ ಬಲಗಡೆಯಲ್ಲಿರುವ ಅಕ್ಕನಾಗಮ್ಮನತ್ತ ಬಲಗೈ ಮಾಡಿದ್ದು, ಎಡಗಡೆಯಲ್ಲಿರುವ ಬಸವೇಶನತ್ತ ಎಡಗೈ ಮಾಡಿದ್ದು ಈರ್ವರಿಗೂ ಹೇಳುತ್ತಿರುವ ದೃಶ್ಯ ಚೆನ್ನಾಗಿ ಮೂಡಿಬಂದಿದೆ. ಇವನ ಪ್ರಶ್ನೆಗಳಿಗೆ ಉತ್ತರಿಸುತ್ತಿರುವ ಶಿಶು ಅಕ್ಕನಾಗಮ್ಮನ ಗರ್ಭದಿಂದ ಮೇಲೆದ್ದು ಬಂದು ಉತ್ತರಿಸುವ ಶಿಶುವಿನ ಚಿತ್ರ ಅದ್ಭುತವಾದ ಕಲಾವಿದನ ಕಲ್ಪನೆಯೇ ಸರಿ. ಪದ್ಮಾಸನದಲ್ಲಿರುವ ಈ ಶಿಶು ತನ್ನ ಕೈಮುಂದೆ ಮಾಡಿ ಉತ್ತರಿಸುತ್ತಿರುವ ದೃಶ್ಯ ಸುಂದರವಾಗಿ ಮೂಡಿಬಂದಿದೆ. ಪದ್ಮಾಸನಸ್ಥಳಾಗಿರುವ ಅಕ್ಕನಾಗಮ್ಮ ಬಿಜ್ಜಳನನ್ನು ನೋಡುತ್ತಿರುವಳು. ಆ ಶಿಶುವಿನ ಉತ್ತರದಿಂದ ಸಂತೃಪ್ತ ಭಾವನೆಯು ಬಿಜ್ಜಳ ಬಸವೇಶರಿಗೆ ಆದಂತೆ ಕಂಡುಬರುತ್ತಿದ್ದು, ಎದುರುಗಡೆಯಲ್ಲಿರುವ ಪಂಡಿತರು ತಲೆಬಾಗಿ ಆ ಮಗುವಿಗೆ ನಮಸ್ಕರಿಸುವ ಸನ್ನಿವೇಶವನ್ನು ಸುಂದರವಾಗಿ ಉತ್ತಮ ವರ್ಣ ಸಂಯೋಜನೆಯೊಂದಿಗೆ ಚಿತ್ರಿಸಲಾಗಿದೆ. ವರ್ಣಗಳ ಸಮತೋಲನ, ಬಟ್ಟೆಗಳಲ್ಲಿಯ ವಿವಿಧ ನಕ್ಷೆಗಳು, ವಿಶೇಷವಾಗಿ ಅಕ್ಕನಾಗಮ್ಮ ಕುಳಿತಿರುವ ವೇದಿಕೆಯ ಹಿಂದುಗಡೆ ಹಸಿರುವರ್ಣವನ್ನು ತುಂಬಿರುವುದು ಸಮೃದ್ಧಿಯ ಸಂಕೇತವೆಂಬಂತೆ ತೋರಿಸಲಾಗಿದೆ.

**೧೭. ಚೆನ್ನ ಬಸವಣ್ಣನ ಜನನ :**

ಅರಮನೆಯಲ್ಲಿ ಅಕ್ಕನಾಗಮ್ಮನ ಬೆನ್ನಿನಿಂದ ಜನಿಸಿದ ಶರಣ ಶಿಖಾಮಣಿಯು ಬಂದನು. ಷಟ್‌ಸ್ಥಲ ನಿರ್ಣಯ ಗುರು ಇವನು ಎಂದು ಹಿಗ್ಗಿತು ಧರೆಯು.[೯೭]

---

೯೬ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು:ಸಂ.: ವೃಷಭೇಂದ್ರ ವಿಳಾಸ, ೧ನೇ ಸಂಧಿ, ಚಿತ್ರ ೨೬೫. ೨೬೯, ಪು. ೧೨೯, ೧೩೧.

೯೭ ಅದೇ : ೧ನೇ ಸಂಧಿ, ಚಿತ್ರ ೨೭೧, ಪು. ೧೩೪

ಈ ಕಲಾಕೃತಿಯಲ್ಲಿ ಅಕ್ಕನಾಗಮ್ಮನು ಅರಮನೆಯ ಪೀಠವೊಂದರ ಮೇಲೆ ಪದ್ಮಾಸನದಲ್ಲಿ ಕುಳಿತಿದ್ದು, ಇಷ್ಟಲಿಂಗವನ್ನು ತನ್ನೆರಡೂ ಕೈಗಳಿಂದ ಹಿಡಿದುಕೊಂಡಿದ್ದು, ಪುಷ್ಪಾಲಂಕಾರದೊಂದಿಗೆ ಇಷ್ಟಲಿಂಗವು ಕಂಗೊಳಿಸುತ್ತಿದ್ದು, ಅದನ್ನು ತದೇಕಚಿತ್ತದಿಂದ ನೋಡುತ್ತ ಗಂಭೀರವಾಗಿ ಪೂಜಾನಿರತಳಾಗಿರುವ ಅಕ್ಕನಾಗಮ್ಮನ ಬೆನ್ನಿನ ಹಿಂದೆ ಶಿಶುವು ಪದ್ಮಾಸನದಲ್ಲಿದ್ದು, ಎಡಗೈ ಪಾದಗಳ ಮೇಲಿದ್ದು, ಬಲಗೈಯಲ್ಲಿ ಲಿಂಗವನ್ನು ಹಿಡಿದುಕೊಂಡು ಜನಿಸುತ್ತಿರುವ ದೃಶ್ಯವು ಮನಮೋಹಕವಾಗಿದೆ. ಈ ಶಿಶುವಿನ ಕೊರಳಲ್ಲಿ ಕರಡಿಗೆಯಿದ್ದು, ರುದ್ರಾಕ್ಷಿ ಮಾಲೆಯನ್ನು ಧರಿಸಿರುವದು. ಮೈಯಲ್ಲೆಲ್ಲ ತ್ರಿಪುಂಡ್ರ ವಿಭೂತಿಯನ್ನು ಧರಿಸಿಕೊಂಡಿರುವುದು ನೋಡಿ ಆಶ್ಚರ್ಯಚಕಿತರಾಗಿ ವೇದಿಕೆಯ ಎಡಬಲಗಳಲ್ಲಿರುವ ಗಂಗಾಂಬಿಕೆ ಮತ್ತು ನೀಲಾಂಬಿಕೆಯರು ಆ ಮಗುವನ್ನು ಎತ್ತಿಕೊಳ್ಳಲು ತಮ್ಮ ಎರಡೂ ಕೈಗಳನ್ನು ಮುಂದೆ ಚಾಚಿರುವುದನ್ನು ಗಮನಿಸಬಹುದಾಗಿದೆ. ಅವರೀರ್ವರ ಮುಂದುಗಡೆ ಇರುವ ಮಹಿಳೆಯರೀರ್ವರು ಕೈಯಲ್ಲಿ ಫಲ-ಪುಷ್ಪಗಳನ್ನು ತುಂಬಿಕೊಂಡಿರುವ ಬುಟ್ಟಿಗಳನ್ನು ಹಿಡಿದುಕೊಂಡಿರುವರು. ಅವರ ಮುಂದಿರುವವರು ತಮ್ಮೆರಡೂ ಕೈಗಳನ್ನು ಮುಗಿದು ಭಕ್ತಿಯಿಂದ ಈ ಎಲ್ಲ ದೃಶ್ಯವನ್ನು ನೋಡುತ್ತಿರುವರು. ಅಕ್ಕನಾಗಮ್ಮನ ಎದುರುಗಡೆಯಲ್ಲಿ ಫಲ-ಪುಷ್ಪವಿರುವ ಬುಟ್ಟಿ ಹಾಗೂ ಇನ್ನೊಂದು ಪೂಜಾಸಾಮಗ್ರಿಗಳಿರುವ ಬುಟ್ಟಿಗಳನ್ನು ಇಡಲಾಗಿದೆ. ಹೀಗೆ ಉತ್ತಮ ವರ್ಣ ಸಂಯೋಜನೆಯೊಂದಿಗೆ ರಚನೆಗೊಂಡಿದೆ.

**೧೮. ಸಂಗಮನಾಥನೊಂದಿಗೆ ಚೆನ್ನಬಸವಣ್ಣ :**

ಗುರು ಸಂಗಮೇಶನ ಹತ್ತಿರವಿರುವ ಶಿಶುವಿಗೆ ಅರಿವೇ ಗುರು ಪ್ರಾಣಲಿಂಗವನು ಧರಿಸಿ, ಜ್ಞಾನವೇ ಜಂಗಮವೆಂದು, ತ್ವಕ್ಕೇ ವಿಭೂತಿಯೆಂದು, ನಯನ ರುದ್ರಾಕ್ಷಿ, ಚರಣ ತೀರ್ಥವನ್ನು ನೀಡಿ ಚೆನ್ನಬಸವಣ್ಣನಿಗೆ ರಸದಲ್ಲಿ ಪ್ರಸಾದವನ್ನು ಕೈಯಲ್ಲಿ ನೀಡಿ, ಕಿವಿಯಲ್ಲಿ ಶಿವಮಂತ್ರವನ್ನು ಹೇಳಿ ಗುರು ಸಂಗಮನು ತೆರಳಿದನು ಎಂದಿರುವರು.[೯೮]

ಈ ಕಲಾಕೃತಿಯಲ್ಲಿ ಮನೆಯ ಒಳಭಾಗದ ಪೀಠವೊಂದರಲ್ಲಿ ಆಸೀನರಾದ ಗುರು ಸಂಗಮೇಶನು ಬಲಗಾಲನ್ನು ಕೆಳಗೆ ಬಿಟ್ಟಿದ್ದು, ಎಡಗಾಲನ್ನು ಮಡಿಚಿಟ್ಟುಕೊಂಡಿದ್ದು, ಎಡದೊಡೆಯ ಮೇಲೆ ಶಿಶು ಚೆನ್ನಬಸವನನ್ನು ಕೂಡ್ರಿಸಿಕೊಂಡು ಶಿವಮಂತ್ರವನ್ನು ಬೋಧಿಸುತ್ತಿರುವ ದೃಶ್ಯ ಸುಂದರವಾಗಿ ಮೂಡಿಬಂದಿದೆ. ಸಂಗಮನಾಥನ ತೇಜಸ್ಸು, ಮೈಯೆಲ್ಲ ತ್ರಿಪುಂಡ್ರವಿಭೂತಿ ಧರಿಸಿದ್ದು, ಶುಭ್ರ ಬಿಳಿಯದಾದ ಧೋತರ, ಕೆಂಪು ಶಲ್ಯ, ಅದರ ಮೇಲೆ ಕುಳಿತಿರುವ ಚೆನ್ನಬಸವಣ್ಣನ ಮುದ್ದುಮುಖ, ಆಕರ್ಷಕ ಕಣ್ಣುಗಳು ಕಲಾವಿದನ ಜಾಣ್ಮೆಯನ್ನು ತೋರಿಸುತ್ತವೆ.

**೧೯. ಇಷ್ಟಲಿಂಗವಿಲ್ಲದ್ದನ್ನು ಪ್ರಶ್ನಿಸಿದಾಗ ಮೈಯಲ್ಲೆಲ್ಲಾ ಲಿಂಗವಿರುವುದನ್ನು ತೋರಿಸಿದ ಸಿದ್ಧರಾಮ :**

ಲಿಂಗ ಧರಿಸದೇ ನಮ್ಮ ಬಸವರಸನ ಮನೆಯ ಮೆಟ್ಟಲನ್ನು ತುಳಿಯುವುದು ಸಾಧ್ಯವಿಲ್ಲೆಂದು ಹೇಳಿದಾಗ ಪ್ರಾಣಲಿಂಗಕಾಯವೆನಿತು ಲಿಂಗಮಯವು ಭಕ್ತನೆನುವುದು. ಆದರೆ ಪ್ರಭುವೆ ಬಲ್ಲೆನೆನುತ ಕೇಶ ಬಿಚ್ಚಿ ತಲೆ

---

೯೮. ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು:ಸಂ.: ವೃಷಭೇಂದ್ರ ವಿಳಾಸ, ೧ನೇ ಸಂಧಿ, ಚಿತ್ರ ೨೭೩, ಪು. ೧೩೫

ಜಾಡಿಸಿದಾಗ ಲಿಂಗಗಳೆಲ್ಲ ಕೆಳಗೆ ಉದುರುವವು. ಚೆನ್ನಬಸವ ನೋಡಿ ನೀ ಸಂಪನ್ನನಹುದು ಶಿವನ ಕೃಪೆಯಿಂದುನ್ನಿಸಿದರೆ ಲಿಂಗ ಘನವೇ? ನಿನ್ನ ಗುರುವು ಕೊಟ್ಟದೊಂದು ಲಿಂಗವನು ತೋರಿಸು ಎಂದ. ಆಗ ಸಿದ್ಧರಾಮ, ಗುರುವೇ ನೀನೇ ಕರ್ತನಾಗಿ ಕರುಣಿಸು ಎನಗೆ ಇಷ್ಟಲಿಂಗವನ್ನು ಎಂದು ಕೇಳುತಲಿರಲು ಚೆನ್ನಬಸವಣ್ಣನು ಅನುಮತಿಸಿದನು.[೯೯]

ಈ ಕಲಾಕೃತಿಯಲ್ಲಿ ಮೇಲಿನ ಭಾಗದಲ್ಲಿ ಸಿದ್ಧರಾಮನು ಬಸವಣ್ಣನ ಮನೆಯನ್ನು ಪ್ರವೇಶಿಸಬೇಕಾದರೆ ಭವಿಗಳಾಗಿರಬಾರದು. ಕೊರಳಲ್ಲಿ ಲಿಂಗ ಬೇಕೆಂದು ತಡೆದಾಗ, ಸಿದ್ಧರಾಮನು ತನ್ನ ತಲೆಯಲ್ಲಿಯ ಕೂದಲುಗಳನ್ನು ಬಿಚ್ಚಿ ತಲೆ ಜಾಡಿಸಿದಾಗ ಕೂದಲುಗಳಿಂದ ಲಿಂಗವೆಲ್ಲಾ ಉದುರುವವು. ಚೆನ್ನಬಸವನು ಅದನ್ನು ನೋಡಿ, ನಮಗೆ ಈ ಲಿಂಗ ಬೇಡ, ಗುರು ಕರುಣಿಸಿದ ಲಿಂಗ ಕೇಳುತ್ತಿರುವೆನು ಎನ್ನುತ್ತಾನೆ. ಆ ಲಿಂಗಗಳೆಲ್ಲಾ ಉದುರಿರುವುದನ್ನು ಕೇಳಿ ಬಲಗಡೆಯಲ್ಲಿ ಭಕ್ತರು ಕೈಮುಗಿದು ನಿಂತಿರುವ ದೃಶ್ಯ ಮೇಲಿನ ಚಿತ್ರದಲ್ಲಿ ಕಂಡುಬರುತ್ತದೆ. ಕೆಳಗಿನ ಭಾಗದಲ್ಲಿ ಚೆನ್ನಬಸವಣ್ಣ ಸಿದ್ಧರಾಮನನ್ನು ತಡೆದು ನಿನ್ನ ಇಷ್ಟಲಿಂಗವೊಂದನ್ನು ಗುರು ಕರುಣಿಸಿದ್ದನ್ನು ತೋರಿಸು ಎನಲು, ಇದಲ್ಲವೆಂದು ಹೇಳಲು, ನೀವೇ ನನ್ನ ಗುರುವಾಗಿ ಇಷ್ಟಲಿಂಗವನ್ನು ಕರುಣಿಸಿ ಎಂದು ಕೇಳಿಕೊಳ್ಳುತ್ತಲಿರುವ ಸಿದ್ಧರಾಮ. ಅವನ ಹಿಂದುಗಡೆ ಮತ್ತು ಬಲಗಡೆಯ ತುದಿಯಲ್ಲಿರುವವರು. ಈ ದೃಶ್ಯವನ್ನು ಆಶ್ಚರ್ಯದಿಂದ ತಮ್ಮೆರಡೂ ಕೈಮುಗಿದುಕೊಂಡು ಇವರೀರ್ವರ ವಾದ-ವಿವಾದಗಳನ್ನು ನೋಡುತ್ತಿರುವಂತೆ ಚಿತ್ರಿಸಲಾಗಿದೆ.

**೨೦. ಚೆನ್ನಬಸವಣ್ಣ ಸಿದ್ಧರಾಮನಿಗೆ ಲಿಂಗದೀಕ್ಷೆ ನೀಡುತ್ತಿರುವುದು :**

ಪದಿನಾರು ಕಂಬದಿಂದ ರಚಿಸಿದ ಚಪ್ಪರವ ಅದರೊಳಗೆ ಕಟ್ಟಿ ರುದ್ರಾಕ್ಷಿಮಂಟಪದ ಬಸವಣ್ಣನಾದಿಗಣ ಪರಿವಾರಕೆ ದೆಸೆನಾಲ್ಕರೊಳು ನಿಲ್ಲಿಸಿ ಮಂತ್ರನಿಷ್ಠೆಗೆ ಪ್ರಭುದೇವನೆ ಸಾಕ್ಷಿ, ಜಂಗಮರದಾಗೆ ಶುಭ ಕಾರ್ಯಗಳೆಸಗಿ ಸಿದ್ಧರಾಮನಿಗೆ ಪರತತ್ವ ಶಿವತತ್ವ ಕಳಶವಾರ್‌ನಿಲಿಸಿ ತರವಿಡಿದಳೆಯ ಸುತ್ತಿ ಪಾತ್ರೆಗಳ ಧರಿಸಿ ಅಪವಿತ್ರ ಪವಿತ್ರವೆಂದು ಪಠಿಸುತ್ತ ಜಪಹೋಮನೇಮದಿಂ ಶಿವನರ್ಚಿಸುತ ಅಷ್ಟುರಿಗೂ ಸಾಸ್ಟಾಂಗವೆರಗಿ ಸಿದ್ಧರಾಮಯ್ಯ ಇಷ್ಟಲಿಂಗವ ಬೇಡ ಚೆನ್ನಬಸವಯ್ಯ. ಲಿಂಗವನ್ನು ಧರಿಸಿ ಪಂಚಾಕ್ಷರಿಯನರುಹಿ ಕಂಗಳಗ್ರದ ಮೇಲೆ ವಿಭೂತಿಯನ್ನು ಧರಿಸಿ ಸ್ಥಿರವೆಂದು ಮಸ್ತಕದೆ ಹಸ್ತವನ್ನಿರಿಸೆ ಕರುಣದಿಂದ ಸಿದ್ಧರಾಮಗೆ.[೧೦೦]

ಈ ಕಲಾಕೃತಿಯಲ್ಲಿ ಶಾಸ್ತ್ರೋಕ್ತವಾದ ಇಷ್ಟಲಿಂಗ ದೀಕ್ಷೆಯನ್ನು ಚೆನ್ನಬಸವಣ್ಣನು ಸಿದ್ಧರಾಮಯ್ಯನಿಗೆ ನೀಡುತ್ತಿರುವ ದೃಶ್ಯವನ್ನು ಮಾಡಲಾಗಿದೆ. ಮೇಲಿನ ಭಾಗದಲ್ಲಿ ಐದು ಬಾಗಿಲುಗಳುಳ್ಳ ಐದು ಕಮಾನುಗಳನ್ನು ರಚಿಸಿದ್ದು, ೧೪ ಕಂಬಗಳು ಇವೆ. ಮಧ್ಯಭಾಗದಲ್ಲಿ ಸಿದ್ಧರಾಮಯ್ಯನು ಪೀಠವೊಂದರ ಮೇಲೆ ಕುಳಿತಿದ್ದು,

---

೯೯. ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು:ಸಂ: ವೃಷಭೇಂದ್ರ ವಿಳಾಸ. ೧ನೇ ಸಂಧಿ. ಚಿತ್ರ ೩೧೪. ಪು. ೧೬೪

೧೦೦. ಅದೇ: ೧ನೇ ಸಂಧಿ, ಚಿತ್ರ ೩೨೯, ಪು. ೧೬೭

ಅವನ ತಲೆಯ ಮೇಲೆ ಚೆನ್ನಬಸವಣ್ಣ ಹಸ್ತವನ್ನಿಟ್ಟು (ಆಶೀರ್ವದಿಸುವ) ಗುರುದೀಕ್ಷೆಯನ್ನು ನೀಡುವ ಸನ್ನಿವೇಶದ ಚಿತ್ರವಿದ್ದು, ಈ ಮಂಟಪದ ಎದುರುಗಡೆಯಲ್ಲಿ ಪೂಜಾಸಾಮಗ್ರಿಗಳನ್ನು ಚಿತ್ರಿಸಲಾಗಿದೆ. ಪಂಚಕಳಸವನ್ನು ಹೂಡಲಾಗಿದೆ. ಈ ಮಂಟಪದ ಬಲಗಡೆಯ ಮೇಲ್ಭಾಗದಲ್ಲಿ ಅಲ್ಲಮಪ್ರಭು ಬಸವೇಶ್ವರರನ್ನು ಚಿತ್ರಿಸಲಾಗಿದೆ. ಬಲಗಡೆಯಲ್ಲಿ ಈ ದೃಶ್ಯದ ಕೆಳಗಡೆ ಮಹಿಳೆಯರೀರ್ವರು ಫಲಪುಷ್ಪದ ಬುಟ್ಟಿಗಳನ್ನು ಹಿಡಿದು ನಿಂತಿರುವರು. ಅಂತೆಯೇ ಎಡಗಡೆ ಭಾಗದಲ್ಲಿ ಎರಡು ಭಾಗಗಳಿದ್ದು, ಮೇಲ್ಗಡೆ ಶರಣರೆಲ್ಲ ಕುಳಿತುಕೊಂಡು ಈ ದೀಕ್ಷಾ ಸಮಾರಂಭವನ್ನು ವೀಕ್ಷಿಸುತ್ತಿರುವರು. ಅದರ ಕೆಳಗಡೆಯ ಭಾಗದಲ್ಲಿ ಇಬ್ಬರು ಮಹಿಳೆಯರು ಫಲಪುಷ್ಪದ ಬುಟ್ಟಿಯನ್ನು ಹಿಡಿದುಕೊಂಡು ನಿಂತಿರುವ ದೃಶ್ಯವಿದೆ. ಇನ್ನು ಮಂಟಪದ ಕೆಳಭಾಗದ ಸಾಲಿನಲ್ಲಿ ಮಧ್ಯದಲ್ಲಿ ಅಗ್ನಿಕುಂಡ, ಹಣ್ಣಿನ ಬುಟ್ಟಿ ಇದ್ದು, ಅದರ ಬಲಭಾಗದಲ್ಲಿ ನಾಲ್ಕು ಜನರಿದ್ದು ಮೂರು ಜನ ಕೈಮೇಲೆತ್ತಿ ಏನನ್ನೋ ಹೇಳುತ್ತಿದ್ದು, ಒಬ್ಬನು ಅದನ್ನು ನೋಡುತ್ತಾ ಕುಳಿತಿರುವನು. ಎಡಬಾಗದಲ್ಲಿ ಮೂವರು ಬಲಗೈಮೇಲೆತ್ತಿ ಏನನ್ನೋ ಹೇಳುತ್ತಿದ್ದುದು ಕಂಡುಬರುತ್ತದೆ. ಇನ್ನೂ ಪೂರ್ಣ ಕೆಳಗಿನ ಭಾಗದ ಮಧ್ಯದಲ್ಲಿ ಬಾಗಿಲು ಇದ್ದು, ಅದನ್ನು ತೆಗೆದುಬಿಡಲಾಗಿದೆ. ಈ ಬಾಗಿಲ ಎಡ-ಬಲಭಾಗಗಳಲ್ಲಿ ೪ ಶಿವಧ್ವಜಗಳನ್ನು ನಿಲ್ಲಿಸುತ್ತಿರುವ ಶರಣರಿರುವರು. ವೇದಿಕೆಗೆ ಹೋಗಲು ಎಡಬಲಗಳಲ್ಲಿ ಮೆಟ್ಟಿಲುಗಳನ್ನು ಮಾಡಲಾಗಿದೆ. ಕಟ್ಟೆಗೆ ಕಟಾಂಜನ ಮಾಡಲಾಗಿದೆ. ಈ ಎಲ್ಲ ಸಂಯೋಜನೆಯು ಶಾಸ್ತ್ರೋಕ್ತವಾಗಿ ಸುಂದರವಾಗಿ ಮೂಡಿಬಂದಿದೆ.

**೨೧. ಬಸವಣ್ಣನು ಕೂಡಲಸಂಗಮದಲ್ಲಿ ಲಿಂಗೈಕ್ಯನಾಗುವುದು :**

ಕಂಡೆನೆಂಬಡೆ ಕಾಣೆನೆಂಬಡೆ ನಿನ್ನನು ಸಂಗಮೇಶ, ಅಂಡಪಿಂಡಾದಿಗನಾದಿಯಾಗಿರುವೆನೆ ಸಂಗಮೇಶ, ಮಾನಸಾಂತ್ಯದಿ ಮನೆ ಮಾಡಿಕೊಂಡಿರುವೆನೆ ಸಂಗಮೇಶ, ಏನೊಂದಿಲ್ಲದ ಜಗತಾನೇ ತಾನಾದನೆ ಸಂಗಮೇಶ. ಮೂರು ಕೋಣಿಯ ಮೇಲೆ ಮೂಡಿ ತೇಜಿಸುವನೆ ಸಂಗಮೇಶ. ಆರು ವರ್ಣಗಳಿಲ್ಲದಣು ಘನಮಹಿಮನೆ ಸಂಗಮೇಶ. ಎನ್ನೊಳು ನೀನಿರ್ದೆ ಪರಮಾತ್ಮಲಿಂಗವೆ ಸಂಗಮೇಶ, ನಿನ್ನೊಳಗಿಂಬಿಟ್ಟುಕೋಯೆಂದು ಬೇಡುವೆ ಸಂಗಮೇಶ. ಈ ರೀತಿಯಾಗಿ ಹೇಳುತಿರಲು ಲಿಂಗ ಬಾಯ್ದೆರೆಯಲು ನೀರು ಬೆರೆಯಲು ಕಪ್ಪುರದುರಿಯು ಪೂರವಿಸಿದಂತೆ ನಿರ್ವಯಲಾಗೆ ಕೈಲಾಸದ್ವಾರದೋಳ್ ಪ್ರಮಥರೊಡನೆ.[೧೧೧]

ಈ ಕಲಾಕೃತಿಯಲ್ಲಿ ಸಂಕೇತ ಪ್ರಧಾನವಾದ ಕಟ್ಟಡವನ್ನು ಹೊಂದಿದ್ದು, ಬಾಗಿಲದ ಮಧ್ಯದಲ್ಲಿರುವ ನೀಲಿವರ್ಣದ ಲಿಂಗವು ಬಾಯ್ದೆರೆದಿದ್ದು, ಅದರ ಮಧ್ಯದಲ್ಲಿ ಬಸವೇಶ ಐಕ್ಯನಾಗುತ್ತಿರುವ ದೃಶ್ಯವನ್ನು ಕಲಾವಿದ ಸುಂದರವಾಗಿ ಮೂಡಿಸಿರುವನು. ಎಡಗೈಯಲ್ಲಿ ಇಷ್ಟಲಿಂಗ, ಬಲಗೈಯಿಂದ ಅಭಯಮುದ್ರೆಯನ್ನು ತೋರುತ್ತಿದ್ದು, ಸಂಗಮನಾಥನಲ್ಲಿ ಬಸವೇಶ್ವರರು ಲಿಂಗೈಕ್ಯರಾಗುತ್ತಿರುವ ಸನ್ನಿವೇಶವನ್ನು ಸೃಷ್ಟಿಸಲಾಗಿದೆ.

---

೧೧೧. ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು, ವೃಷಭೇಂದ್ರ ವಿಳಾಸ, ೨ನೇ ಸಂಧಿ, ಚಿತ್ರ ೨೪೯. ಪು. ೨೯೩

**೨೨. ವೀರಶೈವವ ಕಾಯ್ದು ದೇವಲೋಕಕ್ಕೆ ಬಂದ ಬಸವಣ್ಣ :**

ಶಿವನ ಒಡ್ಡೋಲಗಕ್ಕೆ ಬಂದ ಬಸವಣ್ಣ, ಗೌರೀಶನು ಜಗದ ಜಂಜಡಕ್ಕೆ ಸೇರದೇ ವೀರಶೈವವನ್ನು ಕಾಯ್ದು ನಮ್ಮ ಬಳಿ ಬಂದೆ ನಂದಿ ಎಂದು ಸಂತೈಸುತ್ತ ಗುರು ಸಂಗಮೇಶನಿರಲು ಮಂಗಳವಾಡಿಗೆ ಬಂದು ಸಂಗಮಲಿಂಗವದೊಳೈಕ್ಯವಡದಾ ಮಹಿಯೋತ್ತುಂಗ ವೃಷಭನಿಗೆ ಮುಂದಿನ ಸಂಗತಿಯೇನೆಂಬೆ ಶಿವೈಕ್ಯನಗರದೋಳ್ ಮಂಗಳಾರತಿ ತಂದೆತ್ತಿರೆ ಗುರು ಸಂಗಮಪ್ರಭು ಚೆನ್ನಬಸವಗೆ ಕಲ್ಯಾಣವನು ಪೊಕ್ಕು ಪವಾಡವನು ಗೆದ್ದ ಮುದ್ದು ಶ್ರೀ ಬಸವೇಶಗೆ.[೧೦೨]

ಈ ಕಲಾಕೃತಿಯಲ್ಲಿ ಕೈಲಾಸಪರ್ವತದ ಸಿಂಹಾಸನಾರೂಢನಾದ ಶಿವ-ಪಾರ್ವತಿಯರು, ಅವರ ಬಲಬದಿಗೆ ನಂದೀಶ ಮತ್ತು ಶಿವಶರಣರಿರುವರು. ಎಡಬದಿಯಲ್ಲಿ ಗಣಪತಿ, ಗರುಡ, ಭೃಂಗಿಋಷಿಗಳಿರುವರು. ಈ ಸಂಯೋಜನೆಯಲ್ಲಿ ನಂದಿಯೊಂದಿಗೆ ಶಿವಶರಣರನ್ನು ಚಿತ್ರಿಸಿದ್ದು ಇವರಿಗೆ ಬಟ್ಟೆಗಳಿಲ್ಲದೆ ಬೆತ್ತಲೆಯಾಗಿಯೇ ತೋರಿಸಿದ್ದು ವಿಶೇಷವಾಗಿದೆ. ತ್ರಿಪುಂಡ್ರಭಸ್ಮವನ್ನು ಧರಿಸಿದ್ದು, ಕೊರಳಲ್ಲಿ ಕರಡಗಿ ಮತ್ತು ರುದ್ರಾಕ್ಷಿಯ ಸರವನ್ನು ಧರಿಸಿರುವರು. ಅವರೊಂದಿಗೆ ಕಿರೀಟಧಾರಿಯಾಗಿರುವ ನಂದೀಶ ಕೆಂಪುಪಂಚೆ, ಹಸಿರುವರ್ಣದ ಶಲ್ಯವನ್ನು ಹಾಕಿಕೊಂಡು ತನ್ನೆರಡೂ ಕೈಗಳನ್ನು ಮುಗಿದುಕೊಂಡು ಶಿವ-ಪಾರ್ವತಿಯರನ್ನು ನೋಡುತ್ತ ನಿಂತಿರುವನು.

**೨೩. ಶರಣರ ರಕ್ಷಣೆಗೆ ನಿಂತ ಮಡಿವಾಳ ಮಾಚಯ್ಯ :**

ವೀರೋಕ್ತಿಯೊಳು ಮಾಚಿಯು ಘನದಿ ನುಡಿಯೇ ಸವಾಯಿ ಲಕ್ಷಾಶ್ವನಘಬಲ ಮುಸುಕಿತ್ತು ಶರಣರೊಳಗೆ ಚೆನ್ನಬಸವೇಶ್ವರನ ಬಿರುದಿನ ಪನ್ನೆರಡುಸಾವಿರ ವಜೀರರು ವೀರಮಾಚಿ ಕೂಗಿನಾ ಮಾರಿಯಯ್ಯನು ಸಾರಿ ಕಿನ್ನರಯ್ಯನಾಗ ಭೂರಿಕೋಪದಿ ಶೂಲದಾಬೊಮ್ಮಿತಂದೆ ಶೂಲವಿಡಿಯುತ ಮೇಲೆ ಕೋಪವಂ ಕಕ್ಕಯ್ಯ ಓರುವರನು ಕೊಡದೆ ರಣದಿ ಮೂರು ಗಾವುದಸಾರಿ ಬರಲು ಶರಣ ಬಲಕೆ ಧೀರುರೆಂದನು ಚೆನ್ನಬಸವ ಕೇಳು ನಾನಿನ್ನು ದಕ್ಷನ ಮುನ್ನ ತರಿದ ಈ ರೂಪ ಧರಿಪೆನೆನ್ನುತಾಕ್ಷಣ.[೧೦೩] ಈ ಕಲಾಕೃತಿಯಲ್ಲಿ ಮೇಲಿನ ಭಾಗದಲ್ಲಿ ಮಡಿವಾಳ ಮಾಚಿದೇವ ಖಡ್ಗವನ್ನು ಹಿಡಿದು ಸೈನಿಕರೊಂದಿಗೆ ಯುದ್ಧದಲ್ಲಿ ನಿರತನಾಗಿರುವನು. ಇವನ ಹಿಂದುಗಡೆ ಶರಣರ ದಂಡೇ ಬೆನ್ನತ್ತಿದೆ. ಬಿಜ್ಜಳನ ಅಳಿಯನ ನೇತೃತ್ವದ ಸೈನ್ಯ ಕುದುರೆಯನ್ನೇರಿ ಬರುತ್ತಿರುವದು. ಘನಘೋರ ಯುದ್ಧವು ನಡೆಯಲು ಮಡಿವಾಳ ಮಾಚಿದೇವನು ಚೆನ್ನಬಸವಣ್ಣನಿಗೆ ನಾನು ಮೊದಲಿನ ವೇಷ ಧರಿಸುವೆನೆಂದು ಹೇಳಿದನು. ಈ ಕಲಾಕೃತಿಯು ಕೆಳಗಿನ ಭಾಗದಲ್ಲಿದೆ. ಮಡಿವಾಳ ಮಾಚಿದೇವ ವೀರಭದ್ರನ ಅವತಾರವನ್ನು ತಾಳಿ ಚೆನ್ನಬಸವನಿಗೆ ಸಮಾಧಾನ ಮಾಡುತ್ತಲಿದ್ದು, ಚೆನ್ನಬಸವನು ತನ್ನೆರಡೂ ಕೈಗಳನ್ನು ಮುಗಿದು ನಿಂತಿರುವ ದೃಶ್ಯ ಕೆಳಗಿದೆ. ಮಡಿವಾಳ ಮಾಚಿದೇವನು ವೀರಭದ್ರನ ಅವತಾರವನ್ನು ತಾಳಿ, ೮

---

೧೦೨. ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು:ಸಂ: ವೃಷಭೇಂದ್ರ ವಿಳಾಸ, ೨ನೇ ಸಂಧಿ, ಚಿತ್ರ ೨೫೦, ಪು. ೨೯೪

೧೦೩. ಅದೇ : ೩ನೇ ಸಂಧಿ, ಚಿತ್ರ ೨೫೦, ಪು. ೩೭೫

ಕೈಗಳನ್ನು ಹೊಂದಿದ್ದು, ಬಲಗಡೆಯಲ್ಲಿ ತ್ರಿಶೂಲ, ಖಡ್ಗ, ಬಿಲ್ಲು, ಬತ್ತಳಿಕೆ, ಅಂಕುಶಗಳನ್ನು ಒಂದೊಂದು ಕೈಗಳಲ್ಲಿ ಹಿಡಿದುಕೊಂಡಿರುವವನು. ಅವನು ಕಿರೀಟವನ್ನು ಹೊಂದಿದ್ದು, ಅದರ ಹಿಂದುಗಡೆ ಅಗ್ನಿಯನ್ನು ತೋರಿಸಲಾಗಿದೆ. ವಿರೋಧಿಗಳನ್ನು ಸುಡುವ ಸಂಕೇತವನ್ನು ತೋರಿಸಲಾಗಿದೆ. ಈ ಸಂಯೋಜನೆಯಲ್ಲಿ ವ್ಯಕ್ತಿಗಳಲ್ಲಿಯ ವೀರತನ, ಆವೇಶ, ರೋಷಗಳು ಚೆನ್ನಾಗಿ ಚಿತ್ರಿತಗೊಂಡಿವೆ.

**೨೪. ಚೆನ್ನಬಸವಣ್ಣ, ಮೋಳಿಗೆಯ ಮಾರಯ್ಯ, ಸೊಡ್ಡಳ ಬಾಚರಸ ಕೈಲಾಸಕ್ಕೆ ತೆರಳುತ್ತಿರುವುದು :**

ದಯವೆತ್ತು ಸೊಡ್ಡಳಬಾಚರಸ ಬಾರೆಂದು ಪಯಣವಾಗಲು ಶಿವನ ಸನ್ನಿಧಿಗೆ ಸುವಿಭೂತಿ ಮಯದುಯ್ಯಾಲಯ ಕಟ್ಟಿತೂಗಿಬಿಡಿ ಶರಣಗಣ ಪೋಗಬೇಕೀಕ್ಷಣದೊಳು ಸಿದ್ಧಗಿರಿ ಶಿಖರದೊಳಗೊಪ್ಪಿರೆ ಬದ್ಧಗೊಳಿಸೀ ಶಾಸನ ದಿಸೆಯೊಳು ಪದ್ದಿರುವ ವಟಿಕುಟದ ಕೊನೆಗೆ ವಿಭೂತಿ ತೊಟ್ಟಿಲನು ಶುದ್ಧಮಾದ ಸ್ವರ್ಣ ಸರಪಣಿ ಯುದ್ದನಿಸಿ ಬಿಗಿಯುತ್ತ ಪ್ರಮಥರದ್ಧಿಕೆಯೊಳಿರಲಂಬರದಿ ಸೋಮೆಶ ನೋಡುತಿರೆ, ಶರಣರನ್ನು ಆ ತೊಟ್ಟಿಲಲ್ಲಿ ಕೂಡ್ರಿಸಿ ಚೆನ್ನಬಸವ, ಮೋಳಿಗೆಯ ಮಾರಯ್ಯ, ಸುನ್ನತರುದ್ರಮುನಿ, ಸೊಡ್ಡಳಬಾಚರಸ, ಚೆನ್ನಮಲ್ಲಿಕಾರ್ಜುನಯ್ಯ ಇವರು ಪುಷ್ಪಕದೊಳಂದು ಕೈಲಾಸಕ್ಕೆ ತೂಗಿದರು. ನಂತರ ಚೆನ್ನಬಸವಣ್ಣನು ರುದ್ರಮುನಿಗೆ ರೇಚಾರ್ಯರಿಗೆ ವೀಳ್ಯವ ಕೊಡುವಂದು ಕಾರಣ ಹರಣಗಿರಿಯೊಳಗೆ ಪರಿಶೋಧಿಸುವರು. ಈಗ ಅವರು ಧರೆಯೊಳಗೆ ಉಳಿಯಲಿ ಕರಿಯಲೆಯಲ್ಲಿ ಬರೆದು ಮಡಿಚಿ ರುದ್ರಮುನಿಗೆ ಮುಟ್ಟಿಸಲು ಕೊಟ್ಟು ಹೊರಟರು. ಉನ್ನತಭೂತಿಯತೊಟ್ಟಿಲವನ್ನು ಚೆನ್ನಬಸವಣ್ಣ, ಮೋಳಿಗೆಯ ಮಾರಯ್ಯ, ಸೊಡ್ಡಳ ಬಾಚರಸರು ಹತ್ತಿದರು. ಆ ತೊಟ್ಟಿಲವನ್ನು ರುದ್ರಮುನಿ, ಮಲ್ಲಿಕಾರ್ಜುನರು ಕೈಲಾಸಕೆ ತೂಗಿದರು.[೧೦೪] ಶಿವನಗರಿಗೆ ದಕ್ಷಿಣದ ಬಾಗಿಲು ಉಳುವೆ ಮನೆಯು ಎಂದರು.

ಈ ಕಲಾಕೃತಿಯಲ್ಲಿ ಮರವೊಂದರ ರೆಂಬೆಗೆ ಉನ್ನತಭೂತಿಯ ತೊಟ್ಟಿಲನ್ನು ಕಟ್ಟಲಾಗಿದ್ದು, ಆ ತೊಟ್ಟಿಲಲ್ಲಿ ಚೆನ್ನಬಸವಣ್ಣ, ಮೋಳಿಗೆಯ ಮಾರಯ್ಯ, ಸೊಡ್ಡಳ ಬಾಚರಸರು ಕುಳಿತಿರುವರು. ತೊಟ್ಟಿಲನ್ನು ತೂಗಲು ಎರಡೂ ಬದಿಗೆ ರುದ್ರಮುನಿಗಳು ಮತ್ತು ಮಲ್ಲಿಕಾರ್ಜುನರು ನಿಂತುಕೊಂಡಿದ್ದು, ಒಬ್ಬರಿಗೊಬ್ಬರು ಮುಖನೋಡುತ್ತ ತೂಗಲು ಸಿದ್ದರಾಗಿರುವರು. ಬೆಟ್ಟ-ಗುಡ್ಡಗಳಿಂದ ಕೂಡಿದಂತೆ ಈ ಪ್ರದೇಶವಿದ್ದು, ಸಾಕಷ್ಟು ಮರಗಳನ್ನು ಮಾಡಿರುವರು. ಈ ದೃಶ್ಯವು ನಿಸರ್ಗಮಯವಾಗಿ ಮೂಡಿಬಂದಿದೆ.

**೨೫. ಶಿವನ ಒಡ್ಡೋಲಗದಲ್ಲಿ ಕಲ್ಯಾಣದ ಪ್ರಮುಖ ಶಿವಶರಣರು :**

ಈ ಕಲಾಕೃತಿಯಲ್ಲಿ ಕೈಲಾಸಪರ್ವತದಲ್ಲಿ ಶಿವ-ಪಾರ್ವತಿಯರು ಸಿಂಹಾಸನಾರೂಢರಾಗಿದ್ದು, ಷಣ್ಮುಖ ಗಣೇಶರೊಂದಿಗೆ ಬಸವ, ಚೆನ್ನಬಸವ, ಮಡಿವಾಳ ಮಾಚಿರಸ, ಮೋಳಿಗೆಯ ಮಾರಯ್ಯ, ಸೊಡ್ಡಳ ಬಾಚರಸ, ಹೀಗೆ ಕಲ್ಯಾಣದ ಪ್ರಮುಖ ಶರಣರನ್ನೆಲ್ಲ ಈ ಶಿವನ ಒಡ್ಡೋಲಗದಲ್ಲಿ ತೋರಿಸಲಾಗಿದೆ.[೧೦೫] ಋಷಿಯೋರ್ವರು

---

೧೦೪. ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು:ಸಂ: ವೃಷಭೇಂದ್ರ ವಿಳಾಸ, ೩ನೇ ಸಂಧಿ, ಚಿತ್ರ ೨೯೯, ಪು. ೩೯೫

೧೦೫. ಅದೇ : ೪ನೇ ಸಂಧಿ, ಚಿತ್ರ ೪೩೭, ಪು. ೭೬ ರಿಂದ ೮೩.

ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
ವೃಷಭೇಂದ್ರವಿಲಾಸದ ಜನಪದ ಶಿಷ್ಟಪರಂಪರೆಯ ಚಿತ್ರಕಲೆ



೧. ನೃಪನು ವೃಷಭನ ಇಷ್ಟಲಿಂಗವನ್ನು ತೆಗೆದುಕೊಳ್ಳುವುದು



೨. ನೃಪನು ಇಷ್ಟಲಿಂಗದೊಂದಿಗೆ ಭೂಮಿಯಲ್ಲಿ ಐಕ್ಯನಾಗುವುದು



೩. ವೃಷಭನ ಕೊರಳಲ್ಲಿ ಲಿಂಗವಿಲ್ಲದ್ದನು ನೋಡಿ ಬಾಗಿಲಲ್ಲಿ ತಡೆದ ಕಾಪಿಗ

## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೃಷಭೇಂದ್ರವಿಳಾಸದ ಜನಪದ ಶಿಷ್ಟಪರಂಪರೆಯ ಚಿತ್ರಕಲೆ



ಆ. ಶಿವನ ಓಲಗದಲ್ಲಿ ನಂದಿ ಇಲ್ಲದಿರುವ ಕುರಿತು ವಿಚಾರಣೆ



ಇ. ಕಾಪಿಗನಿಗೆ ಭವಿಯಾಗಿ ಭುವಿಯಲ್ಲಿ ಬಿಜ್ಜಳನಾಗೆಂದ ಶಿವ



ಈ. ನಂದಿಗೆ ದ್ವಿತೀಯ ಶಂಭುವಾಗಿ ಕಲ್ಯಾಣದಲ್ಲಿರೆಂದು ತಿಳಿಸಿದ ಶಿವ



೭. ನಾರದನಿಗೆ ಕಲ್ಯಾಣದಲ್ಲಿ ಕೊಂಡೆಮಂಚಣ್ಣನಾಗಿರಲು ತಿಳಿಸಿದ ಶಿವ



೮. ವೀರಭದ್ರನಿಗೆ ಮಡಿವಾಳ ಮಾಚಯ್ಯನಾಗಿರುವಂತೆ ತಿಳಿಸಿದ ಶಿವ



೯. ಗಂಗೆಗೆ ಬಸವೇಶನರಿಸಿಯಾಗೆಂದ ಶಿವ



೧೦. ಮಾದಲಾಂಬಿಕೆ ಪುತ್ರರಿಲ್ಲೆಂದು ನಂದೀವ್ರತ ಮಾಡುತ್ತಿರುವುದು



೧೧. ಮಾದಲಾಂಬಿಕೆಯ ಕನಸಿನಂತೆ ಗರ್ಭವತಿಯಾದ ಸನ್ನಿವೇಶ



೧೨. ವಿಶ್ವಗುರು ಸಂಗಮೇಶನು ಇಷ್ಟಲಿಂಗವನ್ನು ಕಟ್ಟಿ ಆಶೀರ್ವಧಿಸುವುದು



೧೩. ಕೂಡಲಸಂಗಮನ ಆಜ್ಞೆಯಂತೆ ಕಲ್ಯಾಣಕ್ಕೆ ಹೋರಟ ಬಸವೇಶ



೧೪. ಕಲ್ಯಾಣಕ್ಕೆ ಹೋರಟ ಬಸವೇಶನ ಪರಿವಾರ

## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೃಷಭೇಂದ್ರವಿಳಾಸದ ಜನಪದ ಶಿಷ್ಟಪರಂಪರೆಯ ಚಿತ್ರಕಲೆ



೧೬. ಬಸವಣ್ಣ ಬ್ರಾಹ್ಮಿಲಿಪಿ ಓದಿ ಹೇಳುತ್ತಿರುವುದು



೧೭. ಭೂಮಿಯಲ್ಲಿ ರತ್ನಸಿಂಹಾಸನ ಮತ್ತು ಏಳು ಕುಪ್ಪರಿಗೆಗಳು



೧೮. ಬಸವೇಶನಿದೇನಾಶ್ಚರ್ಯಬಸುರಾದಳಂತೆ ನಿಮ್ಮಕ್ಕನಾಗಮ್ಮ ಅದಕ್ಕುತ್ತರಿಸಿತು ಗರ್ಭಶಿಶು



೧೮. ಚೆನ್ನಬಸವಣ್ಣನ ಜನನ


# ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## ವೃಷಭೇಂದ್ರವಿಳಾಸದ ಜನಪದ ಶಿಷ್ಟಪರಂಪರೆಯ ಚಿತ್ರಕಲೆ



೧೯. ಸಂಗಮನಾಥನೊಂದಿಗೆ ಚೆನ್ನಬಸವಣ್ಣ




೨೦. ಇಷ್ಟಲಿಂಗವಿಲ್ಲದ್ದನ್ನು ಪ್ರಶ್ನಿಸಿದ ಚನ್ನಬಸವಣ್ಣ




೨೧. ಮೈಯಲ್ಲೆಲ್ಲಾ ಲಿಂಗವಿರುವುದನ್ನು ತೋರಿಸಿದ ಸಿದ್ಧರಾಮ



೨೨. ಚೆನ್ನಬಸವಣ್ಣ ಸಿದ್ಧರಾಮನಿಗೆ ಲಿಂಗದೀಕ್ಷೆ ನೀಡುತ್ತಿರುವುದು



೨೩. ಬಸವಣ್ಣನು ಕೂಡಲಸಂಗಮದಲ್ಲಿ ಲಿಂಗೈಕ್ಯನಾಗುವುದು



೨೪. ವೀರಶೈವ ಕಾಯ್ದು ದೇವಲೋಕಕ್ಕೆ ಬಂದ ಬಸವಣ್ಣ



೨೫. ಶರಣರ ರಕ್ಷಣೆಗೇ ನಿಂತ ಮಡಿವಾಳ ಮಾಚಯ್ಯ



೨೬. ತನ್ನ ಮೊದಲಿನ ರೂಪ ಚನ್ನಬಸವಣ್ಣನಿಗೆ ತೋರಿಸುವುದು



೨೬. ಚೆನ್ನಬಸವಣ್ಣ ಮೋಳಿಗೆಯಮಾರಯ್ಯ ಸೊಡ್ಡಳಬಾಚರಸರು
ಕೈಲಾಸಕ್ಕೆ ಹೊರಟಿರುವುದು



೨೭. ಕಲ್ಯಾಣದ ಪ್ರಮುಖ ಶರಣರೆಲ್ಲ ಶಿವನ ಒಡ್ಡೋಲಗದಲ್ಲಿರುವುದು

ಭೂಲೋಕದಿಂದ ಬಂದ ಶರಣರಿಗೆ ಆಶೀರ್ವದಿಸುತ್ತಿದ್ದು, ಈ ಚಿತ್ರದ ಮುಂಬದಿಯಲ್ಲಿ ದ್ವಾರಬಾಗಿಲುವೊಂದಿದ್ದು, ಎಡಬಲಗಳಲ್ಲಿ ದ್ವಾರಪಾಲಕರಿರುವರು.

**ಚೆನ್ನಬಸವಪುರಾಣ**

**ಚೆನ್ನಬಸವಪುರಾಣ: (ಧಾರವಾಡ ವಿಭಾಗದ ಪ್ರತಿ):**

– ವಿರೂಪಾಕ್ಷ ಪಂಡಿತ : (ಕವಿ, ಸ್ಥಾನ, ಕಾಲ, ಮತ ಇತ್ಯಾದಿ)

ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯವರು ವೀರಶೈವ ವಾಙ್ಮಯವನ್ನು ಪ್ರಸಾರಗೊಳಿಸುವ ಉದ್ದೇಶದಿಂದ ಸನ್ ೧೯೨೯ ನೆಯ ಇಸ್ವಿಯಲ್ಲಿ ವಾಙ್ಮಯ ಶಾಖೆಯೊಂದನ್ನು ಏರ್ಪಡಿಸಿದರು. ವಾಙ್ಮಯವನ್ನು ಪ್ರಸಾರ ಮಾಡುವ ಅನೇಕ ಸಾಧನಗಳಲ್ಲಿ ಪುರಾತನ ಗ್ರಂಥಗಳನ್ನು ಪರಿಶೋಧಿಸಿ ಚೆನ್ನಾಗಿ ಅಚ್ಚು ಮಾಡಿಸುವುದು ಒಂದಾಗಿರುವುದು. ಈ ಹಿನ್ನೆಲೆಯಲ್ಲಿ ವಾಙ್ಮಯ ಶಾಖೆಯವರು ವಿಜಯನಗರದ ವಿರೂಪಾಕ್ಷ ಪಂಡಿತನಿಂದ ರಚಿತವಾದ ಚೆನ್ನಬಸವ ಪುರಾಣವನ್ನು ಪ್ರಸಿದ್ಧಿಸುವ ಕಾರ್ಯವನ್ನು ೧೯೩೨ ನೆಯ ಇಸ್ವಿಯಲ್ಲಿ ಆರಂಭಿಸಿದರು. ಈ ಗ್ರಂಥವನ್ನೇ ಮೊದಲು ಪ್ರಸಿದ್ಧಿಸಲು ಹಲವು ಕಾರಣಗಳುಂಟು. ಇದರಲ್ಲಿ ವೀರಶೈವ ಮತತತ್ವಗಳೂ, ಪರಶಿವನ ಲೀಲೆಗಳೂ ಸಾಮಾನ್ಯ ಜನರಿಗೆ ತಿಳಿಯುವಂತೆ ವರ್ಣಿತವಾಗಿರುವುವಲ್ಲದೆ ಎಷ್ಟೋ ಐತಿಹಾಸಿಕ ಸಂಗತಿಗಳೂ ಅಡಕವಾಗಿರುವವು. ಇದನ್ನರಿತೇ ಈ ಪುರಾಣದ ಇಂಗ್ಲಿಷ್ ಭಾಷಾಂತರವನ್ನು ರೆವ್ಹರೆಂಡ್ ಜಿ.ವ್ಯರ್ಥರವರು ಮಾಡಿದ್ದು ಅದು ರಾಯಲ್ ಏಶಿಯಾಟಿಕ್ ಸೊಸಾಯಿಟಿಯ ಮುಂಬೈಶಾಖೆಯ ಪತ್ರಿಕೆಯ ೯೮–೨೨೧ನೆಯ ಪುಟಗಳಲ್ಲಿ ೧೮೬೫ ರಲ್ಲಿ ಪ್ರಕಟವಾಗಿದೆ. ಈ ಮೊದಲೇ ಇದು ಪ್ರಚಾರವಾಗಿದ್ದರೂ ಇದರ ಶುದ್ಧವಾದ ಪ್ರತಿಯು ದೊರೆಯುತ್ತಿರಲಿಲ್ಲ. ಇದರಿಂದಾಗಿ ಜನಸಾಮಾನ್ಯರಿಗೆ ತಿಳಿಯುವಂತೆ ವಾಙ್ಮಯ ಶಾಖೆಯವರು ಈ ಗ್ರಂಥವನ್ನು ಮೊದಲು ಬೆಳಕಿಗೆ ತಂದಿರುವರು.

ಈ ಪ್ರತಿಯನ್ನು ಸಿದ್ಧಪಡಿಸಲು ಉಪಯೋಗಿಸಲಾದ ಪ್ರತಿಗಳು ಕೆಳಗಿನಂತಿವೆ:

ಅ – ಅಚ್ಚಾದ ಪ್ರತಿಗಳು ಇವುಗಳ ಆರಂಭದ ಪುಟಗಳು ಹೋಗಿರುವುದರಿಂದ

ಬ – ಯಾವ ಸ್ಥಳದಲ್ಲಿ ಮತ್ತು ಯಾವ ವರುಷ ಇವು ಅಚ್ಚಾದವು ಎಂದು ತಿಳಿಯುವುದಿಲ್ಲ.

ಕ – ಬೆಂಗಳೂರಿನಲ್ಲಿ ೧೯೨೮ ರಲ್ಲಿ ಅಚ್ಚಾದದ್ದು

ಡ – ಬೆಂಗಳೂರಿನಲ್ಲಿ ೧೮೮೬ ರಲ್ಲಿ ಅಚ್ಚಾದದ್ದು

ಮ – ಮಂಗಳೂರಿನಲ್ಲಿ ೧೮೫೧ ರಲ್ಲಿ ಶಿಲೆಯಲ್ಲಿ ಅಚ್ಚಾದದ್ದು ಶ್ರೀಮಾನ್ ಜಿ.ಶಾಂತವೀರಪ್ಪನವರು ಬಿ.ಎ. ಬೆಂಗಳೂರು ಇವರಿಂದ ದೊರೆತದ್ದು

ಕೋ – ಮದ್ರಾಸ್ ಪ್ರಾಚ್ಯ ಕೋಶಾಲಯದಲ್ಲಿರುವ ಕಾಗದದ ಮೇಲಿನ ಕೈ ಬರಹದ ಪ್ರತಿಯು

ಗೋ – ಕಾಗದದ ಮೇಲಿನ ಕೈಬರಹದ ಪ್ರತಿಯು ಬೆಳಗಾಂವಿ ಜಿಲ್ಲೆಯ ಗೋಕಾಕ್ ಗ್ರಾಮದ ಶ್ರೀ ಗುರುಲಿಂಗಯ್ಯ ತೆಂಗಿನ ಮಠದಿಂದ ದೊರೆತಿದ್ದುದು.

ಪ – ಕಾಗದದ ಮೇಲಿನ ಕೈ ಬರಹದ ಪ್ರತಿ ಧಾರವಾಡ ತಾಲೂಕಿನ ಅಮ್ಮಿನಭಾವಿ ಪಂಚಗ್ರಹಮಠದ ಶ್ರೀ ಪಟ್ಟದ ಸ್ವಾಮಿಗಳಿಂದ ದೊರತದ್ದು. ಇದನ್ನು ಬರೆದು ಪೂರ್ಣ ಮಾಡಿದ ಕಾಲವು ಸಾಧಾರಣ ಸಂವತ್ಸರ ಅಶ್ವಿನ ಶುದ್ಧ ೬ ಗುರುವಾರ. ಇವುಗಳ ಮೇಲಿಂದ ಇದನ್ನು ಬರೆದದ್ದು ೧೫೩೨ ಅಂದರೆ ೧೬೧೦ ಎಂದು ಗೊತ್ತಾಗುತ್ತದೆ.

ಶಿ – ೧೮೪೯ ರಲ್ಲಿಯ ಕಾಗದದ ಮೇಲಿನ ಕೈ ಬರಹದ ಪ್ರತಿಯು ವಿಜಾಪುರ ಜಿಲ್ಲೆಯ ಬಾದಾಮಿ ತಾಲೂಕಿನ ಶಿವಯೋಗ ಮಂದಿರ ಸಂಸ್ಥೆಯಿಂದ ದೊರೆತಿರುವುದು.

ಹು – ೧೮೩೬ ರಲ್ಲಿಯ ಕಾಗದದ ಮೇಲಿನ ಕೈ ಬರಹದ ಪ್ರತಿಯು ಹುಬ್ಬಳ್ಳಿಯ ಮೂರು ಸಾವಿರ ಮಠದ ಶ್ರೀ ಮಹಾಸ್ವಾಮಿಗಳವರಿಂದ ದೊರೆತಿರುವುದು.

ತು – ೧೭೪೫ ರಲ್ಲಿಯ ತಾಳೆವೋಲೆಯ ಪ್ರತಿಯು ತುಮಕೂರಿನ ಶ್ರೀಮಾನ್ ಶಿವಮೂರ್ತಿಶಾಸ್ತ್ರಿಗಳು ಹುಲಕುಂಠೆಮಠ ಕೀರ್ತನಕೇಸರಿ ಕವಿರತ್ನ ಇವರಿಂದ ದೊರೆತಿರುವುದು.

ತಾ – ಶಿವಯೋಗ ಮಂದಿರ ಸಂಸ್ಥೆಯಿಂದ ದೊರೆತ ತಾಳೆಓಲೆಯ ಪ್ರತಿಯು, ಇದರಲ್ಲಿ ನಾಂದಿಪದ್ಯಗಳಷ್ಟೇ ಇರುವವು.

ದಾ – ದಾವಣಗೇರೆಯ ಶ್ರೀ ವೀರಭದ್ರಪ್ಪ ಮೈಲಾರವರಿಂದ ತಾಳೆವೋಲೆ ಪ್ರತಿಯು ದೊರೆತಿದೆ.

ಇವುಗಳ ಸಹಾಯದಿಂದ ಕೆಲವು ಸಾಮಾನ್ಯ ನಿಯಮಗಳಿಗನುಸಾರವಾಗಿ ಶುದ್ಧ ಪ್ರತಿಯನ್ನು ಸಿದ್ಧಪಡಿಸಲಿಕ್ಕೆ ಪ್ರೊಫೆಸರ್ ಶಿವಲಿಂಗಪ್ಪ ಬಸವನಾಳ, ಶ್ರೀ ಶಿವಲಿಂಗಯ್ಯ ಮರಡೂರು, ಡಾ. ಶಿವಲಿಂಗಯ್ಯ ನಂದೀಮಠ, ಶ್ರೀ ಬಸವರಾಜಶಾಸ್ತ್ರಿಗಳು ಕೋಡಿಕೊಪ್ಪಮಠ, ಶ್ರೀ ಸಿದ್ದರಾಮಪ್ಪ ಪಾವಟೆ, ನಿವೃತ್ತ ನ್ಯಾಯಾಧೀಶರಾದ ಶ್ರೀ ವೀರಭದ್ರಪ್ಪ ಹಾಲಭಾವಿ ಈ ಮೇಲಿನ ಎಲ್ಲ ಪ್ರತಿಗಳನ್ನು ಸಿದ್ಧಪಡಿಸಿಕೊಟ್ಟರು. ಅಂತಿಮವಾಗಿ ಶ್ರೀ ಶಿ.ಶಿ.ಬಸವನಾಳ ಮತ್ತು ವೀರಭದ್ರಪ್ಪ ಹಾಲಭಾವಿ ಅವರು ಸಿದ್ಧಪಡಿಸಿರುವರು. ಶ್ರೀ ಕೊಟ್ರಯ್ಯ ಬಸೆಟ್ಟಿ ಅವರು ಅಂದವಾದ ಅಕ್ಷರದಲ್ಲಿ ಬರೆದುಕೊಟ್ಟರು, ಶ್ರೀ ಹಾಲಭಾವಿಯವರು ಕೋಶವನ್ನು ತಯಾರಿಸಿದರು, ಶ್ರೀ ಬಸವನಾಳ ಅವರು ಪ್ರಸ್ತಾವನೆಯನ್ನು ಬರೆದರು.[೧೦೬]

ಸುಮಾರು ೧೬ ನೆಯ ಶತಮಾನದಲ್ಲಿ ರಚಿತವಾದ ವಿರೂಪಾಕ್ಷ ಪಂಡಿತ ಕೃತ "ಚೆನ್ನಬಸವ ಪುರಾಣವು" ಮುದ್ರಣಗೊಳ್ಳುವುದಕ್ಕಿಂತ ಪೂರ್ವದಲ್ಲಿ ಮೂಲಗ್ರಂಥದ ಹಸ್ತಪ್ರತಿಗಳನ್ನು ಮೇಲಿಂದ ಮೇಲೆ ಸಿದ್ಧಪಡಿಸಲಾಗಿದ್ದು.

---

೧೦೬. ವಿರೂಪಾಕ್ಷ ಪಂಡಿತ ಕೃತಿ: ಚೆನ್ನಬಸವ ಪುರಾಣ: ವೀರಭದ್ರಪ್ಪ ಹಾಲಭಾವಿ (ಸಂ): ಶಿ.ಶಿ. ಬಸವನಾಳ: ಪುಟ. ಮುನ್ನುಡಿ ೧, ೨.

ಹೀಗೆ ಸಿದ್ಧಪಡಿಸುವಾಗ ಪುರಾಣದ ಕಥಾವಸ್ತುವಿನ ಸನ್ನಿವೇಶಗಳಿಗೆ ಸಂಬಂಧಿಸಿದಂತೆ ಸಾಂದರ್ಭಿಕ ಚಿತ್ರಗಳನ್ನು ಬರೆಯಿಸಿ ಗ್ರಂಥಕ್ಕೆ ಸೇರಿಸಲಾಗಿದೆ. "ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ವಾಜ್ಮಯ ಶಾಖೆಯ ಅಧ್ಯಕ್ಷರಾದ ಶ್ರೀ ವೀರಭದ್ರಪ್ಪ ಹಾಲಭಾವಿಯವರು ಮತ್ತು ಶ್ರೀ ಶಿವಲಿಂಗಪ್ಪ ಶ.ಬಸವನಾಳ ಅವರ ನೇತೃತ್ವದಲ್ಲಿ ೧೬.೭.೧೯೩೪ ರಲ್ಲಿ ಲಿಂಗರಾಜ್ ಆರ್ಟ್ ಪ್ರೆಸ್ ಮಾಳಮಡ್ಡಿಯಲ್ಲಿ ಮುದ್ರಿಸಲಾಗಿದ್ದು, ಇದು ಪ್ರಥಮಮುದ್ರಣ, ಇದರಲ್ಲಿ ಕೆಲವು ಚಿತ್ರಗಳನ್ನು ಸೇರ್ಪಡಿಸಿದ್ದು ವಿಶೇಷವಾಗಿದೆ. ಒಟ್ಟು ಆರು ಜನ ಕಲಾವಿದರ ಸುಮಾರು ಹನ್ನೊಂದು ಕಲಾಕೃತಿಗಳನ್ನು ರಚಿಸಿದ್ದು ಕೆಳಗಿನಂತಿದೆ.[೧೦೭]

ಮುದ್ದಾದ ಅಚ್ಚಿನ ಜೊತೆಗೆ ಸರಿಯಾದ ಚಿತ್ರಗಳಿದ್ದರೆ ನೋಡುವವರಿಗೆ ಆನಂದವುಂಟಾಗುವುದು. ಸಮಕಾಲೀನ ಸಂದರ್ಭದಲ್ಲಿ ಚಿತ್ರಗಳ ಪ್ರಚಾರವೂ ವಿಶೇಷವಾಗಿತ್ತು ಎನ್ನುವುದರ ಜೊತೆಗೆ ಪ್ರಸಕ್ತ ಸಂದರ್ಭದಲ್ಲಿ ವೀರಭದ್ರಪ್ಪನವರ ಪುತ್ರ ದಾನಪ್ಪ ಹಾಲಭಾವಿಯವರ ನೇತೃತ್ವದ ಯುವ ಕಲಾವಿದರೆಲ್ಲರೂ "ಸಪ್ತ ವರ್ಣಕಲಾವಿದರ ತಂಡ"ವಾಗಿ ಮುಂಬೈ ಜೆ.ಜೆ. ಕಲಾ ಶಾಲೆಯಿಂದ ಆಗತಾನೆ ಹೊರಬಂದ ಉತ್ಸಾಹಿಯುವಕರಾಗಿದ್ದರು. ಅವರನ್ನು ಸಮರ್ಥವಾಗಿ ಹಾಗೂ ಔಚಿತ್ಯ ಪೂರ್ಣವಾಗಿ ಬಳಸಿಕೊಂಡು. "ವರ್ಣರಂಜಿತವಾಗಿ ಚೆನ್ನಬಸವ" ಪುರಾಣವನ್ನು ಸುಂದರವಾಗಿ ರೂಪುಗೊಳ್ಳಲು ಪ್ರಯತ್ನಿಸಿದ ಶ್ರೀ ವೀರಭದ್ರಪ್ಪ ಹಾಲಭಾವಿ ಮತ್ತು ಶ್ರೀ ಶಿ.ಶಿ.ಬಸವನಾಳ ಅವರು ಕಾರಣರಾಗಿದ್ದು ಅವರು ಅಭಿನಂದನಾರ್ಹರಾಗಿರುವರು.

ದೇಶದ ಖ್ಯಾತ ಕಲಾ ಶಾಲೆಯಾಗಿ ಸರ್ ಜೆ.ಜೆ.ಸ್ಕೂಲ್ ಆಫ್ ಆರ್ಟ ಹೊರಹೊಮ್ಮಿದ್ದು, ಪಾಶ್ಚಾತ್ಯ ಕಲಾ ತಂತ್ರಗಳನ್ನೇ ಪ್ರಮುಖವಾಗಿಟ್ಟುಕೊಂಡು ಅಧ್ಯಯನವನ್ನು ರೂಪಿಸಿಕೊಂಡಿತ್ತು. ಅಲ್ಲಿ ಅಧ್ಯಯನವನ್ನು ಮಾಡಿ ಕನ್ನಡದ "ಸಪ್ತವರ್ಣ ಕಲಾವಿದ"ರೆಂದು ಸಂಘಟನೆಯನ್ನು ಮಾಡಿಕೊಂಡು ಜೆ.ಜೆ.ಕಲಾ ಶಾಖೆಯಲ್ಲಿ ಕ್ರಿಯಾಶೀಲರಾಗಿ ಅಧ್ಯಯನ ಮಾಡುವುದರೊಂದಿಗೆ ಅಲ್ಲಿಯ ಅಧ್ಯಾಪಕ ವರ್ಗಕ್ಕೂ ಪ್ರಿಯರಾಗಿ ಕಲಾ ಚಟುವಟಿಕೆಯಲ್ಲಿ ಭಾಗವಹಿಸುತ್ತಿದ್ದರು. ಈ ಸಪ್ತವರ್ಣ ಕಲಾವಿದರು ಅಧ್ಯಯನ ಪೂರೈಸಿ ಬರುತ್ತಿದ್ದಂತೆಯೇ ಈ ಧಾರ್ಮಿಕ ಕಾರ್ಯದಲ್ಲಿ ತೊಡಗಿಸಿಕೊಂಡ ಶ್ರೀ ವೀರಭದ್ರಪ್ಪ ಹಾಲಭಾವಿ ಅವರು, "ಚೆನ್ನಬಸವ ಪುರಾಣ"ದಲ್ಲಿಯ ಪ್ರಮುಖ ಕಥೆಯ ಸನ್ನಿವೇಶ, ಘಟನೆಗಳನ್ನು ಇವರಿಗೆ ತಿಳಿಸಿ ಅವರಿಂದ ಈ ಕಲಾಕೃತಿಗಳನ್ನು ರಚಿಸಲು ಪ್ರೇರೇಪಿಸಿದರು. ಈ ಹಿನ್ನೆಲೆಯಲ್ಲಿ ರಚನೆಗೊಂಡ ಈ ಕಲಾಕೃತಿಗಳು. ಭಾರತೀಯ ಕಥಾವಸ್ತು, ವಿಷಯಗಳು, ಪಾಶ್ಚಾತ್ಯ ಕಲಾ ತಂತ್ರಗಳ ಸಮ್ಮಿಲನ, ಈ ಚೆನ್ನಬಸವ ಪುರಾಣದ ಕಲಾಕೃತಿಗಳಾಗಿ ರೂಪುಗೊಂಡವು" ಹೀಗೆ ರಚನೆಗೊಂಡ ಕಲಾಕೃತಿಗಳು ಮತ್ತು ಕಲಾವಿದರ ಹೆಸರುಗಳನ್ನು ಕೆಳಗೆ ತಿಳಿಸಲಾಗಿದೆ.

೧೦೭. ವಿರೂಪಾಕ್ಷ ಪಂಡಿತ ಕೃತಿ: ಚೆನ್ನಬಸವ ಪುರಾಣ: ವೀರಭದ್ರಪ್ಪ ಹಾಲಭಾವಿ(ಸಂ): ಶಿ.ಶಿ. ಬಸವನಾಳ: ಪುಟ. ೩.

ಧಾರವಾಡದ ಚೆನ್ನಬಸವ ಪುರಾಣದಲ್ಲಿ "ಸಮಕಾಲೀನ ಕಲಾಕೃತಿಗಳು"

| ಅ.ನಂ. | ಕಲಾಕೃತಿಯ ಹೆಸರು | ಕಲಾವಿದರ ಹೆಸರು | ಪುಟ ಸಂಖ್ಯೆ |
|---|---|---|---|
| ೧ | ಪ್ರಸಾದ ಸೇವಿಸುವ ನಾಗಲಾಂಬಿಕೆ | ಶ್ರೀ ಎಂ.ಎ.ಚೆಟ್ಟಿ | ೮ |
| ೨ | ಚೆನ್ನಬಸವೇಶನ ಪುಷ್ಪಕೋತ್ಸವ | ಶ್ರೀ ಎಂ.ಎ.ಚೆಟ್ಟಿ | ೧೧ |
| ೩. | ಭಿಕ್ಷಾಟನಾಲೀಲೆಯ ದೃಶ್ಯ | ಶ್ರೀ ಜಿ.ಎಸ್.ದಂಡಾವತಿಮಠ | ೪೧ |
| ೪. | ಜಲಂಧರನ ನಾಮಕರಣ | ಶ್ರೀ ಎಂ.ವ್ಹಿ.ಮಿಣಜಗಿ | ೪೮ |
| ೫. | ಕಾಮದಹನದ ದೃಶ್ಯ | ಶ್ರೀ ಎಂ.ವ್ಹಿ.ಮಿಣಜಗಿ | ೭೧ |
| ೬. | ಸಿದ್ಧರಾಮನಿಗೆ ಲಿಂಗದೀಕ್ಷೆಯ ದೃಶ್ಯ | ಶ್ರೀ ಎಂ.ವ್ಹಿ.ಮಿಣಜಗಿ | ೧೩೬ |
| ೭. | ವೀರಭದ್ರಾವತಾರದ ಚಿತ್ರ | ಶ್ರೀ ಡಿ.ಜಿ.ಬಡಿಗೇರ | ೬೨ |
| ೮. | ಅಂಧಕಾಸುರನ ಓಲಗದ ದೃಶ್ಯ | ಶ್ರೀ ಚಂದ್ರಶೇಖರ ಕಾರಡಗಿ | ೯೭ |
| ೯. | ಗಿರಿಜಾ ಕಲ್ಯಾಣದ ದೃಶ್ಯ | ಶ್ರೀ ಡಿ.ವ್ಹಿ.ಹಾಲಭಾವಿ | ೭೬ |
| ೧೦. | ಅರ್ಜುನನಿಗೆ ಪಾಶುಪತಾಸ್ತ್ರಪ್ರದಾನದ ದೃಶ್ಯ | ಶ್ರೀ ಡಿ.ವ್ಹಿ.ಹಾಲಭಾವಿ | ೧೧೨ |
| ೧೧. | ಷಟ್‌ಚಕ್ರ ವಿವರದ ಚಿತ್ರ | ಶ್ರೀ ಡಿ.ವ್ಹಿ.ಹಾಲಭಾವಿ | ೧೪೯ |

**೧. ಪ್ರಸಾದ ಸೇವಿಸುವ ನಾಗಲಾಂಬಿಕೆ:**

ನಾಗಲಾಂಬಿಕೆಯು ಗುರು-ಲಿಂಗ, ಜಂಗಮಾರ್ಚನೆಯನ್ನು ಮಾಡಿ ಪ್ರಸಾದವನ್ನು ಸವಿದು ಶಯ್ಯೆಯಲ್ಲಿ ಶಿವಧ್ಯಾನದೊಂದಿಗೆ ಯೋಗಪರವಶದಲ್ಲಿರಲು ಈಶ್ವರನು ಚರಮೂರ್ತಿಯಾಗಿ ಬಂದು ಅವಳನ್ನು ಎಚ್ಚರಿಸಿ "ಎಲೈ ತರುಣಿಯೆ, ಈ ಪ್ರಸಾದವನ್ನು ತೆಗೆದುಕೊಳ್ಳು" ಎನ್ನಲು ಅಕ್ಕನಾಗಮ್ಮನು ಅದನ್ನು ಲಿಂಗಕ್ಕೆ ಕೊಟ್ಟು ತಾನೂ ತೆಗೆದುಕೊಂಡಳು. ಬಳಿಕ ಈಶ್ವರನು ಚರರೂಪವನ್ನು ಅಡಗಿಸಿ ನಿಜರೂಪವನ್ನು ತೋರಿದನು. "ಎಲೈ ಲಲಿತಾಂಗಿಯೇ, ಇದೊಂದು ಹೊಸ ಚೋದ್ಯವನ್ನು ನಿನಗೆ ತಿಳುಹುವೆವು. ಈ ನಮ್ಮ ಚಿತ್ಕಳಾಮೃತ ಪ್ರಸಾದದಿಂದ ನಿನ್ನ ಗರ್ಭದಲ್ಲಿ ನಮ್ಮ ಷಣ್ಮುಖಸ್ಥಿತವಾದ ಪ್ರಣವದ ನಿರ್ಮಲ ರೂಪನಾದ ಷಟ್‌ಸ್ಥಲ ಬ್ರಹ್ಮಿಯಾಗಿ ಜನಿಸಿ, ವೀರಶೈವಾಚಾರವನ್ನು ಪ್ರತಿಷ್ಠಿಸಿ, ಜೈನ, ಬೌದ್ಧ, ಚಾರ್ವಾಕ ಮತಗಳನ್ನಳಿದು, ಬಸವಾದಿ ಪ್ರಮಥರಿಗೆ ಷಟ್‌ಸ್ಥಲ ಬ್ರಹ್ಮೋಪದೇಶವನ್ನು ಮಾಡಿ ನಿಜಪಥವನ್ನು ಕೊಡುವನು. ಈ ಒಸುಗೆಯನ್ನು ಸಕಲಗಣಕ್ಕೆ ಅರುಹು" ಎಂದು ಹೇಳಿ ಬಯಲಾದನು. ಇದು ಕನಸಿನಂತಿದ್ದರೂ ಕನಸಲ್ಲ ಪ್ರತ್ಯಕ್ಷವೆನ್ನುವಂತಿದೆ ಎಂದು ವಿಸ್ಮಿತಳಾಗಿರುವ ಅಕ್ಕನಾಗಮ್ಮನು ಈ ವಿಷಯವನ್ನು ಅಂದಿನ ಅನುಭವ ಮಂಟಪದಲ್ಲಿ ಬಸವಣ್ಣನಾದಿಯಾಗಿ ಎಲ್ಲ ಶಿವಶರಣರಿಗೂ ತಿಳಿಸಿದಳು.[೧೦೮]

೧೦೮. ವಿರೂಪಾಕ್ಷ ಪಂಡಿತ ಕೃತಿ: ಚೆನ್ನಬಸವ ಪುರಾಣ: ವೀರಭದ್ರಪ್ಪ ಹಾಲಭಾವಿ(ಸಂ): ಶಿ.ಶಿ. ಬಸವನಾಳ: ಪುಟ. ೧೧.

ಈ ದೃಶ್ಯವನ್ನು ಅತ್ಯಂತ ಸುಂದರವಾಗಿ ಚಿತ್ರಿಸಿದ್ದು ಅಕ್ಕನಾಗಮ್ಮನು ಹಾಸಿಗೆಯಲ್ಲಿ ಮಲಗಿದ್ದು ನಿದ್ರೆಯಲ್ಲಿದ್ದರೂ ಕೂಡಾ ಅವಳ ಮುಖ ತೇಜೋಮಯವಾಗಿದ್ದುದು, ಎದುರುಗಡೆಯಲ್ಲಿರುವ ಜಂಗಮವೇಷದ ವಯಸ್ಕನಾದ ಮಾನವನು ಆಶೀರ್ವದಿಸುವ ಸನ್ನಿವೇಶದಂತೆ ಚಿತ್ರಿಸಿದ್ದು ಈ ಚಿತ್ರದಲ್ಲಿ ಜ್ಞಾನದ ಸಂಕೇತವೆಂಬಂತೆ ಪ್ರಭಾವಳಿ, ಸೌಮ್ಯರೂಪದ ವರ್ಣಸಂಯೋಜನೆಯು ಇಡೀ ಈ ಚಿತ್ರವೇ ಕಥೆಯ ರೂಪವನ್ನು ಸಾರುವಂತೆ ಮೈತಳೆದು ನಿಂತಿದೆ. ಈ ಕಲಾಕೃತಿಯನ್ನು ಶ್ರೀ ಎಂ.ಎ.ಚೆಟ್ಟಿಯವರು ರಚಿಸಿರುವರು.

**೨. ಚೆನ್ನಬಸವೇಶ್ವರನ ಪುಷ್ಪಕೋತ್ಸವ:**

ಬಿಜ್ಜಳರಾಜನು ಪಟ್ಟಣವನ್ನು ಸಿಂಗರಿಸಬೇಕೆಂದು ಹೇಳುತ್ತಿದ್ದಂತೆಯೆ ಊರ ಜನರು ತಮ್ಮ ತಮ್ಮ ಮನೆಯ ಮುಂದೆ ನೀರು ಹೊಡೆದು ತಳಿರು ತೋರಣಗಳಿಂದ ಬೀದಿ ಬೀದಿಗಳನ್ನು ಅಲಂಕರಿಸಿದರು, ಸಾರಣಿ ಮಾಡಿದ ನೆಲದಿಂದಲೂ, ತೋರಣದ ಹೂಗಳ ಕಂಪನದಿಂದೊಡಗೂಡಿದ್ದು, ಆರತಿಯನ್ನು ತರುತ್ತಿದ್ದ ಸ್ತ್ರೀಯರ ಸಮೂಹದಿಂದೊಡಗೂಡಿದ ಕೇರಿಗಳಿಂದಲೂ ಆ ಪಟ್ಟಣವು ಶೋಭಿಸುತ್ತಿತ್ತು. ಬಿಜ್ಜಳನು ತನ್ನ ಪುಷ್ಪಕವನ್ನು ತರಿಸಿ, ಅದರಲ್ಲಿ ನಾಗಲಾಂಬಿಕೆಯ ಮಗನನ್ನು ಕುಳ್ಳಿರಿಸಿ, ನಮಸ್ಕರಿಸಿದನು. ಪಟ್ಟಣದ ಜನರನ್ನೂ, ಮಂತ್ರಿಗಳನ್ನೂ ಕರೆಸಿ ವಾರಾಂಗನೆಯರನ್ನೂ ಬರ ಮಾಡಿಕೊಂಡನು. ಶೈವದಲ್ಲಿ ಭಯಭಕ್ತಿ ಧರಿಸಿ ಜೈನನಾದ ಬಿಜ್ಜಳನು ಹರ್ಷದಿಂದ ಉತ್ಸವವನ್ನು ಮಾಡಲು ಸಿದ್ಧನಾದನು.[೧೮೯]

ನಾನಾಪ್ರಕಾರದ ವಾದ್ಯಗಾರರೊಂದಿಗೆ ಸಕಲ ಮಂತ್ರಿಗಳೊಂದಿಗೆ ಸ್ವತಃ ಬಿಜ್ಜಳ ಮಹಾರಾಜ ಪಾದಚಾರಿಯಾಗಿ ಬರಲು, ಅವರೊಂದಿಗೆ ಬಸವೇಶಾದಿ ಶಿವಶರಣರು ಜಯಕಾರ ಮಾಡುತ್ತ ಪಲ್ಲಕ್ಕಿಯಲ್ಲಿ ಕುಮಾರ ಚೆನ್ನಬಸವನನ್ನು ಕರೆತರಲು ಪಟ್ಟಣದ ಜನವೆಲ್ಲ ಆ ದೃಶ್ಯವನ್ನು ನೋಡುವ ತವಕದಿಂದಾಗಿ ಮನೆಗಳ ಕಿಡಕಿ, ಬಾಗಿಲು, ಮಾಳಿಗೆಯ ಮೇಲೆ ನೋಡುತ್ತ ನಿಂತಿದ್ದು ಆ ಪಟ್ಟಣದ ಮುತ್ತೈದೆಯರು ಭಕ್ತಿಯಿಂದ ಆರತಿ ಮಾಡುತ್ತಿರುವ ದೃಶ್ಯವನ್ನು ಅತ್ಯಂತ ಸುಂದರವಾಗಿ ಪಾಶ್ಚಾತ್ಯ ತಂತ್ರಗಳೊಂದಿಗೆ ಪ್ರಮಾಣಬದ್ಧವಾಗಿ ರೇಖೆ, ವರ್ಣಗಳ ಬಳಕೆಯನ್ನು ಮಾಡಿದ್ದು ಇಡಿ ಪಟ್ಟಣದ ಜನವೇ ಈ ಕಾರ್ಯದಲ್ಲಿ ತೊಡಗಿಕೊಂಡಿರುವದು. ಪಲ್ಲಕ್ಕಿ ಚಾಮರ ಛತ್ರಗಳೊಂದಿಗೆ ಪಟ್ಟಣದಲ್ಲಿ ಹೊರಟಿರುವ ದೃಶ್ಯವು ಅದ್ಭುತವಾದ ಸಂಯೋಜನೆಯೊಂದಿಗೆ ಮೂಡಿ ಬಂದಿದೆ. ಈ ಕಲಾಕೃತಿಯನ್ನು ಶ್ರೀ ಎಂ.ಎ.ಚೆಟ್ಟಿಯವರು ರಚಿಸಿರುವರು.

**೩. ಭಿಕ್ಷಾಟನಾಲೀಲೆಯ ದೃಶ್ಯ:**

ಶಿವನು ಬ್ರಹ್ಮನ ಕಪಾಲವನ್ನು ಕೈಯಲ್ಲಿ ಹಿಡಿದುಕೊಂಡು ಭಯಂಕರವಾದ ಭೈರವ ರೂಪವನ್ನು ಬಿಟ್ಟು ಆ ಶಿರಸ್ಸಿಗೆ ತುಷ್ಟಿಯನ್ನುಂಟು ಮಾಡುವುದರಲ್ಲಿ ವಿಷ್ಣು ಮೊದಲಾದವರ ಭಕ್ತಿಯನ್ನು ಪರೀಕ್ಷಿಸಬೇಕೆಂದು ಬಗೆದು ಶಿವನು ದಿವ್ಯರೂಪವನ್ನು ಧರಿಸಿ ಹೊರಟನು. ಕಾಮನ ಭಸ್ಮವನ್ನು ಅಗಣಿತ ಪ್ರಕಾಶದಿಂದ ಮೆರೆಯುವ

೧೮೯. ವಿರೂಪಾಕ್ಷ ಪಂಡಿತ ಕೃತಿ: ಚೆನ್ನಬಸವ ಪುರಾಣ: ವೀರಭದ್ರಪ್ಪ ಹಾಲಭಾವಿ(ಸಂ): ಶಿ.ಶಿ. ಬಸವನಾಳ: ಪುಟ. ೮.

ಕಾಯದಲ್ಲಿ ಧರಿಸಿ ಬಲಗೈಯಲ್ಲಿ ತ್ರಿಶೂಲವನ್ನು ಎಡಗೈಯಲ್ಲಿ ಬ್ರಹ್ಮಕಪಾಲವನ್ನು ಹಿಡಿದು ಹದಿನಾರು ವರ್ಷದ ಪ್ರಾಯದವನಾಗಿ ತೋರಿದನು. ವಿಷ್ಣುವಿನ ಭಕ್ತಿಯನ್ನು ಪರೀಕ್ಷಿಸುವುದಕ್ಕಾಗಿ ವೈಕುಂಠಪುರಕ್ಕೆ ಬರುವ ಈಶ್ವರನನ್ನು ಕಂಡು ಹರಿಯು ಬಂದು ದೂರದಿಂದಲೇ ಮೈಯಿಕ್ಕಿ ಸ್ತುತಿಸಿದನು.[೧೧೦]

ಈ ಕಲಾಕೃತಿಯಲ್ಲಿ ಶಿವನು ಯುವಕನಾಗಿ ಚತುರ್ಭುಜನಾಗಿದ್ದು ಮುಂದಿನ ಬಲಗೈಯಿಂದ ಅಭಯವನ್ನು ನೀಡುತ್ತಿದ್ದು, ಹಿಂದಿನ ಬಲಗೈಯಲ್ಲಿ ತ್ರಿಶೂಲವನ್ನು ಹಿಡಿದುಕೊಂಡಿದ್ದು ಮುಂದಿನ ಎಡಗೈಯಲ್ಲಿ ಕುಂಡಲಿನಿಯನ್ನು ಹಿಡಿದಿದ್ದು, ಹಿಂದಿನ ಎಡಗೈಯಲ್ಲಿ ಡಮರು ಹಿಡಿದಿರುವನು. ಸೊಂಟದ ಕೆಳಗಡೆ ಹುಲಿಯ ಚರ್ಮವನ್ನು ಸುತ್ತಿಕೊಂಡಿರುವನು. ತಲೆಯ ಹಿಂದುಗಡೆ ಪ್ರಭಾವಳಿಯನ್ನು ಮಾಡಿ ಈ ದೃಶ್ಯದಲ್ಲಿ ಈ ವ್ಯಕ್ತಿ ಪ್ರಮುಖ ಅನ್ನುವದನ್ನು ಸಂಕೇತವಾಗಿ ಬಳಸಿರುವನು. ಎದುರುಗಡೆಯಲ್ಲಿರುವ ವಿಷ್ಣು ಕೆಂಪು ಪೀತಾಂಬರವುಟ್ಟು ಕಿರೀಟವನ್ನು ಧರಿಸಿದ್ದು ಶಿವನಿಗೆ ಕೈಜೋಡಿಸಿಕೊಂಡು ನಿಂತಿರುವನು. ಎಡಬದಿಯಿಂದ ಬಲಕ್ಕೆ ಭುಜದ ಮೇಲೆ ಬಿಳಿಯ ಶಲ್ಯ ಹಾಕಿಕೊಂಡಿರುವನು. ಇವರೀರ್ವರನ್ನು ಬಿಟ್ಟರೆ, ವೈಕುಂಠದಲ್ಲಿ ಉಳಿದ ಮಹಿಳೆಯರು ಮತ್ತು ಪುರುಷರು ಸಾಮಾನ್ಯ ಮಾನವರಂತೆ ಉಡುಗೆ-ತೊಡುಗೆಗಳನ್ನು ಹೊಂದಿರುವುದು ವಿಶೇಷವಾಗಿದ್ದು ಭವ್ಯವಾದ ಅರಮನೆಯ ದೃಶ್ಯ ಉತ್ತಮವಾಗಿ ಮೂಡಿಬಂದಿದೆ. ಈ ಕಲಾಕೃತಿಯನ್ನು ಶ್ರೀ ಗಂಗಾಧರಯ್ಯ ಎಸ್.ದಂಡಾವತಿಮಠ ಅವರು ರಚಿಸಿರುವರು.

**೪. ಜಲಂಧರನ ನಾಮಕರಣ:**

ಇಂದ್ರನು ಶಿವನಲ್ಲಿಗೆ ಬಂದು ತನಗೆ ಯೋಗ್ಯನಾದ ವೈರಿಯನ್ನು ಕೊಡೆಂದು ಕೇಳಿಕೊಂಡನು. ಈ ಅಹಂಕಾರದ ಮಾತಿಗೆ ಶಿವನು ತನ್ನ ಹಣೆಗಣ್ಣಿನಿಂದ ಒಂದು ಕಿಡಿಯನ್ನು ಉಗುಳಿದನು. ಕೂಡಲೇ ಇಂದ್ರನು ಕೋಪವನ್ನು ಕಡಿಮೆ ಮಾಡಿಕೊಳ್ಳಬೇಕೆಂದು ಬೇಡಿಕೊಳ್ಳಲು ಈಶ್ವರನು ಆ ಕಿಡಿಯನ್ನು ಕೈಯಲ್ಲಿ ಹಿಡಿದು ಸಮುದ್ರಕ್ಕೆ ಎಸೆದು ನಿನಗೆ ಶತ್ರುವನ್ನು ಕೊಟ್ಟಿರುವೆ, ಹೋಗು ಎಂದು ಕಳುಹಿದನು.

ಇತ್ತ ಈಶ್ವರನು ಒಗೆದ ಕಿಡಿಯು ಬಾಲಕನಾಗಿ ಗಂಗೆಯು ಸಮುದ್ರಕ್ಕೆ ಕೂಡುವ ಸ್ಥಳದಲ್ಲಿ ಅಳುತ್ತಿತ್ತು. ಇಂದ್ರನನ್ನು ಗೆಲ್ಲುವಂತಹ ಮಗನನ್ನು ಪಡೆಯಬೇಕೆಂದು ತಪಸ್ಸು ಮಾಡುತ್ತಿದ್ದ ಸಮುದ್ರರಾಜನು ಆ ಶಿಶುವನ್ನು ಎತ್ತಿಕೊಂಡು ಸಂತೋಷದಿಂದ ತನ್ನ ತೊಡೆಯ ಮೇಲಿಟ್ಟುಕೊಳ್ಳಲು ಆ ಕೂಸು ಬ್ರಹ್ಮಾಂಡವೇ ಒಡೆಯುವಂತೆ ಕೂಗಲು ಯಾರೆಂದು ನೋಡಲು ಬ್ರಹ್ಮನು ಅಲ್ಲಿಗೆ ಬಂದನು. ಆಗ ಸಮುದ್ರ ರಾಜನು ಆ ಮಗುವನ್ನು ಬ್ರಹ್ಮನ ಕೈಗೆ ಕೊಟ್ಟು ಯಾರಿಂದಲೂ ಮರಣ ಹೊಂದದಂತೆ ಆಶೀರ್ವಾದ ಮಾಡಲು ಬೇಡಿದನು. ಆ ಶಿಶುವನ್ನು ತೊಡೆಯ ಮೇಲೆ ಇಟ್ಟುಕೊಂಡು ಅದರ ಭದ್ರಾಕಾರ ನಿರೀಕ್ಷಿಸುತ್ತಿರಲು ಅದು ಬ್ರಹ್ಮನ ಗಡ್ಡವನ್ನು ಹಿಡಿದು ಎಳೆಯಲು ನೋವಿನಿಂದ ಬ್ರಹ್ಮನ ಕಣ್ಣೀರು ಆ ಶಿಶುವಿನ ಮೇಲೆ ಸುರಿಯತೊಡಗಿತು. ತನ್ನ ಕಣ್ಣೀರ

---

೧೧೦. ವಿರೂಪಾಕ್ಷ ಪಂಡಿತ ಕೃತಿ: ಚೆನ್ನಬಸವ ಪುರಾಣ: ವೀರಭದ್ರಪ್ಪ ಹಾಲಭಾವಿ(ಸಂ): ಶಿ.ಶಿ. ಬಸವನಾಳ: ಪುಟ. ೪೧.

ಹನಿಗಳನ್ನು ಧರಿಸಿದುದಕ್ಕಾಗಿ ಬ್ರಹ್ಮನು ಆ ಶಿಶುವಿಗೆ "ಜಲಂಧರ" ಎಂಬ ಹೆಸರನ್ನು ಇಟ್ಟು, ಈ ಕೂಸು ಸಾಮಾನ್ಯವಲ್ಲ, ಯಾರಿಂದ ಇವನ ಜನ್ಮವೋ ಅವನಿಂದಲೇ ಇವನಿಗೆ ಮರಣ. ಉಳಿದವರಾರಿಂದಲೂ ಈತನಿಗೆ ಅಪಾಯವಾಗದಿರಲಿ" ಎಂದು ವರವಿತ್ತು ಶುಕ್ರನಿಂದ ರಾಕ್ಷಸ ರಾಜಪಟ್ಟಾಭಿಷೇಕವನ್ನು ಆತನಿಗೆ ಮಾಡಿಸಿ ಹೋದನು.[೧೧೧]

ಈ ಕಲಾಕೃತಿಯ ಸಮುದ್ರದ ದಡದಲ್ಲಿ ಬಂಡೆಯೊಂದರ ಮೇಲೆ ಬ್ರಹ್ಮನು ಕುಳಿತಿದ್ದು ಇವನಿಗೆ ನಾಲ್ಕು ಮುಖಗಳನ್ನು ಕಿರೀಟವನ್ನು ಮಾಡಿದ್ದು ಅವನ ತೊಡೆಯ ಮೇಲೆ ಕೂಸನ್ನು ಮಲಗಿಸಿಕೊಂಡಿರುವನು. ಬ್ರಹ್ಮನು ಉಟ್ಟ ಕೆಂಪು ವರ್ಣದ ಪಂಚೆ ಅದರ ಮೇಲೆ ಕೂಸು ಬ್ರಹ್ಮನ ಮುಖ ನೋಡುತ್ತ ಅವನ ದಾಡಿಯ ಕೂದಲುಗಳನ್ನು ಕೆಳಗೆ ಎಳೆಯುತ್ತಿರುವ ದೃಶ್ಯ ಉತ್ತಮವಾಗಿ ಮೂಡಿ ಬಂದಿದೆ. ಬ್ರಹ್ಮನು ಇವನನ್ನು ಕುರಿತು ಮಾತಾಡುವ ಭಾವನೆಗಳು ಅವನ ಮುಖದಲ್ಲಿ ವ್ಯಕ್ತವಾಗುತ್ತಿವೆ. ಅವನ ಎದುರಿಗೆ ಎಡಗಡೆಯ ಕಾಲಿನ ಹತ್ತಿರ ಕೈಮುಗಿದುಕೊಂಡು ಭಕ್ತಿಯಿಂದ ಕುಳಿತಿರುವ ಸಮುದ್ರರಾಜ. ಬ್ರಹ್ಮನ ಬಲಗಡೆಯ ಕಾಲಿನ ಹತ್ತಿರವಿರುವ ಕುಂಡಲ ಸಮುದ್ರದ ದಡದಲ್ಲಿರುವ, ಹಳದಿವರ್ಣದ ಮರಳು, ಕಪ್ಪುಮಿಶ್ರಿತ ನೀಲಿವರ್ಣದ ಸಮುದ್ರದ ನೀರು, ಹಿಂದುಗಡೆಯಲ್ಲಿ ಬಿಳಿವರ್ಣದ ಮೋಡ, ಅದರಾಚೆಯಲ್ಲಿ ಮತ್ತೆ ಕಪ್ಪು ಮೋಡವಿದ್ದು ವರ್ಣಗಳ ಸಾಮರಸ್ಯ, ವ್ಯಕ್ತಿಗಳ ಪ್ರಮಾಣಬದ್ಧತೆ, ಮುಖಗಳಲ್ಲಿಯ ಹಾವ ಭಾವಗಳು ಉತ್ಕೃಷ್ಟವಾಗಿ ಮೂಡಿ ಬಂದಿವೆ. ಈ ಕಲಾಕೃತಿಯನ್ನು ಡಾ. ಎಂ.ವ್ಹಿ.ಮಿಣಜಗಿ ಅವರು ರಚಿಸಿರುವರು.

**೫. ಕಾಮದಹನದ ದೃಶ್ಯ:**

ಮನ್ಮಥನು ಆನೆಗಳ, ಕುದುರೆಗಳ, ರಥಗಳ, ಪದಾಪಿತಗಳ ಚತುರಂಗ ಬಲವನ್ನು ಹಾಗೂ ಚಂದ್ರನೆಂಬ ಮಂತ್ರಿಯನ್ನು ಬಸಂತನೆಂಬ ದಳವಾಯಿಯನ್ನೂ ಕೂಡಿಕೊಂಡು ಗಿಳಿಗಳು, ಭ್ರಮರಸಮೂಹದ ಝೇಂಕಾರ ಭೇರಿಯನ್ನು ಹೊಡೆಸುತ್ತ ಕಹಳೆಯನ್ನು ಊದಿಸುತ್ತ ರತಿಯೊಡನೆ ಹೂವಿನ ತೇರನೇರಿ ಇಂದುಧರನಿರುವ ಹೇಮಕೂಟಕ್ಕೆ ಹೊರಟನು. ಈ ಧೂಳಿಯು ಬ್ರಹ್ಮಾಂಡವನ್ನು ಮುಸುಕಿತು. ಕಾಣಿಕೆಗಳನ್ನು ತೆಗೆದುಕೊಳ್ಳುತ್ತ ಯತಿಗಳಿಂದ ಎರಗಿಸಿಕೊಳ್ಳುತ್ತ ಯೋಗಿಗಳ ಬುದ್ಧಿ ಭ್ರಂಶ ಮಾಡುತ್ತ ಹೀಗೆ ಸರ್ವಸ್ವವನ್ನು ಹಾಳು ಮಾಡುತ್ತ ಅಂಗಭವಚಕ್ರವರ್ತಿಯು ಈಶ್ವರನ ಮೇಲೆ ಸಾಗಲು ಪಂಪಾಕ್ಷೇತ್ರಕ್ಕೆ ಬಂದನು. ಆಗ ಪಟ್ಟದಾನೆಯು ಮುಗ್ಗರಿಸಿತು, ನರಿಗಳು ಅಡ್ಡಗಟ್ಟಿ ಒದರಿದವು, ತೇರಿಗೆ ಕಟ್ಟಿದ ಕುದುರೆಗಳು ನೊಗವನ್ನು ಚೆಲ್ಲಿ ದಿಕ್ಕಾಪಾಲಾದವು. ಈ ಅಪಶಕುನವನ್ನು ನೋಡಿ ಚೈತ್ರನು "ಅಪಜಯವು ಬಾರದಿರದು ತಿರುಗು" ಎನ್ನಲು ಕಾಮನು, ದೇವತೆಗಳಿಗೆ ನಂಬುಗೆಯನ್ನಿತ್ತು ಬಂದಿರುವೆ, ಆದದ್ದು ಆಗಲಿ ಎಂದು ಮುಂದೆ ಸಾಗಿ, ಹೇಮಕೂಟಾಚಲದ್ವಾರದಲ್ಲಿರ್ದ ನಂದೀಶನನ್ನು ಕಂಡು ಹೇಗೆ ಒಳಹೋಗುವುದೆಂದು ಚಿಂತಾಕ್ರಾಂತನಾದ. ಆಗ ಅಲ್ಲಿಗೆ ಪಾರ್ವತಿಯು ತನ್ನ

---

೧೧೧. ವಿರೂಪಾಕ್ಷ ಪಂಡಿತ ಕೃತಿ: ಚೆನ್ನಬಸವ ಪುರಾಣ: ವೀರಭದ್ರಪ್ಪ ಹಾಲಭಾವಿ(ಸಂ): ಶಿ.ಶಿ. ಬಸವನಾಳ: ಪುಟ ೪೮, ೪೯.

ಸಖಿಯರೊಡಗೂಡಿ ಹೂಗಳನ್ನು ತೆಗೆದುಕೊಂಡು ಬರುತ್ತಿರುವುದನ್ನು ನೋಡಿ ಅವಳಿಗೆ ಎಲ್ಲ ವಿಷಯವನ್ನು ತಿಳಿಸಿ ಒಳಗೆ ಪ್ರವೇಶಿಸಲು ನಂದಿ ಇರುವನೆಂದು ಹೆದರಿಕೆ ವ್ಯಕ್ತಪಡಿಸಿದ. ಪಾರ್ವತಿಯು ನೀನು ದೇವತೆಗಳಿಗೆ ಕೊಟ್ಟ ಮಾತಿನಂತೆ ನಡೆದುಕೊಳ್ಳು, ಒಳಗಡೆ ನನ್ನೊಂದಿಗೆ ಬಂದು ನಿನ್ನ ಕಾರ್ಯ ನೀನು ಮಾಡು ಎಂದಳು. ಆಗ ಪಾರ್ವತಿಯ ಮರೆಗೆ ನಿಂತು ಉನ್ಮದನ ಮುಂತಾದ ಪಂಚಬಾಣಗಳಿಂದ ಕ್ರಮವಾಗಿ ಶಿವನನ್ನು ಹೊಡೆಯಲು ಅವನಿಗೆ ತಾಗಲಂಜಿ ಹಿಂದಿರುಗಿದವು. ಕಾಮನು ಧೈರ್ಯ ತಾಳಿ ಐದೂ ಬಾಣಗಳಿಂದ ಒಂದೇ ಬಾರಿಗೆ ಎಸೆಯಲು ಅವು ಶಿವನ ಶರೀರಕ್ಕೆ ತಾಗಿ ಅವನು ಎಚ್ಚತ್ತು ಅತಿಕೋಪದಿಂದ ಮದನನನ್ನು ನೋಡಿದನು. ಮದನನ ಶರೀರ ಸುಟ್ಟು ಭಸ್ಮವಾಯಿತು. ಹರನು ಆ ಭಸ್ಮವನ್ನು ಮೈಯಲ್ಲಾ ಲೇಪಿಸಿಕೊಂಡನು. ಪಾರ್ವತಿಯನ್ನು ನೋಡಿ ನುಡಿಸದೇ ನಿರಾಕಾರವನ್ನು ಹೊಂದಿದನು. ಅಲ್ಲಿಗೆ ಬಂದ ರತಿಯು ಬಹಳ ಬಡಬಡಕೊಂಡು ಪರಿಪರಿಯಾಗಿ ಹಂಬಲಿಸಹತ್ತಿದಳು. ರತಿಯ ಮರುಗನ್ನು ನೋಡಿದ ಪಾರ್ವತಿಯು ನೊಂದುಕೊಂಡು, ಮಹಾದೇವನನ್ನು ಕುರಿತು ತಪಸ್ಸು ಮಾಡಿ ಅವನನ್ನು ಮೆಚ್ಚಿಸಿ ನಿನ್ನ ಪತಿಯನ್ನು ತಿರುಗಿಸಿಕೊಡುವೆನು, ದುಃಖ ಮಾಡಬೇಡವೆಂದು ಆಕೆಯನ್ನು ಸಮಾಧಾನ ಮಾಡಿದಳು.[೧೧೨]

ಈ ಕಲಾಕೃತಿಯು ಕಂದು ಗೆಂಪು ವರ್ಣದಲ್ಲಿದ್ದು, ಶಿವನು ಹುಲಿಯ ಚರ್ಮವನ್ನು ಹಾಸಿಕೊಂಡು, ಅದರ ಮೇಲೆ ಕುಳಿತಿದ್ದು ಬಲಗಡೆಯ ಕಾಲನ್ನು ಮಡಿಚಿದ್ದು ಬಲಗೈಯನ್ನು ಪಾದದ ಮೇಲಿಟ್ಟಿದ್ದು ಎಡಗಾಲನ್ನು ಮೇಲ್ಮುಖವಾಗಿ ಮಡಿಚಿದ್ದು ಎಡಗೈಯನ್ನು ಮೊಣಕಾಲ ಮೇಲಿಟ್ಟುಕೊಂಡಿರುವನು. ಕೊರಳಲ್ಲಿರುವ ಹಾವು ತನ್ನ ಹೆಡೆಯನ್ನು ಬಿಚ್ಚಿ ನೋಡುತ್ತಿದ್ದು ಶಿವನು ತನ್ನ ನಡುಗಣ್ಣು ತೆಗೆದಿದ್ದು ಅಲ್ಲಿಂದ ಜ್ವಾಲೆಯು ಹೊರಹೊಮ್ಮಿ ಇಡೀ ಕಾಮನನ್ನು ಭಸ್ಮ ಮಾಡುವ ದೃಶ್ಯ ಅಮೋಘವಾದುದಾಗಿದೆ. ಈ ಕಲಾಕೃತಿಯನ್ನು ಡಾ. ಎಂ.ವಿ.ಮಿಣಜಗಿ ಅವರು ಮಾಡಿರುವರು.

**೬. ಸಿದ್ಧರಾಮನಿಗೆ ಲಿಂಗದೀಕ್ಷೆಯ ದೃಶ್ಯ:**

ಶರಣರೆದುರಿಗೆ "ಭೃಂಗೀಶನ ಶಾಪದಿಂದ ಗಂದರ್ವರಿಬ್ಬರು ಸೊನ್ನಲಿಗೆಯಲ್ಲಿ ಕುಡಿಯೊಕ್ಕಲಿಗರ ಗರ್ಭದಿಂದ ಮೊರಡಿಯ ಮುದ್ದುಗೌಡ ಸುಗ್ಗಾಯಿ ಎಂಬ ಹೆಸರಿನಿಂದ ಜನಿಸಿ ದಂಪತಿಗಳಾಗಿರಲು ಅವರ ಉದರದಿಂದ ಪರಶಿವನ ಪ್ರತಿಬಿಂಬವೇ ಈ ಸಿದ್ಧರಾಮೇಶನೆಂಬ ಹೆಸರಿನಿಂದ ಜನಿಸಿ ಶಿವಯೋಗಿಯೆನಿಸಿದನು. ಈ ಸಿದ್ಧರಾಮನು ಶ್ರೀ ಶೈಲದ ಮಲ್ಲಿಕಾರ್ಜುನನನ್ನು ಸೊನ್ನಲಾಪುರಕ್ಕೆ ಕರೆತಂದು ಅವನನ್ನು ಪೂಜಿಸುತ್ತ ಮನ್ಮಥನನ್ನು ಗೆಲಿದು ಯಮಗೊಂಡದಲ್ಲಿದ್ದವರನ್ನು ಕೈಲಾಸಕ್ಕೊಯ್ದನು. ತನ್ನ ಹೃದಯವನ್ನು ಬಗಿದು ಬಸವೇಶನನ್ನು ತೋರಿಸಿದನು ಎಂದು ಹೇಳಿ ಸಿದ್ಧರಾಮೇಶನ ಮಹಾತ್ಮೆಗಳನ್ನು ಕೊಂಡಾಡಿದನು. ಇದನ್ನು ಕೇಳಿ ಸಿದ್ಧರಾಮನು "ಗುರು ಚೆನ್ನಬಸವೇಶ, ನಿಮ್ಮ ಭೃತ್ಯರ ಭೃತ್ಯನೆಂದು ನನ್ನನ್ನು ಭಾವಿಸಿ ನನಗೆ ಇಷ್ಟಲಿಂಗವನ್ನು ಪಾಲಿಸು"

೧೧೨. ವಿರೂಪಾಕ್ಷ ಪಂಡಿತ ಕೃತಿ: ಚೆನ್ನಬಸವ ಪುರಾಣ: ವೀರಭದ್ರಪ್ಪ ಹಾಲಭಾವಿ(ಸಂ): ಶಿ.ಶಿ. ಬಸವನಾಳ: ಪುಟ ೭೧.

ಎಂದು ಸಾಷ್ಟಾಂಗವೆರಗಲು ಅಲ್ಲಮ, ಬಸವ ಮೊದಲಾದ ಅಸಂಖ್ಯಾತ ಪ್ರಮಥರು "ಸಿದ್ಧರಾಮನಿಗೆ ದೀಕ್ಷೆಯನ್ನಿತ್ತು ಮೋಕ್ಷವನ್ನು ಕೊಟ್ಟು ರಕ್ಷಿಸುವುದು" ಎಂದರು. ಆಗ ಚೆನ್ನಬಸವನು ಸಿದ್ಧರಾಮನ ಮುಕುಟವನ್ನೆತ್ತಿದ ಕೂಡಲೆ ಅಲಂಕೃತವಾದ ತಂಡುಲದ ಚೌಕ ಮಧ್ಯವು ರಚಿತವಾಯಿತು. ಜಲಪೂರ್ಣ ಮಾಗಿರ್ದ ಪಂಚಕಲಶಗಳನ್ನು ಸ್ಥಾಪನೆಗೆಯ್ದು ಅವುಗಳನ್ನು ಹೊಸನೂಲಿನ ಐದು ಎಳೆಗಳಿಂದ ಸುತ್ತಿ ಅಷ್ಟ ವಿಧ ಪೂಜೆಯನ್ನು ಮಾಡಿ ಆಮೇಲೆ ಸಿದ್ಧರಾಮನು ಚೆನ್ನಬಸವೇಶನ ಆಜ್ಞೆಯಿಂದ ಭಸಿತ ವೀಳೆಯಗಳನ್ನು ಅಖಿಲಗುಣಕುಲದ ಮುಂದಿರಿಸಿ ನಮಿಸಿದನು. ಬಳಿಕ ಚೆನ್ನಬಸವನು ಅವನನ್ನು ತಂಡುಲಚೌಕ ಮಧ್ಯದಲ್ಲಿ ಕುಳ್ಳಿರಿಸಿ ವಿಭೂತಿಯ ಪಟ್ಟಗಟ್ಟಿ ರುದ್ರಾಕ್ಷಿಯಿಂದ ಅಲಂಕರಿಸಿ ಪಂಚಕಲಶ ಭರಿತ ಜಲವನ್ನು ದರ್ಭಾಂಕುರದಲ್ಲಿ ತಳೆದು ಅದರಿಂದ ನಾಲ್ವರಾಚಾರ್ಯರೊಡನೆ ಅವನ ಶಿರಕ್ಕೆ ಕಲಶಗಳನ್ನೆತ್ತಿ ಮೂರು ಸಾರಿ ಅಭಿಷೇಚನವನ್ನು ಮಾಡಿ ಕಲಶಗಳನ್ನು ಮರಳಿ ಅವುಗಳ ಸ್ಥಳದಲ್ಲಿರಿಸಿ ತ್ರಿವಿಧ ದೀಕ್ಷೆಗಳಿಂದ ತ್ರಿವಿಧಲಿಂಗಗಳಿಂದ ತ್ರಿವಿಧಾಂಗಗಳಿಗೆ ಕೊಟ್ಟು ಅವನ ತ್ರಿವಿಧ ಮಲಗಳನ್ನು ಛೇದಿಸಿದನು. ತರುವಾಯ ಸಿದ್ಧರಾಮನು ಗುರುಮುಖ್ಯ ಸಕಲಗಣಗಳಿಗೆ ಸಾಷ್ಟಾಂಗದಿಂದೆರಗಿ ಕುಳಿತು ಕಲಶಗಳ ಇರುವನ್ನು ಕೇಳಲು ಚೆನ್ನಬಸವೇಶನು ಅದನ್ನು ಹೇಳಿದನು[೧೧೩]

ಈ ಕಲಾಕೃತಿಯು ಉತ್ತಮ ಸಂಯೋಜನೆಯಿಂದ ರಚನೆಗೊಂಡಿದ್ದು ಅನುಭವ ಮಂಟಪದ ಅಧ್ಯಕ್ಷರಾದ ಅಲ್ಲಮಪ್ರಭುವಿನ ಅಧ್ಯಕ್ಷತೆಯಲ್ಲಿ ಬಸವಣ್ಣ ಆದಿ ಆಗಿ ಶಿವಶರಣರ ಮಧ್ಯದಲ್ಲಿ ಚೆನ್ನಬಸವಣ್ಣ ಸಿದ್ಧರಾಮನಿಗೆ ಮಂಟಪ ರಚಿಸಿ ಅದರಲ್ಲಿ ಕೂಡ್ರಿಸಿ ಪಂಚಕಳಶಹೂಡಿ ಶಾಸ್ತ್ರೋಕ್ತವಾಗಿ ದೀಕ್ಷೆಯನ್ನು ನೀಡುತ್ತಿರುವ ದೃಶ್ಯ. ಶಿವಶರಣರ ಬಳಗವೆಲ್ಲ ತದೇಕಚಿತ್ತದಿಂದ ಈ ದೀಕ್ಷಾಸಂದರ್ಭದ ದೃಶ್ಯವನ್ನು ವೀಕ್ಷಿಸುತ್ತಿದ್ದು ಅನುಭವ ಮಂಟಪ, ಸಿಂಹಾಸಾನಾರೂಢನಾದ ಅಲ್ಲಮಪ್ರಭು ಎಲ್ಲವೂ ಉತ್ತಮವಾಗಿ ಮೂಡಿ ಬಂದಿವೆ. ವರ್ಣಗಾರಿಕೆ ವ್ಯಕ್ತಿಗಳ ವೈಶಿಷ್ಟ್ಯಕ್ಕನುಗುಣವಾಗಿ ಅವರ ಸ್ಥಳಗಳ ವಿಂಗಡನೆ ಹಾಗೂ ಜೋಡಣೆ ವಿಶಿಷ್ಟವಾಗಿ ಮೂಡಿ ಬಂದಿದೆ. ಈ ಅನುಭವ ಮಂಟಪದ ಭತ್ತಿನಲ್ಲಿಯೂ ನಕ್ಷೆಗಳಿರುವುದು ಕಂಡು ಬರುತ್ತದೆ. ಅನುಭವ ಮಂಟಪವು ಸುಂದರವಾದ ಭಿತ್ತಿಚಿತ್ರಗಳಿಂದಲೂ ಅಲಂಕಾರಗೊಂಡಿರುವುದನ್ನು ಕಲಾವಿದ ತಿಳಿಸಿರುವುದು ಕಂಡು ಬರುತ್ತದೆ.

**೭. ವೀರಭದ್ರಾವತಾರದ ಚಿತ್ರ:**

ದ್ರಾಕ್ಷಾಯಣಿಯು ಕಾಯವಳಿದಳೆಂಬ ಸುದ್ದಿಯನ್ನು ನಂದಿಯು ಈಶ್ವರನಿಗೆ ತಿಳಿಸಲು ಆ ದೇವನು ಭಯಂಕರ ಕೋಪವನ್ನು ತಾಳಿದನು. ಆತನ ಕೋಪದಿಂದ ಜನರಿಗೆ ಲಯದ ಅನುಭವವಾಯಿತು. ಧರಣಿ ಧಗಧಗನೇ ಉರಿಯುತಿರ್ದುದು ಆ ಮಹಾದೇವನ ಕೋಪದಲ್ಲಿ ಮೇಲಕ್ಕೆದ್ದ ಧೂಮವೇ ಪೌರುಷಾಕರವನು ತಳೆದಂತೆ ಪ್ರಳಯಕಾಲದ ಮೇಘಗಳನ್ನು ಚಂದ್ರ ನಕ್ಷತ್ರಗಳನ್ನು ತಾಳಿದ ನೀಲಾಚಾರವು ಈಶ್ವರನ ಶ್ವಾಸದಿಂದ ಇಳಿಯಿತೆಂಬಂತೆ ಕಪ್ಪುಬಣ್ಣದ ಸಾವಿರ ಮುಖಗಳ, ಎರಡು ಸಾವಿರ ಕೈಗಳ ಮೂರು ಸಾವಿರಕಣ್ಣುಗಳ

೧೧೩. ವಿರೂಪಾಕ್ಷ ಪಂಡಿತ ಕೃತಿ: ಚೆನ್ನಬಸವ ಪುರಾಣ: ವೀರಭದ್ರಪ್ಪ ಹಾಲಭಾವಿ(ಸಂ): ಶಿ.ಶಿ. ಬಸವನಾಳ: ಪುಟ ೧೩೭.

ಭೀಮರೂಪವೊಂದು ಜನಿಸಿತು. ಆ ವಿರಾಟ್ ರೂಪವನ್ನು ವರ್ಣಿಸಲಾರದಂತೆ ಬ್ರಹ್ಮಾಂಡದಂತೆ ಶಿರವು, ಚಂದ್ರ ಸೂರ್ಯರು ಎದೆಯ ಮೇಲಿನ ಸೂತ್ರದ ರತ್ನಗಳು, ನಕ್ಷತ್ರಸಮೂಹವು ಕೊರಳೊಳಗಿನ ಮಾಲೆ ಆಗಿದ್ದವು. ಸಿಡಿಲ ಆರ್ಭಟದಂತಿದ್ದ ಧ್ವನಿಯಿಂದ ಗುಡುಗುಡಿಸುತ ಅದು ಓಡಾಡಲು ಭೂಮಿಯು ಅಲೆದಾಡುತ್ತಿತ್ತು. ತಲೆಮಾಲೆ ಫಣಿ ಭೂಷಣಗಳನ್ನೂ ಖಡ್ಗಫಲಕ ಮುಖ್ಯಾಯುಧಗಳನ್ನು, ದಪ್ಪದಾದ ಕೆಂಪುಮೀಸೆ ಕೆಂಪುಗಣ್ಣುಗಳನ್ನು ತಳೆದು ಮಹಾಶೇಷನ ಕಾಸೆಯನ್ನುಟ್ಟು ಸುರ, ನರರ ಪ್ರಾಣಗಳನ್ನು ಕೊಂಬ ಕಾಲುದೊಡೆಗಳಿಗೆ ಕಟ್ಟಿಕೊಂಡು ಕಟ್ಟಾಳುಗಳ ಶಿರೋಮಣಿಯಾದ ಆ ಮೂರ್ತಿಯು ಈಶ್ವರನಿಗೆ ಬ್ರಹ್ಮಾಂಡವನ್ನು ಜಜ್ಜಲೋ? ಬ್ರಹ್ಮನ ಎಲುವುಗಳನ್ನು ನುಗ್ಗು ಮಾಡಲೋ? ಹರಿಯ ಹರಣವನ್ನು ತೆಗೆಯಲೋ? ಏನು ಮಾಡಬೇಕು ಹೇಳು ಎನ್ನುತ್ತ ಅರ್ಭಟಿಸುತ್ತಿದ್ದನು.

ಶಿವನು ಆತನಿಗೆ "ನೀನು ಸಕಲರನ್ನು ಗೆಲ್ಲುವ ವೀರನೂ ಭದ್ರಮೂರ್ತಿಯೂ ಆದುದರಿಂದ ನೀನು "ವೀರಭದ್ರನು" ಎಂದು ಹೇಳುತ್ತಾ "ಎಲೈ ಕುಮಾರನೆ, ದಕ್ಷನೆಂಬುವನು ಹರಬ್ರಹ್ಮರನ್ನು ಕೂಡಿಕೊಂಡು ಯಾಗ ಮಾಡುತ್ತಿರುವಾಗ ಈಶ್ವರಿಯು ಅಳಿದಳು. ಆ ಸ್ಥಳಕ್ಕೆ ನೀನು ಹೋಗಿ ಅವರಿಗೆ ಬುದ್ಧಿಯನ್ನು ಹೇಳು ಮತ್ತು ರುದ್ರಭಾಗವನ್ನು ಕೊಡದಿದ್ದರೆ ಆ ಯಜ್ಞವನ್ನು ನಾಶಮಾಡಿ, ಎಲ್ಲರನ್ನೂ ಸೆರೆಹಿಡಿದುಕೊಂಡು ಬಾ" ಎಂದು ಕುಮಾರನನ್ನು ಕಳುಹಿಸಿಕೊಟ್ಟನು.[೧೧೪]

ಈ ಕಲಾಕೃತಿಯು ಅತ್ಯಂತ ಸತ್ವಶಾಲಿಯಾಗಿ ಮೂಡಿಬಂದಿದೆ. ವೀರಭದ್ರನ ಉತ್ಪತ್ತಿ ಮಾಡುವ ಶಿವನು ಹಿಂದುಗಡೆಯ ಆಕಾಶದ ನೀಲಿ ವರ್ಣದೊಂದಿಗೆ ಅತ್ಯಂತ ವೀರಾವೇಶದಿಂದ ಮುಂದಕ್ಕೆ ಬಾಗಿ ಬಲಗೈಯನ್ನು ಆವೇಶದಿಂದ ಕರೆಯುವಂತೆ ಅದ್ಭುತವಾಗಿ ಮೂಡಿ ಬಂದಿದ್ದು ಮುಂದುಗಡೆಯಲ್ಲಿ ವೀರಭದ್ರನು ಉದಯವಾಗಿದ್ದು ಚತುರ್ಭುಜನಾಗಿರುವನು. ಮುಂದಿನ ಬಲಭಾಗದ ಕೈಯಲ್ಲಿ ವೀರಗತ್ತಿಯನ್ನು ಹಿಡಿದಿದ್ದು, ಆ ಕೈಗೆ ಹಾವೊಂದು ಸುತ್ತಿಕೊಂಡಿದೆ. ಹಿಂದಿನ ಬಲಗೈಯಲ್ಲಿ ತ್ರಿಶೂಲವನ್ನು ಹಿಡಿದುಕೊಂಡಿದ್ದು ಬಲಗಾಲ ಕೆಳಗಡೆಯ ಬದಿಯಲ್ಲಿ ಕಿರೀಟವಿದೆ. ಅದಕ್ಕೆ ತಾಗುವಂತೆ ಕತ್ತಿಯು ಇದ್ದು ಅವನ ಶೂರತನದಿಂದಾಗಿ ಅರಸ ನಾಯಕರ ತಲೆಗಳುರುಳಿದ ಸಂಕೇತವನ್ನು ಸೂಚಿಸುತ್ತಿದ್ದರೆ, ಕೊರಳಲ್ಲಿ ಹಾಕಿಕೊಂಡಿರುವ ತಲೆಬುರುಡೆಗಳ ಸರವನ್ನು ವಿಜಯದ ಸಂಕೇತವೆಂಬಂತೆ ತೋರಿಸಲಾಗಿದೆ. ಎಡಗೈಯ ಮುಂದಿನ ಭಾಗದಲ್ಲಿ ಬಿಲ್ಲು ಹಿಡಿದುಕೊಂಡಿದ್ದು ಹಿಂದಿನ ಎಡಗೈಯಲ್ಲಿ ಪುಸ್ತಕದ ಕಟ್ಟನ್ನು ಹಿಡಿದುಕೊಂಡಿರುವನು. ಹಳದಿ ಪಂಚೆಯನ್ನುಟ್ಟಿದ್ದು ಅದರ ಮೇಲೆ ಕೆಂಪು ವಸ್ತ್ರವನ್ನು ಕಟ್ಟಿಕೊಂಡಿರುವಂತಿದ್ದು ತೆರೆದೆದೆಯನ್ನು ಹೊಂದಿದ್ದು ಕೊರಳಲ್ಲಿ ಸರವನ್ನು ಹಾಕಿಕೊಂಡಿದ್ದು ಕೊರಳಿಗೆ ಹಾವನ್ನು ಹಾಕಿಕೊಂಡಿರುವನು. ಬೆನ್ನು ಹಿಂದುಗಡೆ ಬಾಣಗಳ ಬತ್ತಳಿಕೆಯಿದೆ. ತಳವನ್ನು ಕಂದುಗೆಂಪು ಬಣ್ಣದಿಂದ ಹಾಗೂ ಹಿಂದುಗಡೆ ನೀಲಿವರ್ಣದ ಆಕಾಶ, ನಡುವೆ ಹಸಿರು ಭೂಮಿಯನ್ನು ಅತ್ಯಂತ ಸುಂದರವಾಗಿ ಚಿತ್ರಿಸಲಾಗಿದೆ. ಇದನ್ನು ಶ್ರೀ ದ್ಯಾವಪ್ಪ ಜಿ.ಬಡಿಗೇರ ಅವರು ಚಿತ್ರಿಸಿರುವರು.

---

೧೧೪. ವಿರೂಪಾಕ್ಷಪಂಡಿತ ಕೃತಿ: ಚೆನ್ನಬಸವ ಪುರಾಣ: ವೀರಭದ್ರಪ್ಪಾ ಹಾಲಭಾವಿ(ಸಂ): ಶಿ.ಶಿ. ಬಸವನಾಳ: ಪುಟ ೬೨.

### ೮. ಅಂಧಕಾಸುರನ ಓಲಗದ ದೃಶ್ಯ:

ವಿಷ್ಣು ಬ್ರಹ್ಮ ಇಂದ್ರ ಮುಂತಾದವರನ್ನು ಗೆಲ್ಲುವ ಪುತ್ರನ ಸಲುವಾಗಿ ಈಶ್ವರನನ್ನು ಕುರಿತು ಬಹುಕಾಲ ತಪಸ್ಸು ಮಾಡುತ್ತಿರುವ ಹಿರಣ್ಯಾಕ್ಷನನ್ನು ಶಿವನು ಕಂಡು, ಕಾಳಿಕಾ ದೇವಿಯ ಚಕ್ಷುವಿನಿಂದ ಉದಯಿಸಿದ ಮಗುವನ್ನು ಅವನಿಗೆ ನೀಡಿ ಮರಳಿದನು. ಹಿರಣ್ಯಾಕ್ಷನು ಸಂತೋಷದಿಂದ ಅವನ ಹೆಂಡತಿಗೆ ನೀಡಿದನು. ಅವನ ಗುರುಗಳಾದ ಶುಕ್ರಾಚಾರ್ಯರ ಅಪ್ಪಣೆಯ ಮೇರೆಗೆ ಆ ಶಿಶುವಿಗೆ ಅಂಧಕಾಸುರನೆಂದು ಹೆಸರಿಟ್ಟರು. ಹಿಂದಕ್ಕೆ ಹರಿಯು ವರಾಹ, ನರಸಿಂಹಾವತಾರಗಳಲ್ಲಿ ಸಂಹರಿಸಿದ ಹಿರಣ್ಯಾಕ್ಷ, ಹಿರಣ್ಯಕಶಿಪುವಿನ ಅಣ್ಣತಮ್ಮಂದಿರ ಪುತ್ರ ಮಿತ್ರ ಸಾಮಂತ ಸೇನಾನಿಗಳು ಶುಕ್ರನ ಆದೇಶದಂತೆ ಅಂಧಕಾಸುರನೆಡೆಗೆ ಬಂದು ಅವನಿಗೆ ಕಾಣಿಕೆಗಳನ್ನು ನೀಡಿ, ಅವನಿಗೆ ಅಸುರ ರಾಜನ ಪಟ್ಟಿಗಟ್ಟಿದರು. ಸಪ್ತಸಮುದ್ರಗಳನ್ನು ದಾಟಿ ಸಪ್ತದ್ವೀಪಗಳನ್ನು ಜಯಿಸಿಕೊಂಡಿದ್ದ ಈತನನ್ನು ಕಂಡ ವಿಷ್ಣು ಮುಂತಾದವರು ರಜತಗಿರಿಯನ್ನು ಸೇರಿದರು. ಆಮೇಲೆ ಅಂಧಕಾಸುರನು ತನ್ನನ್ನೆದುರಿಸುವವರಾರಿಲ್ಲವೆಂದು ಓಲಗವನ್ನು ನಡೆಸುತ್ತಿದ್ದನು. ಅಲ್ಲಿಗೆ ಆಕಾಶಮಾರ್ಗದಿಂದ ನಾರದನು ಬರುವನು. ಅವನು ಬಂದ ಕಾರಣ ಕೇಳಿದಾಗ ನಾರದನು ಉತ್ತರಿಸುತ್ತ "ನಿನ್ನ ಭುಜದರ್ಪದಿಂದ ನೊಂದ ಹರಿಮುಖ್ಯ ದೇವತೆಗಳು ಶಿವನಿಗೆ ಮೊರೆ ಇಡಲು ಅದನ್ನು ಕೇಳಿ ಈಶ್ವರನು ನಿನ್ನ ವಧೆಗೆ ಬರುವನೆಂದು ನಿನಗೆ ಹೇಳಲು ಬಂದೆವು" ಎಂದನು. "ಜಗದೊಡೆಯನು ಇನ್ನೊಬ್ಬನಿರುವನೆಂದು ಇಂದಿನವರೆಗೆ ಯಾರೂ ಹೇಳಿರಲಿಲ್ಲ. ನಮ್ಮ ಪಿತನನ್ನು ಸೀಳಿದವನನ್ನು ನಮ್ಮನ್ನು ಕೊಂದು ಬಾಳುವವನ ಹೆಸರೇನು? ಹರಿಯು ನಮ್ಮ ದೂರನು ಆ ಮಸಣಗಾಹಿಗೆ ಉಸುರಿದರೆ! ಆ ಬೂದಿಬಡಕನು ಅವರ ಮೊರೆಯನ್ನು ಆಲಿಸಿದನೆ? ದಿಗ್ವಿಜಯದಲ್ಲಿ ಗೊರವನೆಂದು ನಾವು ಅವನನ್ನು ಉಳಿಸಿದೆವು. ಅವನೇ ಜಗತ್ ಕರ್ತುವಂತೆ" ಎಂದು ಗರ್ಜಿಸಿದನು. ಅವನ ಗರ್ಜನೆಯಿಂದ ನಾರದನು ಬೆದರಿ ಹೋದನು ಬಳಿಕ ಕೈಲಾಸಕ್ಕೆ ದಾಳಿಯಿಡಲಿಕ್ಕೆ ನೇಮಿಸಿದನು[೧೧೫]

ಈ ಕಲಾಕೃತಿಯಲ್ಲಿ ಸಿಂಹಾಸನಾರೂಢನಾದ ಅಂಧಕಾಸುರನು ನಾರದನನ್ನು ಪಕ್ಕದಲ್ಲಿ ಕೂಡ್ರಿಸಿಕೊಂಡು ಅವನು ಬಂದ ವಾರ್ತೆಯನ್ನು ಕೇಳುತ್ತಿದ್ದು ಪಕ್ಕದಲ್ಲಿ ಮಹಿಳೆಯರು ಚಾಮರ ಬೀಸುತ್ತಿದ್ದರು. ಸಿಂಹಾಸನದ ಬಲಭಾಗದಲ್ಲಿ ಕೆಳಗೆ ಅಸುರರು ಸಾಲಾಗಿ ಕುಳಿತು ನಾರದನ ಮಾತುಗಳನ್ನು ತಮಾಷೆ ಮಾಡುತ್ತಿರುವಂತಿದೆ. ಸಿಂಹಾಸನದ ಎದುರಿನ ಎಡಬದಿಯಲ್ಲಿ ಮಂತ್ರಿಗಳು ಆಸೀನರಾಗಿದ್ದು ಅದರಲ್ಲಿ ಓರ್ವ ಮಂತ್ರಿ ನಾರದನನ್ನು ಮತ್ತು ಶಿವನನ್ನು ತೆಗಳುತ್ತಿದ್ದು ನಾರದನು ಸಮಾಧಾನವಾಗಿರುವಂತೆ ಸೂಚಿಸುತ್ತಿದ್ದು ಅಂಧಕಾಸುರ ರಾಜನು ಸಂತೋಷದಿಂದ ಮಂತ್ರಿಯ ಮಾತುಗಳನ್ನು ಆಲಿಸುತ್ತಿರುವ ದೃಶ್ಯ ಸುಂದರವಾಗಿ ಮೂಡಿಬಂದಿದೆ. ಅಂಧಕಾಸುರನ ಅರಮನೆಯ ದೃಶ್ಯದಲ್ಲಿ ಅಸುರರು ಮಂತ್ರಿವರ್ಗ, ರಾಜಾ ಅಂಧಕಾಸುರ, ನಾರದ ಹೀಗೆ ಸುಂದರವಾಗಿ ಸಂಯೋಜನೆ ಮಾಡಿರುವರು. ವರ್ಣಗಾರಿಕೆಯು ಉತ್ತಮವಾಗಿ ಮೂಡಿ ಬಂದಿದೆ. ಈ ಕಲಾಕೃತಿಯನ್ನು ಶ್ರೀ ಚಂದ್ರಶೇಖರಪ್ಪ ಕಾರಡಗಿಯವರು ರಚಿಸಿರುವರು.

---

೧೧೫. ವಿರೂಪಾಕ್ಷ ಪಂಡಿತ ಕೃತಿ: ಚೆನ್ನಬಸವ ಪುರಾಣ: ವೀರಭದ್ರಪ್ಪ ಹಾಲಭಾವಿ(ಸಂ): ಶಿ.ಶಿ. ಬಸವನಾಳ: ಪುಟ ೯೭–೯೮.

**೯. ಗಿರಿಜಾ ಕಲ್ಯಾಣದ ದೃಶ್ಯ:**

ಗಿರಿಜೆ ಮತ್ತು ಶಿವರು ಮದುವೆಗೆ ಸಿದ್ದರಾದಂತೆ, ವಿಷ್ಣು ಬ್ರಹ್ಮ, ಇಂದ್ರ, ಗರುಡ, ಗಂಧರ್ವ, ಕಿನ್ನರ, ಯಕ್ಷ ಮುಂತಾದ ದೇವಾಧಿದೇವತೆಗಳು ಲೋಕವಾಸಿಗಳು ಬ್ರಹ್ಮಾಂಡದ ಜನವೆಲ್ಲ ನೋಡಲು ಉತ್ಸಾಹದಿಂದ ಕೂಡಿದರು ಶಿವನು ಮುತ್ತಿನ ಬಾಸಿಂಗವನ್ನು ಕಟ್ಟಿಕೊಂಡು ನಂದಿಯನ್ನು ಏರಿದನು. ಅತ್ತ ಪಾರ್ವತಿಯು ಶೃಂಗಾರಗೊಂಡಳು. ಆ ಸಮಯದಲ್ಲಿ ಈಶ್ವರನಿಗೆ ಬೃಹಸ್ಪತಿಯು ಮುಹೂರ್ತವು ಸಮೀಪಿಸಿತು ಎಂದು ತಿಳಿಸಿದ. ವಿಷ್ಣು ಬ್ರಹ್ಮಾದಿ ದೇವಾಧಿ ದೇವತೆಗಳೆಲ್ಲ ಎಡಬಲಗಳಲ್ಲಿ ಗುಂಪಾಗಿರಲು ನಂದಿ ಮಹಾಕಾಳರು ವ್ಯವಸ್ಥೆ ಮಾಡುತ್ತಿದ್ದರು. ಪಾರ್ವತಿಯೂ ಬಂಗಾರದ ಪಲ್ಲಕ್ಕಿಯಿಂದ ಇಳಿದು ನವರತ್ನ ಖಚಿತ ವೇದಿಕೆಯನ್ನು ಏರಲಾಗಿ ಸಕಲ ಜನಸಮೂಹವು ಹರ್ಷದಿಂದ ಜಯಜಯವೆಂದು ಘೋಷಿಸುತ್ತಲಿರಲು ಇನ್ನೊಂದೆಡೆ ಲಕ್ಷ್ಮಿ, ಸರಸ್ವತಿ, ಶಚಿ, ಅಹಲ್ಯಾ, ಗಾಯತ್ರಿ, ಸಾವಿತ್ರಿ ಮುಂತಾದವರೆಲ್ಲ ಶೋಭಾನವನ್ನು ಹಾಡಿದರು. ಈಶ್ವರ ಗಿರಿಜೆಯರು ಸೆಸಿಯನ್ನೇರಿದರು. ಆಮೇಲೆ ಸುರಗುರುವು ಶಿವನ ಮಂಗಳಾಷ್ಟಕವನ್ನು ಓದುತ್ತ "ಆಯತಾಯತವು" ಎನ್ನಲು ಮುನಿವರರು "ಸರ್ವಾಯತಾಯತವು" ಎನ್ನಲು ತೆರೆಸೀರೆಯು ಸರಿಯಿತು. ಹರಗಿರಿಜೆಯರು ಜೀರಿಗೆ ಬೆಲ್ಲವನ್ನು ಒಬ್ಬರ ಮೇಲೊಬ್ಬರು ಒಗೆದರು. ಅದನ್ನು ನೋಡಿ ಹರಿಬ್ರಹ್ಮೇಂದ್ರಾದಿಗಳು ಜಯಜಯಕಾರ ಮಾಡಿದರು. ಶಿವಶಿವೆಯರು ಒಬ್ಬರೊಬ್ಬರ ಮೇಲೆ ಮುತ್ತಿನಕ್ಷತೆಯನ್ನು ಸೂಸಿದರು. ಗಿರಿರಾಜನು ಈಶ್ವರನ ಹತ್ತಿರ ಬಂದು ಮಗಳನ್ನು ಮುಂದಿಟ್ಟು ಧಾರೆಯೆರೆದನು. ಆಮೇಲೆ ಸಮೀಪದ ಮನೆಯೊಳಗೆ ಈಶ್ವರನು ಪಾರ್ವತಿಸಹಿತ ಹಸೆಯ ಮೇಲೆ ವಿರಾಜಮಾನನಾದ ಮೇಲೆ ಹರಿಬ್ರಹ್ಮೇಂದ್ರಾದಿ ದೇವತೆಗಳು ಸೇಸೆಯನ್ನಿಟ್ಟು ಹೊರಟು ಹೋದರು. ಅನಂತರ ಈಶ್ವರನು ಗಣಂಗಳನ್ನು ಪಂಕ್ತಿಯಲ್ಲಿ ಕೂಡಿಕೊಂಡು ಗಿರಿಜೆಯೊಡನೆ ಭೂಮವನುಂಡು, ನಾಲ್ಕನೆಯ ದಿನ ರಾತ್ರಿ ನಾಗವಲಿಯನ್ನು ಮಾಡಿದರು. ಆಮೇಲೆ ಹಿಮರಾಜನು ಅಳಿಯನಿಗೆ ಉಡುಗೊರೆ ನೀಡಿದನು. ಮರುದಿನ ನಿಬ್ಬಣಕ್ಕೆ ಬಂದಿರುವವರಿಗೆಲ್ಲ ಮೃಷ್ಟಾನ್ನವನ್ನು ಊಟ ಮಾಡಿಸಿ ಗಂಧ ತಾಂಬೂಲಗಳಿಂದ ತೃಪ್ತಿ ಪಡಿಸಿ ವಸ್ತ್ರಾಭರಣಗಳ ಉಡುಗೊರೆ ನೀಡಿದನು. ನಂತರ ವಸಂತೋತ್ಸವದ ಸಲುವಾಗಿ ಕುಂಕುಮ, ಚಂದನ, ಕಸ್ತೂರಿ ಇವುಗಳ, ನೀರಿನ ಕೊಪ್ಪರಿಗೆಗಳನ್ನು ತುಂಬಿ ಇಟ್ಟಿದ್ದರು. ಓಕುಳಿಯ ಮಗ್ಗುಲಿನ ಮಂಟಪಕ್ಕೆ ಬಂದುಕೂಡ್ರಲು ಪಾರ್ವತಿಯು ಜೀಕಳಿಯಿಂದ ಚಂದನದ ನೀರನ್ನು ಶಿವನ ಮೇಲೆ ಎಸೆದಳು. ಆಗ ಈಶ್ವರನು ಶಿವೆಯ ಮೇಲೆ ಕಸ್ತೂರಿಯ ನೀರನ್ನು ಚಿಮ್ಮಿದನು. ಹರಿಬ್ರಹ್ಮಾದಿಗಳೆಲ್ಲ ಅವರವರ ಪತ್ನಿಯರೊಂದಿಗೆ ಜೀಕಳಿ ಆಟವನ್ನು ಆಡಿದರು. ಆನಂತರ ಅಳಿಯನಿಗೆ ಕಾಣಿಕೆಯನ್ನು ಮಗಳಿಗೆ ಬಳುವಳಿಯನ್ನು ಜಯೆ ವಿಜಯೆ ಮುಂತಾದ ಸಖಿಯರ ಜಾಲವನ್ನು ಅಮೂಲ್ಯ ವಸ್ತ್ರಾಭರಣವನ್ನು ಸಕಲ ಗಣವೃಂದಕ್ಕೂ ನೀಡಿ ಕಳುಹಿಸಿದನು. ನಂತರ ಗಿರಿರಾಜ, ಮೇನಕೆಯರು ಗಿರಿಜೆಯ ಪಾದಕ್ಕೆ ನಮಸ್ಕರಿಸಿ, ತಾಯೆ ನಿನ್ನನ್ನು ಪಡೆದ ಪುಣ್ಯ ವೃಕ್ಷದ ಫಲದಿಂದ ಈಶ್ವರನು ನಮ್ಮ ಮನೆಗೆ ಬಂದನು. ಉಳಿದೆಲ್ಲ ದೇವತೆಗಳನ್ನು ನೋಡು ಭಾಗ್ಯ ಸಿಕ್ಕಿತು ಎಂದರು.

ಈಶ್ವರನು ಗಿರಿಜೆಯೊಂದಿಗೆ ನಂದಿಯನ್ನು ಏರಿದರೆ, ಹರಿಬ್ರಹ್ಮಾದಿಗಳೆಲ್ಲ ತಮ್ಮ ವಾಹನಗಳ ಮೇಲೆ ಏರಿಕೊಂಡು ಸಂತೋಷದಿಂದ ಕೈಲಾಸಕ್ಕೆ ತೆರಳಿದರು.[೧೧೬]

ಈ ಕಲಾಕೃತಿಯಲ್ಲಿ ಅತ್ಯಂತ ವಿಶಿಷ್ಟವಾದ ಸಂಯೋಜನೆಯನ್ನು ಮಾಡಿಕೊಂಡಿದ್ದು ಪ್ರಮುಖವಾಗಿ ಐದು ಭಾಗಗಳನ್ನಾಗಿ ಮಾಡಿಕೊಂಡಿರುವರು. ಮದುವೆಯ ಪ್ರಮುಖ ವೇದಿಕೆಯನ್ನು ಮಧ್ಯದಲ್ಲಿ ಮಾಡಿಕೊಂಡು ಅದರಲ್ಲಿ ಶಿವ ಗಿರಿಜೆಯರನ್ನು ಕೂಡಿಸಿದ್ದು ಸುರುಗುರುವಿನ ಮಂತ್ರದಂತೆ ಅವರು ತಮ್ಮ ಕಾರ್ಯದಲ್ಲಿ ತೊಡಗಿದ್ದರೆ ಅವರ ಹಿಂದುಗಡೆ ಸಖಿಯರು ಚಾಮರ ಛತ್ರಗಳನ್ನು ಹಿಡಿದುಕೊಂಡಿರುವರು. ಹಿಂದಿನ ಬಲಭಾಗದಲ್ಲಿ ದೇವಾಧಿದೇವತೆಗಳು ಕುಳಿತಿರುವರು. ಬ್ರಹ್ಮ, ವಿಷ್ಣು, ದೇವೇಂದ್ರರು ಮೊದಲಸಾಲಿನಲ್ಲಿರುವರು. ಮುಂದುಗಡೆ ಬಲಭಾಗದಲ್ಲಿ ಪುರುಷ ವಾದ್ಯಗಾರರು ವಾದ್ಯ ನುಡಿಸುತ್ತಿರುವರು. ವೇದಿಕೆಯ ಎಡಭಾಗದ ಹಿಂದುಗಡೆ ದೇವತೆಗಳು ಲಕ್ಷ್ಮಿ, ಸರಸ್ವತಿ, ಅಹಲ್ಯಾ, ಮೇನಕೆ ಮುಂತಾದವರು ಕುಳಿತಿದ್ದು ಅವರ ಎದುರಿನಲ್ಲಿ ನೃತ್ಯವನ್ನು ಮಾಡುತ್ತಿರುವ ದೃಶ್ಯವೇದಿಕೆಯಿದ್ದು ಎಡಗಡೆಯ ಮುಂದಿನ ಭಾಗದಲ್ಲಿ ಮಹಿಳಾ ವಾದ್ಯಗಾರರಿರುವರು ಮೇಲಿನಿಂದ ಸೂರ್ಯ ಚಂದ್ರರು ಹೂಮಳೆಗರೆಯುತ್ತಿದ್ದಾರೆ. ಮಂಟಪದ ಎಡಬಲಗಳಲ್ಲಿ ಬಾಳೆಯ ಗಿಡಗಳನ್ನು ಕಟ್ಟಲಾಗಿದ್ದು ವೇದಿಕೆಯ ಹಿಂದುಗಡೆ ಜನಸಾಮಾನ್ಯರೆಲ್ಲ ನೆರೆದಿದ್ದು ಇಲ್ಲಿ ಬರುವ ಹಲವಾರು ವ್ಯಕ್ತಿಗಳ ಹಾವಭಾವಗಳು, ವರ್ಣವಿನ್ಯಾಸ ಬೇರೆ ಬೇರೆ ವೇದಿಕೆಗಳನ್ನು ಮಾಡಿಕೊಂಡು ಆ ಸಮೂಹಗಳ ಜೋಡಣೆ ತುಂಬಾ ಉತ್ಕೃಷ್ಟವಾಗಿ ಮೂಡಿ ಬಂದಿದೆ. ಈ ಕಲಾಕೃತಿಯನ್ನು ಶ್ರೀ ದಾನಪ್ಪ ಹಾಲಭಾವಿಯವರು ರಚಿಸಿರುವರು.

**೧೦. ಅರ್ಜುನನಿಗೆ ಪಾಶುಪತಾಸ್ತ್ರಪ್ರದಾನದ ದೃಶ್ಯ:**

ವನವಾಸದಲ್ಲಿದ್ದ ಪಾಂಡವರ ಬಳಿ ಒಂದು ದಿನ ವೇದವ್ಯಾಸರು ಅವರಿದ್ದಲ್ಲಿಗೆ ಹೋಗಿ ಧರ್ಮರಾಜನಿಗೆ ಈಶ್ವರನಿಂದ ಪಾಶುಪತಾಸ್ತ್ರವನ್ನು ಪಡೆದರೆ ಅದರಿಂದ ನಿಮಗೆ ಜಯಿಸಲು ಸಾಧ್ಯವಾಗುವುದು ಎಂದರು. ಧರ್ಮರಾಜ ಅದು ಹೇಗೆ ಸಾಧ್ಯವೆಂದು ಕೇಳಿದಾಗ, ವ್ಯಾಸನು ಅರ್ಜುನನಿಗೆ ಅದು ಸಾಧ್ಯವೆಂದು, ಅವನಿಗೆ ಶಿವನೊಲಿಯುವನೆಂದು ಅದಕ್ಕಾಗಿ ಮಂತ್ರೋಪದೇಶವನ್ನು ಮಾಡಿಹೋದನು. ನಂತರ ಧರ್ಮರಾಜನು ಅರ್ಜುನನನ್ನು ಕರೆದು ಈ ಎಲ್ಲ ವಿಷಯ ತಿಳಿಸಿ ಮಂತ್ರೋಪದೇಶವನ್ನು ತಿಳಿಸಿದನು. ಅಂತೆಯೇ ಇಂದ್ರಕೀಲ ಪರ್ವತಕ್ಕೆ ಬಂದು ತಪವನ್ನಾಚರಿಸತೊಡಗಿದನು. ಇದರಿಂದಾಗಿ ಇಲ್ಲಿನ ಋಷಿಗಳು ಭಯಭೀತರಾಗಿ ಓಡಲು ನಾರದನು ಈ ಸುದ್ದಿಯನ್ನು ಶಿವನಿಗೆ ಮುಟ್ಟಿಸಲು ಆಗ ಶಿವನು ಅಲ್ಲಿ ತಪಸ್ಸು ಮಾಡುವ ವ್ಯಕ್ತಿ ನಮ್ಮ ಪರಮಭಕ್ತ, ಅವನಿಂದ ಅವರಿಗೆ ಏನೂ ತೊಂದರೆ ಇಲ್ಲವೆಂದು ಹೇಳಿ ಕಳುಹಿಸಿದನು. ನಂದಿಯನ್ನು ಕರೆದು ಗಣಸಮೂಹದೊಂದಿಗೆ ಹರನು ನಾನಾವಾದ್ಯಗಳ ರಭಸದಿಂದ ಇಂದ್ರ ಕೀಲಪರ್ವತಕ್ಕೆ ಬಂದನು. ಅಲ್ಲಿಯ ಘೋರಾರಣ್ಯವನ್ನು ಹೊಕ್ಕರು. ಆ ಗಿರಿಯ ಗುಹೆಯಲ್ಲಿರುವ ಮೂಕದಾನವನನ್ನು ಭೀಕರಾಕಾರವಾಗಿ ಆ

---

೧೧೬. ವಿರೂಪಾಕ್ಷ ಪಂಡಿತ ಕೃತಿ: ಚೆನ್ನಬಸವ ಪುರಾಣ: ವೀರಭದ್ರಪ್ಪ ಹಾಲಭಾವಿ(ಸಂ): ಶಿ.ಶಿ. ಬಸವನಾಳ: ಪುಟ ೭೬–೭೭.

ಸೂಕರವು ಸುರಭಟರನ್ನು ಕೊಚ್ಚಿ ಕೋರೆಯಿಂದ ಒಡ್ಡಿದ ಬಲೆಯನ್ನು ಸವರುತ್ತ ಅಡ್ಡ ಬಂದ ತರುಲತೆಗಳನ್ನು ಹಾರಿಸುತ್ತಿತ್ತು. ಇದನ್ನು ನೋಡಿದ ಹರನು ಅದರ ಮೇಲೊಂದು ಬಾಣ ಬಿಡುವನು. ಆಗ ಮುಕ್ಕಣ್ಣನ ಕಡೆಯ ಬೇಡನು ಕಿಟಿಯು ದಕ್ಕಿತೆಂದು ಅದನ್ನು ಗಟ್ಟಿಯಾಗಿ ಹಿಡಿದನು. ಇದನ್ನು ಕಂಡ ಅರ್ಜುನನು ನಾನು ಕೊಂದ ಹಂದಿಯನ್ನು ಒಯ್ಯುವಿಯಾ? ನಿನ್ನ ತೆತ್ತಿಗನನ್ನು ತಂದು ತೋರಿಸು, ಅವನ ಸಾಮರ್ಥ್ಯವನ್ನು ನೋಡುತ್ತೇನೆ ಎಂದನು.  ಇಂದುಧರನು (ಶಿವ) ನರನ ಹತ್ತಿರ ಬಂದು ಹಂದಿಯು ನಮ್ಮದೆನ್ನಲಾಗಿ ಪಾರ್ಥನು ಸಿಟ್ಟಿಗೆದ್ದು ಎಲೆ ಕಿರಾತಕ, ನಿನ್ನ ಜಾಣ್ಮೆ ಸಾಕು. ಹಂದಿ ನನ್ನ ಬಾಣದಿಂದ ಬಿದ್ದಿದ್ದು ಇಲ್ಲವೇ ಈ ಶರಾವಳಿ ತೆಗೆದುಕೋ, ಎಂದು ಬಾಣಗಳನ್ನು ಎಸೆಯಲು ಅವು ಶಂಭುವನ್ನು ತಾಕದೇ ಇದ್ದಾಗ ಮತ್ತೆ ಮತ್ತೆ ಬಿಡಲು ಅವು ಮರಳಿದವು. ಮಂತ್ರಾಸ್ತ್ರಗಳನ್ನು ಬಿಡಲು ಅವುಗಳನ್ನು ನುಂಗಿದ ನಂತರ ಇಬ್ಬರೂ ಮಲ್ಲಯುದ್ಧ ಮಾಡಿದರು.  ಮುಷ್ಟಿಯುದ್ಧ ಮಾಡಿದರು. ನರನನ್ನು ಭೂಮಿಯ ಮೇಲೆ ಕೆಡವಿ ಮೆಟ್ಟಲು ರಕ್ತವನ್ನು ಕಾರಿ ಮೂರ್ಛೆಹೋದ ಕೌಂತೇಯನು ಚೇತರಿಸಿಕೊಂಡು ಶಿವಮತವನ್ನು ಹಿಳಿದು ಶಿವಭಕ್ತರನ್ನು ನಿಂದಿಸಿದ ಕಾರಣ ನನಗೆ ಈ ಪರಿ ಆಯಿತೆಂದುಕೊಂಡು ಮಳಲಿನ ಲಿಂಗವ ಮಾಡಿ ಪೂಜಿಸಲು ಶಿವನು ಅವನನ್ನು ಮೇಲಕ್ಕೆತ್ತಿ ತನ್ನ ನಿಜರೂಪ ತೋರಿಸಲು ಆನಂದಿತನಾಗಿ ಅರ್ಜುನನು ಶಿವನಿಗೆ ಪಾಶುಪತಾಸ್ತ್ರವನ್ನು ನೀಡೆಂದು ಕೇಳಿದನು. ಶಿವನು ಅದನ್ನು ಅವನಿಗೆ ಕರುಣಿಸಿದನು.[೧೧೭]

ಈ ಕಲಾಕೃತಿಯಲ್ಲಿ ಮುಂದುಗಡೆಯ ಭಾಗದಲ್ಲಿ ಪಾರ್ಥಮಳಲ ಲಿಂಗವನ್ನು ಮಾಡಿ ಪೂಜಿಸುತ್ತಿದ್ದು ಅವನ ಹಿಂದುಗಡೆಯಲ್ಲಿ ಶಿವಪಾರ್ವತಿಯರು ನೋಡುತ್ತಾ ನಿಂತಿರುವರು. ಅವರ ಹಿಂದುಗಡೆಯಲ್ಲಿ ಶಿವಗಣರೆಲ್ಲ ಆಯುಧಗಳನ್ನು ಹಿಡಿದುಕೊಂಡು ನಿಂತಿರುವರು. ಕೆಲವರು ಕುಳಿತಿರುವರು. ಈ ಸಂಯೋಜನೆಯಲ್ಲಿ ಬರುವ ಪ್ರತಿಯೊಬ್ಬ ವ್ಯಕ್ತಿಯ ಬೇರೆ ಬೇರೆ ಹಾವಭಾವಗಳನ್ನು ಅಂದವಾಗಿ ತೋರಿಸಿದ್ದು, ಇಲ್ಲಿಯೂ ಕೂಡಾ ವಿಂಗಡಣೆ ಮಾಡಿಕೊಂಡ ರೀತಿ ಉತ್ತಮವಾಗಿ ಮೂಡಿ ಬಂದಿದೆ. ನೆಲವನ್ನು ಕೆಂಪುವರ್ಣದಿಂದ ತೋರಿಸಿದ್ದು ಬೆಳಕಿನ ವಿನ್ಯಾಸದೊಂದಿಗೆ ಪ್ರಮುಖ ವ್ಯಕ್ತಿಗಳಿಗೆ ವಿಶೇಷವಾಗಿ ಬೆಳಕನ್ನು ತೋರಿಸಿದ್ದು ಉಳಿದ ವ್ಯಕ್ತಿಗಳಿಗೆ ನೆರಳಿನಲ್ಲಿ ತೋರಿಸುವ ತಂತ್ರವೂ ಸುಂದರವಾಗಿ ಮೂಡಿ ಬಂದಿದೆ. ಈ ಕಲಾಕೃತಿಯನ್ನು ಶ್ರೀ ದಾನಪ್ಪ ಹಾಲಭಾವಿ ಅವರು ರಚಿಸಿರುವರು.

**೧೧. ಷಟ್‌ಚಕ್ರ ವಿವರದ ಚಿತ್ರ :**

ಜ್ಞಾನ ಕರ್ಮೇಂದ್ರಿಯಗಳಿಗೆ ಹೃದಯವೇ ನೆಲೆವೀಡು(೧) ಆ ಹೃದಯಕ್ಕೆ ಹೃದಯವೂ (೨) ಶ್ರೋತ್ರಕ್ಕೆ – ಶ್ರೋತ್ರವೂ (೩) ತ್ವಕ್ಕಿಗೆ – ತ್ವಕ್ಕೂ (೪) ನೇತ್ರಕ್ಕೆ – ನೇತ್ರವೂ (೫) ಜಿಹ್ವೆಗೆ–ಜಿಹ್ವೆಯೂ (೬) ನಾಸಿಕಕ್ಕೆ–ನಾಸಿಕವೂ ವಾಕ್ಕಿಗೆ–ವಾಕ್ಕೂ, ಪಾಣಿಗೆ–ಪಾಣಿಯೂ, ಪಾದಕ್ಕೆ–ಪಾದವೂ, ಗುಹ್ಯಕ್ಕೆ–ಗುಹ್ಯವೂ, ಪಾಯುಗೆ–ಪಾಯುವು ಲಿಂಗಮುಖಗಳಾಗಿರುವವು, ಮತ್ತು (೧) ಹೃದಯದ ಹೃದಯವೇ ಮಹಾಲಿಂಗವು (೨) ಶ್ರೋತ್ರದ

---

೧೧೭ ವಿರೂಪಾಕ್ಷ ಪಂಡಿತ ಕೃತಿ: ಚೆನ್ನಬಸವ ಪುರಾಣ: ವೀರಭದ್ರಪ್ಪ ಹಾಲಭಾವಿ(ಸಂ): ಶಿ.ಶಿ. ಬಸವನಾಳ: ಪುಟ ೧೧೨,೧೧೩.

ಶ್ರೋತ್ರವೇ - ಪ್ರಸಾದ ಲಿಂಗವು (೩) ತ್ವಕ್ಕಿನ ತ್ವಕ್ಕೇ-ಜಂಗಮಲಿಂಗವು (೪) ನೇತ್ರದ ನೇತ್ರವೆ-ಶಿವಲಿಂಗವು (೫) ಜಿಹ್ವೆಯ ಜಿಹ್ವೆಯು-ಗುರುಲಿಂಗವು, (೬) ನಾಸಿಕದ ನಾಸಿಕವೇ-ಆಚಾರಲಿಂಗವು ಪರಿವಿಡಿಯೊಳೆಂತಿಹುದು ಪ್ರವೃತ್ತಿಮಾರ್ಗವು.

ನಿವೃತ್ತಿ ಮಾರ್ಗಾಭಿಧಾನವುಳ್ಳ ಷಟ್‌ಚಕ್ರಭೇಧಗಳು ಈ ಶರೀರದಲ್ಲಿ

| ಅ.ನಂ. | ಚಕ್ರಗಳು | ದಳಗಳು | ಬಳ್ಳಿಗಳು (ಅಕ್ಷರಗಳು) |
|---|---|---|---|
| ೧. | ಆಧಾರದಲ್ಲಿ | ೪ | ವ, ಶ, ಷ, ಸ |
| ೨. | ಸ್ವಾಧಿಷ್ಠಾನದಲ್ಲಿ | ೬ | ಬ, ಭ, ಮ, ಯ, ರ, ಲ |
| ೩. | ಮಣಿಪೂರಕದಲ್ಲಿ | ೧೦ | ಡ, ಢ, ಣ, ತ, ಥ, ದ,ಧ, ನ, ಪ, ಫ |
| ೪. | ಅನಾಹತದಲ್ಲಿ | ೧೨ | ಕ,ಖ,ಗ,ಘ,ಙ, ಚ, ಛ,ಜ,ಝ,ಞ,ಟ,ಠ |
| ೫. | ವಿಶುದ್ಧಿಯಲ್ಲಿ | ೧೬ | ಅ,ಆ,ಇ,ಈ,ಉ,ಊ,ಋ,ೠ,ಎ,ಏ,ಐ,ಒ,ಓ,ಔ, ಅಂ, ಅಃ |
| ೬. | ಆಜ್ಞಾದಲ್ಲಿ | ೦೨ | ಹಂ, ಕ್ಷಂ |

ಈ ರೀತಿಯಲ್ಲಿ ಸ್ಥಾಪಿಸಲ್ಪಟ್ಟು ಅವುಗಳ ಮಧ್ಯದಲ್ಲಿ ಅನುಕ್ರಮವಾಗಿ ನ, ಮ, ಶಿ, ವಾ, ಯ, ಓಂ ಎಂಬ ಪ್ರಣವಗಳು ಇರುವವು, ಇವುಗಳ ಆಕಾರಕ್ಕೆ ಷಡ್‌ಲಿಂಗಗಳೆಂದು ಇಂತಿ ಷಟ್‌ಚಕ್ರ ಭೇದಕ್ರಮಜ್ಞಾನವು ನಿವೃತ್ತಿಮಾರ್ಗವುಳ್ಳುದು, ಇದೇ ಸರ್ವಾಂಗಲಿಂಗಸಾಹಿತ್ಯವು.[೧೧೮]

ಈ ಕಲಾಕೃತಿಯು ವಿಶಿಷ್ಟವಾಗಿದ್ದು ಈ ಕಲಾಕೃತಿಯನ್ನು ಬೇರೆ ಗ್ರಂಥಗಳ ಆಧಾರದಿಂದ ಸೇರಿಸಲಾಗಿದ್ದು, ಇದು ವೀರಶೈವ ಸಿದ್ಧಾಂತವನ್ನು ತತ್ವಗಳನ್ನು ಹೇಳುವ ಉದ್ಧರಣಿ ಚಿತ್ರಗಳ ಆಧಾರದಲ್ಲಿ ರಚಿಸಲಾಗಿದ್ದು ಲಿಂಗಸ್ಥಲ ಅಂಗಸ್ಥಲದ ಸಂಕೇತವಾಗಿ ಲಿಂಗವನ್ನು, ಅದರ ಮೇಲ್ಗಡೆ ಅಂಗನನ್ನು ಚಿತ್ರಿಸಿದ್ದು ಇದರಲ್ಲಿ ಷಟ್‌ಚಕ್ರಗಳನ್ನು ಮತ್ತು ಷಟ್‌ಲಿಂಗಗಳನ್ನು ಗುರುತಿಸಿದ್ದು, ದಳಗಳನ್ನು ಬಳ್ಳಿಗಳ ಸಹಿತ ಚಿತ್ರಿಸಲಾಗಿದೆ. ಅಂಗನ ಎದುರುಗಡೆ ಮೂರು ಚಕ್ರ (ವ್ಯಕ್ತಿ)– ಅಂಗನ ಹಿಂದುಗಡೆಯಲ್ಲಿ ಮೂರುಚಕ್ರಗಳನ್ನು ಗುರುತಿಸಲಾಗಿದೆ. ಈ ಕಲಾಕೃತಿಯು ಸಂಪೂರ್ಣ ಭಿನ್ನವಾಗಿ ತಾತ್ವಿಕ ನೆಲೆಯಲ್ಲಿ ರೂಪುಗೊಂಡಿದೆ. ಇದನ್ನು ಶ್ರೀ ದಾನಪ್ಪ ಹಾಲಭಾವಿಯವರು ರಚಿಸಿರುವರು.

ಈ ರೀತಿಯಾಗಿ ಒಟ್ಟು ಹನ್ನೊಂದು ಕಲಾಕೃತಿಗಳನ್ನು ಆರು ಜನ ಚಿತ್ರಕಲಾವಿದರು ಚಿತ್ರಿಸಿದ್ದು, ಇವರೆಲ್ಲ ಜೆ.ಜೆ.ಕಲಾ ಶಾಲೆ, ಮುಂಬೈಯಲ್ಲಿ ಅಧ್ಯಯನ ಮಾಡಿ ಸಪ್ತವರ್ಣ ಕಲಾವಿದರಾಗಿ ಗುರುತಿಸಿಕೊಂಡಿದ್ದು ಈ ಚೆನ್ನಬಸವಣ್ಣನ ಪುರಾಣಕ್ಕೆ ಕಲಾಕೃತಿಗಳನ್ನು ರಚಿಸಿಕೊಟ್ಟು ಧಾರ್ಮಿಕ ಸೇವೆಯನ್ನು ಸಲ್ಲಿಸಿರುವರು.

೧೧೮. ವಿರೂಪಾಕ್ಷ ಪಂಡಿತ ಕೃತಿ: ಚೆನ್ನಬಸವ ಪುರಾಣ: ವೀರಭದ್ರಪ್ಪ ಹಾಲಭಾವಿ(ಸಂ): ಶಿ.ಶಿ. ಬಸವನಾಳ: ಪುಟ ೧೪೯, ೧೫೦.

ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
'ಧಾರವಾಡದ ಚೆನ್ನಬಸವಪುರಾಣದಲ್ಲಿ ಸಮಕಾಲೀನಕಲಾಕೃತಿಗಳು'



೧. ಪ್ರಸಾದ ಸೇವಿಸುವ ನಾಗಲಾಂಬಿಕೆ — ಶ್ರೀ ಎಂ.ಎ.ಚೆಟ್ಟಿ



೨.ಚೆನ್ನಬಸವೇಶನ ಪುಷ್ಪಕೋತ್ಸವ — ಶ್ರೀ ಎಂ.ಎ.ಚೆಟ್ಟಿ



೩.ಬಿಕ್ಷಾಟನಾಲೀಲೆಯ ದೃಶ್ಯ ಶ್ರೀ ಜಿ.ಎಸ್.ದಂಡಾವತಿಮಠ



೪. ಜಲಂಧರನ ನಾಮಕರಣ ಶ್ರೀ ಎಂ.ವ್ಹಿ.ಮಿಣಜಗಿ

## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## 'ಧಾರವಾಡದ ಚೆನ್ನಬಸವಪುರಾಣದಲ್ಲಿ ಸಮಕಾಲೀನಕಲಾಕೃತಿಗಳು'



೫. ಕಾಮದಹನದ ದೃಶ್ಯ — ಶ್ರೀ ಎಂ.ವ್ಹಿ.ಮಿಣಜಗಿ



೬. ಸಿದ್ದರಾಮನಿಗೆ ಲಿಂಗದೀಕ್ಷೆಯ ದೃಶ್ಯ — ಶ್ರೀ ಎಂ.ವ್ಹಿ.ಮಿಣಜಗಿ



೭. ವೀರಭದ್ರಾವತಾರದ ದೃಶ್ಯ ಶ್ರೀ ಡಿ.ಬಿ.ಬಡಿಗೇರ



೮. ಅಂಧಕಾಸೂರನ ಓಲಗದ ದೃಶ್ಯ — ಶ್ರೀ ಚಂದ್ರಶೇಖರ ಕಾರಡಗಿ




೧೧. ಷಟ್ಚಕ್ರ ವಿವರದ ದೃಶ್ಯ — ಶ್ರೀ ಡಿ.ವ್ಹಿ.ಹಾಲಭಾವಿ

ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
'ಧಾರವಾಡದ ಚೆನ್ನಬಸವಪುರಾಣದಲ್ಲಿ ಸಮಕಾಲೀನಕಲಾಕೃತಿಗಳು'



೯. ಗಿರಿಜಾ ಕಲ್ಯಾಣದ ದೃಶ್ಯ ಶ್ರೀ ಡಿ.ವ್ಹಿ.ಹಾಲಭಾವಿ



೧೦. ಅರ್ಜುನನಿಗೆ ಪಾಶುಪತಾಸ್ತ್ರಪ್ರಧಾನದ ದೃಶ್ಯ ಶ್ರೀ ಡಿ.ವ್ಹಿ.ಹಾಲಭಾವಿ

ಹೀಗೆ ಉತ್ತಮ ಸಂಯೋಜನೆಯ ವರ್ಣಚಿತ್ರಗಳನ್ನು ರಚಿಸಿಕೊಟ್ಟಿರುವರು. ಈ "ಚೆನ್ನಬಸವೇಶ್ವರ" ಪುರಾಣದ ಹಸ್ತಪ್ರತಿ ಗ್ರಂಥವನ್ನು ಹನ್ನೊಂದು ಕಲಾಕೃತಿಗಳೊಂದಿಗೆ ಮುದ್ರಣ ಮಾಡಿರುವರು. ಅದು ಈಗ ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿ ಸಂಗ್ರಹಗೊಂಡಿದೆ.

**ಚೆನ್ನಬಸವಪುರಾಣ: ಗುಲಬರ್ಗಾ ವಿಭಾಗದ ಪ್ರತಿ:**

ಇದೇ "ಚೆನ್ನಬಸವ ಪುರಾಣ"ವು ಗುಲಬರ್ಗಾ ಜಿಲ್ಲೆಯ ಕಸಬಾಲಿಂಗಸೂರಿನ ಗುರುಪಾದಪ್ಪ ಶೆಟ್ಟಿಯವರ ಮನೆಯಲ್ಲಿಯ ಹಸ್ತಪ್ರತಿಯು ಡಾ. ಮಲ್ಲಿಕಾರ್ಜುನ ಬಾಗೋಡಿ ಅವರಿಗೆ ದೊರೆತಿದ್ದು. ಇದರಲ್ಲಿ ಶಿವಶರಣರ ಲೀಲೆಗಳಿಗೆ ಸಂಬಂಧಿಸಿದ ಚಿತ್ರಗಳು ರಚನೆಗೊಂಡಿವೆ. ಇದರಲ್ಲಿ ಸುಮಾರು ಹನ್ನೊಂದು ಕಿರುರೂಪಚಿತ್ರಗಳಿವೆ. ರೇಖಾಚಿತ್ರಗಳು ಮತ್ತು ವರ್ಣಪ್ರಧಾನ ಚಿತ್ರಗಳಿದ್ದು ಮೂಲವರ್ಣಚಿತ್ರವು ಅವರಿಗೂ ದೊರೆತಿಲ್ಲ. ಝೆರಾಕ್ಸ್ ಪ್ರತಿಗಳು ದೊರೆತಿದ್ದು ಅವುಗಳನ್ನೇ ಅವರು ಅಧ್ಯಯನಕ್ಕೆ ಬಳಸಿಕೊಂಡಿರುವರು. ಪ್ರಸ್ತುತ ಅಧ್ಯಯನಕ್ಕೆ ಅವರ ಕೆಲವು ಕಲಾಕೃತಿಗಳನ್ನು ಬಳಸಿಕೊಳ್ಳುತ್ತಿರುವೆ.

"ಚೆನ್ನಬಸವಪುರಾಣ" ದಲ್ಲಿಯ ಎಲ್ಲಾ ಕಿರುರೂಪ ಚಿತ್ರಗಳು ಗರುಡಾದ್ರಿಮನೆತನದ ಮೊದಲ ಬಾನಯ್ಯನ ಚಿತ್ರಗಳಾಗಿವೆ ಎಂದು ಅಭಿಪ್ರಾಯಪಟ್ಟಿರುವುದು ಸಂದೇಹಾಸ್ಪದವಾಗಿದೆ. ಸುರಪುರ ಸಂಸ್ಥಾನದಲ್ಲಿ ರಾಜಾಶ್ರಯವನ್ನು ಪಡೆದ ಗರುಡಾದ್ರಿ ಮನೆತನವು ೧೭೫೨ ರಿಂದ ೧೮೫೮ರ ವರೆಗಿನ ಅವಧಿಯಾಗಿದೆ[೧೧೯] ಎಂದು ಅಭಿಪ್ರಾಯಪಟ್ಟಿದ್ದು ಹಾಗೂ ಪುರಾಣ ರಚನಾ ಕರ್ತೃ ವಿರೂಪಾಕ್ಷ ಪಂಡಿತನ ಕಾಲದ ಕುರಿತು ಶ್ರೀ ಶಿ.ಶಿ.ಬಸವನಾಳ ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದು[೧೨೦] ಅಧ್ಯಯನಕ್ಕೆ ಬಳಸಿದ ಚೆನ್ನಬಸವ ಪುರಾಣವನ್ನು ಎಂ.ಚಂದ್ರಶೇಖರ ಅವರು ಅನುವಾದಿಸಿದ್ದು ೧೯೭೪ ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು[೧೨೧] ಇವರು ಮುದ್ರಣಗೊಳಿಸಿರುವರು. ಈ ಅವಧಿ ಬಾನಯ್ಯನ ಅವಧಿಗೆ ಸಂಬಂಧಿಸಿಲ್ಲ.

ಈ ಚೆನ್ನಬಸವಪುರಾಣವು ವಿರೂಪಾಕ್ಷ ಪಂಡಿತ ವಿರಚಿತವಾದದ್ದು ಆಗಿದೆ. ಈ ಹಸ್ತಪ್ರತಿ ಪ್ರಥಮ ಮುದ್ರಣವಾಗಿ ಹೊರಬಂದಿದ್ದು ಧಾರವಾಡದಲ್ಲಿ ೧೬.೭.೧೯೫೪ ರಲ್ಲಿ ಅಂದಿನ ನಿವೃತ್ತ ನ್ಯಾಯಾಧೀಶರಾಗಿರುವ ಶ್ರೀ ವೀರಭದ್ರಪ್ಪ ಹಾಲಭಾವಿಯವರು ಮತ್ತು ಎಂ. ಬಾಗೋಡಿಯವರು ಪ್ರಸ್ತಾಪಿಸಿದಂತೆ ಶ್ರೀ ಶಿ.ಶಿ.ಬಸವನಾಳ ಅವರ ನೇತೃತ್ವದ ತಂಡ ಧಾರವಾಡದ ಲಿಂಗಾಯತಾಭಿವೃದ್ಧಿ ಸಂಸ್ಥೆಯ ವಾಙ್ಮಯ ಶಾಖೆಯಿಂದ ಮುದ್ರಣವಾಗಿ ಹೊರಬಂದಿದೆ. ಈ ಎಲ್ಲ ಆಧಾರಗಳ ಹಿನ್ನೆಲೆಯಲ್ಲಿ ನೋಡಿದರೆ ೧೮ನೇ ಶತಮಾನದಲ್ಲಿರುವ ಗರುಡಾದ್ರಿಮನೆತನದ ಬಾನಯ್ಯನಿಗೂ ೧೯ನೇ ಶತಮಾನದಲ್ಲಿ ಮರುಮುದ್ರಣಗೊಂಡ ಬಸವಪುರಾಣಕ್ಕೂ ಸಂಬಂಧವೇ ಇಲ್ಲ. ಆದರೂ ಈ ಕಲಾಕೃತಿಗಳು ಸುರಪೂರ ಶೈಲಿಯನ್ನು ಪ್ರತಿನಿಧಿಸುತ್ತಿವೆಯೆಂದು ಒಪ್ಪಿಕೊಳ್ಳಬಹುದಾದರೂ ಚಿತ್ರ

೧೧೯. ಡಾ. ಮಲ್ಲಿಕಾರ್ಜುನ ಬಾಗೋಡಿ: ಸುರಪುರ ಶೈಲಿಯ ಚಿತ್ರಕಲೆ: ಪುಟ ೪೫.

೧೨೦. ಅದೇ: ಪುಟ ೮೭.

೧೨೧. ಡಾ. ಮಲ್ಲಿಕಾರ್ಜುನ ಬಾಗೋಡಿ: ಸುರಪುರ ಶೈಲಿಯ ಚಿತ್ರಕಲೆ: ಪುಟ ೯೪.

ರಚಿಸಿದ ಕಲಾವಿದ ಬಾನಯ್ಯನಾಗಿರದೇ ಇದೇ ಶೈಲಿಯಲ್ಲಿ ಕೆಲಸ ಮಾಡಿದ ಬೇರೆ ಕಲಾವಿದರಿಂದ ರಚಿಸಲ್ಪಟ್ಟಿರಬೇಕೆಂದು ಅಭಿಪ್ರಾಯಪಡಬಹುದಾಗಿದೆ.

**ಗುಲಬರ್ಗಾ ವಿಭಾಗದ ಚೆನ್ನಬಸವ ಪುರಾಣದಲ್ಲಿ ಸಾಂಪ್ರದಾಯಿಕ ಕಿರುರೂಪ ಚಿತ್ರಗಳು**

| **ಅ.ನಂ.** | **ಕಲಾಕೃತಿಯ ಹೆಸರು** |
|---|---|
| ೧ | ಶಿವನ ಒಡ್ಡೋಲಗ |
| ೨ | ಸಿದ್ಧರಾಮನಿಗೆ ಶಿವತತ್ವಬೋಧನೆ |
| ೩ | ಪಾರ್ವತಿಯ ಪ್ರಶ್ನೆ |
| ೪. | ಅಕ್ಕನಾಗಮ್ಮನ ಸ್ವಪ್ನ |
| ೫. | ಬಿಜ್ಜಳನಿಗೆ ಚಾಡಿ ಹೇಳಿದ್ದು |
| ೬. | ಚೆನ್ನಬಸವನ ಬಾಲಲೀಲೆ |
| ೭ | ದಕ್ಷಾಧ್ವರ ಧ್ವಂಸಪ್ರಸಂಗ |
| ೮ | ಬಸವಣ್ಣನು ಬಿಜ್ಜಳನ ಸಭೆಗೆ ಬಂದದ್ದು |
| ೯ | ಉರಿಲಿಂಗ ಉದ್ಭವವಾದುದು |
| ೧೦. | ವಿಷ್ಣುವಿಗೆ ಚಕ್ರಪ್ರದಾನ ಮಾಡುವ ಶಿವ |
| ೧೧. | ಈಶ್ವರನ ಅರ್ಧನಾರೀಶ್ವರತ್ವವು |

**೧. ಶಿವನ ಒಡ್ಡೋಲಗದ ದೃಶ್ಯ:**

ಚೆನ್ನಬಸವ ಪುರಾಣದ ಎರಡನೇ ಸಂಧಿಯ ವಿವರಣೆ ಕುರಿತಂತೆ ರಚನೆಗೊಂಡ ಈ ಚಿತ್ರದಲ್ಲಿ, ಪರಮೇಶ್ವರನು ಪಾರ್ವತಿಯೊಡಗೂಡಿ ಶ್ರೇಷ್ಠವಾದ ಕೈಲಾಸಪರ್ವತದ ಶಿಖರದಲ್ಲಿ ಬ್ರಹ್ಮ, ಸರಸ್ವತಿ, ವಿಷ್ಣು, ಲಕ್ಷ್ಮಿ, ಇಂದ್ರ ಮೊದಲಾದ ದೇವಾನುದೇವತೆಗಳನ್ನು ಕೂಡಿಕೊಂಡು, ಬಹಳ ವೈಭವದಿಂದ ಒಡ್ಡೋಲಗದಲ್ಲಿ ವಿರಾಜಿಸಿದ ಸನ್ನಿವೇಶದಿಂದ ಚಿತ್ರಿತಗೊಂಡಿದೆ. ಈ ಚಿತ್ರದ ಮಧ್ಯದಲ್ಲಿ ಎತ್ತರವಾದ, ಅಧಿಷ್ಠಾನವೊಂದರ ಮೇಲೆ ಎದುರು ಮುಖವಾಗಿ ಕುಳಿತಿರುವ ಶಿವನ ತೊಡೆಯ ಮೇಲೆ ಪಾರ್ವತಿಯು ಕುಳಿತಿದ್ದಾಳೆ. ಶಿವನ ಬಲಭಾಗದಲ್ಲಿ ಬ್ರಹ್ಮ, ವಿಷ್ಣು, ನಾರದರು ಚಿತ್ರಿತಗೊಂಡಿದ್ದಾರೆ. ಅದರಂತೆ ಶಿವನ ಎಡಭಾಗದಲ್ಲಿ ತುಂಬುರ, ನಂದಿ, ಮತ್ತು ಶಿವಗಣಾದಿಗಳು ಚಿತ್ರಿತಗೊಂಡಿದ್ದು ಮೇಲೆ ಗಣಾಧೀಶರಲ್ಲದೇ ಯಕ್ಷರನ್ನು ಚಿತ್ರಿಸಲಾಗಿದೆ.

**೨. ಸಿದ್ಧರಾಮೇಶ್ವರನಿಗೆ ಶಿವತತ್ವ ಬೋಧನೆ ಮಾಡುವ ಸನ್ನಿವೇಶ:**

ಇದೊಂದು ಚೆನ್ನಬಸವ ಪುರಾಣದ ಆರಂಭದ ಸನ್ನಿವೇಶದಿಂದ ಕೂಡಿದ ವರ್ಣಚಿತ್ರವಾಗಿದೆ. ಈ ಒಂದೆಯೇ ಕಾವ್ಯದ ಕುರಿತು ಚರ್ಚಿಸಿದಂತೆ ಈ ಕಾವ್ಯವು ಅನೇಕ ಐತಿಹಾಸಿಕ, ಸಾಮಾಜಿಕ ವಿಷಯಗಳೊಂದಿಗೆ,

ಶಿವನ ಪಂಚವಿಂಶತಿ (ಇಪ್ಪತ್ತೈದು) ಲೀಲೆಗಳಿಗೆ ಸಂಬಂಧಿಸಿದ ಕಥಾನಕಗಳನ್ನು ಒಳಗೊಂಡಿದೆ. ಈ ಚಿತ್ರದಲ್ಲಿ ಕಂಡು ಬರುವಂತೆ ಕಥಾನಾಯಕ ಚೆನ್ನಬಸವಣ್ಣನು ಸಿದ್ಧರಾಮನಿಗೆ ಶಿವನ ಲೀಲೆಗಳಿಗೆ ಸಂಬಂಧಿಸಿದಂತೆ ಶಿವತತ್ವವನ್ನು ಬೋಧನೆ ಮಾಡುತ್ತಿರುವ ಸನ್ನಿವೇಶದಿಂದ ಕೂಡಿದೆ. ಚಿತ್ರದ ಮಧ್ಯದಲ್ಲಿ ಎತ್ತರವಾದ ಅಧಿಷ್ಠಾನವೊಂದರ ಮೇಲೆ ಚೆನ್ನಬಸವಣ್ಣನು ಕುಳಿತಿದ್ದಾನೆ. ಅವನ ಬಲಭಾಗದಲ್ಲಿ ಸಿದ್ಧರಾಮೇಶ್ವರನನ್ನು, ಎಡಭಾಗದಲ್ಲಿ ಈ ಕಾವ್ಯದ ಕರ್ತೃ ವಿರೂಪಾಕ್ಷ ಪಂಡಿತನನ್ನು ಚಿತ್ರಿಸಲಾಗಿದೆ. ಉಳಿದಂತೆ ಇತರ ಶಿವಾಚಾರ ಸಂಪನ್ನರನ್ನೂ ಸಹ ಚಿತ್ರದಲ್ಲಿ ಸಂಯೋಜಿಸಿದ್ದುದು ಕಂಡು ಬರುತ್ತದೆ.

**೩. ಶಿವನಿಗೆ ಪಾರ್ವತಿಯು ಕೇಳಿದ ಪ್ರಶ್ನೆಯ ದೃಶ್ಯ:**

ಪಾರ್ವತಿಯು ಶಿವನನ್ನು ಕುರಿತು "ಹೇ ದೇವಾ, ಕೇಳು. ಅಂದು ನಂದಿಯೇ ಮೊದಲಾದ ದೇವಗಣಗಳ ಸಮೂಹವನ್ನು ಆ ಭೂಮಿಗೆ ಕಳುಹಿಸುವಾಗ ಅವರಿಗೆ ತತ್ವೋಪದೇಶ ಮಾಡಲು ನನ್ನ ಚಿತ್ಕಳೆಯನ್ನು ನಿಮ್ಮೊಡನೆ ತಕ್ಷಣವೇ ಕಳಿಸುತ್ತೇನೆ ಎಂದು ಕೊಟ್ಟಿರುವ ಪವಿತ್ರವಾದ ಆಶ್ವಾಸನೆಯನ್ನು ಈಡೇರಿಸಬೇಡವೆ?" ಎಂದು ಕೇಳುವ ಪ್ರಶ್ನೆಯ ಸನ್ನಿವೇಶವನ್ನು ಈ ಚಿತ್ರವು ಒಳಗೊಂಡಿದೆ.

**ಈ ಚಿತ್ರದ ಸಾರಾಂಶವು ಹೀಗಿದೆ:**

ಶಿವನ ಆಜ್ಞೆಯ ಮೇರೆಗೆ ನಾರದನು ಮೂರು ಲೋಕಗಳನ್ನು ಸಂಚರಿಸಿ ಅಲ್ಲಿ ನಡೆದ ಸನ್ನಿವೇಶಗಳನ್ನು ಕುರಿತು ಶಿವನಿಗೆ ಈ ರೀತಿ ಹೇಳಿದನು: ಶಿವನೇ, ನಿನ್ನ ಅಪ್ಪಣೆಯಂತೆ ನಾನು ಎಲ್ಲ ಲೋಕಗಳನ್ನು ತಿರುಗಿದೆ. ಆ ಎಲ್ಲ ಲೋಕಗಳಲ್ಲಿಯೂ ಶಿವಭಕ್ತಿ ಅಭಿವೃದ್ಧಿಗೊಳ್ಳುತ್ತಿದೆ. ಆದರೆ ಭೂಲೋಕದಲ್ಲಿರುವ ಕರ್ಮಭೂಮಿ ಭರತ ಖಂಡದಲ್ಲಿ ಮಾತ್ರ ಕಲಿಯ ಪ್ರಭಾವ ಹೆಚ್ಚಾಗಿದೆ ಎಂದು ತಾನು ಕಂಡ ಅನೇಕ ಬಗೆಯ ಸನ್ನಿವೇಶಗಳನ್ನು ವಿವರವಾಗಿ ಹೇಳುತ್ತಾನೆ. ಆಗ ಶಿವನು ಭೂಲೋಕಕ್ಕೆ ಪಾರ್ವತಿ ಹಾಗೂ ನಂದಿಯನ್ನು ಕಳಿಸುತ್ತಾನೆ. ಇದರಿಂದ ಭೂಲೋಕದಲ್ಲಿ ಇನ್ನು ಮುಂದೆ ವೀರಶೈವ ಧರ್ಮವು ಸ್ಥಿರವಾಗಿ ನಿಲ್ಲುತ್ತದೆ. ನೀವೆಲ್ಲರೂ ಅಲ್ಲಿ ಹೋಗಿ ಜನಿಸಿರಿ. ಅನಂತರ ನಿಮ್ಮ ಹಿಂದೆಯೇ ನನ್ನ ಸುಜ್ಞಾನ ಪುತ್ರನನ್ನು ಕಳಿಸುತ್ತೇನೆ ಮತ್ತು ನನ್ನ ಪ್ರತಿಬಿಂಬವೇ ಸಿದ್ಧರಾಮನಾಗಿ ಹುಟ್ಟಿದ್ದಾನೆ. ಚನ್ನವೀರೇಶನೇ ಮಡಿವಾಳಯ್ಯನಾಗಿ ಹುಟ್ಟಿದ್ದಾನೆ. ಮಹಾದೇವಿ ಎನ್ನುವ ರುದ್ರಕನ್ನಿಕೆಯೇ ಮಹಾದೇವಿಯಕ್ಕಳಾಗಿ ಹುಟ್ಟಿದ್ದಾಳೆ. ಅದರಂತೆ ಮಂಡಿಗೆಯ ಮಾದಿರಾಜ ಹಾಗೂ ಮಾದಲಾಂಬಿಕೆ ಎನ್ನುವ ಬ್ರಾಹ್ಮಣ ದಂಪತಿಗಳ ಉದರದಲ್ಲಿ ಪಾರ್ವತಿಯ ಚಿತ್ಕಳೆಯು "ನಾಗಲಾಂಬಿಕೆ" ಎಂಬ ಹೆಸರನ್ನು ಪಡೆದು ಹುಟ್ಟಿದಳು. ಆಕೆಯ ಜೊತೆಯಲ್ಲಿ ಬಸವರಾಜನೆಂಬ ಹೆಸರಿನಿಂದ ನಂದೀಶ್ವರನು ಹುಟ್ಟಿದ್ದಾನೆ. ಶಿವನ ಮಾತಿನಂತೆ ಭೂಮಿಯಲ್ಲಿ ಹುಟ್ಟಿದ ನಂದಿಯೇ ಮೊದಲಾದ ಅಮರ ಗಣಂಗಳಿಗೆ ತತ್ವದ ರಹಸ್ಯ ತಿಳಿಸಲು ಶಿವನ ಚಿತ್ಕಳಾರೂಪನಾದ ಚೆನ್ನಬಸವನು ಶ್ರೇಷ್ಠವಾದ ವರಪ್ರಸಾದದಿಂದ ನಾಗಲಾಂಬಿಕೆಯ ಗರ್ಭದಲ್ಲಿ ಜನಿಸಿದನು ಎಂಬುದು ಪುರಾಣದಿಂದ ತಿಳಿದುಬರುತ್ತದೆ.

**೪. ಅಕ್ಕ ನಾಗಮ್ಮನ ಸ್ವಪ್ನದ ದೃಶ್ಯ:**

ಇದೊಂದು ಎರಡು ಸನ್ನಿವೇಶಗಳಿಂದ ಕೂಡಿದ ಚಿತ್ರವಾಗಿದೆ. ಎಡಭಾಗದಲ್ಲಿ ಮಂಟಪದಂತೆ ಕಂಡು ಬರುವ ಚಿತ್ರದಲ್ಲಿ ಅಕ್ಕನಾಗಮ್ಮ ಮಲಗಿರುವ ದೃಶ್ಯವಾಗಿದೆ. ಬಲಭಾಗದಲ್ಲಿಯೂ ಅದೇ ತೆರನಾದ ಮಂಟಪದಲ್ಲಿ ಕುಳಿತಿರುವ ಬಸವಣ್ಣನಿಗೆ ಅಕ್ಕನಾಗಮ್ಮ ತಾನು ಕಂಡ ಕನಸಿನ ಪರಿಯನ್ನು ವಿವರಿಸುತ್ತಿದ್ದಾಳೆ.

**ಈ ಚಿತ್ರದ ಸಾರಾಂಶ ಹೀಗಿದೆ:**

ಒಮ್ಮೆ ಅಕ್ಕನಾಗಮ್ಮಳು ಪರಮೇಶ್ವರನ ಧ್ಯಾನ ಮಾಡುತ್ತ ಯೋಗನಿದ್ರೆಯಲ್ಲಿದ್ದಳು. ಅಕ್ಕನಾಗಮ್ಮ ಪರವಶಳಾಗಿದ್ದಾಗ ಶಿವನು ಕನಸಿನಲ್ಲಿ ಬಂದು, ಎಲೈ ತರುಣಿಯೇ, ಈ ಮಹಾಪ್ರಸಾದವನ್ನು ತೆಗೆದುಕೋ ಎಂದಾಗ ಸಂತೋಷದಿಂದ ಅದನ್ನು ಸ್ವೀಕರಿಸಿದಳು. ಅನಂತರ ಶಿವನು ತನ್ನ ಜಂಗಮರೂಪವನ್ನು ಮರೆಮಾಡಿ ಐದು ಮುಖಗಳು, ಹತ್ತು ಕೈಗಳು, ಹದಿನೈದು ಕಣ್ಣುಗಳು, ಹೊಳೆಯುವ ಹೂವಿನ ಖಡ್ಗ, ತ್ರಿಶೂಲ, ಡಮರುಗ, ಹುಲಿಯ ಚರ್ಮದ ಉಡುಗೆಯನ್ನು ಧರಿಸಿ ಪಾರ್ವತೀಸಮೇತನಾಗಿ ಅಕ್ಕನಾಗಮ್ಮನನ್ನು ಕುರಿತು ಹೀಗೆ ಹೇಳಿದನು: "ಕೋಮಲಾಂಗಿ ಚಿಂತಿಸಬೇಡ. ನಾನು ತಿಳಿಸುವ ಹೊಸದಾದ ಸೋಜಿಗವನ್ನು ನೀನು ಪ್ರೀತಿಯಿಂದ ಕೇಳು. ಈ ಅಮೃತಸಮಾನವಾದ ಪ್ರಸಾದವು ನಮ್ಮ ಚಿತ್ಕಳಾ ರೂಪದಿಂದ ಉಂಟಾದುದು. ಇದರಿಂದ ನಿನ್ನ ಗರ್ಭದಲ್ಲಿ ಪ್ರಕಾಶಮಾನವಾದ, ನಿರ್ಮಲವಾದ, ಓಂಕಾರ ಸ್ವರೂಪಿಯಾದ, ಷಟ್‌ಸ್ಥಲ ಬ್ರಹ್ಮಿ ಜನಿಸುವನು. ಅವನು ಭೂಲೋಕದಲ್ಲಿ ಎಲ್ಲರಿಂದಲೂ ಗೌರವ ಪಡೆಯುತ್ತಾನೆ ಮತ್ತು ಅಸಂಖ್ಯವಾದ ಪವಾಡಗಳನ್ನು ಮೆರೆಯುತ್ತಾನೆ. ನಿನ್ನ ಗರ್ಭದಲ್ಲಿ ಮಗುವು ಹುಟ್ಟುವ ಶುಭ ವಾರ್ತೆಯನ್ನು ಶೀಘ್ರವಾಗಿಯೇ ಎಲ್ಲ ಗಣಗಳಿಗೂ ತಿಳಿಸು" ಎಂದು ಹೇಳಿ ಮಾಯವಾಗುತ್ತಾನೆ. ಅಷ್ಟರಲ್ಲಿ ಅಕ್ಕನಾಗಮ್ಮಳು ಕಣ್ಣುಬಿಟ್ಟು ನೋಡಿದರೆ ಎಲ್ಲವೂ ಮಾಯವಾಗಿತ್ತು. ತನ್ನ ಮನೆಯಲ್ಲಿದ್ದ ಈಶ್ವರ ಮೂರ್ತಿಯೂ ಕಾಣಲಿಲ್ಲ. ಇದು ಕನಸಾದರೂ ಕನಸಿನ ರೀತಿಯಲ್ಲಿ ಇದನ್ನು ಪರಿಭಾವಿಸಲಾಗಿ ಪ್ರತ್ಯಕ್ಷವೋ ಎನ್ನುವಂತಿತ್ತು. ತಾನು ಕಂಡ ಕನಸಿನ ಸುದ್ದಿಯನ್ನು ಬಸವಣ್ಣನಿಗೆ ವಿವರವಾಗಿ ತಿಳಿಸಲು, ಇದರಿಂದ ಬಸವಣ್ಣ ಸಂತೋಷಗೊಂಡನೆಂಬುದು ಈ ಚಿತ್ರದ ಸಾರಾಂಶವಾಗಿದೆ.

**೫. ಬಿಜ್ಜಳನಿಗೆ ಚಾಡಿ ಹೇಳುತ್ತಿರುವ ದೃಶ್ಯ:**

ಈ ಚಿತ್ರವೂ ಸಹ ಎರಡು ಸನ್ನಿವೇಶಗಳನ್ನೊಳಗೊಂಡದ್ದಾಗಿದೆ. ಚಿತ್ರದ ಎಡಭಾಗದಲ್ಲಿ ಬಿಜ್ಜಳ ರಾಜನು ಸಭೆಯಲ್ಲಿ ಕುಳಿತಿದ್ದಾನೆ. ಅವನೆದುರಿಗೆ ಚಾಡಿಕೋರನೊಬ್ಬನು ಬಸವಣ್ಣನವರ ಅಕ್ಕ ಅಕ್ಕನಾಗಲಾಂಬಿಕೆಯು ಗರ್ಭ ಧರಿಸಿದ ವಿಚಾರವನ್ನು ತಿಳಿಸುತ್ತಿದ್ದಾನೆ. ಈ ವಿಷಯ ತಿಳಿದ ಬಿಜ್ಜಳ ರಾಜನು ಬಸವಣ್ಣನವರ ಮನೆಗೆ ಬರುತ್ತಾನೆ. ಹಾಗಾಗಿ ಚಿತ್ರದ ಬಲಬದಿಯಲ್ಲಿ ಬಸವಣ್ಣ ಅಲ್ಲದೇ ನಾಗಲಾಂಬಿಕೆ, ಅಕ್ಕ ನಾಗಮ್ಮನನ್ನು ಚಿತ್ರಿಸಿರುವುದನ್ನು ಕಾಣಬಹುದು.

**ಈ ಚಿತ್ರದ ಸಾರಾಂಶ ಹೀಗಿದೆ:**

ಶಿವನ ವರಪ್ರಸಾದದಿಂದ ಗರ್ಭಧರಿಸಿದ ಅಕ್ಕನಾಗಮ್ಮನನ್ನು ಕುರಿತು ಕಲ್ಯಾಣ ಪಟ್ಟಣದ ಜನರಲ್ಲಿ ಗುಸು ಗುಸು ಹಬ್ಬಿತು. ಅಕ್ಕನಾಗಮ್ಮಳಂತೆ? ಆಕೆ ವಿರಕ್ತೆಯಂತೆ? ಇದೇನು ವಿಚಿತ್ರ! ಎಂದು ಮನೆ ಮನೆಗಳಲ್ಲಿ, ಹೊಳೆಯ ಹತ್ತಿರ, ಬೀದಿ ಬೀದಿಗಳಲ್ಲಿ, ಜನರ ಕಿವಿಗಳಲ್ಲಿ ಈ ಮಾತುಗಳು ದಟ್ಟವಾಗಿ ಹರಡಿದವು. ಹೀಗಿರಲು ಉತ್ತಮರಾದ ಕೆಲವರು ಆಕೆಯನ್ನು ದೈವಾಂಶ ಸಂಭೂತಳೆಂದೂ ಕರೆದರು. ಮಧ್ಯಮರಾದ ಕೆಲವರು ಅತಿಯಾದ ಎಚ್ಚರಿಕೆಯಿಂದ ಆಶ್ಚರ್ಯವನ್ನು ವ್ಯಕ್ತಪಡಿಸುತ್ತಾರೆ. ಅವಿವೇಕಿಗಳು, ನೀಚರು, ಹಾಸ್ಯ ಮಾಡುತ್ತಾರೆ. ಈ ವಿಷಯವನ್ನು ಕೇಳಿದ ಮತ್ತೊಬ್ಬ ಮಹಾಚಾಡಿಕೋರನು ಬಿಜ್ಜಳ ರಾಜನಿಗೆ ಈ ಸುದ್ದಿಯನ್ನು ತಿಳಿಸುತ್ತಾನೆ. ಚಾಡಿಕೋರನ ಮಾತುಗಳನ್ನು ಕೇಳಿದ ಬಿಜ್ಜಳ ರಾಜನು ಮಂತ್ರಿವರ್ಗದವರಲ್ಲದೇ ಕೆಲವು ಪರಿವಾರದ ಜನರ ಸಹಿತ ಬಸವಣ್ಣನ ಮನೆಗೆ ಹೋಗುತ್ತಾನೆ. ಇತ್ತ ಬಸವಣ್ಣನವರ ಮನೆಯಲ್ಲಿ ಇರುವ ಅನುಭವ ಮಂಟಪದಲ್ಲಿ ಶಿವಭಕ್ತರು ನೀಲೋಚನೆ, ಗರ್ಭಧರಿಸಿದ ಅಕ್ಕನಾಗಮ್ಮ ಹಾಗೂ ಬಸವೇಶ್ವರರೆಲ್ಲರೂ ಇರುವ ಸಮಯದಲ್ಲಿ ಬಿಜ್ಜಳರಾಜನು ಅಕ್ಕನಾಗಮ್ಮಳು ಗರ್ಭಧರಿಸಿದ ಬಗ್ಗೆ ಅನೇಕ ಶಂಕೆಯ ಮಾತುಗಳನ್ನು ಆಡುವ ಸನ್ನಿವೇಶವು ಈ ಪ್ರಸಂಗದಲ್ಲಿ ಬರುತ್ತದೆ.

**೬. ಚನ್ನಬಸವನ ಬಾಲಲೀಲೆ:**

ಇದೊಂದು ಚೆನ್ನಬಸವನ ಬಾಲಲೀಲೆಗೆ ಸಂಬಂಧಿಸಿದ್ದು ಚಿತ್ರದ ಮಧ್ಯದಲ್ಲಿ ಸುಂದರ ಹೂಬಳ್ಳಿಗಳಿಂದ ಅಲಂಕರಿಸಲ್ಪಟ್ಟ ಬಂಗಾರದ ತೊಟ್ಟಿಲೊಂದರಲ್ಲಿ ಚೆನ್ನಬಸವನನ್ನು ಕೂಡಿಸಿ ಈ ತೊಟ್ಟಿಲಿನ ಎರಡೂ ಬದಿಗಳಲ್ಲಿ ಸುಮಂಗಲೆಯರು ತೊಟ್ಟಿಲನ್ನು ತೂಗುತ್ತಿದ್ದಾರೆ. ಅಲ್ಲದೇ ವಿವಿಧ ಭಂಗಿಗಳಲ್ಲಿ ಚೆನ್ನಬಸವನ ಬಾಲಲೀಲೆಗಳನ್ನು ಕೊಂಡಾಡುತ್ತಿರುವ ಸುಮಂಗಲೆಯರನ್ನು ಸಹಿತ ಈ ಚಿತ್ರದಲ್ಲಿ ಸಂಯೋಜಿಸಲಾಗಿದೆ.

**೭. ದಕ್ಷಾಧ್ವರ ಧ್ವಂಸ ಪ್ರಸಂಗ:**

ಈ ಚಿತ್ರದ ಎಡಭಾಗದಲ್ಲಿ ಶಿವನನ್ನು ಎತ್ತರವಾದ ಅಧಿಷ್ಠಾನವೊಂದರ ಮೇಲೆ ಕುಳಿತಿರುವಂತೆ ಚಿತ್ರಿಸಲಾಗಿದೆ. ಬಲಭಾಗದಲ್ಲಿ ವೀರಭದ್ರನು ದಕ್ಷನು ಕೈಗೊಂಡ ಯಾಗವನ್ನು ಧ್ವಂಸಗೊಳಿಸಿ ಅವನ ತಲೆಯನ್ನು ಕಡಿದುದಲ್ಲದೆ (ಆಡಿನ) ಮೇಕೆಯ ತಲೆಯನ್ನು ಅವನ ದೇಹಕ್ಕೆ ಸೇರಿಸಲಾಗುತ್ತದೆ ಎಂಬುದಕ್ಕೆ ಕೆಳಭಾಗದಲ್ಲಿ ಆಡಿನ (ಮೇಕೆಯ) ಮುಖದ ದಕ್ಷನನ್ನು ಚಿತ್ರಿಸಲಾಗಿದೆ.

**ಈ ಚಿತ್ರದ ಸಾರಾಂಶ ಹೀಗಿದೆ:**

ದಕ್ಷ ಬ್ರಹ್ಮನು ಅಳಿಯ ಈಶ್ವರನನ್ನು ಕಡೆಗಣಿಸಿದವನಾಗಿ ವಿಷ್ಣು ಮೊದಲಾದವರನ್ನು ಕೂಡಿಕೊಂಡು ಯಾಗವನ್ನು ಮಾಡುತ್ತಿರಲು ಅಲ್ಲಿಗೆ ದಕ್ಷನ ಮಗಳು ದ್ರಾಕ್ಷಾಯಿಣಿ ಬರಲು ತನ್ನ (ಗಂಡನ) ಶಿವನ ನಿಂದೆಯನ್ನು

ಕೇಳಿ ಯೋಗಾಗ್ನಿಗೆ ತನ್ನ ಶರೀರವನ್ನು ಅರ್ಪಿಸಿಕೊಂಡಳು. ದ್ರಾಕ್ಷಾಯಣಿಯ ಸಾವಿನ ರೀತಿಯನ್ನು ಕೇಳಿ ಶಿವನು ಉಗ್ರರೂಪವನ್ನು ತಾಳುತ್ತಾನೆ. ಶಿವನ ಮಹಾಕೋಪದಿಂದ ಹುಟ್ಟಿದ ವೀರಭದ್ರನು, ಅತಿಯಾದ ಕೋಪದಿಂದ ಬಂದು ದಕ್ಷನು ಕೈಗೊಂಡ ಯಾಗವನ್ನು ಧ್ವಂಸಗೊಳಿಸುತ್ತಾನೆ. ಹಾಗಾಗಿ ಇಲ್ಲಿ ಘೋರವಾದ ಯುದ್ಧವೇ ನಡೆಯುತ್ತದೆ. ಆಗ ವೀರಭದ್ರನು ಎಲ್ಲರನ್ನೂ ಕೊಂದು ಹಾಕುತ್ತಾನೆ. ಬ್ರಹ್ಮ, ವಿಷ್ಣು ಮೊದಲಾದವರನ್ನು ಗೆದ್ದು, ದಕ್ಷನ ತಲೆಯನ್ನು ಕಡಿದು ಎಲ್ಲವನ್ನೂ ಶಿವನ ಬಳಿಗೆ ತೆಗೆದುಕೊಂಡು ಬರುತ್ತಾನೆ ಎಂಬುದಾಗಿ ತಿಳಿದು ಬರುತ್ತದೆ.

**೮. ಉದ್ಭವಲಿಂಗ (ಉರಿಲಿಂಗ ಉದ್ಭವ)**

ಬ್ರಹ್ಮ ವಿಷ್ಣುವಿನ ನಡುವೆ ಯುದ್ಧ ನಡೆಯುತ್ತಿರಲು ಮಧ್ಯದಲ್ಲಿ ಬೃಹದಾಕಾರದ ಶಿವಲಿಂಗವು ಉದ್ಭವವಾಗುವ ಸನ್ನಿವೇಶದಿಂದ ಕೂಡಿದ ಚಿತ್ರವಾಗಿದೆ. ಅದರಂತೆ ಚಿತ್ರದ ಎಡಬದಿಯಲ್ಲಿ ಬ್ರಹ್ಮನು, ಬಲಬದಿಯಲ್ಲಿ ವಿಷ್ಣುವು ಯುದ್ಧ ಮಾಡುತ್ತಿದ್ದು ಇವರೀರ್ವರ ಕೈಯಲ್ಲಿ ಬಿಲ್ಲು ಮತ್ತು ಬಾಣಗಳನ್ನು ತೋರಿಸಲಾಗಿದೆ. ಇವರೀರ್ವರು ಯುದ್ಧ ಮಾಡುತ್ತಿರಲು ಮಧ್ಯದಲ್ಲಿ ಉದ್ಭವವಾದ (ಉರಿಯುತ್ತಿರುವ) ಬೃಹದಾಕಾರದ ಲಿಂಗವೊಂದನ್ನು ಕಪ್ಪುವರ್ಣದಿಂದ ಚಿತ್ರಿಸಿದೆ. ಈ ಲಿಂಗದ ಮಹಿಮೆಯನ್ನು ತಿಳಿಯಲು ಬ್ರಹ್ಮನು ಹಂಸದ ರೂಪತಾಳಿ ಮೇಲೆ ಹೋಗುತ್ತಿರುವಂತೆಯೂ, ವಿಷ್ಣುವು ವರಾಹ ಆಕಾರವನ್ನು ತಾಳಿ ಆಳವನ್ನು ನೋಡುತ್ತಿರುವಂತೆಯೂ ಚಿತ್ರಿಸಲಾಗಿದೆ.

**ಈ ಚಿತ್ರದ ಸಾರಾಂಶ ಹೀಗಿದೆ:**

ಒಮ್ಮೆ ಬ್ರಹ್ಮನು ಮನೋಹರವಾದ ಸಭೆಯೊಳಗೆ ರತ್ನಗಳಿಂದ ಕೂಡಿದ ಸುಂದರವಾದ ಸಿಂಹಾಸನದ ಮೇಲೆ ಕುಳಿತಿದ್ದ. ಸಭಿಕರೆಲ್ಲರೂ ಬ್ರಹ್ಮನನ್ನು ಕೊಂಡಾಡಿದರು. ಇದರಿಂದ ಬ್ರಹ್ಮನಿಗೆ ಅಹಂಕಾರ ಹುಟ್ಟಿತು. ಮದನನ ಜನಕನಾದ ವಿಷ್ಣುವು ಇದನ್ನು ತಿಳಿದಕೂಡಲೇ ಬ್ರಹ್ಮನ ಹತ್ತಿರ ಬಂದನು. ಆಗ ಬ್ರಹ್ಮನು ವಿಷ್ಣುವನ್ನು ಯಾರೆಂದು ಕೇಳಲು ಎಲವೋ ಬ್ರಹ್ಮ, ನೀನು ಕುರಿಯಲ್ಲವೇ? ನಿನ್ನ ಸಭಾಸದಸ್ಯರು ನಿನ್ನನ್ನು ಹೊಗಳಿದರೆ ನಿನಗೆ ಅಹಂಕಾರವುಂಟಾಯಿತೆ? ಎನಲು ಇದರಿಂದ ಬ್ರಹ್ಮ ಮತ್ತು ವಿಷ್ಣುವಿನ ನಡುವೆ ಘೋರವಾದ ಯುದ್ಧವಾಗುತ್ತದೆ. ಯುದ್ಧವಾಡುವ ಸಮಯದಲ್ಲಿ ಇವರೀರ್ವರ ನಡುವೆ ಒಂದು ಮಹಾಲಿಂಗವು ಉದ್ಭವಿಸಿತು. ಶಿವಲೀಲೆಯಿಂದ ಹುಟ್ಟಿದ ಆ ಮಹಾದಾಕಾರದ ಲಿಂಗವು ಬ್ರಹ್ಮ ಮತ್ತು ವಿಷ್ಣುವಿನನ್ನು ಬೆರಗುಗೊಳಿಸಿತು. ಮನೋಹರವಾದ ತೇಜಸ್ಸಿನಿಂದ ಕೂಡಿದ ಆ ಲಿಂಗದ ಎದುರಿನಲ್ಲಿ ಇವರಿಬ್ಬರ ತೇಜಸ್ಸು ಮಿಂಚುಹುಳುಗಳ ಕಾಂತಿಯುಂಟಾಯಿತು. ಕೂಡಲೇ ವಿಷ್ಣು ಅದರ ಪಾದವನ್ನೂ ಬ್ರಹ್ಮನು ಅದರ ತಲೆಯನ್ನೂ ನೋಡುವುದಾಗಿ ನಿಶ್ಚಯಿಸಿದರು. ವಿಷ್ಣುವು ವರಾಹ ಅವತಾರವನ್ನು ತಾಳಿ ಭೂಮಿಯನ್ನು ಬಗೆದು ಕೆಳಗಿಳಿದು ಹೋದನು. ಬ್ರಹ್ಮನು ರಾಜಹಂಸನಾಗಿ ಮೇಲೆ ಹೋದನು. ಆದರೆ ವಿಷ್ಣುವಿಗೆ ಆ ಲಿಂಗದ ಪಾದವಾಗಲಿ, ಬ್ರಹ್ಮನಿಗೆ ಆ ಲಿಂಗದ ತಲೆಯಾಗಲಿ ಕಾಣದೇ ಹೋಗಿರುವುದು ಈ ಕಥೆಯಿಂದ ತಿಳಿದು ಬರುತ್ತದೆ.

ಹೀಗೆ ಹಲವಾರು ಚಿತ್ರಗಳನ್ನು ಕಥಾನಾಯಕ ಚೆನ್ನಬಸವಣ್ಣ ಹಾಗೂ ಶಿವನ ಲೀಲೆಗಳಿಗೆ ಸಂಬಂಧಿಸಿದಂತೆ ಐತಿಹಾಸಿಕ ಘಟನೆಗಳನ್ನು ಅತ್ಯಂತ ಸುಂದರವಾಗಿ ಗರುಡಾದ್ರಿ ಮನೆತನದವರು ಚಿತ್ರಿಸಿರುವುದು ತಿಳಿದು ಬರುತ್ತದೆ.

**೯. ಬಸವಣ್ಣ ಬಿಜ್ಜಳನ ಸಭೆಗೆ ಬಂದಿದ್ದು :**

ಈ ಚಿತ್ರದಲ್ಲಿ ಬಿಜ್ಜಳರಾಜನು ಆಸ್ಥಾನದಲ್ಲಿ ಕುಳಿತಿದ್ದಾನೆ. ಅವನೆದುರಿಗೆ ಬಸವರ್ಣಾಣನು ನಿಂತುಕೊಂಡಿದ್ದಾನೆ. ಅಲ್ಲದೆ ಇತರ ಆಸ್ಥಾನ ಪ್ರಮುಖರನ್ನೂ ಆಸೀನರಾಗಿರುವಂತೆ ಚಿತ್ರಿಸಲಾಗಿದೆ. ಕೊಂಡಿಮಂಚಣ್ಣನು ಚೆನ್ನಬಸವಣ್ಣ ಮತ್ತು ಬಸವಣ್ಣನವರು ಶಿವತತ್ವ ಕಾಯಕದಿಂದ ಮತ್ಸರಗೊಂಡ ಬಿಜ್ಜಳ ರಾಜನಿಗೆ ಚಾಡಿ ಹೇಳಿದಾಗ ಚೆನ್ನಬಸವಣ್ಣ ಹಾಗೂ ಬಿಜ್ಜಳ ರಾಜನ ನಡುವೆ ಸಂಭಾಷಣೆಯು ನಡೆಯುತ್ತದೆ.

**ಈ ಚಿತ್ರದ ಸಾರಾಂಶ :**

ಕಲ್ಯಾಣ ನಗರದಲ್ಲಿ ಬಸವಣ್ಣ ಹಾಗೂ ಚೆನ್ನಬಸವಣ್ಣನವರಿಬ್ಬರೂ ತಮ್ಮ ಕಾಯಕದಿಂದ ಶರಣರನ್ನು ಅನೇಕ ರೀತಿಯ ಉದ್ದಾರಗೈಯುತ್ತ ಶಿವತತ್ವ ಗೋಷ್ಠಿಯಲ್ಲಿ ಸಂತೋಷದಿಂದ ಕಾಲಕಳೆಯುತ್ತಿರಬೇಕಾದರೆ ಇತ್ತ ವೈಭವದಿಂದ ಸೇರಿದ ಬಿಜ್ಜಳನ ಆಸ್ಥಾನಕ್ಕೆ ಚಾಡಿ ಹೇಳುವವರ ಕುಲಕ್ಕೆ ತಿಲಕಪ್ರಾಯವಾದ ಮಂಚಣ್ಣನು ಬಂದು "ಪ್ರಭುವೆ ಕೇಳು ಈಗ ಕಲ್ಯಾಣ ಪಟ್ಟಣದಲ್ಲಿ ಅನೇಕ ಕಡೆಗಳಿಂದ ಬಂದ ಶಿವಶರಣರ ಸಮೂಹ ತುಂಬಿಕೊಂಡಿದೆ ನಿಮ್ಮ ಅರಮನೆಯೊಂದನ್ನು ಬಿಟ್ಟು ಮಿಕ್ಕೆಲ್ಲ ಕಡೆಗೂ ಅವರ ಹಾವಳಿಯೇ ತುಂಬಿದೆ ಅಲ್ಲದೆ ಬಸವಣ್ಣನು ತನ್ನ ಅಳಿಯ ಚೆನ್ನಬಸವಣ್ಣನಿಗೆ ಪಟ್ಟವನ್ನು ಕಟ್ಟಿ ರಾಜ್ಯವೆಲ್ಲವನ್ನು ತನ್ನ ಕೈವಶಮಾಡಿಕೊಳ್ಳಬೇಕೆಂದು ಹವಣಿಸಿದ್ದಾನೆ" ಎಂದು ಚಾಡಿ ಹೇಳಿದನು. ಅಲ್ಲದೇ ನನ್ನ ಮಾತಿನಲ್ಲಿ ತಮಗೆ ನಂಬಿಕೆಯಿಲ್ಲದಿದ್ದರೆ ತಾವೇ ಬಸವಣ್ಣನನ್ನು ಕರೆಯಿಸಿ ಕೇಳಿ ಪರಿಶೀಲಿಸಬಹುದೆಂದು ತಿಳಿಸಿದ ಬಸವಣ್ಣನವರ ಮಾತುಗಳಿಂದಲೇ ವಿಚಾರಿಸುವುದು ಸರಿಯಾದ ರಾಜನೀತಿ ಮಾರ್ಗವೆಂದು ದೂರಿಕೊಂಡನು ಹೀಗೆ ಕೊಂಡೆಮಂಚರ್ಣಾಣನ ಮಾತು ಕೇಳಿ ಬಿಜ್ಜಳ ರಾಜನು ಬಸವಣ್ಣ ಹಾಗೂ ಚೆನ್ನಬಸವಣ್ಣನನ್ನು ಆಸ್ಥಾನಕ್ಕೆ ಬರಲು ಹೇಳಿದಾಗ ಬಸವಣ್ಣ ಹಾಗೂ ಚೆನ್ನಬಸವಣ್ಣರಿಬ್ಬರೂ ಬಿಜ್ಜಳನ ಆಸ್ಥಾನಕ್ಕೆ ಬರುವರು. ನಂತರದಲ್ಲಿ ಬಿಜ್ಜಳರಾಜ ಹಾಗೂ ಚೆನ್ನ ಬಸವಣ್ಣನಿಗೂ ಸಾಕಷ್ಟು ಚರ್ಚೆಗಳು ನಡೆಯುತ್ತವೆ ಎಂಬುದು ತಿಳಿದುಬರುತ್ತದೆ.

**೧೦. ವಿಷ್ಣುವಿಗೆ ಚಕ್ರಪ್ರದಾನ ಮಾಡಿದ ಶಿವ :**

ಶಿವನು ವಿಷ್ಣುವಿಗೆ ಚಕ್ರವನ್ನು ಪ್ರಧಾನ ಮಾಡುತ್ತಿರುವ ಸನ್ನಿವೇಶದಿಂದ ಚಿತ್ರಣಗೊಂಡಿದೆ. ಈ ಚಿತ್ರದ ಎಡಭಾಗದಲ್ಲಿ ವಿಷ್ಣುವು ತಪಸ್ಸನ್ನು ಮಾಡುತ್ತಿರುವಂತೆಯೂ ಮಧ್ಯದಲ್ಲಿ ಶಿವನು ಕುಳಿತಿರುವಂತೆಯೂ ಚಿತ್ರಿಸಲಾಗಿದೆ. ಅಲ್ಲದೇ ಚಿತ್ರದ ಬಲಭಾಗದಲ್ಲಿ ಶಿವ ಮತ್ತು ವಿಷ್ಣುವನ್ನು ಚಿತ್ರಿಸಲಾಗಿದೆ.

**ಈ ಚಿತ್ರದ ಸಾರಾಂಶ :**

ಒಮ್ಮೆ ವಿಷ್ಣುವು ಚಕ್ರವನ್ನು ಬಯಸಿ ಪರಮೇಶ್ವರನನ್ನು ಕುರಿತು ತಪಸ್ಸು ಮಾಡುತ್ತಾನೆ. ಆಗ ಶಿವನು ಪ್ರತ್ಯಕ್ಷನಾಗಿ ನಿನಗೇನು ವರಬೇಕು ಕೇಳು ಎಂದಾಗ ವಿಷ್ಣುವು ಶಿವನನ್ನು ಕುರಿತು "ಎಲೈ ಮಹಾದೇವಾ ನಿನ್ನ

ಅಪ್ಪಣೆಯ ಪ್ರಕಾರ ನಾನು ಲೋಕಗಳನ್ನು ಪಾಲಿಸುತ್ತಿರಲು ಆಗಾಗ ಒಬ್ಬೊಬ್ಬ ರಾಕ್ಷಸರು ಹುಟ್ಟಿ ಲೋಕವನ್ನು ನಾಶ ಮಾಡುತ್ತಿದ್ದಾರೆ. ಇದಕ್ಕೆ ನಾನೇನೂ ಮಾಡಲಾಗುತ್ತಿಲ್ಲ. ಅದಕ್ಕಾಗಿ ನಿನ್ನ ಕೈಯಲ್ಲಿರುವ ಚಕ್ರವನ್ನು ನನಗೆ ಅನುಗ್ರಹಿಸಿದರೆ ದುಷ್ಟರಾದ ಅವರ ತಲೆಗಳನ್ನು ಕತ್ತರಿಸುತ್ತೇನೆ" ಎಂದು ಹೇಳಿದನು. ಆಗ ಶಿವನು ವಿಷ್ಣುವಿಗೆ ಚಕ್ರವನ್ನು ಪ್ರದಾನ ಮಾಡುತ್ತಾನೆ ಎಂಬುದಾಗಿ ಚೆನ್ನಬಸವ ಪುರಾಣದಿಂದ ತಿಳಿದು ಬರುತ್ತದೆ.

**೧೧. ಈಶ್ವರನ ಅರ್ಧನಾರೀಶ್ವರತ್ವ :**

ಚಿತ್ರದ ಎಡಬದಿಯಲ್ಲಿ ಬ್ರಹ್ಮ ಮತ್ತು ಉಮಾ ಮಹೇಶ್ವರರನ್ನು ಚಿತ್ರಿಸಲಾಗಿದ್ದು ಬಲಭಾಗದಲ್ಲಿ ಬ್ರಹ್ಮ ಮತ್ತು ಈಶ್ವರನು ಅರ್ಧನಾರೀಶ್ವರನಾದ ಚಿತ್ರಣದಿಂದ ತೋರಿಸಲಾಗಿದೆ.

**ಈ ಚಿತ್ರದ ಸಾರಾಂಶ :**

ಒಮ್ಮೆ ಬ್ರಹ್ಮನು ಶಿವನನ್ನು ಕುರಿತು ತಪಸ್ಸು ಮಾಡಿದನು. ಶಿವನು ಒಲಿದು ವರವೇನು ಬೇಕು ಬೇಡು ಎನಲು ದೇವಾ ನಿನ್ನ ಅಪ್ಪಣೆಯಂತೆ ಯಾವ ಯಾವ ರೀತಿಯಲ್ಲಿಯೋ ಸೃಷ್ಟಿಯನ್ನು ಮಾಡಲು ಹೋದೆ ನಿನ್ನ ದಯೆಯ ಅವಲಂಬನೆ ಇಲ್ಲದೇ ಈ ಸೃಷ್ಟಿಯು ಸಾಧ್ಯವಾಗದು. ನೀನು ನನ್ನ ದೇಹದಲ್ಲಿ ಜನಿಸಿ ಎಂದು ಬೇಡಿದನು. ಅದಕ್ಕೆ ಶಿವನು ನಾನು ನಿನ್ನ ದೇಹದಲ್ಲಿ ಹುಟ್ಟಿದರೆ ನಿನಗೆ ಸಾವು ತಪ್ಪುವುದಿಲ್ಲ. ಈ ವರವು ಬೇಡ ಎನಲು ಬ್ರಹ್ಮನು ಆದುದಾಗಲಿ ಕರುಣಿಸು ದೇವಾ ಎನಲು ಶಿವನು ಹಾಗೆಯೇ ಮಾಡುತ್ತೇನೆ ಎಂದನು. "ಸ್ಫಟಿಕಶಿಲೆಯ ಮಡಕೆಯಲ್ಲಿ ಪ್ರಜ್ವಲಿಸುವ ದೀಪದಂತೆ ಬ್ರಹ್ಮನ ದೇಹದೊಳಗೆ ಷಟ್ ಚಕ್ರವನ್ನು ಬೇಧಿಸುತ್ತಾ ಹಣೆಯ ಮಧ್ಯದಲ್ಲಿ ಶಕ್ತಿಸಮೇತನಾಗಿ ಶಿವನು ಒಡೆದು ಮೂಡಿ ಬ್ರಹ್ಮನ ಶರೀರವನ್ನು ಎರಡು ಹೋಳಗಿಸಿ ಕಾಣಿಸಿಕೊಂಡನು. ಆ ಸಮಯದಲ್ಲಿ ಬ್ರಹ್ಮನ ಮನಸ್ಸಿನ ಅಜ್ಞಾನದಿಂದ ಮಹೇಶ್ವರನು ಅತೀ ಭಯಂಕರಾಕಾರವನ್ನು ತಾಳಿ ರುದ್ರನಾದನು. ಉಮೆಯು ಮಹಾಕಾಳಿಯಾದಳೂ. ಈ ಇಬ್ಬರು ದಂಪತಿಗಳು ಬಾಲಸೂರ್ಯ ಮಂಡಲದ ಕೊನೆಯಲ್ಲಿ ಪ್ರಕಾಶಿಸುವ ನಿಳಮೇಘನ ರೀತಿಯಲ್ಲಿ ಪ್ರಕಾಶಮಾನವಾಗಿದ್ದರು. ಆ ನಂತರ ರುದ್ರನು ಮಹಾಕಾಳಿಯ ಜೊತೆಯಲ್ಲಿ ಸಂತೋಷದಿಂದ ಕಾಲ ಕಳೆಯುತ್ತಿರಲು ನೀಲ ಲೋಹಿತ ಮೊದಲಾದ ರುದ್ರಗಣರು, ಬಲವಿಕರಣಿಯರು, ಬಲಪ್ರಮಥಿನಿಯರು ಎಂಬ ಶಕ್ತಿ ದೇವಿಯರು ಜನಿಸಿದರು. ಅವರನ್ನು ಒಲುಮೆಯಿಂದ ಗಂಡ ಹೆಂಡಿರನ್ನಾಗಿ ಮಾಡಿ ಆ ರುದ್ರಗಣಗಳೊಡನೆ ಸುಖವಾಗಿ ಇರುತ್ತಿದ್ದರು. ಮಹಾರುದ್ರನು ಕರುಣೆಯಿಂದ ಬ್ರಹ್ಮನ ದೇಹದ ಎರಡು ಸೀಳುಗಳನ್ನು ಒಂದುಗೂಡಿಸಲು ಬ್ರಹ್ಮನು ಎಚ್ಚರಗೊಂಡು ಆ ಎರಡೂ ಮೂರ್ತಿಗಳ ಭಯಂಕರ ರೂಪವನ್ನು ನೋಡಿ ಆಶ್ಚರ್ಯಚಕಿತನಾದನು. ಅಲ್ಲದೇ ಶಿವನನ್ನು ಕುರಿತು "ದೇವಾ ಒಂದೇ ರೂಪವನ್ನು ತಾಳಿ ಕರುಣಿಸು" ಎನಲು ಶಿವನು ಅರ್ಧನಾರೀಶ್ವರನಾದನು.

# ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
# 'ಗುಲಬರ್ಗಾ ವಿಭಾಗದ ಚೆನ್ನಬಸವಪುರಾಣದಲ್ಲಿ
# ಸಾಂಪ್ರದಾಯಿಕ ಕಿರುರೂಪಚಿತ್ರಗಳು'



೧. ಶಿವನ ಒಡ್ಡೋಲಗ



೨. ಸಿದ್ಧರಾಮನಿಗೆ ಶಿವತತ್ವಬೋಧನೆ



೩. ಪಾರ್ವತಿಯ ಪ್ರಶ್ನೆ

# ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
# 'ಗುಲಬರ್ಗಾ ವಿಭಾಗದ ಚೆನ್ನಬಸವಪುರಾಣದಲ್ಲಿ
# ಸಾಂಪ್ರದಾಯಿಕ ಕಿರುರೂಪಚಿತ್ರಗಳು'



೪. ಅಕ್ಕನಾಗಮ್ಮನ ಸ್ವಪ್ನ



೫. ಬಿಜ್ಜಳನಿಗೆ ಚಾಡಿ ಹೇಳಿದ್ದು




೬. ಚೆನ್ನಬಸವ ಬಾಲಲೀಲೆ

ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
'ಗುಲಬರ್ಗಾ ವಿಭಾಗದ ಚೆನ್ನಬಸವಪುರಾಣದಲ್ಲಿ
ಸಾಂಪ್ರದಾಯಿಕ ಕಿರುರೂಪಚಿತ್ರಗಳು'



೮. ಬಸವಣ್ಣನು ಬಿಜ್ಜಳನ ಸಭೆಗೆ ಬಂದದ್ದು



೯. ಉರಿಲಿಂಗ ಉದ್ಭವವಾದುದು

## ಕರ್ನಾಟಕದ ವೀರಶೈವ ಪರಂಪರೆಯ ಹಸ್ತ ಪ್ರತಿ ಚಿತ್ರಗಳು
## 'ಗುಲಬರ್ಗಾ ವಿಭಾಗದ ಚೆನ್ನಬಸವಪುರಾಣದಲ್ಲಿ
## ಸಾಂಪ್ರದಾಯಿಕ ಕಿರುರೂಪಚಿತ್ರಗಳು'



೧೦. ವಿಷ್ಣುವಿಗೆ ಚಕ್ರಪ್ರಧಾನ ಮಾಡುವ ಶಿವ



೧೧. ಈಶ್ವರನ ಅರ್ಧನಾರೀಶ್ವರತ್ವವು



೧೨. ಚಂದ್ರೋದಯದ ವರ್ಣನೆ

## ೨೬. ಕಾಯಾರ್ಪಣೋದ್ಧರಣೆ

| | | | | | |
|---|---|---|---|---|---|
| ಮಹಾಲಿಂಗ | ಪರಿಣಾಮ | ತೃಪ್ತಿ | ಸ್ವಾದೋದಕ | ಓಂ ಹ್ರಃ | ಪ್ರಸಾದ |
| ಪ್ರಸಾದಲಿಂಗ | ಲೇಹ್ಯ | ಶಬ್ದ | ನಾರಿಕೇಳರಸ | ಓಂ ಹ್ರೌಂ | ಪ್ರಸಾದ |
| ಜಂಗಮಲಿಂಗ | ಚೋಹ್ಯ | ಸ್ಪರ್ಶ | ಇಕ್ಷುರಸ | ಓಂ ಹ್ರೈಂ | ಪ್ರಸಾದ |
| ಶಿವಲಿಂಗ | ಭಕ್ಷ್ಯ | ರೂಪು | ಘೃತ | ಓಂ ಹ್ರುಂ | ಪ್ರಸಾದ |
| ಗುರುಲಿಂಗ | ಪಾನೀಯ | ರಸ | ದಧಿ | ಓಂ ಹ್ರೀಂ | ಪ್ರಸಾದ |
| ಆಚಾರಲಿಂಗ | ಭೋಜ್ಯ | ಗಂಧ | ಕ್ಷೀರ | ಓಂ ಹ್ರಾಂ | ಪ್ರಸಾದ |

## ೨೭. ೧೮ ತೆರೆದ ಅರ್ಪಣೋದ್ಧರಣೆ

| | | | |
|---|---|---|---|
| ಓಂ | ರೂಪು | ರುಚಿ | ತೃಪ್ತಿ |
| ಯ | ರೂಪು | ರುಚಿ | ತೃಪ್ತಿ |
| ವಾ | ರೂಪು | ರುಚಿ | ತೃಪ್ತಿ |
| ಶಿ | ರೂಪು | ರುಚಿ | ತೃಪ್ತಿ |
| ಮಃ | ರೂಪು | ರುಚಿ | ತೃಪ್ತಿ |
| ನ | ರೂಪು | ರುಚಿ | ತೃಪ್ತಿ |

## ೨೮. ೬೬ ತೆರೆದ ಅರ್ಪಣೋದ್ಧರಣೆ

| | | | | | | | | | |
|---|---|---|---|---|---|---|---|---|---|
| ಐಕ್ಯ | ಮಹಾಲಿಂಗ | ಹೃದಯ | ಭಾವ | ಚಿತ್ಯಕ್ತಿ | ಶಾಂತ್ಯಾತೀತೋತ್ತರ ಕಲೆ | ಸಮರಸ | ಮಹಾ ಸಾದಾಖ್ಯ | ತೃಪ್ತಿ | ಓಂ ಹ್ರಃ ಪ್ರಸಾದ |
| ಶರಣ | ಪ್ರಸಾದ ಲಿಂಗ | ಶ್ರೋತ್ರ | ಜ್ಞಾನ | ಪರಶಕ್ತಿ | ಶಾಂತ್ಯಾತೀತಕಲೆ | ಆನಂದ | ಶಿವ ಸಾದಾಖ್ಯ | ಶಬ್ದ | ಓಂ ಹ್ರೌಂ ಪ್ರಸಾದ |
| ಪ್ರಾಣ ಲಿಂಗಿ | ಜಂಗಮಲಿಂಗ | ತ್ವಕ್ಕು | ಸುಮನ | ಆದಿಶಕ್ತಿ | ಶಾಂತಿಕಲೆ | ಅನುಭಾವ | ಅಮೂರ್ತಿ ಸಾದಾಖ್ಯ | ಸ್ಪರ್ಶನ | ಓಂ ಹ್ರೈಂ ಪ್ರಸಾದ |
| ಪ್ರಸಾದಿ | ಶಿವಲಿಂಗ | ನೇತ್ರ | ನಿರಹಂಕಾರ | ಇಚ್ಛಾಶಕ್ತಿ | ವಿದ್ಯಾಕಲೆ | ಸಾವಧಾನ | ಮೂರ್ತಿ ಸಾದಾಖ್ಯ | ರೂಪು | ಓಂ ಹ್ರೂಂ ಪ್ರಸಾದ |
| ಮಹೇಶ್ವರ | ಗುರುಲಿಂಗ | ಜಿಂಹ್ವೆ | ಬುದ್ಧಿ | ಜ್ಞಾನಶಕ್ತಿ | ಪ್ರತಿಷ್ಠಿ ಕಲೆ | ನೈಷ್ಠೆ | ಕರ್ತೃ ಸಾದಾಖ್ಯ | ರಸ | ಓಂ ಹ್ರೀಂ ಪ್ರಸಾದ |
| ಭಕ್ತ | ಆಚಾರಲಿಂಗ | ಘ್ರಾಣ | ಚಿತ್ತ | ಕ್ರಿಯಾಶಕ್ತಿ | ನಿವೃತ್ತಿ ಕಲೆ | ಶ್ರದ್ಧೆ | ಕರ್ಮ ಸಾದಾಖ್ಯ | ಗಂಧ | ಓಂ ಹ್ರಾಂ ಪ್ರಸಾದ |

## ೨೯. ೪೮ ತೆರದ ಅರ್ಪಣೋದ್ಧರಣೆ

| | | | | | | | |
|---|---|---|---|---|---|---|---|
| ಮಹಾಲಿಂಗ | ಐಕ್ಯ | ಚಿತ್ಶಕ್ತಿ | ಸಮರಸ ಭಕ್ತಿ | ಸದ್ಭಾವ ಹಸ್ತ | ಹೃದಯ | ತೃಪ್ತಿ | ಪ್ರಸಾದ |
| ಪ್ರಸಾದ ಲಿಂಗ | ಶರಣ | ಪರಶಕ್ತಿ | ಆನಂದ ಭಕ್ತಿ | ಸುಜ್ಞಾನ ಹಸ್ತ | ಶ್ರೋತ್ರ | ಶಬ್ದ | ಪ್ರಸಾದ |
| ಜಂಗಮಲಿಂಗ | ಪ್ರಾಣಲಿಂಗಿ | ಆದಿಶಕ್ತಿ | ಅನುಭಾವ ಭಕ್ತಿ | ಸುಮನ ಹಸ್ತ | ತ್ವಕ್ಕು | ಸ್ಪರ್ಶನ | ಪ್ರಸಾದ |
| ಶಿವಲಿಂಗ | ಪ್ರಸಾದಿ | ಇಚ್ಛಾಶಕ್ತಿ | ಸಾವಧಾವ ಭಕ್ತಿ | ನಿರಹಂಕಾರ ಹಸ್ತ | ನೇತ್ರ | ರೂಪು | ಪ್ರಸಾದ |
| ಗುರುಲಿಂಗ | ಮಹೇಶ | ಜ್ಞಾನಶಕ್ತಿ | ನೈಷ್ಠಿಕ ಭಕ್ತಿ | ಸುಬುದ್ಧಿ ಹಸ್ತ | ಜಿಂಹ್ವೆ | ರಸ | ಪ್ರಸಾದ |
| ಆಚಾರಲಿಂಗ | ಭಕ್ತ | ಕ್ರಿಯಾಶಕ್ತಿ | ಸದ್ಭಕ್ತಿ | ಸುಚಿತ್ತ ಹಸ್ತ | ಘ್ರಾಣ | ಗಂಧ | ಪ್ರಸಾದ |

## ೩೦. ೩೮ ತೆರೆದ ಅರ್ಪಣೋದ್ಧರಣೆ

| | | | | | |
|---|---|---|---|---|---|
| ಮಹಾದ ತೃಪ್ತಿ | ಪರಿಣಾಮ | ಪರಿಣಾಮ | ಪರಿಣಾಮ | ಪರಿಣಾಮ | ಪರಿಣಾಮ |
| ಶಬ್ದದ ತೃಪ್ತಿ | ಗೀತನಾದ | ಮಿತ್ರ ಸ್ಪರ್ಶನ | ಕೃಷ್ಣವರ್ಣ | ಕಹಿಯಾದ ರುಚಿ | ಫಲದಗಂಧ ಪ್ರಸಾದಲಿಂಗ |
| ಸ್ಪರ್ಶನ ತೃಪ್ತಿ | ಶುಶೀರನಾದ | ಶೈತ್ಯ ಸ್ಪರ್ಶನ | ಹಸುರುವರ್ಣ | ಅಂಬ್ರವಾದ ರುಚಿ | ಪುಷ್ಪಗಂಧ ಜಂಗಮಲಿಂಗ |
| ರೂಪಿನ ತೃಪ್ತಿ | ಕುರುವಿಡಿದು ಹುಟ್ಟಿದನಾದ | ಉಷ್ಣ ಸ್ಪರ್ಶನ | ಕೆಂಪುವರ್ಣ | ಖಾರವಾದ ರುಚಿ | ಪತ್ರೆಯಗಂಧ ಶಿವಲಿಂಗ |
| ರಸದ ತೃಪ್ತಿ | ತಂತಿನಾದ | ಮೃದುವಾದ ಸ್ಪರ್ಶನ | ಶ್ವೇತವರ್ಣ | ಒಗರಾದ ರುಚಿ | ಸ್ಥಾವರಗಂಧ ಗುರುಲಿಂಗ |
| ಗಂಧದ ತೃಪ್ತಿ | ಹಸ್ತ ಖಂಡಿತ ನಾದ | ಕಠಿಣವಾದ ಸ್ಪರ್ಶನ | ಪೀತವರ್ಣ | ಮಧುರವಾದ ರುಚಿ | ಪೃಥ್ವಿಗಂಧ ಆಚಾರಲಿಂಗ |
| ಮಹಾಲಿಂಗ | ಪ್ರಸಾದಲಿಂಗ | ಜಂಗಮಲಿಂಗ | ಶಿವಲಿಂಗ | ಗುರುಲಿಂಗ | ಆಚಾರಲಿಂಗ |

### ೩೧. ೧೦೮ ತೆರೆದ ಅರ್ಪಣೋದ್ಧರಣೆ

| ೦ | ೦ | ೦ | ೦ | ೦ | ೦ |
|---|---|---|---|---|---|
| ಓಂ | ಯ | ವಾ | ಶಿ | ಮ | ನ |
| ರೂಪು | ರೂಪು | ರೂಪು | ರೂಪು | ರೂಪು | ರೂಪು |
| ರುಚಿ | ರುಚಿ | ರುಚಿ | ರುಚಿ | ರುಚಿ | ರುಚಿ |
| ತೃಪ್ತಿ | ತೃಪ್ತಿ | ತೃಪ್ತಿ | ತೃಪ್ತಿ | ತೃಪ್ತಿ | ತೃಪ್ತಿ |
| ರೂಪು | ರೂಪು | ರೂಪು | ರೂಪು | ರೂಪು | ರೂಪು |
| ರುಚಿ | ರುಚಿ | ರುಚಿ | ರುಚಿ | ರುಚಿ | ರುಚಿ |
| ತೃಪ್ತಿ | ತೃಪ್ತಿ | ತೃಪ್ತಿ | ತೃಪ್ತಿ | ತೃಪ್ತಿ | ತೃಪ್ತಿ |
| ರೂಪು | ರೂಪು | ರೂಪು | ರೂಪು | ರೂಪು | ರೂಪು |
| ರುಚಿ | ರುಚಿ | ರುಚಿ | ರುಚಿ | ರುಚಿ | ರುಚಿ |
| ತೃಪ್ತಿ | ತೃಪ್ತಿ | ತೃಪ್ತಿ | ತೃಪ್ತಿ | ತೃಪ್ತಿ | ತೃಪ್ತಿ |
| ರೂಪು | ರೂಪು | ರೂಪು | ರೂಪು | ರೂಪು | ರೂಪು |
| ರುಚಿ | ರುಚಿ | ರುಚಿ | ರುಚಿ | ರುಚಿ | ರುಚಿ |
| ತೃಪ್ತಿ | ತೃಪ್ತಿ | ತೃಪ್ತಿ | ತೃಪ್ತಿ | ತೃಪ್ತಿ | ತೃಪ್ತಿ |
| ರೂಪು | ರೂಪು | ರೂಪು | ರೂಪು | ರೂಪು | ರೂಪು |
| ರುಚಿ | ರುಚಿ | ರುಚಿ | ರುಚಿ | ರುಚಿ | ರುಚಿ |
| ತೃಪ್ತಿ | ತೃಪ್ತಿ | ತೃಪ್ತಿ | ತೃಪ್ತಿ | ತೃಪ್ತಿ | ತೃಪ್ತಿ |
| ರೂಪು | ರೂಪು | ರೂಪು | ರೂಪು | ರೂಪು | ರೂಪು |
| ರುಚಿ | ರುಚಿ | ರುಚಿ | ರುಚಿ | ರುಚಿ | ರುಚಿ |
| ತೃಪ್ತಿ | ತೃಪ್ತಿ | ತೃಪ್ತಿ | ತೃಪ್ತಿ | ತೃಪ್ತಿ | ತೃಪ್ತಿ |

### ೩೨. ೨೧೬ ತೆರೆದ ಭಾವಾರ್ಪಣೋದ್ಧರಣೆ

| | | | | | |
|---|---|---|---|---|---|
| ಇವೆಲ್ಲರಲ್ಲಿಯ<br>ಗಂಧ ೬ | ಇವೆಲ್ಲರಲ್ಲಿಯ<br>ರುಚಿ ೬ | ಇವೆಲ್ಲರಲ್ಲಿಯ<br>ರೂಪು ೬ | ಇವೆಲ್ಲರಲ್ಲಿಯ<br>ಸ್ಪರ್ಶನ ೬ | ಇವೆಲ್ಲರಲ್ಲಿಯ<br>ಶಬ್ದ ೬ | ಇವೆಲ್ಲರಲ್ಲಿಯ<br>ತೃಪ್ತಿ ೬ |
| ಕಾಯಿ ಹಣ್ಣು<br>ಫಲದ ಗಂಧ ೬ | ಕಹಿಯಾದ<br>ರುಚಿ ೬ | ಕಪೋತವರ್ಣದ<br>ರೂಪು ೬ | ಮಿಶ್ರವಾದ<br>ಸ್ಪರ್ಶನ ೬ | ವಚನಗೀತದ<br>ಶಬ್ದ ೬ | ಶಬ್ದದ<br>ತೃಪ್ತಿ ೬ |
| ಮೊಗ್ಗೆ ಪುಷ್ಪದ<br>ಗಂಧ ೬ | ಆಂಬ್ರವಾದ<br>ರುಚಿ ೬ | ಮಾಂಜಿಷ್ಠ<br>ವರ್ಣದ ರೂಪು ೬ | ಶೈತ್ಯವಾದ<br>ಸ್ಪರ್ಶನ ೬ | ಕೊಳಲು ವಾಸುಗೆ<br>ನಾಗಸರ ಶಂಖದ<br>ಶಬ್ದ ೬ | ಸ್ಪರ್ಶನದ<br>ತೃಪ್ತಿ ೬ |
| ಚಿಗುರು ಪತ್ರಿಯ<br>ಗಂಧ ೬ | ಖಾರವಾದ<br>ರುಚಿ ೬ | ಹರಿತವರ್ಣದ<br>ರೂಪು ೬ | ಮೃದುವಾದ<br>ಸ್ಪರ್ಶನ ೬ | ಕುರುಹಿನ<br>ಶಬ್ದ ೬ | ರೂಪಿನ<br>ತೃಪ್ತಿ ೬ |
| ಮರತಿಗಡು<br>ಹಗಿನದ ಗಂಧ ೬ | ವಗರಾದ<br>ರುಚಿ ೬ | ಶ್ವೇತವರ್ಣದ<br>ರೂಪು ೬ | ಉಷ್ಣವಾದ<br>ಸ್ಪರ್ಶನ ೬ | ತಂತಿಹಿಡಿದು<br>ಹುಟ್ಟಿದ ಶಬ್ದ ೬ | ರಸದ<br>ತೃಪ್ತಿ ೬ |
| ಬೇರು ಗೆಣಸಿನ<br>ಗಂಧ ೬ | ಮಧುರವಾದ<br>ರುಚಿ ೬ | ಪೀತವರ್ಣದ<br>ರೂಪು ೬ | ಕಠಿಣವಾದ<br>ಸ್ಪರ್ಶನ ೬ | ತಾಳ ಕೌಸಾಳದ<br>ಶಬ್ದ ೬ | ಗಂಧದ<br>ತೃಪ್ತಿ ೬ |

ಅಧ್ಯಾಯ : ನಾಲ್ಕು

# ಕರ್ನಾಟಕದ ವೀರಶೈವ ಭಿತ್ತಿ ಚಿತ್ರಕಲೆ



# ಕರ್ನಾಟಕದ ವೀರಶೈವ ಭಿತ್ತಿ ಚಿತ್ರಕಲೆ

"ಭಿತ್ತಿ ಇಲ್ಲದೇ ಬರೆಯಬಹುದೇ ಚಿತ್ತಾರವ
ಭಿತ್ತಿಯೊಂದಿಲ್ಲದಿರೆ ಚಿತ್ರವೆಂತಿರಬಹುದು
ಚಿತ್ರವಿಲ್ಲದೇ ಭಿತ್ತಿ ಸೊಗಸಹುದೆಂತು"

ಹೀಗೆ ವಚನಸಾಹಿತ್ಯದಲ್ಲಿ ಶರಣರು ಭಿತ್ತಿ ಚಿತ್ರಗಳ ಕುರಿತು ಅಂದರೆ ಭಿತ್ತಿ ಮತ್ತು ಭಿತ್ತಿಚಿತ್ರಗಳ ಕುರಿತು ಪ್ರಾಸಂಗಿಕವಾಗಿ ವಿವರಿಸಿರುವುದನ್ನು ಕಾಣಬಹುದಾಗಿದೆ.[೧] ಭಿತ್ತಿ ಎಂದರೆ ಚಿತ್ರವನ್ನು ಬರೆಯುವ ಮೂಲಾಧಾರವೆಂದೂ ಭಿತ್ತಿಚಿತ್ರವೆಂದರೆ ಬರೀ ಗೋಡೆಯ ಮೇಲೆ ರಚಿಸಿದ ಚಿತ್ರಗಳಲ್ಲದೇ ಯಾವುದೇ ಆಧಾರದ ಮೇಲೆ ರಚಿಸಿದ ಚಿತ್ರಗಳೂ ಭಿತ್ತಿಚಿತ್ರಗಳೆನಿಸುತ್ತವೆ. ಭಿತ್ತಿ ಇಲ್ಲದೇ ಬರೆಯಬಹುದೇ ಚಿತ್ತಾರವ! ಭಿತ್ತಿಯೊಂದಿಲ್ಲದಿರೆ ಚಿತ್ರವೆಂತಿರಬಹುದು ಎನ್ನುವ ಶರಣರ ವಚನದಲ್ಲಿ ಚಿತ್ರ ಬರೆಯಲು ಭಿತ್ತಿಯ ಅವಶ್ಯಕತೆಯನ್ನು ತಿಳಿಸಿಕೊಡುತ್ತದೆ.

ಭಿತ್ತಿ ಚಿತ್ರಕಲೆ ಎಂದರೆ ಸ್ವಾಭಾವಿಕ ಗುಹೆ, ಶಿಲೆ, ಬಯಲು ಬಂಡೆಗಳ ಮೇಲೆ, ಮತ್ತು ಮಾನವ ನಿರ್ಮಿತವಾದ ಗುಹೆ, ದೇವಾಲಯ, ಮನೆ, ಮಠ, ಮಸೀದಿ, ಚರ್ಚುಗಳು ಮುಂತಾದ ಕಟ್ಟಡಗಳ ಗೋಡೆ, ಮೇಲ್ಛಾವಣಿ, ಜಂತಿ, ತೊಲೆ, ಕಂಬ, ಮಾಡುಗಳು, ಕಿಡಕಿಗಳು, ಕಮಾನುಗಳು ಹೀಗೆ ವಾಸ್ತುವಿನ ಯಾವುದೇ ಭಾಗದಲ್ಲಿ ಚಿತ್ರರಚಿಸಿ ಅವುಗಳನ್ನು ಅಲಂಕರಿಸುವ ವಿಧಾನವನ್ನು "ಭಿತ್ತಿಚಿತ್ರಕಲೆ" ಎಂದು ಪರಿಗಣಿಸಲಾಗುವುದು. ಭಿತ್ತಿ ಚಿತ್ರಕಲೆಯ ಪ್ರಾಚೀನತೆಯ ಕುರಿತು ನಿಖರವಾದ ಕಾಲಸೂಚಿ ಹೇಳುವುದು ಅಸಾಧ್ಯವಾದುದಾದರೂ, ಮಾನವ ಪ್ರಪಂಚಕ್ಕೆ ಕಾಲಿಟ್ಟ ನಂತರ, ನಿತ್ಯದ ಬದುಕಿಗೆ ಬೇಕಾಗುವ ಹಾಗೂ ತನ್ನ ಭಾವನೆಗಳನ್ನು ವ್ಯಕ್ತಪಡಿಸಲು, ಚಿತ್ರಗಳನ್ನು ಮಾಧ್ಯಮವಾಗಿ ಯಾವಾಗ ಬಳಸಿಕೊಂಡನೋ ಆವಾಗಿನಿಂದಲೇ ಈ ಕಲೆಯ ಕಾಲವೆಂದು ಗುರುತಿಸಬೇಕಾಗುತ್ತದೆ. ಯಾಕೆಂದರೆ ಕಲೆಯು ದಿಢೀರನೇ ಹುಟ್ಟಿ ಬರಲಿಲ್ಲ. ಪ್ರಾಚೀನ ವರ್ಣಚಿತ್ರಗಳ ಮೂಲಾಧಾರಗಳಿಗೆ (ಶಿಲೆ, ಗುಹೆ, ವಾಸ್ತು ಇತ್ಯಾದಿ) ಅಂಟಿದ ಬಣ್ಣವನ್ನೋ ಅದರ ಕಲ್ಲನ್ನೋ ಅದರ ಮಣ್ಣನ್ನೋ ಪರೀಕ್ಷೆಗೆ ಒಳಪಡಿಸಿ ಕಾಲ ಗಣನೆ ಮಾಡಬೇಕಾಗುತ್ತದೆ[೨] ಎಂಬ ವಿಚಾರಗಳು ಹೆಚ್ಚು ಅರ್ಥ ಪೂರ್ಣವಾದವುಗಳಾಗಿವೆ.

ಶಿಲಾಯುಗದ ಕಾಲದಲ್ಲಿಯೂ ಮಾನವನು ರಚಿಸಿದ ಭಿತ್ತಿಚಿತ್ರಕಲಾ ನಿದರ್ಶನಗಳು ಕಂಡು ಬರುತ್ತವೆ. ಈ ಕಾಲದ ಮಾನವನು ವರ್ಣದ್ರವ್ಯಗಳ ಬಗ್ಗೆ, ವರ್ಣಗಳ ತಯಾರಿಕೆ, ಅಂಟುಮಾಧ್ಯಮ, ವರ್ಣಗಳನ್ನು

---

೧. ಡಾ. ಪಿ.ವಿ.ನಾರಾಯಣ: ವಚನಸಾಹಿತ್ಯ – ಒಂದು ಅಧ್ಯಯನ: ಪುಟ ೩೧೯
೨. ಡಾ. ಎಸ್.ಸಿ.ಪಾಟೀಲ: ಕರ್ನಾಟಕದ ಜನಪದ ಚಿತ್ರಕಲೆ: ಪುಟ ೨೭.

ಕುಟ್ಟಿ ಪುಡಿ ಮಾಡುವುದು, ವರ್ಣಗಟ್ಟಿಗಳನ್ನು ಅರೆಯುವದು, ಅವುಗಳನ್ನು ದ್ರಾವಣವಾಗಿ ಮಾಡಿಕೊಳ್ಳುವುದು, ಕುಂಚಗಳ ಉಪಯೋಗ ಮುಂತಾದ ತಾಂತ್ರಿಕತೆಗಳನ್ನು ಆಗಲೇ ಬಲ್ಲವನಾಗಿದ್ದನು ಎಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಈ ಹಿನ್ನೆಲೆಯಲ್ಲಿ ಮಾನವನು ಬೆಟ್ಟಗುಡ್ಡಗಳಲ್ಲಿನ ಗುಹೆಗಳು, ಶಿಲಾತಾಣಗಳಲ್ಲಿ ವಾಸಿಸುತ್ತಿದ್ದ ಸಂದರ್ಭದಲ್ಲಿ ರಚನೆಯಾದ ಚಿತ್ರಗಳು ಇವಾದರೆ, ಮುಂದೆ ವ್ಯವಸಾಯಕ್ಕೆ ಯೋಗ್ಯವಾದ ಬಯಲು ಪ್ರದೇಶಕ್ಕೆ ಬಂದು ನೆಲೆಸಿದ ನಂತರ ಆತ ರಚಿಸುತ್ತಿದ್ದ ಭಿತ್ತಿ ಚಿತ್ರಕಲೆಯ ಸ್ವರೂಪವೂ ಬದಲಾಯಿತು. ಈ ಹೊತ್ತಿಗೆ ಭಿತ್ತಿಚಿತ್ರ ರಚನೆಯಲ್ಲಿಯ ನೀತಿ, ನಿಯಮಗಳು, ಕಟ್ಟುಪಾಡುಗಳು, ಪ್ರಮಾಣ, ಆಕಾರಗಳು ಚಿತ್ರ ರಚನೆಯಲ್ಲಿ ಕಂಡುಬರತೊಡಗಿದವು. ಚಿತ್ರಗಳನ್ನು ಹೇಗೆ ಬರೆಯಬೇಕೆಂಬ ಶಾಸ್ತ್ರೀಯ ವಿಧಾನಗಳು ರೂಪ ತಾಳಿದವು. ಇಂತಹ ಚಿತ್ರಗಳು ಮಾನವ ತಾನು ನಿರ್ಮಿಸಿದ ವಸ್ತು ಮತ್ತು ವಾಸ್ತು ರಚನೆಗಳಲ್ಲಿ ಕಂಡು ಬರತೊಡಗಿದವು. ಹಿಂದೆ ತಾನು ವಾಸಿಸುವ ನೆಲೆಗಳಾದ ಶಿಲಾಶ್ರಯ ತಾಣಗಳು, ಶಿಲಾಗುಹೆಗಳನ್ನು ವರ್ಣಚಿತ್ರಗಳಿಂದ ಅಲಂಕರಿಸಿದಂತೆ ಬಯಲುಪ್ರದೇಶದಲ್ಲಿ ನೆಲೆಸಿದ ಮಾನವನೂ ತನ್ನ ನಿವಾಸ, ಅರಮನೆ, ಗುರುಮನೆ (ಮಠ), ದೇವಾಲಯ, ಸಾರ್ವಜನಿಕ ಭವನಗಳು ಮತ್ತು ಸಮಾಧಿಗಳು, ಮಸೀದಿಗಳು, ಚರ್ಚುಗಳು ಹೀಗೆ ಸಾಮಾಜಿಕವಾಗಿದ್ದ ಭಿತ್ತಿಚಿತ್ರಗಳು ಧಾರ್ಮಿ ಮುಂತಾದ ಸ್ಥಳಗಲ್ಲಿ ವರ್ಣಚಿತ್ರಗಳಿಂದ ಅಲಂಕರಿಸುತ್ತಿದ್ದರೆಂದು ಅನೇಕ ಪುರಾವೆಗಳು ದೊರೆಯುತ್ತವೆ.[೩]

ಚಿತ್ರಕಲೆಯು ಸಾಹಿತ್ಯದಂತೆಯೇ ಮಾನವನು ಕಂಡುಕೊಂಡ ಒಂದು ವಿಶಿಷ್ಠ ಕಲಾ ಮಾಧ್ಯಮ. ಈ ಒಂದು ಕಲೆಯನ್ನು ಅವನು ಹೇಗೆ ಬಳಸಿಕೊಂಡ ಎಂಬ ಅಂಶವನ್ನು ಧಾರ್ಮಿಕ ಸಾಹಿತ್ಯದೊಡನೆ ತೌಲನಿಕವಾಗಿ ವಿವೇಚಿಸಲಾಗಿದೆ. ಸಮಾಜವನ್ನು ರೂಪಿಸುವಲ್ಲಿ, ಧರ್ಮವನ್ನು ಪ್ರಚಾರ ಮಾಡುವಲ್ಲಿ, ಮನೋರಂಜನೆಗಾಗಿ, ವೈಯಕ್ತಿಕ ಭಾವನೆಗಳಿಗೆ ಅಭಿವ್ಯಕ್ತಿ ನೀಡುವಲ್ಲಿ ಈ ಕಲಾಮಾಧ್ಯಮ ಹೇಗೆ ಉಪಯೋಗಕ್ಕೆ ಬಂದಿದೆ; ಬಳಸಲ್ಪಟ್ಟಿದೆ ಎಂಬುದರ ಬಗ್ಗೆ ಚಿತ್ರದ ಶೈಲಿ, ವಸ್ತು, ವರ್ಣಗಳ ಬಳಕೆ ಮುಂತಾದ ತಾಂತ್ರಿಕ ವಿಷಯಗಳ ಮೇಲೆಯೂ ತನ್ನ ಪ್ರಭಾವವನ್ನು ಹೇಗೆ ಬೀರಿದವು ಎಂಬ ಅಂಶವನ್ನು ವಿವೇಚಿಸುವ ಪ್ರಯತ್ನ ಮಾಡಲಾಗಿದೆ.

ಪರಂಪರಾನುಗತ ಕಲಾವಿದರು ತಾವು ರಚಿಸುತ್ತಿದ್ದ ಪದ್ಧತಿಯನ್ನು ಉಳಿದವರಿಗೆ ತಿಳಿಸುವುದಾದಲ್ಲಿ ಕಲೆಯ ಕೆಲವು ನಿಬಂಧನೆಗಳಿಗೆ ಒಳಗಾಗಿತ್ತು. ಅನೇಕ ಬಾರಿ ಕಲಾವಿದನೊಂದಿಗೇ ಆತನ ಶೈಲಿ, ರಚನಾಪದ್ಧತಿ, ತಂತ್ರಗಳೂ ಅಳಿದು ಹೋಗಿವೆ. ಆಚರಣೆಗೆ ಸಂಬಂಧಿಸಿದ ಚಿತ್ರಕಲೆಗಳು ಕೆಲವೊಮ್ಮೆ ಮಾಂತ್ರಿಕ ಸಂಬಂಧಿಯಾಗಿದ್ದು, ಬೇರೆಯವರು ಸುಲಭದಲ್ಲಿ ಕಲಿಯಲಾಗುತ್ತಿರಲಿಲ್ಲ. ಆದುದರಿಂದ ಪರಂಪರಾನುಗತರ ಚಿತ್ರಗಳ ಅಧ್ಯಯನದ ಅಗತ್ಯವಿದೆ. ಅವು ಇನ್ನೂ ಅಳಿದುಹೋಗುವ ಮೊದಲೇ ಅಧ್ಯಯನ ಆಗಬೇಕಾಗಿದೆ. ಮುಖ್ಯವಾಗಿ ವರ್ಣಗಳ ತಯಾರಿಕೆ, ಅವುಗಳ ಬಳಕೆ, ಆಕೃತಿಗಳ ಪ್ರಮಾಣಬದ್ಧತೆ, ಸಾಂಕೇತಿಕತೆ, ಆಚರಣೆಗಳಲ್ಲಿಯ ವಿಧಿ–ವಿಧಾನಗಳು,

೩. ಶ್ರೀ ಬಿ.ವಿ.ಕೆ.ಶಾಸ್ತ್ರಿ: ರೇಖಾಚಿತ್ರ: ಪುಟ ೪.

ನಂಬಿಕೆ ಇತ್ಯಾದಿಗಳ ಹಿನ್ನೆಲೆಯಲ್ಲಿ ಗಮನಿಸಬೇಕಾದ ಅಂಶಗಳು. ವೀರಶೈವ ಧರ್ಮ, ಶಾಸ್ತ್ರಕ್ಕೆ ಸಂಬಂಧಿಸಿದ ಚಿತ್ರಗಳು ಬೆಳೆದು ಬಂದ ಬಗೆ, ರಚಿಸಲ್ಪಟ್ಟ ವಿಧಾನಗಳನ್ನು ಅರಿಯಬೇಕಾದುದು ಅವಶ್ಯಕವಾದುದಾಗಿದೆ.

ಭಾರತದಲ್ಲಿ ಭಿತ್ತಿಚಿತ್ರಕಲೆ ಅತ್ಯಂತ ಪುರಾತನ ಕಾಲದಿಂದಲೇ ಪ್ರಾರಂಭವಾಗಿದೆ. ಮಧ್ಯಪ್ರದೇಶದ ಬಿಂಭೆಡ್ಕಾ ಪ್ರದೇಶದಲ್ಲಿ ೨೫೦೦೦ ವರುಷಗಳಷ್ಟು ಹಿಂದಿನ ಪ್ರಾಗೈತಿಹಾಸಿಕ ಚಿತ್ರಗಳಿದ್ದು ಇದೇ ರಾಜ್ಯದ ಮಹದೇವ್‌ಬೆಟ್ಟ, ರಾಮಘಡ್ ಬೆಟ್ಟ, ಜೋಗಿ ಮೂರಾ ಗುಹೆಗಳಲ್ಲಿ ಕಂಡುಬಂದ ಪ್ರಾಗೈತಿಹಾಸಿಕ ಭಿತ್ತಿ ಚಿತ್ರಗಳು ಕ್ರಿ.ಪೂ. ೧೦೦೦೦ ವರುಷಗಳಷ್ಟು ಹಳೆಯವಾಗಿವೆ. ಕ್ರಿ.ಪೂ. ೫೦೦೦ ವರ್ಷಗಳಷ್ಟು ಹಿಂದಿನ ಸಿಂಧೂ ನಾಗರಿಕತೆಯಲ್ಲಿ ವಸ್ತುಗಳನ್ನು ಭಿತ್ತಿಚಿತ್ರಗಳಿಂದ ಅಲಂಕರಿಸುತ್ತಿದ್ದರು ಎಂಬುದು ತಿಳಿದು ಬರುತ್ತದೆ.[೪] ರಾಮಾಯಣ–ಮಹಾಭಾರತಗಳಲ್ಲಿ ಅರಮನೆಗಳನ್ನು ಭಿತ್ತಿಚಿತ್ರಗಳಿಂದ ಅಲಂಕರಿಸುತ್ತಿದ್ದರೆಂಬುದು ತಿಳಿದುಬರುತ್ತದೆ. ಹನುಮಂತನು ಲಂಕೆಯ ರಾವಣನ ಅರಮನೆಯು ಶಿವನಿಗೆ ಸಂಬಂಧಿಸಿದ ಭಿತ್ತಿಚಿತ್ರಗಳಿಂದ ತುಂಬಿದೆ ಎಂದು ರಾಮನಿಗೆ ವರ್ಣಿಸಿದ್ದನೆಂಬುದು ತಿಳಿದುಬರುತ್ತದೆ. ಮಹಾಭಾರತದ ಪೂರ್ವದಲ್ಲಿ ಬದುಕಿದ್ದ "ಆಪಸ್ತಂಭನೆಂಬ ಋಷಿವರ್ಯನು" ತನ್ನ "ಕರ್ಮಬುದ್ಧಿಸಾರ" ಎಂಬ ಗ್ರಂಥದಲ್ಲಿ ಚಿತ್ರಕಲೆಯ ಬಗ್ಗೆ ಪ್ರಸ್ತಾಪಿಸಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ.[೫] ಅಂತೆಯೇ ಕರ್ನಾಟಕದಲ್ಲಿಯೂ ರಾಮದುರ್ಗದ ಮೇಗುಂಡೇಶ್ವರ ದೇವಾಲಯದ ಹತ್ತಿರವಿರುವ ಖಾಜಿಗುಡ್ಡದಲ್ಲಿ ಪೂರ್ವಶಿಲಾಯುಗದ ಅಂದರೆ ಕ್ರಿ.ಪೂ. ೪೦೦೦೦ ವರ್ಷಗಳ ಅವಧಿಯಲ್ಲಿ ಭಿತ್ತಿಚಿತ್ರಗಳು ರಚನೆಗೊಂಡಿವೆ ಎಂದು ಇತಿಹಾಸ ತಜ್ಞ ಡಾ. ಅ.ಸುಂದರ ಅವರು ಅಭಿಪ್ರಾಯಪಟ್ಟಿರುವರು. ಬಾದಾಮಿ ಹತ್ತಿರ, ಜಮಖಂಡಿ ಹತ್ತಿರ, ರಾಯಚೂರು, ಹಂಪೆ, ಬಳ್ಳಾರಿ ಜಿಲ್ಲೆಗಳಲ್ಲಿಯೂ ಇಂತಹ ಪ್ರಾಗೈತಿಹಾಸಿಕ ಚಿತ್ರಗಳಿವೆ.

ಧಾರ್ಮಿಕ ಹಾಗೂ ಶಿಷ್ಟ ಪರಂಪರೆಯ ಭಿತ್ತಿ ಚಿತ್ರಗಳು ಕರ್ನಾಟಕದಲ್ಲಿ ಪ್ರಾರಂಭವಾಗಿರುವುದು ಕ್ರಿ.ಶ. ೭ನೇ ಶತಮಾನದಿಂದ ಬಾದಾಮಿಯ ಚಾಲುಕ್ಯರ ಅವಧಿಯಲ್ಲಿ ಎಂಬುದು ತಿಳಿದುಬರುತ್ತದೆ. ಕ್ರಿ.ಶ. ೭ ರಿಂದ ೮ನೇ ಶತಮಾನದವರೆಗೆ "ಚಾಲುಕ್ಯರ ಬಾದಾಮಿ" (ಐಹೊಳೆ, ಪಟ್ಟದ ಕಲ್ಲುಗಳಲ್ಲಿ) ಯ ಭಿತ್ತಿಚಿತ್ರಗಳು ರಚನೆಗೊಂಡರೆ ಕ್ರಿ.ಶ. ೮ ರಿಂದ ೧೦ನೇ ಶತಮಾನದವರೆಗೆ "ರಾಷ್ಟ್ರಕೂಟರು ಎಲ್ಲೋರಾ"ದಲ್ಲಿ ಭಿತ್ತಿ ಚಿತ್ರಗಳನ್ನು ರಚಿಸಿರುವರು ಎಂಬುದು ತಿಳಿದು ಬರುತ್ತದೆ. ಕ್ರಿ.ಶ. ೯೪೦ರ ಸುಮಾರಿನಲ್ಲಿ ಪಂಪನು ಬರೆದ "ವಿಕ್ರಮಾರ್ಜುನ ವಿಜಯ"ದಲ್ಲಿ ಚಿತ್ರದ ವರ್ಣಕ್ರಮ, ಚಿತ್ರದ ಫಳ, ಸಮಾನ ತಳದ ಚಿತ್ರದಲ್ಲಿ ಉಬ್ಬು ತಗ್ಗುಗಳನ್ನು ತೋರಿಸುವ ಚಿತ್ರಕಾರನ ನೈಪುಣ್ಯ ಬಗ್ಗೆ ಹೇಳಿರುವನು. "ಆದಿ ಪುರಾಣ"ದಲ್ಲಿ ಚಿತ್ರಪಟ, ಚಿತ್ರದ ರಸಭಾವ, ರೇಖೆ, ವರ್ಣಕ್ರಮ, ಚಿತ್ರದ ಆಯಾ ಆಯಾಮಗಳು, ಚಿತ್ರಶಾಲೆ, ಚಿತ್ರಕಲಾವಿದ ಮುಂತಾದ ವಿಷಯಗಳ ಬಗ್ಗೆ ಹೇಳಲಾಗಿದೆ. ಕ್ರಿ.ಶ. ೯೫೦ ರಲ್ಲಿ ರಾಷ್ಟ್ರಕೂಟರ ಚಕ್ರವರ್ತಿ ಮೂರನೇ ಕೃಷ್ಣನ ಆಸ್ಥಾನದಲ್ಲಿದ್ದ "ಪೊನ್ನ"

೪. ಡಾ. ಯಾದಪ್ಪ ಪರದೇಶಿ: ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ–ಒಂದು ಅಧ್ಯಯನ: ಪುಟ–೩೨, ೩೩
೫. ಡಾ. ಶಿವರಾಮ ಕಾರಂತರು: ಭಾರತೀಯ ಚಿತ್ರಕಲೆ: ಪುಟ. ೩೨.

ಕವಿಯು ಬರೆದ "ಶಾಂತಿಪುರಾಣ"ದಲ್ಲಿ ಭಿತ್ತಿಚಿತ್ರಕಲೆಯ ಬಗ್ಗೆ ಹೇಳುವಾಗ ಚಿತ್ರಶಾಲೆಯೂ ಒಂದು ಎಂದು ಹೇಳುತ್ತ ಭಿತ್ತಿಚಿತ್ರ, ಛೀರಘಟ್ಟಿ ಮತ್ತು ವಿಶ್ವಕರ್ಮರೆಂಬ ಚಿತ್ರಕಲಾವಿದರ ಬಗೆಗೆ ತಿಳಿಸಲಾಗಿದೆ. ಕಲ್ಯಾಣಚಾಲುಕ್ಯರ ದೊರೆ ಮೂರನೇ ಸೋಮೇಶ್ವರನು "ಮಾನಸೊಲ್ಲಾಸ" ಎಂಬ ಕೃತಿ ರಚಿಸಿದ್ದು ಇದರಲ್ಲಿ ಭಿತ್ತಿಚಿತ್ರರಚನೆಯ ವಿಧಿ-ವಿಧಾನಗಳು, ಬಣ್ಣಗಳ ಕುರಿತು, ಕುಂಚಗಳ ಕುರಿತು ಹೀಗೆ ಭಿತ್ತಿಚಿತ್ರಗಳ ರಚನೆಯ ಕುರಿತು ಹೇರಳವಾದ ಮಾಹಿತಿ ದೊರೆಯುತ್ತದೆ. ೧೧ನೇ ಶತಮಾನದ ನಯಸೇನನ "ಧರ್ಮಾಮೃತ"ದಲ್ಲಿ, ೧೩ನೇ ಶತಮಾನದಲ್ಲಿ ಹೊಯ್ಸಳ ದೊರೆ ಬಲ್ಲಾಳನ ಆಸ್ಥಾನ ಕವಿ ನಾಗಚಂದ್ರನ "ರಾಮಚಂದ್ರಪುರಾಣ"ದಲ್ಲಿ ಭಿತ್ತಿಚಿತ್ರ ಪಟಚಿತ್ರ, ಚಿತ್ರರಚನೆ, ವರ್ಣಗಳನ್ನು ಸಿದ್ಧಪಡಿಸುವುದರ ಕುರಿತು ಹೇಳಲಾಗಿದೆ. ಹೀಗೆ ಭಿತ್ತಿಚಿತ್ರಗಳ ಬಗ್ಗೆ ಡಾ. ಯಾದಪ್ಪ ಪರದೇಶಿಯವರು ತಮ್ಮ ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆಯಲ್ಲಿ ಸವಿವರವಾದ ಮಾಹಿತಿಯನ್ನೇ ನೀಡಿರುವರು.

**ಭಿತ್ತಿಯ ಸ್ವರೂಪ:**

ಆಂಗ್ಲ ಭಾಷೆಯ ಮುರಲ್ (Mural) ಶಬ್ದವು ಲ್ಯಾಟಿನ್ ಭಾಷೆಯ Murus ದಿಂದ ಬಂದಿದೆ. Murus ಎಂದರೆ ಗೋಡೆ ಎಂದಾಗುತ್ತದೆ. ಗೋಡೆಯ ಮೇಲೆ ಕೆತ್ತಿ, ಕೊರೆದು, ಅಂಟಿಸಿ, ಇಲ್ಲವೇ ವರ್ಣದಿಂದ ಬರೆದ ಚಿತ್ರ ಅಥವಾ ಇತರ ಯಾವುದೇ ವಿಧಾನದಿಂದ ಗೋಡೆಯ ಮೇಲೆ ರೂಪಿಸಿದ ಚಿತ್ರಗಳು Mural ವ್ಯಾಪ್ತಿಯಲ್ಲಿ ಬರುತ್ತವೆ ಎಂದು ಕೆಂಬ್ರಿಜ್ ವಿಶ್ವಕೋಶ ತಿಳಿಸುತ್ತದೆ. ಗೋಡೆ, ತೊಲೆ, ಮೇಲ್ಛಾವಣಿಗಳನ್ನು ಅಲಂಕರಿಸುವ ಚಿತ್ರಗಳಿಗೆ ಅಥವಾ ವಿಧಾನಕ್ಕೆ ಭಿತ್ತಿಚಿತ್ರ ಕಲೆ ಎಂದು ಆಕ್ಸಫರ್ಡ್ ಶಬ್ದಕೋಶದಲ್ಲಿ ಹೇಳಲಾಗಿದೆ[೬] ಕನ್ನಡ ಜಾನಪದ ವಿಶ್ವಕೋಶವು ಭಿತ್ತಿಚಿತ್ರ ಎಂದರೆ ಗೋಡೆಯ ಮೇಲೆ ಬರೆದಿರುವ ಚಿತ್ರವೆಂದು ಹೇಳಿ, ಭಿತ್ತಿ ಎಂಬುದಕ್ಕೆ ಗೋಡೆ, ಕುಡ್ಯ, ಮೂಲ, ತಳ, ಹಿನ್ನೆಲೆ, ಚಿತ್ರವನ್ನು ಬರೆಯುವ ಮೂಲಾಧಾರಗಳಾದ ಬಟ್ಟೆ, ಗೋಡೆ, ಕಾಗದ ಮೊದಲಾದ ಸಾಧನವೆಂದು ಅರ್ಥ ಕೊಟ್ಟಿದೆ. ಚಿತ್ರರಚಿಸುವ ಆಧಾರದ ಮೇಲೆ ಲೇಪಿಸುವ ಮಿಶ್ರಣದ ಪದರಕ್ಕೆ ಭಿತ್ತಿ ಎಂದು ಕರೆಯುತ್ತೇವೆ. ಭಾರತೀಯ ಶಿಲ್ಪಶಾಸ್ತ್ರವೂ ಇದನ್ನೇ ಹೇಳಿದೆ. ಬೇರೆ ಬೇರೆ ಪ್ರಕಾರದ ಭಿತ್ತಿಯನ್ನು ವಿವಿಧ ವಸ್ತುಗಳನ್ನು ಉಪಯೋಗಿಸಿ ನಿರ್ಮಿಸಿರುವುದು ಕಂಡು ಬರುತ್ತದೆ. ಭಾರತೀಯ ಭಿತ್ತಿಚಿತ್ರಗಳ ಇತಿಹಾಸದಲ್ಲಿ ಪ್ರಮುಖವಾಗಿ ನಾಲ್ಕು ರೀತಿಯ ಭಿತ್ತಿಗಳನ್ನು ಗುರುತಿಸಲಾಗಿದೆ.

೧. ಮಣ್ಣಿನ ಮಾಧ್ಯಮದ ಭಿತ್ತಿ (Mud Plaster)

೨. ಗಾರೆಯ ಮಾದ್ಯಮದ ಭಿತ್ತಿ (Lime Plaster Ground)

೩. ಮರದ ಮಾಧ್ಯಮದ ಭಿತ್ತಿ

೪. ಲೋಹದ ಮಾದ್ಯಮದ ಭಿತ್ತಿ

೬. ಡಾ. ಯಾದಪ್ಪ ಪರದೇಶಿ: ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ-ಒಂದು ಅಧ್ಯಯನ: ಪುಟ-೨೫.

**೧. ಮಣ್ಣಿನ ಮಾಧ್ಯಮದ ಭಿತ್ತಿ (Mud Plaster):** ಮಣ್ಣಿನ ಭಿತ್ತಿ ನಿರ್ಮಾಣಕ್ಕೆ ಮೂರು ವಿಧದ ಮಣ್ಣು ಉಪಯೋಗಿಸಬಹುದೆಂದು ಕಾಶ್ಯಪ ಶಿಲ್ಪ ಶಾಸ್ತ್ರ ಹೇಳುತ್ತದೆ.

೧. ಜಾಂಗಲ: ಗಟ್ಟಿಯಾದ ಭೂಮಿಯಿಂದ ಅಗೆದು ತೆಗೆದ ಮಣ್ಣಿಗೆ ಜಾಂಗಲವೆನ್ನುವರು.

೨. ಅನುರೂಪ : ಸುಣ್ಣ ಮರಳು ಬೆರೆತಿರುವ ಭೂಮಿಯು ಮನೋಹರವಾಗಿದ್ದರೆ ಅಲ್ಲಿ ಸಿಗುವ ಮಣ್ಣಿಗೆ ಅನುರೂಪವೆಂದು ಕರೆಯುವರು.

೩. ಸಮ್ಮಿಶ್ರ : ಈ ಮೇಲಿನ ಎರಡೂ ಮಣ್ಣು ಬೆರೆತಿದ್ದರೆ ಅದನ್ನು ಸಮ್ಮಿಶ್ರವೆಂದು ಕರೆಯುವರು.

ಮಣ್ಣಿನ ಭಿತ್ತಿಯು ಒಂದರ ಮೇಲೊಂದರಂತೆ ಹಲವಾರು ಪದರುಗಳನ್ನು ಹೊಂದಿರುತ್ತದೆ. ತೀರ ಮೇಲಿನ ಪದರನ್ನು ಅತೀ ತೆಳುವಾಗಿ ನಿರ್ಮಿಸಲಾಗಿರುತ್ತದೆ. ಗೋಡೆಗೆ ಮೆತ್ತಿದ ಈ ಮಣ್ಣಿನ ಭಿತ್ತಿಯು ಸೀಳದಂತೆ, ಕಳಚಿ ಬೀಳದಂತೆ ಮಣ್ಣಿನಲ್ಲಿ ಒಣಹುಲ್ಲು ಹೊಟ್ಟು ಕೂದಲುಗಳಂತಹ ನಾರು ಪದಾರ್ಥಗಳನ್ನು ಸೇರಿಸಲಾಗುತ್ತದೆ. ಈ ನಾರು ಪದಾರ್ಥಗಳ ಮಿಶ್ರಣವು ಗಟ್ಟಿಯಾಗಿ ಕುಳಿತುಕೊಳ್ಳಲು ಸಹಾಯ ಮಾಡುತ್ತದೆ. ಆಕಳ ಸೆಗಣಿಯನ್ನು ಈ ಮಿಶ್ರಣಕ್ಕೆ ಸೇರಿಸಿದಾಗ ಭಿತ್ತಿಯ ಮಿಶ್ರಣವು ಮೃದುವಾಗುವುದು, ಆದರೆ ಇದರಿಂದ ಭಿತ್ತಿಯು ಕೀಟಗಳ ದಾಳಿಗೆ ಒಳಗಾಗುತ್ತದೆ. ಕಾರಣ ಸೆಗಣಿಯು ಒಂದು ಸಾವಯವ ವಸ್ತು ಆಗಿದ್ದು, ಇದರಿಂದ ಕೀಟಗಳಿಗೆ ಸಹಜ ಆಹಾರವಾಗುವುದಲ್ಲದೇ ಭಿತ್ತಿಯು ಬಹುಬೇಗ ಶಕ್ತಿಹೀನವಾಗುತ್ತದೆ. ಇದರಿಂದಾಗಿ ಮಣ್ಣಿನ ಭಿತ್ತಿಯು ಅಲ್ಪಾಯುಷ್ಯವನ್ನು ಹೊಂದಿರುತ್ತದೆ[೭] ಎಂದು ಜೆ.ಸಿ.ನಾಗ್ಪಾಲ್ ಅವರು ತಿಳಿಸುತ್ತಾರೆ.

ಇಂತಹ ಮಣ್ಣಿನ ಭಿತ್ತಿಯಲ್ಲಿ ಅಜಂತಾ, ಬಾಗ್, ಸಿತ್ತನ್‌ವಾಸಲ್‌ಗಳಲ್ಲಿ ಕಂಡು ಬರುವ ಭಿತ್ತಿ ಚಿತ್ರಗಳಾಗಿವೆ ಎಂದು ಇತಿಹಾಸಕಾರ ಜೆ.ಸಿ.ನಾಗ್ಪಾಲ್ ಅವರು ಅಭಿಪ್ರಾಯ ಪಟ್ಟಿರುವರು. ಇದನ್ನು ಸಮ್ಮತಿಸಿ ಮಣ್ಣಿನ ಭಿತ್ತಿಚಿತ್ರಗಳು ಉತ್ತರ ಕರ್ನಾಟಕದಲ್ಲಿ ಬೆಳಗಾವಿಯ ನಿಪ್ಪಾಣಿವಾಡೆ, ಅಥಣಿಯ ಗಚ್ಚಿನಮಠ, ಹಾಗೂ ಗುಲಬರ್ಗಾ ಜಿಲ್ಲೆಯ ಸುರಪುರದ ಅಣ್ಣಯ್ಯಮಠ, ರುದ್ರಾಕ್ಷಿಮಠ, ಬಾಗಲಕೋಟೆಯ ಗುಳೇದಗುಡ್ಡದ ಹೊಸಮನಿ ಗೌಡರ ಮನೆ, ಗದಗ ಜಿಲ್ಲೆಯ ನರಗುಂದದ ವೆಂಕಟೇಶ್ವರ ದೇವಸ್ಥಾನಗಳಲ್ಲಿಯ ಭಿತ್ತಿಯನ್ನು ಮಣ್ಣಿನಿಂದ ರಚಿಸಿರುವುದಾಗಿ ತಮ್ಮ ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ[೮]ಯಲ್ಲಿ ವಿವರಿಸಿರುವರು.

ನಿಪ್ಪಾಣಿ ವಾಡೆಯ ಭಿತ್ತಿಚಿತ್ರಗಳು ಸುಮಾರು ೧೮ನೆಯ ಶತಮಾನಕ್ಕೆ ಸೇರುತ್ತಿದ್ದು ಹಳೆಯದಾದ ವಾಡೆಯನ್ನು ಅಲ್ಲಲ್ಲಿ ಸಿಮೆಂಟಿನಿಂದ ದುರಸ್ತಿಗೊಳಿಸುತ್ತಿದ್ದು ಮೂಲತಃ ಈ ವಾಡೆಯ ಭಿತ್ತಿ ಚಿತ್ರವು ಮಣ್ಣಿನ ಭಿತ್ತಿಗಳಾಗಿವೆ[೯] ಎಂದು ಡಾ. ಶಿವರಾಮ ಕಾರಂತರು ಅಭಿಪ್ರಾಯಪಟ್ಟಿರುವರು.

೭. J.C.Nagpal: Mural Paintings in India: Page-25.
೮. ಡಾ. ಯಾದಪ್ಪ ಪರದೇಶಿ: ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ-ಒಂದು ಅಧ್ಯಯನ: ಪುಟ-೬೧
೯. ಡಾ. ಶಿವರಾಮ ಕಾರಂತರು: ಕರ್ನಾಟಕದಲ್ಲಿ ಚಿತ್ರಕಲೆ: ಪುಟ-೮೯.

ಕ್ರಿ.ಪೂ. ೨೦೦ ರಲ್ಲಿ ಪ್ರಾರಂಭವಾಗಿ ಕ್ರಿ.ಶ. ೭ನೇ ಶತಮಾನದವರೆಗೆ ರಚನೆಗೊಂಡ ಅಜಂತೆಯ ಭಿತ್ತಿಚಿತ್ರಗಳಾಗಲಿ, ಉತ್ತರ ಕರ್ನಾಟಕದಲ್ಲಿ ೧೭ ಮತ್ತು ೧೮ನೇ ಶತಮಾನದಲ್ಲಿ ರಚನೆಗೊಂಡ ಮಣ್ಣಿನ ಭಿತ್ತಿ ಚಿತ್ರಗಳು ಇಂದಿನವರೆಗೂ ಉಜ್ವಲ ವರ್ಣಗಳೊಂದಿಗೆ ಕಂಗೊಳಿಸುತ್ತಿರುವುದು ಕಂಡು ಬರುತ್ತವೆ. ಹೀಗಿರುವಾಗ ಇತಿಹಾಸಕಾರರಾದ ಜೆ.ಸಿ.ನಾಗ್ಪಾಲ್‌ರವರಾಗಲಿ, ಡಾ. ಯಾದಪ್ಪ ಪರದೇಶಿಯವರಾಗಲಿ ಅಭಿಪ್ರಾಯ ವ್ಯಕ್ತಪಡಿಸಿರುವಂತೆ ಭಿತ್ತಿಯ ಮೃದುತ್ವಕ್ಕೆ ಬಳಸುವ ಸೆಗಣಿಯಿಂದ ಕೀಟಗಳಿಗೆ ಸಹಜ ಆಹಾರವಾಗುತ್ತದೆ. ಇದರಿಂದ ಭಿತ್ತಿಯು ಬಹುಬೇಗನೆ ಶಕ್ತಿಹೀನವಾಗುತ್ತದೆ. ಇದರಿಂದಾಗಿ "ಮಣ್ಣಿನ ಭಿತ್ತಿಯು ಅಲ್ಪಾಯುಷಿ" ಎನ್ನುವುದನ್ನು ತಳ್ಳಿಹಾಕಿ, ಈ ಭಿತ್ತಿ ಚಿತ್ರಗಳು ಸಾವಿರಾರು ವರುಷಗಳಿಂದಲೂ ಉಜ್ವಲವರ್ಣಗಳೊಂದಿಗೆ ಕಂಗೊಳಿಸುತ್ತಿರುವ ಮಣ್ಣಿನ ಭಿತ್ತಿಚಿತ್ರಗಳು ನಮ್ಮ ನಾಗರಿಕತೆಯ ಇತಿಹಾಸವನ್ನು ಸಾರುವ ಆಕರಗಳಾಗಿ ಇಂದಿಗೂ ನಮ್ಮ ಕಣ್ಮುಂದಿವೆ ಎಂದು ಬಿ.ಎಂ.ಪಾಟೀಲರು ತಮ್ಮ "ನಿಪ್ಪಾಣಿ ವಾಡೆಯ ಭಿತ್ತಿಚಿತ್ರಗಳು" ಎಂ.ಫಿಲ್ ಪ್ರಬಂಧದಲ್ಲಿ[೧೦] ಹೇಳಿರುವರು. ಇದನ್ನೇ ಪುಷ್ಠೀಕರಿಸುತ್ತ ಬಿ.ಕೆ.ಹಳ್ಳಿಯ ಭಿತ್ತಿಚಿತ್ರಗಳಿಗೆ ಮಣ್ಣಿನ ಗಾರೆಯನ್ನೇ ಬಳಸಿದ್ದು ಈವರೆಗೂ ಈ ಭಿತ್ತಿಗಳು ಉಜ್ವಲವಾಗಿಯೇ ಇದ್ದು ಇತ್ತೀಚೆಗೆ ಆ ಗುಡಿಯು ಬಿದ್ದಿದ್ದು ಮಣ್ಣಿನ ಭಿತ್ತಿಯು ಚೂರುಚೂರಾದರೂ ಈ ಭಿತ್ತಿಚಿತ್ರಗಳು ಬೇರೆ ಬೇರೆಯಾಗಿ ಉಜ್ವಲ ವರ್ಣದೊಂದಿಗೆಯೇ ಇದ್ದದ್ದು ನೋಡಿ ಬೇಸರವಾಯಿತು. ಹದಿನೆಂಟನೆ ಶತಮಾನದ ಈ ಭಿತ್ತಿಚಿತ್ರಗಳು ಸೂಕ್ತ ವ್ಯವಸ್ಥೆ ಇಲ್ಲದ್ದಕ್ಕೆ ಅನಾಥವಾಗಿ ಬಿದ್ದಿದ್ದರೂ ಕೂಡಾ ಆ ಊರಿನ ಜನರಿಗೆ ಅದರ ಔಚಿತ್ಯವೇ ಗೊತ್ತಿರಲಿಲ್ಲ. ಡಾ. ಎಸ್.ಸಿ.ಪಾಟೀಲರೊಂದಿಗೆ ಡಾ. ಯಾದಪ್ಪ ಪರದೇಶಿ ಮತ್ತು ನಾನು ಸ್ವತಃ ಈ ಭಿತ್ತಿಚಿತ್ರಗಳ ಸ್ಥಿತಿಗತಿಗಳನ್ನು ನೋಡಿ ಕಟ್ಟಿಗೆಯ ತೊಲೆಗಳ ಮೇಲಿರುವ ಚಿತ್ರಗಳನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಕೊಟ್ಟರೆ ವಸ್ತು ಸಂಗ್ರಹಾಲದಲ್ಲಿ ಕಾಯ್ದಿರಿಸುವುದಾಗಿ ಕೇಳಿದರೂ ಆ ಊರಿನ ಜನ ಕೊಡಲಿಲ್ಲ. ಈಗ ಅದು ನೂತನ ಕಟ್ಟಡವಾಗಿ ರಾಮನ ಗುಡಿ ಸಿದ್ಧವಾಗಿದ್ದು, ಆ ಕಾಲದ ಭಿತ್ತಿಚಿತ್ರಗಳಿಲ್ಲದೇ ಅನಾಥವಾಗಿದೆ. ಆ ಚಿತ್ರಗಳಿರುವ ತೊಲೆಗಳು ಹಾಗೇ ಕಟ್ಟಿಗೆಯಲ್ಲಿ ಮುಚ್ಚಿಕೊಂಡಿವೆ. ಈಗೇನಾದವೋ ಗೊತ್ತಿಲ್ಲ.

### ೨. ಗಾರೆಯ ಮಾಧ್ಯಮದ ಭಿತ್ತಿ (Lime Plaster Ground)

ಗಾರೆಭಿತ್ತಿ ರಚನೆಯಲ್ಲಿ ಸುಣ್ಣವು ಪ್ರಮುಖ ವಸ್ತು ಆಗಿದ್ದು ಅದರ ಜೊತೆಗೆ ಉಸುಕು, ಕಲ್ಲಿನ ಪುಡಿ, ವಜ್ರ ಸರಿ ಇವುಗಳನ್ನು ಉಪಯೋಗಿಸಲಾಗುತ್ತದೆ. ಅದರ ಜೊತೆಗೆ ತಾಳಸರ ಬೆಲ್ಲ, ಬೇಲದ ಕಾಯಿಯ ಅಂಟು ಹೀಗೆ ವಿವಿಧ ವಸ್ತುಗಳನ್ನು ಪೂರಕವಾಗಿ ಸೇರಿಸುವರು. ಮಧ್ಯಯುಗದ ಹೊತ್ತಿಗೆ ಮಣ್ಣಿನ ಭಿತ್ತಿಯೊಂದಿಗೆ ಗಾರೆಯ ಭಿತ್ತಿಯೂ ಪ್ರಾರಂಭವಾಯಿತು. ಉತ್ತರ ಕರ್ನಾಟಕದಲ್ಲಿ ಹಂಪೆ, ಕನಕಗಿರಿ ಬಿಜಾಪುರ, ಕಮತಗಿ (ಗುಲಬುರ್ಗಾ, ಬೀದರ) ನರಗುಂದದ ಅರಮನೆ, ಮಹಾಲಿಂಗಪುರದ ಮಹಾಲಿಂಗೇಶ್ವರ ಮಠ, ಅಮ್ಮಿನಭಾವಿ ಪಂಚಗೃಹಮಠದ ಭಿತ್ತಿ ಚಿತ್ರಗಳು ಗಾರೆ ಭಿತ್ತಿಚಿತ್ರಗಳಾಗಿವೆ[೧೧] ಡಾ. ಯಾದಪ್ಪ ಪರದೇಶಿಯವರು ಹೇಳಿರುವರು

೧೦. ಬಿ.ಎಂ.ಪಾಟೀಲ: ನಿಪ್ಪಾಣಿವಾಡೆ ಭಿತ್ತಿಚಿತ್ರಕಲೆ: ಒಂದು ಅಧ್ಯಯನ: ಪುಟ ೩೩.

೧೧. ಡಾ. ಯಾದಪ್ಪ ಪರದೇಶಿ: ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ–ಒಂದು ಅಧ್ಯಯನ: ಪುಟ–೭೪

**ಮರದ ಮಾಧ್ಯಮದ ಭಿತ್ತಿ**

ಹಸ್ತಪ್ರತಿಗಳ ಮೇಲಿನ ಮರದ ಫಲಕದ ಮೇಲೆ ಚಿತ್ರ ರಚಿಸುವುದನ್ನು ಬಿ.ಕೆ.ಹಿರೇಮಠ ಅವರು ತಿಳಿಸಿದ್ದಾರೆ. ಮರದ ಫಲಕಗಳನ್ನು ನುಣುಪುಗೊಳಿಸಿ ಅದರ ಮೇಲೆ ಚಿತ್ರ ಬರೆಯುವದು, ನುಣುಪುಗೊಳಿಸಿದ ಮರದ ಫಲಕದ ಮೇಲೆ ತೆಳುವಾದ ಬಿಳಿಯ ಲೇಪನವನ್ನು ಬಳಿದು ಒಣಗಿದ ನಂತರ ಚಿತ್ರ ಬರೆಯುವದು. ಫಲಕಗಳಿಗೆ ಅಂಟನ್ನು ಸವರಿ ಒರಟಾದ ಬಟ್ಟೆಯನ್ನು ಮಡಿಕೆಯಾಗದಂತೆ ಎಳೆದು ಅಂಟಿಸಿ ಒಣಗಿದ ನಂತರ ಕವಡೆಯ ಇಲ್ಲವೆ ಶಂಖ ಅಥವಾ ಕಪ್ಪೆಯ ಚಿಪ್ಪಿನ ಹಿಂಭಾಗದಿಂದ ತಿಕ್ಕಿ ಹೊಳಪುಕೊಟ್ಟು ಚಿತ್ರಿಸುವುದಕ್ಕೆ ಮೇಲ್ಮೈಯನ್ನು ತಯಾರಿಸುತ್ತಿದ್ದರು. ಮಠಮಾನ್ಯಗಳಲ್ಲಿರುವ ಭಿತ್ತಿಚಿತ್ರ ಕಲಾವಿದರೇ ಹಸ್ತಪ್ರತಿ ಕಲಾಕೃತಿಗಳನ್ನು ರಚಿಸಿರುವರೆಂದೂ ಅಭಿಪ್ರಾಯ ಪಟ್ಟಿರುವರು.[೧೨]

ಮದಮಾದ್ಯಮದ ಮೇಲೆ ಭಿತ್ತಿ ಚಿತ್ರ ರಚಿಸುವಾಗ ಅನುಸರಿಸುವ ಸಿದ್ಧತಾ ವಿಧಾನಗಳಲ್ಲಿ ಮೊದಲಿಗೆ ಮರದ ಹಲಗೆಯನ್ನು ಸಮತಟ್ಟುಗೊಳಿಸುವುದು. ಎರಡನೆಯ ಹಂತ ಸಮತಟ್ಟುಗೊಳಿಸಿದ ಫಲಕಕ್ಕೆ ತೆಳುವಾದ ಗಾರೆಲೇಪನವನ್ನು ಕೊಡುವುದು. ಆ ಗಾರೆಲೇಪನ ಒಣಗಿದ ನಂತರ ಚಿತ್ರ ರಚಿಸುತ್ತಿದ್ದರೆಂದು ತಿಳಿದುಬರುತ್ತದೆ. ಮತ್ತೊಂದು ವಿಧಾನದಲ್ಲಿ ಮರದ ಹಲಗೆಯನ್ನು ಸಮತಟ್ಟುಗೊಳಿಸಿ ನುಣುಪುಗೊಳಿಸಿ. ಅದರ ಮೇಲೆ ಅಂಟು ಮಾಧ್ಯಮ ಬಳಸಿ ಬಟ್ಟೆಯನ್ನು ಅಂಟಿಸುವುದಾಗಿದೆ. ಈ ಬಟ್ಟೆಯ ಮೇಲೆ ಮತ್ತೆ ತೆಳುವಾದ ಗಾರೆ ಲೇಪನ ಕೊಟ್ಟು ಅದು ಒಣಗಿದ ನಂತರ ಚಿತ್ರಿಸಬಹುದಾಗಿದೆ. ಕೆಲವು ಸಂದರ್ಭಗಳಲ್ಲಿ ಮರದ ಫಲಕದ ಅಂಚನ್ನು ಸುಂದರಗೊಳಿಸಲು ಫಲಕ ಮಾಧ್ಯಮದಲ್ಲಿ ಮೂಲೆ ಮತ್ತು ಅಂಚುಗಳಲ್ಲಿ ನಕ್ಷೆಗಳನ್ನು ಕೆತ್ತಿ ಫಲಕಗಳನ್ನು ಸಿದ್ಧಗೊಳಿಸಿದ್ದು, ಇಂಥ ಕಲಾಕೃತಿಗಳನ್ನು ಅಮ್ಮಿನಭಾವಿಯ ಪಂಚಗೃಹ ಮಠದಲ್ಲಿ ಹಾಗೂ ಬಿ.ಕೆ.ಹಳ್ಳಿಯ ರಾಮಮಂದಿರದಲ್ಲಿ ಕಾಣಬಹುದಾಗಿದೆ.[೧೩] ಜೊತೆಗೆ ಮರದ ಮೇಲೆ ಚಿತ್ರಗಳನ್ನು ರಚಿಸಿದ್ದುದು ಕಂಡುಬರುತ್ತದೆ.

**ಲೋಹದ ಮಾದ್ಯಮದ ಭಿತ್ತಿ:**

ಲೋಹ ಮಾಧ್ಯಮದ ಮೇಲೆ ಚಿತ್ರ ರಚನೆ ಮಾಡುವ ಮೊದಲು ಲೋಹ ಫಲಕಕ್ಕೆ ತೆಳುವಾದ ಗಾರೆ ಲೇಪನ ಅಥವಾ ಮಂದದ್ರಾವಣದ ಹಿನ್ನೆಲೆ ಲೇಪನ ಕೊಟ್ಟು ಚಿತ್ರರಚನೆ ಮಾಡಿರುವುದು ಕಂಡುಬರುತ್ತದೆ. ಉತ್ತರ ಕರ್ನಾಟಕದಲ್ಲಿ ಅಮ್ಮಿನಭಾವಿಯ ಪಂಚಗೃಹ ಹಿರೇಮಠದಲ್ಲಿ ಕಬ್ಬಿಣದ ತೆಳುವಾದ ಫಲಕಗಳನ್ನು ಮೇಲ್ಬಾವಣೆಗೆ ಹೊಂದಿಸಿ ಅವುಗಳ ಮೇಲೆ ವರ್ಣಚಿತ್ರಗಳನ್ನು ರಚಿಸಲಾಗಿದೆ. ಇವುಗಳನ್ನು ಬಿಟ್ಟರೆ ಲೋಹಫಲಕದ ಮೇಲೆ ರಚನೆಯಾದ ಭಿತ್ತಿಚಿತ್ರಗಳು ಕರ್ನಾಟಕದಲ್ಲಿ ಕಂಡುಬರುವುದು ಅಪರೂಪವೆಂದೇ ಹೇಳಬೇಕಾಗುತ್ತದೆ.

---

೧೨. ಡಾ. ಬಿ.ಕೆ.ಹಿರೇಮಠ: ಕನ್ನಡ ಹಸ್ತಪ್ರತಿಗಳು: ಒಂದು ಅಧ್ಯಯನ: ಪುಟ-೩೦೪-೩೦೬
೧೩. ಡಾ. ಯಾದಪ್ಪ ಪರದೇಶಿ: ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ-ಒಂದು ಅಧ್ಯಯನ: ಪುಟ-೭೬

**ಭಿತ್ತಿಚಿತ್ರ ರಚನಾ ವಿಧಾನಗಳು:**

ಭಿತ್ತಿಚಿತ್ರ ರಚನೆಯಲ್ಲಿ ಅನುಸರಿಸುವ ತಾಂತ್ರಿಕ ವಿಧಿ ವಿಧಾನಗಳಿಂದ ಭಿತ್ತಿ ಚಿತ್ರ ರಚನಾ ವಿಧಾನವನ್ನು (೧) ಫ್ರೆಶ್ಕೋಬಾನ್ (Fresco Buon) (೨) ಫ್ರೆಶ್ಕೋ ಸೆಕ್ಕೋ ವಿಧಾನ (Fresco-Secco) (೩) ಟೆಂಪರಾ ವಿಧಾನ (Tempera) (೪) ಸ್ಗ್ರಾಫಿಟೋ ವಿಧಾನ (Sgraffito) ಎಂದು ನಾಲ್ಕು ರೀತಿಯಲ್ಲಿ ವಿಂಗಡಿಸಲಾಗಿದೆ.

(೧) **ಫ್ರೆಶ್ಕೋಬಾನ್** (Fresco Buon)

ಭಿತ್ತಿ ಹಸಿ ಇರುವಾಗ ಚಿತ್ರ ರಚಿಸುವ ವಿಧಾನಕ್ಕೆ ಫ್ರೆಶ್ಕೋಬಾನ್ ವಿಧಾನ ಎಂದರ್ಥ. ಇದರಲ್ಲಿ ಹಸಿಗಾರೆಯ ಮೇಲೆ ಚಿತ್ರ ರಚಿಸಲಾಗುತ್ತದೆ. ಈ ವಿಧಾನದಲ್ಲಿ ಮುಖ್ಯವಾಗಿ ತಿಳಿದುಕೊಳ್ಳಬೇಕಾದುದು ಅಂದರೆ ಹಸಿಗಾರೆಯ ಮೇಲೆ ಚಿತ್ರ ರಚಿಸಬೇಕಾಗಿರುವುದರಿಂದ ಒಂದು ದಿನದಲ್ಲಿ ಚಿತ್ರ ಎಷ್ಟು ರಚಿಸಲು ಸಾಧ್ಯವೆನ್ನುವುದನ್ನು ಮೊದಲೇ ನಿರ್ಧರಿಸಿ, ಅದಕ್ಕೆ ಎಷ್ಟು ಬೇಕೋ ಅಷ್ಟೇ ಗಾರೆಯನ್ನು ಸಿದ್ಧಪಡಿಸಿಕೊಳ್ಳಬೇಕಾಗುತ್ತದೆ ಎನ್ನುವುದನ್ನು ಕಲಾವಿದ ಅರಿತಿರಬೇಕು.

(೨) **ಫ್ರೆಶ್ಕೋ ಸೆಕ್ಕೋ ವಿಧಾನ** (Fresco-Secco)

ಭಿತ್ತಿ ಒಣಗಿದ ನಂತರ ಚಿತ್ರರಚಿಸುವ ವಿಧಾನಕ್ಕೆ ಫ್ರೆಶ್‌ಕೋ ಸೆಕ್ಕೋ ವಿಧಾನ ಎಂದರ್ಥ. ಈ ವಿಧಾನದಲ್ಲಿ ಭಿತ್ತಿ ಒಣಗಿದ ನಂತರ ಚಿತ್ರಿಸಲಾಗುತ್ತದೆ. ಲೇಪಿಸಿದ ಗಾರೆಯು ಸಂಪೂರ್ಣ ಒಣಗಿದ ನಂತರ ಗಾರೆಯ ಮೇಲ್ಮೈಯನ್ನು ಸ್ವಚ್ಛವಾಗಿ ನೀರಿನಿಂದ ತೊಳೆದು ಆಮೇಲೆ ಕುದಿಸಿದ ಸುಣ್ಣವನ್ನು ದಪ್ಪನಾಗಿ ಲೇಪಿಸಬೇಕು. ಈ ಲೇಪನವು ಸಂಪೂರ್ಣವಾಗಿ ಒಣಗಿದ ನಂತರ ಚಿತ್ರ ರಚನೆಯನ್ನು ಪ್ರಾರಂಭಿಸಬೇಕು.

(೩) ಟೆಂಪರಾ ವಿಧಾನ (Tempera)

ಟೆಂಪರಾ ಎಂದರೆ ಹದವಾದ ಮಿಶ್ರಣವೆಂದಾಗುತ್ತದೆ. ವರ್ಣಗಳನ್ನು ಅಂಟು ದ್ರಾವಣದೊಡನೆ ಹದವಾಗಿ ಮಿಶ್ರಣ ಮಾಡಿ ಒಣಗಿದ ಗಾರೆಯ ಮೇಲೆ ಚಿತ್ರರಚಿಸುವ ವಿಧಾನಕ್ಕೆ ಟೆಂಪರಾ ವಿಧಾನ ಎನ್ನುವರು.

(೪) ಸ್ಗ್ರಾಫಿಟೋ ವಿಧಾನ (Sgraffito)

ಒಂದು ವರ್ಣ ಭಿತ್ತಿಯ ಮೇಲೆ ಇನ್ನೊಂದು ವರ್ಣ ಭಿತ್ತಿಯನ್ನು ಲೇಪಿಸಿ ಅದು ಹಸಿ ಇರುವಾಗ ಮೇಲಿನ ಭಿತ್ತಿಯನ್ನು ಬೇಕಾದ ಆಕಾರಕ್ಕೆ ಕೊರೆದು ತೆಗೆದು ಚಿತ್ರವನನ್ನು ಮೂಡಿಸುವುದಾಗಿದೆ. ಈ ವಿಧಾನವು ಕರ್ನಾಟಕದ ಕರಾವಳಿ ಭಾಗದಲ್ಲಿ ಕಾವಿ ಭಿತ್ತಿ ಚಿತ್ರ ರಚನಾ ವಿಧಾನವನ್ನು ಹೋಲುತ್ತದೆ.[೧೪] ಹೀಗೆ ಚಿತ್ರ ರಚನಾ ವಿಧಾನಗಳ ಕುರಿತು ಡಾ. ಯಾದಪ್ಪ ಪರದೇಶಿಯವರು ತಿಳಿಸಿರುವರು.

---

೧೪. ಡಾ. ಯಾದಪ್ಪ ಪರದೇಶಿ: ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ–ಒಂದು ಅಧ್ಯಯನ: ಪುಟ–೨೨.

**"ಭಿತ್ತಿಚಿತ್ರ ರಚನಾ ಹಂತ":**

ಭಿತ್ತಿ ಚಿತ್ರ ಕಲಾವಿದರು ಚಿತ್ರರಚನೆ ಮಾಡುವಾಗ ಒಂದೇ ಹಂತದಲ್ಲಿ ಚಿತ್ರವನ್ನು ಪೂರ್ಣಗೊಳಿಸದೇ ಒಂದಾದ ಮೇಲೆ ಒಂದರಂತೆ, ಹಲವು ಹಂತಗಳನ್ನು ಅನುಸರಿಸಿ ಚಿತ್ರ ರಚನೆಯನ್ನು ಪೂರ್ಣಗೊಳಿಸುತ್ತಿದ್ದರು. ಭಿತ್ತಿ ಚಿತ್ರಕಲಾವಿದರು ಅನುಸರಿಸುವ ಚಿತ್ರ ರಚನಾ ಹಂತಗಳು ಯಾವಾಗಲೂ ನಿರ್ದಿಷ್ಟವಾಗಿರಲಿಲ್ಲ. ಆಯಾ ಕಲಾವಿದರನ್ನು ಅನುಸರಿಸಿ ಚಿತ್ರ ರಚನೆಯ ಹಂತಗಳು ಬದಲಾವಣೆಗೊಳ್ಳುತ್ತಿರುತ್ತವೆ. ಉದಾಹರಣೆಗೆ, ಕೆಲವು ಕಲಾವಿದರು ಭಿತ್ತಿಯನ್ನು ರಚಿಸುವವರು, ಇನ್ನೂ ಕೆಲವರು ರೇಖಾಚಿತ್ರಗಳನ್ನು ಮಾತ್ರ ರಚನೆ ಮಾಡುವವರು, ಮತ್ತೆ ಕೆಲವರು ಅವುಗಳಿಗೆ ವರ್ಣಗಳನ್ನು ಮಾತ್ರ ತುಂಬುವವರು. ಆ ಕಲಾಕೃತಿಯಲ್ಲಿಯ ವಸ್ತು ವಿಷಯ, ವರ್ಣಗಳ ಬಳಕೆ, ಆಕಾರ, ಆಕೃತಿಗಳು ಎಷ್ಟು ಪ್ರಮಾಣದಲ್ಲಿ, ಎಲ್ಲಿ ಇರಬೇಕು ಅನ್ನುವದನ್ನು ನಿರ್ದೇಶಿಸುವವರು ಕೆಲವರಾಗಿರುತ್ತಾರೆ. ಒಟ್ಟಾರೆ ಭಿತ್ತಿಚಿತ್ರವನ್ನು ಹಲವು ಜನ ಕಲಾವಿದರು ತೊಡಗಿಕೊಂಡು ಮಾಡುವುದರಿಂದ ಇದು ಒಂದೇ ಹಂತದಲ್ಲಿ ನಿರ್ಮಾಣಗೊಳ್ಳುವುದಿಲ್ಲ. ಆದರೆ ಒಂದೇ ವಿಷಯ ವಸ್ತು, ತಂತ್ರಗಳು ಇದರಲ್ಲಿರುವುದರಿಂದ, ಅದನ್ನು ಆಯಾ ಸಂದರ್ಭದ ಸನ್ನಿವೇಶ, ಆಯ್ಕೆ ಮಾಡಿದ ವಿಷಯಗಳ ಮೇಲಿಂದ ಈ ಧರ್ಮದ್ದು ಅಥವಾ ಈ ಶೈಲಿಯದ್ದು ಎಂದು ಗುರುತಿಸಬಹುದಾಗಿದೆ. ಒಂದಂತೂ ಸತ್ಯ. ಚಿತ್ರಕಲೆ (ಲಲಿತಕಲೆಗಳು) ಸ್ವತಂತ್ರವಾದುದು, ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿ ಬೆಳೆಯುತ್ತ ಬಂದಿದೆ. ಇದಕ್ಕೆ ಯಾವುದೇ ಜಾತಿ, ಪಂಥ, ಪಂಗಡಗಳು ಸಂಬಂಧಿಸಿದ್ದು ಆಯಾ ಸಂದರ್ಭಗಳ ಹಿನ್ನೆಲೆಯಲ್ಲಿ ಅಷ್ಟೆ. ಆದ್ದರಿಂದ **(ಚಿತ್ರ) ಕಲೆ ವಿಶ್ವ ಭಾಷೆಯಾಗಿ ಹೊರಹೊಮ್ಮಿದೆ.**

**ಭಿತ್ತಿಚಿತ್ರ ರಚನಾ ಸ್ಥಳಗಳು:**

ಕರ್ನಾಟಕದಾದ್ಯಂತ ಹರಡಿಕೊಂಡಿರುವ ಭಿತ್ತಿ ಚಿತ್ರಗಳ ಪ್ರಮುಖ ನೆಲೆಗಳು ಈ ಕೆಳಗಿನಂತೆ ಇವೆ.

೧. ಮನೆ, ಅರಮನೆಗಳಲ್ಲಿರುವ ಭಿತ್ತಿಚಿತ್ರಗಳು.

೨. ದೇವಸ್ಥಾನಗಳಲ್ಲಿರುವ ಭಿತ್ತಿಚಿತ್ರಗಳು

೩. ಮಠಗಳಲ್ಲಿರುವ ಭಿತ್ತಿಚಿತ್ರಗಳು.

ಹೀಗೆ ಮೂರು ರೀತಿಯಲ್ಲಿ ವಿಂಗಡನೆ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ. ಭಾರತೀಯ ಮೂಲ ಸಂಸ್ಕೃತಿಯನ್ನು ಸಾರುವ ಸಿಂಧೂ ನದಿಯ ನಾಗರಿಕತೆಯು ಚಿತ್ರ, ಶಿಲ್ಪ, ವಾಸ್ತು ಶಿಲ್ಪಗಳೊಂದಿಗೆ ಲಲಿತಕಲೆಗಳನ್ನು ಪರಿಚಯಿಸಿದ್ದು ಗಮನಾರ್ಹವಾದ ವಿಷಯವಾಗಿದೆ. ಧರ್ಮದೊಂದಿಗೆ ನಿಕಟ ಸಂಬಂಧವನ್ನು ಹೊಂದಿದ ಈ ಲಲಿತಕಲೆಗಳು ಶೈವ, ವೀರಶೈವ, ವೈಷ್ಣವ, ಶಾಕ್ತ, ಬೌದ್ಧ, ಜೈನ, ವೈದಿಕ, ಅವೈದಿಕ ಮತಗಳೊಂದಿಗೆ

ತದನಂತರದಲ್ಲಿ ಇಸ್ಲಾಮ್, ಕ್ರಿಶ್ಚಿಯನ್ ಮತಗಳು ಚಿತ್ರಕಲೆಯೊಂದಿಗೆ ಬೆಳೆದು ಬಂದಿದ್ದರೂ ಚಿತ್ರಕಲೆಯು ತನ್ನದೇ ಆದ ವ್ಯಾಕರಣದೊಂದಿಗೆ ಸಾಮಾಜಿಕ, ರಾಜಕೀಯ, ಐತಿಹಾಸಿಕ, ಚಾರಿತ್ರಿಕ, ಧಾರ್ಮಿಕ, ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಔಚಿತ್ಯಪೂರ್ಣವಾಗಿ ಈವರೆಗೂ ಬೆಳೆದುಕೊಂಡು ಬಂದಿದೆ.

**"ಧಾರ್ಮಿಕ ಹಿನ್ನೆಲೆಯಲ್ಲಿ ಬೆಳೆದು ಬಂದ ಚಿತ್ರಕಲೆ":**

ಕ್ರಿಸ್ತ ಪೂರ್ವ ೫೦೦೦ ವರುಷಗಳಿಗಿಂತಲೂ ಮೊದಲಿನ ಭಾರತೀಯ ಮೂಲ ನಿವಾಸಿಗಳಾದ ವ್ರಾತ್ಯರು ನಾಟ್ಯ, ಹಾಡುಗಾರಿಕೆ ಸಂಗೀತಾದಿ ಲಲಿತಕಲೆಗಳಲ್ಲಿ ನುರಿತವರಾಗಿದ್ದರು ಹಾಗೂ ತಾವು ಕಲಿತದ್ದನ್ನು ಇತರರಿಗೆ ಬೋಧಿಸುವ ಸಾಮರ್ಥ್ಯ ಹೊಂದಿದ್ದರು ಎಂಬುದನ್ನು ಡಾ. ರಾಧಾಕೃಷ್ಣ ಚೌಧರಿ ಅವರು ತಮ್ಮ ಇಂಗ್ಲೀಷ್ ಭಾಷೆಯಲ್ಲಿ ಬರೆದಿರುವ "The Vratyas in Ancient India" ಎಂಬ ಗ್ರಂಥದಲ್ಲಿ ಪ್ರಸ್ತಾಪಿಸುತ್ತ, ಆರ್ಯರು ಸಿಂಧೂ ಕಣಿವೆಗೆ ಕಾಲಿಡುವ ಮುನ್ನವೇ ಅಲ್ಲಿ ವ್ರಾತ್ಯರು ನೆಲಸಿದ್ದರು. ಈ ಮೂಲ ನಿವಾಸಿಗಳಲ್ಲಿ ತತ್ವಜ್ಞಾನ ವಾಸ್ತುಶಿಲ್ಪ, ಶಿಲ್ಪ, ಚಿತ್ರ, ನಾಟ್ಯ, ಸಂಗೀತ ಮತ್ತು ಸಾಹಿತ್ಯಗಳು ಸಾಕಷ್ಟು ಬೆಳೆದಿದ್ದು ಅವರೆಲ್ಲ ಸುಸಂಸ್ಕೃತರಾಗಿದ್ದರು ಎಂದೂ ಅಂದಿನ ಸಂಸ್ಕೃತಿಯ ಪ್ರತಿಬಿಂಬವಾಗಿರುವ ಆಗಮಗಳು ಅಭಿವ್ಯಕ್ತಪಡಿಸಿವೆ. ವ್ರಾತ್ಯರಲ್ಲಿ ಜಾತಿಪದ್ಧತಿ ಇರಲಿಲ್ಲ. ಹಿಂದುಳಿದ ಎಲ್ಲ ಜನಾಂಗವನ್ನು ಸೇರಿಸಿಕೊಂಡು ಸಾಂಸ್ಕೃತಿಕ ಗಣರಾಜ್ಯವನ್ನೇ ಸ್ಥಾಪಿಸಿದ್ದರು. ಇದರಿಂದಾಗಿ ಶೈವಮತ ಜನಪ್ರಿಯವಾಗಿ ಬೆಳೆದುಕೊಂಡಿತ್ತು.[೧೫]

**ಡಾ. ಎಸ್.ಶ್ರೀಕಂಠಶಾಸ್ತ್ರಿಗಳು:** ಸೈಂಧವ ಸಂಸ್ಕೃತಿ ವೇದಪೂರ್ವದ್ದಲ್ಲ. ಅದರಲ್ಲಿ ಋಗ್ವೇದ ಮತ್ತು ಅಥರ್ವಣ ವೇದದಲ್ಲಿ ಹೇಳಿರುವ ಅಂತ್ಯೇಷ್ಟಿ ಹಾಗೂ ಭೂತೋಚ್ಚಾಟನೆಗಾಗಿ ಅಥವಾ ರೋಗನಿವಾರಣೆಗಾಗಿ ಅಥರ್ವವೇದದಲ್ಲಿ ಉಕ್ತವಾದ ಮಂತ್ರಗಳುಳ್ಳ ತಾಯತ (ಯಂತ್ರ)ಗಳನ್ನು ಧರಿಸುತ್ತಿದ್ದ ಪ್ರಸ್ತಾಪವಿದೆ. ಈ ಮುದ್ರಿಕೆಗಳ ಮೇಲೆ ದಾರ ಪೋಣಿಸುವುದಕ್ಕಾಗಿ ರಂಧ್ರಗಳಿವೆ. ಮಾತೃ ದೇವತಾಪೂಜೆ, ಸಪ್ತ ಮಾತೃಕಾ ದೇವತೆಗಳು, ಪುರುಷದೇವತಾ ವಿಗ್ರಹಗಳಲ್ಲಿ ಯೋಗಿ, ಪಶುಪತಿ, ಶಿವ, ವೃಷಭ, ಲಿಂಗಗಳು ದೊರೆತಿರುವುದರಿಂದ ಶೈವ ಮತವೇ ಪ್ರಮುಖವಾಗಿ ಕಂಡುಬರುತ್ತದೆ. ಅಂತೆಯೇ ವೈಷ್ಣವ ಮತ್ತು ಶಾಕ್ತ ಮತಗಳೂ ಇದ್ದವು ಎಂದು ಅಭಿಪ್ರಾಯ ಪಡುತ್ತಾರೆ. ಋಗ್ವೇದ ಮತ್ತು ಅಥರ್ವಣವೇದಗಳಲ್ಲಿ ಉಕ್ತವಾದ ಕೆಲವು ವಿಚಾರಗಳನ್ನು ಒಳಗೊಂಡಿರುವುದರಿಂದ ಅದನ್ನು ವೇದ ಪೂರ್ವದ್ದೆಂದು ಹೇಳಲಾಗುವುದಿಲ್ಲ[೧೬] ಎಂದಿರುವರು.

**ಸೈಂಧವ ಸಂಸ್ಕೃತಿಯ ಕಲಾಕೃತಿಗಳು:** ಸಿಂಧೂ ನಾಗರಿಕತೆಯ ಪ್ರಮುಖಪಟ್ಟಣವಾದ ಹರಪ್ಪಾ ಮತ್ತು ಮೋಹೆಂಜೋದಾರೋಗಳಲ್ಲಿ ಧಾರ್ಮಿಕ ಹಿನ್ನೆಲೆಯಲ್ಲಿಯೇ ರಚನೆಯಾದ ಕಲಾಕೃತಿಗಳಲ್ಲಿ ಕೆಲವನ್ನು ಇಲ್ಲಿ ಚಿತ್ರ ಸಹಿತ ಉಲ್ಲೇಖಿಸಲಾಗಿದೆ.

---

೧೫. Dr. Radhakrishna Choudhary: The Vratyas in Ancient India Varanasi: Page No. 56, 61.

೧೬. ಡಾ. ಎಸ್.ಶ್ರೀಕಂಠಶಾಸ್ತ್ರಿಗಳು: ಭಾರತೀಯ ಸಂಸ್ಕೃತಿ ದರ್ಶನ: ಲೇಖನ: ಹರಪ್ಪಾ ಮೊಹೆಂಜೋದಾರೋ: ಪುಟ- ೧೬,೧೭

**"ಮುದ್ರೆಗಳು":** ಸೋಪುಗಲ್ಲಿನಲ್ಲಿ ರಚನೆಗೊಂಡ ಈ ಮುದ್ರೆಗಳು ಅತ್ಯಂತ ಪ್ರಸಿದ್ಧವಾಗಿವೆ. ಇವು ೧.೩/೪ ಇಂಚಿನಿಂದ ೧ ೧/೨ ಇಂಚಿನ ಚೌರಸಾಕಾರದಲ್ಲಿವೆ. ಇವುಗಳ ಮಧ್ಯದಲ್ಲಿ ರಂಧ್ರವನ್ನು ಮಾಡಲಾಗಿದೆ. ಇವುಗಳನ್ನು ಚಿತ್ರಿಸಿ ಕೊರೆದ ನಂತರ ಈ ಮುದ್ರೆಗಳಿಗೆ ಅಲ್ಕಲಿ ಹಚ್ಚಿ ಸುಡುತ್ತಿದ್ದರು. ಇದರಿಂದ ಈ ಮುದ್ರೆಗಳು ಬೆಳ್ಳಗೆ ಕಾಣುತ್ತವೆ. ಈ ಮುದ್ರೆಗಳ ಮೇಲೆ ವೃಷಭ, ಖಡ್ಗಮೃಗ, ಆನೆ, ಮೊಸಳೆ, ಕುದುರೆ, ಹುಲಿ ಹಾಗೂ ಒಂದೇ ಕೊಂಬುಳ್ಳ ಪ್ರಾಣಿಗಳನ್ನು ಚಿತ್ರಿಸಲಾಗಿದೆ. ಇವುಗಳಲ್ಲದೇ ಸಂಕೇತ ಪ್ರಧಾನವಾಗಿ ಇನ್ನೂ ಕೆಲವು ಮುದ್ರೆಗಳು ರಚನೆಗೊಂಡಿದ್ದು, ಅವುಗಳ ಮೇಲೆ ವರ್ತುಳ, ಚುಕ್ಕೆ, ಶಿಲುಬೆ, ಸ್ವಸ್ತಿಕ ಮತ್ತು ಪವಿತ್ರ ಗಿಡವಾದ ಆಲದ (Peopal) ಮರದ ಎಲೆಗಳನ್ನು ಹಾಗೂ ಎತ್ತರವಿಲ್ಲದ ಪ್ರಾಣಿ (Unicorn) ಯುನಿಕಾರ್ನ್‌ನ್ನು ಚಿತ್ರಿಸಲಾಗಿದೆ.[೧೭]

**"ಪಶುಪತಿ ಮುದ್ರೆ":**

ಋಗ್ವೇದವನ್ನು ಸಿದ್ಧಪಡಿಸಿದ ಆರ್ಯರು ಭಾರತಕ್ಕೆ ಬರುವ ಮೊದಲೇ ಇಲ್ಲಿ ಬೇರೂರಿರುವ ಈ ಸೈಂಧವ ಸಂಸ್ಕೃತಿಯ ಮೊಹೆಂಜೋದಾರೋ ಅವಶೇಷಗಳಲ್ಲಿ ಚಿತ್ರಿತ ಮುದ್ರೆಗಳು ದೊರತಿದ್ದು, ಅವುಗಳಲ್ಲಿ ಒಂದನ್ನು ಸಾಮಾನ್ಯವಾಗಿ ಪಶುಪತಿ ಶಿವನೆಂದು ನಿರ್ದೇಶಿಸಿರುತ್ತಾರೆ. ವಿದ್ವಾನ್ ಸಾಲೆತ್ತೂರರು ಈ ಮುದ್ರೆಯನ್ನು ಅಗ್ನಿಯೆಂದು, ಶ್ರೀಕಂಠಶಾಸ್ತ್ರಿಗಳು ಇದನ್ನು ವಿಶ್ವರೂಪನೆಂದೂ, ಹಿರಾಸ್ ಅಣ್ ಎಂಬುವವರು ಪ್ರಾಚೀನ ದ್ರಾವಿಡ ದೇವತೆ ಎಂದಿರುವರು. ಒಟ್ಟಾರೆ ಈ ಮುದ್ರೆಯ ಕುರಿತು ಬಹುಮಟ್ಟಿಗೆ ವಿದ್ವಾಂಸರು "ಶಿವನ ಪ್ರಾಚೀನ ರೂಪವೆಂದೇ" ಅಭಿಪ್ರಾಯ ಪಟ್ಟಿರುವರು.[೧೮]

ಈ ಮುದ್ರೆಯ ಮಧ್ಯದಲ್ಲಿ ಪೀಠವೊಂದರ ಮೇಲೆ ಪದ್ಮಾಸನದಲ್ಲಿ ಯೋಗಿಯಂತೆ ಕುಳಿತಿದ್ದು, ಯೋಗ ಕೂಡಾ ಆಗಲೇ ರೂಢಿಯಲ್ಲಿತ್ತು ಎಂಬುದನ್ನು ಸೂಚಿಸುತ್ತದೆ. ಇದು ಮೂರು ಮುಖಗಳನ್ನು (ತ್ರಿರಸ್) ಹೊಂದಿದ್ದು ಮೇಲ್ಗಡೆ ಕೊಂಬು (ಶೃಂಗಿ) ಗಳಿವೆ. ಕೊಂಬುಗಳ ನಡುವೆ ಬೀಸಣಿಗೆಯಂತಹ ಶಿರಸ್ತ್ರಾಣವಿದೆ (ಕಿರಾತರ ಶಿಖಂಡ ಅಥವಾ ಜಟೆ). ಕೊಂಬುಗಳೂ ಈ ಶಿರಸ್ತ್ರಾಣವು ಸೇರಿ ತ್ರಿಶೂಲದಂತೆ ತೋರಿಸಲಾಗಿದೆ. ಇದರ ರೂಪವನ್ನು ಶಿವನ ಸಂಕೇತವೆಂಬಂತೆ ಚಿತ್ರಿಸಲಾಗಿದೆ. ಕುಳಿತಿರುವ ಮೂರ್ತಿಯು ನಗ್ನವಾಗಿದ್ದು ಜನನೇಂದ್ರಿಯ ನಿಮಿರಿ ನಿಂತಿದೆ. (ಬೃಹಚ್ಚೇಪಾಃ) ಮೈಯಲ್ಲಿ ಕವಚ ಹಾಕಿಕೊಂಡಂತಿದೆ. ಇವನ ಸುತ್ತಲೂ ಪ್ರಾಣಿಗಳಿವೆ (ಅರಣ್ಯಾಃ ಪಶವಃ) ಶಿವನ ಬಲಬದಿಗೆ ಹುಲಿ, ಆನೆ ಮತ್ತು ಎಡಬದಿಗೆ ಎಮ್ಮೆ, ಖಡ್ಗಮೃಗ, ಜಿಗರೆ ಮುಂತಾದವುಗಳನ್ನು ಫಲವತ್ತತೆಯ ಪ್ರತೀಕವಾಗಿ ತೋರಿಸಲಾಗಿದೆ. ಆಸನದ ಕೆಳಗಡೆ ಎರಡು ಜಿಗರೆಗಳಿವೆ. ಈ ಮೂರ್ತಿಯ ಸುತ್ತಲೂ ಪಶುಗಳಿರುವುದರಿಂದ, ಈ ಮೂರ್ತಿಗೆ "ಪಶುಪತಿ" ಎಂದೂ ಕರೆಯುವುದುಂಟು.

---

೧೭. Henrich Zimmar: The Art of Indian Asia: Volume No. II.
೧೮. ಶ್ರೀ ಎಸ್.ಕೆ.ರಾಮಚಂದ್ರರಾವ್ : ಮೂರ್ತಿಶಿಲ್ಪ ನೆಲೆ–ಹಿನ್ನೆಲೆ: ಪುಟ. ೯೯

ಈ ಯೋಗಮುದ್ರೆಯು ಮೊಹೆಂಜೋದಾರೋದಲ್ಲಿ ದೊರೆತ ಮುದ್ರೆಗಳಿಗಿಂತ ಅತ್ಯಂತ ಪ್ರಸಿದ್ಧಿಯನ್ನು ಪಡೆದಿದೆ. ಇದು ಮೊಟ್ಟ ಮೊದಲಿಗೆ ದೇವರ ಇರುವಿಕೆಯನ್ನು ಗುರುತಿಸುವ ಮುದ್ರೆಯಾಗಿದೆ. ರುದ್ರನಿಗೆ ಪಶುಗಳ ಮೇಲಿರುವ ಒಡೆತನವನ್ನು ಅಥರ್ವವೇದದ ೧೧, ೧೨, ೨೪, ಮಂತ್ರಗಳಲ್ಲಿ ಪ್ರಸ್ತಾಪಿಸಲಾಗಿದೆ.

**ಮುದ್ರೆಯ ಸಂಕೇತಗಳು:**

ಶಿವನನ್ನು ಗುರುತಿಸಲು ಆನೆಯಿದ್ದು ಶಿವನು ಕೃತ್ತಿವಾಸನೆಂಬುದನ್ನು, ಹುಲಿ ದುರ್ಗೆಯೊಂದಿಗೆ ಅವನ ಸಂಬಂಧ ಇರುವುದನ್ನು, ಎಮ್ಮೆ-ಯುಮನೊಂದಿಗಿನ ನೆಂಟನ್ನು ಹೊಂದಿರುವುದು, ಶಿವನು ಮೃಗಧರನಾಗಿರುವುದರಿಂದ ಕೊಂಬುಗಳನ್ನು, ಜಟೆಗಳಿಂದಲೂ ಖಂಡಗಳಿಂದಲೂ ವಿಶಿಷ್ಟರಾದ ಕಿರಾತರನ್ನಾಗಿಯೂ, ರುದ್ರನನ್ನು-ಕಿರಾತನೆಂದೇ ಕರೆದಿರುವುದನ್ನು ಅಥರ್ವಣ ವೇದದಲ್ಲಿ (೧೧, ೧೨, ೨೪) ಉಲ್ಲೇಖಿಸಲಾಗಿದೆ.[೧೯]

ವಾಸ್ತವವಾಗಿ ಈ ಕಲಾಕೃತಿಯನ್ನು ನೋಡಿದಾಗ ಶಿವನನ್ನು ಅಧಿಪತಿಯನ್ನಾಗಿಯೂ ಪೀಠವೊಂದರ ಮೇಲೆ ಆಸೀನನಾಗಿರುವುದು, ಪದ್ಮಾಸನಸ್ತನಾಗಿರುವುದು-ಯೋಗವನ್ನು ಬಲ್ಲವನೆಂದೂ, ಕೋಡುಗಳನ್ನೇ ಶಿವನ ಆಯುಧ ತ್ರಿಶೂಲವನ್ನಾಗಿ ಚಿತ್ರಿಸಿದ್ದು, ಆನೆಯನ್ನು-ಶಿವನು ಬಲಿಷ್ಟನಾಗಿರುವುದನ್ನು, ಹುಲಿಯನ್ನು-ಶಿವನು ಎಲ್ಲದಕ್ಕೂ ರಾಜನಾಗಿರುವಂತೆಯೂ, ಎಮ್ಮೆಯನ್ನು-ಶಿವನು ಯಮನನ್ನು, ಜನನ ಮರಣವನ್ನು ಜಯಿಸಿದವನೆಂದೂ, ಜಿಂಕೆಯು-ಶಿವನ ಆಯುಧವನ್ನಾಗಿಯೂ ಈ ಪಶುಪತಿ ಮುದ್ರೆಯು ಸಾಕೇತಿಕವಾಗಿಯೂ, ಸಂಯೋಜನಾ ದೃಷ್ಟಿಯಿಂದಲೂ ಧಾರ್ಮಿಕ ಹಿನ್ನೆಲೆಯಲ್ಲಿಯೂ ಬಲಿಷ್ಟವಾದುದಾಗಿದೆ. ಇದರಿಂದಾಗಿಯೇ ರಾಷ್ಟ್ರಕೂಟರು ಶಿವನನ್ನು ಎಲಿಫೆಂಟಾ ಗುಹಾಂತರ ದೇವಾಲಯದಲ್ಲಿ "ತ್ರಿಶೀರ್ಷ ಮಹೇಶ"ನೆಂದು ಕರೆದಿದ್ದು ಪ್ರಸಿದ್ಧವಾಗಿದೆ.

**ಧರ್ಮಗುರುಗಳ ಕಲಾಕೃತಿ:**

ಸುಮಾರು ೪೦೦೦ ವರುಷಗಳಿಗಿಂತಲೂ ಹಿಂದೆ ರಚಿಸಲ್ಪಟ್ಟ ಎದೆಯವರೆಗಿನ ಈ ಶಿಲ್ಪಕಲಾಕೃತಿಯು ಮೊಹೆಂಜೋದಾರೋದಲ್ಲಿ ದೊರಕಿದ್ದು ಉತ್ಕೃಷ್ಟವಾದುದಾಗಿದೆ. ಇದನ್ನು ಸೋಪುಗಲ್ಲಿನಲ್ಲಿ ರಚಿಸಲಾಗಿದೆ. ಈ ಕಲಾಕೃತಿಯ ಮೀಸೆಯನ್ನು ಸಂಪೂರ್ಣವಾಗಿ ತೆಗೆಯಲಾಗಿದ್ದು, ದಾಡಿಯನ್ನು ಸುಂದರವಾಗಿ ಕತ್ತರಿಸಿ ಹಚ್ಚಿದಂತಾಗಿದೆ. ತಲೆಗೂದಲುಗಳನ್ನು ಹಿಂದೆ ಬನ್ ಆಕಾರದಲ್ಲಿ ಕಟ್ಟಲಾಗಿದೆ. ಹಣೆಯ ಮೇಲೆ ಪಟ್ಟಿ ಇದ್ದು ಆ ಪಟ್ಟಿಯ ಮಧ್ಯದಲ್ಲಿ ವರ್ತುಳಾಕಾರದ ಆಭರಣವಿದೆ. ಬಲಗಡೆಯ ತೋಳಿನಲ್ಲಿಯೂ ಕೂಡಾ ಇದೇ ರೀತಿ ಪಟ್ಟಿ ಮತ್ತು ವರ್ತುಳಾಕಾರದ ಆಭರಣವಿದೆ. ಈ ಕಲಾಕೃತಿಯ ತುಟಿಗಳು ತುಂಬಾ ದಪ್ಪವಾಗಿವೆ. ಬಲಗಡೆಯ ಭುಜವನ್ನು ಬರಿದಾಗಿ ಬಿಟ್ಟು, ಎಡಗಡೆಯ ಭುಜ ಮತ್ತು ಎದೆಯ ಮೇಲೆ ಬಟ್ಟೆಯನ್ನು

೧೯. ಶ್ರೀ ಎಸ್.ಕೆ.ರಾಮಚಂದ್ರರಾವ್ : ಮೂರ್ತಿಶಿಲ್ಪ ನೆಲೆ-ಹಿನ್ನೆಲೆ: ಪುಟ. ೧೦೦.

ಹೊತ್ತುಕೊಂಡಿರುವನು. ಈ ಬಟ್ಟೆಯ ಮೇಲೆ ಮೂರು ಎಲೆಗಳ ನಕ್ಷೆಯನ್ನು ಮಾಡಲಾಗಿದೆ. ಈ ಬಟ್ಟೆಯನ್ನು ವರ್ಣಗಳಿಂದ ಮಾಡಿರುವ ಸಾಧ್ಯತೆ ಇದೆ. ಅಲ್ಲಲ್ಲಿ ವರ್ಣಗಳನ್ನು ಬಳಸಿದ್ದು ಕಂಡುಬರುತ್ತಿದ್ದರೂ ಈಗ ಅದೆಲ್ಲ ಮಾಸಿ ಹೋಗಿದೆ.[೨೦]

ವಿಶೇಷವಾಗಿ ಈ ಕಲಾಕೃತಿಯ ಹಣೆಯ ಮೇಲೆ ಮತ್ತು ಬಲಗಡೆಯ ತೋಳಿನಲ್ಲಿ ಪಟ್ಟಿಗಳನ್ನು ಕಟ್ಟಿಕೊಳ್ಳಲಾಗಿದ್ದು, ಅವುಗಳ ಮದ್ಯದಲ್ಲಿ ವರ್ತುಳಾಕಾರದ ಆಭರಣವಿದೆ ಎನ್ನಲಾಗಿದೆ. "ಇದು ಆಭರಣವಲ್ಲ, ಇಷ್ಟಲಿಂಗವನ್ನು ಬಟ್ಟೆಯಲ್ಲಿ ಕಟ್ಟಿಕೊಂಡು ಹಣೆಯಲ್ಲಿ ಮತ್ತು ಬಲಗೈಯ ತೋಳುಗಳಲ್ಲಿ ಧರಿಸಿಕೊಳ್ಳಲಾಗಿದೆ" ಎಂದು ಅಭಿಪ್ರಾಯ ಪಡಬಹುದಾಗಿದೆ. "ಹರಪ್ಪ ಮತ್ತು ಮೊಹೆಂಜೋದಾರೋಗಳಲ್ಲಿ ಸಣ್ಣಲಿಂಗಗಳನ್ನು ಮೈಮೇಲೆ ಧರಿಸುತ್ತಿದ್ದರೆಂದೂ ದೊಡ್ಡ ಲಿಂಗಗಳನ್ನು ಪೀಠಗಳ ಮೇಲಿಟ್ಟು ಪೂಜಿಸುತ್ತಿದ್ದರೆಂದು" ವಿದ್ವಾಂಸರಾದ ಫ್ರಿಲಸ್ಕಿ, ಸರ್‌ಜಾನ್ ಮಾರ್ಷಲ್, ಡಾ, ಶಂಭಾ ಜೋಷಿ, ಶ್ರೀಕಂಠ ಶಾಸ್ತ್ರಿಗಳು, ಇನ್ನೂ ಹಲವಾರು ವಿದ್ವಾಂಸರು ಅಭಿಪ್ರಾಯ ಪಟ್ಟಿರುವರು. ಈ ಹಿನ್ನೆಲೆಯಲ್ಲಿ ಈ ಕಲಾಕೃತಿಯ ಕುರಿತು ಅಧ್ಯಯನ ಮಾಡಿದಾಗ "ವರ್ತುಳಾಕಾರದ ಆಭರಣದಲ್ಲಿ ಅದು ಇಷ್ಟಲಿಂಗವೆಂದೂ ಅದನ್ನು ಬಟ್ಟೆಯಲ್ಲಿಟ್ಟುಕೊಂಡು ಕಟ್ಟಿಕೊಳ್ಳಲಾಗಿದೆ ಎಂದೂ ಅಭಿಪ್ರಾಯ ಹೊಂದಲಾಗಿದೆ." ಜೊತೆಗೆ ಎಡಭುಜ ಮತ್ತು ಎದೆಯ ಮೇಲಿರುವ ಬಟ್ಟೆಯಲ್ಲಿ ಮೂರು ಎಲೆಗಳ ನಕ್ಷೆ ಇದೆ ಎಂದಿರುವದೂ ಕೂಡಾ ಅಲಂಕಾರಿಕವಾಗಿ ಅಷ್ಟೇ ಅಲ್ಲ, ಧಾರ್ಮಿಕವಾಗಿಯೂ ಅಂದರೆ "ಮೂರು ಎಲೆಗಳುಳ್ಳದ್ದು ಬಿಲ್ವಪತ್ರಿ" ವೀರಶೈವರು ಪೂಜೆಗೆ ಬಳಸುವುದನ್ನು ಸಂಕೇತ ಪ್ರಧಾನವಾಗಿ ಇಲ್ಲಿ ಚಿತ್ರಿಸಲಾಗಿದೆ". ಒಟ್ಟಾರೆಯಾಗಿ ಈ ಕಲಾಕೃತಿಯು ವೀರಶೈವ ಪರಂಪರೆಯ ಜಂಗಮ ಮೂರ್ತಿಯ ಎಲ್ಲ ಲಕ್ಷಣಗಳನ್ನು ಹೊಂದಿದೆ ಎಂದು ಹೇಳಬಹುದಾಗಿದೆ.

**ಲಿಂಗಧಾರಣದ ಪ್ರಾಚೀನತೆ: ಶಿವಲಿಂಗ ಲಾಂಛನದ ಚಿತ್ರ ಶಿಲ್ಪಗಳು:**

ಶೈವ ವೀರಶೈವ ಧರ್ಮವು ತನ್ಮೂಲಕ ಲಿಂಗಪೂಜೆಯು ಅತ್ಯಂತ ಪ್ರಾಚೀನವೆಂಬುದು ವೇದಕಾಲಕ್ಕೆ ಮೊದಲಿನದೆಂಬುದೂ ಹರಪ್ಪ ಮತ್ತು ಮೊಹೆಂಜೋದಾರೋ ಸಂಶೋಧನೆಗಳಿಂದ ಸ್ಪಷ್ಟಗೊಂಡಿದೆ. ವೀರಶೈವ ಧರ್ಮದಲ್ಲಿ ಲಿಂಗಧಾರಣದ ಪ್ರಾಚೀನತೆಯನ್ನು ಹಿಂದಿನ ವಿದ್ವಾಂಸರು ಮತ್ತೊಂದು ಬಗೆಯಿಂದ ಚಿತ್ರಿಸಿರುವರೆಂಬುದನ್ನು ನಾವು ಇಲ್ಲಿ ಪರಿಶೀಲಿಸುವುದು ಅವಶ್ಯವಾಗಿದೆ. ವೀರಶೈವರು ತಮ್ಮ ಲಿಂಗಧಾರಣದ ಪ್ರಾಚೀನತೆಯನ್ನು ಪವಿತ್ರತೆಯನ್ನೂ ಸಿದ್ಧಗೊಳಿಸುವ ಸಲುವಾಗಿ ಉತ್ತಮ ಮಾರ್ಗವನ್ನು ಹಿಡಿದಿರುವರೆಂಬುದನ್ನು ನಾವಿಲ್ಲಿ ಮನಗಾಣಬಹುದಾಗಿದೆ.

"ವಿಷ್ಣು ಬ್ರಹ್ಮಾದಯೋ ದೇವಾಃ ಮುನಯೋ ಗೌತಮಾದಯಃ।
ಧಾರಯಂತಿ ಸದಾ ಲಿಂಗಂ ಉತ್ತಮಾಂಗೇ ವಿಶೇಷತಃ॥

೨೦. Henrich Zimmar: The Art of Indian Asia: Volume No. II.

ಲಕ್ಷ್ಮಾದಿ ಶಕ್ತಯಸ್ಸರ್ವಾಃ ಶಿವಭಕ್ತಿ ವಿಭಾವಿತಾಃ।
ಧಾರಯಂತ್ಯಳಿಕಾಂಗೇಷು ಶಿವಲಿಂಗಮಹರ್ನಿಶಃ॥
ವೇದಶಾಸ್ತ್ರ ಪುರಾಣೇಷು ಕಾಮಿಕಾದ್ಯಾಗಮೇಷು ಚ।
ಲಿಂಗಧಾರಣ ಮಾಖ್ಯಾತಂ ವೀರಶೈವಸ್ಯ ನಿಶ್ಚಯಾತ್॥[೨೧]

ಮೇಲೆ ಹೇಳಿದ ಪ್ರಾಚೀನ ಗ್ರಂಥಗಳ ಅಭಿಪ್ರಾಯದ ಪ್ರಕಾರ ವಿಷ್ಣು, ಬ್ರಹ್ಮ, ಇಂದ್ರ ಮೊದಲಾದ ದೇವತೆಗಳೂ ಸಾನಂದ, ಪರಾಶರ, ಗೌತಮ ಮೊದಲಾದ ಋಷಿಗಳೂ, ರೇಣುಕ, ಧಾರುಕ, ನಂದಿ, ಭೃಂಗಿ, ವೃಷಭ ಮೊದಲಾದ ಪ್ರಮಥರು ಶಿವಲಿಂಗ ಪೂಜಕರಾಗಿದ್ದರೆಂದೂ ಆ ಶಿವಲಿಂಗ ಪೂಜೆಯ ಫಲವಾಗಿಯೇ ಅವರಿಗೆ ಆ ದೇವತ್ವ ಮತ್ತು ಋಷಿತ್ವಗಳು ಪ್ರಾಪ್ತವಾದವು ಎಂದು ಸಿದ್ಧವಾಗುತ್ತದೆ. ಮುಖ್ಯವಾಗಿ ಈ ಎಲ್ಲ ಗ್ರಂಥಕಾರರ ತಾತ್ಪರ್ಯವು ಲಿಂಗಧಾರಣವು ಪ್ರಾಚೀನವೂ ಪವಿತ್ರವೂ ವೇದಸಮ್ಮತವೂ ಆದುದೆಂದು ಪ್ರಯಕ್ತಪಡಿಸುವುದೇ ಆಗಿದೆಯೆಂದು ಹೇಳಬಹುದು.

ಭರತಖಂಡದ ಅತ್ಯಂತ ಪ್ರಾಚೀನ ಪವಿತ್ರವಾದ ಕಾಶಿ, ಕೈಲಾಸ, ರಾಮೇಶ್ವರ, ಶ್ರೀಶೈಲ, ಕೇದಾರ, ಗೋಕರ್ಣ, ಪಂಪಾಕ್ಷೇತ್ರ, ಮಹಾಕೂಟ ಮೊದಲಾದ ಕ್ಷೇತ್ರಗಳಲ್ಲಿ ನಾವು ಶಿವಲಿಂಗಗಳನ್ನು ಮಾತ್ರ ನೋಡಬಹುದಾಗಿದೆ. ಚರಿತ್ರೆಯ ದೃಷ್ಟಿಯಿಂದ ಆಧುನಿಕ ಕ್ಷೇತ್ರಗಳೆನಿಸಿದ ಪಂಢರಾಪುರದ ಶ್ರೀ ಪಾಂಡುರಂಗ, ಅನಂತಶಯನದ ಅನಂತ ಪದ್ಮನಾಭ, ಕೊಲ್ಹಾಪುರದ ಶ್ರೀ ಮಹಾಲಕ್ಷ್ಮಿ, ತುಳಜಾಪುರದ–ಶ್ರೀ ಭವಾನೀದೇವಿ– ಈ ಮೂರ್ತಿಗಳ "ತಲೆಯ ಮೇಲೆ ಶಿವಲಿಂಗಲಾಂಛನವಿರುವುದು ಲಿಂಗಧಾರಣದ ಪ್ರಾಚೀನತೆಗೂ ಶ್ರೇಷ್ಠತೆಗೂ ನಿದರ್ಶನವೆನಿಸಿದೆ.[೨೨]

ಮುಖ್ಯವಾಗಿ ಇದುವರೆಗೆ ನಾವು ವಿವರಿಸಿದ ಎಲ್ಲ ವಿಚಾರಗಳಿಂದ ಲಿಂಗಧಾರಣ ಪದ್ಧತಿಯು ಪ್ರಾಚೀನವಾದುದೆಂದು, ಉದಾತ್ತವಾದ ತತ್ವದಿಂದ ಕೂಡಿದುದೆಂದೂ ಶಿವದೀಕ್ಷೆಗೂ ಲಿಂಗಧಾರಣಕ್ಕೂ ನಿಕಟವಾದ ಸಂಬಂಧವಿದೆಯೆಂದೂ, ಶಿವದೀಕ್ಷೆಯಿಲ್ಲದ ಲಿಂಗಧಾರಣವು ನಿಷ್ಪ್ರಯೋಜಕವೆಂದೂ ವೀರಶೈವ ಧರ್ಮವು ಇಂತಹ ಉದಾತ್ತ ತತ್ವಗಳಿಂದ ಕೂಡಿದುದೆಂದೂ ಅದರ ಹಿರಿಯತನಕ್ಕೂ ಇರುವಿಕೆಗೂ ಇವು ಸಾಕ್ಷಿಯೆನಿಸಿವೆಯೆಂದೂ ಸಿದ್ಧಾಂತವಾಗುತ್ತದೆ.

**೪. ಲಿಂಗ ಆವಿರ್ಭಾವದ ಚಿತ್ರ ಕಲಾಕೃತಿ:**

ಈ ಕಲಾಕೃತಿಯನ್ನು ಶಿವಾಗಮವನ್ನು ಆಧರಿಸಿ ಶಿವನಿಧಿಯಲ್ಲಿ ಚಿತ್ರಿಸಲಾಗಿದೆ. ಜಗತ್ತು ಪ್ರಳಯದಿಂದ ಆವರಿಸಿರುವಾಗ ಬ್ರಹ್ಮ, ವಿಷ್ಣು ಅವರು ತಮ್ಮ ತಮ್ಮ ಶಕ್ತಿಯ ವಿಷಯವಾಗಿ ಪರಸ್ಪರ ವಾದಗ್ರಸ್ತರಾದರು.

೨೧. ಶ್ರೀ ಬಿ.ಶಿವಮೂರ್ತಿಶಾಸ್ತ್ರಿಗಳು : ದ್ವಿತೀಯ ಮುದ್ರಣ – ವೀರಶೈವ ಸಾಹಿತ್ಯ ಮತ್ತು ಇತಿಹಾಸ: ಭಾಗ–೧ ಪುಟ ೧೭೭.

೨೨. ಶ್ರೀ ಬಿ.ಶಿವಮೂರ್ತಿಶಾಸ್ತ್ರಿಗಳು : ದ್ವಿತೀಯ ಮುದ್ರಣ–ವೀರಶೈವ ಸಾಹಿತ್ಯ ಮತ್ತು ಇತಿಹಾಸ: ಭಾಗ–೧ ಪುಟ ೧೭೮.

ಶಬ್ದಬ್ರಹ್ಮ ಶರೀರನಾದ ಶಿವನು ಅವರ ಮಧ್ಯ ಆಶ್ಚರ್ಯಕರವಾಗಿ ತೇಜೋರೂಪವಾದ "ಅಗ್ನಿಸ್ತಂಭರೂಪ"ದಲ್ಲಿ ಅವತರಿಸಿದನು. ಈ ರೀತಿಯಲ್ಲಿ ನಿಂತ ಅಗ್ನಿಸ್ತಂಭರೂಪವನ್ನು ಬ್ರಹ್ಮ, ವಿಷ್ಣು ಅವರು ನೋಡಿ ವಿಸ್ಮಿತರಾಗಿ, ಅದನ್ನು ಪರೀಕ್ಷಿಸಲು ಬ್ರಹ್ಮನು ಹಂಸರೂಪವಾಗಿ ಊರ್ಧ್ವಾಭಿಮುಖಿಯಾಗಿಯೂ ವಿಷ್ಣುವು ವರಾಹರೂಪಿಯಾಗಿ ಅಧೋಮುಖವಾಗಿಯೂ ಹೊರಟರು, ಎಷ್ಟು ದೂರ ಹೋದರೂ ಆದಿ-ಅಂತ್ಯವನ್ನು ತಿಳಿಯದೇ ಹಿಂತಿರುಗಿ ಬಂದು ಪರಶಿವನನ್ನು ಸ್ತೋತ್ರ ಮಾಡಿ ಅಗ್ನಿಸ್ತಂಭದ ಪಕ್ಕದಲ್ಲಿ ನಿಂತರು.

ಆಗ "ಶಬ್ಧ ಬ್ರಹ್ಮರೂಪಿಯಾದ ಶಿವನು" ಸರ್ವಕ್ಕೂ ಕಾರಣಭೂತನು, ನಾಶರಹಿತನು ಸರ್ವೇಶ್ವರನೂ, ಸುರನಾಯಕನು, ಮಹಾದೇವನೂ ಆಗಿರುವ ಸದಾಶಿವನನ್ನು ನೀವು ಅರಿಯಲು ಸಾಧ್ಯವಿಲ್ಲ. ರುದ್ರ, ಬ್ರಹ್ಮ, ವಿಷ್ಣು ಆದಿ ಈ ಜಗತ್ತೆಲ್ಲವೂ ಆ ಸದಾಶಿವನ ಅನುಗ್ರಹದಿಂದ ಉತ್ಪನ್ನವಾಗಿರುವುದು. ಅವನ ಸ್ವರೂಪವೇ ಈ "ಅಗ್ನಿಸ್ತಂಭಾವಕಾರದ ಲಿಂಗವು" (ಸಂಕೇತವು). ಆದ್ದರಿಂದ ಎಲ್ಲವೂ ಈ ಅಗ್ನಿಸ್ತಂಭ ಚಿಹ್ನೆಯನ್ನು ಪೂಜಿಸಬೇಕು. ಈ ರೀತಿ ಪೂಜಿಸುವುದರಿಂದ ಪರಶಿವನು ಪ್ರೀತನಾಗುವನು. ಪ್ರಳಯ ಕಾಲದಲ್ಲಿ ಸರ್ವಪ್ರಾಣಿಗಳೂ ಇದರಲ್ಲಿ ಲಯ ಹೊಂದಿ ಪುನಃ ಸೃಷ್ಟಿಸಲ್ಪಡುವವು. "ನನ್ನ ಪ್ರತೀಕವೇ (ಗುರುತು) ಲಿಂಗ". ಆದ್ದರಿಂದ ನನ್ನ ಗುರುತಾದ ಈ ಲಿಂಗರೂಪವನ್ನು ಸಮಸ್ತರೂ ಪೂಜಿಸಬೇಕು ಎಂದು ನುಡಿದನು.[೨೩]

"ಸರ್ವಾರ್ಥಸಾಧನಂ ಲಿಂಗಂ ಬ್ರಹ್ಮ ವಿಷ್ಣು ಶಿವಾತ್ಮಕಂ।

ಅಧೋ ಮಧ್ಯೋರ್ಧ್ವಭಾಗಂ ತು ಬ್ರಹ್ಮ ವಿಷ್ಣು ಶಿವಾತ್ಮಕಂ॥

ಈ ಕೆಳಗಿನಂತೆ ಲಿಂಗ ಉತ್ಸೇಧದಲ್ಲಿ ಮೂರು ಭಾಗಗಳಿವೆ :

೧. ಅಧೋ ಭಾಗವು - ಬ್ರಹ್ಮಾಂಶವೆಂದೂ ಅಂದರೆ ಚತುರಾಶ್ರಯವಾಗಿಯೂ

೨. ಮಧ್ಯ ಭಾಗವು - ವಿಷ್ಣು ಅಂಶವೆಂದೂ ಅಂದರೆ ಅಷ್ಟಾಶ್ರಯವಾಗಿಯೂ

೩. ಊರ್ಧ್ವ ಭಾಗವು - ಶಿವಾಂಶವೆಂದು ಅಂದರೆ ವರ್ತುಳವಾಗಿಯೂ [೨೪]

ಇರಬೇಕೆಂದು ತಿಳಿಸಿರುವರು.

**೫. ಸ್ಕಂಭಲಿಂಗದ ಶಿಲ್ಪ ಕಲಾಕೃತಿಗಳು:**

ಈ ಶಿಲ್ಪ ಕಲಾಕೃತಿಯನ್ನು "ಅಥರ್ವವೇದ"ವನ್ನು ಆಧರಿಸಿ ರಚಿಸಲಾಗಿದೆ. ಶಿವನನ್ನು ಸಾಮಾನ್ಯವಾಗಿ ಲಿಂಗದ ಆಕೃತಿಯಲ್ಲಿ ಆರಾಧಿಸುತ್ತಾರೆ. ಲಿಂಗದಲ್ಲಿಯೇ ಶಿವನನ್ನು ಚಿತ್ರಿಸಿ ಮುಖಲಿಂಗಗಳೂ, ಶಿವನ ಮನುಷ್ಯಾಕಾರವನ್ನು ಪೂರ್ಣವಾಗಿ ಚಿತ್ರಿಸಿ ಅಥವಾ ಕಡೆದ ಲಿಂಗೋದ್ಭವ ಮೂರ್ತಿಗಳೂ ಇವೆ. ಶಿವಪೂಜೆ ಎಂದರೆ ಲಿಂಗಪೂಜೆಯೇ. "ಲಿಂಗಪೂಜಾ ಶಿವನ್ಯೇಷ್ಟಾ ವಿಗ್ರಹಾರಾಧಾನಾತ್ ಪ್ರಿಯೇಃ ಶಿವನ ಹಿನ್ನೆಲೆಯಲ್ಲಿ

---

೨೩. ಶ್ರೀ ಎಂ.ಜಿ.ನಂಜುಂಡಾರಾಧ್ಯ: ಶಿವಾಗಮ ಸೌರಭ: ಭಾಗ-೧: ಪುಟ ೬೩

೨೪. ಶ್ರೀ ಎಂ.ಜಿ.ನಂಜುಂಡಾರಾಧ್ಯ: ಶಿವಾಗಮ ಸೌರಭ: ಭಾಗ-೧: ಪುಟ ೬೪.

ರುದ್ರನನ್ನು ಕಂಡಂತೆ ಲಿಂಗದ ಹಿನ್ನೆಲೆಯಲ್ಲಿ ಸ್ಕಂಭವನ್ನು ಕಾಣಬಹುದು. ಅಥರ್ವ ವೇದದಲ್ಲಿ ಸ್ಕಂಭದ ಕಲ್ಪನೆ ಸ್ಪಷ್ಟವಾಗಿದೆ. ಸ್ಕಂಬವೆಂದರೆ ಸ್ತಂಭವೇಃ ಮನೆಯನ್ನು ಹಿಡಿದು ಎತ್ತಿ ನಿಲ್ಲಿಸುವ ಕಂಬ ಇದ್ದಂತೆ ಚರಾಚರಜಗತ್ತನ್ನೆಲ್ಲಾ ನಿಲ್ಲಿಸಿರುವ ಸ್ತಂಭ ಪ್ರಪಂಚದ ಆದ್ಯಂತವೂ ವ್ಯಾಪಿಸಿ ಅದರ ಎಲ್ಲ ಅಂಶಗಳನ್ನೂ, ಅಂಗಗಳನ್ನು ಒಳಗೊಂಡು ಅವ್ಯಕ್ತ ಆದರೂ ವ್ಯಕ್ತ (ಮೂರ್ತ) ತತ್ವ ಇದು. ಅದರಲ್ಲಿಯೇ ಭೂಮಿ, ಆಕಾಶ, ಅಗ್ನಿ, ಸೂರ್ಯ, ಚಂದ್ರ, ವಾಯು ಎಲ್ಲವೂ ಅಡಗಿದೆ. ಅದರ ಆಕಾರದಲ್ಲಿ ಮೂವತ್ಮೂರು ದೇವತೆಗಳೂ ಸೇರಿದ್ದಾರೆ. ಅಮೃತವೂ ಅದರಲ್ಲಿದೆ, ಮೃತ್ಯುವೂ ಇದೆ, ಸಮುದ್ರವೇ ಅದರ ನಾಡಿಗಳು.

ಯತ್ರಾಮೃತಂ ಮೃತ್ಯುಶ್ಚ ಪುರುಷೇಧಿಸಂಹಿತೇ
ಸಮುದ್ರೋ ಯಸ್ಯ ನಾಡ್ಯಃ।
ಪುರುಷೇಧಿಸಂಹಿತಾ ಸ್ಕಂಭಂ ತಂ ಬ್ರೂಹಿ
ಕತಮಃ ಸ್ವಿದೇವ ಸಃ॥

ಈ ಸ್ತಂಭವನ್ನು ಕೊನೆ ಮೊದಲಿಲ್ಲದ ಕಂಬವೆಂದು ಬಗೆದುದುಂಟು, ಅದನ್ನು ಅಗ್ನಿಯೆಂದೂ ಕರೆದುದುಂಟು, ಶಿವನ ಆದಿಮೂಲವನ್ನು ಹುಡುಕಲು ಬ್ರಹ್ಮನು ಹಂಸರೂಪವಾಗಿ, ವಿಷ್ಣುವು ವರಾಹ ರೂಪವಾಗಿಯೂ ಹೊರಟು ನಿರಾಶರಾದ ಕಥೆ ಪುರಾಣದಲ್ಲಿ ಬರುತ್ತದೆ. ಇದೇ ಲಿಂಗೋದ್ಭವ ಮೂರ್ತಿಯ ಸಂದರ್ಭವಾಗಿದೆ. ಇಲ್ಲಿ ಶಿವ ಕಂಡಿದ್ದು ಸಾವಿರಾರು ಜ್ವಾಲೆಗಳ ಬೆಂಕಿಯ ಕಂಬದಂತೆಯೇ. ಹಲವಾರು ಶಿವ ಕ್ಷೇತ್ರಗಳಲ್ಲಿ ನಿದರ್ಶನಕ್ಕೆ ತಿರುವಣ್ಣಾ ಮಲೈ, ತಿರುಕ್ಕನೂರ್, ಶಿವನನ್ನು ಅಗ್ನಿಸ್ತಂಭವೆಂದೇ ಪರಿಗಣಿಸಿರುವುದಿದೆ.[೨೫]

ಕ್ರಿಸ್ತ ಪೂರ್ವ ೨ನೇ ಶತಮಾನದ ಶಿಲ್ಪ ಇಂದಿಗೂ ಪೂಜಿಸಲ್ಪಡುವ "ಗುಡಿಮಲ್ಲದ ಲಿಂಗ" ನಮ್ಮ ನಾಡಿನಲ್ಲಿ ಕಾಣಸಿಗುವ ಶಿವಲಿಂಗಗಳಲ್ಲೆಲ್ಲಾ ತುಂಬಾ ವಿಶಿಷ್ಟವಾದುದು ಹಾಗೂ ಪುರಾತನವಾದುದೂ ಆಗಿದೆ. ಈ ಲಿಂಗವನ್ನು ತಿರುವಾಂಕೂರಿನ ಶಿಲ್ಪ ಶಾಸ್ತ್ರಜ್ಞರಾದ ಟಿ.ಎ. ಗೋಪಿನಾಥರಾಯ್ ಸಂಶೋಧಿಸಿದ್ದು, ತಮಿಳುನಾಡಿನ ಉತ್ತರ ಅರ್ಕಾಟ ಜಿಲ್ಲೆಯ ರೇಣಿಗುಂಟದ ಬಳಿ ಇರುವ ಗುಡಿಮಲ್ಲಮ್ ಎಂಬಲ್ಲಿ ಈ ಲಿಂಗ ಇನ್ನೂ ಪೂಜೆಗೊಳ್ಳುತ್ತದೆ. ಕ್ರಿಸ್ತ ಪೂರ್ವ ೨ನೇ ಶತಮಾನದ್ದೆನ್ನುವ ಎಣಿಕೆಗೆ ಡಾ. ಆನಂದಕುಮಾರಸ್ವಾಮಿಯವರೂ ಒಪ್ಪಿಕೊಂಡಿರುವರು. ಒಂದೇ ಕಲ್ಲಿನಲ್ಲಿ ಕಡೆದ ಊರ್ಧ್ವಲಿಂಗದ ಮಾದರಿಯಲ್ಲೇ ಇದ್ದು ಅದಕ್ಕೆ ಅರ್ಘ್ಯವಾಗಲಿ, ಪೀಠವಾಗಲೀ ಇಲ್ಲ ಸುಮಾರು ಐದು ಅಡಿ ಎತ್ತರದ ಈ ಲಿಂಗವು ಒಂದು ಅಡಿ ದಪ್ಪವಾಗಿದೆ. ನಾಳದ ಮುಂಭಾಗದಲ್ಲಿ ಸ್ಥಾನಕ ದ್ವಿಭುಜ ಶಿವನ ಬಲಗೈಯಲ್ಲಿ ಟಗರು, ಎಡಗೈಯಲ್ಲಿ ಕಲಶ ಮತ್ತು ನೀಳವಾದ ಕೊಡಲಿಗಳಿವೆ. ಶಿವನ ಕಾಲ ಕೆಳಗೆ ಯಕ್ಷನೊಬ್ಬ ಮುದುರಿಕೊಂಡು ಕುಳಿತಿದ್ದಾನೆ. ಡಾ. ಆನಂದ ಕುಮಾರ ಸ್ವಾಮಿಯವರು ಇವನನ್ನು ಅಪಸ್ಮಾರ ಪುರುಷನೆಂದು ನಿರ್ದೇಶಿಸಿರುವರು.[೨೬] ಕಾಲುಗಳನ್ನು ದೂರ ಇಡಿಸಿಕೊಂಡಿರುವ ಭಂಗಿಯೂ ಗಮನಾರ್ಹವಾದುದಾಗಿದೆ.

---

೨೫. ಶ್ರೀ ಎಸ್.ಕೆ.ರಾಮಚಂದ್ರರಾವ್ : ಮೂರ್ತಿಶಿಲ್ಪ ನೆಲೆ ಹಿನ್ನೆಲೆ: ಪುಟ ೧೦೩, ೧೦೪.
೨೬. ಶ್ರೀ ಎಸ್.ಕೆ.ರಾಮಚಂದ್ರರಾವ್ : ಮೂರ್ತಿಶಿಲ್ಪ ನೆಲೆ ಹಿನ್ನೆಲೆ: ಪುಟ ೧೧೬, ೧೧೭.

ಹರಪ್ಪಾ ಮೊಹೆಂಜೋದಾರೋದಲ್ಲಿಯ ಪ್ರತಿಯೊಂದು ಮನೆಗಳಲ್ಲಿಯೂ ಮಾತೃ ದೇವತಾಪೂಜೆಗೆ ಒಂದು ಕೋಣೆ ಸೀಮಿತವಾಗಿದ್ದಿತು. ಮಾತೃದೇವತಾ ವಿಗ್ರಹಗಳಲ್ಲಿ ಕನ್ಯಾ, ಯೋಧ, ಮಗುವನ್ನು ಎತ್ತಿಕೊಂಡ ತಾಯಿ ಸಪ್ತ ಮಾತೃಕಾ ದೇವತೆಗಳು ಮುಖ್ಯವಾದವುಗಳು. ಪುರುಷ ದೇವತಾ ವಿಗ್ರಹಗಳಲ್ಲಿ ಯೋಗಿ, ಶಿವ, ಪಶುಪತಿ, ವೃಷಭ, ವಿವಿಧ ಬಗೆಯ ಲಿಂಗಗಳು, ವರ್ತುಳ, ಚುಕ್ಕೆ, ಸ್ವಸ್ತಿಕ್, ಪವಿತ್ರಗಿಡವಾದ ಆಲದ ಮರದ ಎಲೆ ಹಾಗೂ ಬಿಲ್ವ ಪತ್ರೆಗಳ ಚಿತ್ರಗಳು ದೊರತಿರುವುದರಿಂದ ಸಿಂಧೂನಾಗರಿಕತೆಯ ಸಂಸ್ಕೃತಿಯಲ್ಲಿ ಅವೈದಿಕ ಶೈವ ಮತವೇ ಪ್ರಬಲವಾಗಿಯೂ ಪ್ರಧಾನವಾಗಿಯೂ ಇತ್ತೆಂದು ತಿಳಿದು ಬರುತ್ತದೆ.

**ಬೌದ್ಧ ಭಿತ್ತಿ ಚಿತ್ರ ಕಲೆ:**

ಕ್ರಿಸ್ತ ಪೂರ್ವ ೨೦೦ ರಿಂದ ಕ್ರಿಸ್ತಶಕ ೮ನೇ ಶತಮಾನದವರೆಗೆ ಮಹಾರಾಷ್ಟ್ರದ ಪುಣೆ ಜಿಲ್ಲೆಯ ಕಾರ್ಲೆ, ನಾಸಿಕ, ಭಾಜ, ಬೇಡ್ಸ ಮತ್ತು ಕೊಂಡಾನೆ ಗುಹೆಗಳಲ್ಲಿ ಅಲ್ಲದೇ ಜುನ್ನಾರ್ ಕನ್ಹೇರಿ ಹಾಗೂ ಅಜಂತಾ ಗುಹೆಗಳಲ್ಲಿ ಬೌದ್ಧ ಚಿತ್ರಕಲೆ ಭಿತ್ತಿಯಲ್ಲಿ ರೂಪುಗೊಂಡಿತು. ಈ ಕುರಿತು ಶ್ರೀ ಪಿ.ಆರ್.ತಿಪ್ಪೇಸ್ವಾಮಿ, ಡಾ. ಅ.ಲ.ನರಸಿಂಹನ್, ಜೆ.ಸಿ.ನಾಗ್ಪಾಲ್, ಟಿ.ಎನ್.ರಾಮಚಂದ್ರನ್, ಜೆ.ಫರ್ಗ್ಯುಸನ್, ಸಿ.ಶಿವರಾಮಮೂರ್ತಿ, ಅವರಲ್ಲದೇ ಹಲವಾರು ವಿದ್ವಾಂಸರು ಅಭಿಪ್ರಾಯಪಟ್ಟಿರುವರು.[೨೭] ಬುದ್ಧನ ಜಾತಕ ಕಥೆಗಳು, ಹಾರಾಡುವ ಅಪ್ಸರೆಯರು, ಹೀಗೆ ಬೌದ್ಧಧರ್ಮ ಪ್ರಚಾರವು ಅತ್ಯಂತ ವ್ಯವಸ್ಥಿತವಾಗಿಯೂ ಅದ್ದೂರಿಯಾಗಿಯೂ ನಡೆದು ಬಂದಿತು. ಈ ಹಿನ್ನೆಲೆಯಲ್ಲಿ ರಚನೆಗೊಂಡ ಭಿತ್ತಿಚಿತ್ರಗಳು ಮಹಾರಾಷ್ಟ್ರದ ದಕ್ಷಿಣ ಭಾಗವನ್ನೆಲ್ಲಾ ಆವರಿಸಿದವು. ಅಜಂತಾದ ಭಿತ್ತಿಚಿತ್ರಗಳು ಆಕಾರ, ಆಕೃತಿ, ವರ್ಣಗಾರಿಕೆ ವಿಶಿಷ್ಟ ಸಂಯೋಜನೆಯಿಂದ ಆಧ್ಯಾತ್ಮಿಕ ಮೆರಗಿನೊಂದಿಗೆ ಇಡೀ ಜಗತ್ತಿನ ಕಣ್ಣನ್ನೇ ತನ್ನತ್ತ ನೋಡುವಂತೆ ಮಾಡಿದ್ದು ಭಾರತೀಯರು ಹೆಮ್ಮೆ ಪಟ್ಟುಕೊಳ್ಳಬೇಕಾದುದೇ ಆಗಿದೆ. ದೇಶೀಯ ಕಲಾವಿದರಿಗೆ ಮತ್ತು ಸಾಮಾನ್ಯರಿಗೆಲ್ಲ ಇಂದಿಗೂ "ಅಜಂತಾ ಎಲ್ಲೋರಾಗಳು" ಸಾಂಸ್ಕೃತಿಕವಾಗಿಯೂ ಪವಿತ್ರ ಕ್ಷೇತ್ರವಾಗಿವೆ.

ಅಜಂತೆಯ ಭಿತ್ತಿ ಚಿತ್ರಗಳಲ್ಲಿ ಭಾವಭಂಗಿ, ಮುದ್ರೆಗಳು, ಹಸ್ತಗಳು, ಕೇಶಾಲಂಕರಣ, ಉಡುಗೆ-ತೊಡುಗೆ, ಆಭರಣ, ಗಿಡ, ಮರ, ಬಳ್ಳಿ, ಹೂ ಹಣ್ಣು, ಹಂಸ, ಹಕ್ಕಿಗಳಲ್ಲದೇ ಹಾವು, ಹಲ್ಲಿಗಳು ಇತ್ಯಾದಿ ಮಾನವನ ದೃಷ್ಟಿಗೆ, ಊಹೆಗೆ ತೋರುವ ಎಲ್ಲಾ ಜೀವರಾಶಿಗಳೂ ರಮ್ಯವಾಗಿ ಚಿತ್ರಣಗೊಂಡಿವೆ. ಈ ಚಿತ್ರಗಳಲ್ಲಿ ಸ್ವಭಾವ, ಸುಂದರತೆ, ರಸಭಾವಗಳು ಸ್ಪಷ್ಟವಾಗಿ ವ್ಯಕ್ತವಾಗಿವೆ. ಅಜಂತೆಯ ಚಿತ್ರಕಲಾವಿದರು ಆಂತರಿಕ ಭಾವನಾಲೋಲರಾಗಿ ಪಾರಮಾರ್ಥ ಸಾಧನೆ ಕಡೆಗೆ ಸಾಗಿದ್ದಾರೆ. ಅವರು ರಚಿಸಿರುವ ಚಿತ್ರಗಳ ರೂಪರೇಷೆಗಳು, ರೇಖಾವಿನ್ಯಾಸ, ಬಣ್ಣ, ನಿಲುವು, ಒಲವುಗಳು, ಈ ಚಿತ್ರಗಳಲ್ಲಿನ ಸೌಮ್ಯತೆ, ಪ್ರಸನ್ನತೆ, ಜೀವಂತತೆ, ಸಾಮರಸ್ಯತೆಯನ್ನು, ಕರ-ಚರಣ ವಿನ್ಯಾಸವನ್ನು, ಶರೀರ ಭಂಗಿಗಳನ್ನು, ಮುಖಮುದ್ರೆಗಳನ್ನು ವೀಕ್ಷಿಸಿದರೆ, ಆ ಚಿತ್ರಕಲಾವಿದನ ಕುಂಚದ

೨೭. ಡಾ. ಯಾದಪ್ಪ ಪರದೇಶಿ: ಉತ್ತರ ಕರ್ನಾಟಕದ ಭಿತ್ತಚಿತ್ರಕಲೆ ಒಂದು ಅಧ್ಯಯನ: ಪುಟ-೩೫.

ಕುಶಲತೆ ಅಜೇಯವಾದುದು; ಅಜರಾಮರವಾದುದು. ಇಲ್ಲಿ ಬಳಸಿದ ದೇಶೀಯ ವರ್ಣಗಳು ಇಂದಿಗೂ ಶಕ್ತಿಕುಂದದೇ ಉಜ್ವಲವಾಗಿ ಮೂಡಿಬಂದಿವೆ.

**ದೇವಾಲಯಗಳಲ್ಲಿರುವ ವೀರಶೈವ ಭಿತ್ತಿಚಿತ್ರಕಲೆ :**

ಗುಹಾದೇವಾಲಯಗಳನ್ನು ಭಿತ್ತಿಚಿತ್ರಗಳಿಂದ ಅಲಂಕರಿಸಿದಂತೆ ಕಟ್ಟಲ್ಪಟ್ಟ ದೇವಾಲಯಗಳನ್ನೂ ಭಿತ್ತಿಚಿತ್ರಗಳಿಂದ ಅಲಂಕರಿಸುವ ಹಾಗೂ ಧಾರ್ಮಿಕ ಪ್ರಜ್ಞೆಯನ್ನು ಮೂಡಿಸುವ ಪ್ರಯತ್ನ ಮುಂದುವರೆಯಿತು. ಈಗಲೂ ವರ್ಣಭಿತ್ತಿ ಚಿತ್ರಗಳ ರಚನೆ ಮುಂದುವರೆದಿದೆ. ಭಾರತದ ಉದ್ದಗಲಕ್ಕೂ ಅನೇಕ ದೇವಾಲಯಗಳನ್ನು ಭಿತ್ತಿಚಿತ್ರಗಳಿಂದ ಅಲಂಕರಿಸಿದಂತೆ ಕರ್ನಟಕದಲ್ಲಿಯೂ ದೇವಾಲಯಗಳನ್ನು ಅಲಂಕರಿಸಿರುವರು. ಅದರಲ್ಲೂ ವೀರಶೈವ ಪರಂಪರೆಯ ಭಿತ್ತಿಚಿತ್ರಗಳನ್ನೊಳಗೊಂಡ ದೇವಾಲಯಗಳು ಚಾಲುಕ್ಯರು, ರಾಷ್ಟ್ರಕೂಟರು, ಚೋಳರು, ವಿಜಯನಗರ ಅರಸರ ಅವಧಿಯಲ್ಲಿ ರಚನೆಯಾದ ದೇವಾಲಯಗಳು ಮತ್ತು ವಿಜಯನಗರೋತ್ತರ ದೇವಾಲಯಗಳಲ್ಲಿ ರಚನೆಯಾದ ಶಿಲ್ಪ ಮತ್ತು ಭಿತ್ತಿ ಚಿತ್ರಗಳಿವೆ. ರಾಷ್ಟ್ರಕೂಟರ ಎಲ್ಲೋರಾದಲ್ಲಿನ ಕೈಲಾಸನಾಥ ದೇವಾಲಯ, ತಂಜಾವೂರಿನಲ್ಲಿ ಚೋಳರ-ಬೃಹದೇಶ್ವರ ದೇವಾಲಯ, ಹಂಪೆಯಲ್ಲಿ (ವಿಜಯನಗರ_) ವಿರೂಪಾಕ್ಷೇಶ್ವರ ದೇವಾಲಯ, ಲೇಪಾಕ್ಷಿಯ ವೀರ ಭದ್ರೇಶ್ವರ ದೇವಾಲಯ, ಬಿ.ಕೆ.ಹಳ್ಳಿಯ - ಶ್ರೀ ರಾಮದೇವಾಲಯ, ಮುಡುಕುತೊರೆಯ-ಮಲ್ಲಿಕಾರ್ಜುನ ದೇವಾಲಯ, ಚಾಮರಾಜನಗರದ-ಚಾಮರಾಜೇಶ್ವರ ದೇವಾಲಯ, ಹರದನಹಳ್ಳಿಯ-ದಿವ್ಯಲಿಂಗೇಶ್ವರ ದೇವಾಲಯ, ಹಿರಿಯೂರಿನ-ತೇರುಮಲ್ಲೇಶ್ವರ ದೇವಾಲಯ, ಸಿಬಿಯ-ನರಸಿಂಹದೇವಾಲಯ, ಶಿರಾದ-ರೇವಣಸಿದ್ಧೇಶ್ವವರ ದೇವಾಲಯ ಹೀಗೆ ರಾಜ್ಯದೆಲ್ಲೆಡೆ ದೇವಾಲಯಗಳನ್ನು ಭಿತ್ತಿ ಚಿತ್ರಗಳಿಂದ ಅಲಂಕರಿಸುವುದರೊಂದಿಗೆ ಧಾರ್ಮಿಕ ಪ್ರಜ್ಞೆ ಹಾಗೂ ಹಿರಿಮೆಯನ್ನು ಮೆರೆದಿರುವರು. ಈ ಹಿನ್ನೆಲೆಯಲ್ಲಿ ವೀರಶೈವ ಪರಂಪರೆಯ ಭಿತ್ತಿಚಿತ್ರಗಳೂ ರಚನೆಯಾಗಿದ್ದು ಅವುಗಳನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ.

**ಚಾಲುಕ್ಯರ ಭಿತ್ತಿಚಿತ್ರಕಲೆ:**

ಬೌದ್ಧ ಕಲೆಯು ಮಹಾರಾಷ್ಟ್ರದಲ್ಲಿ ಅದೂ ಕರ್ನಾಟಕದ ಗಡಿಯ ಹತ್ತಿರದಲ್ಲಿಯೇ ಉತ್ಕೃಷ್ಟವಾಗಿ ಬೆಳೆಯುತ್ತಿದ್ದರೂ ಕರ್ನಾಟಕವನ್ನು ಪ್ರವೇಶಿಸಲಿಲ್ಲವೆನ್ನುವುದೂ ಮಹತ್ವದ ವಿಷಯವೇ ಆಗಿದೆ. "ಆರ್ಯರ ಉಪಟಳದಿಂದಾಗಿ ಸಿಂಧೂಕೊಳ್ಳದಿಂದ ಬಂದು ದಕ್ಷಿಣ ಭಾರತದಲ್ಲಿ ನೆಲೆಸಿರುವ ದ್ರಾವಿಡ (ವ್ರಾತ್ಯ)ರು ಕರ್ನಾಟಕ, ಆಂಧ್ರ, ತಮಿಳುನಾಡು, ಕೇರಳರಾಜ್ಯಗಳಲ್ಲಿ ವ್ಯಾಪಿಸಿಕೊಂಡಿದ್ದರು. ಅದರಲ್ಲೂ ಕರ್ನಾಟಕ ಮತ್ತು ತಮಿಳುನಾಡುಗಳಲ್ಲಿ ಧಾರ್ಮಿಕ ಹಾಗೂ ಸಾಂಸ್ಕೃತಿಕವಾಗಿ ಶೈವ ಮತ್ತು ವೀರಶೈವ ಧರ್ಮಗಳು ಅತ್ಯಂತ ಪ್ರಬಲವಾಗಿತ್ತೆಂದು[೨೮] ಈ ಹಿನ್ನೆಲೆಯಲ್ಲಿ ಅಭಿಪ್ರಾಯ ಪಡಬಹುದಾಗಿದೆ.

೨೮ Dr. Radhakrishna Choudhary: The Vratyas in Ancient India Varanasi : Page No. ೫೦.

ಕರ್ನಾಟಕದಲ್ಲಿ ಕ್ರಿಶ. ೬ ರಿಂದ ೮ನೇ ಶತಮಾನದವರೆಗೆ ಚಾಲುಕ್ಯರು ಆಡಳಿತ ನಡೆಸಿದ್ದು ಧಾರ್ಮಿಕ ಹಾಗೂ ಸಾಂಸ್ಕೃತಿಕವಾಗಿಯೂ ಪ್ರಬಲರಾಗಿದ್ದರು. ಮಂಗಳೇಶನು ತನ್ನ ರಾಜಧಾನಿಯಲ್ಲಿ ಅನೇಕ ಗುಹೆಗಳನ್ನು, ದೇವಸ್ಥಾನಗಳನ್ನು ನಿರ್ಮಿಸಿದನು. ಕಲೆಯ ಆರಾಧಕನಾದ ಈ ರಾಜ ಗುಹಾದೇವಾಲಯದಲ್ಲಿ ನಾಲ್ಕನೆಯ ಗುಹೆಃ ಇದನ್ನು ಸಾಮಾನ್ಯವಾಗಿ ವೈಷ್ಣವ ಗುಹೆ ಎಂದು ಕರೆಯುತ್ತಾರೆ. ಇಲ್ಲಿನ ಭವ್ಯವಾದ ಶಿಲ್ಪಗಳು ವಿಷ್ಣುವಿನ ಅವತಾರಗಳಿಗೆ ಸಂಬಂಧಿಸಿದಂತೆ ಇವೆ. ಮಂಗಳೇಶನ ಆಸ್ಥಾನದ ಚಿತ್ರಕಾರರು ಅಜಂತಾ ಗುಹೆಗಳನ್ನು ಚಿತ್ರಿಸಿದ ಪ್ರಾಚೀನ ವಾಕಾಟಕ ಚಿತ್ರಗಾರರ ಸಂಪ್ರದಾಯಗಳನ್ನು ಮುಂದುವರಿಸುತ್ತಿರುವದನ್ನು ತಿಳಿಯಲು ಸಹಾಯಕವಾಗುವಂತೆ ಬಾದಾಮಿಯ ಶಾಸನವೊಂದರಲ್ಲಿ ಬರೆಯಲಾಗಿದೆ. ಬಾದಾಮಿಯ ಚಿತ್ರಗಳು ಪ್ರಾಚೀನ ಪದ್ಧತಿಯ ಸಂಪ್ರದಾಯದ ಮುಂದುವರಿಕೆಯನ್ನು ಬಾದಾಮಿಯ ಚಾಲುಕ್ಯರು ಹೊಂದಿದ್ದರೆಂಬ ಅಂಶವನ್ನು ಸ್ಪಷ್ಟಪಡಿಸುತ್ತವೆ. ಬಾರಿಗುಮ್ಮಟದ ಮೇಲ್ಛಾವಣಿಯ ಮೇಲಿರುವ ಈ ಚಿತ್ರಗಳನ್ನು ಕಂಡುಹಿಡಿದ ಕೀರ್ತಿ ಸ್ಟೆಲ್ಲಾ ಕ್ರಮ್ರಿಶ್ಚ್ ಅವರಿಗೆ ಸಲ್ಲುತ್ತದೆ. ಪ್ರಾಚೀನ ಬೌದ್ಧ ಮತದ ಭಿತ್ತಿಚಿತ್ರಗಳನ್ನು ಅಜಂತೆಯಲ್ಲಿಯೂ ಜೈನ ಮತದ ಭಿತ್ತಿ ಚಿತ್ರಗಳನ್ನು ಸಿತ್ತನ್ ವಾಸಲ್‌ದಲ್ಲಿರುವಂತೆ ವೈಷ್ಣವ ಗುಹೆಯಲ್ಲಿಯ ಚಿತ್ರಗಳು ಯಾವ ಧರ್ಮಕ್ಕೂ ಸಂಬಂಧಿಸಿಲ್ಲವಾದರೂ ಪ್ರಾಚೀನ ಚಿತ್ರಕಲಾ ಶೈಲಿ, ತಂತ್ರಗಳನ್ನು ಮುಂದುವರೆಸಿಕೊಂಡು ಬಂದಿರುವುದಂತೂ ಸ್ಪಷ್ಟವಾಗುತ್ತದೆ. ಈ ಗುಹೆಯ ಶಿಲ್ಪಗಳು ವಿಷ್ಣುವಿನ ಅವತಾರಗಳಿಗೆ ಸಂಬಂಧಿಸಿ ರೂಪುಗೊಂಡರೆ ಭಿತ್ತಿಚಿತ್ರಗಳು ಮಾತ್ರ ಯಾವುದೇ ಧರ್ಮವನ್ನು ಪ್ರತಿಪಾದಿಸುವುದಿಲ್ಲ. ಈ ಚಿತ್ರದಲ್ಲಿ ಅರಮನೆಯ ದೃಶ್ಯದಲ್ಲಿ ರಾಜ-ರಾಣಿಯರು ಸಿಂಹಾಸನದಲ್ಲಿ ಆಸೀನರಾಗಿದ್ದು ಹಿಂದುಗಡೆ ಅವರ ಪರಿಚಾರಿಕೆಯರಿದ್ದು ಎದುರು ಗಡೆಯಲ್ಲಿ ಕಾಲ ಕೆಳಗೆ ಬದಿಯಲ್ಲಿ ಅನೇಕರು ಕುಳಿತಿದ್ದು, ಎದುರಿಗೆ ಎಡಗಡೆಯಲ್ಲಿ ನರ್ತಕಿಯರು, ನರ್ತನಕಾರರು ನೃತ್ಯ ಮಾಡುತ್ತಿರುವರು. ಅಲಂಕಾರಯುತವಾದ ಮುತ್ತು ರತ್ನಗಳಿಂದ ಕೂಡಿದ ಕಂಠಹಾರಗಳನ್ನು ಕೊರಳಲ್ಲಿ ನೋಡಬಹುದಾಗಿದೆ. ಒಟ್ಟಾರೆ ಈ ದೃಶ್ಯದಲ್ಲಿ ವೈಭವಯುತವಾಗಿ ಅಲಂಕಾರಗೊಂಡಿರುವುದನ್ನು ಕಾಣಬಹುದಾಗಿದೆ.[೨೯] ಚಿತ್ರಿತ ಶೈಲಿಯು ಅಜಂತಾದ ಭಿತ್ತಿಚಿತ್ರಗಳ ಮುಂದುವರೆದ ಭಾಗವೇ ಇದು ಎನ್ನುವುದರಲ್ಲಿ ಅನುಮಾನವೇ ಇಲ್ಲ. ಆದರೆ ಧಾರ್ಮಿಕ ಹಿನ್ನೆಲೆಯಲ್ಲಿ ಚಿತ್ರಗಳು ಕಂಡು ಬಂದಿದ್ದರೂ ಶಿಲ್ಪ ವಾಸ್ತುಶಿಲ್ಪಗಳಲ್ಲಿ ಶೈವ (ವೀರಶೈವ) ವೈಷ್ಣವ ಧರ್ಮಗಳಿಗೇ ಸೀಮಿತಗೊಂಡಿದೆ. ಸ್ವಲ್ಪ ಮಟ್ಟಿಗೆ ಜೈನಧರ್ಮವೂ ಬೆಳೆಯಲು ಕಾರಣರಾದರು. ಇವರ ಅವಧಿಯಲ್ಲಿ ಧರ್ಮದ ತಾತ್ವಿಕತೆಯ ಹಿನ್ನೆಲೆಯಲ್ಲಿ "ಬಾದಾಮಿ, ಐಹೊಳೆ, ಪಟ್ಟದಕಲ್ಲಿನಲ್ಲಿ ರಚನೆಗೊಂಡ ಶಿಲ್ಪ ವಾಸ್ತುಶಿಲ್ಪಗಳು ನಾಗರ, ವೇಸರ, ದ್ರಾವಿಡ ಸಂಸ್ಕೃತಿಗಳ ಸಂಗಮವಾಗಿದ್ದು ಇವುಗಳನ್ನು ದಕ್ಷಿಣ ಭಾರತದ ಶಿಲ್ಪಕಲಾ ತೊಟ್ಟಿಲು" ಎಂದು ಕರೆಯುವರು. ಶಿಲ್ಪ ವಾಸ್ತುಶಿಲ್ಪಗಳ ಕೇಂದ್ರವಾದಂತೆ ವರ್ಣಚಿತ್ರಕಲೆ ಅಷ್ಟೊಂದು ಬೆಳೆದು ಬಂದಿಲ್ಲವಾದರೂ ಚಿತ್ರತ ಶೈಲಿ, ವರ್ಣ ವಿನ್ಯಾಸ, ಸಂಯೋಜನಾ ವಿನ್ಯಾಸಗಳು ಉತ್ತಮವಾಗಿ ಮೂಡಿ ಬಂದಿವೆ. "ಅಜಂತೆಯು ಚಿತ್ರಕಲೆಗೆ ಪವಿತ್ರ ಕ್ಷೇತ್ರವಾದಂತೆ, ಬಾದಾಮಿ, ಐಹೊಳೆ, ಪಟ್ಟದಕಲ್ಲು ಶಿಲ್ಪ ವಾಸ್ತು ಶಿಲ್ಪಗಳಿಗೆ ಪವಿತ್ರ ಕ್ಷೇತ್ರವಾಗಿ ರೂಪುಗೊಂಡಿವೆ".

---

೨೯. ಸಿ.ಶಿವರಾಮಮೂರ್ತಿ: (ಅನು) ಪಿ.ಆರ್.ತಿಪ್ಪೇಸ್ವಾಮಿ: ಭಾರತೀಯ ಚಿತ್ರಕಲೆ: ಪುಟ ೪೭.

ವೀರಶೈವ ಪರಂಪರೆಯನ್ನು ಪ್ರೀತಿಸುವ ಚಾಲುಕ್ಯರ ಅತ್ಯಂತ ಪ್ರಭಾವಶಾಲಿ ದೊರೆ ಎರಡನೆಯ ಪುಲಕೇಶಿಯು ಬಲಿಷ್ಠನೂ, ರಾಜಕೀಯ ಮುತ್ಸದ್ದಿಯೂ, ಧರ್ಮನಿಷ್ಠನೂ ಆಗಿದ್ದನು. ಚಿತ್ರಶಿಲ್ಪ ವಾಸ್ತುಶಿಲ್ಪಗಳ ಕೀರ್ತಿಯನ್ನು ದಶದಿಕ್ಕುಗಳಿಗೂ ಪಸರಿಸುವಂತೆ ಮಾಡಿದ ಈ ಚಾಲುಕ್ಯರು ಅತ್ಯಂತ ಪ್ರಭಾವಿಶಾಲಿಗಳಾಗಿದ್ದರು.

ಅಜಂತೆಯಲ್ಲಿ ಬೌದ್ಧ ಧರ್ಮದ ಪ್ರಬಲ ಪ್ರಭಾವದೊಂದಿಗೆ ರಚನೆಯಾದ ಭಿತ್ತಿಚಿತ್ರಗಳ ಮಧ್ಯೆ ಚಾಲುಕ್ಯರ ದೊರೆ ಎರಡನೆಯ ಪುಲಕೇಶಿಯು ಸ್ವತಃ 'ಪರಮೇಶ್ವರ'ನೆಂಬ ಬಿರುದನ್ನು ಪಡೆದಿರುವುದು. ಕರ್ನಾಟಕದ ಈ ದೊರೆಗೆ ಸ್ಥಳೀಯವಾಗಿರುವ ವೀರಶೈವ ಧರ್ಮವು ಪ್ರಬಲವಾಗಿತ್ತು ಎಂಬುದನ್ನು ಸೂಚಿಸುತ್ತದೆ. ಅಜಂತಾದ ಈ ಕಲಾಕೃತಿಯಲ್ಲಿ ಇರಾಣದ ರಾಯಭಾರಿಗಳು ಇವನ ಒಡ್ಡೋಲಗಕ್ಕೆ ಕಪ್ಪು ಕಾಣಿಕೆಯನ್ನು ಸಲ್ಲಿಸಲು ಬಂದಿದ್ದರೆಂದೂ ಅಲ್ಲಿಯವರೆಗೆ ಇವನ ಪ್ರಭಾವವಿತ್ತೆಂದೂ ತಿಳಿದುಬರುತ್ತದೆ. ಇನ್ನೊಂದು ಗುಹೆಯಲ್ಲಿ ರಾಜವಿಲಾಸವೆಂಬ ನೌಕೆಯ ಚಿತ್ರವಿದ್ದು ಅದರಲ್ಲೂ ಬರುವ ಚಿತ್ರಿತ ಪುಲಕೇಶಿಯ ಮುಖವಿದೆ ಎಂದು ಗುರುತಿಸಲಾಗಿದೆ.

**೧. ಬಾದಾಮಿಯ ಭಿತ್ತಿ ಚಿತ್ರದ ಲಕ್ಷಣಗಳು :**

* ಈ ಚಿತ್ರಗಳಲ್ಲಿ ಮುಖಗಳ ಆಕಾರಗಳನ್ನು ದುಂಡಾಗಿ ಅಥವಾ ಅಂಡಾಕಾರವಾಗಿ ಚಿತ್ರಿಸಲಾಗಿದೆ.
* ಈ ಚಿತ್ರಗಳಲ್ಲಿ ಆಕೃತಿಗಳು ನೀಳವಾಗಿದ್ದು ಕೆನ್ನೆ, ಗಲ್ಲ, ತುಟಿ, ಸ್ತನಗಳು ಹಾಗೂ ಕಣ್ಣುಗಳನ್ನು ಉತ್ಪ್ರೇಕ್ಷಿಸಿ ತೋರಿಸಲಾಗಿದೆ.
* ಒಂದೇ ವರ್ಣದ ಬೇರೆ ಬೇರೆ ಛಾಯೆಗಳನ್ನು ಬಳಸಿರುವುದು ವಿರಳ. ಆದರೆ ಛಾಯೆ ಬೇಕಾದಲ್ಲಿ ಬೇರೆ ಬೇರೆ ವರ್ಣಗಳನ್ನು ಬಳಸಿರುವುದು ಕಂಡುಬರುತ್ತದೆ.
* ಈ ಚಿತ್ರ ಕಲಾಕೃತಿಗಳಿಗೆ ಅತ್ಯಂತ ಸೂಕ್ಷ್ಮವಾದ ಮತ್ತು ಅತ್ಯಂತ ನವಿರಾದ ಬಾಹ್ಯರೇಖೆಗಳನ್ನು ಎಳೆದಿರುವುದು ಕಂಡುಬರುತ್ತದೆ.
* ಈ ಚಿತ್ರಗಳಲ್ಲಿ ಬರುವ ವ್ಯಕ್ತಿ ಚಿತ್ರಗಳಿಗೆ ನೈಸರ್ಗಿಕ ವರ್ಣಗಳನ್ನು ಬಳಸದೇ ನೀಲಿ, ಹಸಿರು, ಕಂದು ಹಾಗೂ ತಿಳಿಗೆಂಪು ವರ್ಣಗಳನ್ನು ಉಜ್ವಲವಾಗಿ ಬಳಸಿರುವರು.
* ಸಮೂಹ ಚಿತ್ರಗಳಲ್ಲಿ ಆಕೃತಿಗಳ ಜೋಡಣೆಯಲ್ಲಿ ಸ್ಥಳಾವಕಾಶದ ಬಳಕೆ ವಿಶಿಷ್ಟವಾಗಿದೆ. ಅಜಂತೆಗಿಂತಲೂ ವಿಭಿನ್ನವಾಗಿ ಮೂಡಿಬಂದಿದೆ.
* ಈ ಚಿತ್ರಗಳಲ್ಲಿ ವರ್ಣವಿನ್ಯಾಸ, ರೇಖಾಲಾಲಿತ್ಯ, ಹಾವಭಾವ, ನಿಲುವು, ಭಂಗಿಗಳಲ್ಲಿ ಪ್ರಮಾಣಬದ್ಧತೆಗಳು ಕಂಡುಬರುತ್ತವೆ.

**ರಾಷ್ಟ್ರಕೂಟರ ಭಿತ್ತಿಚಿತ್ರಕಲೆ:**

೮ ರಿಂದ ೧೦ನೆಯ ಶತಮಾನದವರೆಗೆ ಆಳಿದ "ರಾಷ್ಟ್ರಕೂಟ ದೊರೆ ಕೃಷ್ಣನ" ಅವಧಿಯಲ್ಲಿ ಎಲ್ಲೋರಾದಲ್ಲಿ ಬೃಹತ್ ಬಂಡೆಯೊಂದನ್ನು ಕೊರೆದು "ಕೈಲಾಸನಾಥ ದೇವಾಲಯ"ವನ್ನು ನಿರ್ಮಿಸಲಾಯಿತು. ಕರ್ಕ ಸುವರ್ಣ ವರ್ಷನ ಬರೋಡಾ ದತ್ತಿ ಶಾಸನದಲ್ಲಿ ಈ ಸ್ಮಾರಕದ ವೈಭವವನ್ನು ಹೀಗೆ ವಿವರಿಸಲಾಗಿದೆ– "ಆಕಾಶದಲ್ಲಿ ತಮ್ಮ ದಿವ್ಯವಾದ ರಥದಲ್ಲಿ ಓಡಾಡುವ ವಿಸ್ಮಯ ಭರಿತರಾದ ದೇವತೆಗಳು ಏಲಾಪುರದ ಬೆಟ್ಟದ ಮೇಲಿರುವ ಅದ್ಭುತವಾದ ದೇವಾಸ್ಥಾನದ ಕಡೆ ನೋಡಿದಾಗ ಚಕಿತರಾದ ಅವರು, ನಿಜವಾಗಿಯೂ ಇದು ಶಿವನ ಆವಾಸಸ್ಥಾನವೇ ಹೊರತು ಕೃತಕ ಕಟ್ಟಡವಲ್ಲ ಎಂದಾದರೂ ಇದಕ್ಕಿಂತ ಸುಂದರವಾದ ವಸ್ತುವನ್ನು ಕಾಣಲಿಕ್ಕೆ ಸಾಧ್ಯವೇ? ಎನ್ನುತ್ತಾರೆ. ಅದನ್ನು ಸೃಷ್ಟಿಸಿದ ಶಿಲ್ಪಿಯೂ ಕೂಡಾ ಅಂತಹ ಕೆಲಸವನ್ನು ಮತ್ತೆ ನಿರ್ವಹಿಸಲು ಸಾಧ್ಯವಾಗುವುದಿಲ್ಲ. ಆಹಾಃ ನನ್ನಿಂದ ಹೇಗೆ ಸಾಧ್ಯವಾಯಿತು? ಎಂದು ಆಶ್ಚರ್ಯಪಟ್ಟಿರುವನು. ಈ ಕಲಾವಿದನನ್ನು ರಾಜನು ಹಾಡಿ ಹೊಗಳಿರುವನು[೩೦]

ಪ್ರತಿಮಾ ಲಕ್ಷಣವನ್ನು ಹೊಂದಿದ ಶಿವಪಾರ್ವತಿಯರು ವೇದಿಕೆಯ ಮೇಲಿದ್ದು ಇಡೀ ದೇವಗಣವೇ ಸೇರಿರುವ ಸಮೂಹಶಿಲ್ಪಗಳು, ಲಿಂಗವನ್ನು ಪೂಜಿಸುವ ಶಿವಪಾರ್ವತಿಯರು, ನಟರಾಜನ ಮೂರ್ತಿ, ಸಮೂಹ ಶಿಲ್ಪಗಳು ಚಿತ್ರದಲ್ಲಿಯಂತೆ ಅತ್ಯಂತ ಪ್ರಮಾಣಬದ್ಧವಾಗಿ ಶಾಸ್ತ್ರಬದ್ಧವಾಗಿ ಮೂಡಿ ಬಂದಿದೆ. ಎಲ್ಲೋರಾದ ಕೊನೆಯ ಗುಹೆ ಜೈನರದ್ದಾಗಿದ್ದು ಗುಹೆಯ ಮೇಲ್ಛಾವಣಿಯಲ್ಲಿ ಬಳ್ಳಿಗಳು ಪ್ರಾಣಿಗಳು ಪಕ್ಷಿಗಳಿಂದ ಕೂಡಿದ ನಕ್ಷೆಗಳು ಅಲಂಕಾರಿಕವಾಗಿ ಸುಂದರವಾಗಿ ಮೂಡಿ ಬಂದಿವೆ.

ನಿಧಾನವಾಗಿ ಚಲಿಸುವ ಮೋಡಗಳು, ಅವುಗಳ ಮದ್ಯದಲ್ಲಿ ತಮ್ಮ ಸಂಗಾತಿಗಳೊಂದಿಗೆ ಹಾರುತ್ತಿರುವ ವಿದ್ಯಾಧರರು, ಸಂಗೀತಗಾರರು, ಇವೆಲ್ಲ ಚಾಲುಕ್ಯರ ಚಿತ್ರ ರಚನೆಯ ಮುಂದುವರೆದ ಭಾಗವೇ ಆಗಿದ್ದರೂ ಆಕಾರ, ಆಕೃತಿ, ವರ್ಣಗಾರಿಕೆ ಸಂಯೋಜನೆಯಲ್ಲಿ ಜೋಡಣಾ ರೀತಿಯು ವಿಶಿಷ್ಟವಾಗಿದೆ. ಸಣ್ಣ ಪಟ್ಟಿಕೆಗಳನ್ನು ಮಾಡಿಕೊಂಡು ಕಿರುರೂಪದ ಭಿತ್ತಿಚಿತ್ರಗಳಿಗೆ ನಾಂದಿಯಾಗಿವೆ. ಜೈನ ಕಲೆಯು ಕರ್ನಾಟಕದಲ್ಲಿ ಹೊಯ್ಸಳರ ಮೂಲಕ ಪ್ರಾರಂಭವಾಗಿದ್ದೇ ಈ ಭಿತ್ತಿಚಿತ್ರಗಳ ಪ್ರೇರಣೆಯಿಂದಾಗಿ ಎಂದು ಅಭಿಪ್ರಾಯಪಡಬಹುದಾಗಿದೆ. ಈವರೆಗೂ ಭಿತ್ತಿ ಚಿತ್ರಗಳು ದೊಡ್ಡ ದೊಡ್ಡ ಅಂಕಣದಲ್ಲಿ ರಚನೆಯಾಗುತ್ತಿದ್ದು ರಾಷ್ಟ್ರಕೂಟರು ಕಿರುರೂಪಚಿತ್ರಗಳಿಗೆ ಚಾಲನೆ ನೀಡಿರುವುದು ಗಮನಾರ್ಹವಾದ ಅಂಶವಾಗಿದೆ.

ಎಲ್ಲೋರಾದ ಭಿತ್ತಿಚಿತ್ರಗಳನ್ನು ಕೈಲಾಸ್, ಲಂಕೇಶ್ವರ, ಇಂದ್ರಸಭಾ ಮತ್ತು ಗಣೇಶ ದೇವಾಲಯಗಳಲ್ಲಿ ಕಾಣಬಹುದು. ಕೈಲಾಸ ದೇವಾಲಯದ ಎರಡನೆಯ ಅಂತಸ್ತಿನ ಮುಖಮಂಟಪದ ಒಳಮಾಳಿಗೆಯು ಈ ಭಿತ್ತಿ ಚಿತ್ರಗಳಿಂದ ಬಹುಪಾಲು ಆವರಿಸಿಕೊಂಡಿದೆ. ಈ ಕಲಾಕೃತಿಗಳಲ್ಲಿ ತೀಕ್ಷ್ಣ ಮುಖಭಾವ, ಉದ್ದವಾದ

---

೩೦. ಸಿ.ಶಿವರಾಮಮೂರ್ತಿ: (ಅನು) ಪಿ.ಆರ್.ತಿಪ್ಪೇಸ್ವಾಮಿ: ಭಾರತೀಯ ಚಿತ್ರಕಲೆ": ಪುಟ ೬೦.

ಚೂಪಾದ ಮೂಗುಗಳನ್ನು ಹೊಂದಿದ್ದು, ಮುಖದಿಂದ ಹೊರಬಂದಿರುವ ಕಣ್ಣುಗಳು ಕಂಡುಬರುತ್ತವೆ. ಇವು ರಾಷ್ಟ್ರಕೂಟರ ಭಿತ್ತಿ ಚಿತ್ರಗಳ ಮೇಲೆ ವೈಶಿಷ್ಟ್ಯವಾಗಿ ಪ್ರಥಮಭಾರಿಗೆ ಈ ಚಿತ್ರಲಕ್ಷಣಗಳನ್ನು ಮೂಡಿಸಿರುವರೆಂದು ತಿಳಿದುಬರುತ್ತದೆ.[೩೧] ಈ ಭಿತ್ತಿಚಿತ್ರಗಳನ್ನು ಶೈವ ಮತ್ತು ವೀರಶೈವ ಧರ್ಮಕ್ಕೆ ಸಂಬಂಧಿಸಿದ ಪುರಾಣಗಳನ್ನು ಆಧಾರವಾಗಿಟ್ಟುಕೊಂಡು ಚಿತ್ರಿಸಿರುವರು. ವೈಷ್ಣವೀ ಚಿತ್ರಗಳೂ ಇವೆ. ಆದರೂ ವೀರಶೈವಧರ್ಮಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಿರುವುದು ಕಂಡುಬರುತ್ತದೆ. ನಂತರ ಬಂದ ಪಲ್ಲವರು, ಪಾಂಡ್ಯರು, ಚೋಳರು ಈ ಕಲೆಯನ್ನು ಪ್ರೋತ್ಸಾಹಿಸಿದರು. ಈ ರಾಷ್ಟ್ರಕೂಟರ ಎಲ್ಲೋರಾದ ಚಿತ್ರ, ಶಿಲ್ಪ, ವಾಸ್ತುಶಿಲ್ಪಗಳನ್ನು ಕರ್ನಾಟಕದ ಕಲಾವಿದರು ಪ್ರಮುಖ ಆಧಾರವಾಗಿ ಬಳಸಿಕೊಂಡಿರುವುದು ತಿಳಿದುಬರುತ್ತದೆ.

**ಚೋಳರ ವೀರಶೈವ ಭಿತ್ತಿ ಚಿತ್ರಗಳು**

ಕ್ರಿ.ಶ. ೯ ರಿಂದ ೧೩ನೇ ಶತಮಾನದವರೆಗೆ ಆಳಿದ ಚೋಳರು ಶೈವಭಕ್ತರಾಗಿದ್ದರು. ವಿಜಯಾಲಯನ ಮಗ ಹಾಗೂ ಮೊಮ್ಮಗನಾದ ಆದಿತ್ಯ ಮತ್ತು ಪರಾಂತಕರು ದೇವಾಲಯಗಳ ಪ್ರಸಿದ್ಧ ನಿರ್ಮಾಪಕನಾಗಿದ್ದನು ಚಿದಂಬರಂನಲ್ಲಿರುವ ದೇವಾಲಯಕ್ಕೆ ಶಿವನ ಭಕ್ತನಾದ ಪರಾಂತಕನು ಚಿನ್ನದ ತಗಡನ್ನು ಹೊದಿಸಿದನು. ತಂಜಾವೂರಿನ ಬೃಹದೇಶ್ವರ ದೇವಸ್ಥಾನವು ಚೋಳರ ಕಾಲದ ಅತ್ಯಂತ ಭವ್ಯವಾದ ಸ್ಮಾರಕವಾಗಿದೆ. ಚೋಳಪರಂಪರೆಯಲ್ಲಿಯೇ ಅತ್ಯಂತ ಪರಾಕ್ರಮಿಯಾದ ರಾಜರಾಜನು ತನ್ನ ಆಳ್ವಿಕೆಯ ೨೫ನೆಯ ವರ್ಷದಲ್ಲಿ ತನ್ನ ಹೆಸರನ್ನೇ ಹೊಂದಿದ ರಾಜರಾಜೇಶ್ವರ ಮುಡಯಾರ್ ಎಂಬ ಶ್ರೇಷ್ಠವಾದ ಮತ್ತು ಭವ್ಯವಾದ ಶಿವನ ದೇವಾಲಯ ನಿರ್ಮಿಸಿದನು. ರಾಜರಾಜನು ಎಷ್ಟರ ಮಟ್ಟಿಗೆ ಶಿವನಿಗೆ ತನ್ನನ್ನು ತಾನು ಅರ್ಪಣೆ ಮಾಡಿಕೊಂಡಿದ್ದನೆಂದರೆ "ಶಿವಪಾದಶೇಖರ" ಎಂಬ ವಿಶೇಷಣದಿಂದ ಪ್ರಸಿದ್ಧನಾಗಿದ್ದನು.

ತಂಜಾವೂರಿನಲ್ಲಿರುವ ಬೃಹದೇಶ್ವರ ದೇವಸ್ಥಾನವೇ ಪ್ರಾಚೀನ ಚೋಳ ಚಿತ್ರಕಲಾವಿದರ ಕಲಾಸಂಪತ್ತಿನ ಆಗರವಾಗಿದೆ. ಮುಖ್ಯ ದೇವಸ್ಥಾನದ ಸುತ್ತಲೂ ಕತ್ತಲಿನಿಂದ ಕೂಡಿದ್ದು ಅಲ್ಲಿ ಚಿತ್ರಗಳಿವೆ. ಶ್ರೀ ಎಸ್.ಕೆ.ಗೋವಿಂದಸ್ವಾಮಿ ಅವರು ಈ ಚಿತ್ರಗಳನ್ನು ಕಂಡು ಹಿಡಿದ ಮೇಲೆ ದಕ್ಷಿಣ ಭಾರತದ ಹೊಸ ಅಧ್ಯಾಯವೇ ಪ್ರಾರಂಭವಾಗಿದೆ. ಈ ಗುಡಿಯ ಪಶ್ಚಿಮ ಭಾಗದ ಇಡೀ ಗೋಡೆಯು ತನ್ನ ಸೊಂಟ ಮತ್ತು ಬಲಮೊಣಕಾಲಿಗೆ ಅಡ್ಡಲಾಗಿ "ಯೋಗಪಟ್ಟ" ಅಥವಾ "ಪರ್ಯಂಕ ಬಂಧ"ವನ್ನು ಕಟ್ಟಿದ್ದು ಇಬ್ಬರು ಅಪ್ಸರೆಯರ ನೃತ್ಯವನ್ನು ಪ್ರಶಾಂತಚಿತ್ತನಾಗಿ ನೋಡುತ್ತಾ ಯೋಗಿಯ ಭಂಗಿಯಲ್ಲಿ ಕುಳಿತಿರುವ ಶಿವನ ಯೋಗ ದಕ್ಷಿಣಾಮೂರ್ತಿಯ ದೊಡ್ಡ ಚಿತ್ರಪಟವನ್ನು ಹೊಂದಿದೆ.[೩೨]

---

೩೧. ಪ್ರೊ. ಎಂ. ಎಚ್. ಕೃಷ್ಣಯ್ಯ : ಶೃಂಗಾರ ಲಹರಿ : ಪುಟ ೫೦.
೩೨. ಸಿ.ಶಿವರಾಮಮೂರ್ತಿ: (ಅನು) ಪಿ.ಆರ್.ತಿಪ್ಪೇಸ್ವಾಮಿ: ಭಾರತೀಯ ಚಿತ್ರಕಲೆ : ಪುಟ ೬೩, ೬೪.

**ನಟರಾಜನ ಚಿತ್ರ :**

ಈ ನಟರಾಜನ ಕಲ್ಪನೆ ಸಿಂಧೂ ನಾಗರಿಕತೆಯನ್ನು ಹೊಂದಿದ ಸುಮಾರು ೫೦೦೦ ವರುಷಗಳ ಹಿಂದೆ ಹರಪ್ಪಾದಲ್ಲಿ ದೊರೆತ ಆಕೃತಿಯಂತೆ, ಗಂಡು ನೃತ್ಯಾಕಾರದಲ್ಲಿ ನಿಂತ ಭಂಗಿಯಿದೆ. ಆತ ತನ್ನ ಬಲಗಾಲ ಮೇಲೆ ನಿಂತಿದ್ದು, ಎಡಗಾಲನ್ನು ಕೊಂಚ ಮೇಲಕ್ಕೆ ಎತ್ತಿಕೊಂಡಿರುವ ನಟರಾಜನ ಮೂರ್ತಿಯ ಮೂಲ ಸೆಲೆಯಾಗಿರಬಹುದೆಂದು ನಂಬಲಾಗಿರುವ ನಟರಾಜನ ಶಿಲ್ಪ ಹಾಗೂ ಚಿತ್ರಗಳು ಚೋಳರ ಅವಧಿಯಲ್ಲಿ ಕಂಡುಬರುತ್ತಿವೆ. ಭಾರತದ ದಾಕ್ಷಿಣಾತ್ಯ ಕಲೆಯ ಪ್ರಾವೀಣ್ಯಕ್ಕೆ ಒಂದು ದ್ಯೋತಕವೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿರುವರು.

ಹೀಗೆ ಅಜಂತಾದಿಂದಲೇ ಕನ್ನಡದ ಚಿತ್ರಪರಂಪರೆ ಪ್ರಾರಂಭವಾಗಿದೆ.

ಶೈವ ಪ್ರಧಾನವಾದ ಪಟ್ಟದಕಲ್ಲನ್ನು ಶಿಲ್ಪ ವಾಸ್ತುಶಿಲ್ಪ ದೇವಾಲಯಗಳಿಗೆ ಈಗಲೂ ದಕ್ಷಿಣದ ಕಾಶಿ ಎಂದು ಕರೆಯುತ್ತಾರೆ. ಶೈವ ಪ್ರಧಾನವಾದ ಶಿಲ್ಪ ವಾಸ್ತುಶಿಲ್ಪಗಳಿಲ್ಲಿವೆ.

ಹೀಗೆ ಶಿವನಿಗೆ ಸಂಬಂಧಿಸಿದಂತೆ ಹಲವಾರು ಭಿತ್ತಿಚಿತ್ರಗಳನ್ನು ಬೃಹದೇಶ್ವರ ದೇವಸ್ಥಾನದ ಉತ್ತರ ಮತ್ತು ಪಶ್ಚಿಮದ ಗೋಡೆಗಳ ಮೇಲೆ ರಚಿಸಲಾಗಿದೆ. ಚೋಳರ ವರ್ಣಚಿತ್ರಗಳು, ಚೋಳರ ಕಾಲದ ಜೀವನ, ವೈಭವ, ಮತ್ತು ಸಂಸ್ಕೃತಿಯನ್ನು ನಮಗೆ ತಿಳಿಸಿಕೊಡುತ್ತವೆ.

ದಕ್ಷಿಣ ಕರ್ನಾಟಕದಲ್ಲಿ ಅಂದರೆ ಮೈಸೂರಿನ ಶ್ರೀ ಸುತ್ತೂರು ಮಠಕ್ಕೆ ದಾನದತ್ತಿಯನ್ನು ನೀಡಿದ್ದು ಈ ಮಠದ ಸ್ವಾಮೀಜಿಯವರು ಚೋಳರಾಜನ ಗುರುಗಳಾಗಿದ್ದುದು ತಿಳಿದುಬರುತ್ತದೆ.

**೬. ವಿಜಯನಗರ ಭಿತ್ತಿಚಿತ್ರಕಲೆ:**

ಕ್ರಿ.ಶ. ೧೩ ರಿಂದ ೧೬ ನೆಯ ಶತಮಾನದ ವರೆಗೆ ಈ ವಿಜಯನಗರ ಆಡಳಿತವು ದಕ್ಷಿಣ ಭಾರತದಾದ್ಯಂತ ಅತ್ಯಂತ ಪ್ರಬಲವಾದ ಶಕ್ತಿಯಾಗಿ ಪರಿಣಮಿಸಿತು. ಭಾರತೀಯ ಸಂಸ್ಕೃತಿಗೆ ತೀರ ಭಿನ್ನವಾದ ಇಸ್ಲಾಂ ಸಂಸ್ಕೃತಿ ಭಾರತವನ್ನು ಪ್ರವೇಶಿಸಿದಾಗ ಭಾರತೀಯ ಸಂಸ್ಕೃತಿಯ ಅಸ್ತಿತ್ವವೇ ನಾಮಾವಶೇಷವಾಗಬೇಕಿತ್ತು. ಮದ್ಯ ಪ್ರಾಚ್ಯ ರಾಷ್ಟ್ರಗಳನ್ನು ಇಸ್ಲಾಂ ಕಬಳಿಸಿದಂತೆ ಭಾರತವನ್ನೂ ಕಬಳಿಸಬೇಕಾಗಿತ್ತು. ಆದರೆ ಈ ಕಾಲದಲ್ಲಿ ಭಾರತ ತನ್ನ ವೈಶಿಷ್ಟ್ಯವನ್ನು ಕಾಯ್ದುಕೊಂಡಿತು. ದಕ್ಷಿಣ ಭಾರತದ ಶಿಲ್ಪ ಚಿತ್ರಕಲೆಗಳು ಮುಸ್ಲೀಂ ಸಂಸ್ಕೃತಿಗೆ ವಶವಾಗಲಿಲ್ಲ. ಮುಸ್ಲೀಮರ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಪ್ರಭಾವವನ್ನು ವಿಜಯನಗರ ಸಾಮ್ರಾಜ್ಯವು ಎದುರಿಸಿ ಅಪ್ಪಟ ಹಿಂದೂ ರಾಷ್ಟ್ರದ ಸಂಸ್ಕೃತಿಯನ್ನು ಪರಿಪೋಷಿಸಿಕೊಂಡು ಬಂದಿತು. ದಕ್ಷಿಣ ಭಾರತದ ಸಂಗೀತ, ಶಿಲ್ಪ, ವಾಸ್ತುಶಿಲ್ಪ ಚಿತ್ರಗಳ ಮೇಲೆ ಇಸ್ಲಾಂ ಯಾವ ಪ್ರಭಾವವನ್ನು ಬೀರಲು ಸಾಧ್ಯವಾಗಲಿಲ್ಲ.[೩೩] ವಿಜಯನಗರ ಸಾಮ್ರಾಜ್ಯವು ಭಾರತೀಯ ಇತಿಹಾಸ ಮತ್ತು ಧಾರ್ಮಿಕ ಸಂಸ್ಕೃತಿಯ ಕೊನೆಯ ಅಂಕದ ಭವ್ಯ ಸ್ವರೂಪವನ್ನು

೩೩. ಸಂ. ಡಿ.ವಿ.ಜಿ.: ಸಂಸ್ಕೃತಿ : ಲೇಖನ: ಸಂಸ್ಕೃತಿ ಮತ್ತು ಲಲಿತ ಕಲೆಗಳು: – ಅ.ನ.ಕೃಷ್ಣರಾಯ್: ಪುಟ ೮೦.

ಪ್ರತಿನಿಧಿಸುತ್ತದೆ. ವಿಜಯನಗರ ಅರಸರಲ್ಲಿಯೇ ಪ್ರಖ್ಯಾತನಾದ ರಾಜ ಕೃಷ್ಣ ದೇವರಾಯನು ಶ್ರೇಷ್ಠ ರಾಜನೀತಿಜ್ಞ, ದಕ್ಷ ಆಡಳಿತಗಾರ, ಯೋಧ, ವಿದ್ವಾಂಸ, ಚಿತ್ರಕಲಾವಿದ ಮತ್ತು ಲಲಿತ ಕಲೆಗಳ ಆಶ್ರಯದಾತನೂ ಆಗಿದ್ದನು. ದೊಡ್ಡದಾದ ಗೋಪುರಗಳು, ಮಂಟಪಗಳು, ಲೇಪಾಕ್ಷಿಯ–ವೀರಭದ್ರ, ಕಾಂಚಿಪುರಂನ–ವರದರಾಜ, ಹಂಪಿಯ–ವಿಠ್ಠಲ–ಮಂದಿರ, ವೆಲ್ಲೂರಿನ–ಜಲಕಾಂತೇಶ್ವರ ದೇವಸ್ಥಾನಗಳ ಮಂಟಪಗಳು ಉತ್ಕೃಷ್ಟವಾದ–ನಿದರ್ಶನಗಳಾಗಿವೆ. ಅಲ್ಲದೇ ದಕ್ಷಿಣ ಭಾರತದ ಅಸಂಖ್ಯಾತ ದೇವಸ್ಥಾನಗಳನ್ನು ರಚಿಸಿರುವರು. ಈ ಸಾಮ್ರಾಜ್ಯದ ರಾಜ್ಯಧಾನಿಯಾದ ವಿಜಯನಗರದ ವಿರೂಪಾಕ್ಷ ದೇವಸ್ಥಾನದ ಮುಂದಿನ ದೊಡ್ಡಮಂಟಪದ ಮೇಲ್ಛಾವಣಿಯಲ್ಲಿ ಭವ್ಯವಾದ ಚಿತ್ರಮಾಲೆಗಳಿವೆ.

**ವಿರೂಪಾಕ್ಷ ದೇವಾಲಯ ಮಂಟಪದ ಭಿತ್ತಿ ಚಿತ್ರಗಳು:**

ಸಿ.ಟಿ.ಎಂ. ಕೊಟ್ರಯ್ಯನವರು ಹೇಳಿರುವಂತೆ ಕೃಷ್ಣದೇವರಾಯನ ಕಾಲದಲ್ಲೇ ಈ ಚಿತ್ರಗಳು ರಚನೆಯಾಗಿವೆ[೩೪] ಎನ್ನುವುದು ಯೋಗ್ಯವೆನಿಸುತ್ತದೆ. ಡಾ. ಎಸ್.ರಾಜಶೇಖರ ಅವರು ಇಲ್ಲಿನ ಚಿತ್ರಗಳಲ್ಲಿ ಚಿತ್ರಣಕ್ಕಾಗಿ ಅಂಕಣಗಳನ್ನು ಮಾಡಿಕೊಂಡಿದ್ದು ಚಿತ್ರಗಳ ಮೇಲ್ಭಾಗದಲ್ಲಿ ತೋರಣಗಳ ವಿನ್ಯಾಸವಿರುವುದು. ಅದರ ಎಡಬಲಗಳಲ್ಲಿ ತೆಂಗಿನ ಮರದ ಚಿತ್ರವಿರುವುದು[೩೫] ಎಂದಿರುವರು. ಡಾ. ಅ.ಲ.ನರಸಿಂಹನ್ ಅವರು ಯುದ್ಧದಲ್ಲಿ ತೋಪುಗಳ ಬಳಕೆ ಮಾಡಿದ್ದು ೧೭ನೆಯ ಶತಮಾನದ ನಂತರದ್ದು, ಅದಕ್ಕೂ ಮೊದಲು ತೋಪುಗಳ ಬಳಕೆ ಇರಲಿಲ್ಲವೆಂದಿರುವರು. ಆದ್ದರಿಂದ ಈ ಚಿತ್ರಗಳ ಕಾಲ ೧೭ನೇ ಶತಮಾನವೆಂದಿರುವರು.[೩೬] ಆದರೆ ಸದಾನಂದ ಕನವಳ್ಳಿಯವರು ರಾಯಚೂರು ಮೇಲಿನ ದಂಡಯಾತ್ರೆಯಲ್ಲಿ ಪೋರ್ಚುಗೀಸರ ನಾಯಕ ಕ್ರಿಸ್ಟೋದಾ ಓದ ಫಿಗೈರೆಡೋ ಮತ್ತು ಅವನ ಇಪ್ಪತ್ತು ಜನ ಸಂಗಡಿಗರು ಕೋವಿಗಳನ್ನು ಬಳಸಿ ಕೃಷ್ಣದೇವರಾಯನಿಗೆ ಯುದ್ಧದಲ್ಲಿ ಸಹಾಯ ಮಾಡಿದರು. ಇದರಿಂದಾಗಿಯೇ ಬೇಗನೆ ಯುದ್ಧದಲ್ಲಿ ಗೆಲ್ಲಲು ಸಾಧ್ಯವಾಯಿತು ಎಂದು, ಅವರನ್ನು ಶ್ರೀ ಕೃಷ್ಣದೇವರಾಯ ಅಭಿನಂದಿಸಿರುವನು ಹಾಗೂ ಈ ಯದ್ಧದಲ್ಲಿ ಮೊದಲಿಗೆ ಮಾರ್ಗತೋರಲು ತನ್ನ ಬಳಿ ಇರುವ ಮುಸ್ಲಿಮ್ ಸೇವಕರನ್ನು ಕಳುಹಿಸಿದ್ದ ಎಂದು ನ್ಯುನಿಜ್ ಹೇಳಿಕೆಯನ್ನು ಉಲ್ಲೇಖಿಸಿರುವುದು ಹಾಗೂ ಶ್ರೀ ಕೃಷ್ಣದೇವರಾಯನು ವಿಜಯದ ನಂತರ ರಾಜಧಾನಿ ವಿಜಯನಗರದಲ್ಲಿ ದೊಡ್ಡ ಉತ್ಸವ ಆಚರಿಸಿದನೆಂದೂ[೩೭] ಉಲ್ಲೇಖಿಸಿರುವರು. ಈ ಎಲ್ಲ ಹಿನ್ನೆಲೆಯಲ್ಲಿ ಕ್ರಿ.ಶ. ೧೫೦೯ ರಲ್ಲಿ ಕಟ್ಟಿಸಿದ ಮಂಟಪದಲ್ಲಿ ರಾಯಚೂರು ಮೇಲಿನ ವಿಜಯದ ಸ್ಮರಣಾರ್ಥವಾಗಿ ರಾಯಚೂರಿನ ಯುದ್ಧದಲ್ಲಿ ಪೋರ್ಚುಗೀಸರು ಬಳಸಿದ ಕೋವಿಗಳು ಆತನ ಮುಸ್ಲೀಂ ಸೇವಕರು, ಯುದ್ಧರಥದ ಮೇಲ್ಭಾಗದ ಕಳಸವೂ ಸಹಿತ ವಿಜಯನಗರ ಶೈಲಿಯ

---

೩೪. C.T.M.Kotraiah: Vijay Nagar Painting at Virupaksha Temple - Hampi: and J.M.S II: Page 231-232..

೩೫. ಡಾ. ಸಿಂದಗಿ ರಾಜಶೇಖರ: ಕರ್ನಾಟಕ ವಾಸ್ತುಶಿಲ್ಪ ಮತ್ತು ಚಿತ್ರಕಲೆ: ಪುಟ ೨೦೨, ೨೦೩.

೩೬. ಡಾ. ಅ.ಲ.ನರಸಿಂಹನ್: ಕರ್ನಾಟಕ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು: ಪುಟ ೫೬೪.

೩೭. ಸದಾನಂದ ಕನವಳ್ಳಿ :(ಅನು) ಮರೆತು ಹೋದ ಮಹಾಸಾಮ್ರಾಜ್ಯ ವಿಜಯನಗರ: ಪುಟ ೩೪೯.

ರಾಯಗೋಪುರದಂತೆ ಕಲಾವಿದ ಈ ಚಿತ್ರದಲ್ಲಿ ಬಳಸಿಕೊಂಡಿರುವುದು ದೃಢಪಡುತ್ತದೆ. ಈ ಎಲ್ಲ ಆಧಾರಗಳ ಮೇಲಿಂದ ರಾಯಚೂರು ಮೇಲಿನ ವಿಜಯದ ಸವಿನೆನಪಿಗಾಗಿಯೇ ಈ ಚಿತ್ರಗಳನ್ನು ೧೫೨೦ ರಲ್ಲಿ ಬರೆಸಲಾಗಿದೆ ಎಂದು ಡಾ. ಯಾದಪ್ಪ ಪರದೇಶಿ[೩೮] ಅವರ ಅಭಿಪ್ರಾಯ ಪಟ್ಟಿರುವುದು ಸೂಕ್ತವಾದುದಾಗಿದೆ.

**ವಿಜಯನಗರದ ವೀರಶೈವ ಭಿತ್ತಿಚಿತ್ರಗಳು**

ವಿರೂಪಾಕ್ಷ ದೇವಾಲಯದ ಮಂಟಪದ ತೊಲೆ ಮತ್ತು ಮೇಲ್ಭಾವಣಿಗಳೆರಡರ ಮೇಲೆಯೂ ಚೌರಸ ಮತ್ತು ಆಯತಗಳ ಆಕರಗಳ ಪಟ್ಟಿಕೆಗಳನ್ನು ದೊಡ್ಡವು ಮತ್ತು ಸಣ್ಣವುಗಳನ್ನಾಗಿ ಮಾಡಿಕೊಂಡು ಅವುಗಳಲ್ಲಿ ಚಿತ್ರಿಸಲಾಗಿದೆ. ಶೈವ ಪುರಾಣಗಳನ್ನು ಆಧಾರವಾಗಿಟ್ಟುಕೊಂಡು ಚಿತ್ರಿಸಿದ ಚಿತ್ರಗಳು ಕೆಳಗಿನಂತಿವೆ.

**೧. ಶಿವಪಾರ್ವತಿ ಕಲ್ಯಾಣ:**

ಹರಿಹರದೇವನು ಮೇರುಕೃತಿಯಾದ "ಗಿರಿಜಾ ಕಲ್ಯಾಣವೆಂಬ" ಮಹಾ ಕಾವ್ಯವನ್ನು ರಚಿಸಿದ್ದು, ಇದರಲ್ಲಿ ಹಂಪೆಯ ಸ್ಥಳ ಈ ಪುರಾಣಕ್ಕೆ ಸಾಹಿತ್ಯಾಧಾರವನ್ನು ಒದಗಿಸುತ್ತದೆ. ಆ ಸಾಹಿತ್ಯ ಚಿತ್ರಣವೇ ಮುಂದೆ ರಚಿಸಲ್ಪಟ್ಟ ಶಿಲ್ಪಗಳಿಗೂ ಚಿತ್ರಗಳಿಗೂ ಮೂಲ ವಸ್ತು, ವಿಷಯವನ್ನು ಒದಗಿಸಿದೆಯಲ್ಲದೇ ಶಿಲ್ಪ ಮತ್ತು ಚಿತ್ರಕಲಾವಿದರಿಗೆ ಪ್ರೇರಣೆಯನ್ನು ನೀಡಿದೆ. ಇದರಿಂದಾಗಿ ಹರಿಹರನ ಕಾವ್ಯದ ಜನಪ್ರಿಯತೆಯೂ ಹೆಚ್ಚಾಯಿತು. ಡಾ. ಚೆನ್ನಕ್ಕ ಪಾವಟೆ ಅವರು ಮಂಟಪದ ಛಾವಣಿಯಲ್ಲಿ ರಚನೆಗೊಂಡ ಈ ಚಿತ್ರವು ಹರಿಹರನ ಗಿರಿಜಾ ಕಲ್ಯಾಣದಲ್ಲಿ ಬರುವ ಸುಂದರ ವಿವರಣೆಗಳೇ ಆಗಿವೆ[೩೯] ಎಂದು ಅಭಿಪ್ರಾಯಪಟ್ಟಿರುವರು. ಶಿವಪಾರ್ವತಿಯರ ಕಲ್ಯಾಣೋತ್ಸವದ ವಿವರಣೆಗಳನ್ನು ಆನೆಗುಂದಿಯಲ್ಲಿ ದೊರೆತ "ತಾಮ್ರ ಪಟ ಶಾಸನ"ದಲ್ಲಿ ಉಲ್ಲೇಖಿಸಲಾಗಿದೆ[೪೦] ಎಂದು ಆರ್.ಎಚ್.ಕುಲಕರ್ಣಿ ಅವರು ವಿಜಯನಗರ ಅಧ್ಯಯನ ಸಂಪುಟದಲ್ಲಿ ತಿಳಿಸಿರುವರು.

ಒಟ್ಟಾರೆ ಪುರಾಣಗಳ ಹಿನ್ನೆಲೆಯಲ್ಲಿ ಈ ಪಂಪಾಕ್ಷೇತ್ರದ ಆರಾಧ್ಯ ದೈವನಾದ ವಿರೂಪಾಕ್ಷನನ್ನು ವರಿಸಲು ಬ್ರಹ್ಮನ ಮಾನಸಪುತ್ರಿಯಾದ "ಪಂಪಾವತಿ" ಪರ್ವತ ರಾಜನ ಮಗಳು ಪಾರ್ವತಿ) ಘೋರವಾದ ತಪಸ್ಸು ಆಚರಿಸಿ ಶಿವನನ್ನು ಒಲಿಸಿಕೊಂಡು ಕಲ್ಯಾಣೋತ್ಸವ ನಡೆದ ಸ್ಥಳ ಇದಾಗಿದ್ದು, ಪರಶಿವನು ಪತ್ನಿಸಮೇತವಾಗಿ ಶಿವಗಣ, ವಿಷ್ಣುಗಣ, ಬ್ರಹ್ಮಗಣ ದೇವತಾಸಮೂಹದೊಂದಿಗೆ ಈ ಕ್ಷೇತ್ರದಲ್ಲಿ ನೆಲೆಯಾಗಿರುವುದರಿಂದ ಈ ಕ್ಷೇತ್ರಕ್ಕೆ ಧಾರ್ಮಿಕವಾಗಿ ಮಹತ್ವ ಬಂದಿದೆ.

ಶಿವ ಪಾರ್ವತಿಯರ ವಿವಾಹದ ದೃಶ್ಯವನ್ನು ಚಿತ್ರಿಸಲಾಗಿದ್ದು ಚತುರ್ಭುಜನಾದ ಶಿವನು ಇಲ್ಲಿ ಮಗ್ಗುಲ ನೋಟದಲ್ಲಿದ್ದಾನೆ. ಆತನು ಮುಂದಿನ ಎರಡೂ ಕೈಗಳಿಂದ ಎದುರಿಗೆ ನಿಂತಿರುವ ಪಾರ್ವತಿಯ ಕೈಗಳೆರಡನ್ನು ಹಿಡಿದುಕೊಂಡು ನಿಂತಿದ್ದಾನೆ. ಹಿಂದಿನ ಬಲಗೈಯಲ್ಲಿ ಜಿಂಕೆ ಎಡಗೈಯಲ್ಲಿ ಡಮರುಗಳಿವೆ. ಶಿವನ ಹಿಂದುಗಡೆ

---

೩೮. ಡಾ. ಯಾದಪ್ಪ ಪರದೇಶಿ: ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ-ಒಂದು ಅಧ್ಯಯನ: ಪುಟ-೨೨೩.
೩೯. ಡಾ. ಚೆನ್ನಕ್ಕ ಪಾವಟೆ: ವಿಜಯನಗರ ಅಧ್ಯಯನ ಸಂಪುಟ-೧೦, ಪುಟ ೧೪೮.
೪೦. ಆರ್.ಎಚ್.ಕುಲಕರ್ಣಿ: ವಿಜಯನಗರ ಅಧ್ಯಾಯನ: ಸಂಪುಟ ೭: ಪುಟ ೧೪೮.

ಹಿಮವತ್‌ರಾಜ, ವಿಷ್ಣುವು ನಿಂತಿದ್ದಾರೆ. ಪಕ್ಕದ ಚೌರಸದಲ್ಲಿ ಬ್ರಹ್ಮ ನಂದಿ ಭೃಂಗಿಯರು ಈ ಸಮಾರಂಭವನ್ನು ನೋಡುತ್ತ ನಿಂತಿರುವರು. ಪಾರ್ವತಿಯ ಹಿಂದುಗಡೆ ಲಕ್ಷ್ಮಿ, ಸರಸ್ವತಿ, ಶ್ರೀದೇವಿ, ಭೂದೇವಿಯರು ಸಾಲು ಸಾಲಾಗಿ ನಿಂತಿರುವರು. ಈ ಮುಖ್ಯ ಚಿತ್ರಗಳಲ್ಲದೇ ತೊಲೆಯ ಮೇಲಿರುವ ಚಿಕ್ಕ ಚಿಕ್ಕ ಪಟ್ಟಿಕೆಗಳಲ್ಲಿ ಋಷಿ ಮುನಿಗಳು, ದೇವತೆಗಳು, ಗಂಧರ್ವರು, ಯಕ್ಷ, ಯಕ್ಷಿಯರು, ಕಾಲ್ಪನಿಕಗೆ ಪ್ರಾಣಿಗಳು, ಐರಾವತ, ಕಾಮಧೇನು, ಶರಭ ಮುಂತಾದ ಪ್ರಾಣಿಗಳ ಚಿತ್ರಗಳು ರಚನೆಗೊಂಡಿವೆ.

**೨. ಮನ್ಮಥ ವಿಜಯ:**

ಗಿರಿರಾಜನ ಹೆಂಡತಿಯು ಶಿವೆಯನ್ನು ಕುರಿತು ಬಹಳ ಕಾಲ ತಪವನ್ನು ಮಾಡುತ್ತಿರಲು ಶಿವೆಯು ತಪಕ್ಕೆ ಮೆಚ್ಚಿ ವರವನ್ನು ಬೇಡೆನ್ನಲು, ನೀನು ನನ್ನ ಮಗಳಾಗಿ ಹುಟ್ಟು ಎಂದು ಕೇಳಿದಳು. ಶಿವೆಯು ಮೇನೆಯ ಮಗಳಾಗಿ ಜನಿಸಿದಳು. ಗಿರಿರಾಜನು ಶಿವಲಿಂಗ ಧಾರೆಯಾದ ಆ ಕುವರಿಯನ್ನು ಕರೆದೊಯ್ದು ತನ್ನ ಕುಲಗುರುವಿನಿಂದ ಲಿಂಗದೀಕ್ಷೆ ಕೊಡಿಸಿ ಗಿರಿಜೆಯೆಂದು ಹೆಸರಿಟ್ಟನು. ಅವಳು ಯೌವನಕ್ಕೆ ಬರುತ್ತಿರಲು ಒಂದು ದಿನ ನಾರದನು ಗಿರಿರಾಜನ ಆಸ್ಥಾನಕ್ಕೆ ಬರಲು ಅಲ್ಲಿರುವ ಗಿರಿಸುತೆಯನ್ನು ಕಂಡು ನಮಸ್ಕರಿಸುವನು. ಇದನ್ನು ಕಂಡ ಗಿರಿರಾಜ ಆಶ್ಚರ್ಯಪಟ್ಟು ನಾರದನನ್ನು ಕಾರಣ ಕೇಳಿದನು. ಆಗ ನಾರದನು ಶಿವೆಯು ದಕ್ಷಸಂಬಂಧದ ಶರೀರವನ್ನು ಬಿಟ್ಟು ವಿರೂಪಾಕ್ಷನರ್ಧಾಂಗಿ ವಿಯೋಗದಿಂದ ಮೇನೆಯ ಬಸುರಿನಲ್ಲಿ ಬರಲು ಆಕೆಯ ಮಗಳಾಗಿ ಜನಿಸಿರುವಳು. ಅವಳ ಬಾಳಕ್ಷನು ತುಂಗಭದ್ರಾನದಿಯ ತೀರದಲ್ಲಿ ಹೇಮಕೂಟಗಿರಿಯ ಮೇಲೆ ತಪೋಧನನಾಗಿ ನಿಂತು, ತನ್ನ ನಿಜವನ್ನು ತಾನೇ ಧ್ಯಾನಿಸುತ್ತಿರುವನು. ಅವನಿದ್ದೆಡೆಯಲ್ಲಿ ಮಹಾದೇವಿಯನ್ನು ಕಳುಹಿಸು ಎನ್ನಲು, ಗಿರಿರಾಜನು ಪುಷ್ಪಕದಲ್ಲಿ ಗಿರಿಜೆಯನ್ನು ಕರೆದುಕೊಂಡು ಬಂದು, ತುಂಗಭದ್ರಾನದಿಯನ್ನೂ ಹರನಿರುವ ಪಂಪಾಕ್ಷೇತ್ರವನ್ನೂ ತೋರಿಸಿ, ಬಾಗಿಲಲ್ಲಿ ಕಾದಿರುವ ನಂದೀಶನನ್ನು ಕಂಡು ನಮಸ್ಕರಿಸಿ "ಶಿವನು ಇಲ್ಲಿರುವನು, ಅವನ ಮನವೊಲಿಸು" ಎಂದು ಗಿರಿಜೆಗೆ ಹೇಳಿ ಅವಳೊಂದಿಗೆ ಅವಳ ಸಖಿಯರಾದ ಜಯ ವಿಜಯಳೆಂಬುವರನ್ನು ಸಹಾಯಕ್ಕೆ ಬಿಟ್ಟು ತನ್ನ ಪುರಕ್ಕೆ ಸಾಗಿದನು. ಈ ಕ್ಷೇತ್ರದಲ್ಲಿರುವುದರಿಂದ ಇಲ್ಲಿ ಗಿರಿಜೆಗೆ "ಪಂಪಾಂಬಿಕೆ" ಎಂದೂ ಕರೆಯಲಾಗಿದೆ. ಆ ತಪೋವನದಲ್ಲಿ ಮುನಿಗಳು ಅಭಿಷೇಕ, ಜಪ, ಯಜ್ಞ, ಹೋಮಗಳನ್ನು ಮಾಡುತ್ತಿದ್ದರು. ಆ ಪುಣ್ಯಾಶ್ರಮವನ್ನು ನೋಡುತ್ತ ಹೇಮಕೂಟ ಪರ್ವತದ ಮಗ್ಗುಲಲ್ಲಿ ತಪೋಮೂರ್ತಿಯಾಗಿ ಶೋಭಿಸುವ ವಿರೂಪಾಕ್ಷನನ್ನು (ಗಿರಿಸುತೆ) ಪಂಪಾಂಬಿಕೆಯು ಭಯ ಭಕ್ತಿಯಿಂದ ದಿನಾಲೂ ಪೂಜಿಸುತ್ತಿದ್ದಳು.[೪೧]

ಇತ್ತ ತಾರಕಾಸುರನೆಂಬ ದಾನವನು ಇಂದ್ರಾದಿ ದೇವತೆಗಳನ್ನೆಲ್ಲಾ ಪೀಡಿಸಿ, ಅವರ ಕೋಟೆಗಳನ್ನೆಲ್ಲ ವಶಪಡಿಸಿಕೊಳ್ಳತೊಡಗಿದ. ದೇವತೆಗಳು ತಮ್ಮ ಹೆಂಡತಿಯರನ್ನೆಲ್ಲಾ ಮೇರು ಪರ್ವತದ ಗುಹೆಯೊಳಗೆ

---

೪೧. ವಿರೂಪಾಕ್ಷ ಪಂಡಿತ: ಚೆನ್ನಬಸವಪುರಾಣ: ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ. – ಪುಟ. ೬೯. ೨೨.

ತಂದಿಟ್ಟರು. ಬ್ರಹ್ಮನೆಡೆಗೆ ಬಂದು ಕೇಳಲು ವೃತ್ತಾಂತವನ್ನು ಅವರಿಗೆ ಹೇಳಿದನು. ತಾರಕನು ಉಗ್ರತಪವನ್ನು ಮಾಡಿದನು. ಈ ಕುರಿತು ನಾನು ಶಿವನಲ್ಲಿಗೆ ಹೋಗಿ ಹೇಳಿದೆ. ಆಗ ಶಿವನು ಅವನು ಬೇಡಿದ ವರವನ್ನು ನೀಡು ಎಂದನು. ತಾರಕನಲ್ಲಿಗೆ ಹೋಗಿ ವರವನ್ನು ಕೇಳೆನ್ನಲು ತಾರಕನು, ತಾನೆಂದಿಗೂ ಸಾಯದಂತೆ ವರವನ್ನು ಬೇಡಿದನು. ಆಗ ನಾನು, ಹುಟ್ಟಿದವನು ಸಾಯಲೇಬೇಕು ಎಂದೆ. ಹಾಗಾದರೆ ಅಭವನ ವೀರ್ಯವನ್ನು ಹರಿಯಜ ಮುಂತಾದ ದೇವತೆಗಳು ಧರಿಸಿ ಆ ವೀರ್ಯದಿಂದ ಹುಟ್ಟಿದ ಏಳು ದಿನದ ಕುಮಾರನಿಂದಲ್ಲದೆ, ಉಳಿದವರಿಂದ ಸಾಯದಂತೆ ವರವನ್ನು ಕೊಡು ಎಂದನು. ಆಗಲಿ ಎಂದು ವರ ಕೊಟ್ಟಿರುವೆ ಎಂದನು. ಈ ಸಮಸ್ಯೆಗೆ ಉತ್ತರ ಕಂಡುಕೊಂಡು ಬ್ರಹ್ಮ, ವಿಷ್ಣು, ದೇವಾದಿದೇವತೆಗಳೆಲ್ಲ ಕಾಮನನ್ನು ಕರೆದು ಶಿವನು ತಪಸ್ಸಿನಲ್ಲಿರುವನು. ಅವನ ತಪಸ್ಸನ್ನು ನಿಲ್ಲಿಸಬೇಕು ಮತ್ತು ಗಿರಿಸುತೆಯು ಅವನನ್ನು ಪೂಜಿಸುತ್ತಿದ್ದು ಆ ಸಮಯ ನೋಡಿ ಮನ್ಮಥ, ನಿನ್ನ ಬಾಣದಿಂದ ಅವರಿರ್ವರನ್ನು ಕೂಡುವಂತೆ ಮಾಡಬೇಕೆಂದರು. ಮೊದಲು ಹೆದರಿ ನಿರಾಕರಿಸಿದ ಮನ್ಮಥ ಎಲ್ಲ ದೇವತೆಗಳ ಒಳಿತಿಗಾಗಿ ಈ ಕಾರ್ಯ ಮಾಡುವುದಾಗಿ ಒಪ್ಪಿಕೊಳ್ಳುವನು.

ಅಂತೆಯೇ ತನ್ನ ಸೈನ್ಯದೊಂದಿಗೆ ಮನ್ಮಥನು ಹೇಮಕೂಟಕ್ಕೆ ಬರುವನು. ಪಾರ್ವತಿಯ ಸಹಾಯದಿಂದ ಹೇಮಕೂಟವನ್ನು ಪ್ರವೇಶಿಸಿ ಪಾರ್ವತಿಯು ಶಿವನ ಪೂಜೆಯಲ್ಲಿ ತೊಡಗಿರುವುದನ್ನು ನೋಡಿ ಮನ್ಮಥ ತನ್ನ ಮದನ ಬಾಣಗಳನ್ನು ಬಿಡಲು, ಅವುಗಳು ಅವನಿಗೆ ತಾಗದಾದಾಗ ಐದೂ ಬಾಣಗಳನ್ನು ಒಟ್ಟಿಗೆ ಬಿಟ್ಟಾಗ, ಶಿವನು ಕೋಪದಿಂದ ನಡುವಿನ ಕಣ್ಣು ತೆಗೆಯುವನು. ಇದರಿಂದಾಗಿ ಮನ್ಮಥ ಸುಟ್ಟುಬೂದಿಯಾಗುವನು. ಆ ಬೂದಿಯನ್ನು ಮೈ ಮೇಲೆಲ್ಲ ಹಾಕಿಕೊಂಡ ಶಿವನು ಗಿರಿಜೆಯನ್ನು ನಿರಾಕರಿಸಿ ಹೊರಟು ಹೋದನು. ಎಂದು ಚೆನ್ನಬಸವ ಪುರಾಣದಲ್ಲಿ ಗಿರಿಜೋತ್ಪತ್ತಿಯ ಸಂಧಿ ಮತ್ತು ಕಾಮದಹನ ಲೀಲೆಯ ಸಂಧಿಗಳಲ್ಲಿ ವಿರೂಪಾಕ್ಷ ಪಂಡಿತರು ತಿಳಿಸಿರುವರು.

ಈ ಕಲಾಕೃತಿಯಲ್ಲಿ ಮನ್ಮಥನು ರಥಾರೂಢನಾಗಿದ್ದು ಎಡಗೈಯಲ್ಲಿರುವ ಬಿಲ್ಲು ಕಮಲದ ಹೂವಿನಿಂದೊಡಗೂಡಿದ ದೇಟಿನಿಂದ ರಚಸಿಲ್ಪಟ್ಟಿದ್ದು, ಪುಷ್ಪಾಲಂಕೃತವಾದ ಬಾಣವನ್ನು ಬಲಗೈಯಿಂದ ಹಿಂದೆ ಎಳೆದು ಎದುರಿನಲ್ಲಿರುವ ಶಿವನಿಗೆ ಹೂಡುತ್ತಿರುವನು. ತನ್ನ ಎಡಗಾಲನ್ನು ಮುಂದಿಟ್ಟು ಬಲಗಾಲ ಮೊಳಕಾಲನ್ನು ಕೆಳಗೂರಿರುವನು. ಕಿರೀಟಧಾರಿಯಾದ ಮನ್ಮಥನು ಅತ್ಯಂತ ಗಂಭೀರವಾಗಿ ಶಿವನಿಗೆ ಪುಷ್ಪ ಬಾಣ ಹೂಡುತ್ತಿರುವುದು. ಇವನ ರಥವನ್ನು ಗಿಳಿಯು ಎಳೆದುಕೊಂಡು ಹೋಗುತ್ತಿರುವುದು ಅತ್ಯಂತ ಸುಂದರವಾಗಿ ಮೂಡಿ ಬಂದಿದೆ. ಎದುರಿನಲ್ಲಿರುವ ಶಿವ (ವಿರೂಪಾಕ್ಷೇಶ್ವರ) ರಾಜರ ಪೋಷಾಕನ್ನು ಧರಿಸಿಕೊಂಡಿದ್ದು ತಲೆಗೆ ಹಾವುಗಳಿಂದ ಅಲಂಕೃತವಾದ ಕಿರೀಟ ಹಾಗೂ ಹಿಂದುಗಡೆ ಸಿಂಹಾಸನದಂತೆ ಸುತ್ತಲೂ ಹಾವುಗಳು ಸುತ್ತಿಕೊಂಡಿರುವವು. ಪೀಠವೊಂದರ ಮೇಲೆ ಪದ್ಮಾಸನದಲ್ಲಿ ಕುಳಿತ ವಿರೂಪಾಕ್ಷೇಶ್ವರ, ಎಡಗೈಯಲ್ಲಿ ಲಿಂಗ, ಬಲಗೈಯಲ್ಲಿ ಪತ್ರಿಯನ್ನು ಹಿಡಿದು ತಪೋಮಗ್ನನಾಗಿರುವನು. ಕೈಯಲ್ಲಿರುವ ಲಿಂಗವನ್ನು ಎರಡೂ ಕಣ್ಣುಗಳಿಂದ ನೋಡುತ್ತ ಕುಳಿತಿರುವುದನ್ನು ಕಾಣುತ್ತೇವೆ. ಇಲ್ಲಿ ಶಿವನಿಗೆ ಮೀಸೆ ಮತ್ತು ದಾಡಿಗಳಿರುವುದನ್ನು ಕಾಣುತ್ತೇವೆ.

ಈ ಮಂಟಪದ ಕೆಳಗಡೆ ವೃಷಭ ಮನ್ಮಥನನ್ನು ನೋಡುತ್ತ, ಗಿಳಿಗೆ ಎದುರಾಗಿ ತನ್ನ ಬಲಗಾಲನ್ನು ಮುಂದೆ ಮಾಡಿ ಯುದ್ಧಕ್ಕೆ ಸಿದ್ಧನಾದಂತೆ ತೋರುತ್ತಿದೆ. ಈ ವೃಷಭದ ಬದಿಯಲ್ಲಿರುವ ಪಾರ್ವತಿಯು ವೃಷಭವನ್ನು ಸಮಾಧಾನಿಸುತ್ತಿರುವ ದೃಶ್ಯವನ್ನು ಚಿತ್ರಿಸಲಾಗಿದೆ. ಈ ಪಾರ್ವತಿಯ ಹಿಂದುಗಡೆಯಲ್ಲಿರುವ ನಂದಿ ಮನ್ಮಥನನ್ನು ನೋಡುತ್ತ ನಿಂತಿರುವ ದೃಶ್ಯವಿದೆ. ಇಲ್ಲಿ ವಿಶೇಷವಾಗಿ ಶಿವನು ವಿರೂಪಾಕ್ಷೇಶ್ವರನಾಗಿ ರಾಜಪೋಷಾಕುಗಳನ್ನು ಧರಿಸಿಕೊಂಡಿರುವುದು, ಹಾವುಗಳಿಂದ ಸಿಂಹಾಸನವನ್ನು ಮತ್ತು ಶಿವನ ಕಿರೀಟವನ್ನು ರಚಿಸಿ ಕಲಾವಿದ ತನ್ನದೇ ಆದ ವಿಶಿಷ್ಟತೆಯನ್ನು ಮೆರೆದಿರುವನು. ರಥದಲ್ಲಿ ಗಂಭೀರವಾಗಿ ಬಾಣ ಹೂಡುತ್ತಿರುವ ಮನ್ಮಥ, ಲಿಂಗಪೂಜೆಯಲ್ಲಿ ತಲ್ಲೀನನಾದ ಶಿವ, ಮನ್ಮಥನನ್ನು ಆವೇಶದಿಂದ ನೋಡುತ್ತ ಮುನ್ನುಗ್ಗುತ್ತಿರುವ ವೃಷಭ, ಅದನ್ನು ಸಮಾಧಾನಪಡಿಸುತ್ತಿರುವ ಪಾರ್ವತಿ ಮತ್ತು ನಂದಿಯು ಆತಂಕದಿಂದಲೇ ಮನ್ಮಥನನ್ನು ನೋಡುತ್ತಿರುವ ದೃಶ್ಯ ಅತ್ಯಂತ ಸುಂದರವಾಗಿ ಮೂಡಿ ಬಂದಿದೆ.

**೩. ತ್ರಿಪುರ ಸಂಹಾರ:**

ತ್ರಿಪುರ ಎಂದರೆ ಮೂರು ಊರುಗಳು ಎಂದರ್ಥ. ಇದನ್ನು ಪೌರಾಣಿಕ ಕಥೆಯನ್ನು ಆಧರಿಸಿ ಚಿತ್ರಿಸಲಾಗಿದೆ. ಈ ಮೂರೂ ಪುರಗಳನ್ನು ತಾರಕಾಸುರನ ಮಕ್ಕಳಾದ ತಾರಕಾಕ್ಷ, ಕಮಲಾಕ್ಷ, ವಿದ್ಯುನ್ಮಾಲಿ ಎಂಬ ರಾಕ್ಷಸರು ಆಳುತ್ತಿದ್ದರು. ಈ ತ್ರಿಪುರಗಳು ಒಂದು ಬೆಳ್ಳಿ, ಒಂದು ಚಿನ್ನ ಮತ್ತೊಂದು ಕಬ್ಬಿಣದ ಕೋಟೆಯನ್ನು ಹೊಂದಿದ್ದು ಅದಕ್ಕೆ ತ್ರಿಪುರವೆಂದು ಹೆಸರಿಟ್ಟುಕೊಂಡು ಆಳುತ್ತಿದ್ದರು. ದೇವತೆಗಳಿಗೆ ಇವರ ಕಾಟ ತಡೆಯಲು ಆಗದೆ ಅವರನ್ನು ನಾಶ ಮಾಡುವುದು ಹೇಗೆ? ಎಂದು ಶಿವನಲ್ಲಿಗೆ ಮೊರೆ ಹೋದರು. ಆಗ ಶಿವನು ಕಾರ್ತಿಕೇಯನಿಂದ ಇದು ಸಾಧ್ಯವೆಂದನು. ಈ ತ್ರಿಪುರಸಂಹಾರಕ್ಕಾಗಿ ಎಲ್ಲ ದೇವತೆಗಳೂ ಕಾರ್ತಿಕೇಯನಿಗೆ ನೆರವಾದರು. ಕಾರ್ತಿಕೇಯನು ಭೂಮಿಯೇ ರಥ, ಬ್ರಹ್ಮನೇ ಸಾರಥಿ, ಸೂರ್ಯಚಂದ್ರರೇ ರಥದ ಗಾಲಿಗಳಾದರು. ಅಷ್ಟದಿಕ್ಪಾಲಕರೇ ಕುದುರೆಗಳಾದವು, ವಿಷ್ಣುವೇ ಕುದುರೆಗಳಿಗೆ ಬಿಗಿದ ಹಗ್ಗವಾದನು, ವಜ್ರಧಾರಿಯಾದ ಕಾರ್ತಿಕೇಯನು ತ್ರಿಪುರರ ಮೇಲೆ ಯುದ್ಧಕ್ಕೆ ಹೋದನು. ಈ ರಾಕ್ಷಸರ ಹೆಂಡತಿಯರ ಪಾತಿವ್ರತ್ಯದಿಂದಲೇ ಅವರನ್ನು ಗೆಲ್ಲಲಾಗುತ್ತಿರಲಿಲ್ಲ. ಆಗ ವಿಷ್ಣು ಬುದ್ಧನಂತೆ ಬೆತ್ತಲೆಯಾಗಿ ಅವರ ಮುಂದೆ ನಿಂತ. ಮೂವರೂ ಪತಿವ್ರತೆಯರ ಮನ ಚಂಚಲವಾಯಿತು. ಆಗ ಕಾರ್ತಿಕೇಯನು ತ್ರಿಪುರವನ್ನು ಗೆದ್ದ ಎಂಬ ಪ್ರತೀತಿ ಇದೆ. ಮುಂದೆ ಬುದ್ಧನ ಈ ಅವತಾರವೇ ವಿಷ್ಣುವಿನ ಒಂಬತ್ತನೇ ಅವತಾರವಾಗಿ ಬರುತ್ತದೆ.[೪೨]

ಕಲಾಕೃತಿಯಲ್ಲಿ ಕಾರ್ತಿಕೇಯನು ರುಂಡ ಮಾಲೆಯನ್ನು ಧರಿಸಿದ್ದು, ಎಡಗಾಲನ್ನು ಮುಂದುಗಡೆ ಎತ್ತಿಟ್ಟುಕೊಂಡು, ಬಲಗಾಲನ್ನು ಹಿಂದುಗಡೆ ತುದಿಗಾಲ ಮೇಲೆ ಇಟ್ಟು, ರಥದಲ್ಲಿ ಬಿಲ್ಲನ್ನು ಹಿಡಿದು ಬಲಗೈಯಿಂದ ಬಾಣವನ್ನು ಬಿಡುತ್ತಿರುವ ದೃಶ್ಯ ಸುಂದರವಾಗಿ ಮೂಡಿ ಬಂದಿದೆ. ಹಿಂದಿನ ಕೈಗಳಲ್ಲಿ ತ್ರಿಶೂ.ಲ ಪಾಶವನ್ನು

೪೨. ಆರ್.ಎಚ್.ಕುಲಕರ್ಣಿ: ವಿಜಯನಗರ ಅಧ್ಯಯನ ಸಂಪುಟ–೭: ಪುಟ ೧೫೩.

ಹಿಡಿದುಕೊಂಡಿದ್ದಾನೆ. ತ್ರಿಪುರಾಂತಕನು ತೀಡಿ ಮೇಲಕ್ಕೆ ಸುರುಳಿ ಸುತ್ತಿರುವ ಹುರಿಮೀಸೆ ಮತ್ತು ಗಡ್ಡವನ್ನು ಬಿಟ್ಟಿರುವನು ಈ ಕಾರ್ತಿಕೇಯನ ಉಗ್ರರೂಪವನ್ನು ಹಾಗೂ ಹಾಗೂ ವೀರರಸವನ್ನು ಇಲ್ಲಿ ಕಲಾವಿದ ತೋರ್ಪಡಿಸಿರುವನು.

ಮೂರು ಪುರಗಳ ರಾಕ್ಷಸರನ್ನು ಮೂರು ವೃತ್ತಗಳಲ್ಲಿ ರಚನೆ ಮಾಡಲಾಗಿದ್ದು ಒಂದು ವೃತ್ತದಲ್ಲಿ ಬುದ್ಧನ ರೂಪದಲ್ಲಿರುವ ವಿಷ್ಣು ನಗ್ನವಾಗಿ ನಿಂತಿರುವನು. ಆತನ ಎಡಬಲಗಳಲ್ಲಿ ಇಬ್ಬರು ಹೆಂಗಸರು ನಿಂತಿರುವರು. ಇನ್ನೊಂದು ವೃತ್ತದಲ್ಲಿ ಕೆಂಪು, ಹಳದಿವರ್ಣದ ಇಬ್ಬರು ರಾಕ್ಷಸರು ಪರಸ್ಪರ ಕತ್ತಿ ಢಾಲು ಹಿಡಿದುಕೊಂಡು ಕಾದಾಡುತ್ತಿದ್ದಾರೆ. ತ್ರಿಪುರಗಳನ್ನು ಸೂಚಿಸುವ ಮೂರೂ ವೃತ್ತಗಳ ಸುತ್ತಲೂ ಪಕ್ಷಿ, ಪ್ರಾಣಿಗಳು, ಹಾವುಗಳು ವಿವಿಧ ಜೀವಸಂಕುಲಗಳ ರಚನೆಯಾಗಿದೆ. ತ್ರಿಪುರ ಸಂಹಾರಿ ಕಾರ್ತಿಕೇಯನ ಹಿಂದುಗಡೆ ನಾಗಕನ್ಯಾ ಇದ್ದು ಕೈಯಲ್ಲಿ ಛತ್ರಿ ಹಿಡಿದುಕೊಂಡಿರುವಳು. ರಥದ ಕೆಳಗಡೆ ರಥ ತಯಾರಿಸಿದ ವಿಶ್ವಕರ್ಮನ ಆಕೃತಿ ಇದೆ. ಉತ್ತಮ ಸಂಯೋಜನೆ, ಆಕರ್ಷಕ ವರ್ಣಗಳ ಬಳಕೆಯಿಂದ ಈ ದೃಶ್ಯವು ಸುಂದರವಾಗಿ ಮೂಡಿ ಬಂದಿದೆ. ಈ ತ್ರಿಪುರಸಂಹಾರದ ದೃಶ್ಯಗಳು ಕರ್ನಾಟಕದ ಅನೇಕ ಭಿತ್ತಿಗಳಲ್ಲಿ ಕಂಡು ಬರುತ್ತವೆ. ಧಾರವಾಡದ ಬಳಿ ಇರುವ ಅಮ್ಮಿನಭಾವಿಯಲ್ಲೂ ಈ ಚಿತ್ರ ಕಂಡು ಬರುತ್ತದೆ.

**೪. ಲಿಂಗರೂಪಿ ವಿರೂಪಾಕ್ಷನ ಚಿತ್ರ:**

ಲಿಂಗರೂಪದ ವಿರೂಪಾಕ್ಷನ ಚಿತ್ರವನ್ನು ಇಲ್ಲಿ ರಚಿಸಲಾಗಿದೆ. ಕೃಷ್ಣದೇವರಾಯನು ತನ್ನ ಪಟ್ಟಾಭಿಷೇಕದ ನೆನಪಿಗಾಗಿ ನವರತ್ನ ಖಚಿತವಾದ ವಿರೂಪಾಕ್ಷನ ಮುಖವಾಡವನ್ನು ಮಾಡಿಸಿ ದೇವರಿಗೆ ಕೊಟ್ಟಿದ್ದು ಈಗ ಅದನ್ನು ಸರಕಾರದ ಆಧೀನದಲ್ಲಿ ಹೊಸಪೇಟೆಯಲ್ಲಿ ಕಾಯ್ದಿರಿಸಲಾಗಿದೆ. ವಿಶೇಷ ಸಂದರ್ಭದಗಳಲ್ಲಿ ಅದನ್ನು ದೇವಾಲಯಕ್ಕೆ ತರುತ್ತಾರೆ. ಈ ಮುಖವಾಡದ ಮಾದರಿಯಲ್ಲಿಯೇ ಲಿಂಗರೂಪಿ ವಿರೂಪಾಕ್ಷನ ಚಿತ್ರವನ್ನು ರಚಿಸಿರುವರು. ಈ ಮುಖವಾಡದ ಛಾಯಾಚಿತ್ರವನ್ನು ದೇವಾಲಯದಲ್ಲಿ ಕಾಣಬಹುದಾಗಿದೆ. ಈ ಇಡೀ ಚಿತ್ರವು ಪ್ರಸ್ತುತ ಹಂಪೆಯಲ್ಲಿನ ವಿರೂಪಾಕ್ಷ ದೇವಾಲಯದ ನೆನಪನ್ನು ತರುತ್ತದೆ. ವಿರೂಪಾಕ್ಷ ಲಿಂಗದ ಬಲಗಡೆಯಲ್ಲಿ ನಂದಿಯನ್ನು ತೋರಿಸಲಾಗಿದೆ. ನಂದಿಯು ತನ್ನ ಮುಂದಿನ ಕಾಲನ್ನು ಎತ್ತಿ ನಿಂತಿರುವುದು ಸೊಗಸಾಗಿ ಮೂಡಿ ಬಂದಿದೆ. ಈ ನಂದಿಯ ಮೇಲುಗಡೆ ವಿರೂಪಾಕ್ಷ ದೇವಾಲಯದ ಪ್ರವೇಶದ್ವಾರದಲ್ಲಿರುವ ಸುಮಾರು ೧೬೫ ಅಡಿ ಎತ್ತರದ್ದಾಗಿರುವ ಗೋಪುರವನ್ನು ಕಲಾವಿದ ಸಾಂಕೇತಿಕವಾಗಿ ತೋರಿಸಿದ್ದಾನೆ. ಅಲ್ಲದೇ ನಾಲ್ಕು ಗಂಟೆಗಳು ಇಳಿಬಿದ್ದಿದ್ದು ಈ ಗೋಪುರದ ಮೇಲೆಲ್ಲಾ ಮಂಗಗಳನ್ನು ವಿವಿಧ ಭಂಗಿಯಲ್ಲಿ ಕುಳಿತಿರುವಂತೆ ಚಿತ್ರಿಸಲಾಗಿದೆ. ಈಗಲೂ ಈ ಗೋಪುರದ ಮೇಲೆ ಮಂಗಗಳು, ಗಿಳಿಗಳು ವಿಶ್ರಮಿಸುವುದನ್ನು ಕಾಣಬಹುದಾಗಿದೆ. ಕಲಾವಿದನ ಸಮಕಾಲೀನತೆಯ ಅರಿವನ್ನು ಪ್ರಾಣಿಗಳ ಬಗೆಗಿರುವ ಆಸಕ್ತಿಯನ್ನು ಈ ಕಲಾಕೃತಿಯಲ್ಲಿ ಕಾಣಬಹುದಾಗಿದೆ.

ಈ ಲಿಂಗರೂಪಿ ವಿರೂಪಾಕ್ಷನ ಹಿಂದುಗಡೆ ಐದು ಹೆಡೆಯನ್ನು ಬಿಚ್ಚಿಕೊಂಡು ಲಿಂಗಕ್ಕೆ ಛತ್ರಿಯಂತೆ ನೆರಳಾಗಿಸುವ ಸರ್ಪವನ್ನು ಕಾಣಬಹುದಾಗಿದೆ. ಶಿವನು ದೊಡ್ಡ ಗಾತ್ರದ ಕಣ್ಣುಗಳನ್ನು ಹೊಂದಿದ್ದು ಹುರಿಮೀಸೆ, ದಾಡಿಗಳನ್ನು ತೋರಿಸಲಾಗಿದೆ. ಈ ಮುಖವು ಜನಪದ ಚಿತ್ರಕಲೆಯ ಅಂಶಗಳನ್ನು ನೆನಪಿಸುತ್ತದೆ.

**೫. ತ್ರಿಮೂರ್ತಿಯ ಚಿತ್ರಗಳು:**

ವಿರೂಪಾಕ್ಷ ದೇವಾಲಯದ ಗರ್ಭಗುಡಿಯ ಪ್ರವೇಶ ದ್ವಾರದ ಮೇಲೆ ಮೊದಲಿಗೆ ಬರುವ ಚಿತ್ರಗಳ ಪಟ್ಟಿಯಲ್ಲಿ ತ್ರಿಮೂರ್ತಿಗಳು ಅವರವರ ಪತ್ನಿಯರೊಂದಿಗೆ ಪೀಠವನ್ನು ಅಲಂಕರಿಸಿದ್ದು ದ್ವಾರಪಾಲಕರೊಂದಿಗೆ ಪ್ರತ್ಯೇಕ ಚೌರಸ ಪಟ್ಟಿಯಲ್ಲಿ ಚಿತ್ರಿತಗೊಂಡಿರುವರು. ಮೊದಲಿಗೆ ವಿಷ್ಣು, ಲಕ್ಷ್ಮಿಯನ್ನು ಒಂದು ಚೌರಸಿನಲ್ಲಿ ರಚಿಸಿದ್ದು ಮಧ್ಯದ ಚೌಕಿನಲ್ಲಿ ಶಿವಪಾರ್ವತಿಯರು, ಕೊನೆಯ ಚೌರಸದಲ್ಲಿ ಬ್ರಹ್ಮ ಸರಸ್ವತಿಯರ ಚಿತ್ರಗಳನ್ನು ಚಿತ್ರಿಸಿರುವರು. ಮಧ್ಯದ ಚೌರಸದಲ್ಲಿ "ಶಿವಪಾರ್ವತಿಯರ ಚಿತ್ರ"ವಿದೆ.

ಶಿವನ ಚಿತ್ರದ ಸಂಯೋಜನೆಯ ಮೇಲ್ಭಾಗದಲ್ಲಿ ದೇವಾಲಯದ ೩ ಗೋಪುರಗಳಿದ್ದು ಅವುಗಳ ಮದ್ಯದಲ್ಲಿ ಅಲಂಕಾರಿಕವಾಗಿ ಕಮಲದ ಹೂವು ದೇಟುಗಳನ್ನು ತೋರಿಸಲಾಗಿದೆ. ಕೆಳಗಡೆ ಮಧ್ಯದಲ್ಲಿ ಶಿವನು ಪಾರ್ವತಿಯನ್ನು ತನ್ನ ಎಡದೊಡೆಯ ಮೇಲೆ ಕೂಡ್ರಿಸಿಕೊಂಡು ಪೀಠಾರೋಹಣನಾಗಿರುವನು. ಶಿವನು ಬಲಗಾಲನ್ನು ಕೆಳಗೆ ಇಟ್ಟಿದ್ದು ಎಡಗಾಲನ್ನು ಮಡಚಿಕೊಂಡಿರುವನು. ಈ ಮಂಟಪದ ಎಡಬಲಗಳಲ್ಲಿ ಪ್ರಾಣಿಮುಖವನ್ನು, ಮನುಷ್ಯರ ದೇಹವನ್ನು ಹೊಂದಿದ ಮತ್ತು ಕಾಲುಗಳನ್ನು ಪ್ರಾಣಿಗಳದ್ದು ಮಾಡಿದ್ದು ಕುತೂಹಲಕಾರಿಯಾದ ಈ ಉದ್ಧರಣಿ ಚಿತ್ರಗಳು ವೀರಶೈವಧರ್ಮವು ಕರ್ನಾಟಕದಲ್ಲಿ ಪ್ರಾಮುಖ್ಯವನ್ನು ಪಡೆದಿದ್ದನ್ನು ಸೂಚಿಸುತ್ತದೆ. ಈ ಉದ್ಧರಣಿಗಳು ಪ್ರಾಣಿಗಳ ಮುಖ, ಸ್ತ್ರೀ ಪುರುಷರ ದೇಹ, ವಿವಿಧ ವನ್ಯ ಪ್ರಾಣಿಗಳ ಕಾಲುಗಳು, ಜಲಚರ ಅಥವಾ ವನ್ಯ ಪ್ರಾಣಿಗಳ ರುಂಡಗಳು ಹೀಗೆ ಪ್ರಾಣಿ ಪುರುಷರ ಮಿಶ್ರ ದೇಹಗಳಿಂದ ಚಿತ್ರಿಸಿದ ಆಕೃತಿಗಳಾಗಿವೆ.[೪೩] ಶಿವ ಪಾರ್ವತಿಯರ ಕೆಳಗಡೆಯ ಭಾಗದಲ್ಲಿ ಎರಡು ಜೋಡಿ ನಂದಿಗಳು, ಇನ್ನುಳಿದ ಎರಡು ಚಿತ್ರಗಳಲ್ಲಿ ಹೂವಿನ ನಕ್ಷೆಯನ್ನು ಕಾಣಬಹುದಾಗಿದೆ. ಇದಲ್ಲದೆ ಅಲಂಕಾರಿಕ ನಕ್ಷೆಯನ್ನು ಪ್ರಮುಖವಾಗಿ ಬಳಸಿರುವುದು ಕಂಡು ಬರುತ್ತದೆ.

ಹೀಗೆ ವೀರಶೈವ ಭಿತ್ತಿಚಿತ್ರಗಳು ವಿಜಯನಗರದಲ್ಲಿ ಬೆಳೆದು ಬಂದಿವೆ. ಈ ಭಿತ್ತಿಚಿತ್ರಗಳಲ್ಲಿ ವಿಶೇಷವಾಗಿ ಗಮನಿಸಬೇಕಾದ ಅಂಶವೂ ಒಂದಿದೆ. "ವೀರಶೈವ ಧರ್ಮದ ತತ್ವಗಳನ್ನು ಪ್ರತಿಪಾದಿಸುವ "ಉದ್ಧರಣಿ ಚಿತ್ರ"ಗಳ ಬಳಕೆಯನ್ನು ಮಾಡಿರುವುದು ಗಮನಾರ್ಹ ಅಂಶವಾಗಿದೆ". ಆಗಮಗಳ ಕಾಲದಲ್ಲಿ ಈ ಉದ್ಧರಣಿಗಳು ಹಸ್ತಪ್ರತಿಗಳಲ್ಲಿ ಬೆಳೆದು ಬಂದಿದ್ದು ತದನಂತರದಲ್ಲಿ ಉದ್ಧರಣಿ ಪಟಲವಾಗಿ ವಾಚ್ಯವಾಗಿ ಪ್ರತ್ಯೇಕ ಪಟ ಚಿತ್ರಗಳಾಗಿ ರಚನೆಗೊಂಡವು. ೧೪ನೇ ಶತಮಾನದ ಹೊತ್ತಿಗೆ ಈ ಉದ್ಧರಣಿ ಚಿತ್ರಗಳು ಭಿತ್ತಿಯಲ್ಲಿ ವಿಜಯನಗರ ಅರಸರ

೪೩. ಡಾ. ಅ.ಲ.ನರಸಿಂಹನ್: ಕರ್ನಾಟಕದ ಭಿತ್ತಿ ಚಿತ್ರ ಪರಂಪರೆ: ಪುಟ ೫೭.

ಕಾಲದಲ್ಲಿ ರಚನೆಗೊಂಡಿವೆ. ಈ ವಿರೂಪಾಕ್ಷ ದೇವಾಲಯದ ಮುಖಮಂಟಪದಲ್ಲಿಯ "ಶಿವಪಾರ್ವತಿಯರ ಕಲ್ಯಾಣ" ಈ ಸಂಯೋಜನೆಯಲ್ಲಿ ಹಾಗೂ ವಿರೂಪಾಕ್ಷದೇವಾಲಯದ ಗರ್ಭಗುಡಿಯ ಪ್ರವೇಶದ್ವಾರದ ಮೇಲಿರುವ "ಶಿವಪಾರ್ವತಿಯರ ಚಿತ್ರಗಳ" ಎಡ ಮತ್ತು ಬಲಬದಿಯಲ್ಲೂ ತೋರಿಸಲಾಗಿದೆ. ಈ ಹಿನ್ನೆಲೆಯಲ್ಲಿ ವಿಜಯನಗರ ಸಾಮ್ರಾಜ್ಯವು ಅಪ್ಪಟ ಹಿಂದೂರಾಷ್ಟ್ರವಾಗಿದ್ದ ವೀರಶೈವ ಸಂಸ್ಕೃತಿಯನ್ನು ಪರಿಪೋಷಿಸಿಕೊಂಡು ಬಂದಿತು. ಇಡೀ ದಕ್ಷಿಣ ಭಾರತದ ಸಂಗೀತ, ಶಿಲ್ಪ, ವಾಸ್ತು ಶಿಲ್ಪ, ಚಿತ್ರಗಳ ಮೇಲೆ ಇಸ್ಲಾಂ ಯಾವ ಪ್ರಭಾವವನ್ನೂ ಬೀರಲು ಸಾಧ್ಯವಾಗಲಿಲ್ಲ. ಘಝನಿಮಹ್ಮದ ಒಬ್ಬನೇ ಸುಮಾರು ೧೭ ಬಾರಿ ಈ ವಿಜಯನಗರದ ಮೇಲೆ ದಂಡೆತ್ತಿ ಬಂದಿರುವುದು ಸಾಮಾನ್ಯ ವಿಷಯವಲ್ಲ. ಧಾರ್ಮಿಕ, ರಾಜಕೀಯ, ಸಾಮಾಜಿಕವಾಗಿಯೂ ಹಾಗೂ ಚಾರಿತ್ರಿಕ ಹಿನ್ನೆಲೆಯೊಂದಿಗೆ ಅತ್ಯಂತ ಬಲಿಷ್ಠ ಸಾಮ್ರಾಜ್ಯವಾಗಿ ಹೊರಹೊಮ್ಮಿದ ವಿಜಯನಗರ, ಹಿಂದೂರಾಷ್ಟ್ರದ ಸಂಸ್ಕೃತಿಯ ಕೊನೆಯ ಅಂಕದ ಭವ್ಯ ಸ್ವರೂಪವನ್ನು ಪ್ರತಿನಿಧಿಸುತ್ತದೆ. ವಿಜಯನಗರ ಸಾಮ್ರಾಜ್ಯ ಪತನಾನಂತರದ ದಿನಗಳಲ್ಲಿ ಸುಲ್ತಾನರ ಪ್ರಾಬಲ್ಯ ಹೆಚ್ಚಾದಂತೆ ದಕ್ಷಿಣ ಭಾರತವನ್ನೆಲ್ಲಾ ಆವರಿಸಿದ ವಿಜಯನಗರ ಕಲೆಯೊಂದಿಗೆ ಇಸ್ಲಾಮ್ ಶೈಲಿಯೂ ಮಿಶ್ರಣಗೊಂಡು ಅಂದರೆ ವಿಜಯನಗರ ಮತ್ತು ಪರ್ಷಿಯನ್ ಶೈಲಿಗಳ ಮಿಶ್ರಣದಿಂದಾಗಿ "ದಖ್ಖನ್ ಶೈಲಿ" ಯಾಗಿ (ಹೊಸ ರೂಪದಲ್ಲಿ) ಉದಯವಾಗಿ, ಈ ಕಲೆಯು ಕರ್ನಾಟಕದಾದ್ಯಂತ ವಿಜಯನಗರೋತ್ತರ ಕಲೆಯಾಗಿ ಬೆಳೆದು ಬಂದಿತು.

**೬. ವಿಜಯನಗರ ಭಿತ್ತಿಚಿತ್ರಗಳ ಲಕ್ಷಣಗಳು :**

* ಇಲ್ಲಿಯ ಚಿತ್ರಗಳಲ್ಲಿ ಆಭರಣ, ಕೇಶಾಲಂಕಾರ, ಮೂಗಿನ ನತ್ತು, ಉದ್ದನೆಯ ಸೀರೆ ಕಂಡುಬರುತ್ತವೆ.
* ಪುರುಷರ ಆಕೃತಿಗಳಲ್ಲಿ ಸ್ಥಳೀಯ ಪ್ರಭಾವದ ಧೋತರವನ್ನು ತೊಟ್ಟುಕೊಂಡಿರುವುದನ್ನು ತೋರಿಸಲಾಗಿದೆ.
* ಚಿತ್ರಗಳ ಹಿನ್ನೆಲೆಗೆ ಕೆಂಪುವರ್ಣವನ್ನು ಬಳಸಲಾಗಿದೆ, ಆಕೃತಿಗಳು ಸ್ಫುಟವಾಗಿ ಗೋಚರಿಸುತ್ತವೆ.
* ಪ್ರತಿಚಿತ್ರಕ್ಕೂ ಒಂದೊಂದು ಚೌಕಟ್ಟುಗಳನ್ನು ಪ್ರತ್ಯೇಕವಾಗಿ ಮಾಡಲಾಗಿದೆ.
* ಚಿತ್ರಗಳಲ್ಲಿ ಕಾಣುವ ದೇವಾಲಯದ ಗೋಪುರಗಳಲ್ಲಿ ದ್ರಾವಿಡ ಶೈಲಿಯ ದೇವಾಲಯಗಳ ಗೋಪುರಗಳನ್ನೇ ಸಂಕೇತವಾಗಿ ಬಳಸಿರುವರು.
* ಚಿತ್ರಗಳಲ್ಲಿ ರೇಖೆಗಳೇ ಪ್ರಧಾನವಾಗಿ ಕಂಡುಬರುತ್ತವೆ.
* ಇಲ್ಲಿ ಪ್ರಾಣಿ ಪಕ್ಷಿಗಳನ್ನು ಪ್ರಮಾಣಬದ್ಧವಾಗಿ ಚಿತ್ರಿಸಿರುವರು.
* ಈ ಚಿತ್ರಗಳಿಗೆ ರಾಷ್ಟ್ರಕೂಟರ, ಜೈನ, ಹೊಯ್ಸಳ ಕಲೆಯ ಪ್ರಭಾವವಿರುವುದು ಕಂಡು ಬರುತ್ತದೆ.

**೭. ಲೇಪಾಕ್ಷಿಯ ವೀರಶೈವ ಭಿತ್ತಿಚಿತ್ರಗಳು:**

ಹೊಯ್ಸಳರ, ಆಳ್ವಿಕೆಯಲ್ಲಿ ದೇವಾಲಯಗಳ ಹಜಾರ, ಭುವನಾಸಿಗಳನ್ನು ಶೃಂಗರಿಸಲು ಚಿತ್ರಕಾರರಿಗೆ ಪ್ರೋತ್ಸಾಹ ನೀಡಲಾಗುತ್ತಿತ್ತು. ಅವರು ಚಿತ್ರಿಸಿದ ಕೃತಿಗಳೆಲ್ಲಾ ಶಿಲ್ಪಕಲಾಕೃತಿಗಳಾಗಿ ತೋರುವ ಹಾಗೆ 'ಚಿತ್ರಭಾಸ'ದಿಂದ

ದೇವಾಲಯವನ್ನು 'ಲೇಪಾಕ್ಷಿ' ಎಂಬಲ್ಲಿ ಕಲಾತ್ಮಕವಾಗಿ ಕಟ್ಟಿಸಿದರು. ವಿಜಯನಗರ ಕಾಲದ ಶಿಲ್ಪ ಹಾಗೂ ಭಿತ್ತಿ ಚಿತ್ರಕಲೆಗಳು ಉನ್ನತಮಟ್ಟವನ್ನು ಮುಟ್ಟಿದ್ದವು. 'ಶಿಲ್ಪ, ವಾಸ್ತುಶಿಲ್ಪಕಲೆಗಳಿಗೆ ಕೊಟ್ಟ ಪ್ರಾಶಸ್ತ್ಯವನ್ನು ವಿರೂಪಣ್ಣ ಇಲ್ಲಿ ಚಿತ್ರಕಲೆಗೂ ನೀಡಿದ್ದಾನೆ.' ಲೇಪಾಕ್ಷಿ ಅಜಂತೆಯ ಕಲೆಗೆ ಸರಿಸಮಾನವಾದುದು, ಮಿಗಿಲಾದುದು. ದೇವಾಲಯದ ಭಾವಣಿಗಳಲ್ಲಿ ಕೂಡಿರುತ್ತಿದ್ದವು ಎಂದಿರುವರು. ಇದೇ ಅವಧಿಯಲ್ಲಿ ರಚನೆಯಾದ ಪೆನುಗೊಂಡದಲ್ಲಿಯ 'ವೀರಭದ್ರದೇವರ ಗುಡಿಯನ್ನು ವಿರೂಪಣ್ಣನೆಂಬ ಭಂಡಾರಿಯು ಕಟ್ಟಿಸಿದ್ದು, ಇದರಲ್ಲಿರುವ ಚಿತ್ರಗಳನ್ನು ಈಚೆಗೆ ಸರಕಾರದವರು ಸ್ವಚ್ಛಗೊಳಿಸಿರುವರು. ೧೬ ಸ್ತಂಭಗಳಿಂದೊಡಗೂಡಿದ ಮೂರಾಂಕಣದ ಭಾವಣಿಯಲ್ಲಿನ ೧೮ – ೨೪ ಅಡಿಗಳ ಬೃಹದಾಕಾರದ ವೀರಭದ್ರಸ್ವಾಮಿಯ ಚಿತ್ರ ಬೆರಗುಗೊಳಿಸುತ್ತದೆ. ಇದರ ಮೇಲ್ಭಾಗದಲ್ಲಿ ಪಾರ್ವತಿ ಕಲ್ಯಾಣದ ಚಿತ್ರವಿದೆ. ದೇವಾಲಯದ ಹೊರಾಂಗಣದಲ್ಲಿಯ ಭಾವಣಿಯಲ್ಲಿ 'ಸ್ಕಂದ ಪುರಾಣದ' ಶಿವಲೀಲೆಗೆ ಸಂಬಂಧಿಸಿದ ಚಿತ್ರಗಳನ್ನು ಚಿತ್ರಿಸಲಾಗಿದೆ.

ಇಲ್ಲಿನ ಚಿತ್ರಗಳಲ್ಲಿ ಎಲ್ಲ ಮಾನವಾಕೃತಿಗಳಲ್ಲಿ ಮುಖ ನೇರವಾಗಿರಲಿ, ಓರೆಯಾಗಿರಲಿ, ಎರಡೂ ಕಣ್ಣುಗಳನ್ನು ಚಿತ್ರಿಸಿರುವ ಬಗೆ ವಿಜಯನಗರದ ಶೈಲಿಯಲ್ಲಿಯೇ ವಿಶಿಷ್ಟವಾಗಿ ಕಾಣುತ್ತವೆ. ಈ ಕಲಾಕೃತಿಗಳಲ್ಲಿ ಬರುವ ಮೀಸೆಯ ಚಿತ್ರಗಳ ಅಂಚನ್ನು ಕೆಳಮುಖವಾಗಿ ಬಿಡಿಸಿದ್ದರೆ, ವೀರಭದ್ರನ ಮೀಸೆಯನ್ನು ಮಾತ್ರ ಮೇಲುಮುಖ ಮಾಡಿ ಬಿಡಿಸಲಾಗಿದೆ. ಅಲ್ಲಿ ಬರುವ ಸ್ತ್ರೀಯರ ವಸ್ತ್ರಾಭರಣ, ವರ್ಣವಿನ್ಯಾಸ, ಅಲಂಕಾರಿಕ ನಕ್ಷೆಗಳು ವಿಶಿಷ್ಟವಾಗಿ ಮೂಡಿಬಂದಿವೆ. ಲೇಪಾಕ್ಷಿ ಕಲಾವಿದರು ವಿಶಿಷ್ಟ ಕಲ್ಪನಾಶಕ್ತಿಯನ್ನು ತೋರಿದ್ದು, ಪರಂಪರಾಗತವಾಗಿ ಬಂದ ನಮ್ಮ ಸಂಪ್ರದಾಯಗಳನ್ನು ಅರಿತು ನುರಿತು ಅದ್ಭುತ ಕಲೆಯನ್ನು ಸೃಷ್ಟಿಸಿದ್ದಾರೆ.[೪೪]

ಲೇಪಾಕ್ಷಿಯ ಕಲಾವೈಭವವನ್ನು ನೋಡಿ ಕನ್ನಡಿಗರು ಹೆಮ್ಮೆಪಡಲೇಬೇಕು. ಇಂತಹ ಅಪೂರ್ವ ಕಲೆಯನ್ನು ಸೃಜಿಸಲು ಪ್ರೇರಕ ಶಕ್ತಿಯಾಗಿ ಕನ್ನಡದ ವಿರೂಪಣ್ಣನ ಕಲಾಪ್ರೇಮ ಅತೀ ದೊಡ್ಡದು. ಇಲ್ಲಿಯ ಶಿಲ್ಪ, ಚಿತ್ರ, ವಾಸ್ತುಗಳ ಸಂಗಮದ ಕಲಾವೈಭವ ಅಮೋಘವಾದುದಾಗಿದೆ. ವಿರೂಪಣ್ಣನು ವೀರಶೈವ ಭಕ್ತನಾಗಿರುವುದರಿಂದ ಶೈವಪ್ರಧಾನವಾದ ಚಿತ್ರಶಿಲ್ಪ, ವಾಸ್ತುಶಿಲ್ಪಗಳೂ ಬೆಳೆಯಲು ಕಾರಣವಾಯಿತು. ಅಜಂತೆಯ ಬೌದ್ಧ ಕಲೆಗೆ ಪ್ರತಿಯಾಗಿ ವಿಜಯನಗರ ಕಲಾವಿದರು ಶೈವ, ವೀರಶೈವಪರವಾದ ಕಲೆಯನ್ನು ಅಷ್ಟೇ ಸಮರ್ಥವಾಗಿ ಬೆಳೆಸಿರುವುದು ಕಂಡುಬರುತ್ತದೆ. 'ಲೇಪಾಕ್ಷಿ' ಹಿಂದೂಪುರಕ್ಕೆ ಹತ್ತಿರದಲ್ಲಿದ್ದು, ಕನ್ನಡದ ಪ್ರದೇಶವಾಗಿದ್ದು, ಈಗ ಆಂಧ್ರಪ್ರದೇಶಕ್ಕೆ ಸೇರಿಕೊಂಡಿದೆ.

ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಲೇಪಾಕ್ಷಿನಗರವೆಂದು ವೈಭವದಿಂದ ಮೆರೆದ ಪಟ್ಟಣ ಇಂದು ಅಜ್ಞಾತವಾದ ಕಿರಿಯ ಗ್ರಾಮ. ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಹಿಂದುಪುರದ ಪೂರ್ವಕ್ಕೆ ಇಪ್ಪತ್ತು ಕಿಲೋಮಿಟರ್ ದೂರದಲ್ಲಿದೆ ಅಲ್ಲಿರುವ ಶಿವಾಲಯದಿಂದಾಗಿ ಈ ಸ್ಥಳವನ್ನು ಪಾಪನಾಶೇಶ್ವರ ಕ್ಷೇತ್ರವೆಂದೂ

---

೪೪. (ಸಂ.) ಡಾ. ಆರ್.ಸಿ.ಹಿರೇಮಠ: ಸವಿಸಂಚಯ, ಪು. ೨೧೯, ೨೨೦

ಕರೆಯಲಾಗುತ್ತದೆ. ಅಲ್ಲಿಯ ವೀರಭದ್ರಸ್ವಾಮಿ ದೇವಾಲಯವನ್ನು ಕ್ರಿ.ಶ. ೧೫೩೫ ರಲ್ಲಿ ಭವ್ಯವಾಗಿ ಕಟ್ಟಲಾಯಿತು. ಈ ದೇವಾಲಯದಲ್ಲಿ ಮುಖಮಂಟಪ, ನಾಟ್ಯಮಂಟಪ, ಕಲಾಮಂಟಪ, ಗರ್ಭಗುಡಿಗಳನ್ನು ಕಟ್ಟಲಾಗಿದೆ. ಅಂದಿನ ಪ್ರಚಲಿತ ಪದ್ಧತಿಯಂತೆ ಈ ದೇವಾಲಯಗಳ ಮುಚ್ಚಣಿಕೆಗೆ ಚಪ್ಪಡಿಕಲ್ಲುಗಳನ್ನು ಹಾಸಿ ಗಾರೆಯನ್ನು ಬಳಿದು ಒಳ ಮೈಯನ್ನು ಭಿತ್ತಿಚಿತ್ರಗಳಿಂದ ಅಲಂಕರಿಸಿದ್ದಾರೆ. ಲೇಪಾಕ್ಷಿಯ ಪಾಪನಾಶೇಶ್ವರ ನಾಟ್ಯಮಂಟಪ ಮತ್ತು ಆರಾಧನಾ ಮಂಟಪಗಳ ಸೂರಿನ ಮುಚ್ಚಿಗೆಯಲ್ಲಿ ಭಿತ್ತಿಚಿತ್ರಗಳಿವೆ. ಇಲ್ಲಿ ಮಹಾಭಾರತ, ರಾಮಾಯಣ ಹಾಗೂ ಶಿವಪುರಾಣಗಳ ಕಥೆಗಳನ್ನು ಆಧರಿಸಿವೆ. ಸಜೀವ ವ್ಯಕ್ತಿಗಳಿಗಿಂತ ಹಿರಿದಾಗಿಸಿದ ಈ ದೇವ ದೇವತೆಗಳನ್ನು ಸುಲಭವಾಗಿ ಗುರುತಿಸಬಹುದು. ಕಿರಾತಾರ್ಜುನೀಯ ಪ್ರಸಂಗವನ್ನು ವಿವಿಧ ಹಂತಗಳಲ್ಲಿ ರೂಪಿಲಾಗಿದೆ. ಮಹೇರ್ಶವರನ ಮದುವೆಯ ಚಿತ್ರೀಕರಣವನ್ನು ಮದುಮಗಳ ಶೃಂಗಾರದ ಸನ್ನಿವೇಶದಿಂದಲೇ ಪ್ರಾರಂಭಿಸಲಾಗಿದೆ. ಬ್ರಹ್ಮದೇವನ ಮೇಲ್ವಿಚಾರಣೆಯಲ್ಲಿ ನಡೆಯಲಿದ್ದ ಈ ಶುಭ ಕಾರ್ಯಕ್ಕೆ ಬ್ರಹ್ಮ ವಿಷ್ಣು ಕುಬೇರ ಅಗ್ನಿ ವರುಣ ವಾಯು ದೇವರಾದಿಯಾಗಿ ದೇವಾನುದೇವತೆಗಳೆಲ್ಲ ನೆರೆದಿದ್ದಾರೆ. ಹೀಗೆ ಶಿವಲೀಲೆಗೆ ಸಂಬಂಧಿಸಿದ ಹಲವಾರು ಚಿತ್ರಗಳು ಇಲ್ಲಿ ರಚನೆಗೊಂಡಿವೆ. ನಾಟ್ಯಮಂಟಪದಲ್ಲಿ ಶಿವನು ಲಿಂಗದಿಂದ ಪ್ರತ್ಯಕ್ಷನಾಗುವುದು, ನೆರೆದ ಭಕ್ತಾದಿಗಳನ್ನು ಆಶೀರ್ವದಿಸುವುದು. ಭಕ್ತ ಮಾರ್ಕಂಡೇಯನು ಲಿಂಗಕ್ಕೆ ಮುತ್ತಿಕೊಂಡಿರುವುದು, ಶಿವನು ತ್ರಿಶೂಲದಿಂದ ಯಮನನ್ನು ತಿವಿಯುತ್ತಿರುವುದು, ಶಿವನು ಚಂಡೀಕೇಶ್ವರನಿಗೆ ಪರಶುವನ್ನು ದಯಪಾಲಿಸುತ್ತಿರುವುದು, ಭಿಕ್ಷಾಟನೆ ಶಿವ, ತ್ರಿಪುರಾಂತಕ ಶಿವನನ್ನು ಚಿತ್ರಿಸಲಾಗಿದೆ.

ಆರಾಧನಾ ಮಂಟಪದ ಮುಚ್ಚಿಗೆಯಲ್ಲಿ ಶಿವಲೀಲೆಯ ಲಿಂಗೋದ್ಭವ, ಅಂಧಕಾಸುರ ವಧೆ, ಚಂಡಿಕಾನುಗ್ರಹ, ಹರಿಹರ, ದಕ್ಷಿಣಾಮೂರ್ತಿ, ಅರ್ಧನಾರೀಶ್ವರ, ಕಲ್ಯಾಣಸುಂದರ, ಗೌರೀಪ್ರಸಾದಿತ, ಅನಂತತಾಂಡವ, ವೃಷಭರುದ್ರ ಮುಂತಾದ ಶಿವನ ಲೀಲೆಗಳನ್ನು ಗುರುತಿಸಲಾಗಿದೆ[೪೫] ಈ ಲೇಪಾಕ್ಷಿಯಲ್ಲಿ ಒಟ್ಟಾರೆ ಹರಿಹರರಿಗೆ ಸಂಬಂಧಿಸಿದ ಚಿತ್ರಗಳಿದ್ದರೂ ಕೂಡಾ ಹರನಿಗೆ (ಶಿವನಿಗೆ) ಸಿಂಹಪಾಲು ಸಂದಾಯವಾಗಿದೆ ಎನ್ನಬಹುದು.

**ಭೀಮಚೋಳನಿಗೆ ಪ್ರಾಣ ದಾನ ಮಾಡಿದ ಶಿವ:**

ಕರ್ಪೂರ ಪಟ್ಟಣದ ಧರ್ಮಚೋಳನ ಪಕ್ಷಪಾತ ರಹಿತ ನ್ಯಾಯದಾನದ ಕತೆಯನ್ನು ಇಲ್ಲಿ ಚಿತ್ರಿಸಲಾಗಿದೆ. ಆತನ ಮಗ ಭೀಮಚೋಳನು ವಿಹಾರಕ್ಕೆ ಹೋದಾಗ ಅವನರಥದ ಅಡಿಯಲ್ಲಿ ಹಸುವಿನ ಕರುಸಿಕ್ಕಿ ಹಾಕಿಕೊಂಡು ಸಾಯುತ್ತದೆ. ಶೋಕತಪ್ತಗೋಮಾತೆ ಅರಸನೆಡೆಗೆ ಧಾವಿಸಿ ನ್ಯಾಯದಾನವನ್ನು ಬೇಡುತ್ತಾಳೆ. ರಾಜನೋ ಅಪರಾಧ, ಶಿಕ್ಷೆಗಳು ಸಮಪ್ರಮಾಣದಲ್ಲಿ ಇರಬೇಕೆಂದು ನಂಬಿದಂತಿದೆ! ತನ್ನ ಮಗನ ಶಿರಚ್ಛೇದ ಮಾಡಿಸಿದ, ಅಲ್ಲದೇ ಮೃತಪಟ್ಟ ಕರುವಿಗೆ ಜೀವದಾನ ನೀಡುವಂತೆ ಶಿವನನ್ನು ಮೆಚ್ಚಿಸುತ್ತಾನೆ. ಆತನ ಧರ್ಮನಿಷ್ಠೆಗೆ ಮೆಚ್ಚಿದ ಶಿವನು ಗೋಮಾತೆಗೆ ಸಜೀವ ಕರುವನ್ನು ಹಿಂದಿರುಗಿಸುವುದರ ಜೊತೆಗೆ ಭೀಮಚೋಳನಿಗೆ ಪ್ರಾಣದಾನ ಮಾಡಿ ಕೈಲಾಸಕ್ಕೆ ಕರೆದೊಯ್ಯುತ್ತಾನೆ.[೪೬]

೪೫. ಡಾ. ಕೃಷ್ಣಾನಂದ ಕಾಮತ: ನಾ ಕಂಡ ಕರ್ನಾಟಕ: ಪುಟ. ೪

೪೬. ಡಾ. ಕೃಷ್ಣಾನಂದ ಕಾಮತ: ನಾ ಕಂಡ ಕರ್ನಾಟಕ : ಪುಟ. ೫.

ಚಿತ್ರಪಟದಲ್ಲಿ: ಶಿವ ಪಾರ್ವತಿಯರು ವೃಷಭಾರೂಢರಾಗಿ ಬರುತ್ತಿರುವುದು, ಶಿವನು ಬಲಗೈ ಮುಂದೆ ಚಾಚಿ ಆಶಾರ್ವದಿಸುತ್ತಿದ್ದು ಎದುರಿನಲ್ಲಿ ಧರ್ಮಚೋಳನು ಕೈಮುಗಿದು ಶಿವಪಾರ್ವತಿಯರನ್ನು ಸ್ವಾಗತಿಸುತ್ತಿರುವುದು ಅವನ ಬದಿಯಲ್ಲಿರುವ ಭೀಮಚೋಳನಿಗೆ ಮತ್ತು ಕರುವಿಗೆ ಪ್ರಾಣದಾನ ಮಾಡಿದ್ದು, ಆಕಳು ಶಿವನನ್ನು ನೋಡುತ್ತಿರುವುದು ಮತ್ತು ಪ್ರಜೆಗಳು ಈ ದೃಶ್ಯವನ್ನು ಕಂಡು ಭಯಭಕ್ತಿಯಿಂದ ಕೈಮುಗಿದು ಶಿವಪಾರ್ವತಿಯರತ್ತ ನೋಡುತ್ತಿರುವ ದೃಶ್ಯವಿದೆ. ಇಲ್ಲಿಯೂ ಪುರುಷರಿಗೆ ಕುಲಾಯಿಗಳನ್ನು ಹಾಕಲಾಗಿದೆ. ಮಹಿಳೆಯರ ಸೀರೆಗಳನ್ನು ಚೌಕಳಿಯಾಗಿ ಚಿತ್ರಿಸಲಾಗಿದೆ. ದೇವರನ್ನು (ಶಿವನನ್ನು) ಮತ್ತು ರಾಜನನ್ನು ದೊಡ್ಡ ಪ್ರಮಾಣದಲ್ಲಿ, ಉಳಿದವರನ್ನು ಚಿಕ್ಕ ಪ್ರಮಾಣದಲ್ಲಿ ಚಿತ್ರಿಸಲಾಗಿದೆ. ವಿಶೇಷವಾಗಿರುವ ಈ ನಿಯಮವನ್ನು ಪ್ರಾಣಿಗಳಲ್ಲಿಯೂ ಅಳವಡಿಸಲಾಗಿದೆ. ಶಿವನ ವಾಹನ ವೃಷಭನನ್ನು ದೊಡ್ಡದಾಗಿಯೂ ಎದುರಿನಲ್ಲಿರುವ ಆಕಳನ್ನು ಸಣ್ಣದಾಗಿಯೂ ಚಿತ್ರಿಸಲಾಗಿದೆ. ಅದರ ಕರುವನ್ನು ಮತ್ತಷ್ಟು ಸಣ್ಣದಾಗಿ ಚಿತ್ರಿಸಲಾಗಿದೆ. ವರ್ಣಗಾರಿಕೆಯನ್ನು ಸುಂದರವಾಗಿ ಸಮತೋಲನದಲ್ಲಿ ಬಳಕೆ ಮಾಡಲಾಗಿದೆ. ಒಟ್ಟಾರೆಯಾಗಿ ಸಂಯೋಜನೆಯು ಸುಂದರವಾಗಿಯೂ ಮೂಡಿ ಬಂದಿದೆ. ಹೀಗೆ ಲೇಪಾಕ್ಷಿಯಲ್ಲಿ ಶಿವನಿಗೆ ಸಂಬಂಧಿಸಿದ ಹಲವಾರು ಭಿತ್ತಿಚಿತ್ರಗಳನ್ನು ಕಾಣಬಹುದಾಗಿದೆ.

**೮. ಬುಜೂರ ಕಂಚನಹಳ್ಳಿಯ ಶ್ರೀರಾಮದೇವಾಲಯದ ವೀರಶೈವ ಭಿತ್ತಿಚಿತ್ರಗಳು :**

ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದಿಂದ ೩ ಕಿ.ಮಿ.ಗಳ ಅಂತರದಲ್ಲಿರುವ ಬುಜೂರ ಕಂಚನಹಳ್ಳಿ, ಈ ಗ್ರಾಮದ ಹೊರವಲಯದಲ್ಲಿರುವ ಶ್ರೀ ರಾಮಮಂದಿರದಲ್ಲಿ ವರ್ಣಮಯ ಭಿತ್ತಿಚಿತ್ರಗಳು ಕಂಡು ಬರುತ್ತವೆ. ಈ ದೇವಾಲಯದ ಗೋಡೆಗಳು ಮಣ್ಣಿನಲ್ಲಿದ್ದು ಮಲೆನಾಡಿನ ವಾಸ್ತು ಹೊಂದಿರುವ ಇದು ಕಪ್ಪು ಹೆಂಚುಗಳ ಹೊದಿಕೆಯನ್ನು ಹೊಂದಿದ್ದು ದೇವಾಲಯವನ್ನು ಚಚೌಕವಾದ ತಳಪಾಯದೊಂದಿಗೆ ಕಟ್ಟಲಾಗಿದ್ದು ಪ್ರತಿಯೊಂದು ಬದಿಯ ಅಳತೆ ೨೦ ಅಡಿಗಳಾಗಿದ್ದು ಈ ಗುಡಿಯು ನಾಲ್ಕೂ ದಿಕ್ಕುಗಳಲ್ಲಿ ೩೨ ಕಂಬಗಳನ್ನು ಹೊಂದಿದ್ದು ಪ್ರತಿಯೊಂದು ದಿಕ್ಕಿಗೂ ೮ ಕಂಬಗಳಿವೆ. ಅದಕ್ಕೆ ಮೇಲ್ಛಾವಣಿ ಹೊದಿಸಲಾಗಿದೆ. ದೇವಾಲಯದ ಸುತ್ತಲೂ ಪ್ರದಕ್ಷಿಣೆ ಹಾಕಲು ಪಥವನ್ನು ನಿರ್ಮಿಸಲಾಗಿದೆ. ಚಿತ್ರಗಳನ್ನು ನೋಡುತ್ತಾ ಸಾಗಲು ಅನುಕೂಲ ಕಲ್ಪಿಸಿದ್ದಾರೆ. ದೇವಾಲಯದ ನಾಲ್ಕೂ ಬದಿಯ ಹೊರಗೋಡೆಗಳು, ಒಳಭಾಗದ ಗೋಡೆಗಳು, ಮರದ ತೊಲೆಗಳು, ಬಾಗಿಲ ಮೇಲಿನ ಮರದ ಫಲಕಗಳು, ಬಾಗಿಲ ತೋರಣಗಳಲ್ಲಿ ಚಿತ್ರಗಳಿವೆ. ಪ್ರಮುಖವಾಗಿ ವೈಷ್ಣವ ಧರ್ಮಕ್ಕೆ ಸಂಬಂಧಿಸಿದ ಚಿತ್ರಗಳಿದ್ದು ಪೂರಕವಾಗಿ ಎನ್ನುವಂತೆ ಶೈವ ಧರ್ಮಕ್ಕೆ ಸಂಬಂಧಿಸಿದ ಭಿತ್ತಿ ಚಿತ್ರಗಳೂ ರಚನೆಗೊಂಡಿವೆ. ಈ ಅಪರೂಪದ ದೇವಾಲಯವನ್ನು ಪರಿವೀಕ್ಷಿಸಿದ ಡಾ. ಎಸ್.ಸಿ.ಪಾಟೀಲರು ಇಲ್ಲಿಯ ಚಿತ್ರಗಳ ಕುರಿತು ಪ್ರಸ್ತಾಪಿಸಿರುವರು. ನಂತರ ಡಾ. ಯಾದಪ್ಪ ಪರದೇಶಿ ಅವರು ಸಮಗ್ರವಾಗಿ ಅಧ್ಯಯನವನ್ನು ಮಾಡಿರುವರು.[೪೭] ಇತ್ತೀಚೆಗೆ ಈ ದೇವಾಲಯವು ಬಿದ್ದಿದ್ದು ಭಿತ್ತಿಯಲ್ಲಿರುವ ಎಲ್ಲ ಕಲಾಕೃತಿಗಳು ಹಾಳಾಗಿದ್ದು

೪೭. ಡಾ. ಯಾದಪ್ಪ ಪರದೇಶಿ: ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ-ಒಂದು ಅಧ್ಯಯನ: ಪುಟ-೨೩೮.

ಮರದ ಮೇಲಿನ ಚಿತ್ರಗಳು ಉಳಿದಿದ್ದು ಅದರ ಸಂರಕ್ಷಣೆ ಮಾಡುವ ಹಿನ್ನೆಲೆಯಲ್ಲಿ ಡಾ. ಎಸ್.ಸಿ.ಪಾಟೀಲ ಅವರೊಂದಿಗೆ ನಾನೂ ಹೋಗಿದ್ದೆ. ಕನ್ನಡ ವಿಶ್ವವಿದ್ಯಾಲಯದಲ್ಲಿ ಸಂರಕ್ಷಣೆ ಮಾಡುವುದಾಗಿ ಕೇಳಿದಾಗ ಆ ಊರ ಜನ ಒಪ್ಪಲಿಲ್ಲ. ಮತ್ತೊಮ್ಮೆ ನೋಡಲು ಹೋದಾಗ ಈ ಕಲಾಕೃತಿಗಳಿರುವ ತೊಲೆಗಳನ್ನು ಒಂದೆಡೆ ಒಟ್ಟಲಾಗಿತ್ತು. ಆಗಲೂ ಅವರು ಕೊಡಲಿಲ್ಲ. ಈ ಕಲಾಕೃತಿಗಳ ಮಹತ್ವ ಅರಿಯದ ಆ ಜನ ತಾವೂ ಅವುಗಳನ್ನು ಸಂರಕ್ಷಿಸಲಿಲ್ಲ. ನಮಗೂ ಅವುಗಳನ್ನು ಕೊಡಲಿಲ್ಲ. ಇಂದು ಆ ಕಲಾಕೃತಿಗಳು ನೋಡಲೂ ಸಿಗುವುದಿಲ್ಲ. ಆಗ ತೆಗೆದುಕೊಂಡ ಛಾಯಾ ಚಿತ್ರಗಳೇ ದಾಖಲೆಗಳಾಗಿ ಉಳಿದಿವೆ ಅಷ್ಟೇ. ಇಲ್ಲಿ ಪಶ್ಚಿಮ ಗೋಡೆಯ ಮೇಲೆ ಇರುವ ಭಿತ್ತಿಚಿತ್ರಗಳು ವೀರಶೈವ ಭಿತ್ತಿಚಿತ್ರಗಳಾಗಿದ್ದು ಅವು ಕೆಳಗಿನಂತಿವೆ.

**೧. ಏಕಮುಖದ ಶಿವನ ಚಿತ್ರ:**

ಗರ್ಭಗೃಹದ ಬಲಗಡೆಯಲ್ಲಿರುವ ಚಿತ್ರಪಟ್ಟಿಕೆಯಲ್ಲಿ ಈ ದೃಶ್ಯವನ್ನು ಚಿತ್ರಿಸಲಾಗಿದ್ದು ಇಲ್ಲಿ ಶಿವನು ನಂದಿಯ ಮೆಲೆ ಕುಳಿತಿದ್ದಾನೆ. ಆತನ ತೊಡೆಯ ಮೇಲೆ ಚಿಕ್ಕರೂಪದಲ್ಲಿ ಪಾರ್ವತಿಯೂ ಇರುವಳು. ಉಳಿದ ಶಿವಗಣಗಳು ಛತ್ರಚಾಮರ ಹಿಡಿದುಕೊಂಡಿದ್ದಾರೆ ಅಲ್ಲದೇ ವಾದ್ಯಗಳನ್ನೂ ಬಾರಿಸುತ್ತಿದ್ದಾರೆ ಮೇಲ್ಭಾಗದಲ್ಲಿ ದೇವತೆಗಳ ಸಮೂಹ ಪುಷ್ಪ ವೃಷ್ಟಿಯನ್ನು ಸುರಿಸುತ್ತಿದ್ದಾರೆ. ಈ ಚಿತ್ರದ ಬಣ್ಣವು ಉದುರಿ ಹೋಗಿದ್ದು ಅಲ್ಲಲ್ಲಿ ಗೀಚುಗಳನ್ನು ಹಾಕಿ ಈ ಚಿತ್ರದ ಭಿತ್ತಿಯೂ ಕೆಲವು ಕಡೆ ಹಾಳಾಗಿದೆ. ಈ ದೃಶ್ಯದ ಬಹುಭಾಗ ಹಾನಿಗೊಂಡಿದೆ.

**೨. ಪಂಚಮುಖದ ಶಿವ:**

ಇಲ್ಲಿ ಶಿವನು ಪಾರ್ವತಿ ಸಮೇತನಾಗಿ ಕೈಲಾಸ ಪರ್ವತದಲ್ಲಿ ಕುಳಿತಿದ್ದಾನೆ. ಶಿವನಿಗೆ ಐದು ಮುಖಗಳನ್ನು ಚಿತ್ರಿಸಲಾಗಿದ್ದು ಎಲ್ಲ ಮುಖಗಳಿಗೂ ತಲೆಯ ಮೇಲೆ ಕಿರೀಟವಿದೆ. ಮಧ್ಯದ ತಲೆಯಿಂದ ಗಂಗೆಯು ಧುಮುಕುತ್ತಿದ್ದಾಳೆ. ಈ ಶಿವನಿಗೆ ಹತ್ತು ಕೈಗಳಿದ್ದು ಈ ಹತ್ತು ಕೈಗಳಲ್ಲಿ ಆಯುಧಗಳಿವೆ. ಈ ಶಿವನ ಒಡ್ಡೋಲಗದಲ್ಲಿ ಬಲಗಡೆಯಲ್ಲಿ ನಂದಿ, ಭೃಂಗಿ, ವೀರಭದ್ರರಿದ್ದರೆ, ಎಡಗಡೆಯಲ್ಲಿ ನಾರದ ತುಂಬುರರಿದ್ದಾರೆ. ಕಲಾಕೃತಿಯ ಮೇಲ್ಭಾಗದಲ್ಲಿ ಬಾಲವುಳ್ಳ ಯಕ್ಷಕನ್ಯೆಯರು ಹಾರುತ್ತಿದ್ದು ಹಾಗೂ ಶಿವನಿಗೆ ಆರತಿ ಬೆಳಗುತ್ತಿದ್ದಾರೆ. ಈ ಚಿತ್ರದಲ್ಲಿ ಶಿವನ ಎಲ್ಲ ಮುಖಗಳಿಗೂ ಗಡ್ಡ ಮೀಸೆಗಳನ್ನು ಚಿತ್ರಿಸಲಾಗಿದೆ. ಇಂತಹ ಶಿವನ ಚಿತ್ರವು ಉತ್ತರ ಕನ್ನಡ ಜಿಲ್ಲೆಯ ಕುಮಟಾದ ಮಹಾಲಸಾ ನಾರಾಯಣಿ ದೇವಾಲಯದ ಗೋಡೆಯಲ್ಲಿ ಭಿತ್ತಿಚಿತ್ರವಾಗಿ ರಚನೆಗೊಂಡಿದೆ. ಈ ಕಲಾಕೃತಿಯ ಹಿನ್ನೆಲೆಯಲ್ಲಿ ಕೆಂಪುವರ್ಣವನ್ನು ಬಳಸಿದ್ದು ಆಕೃತಿಗಳಿಗೆ ಹಳದಿ ಮತ್ತು ನೀಲಿವರ್ಣಗಳನ್ನು ಬಳಸಲಾಗಿದೆ. ಉತ್ತಮವಾದ ಸಂಯೋಜನೆಯೊಂದಿಗೆ ಆಕರ್ಷಕ ವರ್ಣವನ್ನು ಬಳಸಿರುವರು. ಕುಳಿತಿರುವ ಶಿವನ ಪಾದದ ಕೆಳಗಡೆ ವೃಷಭನ ಚಿತ್ರವನ್ನು ಚಿತ್ರಿಸಲಾಗಿದೆ.

**೩. ಯೋಗ ಪಟ್ಟದಲ್ಲಿರುವ ಮುನಿಯ ಚಿತ್ರ:**

ಈ ಚಿತ್ರವು ಉತ್ತರ ಗೋಡೆಯ ಮೇಲೆ ಚಿತ್ರಣಗೊಂಡಿದ್ದು ಈ ಚಿತ್ರವು ೨.೧/೨ ೨.೧/೨ ಅಡಿ ಅಳತೆಯನ್ನು ಹೊಂದಿದ್ದು ಮುನಿಯು ಎರಡೂ ಕಾಲುಗಳನ್ನು ಜೋಡಿಸಿಕೊಂಡು ಕತ್ತರಿಯ ವಿನ್ಯಾಸದಲ್ಲಿ

ಇಟ್ಟುಕೊಂಡು ಅವುಗಳಿಗೆ ಹಗ್ಗ ಬಿಗಿದುಕೊಂಡು ಯೋಗಪಟ್ಟದಲ್ಲಿ ಕುಳಿತಿದ್ದಾನೆ. ತಪಸ್ಸು, ಉಪವಾಸಾದಿಗಳಿಂದ ದೇಹ ಕ್ಷೀಣವಾದರೂ ಕಣ್ಣುಗಳು ಕಾಂತಿಯಿಂದ ಕೂಡಿವೆ. ಕೊರಳಲ್ಲಿ, ಕೈಗಳಲ್ಲಿ ಜಟೆಯಲ್ಲಿ ರುದ್ರಾಕ್ಷಿ ಮಾಲೆ ಧರಿಸಿದ್ದಾನೆ. ಮುನಿಯು ಹುಲಿಯ ಚರ್ಮದ ಮೇಲೆ ಕುಳಿತಿದ್ದು ಪಕ್ಕದಲ್ಲಿ ಆತನ ಕಮಂಡಲು ಇಡಲ್ಪಟ್ಟಿದ್ದು ಮುನಿಗಳು ಹೀಗೆ ಹಗ್ಗಸುತ್ತಿಕೊಂಡು ಯೋಗಪಟ್ಟದಲ್ಲಿರುವ ಚಿತ್ರಗಳು ಮಹಾಲಿಂಗಪುರದ ಮಹಾಲಿಂಗೇಶ್ವರ ಮಠದಲ್ಲಿಯೂ ರಚನೆಯಾಗಿದೆ.

**೪. ಲಿಂಗಪೂಜೆಯ ಚಿತ್ರ:**

ದೇವಾಲಯದ ಪ್ರವೇಶದ್ವಾರದ ಮೇಲೆ ಇರುವ ತೊಲೆಯ ಮೇಲೆ ಈ ಚಿತ್ರ ಬರೆಯಲಾಗಿದೆ ಇದರ ಅಳತೆಯು ೪ ೧/೨ ಅಡಿ ಅಗಲ ೬ ಇಂಚು ಎತ್ತರದ ಸ್ಥಳದಲ್ಲಿ ಚಿತ್ರ ರಚನೆಗೊಂಡಿದೆ. ತೆರೆದ ಮಂಟಪದಲ್ಲಿ ಈಶ್ವರ ಲಿಂಗವನ್ನು ಚಿತ್ರಿಸಲಾಗಿದ್ದು ಲಿಂಗದ ಮೇಲ್ಭಾಗ ಮನುಷ್ಯಮುಖದ ವಿನ್ಯಾಸವನ್ನು ಹೊಂದಿದ್ದು ಲಿಂಗಕ್ಕೆ ಕಣ್ಣು, ಮೂಗು, ಬಾಯಿಗಳಲ್ಲದೇ ಮೀಸೆಯನ್ನೂ ಚಿತ್ರಿಸಲಾಗಿದೆ. ಲಿಂಗದ ಮೇಲೆ ಬಿಳಿಯ ಹೂಮಾಲೆ ನೇತಾಡುತ್ತಿದೆ. ಲಿಂಗವಿರುವ ಮಂಟಪದ ಮೇಲೆ ಕಳಶವನ್ನು ಚಿತ್ರಿಸಿದೆ. ಮಂಟಪದ ಕಂಬಗಳು ಅಲಂಕಾರಿಕ ವಿನ್ಯಾಸದೊಂದಿಗೆ ಇವೆ. ಲಿಂಗಮಂಟಪದಲ್ಲಿ ಎಡಬಲಗಳಲ್ಲಿ ಒಂದು ದೀಪದ ಸಮೆಗಳನ್ನು ಹಚ್ಚಿ ಇಡಲಾಗಿದೆ. ಸಮೆಗಳ ಪಕ್ಕದಲ್ಲಿ ಇಬ್ಬರು ಚಂಡಿಕೆ ಬಿಟ್ಟ ಪೂಜಾರಿಗಳು ಪೂಜಾನಿರತರಾಗಿರುವರು. ಬಲಗಡೆಯ ಪೂಜಾರಿ ಜಾಗಟೆ ಬಾರಿಸುತ್ತಿದ್ದರೆ, ಎಡಗಡೆಯ ಪೂಜಾರಿ ಧೂಪಾರತಿ ಬೆಳಗುತ್ತ ಗಂಟೆ ಬಾರಿಸುತ್ತಿದ್ದಾನೆ. ಈ ಪೂಜಾರಿಗಳ ಹಿಂದೆ ನಂದಿಗಳು ಕುಳಿತಿವೆ. ಬಲಗಡೆಯ ನಂದಿಯ ಹಿಂಭಾಗದಲ್ಲಿರುವ ವ್ಯಕ್ತಿಯೊಬ್ಬ ನಗಾರಿ ಬಾರಿಸುತ್ತಿದ್ದಾನೆ. ಎಡಬಾಗದ ನಂದಿಯ ಹಿಂದಿನ ಮನುಷ್ಯ ಕಹಳೆಯನ್ನೂದುತ್ತಿದ್ದಾನೆ. ಪೂಜೆ ಮಾಡುತ್ತಿರುವ ಪೂಜಾರಿಗಳು, ಪಂಚೆ ಉಟ್ಟು ಹೆಗಲಮೇಲೆ ಕಾಲನ್ನು ಹಾಕಿಕೊಂಡಿರುವರು. ನಗಾರಿ ಮತ್ತು ಕಹಳೆಯನ್ನೂದುತ್ತಿರುವ ವ್ಯಕ್ತಿಗಳು ತಲೆಗೆ ಟೊಪ್ಪಿಗೆಯನ್ನು ಹಾಕಿಕೊಂಡಿರುವರು. ಇದು ಸ್ಥಳೀಯರ ಪ್ರಭಾವ ಅಥವಾ ಸಮಕಾಲೀನತೆಯನ್ನು ಕಲಾವಿದ ತೋರಿಸಿದ್ದಾನೆ. ಹಿನ್ನೆಲೆಯಲ್ಲಿ ಕೆಂಪುವರ್ಣವನ್ನು ಬಳಸಿದ್ದು ಹಳದಿ, ನೀಲಿ, ಬಿಳಿ, ಕಪ್ಪು, ಹಸಿರು ವರ್ಣಗಳನ್ನು ಬಳಸಿರುವರು. ಹೀಗೆ ಬಿ.ಕೆ. ಹಳ್ಳಿಯ ಭಿತ್ತಿಚಿತ್ರಗಳಲ್ಲಿ ವೀರಶೈವ ಚಿತ್ರಗಳನ್ನು ಬಳಸಿರುವರು.

**ಎಡೆಯೂರಿನ ಭಿತ್ತಿಚಿತ್ರಗಳು:**

೧೫ ನೆಯ ಶತಮಾನದಲ್ಲಿ ರಚನೆಯಾದ ಭಿತ್ತಿಚಿತ್ರಗಳಾಗಿದ್ದು, ಎಡೆಯೂರಿನ ತೋಂಟದ ಸಿದ್ಧಲಿಂಗೇಶ್ವರ ಗುಡಿಯ ಮಹಾದ್ವಾರದಲ್ಲಿ ಅಲ್ಲಿನ ಮಂಟಪಗಳಲ್ಲಿ ಚಿತ್ರಗಳನ್ನು ರಚಿಸಲಾಗಿದೆ. ಸಿದ್ಧಲಿಂಗನೆಂಬ ಜಂಗಮಗುರುವಿನ ಜೀವನ ಚಿತ್ರಗಳನ್ನು ಹಾಗೂ ಶಿವನ ಲೀಲೆಗಳಿಗೆ ಸಂಬಂಧಿಸಿದ ಕಲಾಕೃತಿಗಳನ್ನು ಚಿತ್ರಿಸಲಾಗಿದೆ.

೧೬ ನೆಯ ಶತಮಾನದಲ್ಲಿ ರಚನೆಯಾದ ಭಿತ್ತಿಚಿತ್ರಗಳನ್ನು ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನ 'ತಿರುಮಲ್ಲೇಶ್ವರ ದೇವಾಲಯದ' ಮುಚ್ಚಿಗೆಗಳಲ್ಲಿ ರಚಿಸಲಾಗಿದೆ. ಇಲ್ಲಿಯೂ ಶೈವಪುರಾಣದ ವಸ್ತುವಿಷಯಗಳನ್ನು ಆಯ್ಕೆ

ಮಾಡಿಕೊಂಡು ಚಿತ್ರಿಸಲಾಗಿದೆ. ಇದೇ ಜಿಲ್ಲೆಯ 'ಅಂಕಲಿ ಸ್ವಾಮಿಯ ಗುಹೆಯಲ್ಲಿಯೂ' ಭಿತ್ತಿಚಿತ್ರಗಳನ್ನು ರಚಿಸಲಾಗಿದ್ದು, ಇದೊಂದು ವೀರಶೈವ ಮಠವಾಗಿದ್ದು, ಶಿವನ ಲೀಲೆಗಳಿಗೆ ಸಂಬಂಧಿಸಿದ ಭಿತ್ತಿಚಿತ್ರಗಳು ಇದ್ದವು ಎಂಬುದು ತಿಳಿದುಬರುತ್ತವೆ.

ತಲಕಾಡಿನ ಬಳಿ ಇರುವ 'ಮಲ್ಲಿಕಾರ್ಜುನನ ಗುಡಿ'ಯಲ್ಲಿ ಭಿತ್ತಿಚಿತ್ರಗಳಿರುವುದು ಕಂಡುಬರುತ್ತಿದ್ದು, ಇದೊಂದು ಶೈವ ದೇವಾಲಯವಾಗಿರುವುದರಿಂದ ಇಲ್ಲಿಯೂ ಶೈವ ಪ್ರಧಾನವಾದ ಚಿತ್ರಗಳು ರಚನೆಗೊಂಡಿದ್ದು, ಇಲ್ಲಿಯ ಮಂಟಪದಲ್ಲಿ ೧೮ ನೆಯ ಶತಮಾನದ ಕಲಾಕೃತಿಗಳಿವೆ.

**ಹರದನಹಳ್ಳಿಯ ದಿವ್ಯಲಿಂಗೇಶ್ವರ ದೇವಾಲಯದ ಭಿತ್ತಿಚಿತ್ರಗಳು :**

ಚಾಮರಾಜನಗರದಿಂದ ೫ ಕಿ.ಮೀ. ದೂರದಲ್ಲಿರುವ ಹರದನಹಳ್ಳಿಯ ದಿವ್ಯಲಿಂಗೇಶ್ವರ ದೇವಾಲಯ ಕ್ರಿ.ಶ. ೧೫ ನೆಯ ಶತಮಾನಕ್ಕಿಂತಲೂ ಪೂರ್ವದಲ್ಲಿಯೇ ಪ್ರಸಿದ್ಧಿಯನ್ನು ಪಡೆದ ದೇವಾಲಯವಾಗಿದೆ. ಎಡೆಯೂರು ಸಿದ್ಧಲಿಂಗೇಶ್ವರರು ದೀಕ್ಷೆ ಪಡೆದುಕೊಂಡ ಈ ಸ್ಥಳದಲ್ಲಿ ಪುರಾತನವಾದ ಅಂದರೆ ೧೪ ನೆಯ ಶತಮಾನಕ್ಕಿಂತಲೂ ಮೊದಲೇ ನಿರ್ಮಾಣವಾದ ಈ ದೇವಾಲಯವನ್ನು ಮೈಸೂರು ಅರಸರ ಕಾಲಕ್ಕೆ ಕ್ರಿ.ಶ. ೧೮೧೦ ರಲ್ಲಿ ಜೀರ್ಣೋದ್ಧಾರ ಮಾಡಲಾಯಿತು. ಇದೇ ವೇಳೆಗೆ ಇಲ್ಲಿ ಭಿತ್ತಿಚಿತ್ರಗಳನ್ನು ಬರೆಸಲಾಯಿತು[೪೮] ಎಂದು ಬಿ.ವಿ.ಕೆ. ಶಾಸ್ತ್ರೀ ಅವರು 'ಕರ್ನಾಟಕದ ಭಿತ್ತಿಚಿತ್ರಗಳಲ್ಲಿ' ಹೇಳಿರುವರು.

ಈ ದೇವಾಲಯದ ಹಿಂಭಾಗದಲ್ಲಿರುವ ಮಂಟಪದ ಮುಚ್ಚಿಗೆ ಮತ್ತು ಅಡ್ಡತೊಲೆಗಳು ಚಿತ್ರಗಳಿಂದ ತುಂಬಿವೆ. ಈ ಮಂಟಪದ ಮೇಲ್ಛಾವಣಿಯ ೫ ನೆಯ ಅಂಕಣದಲ್ಲಿನ 'ಗಜಾಸುರಮರ್ದನ' ಚಿತ್ರವು ಇಲ್ಲಿನ ಚಿತ್ರಗಳಲ್ಲಿಯೇ ಅತ್ಯಂತ ಗಮನಾರ್ಹ ಚಿತ್ರವಾಗಿದೆ. (ಗಜ) ಆನೆಯನ್ನು ಕೊಂದ ಶಿವನು ಆನೆಯ ತಲೆಯ ಮೇಲೆ ನೃತ್ಯ ಮಾಡುತ್ತಿರುವನು. ಈ ಚಿತ್ರದ ಸುತ್ತಲೂ ಚಕ್ರಾಕಾರದ ನಕ್ಷೆಯನ್ನು ರಚಿಸಿದ್ದು, ಅದರಿಂದಾಗಿ ಚಿತ್ರವು ಮತ್ತಷ್ಟು ಸುಂದರವಾಗಿ ಕಾಣುವಂತೆ ಆಗಿದೆ. ಇಲ್ಲಿ ಬೃಹದಾಕಾರದ ಆನೆಯು ಸತ್ತುಬಿದ್ದಿದ್ದು, ಅದರ ತಲೆಯ ಮೇಲೆ ತಾಂಡವ ನೃತ್ಯ ಮಾಡಿದಂತೆ ಶಿವನನ್ನು ಚಿತ್ರಿಸಲಾಗಿದೆ. ಅವನ ಮುಖದಲ್ಲಿ ರೋಷ ಮತ್ತು ವಿಜಯದ ಸಂಕೇತಗಳು ಎದ್ದು ಕಾಣುತ್ತವೆ. ಒಟ್ಟಾರೆಯಾಗಿ ವರ್ಣಸಂಯೋಜನೆಯೊಂದಿಗೆ ಭಾವನೆಗಳು ಮುಖದಲ್ಲಿ ಕಂಡುಬರುತ್ತಿರುವುದರಿಂದ ಇನ್ನಷ್ಟು ಈ ಚಿತ್ರ ಉತ್ಕೃಷ್ಟವಾಗಿ ಮೂಡಿಬಂದಿದೆ.

ಇದರಂತೆಯೇ ಮೇಲ್ಛಾವಣಿಯಲ್ಲಿ ಪಂಚಮುಖದ ಶಿವ, ಉಮಾಮಹೇಶ್ವರ, ನಂದಿಯ ಮೇಲೆ ಕುಳಿತಿರುವ ಶಿವ ಪಾರ್ವತಿಯರು, ಹೀಗೆ ಶಿವ ಪುರಾಣಕ್ಕೆ ಸಂಬಂಧಿಸಿದ ಚಿತ್ರಗಳನ್ನು ರಚನೆ ಮಾಡಿರುವರು. ಮೊದಲನೆಯ ತೊಲೆಯಲ್ಲಿ ಉಮಾಮಹೇಶ್ವರ, ಕಿರಾತಾರ್ಜುನೀಯ ಪ್ರಸಂಗ ಚಿತ್ರಿತವಾಗಿವೆ. ಎರಡನೆಯ ತೊಲೆಯ ಮೇಲೆ ಲಿಂಗಪೂಜೆಯಲ್ಲಿ ನಿರತರಾದ ಅಷ್ಟದಿಕ್ಪಾಲಕರು, ತುಂಬುರರು ವಾದ್ಯ ನುಡಿಸುತ್ತಿರುವರು.

---

೪೮. ಬಿ.ವಿ.ಕೆ.ಶಾಸ್ತ್ರಿ, ೧೯೮೩ : ಕರ್ನಾಟಕದ ಭಿತ್ತಿಚಿತ್ರಗಳು: ಪು. ೧೨

ಈತನ ಜೊತೆ ದೇವಲೋಕದ ಅನೇಕ ಸಂಗೀತಕಾರರು ಮುಂತಾದ ಚಿತ್ರಗಳನ್ನು ರಚಿಸಲಾಗಿದೆ. ಮೂರು ಮತ್ತು ನಾಲ್ಕನೆಯ ತೊಲೆಗಳಲ್ಲಿ ಜನಸಾಮಾನ್ಯರನ್ನು ಚಿತ್ರಿಸಿದ್ದು, ಮತ್ತೆ ಮುಂದಿನ ತೊಲೆಯಲ್ಲಿ ಶಿವನಿಗೆ ತನ್ನ ಕಣ್ಣನ್ನು ಕಿತ್ತು ಅರ್ಪಿಸುತ್ತಿರುವ ಬೇಡರ ಕಣ್ಣಪ್ಪ ಹಾಗೂ ವಿಷ್ಣುವಿಗೆ ಸಂಬಂಧಿಸಿದ ಚಿತ್ರಗಳು ರಚಿಸಲ್ಪಟ್ಟಿವೆ.[೪೯] ಒಟ್ಟಾರೆಯಾಗಿ ಈ ಗುಡಿಯಲ್ಲಿ ಶಿವ ಮತ್ತು ವಿಷ್ಣುವಿಗೆ ಸಂಬಂಧಿಸಿದ ಹಲವಾರು ಸನ್ನಿವೇಶ ಮತ್ತು ಘಟನೆಗಳನ್ನು ಶಿವಪುರಾಣಗಳಿಗೆ, ವಿಷ್ಣು ಪುರಾಣಗಳಿಗೆ ಸಂಬಂಧಿಸಿದಂತೆ ರಚಿಸಲಾಗಿದೆ. ಮಧ್ಯದಲ್ಲಿ ಜನಸಾಮಾನ್ಯರ ವಿಷಯಗಳಾದ ಹಾವಾಡಿಗ, ಕಪಿಯೊಂದರ ಚೆಲ್ಲಾಟ ಹೀಗೆ ಚಿತ್ರಿಸಲಾಗಿದೆ. ಆದರೂ ವೀರಶೈವ ಧರ್ಮಕ್ಕೆ ಸಂಬಂಧಿಸಿದಂತೆ ಹೆಚ್ಚು ಭಿತ್ತಿಚಿತ್ರಗಳು ರಚಿಸಲ್ಪಟ್ಟಿವೆ. ಮೈಸೂರು ಅರಸರು ಈ ಪುರಾತನ ಗುಡಿಯನ್ನು ಪುನರುಜ್ಜೀವನಗೊಳಿಸಿ, ಈ ಭಿತ್ತಿಚಿತ್ರಗಳನ್ನು ರಚನೆ ಮಾಡಿಸಿದ್ದು ಅಭಿನಂದನಾರ್ಹರಾಗಿರುವರು.

**ಚಾಮರಾಜೇಶ್ವರ ದೇವಾಲಯದ ಭಿತ್ತಿಚಿತ್ರಗಳು :**

ಚಾಮರಾಜನಗರವು ಇತಿಹಾಸ ಪ್ರಸಿದ್ಧವಾದ ಸ್ಥಳವಾಗಿದ್ದು, ಹಿಂದೆ ಇದಕ್ಕೆ ಅರಿಕುಠಾರವೆಂದು ಕರೆಯಲಾಗುತ್ತಿತ್ತು. ೧೯ ನೆಯ ಶತಮಾನದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ತಮ್ಮ ತಂದೆಯವರ ಸವಿನೆನಪಿಗಾಗಿ 'ಚಾಮರಾಜನಗರ'ವೆಂದು ಹೆಸರನ್ನು ಬದಲಿಸಿದರು. ಅವರೇ ಈ ಸ್ಥಳದಲ್ಲಿ ಕ್ರಿ.ಶ. ೧೮೨೬ ರಲ್ಲಿ ಚಾಮರಾಜೇಶ್ವರ ದೇವಾಲಯವನ್ನು ಕಟ್ಟಿಸಿದರು. ಈ ದೇವಾಲಯದಲ್ಲಿ ವರ್ಣಮಯ ಭಿತ್ತಿಚಿತ್ರಗಳನ್ನು ಬರೆಸಿದರು. ಇಲ್ಲಿನ ಚಿತ್ರಗಳಲ್ಲಿ 'ಗಿರಿಜಾ ಕಲ್ಯಾಣ' ಚಿತ್ರವು ದೊಡ್ಡ ಪ್ರಮಾಣದಲ್ಲಿ ರಚನೆಗೊಂಡಿದ್ದು, ಇದರ ಪಕ್ಕದಲ್ಲಿ 'ಶಿವತಾಂಡವ' ದೃಶ್ಯ, ಮೇಲ್ಗಡೆಯಲ್ಲಿ 'ಸಮುದ್ರಮಥನ' ದೃಶ್ಯ ರಚಿಸಿದೆ. ಇವು ಪಾರ್ವತಿ ದೇವಿಯ ಎಡಬಲ ಭಾಗಗಳಲ್ಲಿ ರಚನೆಗೊಂಡಿವೆ.

**ಮುಡುಕುತೊರೆಯ ಮಲ್ಲಿಕಾರ್ಜುನ ದೇವಾಲಯದ ಭಿತ್ತಿಚಿತ್ರಗಳು :**

ಮೈಸೂರು ಜಿಲ್ಲೆಯ ಮುಡುಕುತೊರೆಯಲ್ಲಿನ ಮಲ್ಲಿಕಾರ್ಜುನ ದೇವಾಲಯದ ಪ್ರಾಂಗಣದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಕಾಲದಲ್ಲಿ ಕಲ್ಯಾಣಮಂಟಪವೊಂದನ್ನು ಕಟ್ಟಿಸಿ ಅದನ್ನು ವರ್ಣಚಿತ್ರಗಳಿಂದ ಅಲಂಕರಿಸಲಾಗಿತ್ತು ಎಂಬುದು ತಿಳಿದುಬರುತ್ತದೆ. 'ಗಿರಿಜಾ ಕಲ್ಯಾಣದ ಕಥೆಯ ಘಟನೆಗಳನ್ನು ಇಲ್ಲಿ ಹಂತ ಹಂತವಾಗಿ ನಿರೂಪಿಸಲಾಗಿದೆ. ಶಿವತಾಂಡವ ನೃತ್ಯ, ವಾದ್ಯಧಾರಿಗಳಾದ ಬ್ರಹ್ಮ, ವಿಷ್ಣು, ಸರಸ್ವತಿ ಮುಂತಾದ ದೇವತೆಗಳು ಸಪ್ತಋಷಿಗಳು, ಕಾಳಿ, ವೀರಭದ್ರ ಮೊದಲಾದ ಚಿತ್ರಗಳು ರಚನೆಗೊಂಡಿವೆ.

ತುಮಕೂರು ಜಿಲ್ಲೆಯ ಶಿರಾ ತಾಲೂಕಿನಿಂದ ೨೦ ಕಿ.ಮೀ. ಅಂತರದಲ್ಲಿ "ಸೀಬಿಯ ಶ್ರೀ ನರಸಿಂಹಸ್ವಾಮಿ ದೇವಾಲಯ" ದ ಮಹಾದ್ವಾರ ಮತ್ತು ಮುಖಮಂಟಪದ ಮುಚ್ಚಿಗೆಯಲ್ಲಿ ಭಿತ್ತಿ ಚಿತ್ರಗಳು ರಚನೆಗೊಂಡಿವೆ. ಮತ್ತು ತುಮಕೂರು ಜಿಲ್ಲೆಯ ತಿಪಟೂರು ತಾಲೂಕಿನ "ರಂಗಾಪುರದ – ಶ್ರೀರಂಗನಾಥಸ್ವಾಮಿ ದೇವಾಲಯ"ದ

೪೯. ಡಾ. ಯಾದಪ್ಪ ಪರದೇಶಿ: ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ–ಒಂದು ಅಧ್ಯಯನ: ಪು. ೫೪

ಮೇಲ್ಭಾವಣಿಯ ಭಿತ್ತಿ ಚಿತ್ರಗಳು ಹಾಗೂ "ಕೆರೆಗೋಡಿಯ – ಶ್ರೀ ಶಂಕರೇಶ್ವರ ದೇವಾಲಯ"ದ ಮೇಲ್ಭಾವಣಿಯ ಭಿತ್ತಿಚಿತ್ರಗಳಲ್ಲಿ ಶೈವ ಸಂಬಂಧಿಯಾದ ಕಥೆಯನ್ನು ಒಂದೇ ಅಂಕಣದಲ್ಲಿ, ಒಂದೇ ಸಂಯೋಜನೆಯಲ್ಲಿ ತೋರಿಸಿರುವುದೇ ಅಧಿಕ. ಆದರೆ ಕರ್ನಾಟಕದ ಹೊರಗೆ ಲೇಪಾಕ್ಷಿ, ಚಿದಂಬರಂ ಇತ್ಯಾದಿಗಳಲ್ಲಿ ಹಲವಾರು ಅಂಕಣಗಳಲ್ಲಿ ಶಿವಪುರಾಣದ ಕಥೆ ಹೇಳಿರುವುದು ಕಂಡು ಬರುತ್ತದೆ. ಶಿವನ ಪಂಚವಿಂಶತಿ ಲೀಲೆಗಳನ್ನು ಹೇಳುವಾಗ ಒಂದೇ ಅಂಕಣವನ್ನು ಇಪ್ಪತ್ತೈದು ಉಪವಿಭಾಗಗಳಾಗಿಸಿ ಒಂದೊಂದೇ ದೃಶ್ಯದಲ್ಲಿ ಚಿತ್ರಿಸಿ ಮುಗಿಸಿಬಿಡಲಾಗಿದೆ. ಆನೆಯ ಒಡಲನ್ನು ಸೀಳಿ ಹೊರಬರುತ್ತಿರುವ ಶಿವ, ಗಜಾಸುರನ ಮರ್ದನ ಎಂಬಂತೆ ಮಾರ್ಕಂಡೇಯ, ಬೇಡರ ಕಣ್ಣಪ್ಪ ಇತ್ಯಾದಿಗಳನ್ನು ಚಿತ್ರಿಸಿರುವುದನ್ನು ಕಾಣಬಹುದು. ದಶಾವತಾರಗಳನ್ನು ಇದೇ ರೀತಿ ಹತ್ತು ಅಂಕಣಗಳಲ್ಲಿ ಮುಗಿಸುವ ಪದ್ಧತಿಯಾಗಿದೆ. ಪಂಚವಿಂಶತಿಯ ಅಂಕಣಗಳನ್ನು ಹಂಪೆ, ಸೀಬಿ, ಕೆರೆಗೋಡು, ರಂಗಾಪುರಗಳಲ್ಲಿ ಇದೇ ಪದ್ಧತಿಯಲ್ಲಿ ಚಿತ್ರಿಸಲಾಗಿದೆ.

ತ್ರಿಪುರ ಸಂಹಾರ ಮತ್ತು ಗಿರಿಜಾ ಕಲ್ಯಾಣವನ್ನು ಒಂದೊಂದೇ ಅಂಕಣದಲ್ಲಿ ಚಿತ್ರಿಸಿರುವುದುಂಟು. ತ್ರಿಪುರ ಸಂಹಾರದಲ್ಲಿ ಅಂಕಣದ ಮಧ್ಯದಲ್ಲಿ ಕಾರ್ತಿಕೇಯ ಬೃಹತ್ ಆದ ರಥದಲ್ಲಿ ಕುಳಿತಿರುವುದು, ನಾಲ್ಕು ಕುದುರೆಗಳು ಸೂರ್ಯ ಚಂದ್ರರೇ ರಥದ ಗಾಲಿಗಳು, ಬ್ರಹ್ಮನೆ ಸಾರಥಿ, ಮೇರುವೇ ಆಯುಧ ಇತ್ಯಾದಿಗಳಿಂದ ಅಲಂಕೃತನಾಗಿ ಯುದ್ಧಕ್ಕೆ ಹೊರಟಿರುವುದು. ತ್ರಿಪುರಗಳು ಮೂರು ವೃತ್ತಗಳಂತೆ ರಚಿತವಾಗಿ ಅದರಲ್ಲಿ ರಾಕ್ಷಸರು ಯುದ್ಧ ಮಾಡುತ್ತಿರುವುದು, ದೇವತೆಗಳು ಮೇಲಿನಿಂದ ಹೂಮಳೆಗರೆಯುತ್ತಿರುವುದು, ರಥದ ಕೆಳಗೆ ಅದನ್ನು ರೂಪಿಸಿದ ವಿಶ್ವಕರ್ಮ ಇರುವುದು ಇತ್ಯಾದಿಗಳು ಕೆರೆಗೋಡು ರಂಗಾಪುರದಲ್ಲಿ ವಿವರವಾಗಿ ಚಿತ್ರಿತವಾಗಿವೆ. ಹಂಪಿಯಲ್ಲಿ ತ್ರಿಪುರದ ವೃತ್ತವೊಂದರಲ್ಲಿ ನಗ್ನನಾಗಿ ವಿಷ್ಣು ನಿಂತಿರುವುದು, ಎರಡೂ ಬದಿಗೆ ಹೆಂಗಳೆಯರಿಬ್ಬರು ಕುತೂಹಲದಿಂದ ಕೈಯೆತ್ತಿ ನಿಂತಂತಿರುವುದು, ಉಳಿದೆರಡು ವೃತ್ತಗಳಲ್ಲಿ ರಾಕ್ಷಸರೇ ಪರಸ್ಪರ ಕಾದಾಡುತ್ತಿರುವಂತೆ ಚಿತ್ರಿಸಿದೆ. ಕೆರೆಗೋಡು ರಂಗಾಪುರದಲ್ಲಿ ಯುದ್ಧದ ಅಂಕಣದ ಪಕ್ಕದಲ್ಲಿ ತೊಲೆಕಂಬವಿದ್ದು ಅವುಗಳ ಬೆನ್ನ ಮೇಲೆ ತ್ರಿಪುರದಲ್ಲಿ ರಾಕ್ಷಸರ ಹಾವಳಿಯನ್ನು ಶಿವನಲ್ಲಿ ಬಿನ್ನವಿಸುತ್ತಿರುವುದು, ವಿಷ್ಣು ನಗ್ನನಾಗಿ ನಿಂತಿರುವುದು ಇತ್ಯಾದಿ ಕಥಾಸಂದರ್ಭ ಚಿತ್ರಿಸಿದೆ. ಅಮ್ಮಿನಭಾವಿಯ ಹಿರೇಮಠದಲ್ಲಿ ಉಳಿದ ಯಾವುದೇ ವಿವರಗಳು ಇಲ್ಲದೆ ರಥಾರೂಢನಾದ ಕಾರ್ತಿಕೇಯ ಹಾಗೂ ತ್ರಿಪುರಗಳನ್ನು ಸೂಚಿಸುವಂತೆ ಮೂರು ವೃತ್ತಗಳಲ್ಲಿ ಮೂವರು ರಾಕ್ಷಸರನ್ನು ಚಿತ್ರಿಸಲಾಗಿದೆ.

ಶಿವನೇ ಮುಖ್ಯ ಪಾತ್ರಧಾರಿಯಾದ ಕಿರಾತುರ್ಜುನೀಯದ ಕಥೆಯ ಚಿತ್ರವು ದೊರೆತಿದ್ದು "ಹಿರಿಯೂರಿನ ತೇರುಮಲ್ಲೇಶ್ವರ" ದೇವಾಲಯದಲ್ಲಿ. ಈ ಪ್ರಸಂಗ ಸುಂದರವಾಗಿ ಚಿತ್ರಿತವಾಗಿದೆ. ಈಗ ಅದು ಅರ್ಧಕ್ಕಿಂತಲೂ ಹೆಚ್ಚಿಗೆ ಹಾಳಾಗಿದ್ದರೂ ಋಷಿಗಳು ಕಾಡಿನ ಮಧ್ಯ ವಿವಿಧ ಭಾವಭಂಗಿಗಳಲ್ಲಿ ತಪಸ್ಸು ಮಾಡುತ್ತಿರುವುದು, ಕಿರಾತ ಮತ್ತು ಅರ್ಜುನರು ಒಂದೇ ಹಂದಿಗೆ ಬಾಣಬಿಡುತ್ತಿರುವುದು, ವಾಗ್ವಾದ ಹಾಗೂ ಶಿವ ಪ್ರತ್ಯಕ್ಷನಾಗಿರುವುದನ್ನು ನೋಡಬಹುದಾಗಿದೆ. ಚಿತ್ರದ ಹಿನ್ನೆಲೆಯಲ್ಲಿ ಕಾಡಿನ ಭೂದೃಶ್ಯದಲ್ಲಿ ಹಲವಾರು ಮರಗಿಡಗಳನ್ನು ಶೈಲೀಕೃತಗೊಳಿಸಿ

ಚಿತ್ರಿಸಿರುವುದು, ಬೇಟೆಯಾಡುವಾಗ ಕೋರೆದಾಡೆಯ ಭಯಂಕರ ರೂಪಿನ "ದಾನವ ಹಂದಿ" ಓಡಿಬರುತ್ತಿರುವುದನ್ನು ಕಂಡು ತಪಸ್ಸಿನಲ್ಲಿ ನಿರತರಾದ ಋಷಿಗಳು ಭಯಭೀತರಾದ ದೃಶ್ಯವನ್ನು ಚಿತ್ರಿಸಿದ್ದು ಅದ್ಭುತ, ಭಯಾನಕ ರಸಗಳನ್ನು ಕಲಾವಿದ ಯಶಸ್ವಿಯಾಗಿ ಪಡಿಮೂಡಿಸಿದ್ದಾನೆ.

**"ಅರಮನೆಗಳಲ್ಲಿರುವ ವೀರಶೈವ ಭಿತ್ತಿಚಿತ್ರಗಳು":**

ಕಲೆಯ ಆಸಕ್ತಿ ಇರುವ ರಾಜರು, ಮಂತ್ರಿಗಳು ಇರುವ ಅರಮನೆ, ವಾಡೆಗಳಲ್ಲಿ ಭಿತ್ತಿಚಿತ್ರಗಳನ್ನು ಬರೆಸಿ ಅವುಗಳನ್ನು ಅಲಂಕರಿಸುತ್ತಾ ಬಂದಿರುವರು. ಅರಮನೆಗಳನ್ನು ಭಿತ್ತಿಚಿತ್ರಗಳಿಂದ ಅಲಂಕರಿಸುವುದು ರಾಮಾಯಣ, ಮಹಾಭಾರತ ಕಾಲದಿಂದಲೂ ಪ್ರಚಲಿತವಾಗಿತ್ತು ಎಂದು ಹೇಳಲಾಗಿದೆ. ಭಾರತದಲ್ಲಿಯೂ ಅನೇಕ ಪ್ರಾಚೀನ ಅರಮನೆಗಳು ಭಿತ್ತಿಚಿತ್ರಗಳಿಂದ ಶೃಂಗರಿಸಲ್ಪಟ್ಟಿವೆ. ಮೊದಲಿನ ಅರಮನೆಗಳು ಈಗ ಬಹಳಷ್ಟು ನಾಶವಾಗಿದ್ದು ಇನ್ನು ಕೆಲವು ಅರಮನೆಗಳು ಭಾರತದ ತುಂಬಾ ಅಲ್ಲಲ್ಲಿ ಕಂಡುಬರುತ್ತವೆ.

ವೀರಶೈವ ಭಿತ್ತಿಚಿತ್ರಗಳ ಕುರಿತು ಅಧ್ಯಯನ ಮಾಡುತ್ತಿದ್ದು ಕರ್ನಾಟಕಕ್ಕೆ ಸಂಬಂಧಿಸಿದಂತೆ ವೀರಶೈವ ಭಿತ್ತಿಚಿತ್ರಗಳನ್ನು ಆಯಾ ಧರ್ಮೀಯ ರಾಜರು, ಮಂತ್ರಿಗಳು, ಸಾಮಂತರು ತಮ್ಮ ಅರಮನೆ, ವಾಡೆಗಳಲ್ಲಿ ಇಂತಹ ಧಾರ್ಮಿಕ, ಸಾಮಾಜಿಕ, ರಾಜಕೀಯ ಚಿತ್ರಗಳನ್ನು ರಚಿಸಿದ್ದು ಅವುಗಳಲ್ಲಿ ವೀರಶೈವ ಭಿತ್ತಿಚಿತ್ರಗಳಿರುವುದನ್ನು ಇಲ್ಲಿ ಗುರುತಿಸಲಾಗಿದೆ. ಶ್ರೀಲಂಕಾದಲ್ಲಿ ರಾವಣನು ತನ್ನ ಅರಮನೆಯನ್ನು ಶೈವ ಧರ್ಮಕ್ಕೆ ಸಂಬಂಧಿಸಿದ ಹಲವಾರು ಚಿತ್ರಗಳಿಂದ ಅಲಂಕರಿಸಿದ್ದನೆಂದು, ರಾಮಾಯಣದಲ್ಲಿ ಅಲ್ಲಿಗೆ ಹೋಗಿ ಬಂದ ಹನುಮಂತನು ಶ್ರೀ ರಾಮನ ಮುಂದೆ ಅರಮನೆಯ ವರ್ಣನೆ ಮಾಡುತ್ತ ತಿಳಿಸಿರುವನು. ಭಾರತದಲ್ಲಿಯೂ ಈ ಹಿನ್ನೆಲೆಯಲ್ಲಿ ಕಲಾಕೃತಿಗಳು ರಚನೆಗೊಂಡಿವೆ. ಅಂತೆಯೇ ಕರ್ನಾಟಕದಲ್ಲಿಯ ವೀರಶೈವ ಭಿತ್ತಿಚಿತ್ರಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ನಿಪ್ಪಾಣಿ ವಾಡೆ, ಅಥಣಿಯ ನಿಪ್ಪಾಣಿಕರ್ ವಾಡೆ, ನರಗುಂದ ಅರಮನೆ, ಸುರಪುರದ ಅರಮನೆಗಳಲ್ಲಿ ಭಿತ್ತಿಚಿತ್ರಗಳು ವೀರಶೈವ ಧರ್ಮಕ್ಕೆ ಸಂಬಂಧಿಸಿದಂತೆ ರಚನೆಗೊಂಡಿದ್ದು ಇವುಗಳಲ್ಲಿ ಅಥಣಿಯ ನಿಪ್ಪಾಣಿಕರ್ ವಾಡೆ ಮತ್ತು ಸುರಪುರದ ಅರಮನೆಗಳು ಭಿತ್ತಿಚಿತ್ರಗಳು ಹಾಳಾಗಿದ್ದು ಅಲ್ಲಿಯ ಚಿತ್ರಗಳು ಈಗ ನೋಡಲೂ ಸಿಗುವುದಿಲ್ಲ ಉಳಿದಂತೆ ವೀರಶೈವ ಭಿತ್ತಿಚಿತ್ರಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

**೧. ನಿಪ್ಪಾಣಿ ವಾಡೆಯ ವೀರಶೈವ ಭಿತ್ತಿಚಿತ್ರಗಳು:**

ಅಕ್ಕೋಳದ ಶ್ರೀಮಂತ ಮನೆತನದಲ್ಲಿ ಕ್ರಿ.ಶ. ೧೭೭೪ ರಲ್ಲಿ ಜನಿಸಿದ ಸಿದ್ದೋಜರಾವ್ ಉರ್ಫ್ ಅಪ್ಪಾಸಾಹೇಬ ನಿಂಬಾಳಕರ್ ಅವರು ಬಾಲ್ಯದಲ್ಲಿ ಅವರ ಚಿಕ್ಕಮ್ಮನಾದ ಕೊಲ್ಲಾಪುರದ ಛತ್ರಪತಿಯವರಾದ ರಾಣಿಯ ಮನೆಯಲ್ಲಿಯೇ ಬೆಳೆದು ಮುಂದೆ ವಿಜಾಪುರದ ಆದಿಲ್‌ಷಾಹಿ ಒಂದು ಸಲ ತನ್ನ ಆಸ್ಥಾನದಲ್ಲಿಯ ವಿಲಕ್ಷಣ ಕುದುರೆಯನ್ನು ಹತ್ತಿಕೊಂಡು ಯಾರು ಎಷ್ಟು ಪ್ರದೇಶವನ್ನು ತಿರುಗಾಡಿ ಬರುತ್ತಾರೋ ಅಷ್ಟು ಪ್ರದೇಶವನ್ನು ಬಹುಮಾನವೆಂದು ಕೊಡುವುದಾಗಿಯೂ ಅದರಲ್ಲಿ ಆ ಪ್ರದೇಶದ ೧/೪ ಹಿಸ್ಸಾ ಆದಿಲ್‌ಷಾಹಿಗೆ ಸಿಗಬೇಕೆಂದು ಪ್ರಕಟಣೆ ಮಾಡಿದರು.

ಸಿದ್ಧೋಜಿರಾವ್ ಈ ಸ್ಪರ್ಧೆಯಲ್ಲಿ ಭಾಗವಹಿಸಿ ೧೭೩ ಹಳ್ಳಿಗಳನ್ನು ತಿರುಗಾಡಿ ಬಂದ ಆದಿಲ್‌ಷಾಹಿ ಅವನಿಗೆ ೧೭೩ ಹಳ್ಳಿಗಳನ್ನು ನೀಡಿ "ನಿಂಬಾಳಕರ್ ನಾಯಕ" ಎಂಬ ಬಿರುದು ನೀಡಿದ. ಸಿದ್ಧೋಜಿರಾವ್ ಅವರ ಜಾಣತನವನ್ನು ಚಾಣಾಕ್ಷತನವನ್ನು ಮೆಚ್ಚಿಕೊಂಡ ಆದಿಲ್‌ಷಾಹಿ ಹುಕ್ಕೇರಿ ಸಂಸ್ಥಾನದ ೪೦ ಹಳ್ಳಿಗಳನ್ನು ಬಹುಮಾನ ನೀಡಿ ತಮ್ಮ ಸೈನ್ಯದಲ್ಲಿ ನ್ಯಾಯ ನಿರ್ಣಯಿಸುವ ನಾಯಕನನ್ನಾಗಿ ಮಾಡಿದರು. ಮಾಧವರಾವ್ ಪೇಶ್ವೆ ಅವರೊಡನೆ ಸೇರಿಕೊಂಡು ಹೈದರ ಅಲ್ಲಿಯ ಸವಣೂರಿನ ನವಾಬರನ್ನು ಹಿಮ್ಮೆಟಿಸಿದರು. ಇದರಿಂದ ಸಂತೋಷಗೊಂಡ ಪೇಶ್ವೆ ಸಿದ್ಧೋಜಿರಾವ್ ನಿಂಬಾಳ್ಕರ್ ಅವರಿಗೆ ಹನ್ನೆರಡು ಊರುಗಳ ದೇಸ್ಕತ್ತು ನೀಡಿ "ಸರ್‌ಲಸ್ಕರ್" ಎಂಬ ಬಿರುದನ್ನು ನೀಡಿದರು. ಮುಂದೆ ನಿಪ್ಪಾಣಿನಗರವನ್ನು ಸಂಸ್ಥಾಪಿಸಿದರು. ಈ ಸಂಸ್ಥಾನವು ತಮ್ಮ ಸಂಸ್ಥಾನದ ಪ್ರಮುಖ ಪಟ್ಟಣವಾಗಿ ರೂಪುಗೊಂಡಿತು. ಅಕ್ಕೋಳ ಮನೆತನದ ಪರಾಕ್ರಮಿ ಪುರುಷ, ನಿಪ್ಪಾಣಿನಗರದ ಸಂಸ್ಥಾಪಕ ಸಿದ್ಧೋಜಿರಾವ್ ನಿಂಬಾಳಕರ್ ದೇಸಾಯಿ ಎಂದು ಪ್ರಸಿದ್ಧರಾದರು. ನಿಪ್ಪಾಣಿನಗರದ ಮೂಲ ಪುರುಷನಾಗಿದ್ದರಿಂದ "ನಿಪ್ಪಾಣಿಕರ್" ಎಂದೂ ಕರೆಯುತ್ತಿದ್ದರು[೫೦] ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕ ನಾಯಕನಾಗಿ ಗುರುತಿಸಿಕೊಂಡ ಸಿದ್ಧೋಜಿರಾವ್ ಅವರು ಶ್ರೀ ವಿರೂಪಾಕ್ಷೇಶ್ವರನಲ್ಲಿ ಅತ್ಯಂತ ಶ್ರದ್ಧೆ ಭಕ್ತಿಯನ್ನು ಹೊಂದಿದ್ದು ನಿಪ್ಪಾಣಿಯಲ್ಲಿ ಅವರಿಗಾಗಿ ಒಂದು ಮಠವನ್ನು ನಿರ್ಮಿಸಿಕೊಟ್ಟನು. ಸಂಕೇಶ್ವರದ ಹಿರಣ್ಯಕೇಶಿ ನದಿಯ ದಡದಲ್ಲಿ ಶಂಕರಾಚಾರ್ಯರ ದೊಡ್ಡಮಠವನ್ನು ಕಟ್ಟಿಸಿದರು. ಮಮದಾಪುರದಲ್ಲಿ ತಮ್ಮ ಕುಲದೇವತೆಯಾದ "ಶ್ರೀ ತುಳಜಾಭವಾನಿಯ" ಗುಡಿಯನ್ನು ಕಟ್ಟಿಸಿದ. "ನಿಂಬಾಳಕರ್ ದೇಸಾಯಿಯವರು ಮೇಲಿಂದ ಮೇಲೆ ಕಾಶೀ, ರಾಮೇಶ್ವರ ಕ್ಷೇತ್ರಕ್ಕೆ ಭೇಟಿ ನೀಡುತ್ತಿದ್ದರು. ಅಲ್ಲಿ ಇವರ ಮನೆತನದ ಗುರುಗಳಾದ ಭಗವಂತ ಶ್ರೀ ಚಿದಂಬರ ಸ್ವಾಮಿಗಳನ್ನು ಕಾಣುತ್ತಿದ್ದರು. ಆಗ ಸ್ವಾಮಿಗಳು ತಮ್ಮ ನೆನಪಿಗಾಗಿ ಒಂದು "ಸ್ಫಟಿಕದ ಲಿಂಗವನ್ನು" ಇವರಿಗೆ ಆಶೀರ್ವಾದರೂಪದಲ್ಲಿ ನೀಡಿದರು. ಅದನ್ನು ನಿಪ್ಪಾಣಿಗೆ ತಂದು ತಮ್ಮ ಮನೆಯಲ್ಲಿ ಪ್ರತಿಷ್ಠಾಪಿಸಿದರು. ಈಗಲೂ ಈ ಸ್ಫಟಿಕದ ಲಿಂಗ ಸಿದ್ಧೋಜಿರಾವ್ ನಿಂಬಾಳಕರ್ ಅವರ ರಾಜವಾಡೆಯಲ್ಲಿ ಪೂಜೆಗೊಳ್ಳುತ್ತಿದೆ. ಈ ಲಿಂಗವು ಸಂಪೂರ್ಣ ಪಾರದರ್ಶಕವಾಗಿದ್ದು ಇಂಥಹದೇ ಇನ್ನೊಂದು ಲಿಂಗ ರಾಯಘಡದಲ್ಲಿ ಇರುವುದಾಗಿಯೂ ಹೇಳುತ್ತ ಇಂಥಹ ವೈಶಿಷ್ಟ್ಯಪೂರ್ಣವಾದ ಲಿಂಗಗಳು ಭಾರತದಲ್ಲಿಯೇ ಇವೆರಡೇ ಎನ್ನುವುದು ಮಹತ್ವಪೂರ್ಣವಾದ ವಿಷಯವಾಗಿದೆ.[೫೧]

ಕಲಾಕ್ಷೇತ್ರದಲ್ಲಿಯೂ ಇವರಿಗೆ ತುಂಬಾ ಆಸಕ್ತಿ ಇದ್ದಿತು. ಸಂಗೀತಗಾರರು, ಚಿತ್ರಕಲಾವಿದರು ಇವರ ಆಶ್ರಯದಲ್ಲಿದ್ದರು. ಅಂತೆಯೇ ಇವರ ರಾಜವಾಡೆಯಲ್ಲಿ ಸಾವಿರಾರು ಭಿತ್ತಿಚಿತ್ರಗಳನ್ನು ರಚಿಸಲು ಪ್ರೋತ್ಸಾಹಿಸಿರುವರು. ಶೈವ, ವೈಷ್ಣವ ಧರ್ಮಗಳಿಗನುಸರಿಸಿದ ಹಾಗೂ ಸಾಮಾಜಿಕವಾಗಿರುವ ಭಿತ್ತಿಚಿತ್ರಗಳು ಕಿರುರೂಪದ ಚಿತ್ರಗಳಾಗಿ ಪಟ್ಟಿಕೆಗಳಲ್ಲಿ ಸುಂದರವರ್ಣಗಳೊಂದಿಗೆ ಕಂಗೊಳಿಸುತ್ತವೆ. ನಿಪ್ಪಾಣಿ ರಾಜವಾಡೆಯ ಭಿತ್ತಿಚಿತ್ರಗಳು "ದರ್ಬಾರ್

೫೦. ಬಿ.ಎಂ.ಪಾಟೀಲ: ನಿಪ್ಪಾಣಿ ವಾಡೆ ಭಿತ್ತಿಚಿತ್ರಕಲೆ: ಒಂದು ಅಧ್ಯಯನ: ಪುಟ ೨೦.
೫೧. ಶ್ರೀಯಶವಂತರಾವ್ ಚವ್ವಾಣ: ನಿಪ್ಪಾಣಿ ದರ್ಶನ : ಪುಟ ೩೦.

ಹಾಲ್ ಮತ್ತು ಪಹಾರಾ ಹಾಲ್" ಗಳ ಭಿತ್ತಿಯಲ್ಲಿ ಕಿರುರೂಪ ಚಿತ್ರಗಳು ರಚನೆಗೊಂಡಿದ್ದು ಗಮನ ಸೆಳೆಯುತ್ತವೆ. ಈ ಭಿತ್ತಿ ಚಿತ್ರಗಳಿಂದಾಗಿ ನಿಪ್ಪಾಣಿಯ ವಾಡೆ ತನ್ನ ಅಂದವನ್ನು ಇಮ್ಮಡಿಗೊಳಿಸಿಕೊಂಡಿದೆ.

**ನಿಪ್ಪಾಣಿ ವಾಡೆಯ ಭಿತ್ತಿಚಿತ್ರಗಳ ಕಾಲ ಮತ್ತು ಸ್ಥಳ:**

ಡಾ. ಶಿವರಾಮ ಕಾರಂತರು ಈ ಭಿತ್ತಿಚಿತ್ರಗಳು ರಚನೆಯಾದ ಕಾಲ ೧೮ನೇ ಶತಮಾನ ಎಂದು "ಕರ್ನಾಟಕದ ಚಿತ್ರಕಲೆ"ಯಲ್ಲಿ ತಿಳಿಸಿರುವರು. ಡಾ. ಎಸ್.ಸಿ.ಪಾಟೀಲರೂ "ಕರ್ನಾಟಕದ ಜನಪದ ಚಿತ್ರಕಲೆ"ಯಲ್ಲಿ ೧೮ನೇ ಶತಮಾನದ ಕಾಲದವು ಎಂದಿರುವರು. ಪ್ರೊ. ಬಿ.ಶೇಕ್ ಅಲಿ ಅವರು "ಕರ್ನಾಟಕ ಚರಿತ್ರೆ"ಯಲ್ಲಿ ಈ ಭಿತ್ತಿ ಚಿತ್ರಗಳು ೧೮ ಮತು ೧೯ನೇ ಶತಮಾನದವು ಎಂದಿರುವರು. ಡಾ. ಯಾದಪ್ಪ ಪರದೇಶಿಯವರು "ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ"ಯಲ್ಲಿ ೧೮೨೦ ಎಂದು ಗುರುತಿಸಿರುವರು. ಶ್ರೀ ಯಶವಂತರಾವ್ ಚವ್ಹಾಣ ಅವರು "ನಿಪ್ಪಾಣಿ ದರ್ಶನ"ದಲ್ಲಿ ನಿಪ್ಪಾಣಿ ನಗರ ರಚನೆ, ಸಂಸ್ಕೃತಿ, ಸಾಮಾಜಿಕ, ರಾಜಕೀಯ ಮತ್ತು ಐತಿಹಾಸಿಕ ವಿಷಯಗಳನ್ನು ತಿಳಿಸುತ್ತ ೧೭೭೯ ರಲ್ಲಿ ಭುವಿಕೋಟೆಯನ್ನು ನಿರ್ಮಿಸಿದ ಬಗ್ಗೆ ಹೇಳುತ್ತಾರೆ ಹಾಗೂ ೧೮೦೭ರ ನಂತರ ಕೊಲ್ಹಾಪುರ ಅರಸರೊಂದಿಗೆ ಸಂಘರ್ಷಕ್ಕೆ ಇಳಿದ ನಂತರ ಪದೆ ಪದೆ ಯುದ್ಧಗಳಾಗಿ ಯಾವ ಕಾರ್ಯಗಳನ್ನೂ ಮಾಡಲು ಆಗಲಿಲ್ಲವೆಂದು ತಿಳಿದು ಬರುತ್ತದೆ ಎಂದಿರುವರು. ಈ ಹಿನ್ನೆಲೆಯಲ್ಲಿ ಬಿ.ಎಂ.ಪಾಟೀಲರು "ನಿಪ್ಪಾಣಿ ವಾಡೆ ಭಿತ್ತಿಚಿತ್ರಕಲೆ" ಅಧ್ಯಯನ ಮಾಡುವಾಗ ೧೭೮೦ ರಿಂದ ೧೭೯೯ರ ಅವಧಿಯಲ್ಲಿ ನಿಪ್ಪಾಣಿಯು ಎಲ್ಲ ದೃಷ್ಟಿಯಿಂದಲೂ ಉನ್ನತ ಮಟ್ಟದಲ್ಲಿತ್ತು ಎಂದು ತಿಳಿದು ಬರುತ್ತಿರುವುದರಿಂದ ಈ ಅವಧಿಯಲ್ಲಿಯೇ ಈ ಭಿತ್ತಿಚಿತ್ರಗಳು ರಚನೆಗೊಂಡಿವೆ ಎಂಬ ಅಭಿಪ್ರಾಯಕ್ಕೆ ಬಂದಿರುವುದು ಸೂಕ್ತವಾಗಿದೆ.

ಎರಡು ಅಂತಸ್ತುಗಳುಳ್ಳ ಈ ವಾಡೆ ಭವ್ಯವಾದ ಅರಮನೆ ಸುಮಾರು ೧೮ ಗುಂಟೆ ಸುತ್ತಳತೆಯಿಂದ ಕೂಡಿದೆ. ಕೋಟೆಗೆ ಮಹಾದ್ವಾರವಿದೆ. ಮೇಲ್ಗಡೆಯಲ್ಲಿ ದರ್ಬಾರ್ ಹಾಲ್ (ಸಭಾಂಗಣ), ಇದರ ಮುಂದುಗಡೆ ದೊಡ್ಡದಾದ ಅಂಗಳ, ಅಂಗಳದ ಮದ್ಯದಲ್ಲಿ ನೀರಿನ ಕಾರಂಜಿ, ಅರಮನೆಯ ಒಳಗಡೆ ಹೋದರೆ ಚೌರಸ ಆಕಾರದ ಅಂಗಳ, ಸುತ್ತಲೂ ಪಡಸಾಲೆ, ಎದುರುಗಡೆ ಪಡಸಾಲೆಯ ಮದ್ಯದಲ್ಲಿ ದೇವರ ಕೋಣೆ ಇದೆ. ಭಿತ್ತಿಚಿತ್ರಗಳನ್ನು ದರ್ಬಾರ್ ಹಾಲ್ ಮತ್ತು ಪಹರಾಹಾಲ್‌ನಲ್ಲಿ ರಚಿಸಿದ್ದು ಡಾ. ಶಿವರಾಮ ಕಾರಂತರು ಮತ್ತು ಆನಂತರದ ಡಾ. ಯಾದಪ್ಪ ಪರದೇಶಿಯವರು "ಪಹಾರಾಹಾಲ್ ಎಂದರೆ ಮಲಗುವ ಕೋಣೆ" ಎಂದಿರುವರು. ಇದಕ್ಕೆ ಕಾರಣವನ್ನು ಕೃಷ್ಣನ ರಾಸಲೀಲೆಗಳಿಗೆ ಸಂಬಂಧಿಸಿದ ಚಿತ್ರಗಳಿರುವುದರಿಂದ ಇದು ಮಲಗುವ ಕೋಣೆ ಎಂದಿರುವದು ನಿಜವಾದುದಲ್ಲ. ಅದು ಪಹರಾ ಹಾಲ್ ಎಂದರೆ "ಕಾವಲುಗಾರನ ಕೋಣೆ" ಎಂದು ಅರ್ಥವಾಗುತ್ತಿದ್ದುದು ಹಾಗೂ ರಾಜನ ಮಲಗುವ ಕೋಣೆ ಆದರೆ ೧೦' x ೧೦' ಅಳತೆಯ ಚೌರಸದ ಕೋಣೆಯ ಎತ್ತರ ೮' ಆಗಿದೆ. ಈ ರೂಮಿಗೆ ಕಿಡಕಿಗಳಿಲ್ಲ. ಬೆಳಕಿಲ್ಲದ ಈ ಚಿಕ್ಕ ಕೋಣೆ ಮಲಗುವ ಕೋಣೆ ಅಲ್ಲವೆಂದೂ ಇಂಥಹ ದೊಡ್ಡ ಅರಮನೆಗೆ ಇಂಥಹ ಮಲಗುವ ಕೋಣೆ ಬೆಳಕಿಲ್ಲದ್ದು, ಗಾಳಿಯಿಲ್ಲದ್ದು ಆಗಿರಲಾರದೆಂದೂ ಇದೊಂದು ಕಾವಲುಗಾರನ ಕೋಣೆಯೇ ಆಗಿದೆ ಎಂದು ಅಭಿಪ್ರಾಯ ಪಡಬಹುದಾಗಿದೆ.

**ನಿಪ್ಪಾಣಿ ವಾಡೆಯ ಭಿತ್ತಿಚಿತ್ರಗಳು :**

**೧. ಭಿಕ್ಷಾಟನಾ ಶಿವನ ಚಿತ್ರ:**

ದರ್ಬಾರ್ ಹಾಲ್‌ನಲ್ಲಿರುವ ಈ ಭಿಕ್ಷಾಟನಾ ಶಿವನ ಕಲಾಕೃತಿಯು ೪" x ೫" ಇಂಚುಗಳಲ್ಲಿ ರಚನೆಗೊಂಡಿದ್ದು ಹಿನ್ನೆಲೆಯಲ್ಲಿ ಕೆಂಪುವರ್ಣವನ್ನು ಬಳಸಿದ್ದು, ಭಿಕ್ಷೆಗಾಗಿ ಶಿವನು ಹೊರಟಿರುವ ದೃಶ್ಯವಿದಾಗಿದೆ. ಬಲಗೈಯಲ್ಲಿ ಭಿಕ್ಷೆಯ ಪಾತ್ರೆಯೊಂದನ್ನು ಹಿಡಿದುಕೊಂಡಿದ್ದು ಎಡಗೈಯಲ್ಲಿ ಭರ್ಚಿಯೊಂದನ್ನು ಹಿಡಿದುಕೊಂಡಿದ್ದಾನೆ. ಹುಲಿಯ ಚರ್ಮವನ್ನು ಸೊಂಟಕ್ಕೆ ಸುತ್ತಿಕೊಂಡಿದ್ದು, ಕಾಲಲ್ಲಿ ಕಟ್ಟಿಗೆಯ ಪಾದರಕ್ಷೆಗಳನ್ನು ಧರಿಸಿರುವನು. ಕೊರಳಲ್ಲಿ ಕರಡಿಗೆಯನ್ನು ಹಾಗೂ ರುದ್ರಾಕ್ಷಿಮಾಲೆಯನ್ನು ಹಾಕಿಕೊಂಡಿದ್ದು, ತಲೆಯ ಮೇಲೆ ಬನ್ ಆಕಾರದಲ್ಲಿ ಕೂದಲುಗಳನ್ನು ಕಟ್ಟಿಕೊಂಡಿರುವನು. ಇದರಲ್ಲಿ ಶಿವನು ಕೋರೆಯ ಮೀಸೆಯನ್ನು ಬಿಟ್ಟಿರುವನು. ಈ ಕಲಾಕೃತಿಗೆ ಅಲಂಕಾರಿಕ ನಕ್ಷೆಗಳನ್ನು ಮಾಡಿನ ರೂಪದಲ್ಲಿ ಬಳಸಲಾಗಿದೆ.

**೨. ಧ್ಯಾನಾಸಕ್ತಳಾದ ಪಾರ್ವತಿ:**

ದರ್ಬಾರ ಹಾಲ್‌ದಲ್ಲಿ ಪ್ರಮುಖವಾದ ಮಾಡೊಂದರ ಮೇಲೆ ಧ್ಯಾನಾಸಕ್ತಳಾದ ಪಾರ್ವತಿಯ ಕಲಾಕೃತಿಯು ೭" x ೨೨" ಅಳತೆಯಲ್ಲಿ ರಚನೆಗೊಂಡಿದ್ದು ಹಿನ್ನೆಲೆಯಲ್ಲಿ ಕೆಂಪುವರ್ಣವನ್ನು ಬಳಸಿರುವರು. ಈ ಆಯತದ ಮಧ್ಯದಲ್ಲಿ ಪಾರ್ವತಿಯು ಪದ್ಮಾಸನದಲ್ಲಿ ಕುಳಿತಿದ್ದು, ಆರು ಕೈಗಳನ್ನು ಹೊಂದಿದ್ದು, ಬಲಗೈಯಲ್ಲಿ ರುದ್ರಾಕ್ಷಿ ಮಾಲೆಯನ್ನು ಹಿಡಿದು ಜಪ ಮಾಡುತ್ತಿದ್ದು ಎಡಗೈ ಎಡದೊಡೆಯ ಮೇಲಿದೆ. ಹಿಂದಿನ ನಾಲ್ಕು ಕೈಗಳಲ್ಲಿ ಏನನ್ನೋ ಹಿಡಿದುಕೊಂಡಿದ್ದು ಸ್ಪಷ್ಟವಾಗಿ ಕಾಣುತ್ತಿಲ್ಲ. ಹಣೆಯಲ್ಲಿ ವಿಭೂತಿಯನ್ನು ಧರಿಸಿದ್ದು ಅವಳು ಮಂತ್ರಮುಗ್ಧಳಾಗಿ ಏಕಾಂತದಲ್ಲಿ ಕುಳಿತಿರುವಳಂತೆ ಚಿತ್ರಿಸಲಾಗಿದೆ. ಅವಳ ಎಡಬಲಗಳಲ್ಲಿ ಚಿಕ್ಕದಾದ ಮಾಡುಗಳಲ್ಲಿ ಅಲಂಕಾರಿಕ ಹೂನಕ್ಷೆಗಳನ್ನು ಬಳಸಲಾಗಿದೆ.

**೩. ಶಿವದೇವಾಲಯ:**

ಈ ದೇವಾಲಯವು ಆಯತಾಕಾರದ ಮಂಟಪವನ್ನು ಹೊಂದಿದ್ದು ಮಧ್ಯದಲ್ಲಿ ಗರ್ಭಗುಡಿಯ ಬಾಗಿಲು, ಅದರ ಮಧ್ಯದಲ್ಲಿ ಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಈ ಗರ್ಭಗುಡಿಯ ಬಾಗಿಲುಗಳಿಗೆ ಹತ್ತಿಕೊಂಡು ಎಡಬಲಗಳಲ್ಲಿ ಕಂಬಗಳನ್ನು ಮಾಡಿದ್ದು ಗರ್ಭಗುಡಿಯ ಎಡಬಲಗಳಲ್ಲಿ ಕಿಡಕಿಗಳನ್ನು ಮಾಡಲಾಗಿದೆ. ಹಿನ್ನೆಲೆಯಲ್ಲಿ ಕೆಂಪು ವರ್ಣವನ್ನು ಬಳಸಲಾಗಿದ್ದು ಮಧ್ಯದಲ್ಲಿರುವ ಲಿಂಗ ಕಪ್ಪುವರ್ಣದಲ್ಲಿದೆ. ಮೇಲ್ಗಡೆ ಕೆಂಪು ಹಂಚುಗಳನ್ನು ಹಾಕಿದ ಛತ್ತನ್ನು ಮಾಡಲಾಗಿದೆ. ಗರ್ಭಗುಡಿಯ ಮೇಲೆ ಮೆಟ್ಟಲು ಮೆಟ್ಟಿಲಾಗಿ ಮೇಲೆ ಹೋದಂತೆ ಕಿರಿದಾಗುತ್ತ ಹೋಗುತ್ತದೆ. ಅದರ ಮೇಲೊಂದು ಗೋಲಾಕಾರದ ಕಲಶವಿದೆ. ಮೇಲಿನ ಕಲಶ ಬಂಗಾರದ ವರ್ಣದಿಂದ ಹಿನ್ನೆಲೆಯ ಕಪ್ಪುವರ್ಣದಿಂದಾಗಿ ಎದ್ದು ಕಾಣಿಸುತ್ತದೆ. ಈ ಶಿವದೇವಾಲಯವು ಸುಂದರವಾಗಿ ರೂಪುಗೊಂಡಿದೆ. ಕಲಾಕೃತಿಯನ್ನು ೪" x ೫" ಇಂಚಿನ ಅಳತೆಯಲ್ಲಿ ಚಿತ್ರಿಸಲಾಗಿದೆ. ಈ ಕಲಾಕೃತಿಯು ದರ್ಬಾರ ಹಾಲ್‌ದಲ್ಲಿದೆ.

**೪. ಶಿವಪಾರ್ವತಿಯರು:**

ದರ್ಬಾರ್ ಹಾಲ್‌ನಲ್ಲಿ ಪ್ರಮುಖ ಮಾಡೊಂದರ ಬದಿಯಲ್ಲಿರುವ ೭" x ೨೨" ಇಂಚುಗಳ ಅಳತೆಯ ಮಾಡಿನಲ್ಲಿ ಶಿವಪಾರ್ವತಿಯರ ಕಲಾಕೃತಿಯನ್ನು ರಚಿಸಲಾಗಿದೆ. ಈ ಮಾಡಿನ ಮಧ್ಯದಲ್ಲಿ ಶಿವನು ಪಾರ್ವತಿಯನ್ನು ತನ್ನ ತೊಡೆಯ ಮೇಲೆ ಕೂಡ್ರಿಸಿಕೊಂಡಿದ್ದು ತಾನು ಕಮಲದ ಮೇಲೆ ಆಸೀನನಾಗಿರುವನು. ಕೆಂಪು ಸೀರೆಯನ್ನುಟ್ಟುಕೊಂಡಿರುವ ಪಾರ್ವತಿ ಶಿವನ ಮೇಲೆ ಕುಳಿತುಕೊಂಡಿರುವಳು. ಶಿವನು ಕೋರೆಯ ಮೀಸೆ ಮತ್ತು ದಾಡಿಯನ್ನು ಬಿಟ್ಟುಕೊಂಡಿದ್ದು, ತಲೆಯ ಮೇಲೆ ಕೂದಲುಗಳನ್ನು ಕಿರೀಟದ ರೀತಿಯಲ್ಲಿ ಕಟ್ಟಿಕೊಳ್ಳಲಾಗಿದೆ. ಅದರಲ್ಲಿ ಗಂಗೆಯ ಮುಖವನ್ನು ತೋರಿಸಲಾಗಿದೆ. ಶಿವನು ಕುಳಿತಿರುವ ಕಮಲದ ಹೂವಿನ ಕೆಳಗಡೆ ಹಸಿರು ಪೀಠಿಕೆ ಇದೆ. ಶಿವನ ಕೆಳಗಡೆ ಇರುವ ವೃಷಭವು ಬಲಗಾಲನ್ನು ಮುಂದಕ್ಕೆ ಮಡಿಚಿಕೊಂಡಿದ್ದು ಎಡಗಾಲನ್ನು ಮಡಿಚಿಕೊಂಡಿದೆ. ಈ ಕಲಾಕೃತಿಯಲ್ಲಿಯೂ ಹಿನ್ನೆಲೆಯಲ್ಲಿ ಕೆಂಪುವರ್ಣವನ್ನು ತುಂಬಲಾಗಿದೆ. ವೃಷಭವು ಮೇಲಕ್ಕೆ ಮುಖ ಎತ್ತಿ ಶಿವಪಾರ್ವತಿಯರನ್ನು ನೊಡುತ್ತಿದೆ. ಈ ವೃಷಭ ಅಲಂಕಾರಿಕ ನಕ್ಷೆಯುಳ್ಳ ಜೂಲವನ್ನು ಮೈಮೇಲೆ ಹಾಕಿ ಶೃಂಗರಿಸಲಾಗಿದೆ. ಮಾಡಿನ ಸುತ್ತಲೂ ಎಲ್ಲ ಮಾಡುಗಳಂತೆ ಅಲಂಕಾರಿಕ ನಕ್ಷೆಗಳಿಂದ ಚಿತ್ರಿಸಲಾಗಿದೆ. ಹೀಗೆ ವೀರಶೈವ ಭಿತ್ತಿಚಿತ್ರಗಳನ್ನು ನಿಪ್ಪಾಣಿ ವಾಡೆಯಲ್ಲಿ ಚಿತ್ರಿಸಲಾಗಿದೆ.

**ನಿಪ್ಪಾಣಿ ವಾಡೆ ಭಿತ್ತಿಚಿತ್ರಗಳ ಲಕ್ಷಣಗಳು :**

* ಎಲ್ಲ ಚಿತ್ರಕಲಾಕೃತಿಗಳ ಹಿನ್ನೆಲೆಯಲ್ಲಿ ಕೆಂಪುವರ್ಣದ ಲೇಪನ ಮಾಡಲಾಗಿದೆ. ಒಂದೆರಡು ಅಲಂಕಾರಿಕ ಚಿತ್ರಗಳಿಗೆ ಹಿನ್ನೆಲೆಯಲ್ಲಿ ನೀಲಿವರ್ಣದ ಲೇಪನ ಮಾಡಿರುವರು.
* ಇಲ್ಲಿಯ ಚಿತ್ರಗಳನ್ನು ದರ್ಬಾರ್ ಹಾಲ್ ಮತ್ತು ಪಹಾರಾ ಹಾಲ್‌ನಲ್ಲಿ ಚಿತ್ರಿಸಲಾಗಿದ್ದು ದರ್ಬಾರ್ ಹಾಲಿನಲ್ಲಿ ಮಾಡುಗಳಲ್ಲಿ ಮತ್ತು ಮಾಡಿನ ಹೊರಗಡೆಯಲ್ಲಿಯೂ ಚಿತ್ರಿಸಲ್ಪಟ್ಟರೆ, ಪಹಾರಾ ಹಾಲ್‌ದಲ್ಲಿ ಗೋಡೆಯ ಮೇಲೆ ಚಿತ್ರಿಸಲಾಗಿದೆ.
* ಇಲ್ಲಿ ಚಿತ್ರಿತಗೊಂಡ ಚಿತ್ರಗಳು ಚಿಕ್ಕ ಪ್ರಮಾಣದಲ್ಲಿದ್ದು ಕಿರುರೂಪ ಚಿತ್ರಗಳಾಗಿವೆ. ಇಲ್ಲಿ ೮" ಇಂಚಿಗಿಂತ ದೊಡ್ಡ ಕಲಾಕೃತಿಗಳಿಲ್ಲ.
* ಧಾರ್ಮಿಕ ಆಧಾರಿತ ವಿಷ್ಣು, ಶಿವರ ಕುರಿತಾದ ಚಿತ್ರಗಳು ರಚನೆಗೊಂಡಿವೆ.
* ಈ ಚಿತ್ರಗಳು ಆಕೃತಿಗಳ ಎತ್ತರವಾದ ಹಣೆ, ಚೂಪಾದ ಮೂಗು, ದಪ್ಪದಾದ ತುಟಿ, ಅಗಲವಾದ ಮುಖ, ನೀಳವಾದ ಕೇಶಗಳನ್ನು ಹೊಂದಿವೆ.
* ಇಲ್ಲಿ ಬರುವ ಸ್ತ್ರೀಯರ ವಿವಿಧ ಬಗೆಯ ಆಭರಣ, ಕೇಶಾಲಂಕಾರ, ಮೂಗಿನ ನತ್ತು, ಉದ್ದನೆಯ ಸೀರೆ ಕಂಡುಬರುತ್ತವೆ.

* ಈ ಚಿತ್ರಗಳಲ್ಲಿ ವಿಜಯನಗರ, ದಖ್ಖನ್, ಮರಾಠಾ, ಗುಜರಾತಿ, ಹಾಗೂ ರಾಜಸ್ಥಾನಿ ಶೈಲಿಗಳ ಪ್ರಭಾವವಿರುವುದು ಕಂಡುಬರುತ್ತದೆ.

**೨. ನರಗುಂದ ಅರಮನೆಯ ವೀರಶೈವ ಭಿತ್ತಿ ಚಿತ್ರಗಳು:**

ಶಿವಾಜಿಯ ಆಸ್ಥಾನದಲ್ಲಿ ಅಧಿಕಾರಿಯಾಗಿದ್ದ ಅಪ್ಪಾಜಿ ಸೂರೋ ಎಂಬ ಮರಾಠಾ ಮೂಲದ ವ್ಯಕ್ತಿಯ ವಂಶಸ್ಥರು ಇಲ್ಲಿ ಆಳಿದ್ದಾರೆ.[೫೨] ಕ್ರಿ.ಶ. ೧೮೫೮ ರಲ್ಲಿ ಈ ಸಂಸ್ಥಾನವು ಬ್ರಿಟೀಷರ ವಶವಾಯಿತು. ನರಗುಂದ ಸಂಸ್ಥಾನಿಕರು ತಮ್ಮ ಆಡಳಿತದ ಕಾಲದಲ್ಲಿ ಕಟ್ಟಿಸಿದ ಅರಮನೆಯಲ್ಲಿ ಭಿತ್ತಿಚಿತ್ರಗಳನ್ನು ರಚಿಸಿದ್ದಾರೆ. ಈ ಕಟ್ಟಡ ಇಂದು ಸ್ಥಳೀಯ ಮುನ್ಸಿಫಲ್ ಕಚೇರಿಯಾಗಿದೆ. ಅರಮನೆಯ ಈ ಚಿತ್ರಗಳ ಬಗೆಗೆ ವಿವರವಾಗಿ ಬರೆದವರೆಂದರೆ ಡಾ. ಶಿವರಾಮ ಕಾರಂತ ಅವರು. ಡಾ. ಎಸ್.ಸಿ.ಪಾಟೀಲರು ಅವರ ಜನಪದ ಚಿತ್ರಕಲೆಯ ಅಧ್ಯಯನದಲ್ಲಿ ಪ್ರಸ್ತಾಪಿಸಿರುವರು. ಡಾ. ಅ.ಲ.ನರಸಿಂಹನ್ ಅವರು ಕರ್ನಾಟಕದ ಚಿತ್ರಕಲೆಯ ಸಾಂಸ್ಕೃತಿಕ ಅಂಶಗಳ ಕುರಿತು ಹೇಳುವಾಗ ಒಂದೆರಡು ಕಲಾಕೃತಿಗಳ ಬಗ್ಗೆ ಹೇಳಿರುವರು. ನಂತರ ಡಾ. ಯಾದಪ್ಪ ಪರದೇಶಿಯವರು ಸ್ವಲ್ಪ ವಿವರವಾಗಿಯೇ ತಮ್ಮ ಉತ್ತರ ಕರ್ನಾಟಕದ ಭಿತ್ತಿ ಚಿತ್ರಗಳ ಅಧ್ಯಯನದಲ್ಲಿ ತಿಳಿಸಿರುವರು. ಪೇಶ್ವೆಗಳೊಂದಿಗೆ ಉತ್ತಮ ಸಂಬಂಧವನ್ನು ಇಟ್ಟುಕೊಂಡಿರುವ ಭಾಸ್ಕರ ರಾಯನ ಕಾಲದಲ್ಲಿ ಈ ಭಿತ್ತಿಚಿತ್ರಗಳು ೧೭೭೦ ರಲ್ಲಿ ರಚನೆಗೊಂಡಿವೆ ಎಂದು ಅಭಿಪ್ರಾಯಪಟ್ಟರು.

ಡಾ. ಯಾದಪ್ಪ ಪರದೇಶಿಯವರು ಅಭಿಪ್ರಾಯಪಟ್ಟಂತೆ ಭಿತ್ತಿಚಿತ್ರ ರಚನಾ ಕಾಲ ಕ್ರಿ.ಶ. ೧೭೭೦ ಎಂದಿದ್ದು., ಅದು ಆಗಿಲ್ಲ. ಆನಂತರ ಕಾಲದಲ್ಲಿ ಅಂದರೆ ೧೭ನೆಯ ಶತಮಾನದ ಅಂತ್ಯದಲ್ಲಿ ರಚನೆಗೊಂಡಿವೆ. ಯಾಕೆಂದರೆ ಬಳವಂತರಾಯನು ಕ್ರಿ.ಶ. ೧೭೫೮ ರಲ್ಲಿ ನರಗುಂದದ ಸಿಂಹಾಸನವನ್ನು ಭಾಸ್ಕರ ರಾಯನಿಂದ ವಶಪಡಿಸಿಕೊಂಡ ನಂತರ ಭಾಸ್ಕರ ರಾಯನು ಪುಣೆಗೆ ಹೋಗಿ ಮಾಧವರಾವ್ ಪೇಶ್ವೆ ಅವರ ಪ್ರೀತಿಯನ್ನು ಸಂಪಾದಿಸಿ, ಅವರ ಸಹಾಯದಿಂದಾಗಿ ಮತ್ತೆ ನರಗುಂದದ ಸಿಂಹಾಸನವನ್ನು ಪಡೆದನು ಎಂದು ತಿಳಿಸಲಾಗಿದ್ದು, ಇಲ್ಲಿ ಮಾಧವ ರಾವ್ ಪೇಶ್ವೆ ಅವರು ಯುದ್ಧಕ್ಕೆ ಹೋಗುವಾಗ ನಿಪ್ಪಾಣಿಯ ಸಿದ್ದೋಜಿರಾವ್ ಅವರನ್ನು ಕರೆದುಕೊಂಡು ಹೋಗಿದ್ದು ಅವರ ಸಹಾಯದಿಂದಲೆ ಸವಣೂರಿನವರೆಗೂ ಇಡೀ ಧಾರವಾಡ ಪ್ರಾಂತವನ್ನು ಹೈದರಾಲಿಯಿಂದ ಗೆದ್ದುಕೊಳ್ಳಲು ಸಹಾಯವಾಯಿತು ಎಂದು ತಿಳಿಸುತ್ತ ಸಿದ್ದೋಜಿರಾವ್ ಅವರ ನಿಪ್ಪಾಣಿಯ ಮನೆಗೆ ಭೆಟ್ಟಿಕೊಟ್ಟು ಈ ಸಹಕಾರಕ್ಕಾಗಿ ಸಿದ್ದೋಜಿರಾವ್ ಅವರಿಗೆ "ಸರ್‌ಲಷ್ಕರ್" ಪ್ರಶಸ್ತಿ ನೀಡಿ ಕೆಲವು ಹಳ್ಳಿಗಳನ್ನು ಉಂಬಳಿಯಾಗಿ ನೀಡಿದರು ಅಂದರೆ ಐತಿಹಾಸಿಕವಾಗಿಯೂ ಆನಂತರದ್ದು ಎಂದು ತಿಳಿದುಬರುತ್ತದೆ. ನಿಪ್ಪಾಣಿಯ ವಾಡೆಯಲ್ಲಿ ರಚಿಸಿದ ಕಲಾವಿದರೆ ನರಗುಂದದ ಅರಮನೆಯಲ್ಲಿ ಭಿತ್ತಿಚಿತ್ರಗಳನ್ನು ರಚಿಸಿರುವರೆಂದು ತಿಳಿದು ಬರುತ್ತದೆ. ಇವೆರೆಡೂ ಭಿತ್ತಿ ಚಿತ್ರಗಳನ್ನು ಅಧ್ಯಯನ ಮಾಡಿದಾಗ ಹರಿಹರರಿಗೆ ಸಂಬಂಧಿಸಿದ ಅಂಶಗಳು, ಸಾಮಾಜಿಕ

---

೫೨. ವೆಂಕಟರಂಗೋ ಕಟ್ಟಿ : ಧಾರವಾಡ ಜಿಲ್ಲಾ ಗೆಝೆಟಿಯರ್ : ಪುಟ ೨೦೭.

ಅಂಶಗಳು ಚಿತ್ರಿತ ಚಿತ್ರಗಳ ವಸ್ತು ವಿಷಯಗಳ ಆಯ್ಕೆ, ವರ್ಣಗಾರಿಕೆಯಲ್ಲಿಯ ತಂತ್ರಗಳು, ಸಂಯೋಜನಾ ರೀತಿ ನೀತಿಗಳೆಲ್ಲಾ ಒಂದೇ ಆಗಿವೆ. ಈ ಎಲ್ಲ ಅಂಶಗಳ ಹಿನ್ನೆಲೆಯಲ್ಲಿ ನರಗುಂದದ ಭಿತ್ತಿಚಿತ್ರಗಳು ೧೭ನೇ ಶತಮಾನದ ಅಂತಿಮ ಹಂತದಲ್ಲಿ ರಚನೆ ಆದವುಗಳೆಂದು ಅಭಿಪ್ರಾಯಪಡಬಹುದಾಗಿದೆ.

**ಧಾರ್ಮಿಕ ಭಿತ್ತಿಚಿತ್ರಗಳು:**

ಈ ಅರಮನೆಯಲ್ಲಿಇರುವ ರಾಜನ ಒಂದು ಖಾಸಗೀ ಕೋಣೆಯಲ್ಲಿ ಭಿತ್ತಿಚಿತ್ರಗಳನ್ನು ರಚಿಸಲಾಗಿದೆ. ಮೇಲಿನ ಅಂತಸ್ತಿನಲ್ಲಿರುವ ಚಿತ್ರ ೧೨' x ೧೦' ಅಡಿ ಉದ್ದ ಮತ್ತು ಅಗಲವಾಗಿದ್ದು ಎತ್ತರ ೮' ಅಡಿ ಆಗಿರುವ ನಾಲ್ಕೂ ಬದಿಯ ಗೋಡೆಗಳು ಚಿತ್ರಗಳಿಂದ ತುಂಬಿವೆ. ಚಿತ್ರಗಳಿಗೆ ಲೇಪಿಸಲಾದ ರಾಸಾಯನಿಕ ದ್ರವದ ಪರಿಣಾಮದಿಂದ ಚಿತ್ರಗಳು ಕಪ್ಪುಬಣ್ಣಕ್ಕೆ ತಿರುಗಿದ್ದು ಗುರುತಿಸಲಾರದಷ್ಟು ಹಾಳಾಗಿವೆ. ಇಲ್ಲಿನ ಭಿತ್ತಿಚಿತ್ರಗಳಲ್ಲಿಯ ವೀರಶೈವ ಧರ್ಮಕ್ಕೆ ಸಂಬಂಧಿಸಿದ ಚಿತ್ರಗಳು ಕೆಳಗಿನಂತಿವೆ.

**೧. ಪಶುಪತಿ ಪಾರ್ವತಿಯ ಚಿತ್ರ:**

ಚಿತ್ರದ ಎಡಭಾಗದಲ್ಲಿರುವ ಪಶುಪತಿ ಚಿತ್ರವು ವೃಷಭನ ಮೇಲೆ ಕುಳಿತು ಬರುತ್ತಿದ್ದು ಎದುರುಗಡೆ ಅಂದರೆ ಚಿತ್ರದ ಬಲಭಾಗದಲ್ಲಿ ಪಾರ್ವತಿ ಆನೆಯ ಮೇಲೆ ಅಂಬಾರಿಯಲ್ಲಿ ಕುಳಿತು ಬರುತ್ತಿರುವ ದೃಶ್ಯವಿದಾಗಿದೆ. ಇಲ್ಲಿ ವಿಶೇಷವಾಗಿ ಕಲಾವಿದ ಆನೆಯ ಮುಖ ಮತ್ತು ವೃಷಭನ ಮುಖಗಳನ್ನು ಒಂದರಲ್ಲಿಯೇ ತೋರಿಸಿರುವುದು ವಿಶೇಷವಾಗಿದೆ. ಎದುರು ಬದುರಾಗಿರುವ ಎರಡು ಬೇರೆ ಬೇರೆ ಪ್ರಾಣಿಗಳ ಮುಖವನ್ನು ಒಂದಾಗಿ ರಚಿಸಿದ್ದು ಎರಡಕ್ಕೂ ಸೇರಿ ಒಂದೇ ಮುಖವಿದ್ದರೂ ಸೂಕ್ಷ್ಮವಾಗಿ ಗಮನಿಸಿದಾಗ ಒಂದು ಕೋನದಿಂದ ಆನೆಯ ಮುಖವು ಸ್ಪಷ್ಟವಾಗಿ ಕಂಡರೆ, ಇನ್ನೊಂದು ಕೋನದಿಂದ ನೋಡಿದಾಗ ವೃಷಭದ ಮುಖವು ಸ್ಪಷ್ಟವಾಗಿ ಕಾಣುತ್ತದೆ. ಆನೆಯ ಸೊಂಡಿಲೇ ಎದುರಿಗಿರುವ ಪಶುವಿನ ಕೋಡಾಗಿ ಕಂಡರೆ ಆನೆಯ ಕೋರೆಗಳು ವೃಷಭದ ಕಿವಿಯ ಹಾಗೆ ಗೋಚರಿಸುತ್ತವೆ. ಎರಡೂ ಪ್ರಾಣಿಗಳಿಗೆ ಒಂದೇ ಕಣ್ಣನ್ನು ತೋರಿಸಲಾಗಿದೆ. ಆನೆಯ ತಲೆಯ ಮೇಲಿನ ಭಾಗ ವೃಷಭದ ಬಾಯಿಯಂತೆ ಕಾಣುವುದು ಚಿತ್ರಕಲಾವಿದನ ಚಾಣಾಕ್ಷತನವನ್ನು ತೋರಿಸುತ್ತದೆ. ವೃಷಭದ ಮೇಲೆ ಕುಳಿತಿರುವ ಪಶುಪತಿ ಕಿರೀಟ ಧರಿಸಿದ್ದು ನಾಲ್ಕು ಕೈಗಳನ್ನು ಹೊಂದಿರುವನು. ಹಿಂದಿನ ಎರಡು ಕೈಗಳಲ್ಲಿ ಒಂದರಲ್ಲಿ ತ್ರಿಶೂಲ, ಇನ್ನೊಂದರಲ್ಲಿ ಡಮರುಗ ಹಿಡಿದುಕೊಂಡಿರುವನು. ವೃಷಭಕ್ಕೆ ಜೂಲವನ್ನು ಹಾಕಿ ಶೃಂಗರಿಸಲಾಗಿದೆ. ಕೊರಳಲ್ಲಿ ಗೆಜ್ಜೆಯ ಸರವಿದೆ. ಆನೆಯ ಮೇಲೆ ಕುಳಿತ ಪಾರ್ವತಿ ರಾಜಪೋಷಾಕಿನಲ್ಲಿದ್ದು ಅಲಂಕೃತವಾದ ಆನೆಯ ಮೇಲೆ ಚಾಮರದ ಕೆಳಗಡೆ ಕುಳಿತಿರುವಳು. ಆನೆಯ ಕುತ್ತಿಗೆಯ ಮೇಲೆ ಮಾವುತನು ಆನೆಯನ್ನು ನಡೆಸುತ್ತಿದ್ದಾನೆ. ಮಾವುತನು ಟೊಪ್ಪಿಗೆಯನ್ನು ಧರಿಸಿದ್ದು ಈ ಪಶುಪತಿ ಪಾರ್ವತಿಯರ ಚಿತ್ರವು ಉತ್ತಮ ಸಂಯೋಜನೆಯ ಕಲಾಕೃತಿಯಾಗಿದೆ. ಚಿತ್ರದ ಹಿನ್ನೆಲೆಗೆ ಕೆಂಪು ವರ್ಣವನ್ನು ಬಳಸಿದ್ದು ಆಕೃತಿಗಳಿಗೆ ಹಳದಿ ವರ್ಣವನ್ನು ವಿಶೇಷವಾಗಿ ಬಳಸಿದ್ದು ಅಲ್ಲಲ್ಲಿ ಹಸಿರುವರ್ಣವನ್ನು ಬಳಸಿರುವರು.

**೨. ಗಣಪತಿಯ ಚಿತ್ರ:** ಗಣಪತಿಯ ಚಿತ್ರವನ್ನು ವೃತ್ತಾಕಾರದ ಒಳಗಡೆಗೆ ರಚಿಸಿದ್ದು ವೃತ್ತದ ಒಳಗಡೆಗೆ ಹಸಿರು ವರ್ಣವನ್ನು ತುಂಬಿದ್ದು ವೃತ್ತದ ಹೊರಗಡೆ ಕೆಂಪುವರ್ಣದಿಂದ ಲೇಪಿಸಲಾಗಿದೆ. ಗಣಪತಿಯು ದೊಡ್ಡದಾದ ಮುಖವನ್ನು ಹೊಂದಿದ್ದು ರಾಜಪೋಷಾಕಿನಂತೆ ಉದ್ದ ತೋಳಿನ ಅಂಗಿಯನ್ನು ಧರಿಸಿದ್ದು ಹಿಂದಿನ ಲೋಡಿಗೆ ಆಧಾರವಾಗಿ ರಾಜಠೀವಿಯಲ್ಲಿ ಕುಳಿತಿರುವನು. ಭುಜಕ್ಕೆ ಭುಜಕೀರ್ತಿಗಳಿದ್ದು ಕೊರಳಲ್ಲಿ ಆಭರಣಗಳನ್ನು ಧಾರಾಳವಾಗಿ ತೋರಿಸಲಾಗಿದೆ. ಹಳದಿ ಶಾಲನ್ನು ಹೊದ್ದುಕೊಂಡಿರುವ ಗಣಪತಿಗೆ ನಾಲ್ಕು ಕೈಗಳನ್ನು ತೋರಿಸಿದ್ದು, ಹಿಂದಿನ ಕೈಗಳಲ್ಲಿ ಆಯುಧವನ್ನು ತೋರಿಸಿದ್ದು, ಮುಂದಿನ ಒಂದು ಕೈಯನ್ನು ಮಡಚಿಕೊಂಡಿರುವ ಕಾಲಿನ ಮೇಲಿಟ್ಟುಕೊಂಡಿದ್ದು, ಇನ್ನೊಂದು ಕೈ ಕೆಳಗಡೆ ಇಟ್ಟುಕೊಂಡಿರುವನು. ರಾಜಕುಮಾರನ ಹಾಗೆ ಅಲಂಕಾರಗೊಂಡ ಗಣಪತಿಯು ಅಂದವಾಗಿ ಶೋಭಿಸುತ್ತಿರುವನು.

ಹೀಗೆ ನರಗುಂದದ ಅರಮನೆಯಲ್ಲಿ ಇನ್ನೂ ವೀರಶೈವ ಭಿತ್ತಿಚಿತ್ರಗಳು ಕಂಡುಬರುತ್ತಿದ್ದು ಅವುಗಳಲ್ಲಿ ಕಾರ್ತಿಕೇಯನ ಚಿತ್ರ, ಜಯವಿಜಯರ ಚಿತ್ರಗಳು, ದೇವತೆಗಳ ಚಿತ್ರಗಳು ರಚನೆಗೊಂಡಿದ್ದು ಈಗ ಪೂರ್ತಿಯಾಗಿ ಕಪ್ಪು ಬಣ್ಣಕ್ಕೆ ತಿರುಗಿದ್ದು ವರ್ಣಗಳಲ್ಲಿ ವ್ಯತ್ಯಾಸಗಳೂ ಕಾಣುತ್ತಿಲ್ಲ. ಮೇಲ್ಗಡೆಯಲ್ಲಾ ಗೀಚಾಡಿದ್ದು ಆಕಾರ ಆಕೃತಿಗಳು ಹಾಳಾಗಿವೆ. ಒಟ್ಟಿನಲ್ಲಿ ವೀರಶೈವ ಭಿತ್ತಿಚಿತ್ರಗಳು ಇಲ್ಲಿಯೂ ಕಂಡು ಬರುತ್ತವೆ. ಇಲ್ಲಿಯ ಚಿತ್ರಗಳನ್ನು ಚೌರಸ, ಆಯತ, ಕಮಾನಿನಂತಹ ಆಕಾರಗಳನ್ನು ನಿಪ್ಪಾಣಿಯಲ್ಲಿಯ ವಿನ್ಯಾಸದಂತೆ ಮಾಡಿರುವದು ಕಂಡುಬರುತ್ತದೆ. ಹಿನ್ನೆಲೆಯಾಗಿ ಅಲ್ಲಿಯಂತೆ ಇಲ್ಲಿಯೂ ಕೆಂಪುವರ್ಣವನ್ನು ಬಳಸಿರುವರು. ಹಳದಿವರ್ಣವನ್ನು ಆಕೃತಿಗಳಿಗೆ ಬಳಸಿದ್ದು ಹಸಿರು ವರ್ಣವನ್ನು ಅಲ್ಲಲ್ಲಿ ಬಳಸಿರುವುದಾಗಲಿ, ಸಾಮಾನ್ಯ ಜನರು ಟೊಪ್ಪಿಗೆಗಳನ್ನು ತಲೆಗೆ ಹಾಕಿಕೊಂಡಿರುವುದು, ದೇವತೆಗಳಿಗೆ ಮತ್ತು ರಾಜರಿಗೆ ಕಿರೀಟವನ್ನು ತೊಡಿಸಿದ್ದು ಹೀಗೆ ಸಾಮ್ಯಾಂಶಗಳು ಬೆಳೆಯುತ್ತ ಹೋಗುವುದರಿಂದ ನಿಪ್ಪಾಣಿಯ ಭಿತ್ತಿಚಿತ್ರಗಳ ಪ್ರಭಾವ ಇರುವುದನ್ನು ಗಮನಿಸಬಹುದಾಗಿದೆ.

## ಮಠಗಳಲ್ಲಿರುವ ವೀರಶೈವ ಭಿತ್ತಿಚಿತ್ರಗಳು

ದೇವಾಲಯ, ಅರಮನೆಗಳನ್ನು ಭಿತ್ತಿಚಿತ್ರಗಳಿಂದ ಅಲಂಕರಿಸಿದಂತೆ ಮಠಮಾನ್ಯಗಳನ್ನು ಭಿತ್ತಿಚಿತ್ರಗಳಿಂದ ಅಲಂಕರಿಸಿದ್ದು ಕಂಡುಬರುತ್ತದೆ. ಉತ್ತರ ಕರ್ನಾಟಕದಲ್ಲಿ ಆನೆಗುಂದಿಯ ಹುಚ್ಚಪ್ಪಯ್ಯನಸ ಮಠ, ಅಥಣಿಯ ಗಚ್ಚಿನಮಠ ಅಮ್ಮಿನಭಾವಿಯ ಪಂಚಗೃಹ ಹಿರೇಮಠ, ನವಲಗುಂದದ ಪಂಚಗೃಹ ಹಿರೇಮಠ, ಮಹಾಲಿಂಗಪುರದ ಮಹಾಲಿಂಗೇಶ್ವರಮಠ, ಸುರಪುರದ ಅಣ್ಣಯ್ಯನಮಠ, ರುದ್ರಸ್ವಾಮಿಮಠ, ಚಿತ್ರದುರ್ಗದ ಅಂಕಲಗಿಮಠ, ಮಣಿಪಾಲದ ವಿಜಯ್‌ನಾಥ್ ಶೆಣೈ ಅವರ ಪ್ರದರ್ಶನಾಲಯದಲ್ಲಿ ಜಂಗಮವಾಡಿ ಮಠದಲ್ಲಿಯ ಭಿತ್ತಿಚಿತ್ರಗಳು ರಚನೆಗೊಂಡಿದ್ದು, ಈಗ ಬಹಳಷ್ಟು ಭಿತ್ತಿಚಿತ್ರಗಳು ಹಾಳಾಗಿವೆ. ಉಳಿದಿರುವುದು ಅಮ್ಮಿನಭಾವಿ ಹಿರೇಮಠದಲ್ಲಿಯ ಭಿತ್ತಿಚಿತ್ರಗಳು, ಮಹಾಲಿಂಗೇಶ್ವರ ಮಠದಲ್ಲಿಯ ಭಿತ್ತಿಚಿತ್ರಗಳು ಹಾಗೂ ಇತ್ತೀಚಿಗಿ ಮಣಿಪಾಲದ ಜಂಗಮವಾಡಿ ಮಠದಲ್ಲಿಯ ಭಿತ್ತಿಚಿತ್ರಗಳು ನೋಡಲು ಸಿಗುತ್ತವೆ.

**ಅಮ್ಮಿನಭಾವಿಯ ಪಂಚಗೃಹ ಹಿರೇಮಠ :**

ಧಾರವಾಡದಿಂದ ಸುಮಾರು ೧೨ ಕಿ.ಮೀ. ದೂರದಲ್ಲಿರುವ ಅಮ್ಮಿನಭಾವಿ ಗ್ರಾಮಕ್ಕೆ ಹಿಂದೆ 'ಶಿವಪುರ' ಎಂದು ಕರೆಯುತ್ತಿದ್ದರು. ೧೬೦೦ ವರ್ಷಗಳ ಹಿಂದೆ ಇದು ಒಂದು ಅಗ್ರಹಾರವಾಗಿತ್ತು. ಆಗ ಇದನ್ನು ಚಾಂದರಾಜ ಎಂಬ ಪಾಳೆಗಾರ ಆಳುತ್ತಿದ್ದ. ಪಂಚಪೀಠಗಳಲ್ಲಿ ಒಂದಾದ ಬಾಳೆಹೊನ್ನೂರಿನ ರಂಭಾಪುರಿ ಶಾಖಾಮಠವಾಗಿರುವ ಇದು ಸುಮಾರು ೧೮ ನೆಯ ಶತಮಾನದಲ್ಲಿ ಕಟ್ಟಲ್ಪಟ್ಟಿದೆ. ಇಲ್ಲಿನ ಪಂಚಗೃಹ ಹಿರೇಮಠದಲ್ಲಿ ಅನೇಕ ಭಿತ್ತಿಚಿತ್ರಗಳನ್ನು ರಚಿಸಲಾಗಿದೆ. ಈ ಮಠವು ಚೌರಸವಾಗಿ ಕಟ್ಟಲ್ಪಟ್ಟಿದ್ದು, ಒಳಗಡೆ ಮಧ್ಯದಲ್ಲಿ ತಗ್ಗಾಗಿದ್ದು, ಸುತ್ತಲೂ ಎತ್ತರವಾದ ಕಟ್ಟೆಯನ್ನು ನಿರ್ಮಿಸಿದ್ದು, ಈ ಒಳಾಂಗಣದ ಸುತ್ತಲೂ ಗೋಡೆಯ ಮೇಲೆ ಭಿತ್ತಿಚಿತ್ರಗಳನ್ನು ರಚಿಸಿರುವರು. ಆದರೆ ಇವೆಲ್ಲ ಈಗ ಹಾಳಾಗಿವೆ. ಈ ಗೋಡೆಯ ಯಾವ ಭಾಗದಲ್ಲೂ ಚಿತ್ರಗಳು ಉಳಿದಿಲ್ಲ. ಅವುಗಳನ್ನು ಕೀಳಿಸಿ ತೆಗೆಸಿರುವರು. ಇದೇ ಒಳಾಂಗಣದಲ್ಲಿರುವ ಕಂಬಗಳ ಮೇಲಿನ ಬೋದಿಗೆ, ತೊಲೆಗಳ ಮೇಲೂ ವರ್ಣಚಿತ್ರಗಳನ್ನು ರಚಿಸಲಾಗಿದ್ದು, ಇವು ಇನ್ನೂ ಉತ್ತಮ ಸ್ಥಿತಿಯಲ್ಲಿವೆ. ಗೋಡೆಯ ಹಾಗೆ ಕೈಗೆಟುಕುವ ಸ್ಥಳದಲ್ಲಿ ಇರದೇ ಅತೀ ಮೇಲಿನ ಭಾಗದಲ್ಲಿ ಇವು ಇರುವುದರಿಂದ ಇಲ್ಲವೇ ಇವು ಕಟ್ಟಿಗೆಯ ಮೇಲೆ ರಚಿಸಿರುವುದರಿಂದ ಗೋಡೆಗೆ ಬಳಿದಂತೆ ಸುಣ್ಣ ಬಣ್ಣ ಬಳಿದು ನವೀನತೆ ತರುವ ವಿಚಾರಕ್ಕೆ ಕೈಹಾಕಿಲ್ಲ. ಪ್ರವೇಶದ್ವಾರದ ಹೊರ ಪಡಸಾಲೆಯ ಕಂಬದ ಬೋದಿಗೆ ಮತ್ತು ತೊಲೆಗಳ ಮೇಲೆ ವರ್ಣಚಿತ್ರಗಳನ್ನು ಕಾಣಬಹುದು. ಹೊರಪಡಸಾಲೆಯ ಪೂರ್ತಿ ಹೊರಚಾಚಿದ ಮೇಲ್ಛಾವಣಿಯ ಎರಡೂ ಭಾಗದಲ್ಲಿಯ ಬದಿಗಳಲ್ಲೂ ವರ್ಣಚಿತ್ರಗಳನ್ನು ರಚಿಸಲಾಗಿದೆ. ಈ ಮಠವು ಎರಡು ಅಂತಸ್ತುಗಳನ್ನು ಹೊಂದಿದ್ದು, ಪ್ರವೇಶದ್ವಾರದ ಮೇಲಿರುವ ತೆರೆದ ಮಂಟಪದ ಮೇಲ್ಛಾವಣಿಯಲ್ಲಿ ಹೊರಚಾಚಿದ ಭಾಗಕ್ಕೆ ತಗಡುಗಳನ್ನು ಅಳವಡಿಸಿದ್ದು, ಈ ದಪ್ಪವಾದ ತಗಡುಗಳ ಮೇಲೆಯೂ ವರ್ಣಚಿತ್ರಗಳನ್ನು ರಚಿಸಿದ್ದಾರೆ. ಇಲ್ಲಿ ಕಬ್ಬಿಣವು ಜಂಗಾಗಿದ್ದು, ಚಿತ್ರಗಳು ಬಹಳ ಹಾಳಾಗಿವೆ. ಬರೀ ವರ್ಣಚುಕ್ಕೆಗಳನ್ನು ಮಾತ್ರ ಕಾಣಬಹುದಾಗಿದೆ. ಹೀಗೆ ಗೋಡೆ, ಕಟ್ಟಿಗೆ, ಕಬ್ಬಿಣಗಳ ಮೇಲೆ ಚಿತ್ರಗಳನ್ನು ರಚಿಸಿದ್ದು, ಒಂದೇ ಸ್ಥಳದಲ್ಲಿ ಕಾಣುವುದು ಅಪರೂಪವಾಗಿದ್ದು, ಈ ದೃಷ್ಟಿಯಿಂದ ಉತ್ತರ ಕರ್ನಾಟಕದ ಭಿತ್ತಿಚಿತ್ರಗಳಲ್ಲಿಯೇ ವಿಶಿಷ್ಟವಾಗಿವೆಯೆಂದು ಪರಿಗಣಿಸಬಹುದಾಗಿದೆ. ಅಮ್ಮಿನಭಾವಿಯ ಚಿತ್ರಗಳನ್ನು ಕೆಳಗಿನಂತೆ ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ.

೧) ಮರದ ಫಲಕದ ಮೇಲಿನ ಚಿತ್ರಗಳು.

೨) ಲೋಹಫಲಕದ ಮೇಲಿನ ಚಿತ್ರಗಳು.

೩) ಗೋಡೆಯ ಮೇಲಿನ ಚಿತ್ರಗಳು.

*** ಮರದ ಮೇಲಿನ ವೀರಶೈವ ಚಿತ್ರಗಳು.**

೧) ಗಣಪತಿ ಸರಸ್ವತಿಯ ಚಿತ್ರ

೨) ಶಿವನ ಒಡ್ಡೋಲಗದ ಚಿತ್ರ

೩) ಮನ್ಮಥನು ಶಿವನ ತಪಸ್ಸನ್ನು ಭಂಗಗೊಳಿಸುವುದು

೪) ದಕ್ಷಬ್ರಹ್ಮನ ಯಜ್ಞ ಮತ್ತು ವೀರಭದ್ರನನ್ನು ಕಳಿಸುತ್ತಿರುವ ಶಿವ

೫) ತ್ರಿಪುರಾಸುರ ಸಂಹಾರ ಮಾಡುತ್ತಿರುವ ಶಿವ

*** ಲೋಹಮಾಧ್ಯಮದ ವೀರಶೈವ ಭಿತ್ತಿಚಿತ್ರಗಳು.**

೧) ವೃಷಭಾರೂಢ ಶಿವ-ಪಾರ್ವತಿ

೨) ದ್ರಾಕ್ಷಾಯಣಿಯಿಲ್ಲದ ಶಿವ ಕೋಪೋದ್ರೇಕಗೊಂಡಿರುವುದು

೩) ದ್ರಾಕ್ಷಾಯಣಿ ಯಜ್ಞಕುಂಡದಲ್ಲಿ ಹಾರಿಕೊಂಡಿರುವುದನ್ನು ತಿಳಿಸುತ್ತಿರುವ ಗಣಧರರು

* ಗೋಡೆಯ ಮೇಲಿನ ವೀರಶೈವ ಭಿತ್ತಿಚಿತ್ರಗಳು-ಈಗ ಇಲ್ಲ.

**I ಮರದ ಫಲಕದ ಮೇಲಿನ ಚಿತ್ರಗಳು :**

ಈ ಬಗೆಯ ಚಿತ್ರಗಳನ್ನು ಮಠದ ಮೇಲ್ಛಾವಣಿಯಲ್ಲಿ ಕಾಣಬಹುದು. ಕಂಬಕ್ಕೆ ಹೊಂದಿಸಿರುವ ಕಟ್ಟಿಗೆಯ ಫಲಕಗಳಲ್ಲಿ ಚಿತ್ರಗಳಿದ್ದು, ಫಲಕದ ಸೌಂದರ್ಯ ಹೆಚ್ಚಿಸಲು ಮಧ್ಯದಲ್ಲಿ ಹೂವಿನ ನಕ್ಷೆಯನ್ನು ಪ್ರತಿಯೊಂದು ಫಲಕಕ್ಕೆ ಕೆತ್ತಿದ್ದಾರೆ. ಚಿತ್ರ ರಚಿಸುವಾಗ ಈ ಮಧ್ಯದ ಹೂವಿಗೆ ವರ್ಣವನ್ನು ತುಂಬಿ, ಅದರ ಎಡಬಲಗಳಲ್ಲಿ ಚಿತ್ರಗಳನ್ನು ಬರೆದಿರುವರು. ಈ ಫಲಕಕ್ಕೆ ಸುತ್ತಲೂ ಕಮಾನಿನಂತೆ ಚೌಕಟ್ಟು ರಚಿಸಿರುವರು. ಎಡಬಲಗಳಲ್ಲಿ ಸುಳಿವು, ನಕ್ಷೆಯನ್ನು ಬಳಸಿದ್ದು, ಈ ನಕ್ಷೆಗಳು ಪ್ರತಿಯೊಂದು ಫಲಕಕ್ಕೂ ಬೇರೆ ಬೇರೆ ಆಗಿವೆ. ಸುಳಿವುಗಳನ್ನು ಕೆತ್ತಿದ ಫಲಕಗಳನ್ನು ವರ್ಣದಿಂದಲೇ ರಚಿಸಲಾಗಿದೆ.

**೧) ಗಣಪತಿ, ಸರಸ್ವತಿಯರ ಚಿತ್ರ :**

ಫಲಕದ ಮೇಲೆ ಎಡಗಡೆಗೆ ಗಣಪತಿ, ಬಲಗಡೆಗೆ ಸರಸ್ವತಿಯರನ್ನು ಚಿತ್ರಿಸಲಾಗಿದೆ. ಗಣಪತಿಯು ನಾಲ್ಕು ಕೈಗಳನ್ನು ಹೊಂದಿದವನಾಗಿದ್ದು, ಕಂದುವರ್ಣದ ಹೂವಿನ ನಕ್ಷೆ ಇರುವ ಉದ್ದತೋಳಿನ ಅಂಗಿಯನ್ನು ತೊಟ್ಟಿದ್ದಾನೆ. ಇದು ಪೇಶ್ವೆ ಶೈಲಿಯ ಉಡುಪುಗಳನ್ನು ಹೋಲುತ್ತದೆ. ಗಣಪತಿಯು ತೊಟ್ಟುಕೊಂಡ ಅಂಗಿಯು ಮೇಲೆ ಬಿಗಿಯಾಗಿ ಅಂಟಿಕೊಂಡ ಹಾಗಿದೆ. ಉಬ್ಬಿದ ಹೊಟ್ಟೆಯು ಅಂಗಿಯ ಹೊರಬಂದಂತೆ ಕಾಣುತ್ತದೆ. ಕೆಂಪುವರ್ಣದ ಧೋತ್ರವನ್ನು ಧರಿಸಿದ್ದು, ಕಾಲಮೇಲೆ ಕಾಲನ್ನು ಹಾಕಿಕೊಂಡು ಪೀಠವೊಂದರ ಮೇಲೆ ಆಸೀನನಾಗಿರುವನು. ವಾಹನವಾದ ಇಲಿಯನ್ನು ಪೀಠದ ಕೆಳಗೆ ಜಿಗಿದಾಡುತ್ತಿರುವ ಹಾಗೆ ತೋರಿಸಲಾಗಿದೆ.

ಬಲಗಡೆಗೆ ಸರಸ್ವತಿಯು ಪೀಠವೊಂದರ ಮೇಲೆ ಆಸೀನಳಾಗಿ ವೀಣೆಯನ್ನು ನುಡಿಸುತ್ತಿದ್ದಾಳೆ. ಒಂದು ಕೈಯಲ್ಲಿ ಪುಸ್ತಕ ಹಿಡಿದು, ಉಳಿದ ಮೂರು ಕೈಗಳಿಂದ ವೀಣೆಯನ್ನು ನುಡಿಸುತ್ತಿರುವಳು. ಕೆಂಪುವರ್ಣದ ಪಿಕೆತೊಟ್ಟು ಸೀರೆಯನ್ನು ಉಟ್ಟಿದ್ದಾಳೆ. ಕಿವಿ, ಮೂಗು, ಕೊರಳುಗಳು ಆಭರಣಗಳಿಂದ ಕಂಗೊಳಿಸುತ್ತವೆ.

ಹಣೆಯಲ್ಲಿ ಉದ್ದವಾದ ಕುಂಕುಮವನ್ನು ಹಚ್ಚಿಕೊಂಡಿದ್ದು, ತಲೆಯ ಮೇಲೆ ಕೀರಿಟವನ್ನು ಧರಿಸಿರುವಳು. ಹಿಂದಿರುವ ನೀಲಿವರ್ಣದ ದಿಂಬಿಗೆ ಆಧಾರವಾಗಿ ಕುಳಿತಿದ್ದು, ಮುಂದಕ್ಕೆ ಬಾಗಿ ವೀಣೆಯನ್ನು ನುಡಿಸುತ್ತಿರುವಂತೆ ಚಿತ್ರಿಸಲಾಗಿದೆ. ಮುಖವನ್ನು ಮಂದಸ್ಮಿತವಾಗಿ ತೋರಿಸಿದ್ದು, ಪಕ್ಕದಲ್ಲಿ ಆಕೆಯ ವಾಹನ ನವಿಲನ್ನು ಪೀಠದ ಕೆಳಗೆ ಅಲಂಕಾರಿಕ ಕಂಬವೊಂದರ ಮೇಲೆ ನಿಂತಿರುವಂತೆ ಚಿತ್ರಿಸಲಾಗಿದೆ. ಅದರ ಕೆಳಗಡೆ ಹಾವನ್ನು ಗಣಪತಿಯ ಕಡೆಗೆ ಹೊರಟಂತೆ ಚಿತ್ರಿಸಲಾಗಿದೆ. ಮೇಲ್ಗಡೆ ಹೂವಿನ ಹಾರವನ್ನು ಅಲ್ಲಲ್ಲಿ ಇಳಿಬಿಡಲಾಗಿದೆ. ಹಿನ್ನೆಲೆಯ ವರ್ಣವು ಕೆಂಪಾಗಿದ್ದು, ಕಮಾನಿನ ಹೊರ ಆವರಣವನ್ನು ಹಳದಿವರ್ಣದಿಂದ ಲೇಪಿಸಲಾಗಿದೆ. ಕೆಂಪು-ಬಿಳಿಯ ವರ್ಣದಿಂದ ಹೂವು, ಎಲೆಯ ನಕ್ಷೆಯನ್ನು ಮಾಡಲಾಗಿದೆ. ಈ ರೀತಿಯಾಗಿ ಸುಂದರ ಸಂಯೋಜನೆಯನ್ನು ಆಕರ್ಷಕ ವರ್ಣಗಳಿಂದ ಪೂರ್ತಿಗೊಳಿಸಿರುವರು.

**೨) ಶಿವನ ಒಡ್ಡೋಲಗದ ದೃಶ್ಯ :**

ಮರದ ಫಲಕದ ಮೇಲೆ ಶಿವನ ಒಡ್ಡೋಲಗದ ದೃಶ್ಯವನ್ನು ಚಿತ್ರಿಸಲಾಗಿದೆ. ಇದು ಅತ್ಯಂತ ಸುಂದರವಾಗಿ ಮೂಡಿಬಂದಿದ್ದು, ಕೈಲಾಸ ಪರ್ವತದಲ್ಲಿ ಶಿವ ಪಾರ್ವತಿಯರು ಪೀಠಾರೋಹಣರಾಗಿದ್ದು, ಇಲ್ಲಿ ಶಿವನಿಗೆ ಐದು ಮುಖಗಳು, ಹತ್ತು ಕೈಗಳು ಇವೆ. ಪಾರ್ವತಿಯನ್ನು ತನ್ನ ಎಡದೊಡೆಯ ಮೇಲೆ ಕೂಡ್ರಿಸಿಕೊಂಡಿರುವನು. ತನ್ನ ಕೈಗಳಲ್ಲಿ ಆಯುಧಗಳನ್ನು ಹಿಡಿದುಕೊಂಡಿದ್ದು, ಮುಂದಿನ ಬಲಗೈಯಿಂದ ಪಾರ್ವತಿಯ ಬಗಲಲ್ಲಿರುವ ಗಣಪತಿಯ ಸೊಂಡಿಯನ್ನು ಹಿಡಿದಿರುವಂತೆಯೂ ಎಡಗಡೆಗೈಯಿಂದ ಪಾರ್ವತಿಯನ್ನುಹಿಡಿದುಕೊಂಡಿರುವನು. ಶಿವನಿಗೆ ಐದು ಮುಖಗಳಿದ್ದು, ಐದು ಕಿರೀಟಗಳನ್ನು ದರಿಸಿಕೊಂಡಿರುವನು. ಧೋತರವನ್ನು ಉಟ್ಟುಕೊಂಡು, ಆಭರಣ ಧರಿಸಿ ರಾಜಗಾಂಭೀರ್ಯದಿಂದ ಕಂಗೊಳಿಸುತ್ತಿದ್ದಾನೆ. ಇಲ್ಲಿ ಪಾರ್ವತಿಯ ಆಕೃತಿಯು ಚಿಕ್ಕದಾಗಿದ್ದು, ಆಕೆಯು ಕಪ್ಪು, ಹಸಿರು ವರ್ಣದ ಸೀರೆ ಉಟ್ಟಿರುವಳು. ಬಲಗೈಯಿಂದ ಗಣೇಶನನ್ನು ಎತ್ತಿಕೊಂಡಿದ್ದು, ಎಡಗೈಯಲ್ಲಿ ಹಾವೊಂದನ್ನು ಹಿಡಿದುಕೊಂಡು ಕೆಳಗೆ ಬಿಟ್ಟಿರುವಳು. ಶಿವನ ಮುಂದೆ ನಂದಿಯು ಕುಳಿತುಕೊಂಡಿದೆ. ಶಿವಪಾರ್ವತಿಯರ ಎದುರುಗಡೆಯಲ್ಲಿ ಶಿವಗಣವೆಲ್ಲ ವಾದ್ಯ ನುಡಿಸುತ್ತಿರುವದು. ಶಿವನನ್ನು ಬಜಿಸುತ್ತಿದ್ದು, ನಂದಿ, ಭೃಂಗಿ, ನಾರದ, ಗರುಡ ಮುಂತಾದವರೆಲ್ಲ ಭಕ್ತಿಯಿಂದ ವಾದ್ಯ ನುಡಿಸುತ್ತಿರುವರು. ಭೃಂಗಿಯು ನೃತ್ಯ ಮಾಡುತ್ತಿರುವನು. ಹೀಗೆ ವಿವಿಧ ಭಂಗಿಯಲ್ಲಿ ನಿಂತುಕೊಂಡಿರುವರು. ಮೃದಂಗ, ತಂಬೂರಿ, ವೀಣೆ ಹೀಗೆ ವಿವಿಧ ವಾದ್ಯಗಳನ್ನು ನುಡಿಸುತ್ತಿರುವರು. ನೀಲಿ, ಕಪ್ಪು, ಹಸಿರು ವರ್ಣಗಳ ಮೇಲುಡುಗೆಗಳನ್ನು ಧರಿಸಿದ್ದರೆ, ಇನ್ನೂ ಕೆಲವರು ಹಾಗೇ ಇರುವರು. ಕೊರಳಲ್ಲಿ ರುದ್ರಾಕ್ಷಿ ಆಭರಣವನ್ನು ಧರಿಸಿದ್ದು, ಶಾಲನ್ನು ಹಾಕಿಕೊಂಡಿರುವರು. ಕೆಳಗಡೆ ಎಲ್ಲರೂ ಬಿಳೀ, ಹಳದಿ, ಕೆಂಪು, ಹಸಿರು ವರ್ಣಗಳ ಧೋತರವನ್ನು ಧರಿಸಿರುವರು. ಪ್ರತಿಯೊಂದು ಬಟ್ಟೆಯೂ ನಕ್ಷೆಗಳಿಂದ ಅಲಂಕೃತಗೊಂಡಿದೆ. ಚಿತ್ರದ ಅಂಚನ್ನು ನಕ್ಷೆಯಿಂದ ಪೂರ್ತಿಗೊಳಿಸಲಾಗಿದೆ.

**೩. ಮನ್ಮಥನು ಶಿವನ ತಪಸ್ಸನ್ನು ಭಂಗಗೊಳಿಸುವುದು :**

'ಮರದ ಫಲಕವೊಂದರ ಮೇಲೆ ಈ ದೃಶ್ಯವನ್ನು ಚಿತ್ರಿಸಿದ್ದು, ಫಲಕದ ಎಡಬದಿಯಲ್ಲಿ ಹೇಮಕೂಟ ಪರ್ವತವನ್ನು ರಚಿಸಿದ್ದು, ಅದರ ಬದಿಯಲ್ಲಿ ಶಿವನು ಪದ್ಮಾಸನದಲ್ಲಿ ಕುಳಿತು ತಪಸ್ಸನ್ನು ಆಚರಿಸುತ್ತಿದ್ದಾನೆ. ನಾಲ್ಕು ಕೈಗಳನ್ನು ಹೊಂದಿದ ಶಿವ ಮೀಸೆಯನ್ನು ಹೊಂದಿರುವನು. ಕಿರೀಟದಾಕಾರದಲ್ಲಿ ಜಡೆಯನ್ನು ತಲೆಯ ಮೆಲೆ ಕಟ್ಟಿಕೊಂಡಿದ್ದು, ಆ ಜಡೆಯಲ್ಲಿರುವ ಗಂಗೆಯು ಧಾರಾಕಾರವಾಗಿ ಹೊರಸೂಸುತ್ತಿದೆ. ಈ ಶಿವನ ಮುಂದೆ ಪಾರ್ವತಿಯೇ ಅಥವಾ ರತ್ತಿಯೋ ಗೊತ್ತಿಲ್ಲ. ನೃತ್ಯ ಮಾಡುತ್ತಿರುವಳು. ಇದರಿಂದ ವಿಚಲಿತನಾಗದ ಶಿವ ತಪಸ್ಸನ್ನು ಮಾಡುತ್ತ ಕುಳಿತಿರುವುದು ಒಂದೆಡೆಯಾದರೆ, ಬಲಗಡೆಯ ಭಾಗದಲ್ಲಿ ವಿಷ್ಣುವು ಮನ್ಮಥನಿಗೆ ಬಾಣ ಹೂಡುವಂತೆ ತನ್ನ ಎಡಗೈಯನ್ನು ಶಿವನತ್ತ ತೋರಿಸುತ್ತ ಮನ್ಮಥನಿಗೆ ಹೇಳುತ್ತಿರುವ ದೃಶ್ಯವಿದೆ. ವಿಷ್ಣುವಿನ ಆಜ್ಞೆಯಂತೆ ರಥಾರೂಢನಾದ ಮನ್ಮಥ ಶಿವನಿಗೆ ಬಾಣವನ್ನು ಹೂಡುತ್ತಿದ್ದಾನೆ. ರಥದ ವಾಹಕನೂ ಬಾಣವನ್ನು ಹೂಡಲು ಸೂಚಿಸುತ್ತಿರುವನು. ಈ ರಥವನ್ನು ಗಿಳಿಯೊಂದು ಎಳೆಯುತ್ತಿದೆ. ಇಲ್ಲಿಯ ಎಲ್ಲ ಚಿತ್ರಗಳಿಗೂ ಹಿನ್ನೆಲೆಯಾಗಿ ಕೆಂಪುವರ್ಣವನ್ನು ಬಳಸಿದ್ದು, ಇದರಲ್ಲಿ ನೀಲಿವರ್ಣವನ್ನು ಬಳಸಲಾಗಿದೆ. ಮಧ್ಯದಲ್ಲಿಯ ಹೂವು ಮತ್ತು ಬದಿಯಲ್ಲಿರುವ ಅಂಚನ್ನು ಹಳದಿವರ್ಣದಿಂದ ಚಿತ್ರಿಸಲಾಗಿದೆ. ಮನ್ಮಥನ ರಥದ ಹಿಂದುಗಡೆಯಲ್ಲಿ ಅಲಂಕಾರಿಕ ಗಿಡವನ್ನು ಚಿತ್ರಿಸಲಾಗಿದೆ. ವಿಷ್ಣುವಿಗೆ ನೀಲಿವರ್ಣವಿದ್ದರೆ ಉಳಿದವರಿಗೆ ಹಳದಿಮಿಶ್ರಿತ ಬಿಳಿಯ ಬಣ್ಣವಿದೆ. ಸಂಯೋಜನೆಯು ಸುಂದರವಾಗಿ ಮೂಡಿಬಂದಿದೆ.

**೪. ದಕ್ಷಬ್ರಹ್ಮನ ಯಜ್ಞ ಮತ್ತು ವೀರಭದ್ರನನ್ನು ಕಳಿಸುತ್ತಿರುವ ಶಿವ :**

ಈ ಮರದ ಫಲಕದ ಎಡಬದಿಯಲ್ಲಿ ದಕ್ಷಬ್ರಹ್ಮನು ಯಜ್ಞಕ್ಕೆ ಕುಳಿತಿದ್ದು, ಅವನ ಎದುರುಗಡೆಯಲ್ಲಿ ಯಜ್ಞಕುಂಡವಿದೆ. ಈ ಯಜ್ಞಕುಂಡದ ಪೂರ್ವ ಮತ್ತು ಪಶ್ಚಿಮದಲ್ಲಿ ಋಷಿ-ಮುನಿಗಳಿರುವರು. ದಕ್ಷನ ಹಿಂದುಗಡೆ ವಿಷ್ಣುವು, ಎದುರಿನಲ್ಲಿ ಬ್ರಹ್ಮನಿರುವನು. ದ್ರಾಕ್ಷಾಯಣಿಯು ಈ ಯಜ್ಞಕ್ಕೆ ಶಿವನನ್ನು ಆಹ್ವಾನಿಸಿದ ಕಾರಣವನ್ನು ಕೇಳುತ್ತಿದ್ದು, ದಕ್ಷನು ಶಿವನನ್ನು ನಿಂದಿಸುತ್ತಿರುವನು. ವಿಷ್ಣು ಬ್ರಹ್ಮರು ಈ ದೃಶ್ಯವನ್ನು ನೋಡುತ್ತಿರುವ ದೃಶ್ಯವಿದೆ. ಫಲಕದ ಬಲಗಡೆಯಲ್ಲಿ ಪೀಠಾರೂಢನಾದ ಶಿವನು, ದಕ್ಷನು ತನ್ನನ್ನು ಅವಮಾನಿಸಿ ದ್ರಾಕ್ಷಾಯಣಿಗೆ ಹೇಳುತ್ತಿರುವುದನ್ನು ಕಂಡು ಕೋಪಗೊಂಡ ಶಿವನು, ವೀರಭದ್ರನನ್ನು ಕರೆದು ದಕ್ಷನಲ್ಲಿಗೆ ಹೋಗು, ಅವನನ್ನು ವಿಚಾರಿಸು, ಶಿವನಿಂದನೆಯನ್ನು ಮಾಡಿದ್ದಕ್ಕೆ ದ್ರಾಕ್ಷಾಯಣಿ ಯಜ್ಞಕ್ಕೆ ಹಾಕಿಕೊಂಡಿರುವುದನ್ನು ಕೇಳಲು ಅವನು ಒಪ್ಪದಿದ್ದರೆ, ಅವನನ್ನು ಸಂಹರಿಸಲು ಹೇಳಿ ಕಳಿಸುವನು. ಶಿವನ ಪೀಠದ ಕೆಳಗಿರುವ ನಂದಿಯು ವೀರಭದ್ರನನ್ನು ನೋಡುತ್ತ ಕುಳಿತಿರುವದು. ವೀರಭದ್ರನ ಮೈಬಣ್ಣ ನೀಲಿಯಾಗಿದ್ದರೆ, ಶಿವನ ಬಣ್ಣವು ನೀಲಿಮಿಶ್ರಿತ ಬಿಳಿಯ ಬಣ್ಣವಾಗಿದೆ. ಇಲ್ಲಿ ಹಿನ್ನೆಲೆಯಾಗಿ ನೀಲಿ ಮತ್ತು ಕೆಂಪುಮಿಶ್ರಣದ ವರ್ಣವನ್ನು ಬಳಸಲಾಗಿದೆ. ಅಂಚನ್ನು ಕೆಂಪುಮಿಶ್ರಿತ ಹಳದಿವರ್ಣದ ನಕ್ಷೆಯಲ್ಲಿ ಮಾಡಲಾಗಿದೆ. ಮಧ್ಯದ ಹೂವಿಗೆ ಹಳದಿ ವರ್ಣವನ್ನು ಬಳಸಲಾಗಿದೆ.

ಈ ಫಲಕದಲ್ಲಿ ಎರಡು ವಿಷಯಗಳನ್ನು ಒಟ್ಟಿಗೆ ಚಿತ್ರಿಸಿದ್ದು, ದಕ್ಷ ಮತ್ತು ದಾಕ್ಷಾಯಣಿಯರು ವಾದ ಮಾಡುತ್ತಿರುವುದು, ಇನ್ನೊಂದೆಡೆ ಶಿವನು ವೀರಭದ್ರನನ್ನು ದಕ್ಷನಲ್ಲಿಗೆ ಕಳುಹಿಸುತ್ತಿರುವುದು ಸುಂದರವಾಗಿ ಚಿತ್ರಿತಗೊಂಡಿದೆ.

**೫. ತ್ರಿಪುರ ಸಂಹಾರ ಮಾಡುತ್ತಿರುವ ಕಾರ್ತಿಕೇಯ :**

ಮರದ ಫಲಕವೊಂದರ ಮೇಲೆ ಚಿತ್ರಣ ಮಾಡಿದ್ದು, ಫಲಕದ ಎಡಭಾಗದಲ್ಲಿ ರಥಾರೂಢನಾದ ಕಾರ್ತಿಕೇಯ ತ್ರಿಪುರ ರಾಕ್ಷಸರಿಗೆ ಬಿಲ್ಲನ್ನು ಹಿಡಿದು ಯುದ್ಧಕ್ಕೆ ನಿಂತಿರುವನು. ಬ್ರಹ್ಮನು ಈ ರಥವನ್ನು ನಡೆಸುತ್ತಿರುವನು. ವಿಷ್ಣುವು ಕುದುರೆಗಳಿಗೆ ಹಗ್ಗವಾಗಿ, ರಥವೇ ವಿಷ್ಣುವಾಗಿ, ರಥದ ಗಾಲಿಗಳು ಸೂರ್ಯ ಚಂದ್ರರಾಗಿ ವಿಶಿಷ್ಟವಾಗಿ ರಚನೆಗೊಂಡಿದೆ. ಚಂದ್ರನನ್ನು ನೀಲಿವರ್ಣದ ಚಕ್ರದಲ್ಲಿಯೂ ಸೂರ್ಯನನ್ನು ಹಳದಿವರ್ಣದ ಚಕ್ರದಲ್ಲಿ ಚಿತ್ರಿಸಲಾಗಿದ್ದು, ಹಳದಿವರ್ಣದ ರಥ, ಬಿಳಿವರ್ಣದ ಕುದುರೆಗಳು, ಕಾರ್ತಿಕೇಯ, ಬ್ರಹ್ಮರು ಕೆಂಪು ವರ್ಣದ ಧೋತರ, ಹುಲಿ ಚರ್ಮವನ್ನು ಸುತ್ತಿಕೊಂಡಿರುವ ಕಾರ್ತಿಕೇಯ ಹೀಗೆ ಚಿತ್ರಿತಗೊಂಡರೆ ಈ ಫಲಕದ ಬಲಬದಿಯಲ್ಲಿ ಮೂರು ವೃತ್ತಗಳನ್ನು ಮೂರು ಪುರಗಳಿಗೆ ಹೋಲಿಸಿದ್ದು, ಒಂದೊಂದರಲ್ಲಿ ಒಬ್ಬೊಬ್ಬ ರಾಕ್ಷಸರನ್ನು ಆಯುಧ ಹಿಡಿದುಕೊಂಡು ಎಡಗಾಲನ್ನು ಮೇಲ್ಗಡೆ ಮಡಿಚಿದ್ದು, ಬಲಗಾಲನ್ನು ನೆಲಕ್ಕೆ ಮಡಿಚಿಕೊಂಡು ಕುಳಿತಿರುವವನು. ಆಯುಧಗಳನ್ನು ಕೈಯಲ್ಲಿ ಹಿಡಿದು ಎದುರುಗಡೆ ನೋಡುತ್ತಿರುವ ದೃಶ್ಯವಿದೆ. ಕಪ್ಪು ವರ್ಣದ ಇವರು ಹಳದಿ ವರ್ಣದ ಧೋತ್ರ, ಕಿರೀಟ, ಆಭರಣ, ಆಯುಧ ಹೊಂದಿರುವುದು. ನೀಲಿವರ್ಣದ ವೃತ್ತಗಳಿಗೆ ಒಟ್ಟಾರೆ ಫಲಕದ ಹಿನ್ನೆಲೆಯನ್ನು ಕೆಂಪುವರ್ಣದಿಂದ ಲೇಪಿಸಲಾಗಿದೆ. ಹಸಿರು ಬಳ್ಳಿ, ಕೆಂಪು ಹೂವುಗಳಿಂದೊಡಗೂಡಿದ ನಕ್ಷೆಗಳು ಚಿತ್ರದ ಅಂಚನ್ನು ಶೃಂಗರಿಸಿವೆ.

**II ಲೋಹಮಾಧ್ಯಮದ ಭಿತ್ತಿಚಿತ್ರಗಳು :**

ಅಮ್ಮಿನಭಾವಿ ಪಂಚಗೃಹ ಹಿರೇಮಠದ ಪ್ರವೇಶದ್ವಾರದಲ್ಲಿ ಎರಡನೆಯ ಅಂತಸ್ತಿನ ಮೇಲ್ಛಾವಣಿಯ ಹೊರಚಾಚಿದ ಭಾಗಕ್ಕೆ ಕಬ್ಬಿಣದ ತೆಳುವಾದ ಫಲಕಗಳನ್ನು ಜೋಡಿಸಿದ್ದಾರೆ. ಈ ಕಬ್ಬಿಣದ ಫಲಕಗಳ ಮೇಲೆ ವರ್ಣಚಿತ್ರಗಳನ್ನು ಬಿಡಿಸಿರುವರು. ಇವು ಪೂರ್ತಿ ಹೊರಭಾಗದಲ್ಲಿರುವುದರಿಂದ ಬೇಗನೆ ಹಾಳಾದಂತೆ ಕಂಡುಬರುತ್ತವೆ. ಕಬ್ಬಿಣಕ್ಕೆ ತುಕ್ಕುಹಿಡಿದು ಬಣ್ಣಗಳು ಉದುರಿಹೋಗಿವೆ. ಕೆಲವು ಸಂಪೂರ್ಣ ಹಾಳಾಗಿ ಹೋಗಿದ್ದರೆ, ಇನ್ನೂ ಕೆಲವು ಬಣ್ಣದ ಉಳಿಕೆಗಳಾಗಿ ಮಾತ್ರ ಉಳಿದಿವೆ. ಅವುಗಳಲ್ಲಿ ವೀರಶೈವ ಧರ್ಮಕ್ಕೆ ಸಂಬಂಧಿಸಿದಂತೆ ಒಂದೆರಡು ಕಲಾಕೃತಿಗಳನ್ನು ಮಾತ್ರ ತೋರಿಸಲಾಗಿದ್ದು, ಅವು ಕೆಳಗಿನಂತಿವೆ.

**೧. ವೃಷಭಾರೂಢ ಶಿವ ಪಾರ್ವತಿ :**

ಲೋಹ ಮಾಧ್ಯಮದಲ್ಲಿರುವ ಈ ಕಲಾಕೃತಿಯಲ್ಲಿ ಶಿವ ಪಾರ್ವತಿಯರು ವೃಷಭದ ಮೇಲೆ ಕುಳಿತಿರುವರು. ವೃಷಭವು ಮಂಟಪವೊಂದರ ಮೇಲೆ ಕುಳಿತಿದ್ದು, ಅದರ ಮೇಲೆ ಶಿವನು ಪಾರ್ವತಿಯನ್ನು ತನ್ನ ಎಡದೊಡೆಯ ಮೇಲೆ ಕೂಡ್ರಿಸಿಕೊಂಡು ಕುಳಿತಿರುವನು. ಶಿವನು ನಾಲ್ಕು ಕೈಗಳನ್ನು ಹೊಂದಿದ್ದು, ಹಿಂದಿನ ಕೈಗಳಲ್ಲಿ ತ್ರಿಶೂಲ

ಮತ್ತು ಪಾಶಗಳನ್ನು ಹಿಡಿದಿದ್ದು, ಎಡಗೈಯಿಂದ ಪಾರ್ವತಿಯನ್ನು ಹಿಡಿದುಕೊಂಡಿದ್ದು, ಬಲಗೈಯಿಂದ ಅಭಯ ಮುದ್ರೆಯನ್ನು ಹೊಂದಿದ್ದಾನೆ. ಹುಲಿಯ ಚರ್ಮವನ್ನು ಸೊಂಟಕ್ಕೆ ಸುತ್ತಿಕೊಂಡು ಕೈಕಾಲು, ಕೊರಳ ಹಾಗೂ ತಲೆಯಲ್ಲಿ ಆಭರಣಗಳನ್ನು ಧರಿಸಿಕೊಂಡಿದ್ದು, ಕೋರೆಯ ಮೀಸೆಯನ್ನು ಹೊಂದಿರುವನು. ಪಾರ್ವತಿಯು ಕಪ್ಪು ಸೀರೆಯನ್ನುಟ್ಟುಕೊಂಡಿದ್ದು, ಹಳದಿ ರವಿಕೆಯನ್ನು ತೊಟ್ಟಿರುವಳು. ಈ ಮಂಟಪದ ಬಲಬದಿಯಲ್ಲಿ ಭೃಂಗಿಯು ನೃತ್ಯ ಮಾಡುತ್ತಿರುವ ಭಂಗಿಯಲ್ಲಿದ್ದು, ನಂದಿಯು ಮೃದಂಗವನ್ನು ಬಾರಿಸುತ್ತಿರುವನು. ನಂದಿಯು ಕಪ್ಪು ಬಣ್ಣದ ಅಂಗಿಯನ್ನು ಧರಿಸಿದ್ದು, ಬಿಳಿ ಧೋತರವನ್ನು ಉಟ್ಟಿರುವನು. ಈ ಮಂಟಪದ ಎಡಬದಿಯಲ್ಲಿ ಋಷಿಗಳೊಬ್ಬರು ವೀಣೆಯನ್ನು ಬಾರಿಸುತ್ತಿದ್ದು, ಮತ್ತೊಬ್ಬ ದೇವನು ಭಜನೆಯನ್ನು ಮಾಡುತ್ತಿರುವನು. ಹಸಿರುವರ್ಣದ ಅಂಚನ್ನು ಹೊಂದಿರುವ ಹಳದಿವರ್ಣದ ಧೋತರವನ್ನು ಧರಿಸಿದ್ದು, ಕೆಂಪುವರ್ಣದ ಶಾಲನ್ನು ಹೊದ್ದುಕೊಂಡಿರುವರು. ಪಂಚಕೋಣಾಕೃತಿಯ ಅಂದವನ್ನುಳ್ಳ ನಕ್ಷೆಗಳಿದ್ದು, ಚಿತ್ರದ ಹಿನ್ನೆಲೆಯಲ್ಲಿ ಕೆಂಪುವರ್ಣವನ್ನು ಲೇಪಿಸಲಾಗಿದೆ. ಈ ಚಿತ್ರದಲ್ಲಿ ಬರುವ ವ್ಯಕ್ತಿಗಳ ಮುಖ ಮತ್ತು ಕಣ್ಣುಗಳು ಜೀವಂತಿಕೆಯನ್ನು ತೋರಿಸುತ್ತಿವೆ. ವಿವಿಧ ಭಂಗಿಯಲ್ಲಿರುವ ವ್ಯಕ್ತಿಗಳಿಂದಾಗಿ ಸಂಯೋಜನೆಯು ಉತ್ತಮವಾಗಿ ರೂಪುಗೊಂಡಿದೆ.

**೨. ದ್ರಾಕ್ಷಾಯಣಿಯಿಲ್ಲದ ಶಿವ ಕೋಪೋದ್ರೇಕಗೊಂಡಿರುವುದು :**

ಲೋಹಮಾಧ್ಯಮದಲ್ಲಿರುವ ಈ ಕಲಾಕೃತಿಯಲ್ಲಿ ಶಿವನು ಏಕಾಂಗಿಯಾಗಿ ಮಂಟಪವೊಂದರ ಮೇಲೆ ಕೋಪೋದ್ರೇಕದಿಂದ ಕುಳಿತಿರುವ ಚಿತ್ರವಿದಾಗಿದ್ದು, ಕೋರೆಮೀಸೆಯನ್ನು ಹೊಂದಿದ್ದು, ಆವೇಶ ಮತ್ತು ಕೋಪವನ್ನು ಹೊರಸೂಸುವ ಕಣ್ಣುಗಳು, ಕೊರಳಲ್ಲಿ ಧರಿಸಿರುವ ರುಂಡಗಳ ಮಾಲೆ ಶಿವನ ಭೀಕರತೆಯನ್ನು ಸೂಚಿಸುತ್ತಿದ್ದರೆ, ಮುಂದಿನ ಬಲಗೈಯ ಒಂದು ಬೆರಳನ್ನು ಮೇಲೆ ಮಾಡಿ ಏನನ್ನೋ ಯೋಚಿಸುತ್ತಿದ್ದು, ಎಡಗೈ ಅವನ ಪಾದದ ಮೇಲಿದೆ. ಹಿಂದಿನ ಎರಡೂ ಕೈಗಳಲ್ಲಿ ತ್ರಿಶೂಲ ಮತ್ತು ಅಂಕುಶವನ್ನು ಹಿಡಿದುಕೊಂಡಿರುವನು. ಕೊರಳಲ್ಲಿ ಆಭರಣಗಳನ್ನು ಹಾಕಿಕೊಂಡಿದ್ದು, ತಲೆಗೆ ಅಂದವಾದ ಕಿರೀಟವಿದೆ. ಕಿರೀಟದ ಮಧ್ಯದಲ್ಲಿ ಗಂಗೆಯನ್ನು ತೋರಿಸಲಾಗಿದೆ. ಸೊಂಟಕ್ಕೆ ಹುಲಿಯ ಚರ್ಮದ ಧೋತರವನ್ನು ಉಟ್ಟುಕೊಂಡಿರುವನು. ಶಿವನ ಬಲಬದಿಗೆ ಭೃಂಗಿ, ಗರುಡ, ದೇವಗಣರು ಶಿವನ ಕೋಪವನ್ನು ನೋಡುತ್ತ ನಿಂತಿರುವರು. ಎಡಬದಿಯಲ್ಲಿ ನಂದಿ, ಋಷಿಮುನಿ, ದೇವಮಾನವರು ಶಿವನ ಕೋಪವನ್ನು ನೋಡಿದ ಇವರನ್ನೂ ಆವೇಶ ಹೊಂದಿದಂತೆ ಚಿತ್ರಿಸಲಾಗಿದೆ. ಇವರೆಲ್ಲರ ಬಟ್ಟೆಗಳು ನಕ್ಷೆಯಿಂದ ಅಲಂಕೃತಗೊಂಡಿದ್ದು, ಆಕರ್ಷಕ ಅಂಚುಗಳನ್ನು ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಕೆಂಪುವರ್ಣದ ಲೇಪನವಿದೆ. ಶಿವನ ಎದುರುಗಡೆಯಲ್ಲಿ ವೃಷಭವಿದೆ.

**೩. ದ್ರಾಕ್ಷಾಯಣಿ ಯಜ್ಞಕುಂಡದಲ್ಲಿ ಹಾರಿಕೊಂಡಿರುವುದನ್ನು ತಿಳಿಸುತ್ತಿರುವ ಗಣಧರರು :**

ಲೋಹಮಾಧ್ಯಮದಲ್ಲಿರುವ ಈ ಕಲಾಕೃತಿಯಲ್ಲಿ ಶಿವನು ಏಕಾಂಗಿಯಾಗಿ ಪೀಠದ ಮೇಲೆ ಆಸೀನನಾಗಿದ್ದು, ಅವನ ಎಡಬಲಗಳಲ್ಲಿರುವ ದೇವಗಣರು, ದಕ್ಷನ ಯಾಗಕ್ಕೆ ಹೋದ ದ್ರಾಕ್ಷಾಯಣಿಯು ದಕ್ಷನು ಶಿವನಿಗೆ

ಮಾಡಿದ ಅವಮಾನವನ್ನು ತಾಳದೇ ಯಜ್ಞಕುಂಡಕ್ಕೆ ಹಾರಿ ಆತ್ಮಹತ್ಯೆಮಾಡಿಕೊಂಡ ಸುದ್ದಿಯನ್ನು ಶಿವನಿಗೆ ಶಿವಗಣರು ತಿಳಿಸುತ್ತಿರುವುದು, ಇದರಿಂದಾಗಿ ಕೆಂಡಾಮಂಡಲವಾದ ಶಿವನು ಅವರೀರ್ವರನ್ನು ಕರೆದು ಏನನ್ನೋ ಕೇಳುತ್ತಿರುವಂತೆ ಅವನ ಎರಡೂ ಕೈಗಳ ಮುದ್ರೆಗಳು ಸೂಚಿಸುತ್ತಿದ್ದು, ಹಿಂದಿನ ಎರಡು ಕೈಗಳಲ್ಲಿ ತ್ರಿಶೂಲ ಮತ್ತು ಅಂಕುಶಗಳನ್ನು ಹಿಡಿದಿದ್ದು, ಮುಂದಿನ ಒಂದು ಕೈಯನ್ನು ಮೇಲೆತ್ತಿ ಏನನ್ನೋ ಯೋಚಿಸುತ್ತಿದ್ದು, ಎಡಗೈಯನ್ನು ಅವನ ಎಡಗಾಲ ಪಾದದ ಮೇಲಿಟ್ಟುಕೊಂಡಿರುವನು. ಕೈಗಳು, ಕಾಲು, ಕೊರಳು, ರಟ್ಟೆಗಳಲ್ಲಿ ರುದ್ರಾಕ್ಷಿ ಮಾಲೆಯನ್ನು ಧರಿಸಿರುವನು. ತಲೆಯಲ್ಲಿರುವ ಗಂಗೆಯು ಕೆಳಗಡೆ ಧುಮಕುತ್ತಿದ್ದಾಳೆ. ಶಿವನ ಪೀಠದ ಮುಂದೆ ವೃಷಭವು ಕುಳಿತುಕೊಂಡಿದೆ. ಈ ಪೀಠದ ಎಡಬಲಭಾಗದಲ್ಲಿರುವ ದೇವಗಣರು ಕಂದುಗೆಂಪುಬಣ್ಣದ ಧೋತರ, ನೀಲಿವರ್ಣದ ಶಾಲನ್ನು ಹೊದ್ದುಕೊಂಡಿದ್ದರೆ, ಎಡಗಡೆಯವ ನೀಲಿವರ್ಣದ ಧೋತರ, ಕಂದುಗೆಂಪುವರ್ಣದ ಶಾಲನ್ನು ಹೊದ್ದುಕೊಂಡಿರುವನು. ಇವರೀರ್ವರೂ ಕೈಮುಗಿದುಕೊಂಡು ನಿಂತಿರುವ ದೃಶ್ಯವು ಅತ್ಯಂತ ಭಾವಪೂರ್ಣವಾಗಿ ಮೂಡಿಬಂದಿದೆ. ಅಲಂಕಾರಿಕ ನಕ್ಷೆಯ ಅಂಚು ಹಳದಿ ಮತ್ತು ಹಸಿರು ವರ್ಣದಲ್ಲಿದ್ದರೆ ಚಿತ್ರದ ಹಿನ್ನೆಲೆಯಲ್ಲಿ ಕೆಂಪುವರ್ಣವನ್ನು ಲೇಪಿಸಲಾಗಿದೆ.

**III ಗೋಡೆಯ ಮೇಲಿನ ಭಿತ್ತಿಚಿತ್ರಗಳು :**

ಮಠದ ಒಳಗಿನ ಗೋಡೆಯಲ್ಲಿ ಕೆಲವು ಭಿತ್ತಿಚಿತ್ರಗಳು ಇದ್ದುದಾಗಿ ತಿಳಿದುಬರುತ್ತದೆ. ಆದರೆ ಈ ಗೋಡೆಯ ಮೇಲೆ ಯಾವ ಚಿತ್ರಗಳೂ ಈಗ ಕಂಡುಬರುವುದಿಲ್ಲ. ಅವೆಲ್ಲ ಹಾಳಾಗಿದ್ದು, ಅದರ ಮೇಲೆ ಸುಣ್ಣ-ಬಣ್ಣವನ್ನು ಬಳಿಯಲಾಗಿದೆ. ಇಲ್ಲಿ ಸಾಮಾಜಿಕ, ರಾಜಕೀಯ ಚಿತ್ರಗಳೊಂದಿಗೆ ಆಧ್ಯಾತ್ಮಿಕ ಚಿತ್ರಗಳನ್ನೂ ಬಳಸಲಾಗಿದ್ದು, ವೀರಶೈವ ಧರ್ಮಕ್ಕೆ ಸಂಬಂಧಿಸಿದ್ದು, ಶಿವ, ಆತನ ವಾಹನ ವೃಷಭ, ನಂದಿ, ನಾರದ, ಶಿವನ ಪರಿವಾರ ಅಲ್ಲದೇ ಕೈಲಾಸದ ದೃಶ್ಯಗಳು ಚಿತ್ರಿತಗೊಂಡಿದ್ದವು. ಈಗೆಲ್ಲ ಹಾಳಾಗಿದ್ದು, ನೋಡಲೂ ಸಿಗುವುದಿಲ್ಲ.

ಈ ಪ್ರಬಂಧದಲ್ಲಿ ಕೆಲವು ಮೂಲ ಕಲಾಕೃತಿಗಳಿದ್ದು, ಇನ್ನು ಕೆಲವು ಕಲಾಕೃತಿಗಳು ಪ್ರತಿಕೃತಿಗಳು ಆಗಿವೆ. ಅಮ್ಮಿನಭಾವಿಯ ಮೂಲಕೃತಿಗಳನ್ನು ಅಧ್ಯಯನ ಮಾಡಿ ಮೂಲಕೃತಿಗಳನ್ನು ಪ್ರತಿಕೃತಿಗಳನ್ನಾಗಿ ರಚಿಸಿದ ಧಾರವಾಡದ ಶ್ರೀ ಎಫ್.ವ್ಹಿ.ಚಿಕ್ಕಮಠ ಅವರು ನಶಿಸುತ್ತಿರುವ ಈ ಭಿತ್ತಿಚಿತ್ರಗಳಿಗೆ ಮರು (ಪ್ರತಿಕೃತಿಯಾಗಿ) ಜೀವ ನೀಡುವಲ್ಲಿ ಯಶಸ್ವಿಯಾಗಿರುವರು. ಇವರಿಂದ ಕೆಲವು ಕಲಾಕೃತಿಗಳನ್ನು ಬಳಸಿಕೊಳ್ಳಲಾಗಿದೆ.

**ಅಮ್ಮಿನಭಾವಿಯ ಪಂಚಗೃಹ ಹಿರೇಮಠದ ಭಿತ್ತಿಚಿತ್ರಗಳ ಲಕ್ಷಣಗಳು :**

* ಮಠದ ಒಳಭಾಗದ ಚಿತ್ರಗಳಿಗೆ ಹಿನ್ನೆಲೆಯ ವರ್ಣವಾಗಿ ದಟ್ಟ ಕೆಂಪುವರ್ಣವನ್ನು ಬಳಸಲಾಗಿದೆ. ಹೊರಭಾಗದ ಚಿತ್ರಗಳ ಹಿನ್ನೆಲೆಗೆ ನೀಲಿವರ್ಣ ಬಳಸಲಾಗಿದೆ.
* ಅಡ್ಡದಾಗಿರುವ ಚಿತ್ರ ಫಲಕಗಳ ಮಧ್ಯದಲ್ಲಿ ಹೂವುಗಳನ್ನು ಫಲಕದಲ್ಲಿಯೇ ಕೆತ್ತಲಾಗಿದೆ. ಕೆಲವೊಂದು ಫಲಕಗಳ ಅಂಚುಗಳಿಗೆ ನಕ್ಷೆಯನ್ನು ಕೆತ್ತಲಾಗಿದೆ.

* ದೊಡ್ಡದಾದ ಫಲಕಗಳಲ್ಲಿ ಕೆಲವೊಂದು ಕಡೆ ಎಡಕ್ಕೆ ಮತ್ತು ಬಲಕ್ಕೆ ಬೇರೆ ಬೇರೆ ವಿಷಯಗಳನ್ನು ಚಿತ್ರಿಸಿದರೆ ಕೆಲವೊಮ್ಮೆ ಒಂದೇ ವಿಷಯವನ್ನು ಚಿತ್ರಿಸಲಾಗಿದೆ.

* ದೇವತಾ ಪುರುಷಚಿತ್ರಗಳಿಗೆ ಮೀಸೆಯನ್ನು ರಚಿಸಲಾಗಿದೆ.

ವೀರಶೈವ ಪುರಾಣಗಳನ್ನು ಆಧಾರವಾಗಿಟ್ಟುಕೊಂಡು ರಚನೆ ಆದ ಭಿತ್ತಿಚಿತ್ರಗಳಲ್ಲಿಯೇ ಈಗಿನವರೆಗೂ ಉತ್ತಮವಾದ ಶಿಷ್ಟ ಪರಂಪರೆಯ ಕಲಾಕೃತಿಗಳಾಗಿ ಉಳಿದುಕೊಂಡಿವೆ. ಮೂರು ಮಾಧ್ಯಮಗಳಲ್ಲಿ ಒಂದೇ ಮಠದಲ್ಲಿ ರಚನೆ ಆದ ಈ ಚಿತ್ರಗಳು ಆಕರ್ಷಕ ವರ್ಣಗಳೊಂದಿಗೆ ಈಗಲೂ ಕಂಗೊಳಿಸುತ್ತಿರುವುದು ವಿಶೇಷವಾಗಿದೆ.

**II ಮಹಾಲಿಂಗಪುರದ ಮಹಾಲಿಂಗೇಶ್ವರ ಮಠದ ಭಿತ್ತಿಚಿತ್ರಗಳು :**

ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿಗೆ ಸೇರಿದ ಮಹಾಲಿಂಗಪುರವು ಮುಧೋಳದಿಂದ ೨೦ ಕಿ.ಮೀಟರ್ ಅಂತರದಲ್ಲಿದೆ. ಈ ಮಹಾಲಿಂಗೇಶ್ವರ ಮಠವು ಮಹಾಲಿಂಗಪುರದ ದಕ್ಷಿಣಕ್ಕಿದೆ. ಈ ಭಾಗದ ಪ್ರಮುಖ ಧಾರ್ಮಿಕ ಮಠವಾಗಿದ್ದು, ಈ ಮಠಕ್ಕೆ ಬೃಹದಾಕಾರದ ಪ್ರವೇಶದ್ವಾರವನ್ನು ಕ್ರಿ.ಶ. ೧೮೫೬ ರಲ್ಲಿಯೇ ಕಟ್ಟಿಸಲಾಗಿದೆ. ಈ ಮಠದಲ್ಲಿ ರಚನೆಯಾಗಿರುವ ವರ್ಣ ಭಿತ್ತಿಚಿತ್ರಗಳು ೧೮ ನೆಯ ಶತಮಾನದ ಪ್ರಾರಂಭದಲ್ಲಿ ರಚನೆಗೊಂಡ ಚಿತ್ರಗಳಾಗಿವೆ. ಧಾರವಾಡದ ಹತ್ತಿರದ ಅಮ್ಮಿನಭಾವಿಯ ಭಿತ್ತಿಚಿತ್ರಗಳು ಸಮಕಾಲೀನ ಚಿತ್ರಗಳಾಗಿವೆ[೫೩] ಎಂದು ತಿಳಿದುಬರುತ್ತದೆ ಎಂದು ಡಾ. ಯಾದಪ್ಪ ಪರದೇಶಿಯವರು ಹೇಳಿದ್ದು ಸಮಕಾಲೀನ ಅಂದಿದ್ದರೂ ಚಿತ್ರಗಳ ವಸ್ತು ವಿಷಯ, ಸಂಯೋಜನಾ ರೀತಿ ನೋಡಿದರೆ ಈ ಚಿತ್ರಗಳು ಸಮಕಾಲೀನವಾಗಿಲ್ಲ. ಅಮ್ಮಿನಭಾವಿ ಭಿತ್ತಿಚಿತ್ರಗಳಿಗಿಂತ ಪೂರ್ವದ್ದು. ಅಂದರೆ ಬಿ.ಕೆ.ಹಳ್ಳಿ (ಹಳಿಯಾಳ ಹತ್ತಿರ)ಯ ರಾಮದೇವಾಲಯದ ಭಿತ್ತಿಚಿತ್ರಗಳಿಗೂ ಮಹಾಲಿಂಗೇಶ್ವರ ಮಠದ ಭಿತ್ತಿಚಿತ್ರಗಳಿಗೂ ಬಹಳಷ್ಟು ಸಾಮ್ಯಗಳಿವೆ. ಯಾಕೆಂದರೆ ಚಿತ್ರಕಲಾಕೃತಿಯಲ್ಲಿಯ ವಸ್ತು ವಿಷಯಗಳು ಬದಲಾವಣೆ ಹೊಂದಿದ್ದರೂ ಬಿ.ಕೆ.ಹಳ್ಳಿಯಲ್ಲಿ ಭಿತ್ತಿಯಲ್ಲಿ ವಿಷ್ಣುಪ್ರಧಾನ ಚಿತ್ರಗಳಿದ್ದರೆ, ಮಹಾಲಿಂಗಪುರದ ಭಿತ್ತಿಯಲ್ಲಿ ಶೈವ ಪ್ರಧಾನವಾದ ಚಿತ್ರಗಳಿವೆ. ಇದನ್ನು ಹೊರತುಪಡಿಸಿದರೆ ಚಿತ್ರಗಳ ಆಕ್ಷರ, ಆಕೃತಿ, ವರ್ಣಗಳ ಬಳಕೆ, ಸಂಯೋಜನಾ ರೀತಿಗಳು ಒಂದೇ ಆಗಿದ್ದು ಕಂಡುಬರುತ್ತದೆ. ಉದಾಹರಣೆಗೆ 'ಯೋಗಪಟ್ಟದಲ್ಲಿರುವ' ಚಿತ್ರವಂತೂ ತದ್ರೂಪವೇ ಆಗಿದೆ. ವರ್ಣದ ಬಳಕೆಯೂ ಅಷ್ಟೇ. ಈ ಎಲ್ಲ ಅಂಶಗಳಿಂದ ಮಹಾಲಿಂಗಪುರದ ಭಿತ್ತಿಚಿತ್ರಗಳು ೧೭ ನೆಯ ಶತಮಾನದ ಅಂತಿಮದಲ್ಲಿ ರಚನೆಗೊಂಡ ಚಿತ್ರಗಳಾಗಿವೆ. ಅಮ್ಮಿನಭಾವಿಯ ಚಿತ್ರಗಳು ೧೮ ನೆಯ ಶತಮಾನದ ಭಿತ್ತಿಚಿತ್ರಗಳು ಎಂಬುದು ದೃಢವಾಗುತ್ತದೆ.

ಮಹಾಲಿಂಗೇಶ್ವರ ಮಠದಲ್ಲಿ ಮೊದಲು ಗೋಡೆಯ ಮೇಲೆ ನಾಲ್ಕು ಬದಿಗಳಲ್ಲೂ ಚಿತ್ರಗಳಿರುವುದು ಕಂಡುಬರುತ್ತದೆ. ಈ ಗೋಡೆಗಳ ಮೇಲೆ ಅಲ್ಲಲ್ಲಿ ಭಿತ್ತಿಚಿತ್ರಗಳ ಕಲೆಗಳು ಕಂಡುಬರುತ್ತವೆ. ಈಗ ಕೇವಲ ದಕ್ಷಿಣ ಮತ್ತು ಪೂರ್ವ ಗೋಡೆಗಳ ಮೇಲೆ ಭಿತ್ತಿಚಿತ್ರಗಳು ಉಳಿದುಕೊಂಡಿದ್ದು, ಅವು ಅಷ್ಟೊಂದು ಚೆನ್ನಾಗಿ ಉಳಿದುಕೊಂಡಿಲ್ಲ. ಸರಿಯಾದ ಸಂರಕ್ಷಣೆ ಇಲ್ಲದೇ ಇಲ್ಲಿಯ ಭಿತ್ತಿಚಿತ್ರಗಳು ಬಹಳಷ್ಟು ಹಾಳಾಗಿವೆ.

---

೫೩. ಡಾ. ಯಾದಪ್ಪ ಪರದೇಶಿ: ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ–ಒಂದು ಅಧ್ಯಯನ: ಪು. ೩೩೭

*** ದಕ್ಷಿಣದ ಗೋಡೆಯ ಮೇಲಿನ ವೀರಶೈವ ಭಿತ್ತಿಚಿತ್ರಗಳು :**

ದಕ್ಷಿಣದ ಗೋಡೆಯ ಮೇಲಿನ ಭಿತ್ತಿಚಿತ್ರಗಳಲ್ಲಿ ಈಗ ಕೇವಲ ಮೂರು ಚೌಕಗಳಲ್ಲಿ ಚಿತ್ರಗಳಿವೆ. ದಕ್ಷಿಣಾಮೂರ್ತಿ ಶಿವನ ಚಿತ್ರ, ವೀರಭದ್ರ ಚಿತ್ರ, ಅಲಂಕಾರಿಕ ಹೂಕುಂಡಲದ ಚಿತ್ರವಿದೆ.

**೧. ದಕ್ಷಿಣಾಮೂರ್ತಿ ಶಿವನ ಚಿತ್ರ :**

ಸಂಗೀತ, ನೃತ್ಯ, ಯೋಗ ವಿದ್ಯೆಗಳ ಉಪದೇಶಕನಾಗಿ ಶಿವನು ದಕ್ಷಿಣಾಮೂರ್ತಿ ಎಂದು ಹೆಸರಾಗಿದ್ದಾನೆ. ಈ ಹೆಸರು ಬರಲು ಋಷಿಗಳಿಗೆ ಶಿವನು ಯೋಗ ಮತ್ತು ಜ್ಞಾನಗಳನ್ನು ಬೋಧಿಸುವಾಗ ದಕ್ಷಿಣಾಭಿಮುಖವಾಗಿ ಕುಳಿತಿರುತ್ತಿದ್ದರಿಂದ ದಕ್ಷಿಣಾಮೂರ್ತಿಯೆಂದೂ ಕರೆಯಲ್ಪಟ್ಟನಂತೆ. ದಕ್ಷಿಣಾಮೂರ್ತಿಯನ್ನು ನಾಲ್ಕು ವಿವಿಧ ರೂಪದಲ್ಲಿ ಚಿತ್ರಿಸಲಾಗುತ್ತದೆ. ಯೋಗೋಪದೇಶಕ, ವೀಣಾವಾದನದ ಅಧ್ಯಾಪಕ, ಜ್ಞಾನ ಪ್ರಸಾರಕ ಮತ್ತು ಶಾಸ್ತ್ರಗಳ ವ್ಯಾಖ್ಯಾನ ಮೂರ್ತಿ. ಈ ನಾಲ್ಕರಲ್ಲಿ ವ್ಯಾಖ್ಯಾನಮೂರ್ತಿ ರೂಪವನ್ನು ನಾವು ದೇವಾಲಯಗಳಲ್ಲಿ ಬಹುಸಾಧಾರಣವಾಗಿ ಕಾಣುತ್ತೇವೆ. ದಕ್ಷಿಣಗೋಡೆಯ ಮಧ್ಯದಲ್ಲಿ ದಕ್ಷಿಣಾಮೂರ್ತಿ ಶಿವನಿಗಾಗಿ ಒಂದು ಭಾಗವನ್ನು ಕಾಯ್ದಿರಿಸಿ ಅಲ್ಲಿ ದಕ್ಷಿಣಾಮೂರ್ತಿಯನ್ನು ಚಿತ್ರಿಸಲಾಗುತ್ತದೆ[೫೪] ಎಂಬ ವಿವರಗಳನ್ನು; ಆಧರಿಸಿ ಈ ದಕ್ಷಿಣಾಮೂರ್ತಿಯ ಶಿವನ ಚಿತ್ರವನ್ನು ಚಿತ್ರಿಸಲಾಗಿದೆ. ಈ ಚಿತ್ರದಲ್ಲಿ ಶಿವನು ಹುಲಿಯ ಚರ್ಮದ ಮೇಲೆ ಕುಳಿತಿದ್ದು, ಆತನ ಎಡದೊಡೆಯ ಮೇಲೆ ಪಾರ್ವತಿಯೂ ಹಾಗೂ ಬಲದೊಡೆಯ ಮೇಲೆ ಗಣಪತಿಯು ಕುಳಿತಿರುವನು. ಶಿವನ ಅಕ್ಕ ಪಕ್ಕದಲ್ಲಿ, ಕೆಳಗಡೆಯಲ್ಲಿ ಅನೇಕ ಋಷಿಗಳು ಚಿತ್ರಿತರಾಗಿದ್ದಾರೆ. ಇವರಲ್ಲಿ ಕೆಲವರು ಕುಳಿತಿದ್ದಾರೆ. ಇನ್ನು ಕೆಲವರು ನಿಂತುಕೊಂಡಿದ್ದಾರೆ. ದಕ್ಷಿಣಾಮೂರ್ತಿ ಶಿವನ ಸುತ್ತಲೂ ನೆರೆದಿರುವ ಋಷಿಗಳಲ್ಲಿ ನಾರದ, ಜಮದಗ್ನಿ ವಸಿಷ್ಠ, ಭೃಗು, ಭಾರದ್ವಾಜ, ಸನಕ ಮತ್ತು ಅಗಸ್ತ್ಯರು ಪ್ರಮುಖರಾಗಿರುತ್ತಾರೆ ಎಂದು ಕಶ್ಯಪ ಶಿಲ್ಪಶಾಸ್ತ್ರದಲ್ಲಿ ಹೇಳಿದ್ದಾರೆ. ಇವರಲ್ಲಿ ಕೌಶಿಕ, ಕಾಶ್ಯಪ, ಭಾರದ್ವಾಜ ಅತ್ರಿ ಮತ್ತು ಗೌತಮ ಪ್ರಮುಖರು ಎಂದು ಕಾಮಿಕಾಗಮವು ಹೇಳಿದೆ. ಈ ಚಿತ್ರದಲ್ಲಿ ಸಪ್ತರ್ಷಿಗಳ ಜೊತೆಗೆ ಬೇರೆ ಬೇರೆ ಮುನಿಗಳೂ ಶಿವನ ಸುತ್ತಲೂ ನೆರೆದಿದ್ದಾರೆ. ಶಿವನು ಕುಳಿತ ಪ್ರದೇಶವು ಗುಡ್ಡ ಬೆಟ್ಟ ಪ್ರದೇಶದಂತೆ ಕಂಡುಬರುತ್ತದೆ. ಅಲ್ಲಲ್ಲಿ ಕಲ್ಲುಗಳು, ಗಿಡಗಂಟಿಗಳು, ದೊಡ್ಡಮರಗಳು, ನೀರಿನ ಕೊಳಗಳನ್ನು ರಚಿಸಲಾಗಿದೆ. ಕಾಡಿನಲ್ಲಿ ಜಿಂಕೆಗಳ ಗುಂಪು, ಶಿವನು ಮುನಿಗಳ ಮಧ್ಯದಲ್ಲಿ ಹಸಿರು ಪಂಚೆ ಉಟ್ಟು ಕೆಂಪು ಶಾಲನ್ನು ಮೈಮೇಲೆ ಹಾಕಿಕೊಂಡಿದ್ದಾನೆ. ವಾದ್ಯಗಳನ್ನು ನುಡಿಸುತ್ತಿರುವ ಮುನಿಗಳು, ಯೋಗದಲ್ಲಿರುವ ಮುನಿಗಳು ಶಿವಭಕ್ತನಾದ ರಾವಣನೂ ಇರುವುದು ವಿಶೇಷವಾಗಿದೆ. ರಾವಣನ ಆರು ಮುಖಗಳು, ಹನ್ನೆರಡು ಕೈಗಳನ್ನು ಹೊಂದಿದ್ದಾನೆ. ಆತನು ಎದ್ದುನಿಂತು ಕೈಯಲ್ಲಿ ದಂಡ, ಕಮಂಡಲಗಳನ್ನು ಹಿಡಿದು ಶಿವನಾಮ ಸ್ಮರಣೆಯಲ್ಲಿ ತೊಡಗಿದ್ದಾನೆ. ರಾವಣನಿಗೆ ಹತ್ತು ತಲೆಗಳು, ಇಪ್ಪತ್ತು ಕೈಗಳನ್ನು ಚಿತ್ರಿಸಬೇಕಾಗಿದ್ದು, ಅಲ್ಲಿನ ಸ್ಥಳದ ಅಭಾವದಿಂದ ಕಡಿಮೆ ಸಂಖ್ಯೆಯ ತಲೆ,

೫೪. ಜಿ.ಜ್ಞಾನಾನಂದ (ಅನು): ಕಾಶ್ಯಪ ಶಿಲ್ಪಶಾಸ್ತ್ರ : ಪು. ೫೬೫

ಕೈಗಳನ್ನು ಚಿತ್ರಿಸಿರಬಹುದು. ರಾವಣನ ಎಡಗಡೆಗೆ ಮತ್ತೊಬ್ಬ ಋಷಿಯೂ ತಪಸ್ಸಿನಲ್ಲಿ ನಿಂತಿರುವನು. ಒಟ್ಟು ಮೂರು ಸಾಲುಗಳಲ್ಲಿ ಋಷಿಗಳು ಚಿತ್ರಿತರಾಗಿದ್ದಾರೆ. ಶಿವನ ಎಡಕ್ಕೆ ನಂದಿ, ಬಲಕ್ಕೆ ಸಿಂಹವು ಮಲಗಿಕೊಂಡಿದೆ. ನಂದಿಯ ಪಕ್ಕದಲ್ಲಿ ಕಪ್ಪು ಮೈಬಣ್ಣದಲ್ಲಿದ್ದು, ಕೈಯಲ್ಲಿ ಖಡ್ಗ ಹಿಡಿದುಕೊಂಡಿರುವ ಕಿರೀಟಧಾರಿ ರಾಕ್ಷಸನೊಬ್ಬ ಚಿತ್ರಿತವಾಗಿರುವನು. ಕೆಳಗೆ ಮೂರನೇ ಸಾಲಿನಲ್ಲಿ ಎಂಟು ಜನ ಋಷಿಗಳನ್ನು ಚಿತ್ರಿಸಿದ್ದಾರೆ. ಅವರಲ್ಲಿ ಕೆಲವರು ಎದ್ದು ನಿಂತು ಶಿವನ ಸ್ಮರಣೆ ಮಾಡುತ್ತಿದ್ದರೆ, ಇನ್ನೂ ಹಲವರು ಕುಳಿತು ಶಿವನನ್ನು ಭಜಿಸುತ್ತಿದ್ದಾರೆ.

ಇಡೀ ಚಿತ್ರ ಸಂಯೋಜನೆಯಲ್ಲಿ ಶಿವನ ಆಕೃತಿಯು ಅತ್ಯಂತ ದೊಡ್ಡದಾಗಿದ್ದು, ನಾಲ್ಕು ಕೈಗಳನ್ನು ಹೊಂದಿದ್ದು, ಶಿವನು ತ್ರಿಶೂಲ, ಶಂಖ, ಡಮರುಗಳನ್ನು ಹಿಡಿದುಕೊಂಡಿದ್ದಾನೆ. ಆತನ ಕೊರಳಲ್ಲಿ ಹಾವು ಹೆಡೆಬಿಚ್ಚಿ ಆಡುತ್ತಿದೆ. ಆತನ ತಲೆಯ ಮೇಲೆ ಐದು ಹೆಡೆಗಳ ಸರ್ಪವು ಸುರಳಿ ಸುತ್ತಿಕೊಂಡು ಕುಳಿತಿದೆ. ತಲೆಯಲ್ಲಿಯ ಗಂಗೆಯು ಕಾರಂಜಿಯಂತೆ ಚಿಮ್ಮಿ ಬರುತ್ತಿದ್ದು, ಶಿವನ ಎಡಬಲಗಳಲ್ಲಿ ಗಿಡಮರಗಳು, ಹೂವುಗಳಿಂದ ತುಂಬಿದ ವನ. ಈ ವನದಲ್ಲಿ ಮಂಗಗಳು, ಗಿಳಿಗಳು ತುಂಬಿಕೊಂಡಿವೆ. ಆಕಾಶದ ಬಣ್ಣ ಕೆಂಪಾಗಿ ತೋರಿಸಿದ್ದು, ನೆಲವನ್ನು ಹಳದಿ ಮತ್ತು ಹಸಿರು ನೀಲಿವರ್ಣಮಿಶ್ರಣದಿಂದ ರಚಿಸಲಾಗಿದೆ.

**೨. ವೀರಭದ್ರನ ಚಿತ್ರ :**

ದಕ್ಷಿಣಾಮೂರ್ತಿಯ ಬಲಗಡೆಯಲ್ಲಿ ಒಂದು ಚೌಕಾಕಾರದ ಮಂಟಪದಲ್ಲಿ ವೀರಭದ್ರನ ಚಿತ್ರವೊಂದಿದೆ. ಕಡುಗೆಂಪು ವರ್ಣದ ಹಿನ್ನೆಲೆಯಲ್ಲಿ ರಚನೆಗೊಂಡ ಈ ಚಿತ್ರವು ವೀರಭದ್ರನು ಕೋಪದಲ್ಲಿರುವ ಸನ್ನಿವೇಶವಾಗಿದೆ. ವೀರಭದ್ರನ ದೊಡ್ಡದಾದ ಕಣ್ಣುಗಳು ಹೊಳೆಯುತ್ತಿದ್ದು, ದಪ್ಪನಾದ ಗಲ್ಲಕ್ಕೆ ಅಂಟಿಕೊಂಡು ಚಪ್ಪಟೆ ಮೀಸೆ ಆತನ ಭೀಕರತೆಯನ್ನು ಇನ್ನೂ ಹೆಚ್ಚಿಸಿದೆ. ತಲೆಯ ಮೇಲೆ ಬಂಗಾರದ ಕಿರೀಟವನ್ನು ಧರಿಸಿದ್ದು, ಕೊರಳಲ್ಲಿಯೂ ಅದೇ ವರ್ಣದ ಆಭರಣಗಳಿವೆ. ಹಸಿರುವರ್ಣದ ಪಂಚೆ ಉಟ್ಟಿದ್ದರೆ ಹಳದಿವರ್ಣದ ಶಾಲನ್ನು ಮೈಮೇಲೆ ಹೊದ್ದುಕೊಂಡಿರುವನು. ಈತನಿಗೆ ಆರು ಕೈಗಳನ್ನು ಚಿತ್ರಿಸಲಾಗಿದ್ದು, ಆ ಕೈಗಳಲ್ಲಿ ಖಡ್ಗ, ತ್ರಿಶೂಲ, ಶಂಖ, ಡಮರು, ಹಾವುಗಳನ್ನು, ಎಡಗೈಯೊಂದರಲ್ಲಿ ದಕ್ಷಬ್ರಹ್ಮನ ರುಂಡವನ್ನು ಹಿಡಿದುಕೊಂಡಿದ್ದಾನೆ. ವೀರಭದ್ರನು ಪೀಠವೊಂದರ ಮೇಲೆ ನಿಂತಿದ್ದು, ಆತನ ಎಡಬಲಗಳಲ್ಲಿ ಒಂಭತ್ತು ಎಲೆಗಳಿರುವ ಎರಡು ಹಸಿರು ಗಿಡಗಳಿವೆ. ಚಿತ್ರದ ಚೌಕಟ್ಟನ್ನು ಸಾಲಾಗಿ ಎಲೆಗಳ ಮುಖಾಂತರ ಅಲಂಕರಿಸಿದ್ದಾರೆ. ಚಿತ್ರದಲ್ಲಿ ಮುಖ್ಯವಾಗಿ ಕಂದುಗೆಂಪು, ಹಳದಿ, ಹಸಿರು ವರ್ಣಗಳನ್ನು ಬಳಸಿರುವರು. ಕಪ್ಪು ವರ್ಣದಿಂದ ಚಿತ್ರದ ಹೊರರೇಖೆಗಳನ್ನು ಎಳೆದಿರುವರು.

*** ಪೂರ್ವ ಗೋಡೆಯ ಚಿತ್ರಗಳು :**

ಪೂರ್ವ ಗೋಡೆಯಲ್ಲಿ ಕೇವಲ ಒಂದು ಚಿತ್ರ ಪಟ ಮಾತ್ರ ಉಳಿದಿದ್ದು, ಈ ಪಟ್ಟಿಕೆಯೊಂದರಲ್ಲೆ ಅನೇಕ ವಿಷಯಗಳಿಗೆ ಸಂಬಂಧಿಸಿದ ಚಿತ್ರಗಳನ್ನು ರಚಿಸಲಾಗಿದೆ. ಈ ಚಿತ್ರಪಟ್ಟಿಕೆಯು ಅತ್ಯಂತ ವಿಶಾಲವಾಗಿದ್ದು, ಆಯತಾಕಾರದಲ್ಲಿ ೧೨' x ೫' ಅಡಿ ಅಳತೆಯಲ್ಲಿ ಚಿತ್ರಗಳು ರಚನೆಗೊಂಡಿವೆ.

**೧. ವೃಷಭನ ಮೇಲೆ ಬರುತ್ತಿರುವ ಶಿವ :**

ಶಿವನು ವೃಷಭನ ಮೇಲೆ ಕುಳಿತು ಬರುತ್ತಿರುವ ಶಿವನ ಚಿತ್ರವಿಲ್ಲಿದೆ. ಅಲಂಕೃತವಾಗಿರುವ ವೃಷಭದ ಮೇಲೆ ಕುಳಿತು ಬರುತ್ತಿರುವ ಶಿವನು ಹಸನ್ಮುಖಿಯಾಗಿದ್ದು, ಶಿವನ ಹಿಂದೆ ಶಿವಗಣಗಳು ಛತ್ರ ಚಾಮರ ಹಿಡಿದುಕೊಂಡು ಬರುತ್ತಿದ್ದಾರೆ. ಶಿವಗಣಗಳ ಹಿಂದೆ ಗಣಪತಿ, ನಾರದ, ಭೃಂಗಿಯೂ ಅವರೊಂದಿಗೆ ನಡೆಯುತ್ತಾ ಬರುತ್ತಿದ್ದಾರೆ. ನಡೆದು ಬರುತ್ತಿರುವ ಗಣಪತಿಯು ಕಿರೀಟ ಧರಿಸಿದ್ದು, ಹಳದಿ ವರ್ಣದ ಪಂಚೆ ಉಟ್ಟುಕೊಂಡು ಪೇಶ್ವೆಶೈಲಿಯಲ್ಲಿ ಉದ್ದು ತೋಳಿನ ಕೆಂಪಂಗಿಯನ್ನು ತೊಟ್ಟಿದ್ದಾನೆ.

ಎಂಟು ಮಂದಿ ಕಿರೀಟ ಧರಿಸಿದ ದೇವತೆಗಳು ಕೈಮುಗಿದು ಆತನನ್ನು ಬರಮಾಡಿಕೊಳ್ಳುತ್ತಿದ್ದಾರೆ. ಇವರಲ್ಲಿ ಒಬ್ಬನು ಎರಡು ಮುಖಗಳನ್ನು ಹೊಂದಿದವನೂ ಇದ್ದಾನೆ. ಇವರೆಲ್ಲರೂ ಪಂಚೆ ಉಟ್ಟುಕೊಂಡಿದ್ದು, ಉದ್ದುತೋಳಿನ ಅಂಗಿಯನ್ನು ಧರಿಸಿದ್ದು, ಮತ್ತೆ ಅಂಗಿಯ ಮೇಲೆ ಜಾಕೇಟ್‌ನ್ನು ಹಾಕಿಕೊಂಡಿದ್ದಾರೆ. ಇವರೆಲ್ಲ ಎಡಗಾಲನ್ನು ಮೇಲೆತ್ತಿ, ಬಲಗಾಲನ್ನು ಒಂದು ಅಗಲವಾದ ಹೂವಿನ ಮೇಲೆ ಇಟ್ಟು, ಒಂದೇ ಕಾಲಿನ ಮೇಲೆ ನಿಂತಿದ್ದಾರೆ.

ಇಲ್ಲಿಯ ಚಿತ್ರಗಳ ವೇಷಭೂಷಣ, ವಸ್ತ್ರ ವಿನ್ಯಾಸಗಳು ಸಹಜ ಮನುಷ್ಯರ ಹಾಗಿದ್ದು, ಇಲ್ಲಿ ದೇವತೆಗಳನ್ನು ಮನುಷ್ಯರಿಂದ ಪ್ರತ್ಯೇಕಿಸುವ ಪ್ರಯತ್ನವಿಲ್ಲ. ದೇವತೆಗಳೆಂದರೆ ಅತಿಥಿಗಳೆನ್ನುವ ಭಾವನೆಯ ಬದಲಾಗಿ ಮನುಷ್ಯತ್ವ, ಮಾನವೀಯತೆ, ಪ್ರೀತಿ, ಮಮತೆಗಳಂತಹ ಮಾನವೀಯ ಮೌಲ್ಯಗಳನ್ನು ಹೊಂದಿದ ವ್ಯಕ್ತಿಯೇ ದೇವತಾಸ್ವರೂಪವೆನ್ನುವ ಶರಣರ ತತ್ವಗಳಿಗನುಸಾರವಾಗಿ ಮನುಷ್ಯರೂಪದಲ್ಲಿಯೇ ದೇವತೆಗಳನ್ನು ಕಾಣುವ ಸಾಂಕೇತಿಕ ನಿರೂಪಣೆ ಇಲ್ಲಿನ ಚಿತ್ರಗಳಲ್ಲಿದೆ.

*** ಮಹಾಲಿಂಗೇಶ್ವರರ ಪವಾಡದ ಚಿತ್ರಗಳು :**

ಮಹಾಲಿಂಗ ಮುನಿಗಳ ತಪಸ್ಸಿನ ಚಿತ್ರಗಳು, ಪವಾಡವನ್ನು ನಿರೂಪಿಸುವ ಚಿತ್ರಗಳು ಇಲ್ಲಿ ರಚನೆಗೊಂಡಿವೆ. ಅವುಗಳಲ್ಲಿ ಒಂದನ್ನು ಇಲ್ಲಿ ಹೇಳಲಾಗಿದೆ.

**೧. ಸತ್ತ ಬಾಲಕನನ್ನು ಬದುಕಿಸಿದ್ದು :**

ಮೋದಪುರದ (ಮುಧೋಳ) ರಾಜನಾದ ಮಾಲೋಜಿರಾವ್ ಘೋರ್ಪಡೆಯು ಮಹಾಲಿಂಗೇಶ್ವರರ ಪರಮಭಕ್ತನಾಗಿದ್ದನು. ಒಂದು ದಿನ ರಾಜನು ತನ್ನ ಚತುರಂಗಸೇನೆಯ ಸಡಗರದೊಂದಿಗೆ ಮಹಾಲಿಂಗ ಮುನಿನಾಥನನ್ನು ಕಾಣಲು ಹೊರಟನು. ನರಗಟ್ಟಿ ಊರಿನಲ್ಲಿ ಹೊರಟ ಈ ವೈಭವದ ಮೆರವಣಿಗೆ ನೋಡಲು ಮಕ್ಕಳಿಂದ ಮುದುಕರಾದಿಯಾಗಿ ಅನೇಕ ಸ್ತ್ರೀ–ಪುರುಷರು ನೆರೆದರು. ಅದರಲ್ಲಿ ಒಬ್ಬ ಬಾಲಕ ಪಟ್ಟದಾನೆಯ ವೈಭವಕ್ಕೆ ಬೆರಗಾಗಿ ಅದನ್ನು ಹತ್ತಿರದಿಂದ ವೀಕ್ಷಿಸಲು ತೆರಳಿದಾಗ ತನ್ನೆದುರಿಗೆ ಬಂದ ಬಾಲಕನನ್ನು ಆನೆಯು ಸಿಟ್ಟಿನಿಂದ ಸೊಂಡಿಲಿನಲ್ಲಿ ಎತ್ತಿ ಅಪ್ಪಳಿಸಿ ಕೊಂದುಹಾಕಿತು. ಈ ಘಟನೆಯಿಂದ ಮನನೊಂದು ರಾಜನು

ಮಹಾಲಿಂಗೇಶ್ವರರ ಮೊರೆ ಹೋಗಲು ಮುನಿಗಳು ಕೃಪೆಮಾಡಿ ಸತ್ತ ಬಾಲಕನನ್ನು ಮತ್ತೆ ಬದುಕಿಸಿದರು ಎಂದು ಶ್ರೀ ಮಹಾಲಿಂಗೇಶ್ವರ ಮಹಾತ್ಮೆ'ಯಿಂದ ತಿಳಿದುಬರುತ್ತದೆ.[೫೫]

ಈ ಕಲಾಕೃತಿಯಲ್ಲಿ ಸತ್ತ ಬಾಲಕನನ್ನು ರಾಜನು ಮಹಾಲಿಂಗೇಶ್ವರ ಮುನಿಯ ಮುಂದೆ ತಂದು ಹಾಕಿದ್ದು, ರಾಜನು ಮುನಿಗಳಿಗೆ ನೀವೇ ಕಾಪಾಡಬೇಕೆಂದು ಮೊರೆ ಇಡುತ್ತಾನೆ. ಅವನ ಹಿಂದೆ ಇಬ್ಬರು ಬಾಲಕರೂ ಓಡಿಬಂದು ನಿಲ್ಲುತ್ತಾರೆ. ಮಹಾಲಿಂಗೇಶ್ವರ ಮುನಿಗಳು ತಮ್ಮ ತಪೋದಂಡದಿಂದ ಅಭಿಮಂತ್ರಿಸಿ ಬಾಲಕನನ್ನು ಜೀವಂತ ಮಾಡುತ್ತಾರೆ. ಸತ್ತ ಬಾಲಕನ ತಾಯಿಯು ಕೆಂಪುಬಣ್ಣದ ಸೀರೆಯನ್ನುಟ್ಟುಕೊಂಡಿದ್ದು, ತಲೆಯ ಮೇಲೆ ಸೆರಗು ಹೊದ್ದುಕೊಂಡಿದ್ದಾಳೆ. ಸೀರೆಗೊಪ್ಪುವ ಹಸಿರುಬಣ್ಣದ ಹೂವಿನ ಕುಪ್ಪಸ ತೊಟ್ಟಿದ್ದು, ಅಲಂಕಾರಿಕ ಅಂಚುಗಳನ್ನು ಹೊಂದಿದೆ. ಮೂಗಿನಲ್ಲಿ ಮೂಗೋಲೆ ಕಂಗೊಳಿಸುತ್ತದೆ. ಈ ಮಹಿಳೆಯ ಹಿಂದಿರುವ ಬಾಲಕರು ಚಡ್ಡಿಯನ್ನು ಮಾತ್ರ ಧರಿಸಿದ್ದು, ಮೇಲೆ ಅಂಗಿಯನ್ನು ಧರಿಸಿಲ್ಲ. ಡಾ. ಯಾದಪ್ಪ ಪರದೇಶಿಯವರು ಉತ್ತರ ಕರ್ನಾಟಕದ ಭಿತ್ತಿಚಿತ್ರ ಕಲೆಯಲ್ಲಿ ಈ ಕಲಾಕೃತಿಯನ್ನು ವಿವರಿಸುತ್ತ ಈ ಕಲಾಕೃತಿಯಲ್ಲಿ ಇನ್ನೂ ವಿವರಣೆ ಬೇಕಾಗಿತ್ತು[೫೬] ಎನ್ನುವ ಅವರ ವಾದವನ್ನು ಆಚೆ ಇಟ್ಟು ಈ ಕಲಾಕೃತಿಯ ಬಗ್ಗೆ ನೋಡಿದಾಗ ಈ ಸಂಯೋಜನೆಯು ಇಲ್ಲಿಯವರೆಗೆ ಬಂದ ಭಿತ್ತಿಚಿತ್ರಗಳಲ್ಲಿಯೇ ವಿಶಿಷ್ಟವಾಗಿ ನಿಲ್ಲುತ್ತದೆ. ಒಟ್ಟು ಚಿತ್ರದ ಕಥೆಯನ್ನು ಮಧ್ಯದಲ್ಲಿ ತೋರಿಸಲಾಗಿದೆ. ಸಂಬಂಧಿಸಿದ ಅಂಶಗಳನ್ನು ಕಥೆಯ ರೂಪದಲ್ಲಿ ತೋರಿಸಿದ್ದು, ಮಧ್ಯದ ಭಾಗದಿಂದ ಮೇಲ್ಗಡೆಗೆ ಮೆರವಣಿಗೆ ಹೊರಟಿರುವುದು, ಅದರ ಮುಂದುಗಡೆ ರಾಜನು ಆ ಕಂದನನ್ನು ಎತ್ತಿಕೊಂಡು ಬರುತ್ತಿರುವುದು. ಮಹಾಲಿಂಗೇಶ್ವರ ದೇವಸ್ಥಾನದ ದ್ವಾರಬಾಗಿಲು, ಇನ್ನೊಂದು ಭಾಗದಲ್ಲಿ ಮಹಾಲಿಂಗೇಶ್ವರರು ಯೋಗಾಸನದಲ್ಲಿ ತಪವನ್ನು ಮಾಡುತ್ತಿರುವುದು, ಅದರ ಇನ್ನೊಂದು ಭಾಗದಲ್ಲಿ ಬಾಲಕನ ತಾಯಿ ಗಿಡದ ಕೆಳಗೆ ನೋಡುತ್ತ ಇರುವ ದೃಶ್ಯಗಳು, ಕೆಳಗಿನ ಭಾಗದಲ್ಲಿ ಅಲಂಕಾರಿಕ ಗಿಡಗಳನ್ನು ಹೊಂದಿದ ನಿಸರ್ಗವು ಅದ್ಭುತವಾಗಿ ಮೂಡಿಬಂದಿದೆ. ಅದರ ಮುಂದುಗಡೆಯಲ್ಲಿ ರಾಜನು ಕಿರೀಟಧಾರಿಯಾಗಿ ಬಿಲ್ಲನ್ನು ಹಿಡಿದುಕೊಂಡು ಬರುತ್ತಿದ್ದು, ಎದುರುಗಡೆಯಲ್ಲಿ ಬಾಲಕನ ತಂದೆ ತಾಯಿಗಳು ಬರುತ್ತಿರುವ ದೃಶ್ಯ ಸುಂದರವಾಗಿ ಮೂಡಿ ಬಂದಿದೆ. ಇದನ್ನು ಸಂಯೋಜನಾ ದೃಷ್ಟಿಯಿಂದ ನೋಡಿದಾಗ ವಿವಿಧ ಆಕಾರಗಳನ್ನು ಹಂತ ಹಂತವಾಗಿ ಚಿತ್ರಿಸಿವುದು. ಅಂದಿನ ಅಲ್ಲಿಯ ಸಂದರ್ಭ ಘಟನೆಗಳನ್ನು ವಿವರಣಾತ್ಮಕವಾಗಿ ಸಮಕಾಲೀನ ಅಂಶಗಳನ್ನು ನೂತನ ನೀತಿ ರೀತಿಗಳಿಗೆ ಅನುಗುಣವಾಗಿ ಚಿತ್ರಿಸಿದ ರೀತಿ, ವರ್ಣಗಳ ಬಳಕೆ, ರೇಖಾ ವಿನ್ಯಾಸ, ಜೋಡಣೆ ಎಲ್ಲವೂ ವಿಶಿಷ್ಟವಾಗಿ ಈ ಸಂಯೋಜನೆಯಲ್ಲಿ ಕಂಡುಬರುತ್ತವೆ.

---

೫೫. ಅಣ್ಣಾಜಿ ಫಡತಾರೆ: ಶ್ರೀ ಮಹಾಲಿಂಗೇಶ್ವರ ಮಹಾತ್ಮೆ: ಪು. ೨೬, ೨೭

೫೬. ಡಾ. ಯಾದಪ್ಪ ಪರದೇಶಿ: ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ–ಒಂದು ಅಧ್ಯಯನ: ಪು. ೩೪೫

**೫. ಮಹಾಲಿಂಗಪುರದ ಮಹಾಲಿಂಗೇಶ್ವರ ಮಠದ ಭಿತ್ತಿಚಿತ್ರಗಳ ಲಕ್ಷಣಗಳು :**

* ಇಲ್ಲಿಯ ಚಿತ್ರಗಳಿಗೆ ಹಿನ್ನೆಲೆಯಾಗಿ ಕೆಂಪುವರ್ಣವನ್ನು ಲೇಪಿಸಲಾಗಿದೆ.

* ಇಲ್ಲಿಯ ಚಿತ್ರಗಳು ಜನಪದ ಶೈಲಿಯ ಭಿತ್ತಿ ಚಿತ್ರಗಳಾಗಿವೆ.

* ಋಷಿಮುನಿಗಳ ಪವಾಡದ ಚಿತ್ರಗಳು ಉತ್ತಮ ಕಥಾ ನಿರೂಪಣಾ ಚಿತ್ರಗಳಾಗಿ, ವಿಷಯಕ್ಕೆ ತಕ್ಕಂತೆ ಹಂತಹಂತಗಳಾಗಿ ಮಾಡಿ ಒಟ್ಟಿಗೆ ಆ ವಿಷಯವನ್ನು ತಿಳಿಸುವಲ್ಲಿ ಕಲಾವಿದ ಯಶಸ್ವಿಯಾಗಿರುವನು. ವ್ಯಕ್ತಿಗಳ ಆಯ್ಕೆ, ಸಂಯೋಜನಾ ರೀತಿ ಉತ್ತಮವಾಗಿದೆ.

* ಚಿತ್ರಗಳಲ್ಲಿ ರಜಪೂತ ಮೊಗಲ್ ಕಲಾವಿದರಂತೆ ನಿಸರ್ಗ ಚಿತ್ರಗಳನ್ನು ಬಳಸಿಕೊಂಡಿದ್ದು ಗಿಡ–ಮರಗಳು, ಪಕ್ಷಿ, ಪ್ರಾಣಿಗಳು, ಸುಂದರವಾಗಿ ಮೂಡಿಬಂದಿವೆ.

ಹೀಗೆ ಮಹಾಲಿಂಗಪುರದ ಮಹಾಲಿಂಗೇಶ್ವರ ಮಠದಲ್ಲಿಯ ಭಿತ್ತಿಚಿತ್ರಗಳು ವೀರಶೈವಧರ್ಮಕ್ಕೆ ಸಂಬಂಧಿಸಿದಂತೆ ರೂಪುಗೊಂಡಿವೆ. ಹಾಗೂ ಪವಾಡಕ್ಕೆ ಸಂಬಂಧಿಸಿದ ಕೃತಿಗಳು ಸೇರಿಕೊಂಡಿದ್ದು ಉತ್ತಮವಾಗಿ ಮೂಡಿಬಂದಿವೆ.

*** ಹಸ್ತಶಿಲ್ಪ ಹೆರಿಟೇಜ್ ವಿಲೇಜ್ – ಮಣಿಪಾಲ : ಭಿತ್ತಿಚಿತ್ರ**

ಮನುಷ್ಯನಲ್ಲಿ ಏಕಾಗ್ರತೆ, ಛಲ, ಸಂಕಲ್ಪಬಲವೊಂದಿದ್ದರೆ ಏನನ್ನಾದರೂ ಸಾಧಿಸಬಹುದಾಗಿದೆ ಎನ್ನುವುದಕ್ಕೆ ನಿವೃತ್ತ ಬ್ಯಾಂಕ್ ನೌಕರರಾದ ವಿಜಯನಾಥ್ ಶೆಣೈ ಅವರು ನಿದರ್ಶನರಾಗುತ್ತಾರೆ. ಮಣಿಪಾಲದಲ್ಲಿ ಅದ್ಭುತವಾದ ಸಾಂಪ್ರದಾಯಿಕ ಗ್ರಾಮವೊಂದನ್ನು ನಿರ್ಮಾಣ ಮಾಡಿರುವರು. ನಮ್ಮ ಸಂಪ್ರದಾಯವನ್ನು ಪ್ರತಿಪಾದಿಸುವಂತಹ ಮನೆಗಳನ್ನು, ಮಠಗಳನ್ನು, ಅರಮನೆಗಳನ್ನು ಕಲಾವಸ್ತುಗಳುಳ್ಳ ಗ್ಯಾಲರಿಗಳನ್ನು ಸಂಗ್ರಹಾಲಯಗಳನ್ನು, ನವಾಬನ ಮಹಲು, ರವಿವರ್ಮನ ಕೆಲ ಕೃತಿಗಳು, ವಸ್ತು ಸಂಗ್ರಹಾಲಯ, ತಂಜಾವೂರು ಕಲಾಕೃತಿಗಳು, ಗಂಜೀಫಾಗ್ಯಾಲರಿ, ಜನಪದಗ್ಯಾಲರಿ, ಕರಕುಶಲಗ್ಯಾಲರಿ, ವ್ಯಾಪಾರ, ಧಾರ್ಮಿಕ ವಸ್ತುಸಂಗ್ರಹಾಲಯಗಳು, ಹಳ್ಳಿಯ ಸಂತೆ, ಕರಕುಶಲ ಮಾರಾಟ ಅಂಗಡಿಗಳು, ವಂಶಪರಂಪರಾಗತವಾಗಿ ಬಂದ ವೃತ್ತಿಗಳು, ಜನಪದ ಕಲೆಗಳು, ವಸ್ತುಗಳು ಜೀವನಪದ್ಧತಿಯನ್ನೇ ಅನಾವಣಗೊಳಿಸುವಂತೆ ಮಾಡಿರುವರು. ವೀರಶೈವ ಪರಂಪರೆಯ ಚಿತ್ರಕಲೆಗೆ ಸಂಬಂಧಿಸಿದಂತೆ ಶ್ರೀ ಶೆಣೈ ಅವರು ಸ್ಥಾಪಿಸಿದ "ಪಂಚಮಗುರು ಜಂಗಮ ಮಠ"ದಲ್ಲಿಯ ಭಿತ್ತಿ ಚಿತ್ರಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಶ್ರೀ ವಿಜಯನಾಥ್ ಶೆಣೈ ಅವರನ್ನು ಈ ಮಠದ ರಚನೆಯ ಉದ್ದೇಶ ಮತ್ತು ಇತಿಹಾಸದ ಬಗ್ಗೆ ಕೇಳಿದಾಗ ಅವರು ಹೇಳಿದ್ದು, ಉತ್ತರ ಕರ್ನಾಟಕದಿಂದ ಬಂದ ಯೋಗಿಗಳಿಬ್ಬರು ಕಾರ್ಕಳ ಹತ್ತಿರದಲ್ಲಿ ಕೊಂಡಾಡಿ ಮಠವನ್ನು ೧೨ನೆಯ ಶತಮಾನಕ್ಕಿಂತಲೂ ಮೊದಲೇ ಕಟ್ಟಿದ್ದರು. ಈ ಮಠವನ್ನು ಶಿವಯ್ಯ ಮತ್ತು

ಅವನ ಹೆಂಡತಿ ಹಾಗೂ ಅವರ ಮಗ ನೋಡಿಕೊಳ್ಳುತ್ತಿದ್ದರು. ಅವರಿಗೆ ಮತ್ತಾರೂ ಸಂಬಂಧಿಕರು ಇರಲಿಲ್ಲ. ಇತ್ತಿತ್ತಲಾಗಿ ಆ ಮಠದ ವ್ಯವಸ್ಥೆ ಅಷ್ಟಕಷ್ಟೆ ಆಗಿತ್ತು. ಆದ್ದರಿಂದ ಅವರೊಂದಿಗೆ ಮಾತನಾಡಿ ನಾನೇ ಅಲ್ಲಿರುವ ಮಠದ ಅವಶೇಷಗಳನ್ನು ತೆಗೆದುಕೊಂಡು ನನ್ನ ಕಲಾ ಗ್ರಾಮಕ್ಕೆ ಬಂದೆ. ನನ್ನ ಕಲಾಗ್ರಾಮದಲ್ಲಿ ಒಂದು ಮಠವನ್ನು ಕಟ್ಟಲು ನಿರ್ಧರಿಸಿದೆ. ಆಗ ಈ ಭಾಗದಲ್ಲಿರುವ ಮಠಗಳ ಅವಶೇಷಗಳನ್ನು ಕೂಡಿಸಿಕೊಂಡು ಮಠ ಮಾಡಲು ನಿರ್ಧರಿಸಿ ಕಾರ್ಕಳದ ಹತ್ತಿರದ "ಕೊಂಡಾಡಿಮಠ", ಮತ್ತು ಕಾರ್ಕಳದಲ್ಲಿರುವ "ಕೊಜ್ಜಾಮಳಿಮಠ" ಹಾಗೂ ತೀರ್ಥಹಳ್ಳಿಯ ಕೋಣಂದೂರಿನಲ್ಲಿಯ "ಉದ್ಧಾದೇವರ ಮಠ"ಗಳಲ್ಲಿಯ ಅವಶೇಷಗಳನ್ನು ಸಂಗ್ರಹಿಸಿಕೊಂಡು ಈ ಮಠವನ್ನು ಕಟ್ಟಲಾಗಿದೆ. ಈ ಎಲ್ಲ ಮಠಗಳು ಸುಮಾರು ೭೦೦ ವರುಷಗಳ ಹಿಂದಿನ ಇತಿಹಾಸವನ್ನು ಹೊಂದಿದ ಮಠಗಳಾಗಿವೆ.

ಈ ಮಠವು ಕಲಾಗ್ರಾಮದಲ್ಲಿ ಅತ್ಯಂತ ಸುಂದರವಾಗಿಯೇ ಮೂಡಿಬಂದಿದೆ. ಪ್ರಾಚೀನ ಮಠಗಳ ಮೂಲಸ್ವರೂಪದಲ್ಲಿಯೇ ಈ ಮೂರೂ ಮಠಗಳ ಒಂದೊಂದು ಭಾಗವನ್ನು ಅತ್ಯಂತ ಅಚ್ಚು ಕಟ್ಟಾಗಿ ಜೋಡಿಸಿಕೊಂಡು ನಿರ್ಮಿಸಲಾಗಿದೆ. ಇಲ್ಲಿ ಬಳಸಲಾದ ಮರದ ಬಾಗಿಲು, ತೊಲೆ, ಮಾಡು ಕಂಬಗಳು, ಹೀಗೆ ಮೂಲಸ್ವರೂಪವನ್ನು ಕಾಯ್ದುಕೊಂಡು ಸುಂದರವಾಗಿ ರಚಿಸಲಾಗಿದೆ. ಮರದಲ್ಲಿನ ಅತ್ಯಂತ ಸೂಕ್ಷ್ಮ ಕೆತ್ತನೆಗಳು, ನಕ್ಷೆಗಳು ಈ ಮಠದ ಸೌಂದರ್ಯವನ್ನು ಇಮ್ಮಡಿಗೊಳಿಸಿವೆ. ಮಠದ ಒಳಗೋಡೆಯ ಮೇಲಿನ ಭಿತ್ತಿ ಚಿತ್ರಗಳನ್ನು ಇತ್ತೀಚೆಗೆ ರಚಿಸಲಾಗಿದ್ದು ನಾಲ್ಕೂ ಒಳಗೋಡೆಯ ಮೇಲೆ "ಉದ್ಧರಣಿ" ಚಿತ್ರಗಳನ್ನು ಗುಲಬುರ್ಗಾದ ಕಲಾವಿದ ವಿಜಯ್ ಹಾಗರಗುಂಡಗಿ ಅವರು ರಚಿಸಿದ್ದು, ಈ ಚಿತ್ರಗಳನ್ನು ಪೂರ್ತಿಗೊಳಿಸಲು ಸುಮಾರು ಮೂರ್‍ನಾಲ್ಕು ತಿಂಗಳು ಇಲ್ಲಿಯೇ ಉಳಿದು ಚಿತ್ರಿಸಿರುವರೆಂದು ತಿಳಿಸಿದರು. ಈ ಉದ್ಧರಣಿ ಚಿತ್ರಗಳನ್ನೇ ಬರೆಸುವ ಉದ್ದೇಶ ನಿಮ್ಮದಾಗಿತ್ತೋ ಅಥವಾ ಕಲಾವಿದನದಾಗಿತ್ತೋ ಎಂದಾಗ ಅದು ಕಲಾವಿದನ ನಿರ್ಧಾರವಾಗಿದೆ. ನನಗೆ ಚಿತ್ರಗಳ ರಚನೆ ಆಗಬೇಕಷ್ಟೇ ಎಂದಿದ್ದೆ. ಈ ಉದ್ಧರಣಿ ಚಿತ್ರಗಳನ್ನು ಅವರೇ ತಂದು ಮೊದಲು ರೇಖಾಚಿತ್ರಗಳನ್ನು ಮಾಡಿ ಆನಂತರ ವರ್ಣಗಳನ್ನು ತುಂಬುತ್ತಿದ್ದರೆಂದೂ ದಿನಾಲೂ ಸ್ನಾನದ ನಂತರವೇ ಚಿತ್ರಗಳನ್ನು ರಚಿಸುತ್ತಿದ್ದರು. ಅತ್ಯಂತ ಭಕ್ತಿ ಶ್ರದ್ಧೆಯಿಂದ ಚಿತ್ರಗಳನ್ನು ರಚಿಸಿದರು ಎಂದು ತಿಳಿಸಿದರು. ಈ ಮಠದ ನಾಲ್ಕು ಗೋಡೆಗಳ ಮೇಲೆ ವೀರಶೈವ ತತ್ವಗಳನ್ನು ಪ್ರತಿಪಾದಿಸುವ ಉದ್ಧರಣಿ ಚಿತ್ರಗಳನ್ನು (ಭಿತ್ತಿಯ ಮೇಲೆ) ಅತ್ಯಂತ ಸುಂದರವಾಗಿ ಚಿತ್ರಿಸಿರುವರು.


**ಪಂಚಗುರುಜಂಗಮ ಮಠದಲ್ಲಿಯ ವೀರಶೈವ ಭಿತ್ತಿ ಚಿತ್ರಗಳು:**

ಈ ಉದ್ಧರಣಿ ಚಿತ್ರಗಳು ಹಸ್ತಪ್ರತಿಗ್ರಂಥಗಳಲ್ಲಿದ್ದು ಆನಂತರ ಉದ್ಧರಣಿ ಪಟಲವಾಗಿ ಬೇರೆಗೊಂಡು ರಚಿಸಲ್ಪಟ್ಟವು. ತದನಂತರ ಭಿತ್ತಿ ಚಿತ್ರಗಳಾಗಿ ವಿಜಯನಗರ ಸಾಮ್ರಾಜ್ಯದಲ್ಲಿ ವಿರೂಪಾಕ್ಷ ದೇವಾಲಯದ ಮುಖಮಂಟಪದಲ್ಲಿ ಲೇಪಾಕ್ಷಿಯ ವೀರಭದ್ರದೇವಾಲಯದಲ್ಲಿ ಒಂದೋ ಎರಡೋ ಭಿತ್ತಿಗಳಲ್ಲಿ ಉದ್ಧರಣಿಗಳು ಮೂಡಿ ಬಂದವು. ಆದರೆ ಈ ಮಠವೊಂದರಲ್ಲಿಯೇ ಅನಾದಿ ಜಂಗಮೋದ್ಧರಣಿ, ಅನಾದಿ ಜಂಗಮಮೂರ್ತಿ

ಉದ್ಧರಣಿ, ಮಕುಟೋದ್ಧರಣಿ, ಚಿದಂಬರೋದ್ಧರಣಿ, ಷಡ್ಬ್ರಮ್ಹೋದ್ಧರಣಿ, ಪಂಚಮೂರ್ತಿಲಿಂಗೋದ್ಧರಣಿ, ಶಾಂಭವೀ ಚಕ್ರೋದ್ಧರಣಿ, ಮಹಾಲಿಂಗೋದ್ಧರಣಿ, ವೃಷಭೋದ್ಧರಣಿ, ನವಚಕ್ರೋದ್ಧರಣಿ, ತತ್ವಪಂಚೀಕರಣೋದ್ಧರಣಿ, ಮಂತ್ರ ಪಂಚೀಕರಣೋಧ್ಧರಣಿ, ಲಿಂಗಪಂಚೀಕರಣೋದ್ಧರಣಿ, ಷಡಕ್ಷರೋದ್ಧರಣಿ, ಬಸವಾಕ್ಷರೋದ್ಧರಣಿ, ನೂರೆಂಟು ಪ್ರಣವೋದ್ಧರಣಿ, ಲಿಂಗಷಡಕ್ಷರೋದ್ಧರಣಿ, ಅಂಗಷಡಕ್ಷರೋದ್ಧರಣಿ, ಜ್ಞಾನ ಚಕ್ರೋದ್ಧರಣಿ, ಇವೆಲ್ಲ ವರ್ಣಚಿತ್ರಗಳನ್ನು ರಚಿಸಿದ್ದು ಅಧೋ ಕುಂಡಲೀಉದ್ಧರಣಿ, ಊರ್ದ್ವಕುಂಡಲೀ ಉದ್ಧರಣಿ ಇವು ರೇಖಾಚಿತ್ರಗಳಾಗಿವೆ. ಜೊತೆಗೆ ಸುರಪುರ ಶೈಲಿಯಲ್ಲಿ ಕೆಲವು ಮಹಿಳಾ ಚಿತ್ರಗಳನ್ನು ಬರೆದಿದ್ದು ಸಂಬಂಧವಿಲ್ಲದಂತಾದರೂ ಇಷ್ಟು ಉದ್ಧರಣಿ ಚಿತ್ರಗಳನ್ನು ಭಿತ್ತಿಚಿತ್ರಗಳಾಗಿ ರಚಿಸಿದ್ದು ಬಹುಶಃ ಪ್ರಥಮವೆಂದು ಅಭಿಪ್ರಾಯ ಪಡಬಹುದಾಗಿದೆ. ಕಲಾವಿದ ವಿಜಯ್ ಹಾಗರಗುಂಡಗಿಯವರ ಸೂಕ್ಷ್ಮರೇಖಾಚಿತ್ರಗಳಲ್ಲಿ ಸಾಂಪ್ರದಾಯಿಕ ವರ್ಣವಿನ್ಯಾಸಗಳೊಂದಿಗೆ ಉತ್ಕೃಷ್ಟವಾಗಿ ಈ ಭಿತ್ತಿ ಚಿತ್ರಗಳು ಮೂಡಿಬಂದಿವೆ.

## ವೀರಶೈವ ಭಿತ್ತಿಚಿತ್ರಗಳು
## ಸಿಂಧೂ ನಾಗರಿಕತೆಯ ಕಲಾಕೃತಿಗಳು


ಪಶುಪತಿ ಮುದ್ರೆ


ಧರ್ಮಗುರು ಹಣೆಯಲ್ಲಿ ಧರಿಸಿದ ಇಷ್ಟ ಲಿಂಗ


ವೃಷಭ ಮುದ್ರೆ


ಧರ್ಮಗುರುವಿನ ಕಲಾಕೃತಿ

## ವೀರಶೈವ ಭಿತ್ತಿಚಿತ್ರಗಳು
## ಸಿಂಧೂ ನಾಗರಿಕತೆಯ ಕಲಾಕೃತಿಗಳು




ಪಶುಪತಿ



ಗುಡಿಮಲ್ಲದ ಲಿಂಗ

## ಭಿತ್ತಿ ಚಿತ್ರಗಳ ಪರಂಪರೆ



ಅಜಂತಾ



ಬಾದಾಮಿ ಚಾಲುಕ್ಯರ ಚಿತ್ರ



ಬಾದಾಮಿ ಚಾಲುಕ್ಯರ ಚಿತ್ರ



ಹಾರುತ್ತಿರುವ ವಿಧ್ಯಾದರರು



ಶಿವನ ವಡ್ಡೋಲಗದ ಸಮೂಹ ಶಿಲ್ಪ

## ಚೋಳರ ವೀರಶೈವ ಭಿತ್ತಿಚಿತ್ರಗಳು

## ತಂಜಾವೂರು ಬ್ರಹದೇಶ್ವರದೇವಾಲಯದ ವೀರಶೈವ ಭಿತ್ತಿಚಿತ್ರಗಳು



ಭ್ರಹದೇಶ್ವರ ದೇವಾಲಯದ ಚೋಳರ ನಟರಾಜನ ಚಿತ್ರ




ಭ್ರಹದೇಶ್ವರ ದೇವಾಲಯದ ತ್ರಿಪುರಾಂತಕ ಕಾರ್ತಿಕೇಯ



ಶಿವಪಾರ್ವತಿ ಕಲ್ಯಾಣ



ಮನ್ಮಥ ವಿಜಯ



ತ್ರಿಪುರ ಸಂಹಾರ



ಲಿಂಗರೂಪಿ ವಿರೂಪಾಕ್ಷ




ಶಿವ ಪಾರ್ವತಿ

ಲೇಪಾಕ್ಷಿ ವೀರಶೈವ ಭಿತ್ತಿಚಿತ್ರಗಳು



ಭೀಮ ಚೋಳನಿಗೆ ಪ್ರಾಣದಾನ ಮಾಡಿದ ಶಿವ




ಭಕ್ತನನ್ನು ಆಶೀರ್ವದಿಸುತ್ತಿರುವ ಶಿವ

## ಲೇಪಾಕ್ಷಿ ವೀರಶೈವ ಭಿತ್ತಿಚಿತ್ರಗಳು



ಮದುಮಗನಾಗಿ ಪಾರ್ವತಿಯನ್ನು ಕಾಯುತ್ತಿರುವ ಶಿವ



ಸಖಿಯರೊಂದಿಗೆ ಪಾರ್ವತಿ

## ಕರ್ನಾಟಕದ ವೀರಶೈವ ಭಿತ್ತಿಚಿತ್ರಗಳು
## ಬಿ.ಕೆ.ಹಳ್ಳಿಯ ದೇವಾಲಯಗಳಲ್ಲಿರುವ ವೀರಶೈವ ಭಿತ್ತಿಚಿತ್ರಗಳು



ಪಂಚಮುಖಿ ಶಿವ



ಯೋಗ ಪಟ್ಟದಲ್ಲಿರುವ ಮುನಿ

ಸೀಬಿಯ ನರಸಿಂಹಸ್ವಾಮಿ ದೇವಾಲಯದ ವೀರಶೈವ ಚಿತ್ತಿ ಚಿತ್ರಗಳು



ಸೀಭಿಯ ನರಸಿಂಹಸ್ವಾಮಿ ದೇವಾಲಯ



ಶಿವನ ಒಡ್ಡೋಲಗ


# ಕರ್ನಾಟಕದ ವೀರಶೈವ ಭಿತ್ತಿಚಿತ್ರಗಳು
## ಕೆರಗೋಡ ಶ್ರೀ ಶಂಕರೇಶ್ವರ ದೇವಾಲಯ, ರಂಗಾಪುರದ ಶ್ರೀ ರಂಗನಾಥ ಸ್ವಾಮಿ ದೇವಾಲಯದಲ್ಲಿರುವ ವೀರಶೈವ ಭಿತ್ತಿಚಿತ್ರಗಳು



ತ್ರಿಪುರ ಸಂಹಾರಕ್ಕೆ ಹೊರಟ ಕಾರ್ತಿಕೇಯ



ಪಂಚವಿಂಶತಿ ಶಿವಲೀಲೆ



ವಿಷ್ಣು ಶಿವ ಬ್ರಹ್ಮ ದಂಪತಿಗಳೊಂದಿಗೆ



ಶಿವ ಪಾರ್ವತಿ

ಕರ್ನಾಟಕದ ವೀರಶೈವ ಭಿತ್ತಿಚಿತ್ರಗಳು
ಅಮ್ಮಿನಭಾವಿಯ ಪಂಚಗ್ರಹ ಹಿರೇಮಠದ
ಲೋಹ ಮಾಧ್ಯಮದ ವೀರಶೈವ ಭಿತ್ತಿಚಿತ್ರಗಳು



ದ್ರಾಕ್ಷಾಯಣಿಯಿಲ್ಲದ ಶಿವ ಕೋಪೋದ್ರೇಕಗೊಂಡಿರುವುದು



ದ್ರಾಕ್ಷಾಯಣಿ ಯಜ್ಞ ಕುಂಡದಲ್ಲಿ ಹಾರಿ ಕೊಂಡಿರುವುದನ್ನು ತಿಳಿಸುತ್ತಿರುವ ಗಣಧರರು

## ಕರ್ನಾಟಕದ ವೀರಶೈವ ಭಿತ್ತಿಚಿತ್ರಗಳು
## ಅಮ್ಮಿನಭಾವಿಯ ಪಂಚಗ್ರಹ ಹಿರೇಮಠದ
## ಮರದ ಮೇಲಿನ ವೀರಶೈವ ಭಿತ್ತಿಚಿತ್ರಗಳು



ದಕ್ಷಬ್ರಹ್ಮನ ಯಜ್ಞ ಮತ್ತು ವೀರಭದ್ರನನ್ನು ಕಳಿಸುತ್ತಿರುವ ಶಿವ



ತ್ರಿಪುರ ಸಂಹಾರ ಮಾಡುತ್ತಿರುವ ಕಾರ್ತಿಕೇಯ



ಲೋಹ ಮಾಧ್ಯಮದ

ವೃಷಭಾರೂಢ ಶಿವ ಪಾರ್ವತಿ

# ಕರ್ನಾಟಕದ ವೀರಶೈವ ಭಿತ್ತಿಚಿತ್ರಗಳು
## ಅಮ್ಮಿನಭಾವಿಯ ಪಂಚಗ್ರಹ ಹಿರೇಮಠದ
## ಮರದ ಮೇಲಿನ ವೀರಶೈವ ಭಿತ್ತಿಚಿತ್ರಗಳು




ಗಣಪತಿ ಸರಸ್ವತಿಯ ಚಿತ್ರ



ಶಿವನ ಒಡ್ಡೋಲಗದ ಚಿತ್ರ



ಮನ್ಮಥನು ಶಿವನ ತಪಸ್ಸನ್ನು ಬಂಗಗೊಳಿಸುವುದು



ಯೋಗ ಪಟ್ಟದಲ್ಲಿರುವ ಮುನಿ



ವೃಷಭನ ಮೇಲೆ ಕುಳಿತು ಬರುತ್ತಿರುವ ಶಿವ



ಸತ್ತ ಬಾಲಕನನ್ನು ಬದುಕಿಸಿದ್ದು

ಕರ್ನಾಟಕದ ವೀರಶೈವ ಭಿತ್ತಿಚಿತ್ರಗಳು
ಮಣಿಪಾಲದ ಶ್ರೀ ವಿಜಯನಾಥ್ ಶೆಣೈ ಅವರ
ಜಂಗಮವಾಡಿ ಮಠದಲ್ಲಿ ಉದ್ದರಣೆಯ ಚಿತ್ತಿ ಚಿತ್ರಗಳು



ಜಂಗಮವಾಡಿ ಮಠದ ಭಿತ್ತಿಚಿತ್ರ

ವಿಜಯ ಹಾಗರಗುಂಡಗಿ





ಜಂಗಮವಾಡಿ ಮಠದ ಭಿತ್ತಿಚಿತ್ರ

ವಿಜಯ ಹಾಗರಗುಂಡಗಿ

ಕರ್ನಾಟಕದ ವೀರಶೈವ ಭಿತ್ತಿಚಿತ್ರಗಳು
ಮಣಿಪಾಲದ ಶ್ರೀ ವಿಜಯನಾಥ್ ಶೆಣೈ ಅವರ
ಜಂಗಮವಾಡಿ ಮಠದಲ್ಲಿ ಉದ್ಧರಣೆಯ ಚಿತ್ತಿ ಚಿತ್ರಗಳು



ಜಂಗಮವಾಡಿ ಮಠದ ಭಿತ್ತಿಚಿತ್ರ

ವಿಜಯ ಹಾಗರಗುಂಡಗಿ



ಜಂಗಮವಾಡಿ ಮಠದ ಭಿತ್ತಿಚಿತ್ರ

ವಿಜಯ ಹಾಗರಗುಂಡಗಿ

## ಕರ್ನಾಟಕದ ವೀರಶೈವ ಭಿತ್ತಿಚಿತ್ರಗಳು
## ಮಣಿಪಾಲದ ಶ್ರೀ ವಿಜಯನಾಥ್ ಶೆಣೈ ಅವರ
## ಜಂಗಮವಾಡಿ ಮಠದಲ್ಲಿ ಉದ್ಧರಣೆಯ ಭಿತ್ತಿ ಚಿತ್ರಗಳು



ಜಂಗಮವಾಡಿ ಮಠದ ಭಿತ್ತಿಚಿತ್ರ ವಿಜಯ ಹಾಗರಗುಂಡಗಿ



ಜಂಗಮವಾಡಿ ಮಠದ ಭಿತ್ತಿಚಿತ್ರ ವಿಜಯ ಹಾಗರಗುಂಡಗಿ

ಕರ್ನಾಟಕದ ವೀರಶೈವ ಭಿತ್ತಿಚಿತ್ರಗಳು
ಮಣಿಪಾಲದ ಶ್ರೀ ವಿಜಯನಾಥ್ ಶೆಣೈ ಅವರ
ಜಂಗಮವಾಡಿ ಮಠದಲ್ಲಿ ಉದ್ಧರಣೆಯ ಬಿತ್ತಿ ಚಿತ್ರಗಳು



ಜಂಗಮವಾಡಿ ಮಠದ ಭಿತ್ತಿಚಿತ್ರ

ವಿಜಯ ಹಾಗರಗುಂಡಗಿ



ಮಣಿಪಾಲದ ಶ್ರೀ ವಿಜಯನಾಥ್ ಶೆಣೈ ಅವರೊಂದಿಗೆ ಸಂದರ್ಶನ

ಕರ್ನಾಟಕದ ವೀರಶೈವ ಭಿತ್ತಿಚಿತ್ರಗಳು
ಮಣಿಪಾಲದ ಶ್ರೀ ವಿಜಯನಾಥ್ ಶೆಣೈ ಅವರ
ಜಂಗಮವಾಡಿ ಮಠದಲ್ಲಿ ಉದ್ಧರಣೆಯ ಬಿತ್ತಿ ಚಿತ್ರಗಳು



ಜಂಗಮವಾಡಿ ಮಠದ ಭಿತ್ತಿಚಿತ್ರ ವಿಜಯ ಹಾಗರಗುಂಡಗಿ



ಜಂಗಮವಾಡಿ ಮಠದ ಭಿತ್ತಿಚಿತ್ರ ವಿಜಯ ಹಾಗರಗುಂಡಗಿ

ಅಧ್ಯಾಯ : ಐದು

# ಕರ್ನಾಟಕದ ವೀರಶೈವ ಸಂಕೀರ್ಣ ಚಿತ್ರಕಲೆ



# ಕರ್ನಾಟಕದ ವೀರಶೈವ ಸಂಕೀರ್ಣ ಚಿತ್ರಕಲೆ

ಕರ್ನಾಟಕದ ವೀರಶೈವ ಚಿತ್ರಗಳು ಹಲವು ಶೈಲಿಗಳಲ್ಲಿ ವಿವಿಧ ಮಾಧ್ಯಮಗಳಲ್ಲಿ ರಚನೆಗೊಂಡಿವೆ. ಈಗಾಗಲೇ ಭಿತ್ತಿ ಚಿತ್ರಗಳು ಮತ್ತು ಹಸ್ತಪ್ರತಿಚಿತ್ರಗಳಲ್ಲಿ ವೀರಶೈವ ಧರ್ಮ ತತ್ವಗಳಿಗೆ ಅನುಸರಿಸಿ ಶಿವಾಗಮಗಳು, ಶಿವಪುರಾಣಗಳನ್ನು ಆಧರಿಸಿದ ಚಿತ್ರಗಳು ನಾಡಿನಾದ್ಯಂತ ವಿವಿಧ ಶೈಲಿಗಳಲ್ಲಿ ಹೇಗೆ ಬೆಳೆದು ಬಂದಿವೆ ಎನ್ನುವುದನ್ನು ವಿವರಿಸಿದಂತೆ, ಇನ್ನೂ ಹಲವು ಮಾಧ್ಯಮಗಳಲ್ಲಿ ವೀರಶೈವ ಧರ್ಮಕ್ಕೆ ಸಂಬಂಧಿಸಿದ ಕಲಾಕೃತಿಗಳು ರಚನೆಗೊಂಡಿದ್ದು, ಈ ಚಿತ್ರಗಳನ್ನು ಕಾಗದ, ಬಟ್ಟೆ (ಕ್ಯಾನ್ವಾಸ್) ಹಾಗೂ ಲೋಹ, ಗಂಜೀಫಾ ತೊಗಲು ಗೊಂಬೆ, ಗಾಜು, ಮರದ ಮಾಧ್ಯಮಗಳ ಮೇಲೆ ರಚಿಸಿದ್ದು, ಈ ಕುರಿತು ಇಲ್ಲಿ ಅಧ್ಯಯನ ಮಾಡಲಾಗಿದೆ. ಇವುಗಳನ್ನು ಸಂಕೀರ್ಣ ಮಾಧ್ಯಮದ ಚಿತ್ರಗಳು ಎಂದು ವಿಂಗಡಿಸಿಕೊಳ್ಳಲಾಗಿದೆ. ಇವೆಲ್ಲ ಬಿಡಿಚಿತ್ರಗಳಾಗಿ ವೈಯಕ್ತಿಕ ನೆಲೆಯಲ್ಲೂ ರಚನೆಗೊಂಡಂತವುಗಳಾಗಿದ್ದು, ಈ ಮಾಧ್ಯಮದ ಚಿತ್ರಗಳ ಅಧ್ಯಯನವು ಆಂಶಿಕವಾಗಿದೆ. ಯಾಕೆಂದರೆ ನಾಡಿನಾದ್ಯಂತ ಹರಡಿಕೊಂಡಿರುವ ದೇವಾಲಯ, ಮಠ, ಮಂದಿರಗಳಲ್ಲದೆ ವ್ಯಕ್ತಿಗತವಾಗಿ ಇಲ್ಲವೇ ಸಮೂಹವಾಗಿ ರಚನೆಗೊಂಡ ಕಲಾಕೃತಿಗಳು ವಿವಿಧ ಮಾಧ್ಯಮಗಳಲ್ಲಿ ವಿವಿಧ ಶೈಲಿಗಳಲ್ಲಿ ರಚಿಸಲ್ಪಟ್ಟಿವೆ. ಅವುಗಳಲ್ಲಿ ಕೆಲವನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಿದ್ದು ಇವುಗಳನ್ನು ಸಂಕೀರ್ಣ ಮಾಧ್ಯಮದ ಚಿತ್ರಕಲೆ ಎಂದು ಅಧ್ಯಯನ ಮಾಡಲಾಗಿದೆ.

## ಗಾಜಿನ ಮೇಲಿನ ವೀರಶೈವ ಚಿತ್ರಕಲೆ

ಈಜಿಪ್ತಿಯನ್ನರು ಲೋಹದ ಕಡ್ಡಿಗೆ ಸಿಲುಕಿದ ಅಂಟನ್ನು ಬೆರಸಿ ಬೇರೆ ಬೇರೆ ಆಕಾರ ಮಾಡಿಕೊಂಡು ಗಾಜಿನ ದ್ರವದಲ್ಲಿ ಅದ್ದಿ ವೈವಿಧ್ಯಮಯ ಗಾಜಿನ ವಸ್ತು ತಯಾರಿಸುತ್ತಿದ್ದರು. ಕ್ರಿ.ಪೂ.೩೦೦೦ ಹೊತ್ತಿಗೆ ಗಾಜಿನ ಕಲಾತ್ಮಕ ವಸ್ತುಗಳನ್ನು ತಯಾರಿಸುವಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡಿದರು. ಗಾಜುಗಳ ಮೇಲೆ ಮುದ್ರೆ ಒತ್ತುವುದು ಕರಗಿದ ಗಾಜನ್ನು ಸಾಚೆಯಲ್ಲಿ (Mold) ಹಾಕಿ ನಾಣ್ಯದಂತಹ ವಸ್ತುಗಳನ್ನು ತಯಾರಿಸುವುದು ಹೊಳಪುಳ್ಳ ಹಾಗೂ ಮಿರುಗುವ ವರ್ಣಗಳನ್ನು ಗಾಜುಗಳಿಗೆ ಲೇಪಿಸುವುದು. ಬಂಗಾರ ಮತ್ತು ಬೆಳ್ಳಿಯ ಬಣ್ಣವನ್ನು ಗಾಜಿಗೆ ಹಚ್ಚಿ ಅನಂತರ ಆಮ್ಲಜನಕವಿಲ್ಲದ ಆವರಣದಲ್ಲಿ ಕಾಯಿಸಿ ವರ್ಣ ತಿಳಿ ಹಳದಿ ಮತ್ತು ಬೂದು ವರ್ಣಕ್ಕೆ ತಿರುಗಿಸುವ ಮೂಲಕ ಗಾಜಿನ ಬಣ್ಣದ ಬಟ್ಟಲು ಹಾಗೂ ಸೀಸೆಗಳನ್ನು ತಯಾರಿಸುವರು.[೧] ಕ್ರಿ.ಪೂ.೭ನೆಯ ಶತಮಾನದಲ್ಲಿ ಮೆಸಪೊಟೋಮಿಯಾದಲ್ಲಿ ವೈವಿಧ್ಯಮಯವಾದ ಗಾಜಿನ ಲೋಟಗಳ ಮೇಲೆ ಸುಂದರವಾದ ಚಿತ್ತಾರಗಳನ್ನು ಬರೆಯುತ್ತಿದ್ದರು. ಈ ರೀತಿ ತಯಾರಿಸಿದ ಕಲಾತ್ಮಕ ಗಾಜಿನ ವಸ್ತುಗಳು ಆ ಸಂದರ್ಭದಲ್ಲಿ ತುಂಬಾ ಪ್ರಸಿದ್ಧವಾಗಿದ್ದವು. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಬಾರೋಕ್, ರೋಕೋಕೋ ಹಾಗೂ

---

೧. ಶ್ರೀ ಹೆಚ್.ಜಿ.ಎಂ: ಕನ್ನಡ ವಿಶ್ವಕೋಶ : ಸಂಪುಟ ೬: ಪು ೧೯೧

ಗಾಥಿಕ್, ಬೈಜಂಟೈನ್ ಕಲೆಗಳಲ್ಲಿ ಪುನರುಜ್ಜೀವನಗೊಂಡು ಗಾಜನ್ನು ಕಲಾತ್ಮಕವಾಗಿ ಗಾಜಿನ ಮೇಲೆ ಚಿತ್ರ ಕಲೆಯನ್ನು ವೈವಿಧ್ಯಮಯವಾಗಿ ಬಳಸಿಕೊಂಡರು.

ಭಾರತದಲ್ಲಿ ರಾಮಾಯಣ, ಮಹಾಭಾರತದಲ್ಲಿ ಗಾಜಿನ ಮೇಲೆ ಚಿತ್ರಿಸಿ ವಿವಿದ ನಕ್ಷೆಗಳು ಗಾಜಿನ ಜಾಲರಿ, ಕನ್ನಡಿ ಮಣಿಗಳು ಅಲಂಕಾರಿಕ ವಸ್ತುಗಳನ್ನು ಹಾಗೂ ಗಾಜಿನ ಮೇಲೆ ರಾಮ, ರಾವಣ, ವಿಭೂಷಣ, ಕುಂಬಕರ್ಣ, ಕೃಷ್ಣ, ದ್ರೌಪದಿ ಮುಂತಾದ ಚಿತ್ರಗಳು ರಚನೆಗೊಂಡಿವೆ. ಭಾರತದಲ್ಲಿ ಮೊಗಲರ ಕಾಲಕ್ಕೆ ಗಾಜಿನ ಕಲಾತ್ಮಕ ವಸ್ತುಗಳ ಬಳಕೆ ಅಧೀಕವಾಯಿತು. ಆನಂತರ ಬಂದ ರಜಪೂತರ ಅವಧಿಯಲ್ಲಿ ಹೊಸ ರೂಪ ಪಡೆದುಕೊಂಡಿತು. ಕರ್ನಾಟಕದಲ್ಲಿ ಕ್ರೈಸ್ತ ಧರ್ಮೀಯರು ಕ್ರೈಸ್ತ ಧರ್ಮ ಪ್ರಚಾರ ಮಾಡಲು ಕ್ರೈಸ್ತ ಮಠಗಳ ಕಿಡಕಿಯ ಗಾಜುಗಳ ಮೇಲೆ ಚಿತ್ರಗಳನ್ನು ಬರೆದಿರುವರು[೨] ಎಂಬುದು ತಿಳಿದುಬರುತ್ತದೆ.

ಹಿಂದೂ ಧರ್ಮದ ಹಾಗೂ ಹಿಂದೂ ದೇವಾನು ದೇವತೆಗಳ ಪುರಾಣ ಕಥೆಗಳು ಗಾಜಿನ ಮೇಲೆ ಚಿತ್ರಗಳಾಗಿ ರೂಪುಗೊಂಡಿವೆ. ಪ್ರಾಚೀನ ಶಾಸ್ತ್ರ ಗ್ರಂಥಗಳಲ್ಲಿ ವಿವಿಧ ಹಸ್ತ ಪ್ರತಿಗಳಲ್ಲಿ ಇರುವ ಚಿತ್ರಗಳನ್ನು ಗಾಜಿನ ಮೇಲೆ ಚಿತ್ರಿಸಲಾಗಿದೆ. ಹಿಂದೂ ಧರ್ಮದಲ್ಲಿ ಅನೇಕ ಒಳಪಂಗಡಗಳಿದ್ದು ಅವುಗಳಲ್ಲಿ ಶೈವ, ವೀರಶೈವ ದೇವತೆಗಳ ಆರಾಧನೆಯ ಚಿತ್ರಗಳು ಗಾಜಿನ ಮೇಲೆ ರಚನೆಗೊಂಡಿವೆ. ಶಿವನಿಗೆ ಸಂಬಂಧಿಸಿದ ಚಿತ್ರಗಳಲ್ಲಿ ಶಿವ, ಪಾರ್ವತಿ ಗಣೇಶ ವೀರಭದ್ರ ಕಾರ್ತಿಕೇಯ ಬಸವೇಶ್ವರ, ನೀಲಾಂಬಿಕೆ. ವೃಷಭದ ಚಿತ್ರಗಳು ರಚಿಸಲ್ಪಟ್ಟಿವೆ. ಈ ಗಾಜಿನ ಚಿತ್ರಗಳನ್ನು ವೃತ್ತಿ ಪರ ಕಲಾವಿದರು ಹಾಗೂ ಹವ್ಯಾಸಿ ಕಲಾವಿದರು ರಚಿಸಿದ ಅನೇಕ ಕಲಾಕೃತಿಗಳನ್ನು ಕಾಣಬಹುದಾಗಿದೆ. ಈ ಗಾಜಿನ ಚಿತ್ರಗಳು ವಿಜಯನಗರ, ದಖ್ಖನ್ ಸುರಪೂರ, ಮೈಸೂರು, ತಂಜಾವೂರು ಚಿತ್ರಗಳು ಗಾಜಿನ ಮೇಲೆ ಚಿತ್ರಣಗೊಂಡಿವೆ. ಆದರೆ ಈ ಗಾಜಿನ ಚಿತ್ರಗಳಿಗೆ ಇವುಗಳದೇ ಆದ ಸ್ವತಂತ್ರಶೈಲಿ ಏನೂ ಕಂಡುಬುರುವುದಿಲ್ಲ.

ಗಾಜಿನ ಮೇಲೆ ಚಿತ್ರಬರೆಯಬೇಕಾದರೆ ಆ ಚಿತ್ರವು ಸ್ಪಷ್ಟವಾಗಿ ಕಾಣಬೇಕಾದರೆ ಉತ್ತಮ ಗುಣಮಟ್ಟದ ಹಾಗೂ ಪರಿಶುದ್ಧವಾದ ಗಾಜನ್ನು ಆಯ್ದುಕೊಳ್ಳಬೇಕಾಗುತ್ತದೆ. ಇಂದು ಗಾಜನ್ನು ಪ್ರತಿಯೊಂದು ಕ್ಷೇತ್ರದಲ್ಲಿ ಹೇರಳವಾಗಿ ಬಳಸಲಾಗುತ್ತದೆ. ಇದು ಒಂದು ದೊಡ್ಡ ಉದ್ದಿಮೆಯಾಗಿ ರೂಪುಗೊಂಡಿದೆ. ಗಾಜು ನಮಗೆ ಬೇಕಾದ ರೀತಿಯಲ್ಲಿ ಬೇಕಾದ ಅಳತೆಯಲ್ಲಿ ಬೇಕಾದ ವರ್ಣದಲ್ಲಿ ದೊರೆಯುತ್ತದೆ. ಕಲಾವಿದರು ಚಿತ್ರಿಸಲು ಬೇಕಾದ ಗಾಜನ್ನು ಆಯ್ದುಕೊಂಡು ಚಿತ್ರಿಸಬಹುದಾಗಿದೆ. ಈ ಗಾಜಿನ ಚಿತ್ರಕ್ಕೆ ಟೆಂಪರಾ ವರ್ಣವನ್ನು, ತೈಲವರ್ಣವನ್ನು, ಎನಾಮಲ್ ವರ್ಣವನ್ನು, ಬಳಸಿರುವ ಚಿತ್ರಗಳು ದೊರೆಯುತ್ತವೆ. ವಿಶೇಷವಾಗಿ ಟೆಂಪರಾ ವರ್ಣವನ್ನು ಬಳಸಿರುವುದೇ ಹೆಚ್ಚಾಗಿ ಕಂಡುಬರುತ್ತವೆ.

೨. ಡಾ. ನಿಂಗಪ್ಪ ಅಂಗಡಿ : ಕರ್ನಾಟಕದ ಗಾಜಿನ ಮೇಲಿನ ಚಿತ್ರಕಲೆ : ಪುಟ ೨೦, ಅಪ್ರಕಟಿತ ಪಿ.ಹೆಚ್.ಡಿ. ಮಹಾಪ್ರಬಂಧ ಕನ್ನಡ ವಿ.ವಿ. ಹಂಪಿ

**ಟೆಂಪರಾವರ್ಣಗಳು :**

ಮೊಟ್ಟೆಯ ಲೋಳೆಯಲ್ಲಿ ಟೆಂಪರಾ ಮೂಲದ ಪುಡಿವರ್ಣವನ್ನು ಸೇರಿಸಿ ನಮಗೆ ಎಷ್ಟು ಬೇಕೋ ಅಷ್ಟು ಅಂಟಿನ ನೀರನ್ನು ಸೇರಿಸಿಕೊಂಡು ಸರಿಯಾಗಿ ಮಿಶ್ರಣಮಾಡಿ ತೆಳುವಾಗಿ ಪಾರದರ್ಶಕವಾಗಿ ಬಳಸುವುದು ಒಂದು ವಿಧಾನವಾದರೆ ದಪ್ಪವಾಗಿ ಅಪಾರದರ್ಶಕವಾಗಿ ಬಳಸುವುದು ಇನ್ನೊಂದು ವಿಧವಾಗಿದೆ. ಈ ವರ್ಣಗಳಿಂದಾಗಿ ಚಿತ್ರವು ಹೊಳಪುಳ್ಳಂತೆ ಕಂಡುಬರುತ್ತದೆ. ಇತ್ತೀಚೆಗೆ ಸಿದ್ಧ ವರ್ಣಗಳು ದೊರೆಯುತ್ತಿದ್ದು ಅಕ್ರ್ಯಾಲಿಕ್ ವರ್ಣ, ತೈಲ ವರ್ಣಗಳಿಂದಲೂ ಗ್ಲಾಸಿನ ಮೇಲೆ ಚಿತ್ರವನ್ನು ರಚಿಸುತ್ತಿರುವುದು ಕಂಡುಬರುತ್ತದೆ. ಈ ಗಾಜಿನ ಚಿತ್ರಗಳಲ್ಲಿ ವಿಶೇಷವಾಗಿ ಮೂಲವರ್ಣಗಳನ್ನೇ ಬಳಸಲಾಗಿದೆ. ಅದರಲ್ಲಿ ಕೆಂಪು, ಹಳದಿ, ಹಸಿರು, ನೀಲಿ, ಕಪ್ಪು ವರ್ಣಗಳನ್ನು ಬಳಸಿರುವರು.

**ಅಂಟು ದ್ರಾವಕಗಳು :**

ಗಾಜಿನ ಚಿತ್ರಗಳ ರಚನೆಯಲ್ಲಿ ಚಿತ್ರಕಲಾವಿದರು ಬೇರೆ ಬೇರೆ ಮೂಲಗಳಿಂದ ತಯಾರಿಸಲ್ಪಟ್ಟ ಅಂಟು ದ್ರಾವಕಗಳನ್ನು ಬಳಸಿರುವರು. ಮರಗಳಿಂದ ದೊರೆಯುವ ಅಂಟನ್ನು ಬೇರೆ ಬೇರೆ ಸಸ್ಯ ಮರದ ಬೀಜಗಳಿಂದ (ಅಗಸೆ, ಗಸಗಸೆ) ಎಣ್ಣೆ ಬೀಜಗಳಿಂದ ವಾರ್ನೀಶ್‌ದಲ್ಲಿ ಈ ತೈಲವನ್ನು ಮಿಶ್ರಣಮಾಡಿ ವರ್ಣಗಳ ಬಳಕೆ ಮಾಡಲಾಗಿದೆ.

**ಕಾಗದಗಳ ಬಳಕೆ :**

ಆಕರ್ಷಕ ವರ್ಣಗಳ ಹಾಗೂ ಕಾಗದಗಳ ಬಳಕೆ, ಬೆಳ್ಳಿ ಬಂಗಾರದ ಹಾಳೆಗಳನ್ನು ಕಲಾಕೃತಿಗಳಲ್ಲಿ ಬಳಸಿಕೊಳ್ಳಲಾಗಿದೆ.

**ರೇಖಾ ಚಿತ್ರಗಳು :**

ಚಿತ್ರಕಾರರು ಗಾಜಿನ ಮೇಲೆ ಚಿತ್ರ ಬರೆಯುವ ಪೂರ್ವದಲ್ಲಿ ಹಾಳೆಯ ಮೇಲೆ ಚಿತ್ರವನ್ನು ರಚಿಸಿಕೊಂಡು ಅದನ್ನು ಗಾಜಿನ ಕೆಳಗೆ ಇಟ್ಟು ಪ್ರತಿ ಕೃತಿಯನ್ನು ಮಾಡಿಕೊಳ್ಳುತ್ತಿದ್ದರು ನಂತರ ಇದೇ ರೇಖಾಚಿತ್ರವನ್ನು ಬಳಸಿಕೊಂಡು ಬೇಕಾದಷ್ಟು ಚಿತ್ರಗಳನ್ನು ಗ್ಲಾಸಿನ ಮೇಲೆ ಮಾಡಿಕೊಳ್ಳಬಹುದಾಗಿದೆ. ಹೀಗಾಗಿ ರೇಖಾಚಿತ್ರಗಳನ್ನು ಚೆನ್ನಾಗಿ ಕಾಯ್ದುಕೊಂಡು ಇಟ್ಟುಕೊಳ್ಳುತ್ತಿದ್ದರು. ಈ ರೀತಿಯ ಚಿತ್ರರಚನೆ ಮಾಡಲು ಕಲಾವಿದನ ತಾಳ್ಮೆ ಹಾಗೂ ಅನುಭವಗಳು ಪ್ರಮುಖವಾಗಿರಬೇಕಾಗುತ್ತವೆ.

**ಚಿತ್ರರಚನಾ ಪದ್ಧತಿ :**

ಗಾಜಿನ ಹಿಮ್ಮುಖವಾಗಿ ಚಿತ್ರ ರಚಿಸಿ ಮುಮ್ಮುಖವಾಗಿ ನೋಡುವುದರಿಂದ ಮೊದಲು ರೇಖಾಚಿತ್ರವನ್ನು ರಚಿಸಿಕೊಂಡು ನಂತರ ಆ ರೇಖಾ ಚಿತ್ರವನ್ನು ಪಾರದರ್ಶಕ ಕಾಗದ ಮೇಲೆ ಕರಡು ಚಿತ್ರವನ್ನು ರಚಿಸಬೇಕಾಗುತ್ತದೆ. ಆನಂತರ ನಿಗದಿಪಡಿಸಿದ ಪಾರದರ್ಶಕ ಚೌಕಾಕಾರದ ಗಾಜನ್ನು ಶುದ್ಧಗೊಳಿಸಿ ಕರಡು ಚಿತ್ರವನ್ನು ಅದರ ಕೆಳಗಡೆ ಇಟ್ಟು ಗಾಜಿನ ಓಂಬದಿಯ ಮೇಲೆ ಮೃದುವಾದ ಲೇಖನಿಯಿಂದ ಕರಡು ಚಿತ್ರದ ರೇಖೆಗಳ ಮೇಲೆ

ರೇಖಾ ಚಿತ್ರವನ್ನು ಗಾಜಿನ ಮೇಲೆ ಬರೆದುಕೊಳ್ಳಬೇಕು. ನಂತರ ಗಾಜನ್ನು ಹೊರತೆಗೆದು ಹಿಂಬದಿಯಲ್ಲಿ ಹಾಕಿದ ರೇಖಾ ಚಿತ್ರದ ಮೇಲೆ ಪುನಃ ಕಪ್ಪು ವರ್ಣದಿಂದ ಸುಂದರವಾದ ರೇಖಾ ವಿನ್ಯಾಸವನ್ನು ರಚಿಸಿ ನಂತರ ಬೇಕಾದ ವರ್ಣ ಸಂಯೋಜನೆ ಮಾಡಬಹುದು ಪೌರ್ವಾತ್ಯ ಕಲಾವಿದರು ರೇಖಾ ಪ್ರಧಾನವಾದ ಚಿತ್ರಗಳನ್ನು ರಚಿಸಿರುವರು. ಈ ಚಿತ್ರಗಳು ಅಂದವಾಗಿ ಕಾಣಲು ಮೆರಗು ವರ್ಣಗಳನ್ನು ಹಾಗೂ ಚಿನ್ನದ, ಬೆಳ್ಳಿಯ ಕಾಗದಗಳನ್ನು ಈ ಚಿತ್ರಗಳಿಗೆ ಉಪಯೋಗಿಸಲಾಗಿದೆ. ಇದೇ ರೀತಿಯಾಗಿ ಕ್ಯಾಲೆಂಡರ್ ಚಿತ್ರಗಳನ್ನು ಮತ್ತು ಛಾಯಾ ಚಿತ್ರಗಳನ್ನು ಬಳಸಿಕೊಂಡು ಗಾಜಿನ ಚಿತ್ರಗಳು ರಚನೆಗೊಂಡಿವೆ.

ಈ ಚಿತ್ರಗಳು ಧಾರ್ಮಿಕ, ಸಾಮಾಜಿಕ, ವಿಷಯಗಳನ್ನು ಹೊಂದಿದ್ದು ಅಲಂಕಾರಿಕವಾಗಿ ಚಿತ್ರಿಸಲ್ಪಟ್ಟಿವೆ ಇವುಗಳಲ್ಲಿ ವೀರಶೈವ ಪರಂಪರೆಯ ಚಿತ್ರಗಳನ್ನು ಕೆಲವನ್ನು ಮಾಧ್ಯಮದ ಹಿನ್ನೆಲೆಯಲ್ಲಿ ವಿವೇಚಿಸಲಾಗಿದೆ.

## ಗಾಜಿನ ಮೇಲಿನ ವೀರಶೈವ ಚಿತ್ರಗಳು

**೧. ವೃಷಭಾರೂಢ ಶಿವ ಪಾರ್ವತಿ :**

ಬಿಳಿವರ್ಣದ ವೃಷಭಾರೂಢನಾಗಿರುವ ಶಿವನು ಚತುರ್ಭುಜಧಾರಿಯಾಗಿರುವನು ಉಮೆಯನ್ನು ತನ್ನ ಎಡದೊಡೆಯ ಮೇಲೆ ಕೂಡ್ರಿಸಿಕೊಂಡಿದ್ದು ಇಲ್ಲಿ ಉಮೆಯನ್ನು ಚಿಕ್ಕವಳನ್ನಾಗಿ ಚಿತ್ರಿಸಲಾಗಿದೆ. ಹಸಿರುವರ್ಣದ ದೇಹ ಕೇಸರಿ ವರ್ಣದ ಸೀರೆ ಬಿಳಿವರ್ಣದ ರವಿಕೆಯನ್ನು ಮಾಡಲಾಗಿದೆ. ಆಭರಣ ಕಿರೀಟಗಳೆಲ್ಲ ಕೇಸರಿ ವರ್ಣದಲ್ಲಿ ರೂಪುಗೊಂಡಿವೆ. ಶಿವನನ್ನು ತಿಳಿಗುಲಾಬಿ ಮಿಶ್ರಿತ ಬಿಳಿವರ್ಣದ ದೇಹ ಕೇಸರಿ ವರ್ಣದಲ್ಲಿ ಪಂಚೆ, ಶಲ್ಯ ಕಿರೀಟಗಳನ್ನು ರಚಿಸಲಾಗಿದೆ. ಚಿತ್ರದ ಹಿನ್ನೆಲೆಗೆ ವೃತ್ತಾಕಾರದ ಪ್ರಭಾವಳಿಯನ್ನು ಚಿತ್ರಿಸಲಾಗಿದೆ. ನೀಲಿವರ್ಣವನ್ನು ಲೇಪಿಸಿದ್ದು ವೃತ್ತದ ಅಂಚಿನ ಒಳಬದಿ ಸುತ್ತಲೂ ಬಿಳಿಯ ವರ್ಣದ ಅರ್ಧವೃತ್ತಗಳನ್ನು ಅಲಂಕಾರಿಕವಾಗಿ ಚಿತ್ರಿಸಲಾಗಿದೆ. ವೃಷಭದ ಕೆಳಗಡೆಗೆ ಹಸಿರು ವರ್ಣದ ನೆಲವನ್ನು ತೋರಿಸಲಾಗಿದೆ. ಈ ಚಿತ್ರವು ರೇಖಾ ಲಾವಣ್ಯದಿಂದ ಕೂಡಿದೆ.

**೨. ಸಂಧ್ಯಾ ತಾಂಡವನೃತ್ಯ ಮಾಡುತ್ತಿರುವ ಶಿವ :**

ಶಿವತಾಂಡವ ನೃತ್ಯಗಳಲ್ಲಿ ಸಂಧ್ಯಾ ತಾಂಡವ ನೃತ್ಯವೂ ಒಂದು, ಬಿಳಿವರ್ಣದಲ್ಲಿರುವ ಶಿವನು ನೃತ್ಯ ಭಂಗಿಯಲ್ಲಿದ್ದು ಮುಂದಿನ ಎರಡೂ ಕೈಗಳನ್ನು ಒಂದು ಅಭಯ ಮುದ್ರೆಯನ್ನಾಗಿಯೂ ಇನ್ನೊಂದು ವರಮುದ್ರೆಯನ್ನಾಗಿ ಮಾಡಿದ್ದು ಹಿಂದಿನ ಎರಡೂ ಕೈಗಳಲ್ಲಿ ಒಂದರಲ್ಲಿ ಢಮರುಗವನ್ನು ಇನ್ನೊಂದರಲ್ಲಿ ಅಗ್ನಿಯನ್ನು ಹಿಡಿದುಕೊಂಡು ನಾಟ್ಯಮಾಡುತ್ತಿದ್ದು, ಎರಡೂ ಕಾಲುಗಳನ್ನು ಕೋನಾತ್ಮಕವಾಗಿ ಚಿತ್ರಿಸಿದ್ದು, ಬಲಗಾಲನ್ನು ಕೆಳಗಡೆಯಲ್ಲಿರುವ ನೀಲಿವರ್ಣದ ಅಪಸ್ಮಾರಕ ಪುರುಷನ ಮೇಲಿಟ್ಟಿದ್ದು, ಎಡಗಾಲನ್ನು ನಾಗರಾಜನ ಹೆಡೆಯ ಮೇಲಿಟ್ಟಿದ್ದು ಚಿತ್ರಿಸಲಾಗಿದೆ. ಶಿವನ ತಲೆಯಲ್ಲಿ ಗಂಗೆಯನ್ನು ಧರಿಸಿದ್ದು, ಜಡೆಯು ಎಡಬಲಗಳಲ್ಲಿ ಹಾರಾಡುತ್ತಿದ್ದು, ಜಡೆಯ ಬಲಭಾಗದಲ್ಲಿ ಚಂದ್ರನನ್ನು ತೋರಿಸಲಾಗಿದೆ. ಹಳದಿ ಮತ್ತು ಹಸಿರುವರ್ಣದ ಆಭರಣಗಳ ಪಟ್ಟಿಯನ್ನು ಧರಿಸಿದ್ದು ರುಂಡಗಳ ಮಾಲೆಯನ್ನು ಧರಿಸಿರುವನು. ಈ ಚಿತ್ರದ ಎಡಭಾಗದಲ್ಲಿ

ಪಾರ್ವತಿಯನ್ನು ನೀಲಿವರ್ಣದ ದೇಹ, ಹಳದಿಮಿಶ್ರಿತ ಕೆಂಪುವರ್ಣದ ಸೀರೆ, ಕೆಂಪುವರ್ಣದ ರವಿಕೆಯಿಂದ ತೋರಿಸಲಾಗಿದೆ. ಶಿವನ ಬಲಬದಿಯಲ್ಲಿ ನಂದಿಯನ್ನು ತೋರಿಸಿದ್ದು ಬಿಳಿವರ್ಣದ ಮೈ ಬಣ್ಣ ತನ್ನೆರಡೂ ಕೈಗಳನ್ನು ಮುಗಿದುಕೊಂಡು ನಿಂತಿದ್ದು ನೀಲಿವರ್ಣದ ಬಿಳಿಧೋತರವನ್ನು ಮಾಡಿದ್ದು ಕೆಂಪು ಶಲ್ಯ ಮಾಡಲಾಗಿದೆ. ಶಿವನನ್ನು ನೋಡುತ್ತ ನಿಂತಿರುವ ದೃಶ್ಯವಾಗಿದೆ. ಈ ಚಿತ್ರದಲ್ಲಿ ವರ್ಣಗಳ ಸಾಮರಸ್ಯ ಸಂಯೋಜನಾ ರೀತಿ ಉತ್ತಮವಾಗಿ ಮೂಡಿಬಂದಿದೆ.

**೩. ಮೈಸೂರು ಶೈಲಿಯಲ್ಲಿ ಪಾರ್ವತಿಯ ಚಿತ್ರ :**

ಮೈಸೂರಿನ ನಿಷಾದ್ ಬಾಗ್ ಪಾರ್ಕನ ಗಾಜಿನ ಮಂಟಪದಲ್ಲಿ ಸಂಗ್ರಹಗೊಂಡಿದೆ ಬಂಗಾರವರ್ಣದ ಕಿರೀಟಧಾರಿಣಿಯಾದ ಪಾರ್ವತಿಯು ಕಪ್ಪು ಮಿಶ್ರಿತ ಹಸಿರು ವರ್ಣದ ಮೈಬಣ್ಣವನ್ನು ಹೊಂದಿರುವಳು ಆಭರಣಗಳಿಂದ ಸರ್ವಾಲಂಕೃತವಾಗಿದ್ದು ಕಪ್ಪು ಮಿಶ್ರಿತ ಗುಲಾಬಿವರ್ಣದ ಸೀರೆಯನ್ನು ಕಡುಕಪ್ಪು ಗುಲಾಬಿವರ್ಣದ ರವಿಕೆಯನ್ನು ಧರಿಸಿರುವಳು. ಈ ಉಡುಪುಗಳ ಅಂಚನ್ನು ಬಂಗಾರವರ್ಣದಲ್ಲಿ ಅಲಂಕಾರಿಕವಾಗಿ ಚಿತ್ರಿಸಲಾಗಿದೆ. ಕಪ್ಪು ವರ್ಣದ ರೇಖಾ ವಿನ್ಯಾಸದಿಂದ ಮಾಡಲಾಗಿದೆ. ಈ ಗಾಜು ಮೇಲಿನ ಚಿತ್ರವು ಆಕರ್ಷಕವಾಗಿ ರೂಪುಗೊಂಡಿದೆ ಬಲಗೈ ಕೆಳಗಡೆ ಬಿಟ್ಟಿದ್ದು ಎಡಗೈಯಲ್ಲಿ ಗುಲಾಬಿ ಮಿಶ್ರಿತ ಬಿಳಿಯ ವರ್ಣದ ಕಮಲದ ಹೂವನ್ನು ಹಿಡಿದುಕೊಂಡಿದ್ದು ಅಲಂಕಾರಿಕ ಕಮಾನಿನ ಮಧ್ಯದಲ್ಲಿ ನಿಂತುಕೊಂಡಿರುವ ಚಿತ್ರವಾಗಿದೆ. ಇಲ್ಲಿಯೂ ವ್ಯಕ್ತಿಯ ದುಂಡುತನವನ್ನು ತೋರಿಸಲಾಗಿದೆ. ಕಲಾಕೃತಿಯು ಸುಂದರವಾಗಿ ಮೂಡಿಬಂದಿದೆ.

**೪. ಮೈಸೂರು ಶೈಲಿಯಲ್ಲಿ ಶಿವನ ಚಿತ್ರ :**

ಮೈಸೂರಿನ ಸರ್ಕಲ್ ಪಕ್ಕದಲ್ಲಿರುವ ನಿಷಾದ್‌ಬಾಗ್ ಪಾರ್ಕನಲ್ಲಿರುವ ಗಾಜಿನ ಮಂಟಪವಿದ್ದು ಈ ಗಾಜಿನ ಮಂಟಪದ ಗುಮ್ಮಟದಲ್ಲಿ ಸಂಪೂರ್ಣ ಮೈಸೂರು ಸಾಂಪ್ರದಾಯಿಕ ದೇವಾನುದೇವತೆಗಳ ಚಿತ್ರಗಳು ಚಿತ್ರಿತಗೊಂಡಿವೆ ಆ ಚಿತ್ರಗಳಲ್ಲಿ ಕಿರೀಟಧಾರಿ ಶಿವನಚಿತ್ರವೂ ಒಂದು ವಿಶಿಷ್ಠವಾಗಿ ಮೂಡಿಬಂದಿದೆ. ಶಿವನು ಚತುರ್ಭುಜಧಾರಿಯಾಗಿದ್ದು ಮುಂದಿನ ಕೈಗಳಲ್ಲಿ ತ್ರಿಶೂಲವನ್ನು ಮತ್ತು ಬಿಲ್ಲುಬಾಣಗಳನ್ನು ಹಿಡಿದಿದ್ದು ಹಿಂದಿನ ಕೈಗಳಲ್ಲಿ ರುದ್ರಾಕ್ಷಿ ಮಾಲೆ ಮತ್ತು ಹರಿಣಿಯನ್ನು ಹಿಡಿದುಕೊಂಡಿರುವನು. ಹಳದಿವರ್ಣದ ಆಭರಣ ಮತ್ತು ಕಿರೀಟವನ್ನು ಧರಿಸಿದ್ದು ಕಿರೀಟದಲ್ಲಿ ಗಂಗೆಯನ್ನು ತೋರಿಸಲಾಗಿದೆ. ಹಳದಿ ವರ್ಣದ ದೋತರ ಗುಲಾಬಿವರ್ಣದ ಶಲ್ಯವನ್ನು ಚಿತ್ರಿಸಲಾಗಿದೆ. ತಿಳಿಗುಲಾಬಿ ಮಿಶ್ರಣದ ವರ್ಣದಲ್ಲಿ ಶಿವನ ಮೈಬಣ್ಣವಿದೆ. ಬಲಭಾಗದ ಬೆನ್ನಿಗೆ ಬಾಣದ ಬತ್ತಳಿಕೆಯನ್ನು ಹಾಕಲಾಗಿದೆ. ಅಲಂಕಾರಿಕವಾಗಿ ಸ್ಟೇನ್ ಗ್ಲಾಸ್ ಚಿತ್ರವು ಅತ್ಯಂತ ಪ್ರಕಾಶಮಾನವಾಗಿ ಸುಂದರವಾಗಿ ಮೂಡಿಬಂದಿದೆ. ಚಿತ್ರದ ಮೇಲ್ಗಡೆ ಅಲಂಕಾರಿಕ ನಕ್ಷೆಯಿಂದೊಡಗೂಡಿದ ಕಮಾನನ್ನು ಚಿತ್ರಿಸಿದ್ದು ಚಿತ್ರದ ಎಡಬಲಗಳಲ್ಲಿ ಅಲಂಕಾರಿಕ ನಕ್ಷೆಗಳಿರುವ ಕಂಬಗಳಿವೆ. ಚಿತ್ರಿತ ಶಿವನು ಕೋನಾಕಾರದಲ್ಲಿ ಕಾಲುಗಳನ್ನು ಇಟ್ಟುಕೊಂಡು ನಿಂತಿರುವ ದೃಶ್ಯವಾಗಿದ್ದು ವ್ಯಕ್ತಿಯ ದುಂಡುತನವನ್ನು ತೋರಿಸುವ ಪ್ರಯತ್ನ ಮಾಡಲಾಗಿದೆ.

**೫. ಜನಪದ ಶೈಲಿಯಲ್ಲಿರುವ ಭಕ್ತಮಾರ್ಕಂಡೇಯ :**

ಈ ಚಿತ್ರವನ್ನು ಬಾಗಲಕೋಟೆಯ ಶ್ರೀ ಕೃಷ್ಣದಾಸ್ ಹ. ಗೋಣಿಯವರ ಮನೆಯಿಂದ ಸಂಗ್ರಹಿಸಲಾಗಿದ್ದು ಚಿತ್ರ ಅಳತೆ ೪೫ x ೬೦ ಸೆಂಟಿಮೀಟರ ಅಳತೆಯನ್ನು ಹೊಂದಿದೆ. ಅಲ್ಪಾಯುಷ್ಯವನ್ನು ಪಡೆದುಕೊಂಡು ಜನ್ಮತಾಳಿದ ಮಾರ್ಕಂಡೇಯನು ತನ್ನ ಅಪಾರ ಶಿವಭಕ್ತಿಯಿಂದ ಶಿವನನ್ನು ಮೆಚ್ಚಿಸಿ ಮೃತ್ಯುವನ್ನು ಜಯಿಸಿದ ಪ್ರಸಂಗವನ್ನು ಚಿತ್ರಿಸಲಾಗಿದೆ. ಬ್ರಹ್ಮನ ಮಾನಸ ಪುತ್ರನಾದ ಭೃಗು ಮಹರ್ಷಿಯ ವಂಶದವನಾದ ಮಾರ್ಕಂಡೇಯನಿಗೆ ಶಿವನೆಂದರೆ ಪ್ರಾಣ. ಅವನನ್ನು ನಿತ್ಯ ಪೂಜೆಗೈದು ಅವನ ಮೆಚ್ಚುಗೆಗೆ ಪಾತ್ರನಾಗಿ ತನಗೆ ಒದಗಿದ ಮರಣವನ್ನು ಜಯಿಸಿದ ಸನ್ನಿವೇಶವನ್ನು ಚಿತ್ರಿಸಲಾಗಿದೆ.

ಈ ಕಲಾಕೃತಿಯು ಅತ್ಯಂತ ಭಾವನಾತ್ಮಕವಾಗಿ ಚಿತ್ರಿತಗೊಂಡಿದ್ದು ಚತುರ್ಭುಜನಾದಯಮನು ತನ್ನ ವಾಹನವಾದ ಕೋಣದ ಮೇಲೆ ಕುಳಿತಿದ್ದು ತನ್ನ ಪಾಶದಿಂದ ಮಾರ್ಕಂಡೇಯನನ್ನು ಎಳೆಯುತ್ತಿದ್ದು ಮಾರ್ಕಂಡೇಯನು ಶಿವಲಿಂಗವನ್ನು ಅಪ್ಪಿಕೊಂಡು ಶಿವನನ್ನು ನೆನೆಯುತ್ತಿದ್ದಾನೆ. ಈ ಪರಮಭಕ್ತನನ್ನು ಕಾಪಾಡುವಸಲುವಾಗಿ ಲಿಂಗದಿಂದ ಉದ್ಭವಿಸಿರುವ ಶಿವನು ತ್ರಿಶೂಲದಿಂದ ಕೋಣವನ್ನು ಮರ್ಧಿಸುತ್ತಿದ್ದು, ಶಿವನ ಎಡಗಾಲವನ್ನು ಲಿಂಗದಲ್ಲಿಟ್ಟಿದ್ದು ಬಲಗಾಲಿನಿಂದ ಕೋಣದ ಕೋಡಿಗೆ ಒದೆಯುತ್ತಿರುವ ದೃಶ್ಯವಿದೆ. ಇಲ್ಲಿ ಶಿವನು ಭಾವಾವೇಶದಿಂದಿರುವುದು ಕಂಡುಬರುತ್ತದೆ. ಕಿರೀಟಧಾರಿಯಾದ ಶಿವನು ಮುಂದಿನ ಎರಡೂ ಕೈಗಳಿಂದ ತ್ರಿಶೂಲದಿಂದ ಕೋಣನಿಗೆ ತಿವಿಯುತ್ತಿದ್ದು ಹಿಂದಿನ ಕೈಗಳಲ್ಲಿ ಢಮರು ಮತ್ತು ಹರಿಣಿಯನ್ನು ಹಿಡಿದುಕೊಂಡಿರುವನು. ತಿಳಿಗೆಂಪು ವರ್ಣವನ್ನು ದೇಹಕ್ಕೆ ಲೇಪಿಸಲಾಗಿದೆ. ಸೊಂಟದ ಭಾಗಕ್ಕೆ ಹುಲಿಯ ಚರ್ಮ ಕೊರಳಲ್ಲಿ ರುದ್ರಾಕ್ಷಿಸರ ಹಾಕಿದ್ದು ಬೆನ್ನು ಹಿಂದುಗಡೆ ಕೆಂಪು ಶಲ್ಯ ಅದರಲ್ಲಿ ಬಿಳಿಯ ಚುಕ್ಕೆಗಳಿವೆ. ನೀಲಿವರ್ಣದ ಲಿಂಗವನ್ನು ಅಪ್ಪಿಕೊಂಡಿರುವ ಮಾರ್ಕಂಡೇಯನು ಗುಲಾಬಿ ವರ್ಣದಲ್ಲಿದ್ದು ಸೊಂಟಕ್ಕೆ ಕೆಂಪುವರ್ಣದ ಪಂಚೆಯನ್ನು ಸುತ್ತಿಕೊಂಡಿರುವನು. ಯಮನನ್ನು ನೀಲಿವರ್ಣದಿಂದ ರಚಿಸಿದ್ದು ಹಳದಿವರ್ಣದ ದೋತರ ಬಿಳಿಯ ವರ್ಣದ ಶಲ್ಯ ಅದರಲ್ಲಿ ನೀಲಿ ಚುಕ್ಕೆಗಳಿವೆ. ವಿವಿಧ ಆಭರಣಗಳಿಂದ ಅಲಂಕಾರಗೊಂಡಿರುವ ಯಮ ತನ್ನ ಮುಂದಿನ ಎರಡೂ ಕೈಗಳಿಂದ ಮೃತ್ಯುಪಾಶವನ್ನು ಹಿಡಿದಿದ್ದು ಹಿಂದಿನ ಕೈಗಳಲ್ಲಿ ಗದೆಯನ್ನು ಮತ್ತು ಶಂಖವನ್ನು ಹಿಡಿದುಕೊಂಡಿರುವನು. ಕೆಂಪುವರ್ಣದ ಭೂದೃಶ್ಯವನ್ನು ಹಳದಿವರ್ಣದ ಆಕಾಶವನ್ನು ಮೇಲ್ಗಡೆ ಎರಡೂ ಬದಿಗಳಿಂದ ಒಳಗಡೆಯಲ್ಲಿ ಹಸಿರು ವರ್ಣದ ಮರಗಳನ್ನು ಅವುಗಳಲ್ಲಿ ಕೆಂಪುವರ್ಣದ ಹೂವುಗಳು ಇದ್ದು ಅದರ ಮೇಲೆ ಬಿಳಿವರ್ಣದ ಚುಕ್ಕೆಗಳನ್ನು ಮಾಡಿ ಅಲಂಕಾರಗೊಳಿಸಲಾಗಿದೆ. ಸಂಯೋಜನಾದೃಷ್ಟಿಯಿಂದ ವರ್ಣಗಳ ದೃಷ್ಟಿಯಿಂದ ಉತ್ತಮವಾಗಿ ಗಾಜಿನ ಮೇಲೆ ಚಿತ್ರ ಮೂಡಿಬಂದಿದೆ.

**೬. ವೀರಭದ್ರನ ಚಿತ್ರ :**

ವೀರಭದ್ರನು ಶಿವನ ರುದ್ರಾವತಾರ ದ್ರಾಕ್ಷಾಯಿಣಿಯು ದಕ್ಷಯಜ್ಞ ಕುಂಡದಲ್ಲಿ ದೇಹಬಿಟ್ಟ ಸಮಾಚಾರವನ್ನು ನಾರದನಿಂದ ಕೇಳಿ ಶಿವನು ಸಿಟ್ಟಿನಿಂದ ತನ್ನ ಜಟೆಯಿಂದ ಒಂದು ಹಿಡಿ ಕೂದಲನ್ನು ಚೆಲ್ಲಲು ಒಂದು

ಭಯಂಕರ ಶಕ್ತಿಯು ಅಲ್ಲಿ ಜನಿಸಿತು. ಆ ಶಕ್ತಿಯೇ ವೀರಭದ್ರ. ಈ ಚಿತ್ರದಲ್ಲಿ ವೀರಭದ್ರನು ಆರು ಕೈಗಳನ್ನು ಹೊಂದಿದ್ದು ಬಲಗೈಯಲ್ಲಿ ಕತ್ತಿ, ತ್ರಿಶೂಲ, ಪರಶು, ಮೂರು ಎಡಗೈಯಲ್ಲಿ ಗುರಾಣಿ, ಡಮರು, ಗದೆಗಳನ್ನು ಹಿಡಿದು ಆವೇಶವನ್ನು ವ್ಯಕ್ತಪಡಿಸುತ್ತಿರುವಂತೆ ಬಿಂಬಿತನಾಗಿದ್ದಾನೆ. ಕ್ರೋಧದ ಸಂಕೇತವಾಗಿರುವ ಕೆಂಪು ವರ್ಣವನ್ನೇ ವೀರಭದ್ರನ ದೇಹಕ್ಕೆಲ್ಲ ಲೇಪಿಸಿದ್ದು ಸೊಂಟದಲ್ಲಿ ಹಳದಿ ವರ್ಣವನ್ನು ಹೊಂದಿದ ಚಡ್ಡಿಯಂತೆ ತೊಟ್ಟಿದ್ದು ಹಸಿರು ಶಲ್ಯ ಕೊರಳಲ್ಲಿ ತಲೆ ಬುರುಡೆಗಳ ಸರವನ್ನು ಹಾಕಿಕೊಂಡಿದ್ದು ವೀರಾವೇಶದ ಭಾವಬಂಗಿಯಲ್ಲಿ ನಿಂತಿರುವನು. ಕೋಪದ ಕಣ್ಣುಗಳು, ಹುರಿಮೀಸೆ, ತಲೆಯ ಹಿಂದುಗಡೆಯಲ್ಲಿ ದಗದಗಿಸುವ ಅಗ್ನಿ ಅವನ ಕೋಪವನ್ನು ಪ್ರತಿನಿಧಿಸುತ್ತಿವೆ. ದೇಹದ ತುಂಬಾ ಮೂರು ಬೆರಳುಗಳ ವಿಭೂತಿ ಧರಿಸಿರುವುದು ಶಿವನ ಸಂಕೇತವನ್ನು ಪ್ರತಿನಿಧಿಸುವಂತಿದೆ ಉತ್ತಮವಾಗಿ ಗಾಜಿನ ಮೇಲೆ ಈ ಚಿತ್ರವು ಮೂಡಿಬಂದಿದೆ.

**೭.ಬಸವೇಶ್ವರರ ಚಿತ್ರ :**

ಕಿರೀಟದಾರಿಯಾಗಿರುವ ಬಸವೇಶ್ವರರು ಶ್ವೇತವರ್ಣದ ಕುದುರೆಯ ಮೇಲೆ ಸವಾರಿ ಮಾಡುತ್ತಿರುವ ಚಿತ್ರವನ್ನು ಚಿತ್ರಿಸಲಾಗಿದೆ. ಇಲ್ಲಿ ಬಸವೇಶ್ವರರು ಬಂಗಾರ ವರ್ಣದ ಕಿರೀಟವನ್ನು ಧರಿಸಿದ್ದು ಕೆಂಪು ವರ್ಣದ ಅಂಗಿ ಬಿಳಿವರ್ಣದ ದೋತರವನ್ನು ಉಟ್ಟುಕೊಂಡಿದ್ದು, ಕೊರಳಲ್ಲಿ ಕರಡಿಗೆಯನ್ನು ಹಾಕಿಕೊಂಡಿರುವರು. ನಡುವಿಗೆ ಕತ್ತಿಯನ್ನು ಕಟ್ಟಿಕೊಂಡಿದ್ದು ಕುದುರೆಯ ಲಗಾಮನ್ನು ಹಿಡಿದುಕೊಂಡು ಕುದುರೆಯನ್ನು ನಿಯಂತ್ರಿಸುತ್ತಿರುವ ದೃಶ್ಯವನ್ನು ಚಿತ್ರಿಸಲಾಗಿದೆ. ಗಾಜಿನ ಮೇಲೆ ಮೂಡಿರುವ ಈ ಚಿತ್ರದಲ್ಲಿ ಕುದುರೆಯು ಕೂಡಾ ಪ್ರಮಾಣಬದ್ಧವಾಗಿ ಚಲನೆಯ ಭಂಗಿಯಲ್ಲಿ ಸುಂದರವಾಗಿ ಮೂಡಿಬಂದಿದೆ.

**೮. ಇಷ್ಟಲಿಂಗ ಪೂಜಾನಿರತಳಾದ ನೀಲಾಂಬಿಕೆಯ ಚಿತ್ರ :**

ನೀಲಾಂಬಿಕೆಯು ಇಷ್ಟಲಿಂಗ ಪೂಜಾನಿರತಳಾದ ದೃಶ್ಯವಾಗಿದ್ದು, ಎಡಗೈಯಲ್ಲಿ ಇಷ್ಟಲಿಂಗವನ್ನು ಇಟ್ಟುಕೊಂಡಿದ್ದು, ಆಸನವೊಂದರ ಮೇಲೆ ಪದ್ಮಾಸನದಲ್ಲಿ ಕುಳಿತಿರುವಳು. ತದೇಕ ಚಿತ್ತದಿಂದ ಇಷ್ಟಲಿಂಗವನ್ನು ನೋಡುತ್ತ ಪೂಜಾಮಗ್ನಳಾಗಿರುವ ದೃಶ್ಯವಾಗಿದೆ. ಹಳದಿಸೀರೆಯನ್ನುಟ್ಟಿದ್ದು, ಕಪ್ಪು ರವಿಕೆಯನ್ನು ತೊಟ್ಟಿರುವಳು. ಅವಳ ಎಡಗಡೆಗೆ ದೀಪದ ಸಮೆ ಇದ್ದು, ಎದುರುಗಡೆ ಮತ್ತು ಬದಿಯಲ್ಲಿ ಪೂಜಾಸಾಮಗ್ರಿಗಳನ್ನು ಚಿತ್ರಿಸಲಾಗಿದೆ. ಕೆಂಪುವರ್ಣದ ಬಟ್ಟೆ(ಪರದೆ)ಯನ್ನು ಎಡಗಡೆ ಬಿಡಲಾಗಿದ್ದು ಹಿಂದುಗಡೆ ನೀಲಿವರ್ಣದ ಅರಮನೆಯ ದೃಶ್ಯವಿದೆ ತಿಳಿ ಗುಲಾಬಿ ವರ್ಣದ ನೆಲವನ್ನು ಚಿತ್ರಿಸಲಾಗಿದೆ.

ಈ ರೀತಿಯಾಗಿ ವೀರಶೈವ ಚಿತ್ರಗಳು ಗಾಜಿನ ಮೇಲೆ ಚಿತ್ರಿತಗೊಂಡಿವೆ ಅಲ್ಲದೇ ಇನ್ನೂ ಹಲವಾರು ಇಂತಹ ಚಿತ್ರಗಳನ್ನು ಕರ್ನಾಟಕದಾದ್ಯಂತ ಕಾಣಬಹುದಾಗಿದೆ.

## ಗಂಜೀಫಾದಲ್ಲಿ ವೀರಶೈವ ಚಿತ್ರಕಲೆ

ಭಾರತದ ಗಂಜೀಫಾ ಚಿತ್ರಕಲೆಯಲ್ಲಿ ವೈವಿಧ್ಯಕ್ಕೆ ಎಣೆಯಿಲ್ಲ ಪ್ರಾದೇಶಿಕ ಶೈಲಿಗಳಲ್ಲದೆ ಸ್ತ್ರೀಯರು ಆಯಾ ಅರಸರು ಅವರ ಮಂತ್ರಿಗಳು, ಜಾಗಿರದಾರರು ತಮ್ಮ ತಮ್ಮ ಅಭಿರುಚಿಗೆ ತಕ್ಕಂತೆ ಚಿತ್ರಗಳನ್ನು

ಮಾಡಿಸಿಕೊಳ್ಳುತ್ತಿದ್ದರು ದೇವಾನುದೇವತೆಗಳು, ಸಂಕೇತಗಳು ಆಯಾಪ್ರದೇಶಗಳ ಸಂಸ್ಕೃತಿಯ ಹಿನ್ನೆಲೆಯಲ್ಲಿ ಅನೇಕ ಶೈಲಿಯ ಗಂಜೀಫಾಚಿತ್ರಗಳನ್ನು ಚಿತ್ರಿಸಿರುವುದು ಕಂಡುಬರುತ್ತದೆ. ಕ್ರೀಡಾ ಪ್ರಧಾನವಾಗಿ ಆಡುತ್ತಿದ್ದ ಈ ಕಲೆಗೆ ಮೊಘಲ್‌ರ ಪೂರ್ವದಲ್ಲಿ ದೇವರು ಪುರಾಣಗಳಿಗೆ ಸಂಬಂಧಿಸಿದ್ದು ಗಂಜೀಫಾ ಚಿತ್ರಗಳ ವಸ್ತುಗಳಾಗಿದ್ದವು. ಈ ಆಟಕ್ಕೆ ಸ್ಫೂರ್ತಿ ಶಿವನ ಢಮರು, ಶಂಖ, ಚಕ್ರ, ಅಷ್ಟದಿಕ್ಪಾಲಕರು, ದಶಾವತಾರಗಳಿಂದ ಗಂಜೀಫಾ ಎಲೆಗಳು ಅಲಂಕೃತವಾಗುತ್ತಿದ್ದವು.

ಮೈಸೂರಿನ ಮುಮ್ಮಡಿಕೃಷ್ಣರಾಜ ಒಡೆಯರ್ ಅವರು ಸ್ವತಃ ಗಂಜೀಫಾ ಕಲಾ ಕೃತಿಗಳನ್ನು ರಚಿಸುವುದರೊಂದಿಗೆ ಈ ಕಲೆಗೆ ಪ್ರೋತ್ಸಾಹ ನೀಡಿ ಬೆಳಸಿದರು. ಸದ್ಯದಲ್ಲಿ ಈ ಕಲೆಯ ಕಲಾವಿದರಾದ ಶ್ರೀ ರಘುಪತಿಭಟ್, ಶ್ರೀಮತಿ ಸುಧಾವೆಂಕಟೇಶ್, ಶ್ರೀಮತಿ ಚಂದ್ರಿಕಾಪದ್ಮನಾಭನ್ ಕಲಾವಿದರು ಈ ಚಾರಿತ್ರಿಕ ಹಿನ್ನೆಲೆಯುಳ್ಳ ಗಂಜೀಫಾ ಚಿತ್ರಕಲೆಯನ್ನು ಉಳಿಸಿಬೆಳಸಿಕೊಂಡು ಬರುತ್ತಿದ್ದಾರೆ.

**ಬೆಲೆಬಾಳುವ ಗಂಜೀಫಾ ಎಲೆಗಳು :**

ದುಬಾರಿ ವಸ್ತುಗಳನ್ನು ಬಳಸಿ ಬೆಲೆಬಾಳುವ ಗಂಜೀಫಾ ಎಲೆಗಳನ್ನು ತಯಾರಿಸಲು ದಂತ, ಆಮೆ, ಚಿಪ್ಪು, ಮದರ್‌ಆಫ್–ಪರ್ಲ, ಕಪ್ಪೆಚಿಪ್ಪು ಒಳಭಾಗದಲ್ಲಿ ನಯವಾದ ಹಾಗೂ ಮೇಲ್ಮೈಯುಳ್ಳ ಬಣ್ಣಸೂಸುವ ಹೊಳಪುಳ್ಳ ಪದರ ಮತ್ತು ಎನಾಮಲ್ ಪ್ರಸಕ್ತ ಲೋಹಗಳನ್ನು ಉಪಯೋಗಿಸುತ್ತಿದ್ದರು. ದಂತದ ಎಲೆಗಳನ್ನು ಕೊರೆದ ಅಥವಾ ಕೆತ್ತನೆ ಮಾಡಿದವುಗಳಾಗಿರುವವು.

**ಅಗ್ಗದ ಗಂಜೀಫಾಗಳು :**

ಅಗ್ಗದ ವಸ್ತುಗಳನ್ನು ಬಳಸಿ ಕಡಿಮೆ ಖರ್ಚಿನ ಎಲೆಗಳನ್ನು ಕಡ್ಡಿ, ಕಾಗದ, ರದ್ದಿ, ಚಿಂದಿಬಟ್ಟೆಗಳನ್ನು, ಚರ್ಮ, ಮೀನಿನ ಪೊರೆ ಮತ್ತು ತಾಳೆಮರದ ಎಲೆಗಳನ್ನು ಉಪಯೋಗಮಾಡಿ ಗಂಜೀಫಾ ಎಲೆಗಳನ್ನು ತಯಾರಿಸುತ್ತಿದ್ದರು.[೩] ಎಂಬುದು ತಿಳಿದುಬರುತ್ತದೆ.

**ಟೆಂಪರಾ ವರ್ಣಗಳು :**

ಟೆಂಪರಾ ವರ್ಣಗಳನ್ನು ಗಂಜೀಫಾ ಚಿತ್ರರಚನೆಯಲ್ಲಿ ಹೆಚ್ಚು ಪ್ರಮಾಣದಲ್ಲಿ ಬಳಸಿರುವುದನ್ನು ಇಂದು ಲಭ್ಯವಾಗಿರುವ ಹಳೆಯ ಗಂಜೀಫಾ ಚಿತ್ರಗಳಿಂದ ತಿಳಿದುಬರುತ್ತದೆ. ಮೊಟ್ಟೆಯ ಹಳದಿ ಲೋಳೆಯ ಭಾಗದೊಂದಿಗೆ ಪುಡಿ ವರ್ಣವನ್ನು ಬೆರೆಸಿ ಅಂಟಿನ ನೀರಿನೊಂದಿಗೆ ತೆಳುವಾಗಿ ಮಾಡಿಕೊಂಡು ಚಿತ್ರಕ್ಕೆ ಬಳಸಲಾಗಿದೆ.

**ಅಂಟು ದ್ರಾವಕಗಳು :**

ಗಂಜೀಫಾ ಚಿತ್ರಗಳ ರಚನೆಯಲ್ಲಿ ಚಿತ್ರಕಲಾವಿದರು ಬೇರೆ ಬೇರೆ ಮೂಲಗಳಿಂದ ತಯಾರಿಸಲಾದ ಅಂಟು ದ್ರಾವಕಗಳನ್ನು ಬಳಸಿರುವರು. ಮೀನು ಸರಿಯನ್ನು ಚೆನ್ನಾಗಿ ಕಾಯಿಸಿ ಹುಡಿ ವರ್ಣಗಳೊಂದಿಗೆ ಬೆರೆಸಿ ವರ್ಣಗಳನ್ನು ತಯಾರು ಮಾಡುತ್ತಾರೆ. ಈ ರೀತಿ ತಯಾರಿಸಿದ ವರ್ಣವನ್ನು ಯಾವುದೇ ಆಧಾರದ

೩. ಡಾ.ಶಂಕರಪ್ಪ ಕುಂದಗೋಳ : ಕರ್ನಾಟಕದ ಗಂಜೀಫಾ ಚಿತ್ರಕಲೆ : ಪುಟ ೩೮, ಅಪ್ರಕಟಿತ ಪಿ.ಹೆಚ್.ಡಿ. ಮಹಾಪ್ರಬಂಧ ಕನ್ನಡ ವಿ.ವಿ.ಹಂಪಿ.

ಮೇಲೆ ಬಳಸಲಾಗುತ್ತದೆ. ಮರದ ಬೀಜಗಳಿಂದಲೂ ಅಂಟು ದ್ರಾವಣವನ್ನು ತಯಾರಿಸುತ್ತಾರೆ. ಬಂಗಾರದ ಎಲೆ, ಬೆಳ್ಳಿ ಎಲೆಗಳನ್ನು ಅಂಟಿಸಲು ಈ ಪಾರದರ್ಶಕ ಅಂಟು ದ್ರಾವಣವನ್ನು ಬಳಸುವರು.

**ಗಂಜೀಫಾ ಚಿತ್ರ ವಿಧಾನ :**

ಗಂಜೀಫಾ ಚಿತ್ರಕಲಾವಿದರು ಕಾರ್ಡಿನ ಮೇಲೆ ಚಿತ್ರದ ರೇಖಾ ಚಿತ್ರಗಳನ್ನು ರಚಿಸಿಕೊಂಡು ಅದನ್ನು ಕಾರ್ಡಿನ ಮೇಲೆ ಇಟ್ಟು ಪ್ರತಿಕೃತಿಯನ್ನು ಮಾಡಿಕೊಳ್ಳುತ್ತಿದ್ದರು. ಅದೇ ರೇಖಾಚಿತ್ರವನ್ನು ಕಾಯ್ದಿಟ್ಟುಕೊಂಡು ಹಲವಾರು ಚಿತ್ರಗಳನ್ನು ರಚಿಸಲು ಬಳಸಿಕೊಳ್ಳುತ್ತಿದ್ದರು. ಇಂದೂ ಸಹಿತ ಗಂಜೀಫಾ ಚಿತ್ರದ ಕಲಾವಿದರು ಮೊದಲು ರೇಖಾ ಚಿತ್ರಗಳನ್ನು ಸಿದ್ಧಪಡಿಸಿಕೊಂಡು ನಂತರ ತಮಗೆ ಬೇಕಾದ ಆಕಾರದಲ್ಲಿ ಪರಿವರ್ತಿಸಿಕೊಂಡು ಚಿತ್ರರಚನೆ ಮಾಡುತ್ತಿರುವರು ಈ ಚಿತ್ರರಚನಾ ಪದ್ಧತಿಯಲ್ಲಿ ರೇಖಾ ಚಿತ್ರಗಳ ಮಹತ್ವ ಬಹಳವಿದೆ. ಗಂಜೀಫಾದ ಎಲೆಗಳನ್ನು ಆಯಾ ಪ್ರದೇಶದಲ್ಲಿ ಸಿಗುವ ವಸ್ತುಗಳ ಮೂಲಕ ತಯಾರಿಸಲಾಗುತ್ತಿದೆ. ಕಾಗದದ ದಪ್ಪನೆಯ ಕಾರ್ಡುಗಳನ್ನು ಗಂಜಿಯಿಂದ ಅಂಟಿನಂತಹ ದ್ರವಪದಾರ್ಥದಿಂದ ಒಂದರ ಮೇಲೊಂದು ಅಂಟಿಸಿ ಸ್ವಲ್ಪ ದಪ್ಪವಾದ ನಂತರ ಅದರ ಮೇಲೆ ಶುಬ್ರವಾದ ಹಾಳೆಯನ್ನು ಲೇಪಿಸಿ ಇನ್ನುಳಿದ ಭಾಗವನ್ನು ದುಂಡಗೆ, ಆಯತ, ಚೌರಸಾಕಾರದಲ್ಲಿ ತಮಗೆ ಬೇಕಾದ ರೀತಿಯಲ್ಲಿ ಕತ್ತರಿಸಿಕೊಳ್ಳುತ್ತಿದ್ದರು. ಬಟ್ಟೆಯದಾದರೆ ತೆಳ್ಳನೆಯ ಬಟ್ಟೆಯ ಮೇಲೆ ಬಟ್ಟೆಯನ್ನು ಅಂಟಿಸಿ ತಮಗೆ ಬೇಕಾದ ಆಕಾರವನ್ನು ಸಿದ್ಧಪಡಿಸಿಕೊಳ್ಳುತ್ತಿದ್ದರು. ಅದರ ಮೇಲೆ ರೇಖಾಚಿತ್ರವನ್ನು ರಚಿಸಿಕೊಂಡು ಅದಕ್ಕೆ ಟೆಂಪರಾವರ್ಣದಿಂದ ಕೃತಿಯನ್ನು ಪೂರ್ತಿಗೊಳಿಸುತ್ತಿದ್ದರು.

**೧. ದಕ್ಷಿಣಾಮೂರ್ತಿ ಶಿವ :**

ಶಿವನು ಚತುರ್ಭುಜನಾಗಿದ್ದು, ಹಳದಿವರ್ಣವನ್ನು ಹೊಂದಿರುವನು. ಬಂಗಾರದ ಪೀಠವೊಂದರ ಮೇಲೆ ಉತ್ಕಟಾಸನದಲ್ಲಿ ಕುಳಿತಿದ್ದು ವೃತ್ತಾಕಾರದಲ್ಲಿ ಚಿತ್ರಿಸಲಾಗಿದೆ. ಮುಂದಿನ ಕೈಗಳು ಅಭಯಮುದ್ರೆಯನ್ನು ಹೊಂದಿದ್ದು ಹಿಂದಿನ ಕೈಗಳಲ್ಲಿ ಕಟಕ ಮುದ್ರೆಯಲ್ಲಿದೆ ಇನ್ನೊಂದರಲ್ಲಿ ವೀಣೆಯನ್ನು ಹಿಡಿದುಕೊಂಡಿರುವನು ಶಿವನು ಹುಲಿಯ ಚರ್ಮವನ್ನು ಸೊಂಟಕ್ಕೆ ಸುತ್ತಿಕೊಂಡಿರುವನು. ಯೋಗಪಟ್ಟಿಯನ್ನು ಕಾಲಿಗೆ ಕಟ್ಟಲಾಗಿದೆ. ಆತನಿಗೆ ಜಟಾಮುಕುಟವಿದ್ದು ಉಳಿದ ಕೂದಲು ಹಿಂದಿನಿಂದ ಎಡಬಲಗಳಲ್ಲಿ ಜೋತುಬಿದ್ದಿವೆ ತಲೆಯ ಬಲಭಾಗದಲ್ಲಿ ಮೇಲ್ಗಡೆ ಚಂದ್ರನನ್ನು ಚಿತ್ರಿಸಲಾಗಿದೆ. ಕೆಳಗಡೆಯ ಪೀಠದ ಮಧ್ಯದಲ್ಲಿ ಸಿಂಹವು ಅಡ್ಡದಾಗಿ ಕುಳಿತುಕೊಂಡಿದೆ ಈ ಪೀಠವನ್ನು ಚುಕ್ಕೆಗಳಿಂದ ಅಲಂಕರಿಸಲಾಗಿದೆ. ಶಿವನು ತಲೆಗೆ ಕಿರೀಟವನ್ನು ಹಾಗೂ ಕೊರಳು ಮತ್ತು ಕೈಗಳಲ್ಲಿ ಆಭರಣಗಳನ್ನು ಅಲಂಕಾರಿಕವಾಗಿ ಚಿತ್ರಿಸಲಾಗಿದೆ. ಶಿವನ ಹಿನ್ನೆಲೆಗೆ ಕಪ್ಪು ವರ್ಣವನ್ನು ಚಿತ್ರದ ವೃತ್ತವನ್ನು ಕೇಸರಿ ಮತ್ತು ಹಳದಿ ವರ್ಣದಲ್ಲಿ ಚಿತ್ರಿಸಲಾಗಿದೆ.

**೨. ಅರ್ಧನಾರೀಶ್ವರ :**

ಕೇಸರಿವರ್ಣದ ಅರ್ಧನಾರೀಶ್ವರನಿಗೆ ನಾಲ್ಕು ಕೈಗಳು ಮತ್ತು ಎರಡು ತಲೆಗಳನ್ನು ವಿಶೇಷವಾಗಿ ತೋರಿಸಿದ್ದು ಮುಂದಿನ ಕೈಗಳು ಅಭಯಮುದ್ರೆ ಮತ್ತು ವರದ ಮುದ್ರೆಯನ್ನು ಹೊಂದಿದ್ದು ಹಿಂದಿನ ಕೈಗಳಲ್ಲಿ

[illegible]

ಪಾತ್ರೆಯನ್ನು ಮತ್ತು ಕುಡಗೋಲನ್ನು ಹಿಡಿಯಲಾಗಿದೆ. ಬಲಭಾಗದಲ್ಲಿ ಮಹಿಳೆ ಎಡಭಾಗದಲ್ಲಿ ಪುರುಷನ ತಲೆಗಳಿದ್ದು ಮೇಲೆ ಎರಡು ಕಿರೀಟಗಳಿವೆ. ಪೀಠವೊಂದರ ಮೇಲೆ ಸಿಂಹಾಸನಾರೂಢನಾಗಿ ಪದ್ಮಾಸನದಲ್ಲಿ ಕುಳಿತಿರುವನು. ಹಳದಿವರ್ಣದ ದೋತರಧರಿಸಿದ್ದು ಕಪ್ಪುವರ್ಣದ ಶಲ್ಯವನ್ನು ಅಡ್ಡದಾಗಿ ಹಾಕಿಕೊಂಡಿರುವನು ಕುಳಿತಿರುವ ಪೀಠದ ಮಧ್ಯದಲ್ಲಿ ಕೆಳಗಡೆ ಏಡಿಯನ್ನು ಚಿತ್ರಿಸಲಾಗಿದೆ. ಹಳದಿವರ್ಣ ಏಡಿಗೆ ಕೆಂಪುವರ್ಣದ ರೇಖೆಗಳನ್ನು ಹಾಕಲಾಗಿದೆ. ಇದರ ಹಿನ್ನೆಲೆಯಲ್ಲಿ ಹಸಿರುವರ್ಣವನ್ನು ತುಂಬಲಾಗಿದೆ. ಸುತ್ತಲೂ ಕಪ್ಪುವರ್ಣದ ವೃತ್ತವನ್ನು ಹಾಗೂ ಹಳದಿವರ್ಣವನ್ನು ಪಟ್ಟಿಯಾಗಿ ಬಳಿಯಲಾಗಿದ್ದು ಅದರಲ್ಲಿ ಚುಕ್ಕೆಗಳಿಂದ ಅಲಂಕರಿಸಲಾಗಿದೆ.

**೩. ಶಿವಸೂಟ :**

ಆಯತಾಕಾರದಲ್ಲಿ ಚಿತ್ರಿಸಿದ್ದು ಶಿವನ ದೇಹ ನೀಲಿವರ್ಣದಲ್ಲಿದ್ದು ತಲೆಯಮೇಲೆ ಕಿರೀಟವನ್ನು ಧರಿಸಿದ್ದು ಮಂಟಪವೊಂದರಲ್ಲಿ ಪದ್ಮಾಸನದಲ್ಲಿ ಕುಳಿತಿರುವನು. ಹಳದಿವರ್ಣದ ಧೋತರವನ್ನುಟ್ಟಿದ್ದು ಕೆಂಪು ವರ್ಣದ ಶಲ್ಯವನ್ನು ಧರಿಸಲಾಗಿದ್ದು, ಚತುರ್ಬುಜಧಾರಿಯಾಗಿ ಕುಳಿತಿರುವನು. ಮುಂದಿನ ಎರಡೂ ಕೈಗಳು ವರದ ಮುದ್ರೆ ಮತ್ತು ಅಭಯ ಮುದ್ರೆಯನ್ನು ಹೊಂದಿದ್ದು, ಹಿಂದಿನ ಎರಡೂ ಕೈಗಳಲ್ಲಿ ಢಮರು ಮತ್ತು ತ್ರಿಶೂಲಗಳನ್ನು ಹಿಡಿದುಕೊಂಡಿರುವನು. ಶಿವನ ತಲೆಯ ಮೇಲೆ ಚಿತ್ರವನ್ನು ಮಾಡಲಾಗಿದ್ದು ಈ ಮಂಟಪದ ಸುತ್ತಲೂ ಹಳದಿ ವರ್ಣವನ್ನು ತುಂಬಲಾಗಿದ್ದು ಕಮಾನಿನ ಮಾಡಿನಾಕಾರವು ಕಡುಗೆಂಪು ವರ್ಣದಲ್ಲಿ ಮಾಡಲಾಗಿದೆ ಜಾಮಿತಿ ನಕ್ಷೆಗಳಿಂದ ಅಲಂಕಾರಿಕವಾಗಿ ಚಿತ್ರಿಸಲಾಗಿದೆ.

**೪. ಪಾರ್ವತಿ :**

ಪಾರ್ವತಿಯ ದೇಹವನ್ನು ಹಸಿರುವರ್ಣದಿಂದ ಚಿತ್ರಿಸಿದ್ದು ಕೆಂಪುವರ್ಣದ ಸೀರೆ-ಕುಪ್ಪಸವನ್ನು ಮಾಡಲಾಗಿದೆ. ಕರ್ಣಕುಂಡಲ, ಕರ್ಣಾಭರಣ, ಭುಜಕೀರ್ತಿ ಹಾಗೂ ಒಡ್ಯಾಣವನ್ನು ಧರಿಸಿ ಚತುರ್ಭುಜೆಯಾಗಿ ಅಲಂಕಾರಿಕ ಮಂಟಪವೊಂದರಲ್ಲಿ ಪದ್ಮಾಸನಸ್ಥಳಾಗಿರುವಳು. ಹಿಂದಿನ ಎರಡೂ ಕೈಗಳಲ್ಲಿ ಗುಲಾಬಿ ಹೂವುಗಳನ್ನು ಹಿಡಿದುಕೊಂಡಿದ್ದು, ಮುಂದಿನ ಎರಡು ಕೈಗಳಲ್ಲಿ ವರದ ಮುದ್ರೆ ಮತ್ತು ಅಭಯ ಮುದ್ರೆಯನ್ನು ಹೊಂದಿರುವಳು. ಮಂಟಪದ ಹಿಂಭಾಗದಲ್ಲಿ ಹಳದಿವರ್ಣವನ್ನು ತುಂಬಲಾಗಿದೆ. ಕಂದುಗೆಂಪುವರ್ಣದ ಅಲಂಕಾರಿಕ ಪ್ರಭಾವಳಿ ಶೋಭಿತಗೊಂಡಿದೆ. ಪಾರ್ವತಿಯ ತಲೆಯ ಮೇಲೆ ಛತ್ರವನ್ನು ಕೆಂಪು ವರ್ಣದಲ್ಲಿ ಮಾಡಲಾಗಿದೆ. ಕಂದುಗೆಂಪು ವರ್ಣದಲ್ಲಿ ಮಾಡಿನಾಕಾರದಲ್ಲಿ ಕಮಾನನ್ನು ಮಾಡಲಾಗಿದೆ.

## ತೊಗಲು ಗೊಂಬೆಯ ವೀರಶೈವ ಚಿತ್ರಕಲೆ

ತೊಗಲುಗೊಂಬೆ ಹೆಸರೇ ಹೇಳುವಂತೆ ಚರ್ಮದಿಂದ ಮಾಡಿದ್ದು ಇದು ಅತೀ ಪುರಾತನವಾದ ಕಲೆ ಆದರೆ ಎಷ್ಟು ಪ್ರಾಚೀನವೆಂಬುದು ನಿರ್ದಿಷ್ಟವಾಗಿ ತಿಳಿದಿಲ್ಲ ಆದರೆ ಕ್ರಿ.ಪೂ.೩ನೇ ಶತಮಾನದಲ್ಲಿಯೇ ತೊಗಲುಗೊಂಬೆಯ ಆಟವು ಆಂದ್ರದಲ್ಲಿ ಪ್ರಚಾರದಲ್ಲಿತ್ತು ಎಂಬ ಆಧಾರಗಳಿವೆ ಈ ಕಲೆ ಶಾತವಾಹನ ಪಲ್ಲವ, ಚಾಲುಕ್ಯ, ವಿಜಯನಗರ, ತಂಜಾವೂರು ರಾಜರ ಕಾಲದಲ್ಲಿ ಅತ್ಯಂತ ಉನ್ನತ ಮಟ್ಟವನ್ನು ಮುಟ್ಟಿತ್ತು ಭಾರತೀಯ

ಈ ಕಲೆ ಆಗ್ನೇಯ ಏಷಿಯಾವನ್ನು ಪ್ರವೇಶಿಸಿ ಅಲ್ಲಿಯೂ ಈ ಕಲೆಗೆ ಬಹಳ ಆದರಣೆ ದೊರೆತು ಜನಪ್ರಿಯ ಕಲೆಯಾಗಿ ಹೊರಹೊಮ್ಮಿತು. ಈ ತೊಗಲು ಗೊಂಬೆ ಆಟ ಪ್ರಾಚೀನ ಕಲೆಯಷ್ಟೇ ಅಲ್ಲ ಅದು ಸಂಸ್ಕೃತನಾಟಕದ ಉಗಮಕ್ಕೂ ಕಾರಣವಾಗಿದೆ. ಎಂದು ವಿದ್ವಾಂಸರು ಹೇಳಿರುವರು.[೪]

ಈ ತೊಗಲು ಗೊಂಬೆಯಾಟವು ಇಂದಿನವರೆಗೂ ವ್ಯಕ್ತಿಯಿಂದ ವ್ಯಕ್ತಿಗೆ ಕುಟುಂಬ ಸಮುದಾಯಕ್ಕೆ ಹೀಗೆ ಆಯಾ ಪ್ರಾದೇಶಿಕ ಅಂಶಗಳೊಂದಿಗೆ ಬೆಳೆದುಬಂದಿದೆ. ಈ ತೊಗಲುಗೊಂಬೆಯಾಟವನ್ನು ನಮ್ಮ ಪೂರ್ವಜರು ಧರ್ಮ ಪ್ರಚಾರದ ಸಾಧನವಾಗಿ ಸಮಾಜವನ್ನು ರೂಪಿಸುವಲ್ಲಿ ಮನರಂಜನೆಗಾಗಿ ಕಲಾತ್ಮಕ ಅಭಿವ್ಯಕ್ತಿಗಾಗಿ ರಾಜಕೀಯ ಉದ್ದೇಶಕ್ಕಾಗಿ ಬಳಸಿಕೊಂಡಿರುವುದು ತಿಳಿದುಬರುತ್ತದೆ. ಧರ್ಮಾಭಿಮಾನದ ಹೆಜ್ಜೆಗಳನ್ನು ಗುರುತಿಸುವ ಹಿನ್ನೆಲೆಯಲ್ಲಿ ಪ್ರಸ್ತುತ ವೀರಶೈವ ಪರಂಪರೆಯ ಚಿತ್ರಗಳ ಪ್ರಾಚೀನ ಸಾಂಸ್ಕೃತಿಕ ಸಂಪತ್ತನ್ನು ತಿಳಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗುವುದು.

ತೊಗಲುಗೊಂಬೆಯಾಟವನ್ನು ಪ್ರಮುಖವಾದ ವೃತ್ತಿಯೆಂದೇ ತಿಳಿದು ಈ ವರೆಗೂ ಬೆಳಸಿಕೊಂಡು ಬಂದವರು "ಕಿಳ್ಳೇ ಕ್ಯಾತರು". ಈ ತೊಗಲುಗೊಂಬೆಗಳ ತಯಾರಿಕೆಯ ನಿರ್ಮಾಣ. ವಿಧಾನ ಕುಶಲತೆ ಮತ್ತು ತಾಂತ್ರಿಕತೆ ರಚನೆಯ ವಿಧಾನ ಎಲ್ಲರಿಗೂ ಬರುವಂತಹದಲ್ಲ ತೊಗಲುಗೊಂಬೆ ರಚಿಸುವವರಿಗೆ ತಾಳ್ಮೆ, ಶ್ರದ್ಧೆ, ಭಕ್ತಿ ಮತ್ತು ಸಂಯಮ ಬಹಳ ಮುಖ್ಯವಾಗುತ್ತದೆ.

**ಚಿತ್ರರಚನಾ ವಿಧಾನ :**

ಹದಮಾಡಿ ಸಿದ್ಧಪಡಿಸಿದ ಚರ್ಮದಮೇಲೆ ತಮಗೆ ಬೇಕಾದ ಪ್ರಸಂಗಗಳಿಗೆ ಬೇಕಾದ ಚಿತ್ರಗಳನ್ನು ಬಿಡಿಸುತ್ತಾರೆ. ಈ ಚರ್ಮದಮೇಲೆ ಮೊದಲು ಡಬ್ಬಣದಂತಹ ಕಡ್ಡಿಯಿಂದ ಗೀರಿನಂತೆ ಗೆರೆಹಾಕಿಕೊಂಡು ಚಿತ್ರ ಬಿಡಿಸಿಕೊಳ್ಳುವುದು, ಗೊಂಬೆಗಳ ಗಾತ್ರಕ್ಕನುಗುಣವಾಗಿ ರಂಧ್ರಮಾಡುವುದು, ಬಿದಿರಿನ ಕಡ್ಡಿಯಿಂದ ಮಾಡಿದ ಲೇಖನಿಯಂತಹ ಸಾಧನದಿಂದ ಕಪ್ಪುವರ್ಣದಲ್ಲಿ ಅದ್ದಿ ಮೊದಲು ಹಾಕಿದ ಗೆರೆಗಳ ಮೇಲೆ ಮತ್ತೇ ಸ್ಪಷ್ಟಚಿತ್ರಗಳನ್ನು ಚಿತ್ರಿಸಿಕೊಳ್ಳುತ್ತಾರೆ. ಕೊನೆಗೆ ನಡುವಿನ ವಿವಿಧ ಅಂಗಾಂಗ ಭಾಗಗಳಿಗೆ ಅರಳಿಸುತ್ತಿದ್ದ ಕಡ್ಡಿಯನ್ನು ಕುಂಚದಂತೆ ಬಳಸಿ ತಕ್ಕುದಾದ ವರ್ಣವನ್ನು ತುಂಬುತ್ತಾರೆ. ಗೊಂಬೆಗಳನ್ನು ತೆರೆಯ ಮೇಲೆ ಎರಡೂ ಪಕ್ಕದಲ್ಲಿ ಆಡಿಸುವುದರಿಂದ, ವರ್ಣವನ್ನು ಗೊಂಬೆಯ ಎರಡೂ ಪಕ್ಕಕ್ಕೆ ಹಚ್ಚುತ್ತಾರೆ. ವರ್ಣವನ್ನು ಹಚ್ಚುವಾಗಲೂ ಬಹು ಎಚ್ಚರಿಕೆಯಿಂದ ಇರಬೇಕಾಗುತ್ತದೆ. ವರ್ಣವನ್ನು ತೆಳುವಾಗಿ ಮಾಡಿಕೊಂಡು ಸಮನಾಗಿ ಹಚ್ಚಬೇಕು, ಗಾಢವಾದರೆ ದೀಪದ ಬೆಳಕಿನಲ್ಲಿ ಗೊಂಬೆಗಳು ಚೆನ್ನಾಗಿ ಕಾಣುವುದಿಲ್ಲವೆಂಬುದನ್ನು ಗಮನದಲ್ಲಿಟ್ಟು ಚಿತ್ರಿಸಬೇಕಾಗುತ್ತದೆ. ಚರ್ಮದ ಮೇಲೆ ಬೇಕಾದ ಪಾತ್ರದ ಚಿತ್ರವನ್ನು ಸ್ವಯಂ ಕಲ್ಪನೆಯಿಂದ ಬಿಡಿಸುವ ಕುಶಲತೆ ಎಲ್ಲಾ ಕಿಳ್ಳೇಕ್ಯಾತರಿಗೂ ಇರುವುದಿಲ್ಲ. ಆದ್ದರಿಂದ ಇಂತಹವರು ಈ ಸಂದರ್ಭದಲ್ಲಿ ಹದಮಾಡಿದ ಚರ್ಮವನ್ನು ಹಳೆಯ ಗೊಂಬೆಯ

೪. ಡಾ.ಶಶಿಕಲಾ ಹೂಗಾರ : ೨೦೦೪ : ಕರ್ನಾಟಕ ತೊಗಲು ಗೊಂಬೆ ಚಿತ್ರಕಲೆ ಒಂದು ಅಧ್ಯಯನ :ಪುಟ ೩೨: ಅಪ್ರಕಟಿತ ಪಿ.ಎಚ್.ಡಿ. ಮಹಾಪ್ರಬಂಧ ಕನ್ನಡ ವಿ.ವಿ.ಹಂಪಿ.

ಮೇಲಿಟ್ಟು ನಕಲು ಮಾಡಿಕೊಳ್ಳುತ್ತಾರೆ. ಚರ್ಮವನ್ನು ಹದಮಾಡುವುದರಿಂದ ಪ್ರದರ್ಶನ ವೇಳೆಯಲ್ಲಿ ಗೊಂಬೆಗಳು ನೀಟಾಗಿ ನೇರವಾಗಿ ಇರುತ್ತದೆ. ಅಲ್ಲದೇ ಪ್ರೇಕ್ಷಕನಿಗೆ ಇದು ನೋಡಲು ಸುಂದರವಾಗಿರುತ್ತದೆ. ಚಿಕ್ಕಗೊಂಬೆಗಳನ್ನು ೨ ಅಡಿಯಿಂದ ೩ ಅಡಿಯವರೆಗೆ ಚಿತ್ರದಲ್ಲಿ ಪ್ರಾಣಿ ಮತ್ತು ಮನುಷ್ಯರ ಸಂಯೋಜನೆಯು ಸಂಯೋಗದಿಂದ ಕೂಡಿರುತ್ತದೆ. ಆದರೆ ದೊಡ್ಡ ಗೊಂಬೆಗಳನ್ನು ೪ ಅಡಿಯಿಂದ ೬ ಅಡಿಯವರೆಗೆ ಇದ್ದುದು ಇವುಗಳು ಮಾತ್ರ ಒಂದೇ ವ್ಯಕ್ತಿಯು ಚಿತ್ರಿಸಿದಂತೆ ಕಂಡುಬರುತ್ತದೆ.

ಪಾರದರ್ಶಕವಾಗಿ ಕಾಣುವ ಹದಗೊಂಡ ಚರ್ಮದ ಮೇಲೆ ಚಿತ್ತಾರದ ಚಿತ್ರಗಳನ್ನೊಳಗೊಂಡ ಗೊಂಬೆಗಳು ತೆರೆಯ ಮೇಲೆ ಸುಸ್ಥಿತಿಯಲ್ಲಿ ನಿಲ್ಲುವಂತೆ ಮಾಡುವುದು ಅತೀ ಮುಖ್ಯವಾದ ಕೆಲಸವಾಗಿದೆ. ಅದಕ್ಕಾಗಿ ಸಣ್ಣ ಬಿದಿರಿನ ಕಡ್ಡಿಯನ್ನು ಸೀಳಿ ಚಪ್ಪಟೆಯಾಗಿ ಮಾಡಿ ಅವೆರಡೂ ಸೀಳುಗಳಲ್ಲಿ ಗೊಂಬೆಯನ್ನು ಸೇರಿಸಿ ಅಲ್ಲಲ್ಲಿ ದಾರದಿಂದ ಭದ್ರವಾಗಿ ಗಂಟು ಹಾಕುತ್ತಾರೆ. ಕಡ್ಡಿಯ ಕೆಳತುದಿಗೆ ಗೊಂಬೆಗಿಂತ ಸುಮಾರು ಅರ್ಧ ಅಡಿ ದೊಡ್ಡದಾಗಿದ್ದು ಆಟಗಾರ ಅದನ್ನು ಹಿಡಿಕೆಯಂತೆ ಹಿಡಿದು ತನಗೆ ಬೇಕಾದಂತೆ ಆ ಗೊಂಬೆಯನ್ನು ನಿರ್ವಹಿಸಲು ಸಾಧ್ಯವಾಗಲು ಮಾಡಿಕೊಳ್ಳುವನು. ಈ ಹಿಂದೆ ಇವುಗಳು ಕೂಡುಗೊಂಬೆಗಳಾಗಿರುತ್ತಿದ್ದವು. ಈ ದಿನಗಳಲ್ಲಿ ಕೈಕಾಲು ತಲೆಗಳನ್ನು ಪ್ರತ್ಯೇಕವಾಗಿ ಮಾಡಿ ಅದನ್ನು ಗೊಂಬೆಗೆ ಕಟ್ಟುವ ತಂತ್ರ ಹೆಚ್ಚು ಜನಪ್ರಿಯವಾಗಿತ್ತು. ಇದರಿಂದ ಗೊಂಬೆಗಳನ್ನು ಹೆಚ್ಚು ಜೀವಂತಗೊಳಿಸಿ ಕುಣಿಸಲು ಸಾಧ್ಯವಾಗಿದೆ ಹೀಗೆ ಅಂಗಾಂಗಗಳನ್ನು ಜೋಡಿಸಲು ದಪ್ಪವಾದ ಬಿಳಿದಾರ ಅಥವಾ ನಾರನ್ನು ಬಳಸುತ್ತಿದ್ದರು ಎಂಬುದು ತಿಳಿದು ಬರುತ್ತದೆ.

**ರೇಖಾ ವಿನ್ಯಾಸದ ಚರ್ಮವನ್ನು ಕತ್ತರಿಸುವುದು:**

ತೊಗಲುಗೊಂಬೆಯ ಪ್ರಮುಖವಾದ ಹಂತಗಳಲ್ಲಿ ವಿನ್ಯಾಸ ಮಾಡಿದ ಚರ್ಮವನ್ನು ಕಲಾತ್ಮಕವಾಗಿ ಬಾಹ್ಯರೇಖೆಗನುಗುಣವಾಗಿ ಕತ್ತರಿಸಿದಾಗ ಚಿತ್ರವು ಸ್ಪಷ್ಟ ಆಕಾರದಲ್ಲಿ ಗೋಚರವಾಗುತ್ತದೆ. ನುರಿತ ಕಲಾವಿದರು ಮಾತ್ರ ಹೀಗೆ ಕತ್ತರಿಸಬಲ್ಲರು ಈ ತಯಾರಿಕೆಯಲ್ಲಿ ತುಂಬಾ ಜಾಗರೂಕತೆಯಿಂದ ಕತ್ತರಿಸಬೇಕಾಗುತ್ತದೆ. ಕೆಲವೊಮ್ಮೆ ಹಳೆಯಮಾದರಿಗಳ ಗೊಂಬೆಗಳನ್ನು ಇಟ್ಟು ಕತ್ತರಿಸುತ್ತಾರೆ. ತೊಗಲುಗೊಂಬೆಯ ಅಲಂಕಾರದ ವೈಭವವು ಅದರ ರಂಧ್ರ ವಿನ್ಯಾಸದಲ್ಲಿ ಚಿತ್ರದಲ್ಲಿ ಕಾಣಿಸಬೇಕಾಗಿರುವ ಕಿರೀಟ ಆಭರಣ ರಥದಗಾಲಿ, ಕಣ್ಣು, ಹಲ್ಲು, ವಸ್ತುಗಳ ಅಂಚಿನಲ್ಲಿ ಚಿಕ್ಕ ಚಿಕ್ಕಗೀರುಗಳು, ಸುಳಿವು–ವರ್ತುಲ, ಅರ್ಧವರ್ತುಲ, ತ್ರಿಕೋನ, ವಜ್ರಾಕಾರಗಳನ್ನು ರಂಧ್ರಗಳ ಮೂಲಕವಾಗಿ ತುಂಬಾ ಸೂಕ್ಷ್ಮವಾಗಿ ವಿನ್ಯಾಸಗೊಳಿಸಬೇಕಾಗುತ್ತದೆ. ಈ ಚಿತ್ರಕಲೆಯ ವೈಶಿಷ್ಟ್ಯವಿರುವುದೇ ಇಲ್ಲಿ ಚೂಪಾದ ಅಂಚಿನಂತಹ ದುಂಡಾದ ಉಳಿ, ಮೊಳೆ ಮೊದಲಾದ ಲೋಹಗಳ ಉಪಕರಣದಿಂದ ಚರ್ಮವನ್ನು ಕೆತ್ತಿ ಕತ್ತರಿಸಿ ರಂಧ್ರವಿನ್ಯಾಸ ಮಾಡುತ್ತಾರೆ. ಅಲ್ಲದೇ ಗೊಂಬೆಗಳ ಮಧ್ಯದಲ್ಲಿ ಸ್ಥಳವನ್ನು ಬಿಟ್ಟು ಚಿತ್ರಗಳ ನಡುವೆ ಚಿತ್ರವನ್ನು ತೋರಿಸುತ್ತಾರೆ.

**ವರ್ಣಗಳ ತಯಾರಿಕೆ ಮತ್ತು ಲೇಪನ :**

ಮೊದಲು ಕಪ್ಪು ಬಿಳುಪಿನ ಗೊಂಬೆಗಳೇ ಇದ್ದವೆಂದೂ ಕಾಲಕ್ರಮೇಣ ಬಣ್ಣದ ಗೊಂಬೆಗಳು ಬಳಕೆಗೆ ಬಂದವೆಂದು ಹೇಳುತ್ತಾರೆ. ಈಗ ರಾಜ್ಯದ ಎಲ್ಲ ಕಡೆಗೂ ಬಣ್ಣದ ಗೊಂಬೆಗಳು ಬಳಕೆಯಲ್ಲಿವೆ. ಕಿಳ್ಳೇಕ್ಯಾತರು ಹಲವಾರು ವರುಷಗಳಿಂದ ನೈಸರ್ಗಿಕವಾಗಿ ದೊರಕುವ ಆಧಾರಗಳನ್ನೇ ಅನುಸರಿಸಿಕೊಂಡುಬಂದಿದ್ದು, ಅಗತ್ಯವಿರುವ ವರ್ಣಗಳನ್ನು ಸಿದ್ಧಗೊಳಿಸುತ್ತಾರೆ. ಕುಟುಂಬದ ಬಹುತೇಕ ಎಲ್ಲರೂ ಗೊಂಬೆಗಳಿಗೆ ಬಣ್ಣ ತುಂಬುವ ಕೆಲಸ ಮಾಡುತ್ತಾರೆ. ತಲೆಮಾರಿನಿಂದ ತಲೆಮಾರಿಗೆ ಚಿಕ್ಕವರು, ದೊಡ್ಡವರು, ಸ್ತ್ರೀ ಪುರುಷರೆನ್ನದೇ ಈ ಕಾರ್ಯದಲ್ಲಿ ತೊಡಗಿಕೊಳ್ಳುವರು ಈ ತೊಗಲುಗೊಂಬೆ ಚಿತ್ರಗಳಲ್ಲಿ ವೀರಶೈವ ಪರಂಪರೆಯ ಚಿತ್ರಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಯಾವುದೇ ಪ್ರದರ್ಶಕ ಕಲೆಗಳು ಇರಲಿ ಅಲ್ಲಿ ಪ್ರದರ್ಶಕರ ಇಷ್ಟದೇವತೆ ಅಥವಾ ಗಣೇಶನ ರಂಗ ಪ್ರವೇಶದೊಂದಿಗೆ ಪ್ರದರ್ಶನಕ್ಕೆ ನಾಂದಿ ಹಾಡುವ ಸಂಪ್ರದಾಯವಿದೆ. ಇದು ಬಹಳ ಹಿಂದಿನಿಂದಲೂ ಬೆಳೆದು ಬಂದಿದೆ. ತೊಗಲುಗೊಂಬೆಯಾಟದಲ್ಲಿಯೂ ಗಣೇಶ ಆಯಾ ಪ್ರಾಂತೀಯ ಚಿತ್ರ ಶೈಲಿಗಳಿಗೆ ಅನುಗುಣವಾಗಿ ಭಿನ್ನವಾಗಿರುವುದು ಕಂಡುಬರುತ್ತದೆ.[೫]

**೧. ಗೋಕಾಕದ ವೀರಯೋಧನಂತಿರುವ ಗಣೇಶ :**

ಗೋಕಾಕದ ತೊಗಲು ಗೊಂಬೆ ಮೇಳದಲ್ಲಿರುವ ಗಣೇಶ ಪ್ರಸನ್ನವದನನಾಗಿಲ್ಲ ಬದಲಾಗಿ ವೀರಯೋಧನಂತೆ ರಣರಂಗಕ್ಕೆ ತೆರಳುವ ಗಣೇಶನನ್ನು ಚಿತ್ರಿಸಲಾಗಿದೆ. ಬಲಗೈಯಲ್ಲಿ ಖಡ್ಗ ಎಡಗೈಯಲ್ಲಿ ಗುರಾಣಿಯನ್ನು ಹಿಡಿದುಕೊಂಡಿರುವನು. ಎಡಗಾಲನ್ನು ಮುಂದಿಟ್ಟು ಬಲಗಾಲನ್ನು ಹಿಂದಿಟ್ಟು ಮುನ್ನುಗ್ಗುತ್ತಿರುವಂತೆ ತೋರಿಸಲಾಗಿದೆ. ಹುಲಿ ಚರ್ಮದ ಪಂಚೆಯನ್ನುಟ್ಟು ತಿಳಿ ಹಳದಿ ವರ್ಣದ ಅಂಗಿಯನ್ನು ತೊಟ್ಟಿರುವನು. ತಲೆಗೆ ಕಿರೀಟ ಆಭರಣಗಳನ್ನು ತೊಟ್ಟುಕೊಂಡಿರುವ ಗಣೇಶ ಪೀಠವೊಂದರ ಮೇಲೆ ನಿಂತಿದ್ದು ಸುಂದರವಾಗಿ ಮೂಡಿಬಂದಿದೆ.

**೨. ಧಾರವಾಡದಲ್ಲಿಯ ನೃತ್ಯ ಗಣಪತಿ :**

ಧಾರವಾಡದ ತೊಗಲುಗೊಂಬೆ ಮೇಳದಲ್ಲಿರುವ ಗಣೇಶ ಪ್ರಸನ್ನವದನನಾಗಿರುವ ನೃತ್ಯದ ಬಂಗಿಯಲ್ಲಿರುವಂತೆ ಗಣಪತಿಯನ್ನು ಚಿತ್ರಿಸಲಾಗಿದೆ. ಚತುರ್ಬುಜಧಾರಿಯಾಗಿರುವ ಗಣೇಶನನ್ನು ಕಂದುಗೆಂಪು ವರ್ಣದಲ್ಲಿ ಚಿತ್ರಿಸಲಾಗಿದ್ದು, ಕಪ್ಪು ಹಳದಿ ಮತ್ತು ಕಪ್ಪು ಹಸಿರು ವರ್ಣದ ಆಭರಣಗಳನ್ನು ಧರಿಸಿದ್ದು, ಕಪ್ಪು ಹಸಿರು ವರ್ಣದ ಧೋತರವನ್ನು ತೊಟ್ಟಿದ್ದು, ಹಳದಿವರ್ಣದ ಅಂಚಿನಲ್ಲಿ ಕೆಂಪುವರ್ಣದ ಚುಕ್ಕೆಗಳಿಂದ ಅಲಂಕರಿಸಲಾಗಿದೆ. ಹೊಟ್ಟೆಗೆ ಹಳದಿವರ್ಣದ ಹಾವನ್ನು ಕಟ್ಟಿಕೊಂಡಿದ್ದು ಕೊರಳಲ್ಲಿ ಕರಡಿಗೆಯನ್ನು ಧರಿಸಲಾಗಿದೆ. ಬಲಗೈಗಳಲ್ಲಿ ಢಮರು ಮತ್ತು ಪರುಷವನ್ನು ಹಿಡಿದುಕೊಂಡಿದ್ದು ಎಡಗೈಗಳಲ್ಲಿ ಹೂವನ್ನು ಮತ್ತು ಮೋದಕದ ಪಾತ್ರೆಯನ್ನು ಹಿಡಿದುಕೊಂಡಿರುವ ದೃಶ್ಯವಾಗಿದ್ದು ತನ್ನ ಸೊಂಡಿಯಿಂದ ಮೋದಕವನ್ನು ತಗೆದುಕೊಳ್ಳುವಂತೆ ಚಿತ್ರಿಸಲಾಗಿದೆ.

---

೫. ಶ್ರೀ ಎಂ.ಎಸ್.ನಂಜುಂಡರಾವ್: ಕರ್ನಾಟಕ ತೊಗಲು ಗೊಂಬೆ: ಕರ್ನಾಟಕ ಚಿತ್ರಕಲಾ ಪರಿಷತ್ತು ಬೆಂಗಳೂರು.

ಬಲಗಡೆಯ ಕಾಲಿನ ಬದಿಯಲ್ಲಿ ಹುಲಿಯಂತಹ ಪ್ರಾಣಿಯನ್ನು ಚಿತ್ರಿಸಲಾಗಿದೆ. ಸಂಯೋಜನೆ ಮತ್ತು ವರ್ಣಗಾರಿಕೆಯ ದೃಷ್ಟಿಯಿಂದ ಉತ್ತಮವಾಗಿ ಮೂಡಿಬಂದಿದೆ. ಈ ಕಲಾಕೃತಿಯು ೧೮" ಇಂಚು ಎತ್ತರವಾಗಿದೆ.

**೩. ರಾಯಚೂರಿನಲ್ಲಿಯ ಬಸವನ ಮೆರವಣಿಗೆಯ ಚಿತ್ರ :**

ತೊಗಲು ಗೊಂಬೆಯಲ್ಲಿ "ಬಸವನ ಮೆರವಣಿಗೆ" ವಿಷಯವನ್ನು ಆಧರಿಸಿದ ಚಿತ್ರವು ರಾಯಚೂರಿನ ತೊಗಲುಗೊಂಬೆ ಮೇಳದಲ್ಲಿರುವುದು. ೧೯ನೇ ಶತಮಾನದ ಅಂತ್ಯದಲ್ಲಿ ರಚಿಸಲಾಗಿದೆ. ೨೧" ಇಂಚು ಎತ್ತರದ ಈ ಚಿತ್ರದಲ್ಲಿ ಪಲ್ಲಕ್ಕಿಯಲ್ಲಿ ಕಪ್ಪುವರ್ಣದ ಬಸವಣ್ಣನನ್ನು ಕೂಡ್ರಿಸಲಾಗಿದೆ. ಈ ಪಲ್ಲಕ್ಕಿಯನ್ನು ಮುಂದುಗಡೆಯಲ್ಲೊಬ್ಬ ಹಿಂದುಗಡೆಯಲ್ಲೊಬ್ಬ ಹೆಗಲ ಮೇಲೆ ಹೊತ್ತುಕೊಂಡು ಹೊರಟಿರುವರು. ಎದುರುಗಡೆಯಲ್ಲಿ ಚಿಕ್ಕವ್ಯಕ್ತಿಯೊಬ್ಬನಿದ್ದು ಅವನು ಮೆರವಣಿಗೆಯ ಸಂಕೇತವಾಗಿ ಕಹಳೆಯನ್ನು ಊದುತ್ತಿರುವನು. ಹಿಂದುಗಡೆಯಲ್ಲಿ ಒಬ್ಬ ಚಿಕ್ಕ ವ್ಯಕ್ತಿ ಇದ್ದು ಕೈಜೋಡಿಸಿಕೊಂಡು ಹೊರಟಿರುವ ದೃಶ್ಯವಿದೆ. ಇಲ್ಲಿ ಬರುವ ವ್ಯಕ್ತಿಗಳಿಗೆ ಹಳದಿವರ್ಣವನ್ನು ಬಟ್ಟೆಗಳಿಗೆ ಕೆಂಪುವರ್ಣವನ್ನು ಲೇಪಿಸಲಾಗಿದ್ದು, ಪಲ್ಲಕ್ಕಿಗೆ ಹಳದಿ ಮತ್ತು ಕೆಂಪುವರ್ಣದಿಂದ ಅಲಂಕರಿಸಲಾಗಿದೆ. ಒಟ್ಟಾರೆ ವರ್ಣಗಾರಿಕೆ ಹಾಗೂ ಸಂಯೋಜನಾದೃಷ್ಟಿಯಿಂದ ಸುಂದರವಾಗಿದೆ.

**೪. ಧಾರವಾಡದಲ್ಲಿಯ ಶಿವಪೂಜೆಯ ಚಿತ್ರ :**

"ಶಿವಪೂಜೆಯ" ದೃಶ್ಯವನ್ನು ಧಾರವಾಡದಲ್ಲಿರುವ ತೊಗಲು ಗೊಂಬೆಯ ಮೇಳ ಚಿತ್ರವಾಗಿದ್ದು, ಶಿವನ ದೇವಾಲಯವನ್ನು ಚಿತ್ರಿಸಿದ್ದು, ಬಲಬದಿಯಲ್ಲಿ ಕಪ್ಪುವರ್ಣದ ಲಿಂಗವಿದ್ದು, ಅದನ್ನು ಪೂಜಾರಿಯೊಬ್ಬ ಪೂಜಿಸುತ್ತಿರುವ ದೃಶ್ಯವಾಗಿದೆ. ಎಡಬದಿಯಲ್ಲಿ ಲಿಂಗದ ಎದುರಿನಲ್ಲಿರುವ ಬಸವನನ್ನು ಕಪ್ಪುವರ್ಣದಲ್ಲಿ ಚಿತ್ರಿಸಲಾಗಿದೆ. ಈ ಎರಡೂ ಮಂಟಪಗಳ ಮೇಲೆ ಎರಡು ಗೋಪುರಗಳನ್ನು ರಚಿಸಿದ್ದು ಲಿಂಗದ ಮೇಲಿರುವ ಗೋಪುರದ ಮೇಲೆ ಬೆದರುಬೊಂಬೆಯ ಮುಖವಾಡದ ಮುಖವನ್ನು ತೋರಿಸಲಾಗಿದೆ. ಬಸವನ ಮೇಲಿರುವ ಗೋಪುರದಲ್ಲಿ ಲಜ್ಜಾಗೌರಿಯ ಚಿತ್ರವನ್ನು ಚಿತ್ರಿಸಿದ್ದು ಇವೆರಡೂ ಗೋಪುರಗಳ ಮಧ್ಯದಲ್ಲಿ ಮಂಗವನ್ನು ಚಿತ್ರಿಸಲಾಗಿದೆ. ಈ ಚಿತ್ರವು ಸುಂದರವಾಗಿ ಸಂಯೋಜನೆಯನ್ನು ಹಾಗೂ ಸೂಕ್ತವರ್ಣಗಳ ಬಳಕೆಯಿಂದಾಗಿ ಈ ದೇವಾಲಯವು ಅಂದವಾಗಿ ಮೂಡಿಬಂದಿದೆ. ಗೋಪುರಗಳ ಮೇಲೆ ಹೂವಿನ ಬಳ್ಳಿಯಂತೆ ಚಿತ್ರಿಸಲಾಗಿದೆ. ಈ ದೇವಾಲಯವನ್ನು ಅಲಂಕಾರಿಕವಾಗಿ ಚಿತ್ರಿಸಲಾಗಿದೆ.

**೫. ಮಂಟಪವೊಂದರಲ್ಲಿ ಸುಖಾಸೀನನಾಗಿರುವ ಶಿವ :**

ಮಂಟಪವೊಂದರ ಮೇಲೆ ಸುಖಾಸೀನನಾಗಿ ಕುಳಿತಿರುವ ಶಿವ ಇದೊಂದು ಕಪ್ಪು ಬಿಳುಪು ವರ್ಣದಲ್ಲಿ ರಚನೆಗೊಂಡಿದೆ. ೨೦ ಇಂಚು ಎತ್ತರವಾಗಿರುವ ಶಿವ ಕಾಲು ಮೇಲೆ ಕಾಲನ್ನು ಕೋನಾಕಾರದಲ್ಲಿಟ್ಟುಕೊಂಡಿರುವನು. ಹಿಂದಿನ ಆಧಾರವಾಗಿ ಬಲಗೈಯನ್ನು ಮೇಲ್ಗಡೆ ಇಟ್ಟುಕೊಂಡು ಎಡಗೈಯನ್ನು ಕೆಳಗಡೆ ಬಿಟ್ಟು ಎಡಭಾಗದಲ್ಲಿರುವ ತ್ರಿಶೂಲವನ್ನು ಹಿಡಿದುಕೊಂಡು ಕುಳಿತಿರುವನು. ಈ ಕಲಾಕೃತಿಯಲ್ಲಿ ಆಭರಣಗಳನ್ನು ಹಾಗೂ ಕಿರೀಟವನ್ನು ಬಿಳಿಯ ವರ್ಣಧ ಚುಕ್ಕೆಗಳ ಮೂಲಕ ತೋರಿಸಲಾಗಿದೆ. ಬಟ್ಟೆಯನ್ನು ಅಲಂಕಾರಿಕ ಬಿಳಿಯ ಹೂವುಗಳಿಂದ ಚಿತ್ರಿಸಲಾಗಿದೆ. ಈ ಚಿತ್ರವನ್ನು ೧೯ನೇ ಶತಮಾನದ ಮಧ್ಯದಲ್ಲಿ ರಚಿಸಲಾಗಿದೆ.

**ವ್ಯಕ್ತಿಚಿತ್ರಣ :**

ಭಾವಚಿತ್ರವೆಂಬುದನ್ನು ಈ ಚಿತ್ರಕಲೆಯಲ್ಲಿ ಪ್ರತ್ಯೇಕ ಪ್ರಕಾರವಾಗಿ ಅಭ್ಯಸಿಸುವಂತಿದ್ದರೂ ಅದರ ಉಲ್ಲೇಖ "ಅಭಿಲಷಿತಾರ್ಥ ಚಿಂತಾಮಣಿ"ಯಲ್ಲಿ ಇದ್ದು. ಅದರಂತೆ "ವಿದ್ಧ" ಎಂದರೆ "ತದ್ರೂಪದ ಚಿತ್ರ"ವೆಂದೂ "ಅವಿದ್ಧ" ಅಂದರೆ ಕೇವಲ ಆಕಾರಮಾತ್ರವೆಂದೂ, "ಭಾವಚಿತ್ರ" ಎಂದರೆ ಶೃಂಗಾರಾದಿ ರಸಗಳು ಉತ್ಪತ್ತಿಯಾಗುವಂತೆ ಕುತೂಹಲಭರಿತ ಚಿತ್ರವೆಂದೂ ಅರ್ಥೈಸಬಹುದು. "ವಿಷ್ಣುಧರ್ಮೋತ್ತರ" ಪುರಾಣವು ಸತ್ಯ, ವೈಣಿಕ, ನಾಗರ, ಮತ್ತು ಮಿಶ್ರ ಎಂಬ ನಾಲ್ಕು ರೀತಿಯ ಚಿತ್ರಗಳನ್ನು ಹೆಸರಿಸಿದೆ. ಹರ್ಷ "ರತ್ನಾವಳಿ"ಯಲ್ಲಿ ತನ್ನ ಚಿತ್ರ ತಾನೇ ರಚಿಸಿಕೊಳ್ಳುವುದು ಕಷ್ಟ ಎಂದು ವಿದೂಷಕ ಹೇಳಿದ್ದರಿಂದ ರಾಜ ಅದು ಸಾಧ್ಯ ಎಂಬಂತೆ ತನ್ನ ರೂಪವನ್ನು ತಾನೇ ರಚಿಸಿ ತೋರಿಸಿದ್ದಾಗಿ ತಿಳಿದುಬರುತ್ತದೆ. ಸಂಸ್ಕೃತ ನಾಟಕ, ಕನ್ನಡದ ಕಾವ್ಯಗಳಲ್ಲಿ ತಮ್ಮ ಚಿತ್ರ ತಾವೇ ಬರೆಯುವ, ಬೇರೆಯವರ ಚಿತ್ರವನ್ನು ನೆನಪಿನಿಂದ ಬರೆಯುವ, ಬೇರೆಯವರಿಂದ ವರ್ಣನೆಯನ್ನು ಕೇಳಿ ಊಹಿಸಿ ಬರೆಯುವ (ಶೃತಿವಿದ್ಧ) ಇತ್ಯಾದಿ ಭಾವಚಿತ್ರರಚನೆಯ ಬಗ್ಗೆ ಸಾಕಷ್ಟು ವಿಷಯಗಳು ದೊರೆಯುತ್ತವೆ.

ಪಾಶ್ಚಾತ್ಯರಲ್ಲಿ ದೇಹದ ಉಬ್ಬು ತಗ್ಗುಗಳನ್ನು (Shade & Light) ತೋರಿಸುವ ಛಾಯಾನುಕರಣವಾಗಲಿ, ಅಂಗರಚನಾ (Anatomy) ಶಾಸ್ತ್ರವಾಗಲಿ ನಮ್ಮ ಭಾರತೀಯ ಭಾವಚಿತ್ರ ಮತ್ತು ವ್ಯಕ್ತಿಚಿತ್ರಗಳಲ್ಲಿ ಇರಲಿಲ್ಲ. ಭಾರತೀಯ ಚಿತ್ರಗಳ ಮೇಲೆ ಪರ್ಷಿಯನ್ ಪ್ರಭಾವ ಆದಾಗಲೂ ಕೂಡಾ ಇಂತಹ ಬದಲಾವಣೆಗಳು ಆಗಿರಲಿಲ್ಲ ಬ್ರಿಟಿಷರು ನಮ್ಮ ದೇಶಕ್ಕೆ ಬಂದನಂತರ ಇಂತಹ ಪಾಶ್ಚಾತ್ಯ ಪ್ರಭಾವ ಚಿತ್ರಕಲೆಯ ಮೇಲೆ ಆಗುತ್ತ ಬಂದಿದ್ದು ಈಗ ಸಂಪೂರ್ಣ ಪಾಶ್ಚಾತ್ಯರ ಅನುಕರಣೆಯಲ್ಲಿಯೇ ಚಿತ್ರಗಳು ರಚನೆಯಾಗುತ್ತಿರುವುದನ್ನು ಕಾಣುತ್ತೇವೆ.

ಈ ಭಾವಚಿತ್ರ ಮತ್ತು ವ್ಯಕ್ತಿಚಿತ್ರಗಳು ಆದಿಕಾಲದಿಂದಲೂ ರಚನೆಗೊಳ್ಳುತ್ತಲಿದ್ದವಾದರೂ ವ್ಯಕ್ತಿಗಳನ್ನು ಗುರುತಿಸುವಷ್ಟು ಭಾವನೆಗಳಲ್ಲಾಗಲಿ, ಆಕಾರಗಳಲ್ಲಿಯಾಗಲಿ, ಬಳಸುವ ವರ್ಣಗಳಲ್ಲಾಗಲಿ, ವೈಶಿಷ್ಟ್ಯಗಳು ಕಂಡುಬರದೆ ಬರೀ ಚಿತ್ರಗಳಾಗಿ ಮೂಡಿಬಂದವು. ನಂತರದಲ್ಲಿ ಅವರ ವೇಷಭೂಷಣಗಳಿಂದ ಸಂಕೇತಗಳ ಮೂಲಕ ವಾಹನ ಆಯುಧಗಳ ಮೂಲಕ ಇವರೇ ಎಂದು ಗುರುತಿಸುವ ಪರಂಪರೆ, ಸಂಪ್ರದಾಯಗಳು ಬೆಳೆದು ಬಂದವು. ಆನಂತರದ ಅವಧಿಯಲ್ಲಿ ಅಂದರೆ ಪ್ರಾಯಶಃ ೧೮ನೆಯ ಶತಮಾನದ ನಂತರದಲ್ಲಿ ಪಾಶ್ಚಾತ್ಯರಂತೆ ನೆರಳು ಬೆಳಕುಗಳನ್ನು (Shade & Light) ತೋರಿಸುವಂತಹ ಹಾಗೂ ಅಂಗರಚನಾ (Anatomy) ಶಾಸ್ತ್ರಗಳನ್ನು (ತೋರಿಸುವ) ಅಧ್ಯಯನ ಪ್ರಾರಂಭವಾದ ನಂತರ ವ್ಯಕ್ತಿಯ ಭಾವಚಿತ್ರಗಳನ್ನು ಮತ್ತು ವ್ಯಕ್ತಿಚಿತ್ರಗಳನ್ನು ನಿರ್ದಿಷ್ಟವಾಗಿ ಗುರುತಿಸಲು ಸಾಧ್ಯವಾಯಿತು. ಇಂತಹ ಭಾವಚಿತ್ರ ಮತ್ತು ವ್ಯಕ್ತಿ ಚಿತ್ರಗಳು ಮೊಟ್ಟಮೊದಲಿಗೆ ದೇವರಿಗೆ ಮಾತ್ರ ಸೀಮಿತವಾಗಿದ್ದವು. ನಂತರದಲ್ಲಿ ರಾಜರು ಮತ್ತು ರಾಜಗುರುಗಳು ದೇವರ ಸಮಾನರೆಂದು ಚಿತ್ರಗಳನ್ನು ರಚಿಸಲು ಪ್ರಾರಂಭಿಸಿದರು. ಆನಂತರದಲ್ಲಿ ಮಠಾಧೀಶರು ಮತ್ತು ಶ್ರೀಮಂತರ ಚಿತ್ರಗಳು ರಚನೆಗೊಂಡವು. ತದನಂತರದಲ್ಲಿ ಜನಸಾಮಾನ್ಯರ ಚಿತ್ರಗಳೂ ರಚಿಸಲ್ಪಟ್ಟವು. ಈ ಮಧ್ಯ ಜೀವಂತವಾಗಿರುವಾಗಲೇ ಮಾನವರ

ಚಿತ್ರಗಳನ್ನು ರಚಿಸಿಕೊಳ್ಳಬಾರದೆಂದೂ ಶಿವಾಧೀನರಾದವರನ್ನು ಮಾತ್ರ ಚಿತ್ರಿಸಿ ತಮ್ಮ ಮನೆಗಳಲ್ಲಿ ಹಾಕಿಕೊಳ್ಳುವ ಪದ್ಧತಿಯೂ ಭಾರತೀಯರಲ್ಲಿ ಇದ್ದಿತು. ಅಂದರೆ ದೇವರಿಗೆ ಮಾತ್ರ ಸೀಮಿತವಾಗಿದ್ದು ಸಾಮಾನ್ಯ ಮನುಷ್ಯನ ಚಿತ್ರಗಳನ್ನು ಇರುವಾಗಲೇ ರಚಿಸುವುದು ತಪ್ಪು, ಸತ್ತನಂತರ ಅವನು ದೇವರ ಸಮಾನನಾಗುವನೆಂಬ ಧಾರ್ಮಿಕವಾಗಿ ವೀರಶೈವ ಪರಂಪರೆಯೂ ಈ ಅಂಶವನ್ನು ಎತ್ತಿ ಹಿಡಿಯುತ್ತದೆ. ಈ ನಂಬಿಕೆ ಹಾಗೂ ಆಚರಣೆಗಳನ್ನು ತಳ್ಳಿ ಹಾಕಿದ ಪಾಶ್ಚಾತ್ಯ ಸಂಸ್ಕೃತಿಯಂತೆ ೧೮ನೆಯ ಶತಮಾನದ ನಂತರದಲ್ಲಿ ಎಲ್ಲಿ ಬೇಕಾದರೂ ಯಾರಿಗೆ ಬೇಕೋ ಅವರೆಲ್ಲರ ಚಿತ್ರಗಳು ನಿರ್ಮಾಣವಾದವು.

ವೀರಶೈವ ಸಂಕೀರ್ಣ ಮಾಧ್ಯಮದ ಚಿತ್ರಕಲೆಯನ್ನು ದೇವಾಲಯ ಮಠ, ಮಂದಿರ, ಮನೆ ವೈಯಕ್ತಿಕವಾಗಿ ಹಾಗೂ ಸಾಮೂಹಿಕವಾಗಿ ರಚನೆಗೊಂಡಿರುವ ಬಿಡಿಚಿತ್ರಗಳನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ.

*** ಧಾರವಾಡ ಶ್ರೀ ಮುರುಘಾಮಠದ ಹಿನ್ನೆಲೆ :**

ಮುಂಬೈ ಕರ್ನಾಟಕ ಗೆಝೆಟಿಯರ್ ಪುಟ ೪೫೦ ರಲ್ಲಿ ಧಾರವಾಡದ ಹಾವೇರಿ ಪೇಟೆಯ ಬಗ್ಗೆ ಹೇಳುತ್ತ ಮುಸ್ಲಿಮರ ಅಮಲಿನಲ್ಲಿ ಧಾರವಾಡದ ಕೋಟೆಯೊಳಗೆ ದಂಡು ಇರುತ್ತಿತ್ತು. ಆ ದಂಡಿನವರು ಸಾಮಗ್ರಿಗಳನ್ನು ಕೊಳ್ಳಲು ಶುಕ್ರವಾರಪೇಟೆಗೆ ಬರುತ್ತಿದ್ದರು. ಆಗ, ಪೇಟೆಯ ಅಮಲುದಾರರಿಗೂ ದಂಡಿನವರಿಗೂ ಮೇಲಿಂದಮೇಲೆ ತಕರಾರುಗಳಾಗುತ್ತಿದ್ದವು. ಕ್ರಿ.ಶ.೧೭೫೩ ರಲ್ಲಿ ಬಾಳಾಜಿರಾವ್ ಪೇಶ್ವೆ ಅವರು ಮೊಘಲರಿಂದ ಧಾರವಾಡವನ್ನು ವಶಪಡಿಸಿಕೊಂಡು ಹೊಸದೊಂದು ಪೇಟೆ ಕಟ್ಟಿಸಿದರು. ಅದೇ ಹಾವೇರಿ ಪೇಟೆಯಾಗಿದೆ. ಇದರ ಜೊತೆಯಲ್ಲಿಯೇ (ವೀರಶೈವರೆಲ್ಲ) ಲಿಂಗಾಯತರೆಲ್ಲ ಕೂಡಿಕೊಂಡು ಮುರುಘಾಮಠವನ್ನು ಕಟ್ಟಿದರು. ಈ ಮಠದ ಮೊದಲಿನ ಸ್ವಾಮಿಗಳಾದ ರುದ್ರಮುನಿಸ್ವಾಮಿಗಳು ನಂತರ ಶ್ರೀ ಮೃತ್ಯುಂಜಯ ಅಪ್ಪಗಳು, ಆನಂತರ ಶ್ರೀ ಮಹಾಂತ ಅಪ್ಪಗಳು, ತದನಂತರ ಶ್ರೀ ಶಿವಯೋಗಿ ಅಪ್ಪಗಳು, ಈಗ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳು ಈ ಮಠದ ಪೀಠಾಧಿಕಾರಿಗಳಾಗಿ ಈವರೆಗೆ ಬಂದಿರುವರು. ಈ ವರೆಗಿನ ಸುದೀರ್ಘ ಇತಿಹಾಸದಲ್ಲಿ ಈ ಮಠವನ್ನು ಅಭಿವೃದ್ಧಿಯ ಪಥದತ್ತ ಸಾಗಿಸಿದವರು ಶ್ರೀ ಮೃತ್ಯುಂಜಯ ಅಪ್ಪಗಳಾದರೆ ಅತ್ಯಂತ ಉನ್ನತಮಟ್ಟವನ್ನು ತಲುಪಿದ್ದು ಶ್ರೀ ಮಹಾಂತ ಅಪ್ಪಗಳ ಅವಧಿಯಲ್ಲಿ ಎಂಬುದು ತಿಳಿದುಬರುತ್ತದೆ.[೬] ಆನಂತರದ ಅವಧಿಯಲ್ಲಿ ಅಭಿವೃದ್ಧಿ ಕುಂಠಿತವಾಗುತ್ತ ಸಾಗಿರುವಾಗ ಮತ್ತೆ ಈ ಮಠಕ್ಕೆ ನೂತನ ಪೀಠಾಧಿಕಾರಿಗಳಾಗಿ ಬಂದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಮತ್ತೆ ಅಭಿವೃದ್ಧಿಪಥದತ್ತ ಸಾಗಿಸುತ್ತಿದ್ದಾರೆ. ಈ ಮಠದಲ್ಲಿ ಶ್ರೀ ಮಹಾಂತ ಅಪ್ಪಗಳ ಅವಧಿಯಲ್ಲಿ ಕಲಾಕೃತಿಗಳು ರಚಿಸಲ್ಪಟ್ಟಿದ್ದು ಈ ಪವಾಡಗಳಿಗೆ ಸಂಬಂಧಿಸಿದ ಚಿತ್ರಗಳು "ಅಥಣಿ ಶಿವಯೋಗಿಗಳ ಪುರಾಣ"ವನ್ನು ಆಧರಿಸಿದವುಗಳಾಗಿವೆ.

---

೬. ಡಾ.ಲಿಂಗರಾಜ್ ಮುಳ್ಳೊಳ್ಳಿ : ಧಾರವಾಡ ಮುರುಘಾಮಠ : ಶ್ರೀ ಶಿವಯೋಗಿ ಅಪ್ಪಗಳು ಮುರುಘಾಮಠ, ಧಾರವಾಡ.

**ಧಾರವಾಡದ ಮುರುಘಾಮಠದಲ್ಲಿ ಕ್ಯಾನ್ವಾಸ್ (ಬಟ್ಟೆ) ವರ್ಣಚಿತ್ರಗಳು :**

**ವ್ಯಕ್ತಿಚಿತ್ರಗಳು :** ೧) ಶ್ರೀ ಮುರುಘೇಂದ್ರ ಶಿವಯೋಗಿಗಳು

೨) ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳು

೩) ಶ್ರೀ ಮಹಾಂತ ಅಪ್ಪಗಳು

೪) ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳು

**ಪವಾಡದ ಚಿತ್ರಗಳು :**

೧) ಕಾರ್ಮೋಡ ಹಾಗೂ ಮಳೆಯನ್ನು ಚದುರಿಸಿದ ದೃಶ್ಯ

೨) ರಾಚಯ್ಯನಿಗೆ ಶಿವಯೋಗಿಗಳು ಪ್ರಾಣದಾನ ಮಾಡಿದ ದೃಶ್ಯ

೩) "ಶಿವ ಶಿವಾ" ಎಂದೊಡನೆ ಹಗ್ಗಹರಿದ ದೃಶ್ಯ

೪) ಶಿವಯೋಗಿಗಳು ಪಕ್ಷಿಗಳಲ್ಲಿ ತಮ್ಮ ಗುರುಗಳನ್ನು ಕಂಡ ದೃಶ್ಯ

೫) ಹೊಳೆಯಲ್ಲಿ ಕಳೆದುಕೊಂಡಿರುವ ಲಿಂಗವನ್ನು ಹುಡುಕಿದ ದೃಶ್ಯ

೬) ಹುಲಿಯು ಶ್ರೀ ಶಿವಯೋಗಿಗಳನ್ನು ಕಂಡು ನಮಸ್ಕರಿಸಿದ

೭) ಲಿಂಗಪೂಜಾನಿರತ ಶಿವಯೋಗಿಗಳ ಎದುರಿನಲ್ಲಿ ಕುಳಿತ ನಾಗರಾಜ

**೨. ಶ್ರೀ ಮ.ನಿಪ್ರಸ್ವ. ಮೃತ್ಯುಂಜಯ ಮಹಾಸ್ವಾಮಿಗಳು :**

ಇಂಗಳಹಳ್ಳಿಯ ಶ್ರೀ ಕಾಂತಯ್ಯನವರು ಹಾಗೂ ಚನ್ನವೀರಮ್ಮನವರ ಉದರದಿಂದ ೯.೪.೧೮೮೮ ರಲ್ಲಿ ಜನಿಸಿದ ಶ್ರೀ ಮೃತ್ಯುಂಜಯ ಸ್ವಾಮಿಗಳು ಅಥಣಿಯ ಶ್ರೀ ಮುರುಘೇಂದ್ರ ಶಿವಯೋಗಿಗಳ ಶಿಷ್ಯರಾಗಿ ಅವರ ಪ್ರೀತಿಗೆ ಪಾತ್ರರಾಗಿ ಬೆಳೆದರು. ೧೯೧೪ರಲ್ಲಿ ಅಂದರೆ ಅವರ ೨೬ನೇಯ ವಯಸ್ಸಿನಲ್ಲಿ ಮುಳಗುಂದದ ಬಾಲಲೀಲಾ ಮಹಾಂತ ಶಿವಯೋಗಿಗಳ ಗವಿಮಠಕ್ಕೆ, ನಂತರ ೧೯೧೬ರಲ್ಲಿ ಧಾರವಾಡದ ಮುರುಘಾಮಠದ ಪಟ್ಟಾಧಿಕಾರಿಗಳಾಗಿ ಲಿಂಗಾಯತ ಸಮಾಜಕ್ಕೆ ದಾರಿದೀಪವಾಗಿ ಬೆಳೆದರು. ವೀರಶೈವ ಬಡ ವಿದ್ಯಾರ್ಥಿಗಳಿಗಾಗಿ ವಸತಿ ಹಾಗೂ ಪ್ರಸಾದ ನಿಲಯವನ್ನು ಸ್ಥಾಪಿಸಿದರು. ಪ್ರಸಾದದ ವೆಚ್ಚವನ್ನು ಭರಿಸಲು ಸ್ವತಃ ಕಂತಿಭಿಕ್ಷೆಯನ್ನು ಮಾಡಿ ತಂದು ವಿದ್ಯಾರ್ಥಿಗಳನ್ನು ಸಲುಹಿದರು. ಇವರು ೧೯೬೪ ರಲ್ಲಿ ಲಿಂಗೈಕ್ಯರಾದರು.

ಇದು ೩' ಅಡಿ ಅಗಲ ೭' ಅಡಿ ಉದ್ದವಾಗಿರುವ ಕ್ಯಾನ್ವಾಸ್ ಬಟ್ಟೆಯ ಮೇಲೆ ತೈಲ ವರ್ಣದಿಂದ ರಚಿಸಿದ ಕಲಾಕೃತಿಯಾಗಿದ್ದು ಮೃತ್ಯುಂಜಯ ಶ್ರೀಗಳು ಕ್ಯಾವಿಯ ಪಟಕಾವೊಂದನ್ನು ತಲೆಗೆ ಸುತ್ತಿದ್ದು, ಮೈಮೇಲೆ ಕ್ಯಾವಿಯ ಕಪನಿ ಧರಿಸಿದ್ದು, ಹಣೆಯಲ್ಲಿ ಭಸ್ಮವನ್ನು ಧರಿಸಿದ್ದು, ಕಣ್ಣಿಗೆ ಕನ್ನಡಕ ಧರಿಸಿದ್ದು, ಭುಜದ ಮೇಲೆ ಕಾವಿಯ ದುಪ್ಪಟ್ಟಾವನ್ನು ಹೊದ್ದುಕೊಂಡಿದ್ದು, ಬಲಗೈಯಲ್ಲಿ ಬೆತ್ತವೊಂದನ್ನು ಹಿಡಿದುಕೊಂಡಿದ್ದರು. ಬಲಗೈ ಮೇಲೆ ಎಡಗೈಯನ್ನು ಇಟ್ಟುಕೊಂಡು ಎದುರುಗಡೆ ನೋಡುತ್ತ ನಿಂತಿರುವರು. ಪಾದಗಳಲ್ಲಿ ಅವುಗೆಯನ್ನು

ಧರಿಸಿದ್ದಾರೆ ಒಟ್ಟಾರೆ ಈ ಚಿತ್ರದ ಹಿನ್ನೆಲೆಯನ್ನು ನೀಲಿಮಿಶ್ರಿತ ಹಸಿರುಬಣ್ಣದ ಗಿಡಮರಗಳು ಕಲ್ಲು ಬಂಡೆಗಳಿಂದ ಕೂಡಿದ ನಿಸರ್ಗ ಚಿತ್ರವನ್ನು ಹೊಂದಿದ್ದು ಮುಖವು ಕಾಂತಿಯುತವಾಗಿ ಜೀವಕಳೆಯನ್ನು ಹೊಂದಿದ್ದು ಕೈ ಮತ್ತು ಕಾಲಿನ ಬೆರಳುಗಳು ನೈಜವಾಗಿ ಮೂಡಿಬಂದಿವೆ. ಈ ಕಲಾಕೃತಿಯನ್ನು ಶ್ರೀ ಎಂ.ಎ.ಚೆಟ್ಟಿಯವರು ಅತ್ಯಂತ ಸುಂದರವಾಗಿ ರಚಿಸಿರುವರು.

**೧. ಶ್ರೀ ಮ.ನಿ.ಪ್ರಸ್ವ. ಮುರುಘೇಂದ್ರ ಶಿವಯೋಗಿಗಳು ಅಥಣಿ :**

ಈ ಕಲಾಕೃತಿಯನ್ನು ೩' ಅಡಿ ಅಗಲ ೭' ಅಡಿ ಉದ್ದವಾಗಿರುವ ಕ್ಯಾನ್ವಾಸ್ ಬಟ್ಟೆಯ ಮೇಲೆ ತೈಲವರ್ಣದಿಂದ ರಚಿಸಿದ್ದು ಅಥಣಿಯ ಶ್ರೀ ಮುರುಘೇಂದ್ರ ಶಿವಯೋಗಿಗಳು ಕ್ಯಾವಿಯ ಪಟಕಾವೊಂದನ್ನು ತಲೆಗೆ ಸುತ್ತಿಕೊಂಡಿದ್ದು ಮೈಮೇಲೆ ಕ್ಯಾವಿಯ ಕಪನಿ ಧರಿಸಿದ್ದು ಹಣೆಯಲ್ಲಿ ಭಸ್ಮವನ್ನು ಧರಿಸಿದ್ದು ಕೊರಳಲ್ಲಿ ಕರಡಿಗೆಯನ್ನು ಬಟ್ಟೆಯಲ್ಲಿ ಕಟ್ಟಿಕೊಂಡಿದ್ದು ಭುಜಗಳ ಮೇಲೆ ಕ್ಯಾವಿಯ ದುಪ್ಪಟ್ಟಾವನ್ನು ಹೊದ್ದುಕೊಂಡಿದ್ದು ಬಲಗೈಯಲ್ಲಿ ಬೆತ್ತವೊಂದನ್ನು ಹಿಡಿದುಕೊಂಡಿರುವರು. ಎಡಗೈಯನ್ನು ಕೆಳಗೆ ಬಿಟ್ಟಿದ್ದು ಎದುರುಗಡೆ ನೋಡುತ್ತ ನಿಂತಿರುವರು. ಪಾದಗಳಲ್ಲಿ ಆವುಗೆಯನ್ನು ಧರಿಸಿದ್ದು ಬೆಟ್ಟ ಮರಗಳ ಮಧ್ಯದಲ್ಲಿ ನಿಂತುಕೊಂಡಿರುವಂತೆ ಚಿತ್ರಿಸಲಾಗಿದೆ. ತೊಟ್ಟು ಕೊಂಡಿರುವ ಬಟ್ಟೆಗಳಲ್ಲಿರುವ ನೀರಿಗೆಗಳು, ಬೆಳಕು ನೆರಳಿನ ವಿನ್ಯಾಸ, ಕಾಂತಿಯುತವಾದ ಮುಖದಲ್ಲಿ ಜೀವ ಕಳೆಯನ್ನು ತುಂಬಿದ್ದು ಕೈ ಮತ್ತು ಕಾಲಿನ ಬೆರಳುಗಳು ನೈಜವಾಗಿ ಮೂಡಿಬಂದಿವೆ. ಈ ಕಲಾಕೃತಿಯನ್ನು ಶ್ರೀ ಎಂ.ಎ. ಚೆಟ್ಟಿಯವರು ಅಂದವಾಗಿ ಚಿತ್ರಿಸಿರುವರು.

**೩. ಶ್ರೀ ಮ.ನಿ.ಪ್ರಸ್ವ. ಮಹಾಂತ ಅಪ್ಪಗಳು :**

ಪಶುಪತಿಹಾಳದ ಶಿವಸಂಗಯ್ಯನವರು ಹಾಗೂ ಕರಿಬಸವಮ್ಮನವರ ಉದರದಲ್ಲಿ ೧೩.೬.೧೯೧೩ ರಂದು ಜನಿಸಿದರು. ಇವರು ಶ್ರೀ ಮೃತ್ಯುಂಜಯಪ್ಪಗಳ ಶಿಷ್ಯರಾಗಿ ಅವರ ಪ್ರೀತಿಗೆ ಪಾತ್ರರಾಗಿ ಬೆಳೆದರು. ಇವರ ಅವಧಿಯಲ್ಲಿ ಇಂದು ಕಾಣುವ ಭವ್ಯವಾದ ಮಠ, ವಿದ್ಯಾರ್ಥಿಗಳಿಗಾಗಿ ವಸತಿ ನಿಲಯ, ವಟುಗಳಿಗಾಗಿ ಪ್ರತ್ಯೇಕ ವಸತಿ ನಿಲಯ, ಪ್ರಸಾದ ನಿಲಯ, ಪ್ರಾಥಮಿಕ ಮಾಧ್ಯಮಿಕ ಶಿಕ್ಷಣ ನೀಡುವ ಶಾಲೆಗಳು, ಸಭಾಮಂಟಪ, ಮೃತ್ಯುಂಜಯ ಅಪ್ಪಗಳ ಮತ್ತು ಅಥಣಿ ಮುರುಘೇಂದ್ರಸ್ವಾಮಿಗಳ ದೇವಾಲಯಗಳು. ಹೀಗೆ ಮುರುಘಾಮಠವು ಭವ್ಯವಾಗಿ ಬೆಳೆದು ನಿಂತಿದೆ. ಇವರ ಕಾಲದಲ್ಲಿಯೇ ಅನೇಕ ಅಂಗಸಂಸ್ಥೆಗಳೊಂದಿಗೆ ಧಾರ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ, ಸಾಮಾಜಿಕವಾಗಿಯೂ ಶ್ರೀಮಠವು ಸರ್ವಾಂಗೀಣ ಬೆಳವಣಿಗೆ ಹೊಂದಿದೆ. ಇವರು ಮಾತೃಹೃದಯದ ಮಹಾಂತರು ಎಂದೇ ಕೀರ್ತಿವಂತರಾಗಿರುವರು. ಮಠದ ಉತ್ಸವ ಜಾತ್ರೆ ಪ್ರವಚನಗಳನ್ನು ಸಾಹಿತಿಗಳನ್ನು, ಸಂಗೀತಗಾರರನ್ನು ಕವಿಗಳನ್ನು, ನಾಟಕಗಾರರನ್ನು ಚಿತ್ರಕಲಾವಿದರನ್ನು ಹೀಗೆ ವಿವಿಧ ಕ್ಷೇತ್ರಗಳಲ್ಲಿ ಸೇವೆಸಲ್ಲಿಸಿದ ವಿದ್ವಾಂಸರನ್ನು ಜಾತ್ರೆಗೆ ಕರೆದು ಸನ್ಮಾನಿಸಿ ಪ್ರೋತ್ಸಾಹಿಸುತ್ತಿದ್ದರು. ಈ ಕಾರ್ಯ ಮೃತ್ಯುಂಜಯಪ್ಪಗಳಿಂದ ಬೆಳೆದು ಬಂದಿದ್ದು ಮುಂದುವರೆಸಿದರು. ಅಥಣಿಯ ಮುರುಘೇಂದ್ರ ಶಿವಯೋಗಿಗಳ ಶಿಷ್ಯರೂ ಆಗಿದ್ದು

ಶಿವಯೋಗಿಗಳ ಪವಾಡಗಳನ್ನು ಚಿತ್ರಗಳ ರೂಪದಲ್ಲಿ ರಚಿಸಿದ ಹೆಗ್ಗಳಿಕೆಯೂ ಇವರಿಗೆ ಸಲ್ಲುತ್ತದೆ. ಇವರು ೧೯೯೩ ರಲ್ಲಿ ಲಿಂಗೈಕ್ಯರಾಗಿರುವರು.

ಇವರ ಕಲಾಕೃತಿಯನ್ನು ೩' ಅಡಿ ಅಗಲ, ೭' ಅಡಿ ಉದ್ದವಾಗಿರುವ ಕ್ಯಾನ್ವಾಸ್ ಬಟ್ಟೆಯ ಮೇಲೆ ತೈಲವರ್ಣದಿಂದ ರಚಿಸಿದ್ದು ಶ್ರೀ ಮಹಾಂತ ಅಪ್ಪಗಳು ಕ್ಯಾವಿಯ ಪಟಕಾವೊಂದನ್ನು ತಲೆಗೆ ಸುತ್ತಿಕೊಂಡಿದ್ದು ಮೈಮೇಲೆ ಕ್ಯಾವಿಯ ಕಪನಿ ಧರಿಸಿದ್ದು ಹಣೆಯಲ್ಲಿ ಭಸ್ಮವನ್ನು ಧರಿಸಲಾಗಿದೆ. ಕೊರಳಲ್ಲಿ ಕರಡಿಗೆಯನ್ನು ಬಟ್ಟೆಯಲ್ಲಿ ಕಟ್ಟಿಕೊಂಡಿದ್ದು ತಮ್ಮೆರಡೂ ಕೈಗಳನ್ನು ಕೆಳಗಡೆ ಬಿಟ್ಟಿದ್ದು ಎದುರುಗಡೆ ನೋಡುತ್ತಾ ಕಲ್ಲೊಂದರ ಮೇಲೆ ನಿಂತಿರುವರು. ಹಸಿರು ಹುಲ್ಲಿನ ನೆಲ, ಗಿಡ ಮರಗಳಿಂದ ತುಂಬಿಕೊಂಡಿದ್ದರೆ ಹಿನ್ನೆಲೆಯಲ್ಲಿ ನೀಲಿ ಮಿಶ್ರಿತ ಜಾಂಬಳಿ ವರ್ಣದ ಆಕಾಶವನ್ನು ಚಿತ್ರಿಸಲಾಗಿದೆ. ಮಹಾಂತ ಅಪ್ಪಗಳ ಶಾಂತ ಸ್ವಭಾವ, ಮೃದುವಾದ ಗುಣಗಳುಳ್ಳ ಮುಖದ ಕಾಂತಿಯು ಕೈ ಮತ್ತು ಪಾದಗಳಲ್ಲಿಯ ನರಗಳೂ ಕೂಡಾ ಕಾಣುವಂತೆ ಪ್ರಮಾಣ ಬದ್ಧವಾಗಿ ಚಿತ್ರಿಸಿದ್ದು, ಬಟ್ಟೆಯಲ್ಲಿಯ ನೀರಿಗೆಗಳು ನೆರಳು ಬೆಳಕಿನ ವಿನ್ಯಾಸವನ್ನು ಶ್ರೀ ಎಂ.ಎ. ಚೆಟ್ಟಿ ಅವರು ಸುಂದರವಾಗಿ ಚಿತ್ರಿಸಿರುವರು.

**೪. ಶ್ರೀ ಮ.ನಿ.ಪ್ರಸ್ವ. ಮಲ್ಲಿಕಾರ್ಜುನ ಮಹಾಸ್ವಾಮಿಗಳು :**

ಇವರು ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕಿನ ಕೆರೂರ ಗ್ರಾಮದಲ್ಲಿ ೧೯೫೪ ರ ಅಗಸ್ಟ್ ೧೭ ರಂದು ಶಿವಲಿಂಗಯ್ಯ ಮತ್ತು ರಾಚಮ್ಮನವರ ಉದರದಿಂದ ಜನಿಸಿದರು. ಇವರು ಶಿವಯೋಗ ಮಂದಿರ, ವೀರೇಶ್ವರ ಪುಣ್ಯಾಶ್ರಮ, ಗದಗ ಮತ್ತು ಧಾರವಾಡದ ಮುರುಘಾಮಠದಲ್ಲಿ ಓದಿ ಸಂಸ್ಕೃತ ಬಿ.ಎ. ಪದವಿ ಹೊಂದಿ ಸುಮಾರು ಹತ್ತು ವರುಷಗಳ ಕಾಲ ಮಹಾಂತ ಅಪ್ಪಗಳ ಸೇವೆಗೆ ಪಾತ್ರರಾದ ಇವರು ೧೯೬೮ರಲ್ಲಿ ಕೆರೂರದ ವಿರಕ್ತಮಠ, ೧೯೭೪ ರಿಂದ ಮುಳಗುಂದದ ಬಾಲಲೀಲಾ ಮಹಾಂತ ಶಿವಯೋಗಿಗಳ ಮಠ, ೧೯೭೮ ರಿಂದ ಪಶುಪತಿಹಾಳ ಮಹಾಂತೇಶ್ವರ ಮಠ, ೧೯೮೬ ರಿಂದ ಬೆಂಗಳೂರಿನ ಸರ್ಪಭೂಷಣ ಮಠಗಳಿಗೆ ಪಟ್ಟಾಧಿಕಾರಿಗಳಾಗಿದ್ದು ಈಗ ೨೦೧೦ ರಿಂದ ಶ್ರೀ ಮುರುಘಾಮಠ, ಧಾರವಾಡದ ಪಟ್ಟಾಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು ಶರಣ ಸಾಹಿತ್ಯವನ್ನು ಪ್ರವಚನದ ಮೂಲಕ ನಾಡಿನ ಉದ್ದಕ್ಕೂ ಜನರ ಮನ ತಟ್ಟುವಂತೆ ತಿಳಿಯಪಡಿಸುವ ಕಾರ್ಯವನ್ನು ಮಾಡಿದ್ದನ್ನು ಗಮನಿಸಿ ೧೯೮೪ ರಲ್ಲಿ ಶ್ರೀ ಮಹಾಂತ ಅಪ್ಪಗಳು ಇವರಿಗೆ "ಪ್ರವಚನಾಚಾರ್ಯ" ರೆಂದು ಪ್ರಶಸ್ತಿ ನೀಡಿದರು. ಇವರು ಸಾಹಿತಿಗಳೂ ಆಗಿದ್ದು ಉಪನ್ಯಾಸ ಸಂಚಿಕೆ, ವಚನ ಚಿಂತನೆ, ವಚನಕಾರ ಪ್ರಮುಖ ಪರಿಕಲ್ಪನೆಗಳು, ೧೬ ವೀರಶೈವ ಅರಸ ಮನೆತನದ ಒಂದು ಅಧ್ಯಯನ ಎಂಬ ಗ್ರಂಥಗಳನ್ನು ರಚಿಸಿರುವರು. ಮುರುಘಾಮಠದಲ್ಲಿ ಹಿಂದಿನಂತೆ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಗಳನ್ನು ಮಾಡುತ್ತ, ಭಕ್ತರನ್ನು ಪ್ರೋತ್ಸಾಹಿಸುತ್ತ ಹಿಂದಿನ ಶ್ರೀಗಳ ಕಾರ್ಯವನ್ನು ಮುಂದುವರೆಸಿಕೊಂಡು ಸಾಗುತ್ತಿರುವರು.

ಅಥಣಿಯ ಶ್ರೀ ಮುರುಘೇಂದ್ರ ಶಿವಯೋಗಿಗಳ ಶಿಷ್ಯರೂ ಆಗಿದ್ದ ಶ್ರೀ ಮಹಾಂತ ಅಪ್ಪಗಳು ಅಥಣಿಯ ಶಿವಯೋಗಿಗಳ ಪವಾಡವನ್ನು ಕುರಿತು ಚಿತ್ರಕಲಾವಿದರಾದ ಶ್ರೀ ಎಂ.ಎ. ಚೆಟ್ಟಿ ಅವರನ್ನು ಕರೆಸಿಕೊಂಡು ಅಥಣಿಯ "ಶಿವಯೋಗಿಗಳ ಪುರಾಣದಲ್ಲಿಯ ಪವಾಡ"ಗಳನ್ನು ಹೇಳಿ ಆ ಸನ್ನಿವೇಶ ಅಥವಾ ಘಟನೆಗಳನ್ನು ಕುರಿತು ಚಿತ್ರಗಳನ್ನು ರಚಿಸುವಂತೆ ತಿಳಿಸಿದರು. ಅಂತೆಯೇ ಶ್ರೀ ಎಂ.ಎ. ಚೆಟ್ಟಿ ಅವರು ಸುಮಾರು ಏಳು ಪವಾಡಗಳಿಗೆ ತಕ್ಕಂತೆ ಕಲಾಕೃತಿಗಳನ್ನು ರಚಿಸಿರುವರು. ಇವು ಸಭಾ ಮಂಟಪದ ಬಲಗಡೆಯಲ್ಲಿರುವ ಶ್ರೀ ಮುರುಘೇಂದ್ರ ಶಿವಯೋಗಿಗಳ ಮತ್ತು ಶ್ರೀ ಮೃತ್ಯುಂಜಯ ಅಪ್ಪಗಳ ಗದ್ದಿಗೆಗೆ ಹೋಗುವ ದ್ವಾರಬಾಗಿಲದ ಮುಚ್ಚಿಗೆಗೆ ಹತ್ತಿಕೊಂಡು ಎಡಬಲ ಬದಿಗಳಲ್ಲಿ ಈ ಎಲ್ಲ ಕಲಾಕೃತಿಗಳನ್ನು ಅಂಟಿಸಲಾಗಿದೆ. ಇವುಗಳನ್ನು ಕ್ಯಾನ್ವಾಸ್ ಬಟ್ಟೆಯ ಮೇಲೆ ರಚಿಸಲಾಗಿದೆ. ಈ ಮಠದ ಪರಂಪರೆಯಲ್ಲಿಯೇ ಇದೊಂದು ಮೈಲುಗಲ್ಲಾಗಿ ನಿಂತಿರುವುದು ಕಂಡುಬರುತ್ತದೆ. ಇವು ಪ್ರಮಾಣಬದ್ಧವಾದ ಶಿಷ್ಟ ಪದ ಚಿತ್ರಗಳಾಗಿವೆ.

**ಅಥಣಿ ಶ್ರೀ ಶಿವಯೋಗಿಗಳ ಪವಾಡದ ಚಿತ್ರಗಳು :**

**೧. ಕಾರ್ಮೋಡ ಹಾಗೂ ಮಳೆಯನ್ನು ಚದುರಿಸಿದ ದೃಶ್ಯ :**

ಸವದತ್ತಿಯ ಕಲ್ಮಠದಲ್ಲಿ "ಬಸವ ಪುರಾಣ"ದ ಮಹಾಮಂಗಲ ಹಾಗೂ ಗಣಾರಾಧನೆಯ ಸಮಯದಲ್ಲಿ ಕಲ್ಮಠದ ಎದುರಿನ ಬಯಲಿನಲ್ಲಿ ಈ ಸಮಾರಂಭಕ್ಕೆ ಆಗಮಿಸಿದ ಜನರಲ್ಲಿ ಸಾವಿರಾರು ಜನ ಭಕ್ತರು ಪ್ರಸಾದವನ್ನು ಸ್ವೀಕರಿಸುತ್ತಿರುವರು. ಆ ಸಂದರ್ಭಕ್ಕೆ ಸರಿಯಾಗಿ ಕಪ್ಪನೆಯ ಕಾರ್ಮೋಡ ಹಾಗೂ ಮಳೆಯನ್ನು ಕಂಡು ಭಯಭೀತರಾದ ಭಕ್ತರು ಹಾಗೂ ಆ ಅನ್ನಸಂತರ್ಪಣೆಯ ಸ್ಥಳಕ್ಕೆ ಅಥಣಿಯ ಮುರುಘೇಂದ್ರ ಶಿವಯೋಗಿಗಳು ಆಗಮಿಸುತ್ತ ತಮ್ಮ ಬಲಗೈ ಮೇಲೆ ಮಾಡಿ ಮಳೆ ನಿಲ್ಲುವಂತೆ ಸೂಚಿಸಿದಾಗ "ಕಾರ್ಮೋಡಗಳು ಚದುರಿ ಹೋಗಿ ಮಳೆ ನಿಲ್ಲುವ ಪವಾಡದ ದೃಶ್ಯವನ್ನು" ಚಿತ್ರಿಸಲಾಗಿದೆ.

ಈ ಕಲಾಕೃತಿಯು ೨' ಅಡಿ ಉದ್ದವಾಗಿದ್ದು, ೨೧/೨' ಅಡಿ ಅಗಲವಾಗಿರುವ ಕ್ಯಾನ್ವಾಸ್ ಬಟ್ಟೆಯ ಮೇಲೆ ತೈಲವರ್ಣದಿಂದ ಚಿತ್ರಿಸಲಾಗಿದೆ. ಕಲ್ಮಠದ ಎದುರಿನ ಬಯಲಿನಲ್ಲಿ ಈ ಸಮಾರಂಭಕ್ಕೆ ಆಗಮಿಸಿದ ಜನರಲ್ಲಿ ಸಾವಿರಾರು ಜನ ಭಕ್ತರು ಪ್ರಸಾದವನ್ನು ಸ್ವೀಕರಿಸುತ್ತಿದ್ದು ಆ ಸಂದರ್ಭದಲ್ಲಿ ಆಕಾಶದಲ್ಲಿ ಕಪ್ಪನೆಯ ಮೋಡ ಕವಿದು ಧಾರಾಕಾರ ಮಳೆ ಸುರಿಯುವ ಸನ್ನಿವೇಶವನ್ನು ನೋಡಿ ಭಯಬೀತರಾದ ಭಕ್ತರು ಈ ಆತಂಕವನ್ನು ದೂರಮಾಡಲು ಅಥಣಿಯ ಶ್ರೀ ಮುರುಘೇಂದ್ರ ಶಿವಯೋಗಿಗಳು ತಮ್ಮ ಬಲಗೈ ಮೇಲೆ ಮಾಡಿ ಮಳೆ ನಿಲ್ಲುವಂತೆ ಸೂಚಿಸುತ್ತಿರುವುದು, ಇದರಿಂದಾಗಿ ಕಪ್ಪನೆಯ ಮೋಡಗಳು ಚದುರಿ ಹೋಗುತ್ತಿದ್ದು, ಮಳೆಯು ನಿಂತಿರುವ ದೃಶ್ಯವು ಸುಂದರವಾಗಿ ಮೂಡಿಬಂದಿದೆ. ಸಾವಿರಾರು ಜನ ಭಕ್ತರು ಪ್ರಸಾದ ಸ್ವೀಕರಿಸುತ್ತಿದ್ದು ಕೆಲವರು ಈ ಪವಾಡದಿಂದಾಗಿ ಶಿವಯೋಗಿಗಳನ್ನು ಭಕ್ತಿಭಯದಿಂದ ನೋಡುತ್ತಿದ್ದು ಇನ್ನೂ ಕೆಲವರು ಪ್ರಸಾದ ಸ್ವೀಕರಿಸುತ್ತಿರುವರು. ಮತ್ತೆ ಕೆಲವರು ತಮ್ಮ ತಮ್ಮಲ್ಲಿಯೇ ಮಾತನಾಡಿಕೊಳ್ಳುತ್ತಿರುವರು. ಅಲ್ಲಲ್ಲಿ ಪ್ರಸಾದವನ್ನು

ನೀಡುತ್ತಿರುವವರನ್ನು ಚಿತ್ರಿಸಿದ್ದು ಶಿವಯೋಗಿಗಳ ಹಿಂದುಗಡೆ ಬೇರೆ ಬೇರೆ ಮಠಾಧೀಶರು ಆಕಾಶವನ್ನು ನೋಡುತ್ತ ಕೈಮುಗಿದು ನಿಂತಿರುವರು. ಯಥಾದರ್ಶನಕ್ಕೆ ಅನುಸರಿಸಿ ಮುಂದಿನ ಚಿತ್ರಗಳು ವಿವರವಾಗಿಯೂ ದೊಡ್ಡದಾಗಿದ್ದು ಹಿಂದಿನ ಚಿತ್ರಗಳನ್ನು ಸಂಕ್ಷಿಪ್ತವಾಗಿ ಸಣ್ಣದಾಗಿ ಚಿತ್ರಿಸಲಾಗಿದೆ. ವರ್ಣಗಳ ಬಳಕೆಯಲ್ಲಿಯೂ (Colour perspective) ವೈವಿಧ್ಯ ಇದೆ. ಈ ಬಯಲು ಅಂಗಳದ ಅಂಚಿನಲ್ಲಿ ಬೆಟ್ಟ ಮರಗಿಡಗಳಿಂದ ಈ ಸಂಯೋಜನೆಯನ್ನು ಸುಂದರವಾಗಿ ಚಿತ್ರಿಸಲಾಗಿದೆ.

**೨. ಶಿವ ಶಿವಾ ಎಂದೊಡನೆ ಹಗ್ಗ ಹರಿದ ದೃಶ್ಯ :**

ಶಿವಯೋಗಿಗಳು ಭಕ್ತರು ಬರುತ್ತಿರುವಾಗ ಎರಡು ಹೋರಿಗಳು ಬೆದರಿ ಚಂಗನೆ ಜಿಗಿಯುತ್ತಿವೆ. ಅವುಗಳಿಗೆ ಕಟ್ಟಿದ ಹಗ್ಗ ಶಿವಯೋಗಿಗಳಿಗೆ ಸಿಕ್ಕಿ ಹಾಕಿಕೊಂಡು ಆ ಕಡೆಯೊಂದು ಈ ಕಡೆಯೊಂದು ಓಡುತ್ತಿರಲು ಆಗ ಅಥಣಿಯ ಶಿವಯೋಗಿಗಳು "ಶಿವಶಿವಾ" ಎಂದು ಉದ್ಗರಿಸುತ್ತ ಆ ಹೋರಿಗಳಿಗೆ ಅಭಯಹಸ್ತವನ್ನು ನೀಡಿದರು. ಕೂಡಲೇ ಹಗ್ಗ ಹರಿದು ಶಿವಯೋಗಿಗಳು ನಿರಾಭಾರವಾಗಿರುವುದು ಕಂಡುಬರುತ್ತದೆ. ಈ ಪವಾಡವನ್ನು ಕಂಡು ಮಠದ ಸ್ವಾಮಿಗಳು ಉಳಿದ ಜನಸಾಮಾನ್ಯರು ಗಾಬರಿಗೊಂಡು ನೋಡುತ್ತಿರುವ ದೃಶ್ಯಗಳನ್ನು ಚಿತ್ರಿಸಿರುವರು.

ಈ ಕಲಾಕೃತಿಯು ೨' ಅಡಿ ಉದ್ದವಾಗಿದ್ದು, ೨/೧೨' ಅಡಿ ಅಗಲವಾಗಿರುವ ಕ್ಯಾನ್ವಾಸ್ ಬಟ್ಟೆಯ ಮೇಲೆ ತೈಲವರ್ಣದಿಂದ ಚಿತ್ರಿಸಲಾಗಿದೆ. ಅರಣ್ಯದ ಮಧ್ಯದಲ್ಲಿ ಕೆಂಪು ವರ್ಣದ ನೆಲ, ಅದರ ಅಂಚಿಗೆ ನೀಲಿ ಹಸಿರು ವರ್ಣಗಳಿಂದೊಡಗೂಡಿದ ನೆಲದ ಮೇಲೆ ಶಿವಯೋಗಿಗಳು ಮಠಾಧೀಶರು ಭಕ್ತರೊಂದಿಗೆ ಬರುತ್ತಿದ್ದು, ಎರಡು ಎತ್ತುಗಳು ಅವುಗಳಿಗೆ ಕಟ್ಟಿದ ಹಗ್ಗಗಳಿಂದ ಶಿವಯೋಗ್ಿಗಳನ್ನು ಸುತ್ತುವರಿದು ವಿರುದ್ಧ ದಿಕ್ಕಿನಲ್ಲಿ ರಭಸದಿಂದ ಓಡುತ್ತಲಿವೆ. ಇವುಗಳನ್ನು ಕಂಡ ಮಠಾಧೀಶರು, ಭಕ್ತರು ಗಾಬರಿಗೊಂಡು ನೋಡುತ್ತಲಿದ್ದು ಶ್ರೀ ಶಿವಯೋಗಿಗಳು ದೃಢ ಚಿತ್ತದಿಂದ ಶಿವಶಿವಾ ಎಂದು ಉದ್ಗರಿಸುತ್ತ ಬಲಗೈಯಿಂದ ಅಭಯಹಸ್ತವನ್ನು ನೀಡಿದ್ದು ಅವರಿಗೆ ಸುತ್ತಿದ ಹಗ್ಗವು ಕತ್ತರಿಸುತ್ತಿರುವುದನ್ನು ತೋರಿಸಲಾಗಿದೆ. ಮಠಾಧೀಶರು ಶಿವಯೋಗಿಗಳಿಗೆ ಏನಾಗುತ್ತದೋ ಎಂದು ಆತಂಕದಲ್ಲಿ ಅವರತ್ತಲೇ ನೋಡುತ್ತಿದ್ದು ಎದುರಿನಲ್ಲಿ ಭಕ್ತರೆಲ್ಲರೂ ಗಾಬರಿಗೊಂಡಿದ್ದು ಪ್ರತಿಯೊಬ್ಬರ ಹಾವಭಾವಗಳು, ಭಂಗಿಗಳು ವಿಶಿಷ್ಟವಾಗಿ ಮೂಡಿ ಬಂದಿವೆ. ಈ ದೃಶ್ಯದ ಹಿನ್ನೆಲೆಯಲ್ಲಿ ಎಡಗಡೆಯಲ್ಲಿ ದನಗಳ ಹಿಂಡೇ ಸಾಲುಸಾಲಾಗಿ ಹೊರಟಿರುವುದನ್ನು ಚಿತ್ರಿಸಲಾಗಿದೆ. ಬಟ್ಟೆಯಲಿನ ನಿರಿಗೆಗಳ ಪ್ರಮಾಣಬದ್ಧವಾದ ಆಕೃತಿಗಳನ್ನು ಉತ್ತಮ ಸಂಯೋಜನೆಯೊಂದಿಗೆ ಚಿತ್ರಿಸಲಾಗಿದೆ.

**೪. ಶ್ರೀ ಶಿವಯೋಗಿಗಳು ಪಕ್ಷಿಗಳಲ್ಲಿ ತಮ್ಮ ಗುರುಗಳನ್ನು ಕಂಡ ದೃಶ್ಯ :**

ಅಥಣಿಯ ಗಚ್ಚಿನ ಮಠದ ಒಳಾವರಣದಲ್ಲಿಯ ಯೋಗ ಮಂಟಪದ ತ್ರಿಆಯಾಮದ ಕಂಬಗಳು ಎದುರಿಗೆ ಇರುವ ಗಿಡದ ರೆಂಬೆಯೊಂದರ ಮೇಲೆ ಬಿಳಿವರ್ಣದ ವಿಶೇಷವಾದ ಪಕ್ಷಿಗಳೆರಡು ಕುಳಿತಿದ್ದು, ಆ ಪಕ್ಷಿಗಳಿಗೆ ಶಿವಯೋಗಿಗಳು ನಮಸ್ಕರಿಸುತ್ತಿದ್ದು, ಈ ವಿಚಿತ್ರ ಪಕ್ಷಿಗಳಿಗೆ ನಮಸ್ಕರಿಸುತ್ತಿರುವ ಶಿವಯೋಗಿಗಳನ್ನು

[illegible]

ಮತ್ತು ಮರದ ಮೇಲಿರುವ ಪಕ್ಷಿಗಳನ್ನು ನೋಡುತ್ತ ನಿಂತಿರುವ ಮಠಾಧೀಶರು ಭಕ್ತರ ಸಮೂಹ ಈ ಕುರಿತು ಶಿವಯೋಗಿಗಳನ್ನು ಪ್ರಶ್ನಿಸಿದಾಗ, ಆ ಪಕ್ಷಿಗಳಲ್ಲಿ ಗುರುಗಳು ಕಾಣಿಸುತ್ತಿದ್ದು ಗುರುಶಾಂತ ಸ್ವಾಮಿಗಳು ಮತ್ತು ಮರುಳ ಶಂಕರ ಸ್ವಾಮಿಗಳು ಈ ಪಕ್ಷಿಗಳ ರೂಪದಲ್ಲಿ ಬಂದಿರುವರೆಂದು ಹೇಳಿದರು. ಇದನ್ನು ಅರಿತ ಭಕ್ತರು ಶ್ರೀ ಶಿವಯೋಗಿಗಳಿಗೆ ಸಾಷ್ಟಾಂಗ ನಮಸ್ಕಾರಗಳನ್ನು ಮಾಡಿದರು ಎಂಬ ಕಥೆಯನ್ನು ಶ್ರೀ ಶಿವಯೋಗಿಗಳ ಆಧರಿಸಿ ಚಿತ್ರಿಸಲು ತಿಳಿಸಿರುವರು.

ಈ ಕಲಾಕೃತಿಯು ೨' ಅಡಿ ಉದ್ದವಾಗಿದ್ದು, ೨.೬ ಅಡಿ ಅಗಲವಾಗಿರುವ ಕ್ಯಾನ್ವಾಸ್ ಬಟ್ಟೆಯ ಮೇಲೆ ತೈಲ ವರ್ಣದಿಂದ ಚಿತ್ರಿಸಲಾಗಿದೆ. ಅಥಣಿಯ ಗಚ್ಚಿನಮಠದ ಒಳ ಆವರಣದಲ್ಲಿಯ ಯೋಗ ಮಂಟಪದ ಎದುರಿನಲ್ಲಿ ದೊಡ್ಡದಾದ ಗಿಡವೊಂದರ ರೆಂಬೆಯ ಮೇಲೆ ವಿಶೇಷವಾದ ಎರಡು ಬಿಳಿಯ ಪಕ್ಷಿಗಳು ಕುಳಿತಿದ್ದು ಅವುಗಳನ್ನು ನೋಡಲು ಊರಿನ ಜನರೆಲ್ಲ ಸೇರಿರುವರು. ಆಗ ಶಿವಯೋಗಿಗಳು ಮಠಾಧೀಶರು ಆಗಮಿಸಿ ಆ ಪಕ್ಷಿಗಳನ್ನು ನೋಡಿ ಅವುಗಳಿಗೆ ಕೈ ಮುಗಿಯುತ್ತಿರುವ ಶಿವಯೋಗಿಗಳು ಭಕ್ತರಿಗೆಲ್ಲ ಇವು ನಮ್ಮ ಮಠದ ಪೂರ್ವದ ಗುರುಗಳು ಎಂದು ಹೇಳಿದಾಗ ಮಠಾಧೀಶರು ಜನಸಾಮಾನ್ಯರು ಭಯಭಕ್ತಿಯಿಂದ ಕೆಲವು ಜನ ಪಕ್ಷಿಗಳನ್ನು ಇನ್ನೂ ಕೆಲವು ಜನ ಶಿವಯೋಗಿಗಳಿಗೆ ಸಾಷ್ಟಾಂಗ ನಮಸ್ಕಾರಗಳನ್ನು ಮಾಡುತ್ತಿದ್ದು ಇಲ್ಲಿ ಬರುವ ಜನರ ವೇಷ ಭೂಷಣಗಳು ಉತ್ತರ ಕರ್ನಾಟಕದ ವೈಶಿಷ್ಟ್ಯದಂತೆ ಧೋತರ, ರುಮಾಲು, ಕೋಟು ಇಲ್ಲವೇ ಜಾಕೇಟಗಳನ್ನು ಧರಿಸಿದ್ದು ಹಸಿರು ಮತ್ತು ಕಡುಗೆಂಪು ವರ್ಣದ ಸೀರೆಯನ್ನು ತೊಟ್ಟಿರುವರು. ಮಠಾಧೀಶರಿಗೆ ತಲೆಗೆ ಕ್ಯಾವಿ ಪೇಟ, ಕ್ಯಾವಿಯ ಕೌಪೀನ ಕೊರಳಲ್ಲಿ ಬಟ್ಟೆಯಲ್ಲಿರುವ ಕರಡಿಗೆಯನ್ನು ಧರಿಸಿದ್ದು ಮಠದ ಪೂರ್ವಜರು ಪಕ್ಷಿಗಳಾಗಿ ಬಂದಿರುವುದನ್ನು ನೋಡುತ್ತ ನಿಂತಿರುವರು. ಹಿನ್ನೆಲೆಯಲ್ಲಿ ನೀಲಿ ಮತ್ತು ಹಸಿರು ವರ್ಣದ ಗಿಡ ಮರಗಳಿಂದ ತುಂಬಿಕೊಂಡಿದೆ. ಮರವನ್ನು ಚಿಕ್ಕ ಮಕ್ಕಳು ಹತ್ತುತ್ತಿರುವುದನ್ನು ಕಾಣಬಹುದಾಗಿದೆ. ಒಟ್ಟಾರೆ ಸಂಯೋಜನೆ ಹಾಗೂ ವರ್ಣವಿನ್ಯಾಸ ಉತ್ತಮದಾಗಿ ಮೂಡಿಬಂದಿದೆ.

**೫. ಹೊಳೆಯಲ್ಲಿ ಕಳೆದುಕೊಂಡಿರುವ ಲಿಂಗವನ್ನು ಹುಡುಕಿದ ದೃಶ್ಯ :**

ಒಂದುಸಲ ಶ್ರೀ ಶಿವಯೋಗಿಗಳು ಮಠಾಧೀಶರೆಲ್ಲ ಸೇರಿಕೊಂಡು ಊರಿನ ಚಿಕ್ಕಮಕ್ಕಳಾದಿಯಾಗಿ ಜನರೆಲ್ಲ ಪವಿತ್ರ ನದಿಯ ಸ್ನಾನಕ್ಕೆಂದು ನದಿಯಲ್ಲಿ ಸ್ನಾನ ಮಾಡುತ್ತಿರುವಾಗ ಮಠಾಧೀಶರೊಬ್ಬರ ಲಿಂಗವೊಂದು ನದಿಯಲ್ಲಿ ಕಳೆದು ಹೋಗುತ್ತದೆ. ಅದು ಬೇಕೆಂದು ಎಷ್ಟು ಹುಡುಕಿದರೂ ಸಿಗದಾದಾಗ ಕೊನೆಗೆ ಶಿವಯೋಗಿಗಳು ತೋರಿಸಿದ ನದಿಯ ಭಾಗದಲ್ಲಿ ಹುಡುಕಿದಾಗ ಸಿಗುತ್ತದೆ. ಸಂತೋಷದಿಂದ ಶಿವಯೋಗಿಗಳತ್ತ ಅದನ್ನು ಅಂಗೈಯಲ್ಲಿಟ್ಟುಕೊಂಡು ಈಜುತ್ತ ಬರುತ್ತಿದ್ದುದು. ಚಿಕ್ಕ ಕೂಸುಗಳಿಗೆ ಸ್ನಾನ ಮಾಡಿಸುತ್ತಿರುವ ತಾಯಂದಿರು, ಮಕ್ಕಳು, ಯುವಕರು, ಪುರುಷರು, ಎಲ್ಲರೂ ಆಶ್ಚರ್ಯದಿಂದ ಈ ಸನ್ನಿವೇಶವನ್ನು ನೋಡುತ್ತಲಿರುವರು. ಒಂದೆಡೆ ಮಠಾಧೀಶರು ಲಿಂಗ ಕಳೆದುಕೊಂಡು ಹುಡುಕುತ್ತಿರುವುದು, ಶ್ರೀ ಶಿವಯೋಗಿಗಳು ಸ್ನಾನ ಮಾಡುತ್ತಿರುವುದು

ವಿಶಾಲವಾದ ನದಿ, ಆ ದಡದಲ್ಲಿ ಊರು, ಗಿಡ, ಮರಗಳಿಂದ ತುಂಬಿರುವಂತೆ ಸಂಯೋಜನೆ ಮಾಡಲು ಶಿವಯೋಗಿಗಳ ಪವಾಡದ ಕಥೆಯನ್ನು ಹೇಳಿದರು.

ಈ ಕಲಾಕೃತಿಯು ೨' ಅಡಿ ಉದ್ದ ೨.೬' ಅಡಿ ಅಗಲವಾಗಿರುವ ಕ್ಯಾನ್ವಾಸ್ ಬಟ್ಟೆಯ ಮೇಲೆ ತೈಲ ವರ್ಣದಿಂದ ರಚಿಸಲಾಗಿದ್ದು ವಿಶಾಲವಾದ ಮತ್ತು ಪವಿತ್ರವಾದ ನದಿಯ ಸ್ನಾನಕ್ಕೆ ಸ್ವತಃ ಶ್ರೀ ಶಿವಯೋಗಿಗಳು ಲಂಗೋಟಿಯ ಮೇಲೆ ನದಿಯ ಬಲಭಾಗದಲ್ಲಿ ಸ್ನಾನ ಮಾಡುತ್ತಲಿದ್ದು ಅವರಿಗೆ ಸ್ನಾನಕ್ಕೆ ಸಹಾಯ ಮಾಡುತ್ತಿರುವ ಇತರ ಮಠಾಧೀಶರು ಹಾಗೂ ಹಿಂದುಗಡೆಯಲ್ಲಿ ಅವರಿಗೆ ಬಟ್ಟೆಯನ್ನು ಹಿಡಿದುಕೊಂಡಿರುವ ಒಬ್ಬ ಮಠಾಧೀಶರಿರುವರು. ಶ್ರೀ ಶಿವಯೋಗಿಗಳ ಎದುರಿನಲ್ಲಿ ಓರ್ವ ಮಠಾಧೀಶರು ಕಳೆದುಕೊಂಡಿರುವ ತಮ್ಮ ಇಷ್ಟ ಲಿಂಗವನ್ನು ಹುಡುಕುತ್ತಿರುವುದು, ಸಿಗದೇ ಚಿಂತೆಯಲ್ಲಿರುವಾಗ ಶಿವಯೋಗಿಗಳು ಆ ಲಿಂಗವು ಎಡಭಾಗದಲ್ಲಿ ಹರಿದುಕೊಂಡು ಹೋಗಿದ್ದು ಲಿಂಗವಿರುವ ಸ್ಥಳವನ್ನು ಯುವಕರಿಗೆ ಕರೆದು ತಿಳಿಸಿದ್ದು ಅಲ್ಲಿ ಹುಡುಕಿದಾಗ ದೊರೆತ ಲಿಂಗವನ್ನು ತರುತ್ತಿರುವ ದೃಶ್ಯ ಎಡಬದಿಯ ಮೇಲ್ಭಾಗದಲ್ಲಿದ್ದು, ಈಜುಗಾರರು ನದಿಯಲ್ಲಿ ಈಜುತ್ತ ಲಿಂಗವನ್ನು ಕೈಯಲ್ಲಿ ಹಿಡಿದುಕೊಂಡು ಬರುತ್ತಿರುವ ದೃಶ್ಯವಿದೆ. ಎಡಬದಿಯ ಕೆಳಭಾಗದಲ್ಲಿ ತಾಯಂದಿರು ತಮ್ಮ ಕೂಸುಗಳನ್ನು ನದಿಯಲ್ಲಿ ಸ್ನಾನ ಮಾಡಿಸುತ್ತಿರುವರು. ಮಕ್ಕಳು ಯುವಕರು, ಪುರುಷರು ನದಿಯಲ್ಲಿದ್ದು ಕಳೆದು ಹೋದ ಲಿಂಗವನ್ನು ತರುತ್ತಿರುವುದನ್ನು ನೋಡಿ ಶಿವಯೋಗಿಗಳತ್ತ ಭಯ ಭಕ್ತಿ ಆಶ್ಚರ್ಯಗಳೊಂದಿಗೆ ನೋಡುತ್ತಿರುವ ದೃಶ್ಯವನ್ನು ಸುಂದರವಾಗಿ ಚಿತ್ರಿಸಿರುವರು. ವಿಶಾಲವಾದ ನದಿ, ಈ ನದಿಯ ಎಡಭಾಗದ ಅಂಚಿನಲ್ಲಿ ಬಹು ದೂರದಲ್ಲಿ ಜನಸಾಮಾನ್ಯರು ನಿಂತುಕೊಂಡಿರುವುದು, ಅವರ ಹಿಂದುಗಡೆಯಲ್ಲಿ ಊರು, ಈ ಮನೆಗಳ ಹಿಂದುಗಡೆಯಲ್ಲಿ ಮರಗಳು ಮುಂಜಾನೆಯ ಸೂರ್ಯೋದಯದ ವಾತಾವರಣವನ್ನು ಆಕಾಶದ ವರ್ಣಗಳು ಸೂಚಿಸುತ್ತಿವೆ. ಒಟ್ಟಾರೆಯಾಗಿ ಈ ಸಂಯೋಜನೆ ವ್ಯಕ್ತಿಗಳ ಸಮೂಹ ವಿಂಗಡಣೆ ಮತ್ತು ಜೋಡಿಸುವಿಕೆ ಪ್ರಮಾಣಬದ್ಧತೆ ಆಕಾರ ಆಕೃತಿಗಳು ವರ್ಣವಿನ್ಯಾಸ ಹಾವ, ಭಾವ, ವಿವಿಧ ಭಂಗಿಗಳು ವಿಶಿಷ್ಟವಾಗಿ ಮೂಡಿಬಂದಿವೆ.

**೬. ಹುಲಿಯು ಶ್ರೀ ಶಿವಯೋಗಿಗಳನ್ನು ಕಂಡು ನಮಸ್ಕರಿಸಿದ ದೃಶ್ಯ:**

ಇದು ಕೂಡಾ ಶಿವಯೋಗಿಗಳ ಪವಾಡಕ್ಕೆ ಸಂಬಂಧಿಸಿದ್ದು ಈ ಕಲಾಕೃತಿಯನ್ನು ೨.೬' ಅಡಿ ಉದ್ದ ೨' ಅಡಿ ಅಗಲವಾಗಿರುವ ಕ್ಯಾನ್ವಾಸ್ ಬಟ್ಟೆಯ ಮೇಲೆ ತೈಲವರ್ಣದಿಂದ ಚಿತ್ರಿಸಲಾಗಿದೆ. ಅಥಣಿಯ ಶ್ರೀ ಶಿವಯೋಗಿಗಳು ಅರಣ್ಯದಲ್ಲಿ ನಡೆಯುತ್ತ ಸಾಗಿದ್ದು ಕೆಂಪು ನೆಲವು ಹಸಿರು ಹುಲ್ಲು ಗಿಡಮರಗಳು ಇಡೀ ವಾತಾವರಣವೇ ಹೂವು ಬಳ್ಳಿ ಹೀಗೆ ತುಂಬಿಕೊಂಡಿದ್ದು ಶ್ರೀ ಶಿವಯೋಗಿಗಳು ಕ್ಯಾವಿಯ ಪೇಟಾ ತಲೆಗೆ ಸುತ್ತಿದ್ದು ಕೌಪೀನವನ್ನು ಧರಿಸಿದ್ದು ಕ್ಯಾವಿಯ ದುಪ್ಪಟ್ಟಾವನ್ನು ಭುಜದ ಮೇಲೆ ಹಾಕಿಕೊಂಡಿರುವರು. ಪಾದಗಳಲ್ಲಿ ಆವುಗೆಯನ್ನು ಧರಿಸಿದ್ದು ಬಲಗೈಯಿಂದ ಆಶೀರ್ವದಿಸುತ್ತಿರುವರು. ಗುಡು-ಗುಡಿಸಿ ಬಂದ ಹುಲಿಯು ಶ್ರೀ ಶಿವಯೋಗಿಗಳನ್ನು ಕಂಡು ಅವರ ಪಾದಗಳ ಬಳಿ ಬಂದು ತನ್ನ ತಲೆಬಾಗಿ ನಮಿಸುವ ದೃಶ್ಯವೂ ಚೆನ್ನಾಗಿ ಮೂಡಿ ಬಂದಿದೆ. ಇದರಲ್ಲಿ ವರ್ಣಸಾಮರಸ್ಯ ಪ್ರಮಾಣ ಬದ್ಧತೆಯಿಂದ ಚಿತ್ರವು ಸುಂದರವಾಗಿ ಮೂಡಿ ಬಂದಿದೆ.

**೭. ಲಿಂಗಪೂಜಾ ನಿರತ ಶಿವಯೋಗಿಗಳ ಎದುರಿನಲ್ಲಿ ಕುಳಿತ ನಾಗರಾಜ :**

ಇದು ಕೂಡಾ ಶ್ರೀ ಶಿವಯೋಗಿಗಳ ಪವಾಡಕ್ಕೆ ಸಂಬಂಧಿಸಿದಂತೆ ಇದ್ದು ಈ ಕಲಾಕೃತಿಯನ್ನು ೨.೬' x ೨' ಅಡಿ ಉದ್ದ ಮತ್ತು ಅಗಲವಾಗಿರುವ ಕ್ಯಾನ್ವಾಸ್ ಬಟ್ಟೆಯ ಮೇಲೆ ತೈಲವರ್ಣದಿಂದ ಚಿತ್ರಿಸಲಾಗಿದೆ. ಶ್ರೀ ಶಿವಯೋಗಿಗಳು ಮರವೊಂದರ ಕೆಳಗಡೆ ಪದ್ಮಾಸನದಲ್ಲಿ ಕುಳಿತಿದ್ದು ಎಡಗೈಯಲ್ಲಿ ಲಿಂಗವನ್ನು ಇಟ್ಟುಕೊಂಡು ಬಲಗೈಯಲ್ಲಿ ವಸ್ತ್ರವನ್ನು ಮುಚ್ಚಿಕೊಂಡು ರುದ್ರಾಕ್ಷಿಮಾಲೆಯನ್ನು ಹಿಡಿದಿರುವಂತಿದ್ದು ಕೊರಳಲ್ಲಿ ರುದ್ರಾಕ್ಷಿ ಮಾಲೆ ಧರಿಸಿರುವರು. ಮೈಮೇಲೆ ಕ್ಯಾವಿಯ ದುಪ್ಪಟ್ಟಾವನ್ನು ಹೊದ್ದುಕೊಂಡಿರುವರು. ಪೂಜಾ ನಿರತರಾದ ಶಿವಯೋಗಿಗಳು ತದೇಕಚಿತ್ತದಿಂದ ಇಷ್ಟಲಿಂಗವನ್ನು ನೋಡುತ್ತಲಿದ್ದು ಅವರ ಎದುರಿನಲ್ಲಿ ಘಟಸರ್ಪವೊಂದು ಹೆಡೆಬಿಚ್ಚಿಕೊಂಡು ಕುಳಿತು ನೋಡುತ್ತಿದೆ ಹಸಿರು ಮತ್ತು ನೀಲಿ ವರ್ಣದಲ್ಲಿ ನೆಲ ಮತ್ತು ಜಲವನ್ನು ತೋರಿಸಿದ್ದು ಗಿಡಮರಗಳನ್ನೆಲ್ಲ ಹಳದಿ, ಹಸಿರು, ನೀಲಿ, ಕೆಂಪುವರ್ಣಗಳಲ್ಲಿ ಚಿತ್ರಿಸಲಾಗಿದೆ. ಹಿನ್ನೆಲೆಯಲ್ಲಿ ನೀಲಿಯ ಬೆಟ್ಟಗಳಿದ್ದು ಹಳದಿ, ಕೇಸರಿ, ಜಾಂಬಳಿ, ವರ್ಣಗಳಿಂದ ಆಕಾಶವನ್ನು ತೋರಿಸಿದ್ದು ಮುಂಜಾವಿನ ಕಲ್ಪನೆಯನ್ನು ತರುತ್ತಿದೆ.

ಇವುಗಳಲ್ಲದೇ ಕಲಾವಿದರಾದ ಶ್ರೀ ಎಸ್.ಬಿ.ಸುಂಕದ, ಶ್ರೀ.ಎಚ್.ಆರ್.ಗಲಗಲಿ, ಶ್ರೀ ವೀರಣ್ಣಾ ರಾಂಪೂರ ಮಠ, ಶ್ರೀ ವ್ಹಿ.ಬಿ.ಹೂಲಿ ಅವರೆಲ್ಲ ಸೇರಿಕೊಂಡು ಪುರಾತನ ೬೪ ಶಿವಶರಣರ ಕಲಾಕೃತಿಗಳನ್ನು ಜಲವರ್ಣದಿಂದ ಕಾಗದದಲ್ಲಿ ರಚಿಸಿದ್ದು ಕಥೆಯ ವಸ್ತು, ವಿಷಯಗಳು, ಸಂಯೋಜನೆಗೊಳಿಸಿರುವ ರೀತಿ ಬಲಿಷ್ಠವಾಗಿ ಕಂಡುಬರುತ್ತವೆಯಾದರೂ ಆಕಾರ, ಆಕೃತಿಗಳ ದೃಷ್ಟಿಯಿಂದ ಸೊರಗಿದ ಚಿತ್ರಗಳಾಗಿ ರೂಪುಗೊಂಡಿವೆ. ಆದರೆ ಆ ಸಂದರ್ಭದಲ್ಲಿ ರಚಿಸಿದ ಚಿತ್ರಗಳ ದಾಖಲಿಸುವ ಪ್ರಯತ್ನಗಳನ್ನೆಲ್ಲಾ ಮೆಚ್ಚಿಕೊಳ್ಳಲೇ ಬೇಕಾಗುತ್ತದೆ. ಅವುಗಳನ್ನು ಇಂದು ಸಂರಕ್ಷಿಸುವ ಇಲ್ಲವೇ ಪುನರುಜ್ಜೀವನಗೊಳಿಸುವ ಮಹತ್ವದ ಕಾರ್ಯ ಅವಶ್ಯವಾಗಿದೆ. ಮುರುಘಾಮಠದಲ್ಲಿರುವ ಕಲಾಕೃತಿಗಳ ಪ್ರಮುಖ ಕಲಾವಿದ ಶ್ರೀ ಎಂ.ಎ.ಚೆಟ್ಟಿ ಅವರ ಪರಿಚಯ ಕೆಳಗಿನಂತಿದೆ.

**ವೀರಶೈವ ಚಿತ್ರ ರಚನೆಯ ವಿಶಿಷ್ಟ ಕಲಾವಿದ ಎಂ.ಎ.ಚೆಟ್ಟಿ :**

ಶ್ರೀ ಮುರುಗೆಪ್ಪಾ ಅಡಿವೆಪ್ಪಾ ಚೆಟ್ಟಿ ಅವರು ೧೯೧೦ ರಲ್ಲಿ ಬೆಳಗಾಂವಿ ಜಿಲ್ಲೆಯ ಅಥಣಿಯಲ್ಲಿ ಜನಿಸಿದ್ದು ಇವರು ಚಿಕ್ಕವರಿದ್ದಾಗಲೇ ಚಿತ್ರಕಲೆಯ ಗೀಳನ್ನು ಹಚ್ಚಿಕೊಂಡಿದ್ದರು. ರಾಜಾರವಿವರ್ಮನ ಕಲಾಕೃತಿಗಳನ್ನು ನಕಲು ಮಾಡುತ್ತಿದ್ದರು. ಇವರಿಗೆ ಕಲೆಯಲ್ಲಿ ಆಸಕ್ತಿ ಇರುವುದರಿಂದ ಮುಂಬೈದ ಜೆ.ಜೆ.ಕಲಾಶಾಲೆಗೆ ಚಿತ್ರಕಲಾ ಶಿಕ್ಷಣವನ್ನು ಕಲಿಯಲು "ಶಿರಸಂಗಿ ಟ್ರಸ್ಟ್ ಫಂಡ್‌ದ ಸ್ಕಾಲರ್ ಶಿಪ್" ಪಡೆದುಕೊಂಡು ೧೯೨೪ ರಲ್ಲಿ ಪ್ರವೇಶಪಡೆದರು. ೧೯೩೨ ರಿಂದ ೧೯೩೪ ರವರೆಗೆ "ಜೆ.ಜೆ. ಸ್ಕೂಲಿನ ಫೆಲೋ ಆಗಿ ಪ್ರಥಮ ದರ್ಜೆಯಲ್ಲಿ ಪಾಸಾಗುತ್ತ" ಬಂದ ಇವರು ೧೯೩೩ರಲ್ಲಿ ಮುಂಬೈ ಆರ್ಟ್ ಸೊಸಾಯಿಟಿಯ ವಾರ್ಷಿಕ ಪ್ರದರ್ಶನದಲ್ಲಿ ಇವರು ಚಿತ್ರಿಸಿದ ಗಿಡದ ಚಿತ್ರ ಒಂದಕ್ಕೆ ಪ್ರಶಸ್ತಿಯೂ ಬಂದಿತು. ಕಲಾ ಶಾಲೆಯ ನಿರ್ದೇಶಕರಾದ W.E.Gladstone Solomon ಅವರು ಇವರ ಕೃತಿಯನ್ನು ಕಲಾಶಾಲೆಯ ಸಂಗ್ರಹಾಲಯದಲ್ಲಿರಿಸಿರುವರು.

ಅವರ ಪ್ರೋತ್ಸಾಹ, ಮಾರ್ಗದರ್ಶನದಿಂದಾಗಿ ಇಂಗ್ಲೆಂಡದಲ್ಲಿ ಪ್ರದರ್ಶನದೊಂದಿಗೆ ದೇಶದ ನಾನಾ ಕಡೆ ಪೂನಾ, ಅಮೃತ್‌ಸರ್, ನಾಗಪೂರ, ಮದ್ರಾಸ್‌ಗಳಂತಹ ಪ್ರಮುಖಪಟ್ಟಣಗಳಲ್ಲಿ ಕಲಾ ಪ್ರದರ್ಶನ ಮಾಡಿದರು. ಇವರಿಗೆ ಹಲವಾರು ಪ್ರಶಸ್ತಿಗಳು ಬಂದಿದ್ದು ಬಂಗಾರ, ಬೆಳ್ಳಿಯ ಪದಕಗಳನ್ನು ಪಡೆದಿರುವರು. ಇವರು ರಚಿಸಿದ **"ಶಿವಾನುಭವ ಮಂಟಪ"** ಕಲಾಕೃತಿಯು ೬' x ೪' ಅಳತೆಯ ಕ್ಯಾನ್ವಾಸ್ ಬಟ್ಟೆಯ ಮೇಲೆ ತೈಲವರ್ಣದಿಂದ ರಚಿಸಿದ್ದು ಇದನ್ನು ಅಖಿಲಭಾರತ ವೀರಶೈವ ಸಮ್ಮೇಳನಕ್ಕೆ ಕೂಡಿದ್ದು ಈಗ ಬಸವ ಕಲ್ಯಾಣದಲ್ಲಿ ಕಾಯ್ದಿರಿಸಲಾಗಿದೆ. ಮೈಸೂರು ಅರಸರಿಂದಲೂ ಇವರು ಒಳ್ಳೆಯ ಕಲಾವಿದರೆಂದು ಪ್ರಶಂಸೆ ಪಡೆದಿರುವರು. ಇವರು ಶ್ರೀ ಮುರುಘೇಂದ್ರ ಸ್ವಾಮೀಜಿಯವರ ಕುರಿತು ನೂರಾರು ಕಲಾಕೃತಿಗಳನ್ನು ಧಾರವಾಡಕ್ಕೆ ನೀಡಿರುವರು. ಸ್ವಾಮೀಜಿಗಳ ಭಾವಚಿತ್ರ, ವ್ಯಕ್ತಿ ಚಿತ್ರ, ಶಿವಯೋಗಿಗಳ ಪವಾಡಗಳಿಗೆ ಸಂಬಂಧಿಸಿದ ಕಲಾಕೃತಿಗಳು ಅಲ್ಲದೆ ಶ್ರೀ ಮಹಾಂತ ಅಪ್ಪಗಳು, ಶ್ರೀ ಮೃತ್ಯುಂಜಯ ಅಪ್ಪಗಳು, ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳು, ಶ್ರೀ ಸಿದ್ಧೇಶ್ವರ ಸ್ವಾಮಿಗಳು, ಆಡಿ ಚಿಕ್ಕೊಡಿ, ಶ್ರೀ ಮಹಾಂತ ಸ್ವಾಮಿಗಳು ಇಳಕಲ್, ಶ್ರೀ ಸಿದ್ಧಲಿಂಗ ಸ್ವಾಮಿಗಳು, ಅಥಣಿ ಹೀಗೆ ಹಲವಾರು ಸ್ವಾಮಿಗಳಿಗೆ ವಿಶೇಷವಾಗಿ ಅಥಣಿಯ ಮುರುಘೇಂದ್ರ ಶಿವಯೋಗಿಗಳ ಕುರಿತು ರಚಿಸಿದ ನೂರಾರು ಕಲಾಕೃತಿಗಳನ್ನು ಧಾರವಾಡದ ಮುರುಘಾಮಠವು ಸಂಗ್ರಹಿಸಿತ್ತು ಎಂದು ತಿಳಿದುಬರುತ್ತದೆ.

ಇವರು ಪಕ್ಕಾ ವೀರಶೈವರಾಗಿದ್ದು ದಿನಾಲು ಎರಡು ಹೊತ್ತು ಇಷ್ಟಲಿಂಗ ಪೂಜೆ ಮಾಡುತ್ತಲಿರುವುದು. ಸ್ನಾನವಿಲ್ಲದೆ ಆಹಾರಸೇವನೆ ಇಲ್ಲ. ಜಂಗಮರೆಂದರೆ ಇವರಿಗೆ ಇಷ್ಟ. ಅದರಲ್ಲೂ ಅಥಣಿಯ ಮುರುಘೇಂದ್ರ ಶಿವಯೋಗಿಗಳೆಂದರೆ ಅಚ್ಚು ಮೆಚ್ಚು. ಆದ್ದರಿಂದಲೇ ಇವರ ಕುರಿತಾಗಿಯೇ ನೂರಾರು ಕಲಾಕೃತಿಗಳನ್ನು ರಚಿಸಿರುವರು. ಇವರು ವೀರಶೈವ ಚೆನ್ನಬಸವ ಪುರಾಣಗಳಾದಿಯಾಗಿ ಧರ್ಮಕ್ಕೆ ಸಂಬಂಧಿಸಿದಂತೆ ಕಲಾಕೃತಿಗಳನ್ನು ರಚಿಸಿದ್ದು ಅಧೀಕವಾಗಿದೆ.[೭]

ಇವುಗಳನ್ನೆಲ್ಲ ಉತ್ತರ ಕರ್ನಾಟಕದ ಹಲವಾರು ಮಠಗಳಲ್ಲಿ ಸಂಗ್ರಹಿಸಿಡಲಾಗಿದೆ. ಇವರ ಕೆಲವು ಕಲಾಕೃತಿಗಳನ್ನು ಮೈಸೂರು ಅರಸರು ತಮ್ಮ ಅರಮನೆಯಲ್ಲಿ ಸಂಗ್ರಹಿಸಿಕೊಂಡಿರುವರು. ಮುಂಬೈಪ್ರಾಂತದ ಚಿತ್ರಕಲಾ ತಪಾಸಣಾಧಿಕಾರಿ (I D C) ಗಳಾದ ಶ್ರೀ ಡಿ.ಜಿ.ಬಡಿಗೇರ ಅವರು (ಶ್ರೀ.ಎಂ.ಎ.ಚೆಟ್ಟಿ)ಇವರನ್ನು ಮುಂಬೈ ಸರಕಾರದ ಪರೀಕ್ಷಾಧಿಕಾರಿಗಳನ್ನಾಗಿ ೯ ವರುಷ ನೇಮಿಸಿದರು. ಗದಗದ ವಿಜಯಕಲಾ ಮಂದಿರದಲ್ಲಿ ಉಪ ಪ್ರಾಚಾರ್ಯರಾಗಿ ಸುಮಾರು ೨೦ ವರುಷ ಕಾರ್ಯ ನಿರ್ವಹಿಸಿದ ಇವರು ಭಾವಚಿತ್ರ, ವ್ಯಕ್ತಿಚಿತ್ರ, ಸಂಯೋಜನಾ ಚಿತ್ರಗಳ ಕುರಿತು ಉತ್ತಮ ಪಾಠವನ್ನು ಮಾಡುತ್ತಿದ್ದರು ಗದಗದಲ್ಲಿಯೇ ಮನೆಮಾಡಿಕೊಂಡಿದ್ದರು. ಸಾದಾ ಜೀವನ ಉನ್ನತ ವಿಚಾರಗಳೊಂದಿಗೆ ಸರಳ ಜೀವನ ನಡೆಸಿದ ಮೇಧಾವಿ ಕಲಾವಿದ. ಧಾರ್ಮಿಕವಾಗಿ ಅದರಲ್ಲೂ ವೀರಶೈವ ಧರ್ಮದ ಕುರಿತು ರಚಿಸಿದ ಕಲಾಕೃತಿಗಳಿಂದಾಗಿ ವೀರಶೈವ ಕಲಾವಿದನೆಂದೇ ಕರ್ನಾಟಕಕ್ಕೆ ಪರಿಚಿತರಾಗಿರುವರಲ್ಲದೇ ಮಠಮಾನ್ಯಗಳಲ್ಲಿ ಇಂದಿಗೂ ಕೂಡಾ ಅವರ ಕಲಾಕೃತಿಗಳು ಅಜರಾಮರವಾಗಿವೆ.

೭. D.V.Halabhavi : My Contemporary Artist : p-10

ಇಂದಿಗೂ ಜನಸಾಮಾನ್ಯರನ್ನು ಆಧ್ಯಾತ್ಮಿಕ ಬೆಳಕಿನತ್ತ ಕೊಂಡೊಯ್ಯುವಲ್ಲಿ ಈ ಕಲಾಕೃತಿಗಳು ಪ್ರಮುಖ ಪಾತ್ರವಹಿಸುತ್ತವೆ.

**ಕರ್ನಾಟಕ ವಿಶ್ವವಿದ್ಯಾಲಯದ ಬಸವ ಪೀಠದಲ್ಲಿ ಸಂಗ್ರಹಿಸಿದ ಕ್ಯಾನ್ವಾಸ್ (ಬಟ್ಟೆ) ವರ್ಣ ಕಲಾಕೃತಿಗಳು**

**೧. ಕಲ್ಯಾಣದ ಅನುಭವ ಮಂಟಪ :**

ಪ್ರಭುದೇವರ ಅಧ್ಯಕ್ಷತೆಯಲ್ಲಿ ನಡೆದ ಅನುಭವಗೋಷ್ಠಿಯ ದೃಶ್ಯವಿದಾಗಿದೆ. ಬಸವಣ್ಣ, ಚೆನ್ನಬಸವಣ್ಣ, ಅಕ್ಕಮಹಾದೇವಿ, ಸಿದ್ಧರಾಮರಾದಿಯಾಗಿ ಶಿವಶರಣರೆಲ್ಲ ಸೇರಿರುವರು. "ಕಾಯಕದ ಮಹತ್ವದ" ಕುರಿತು ಚರ್ಚಿಸುತ್ತಿರುವ ಸಂದರ್ಭದ ಕಲಾಕೃತಿಯಾಗಿದೆ. ಇದೊಂದು ಕಾಗದದ ಮೇಲಿನ ಜಲವರ್ಣದ ಕಲಾಕೃತಿಯಾಗಿದೆ. ಸಿಂಹಾಸನಾರೂಢರಾದ ಅಲ್ಲಮ ಪ್ರಭುಗಳು, ಎಡಬಲಗಳಲ್ಲಿ ಚೆನ್ನಬಸವಣ್ಣ, ಬಸವಣ್ಣರಿರುವರು. ಅವರ ಹಿಂದುಗಡೆ ಗಂಗಾಂಬಿಕೆ, ನೀಲಾಂಬಿಕೆಯರು, ಇನ್ನೊಂದೆಡೆ ಅಕ್ಕನಾಗಮ್ಮ, ಅಕ್ಕಮಹಾದೇವಿಯರು ಇದ್ದು ಇವರ ಮುಂದುಗಡೆ ನಾಲ್ವರು ಋಷಿಗಳು ಕುಳಿತುಕೊಂಡಿದ್ದು ಸುತ್ತಲೂ ಶಿವಶರಣರಿಂದ ಅನುಭವ ಮಂಟಪ ತುಂಬಿ ತುಳುಕುತ್ತಿದೆ. ಈ ವಿಚಾರ ಗೋಷ್ಠಿಯನ್ನು ಶಿಸ್ತುಬದ್ಧವಾಗಿ ನಡೆಸುತ್ತಿರುವ ದೃಶ್ಯವನ್ನು ಕಾಣಬಹುದಾಗಿದೆ. ಸಂಯೋಜನಾ ದೃಷ್ಟಿ ವರ್ಣಗಾರಿಕೆ ವಿಂಗಡಣೆಗಳು ಅತ್ಯಂತ ಸುಂದರವಾಗಿ ಮೂಡಿಬಂದಿವೆ. ಇದರಲ್ಲಿ ನಾಲ್ಕು ಹಂತಗಳಲ್ಲಿ ಶಿವಶರಣರನ್ನು ಚಿತ್ರಿಸಲಾಗಿದೆ.

**೨. ತೋಂಟದ ಸಿದ್ಧಲಿಂಗಯತಿಗಳ ಶೂನ್ಯ ಪೀಠ :**

ತೋಂಟದ ಸಿದ್ಧಲಿಂಗ ಶಿವಯೋಗಿಗಳು "ಷಟ್‌ಸ್ಥಲ ಸಿದ್ಧಾಂತ"ವನ್ನು ಬೋಧಿಸುತ್ತಿರುವ ದೃಶ್ಯವಾಗಿದೆ. ಈ ಕಲಾಕೃತಿಯು ಕಲ್ಯಾಣದ ಅನುಭವ ಮಂಟಪದ ಮಾದರಿಯಲ್ಲಿಯೇ ರಚನೆಗೊಂಡಿದ್ದು ನಾಲ್ಕು ಹಂತಗಳಲ್ಲಿ ಚಿತ್ರಿಸಲಾಗಿದ್ದು ಇದರಲ್ಲಿ ಎರಡು ಹಂತಗಳಲ್ಲಿ ಚಿತ್ರಿಸಲಾಗಿದೆ. ಮೂಲ ಸಿಂಹಾಸನದಲ್ಲಿ ಷಟ್ ಚಕ್ರಗಳನ್ನು ತೋರಿಸಿದ್ದು ಈ ಸಿಂಹಾಸನದಲ್ಲಿ ಶ್ರೀ ಸಿದ್ಧಲಿಂಗ ಶಿವಯೋಗಿಗಳು ಆಸೀನರಾಗಿದ್ದು ಅವರ ಬಲಗಡೆಯ ಭಾಗದಲ್ಲಿ "ಬೋಲೋ ಬಸವನಿಗೆ ಷಟ್‌ಸ್ಥಲಸಿದ್ಧಾಂತವನ್ನು ಬೋಧಿಸುತ್ತಿದ್ದು ಶ್ರೀ ಶಿವಯೋಗಿಗಳ ಎಡಬಲಗಳಲ್ಲಿ ಶರಣ ಶರಣೆಯರು ಅವರ ಆಶೀರ್ವಚನವನ್ನು ಕೈಮುಗಿದು ನಿಂತುಕೊಂಡು ಆಲಿಸುತ್ತಿರುವರು. ಕೆಳಗಡೆ ಭಾಗದಲ್ಲಿ ಬಲಗಡೆಯಲ್ಲಿ ಶ್ರೀ ಸಿದ್ಧಲಿಂಗ ಯತಿಗಳು ತಪಸ್ಸಿಗೆ ಕುಳಿತಿದ್ದು ಅವರಿಗೆ ಹುತ್ತು ಬೆಳೆದಿದ್ದು, ಮೇಲೆ ಗೋವು ತನ್ನ ಹಾಲನ್ನು ನೀಡುತ್ತಿರುವ ದೃಶ್ಯವಿದೆ. ಎಡಬಲಗಳಲ್ಲಿ ಶರಣ-ಶರಣೆಯರು ಕೈಮುಗಿದು ನಿಂತುಕೊಂಡಿರುವರು. ಚಿತ್ರದ (ಕೆಳಗಿನ) ಎಡಭಾಗದಲ್ಲಿ ಮರದ ಕೆಳಗಡೆ ಮಂಟಪಗಳಲ್ಲಿ ಋಷಿ ಮುನಿಗಳು ತಪಸ್ಸಿಗೆ ಕುಳಿತಿರುವ ಚಿತ್ರಗಳಿವೆ.

**ಮರದ ಮೇಲಿನ ಫಲಕ ಮಾಧ್ಯಮದ ವರ್ಣಚಿತ್ರಗಳು :**

ವೀರಶೈವ ಹಸ್ತಪ್ರತಿಗಳಲ್ಲಿನ ಫಲಕಮಾಧ್ಯಮದ ವರ್ಣಚಿತ್ರಗಳ ರಚನೆಗಳಲ್ಲಿ ಶಿವನೋಲಗ ಅಥವಾ ಶಿವಪಂಚಾಯತನ, ಶಿವಲಿಂಗ, ವೃಷಭ, ನಂದಿ, ಗಣಪತಿ, ವೀರಭದ್ರ, ಭಂಗಿ ಹೀಗೆ ಚಿತ್ರಿಸಲಾಗಿದ್ದು ಇವುಗಳದೇ

ವಿಶೇಷ ಅಧ್ಯಯನ ಮಾಡಬಹುದಾದಷ್ಟು ಕಲಾಫಲಕಗಳು ದೊರೆಯುತ್ತವೆ. ಸಾಮಾನ್ಯವಾಗಿ ಈ ಎಲ್ಲ ಫಲಕಗಳಿಗೂ ಹಿನ್ನೆಲೆಯಲ್ಲಿ ಕೆಂಪುವರ್ಣವನ್ನು ಲೇಪಿಸಲಾಗುತ್ತದೆ ಹಾಗೂ ಅಂಚುಗಳಿಗೆ ನಕ್ಷೆಯನ್ನು ಮಾಡಿರುವರು.

**ಚಿತ್ರ ಫಲಕ ೧:** ಮರದ ಫಲಕವೊಂದರ ಮೇಲೆ ಬಲಬದಿಗೆ ಭೃಂಗಿಯು ಕೈಮುಗಿದು ನಿಂತುಕೊಂಡಿರುವನು. ಅವನ ಹಿಂದುಗಡೆ ಅಲಂಕಾರಿಕ ಗಿಡವೊಂದನ್ನು ಮಾಡಲಾಗಿದೆ. ಈ ಭೃಂಗಿಯ ಎದುರುಗಡೆಯಲ್ಲಿ "ವೃಷಭೋದ್ಧರಣೆ"ಯ ಚಿತ್ರವನ್ನು ರಚಿಸಿದ್ದು ವೃಷಭವು ತನ್ನ ಬಲಗಾಲನ್ನು ವ್ಯಕ್ತಿಯೋರ್ವನ ತಲೆಯ ಮೇಲೆ ಇಟ್ಟಿದ್ದು ಎದುರುಗಡೆ ನೋಡುತ್ತಿದೆ. ಈ ಫಲಕದ ಸುತ್ತಲೂ ಅಂಚಿನಲ್ಲಿ ನಕ್ಷೆಯನ್ನು ಮಾಡಲಾಗಿದೆ.

**ಚಿತ್ರ ಫಲಕ ೨:** ಮರದ ಫಲಕದ ಹಿನ್ನೆಲೆಯಲ್ಲಿ ಕೆಂಪುವರ್ಣವನ್ನು ಬಳಿಯಲಾಗಿದೆ. ಫಲಕದ ಬಲಬದಿಯಲ್ಲಿ ಹಳದಿ ವರ್ಣದ ಹೂವು, ಅದರ ಮುಂದುಗಡೆ ಪೀಠವೊಂದರ ಮೇಲೆ ಕಪ್ಪು ವರ್ಣದ ಲಿಂಗವನ್ನು ಚಿತ್ರಿಸಲಾಗಿದೆ. ಅದರ ಮುಂದೊಂದು ಹೂವನ್ನು ಮಾಡಿದ್ದು, ಅದರ ಮಧ್ಯದಲ್ಲಿ ರಂಧ್ರವನ್ನು ಮಾಡಲಾಗಿದೆ. ಅದರಲ್ಲಿ ಹಸ್ತಪ್ರತಿ ಕಟ್ಟಲು ದಾರವನ್ನು ಪೋಣಿಸಲಾಗಿದೆ. ಅದರ ಮುಂದುಗಡೆಯಲ್ಲಿ ಪೂಜಾರಿಯೊಬ್ಬ ಪೂಜೆಯನ್ನು ಮಾಡುತ್ತಿದ್ದು ಬಲಗೈಯಲ್ಲಿ ಧೂಪಾರತಿ ಹಿಡಿದು ಎಡಗೈಯಿಂದ ಗಂಟೆಯನ್ನು ಬಾರಿಸುತ್ತಿರುವ ದೃಶ್ಯವಿದೆ. ಮಧ್ಯದಲ್ಲಿ ಒಂದು ಹೂವನ್ನು ರಚಿಸಿದ್ದು ಅದರ ಹಿಂದುಗಡೆ ಮಹಿಳೆಯೋರ್ವಳು ಆರತಿಯನ್ನು ಹಿಡಿದುಕೊಂಡು ನಿಂತಿರುವಳು. ಅವಳ ಹಿಂದೆ ಮತ್ತೆ ಹೂವೊಂದನ್ನು ಚಿತ್ರಿಸಿದ್ದು ಅದರ ಮಧ್ಯದಲ್ಲಿಯೂ ರಂಧ್ರವನ್ನು ಮಾಡಲಾಗಿದೆ. ಈ ಫಲಕದ ಎಡಬದಿಯಲ್ಲಿ ಪೀಠವೊಂದರ ಮೇಲೆ ನಂದಿಯ ಚಿತ್ರವನ್ನು ರಚಿಸಲಾಗಿದೆ. ಅದರ ಹಿಂದುಗಡೆಯೊಂದು ಹೂವನ್ನು ರಚಿಸಲಾಗಿದೆ. ಈ ಫಲಕದ ಸುತ್ತಲೂ ಹಳದಿವರ್ಣದ ಅಂಚನ್ನು ರಚಿಸಲಾಗಿದೆ.

**ಚಿತ್ರ ಫಲಕ ೩:** ಈ ಮರದ ಫಲಕದ ಮೇಲೆ ಚಿತ್ರಿಸಲಾಗಿದ್ದು ಹಿನ್ನೆಲೆಯಲ್ಲಿ ಕೆಂಪುವರ್ಣ ಬಳಿಯಲಾಗಿದೆ. ಫಲಕದ ಎಡಬದಿಯಲ್ಲಿ ಪೀಠವೊಂದರ ಮೇಲೆ ಪಂಚಮುಖ ಶಿವನು ಪದ್ಮಾಸನದಲ್ಲಿ ಕುಳಿತಿರುವನು. ಅವನ ಬಲಬದಿಯಲ್ಲಿ ಪೀಠದ ಮೇಲೆ ಗಣೇಶನು ಬಲಬದಿಗೆ ನೋಡುತ್ತ ಕುಳಿತಿರುವನು. ಫಲಕದ ಬಲಬದಿಯಿಂದ ವೀರಭದ್ರನು ತನ್ನ ಆಯುಧಗಳೊಂದಿಗೆ ಗಂಭೀರವಾಗಿ ಬರುತ್ತಿರುವ ದೃಶ್ಯವನ್ನು ಚಿತ್ರಿಸಲಾಗಿದೆ. ಮೇಲಿನಿಂದ ಹೂವಿನ ಸರಗಳನ್ನು ಇಳಿಬಿಡಲಾಗಿದೆ. ಈ ಚಿತ್ರ ಫಲಕದ ಅಂಚಿನಲ್ಲಿ ಹಳದಿ ವರ್ಣದ ರೇಖೆಯಿಂದ ಬರೆಯಲಾಗಿದೆ.

**ಚಿತ್ರ ಫಲಕ ೪:** ಈ ಮರದ ಫಲಕದ ಚಿತ್ರದಲ್ಲಿ ಹಿನ್ನೆಲೆಯಲ್ಲಿ ಕೆಂಪು ವರ್ಣವನ್ನು ಲೇಪಿಸಲಾಗಿದೆ. ಈ ಫಲಕದ ಸುತ್ತ ನೀಲಿ ಮತ್ತು ಹಸಿರುವರ್ಣದ ಪಟ್ಟಿಯನ್ನು ಮಾಡಿದ್ದು, ಹೂವು ಎಲೆಗಳನ್ನು ನಕ್ಷೆಯಾಗಿ ಚಿತ್ರಿಸಿದ್ದು, ಫಲಕದ ಮಧ್ಯದಲ್ಲಿ ಪೀಠವೊಂದರ ಮೇಲೆ ಶಿವನು ಕುಳಿತಿದ್ದು, ಬಲಗಾಲನ್ನು ಕೆಳಗೆ ಬಿಟ್ಟಿದ್ದು, ಎಡದೊಡೆಯ ಮೇಲೆ ಪಾರ್ವತಿಯನ್ನು ಕೂಡ್ರಿಸಿಕೊಂಡಿದ್ದು ಇವರಿಗೆ ಎಡಬಲಗಳಲ್ಲಿರುವ ಸ್ತ್ರೀಯರಿರ್ವರು ಆರತಿಯನ್ನು ಮಾಡುತ್ತಿದ್ದು ಮೇಲೆ ಎತ್ತಿದ ಆರತಿಯ ಚಲನೆಯನ್ನು ತೋರಿಸಲಾಗಿದೆ. ಆದರೆ, ಆ ತಟ್ಟೆಯಲ್ಲಿರುವ ಆರತಿಗಳು ಬೀಳುತ್ತವೆ ಏನೋ ಎನಿಸುತ್ತಿವೆ. ಜಾನಪದೀಯ ಅಂಶಗಳನ್ನು ಪ್ರಮುಖವಾಗಿಟ್ಟುಕೊಂಡು ಚಿತ್ರಿಸಲಾಗಿದೆ.

**ಚಿತ್ರ ಫಲಕ ೫:** ಈ ಮರದ ಫಲಕದ ಮೇಲೆ ಶಿವನ ತೊಡೆಯನ್ನೇರಿ ಕುಳಿತ ಪಾರ್ವತಿ ಇದ್ದು ನಂದಿವಾಹನರಾಗಿ ಪೀಠಸ್ಥರಾಗಿ ಕುಳಿತಿದ್ದು ಇವರ ಮಕ್ಕಳಾದ ಗಣಪತಿ, ಹಾಗೂ ವೀರಭದ್ರ ಶಿವನ ಗಣಧರ ಭೃಂಗಿ ನರ್ತಿಸುತ್ತಿರವುದು, ಅದಕ್ಕೆ ಸಂಗೀತವನ್ನು ನುಡಿಸುವವರು ನಾರದ ತಂಬೂರಿಯನ್ನು ಬಾರಿಸುತ್ತಿದ್ದು, ನಂದಿ, ಶುಕಮುನಿಗಳಿರುವ ಫಲಕದ ಅಂಚಿನ ಸುತ್ತಲೂ ನಕ್ಷೆ ಇದೆ.

**ಚಿತ್ರ ಫಲಕ ೬:** ಶಿವನೋಲಗದ ದೃಶ್ಯವಾಗಿದ್ದು ಶಿವಪಾರ್ವತಿಯರು ಪೀಠವೊಂದರ ಮೇಲೆ ಕುಳಿತಿದ್ದು ಪೀಠದ ಮುಂದುಗಡೆ ನಂದಿಯು ಕುಳಿತಿದ್ದು ಎಡಬಲಗಳಲ್ಲಿ ಬ್ರಹ್ಮ, ವಿಷ್ಣು, ಭಕ್ತರು, ಸೇವಕರು, ಇರುವ ಫಲಕವಾಗಿದೆ. ಇದರ ಅಂಚಿನಲ್ಲಿ ನಕ್ಷೆ ಇದೆ.

**ಬಬಲೇಶ್ವರ ಬೃಹನ್ಮಠದ ಹಿನ್ನೆಲೆ :**

ವಿಜಾಪುರ ತಾಲೂಕಿನ ಬಬಲೇಶ್ವರ ಗ್ರಾಮದಲ್ಲಿಯ ಪುರಾತನವಾದ ಹಿರೇಮಠದ ಶ್ರೀ ಗುರುಪಾದೇಶ್ವರ ಸ್ವಾಮಿಗಳು ನಾಡನ್ನು ಸುತ್ತುತ್ತ ಕಲಘಟಗಿ ತಾಲೂಕಿನ ತರ್ಲಘಟ್ಟಿಗೆ ಬಂದಾಗ ಆ ಊರಿನವರಾದ ಭಕ್ತದಂಪತಿಗಳು, ಮನೆಯಲ್ಲಿ ವಿಶ್ರಾಂತಿ ತೆಗೆದುಕೊಂಡು ಮತ್ತೆ ಹೊರಡುವಿರಂತೆ ಎಂದು ಕೇಳಿಕೊಳ್ಳಲು ಅವರ ಮನೆಯಲ್ಲಿ ಆ ದಿನ ಉಳಿದುಕೊಂಡರು. ಆಗ ದಂಪತಿಗಳ ಮಗುವಾದ ರುದ್ರಪ್ಪನನ್ನು ಕಂಡು, ಅವನ ಮುಖಭಾವಗಳನ್ನು ಪರಿಶೀಲಿಸಿದ ಶ್ರೀಗಳು ಇವನು ನಮ್ಮ ಮಠದ ಉತ್ತರಾಧಿಕಾರಿಯಾಗುವನೆಂದು ಹೇಳಿ ಮತ್ತೆ ನಾಡನ್ನು ಸುತ್ತಲು ಹೊರಟರು. ಮುಂದೆ ಬಬಲೇಶ್ವರಕ್ಕೆ ಮರಳಿ ಬಂದು ಊರಿನ ನಾಗರಿಕರ ಮುಂದೆ ಆಶಿರ್ವಚನ ನೀಡುತ್ತ, ತರ್ಲಘಟ್ಟಿಯ ರುದ್ರಪ್ಪನನ್ನು ಈ ಮಠದ ಪೀಠಾಧಿಕಾರಿಯನ್ನಾಗಿ ಮಾಡುವ ಆಲೋಚನೆಯನ್ನು ತಿಳಿಸಿದರು. ಅಂತೆಯೇ ಗ್ರಾಮದ ಪ್ರಮುಖರೆಲ್ಲ ಸೇರಿಕೊಂಡು ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನ ತರ್ಲಘಟ್ಟಿಗೆ ಬಂದು ಗುರುಗಳ ಆಜ್ಞೆಯಂತೆ ಬಂದಿದ್ದು, ರುದ್ರಪ್ಪನವರ ತಂದೆ ತಾಯಿಗೆ ತಿಳಿಸಿ ರುದ್ರಪ್ಪನವರನ್ನು ಕರೆತಂದರು. ಬಬಲೇಶ್ವರ ಬೃಹನ್ಮಠದ ಪೀಠಾಧಿಕಾರಿಗಳನ್ನಾಗಿ ಮಾಡಿಕೊಂಡರು. ಆಗ ರುದ್ರಪ್ಪನವರ ಹೆಸರನ್ನು ಬದಲಿಸಿ ಶ್ರೀ ಶಾಂತವೀರರೆಂದು ಪುನರ್ ನಾಮಕರಣ ಮಾಡಿದರು. ಅಂದಿನಿಂದ ಶ್ರೀ ಶಾಂತವೀರ ಸ್ವಾಮಿಗಳು ಮಠದ ಜವಾಬ್ದಾರಿಯನ್ನು ಹೊತ್ತು ಧರ್ಮಕಾರ್ಯದಲ್ಲಿ ತೊಡಗಿದರು. ತಮ್ಮ ಗುರುಗಳ ಸೇವೆಯನ್ನು ಮಾಡುತ್ತ ಈ ಮಠದ ಸ್ವಾಮಿಗಳಲ್ಲಿಯೇ ಅತ್ಯಂತ ಪ್ರಭಾವಿತರಾದ ಶ್ರೀ ಗುರುಪಾದೇಶ್ವರರು ಪವಾಡ ಪುರುಷರಾಗಿದ್ದರು. ಅವರ ಹಾದಿಯಲ್ಲಿ ಸಾಗಿದ ಇವರು ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಇವರು ಭಕ್ತರನ್ನು ಪ್ರೋತ್ಸಾಹಿಸುತ್ತ ಹಿಂದಿನ ಶ್ರೀಗಳ ಕಾರ್ಯವನ್ನು ಮುಂದುವರೆಸಿಕೊಂಡು ಸಾಗುತ್ತಿರುವಂತೆಯೇ ಸ್ವತಃ ಅಧ್ಯಯನ ತಪಸ್ಸುಗಳನ್ನು ಕೈಗೊಳ್ಳುತ್ತಿದ್ದರು. ೧೯೧೪ ಮತ್ತು ೧೯೧೮ ರ ಅವಧಿಯಲ್ಲಿ "ಹರಳಯ್ಯನ ಕ್ಷೇತ್ರದಲ್ಲಿ ತಪವನ್ನು ಮಾಡುತ್ತಿದ್ದರು. ಹರಳಯ್ಯನ ಕ್ಷೇತ್ರದಲ್ಲಿ ಉತ್ಸವವನ್ನು ಮಾಡುವ ಸಂದರ್ಭದಲ್ಲಿ ಸಾವಿರಾರು ಭಕ್ತರು ಪ್ರಸಾದ ಸ್ವೀಕರಿಸುತ್ತಿದ್ದು, ಕುಡಿಯಲು ನೀರು ಇಲ್ಲದಿರುವುದನ್ನು ಭಕ್ತರು ಸ್ವಾಮಿಗಳನ್ನು ಕೇಳಿದಾಗ ಶ್ರೀ ಶಾಂತವೀರರು ಹರಳಯ್ಯನ ಬಾವಿಗೆ ಇಳಿದು ಒಂದು ತಂಬಿಗೆಯ

ಮೇಲೆ ವಸ್ತ್ರವನ್ನು ಹೊದಿಸಿ ತಮ್ಮ ಬಲಗೈ ಹಸ್ತವನ್ನು ಅದರ ಮೇಲಿಟ್ಟು ಮಂತ್ರವೊಂದನ್ನು ಜಪಿಸಿದಾಗ ನೀರು ಉಕ್ಕಿ ಹರಿಯಿತು. ಇಂದಿಗೂ ಆ ನೀರು ಕಡಿಮೆಯಾಗಿಲ್ಲ. ಆ ಜನರೆಲ್ಲ ಈ ಪವಾಡ ಕಂಡು ಧನ್ಯರಾದರು. ೧೯೬೦ ರಲ್ಲಿ ಗದುಗಿನ ಮಲ್ಲಿಕಾರ್ಜುನ ಸ್ವಾಮಿಗಳನ್ನು ಕರೆಸಿಕೊಂಡು "ಜಪಯಜ್ಞ"ಯನ್ನು ಮಾಡಿದರು. ಆ ಸಂದರ್ಭದಲ್ಲಿ ಪ್ರಸಾದಕ್ಕೆ ತುಪ್ಪದ ಕೊರತೆಯಾಗಿತ್ತು. ಆಗಲೂ ಒಂದು ಪವಾಡವನ್ನು ಮಾಡಿದರು. ಹೀಗೆ ತಪಸ್ವಿಗಳಾಗಿ ಪವಾಡ ಪುರುಷರಾಗಿ ಭಕ್ತರ ಹೃದಯದಲ್ಲಿ ಸದಾ ನೆಲೆಸಿದ ಶ್ರೀ ಶಾಂತವೀರ ಸ್ವಾಮಿಗಳು ವಿಜಾಪುರದಲ್ಲಿರುವ ಮಲ್ಲಿಕಾರ್ಜುನ ಸ್ವಾಮಿಗಳ ಶಿಷ್ಯರಾಗಿರುವ ಮೂಲತಃ ಬಬಲೇಶ್ವರದವರಾದ ಶ್ರೀ ಅರವಿಂದ ಅವರನ್ನು ೧೯೭೮ ರ ಅಗಸ್ಟ್‌ನಲ್ಲಿ ಬಬಲೇಶ್ವರ ಬೃಹನ್ಮಠದ ಪಟ್ಟಾಧಿಕಾರಿಗಳನ್ನಾಗಿ ನೇಮಿಸಿಕೊಂಡರು. ಅರವಿಂದರ ಹೆಸರನ್ನು ಶ್ರೀ ಮಹಾದೇವ ಶಿವಾಚಾರ್ಯರೆಂದು ಪುನರ್ ನಾಮಕರಣ ಮಾಡಿದರು. ಈ ಸಮಾರಂಭವನ್ನು ಅದ್ದೂರಿಯಾಗಿಯೇ ಆಚರಿಸಲಾಯಿತು. ಲಕ್ಷಾಂತರ ಜನ ಸೇರಿದ್ದರು. ಇವರು ಶ್ರೀ ಗುರುಪಾದೇಶ್ವರರು ಹಾಗೂ ಶ್ರೀ ಶಾಂತವೀರಸ್ವಾಮಿಗಳು ನಡೆದು ಬಂದ ಹಾದಿಯಲ್ಲಿಯೇ ಸಾಗುತ್ತಿದ್ದು ಭಕ್ತರ ಪ್ರೀತಿಗೆ ಪಾತ್ರರಾಗಿರುವರು. ಶ್ರೀ ಶಾಂತವೀರರು ಗುರುಪಾದೇಶ್ವರರ ಗದ್ದುಗೆ, ಅನುಭವಮಂಟಪ, ಶಿಕ್ಷಣ ಸಂಸ್ಥೆಯನ್ನು ಹುಟ್ಟುಹಾಕಿದರಲ್ಲದೇ "ಶ್ರೀ ಗುರುಪಾದೇಶ್ವರ ಪುರಾಣ"ವನ್ನು ಬರೆಯಿಸಿದರು. ಶ್ರೀಮಹಾದೇವ ಶಿವಾಚಾರ್ಯರು ಶ್ರೀ ಶಾಂತವೀರ ಸ್ವಾಮಿಗಳ ಸೇವೆಗೈಯುತ್ತ, ಭಕ್ತರ ಪ್ರೀತಿಯನ್ನು ಸಂಪಾದಿಸುತ್ತ ಇವರು ಮೊದಲೇ ಪವೀಧರರಾಗಿದ್ದು ಕಾಶೀ ಜಗದ್ಗುರುಗಳಾದ ಚಂದ್ರಶೇಖರ ಶಿವಾಚಾರ್ಯರ ಅಧೀನದಲ್ಲಿದ್ದು "ಶಕ್ತಿ ವಿಶಿಷ್ಟಾದ್ವೈತ" ಸಿದ್ಧಾಂತವೆಂಬ ಪ್ರಬಂಧವನ್ನು ಮಂಡಿಸಿ ಡಾಕ್ಟರೇಟ್ ಪದವಿಯನ್ನು ಪಡೆದರು. ಇದಕ್ಕೆ ಜಗದ್ಗುರುಗಳಿಂದ ಬಂಗಾರದ ಪದಕವನ್ನು ಪಡೆದಿರುವರು. ಇವರು ಧಾರ್ಮಿಕ ಸಾಂಸ್ಕೃತಿಕ ಕಾರ್ಯಗಳನ್ನು ಮಾಡುತ್ತ ಭಕ್ತರನ್ನು ಪ್ರೋತ್ಸಾಹಿಸುತ್ತ ಸಾಗುತ್ತಿರುವರು.

*** ಬಬಲೇಶ್ವರ ಬೃಹನ್ಮಠದಲ್ಲಿಯ ಕ್ಯಾನ್ವಾಸ್ ಹಾಗೂ ಕಾಗದದ ವರ್ಣಚಿತ್ರಗಳು :**

೧) ಶ್ರೀ ಗುರುಪಾದೇಶ್ವರ ಮಹಾಸ್ವಾಮಿಗಳು

೨) ಶ್ರೀ ಶಾಂತವೀರಮಹಾಸ್ವಾಮಿಗಳು

೩) ಡಾ. ಮಹಾದೇವ ಶಿವಾಚಾರ್ಯರು

*** ಶ್ರೀ ಶಾಂತವೀರ ಮಹಾಸ್ವಾಮಿಗಳು :** ಈ ಕಲಾಕೃತಿಯು ಕಾಗದದ ಮೇಲೆ ಜಲವರ್ಣದಿಂದ ಚಿತ್ರಿಸಲಾಗಿದೆ. ಇದರ ಅಳತೆ ೨"x ೨.೬" ಅಡಿಗಳಾಗಿದ್ದು ಕ್ಯಾವಿಯ ಕೌಪೀನವನ್ನು ಧರಿಸಿದ್ದು ಕೊರಳಲ್ಲಿ ಕರಡಿಗೆ ಮತ್ತು ರುದ್ರಾಕ್ಷಿ ಮಾಲೆಯನ್ನು ಧರಿಸಿರುವರು. ಬೆಳ್ಳಿಯಂತೆ ಬಿಳಿಯದಾದ ದಾಡಿ ಮತ್ತು ತಲೆಗೂದಲುಗಳು ಇದ್ದು ತಲೆಯ ಮೇಲೆ ಬನ್ ಆಕಾರದಲ್ಲಿ ಕೂದಲುಗಳನ್ನು ಕಟ್ಟಲಾಗಿದೆ. ಹಣೆಯಲ್ಲಿ ವಿಭೂತಿಯನ್ನು ಧರಿಸಿದ್ದು ಮುಖವು ಶಾಂತಸ್ವರೂಪದಿಂದ ಕಾಂತಿಯುತವಾಗಿ ಕಂಗೊಳಿಸುತ್ತಿದೆ.

**ಇಷ್ಟಲಿಂಗ ಪೂಜಾನಿರತರಾದ ಶ್ರೀ ಮಹಾದೇವ ಶಿವಾಚಾರ್ಯರು :**

ಈ ಕಲಾಕೃತಿಯು ಶ್ರೀ ಮಹಾದೇವ ಶಿವಾಚಾರ್ಯರ ಛಾಯಾ ಚಿತ್ರವಾಗಿದ್ದು, ಪದ್ಮಾಸನದಲ್ಲಿ ಕುಳಿತಿದ್ದು ಎಡಗೈಯಲ್ಲಿ ಇಷ್ಟಲಿಂಗವನ್ನು ಇಟ್ಟು, ಪಂಚೆ ಅದೇ ವರ್ಣದ ಶಾಲನ್ನು ಮೈ ತುಂಬಾ ಹೊದ್ದುಕೊಂಡಿದ್ದು, ಎಡದೊಡೆಯ ಮೇಲೆ ಕರವಸ್ತ್ರವನ್ನು ಇಡಲಾಗಿದೆ. ಕೊರಳಲ್ಲಿ ರುದ್ರಾಕ್ಷಿ ಮಾಲೆಗಳು, ಕರಡಿಗೆಯನ್ನು ಧರಿಸಿದ್ದು ಕಪ್ಪಾದ ದಾಡಿ, ಮೀಸೆ, ತಲೆಗೂದಲುಗಳಿದ್ದು ತಲೆಯ ಮೇಲೆ ಬನ್ ಆಕಾರದಲ್ಲಿ ಕೂದಲುಗಳನ್ನು ಕಟ್ಟಲಾಗಿದ್ದು ಅದಕ್ಕೆ ಬಿಳಿವರ್ಣದ ಮಲ್ಲಿಗೆಯ ಹೂವುಗಳು ಮುಖದ ಅಂದವನ್ನು ಇಮ್ಮಡಿಗೊಳಿಸಿವೆ. ತದೇಕಚಿತ್ತದಿಂದ ಕೈಯಲ್ಲಿರುವ ಇಷ್ಟಲಿಂಗವನ್ನು ನೋಡುತ್ತಿದ್ದು, ಏಕಾಗ್ರತೆಯಿಂದ ಪೂಜೆಗೆ ಕುಳಿತಿರುವ ದೃಶ್ಯ ಸುಂದರವಾಗಿ ಮೂಡಿಬಂದಿದೆ. ಬಲಗಡೆಯಲ್ಲಿ ಪೂಜೆಯ ಸಾಮಗ್ರಿಗಳಿದ್ದು ಎದುರಿನಲ್ಲಿ ಪತ್ರಿ ಪುಷ್ಪಗಳಿಂದ ತುಂಬಿದ ತಟ್ಟೆ ಇದೆ. ಎಡಭಾಗದಲ್ಲಿ ಪುಸ್ತಕಗಳಿವೆ. ಇವರ ಎದುರಿನಲ್ಲಿ ಭಕ್ತನೋರ್ವ ಎಡಗೈಯಲ್ಲಿ ಇಷ್ಟಲಿಂಗವಿಟ್ಟು ಪೂಜಿಸುತ್ತಿರುವ ದೃಶ್ಯ ಸುಂದರವಾಗಿ ಮೂಡಿಬಂದಿದೆ.

ಒಟ್ಟಾರೆ ಇದೊಂದು ಪುರಾತನ ಹಿರೇಮಠವಾಗಿದ್ದು ಈ ಮಠದ ಪರಂಪರೆಯಲ್ಲಿ ಬಹಳಷ್ಟು ಪೀಠಾಧಿಕಾರಿಗಳಾಗಿದ್ದು ಅವರಲ್ಲಿ ವಿಶೇಷವಾಗಿ ಶ್ರೀ ಗುರುಪಾದೇಶ್ವರರು, ಶ್ರೀ ಶಾಂತವೀರಮಹಾಸ್ವಾಮಿಗಳ ಅವಧಿಯಲ್ಲಿ ಮಠದೊಂದಿಗೆ ಬಬಲೇಶ್ವರ ಗ್ರಾಮವೇ ಉನ್ನತ ಮಟ್ಟದಲ್ಲಿದ್ದುದು ಕಂಡು ಬರುತ್ತದೆ. ಅದೇ ಸಂಪ್ರದಾಯವನ್ನು ಈಗಿರುವ ಶ್ರೀ ಮಹಾದೇವ ಶಿವಾಚಾರ್ಯರು ಮುಂದುವರೆಸಿಕೊಂಡು ಸಾಗುತ್ತಿದ್ದಾರೆ.

*** ಸುರಪುರ ಶೈಲಿಯ ವೀರಶೈವ ಕ್ಯಾನ್ವಾಸ್ ಹಾಗೂ ಕಾಗದದ ಕಲಾಕೃತಿಗಳು :**

೧) ಕಿಲ್ಲೇಮಠದ ಸ್ವಾಮಿಗಳು

೨) ಮಾಣಿಕ ಪ್ರಭುಗಳು

೩) ಮಾರ್ತಾಂಡ ಪ್ರಭುಗಳು

೪) ದತ್ತಾತ್ರೇಯನ ಕಲಾಕೃತಿ

೫) ಶಿವನ ಪರಿವಾರದ ಚಿತ್ರ

೬) ಗಿರಿಜಾ ಕಲ್ಯಾಣ

೭) ತ್ರಿಪುರ ಸಂಹಾರ ಮಾಡಿದ ಕಾರ್ತಿಕೇಯ

**ರಾಯಚೂರಿನ ಕಿಲ್ಲೇ ಬೃಹನ್ಮಠದ ಹಿನ್ನೆಲೆ :**

ರಾಯಚೂರು ನಗರದ ಮಧ್ಯಭಾಗದಲ್ಲಿ ಸ್ಥಾಪನೆಗೊಂಡಿರುವ ಈ ಕಿಲ್ಲೇ ಮಠವು ಶ್ರೀ ರಂಭಾಪುರಿ ಮಠದ ಶಾಖಾಮಠವಾಗಿದೆ. ಈ ಮಠಕ್ಕೆ ಹತ್ತುಸಾವಿರ ದೇವರ ಸಂಸ್ಥಾನ ಮಠವೆಂದು ಕರೆಯಲಾಗುತ್ತದೆ. ೧೨ನೆಯ ಶತಮಾನಕ್ಕಿಂತಲೂ ಪೂರ್ವದಲ್ಲಿ ಈ ಮಠವು ಅಸ್ತಿತ್ವದಲ್ಲಿತ್ತೆಂದು ಹೇಳಲಾಗುತ್ತದೆ. ಈ ಮಠದ ಗುರುಪಾದಸ್ವಾಮಿಗಳು ರಾಯಚೂರಿನ ಹೊರಭಾಗದಲ್ಲಿರುವ ಕೊಳಂಕಿಯಲ್ಲಿ ಅನುಷ್ಠಾನ ಕೈಗೊಂಡಿದ್ದರು. ಆ

ಸಂದರ್ಭದಲ್ಲಿ ಈ ನಾಡು ಭೀಕರ ಬರಗಾಲಕ್ಕೆ ತುತ್ತಾಗಿತ್ತು. ಆಗ ಅಂದಿನ ನವಾಬನು ಈ ಗುರುಗಳಿಗೆ ಭೇಟಿಯಾಗಿ ಈ ವಿಕೋಪದ ಕುರಿತು ಹೇಳಿ ಪರಿಹರಿಸಲು ಕೇಳಿಕೊಂಡನು ಆಗ ಗುರುಗಳು ತಮ್ಮ ತಪೋಶಕ್ತಿಯಿಂದ ಮಳೆಯನ್ನು ಬರಿಸಿದರು. ಇದರಿಂದ ಸಂತೋಷಗೊಂಡ ನವಾಬನು ಗುರುಗಳಿಗೆ ಭೂಮಿಯನ್ನು ಇನಾಮು ನೀಡಿದನಲ್ಲದೇ ಗುರುಗಳಿಗೆಂದು ಶಿಲಾಮಂಟಪವನ್ನು ನಿರ್ಮಿಸಿ ಕೊಟ್ಟನೆಂದು ಈ ಭಾಗದಲ್ಲಿ ಪ್ರತೀತಿ ಇದೆ. ಈ ಶಿಲಾಮಂಟಪವನ್ನು ಈಗಲೂ ನೋಡಬಹುದಾಗಿದೆ.

ಈ ಮಠದ ಪರಂಪರೆಯ ಸಂಪ್ರದಾಯದಂತೆ ಶ್ರೀ ಗುರುಪಾದಶಿವಾಚಾರ್ಯರ ನಂತರ ಶ್ರೀ ಚೆನ್ನಮಲ್ಲ ಶಿವಾಚಾರ್ಯರು, ತದನಂತರ ಶ್ರೀ ಶಾಂತಮಲ್ಲಶಿವಾಚಾರ್ಯರು ಪೀಠಾಧಿಕಾರಿಗಳಾಗಿ ಬಂದಿರುವರು. ಸದ್ಯದ ಪೂಜ್ಯರಾದ ಶ್ರೀಶಾಂತಮಲ್ಲ ಶಿವಾಚಾರ್ಯರು ೧೯೯೬ ಮೇ ೧ ರಂದು ಶ್ರೀ ರಂಭಾಪುರಿ ಪೀಠದ ಜಗದ್ಗುರುಗಳ ಸಮ್ಮುಖದಲ್ಲಿ ಪಟ್ಟಾಧಿಕಾರ ಹೊಂದಿದರು.[೮] ಇವರು ಆಧ್ಯಾತ್ಮ ವೈಚಾರಿಕ ಸಾಹಿತ್ಯಾಭಿಮಾನವನ್ನು ಬೆಳೆಸಿಕೊಂಡಿದ್ದರು.

**೧. ಕಿಲ್ಲೇಮಠದ ಸ್ವಾಮಿಗಳು :**

ಬಂಗಾರವರ್ಣದ ಮಂಟಪವೊಂದರಲ್ಲಿ ತೆಕ್ಕೆಯೊಂದಕ್ಕೆ ಆಸರೆಯಾಗಿ ಹುಲಿಯ ಚರ್ಮದ ಮೇಲೆ ಕುಳಿತಿರುವ ಪೂಜ್ಯರನ್ನು ಎದುರುಮುಖವಾಗಿ ಚಿತ್ರಿಸಲಾಗಿದೆ. ಮಂಟಪದೊಳಗಿನ ಹಿನ್ನೆಲೆಯು ಹಸಿರು ವರ್ಣದಲ್ಲಿದೆ. ಕೈಯಲ್ಲಿ ರುದ್ರಾಕ್ಷಿಯ ಮಾಲೆಯನ್ನು ಹಿಡಿದುಕೊಂಡು ಪದ್ಮಾಸನದಲ್ಲಿ ಕುಳಿತಿರುವರು. ಬಂಗಾರ ವರ್ಣದ ನಿಲುವಂಗಿಯನ್ನು ಹಾಕಿಕೊಂಡಿದ್ದು ಬಿಳಿಯ ಪಂಚೆಯನ್ನು ತೊಟ್ಟುಕೊಂಡಿರುವರು. ಬಿಳಿಯ ವಸ್ತ್ರವೊಂದನ್ನು ಎರಡೂ ಭುಜಗಳ ಮೇಲೆ ಹಾಕಿಕೊಂಡಿರುವರು. ತಲೆಗೆ ಬಂಗಾರವರ್ಣದ ರುಮಾಲನ್ನು ಸುತ್ತಿಕೊಂಡಿರುವರು. ಬಲಗೈಯಲ್ಲಿಯ ರುದ್ರಾಕ್ಷಿಯನ್ನು ಎಣಿಸುತ್ತಿರುವರು. ಮಂಟಪದ ಎದುರುಗಡೆಯಲ್ಲಿ ಪತ್ರಿ, ಪುಷ್ಪಗಳಿಂದ ತುಂಬಿದ ತಟ್ಟೆಯಿದೆ. ಎಡಬಲ ಬದಿಗಳಲ್ಲಿ ಪೂಜೆಯ ಸಾಮಗ್ರಿಗಳಿವೆ. ಈ ಮಂಟಪದ ಹಿನ್ನೆಲೆಯಲ್ಲಿ ನೀಲಿ ವರ್ಣವನ್ನು ಲೇಪಿಸಿದ್ದು ಮಂಟಪದ ಹಿಂದುಗಡೆಯ ಎಡಬಲಗಳಲ್ಲಿ ಹೂದಾನಿಗಳಿವೆ. ಒಟ್ಟಾರೆ ಚಿತ್ರದಲ್ಲಿ ಮಾಡಿನ ಆಕಾರದ ನಕ್ಷೆಯನ್ನು ಚಿತ್ರಿಸಲಾಗಿದ್ದು ಈ ಕಮಾನಿನ ಒಳ ತುದಿಗಳಲ್ಲಿ ಅಲಂಕಾರಿಕ ದೀಪಗಳನ್ನು ಜೊತು ಹಾಕಲಾಗಿದೆ.

**೨. ಮಾಣಿಕ ಪ್ರಭುಗಳು :**

ಈ ಕಲಾಕೃತಿ ಮಾಣಿಕ ಪ್ರಭುಗಳ ಬದಿಯ ನೋಟವಾಗಿದ್ದು ಪೀಠವೊಂದರ ಮೇಲೆ ಆಸೀನರಾಗಿದ್ದು ತಿಳಿಗೆಂಪು ವರ್ಣದ ನಿಲುವಂಗಿಯನ್ನು ಧರಿಸಿದ್ದು ಬಿಳಿಯ ಧೋತರ ಮತ್ತು ರುಮಾಲನ್ನು ತಲೆಗೆ ಸುತ್ತಿಕೊಂಡಿದ್ದು ಬಿಳಿಯ ದಾಡಿಯಿದ್ದು, ಕಪ್ಪು ಮೀಸೆಯನ್ನು ಮೇಲ್ಮುಖವಾಗಿ ತಿರುಗಿಸಲಾಗಿದೆ. ಕೈಯಲ್ಲಿ ಗುಲಾಬಿ ಹೂವೊಂದನ್ನು

೮. ಡಾ.ಮಲ್ಲಿಕಾರ್ಜುನ ಬಾಗೋಡಿ : ಸುರಪೂರ ಶೈಲಿಯ ಚಿತ್ರಕಲೆ : ಒಂದು ಅಧ್ಯಯನ : ಪುಟ ೧೦೬ : ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ವಿ., ಗುಲಬರ್ಗಾ.

ಹಿಡಿದು ಕುಳಿತುಕೊಂಡಿದ್ದು ಮಾಣಿಕ ಪ್ರಭುಗಳ ಬಲಭಾಗದಲ್ಲಿ ಹೂವಿನ ಕುಂಡವಿದ್ದು ಗ್ಲಾಸು ಮತ್ತು ಗ್ಲಾಸಿನ ಸ್ಟ್ಯಾಂಡಿನಂತಿದೆ. ಕುಳಿತಿರುವ ನೆಲಭಾಗವನ್ನು ತಿಳಿಗುಲಾಬಿ ವರ್ಣದಿಂದ ಮತ್ತು ಹಿನ್ನೆಲೆ ಗೋಡೆಗೆ ತಿಳಿಹಸಿರು ವರ್ಣವಿದ್ದು, ಮುಂದಿನ ಕಮಾನಿನ ಆಕಾರಕ್ಕೆ ತಿಳಿಗುಲಾಬಿ ವರ್ಣವನ್ನು ಲೇಪಿಸಿದ್ದು, ನೀಲಿ ಕೆಂಪು ವರ್ಣದ ನಕ್ಷೆಗಳನ್ನು ಮೇಲ್ಗಡೆ ಮೂಲೆಗಳಲ್ಲಿ ರಚಿಸಲಾಗಿದೆ. ಕೆಳಗಡೆಯಲ್ಲಿಯ ಪಟ್ಟಿಯೊಂದರಲ್ಲಿ ಹೂವಿನ ಗಿಡಗಳು, ಉದ್ಯಾನವನವಿದ್ದು ಮಧ್ಯದಲ್ಲಿ ಕಾರಂಜಿಯನ್ನು ತೋರಿಸಲಾಗಿದ್ದು ಇದು ಪಕ್ಕಾ ಇಸ್ಲಾಂ ಸಂಸ್ಕೃತಿಯ ಸುಲ್ತಾನರ ಚಿತ್ರವಾಗಿದ್ದು ಇದು ವೀರಶೈವ ಸ್ವಾಮಿಗಳ ಚಿತ್ರವೇ? ಎನ್ನುವ ಸಂದೇಹ ಬರುವಂತಿದೆ.

**೩. ಮಾರ್ತಾಂಡ ಪ್ರಭುಗಳು :**

ಬಂಗಾರ ವರ್ಣದ ಸಿಂಹಾಸನದ ಮೇಲೆ ಆಸೀನರಾಗಿರುವ ಮಾರ್ತಾಂಡ ಪ್ರಭುಗಳು ಕ್ಯಾವಿಯ ಕೌಪೀನವನ್ನು ಧರಿಸಿದ್ದು ಕ್ಯಾವಿಯ ರುಮಾಲನ್ನು ತಲೆಗೆ ಸುತ್ತಿಕೊಂಡಿದ್ದು ಬಿಳಿಯ ಪಂಚೆಯನ್ನು ಉಟ್ಟುಕೊಂಡಿರುವರು. ಎಡಗಾಲನ್ನು ಕೆಳಗೆ ಬಿಟ್ಟಿದ್ದು ಬಲಗಾಲನ್ನು ಎಡತೊಡೆಯ ಮೇಲಿಟ್ಟಿದ್ದು ಬಲಗೈಯನ್ನು ಬಲಗಾಲಮೇಲೆ ಇಟ್ಟಿದ್ದು ಎಡಗೈ ಸೊಂಟದ ಮೇಲಿಟ್ಟು ರಾಜಠೀವಿಯಲ್ಲಿಯೇ ಕುಳಿತಿರುವ ಮಾರ್ತಾಂಡ ಪ್ರಭುಗಳು ಬಿಳಿಯ ದಾಡಿ ಮತ್ತು ಮೀಸೆಗಳನ್ನು ಹೊಂದಿದ್ದು ಎದುರುಗಡೆ ಗಂಭೀರವಾಗಿ ನೋಡುತ್ತ ಕುಳಿತಿರುವರು. ಕೆಳಗಡೆ ಅವರ ಎದುರಿಗೆ ಪುಷ್ಪ ಪತ್ರಿಗಳಿರುವ ತಟ್ಟೆ, ಹೂಮಾಲೆಯಿರುವ ಇನ್ನೊಂದು ತಟ್ಟೆ ಎಡಬಲಬದಿಗಳಲ್ಲಿ ದೀಪದ ಸಮೆಗಳು ಹಾಗೂ ಪೂಜಾ ಸಾಮಗ್ರಿಗಳಿವೆ. ನೆಲಕ್ಕೆ ಮತ್ತು ಮುಂದಿನ ಕಮಾನಿಗೆ ತಿಳಿಗುಲಾಬಿ ವರ್ಣವನ್ನು ಲೇಪಿಸಿದ್ದು ಸಿಂಹಾಸನದ ಹಿಂದಿನ ಗೋಡೆಗೆ ತಿಳಿನೀಲಿಯನ್ನು ಲೇಪಿಸಲಾಗಿದೆ. ಸಿಂಹಾಸನದ ಮೇಲಿರುವ ಛತ್ರಿಯು ತಿಳಿಗೇಸರಿ ಮತ್ತು ನಕ್ಷೆಯನ್ನು ಕೆಂಪು ವರ್ಣದಿಂದ ಚಿತ್ರಿಸಲಾಗಿದೆ. ಇದರಲ್ಲೂ ಕೂಡಾ ಮುಂದಿನ ಪಟ್ಟಿಯಲ್ಲಿ ಉದ್ಯಾನವನ, ಮಧ್ಯದಲ್ಲಿ ಕಾರಂಜಿಯನ್ನು ಚಿತ್ರಿಸಿರುವರು. ಮುಂದಿನ ಕಮಾನಿನ ತುದಿಗಳಲ್ಲಿ ಗ್ಲಾಸಿನ ತೂಗುದೀಪಗಳನ್ನು ಚಿತ್ರಿಸಿರುವರು. ಇವರೆಲ್ಲ ಮಠಾಧೀಶರಾಗಿದ್ದರೂ ನವಾಬರ ಹಾಗೆ ಚಿತ್ರಿಸಿಕೊಂಡಿರುವುದು ತಿಳಿದುಬರುತ್ತದೆ.

### ದೇವಾನು ದೇವತೆಗಳ ಚಿತ್ರಗಳು

ಹೈದರಾಬಾದ ಕರ್ನಾಟಕದಲ್ಲಿಯ ದೇವರ ಚಿತ್ರಗಳನ್ನು ರಚಿಸಿದ್ದು ಅವುಗಳಲ್ಲಿ ವೀರಶೈವ ದೇವಾನುದೇವತೆಗಳ ಚಿತ್ರಗಳು.

**೪. ದತ್ತಾತ್ರೇಯನ ಕಲಾಕೃತಿ :**

ಈ ಕಲಾಕೃತಿಯು ಉಳಿದ ಕಲಾಕೃತಿಗಳಿಗಿಂತ ಭಿನ್ನವಾಗಿ ಚಿತ್ರಿತಗೊಂಡಿದೆ. ಶಿವ, ವಿಷ್ಣು, ಬ್ರಹ್ಮರನ್ನು ಜಟಾಧಾರಿಗಳಂತೆ ತೋರಿಸಿದ್ದು ಮಧ್ಯದಲ್ಲಿ ಎದುರು ಮುಖಮಾಡಿರುವ ಶಿವನು, ಸುರುಳಿ ಸುತ್ತಿದ ಜಡೆಯಲ್ಲಿ ಗಂಗೆಯನ್ನು ಚಿತ್ರಿಸಲಾಗಿದ್ದು, ಗಂಗೆಯ ಬಾಯಿಯಿಂದಲೇ ನೀರನ್ನು ಕಾರಂಜಿಯಂತೆ ಚಿಮ್ಮುತ್ತಿರುವಂತೆ ತೋರಿಸಿದ್ದು, ಬಾಯಿಂದ ಚಿತ್ರದ ಬಲಭಾಗದಲ್ಲಿ ಬೀಳುತ್ತಿವೆ. ಅಲ್ಲದೇ ನೀರು ಬಿದ್ದ ಸ್ಥಳದಲ್ಲಿ ಜಲಚರಗಳು

ಈಜಾಡುತ್ತಿರುವಂತೆ ತೋರಿಸಲಾಗಿದೆ. ಸಂಪೂರ್ಣ ಕೆಳಗಡೆ ಪಟ್ಟಿಯಲ್ಲಿಯೂ ಜಲಚರಗಳು ಈಜುತ್ತಿರುವುದನ್ನು ತೋರಿಸಲಾಗಿದೆ. ತ್ರಿಮೂರ್ತಿಗಳ ಮೈಬಣ್ಣ ತಿಳಿಗುಲಾಬಿ ವರ್ಣದಲ್ಲಿದ್ದು ಪಂಚೆಯನ್ನು ದಟ್ಟ ಗುಲಾಬಿವರ್ಣದಲ್ಲಿ ತೋರಿಸಲಾಗಿದೆ. ಹುಲಿಯ ಚರ್ಮವು ಶಲ್ಯದಂತೆ ಶಿವನ ಎರಡೂ ಮೊಳಕೈಯಲ್ಲಿಂದ ಕೆಳಗಡೆ ಜೋತಾಡುತ್ತಿದೆ. ಕೈ ಹಾಗೂ ಕೊರಳ ತುಂಬಾ ಹೂಮಾಲೆಗಳು ರುದ್ರಾಕ್ಷಿ ಮಾಲೆ, ಆಭರಣಗಳನ್ನು ತೋರಿಸಲಾಗಿದೆ. ಈ ತ್ರಿಮೂರ್ತಿಗಳು ಆರೂ ಕೈಗಳಲ್ಲಿ ಅವರ ಆಯುಧಗಳನ್ನು ಶಂಖ ಚಕ್ರ ತ್ರಿಶೂಲ, ಡಮರು ಅಂಕುಶ ಪಾಶಗಳನ್ನು ಹಿಡಿದುಕೊಂಡಿರುವರು. ಇವರ ಹಿಂದುಗಡೆ ಬಿಳಿಯ ಆಕಳು ಒಂದಿದ್ದು ದತ್ತಾತ್ರೇಯನ ಎಡಬಲಗಳಲ್ಲಿ ಬಿಳಿಯ ನಾಯಿಗಳಿವೆ. ಅವುಗಳಿಗೆ ಕೆಂಪು ಬಣ್ಣದ ಜೂಲನ್ನು ಹಾಕಿರುವುದೂ ವಿಶೇಷವೇ ಆಗಿದೆ. ನೆಲವನ್ನು ಹಸಿರು ಹುಲ್ಲು, ಹೂವುಗಳಿಂದ ಬಿಳಿಯ ಅರ್ಧ ವೃತ್ತಗಳನ್ನು ತೋರಿಸಲಾಗಿದ್ದು ಈ ಆಕಳು ಮತ್ತು ದತ್ತಾತ್ರೇಯನ ಹಿಂದಿನಿಂದ ತಲೆಯ ಮೇಲ್ಗಡೆ ಛತ್ರಿಯಾಕಾರದಲ್ಲಿ ಅಲಂಕಾರಿಕವಾಗಿ ಚಿತ್ರಿಸಲಾಗಿದೆ. ಮೇಲ್ಗಡೆ ಕಮಾನುಗಳನ್ನು ಮಾಡಿದ್ದು ಎರಡೂ ಮೂಲೆಗಳಲ್ಲಿ ನಕ್ಷೆಯಿಂದ ಪೂರ್ತಿಗೊಳಿಸಿರುವರು. ಈ ಕಮಾನುಗಳ ಅಂಚಿಗೆ ಅಲಂಕಾರಿಕ ದೀಪಗಳನ್ನು ತೂಗುಬಿಡಲಾಗಿದೆ. ದತ್ತಾತ್ರೇಯನ ಮೇಲ್ಗಡೆಯ ಎಡಬಲಗಳಲ್ಲಿ ಹಾರುತ್ತಿರುವ ದೇವದೂತನು ಹೂಮಳೆಗರೆಯುತ್ತಿರುವ ದೃಶ್ಯ ವಿಶಿಷ್ಟವಾಗಿ ಚಿತ್ರಣಗೊಂಡಿದೆ.

**ಸುರಪೂರ ಶೈಲಿಯಲ್ಲಿ ಶಿವನ ಪರಿವಾರದ ಕ್ಯಾನ್ವಾಸ್ ಹಾಗೂ ಕಾಗದದ ಚಿತ್ರಗಳು**

ಈ ಚಿತ್ರಗಳು ಸುರಪುರ ಚಿತ್ರಗಳಲ್ಲೇ ಅತ್ಯಂತ ಹಳೆಯ ಚಿತ್ರಗಳಾಗಿವೆ. ಪ್ರಾರಂಭದ ಹಂತದಲ್ಲಿ ರಚನೆಗೊಂಡಿರಬಹುದಾದಂತಹ ಈ ಚಿತ್ರಗಳಲ್ಲಿ ವಿಜಯನಗರ ಶೈಲಿಯ ಪ್ರಭಾವವು ಕಂಡುಬರುತ್ತದೆ. ಅದರಲ್ಲೂ ಶಿವನಿಗೆ ಸಂಬಂಧಿಸಿದ ಸಾಕಷ್ಟು ಪ್ರಮಾಣದಲ್ಲಿ ಚಿತ್ರಿತಗೊಂಡ ಚಿತ್ರಗಳೆಂದರೆ ಗಿರಿಜಾ ಕಲ್ಯಾಣ, ಸುರಪುರದ ಅನೇಕರ ಮನೆಗಳಲ್ಲಿ ಈ ಚಿತ್ರಗಳು ಸಂಗ್ರಹಗೊಂಡಿದ್ದು ಇಂದಿಗೂ ಈ ಚಿತ್ರಗಳು ಪೂಜೆಗೊಳ್ಳುತ್ತಿವೆ. ಶಿವಪಾರ್ವತಿಯರ ಕಲ್ಯಾಣ ಮಹೋತ್ಸವದಲ್ಲಿ ಅನೇಕ ದೇವ – ದೇವತೆಯರು, ಋಷಿ–ಮುನಿಗಳು, ಗಂಧರ್ವರು, ಕಿನ್ನರರು ಮೊದಲಾದವರನ್ನು ಒಳಗೊಂಡ ಈ ಸಂಯೋಜನೆಯು ಹಾಗೂ ವರ್ಣಗಾರಿಕೆಯಿಂದಲೂ ಅತ್ಯುತ್ತಮ ಚಿತ್ರವಾಗಿ ರೂಪುಗೊಂಡಿದೆ.[೯]

**೫. ಶಿವನ ಪರಿವಾರದ ಚಿತ್ರ:**

ಬಂಗಾರ ಪೀಠವೊಂದರ ಮೇಲೆ ಶಿವನು ಕುಳಿತಿದ್ದು ಬಲಗಾಲನ್ನು ಕೆಳಗೆ ಬಿಟ್ಟಿದ್ದು ಎಡಗಾಲನ್ನು ಮಡಿಚಿಕೊಂಡು ಕುಳಿತಿರುವನು. ಎಡದೊಡೆಯ ಮೇಲೆ ಪಾರ್ವತಿಯನ್ನು ಕೂಡ್ರಿಸಿಕೊಂಡಿರುವನು. ಹಸಿರು ಪಂಚೆಯನ್ನುಟ್ಟಿದ್ದು ಹಸಿರು ಎಲೆಯ ಮೇಲೆ ಕುಳಿತಿರುವನು. ಹುಲಿಯ ಚರ್ಮವನ್ನು ಸುತ್ತಿಕೊಂಡಿರುವನು. ಬಂಗಾರವರ್ಣದ ಶಾಲು ಎರಡೂ ಮೊಳಕೈಗಳಿಂದ ಕೆಳಗಿಳಿದಿದೆ. ಬಂಗಾರದ ಆಭರಣಗಳಿದ್ದು, ಕೈ ತೋಳು

೯. ಡಾ. ಮಲ್ಲಿಕಾರ್ಜುನ ಬಾಗೋಡಿ : ಸುರಪೂರ ಶೈಲಿಯ ಚಿತ್ರಕಲೆ : ಒಂದು ಅಧ್ಯಯನ : ಪುಟ ೧೧೧ : ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ವಿ., ಗುಲಬರ್ಗಾ.

ಕೊರಳು ಹಾಗೂ ಕಿರೀಟಗಳು ಬಂಗಾರವರ್ಣದಲ್ಲಿ ರಚನೆಗೊಂಡಿವೆ. ಕಿರೀಟದ ಮಧ್ಯದಲ್ಲಿ ಬಿಳಿಯ ವರ್ಣದಲ್ಲಿ ಗಂಗೆಯನ್ನು ಚಿತ್ರಿಸಲಾಗಿದೆ. ಶಿವನ ದೇಹಕ್ಕೆ ಬಿಳಿಯ ವರ್ಣವನ್ನು ಹಚ್ಚಿದ್ದು ಶಿವನಿಗೆ ಮೀಸೆಯನ್ನು ಮಾಡಲಾಗಿದೆ. ಎಡದೊಡೆಯ ಮೇಲಿರುವ ಪಾರ್ವತಿಯೂ ಕಿರೀಟಧಾರಿಯಾಗಿದ್ದು ಬಂಗಾರವರ್ಣದ ಆಭರಣಗಳು, ಸೀರೆಗೂ ಬಂಗಾರವರ್ಣವನ್ನು ತೋರಿಸಲಾಗಿದೆ. ಪಾರ್ವತಿಯ ಮೈಬಣ್ಣ ನೀಲಿ ವರ್ಣದಿಂದ ಚಿತ್ರಿಸಲಾಗಿದೆ. ಶಿವನಿಗೆ ಏನನ್ನೋ ಹೇಳುತ್ತಿರುವಂತೆ ಚಿತ್ರಿಸಲಾಗಿದೆ. ಶಿವನ ಬಲಭಾಗದಲ್ಲಿ ಮುಂದೆ ಕೆಂಪುವರ್ಣದ ಗಣೇಶನು ಪೀಠವೊಂದರ ಮೇಲೆ ಕುಳಿತಿರುವನು ಅವನ ಬದಿಯಲ್ಲಿ ಹಳದಿವರ್ಣದ ವೀರಭದ್ರನಿರುವನು. ಶಿವನ ಎಡಬದಿಯಲ್ಲಿ ನೀಲಿವರ್ಣದಲ್ಲಿರುವ ಭೈರವನನ್ನು ಅವನ ಹಿಂದುಗಡೆಯಲ್ಲಿ ಚಾಮರಬೀಸುತ್ತಿರುವ ಮಹಿಳೆಯನ್ನು ಚಿತ್ರಿಸಲಾಗಿದೆ. ಇವಳು ಚಾಮರವನ್ನು ಬೀಸುತ್ತಲಿರುವಳು. ಈ ದೃಶ್ಯವು ಬಿಳಿವರ್ಣದ ನೆಲದ ಮೇಲಿದ್ದು ಶಿವನ ಹಿನ್ನೆಲೆಯಲ್ಲಿ ಆಕಾಶಕ್ಕೆ ನೀಲಿವರ್ಣವನ್ನು ತೋರಿಸಿದ್ದು ಈ ಆಕಾಶದುದ್ದಗಲಕ್ಕೂ ಬ್ರಹ್ಮಾದಿಯಾಗಿ ದೇವಾಧಿದೇವತೆಗಳು ಚಿತ್ರಿತಗೊಂಡಿರುವರು. ಶಿವನು ಕುಳಿತ ಮಂಟಪದ ಮೇಲ್ಗಡೆಯ ಅಂಚಿನಲ್ಲಿ ಧ್ವಜಗಳು, ಚಾಮರ, ಛತ್ರಿಗಳು ರಚನೆಗೊಂಡಿವೆ. ಮುಂದಿನ ಕಮಾನುಗಳ ಮೂಲೆಗಳಲ್ಲಿ ನಕ್ಷಾಚಿತ್ರಗಳಿದ್ದು ಕಮಾನಿನ ಅಂಚಿನಲ್ಲಿ ಗಾಜಿನ ಅಲಂಕಾರಿಕ ದೀಪಗಳನ್ನು ಜೋತುಬಿಡಲಾಗಿದೆ.

**೬. ಗಿರಿಜಾ ಕಲ್ಯಾಣ :**

ಈ ದೃಶ್ಯವು ಗಿರಿಜೆ ಮತ್ತು ಶಿವರ ಮದುವೆಯ ಸನ್ನಿವೇಶವಾಗಿದ್ದು ಒಟ್ಟು ಐದು ಪಟ್ಟಿಕೆಗಳಾಗಿ ಚಿತ್ರಿಸಿದ್ದುದು ಕಂಡುಬರುತ್ತದೆ. ಮಧ್ಯದ ಪಟ್ಟಿಕೆಯನ್ನು ದೊಡ್ಡದಾಗಿ ಮಾಡಿಕೊಂಡಿರುವುದೂ ಈ ಭಾಗ ವಿಶೇಷವೆನ್ನುವಂತಿದೆ. ಶಿವ ಮತ್ತು ಗಿರಿಜೆಯರು ಎದುರು ಬದುರಾಗಿ ನಿಂತಿರುವರು. ಇರ್ವರೂ ಕಿರೀಟಧಾರಿಗಳಾಗಿದ್ದು ಮೈತುಂಬಾ ಆಭರಣಗಳನ್ನು ಹಾಕಿಕೊಂಡಿರುವರು. ಗಿರಿಜೆಯ ಮೈಬಣ್ಣ ಕಡು ಹಸಿರು ಆಗಿದ್ದರೆ ಶಿವನ ಬಣ್ಣ ತಿಳಿನೀಲಿ ಆಗಿದೆ. ಗಿರಿಜೆಯ ಬಲಗೈಯನ್ನು ಶಿವನು ಬಲಗೈದಿಂದ ಬೊಗಸೆಯಲ್ಲಿ ಹಿಡಿದುಕೊಂಡಿದ್ದು ಈ ಬೊಗಸೆಗೆ ಹಿಂದೆ ನಿಂತುಕೊಂಡಿರುವ ವಿಷ್ಣು ಹಾಲನ್ನು ಸುರಿಯುತ್ತಿರುವನು. ಗಿರಿಜೆ ಶಿವರ ಬೊಗಸೆಯಿಂದ ಹಾಲು ಕೆಳಗೆ ಬರುತ್ತಿದ್ದು ಆ ಹಾಲನ್ನು ಕೆಳಗೆ ಬೀಳದಂತೆ ವೃಷಭವು ಕುಡಿಯುತ್ತಿದೆ. ಈ ದೃಷ್ಯದ ಎಡ ಬಲಗಳಲ್ಲಿ ಅರಮನೆಯ ಬಾಲ್ಕನಿಯಲ್ಲಿ ಕುಳಿತು ದೇವಾದಿದೇವತೆಗಳು ಅತ್ಯಂತ ಸಂತೋಷದಿಂದ ನೋಡುತ್ತ ನಿಂತಿರುವರು.

ಕೆಳಗಿನ ಪಟ್ಟಿಕೆಯ ಮಧ್ಯದಲ್ಲಿ ಹೋಮಹವನದ ಕುಂಡವನ್ನು ಮಾಡಿದ್ದು ಅದರ ಬಲಭಾಗದಲ್ಲಿ ಬ್ರಹ್ಮನು ಸ್ವತಃ ಹೋಮಹವನಗಳನ್ನು ನಡೆಸಿಕೊಡುತ್ತಿದ್ದು ಸಪ್ತ ಋಷಿಗಳು ಸಾಲಾಗಿ ಕುಳಿತು ಬ್ರಹ್ಮನಿಗೆ ಸಹಾಯ ಮಾಡುತ್ತಿರುವರು.

ಪೂರ್ತಿ ಕೆಳಭಾಗದ ಮಧ್ಯಭಾಗದಲ್ಲಿ ದೊಡ್ಡದಾದ ದ್ವಾರವೊಂದನ್ನು ಮಾಡಿದ್ದು ಎಡಬಲಗಳಲ್ಲಿ ದ್ವಾರಪಾಲಕರಿದ್ದಾರೆ. ಈ ಮದುವೆಗೆ ಬಲಭಾಗದಲ್ಲಿ ಭೈರವ ಮತ್ತು ವೀರಭದ್ರರು ಬರುತ್ತಿದ್ದು ಎಡಭಾಗದಲ್ಲಿ ಹತ್ತು ತಲೆಯ ರಾವಣ ಬರುತ್ತಿರುವ ದೃಶ್ಯವಿದೆ.

ಮದುವೆಯ ಮಂಟಪದ ಮೇಲ್ಭಾಗದ ಪಟ್ಟಿಕೆಯಲ್ಲಿ ಬಾಲ್ಕನಿಯನ್ನು ಮಾಡಿಕೊಂಡಿದ್ದು ಅದರಲ್ಲಿ ಪ್ರಮುಖವಾಗಿ ಮೂರುಭಾಗಗಳನ್ನು ಮಾಡಿಕೊಂಡಿರುವರು ಮಧ್ಯದಲ್ಲಿ ಐದು ಕಮಾನುಗಳನ್ನು ಮಾಡಿಕೊಂಡಿದ್ದು ಮಧ್ಯದ ಐದು ಕಮಾನುಗಳಲ್ಲಿರುವ ಪಂಚಸ್ತ್ರೀಯರು ಹೂ ಪುಷ್ಪಗಳ ತಟ್ಟೆಯನ್ನಿಡಿದು ಗಿರಿಜೆ ಶಿವರಿಗೆ ಪುಷ್ಪವೃಷ್ಠಿಯನ್ನು ಮಾಡುತ್ತಿದ್ದು ಇವರ ಹಿನ್ನೆಲೆಯಾಗಿ ಮಧ್ಯದ ಕಮಾನಿಗೆ ಕೆಂಪು, ಕ್ರಮವಾಗಿ ಎಡಬಲಗಳಲ್ಲಿ ನೀಲಿ, ಅದರ ನಂತರದಲ್ಲಿ ಹಳದಿವರ್ಣವನ್ನು ಬಳಸಲಾಗಿದೆ. ಈ ಬಾಲ್ಕನಿಯಿಂದ ಸ್ವಲ್ಪ ಎರಡೂಬದಿಗೆ ಜಾಗ ಬಿಟ್ಟು ಮತ್ತೆ ಎರಡೆರಡು ಕಮಾನುಗಳನ್ನು ಎಡಬಲಗಳಲ್ಲಿ ಸಿದ್ದಪಡಿಸಿಕೊಂಡು ಅದರಲ್ಲಿರುವ ಮಹಿಳೆಯರು ವಾದ್ಯವನ್ನು ನುಡಿಸುತ್ತಿರುವರು. ಈ ಬಾಲ್ಕನಿಯ ಮಧ್ಯದಲ್ಲಿ ಖಾಲಿಯಿರುವ ಭಾಗದಲ್ಲಿ ವಿದ್ಯಾಧರರು ಈ ಮದುವೆಗೆ ಆಕಾಶದಲ್ಲಿ ತೇಲುತ್ತ ಬರುವ ದೃಶ್ಯವಿದೆ.

ಅತೀ ಮೇಲ್ಭಾಗದಲ್ಲಿ ಎಡಬಲಭಾಗಗಳಲ್ಲಿ ದೇವಾನುದೇವತೆಗಳು ಸಾಲಾಗಿ ನಿಂತು ಪುಷ್ಪವೃಷ್ಠಿಯನ್ನು ಮಾಡುತ್ತಿರುವುದನ್ನು ಚಿತ್ರಿಸಲಾಗಿದೆ. ಹೀಗೆ ವಿವಿಧ ಪಟ್ಟಿಕೆಗಳಾಗಿ ಸಂಯೋಜನೆಗೊಂಡಿರುವುದು ವಿಶೇಷವಾಗಿದೆ.

**೭. ತ್ರಿಪುರ ಸಂಹಾರ ಮಾಡಿದ ಕಾರ್ತಿಕೇಯ :**

ಈ ದೃಶ್ಯದಲ್ಲಿ ತ್ರಿಪುರ ರಾಕ್ಷಸರನ್ನು ಸಂಹರಿಸುವ ಸನ್ನಿವೇಶವಿದೆ. ಈ ಮೂವರೂ ರಾಕ್ಷಸ ರಾಜರು ಘೋರತಪಸ್ಸನ್ನು ಮಾಡಿದ್ದು ಶಿವನ ಆಜ್ಞೆಯಂತೆ ಬ್ರಹ್ಮನಿಂದ ವರವನ್ನು ಪಡೆದಿದ್ದು ನರಮಾನವನಿಂದಾದಿ ದೇವಾಧಿ ದೇವತೆಗಳಿಂದಲೂ ತನಗೆ ಸಾವು ಬರಬಾರದೆಂದೂ ಕೇಳಿದ್ದ ಆಗ ಬ್ರಹ್ಮನು ಹುಟ್ಟಿದ ಪ್ರತಿಯೊಂದು ಜೀವಿಗೂ ಅಂತ್ಯ ಅನ್ನುವುದು ಇದ್ದೇ ಇರುತ್ತದೆ ಎಂದಿದ್ದ. ಆಗ ರಾಕ್ಷಸರು ಶಿವನ ಏಳು ವರುಷದ ಮಗನಿಂದಲ್ಲದೇ ಬೇರೆ ಯಾರಿಂದಲೂ ಸಾವು ಬರಬಾರದೆಂದು ವರಪಡೆದಿರುವನು ಎಂದು ತಿಳಿಸಿದಾಗ ಅದಕ್ಕೆ ಉಪಾಯವನ್ನು ಬ್ರಹ್ಮ ಶಿವ, ವಿಷ್ಣುಗಳಾದಿಯಾಗಿ ಯೋಚಿಸಿ ಕಾರ್ತಿಕೇಯನ ರಥವು ವಿಶ್ವಕರ್ಮನಿಂದ ಮಾಡಲ್ಪಡಬೇಕೆಂದೂ ಅದಕ್ಕೆ ಭೂಮಿಯ ಎಲ್ಲ ವಸ್ತುಗಳೂ ಉಪಯೋಗಿಸಲ್ಪಟ್ಟಿರಬೇಕೆಂದೂ ಸೂರ್ಯಚಂದ್ರರು ಗಾಲಿಗಳಾಗಬೇಕೆಂದೂ ನಾಲ್ಕು ವೇದಗಳು ಗಾಲಿಗಳಾಗಬೇಕೆಂದೂ ಆದಿಶೇಷನು ಕುದುರೆಯ ಲಗಾಮಾಗಿಯೂ ಬ್ರಹ್ಮನೇ ಸಾರಥಿಯಾಗಬೇಕೆಂದೂ ಇದಲ್ಲದೇ ಕಾರ್ತಿಕೇಯನು ಗಣೇಶನನ್ನು ಪ್ರಾರ್ಥಿಸಿ ಯುದ್ಧ ಪ್ರಾರಂಬಿಸಬೇಕೆಂದು ಆಗ ಮಾತ್ರ ತ್ರಿಪುರ ರಾಕ್ಷಸರನ್ನು ಸಂಹಾರ ಮಾಡಲು ಸಾಧ್ಯವೆಂದು ನಿರ್ಧರಿಸಿದರು.

ಈ ಕಲಾಕೃತಿಯ ಮುಕ್ಕಾಲು ಭಾಗ ಆಕಾಶ ಮತ್ತು ಅಲ್ಲಿ ನಡೆದ ಯುದ್ಧದ ಕುರಿತು ಚಿತ್ರಿಸಲಾಗಿದೆ. ಕೆಳಗಡೆಯ ಕಾಲುಭಾಗದಲ್ಲಿ ಎರಡು ಪಟ್ಟಿಕೆಗಳನ್ನು ಮಾಡಿಕೊಂಡು ದೇವಾಧಿದೇವತೆಗಳನ್ನು ಚಿತ್ರಿಸಲಾಗಿದೆ. ಪ್ರಮುಖವಾಗಿ ಕಾರ್ತಿಕೇಯನನ್ನು ದೊಡ್ಡ ವೃತ್ತದಲ್ಲಿ ತೋರಿಸಲಾಗಿದೆ. ಐದು ಮುಖಗಳನ್ನು ಹೊಂದಿದ್ದು ಹತ್ತು ಕೈಗಳಲ್ಲಿ ಆಯುಧಗಳನ್ನು ಹಿಡಿದುಕೊಂಡಿರುವನು. ಈ ವೃತ್ತದ ಕೆಳಗಡೆ ರಥವಿದ್ದು ಅದನ್ನು ಬ್ರಹ್ಮನೇ ಅಶ್ವಗಳ ಸೂತ್ರಧಾರವಾಗಿರುವ ಶೇಷವನ್ನು ಹಿಡಿದು ಮುನ್ನಡೆಸುತ್ತಿರುವನು. ಕಾರ್ತಿಕೇಯನ ವೃತ್ತದ ಎದುರಿಗೆ ಇರುವ ಮೂರು ವೃತ್ತಗಳು ತ್ರಿಪುರದ ಸಂಕೇತವಾಗಿರುವ ಮೂರು ರಾಕ್ಷಸರು ಹಿಮ್ಮುಖವಾಗಿ ಓಡುತ್ತಿರುವ

ದೃಶ್ಯವಿದೆ. ಇದು ವಿಶೇಷವಾಗಿದೆ. ಈ ತ್ರಿಪುರವನ್ನು ದೇವಲೋಕದ ದೇವಾಧಿದೇವತೆಗಳೆಲ್ಲ ತಮ್ಮ ವಾಹನಗಳ ಮೇಲೆ ಬಂದು ಮುಗಿ ಬಿದ್ದಿರುವ ಸನ್ನಿವೇಶವನ್ನು ಸೃಷ್ಟಿಸಲಾಗಿದೆ.

ಕೆಳಗಡೆಯ ಎರಡು ಪಟ್ಟಿಕೆಗಳಲ್ಲಿ ವಿಜಯೋತ್ಸವದ ಸಂಕೇತವಾಗಿ ವಿಷ್ಣು ವೀರಭದ್ರ ನಂದಿ, ವೃಷಭ, ನಾರದ, ಲಕ್ಷ್ಮಿ, ಸರಸ್ವತಿ, ಪಾರ್ವತಿಯರು ವಿವಿಧ ವಾದ್ಯಗಳೊಡನೆ ಸಂತೋಷದಿಂದ ಸಾಗುತ್ತಿರುವುದು. ಇದರ ಕೆಳಗಡೆಯ ಪಟ್ಟಿಯಲ್ಲಿ ಭೃಂಗಿ, ಅಂಗಿರಸರಾದಿಯಾಗಿ ಆನೆ ಕುದುರೆಗಳಲ್ಲದೆ ದೇವಾನುದೇವತೆಗಳು ಸಂತೋಷಗೊಂಡು ಚಲಿಸುತ್ತಿರುವ ದೃಶ್ಯವಿದೆ.

ಹೀಗೆ ಶಿವನ ಪರಿವಾರ, ಶಿವನು ವಿಷ್ಣುವಿಗೆ ಚಕಪ್ರದಾನ ಮಾಡುತ್ತಿರುವುದು ಹೀಗೆ ಇನ್ನೂ ಹಲವಾರು ಕಲಾಕೃತಿಗಳನ್ನು ವೀರಶೈವ ಧರ್ಮಕ್ಕೆ ಸಂಬಂಧಿಸಿದಂತೆ ಚಿತ್ರಿಸಿರುವುದು ಕಂಡುಬರುತ್ತದೆ.

**ವೀರಶೈವ ಚಿತ್ರಗಳನ್ನು ಸುರಪುರ ಶೈಲಿಯಲ್ಲಿ ರಚಿಸಿದ ವಿಜಯ್ ಹಾಗರಗುಂಡಗಿ :**

ಗುಲಬುರ್ಗಾದಲ್ಲಿ ೧೯೫೭ ನವ್ಹೆಂಬರ್ ೧ ರಂದು ಜನಿಸಿದ ವಿಜಯ್ ಹಾಗರಗುಂಡಗಿ ಅವರು ಪ್ರಾಥಮಿಕ ಮಾಧ್ಯಮಿಕ ಶಿಕ್ಷಣವನ್ನು ಮುಗಿಸಿ ಚಿತ್ರಕಲೆಯತ್ತ ಆಸಕ್ತಿ ಹೊಂದಿದ ಇವರು ಗುಲಬುರ್ಗಾದ ಐಡಿಯಲ್ ಫೈನ್ ಆರ್ಟ ಕಾಲೇಜಿನಿಂದ ಡಿಪ್ಲೋಮಾ ಪದವಿ ಪಡೆದು ತಮ್ಮ ಮನೆಯಲ್ಲಿ ಬಾಡಿಗೆಗೆ ಬಂದ ಖ್ಯಾತ ಸಂಗೀತ ವಿದ್ವಾಂಸರಾಗಿದ್ದ ಪಂ.ಸಿದ್ಧರಾಮ ಜಂಬಲದಿನ್ನಿ ಅವರು ದಿನಾಲೂ ಸಾಧನೆ ಮಾಡುತ್ತಿದ್ದು ಅವರತ್ತ ಇವರ ಒಲವೂ ಪ್ರಾರಂಭವಾಗಿ ಚಿತ್ರ ಮತ್ತು ಸಂಗೀತಗಳು ಇವರ ಜೀವನದ ಅಂಗಗಳಾಗಿ ಬೆಳೆದವು.

ಚಿತ್ರಕಲೆಯಲ್ಲಿ ಅಪರೂಪವಾದ ಹೊಸದನ್ನು ಏನನ್ನಾದರೂ ಮಾಡಬೇಕು ಎನ್ನುವ ಅವರಲ್ಲಿ ಛಲ ಬೆಳೆಯ ತೊಡಗಿತು. ಇದರಿಂದಾಗಿ ಚಿತ್ರಕಲೆಯ ಕುರಿತು ಹೆಚ್ಚಿನ ಅಧ್ಯಯನಕ್ಕೆಂದು ರಾಜಸ್ಥಾನಕ್ಕೆ ತೆರಳಿದರು. ರಾಜಸ್ಥಾನದ ಉದಯಪುರದ ದ್ವಾರಕಾ ಪ್ರಸಾದ ಎಂಬುವವರ ಮನೆಯಲ್ಲಿ ಸಾಂಪ್ರದಾಯಿಕ ಕಲೆ ಮತ್ತು ಈ ಕಲೆಯಲ್ಲಿ ಬಳಕೆಯಾಗುವ ಬಂಗಾರ, ಬೆಳ್ಳಿ, ಪತ್ರಲೇಪನದೊಂದಿಗೆ ವಿವಿಧ ತಂತ್ರಗಳನ್ನು ತಿಳಿದುಕೊಂಡರು. ಸುಮಾರು ಎರಡು ತಿಂಗಳ ಕಾಲ ಗುರುಕುಲ ಮಾದರಿಯಲ್ಲಿ ಶಿಕ್ಷಣ ಸಾಂಪ್ರದಾಯಿಕ ಕಲೆಯ ಕುರಿತು ವಿಶೇಷ ತರಬೇತಿಯನ್ನು ಪಡೆದುಕೊಂಡು ಬಂದನಂತರ ವಿಜಯ್ ಅವರು ಸಾಂಪ್ರದಾಯಿಕ ಕಲೆಯಲ್ಲಿ ಬರುವ ವಸ್ತು ವಿಷಯಗಳಲ್ಲದೆ ಈ ಕಲೆಯ ಪ್ರಮುಖ ಲಕ್ಷಣಗಳತ್ತ ಹುಡುಕಾಟ ಪ್ರಾರಂಭಿಸಿದರು.

ಮೊದಲಿಗೆ ವಿಜಯನಗರ ಚಿತ್ರಕಲೆಯ ಕುರಿತು ವಿಶೇಷ ಅಧ್ಯಯನ ಮಾಡಿದರಲ್ಲದೇ ಇದರ ಸೂಕ್ಷ್ಮಗಳನ್ನು ಅರಿತರು. ಪುರಾಣಪುರುಷರು ದೇವಾನುದೇವತೆಗಳೇ ನನ್ನ ನೆಚ್ಚಿನ ವಸ್ತು ವಿಷಯಗಳು. ಈ ವಸ್ತು ವಿಷಯಗಳಿಂದ ಸಂಪೂರ್ಣ ತೃಪ್ತಿ ಪಡೆದಿರುವುದರಿಂದ ನನಗೆ ಈ ಕಿರುರೂಪ ಚಿತ್ರಗಳಲ್ಲಿ ಬರುವ ಆಕಾರಗಳು ಇಷ್ಟವಾಗುತ್ತವೆ ಎನ್ನುವ ವಿಜಯ್ ಹಾಗರಗುಂಡಗಿ ಅವರು ಧಾರ್ಮಿಕ ಆಧ್ಯಾತ್ಮಿಕ ವಿಷಯ ವಸ್ತುಗಳನ್ನು ಅರಿಯಲು ಪುರಾಣ, ಧ್ಯಾನ, ಶ್ಲೋಕಗಳನ್ನು ಕುರಿತು ಗಂಭೀರವಾಗಿ ಅಧ್ಯಯನ ಮಾಡಿದರು. ವಿಜಯನಗರದೊಂದಿಗೆ ಹಲವು ಕಲಾಶೈಲಿಯ ಅಧ್ಯಯನ ಮಾಡಿದರು. ಆದರೆ ತಾವಿರುವ ತಮ್ಮ ಭಾಗದ ಸುರಪುರ ಶೈಲಿಯಲ್ಲಿಯೇ ಕಲಾಕೃತಿಗಳನ್ನು

ನಿರ್ಮಿಸಲು ನಿರ್ಧರಿಸಿ ಹಲವಾರು ಕಲಾಕೃತಿಗಳನ್ನು ರಚಿಸಿದ ಇವರು ಸುರಪುರ ಶೈಲಿ ಎಂದರೆ ವಿಜಯ್ ಹಾಗರಗುಂಡಗಿ ಅವರ ಕಲಾಶೈಲಿಯೇ ಎಂಬುವಷ್ಟು ಕೆಲಸ ಮಾಡಿರುವರು. ಇವರು ಯಾವುದೇ ಮತ ಪಂಥ ಕಥೆಗಳಿಗೆ ಸುಗುಣವಾಗಿ ವಿಷಯ ವಸ್ತುಗಳು ಬೇರೆ ಆದರೂ ಆಕಾರ ಆಕೃತಿ ವರ್ಣಗಾರಿಕೆ ಸಂಯೋಜನಾ ರೀತಿಯು ಸುರಪುರ ಶೈಲಿಯನ್ನು ಸೂಚಿಸುತ್ತವೆ. ಇಂತಹ ಚಿತ್ರಗಳ ಪ್ರದರ್ಶನವನ್ನು ರಾಷ್ಟ್ರೀಯ ಅಂತಾರಾಷ್ಟ್ರೀಯ ಮಟ್ಟದಲ್ಲಿ ಏರ್ಪಡಿಸಿದ್ದು ಈ ವಿಶಿಷ್ಟ ಶೈಲಿಯನ್ನು ಅಂತಾರಾಷ್ಟ್ರೀಯ ಹಂತದಲ್ಲಿ ಪರಿಚಯಿಸಿದ ಕೀರ್ತಿಯೂ ಇವರಿಗೆ ಸಲ್ಲುತ್ತದೆ. ಚಿತ್ರಕಲೆ ಸಂಗೀತದೊಂದಿಗೆ ಇತ್ತೀಚೆಗೆ ಪ್ರಾಚೀನಕಾಲದ ಅವಶೇಷಗಳನ್ನು ಸಂಗ್ರಹಿಸುವತ್ತ ಆಸಕ್ತಿ ಹೊಂದಿದ್ದು ಕೆಲವು ಪ್ರಾಚೀನ ಭಾರತೀಯ ಸಾಂಪ್ರದಾಯಿಕ ಕಲಾವಶೇಷಗಳನ್ನು ಸಂಗ್ರಹಿಸಿದ್ದಾರೆ.

ವಿಜಯ್ ಹಾಗರಗುಂಡಗಿ ಅವರು ರಚಿಸಿದ ಸುರಪುರ ಶೈಲಿಯ ಚಿತ್ರಗಳಲ್ಲಿನ ವೀರಶೈವ ಚಿತ್ರಗಳಲ್ಲಿ ಕೆಲವನ್ನು ಇಲ್ಲಿ ಅಧ್ಯಯನಕ್ಕೆ ಬಳಸಿಕೊಂಡು ಅವುಗಳನ್ನು ವಿವರಿಸಲಾಗಿದೆ. ಇವರು ಇತ್ತೀಚೆಗೆ ಮಣಿಪಾಲದ ಶೆಣೈ ಅವರ ಕಲಾಗ್ರಾಮದಲ್ಲಿಯ ಜಂಗಮವಾಡಿ ಮಠದ ಭಿತ್ತಿಯಲ್ಲಿ "ಉದ್ಧರಣಿ" ಚಿತ್ರಗಳನ್ನು ಬರೆದಿರುವುದು ವಿಶೇಷವಾಗಿದೆ.

ತೊಗಲು ಗೊಂಬೆಯಲ್ಲಿಯ ವೀರಶೈವ ಚಿತ್ರಗಳು



೧. ಗೋಕಾಕದ ವೀರಯೋಧನಂತಿರುವ ಗಣೇಶ




೨. ಧಾರವಾಡದಲ್ಲಿಯ ನೃತ್ಯ ಭಂಗಿಯಲ್ಲಿರುವ ಗಣೇಶ

## ಕರ್ನಾಟಕದ ವೀರಶೈವ ಸಂಕೀರ್ಣ ಚಿತ್ರಗಳು
## ತೊಗಲು ಗೊಂಬೆಯಲ್ಲಿಯ ವೀರಶೈವ ಚಿತ್ರಗಳು



೪. ರಾಯಚೂರಿನಲ್ಲಿಯ ಬಸವನ ಮೆರವಣಿಗೆಯ ದೃಶ್ಯ



೪. ಧಾರವಾಡದ ಶಿವಾಲಯದ ಚಿತ್ರ

## ಕರ್ನಾಟಕದ ವೀರಶೈವ ಸಂಕೀರ್ಣ ಚಿತ್ರಗಳು
## ಗಂಜೀಫಾದಲ್ಲಿಯ ವೀರಶೈವ ಚಿತ್ರಗಳು




೧. ದಕ್ಷಿಣಾ ಮೂರ್ತಿಶಿವ



೨. ಅರ್ಧನಾರೀಶ್ವರ

## ಗಂಜೀಫಾದಲ್ಲಿಯ ವೀರಶೈವ ಚಿತ್ರಗಳು



೩. ಶಿವಾಸೂಟ



೪. ಪಾರ್ವತಿ

## ಕರ್ನಾಟಕದ ವೀರಶೈವ ಸಂಕೀರ್ಣ ಚಿತ್ರಗಳು
## ಧಾರವಾಡ ಮುರುಘಾಮಠದಲ್ಲಿ ಎಮ್.ಎ.ಚಟ್ಟಿಯವರ ವರ್ಣಚಿತ್ರಗಳು



೧. ಶ್ರೀ ಮುರುಘೇಂದ್ರ ಶಿವಯೋಗಿಗಳು



೨. ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳು



೩. ಶ್ರೀ ಮಹಾಂತ ಅಪ್ಪಗಳವರು

## ಕರ್ನಾಟಕದ ವೀರಶೈವ ಸಂಕೀರ್ಣ ಚಿತ್ರಗಳು
## ಧಾರವಾಡ ಮುರುಘಾಮಠದಲ್ಲಿ ಎಮ್.ಎ.ಚಟ್ಟಿಯವರ ವರ್ಣಚಿತ್ರಗಳು

ಪವಾಡದ ಚಿತ್ರಗಳು:



೧. ಕಾರ್ಮೋಡ ಹಾಗೂ ಮಳೆಯನ್ನು ಚದುರಿಸಿದ ದೃಶ್ಯ



೨. ರಾಚಯ್ಯನಿಗೆ ಶಿವಯೋಗಿಗಳು ಪ್ರಾಣದಾನ ಮಾಡಿದ ದೃಶ್ಯ

## ಕರ್ನಾಟಕದ ವೀರಶೈವ ಸಂಕೀರ್ಣ ಚಿತ್ರಗಳು
## ಧಾರವಾಡ ಮುರುಘಾಮಠದಲ್ಲಿ ಎಮ್.ಎ.ಚಟ್ಟಿಯವರ ವರ್ಣಚಿತ್ರಗಳು

ಪವಾಡದ ಚಿತ್ರಗಳು:



ಇ. "ಶಿವ ಶಿವಾ" ಎಂದೊಡನೆ ಹಗ್ಗ ಹರಿದ ದೃಶ್ಯ




ಈ. ಶಿವಯೋಗಿಗಳು ಪಕ್ಷಿಗಳಲ್ಲಿ ತಮ್ಮ ಗುರುಗಳನ್ನು ಕಂಡ ದೃಶ್ಯ

ಪವಾಡದ ಚಿತ್ರಗಳು:




೫. ಹೊಳೆಯಲ್ಲಿ ಕಳೆದುಕೊಂಡಿರುವ ಲಿಂಗವನ್ನು ಹುಡುಕುವ ದೃಶ್ಯ






೬. ಹುಲಿಯು ಶಿವಯೋಗಿಯನ್ನು ಕಂಡು ನಮಸ್ಕರಿಸಿದ ದೃಶ್ಯ ೭. ಲಿಂಗಪೂಜಾನಿರತ ಶಿವಯೋಗಿಗಳ ಎದುರಿನಲ್ಲಿ ಕುಳಿತ ನಾಗರಾಜ

## ಕರ್ನಾಟಕದ ವೀರಶೈವ ಸಂಕೀರ್ಣ ಚಿತ್ರಗಳು
## ಬಸವಪೀಠ ಕ.ವಿ.ವಿ.ಧಾರವಾಡದಲ್ಲಿ ಸಂಗ್ರಹಿಸಿದ ಕಲಾಕೃತಿಗಳು



೧. ಕಲ್ಯಾಣದ ಅನುಭವ ಮಂಟಪ



೨. ತೋಂಟದ ಸಿದ್ಧಲಿಂಗಯತಿಗಳ ಶೂನ್ಯಪೀಠ

# ಕರ್ನಾಟಕದ ವೀರಶೈವ ಸಂಕೀರ್ಣ ಚಿತ್ರಗಳು
## ವೀರಶೈವ ಫಲಕ ಮಾಧ್ಯಮದ ವರ್ಣಚಿತ್ರಗಳು



ಚಿತ್ರಫಲಕ ೧



ಚಿತ್ರಫಲಕ ೩



ಚಿತ್ರಫಲಕ



ಚಿತ್ರಫಲಕ ೪

ಕರ್ನಾಟಕದ ವೀರಶೈವ ಸಂಕೀರ್ಣ ಚಿತ್ರಗಳು
ವೀರಶೈವ ಫಲಕ ಮಾಧ್ಯಮದ ವರ್ಣಚಿತ್ರಗಳು



ಚಿತ್ರಫಲಕ ೨



ಚಿತ್ರಫಲಕ ೫೭



ಚಿತ್ರಫಲಕ

## ಕರ್ನಾಟಕದ ವೀರಶೈವ ಸಂಕೀರ್ಣ ಚಿತ್ರಗಳು
## ಬಬಲೇಶ್ವರ ಬೃಹನ್ಮಠದಲ್ಲಿಯ ವರ್ಣ ಚಿತ್ರಗಳು



೧. ಶ್ರೀ ಗುರುಪಾದೇಶ್ವರ ಮಹಾಸ್ವಾಮಿಗಳು



೨. ಶ್ರೀ ಶಾಂತವೀರ ಮಹಾಸ್ವಾಮಿಗಳು



೩. ಡಾ.ಮಹಾದೇವ ಶಿವಾಚಾರ್ಯರು

ಕರ್ನಾಟಕದ ವೀರಶೈವ ಸಂಕೀರ್ಣ ಚಿತ್ರಗಳು
ಸುರಪೂರ ಶೈಲಿಯ ವೀರಶೈವ ಕಲಾಕೃತಿಗಳು



೧. ಮಾಣಿಕ ಪ್ರಭುಗಳು



೨. ಕಿಲ್ಲೇಮಠದ ಸ್ವಾಮಿಗಳು



೩.ಮಾರ್ತಾಂಡ ಪ್ರಭುಗಳು

## ಕರ್ನಾಟಕದ ವೀರಶೈವ ಸಂಕೀರ್ಣ ಚಿತ್ರಗಳು
## ಸುರಪೂರ ಶೈಲಿಯ ವೀರಶೈವ ಕಲಾಕೃತಿಗಳು



೪. ದತ್ತಾತ್ರೇಯನ ಕಲಾಕೃತಿ



೫. ಶಿವನ ಪರಿವಾರದ ಚಿತ್ರ

## ಕರ್ನಾಟಕದ ವೀರಶೈವ ಸಂಕೀರ್ಣ ಚಿತ್ರಗಳು
## ಸುರಪೂರ ಶೈಲಿಯ ವೀರಶೈವ ಕಲಾಕೃತಿಗಳು



೧. ಗಿರಿಜಾ ಕಲ್ಯಾಣ

ವಿಜಯ ಹಾಗರಗುಂಡಗಿ

## ಕರ್ನಾಟಕದ ವೀರಶೈವ ಸಂಕೀರ್ಣ ಚಿತ್ರಗಳು
## ಸುರಪೂರ ಶೈಲಿಯ ವೀರಶೈವ ಕಲಾಕೃತಿಗಳು



೨. ತ್ರಿಪುರ ಸಂಹಾರ ಮಾಡಿದ ಕಾರ್ತಿಕೇಯ ವಿಜಯ ಹಾಗರಗುಂಡಗಿ

ಕರ್ನಾಟಕದ ವೀರಶೈವ ಸಂಕೀರ್ಣ ಚಿತ್ರಗಳು
ಬಾಳೇಹೊನ್ನೂರು ರಂಭಾಪುರಿ ಪಂಚಪೀಠದ ಮಠದಲ್ಲಿ
ಸಂಗ್ರಹಿತ ಕಲಾಕೃತಿಗಳು








# ಕರ್ನಾಟಕದ ವೀರಶೈವ ಸಂಕೀರ್ಣ ಚಿತ್ರಗಳು
# ಬಾಳೇಹೊನ್ನೂರು ರಂಭಾಪುರಿ ಪಂಚಪೀಠದ ಮಠದಲ್ಲಿ
# ಸಂಗ್ರಹಿತ ಕಲಾಕೃತಿಗಳು











ಅಧ್ಯಾಯ : ಆರು

# ಕರ್ನಾಟಕದ ವೀರಶೈವ ಚಿತ್ರಕಲೆಯ ಪ್ರಮುಖ ಲಕ್ಷಣಗಳು, ಪ್ರಭಾವ, ಪ್ರೇರಣೆ, ಶೈಲಿ, ತಂತ್ರಗಾರಿಕೆ



# ಕರ್ನಾಟಕದ ವೀರಶೈವ ಚಿತ್ರಕಲೆಯ ಪ್ರಮುಖ ಲಕ್ಷಣಗಳು

(ಪ್ರಭಾವ, ಪ್ರೇರಣೆ, ಶೈಲಿ, ತಂತ್ರಗಾರಿಕೆ)

ಪ್ರಾಗೈತಿಹಾಸಿಕ ಕಾಲದ ಕಲೆ, ಐತಿಹಾಸಿಕ ಕಾಲದ ವಿವಿಧ ಘಟ್ಟಗಳು ಆಧುನಿಕ ಕಾಲದ ಕಲಾದೃಷ್ಟಿಗಳನ್ನು ಗಮನಿಸಿದಾಗ ಪ್ರಾದಿಮ ಮಾನವನ ಕಲೆಯ ಸಹಜ ಸರಳತೆ ಸಾಂಕೇತಿಕತೆಯೇ ವಿಕಾಸದ ಹಾದಿಯಲ್ಲಿ ಸಾಗುತ್ತ, ಸಂಕೀರ್ಣತೆಯ ವಿವಿಧ ರೂಪತಳೆದು ಮತ್ತೆ ಆಧುನಿಕ ಕಾಲದಲ್ಲಿ ಆ ಹಿಂದಿನ ಸರಳತೆ ಸಾಂಕೇತಿಕತೆಯ ಮಹತ್ವವನ್ನು ಅರಿತಂತೆ ಕಾಣುತ್ತದೆ. ಇಂದು ಪ್ರಾದಿಮ ಜನಾಂಗದ ಕಲೆಯ ಬಗೆಗಿನ ಆಸಕ್ತಿ ಮತ್ತು ಆಧುನಿಕ ಕಲೆಯ ಮೇಲಿನ ಪ್ರಭಾವಗಳನ್ನು ಗಮನಿಸಿದಾಗ ಕಲಾ ಪರಂಪರೆಯೂ ಒಂದು ಸುತ್ತು ಸುತ್ತಿಬಂದಿದೆ ಎನಿಸದಿರದು. ವೃತ್ತಕ್ಕೆ ಆರಂಭ ಅಂತ್ಯಗಳಿಲ್ಲ ಚಿತ್ರಕಲೆಯ ಅಧ್ಯಯನ ಪರಿಶೀಲನೆಯಲ್ಲಿ ಕಾಲದೃಷ್ಟಿಯಿಂದ ಧಾರ್ಮಿಕ ಹಿನ್ನೆಲೆಯಲ್ಲಿ ವಿಂಗಡಿಸುವುದು ಅನುಕೂಲಕ್ಕಾಗಿ ಮಾತ್ರ. ಪರಂಪರೆ ಪರಸ್ಪರ ಪ್ರೇರಣೆ ಪ್ರಭಾವಗಳು ಇವೆಲ್ಲದರ ಹಿಂದಿರುವ ಒಳಸೂತ್ರಗಳಾಗಿವೆ.

ಕರ್ನಾಟಕದ ಭೌಗೋಳಿಕ ಪ್ರದೇಶ ಅದರ ವಿಸ್ತಾರ ಸೀಮೆಗಳು ಇತಿಹಾಸದುದ್ದಕ್ಕೂ ಬದಲಾಗುತ್ತ ಬಂದಿವೆ. ಚಿತ್ರಕಲೆಯಲ್ಲಿ ಹೊಸ ಪ್ರಭಾವ, ಹೊಸದೃಷ್ಟಿ ಕಾಣಿಸಿಕೊಂಡ ಪ್ರದೇಶಗಳು ಇಂದು ಕರ್ನಾಟಕದಲ್ಲಿ ಇಲ್ಲ. ಹಾಗೆಂದು ಇಂದಿನ ಭೌಗೋಳಿಕ ಮಿತಿಯನ್ನೇ ಪರಿಶೀಲನೆಯ ಮಿತಿಯಾಗಿ ಆಧರಿಸಿ ಇಷ್ಟು ಮಾತ್ರವೇ ಕರ್ನಾಟಕದ ಪರಂಪರೆ ಎನ್ನುವಂತಿಲ್ಲ. ಇಲ್ಲಿ ಅಂತಹ ಲಕ್ಷ್ಮಣರೇಖೆ ಅವಾಸ್ತವವಾಗುತ್ತದೆ ಎಂದು ಗಮನಿಸಿದರೆ ಸಾಕು.

ಬೇಟೆಗಾರ, ಆದಿಮಾನವ, ವಲಸಿಗ, ನೆಲಸಿಗನಾಗಿ, ಕೃಷಿಗಾರನಾಗಿ, ಬದಲಾದಂತೆ ನಾಗರಿಕತೆ ಬೆಳೆದಂತೆ ಧರ್ಮ ಸಂಸ್ಕೃತಿಗಳೂ ಬೆಳೆದು ಬಂದಿದ್ದು ಅವನ ಕಲೆಯೂ ವಿಕಾಸ ಹೊಂದಿತು. ಶಿಷ್ಟಕಲೆಯೇ ಶ್ರೇಷ್ಠವಾದ ಕಲೆ ಎಂಬ ಭಾವನೆ ಹೋಗಿ ಕಳೆದ ಶತಮಾನದಿಂದೀಚೆಗೆ ಜಾನಪದದ ಬಗೆಗಿನ ಆಸಕ್ತಿಯ ಪರಿಣಾಮವಾಗಿ ಅದರ ಅಂತಃಸತ್ವದ ಅರಿವು ಮೂಡತೊಡಗಿತು ಈ ಶತಮಾನದ ಆರಂಭದ ದಶಕಗಳಲ್ಲಿ ಕಲೆಗಳ ಅದಮ್ಯ ಸಾಂಕೇತಿಕ ಶಕ್ತಿಯ ಅರಿವೂ ಉಂಟಾಯಿತು. ಮನೋವಿಜ್ಞಾನ ಬೆಳೆದಂತೆ ಮಕ್ಕಳ ಚಿತ್ರಕಲೆ ಹಾಗೂ ಆದಿಮಾನವನ ಕಲೆಗಳ ವಿಶ್ಲೇಷಣೆಯ ಫಲವಾಗಿ ಸಾವಿರಾರು ವರ್ಷಗಳಿಂದ ಬಂದಿದ್ದ ಆಗಮಶಾಸ್ತ್ರಗಳಲ್ಲಿ ಕಲೆಯನ್ನು ಕುರಿತು ನಿರೂಪಿತವಾದ ತತ್ವ ಸಿದ್ಧಾಂತಗಳು ಪರಿಕಲ್ಪನೆಗೆ ಬಂದವು. ಇದರ ಫಲ: ಎಲ್ಲ ದೇಶಗಳು ಜನಾಂಗಗಳ ಶಿಷ್ಟ, ಜಾನಪದ, ಆದಿವಾಸಿಗಳ ಕಲೆಗಳಿಗೂ ಅನ್ವಯವಾಗುವ ಕಲಾಸೃಷ್ಟಿಯ ಸೌಂದರ್ಯ ಪರಿಕಲ್ಪನೆಗಳ ವಿವರಣೆಯ ಪ್ರಯತ್ನ ಸಾಗಿತು.

[illegible]

ಆದಿಮಾನವನಿಗೆ ಮುಖ್ಯವಾಗಿ ಬೇಕಾಗಿರುವುದು ಆಹಾರ. ಅದಕ್ಕಾಗಿ ಪ್ರಾಣಿಗಳ ಬೇಟೆಯಾಡುವುದು ಈ ಬೇಟೆ ಆಡುವಾಗಿನ ಸಾವು-ನೋವುಗಳ ಭೀತಿ, ಹುಟ್ಟು ಸಾವುಗಳ ನಿಗೂಢ ಭೀತಿಯ ಜೊತೆಗೆ ಈ ಭಯ, ಅಗೋಚರ ಶಕ್ತಿಯ ಅರಿವು ಮೂಡಿಸಿದ್ದವು. ತನ್ನ ಮೇಲೆ ಪ್ರಭಾವ ಬೀರುವಂತೆ, ತಾನೂ ಅವುಗಳ ಮೇಲೆ ನಿಯಂತ್ರಣ ಸಾಧಿಸಬಹುದೇ? ಎನ್ನುವ ಆಲೋಚನೆಯಿಂದಾಗಿ, ಮಾಟ ಮಂತ್ರಗಳ ಕಲ್ಪನೆ ಮೂಡಿರಬೇಕು. ಪ್ರಾಣಿಯನ್ನು ಕೊಂದಂತೆ ಚಿತ್ರಿಸಿ ಬೇಟೆಯಾಡಿದರೆ ಇಚ್ಛೆ ಪೂರೈಸಬಹುದು. ಹೀಗಾಗಿ ಅವನ ಕಲಾರಚನೆಗಳಿಗೆ ಬೇರೊಂದು ಅರ್ಥ ಬಂದಿತು. ಆಹಾರ ಸಿಗಬೇಕೆಂದೂ ತನಗೇನೂ ಆಗಬಾರದೆಂದು ಬಯಸಿದ ಮಾನವ ಬಹಿರಂಗವಾಗಿ ಅದು ಬೇಡಿಕೆ, ಪ್ರಾರ್ಥನೆ ಪೂಜೆಯಾಯಿತು. ಮಾಟ ಮಂತ್ರ ವಿಧಿಗಳು ಪೂಜೆಯ ಪ್ರಾಕೃತ ವಿಧಾನವೇ ಆಗಿವೆ. ಹೀಗೆ ಆದಿಮಾನವನ ಕಾಲದಿಂದಲೇ ಕಲೆ ಹಾಗೂ ಮತ, ಧರ್ಮಗಳು ನಿಕಟ ಸಂಬಂಧ ಹೊಂದುತ್ತ ಇತಿಹಾಸದುದ್ದಕ್ಕೂ ವ್ಯಕ್ತವಾಗಿರುವುದನ್ನು ಕಾಣುತ್ತೇವೆ.

ಮನುಷ್ಯ ಚಿತ್ರಗಳಲ್ಲಿ ವಿವಿಧ ರೀತಿಯಲ್ಲಿರುವುದು ಕಾಣುತ್ತೇವೆ. ದುಂಡು ತಲೆಯವು ಎರಡು ತ್ರಿಕೋನಗಳನ್ನು ಎದೆ ಮತ್ತು ಸೊಂಟವಾಗಿ ಚಿತ್ರಿಸಿರುವಂಥವು ಇದೆ. ಒಂದು ಚಿತ್ರದಲ್ಲಿ ಉದ್ದ ಕಾಲಿನ ದುಂಡು ಹೊಟ್ಟೆಯ ಮದ್ಯೆ ಒಂದು ಚುಕ್ಕೆ ಇರುವ ಗರ್ಭಿಣಿ, ಆಕೆಯ ಹಿಂದೆ ಭೋಗಾಸಕ್ತ ಗಂಡು ಹೆಣ್ಣುಗಳಿವೆ. ಮನುಷ್ಯರಚನೆಯಲ್ಲಿನ ವೈವೀಧ್ಯದ ವಿಕಾಸವನ್ನು ಬಂಡೆಯಾಸರೆಯ ಚಿತ್ರಗಳಲ್ಲಿ ಕಾಣಬಹುದು. ಹಾಗೆಯೇ ಪ್ರಾಣಿ ಪಕ್ಷಿಗಳ ಚಿತ್ರಗಳೂ ರಚನೆಗೊಂಡಿವೆ. ಆದಿಮಾನವನ ಸಮುದಾಯದ ಅನುಭವ ನಂಬಿಕೆಗಳನ್ನು ಸಂಕೇತಗಳ ಮೂಲಕ ಹಂಚಿಕೊಳ್ಳುವ ಕಲೆಯಾಗಿದ್ದು ಕಲೆ ಮತ್ತು ಧರ್ಮಗಳು ಪ್ರತ್ಯೇಕವಲ್ಲ. ಬದುಕಿನ ಒಂದು ಭಾಗವಾಗಿತ್ತು ಎನ್ನಬಹುದು. ಕರ್ನಾಟಕದ ಈ ಪ್ರಾದಿಮ ಕಲೆ ಸತ್ವಪೂರ್ಣವಾಗಿದ್ದು ಇವು ಸೃಜನಶೀಲತೆಯ ಮೊದಲ ಹೆಜ್ಜೆಗಳು ಆಗಿರುವುದಲ್ಲದೇ ಇವು ನಿಗೂಢತೆಯ ಅಭಿವ್ಯಕ್ತಿಯಾಗಿವೆ.[೧]

ಬಳ್ಳಾರಿಯ ಕಪ್ಪಗಲ್ಲಿನ ಆದಿಮ ಗುಹಾಚಿತ್ರ ಒಂದರಲ್ಲಿ ವೃಷಭವೊಂದು ಲಿಂಗದ ಮುಂದೆ ಕುಳಿತಂತೆ ಚಿತ್ರಿತವಾಗಿದೆ. ಇದರಿಂದ ಲಿಂಗಪೂಜೆಯ ಕಲ್ಪನೆ ಶಿಲಾಯುಗದ ಕಾಲದಲ್ಲಿಯೇ ಇತ್ತು ಎಂಬುದು ತಿಳಿದು ಬರುತ್ತದೆ. ಪಿಕ್ಲಿಹಾಲ್ ನೆಲೆಯಲ್ಲಿ ದೊರೆತಿರುವ ಶಿಲಾಯುಗದ ಮನುಷ್ಯನ ಗೊಂಬೆಯನ್ನು ಪುರುಷನೊಬ್ಬನ ವಿಗ್ರಹವೆಂದೂ ಗುರುತಿಸಿದ್ದರೂ ಅದು ಅರ್ಧ (ಈಶ್ವರ)ನಾರೀಶ್ವರ ಇರಬಹುದೆಂದು ಅನುಮಾನಿಸಲಾಗಿದೆ. ವಡಗಾಂವ್ ಮಾಧವಪುರದಲ್ಲಿ ದೊರೆತಿರುವ ಅಂತಿಮ ಶಿಲಾಯುಗದ ಅಥವಾ ಶಾತವಾಹನರ ಅಂತಿಮಯುಗಕ್ಕೆ ಸೇರಬಹುದಾದ ಮೃತ್ ಫಲಕದಲ್ಲಿರುವ "ಉಬ್ಬು ಶಿಲ್ಪ" ಶಿವ ರಕ್ಷಿಸುತ್ತಿರುವ ಮಾರ್ಕಂಡೇಯನದೆಂದೂ ಅ.ಸುಂದರ ಅವರು ಗುರುತಿಸುತ್ತಾರೆ. ಮುಂದಿನ ಇತಿಹಾಸದ ಕಾಲದಲ್ಲಿ ಐಹೊಳೆಯ ರಾವಳಫಡಿಯಲ್ಲಿ ಮೇಲ್ಛಾವಣಿಯಲ್ಲಿರುವ ಉಬ್ಬು ಶಿಲ್ಪಗಳ ಹಿನ್ನೆಲೆಗೆ ಕೆಲವು ಬಣ್ಣಗಳನ್ನು ಹಾಕಿದಂತಿದೆ. ಈಚೆಗೆ ಶೀಲಾಕಾಂತ ಪತ್ತಾರ ಅವರು ಇಲ್ಲಿ ಕೆಲವು ಶೈವ ಆಕೃತಿಗಳನ್ನು ಗುರುತಿಸಿದ್ದಾರೆ.[೨]

---

೧. ಪ್ರೋ.ಎಂ.ಎಚ್ ಕೃಷ್ಣಯ್ಯ : ಶೃಂಗಾರ ಲಹರಿ: ಪುಟ ೪೩
೨. ಡಾ. ಅ.ಲ.ನರಸಿಂಹನ್ : ಕರ್ನಾಟಕ ಭಿತ್ತಿ ಚಿತ್ರ ಪರಂಪರೆ: ಪುಟ ೬೮

ಸೈಂಧವ ಸಂಸ್ಕೃತಿಯು ವಿಶ್ವದ ಅತೀ ಪ್ರಾಚೀನ ಸಂಸ್ಕೃತಿಗಳಲ್ಲಿ ಒಂದಾಗಿದೆ. ಈ ಸಂಸ್ಕೃತಿಯ ಪ್ರಾರಂಭಿಕ ಇತಿಹಾಸದ ಕಾಲವನ್ನು ಕ್ರಿ.ಶ.ಪೂ.೪೦೦೦ ದಿಂದ ೫೦೦೦ ವರುಷಗಳಾಗಿದ್ದು ಹರಪ್ಪಾ ಮೊಹೆಂಜೋದಾರೋದಲ್ಲಿ ದೊರೆತ ಆಭರಣಗಳಲ್ಲಿ ಕಂಡುಬರುವ ನಕ್ಷೆಗಳು ಮುದ್ರೆಗಳ ಮೇಲೆ ಕಂಡುಬರುವ ಸುಂದರವಾದ ಚಿತ್ರಗಳು ಮುಂತಾದವುಗಳನ್ನು ನೋಡಿದರೆ ಅವರ ಕಲಾತ್ಮಕ ಸೌಂದರ್ಯದ ಅರಿವು ನಮಗಾಗುವುದು. ಮುದ್ರೆಗಳು ಹಾಗೂ ಲಿಪಿಗಳು ಸೈಂದವ ಸಂಸ್ಕೃತಿಯ ಒಂದು ವೈಶಿಷ್ಟ್ಯ ಪೂರ್ಣವಾದ ಮಹತ್ವವನ್ನು ಹೊಂದಿವೆ. ಈ ವರೆಗೆ ಇಂಥಹ ಸುಮಾರು ೨೦೦೦ ಮುದ್ರೆಗಳನ್ನು ಸಂಗ್ರಹಿಸಲಾಗಿದೆ. ಅವುಗಳ ಮೇಲೆ ಚಿತ್ರಗಳು ಮತ್ತು ಲಿಪಿಗಳು ಇದ್ದು ಈ ಲಿಪಿ ಹಾಗೂ ಭಾಷೆಗಳು ಈ ಸಂಸ್ಕೃತಿಯ ಒಂದು ಕುತೂಹಲಪೂರ್ಣ ರಹಸ್ಯಗಳಾಗಿಯೇ ಈವರೆಗೂ ಉಳಿದಿವೆ. ಈ ಮುದ್ರೆಗಳು ಐತಿಹಾಸಿಕ ಮತ್ತು ಧಾರ್ಮಿಕ ಸಂಗತಿಗಳನ್ನೊದಗಿಸುವ ಮೂಲಾಧಾರಗಳಾಗಿವೆ. ಅವು ನಮಗೆ ನಿಸರ್ಗದ ಎಲೆ, ಪ್ರಾಣಿ, ಪಕ್ಷಿ, ಮಾನವ, ದೇವರು ಮುಂತಾದವುಗಳ ಬಗೆಗೆ ಜ್ಞಾನವನ್ನು ನೀಡುವುದಲ್ಲದೆ ಈ ಮುದ್ರೆಗಳನ್ನು ಆಭರಣಗಳನ್ನಾಗಿ, ವಾಣಿಜ್ಯ ಸಂಪರ್ಕಕ್ಕಾಗಿ ಬಳಸುತ್ತಿದ್ದರೆಂದೂ ಹಾಗೂ ಇಲ್ಲಿ ಶಿವಲಿಂಗದ ಶಿಲಾವಿಗ್ರಹಗಳು ದೊರೆತಿರುವುದರಿಂದ ಶಿವನನ್ನು ಅವರು ಆರಾಧಿಸುತ್ತಿದ್ದರೆಂದೂ ಅಲ್ಲದೇ ಅವರು ಗಿಡ, ನದಿ, ಪ್ರಾಣಿ, ಸರ್ಪ, ಮುಂತಾದವುಗಳನ್ನು ಸಹ ಪೂಜಿಸುತ್ತಿದ್ದರೆಂದೂ ಈ ಸೈಂಧವ ಸಂಸ್ಕೃತಿಯಿಂದ ತಿಳಿದುಬರುತ್ತದೆ.[೩] ಇಂದಿಗೂ ಸಹ ಹಿಂದೂಗಳಲ್ಲಿ ಪೂಜಿಸುವ ಸಂಪ್ರದಾಯವಿರುವುದು ಕಂಡುಬರುತ್ತದೆ.

ಹರಪ್ಪಾ ಮೊಹೆಂಜೋದಾರೋದಲ್ಲಿ ಭಾರತೀಯ ಮೂಲನಿವಾಸಿಗಳಾದ ವ್ರಾತ್ಯರು(ದ್ರಾವಿಡರು) ಸುಸಂಸ್ಕೃತರಾಗಿದ್ದರು. ಅವರು ಶೈವೋಪಾಸಕರಾಗಿದ್ದರು ಎಂಬುದು ಸೈಂಧವ ಸಂಸ್ಕೃತಿಯಲ್ಲಿ ದೊರೆತಿರುವ ಹಲವು ಬಗೆಯ ಲಿಂಗಗಳಿಂದ ಕುರಿತು ಸರ್ ಜಾನ್ ಮಾರ್ಷೆಲ್ ಅವರು ಹೀಗೆ ಸಣ್ಣ ಲಿಂಗಗಳನ್ನು ದೇಹದ ಮೇಲೆ ಧರಿಸುತ್ತಿದ್ದರೆಂದೂ, ದೊಡ್ಡಲಿಂಗಗಳನ್ನು ಪೀಠಗಳ ಮೇಲಿಟ್ಟು ಪೂಜಿಸುತ್ತಿದ್ದರೆಂದು ಅಭಿಪ್ರಾಯಪಟ್ಟಿರುವರು. ಇಲ್ಲಿ ದೊರೆತಿರುವ ಮುದ್ರೆಗಳು ಅವುಗಳಲ್ಲಿ ಪಶುಪತಿ, ಯೋಗ, ವೃಷಭ, ಆಲದ ಎಲೆ, ಬಿಲ್ವ ಪತ್ರಿ, ಸ್ವಸ್ತಿಕ್‌ಗಳಂತಹ ಹಲವಾರು ಧರ್ಮಸಾಂಕೇತಿಕ ಚಿಹ್ನೆಗಳನ್ನು ಹೊಂದಿದ ಮುದ್ರೆಗಳು ಹಾಗೂ ಧರ್ಮಗುರುಗಳ ಶಿಲ್ಪ ಹೀಗೆ ಶೈವ, ವೀರಶೈವ ಪ್ರಧಾನವಾದ ಚಿತ್ರ ಶಿಲ್ಪಗಳು ಈ ಸಿಂಧೂ ಸಂಸ್ಕೃತಿಯಲ್ಲಿ ಬೆಳೆದುಬಂದಿದ್ದು ಈ ಚಿತ್ರ ಶಿಲ್ಪಗಳು ಪ್ರಮಾಣದಲ್ಲಿ ಕಿರುರೂಪದಲ್ಲಿದ್ದರೂ ಪ್ರಮಾಣಬದ್ಧವಾಗಿದ್ದು ಆಕಾರ, ಆಕೃತಿಗಳು ಅತ್ಯಂತ ಸುಂದರವಾಗಿ ಮೂಡಿಬಂದಿವೆ.

ಭಾರತೀಯ ಚಿತ್ರಕಲೆಯ ಇತಿಹಾಸದಲ್ಲಿ ಸಾಮಾನ್ಯವಾಗಿ ಅಜಂತಾ ಚಿತ್ರಕಲೆಯು ವರ್ಣರಂಜಿತವಾಗಿಯೂ ಅಲಂಕಾರಿಕವಾಗಿಯೂ ಉನ್ನತಮಟ್ಟವನ್ನು ಮುಟ್ಟಿತು. ಕ್ರಿಸ್ತಪೂರ್ವ ೨ನೇ ಶತಮಾನದಿಂದ ಕ್ರಿಸ್ತಶಕೆ ೮ನೇ

೩. ಪ್ರೊ. ರಂಗನಾಥ : ಪ್ರಾಚೀನಭಾರತದ ಇತಿಹಾಸ ಮತ್ತು ಸಂಸ್ಕೃತಿ: ಪುಟ ೧೨

ಶತಮಾನದ ಅವಧಿಯವರೆಗೆ ಬೆಳೆದುಬಂದಿದ್ದು ಶಾತವಾಹನರು, ವಾಕಾಟಕರು, ಚಾಲುಕ್ಯರು ಹಾಗೂ ಅನಂತರ ರಾಷ್ಟ್ರಕೂಟರ ಆಳ್ವಿಕೆ ನಡೆದಿದ್ದು ಇವರ ಅವಧಿಯಲ್ಲಿ ಈ ಚಿತ್ರಗಳು ರಚನೆಯಾಗಿವೆ.

ಅಜಂತಾದ ಭಿತ್ತಿಚಿತ್ರಗಳು ಶಾಸ್ತ್ರೋಕ್ತ ಶೈಲಿಯ ಅತ್ಯಂತ ಶ್ರೇಷ್ಠ ಮಟ್ಟದ ಕಲಾಕೃತಿಗಳಾಗಿವೆ. ಕೆಲವೊಂದು ತಂತ್ರ ಶೈಲಿ ನಿರೂಪಣಾ ವಿಷಯ ಕಲಾವಿಧಾನಗಳು ವಿಶಿಷ್ಟವಾಗಿ, ದೃಷ್ಟಾಂತಗಳಾಗಿ, ಪ್ರಬುದ್ಧವಾಗಿ ಮೂಡಿಬಂದಿವೆ. "ನಾಟ್ಯ ಶಾಸ್ತ್ರ"ದಲ್ಲಿ ಹೇಳಿದ ನಾಟ್ಯ ಭಂಗಿಗಳು, ಹಸ್ತಮುದ್ರೆಗಳು ಇಲ್ಲಿ ದೃಶ್ಯರೂಪದಲ್ಲಿ ನಿರೂಪಿತವಾಗಿರುವುದನ್ನೂ ದೃಶ್ಯಗಳ ನಾಟ್ಯಗುಣಗಳನ್ನೂ ಗಮನಿಸಬಹುದಾಗಿದೆ. ನೃತ್ಯಕಲೆಯು ಚಿತ್ರ ಮತ್ತು ಶಿಲ್ಪಕಲೆಗಳಿಗೆ ಮೂಲ ಎಂಬುದನ್ನು ಈ ಅಜಂತಾದ ವರ್ಣಚಿತ್ರಗಳು ದೃಢಪಡಿಸುತ್ತವೆ.[೪] ಅಜಂತಾದಲ್ಲಿ ಒಟ್ಟು ಮೂವತ್ತು ಗುಹಾದೇವಾಲಯಗಳಿದ್ದು ಇಲ್ಲೆಲ್ಲಾ ವರ್ಣ ಭಿತ್ತಿ ಚಿತ್ರಗಳನ್ನು ರಚಿಸಲಾಗಿದೆ. ಆಯಾಕಾಲದ ವಿಶೇಷ ಅಂಶಗಳನ್ನು ಆಶ್ರಯದಾತರ ಅಭಿರುಚಿಗಳನ್ನು ಗಮನಿಸಿ ಚಿತ್ರರಚನೆ ಮಾಡುತ್ತಿದ್ದರು. ಆದ್ದರಿಂದ ಈ ವ್ಯತ್ಯಾಸ ತಂತ್ರ ಶೈಲಿಗಳಲ್ಲಿ ವರ್ಣಗಳ ಬಳಕೆಯನ್ನು ಸಹಜವಾಗಿ ಗಮನಿಸಬಹುದಾಗಿದೆ.

ಒಂದನೆಯ ಗುಹೆಯಲ್ಲಿ ಇಮ್ಮಡಿ ಪುಲಕೇಶಿಯ ಆಸ್ಥಾನದ ಚಿತ್ರವನ್ನು ರಚಿಸಲಾಗಿದ್ದು ಪರ್ಷಿಯಾದೇಶದ ರಾಯಭಾರಿಗಳು ಇಲ್ಲಿ ಚಿತ್ರಿತವಾಗಿದ್ದು ಪರ್ಷಿಯಾ ದೇಶದ ರಾಜಕುಮರ ಭಾರತದ ದಕ್ಷಿಣಾಪಥೇಶ್ವರನನ್ನು ತನ್ನ ತಂದೆಯಿಂದ ರಾಜ್ಯ ಪಡೆಯಲು ನೆರವು ಬೇಡಿ ರಾಯಭಾರಿಗಳನ್ನು ಕಳುಹಿಸಿದ್ದ ಎಂಬ ವಿಷಯ ಇತಿಹಾಸ ದಾಖಲೆಗಳಲ್ಲಿ ಉಲ್ಲೇಖಗೊಂಡಿದೆ. ಇಲ್ಲಿ ಬೌದ್ಧಜಾತಕ ಕಥೆಗಳೇ ವಸ್ತುವಾಗಿದ್ದರೂ ಇಮ್ಮಡಿ ಪುಲಕೇಶಿ ಒಂದನೆಯ ಗುಹೆಯಲ್ಲಿ ತನ್ನನ್ನು ದಕ್ಷಿಣಾಪಥೇಶ್ವರನೆಂದು ತನ್ನ ಆಸ್ಥಾನದ ಮಹತ್ವದ ಸನ್ನಿವೇಶವನ್ನೇ ಚಿತ್ರಿಸಿದ್ದು ಬೌದ್ಧಪ್ರಧಾನವಾದ ಈ ಗುಹೆಗಳಲ್ಲಿ ಶೈವ ಪ್ರಧಾನ (ದಕ್ಷಿಣೇಶ್ವರ)ವಾದದ ಸುಳಿವನ್ನು ನೀಡಿದ ಎನ್ನಲೂಬಹುದು. ಆದ್ದರಿಂದ, ಅಂತಿಮ ಘಟ್ಟದ ಅಜಂತಾಪರಂಪರೆಯು ಮುಂದುವರೆದು ಶೈವ, ವೈಷ್ಣವ ಪರಂಪರೆಗಳು ಬಾದಾಮಿ ಮತ್ತು ಎಲ್ಲೋರಾಗಳಲ್ಲಿ ವಿಕಾಸಹೊಂದುತ್ತ, ಕಾಲೋಚಿತವಾಗಿ ಬದಲಾವಣೆಗಳನ್ನು ಹೊಂದುತ್ತ, ಸ್ಥಳೀಯ ಕಲಾ ಶೈಲಿಯ ವೈಶಿಷ್ಟ್ಯಗಳನ್ನು ಮೈಗೂಡಿಸಿಕೊಳ್ಳುತ್ತಾ ಕರ್ನಾಟಕದ ಶೈವ ವೀರಶೈವ, ವೈಷ್ಣವ, ಹಾಗೂ ಸ್ವಲ್ಪ ಪ್ರಮಾಣದಲ್ಲಿ ಜೈನ ಪ್ರಭಾವವೂ ಚಿತ್ರ ಶಿಲ್ಪ, ವಾಸ್ತುಶಿಲ್ಪಗಳ ಮೇಲೆ ದಕ್ಷಿಣಭಾರತದಲ್ಲಿ ಇತಿಹಾಸದುದ್ದಕ್ಕೂ ಪ್ರಭಾವ ಬೀರಿರುವುದನ್ನು ಕಾಣಬಹುದಾಗಿದೆ.

ಅಜಂತೆಯ ಕಣ್ಣೆಲೆ ತಂತ್ರ ವೈಜ್ಞಾನಿಕ ಅಂಕಣದ ಬೇರೆ ಬೇರೆ ಭಾಗಗಳಲ್ಲಿ ವಿವಿಧ ಕೋನಗಳ ಕಣ್ಣೆಲೆಗಳಲ್ಲಿ (perspective) ಚಿತ್ರಿಸಿರುವುದನ್ನು ಕಾಣಬಹುದು. ಇದರ ಪರಿಣಾಮವಾಗಿ (Multi dimensional perspective) ಅದ್ಭುತ ಎನ್ನಬಹುದು. ದೃಷ್ಟಿ ಹರಿದಂತೆ ವಿವಿಧ ಕೋನಗಳ ಅನುಭವ ಆಗುತ್ತದೆ. ಕಲಾವಿದನ ಮಾನಸಿಕ ಕಣ್ಣೆಲೆ (Mental perspective) ಇಲ್ಲಿ ಕೆಲಸಮಾಡಿದೆ. ಮುಖ್ಯ ವ್ಯಕ್ತಿಗಳನ್ನು ದೊಡ್ಡ ಆಕಾರದಲ್ಲಿಯೂ

೪. ಪ್ರೊ.ಎಂ.ಎಚ್.ಕೃಷ್ಣಯ್ಯ: ಶೃಂಗಾರಲಹರಿ: ಪುಟ ೪೪

ಅಪ್ರಮುಖ (ಸಾಮಾನ್ಯ) ವ್ಯಕ್ತಿಗಳನ್ನು ಚಿಕ್ಕದಾಗಿಯೂ ಚಿತ್ರಿಸಲಾಗಿದೆ. ಇಡೀ ಅಂಕಣವನ್ನು ಆವರಿಸಿರುವ ಬುದ್ಧ ನಮ್ಮೆಡೆಗೆ ಬರುವಂತೆ ಚಿತ್ರಿಸಿದ್ದಾರೆ. ಇನ್ನೊಂದು ತಂತ್ರ ಇಲ್ಲಿಯ ಚಿತ್ರಗಳು ಸ್ಥಗಿತವಾಗದೇ ಚಲಿಸುವಂತೆ ಭ್ರಮೆ ಮೂಡಿಸುತ್ತವೆ. ದೃಷ್ಟಿಯು ನಿರಂತರವಾಗಿ ಒಂದು ವೃತ್ತದಿಂದ ಮತ್ತೊಂದು ವೃತ್ತಕ್ಕೆ ಘಟನೆಯಿಂದ ಮುಂದಿನ ಘಟನೆಯತ್ತ ಹರಿಯುವಂತೆ ಮಾಡುವ ಸಂಯೋಜನೆ ಕುತೂಹಲಕಾರಿಯಾಗಿದೆ. ಚಿತ್ರದ ಬಣ್ಣದ ಯೋಜನೆಯೂ ಸಾಂಗತ್ಯ (Hormony)ದಿಂದಾಗಿ ಕಣ್ಣಿಗೆ ಹಿತವಾಗಿ ಮೂಡಿ ಬಂದಿದೆ. ಹೀಗೆ ಅಜಂತೆಯ ಚಿತ್ರಗಳು ವೈಶಿಷ್ಟ್ಯ ಪೂರ್ಣವಾಗಿ ಮೂಡಿಬಂದಿವೆ.

ಬಾದಾಮಿಯ ಭಿತ್ತಿಚಿತ್ರಗಳ ಕುರಿತು ಬ್ಯಾರೆಟ್ ಮತ್ತು ಡಾ.ಸ್ಟೆಲ್ಲಾ ಕ್ರಾಮ್‌ರಿಶ್ ಅವರು ಹೇಳಿರುವ ಅಂಶಗಳ ಜೊತೆಗೆ, ದುಂಡುಮುಖಗಳು, ನೀಳ ಆಕೃತಿ ಕಣ್ಣು, ಕೆನ್ನೆ ಸ್ಥನಗಳನ್ನು ಉತ್ಪ್ರೇಕ್ಷಿಸಿ ನಿರೂಪಿಸಿರುವುದನ್ನು ಕಾಣಬಹುದು. ಒಂದೇ ಬಣ್ಣದ ಎರಡು ಮೂರು ಛಾಯೆಗಳನ್ನು ಬಳಸಿರುವ ರೂಪಣ ವಿಧಾನವಿಲ್ಲ. ಸೂಕ್ಷ್ಮರೇಖೆಗಳೇ ಬಾಹ್ಯದ ಅಂಗಾಂಗಗಳ ವಿವರವನ್ನು ನಿರೂಪಿಸುತ್ತವೆ. ಅಜಂತಾದಂತೆ ವರ್ಣಯೋಜನೆ ಇದ್ದರೂ ಅಲ್ಲಿಯ ಆಳ ಇಲ್ಲ ಎನ್ನಬಹುದು. ಪ್ರಧಾನ ಆಕೃತಿಗಳ ಜೊತೆಗಿರುವ ಸೇವಕರು ಸೇವಕಿಯರ ಚಿತ್ರಣದಲ್ಲಿ ಅಜಂತಾದಂತೆ ಮೈಬಣ್ಣದಲ್ಲಿ ವೈದೃಶ್ಯವನ್ನು ಕಾಣಬಹುದು. ವರ್ಣಸಾಂಗತ್ಯವನ್ನು ಸಾಧಿಸಿದೆ. ಸಮೂಹ ಚಿತ್ರಣದಲ್ಲಿ ಆಕೃತಿಗಳ ಪರಸ್ಪರ ಸಂಬಂಧ ಒಟ್ಟು ಸಂಯೋಜನೆಯ ದೃಷ್ಟಿಯಿಂದ ಅಜಂತೆಯಂತೆ ಉತ್ತಮ ಎನ್ನಲಾಗದಿದ್ದರೂ ಲಯವಿನ್ಯಾಸವಿದೆ ಎನ್ನಬಹುದು.

ಅಜಂತೆಯು ಬೌದ್ಧ ಕಲೆಯನ್ನು ಸಿತ್ತನ್‌ವಾಸಲ್‌ವು ಜೈನಕಲೆಯನ್ನು, ಬಾದಾಮಿಯು ವೈದಿಕಮತದ ಕಲೆಯನ್ನು ಮೊದಲ ಉದಾಹರಣೆಯಾಗಿ ರೂಪು ತಳೆದಿದೆ. ಚಾಲುಕ್ಯರ ದೊರೆ ಮಂಗಳೇಶನು ಲಲಿತಕಲೆಗಳಿಗೆ ಮಹಾನ್ ಆಶ್ರಯದಾತನಾಗಿದ್ದ. ಬಾದಾಮಿಯ ಅದ್ಭುತ ಗುಹಾಂತರ್ದೇವಾಲಯಗಳು ಸೃಷ್ಟಿಯಾಗಿವೆ.

ಎಲ್ಲೋರಾ ಅಥವಾ ವೇಲೂರು ಔರಂಗಾಬಾದಿನಿಂದ ವಾಯುವ್ಯಕ್ಕೆ ಹದಿನಾಲ್ಕು ಮೈಲಿ ದೂರದಲ್ಲಿದೆ. ೮ನೆಯ ಶತಮಾನದ ವೇಳೆಗೆ ಚಾಲುಕ್ಯರ ನಂತರ ರಾಷ್ಟ್ರಕೂಟರು ಬಲಿಷ್ಠರಾಗಿ ಸಾಮ್ರಾಜ್ಯವನ್ನು ಸ್ಥಾಪಿಸಿದರು. ರಾಷ್ಟ್ರಕೂಟರ ಒಂದನೆಯ ದೊರೆ ಕೃಷ್ಣ ಎಲ್ಲೋರಾದಲ್ಲಿ ಬೃಹತ್ ಬೆಟ್ಟವನ್ನೇ ಕಡಿದು ವಿರೂಪಾಕ್ಷದೇವಾಲಯ ನಿರ್ಮಿಸಿದ್ದು ಇದಕ್ಕೆ ಮಾದರಿಯಾಗಿತ್ತು. ಭಿತ್ತಿ ಚಿತ್ರದಲ್ಲೂ ಚಾಲುಕ್ಯರು ಬಾದಾಮಿಯ ಪರಂಪರೆಯ ವಿಶೇಷ ಲಕ್ಷಣದೊಂದಿಗೆ ತಮ್ಮದೇ ಆದ ಶೈಲಿಯನ್ನು ಕಂಡುಕೊಂಡರು. ವರ್ಣಚಿತ್ರಗಳನ್ನು ಕೈಲಾಸದೇವಾಲಯದ ಛಾವಣಿ ಮತ್ತು ಪಡಸಾಲೆಯ ಗೋಡೆಗಳ ಮೇಲೆ ರಚಿಸಲಾಗಿದೆ. ಬಾದಾಮಿಯಲ್ಲಿ ಸೂಕ್ಷ್ಮವಾಗಿ ಕಾಣಿಸಿಕೊಂಡ ರೇಖಾತ್ಮಕ ಶೈಲಿಯ ಕೌಶಲ ಇಲ್ಲಿ ಸ್ಪಷ್ಟ ಖಚಿತರೂಪು ಪಡೆದಿದೆ. ವರ್ಣಲೇಪನವು ಚಪ್ಪಟೆಯಾಗಿರುವುದು ಕಂಡುಬರುತ್ತದೆ. ರೇಖಾಕೌಶಲ ದೃಢವಾಗಿದ್ದು ಮುಕ್ಕಾಲು ಮುಖನೋಟದಲ್ಲಿ (three fourth profile) ಕಣ್ಣು ರೆಪ್ಪೆ ಕೆನ್ನೆಯಾಚೆ ಚಾಚಿರುವ ಶೈಲಿ ಇಲ್ಲಿ ಸ್ಪಷ್ಟ. ಅಜಂತಾ ಬಾದಾಮಿ, ಸಿತ್ತನ್‌ವಾಸಲ್‌ದ ಚಿತ್ರಗಳಲ್ಲಿಯ

ದುಂಡುಮುಖಗಳು ಇಲ್ಲಿ ಕೋನಾತ್ಮಕ ರೂಪಕ್ಕೆ ಎಡೆ ಮಾಡಿಕೊಟ್ಟಿರುವುದನ್ನು ಕಾಣಬಹುದು. ಚೂಪಾದ ಮೂಗು ಗಲ್ಲಗಳಲ್ಲೂ ವಿಶಿಷ್ಟ ಲಕ್ಷಣ ಇನ್ನೊಂದು ಗಮನಾರ್ಹ ಅಂಶ. ವಸ್ತುನಿರೂಪಣೆಗೆ ಸಂಬಂಧಿಸಿದಂತೆ ಎಂದರೆ ಅಜಂತಾದ ಮಾನವೀಯ ಮೌಲ್ಯಗಳ ನಿಸರ್ಗ ಸಮೀಪ ಬದುಕಿನ ಪ್ರಾಣಿ ಪಕ್ಷಿಗಳ ಪ್ರಪಂಚಕ್ಕೆ ಬದಲಾಗಿ ಎಲ್ಲೋರಾ ಕಲೆ ದೇವಾದಿದೇವತೆಗಳಿಂದ ತುಂಬಿದೆ. ಚಾಲುಕ್ಯರೀತಿಯ ನಟರಾಜನ ಚಿತ್ರವಿಲ್ಲದೆ ಬಾದಾಮಿ ಪಟ್ಟದಕಲ್ಲಿನ ನಟರಾಜನಂತೆ ಹಲವು ತೋಳುಗಳಿಂದ ಕೂಡಿದ ಅಷ್ಟೇ ಸುಂದರವಾದ ಚಿತ್ರವಿಲ್ಲಿದೆ . ಇಲ್ಲಿಯ ಲಿಂಗೋದ್ಭವ ಮೂರ್ತಿಯ ಚಿತ್ರವೂ ಗಮನಾರ್ಹವಾಗಿ ರೂಪುಗೊಂಡಿದೆ. ಬಹುಭಾಗ ಈಗ ಹಾಳಾಗಿದ್ದರೂ ಲಿಂಗದಿಂದ ಶಿವನು ಅಕ್ಕ ಪಕ್ಕಗಳಲ್ಲಿ ಬ್ರಹ್ಮ ವಿಷ್ಣುಗಳ ಜೊತೆ ಉದ್ಭವಿಸುತ್ತಿರುವ ಈ ಚಿತ್ರ ಉತ್ತಮವಾಗಿ ಮೂಡಿಬಂದಿದೆ. ನಂದಿಯ ಮೇಲೆ ಕುಳಿತ ಶಿವನ ಚಿತ್ರದಲ್ಲಿ ರೇಖಾತ್ಮಕತೆಯ ಜೊತೆಗೆ ನಿಲುವುಗಳು, ವಿಶಾಲ ವೃಕ್ಷವನ್ನು ಗಮನಿಸಬಹುದು. ಹಳೆಯ ಶೈಲಿಯ Solid body colours ಇನ್ನೂ ಉಳಿದಿರುವುದನ್ನು ಕಾಣಬಹುದಾಗಿದೆ.

ಗರುಡನ ಮೇಲೆ ಕುಳಿತಿರುವ ಲಕ್ಷ್ಮೀನಾರಾಯಣ ಚಿತ್ರವು ಕುತೂಹಲಕಾರಿಯಾಗಿದೆ. ಇಲ್ಲಿ ಎಲ್ಲೋರಾದ ವಿಶಿಷ್ಟವಾದ ಚಾಚುಕಣ್ಣು ಚೂಪುಮೂಗುಗಳನ್ನು ಕಾಣಬಹುದು. ತುಟಿಯೂ ಚಾಚಿದೆ. ಇಲ್ಲಿಯ ಗರುಡ ಮನುಷ್ಯರೂಪಿಯಿದ್ದು ಈ ಮುಖಲಕ್ಷಣ ವಿಜಯನಗರ ಕಾಲಕ್ಕೆ ಸಾಮಾನ್ಯವಾಯಿತು.

೯ನೆಯ ಶತಮಾನದ ನಂತರ ರಾಷ್ಟ್ರಕೂಟರ ಕಾಲದ ಎಲ್ಲೋರಾ ಭಿತ್ತಿಚಿತ್ರಕಲೆಯ ಪ್ರಭಾವ ಎರಡು ದಿಕ್ಕುಗಳಲ್ಲಿ ಹಬ್ಬಿದುದನ್ನು ಕಾಣುತ್ತೇವೆ. ಪಶ್ಚಿಮ ಭಾರತದಲ್ಲಿ ಎಲ್ಲೋರಾ ಕಲಾಶೈಲಿಯ ಪ್ರಭಾವ ಓಲೆಗರಿಗಳ ಮತ್ತು ಹಸ್ತಪ್ರತಿಗಳ ಚಿತ್ರಕಲೆಯ ಮೇಲೆ ಆಗಿರುವುದು ಕಂಡುಬರುತ್ತದೆ. ಗುಜರಾತ್ ಮತ್ತು ರಾಜಸ್ಥಾನದ ಜೈನ ಗ್ರಂಥಗಳಲ್ಲಿ ಮತ್ತು ಹಸ್ತಪ್ರತಿಗಳಲ್ಲಿ ಪ್ರಭಾವವಾಗಿರುವುದು ಕಂಡುಬರುತ್ತವೆ. ವಿಂಧ್ಯಪರ್ವತದ ದಕ್ಷಿಣದಲ್ಲಿ ರಾಷ್ಟ್ರಕೂಟರ ನಂತರ ಅರಮನೆಗಳನ್ನು ದೇವಾಲಯಗಳನ್ನು ಚಿತ್ರಗಳಿಂದ ಅಲಂಕರಿಸುತ್ತಿರುವಂತೆ ಹಸ್ತಪ್ರತಿ ಗ್ರಂಥಗಳಲ್ಲಿ ಮುಂದುವರೆಯಿತು. ಹೊಯ್ಸಳರ ಹಳೆಬೀಡು ದೇವಾಲಯದಲ್ಲಿಯ ಗೊಡೆ, ಛತ್ತಿನಲ್ಲಿ ಕೆಂಪು ಬಣ್ಣದ ಗುರುತುಗಳು ಕಂಡುಬರುತ್ತಿವೆ ಎಂದಿದ್ದು, ಆದರೆ ಈಗ ಅಲ್ಲಿ ಚಿತ್ರಗಳು ಕಂಡುಬರುವುದಿಲ್ಲ. ಅದೃಷ್ಟವಶಾತ್ ಆ ಕಾಲದ ಕಲೆಯ ದೃಷ್ಟಾಂತವಾಗಿ ಜೈನ ಆಗಮ ಗ್ರಂಥಗಳು ಉಳಿದುಬಂದಿವೆ. ಇವು ಮೂಲ ಜೈನಧರ್ಮದ ಗ್ರಂಥವಾದ ಷಟ್ಖಂಡಾಗಮದ ವ್ಯಾಖ್ಯಾನಗಳಾದ ಧವಳಾ ಜಯಧವಳಾ ಮತ್ತು ಮಹಾಧವಳಾ ಗ್ರಂಥಗಳಲ್ಲಿಯ ಚಿತ್ರಗಳಲ್ಲಿ ರಾಷ್ಟ್ರಕೂಟರ ಚಿತ್ರಗಳ ಪ್ರಭಾವವನ್ನು ಕಾಣಬಹುದಾಗಿದೆ. ಜೈನಗ್ರಂಥಗಳಲ್ಲಿ ಹೀಗೆ ಚಿತ್ರಗಳು ರೂಪಿತಗೊಂಡರೆ, ವೀರಶೈವಗ್ರಂಥಗಳಲ್ಲಿ ಶಿವ, ಲಿಂಗ, ನಂದಿ, ಶಿವನ ಓಲಗ, ಗಣಪತಿ, ಸರಸ್ವತಿ, ಷಣ್ಮುಖ, ವೀರಭದ್ರ ಹೀಗೆ ಮುಂತಾದವರೊಂದಿಗೆ ಮಠದ ಉತ್ಸವ ಮೂರ್ತಿಗಳೂ ಕಾವ್ಯನಾಯಕರಾದ ಶಿವಶರಣರು ಮಹತ್ವದ ಘಟನೆಗಳ ನಿರೂಪಣೆಯೂ ಇರುತ್ತದೆ. ಫಲಕಗಳಿಂದ ಓಲೆಗರಿಗೂ ಚಿತ್ರರಚನೆ ಹರಡಿಕೊಂಡಿತು. ದಕ್ಷಿಣ ಭಾರತದ ಓಲೆಗರಿಗಳಲ್ಲಿ ಕಂಠದಿಂದ ಚಿತ್ರರಚನೆಯಾದರೆ ಉತ್ತರಭಾರತದಲ್ಲಿ ಬರವಣಿಗೆಯೂ ಚಿತ್ರಗಳೂ

ಮನೆ ಮತ್ತು ಬಣ್ಣಗಳಲ್ಲಿ ಇರುತ್ತದೆ. ಲಿಪಿಕಾರರು ಬೇರೆ, ಚಿತ್ರಕಲಾವಿದರು ಬೇರೆ ಆಗಿದ್ದು ಈ ಬಗೆಯ ಚಿತ್ರಗಳು ಶುಭಕಾರಿ, ಮಂತ್ರಶಕ್ತಿ ಉಳ್ಳವು ಎಂದಾಗಿ ಕಾಲಕ್ರಮೇಣ ತಾಂತ್ರಿಕ ಕಲೆಗೆ ಕಾರಣವಾದವು ಎಂಬುದು ಗಮನಾರ್ಹವಾದುದಾಗಿದೆ.

ಪುರಾತನ ರಗಳೆ ಗ್ರಂಥಗಳು, ಹಸ್ತಪ್ರತಿಗ್ರಂಥಗಳು, ಓಲೆಗ್ರಂಥಗಳ ಫಲಕಗಳನ್ನು ಎರಡೂಬದಿಗೆ ಬಳಸುತ್ತಿದ್ದು ಈ ಫಲಕಗಳನ್ನು ಭಿತ್ತಿಚಿತ್ರಗಳಿಂದ ಅಲಂಕರಿಸಲು ಪ್ರಾರಂಭಿಸಿದರು. ಆಯಾ ಗ್ರಂಥಗಳಿಗೆ ಸಂಬಂಧಿಸಿದ ಘಟನೆಯನ್ನೋ ವ್ಯಕ್ತಿಗಳನ್ನೋ ಆಯ್ಕೆ ಮಾಡಿಕೊಂಡು ಚಿತ್ರಿಸಲಾಗಿದೆ. ಉದಾಹರಣೆಗೆ, ಮಂಟಪವೊಂದರಲ್ಲಿ ಲಿಂಗವಿದ್ದು ಅದರ ಎಡಬಲಗಳಲ್ಲಿ ಶಿವಶರಣೆಯರು ಫಲಪುಷ್ಪಗಳನ್ನು ಹಿಡಿದುಕೊಂಡಿರುವರು. ಕೆಂಪುಹಿನ್ನೆಲೆಯಲ್ಲಿ ಹಳದಿ ಸೀರೆಯನ್ನು ಧೋತರಗಳನ್ನು ಧರಿಸಿರುವರು. ಹೀಗೆ ಗಿರಿಜಾ ಕಲ್ಯಾಣ. ಕಿರಾತಾರ್ಜುನೀಯ ಪ್ರಸಂಗ, ಸರಸ್ವತಿ ಮತ್ತು ಗಣಪತಿಯರ ಚಿತ್ರಗಳು, ಲಿಂಗ ಮತ್ತು ವೃಷಭದ ಚಿತ್ರಗಳು, ಹೀಗೆ ವೀರಶೈವ ಧರ್ಮಕ್ಕೆ ಸಂಬಂಧಿಸಿದ ಹಲವಾರು ವಿಷಯಗಳನ್ನು ಆಯ್ಕೆ ಮಾಡಿಕೊಂಡು ಚಿತ್ರಿಸಲಾಗಿದೆ. ಹೀಗೆ ಕರ್ನಾಟಕದ ಧವಳಾ ಜಯಧವಳಾ ಮಹಾಧವಳಾಗಳಲ್ಲಿ ಪ್ರಾರಂಭವಾದ ಜೈನ ಹಸ್ತಪ್ರತಿಚಿತ್ರಗಳು ಮುಂದೆ ಮಠಗಳಲ್ಲಿ, ಶಿವಶರಣರ ಮನೆಗಳಲ್ಲಿ ಮತ್ತೆ ವೀರಶೈವ ಹಸ್ತಪ್ರತಿಗಳಾಗಿ ಚಿತ್ರಕಲೆ ಎಲ್ಲೋರಾದ ಶೈವಪರಂಪರೆಯ ಕಲೆಯನ್ನು ಮುಂದುವರೆಸಲಾಗಿದೆ. ಒಂದು ಕಡೆ ಹಸ್ತಪ್ರತಿ ಗ್ರಂಥಗಳಲ್ಲಿ ಚಿತ್ರಗಳು ಬೆಳೆಯತೊಡಗಿದವು. ಇನ್ನೊಂದು ಕಡೆ ಭಿತ್ತಿಚಿತ್ರಗಳಾಗಿ ವಿಜಯನಗರ ಅರಸರ ಕಾಲದಲ್ಲಿ ಪುನರುಜ್ಜೀವನಗೊಂಡ ಶೈವ ವೈಷ್ಣವ ಚಿತ್ರ ಶಿಲ್ಪ ಮತ್ತು ವಾಸ್ತುಶಿಲ್ಪಗಳು ಪ್ರಬಲವಾಗಿಯೇ ಬೆಳೆದು ಬಂದವು. ಇದರಿಂದಾಗಿ ಜೈನಧರ್ಮ ಮತ್ತು ಆಗತಾನೆ ಮಧ್ಯಭಾರತವನ್ನು ಪ್ರವೇಶಿಸಿದ ಇಸ್ಲಾಂ ಧರ್ಮಗಳನ್ನು ವಿರೋಧಿಸುವ ಹಿನ್ನೆಲೆಯಲ್ಲಿಯೇ ಶೈವ ವೈಷ್ಣವ ಧರ್ಮಗಳು ಬೆಳೆದುಬಂದವು. ಈ ಸಂದರ್ಭದಲ್ಲಿ ರಚನೆಗೊಂಡ ಹಸ್ತಪ್ರತಿಗಳಲ್ಲಿ ಮತ್ತು ಭಿತ್ತಿ ಚಿತ್ರಗಳಲ್ಲಿ ವೀರಶೈವ ತತ್ವ ಪ್ರಧಾನವಾದ "ಉದ್ಧರಣೆಗಳು" ಪಟಲ ಮತ್ತು ವಾಚ್ಯಗಳಾಗಿ ಹಸ್ತಪ್ರತಿಗಳಲ್ಲಿ ಮೂಡಿಬಂದರೆ ವಿರೂಪಾಕ್ಷದೇವಾಲಯ ಲೇಪಾಕ್ಷಿ, ತಂಜಾವೂರುಗಳ ಭಿತ್ತಿಗಳಲ್ಲಿಯೂ ಉದ್ಧರಣಿ ಚಿತ್ರಗಳ ಪ್ರಭಾವ ಕಂಡುಬರುತ್ತದೆ.

ವಿಜಯನಗರ ಸಾಮ್ರಾಜ್ಯವು ಕ್ರಿ.ಶ.೧೩೩೬ ರಿಂದ ೧೫೬೫ ರವರೆಗೆ ತುಂಗಭದ್ರೆಯ ದಡದಿಂದ ಪೂರ್ವಪಶ್ಚಿಮ ಸಮುದ್ರಗಳವರೆಗೂ ದಕ್ಷಿಣದ ತುದಿಯವರೆಗೂ ಸಂಪೂರ್ಣ ಪ್ರಭುತ್ವವನ್ನು ಸ್ಥಾಪಿಸಿತ್ತು. ಮುಸ್ಲೀಮರ ದಾಳಿಯಿಂದ ಹಿಂದೂ ಧರ್ಮ ಮತ್ತು ಸಂಸ್ಕೃತಿಯನ್ನು ಸಂರಕ್ಷಿಸುವ ಹರಿಹರ ಹುಕ್ಕ, ಬುಕ್ಕರ ಉದ್ದೇಶ ಲಲಿತಕಲೆಗಳು ಬೀರಿದ ಪ್ರಭಾವವನ್ನು ಗಮನಿಸಿದಾಗ ಬಹಳಷ್ಟು ಮಟ್ಟಿಗೆ ಈಡೇರಿತೆಂದೇ ಹೇಳಬಾಕಾಗುತ್ತದೆ. ರಾಜಧಾನಿ ಹಂಪೆ ಅಷ್ಟೇ ಅಲ್ಲ, ಲೇಪಾಕ್ಷಿ, ತಾಡಪತ್ರಿ, ಕಾಂಚೀಪುರ, ಕಾಳಹಸ್ತಿ ತಿರುಪತಿ, ಚಿದಂಬರಂ, ತಂಜಾವೂರು, ಕುಂಭಕೋಣಂ, ಶ್ರೀರಂಗಂ ಮುಂತಾದ ಸ್ಥಳಗಳಲ್ಲಿ ಉಳಿದುಬಂದಿದೆ. ರಾಜರ ಪ್ರೋತ್ಸಾಹದಿಂದ ಲಲಿತಕಲೆಗಳು ಹೊಸ ಚೈತನ್ಯದೊಂದಿಗೆ ವಿಜೃಂಭಿಸಿ ವಿಜಯನಗರ ಕಲಾಶೈಲಿಯಾಗಿ ರೂಪುಗೊಂಡಿತು.

ವಿಜಯನಗರ ಚಿತ್ರ ಸಂಪ್ರದಾಯವನ್ನು ಎರಡು ವಿಧವಾಗಿ ಗುರುತಿಸಬೇಕು. ಒಂದು, ಕರ್ನಾಟಕ ಪರಂಪರೆಯ ಮುಂದುವರಿಕೆಯ ಶೈಲಿಯ ವಿಶಿಷ್ಟ ಬೆಳವಣಿಗೆಯ ಘಟ್ಟವನ್ನಾಗಿಯೂ ಎರಡನೆಯದು, ವಿಜಯನಗರ ಸಾಮ್ರಾಜ್ಯ ವಿಸ್ತಾರವಾದ ಕಾರಣ ತಮಿಳುನಾಡು, ಆಂಧ್ರಪ್ರದೇಶಗಳ ಪರಂಪರೆಯೂ ಕೂಡಿದ ಆ ಪ್ರದೇಶಗಳ ಕಲಾ ಶೈಲಿಯಾಗಿದೆ. ಸಿ. ಶಿವರಾಮ ಮೂರ್ತಿಯವರು "ವಿಜಯನಗರ ಶೈಲಿಯ ವಾಸ್ತು ಶಿಲ್ಪ ಮತ್ತು ಚಿತ್ರಕಲೆಯು ಚಾಲುಕ್ಯ ಮತ್ತು ಚೋಳಕಲೆಯ ವಿವಿಧ ಅಂಶಗಳನ್ನು ಒಂದುಗೂಡಿಸಿ ಸೃಷ್ಟಿಯಾಗಿದೆ. ಆದರೆ ಅಲ್ಲಿ ದ್ರಾವಿಡ ಅಂಶಗಳದೇ ಮೇಲುಗೈಯಾಗಿದೆ" ಎಂದಿದ್ದಾರೆ. ಆದರೆ ಪ್ರೊ.ಎಂ.ಎಚ್.ಕೃಷ್ಣಯ್ಯ ಅವರು ಈ ಅಭಿಪ್ರಾಯದ ಕುರಿತು "ಕರ್ನಾಟಕದ ಗಡಿಯಾಚೆಯ ನಾಡುಗಳಲ್ಲಿ ಚೋಳ ಪ್ರಭಾವ ಸರಿ ಆದರೆ ವಿಜಯನಗರ ಪರಿಸರದಲ್ಲಿ ಕನ್ನಡ ಪ್ರದೇಶದಲ್ಲಿ ಶಿಥಿಲವಾಗಿಯಾದರೂ ಚಾಲುಕ್ಯ ಸಂಪ್ರದಾಯದ ವ್ಯತ್ಯಸ್ತರೂಪವನ್ನು ಕಾಣಬಹುದು"[೫] ಎಂದಿರುವರು. ಇವರಿರ್ವರ ಅಭಿಪ್ರಾಯಗಳನ್ನು ಮುಂದಿರಿಸಿಕೊಂಡು ಕಲಾಕೃತಿಗಳನ್ನು ನೋಡಿದಾಗ "ಚಿತ್ರಕಲೆಯಲ್ಲಿ ತಂತ್ರ ಆಕಾರ, ಆ ಕೃತಿಗಳು, ಚೋಳರ ಚಿತ್ರಕಲೆಯಲ್ಲಿ ನಿರ್ದಿಷ್ಟತೆ ಕಾಣುವುದಿಲ್ಲವಾದರೂ ಚಾಲುಕ್ಯರು ರಾಷ್ಟ್ರಕೂಟರ ಮತ್ತು ಚೋಳರ ಚಿತ್ರಕಲೆಯ ತಾಂತ್ರಿಕ ಅಂಶಗಳು ಧಾರ್ಮಿಕ ಅಂಶಗಳು, ವಿಜಯನಗರ ಅರಸರ ಕರ್ತೃತ್ವ ಶಕ್ತಿಯ ಹಿಂದೂಪರ ದೃಢವಾದ ನಿಲುವುಗಳ ಹಿನ್ನೆಲೆಯಲ್ಲಿ ಕಲಾಕೃತಿಗಳ ರಚನೆಯಲ್ಲೂ ಕೆಲವು ಸಾಮ್ಯಗಳಿವೆ" ಎಂಬುದು ಸ್ಪಷ್ಟವಾಗುತ್ತದೆ.

ತ್ರಿಪುರಾಂತಕ ಕಾರ್ತಿಕೇಯನ ಸಂಯೋಜನೆಯಂತಹ ಕಲ್ಪನೆಗಳ ದೃಷ್ಟಿಯಿಂದ ವಿಜಯನಗರ ಶೈಲಿಯು ವಿಶೇಷವೆಂಬಂತಿದ್ದು ಪಲ್ಲವ, ಚೋಳರ ಕಲ್ಪನೆಗಳಿಗಿಂತ ಭಿನ್ನವಾಗಿದ್ದು ಚೋಳರ ಶಿಲ್ಪಗಳಲ್ಲಿ ವೀರರನ್ನು ತರುಣರನ್ನಾಗಿ ರಚಿಸಿದರೆ ವಿಜಯನಗರದಲ್ಲಿ ಶೌರ್ಯ, ಪರಾಕ್ರಮ, ರೋಷವನ್ನು ಮೀಸೆಯಿಂದ ಸೂಚಿಸಲಾಗಿದೆ. ಇಲ್ಲಿ ತ್ರಿಪುರಾಂತಕ ಕಾರ್ತಿಕೇಯನಿಗೆ ತುಟಿಯ ಮೇಲಿಂದ ತೀಡಿ ಮೇಲಕ್ಕೆ ಸುರುಳಿಸುತ್ತಿರುವ ಮೀಸೆ ಇದೆ. ತ್ರಿಪುರ ಸಂಕೇತಕ್ಕೆ ಎದುರಿಗೆ ಮೂರು ವೃತ್ತಗಳಲ್ಲಿ ರಾಕ್ಷಸರು, ತ್ರಿಪುರಾಂತಕರ ಹುಬ್ಬುಗಂಟು ವಿಶೇಷವಾಗಿಸಿ ಚಿತ್ರಿಸಲಾಗಿದೆ. ಲೇಪಾಕ್ಷಿಯಲ್ಲಿನ ಭಿತ್ತಿಚಿತ್ರಗಳು ಗಮನಾರ್ಹವಾದವು. ವಿಜಯನಗರ ಶೈಲಿಯ ಈ ಚಿತ್ರಗಳನ್ನು ವಿರೂಪಣ್ಣ ಮತ್ತು ವೀರಣ್ಣ ವೀರಭದ್ರದೇವಾಲಯ ಕಟ್ಟಿಸಿದ್ದು, ಇಲ್ಲಿ ಶಿವ, ವಿಷ್ಣು, ವೀರಭದ್ರ ಗುಡಿಗಳಿವೆ. ತ್ರಿಕೋನಾಕಾರದಲ್ಲಿ ನಡುವಿನ ಮಂಟಪ ಮೂರಕ್ಕೂ ಸಾಮಾನ್ಯ ಅದರ ಮುಚ್ಚಿಗೆಯಲ್ಲಿ ಬಹುದೊಡ್ಡ ಆಕಾರದ ವೀರಭದ್ರನ ಚಿತ್ರವಿದೆ. ಭಕ್ತರಾದ ವಿರೂಪಣ್ಣ ವೀರಣ್ಣರನ್ನು ಚಿತ್ರಿಸಿದೆ. ಅರ್ಧಮಂಟಪದಲ್ಲಿ ಶಿವನನ್ನು ಅನೇಕ ರೂಪಗಳಲ್ಲಿ ಚಿತ್ರಿಸಲಾಗಿದೆ. ಈ ಲೇಪಾಕ್ಷಿ ಚಿತ್ರಗಳ ಶೈಲಿಯ ಬಗ್ಗೆ ಬ್ಯಾರೆಟ್ ಮತ್ತು ಗ್ರೇ ಹೀಗೆ ಹೇಳಿದ್ದಾರೆ– ದಕ್ಷಿಣ ಭಾರತದ ಚಿತ್ರಕಲೆಯ ಅಭಿಜಾತ ಶೈಲಿಯ ನೈಸರ್ಗಿಕತೆ ಇಲ್ಲಿಗೇ ಕೊನೆಯಾಯಿತು. ಬಣ್ಣ ಮತ್ತು ಉಡುಪು ವಸ್ತ್ರಾಭರಣಗಳ ರಚನಾಕ್ರಮ ವಿನ್ಯಾಸ ಒಟ್ಟು ರೂಪದ ಉದ್ದೇಶದಿಂದಲೇ ಕೂಡಿದ್ದಾಗಿದೆ. ರೇಖೆಯ ಚಿತ್ರಣದ ರೀತಿ ತುಂಬಾ ಆಕೃತಿಗಳ ಬಾಹ್ಯ ಆಕಾರವನ್ನು ಅನುಸರಿಸಿದೆಯಾದ ಕಾರಣ ಅದರಿಂದ ಆಕೃತಿಗಳಿಗೆ

---

೫. ಪ್ರೊ.ಎಂ.ಎಚ್.ಕೃಷ್ಣಯ್ಯ : ಶೃಂಗಾರ ಲಹರಿ: ಪುಟ ೬೭

ಒಂದು ಪ್ರಮಾಣಬದ್ಧತೆ ಹಾಗೂ ಘನತೆ ಒದಗಿದೆ. ಎರಡು ಆಯಾಮಗಳ ಶೋಭಾಯಮಾನ ಮೈವಳಿಕೆಗೆ ಕೊಂಚವೂ ಭಂಗವಾಗದಂತೆ ಕುಂಚದ ಮೃದುವಾದ ಶೀಘ್ರಗತಿಯ ಎಳೆತಗಳಿಂದ ಚಿತ್ರಿಸಿದ್ದಾನೆ ಎಂದಿರುವರು.

ಆದರೆ ವಿಜಯನಗರ ಕಲಾಶೈಲಿಯು ವಿವಿಧ ಭಾಗಗಳಲ್ಲಿ ಸ್ಥಳೀಯ ಪ್ರಭಾವಗಳ ಕಾರಣ ಶೈಲಿಯಲ್ಲಿ ಒಂದೇ ವಸ್ತುವಿನ ರಚನೆಯಲ್ಲೂ ಸಹ ಭಿನ್ನತೆಯನ್ನು ವ್ಯತ್ಯಾಸಗಳನ್ನು ಕಾಣಬಹುದಾಗಿದೆ. ಇದಕ್ಕೆ ಕಾರಣ ವಿಜಯನಗರ ಸಾಮ್ರಾಜ್ಯವು ದಕ್ಷಿಣಭಾರತದಾದ್ಯಂತ ವಿಸ್ತಾರವಾಗಿರುವುದರಿಂದ ಹೀಗೆ ಭಿನ್ನತೆ ಸ್ವಾಭಾವಿಕವಾಗಿದೆ. ಈ ವಿಜಯನಗರ ಚಿತ್ರರಚನೆಯ ರೂಪ (Form) ಹಾಗೂ ತಂತ್ರ (Technique)ದ ಪ್ರಭಾವದಿಂದಾಗಿ ದಖ್ಖನ್ ಕಿರುರೂಪಚಿತ್ರಗಳು ಜನಪ್ರಿಯವಾದವು. ಧಾರ್ಮಿಕವಾಗಿ (ಹಿಂದೂ ಮುಸ್ಲಿಂ) ವಿರೋಧಿಗಳಾದರೂ ಸಾಂಸ್ಕೃತಿಕವಾಗಿರುವ ಚಿತ್ರಗಳು ಒಂದಾಗಿ ವಿಶಿಷ್ಟ ಶೈಲಿಯೊಂದಿಗೆ ದಖ್ಖನ್ ಕಲೆ ಉದಯವಾಗಿ ವಿಜಯನಗರೋತ್ತರ ಕಲೆಯಾಗಿ ಬೆಳೆದುಬಂದಿತು. ಕರ್ನಾಟಕದಾದ್ಯಂತ ವಿವಿಧ ಭಾಗದಲ್ಲಿ ರಚನೆಗೊಂಡ ಭಿತ್ತಿ ಚಿತ್ರಗಳಲ್ಲಿ ಈ ದಖ್ಖನ್‌ದ ಪ್ರಭಾವ ಕಂಡು ಬರುತ್ತದೆ.

ಉತ್ತರ ಕರ್ನಾಟಕದಲ್ಲಿರುವ ವೀರಶೈವ ಭಿತ್ತಿ ಚಿತ್ರಗಳಲ್ಲಿ ವಿಜಯನಗರ ಮತ್ತು ದಖ್ಖನ್ ಕಲೆಯ ಪ್ರಭಾವವಿರುವ ಬಿ.ಕೆ.ಹಳ್ಳಿ, ಮಹಾಲಿಂಗಪುರ, ನಿಪ್ಪಾಣಿ, ನರಗುಂದ, ಅಮ್ಮಿನಭಾವಿ, ಸುರಪುರ ಭಿತ್ತಿ ಚಿತ್ರಗಳಲ್ಲಿ ವೀರಶೈವ ಪುರಾಣಗಳನ್ನು ಆಧಾರವಾಗಿಟ್ಟುಕೊಂಡು ಚಿತ್ರಗಳನ್ನು ರಚಿಸಲಾಗಿದೆ. ಅಹಮದ್‌ನಗರ, ಬಿಜಾಪುರ, ಗೊಲ್ಕಂಡಗಳಲ್ಲಿ ಈ ದಖ್ಖನ್ ಶೈಲಿ ರೂಪುಗೊಂಡಿತು. ವಿಜಯನಗರ ಕಲಾವಿದರೇ ಈ ಕಲೆಯನ್ನು ಬೆಳೆಸಿರುವುದರಿಂದ ಇವುಗಳಲ್ಲಿ ಸ್ತ್ರೀಯರ ಉಡುಪುಗಳು ಉತ್ತರ ಸಂಪ್ರದಾಯವನ್ನು, ಕೇಶಾಲಂಕಾರ ತಲೆಯ ಹಿಂದುಗಡೆ ಬನ್ ಆಕಾರದಲ್ಲಿ ದುಂಡಾಗಿ ತುರುಬವನ್ನು ಕಟ್ಟಿಕೊಂಡಿರುವುದು ವಿಜಯನಗರದ ಸಂಪ್ರದಾಯವನ್ನು ಮಿಶ್ರಣಮಾಡಿಕೊಂಡಿರುವರು. ಮೈಸೂರಿನ ಚಿತ್ರಕಲೆಯೂ ವಿಜಯನಗರ ಕಲೆಯ ಮುಂದುವರೆದ ಭಾಗವಾಗಿ ಬೆಳೆದು ಬಂದಿದೆ. ಟಿಪ್ಪುವಿನ ಅನಂತರ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಲಲಿತಕಲೆಗಳಿಗೆ ಪ್ರೋತ್ಸಾಹ ನೀಡಿದರು. ವಿಜಯನಗರ ಪತನಾನಂತರ ಕೆಲವು ಕಲಾವಿದರು ನಿರಾಶ್ರಿತರಾಗಿ ವಿಜಾಪುರಕ್ಕೂ ಇನ್ನೂ ಕೆಲವು ಕಲಾವಿದರು ಮೈಸೂರಿನತ್ತ ಹೋಗಿರುವುದರಿಂದಾಗಿ ಮೈಸೂರು ಕಲೆಯಲ್ಲಿ ವಿಜಯನಗರದ ಪ್ರಭಾವ ಪ್ರೇರಣೆಗಳಿರುವುದು ಕಂಡುಬರುತ್ತದೆ. ಅಂತೆಯೇ ತಂಜಾವೂರು ಕಲೆಯಲ್ಲೂ ವಿಜಯನಗರದ ಅಂಶಗಳನ್ನು ಕಾಣುತ್ತೇವೆ ಈ ಮೈಸೂರು ಸಂಪ್ರದಾಯದ ಭಿತ್ತಿ ಚಿತ್ರಗಳು – ಚಾಮರಾಜನಗರ, ಹಿರಿಯೂರು, ಮುಡುಕುತೊರೆ, ಸಿಬಿ, ಸಿರಾ, ಹಿಂದಿನ ಹಳ್ಳಿಗಳಲ್ಲಿ ವೀರಶೈವ ಪುರಾಣಗಳನ್ನು ಆಧಾರವಾಗಿಟ್ಟುಕೊಂಡು ರಚಿಸಿದ ಭಿತ್ತಿ ಚಿತ್ರಗಳನ್ನು ಕಾಣುತ್ತೇವೆ.

ತಂಜಾವೂರು ಶೈಲಿಯಲ್ಲಿ ಕಂಡುಬರುವ ವಿವಿಧ ವರ್ಣಗಳ ಗಾಜುಗಳನ್ನು ಮುತ್ತುಗಳನ್ನು ಚಿತ್ರದ ಅಲಂಕಾರಕ್ಕೆ ಬಳಸುತ್ತಿದ್ದ ಪದ್ಧತಿ ಮೈಸೂರು ಶೈಲಿಯಲ್ಲಿ ಕಾಣಬರುವುದಿಲ್ಲ. ಆಭರಣಗಳು ಉಡುಪುಗಳು

ಸಮಕಾಲೀನ ಮೈಸೂರು ರಾಜಮನೆತನದಾಗಿವೆ. ಸಿಂಹಾಸನಗಳು ವಿಜಯನಗರ ಪ್ರಸಿದ್ಧ ಸಿಂಹಾಸನದ ನಕಲು ಅನುಕರಣೆಯಾಗಿದೆ. ಮೈಸೂರು ಶೈಲಿಯ ಚಿತ್ರಗಳಲ್ಲಿ ವೀರಶೈವ ಪುರಾಣಗಳನ್ನು ಆಗಮಗಳನ್ನು ಆಧಾರವಾಗಿಟ್ಟುಕೊಂಡು ರಚಿಸಲ್ಪಟ್ಟ ಚಿತ್ರಗಳಲ್ಲಿ ದೇವತೆಗಳ ಹಾಗೂ ಸಾಮಾನ್ಯ ಜನರ ಮುಖಗಳು ಅಂಡಾಕಾರವಾಗಿರುವವು. ಶುದ್ಧ ವರ್ಣಗಳ ಬಗ್ಗೆ ಒಲವು ಶೈಲೀಕೃತ ರೂಪಣದ ವಿಧಾನವನ್ನು ಅನುಸರಿಸಿದೆ. ಮುಖ್ಯ ದೇವತೆಗಳನ್ನು ಇತರ ದೇವತೆಗಳಿಗಿಂತ ದೊಡ್ಡದಾಗಿ ಚಿತ್ರಿಸಿದ್ದು ಆಕೃತಿಗಳೆಲ್ಲ ಸಾಮಾನ್ಯವಾಗಿ ಮೈತುಂಬಿಕೊಂಡು ದುಂಡುದುಂಡಾಗಿ ಚಿತ್ರಣಗೊಂಡಿವೆ.

ಇಪ್ಪತ್ತನೆಯ ಶತಮಾನದಲ್ಲಿ ಚಿತ್ರಕಲಾ ಕ್ಷೇತ್ರದಲ್ಲಿ ಆದ ಬದಲಾವಣೆಗಳನ್ನು ಚಳುವಳಿಗಳನ್ನು ಗುರುತಿಸುವುದಕ್ಕೆ ಮೊದಲು ಈ ವರೆಗೆ ಕಲಾಕ್ಷೇತ್ರದಲ್ಲಿ ಆದ ಸ್ಥಿತಿ ಗತಿಗಳನ್ನು ಗಮನಿಸುವುದು ಔಚಿತ್ಯಪೂರ್ಣವಾಗಿದೆ. ಭಿತ್ತಿ ಚಿತ್ರಗಳಲ್ಲಿ ಹಸ್ತ ಪ್ರತಿಗಳಲ್ಲಿ ಚಿತ್ರಗಳು ರಚನೆಗೊಳ್ಳತೊಡಗಿದವು. ದೇವಾಲಯ, ಅರಮನೆ, ವಾಡೆ, ಶ್ರೀಮಂತರ ಮನೆಗಳಲ್ಲಿ ರಚನೆಗೊಳ್ಳುತ್ತಿದ್ದ ಭಿತ್ತಿ ಚಿತ್ರಗಳು ಮಠಮಂದಿರಗಳಿಗೆ ಹಸ್ತಾಂತರಗೊಂಡವು. ಈ ವೀರಶೈವ ಭಿತ್ತಿಚಿತ್ರಗಳು ರಚನೆಗೊಳ್ಳಲು ಮಠಗಳಲ್ಲಿಯ ಗುರುಗಳು ಕಲಾವಿದರಿಗೆ ಆಶ್ರಯದಾತರಾದರು. ಇದರಿಂದಾಗಿ ಭಿತ್ತಿಚಿತ್ರಗಳಲ್ಲಿ ಹಸ್ತಪ್ರತಿ ಚಿತ್ರಗಳಲ್ಲಿ ಕಲಾವದಿರು ಕೆಲಸಮಾಡಲು ಪ್ರಾರಂಭಿಸಿದರು. ಇದರಿಂದಾಗಿ ವೃಷಭೇಂದ್ರ ವಿಳಾಸ, ಶ್ರೀ ತತ್ವನಿಧಿ, ಉದ್ಧರಣಿ ಘಟಲಗಳಂತಹ ಹಸ್ತಪ್ರತಿಗಳಲ್ಲಿ ಚಿತ್ರವೇ ಪ್ರಧಾನವಾಗಿದ್ದು ವಾಚ್ಯವು ಸಹಾಯಕವಾಗಿಬರುವ ಗ್ರಂಥಗಳನ್ನು ಆಧಾರವಾಗಿಟ್ಟುಕೊಂಡು ಹಸ್ತಪ್ರತಿಗಳು ರಚನೆಗೊಳ್ಳತೊಡಗಿದವು. ವೀರಶೈವ ಮಠಗಳು ಈ ಪರಂಪರೆಯನ್ನು ಮುಂದುವರೆಸಿ ಬಸವ ಪುರಾಣ, ಚೆನ್ನಬಸವ ಪುರಾಣ, ಸಕೀಲಗಳು, ಉದ್ಧರಣಿ ಚಿತ್ರಗಳ ಮರು ರಚನೆಗಳು, ಶಿವಶರಣರ ಚಿತ್ರಗಳು, ಶರಣರ ಪವಾಡಗಳು ಭಿತ್ತಿ ಚಿತ್ರಗಳಲ್ಲಿ ಮತ್ತು ಹಸ್ತಪ್ರತಿ ಚಿತ್ರಗಳಲ್ಲಿ ರಚನೆಗೊಳ್ಳತೊಡಗಿದವು. ಇದರಿಂದಾಗಿ ಪ್ರತಿಭಾವಂತ ಕಲಾವಿದರಿಗೆ, ಮತ್ತು ವಂಶಪರಂಪರೆಯ ಕಲಾವಿದರಿಗೆ ಬೇಡಿಕೆಯೂ ಇತ್ತು. ಆದರೆ ಕಲಾವಿದನನ್ನು ಇತಿಹಾಸಕ್ಕೆ ಪರಿಚಯಿಸುವ ಅಥವಾ ದಾಖಲಿಸುವ ಪ್ರಯತ್ನ ಆಶ್ರಯದಾತರಾದ ಅರಸರಾಗಲಿ ಮಠಾಧೀಶರಾಗಲಿ ಮಾಡಲಿಲ್ಲ. ಸ್ವತಃ ಕಲಾವಿದನೂ ಈ ಕುರಿತು ಯೋಚಿಸಲೂ ಇಲ್ಲ. ಆದಿಮಾನವನ ಕಾಲದಿಂದ ಮಾನವನೊಂದಿಗೆ ಬೆಳೆದು ಬಂದ ಈ ಕಲೆ ಕಲಾಕೃತಿಗಳು ರಚನೆಗೊಂಡು ಬಂದಿದ್ದರೂ ಅವುಗಳ ರಚನೆಮಾಡಿದ ಕಲಾವಿದನ ಹೆಸರು ಪರಿಚಯವಿಲ್ಲದೇ ಬೆಳೆದು ಬರುತ್ತಿರುವುದನ್ನು ಕಂಡ ಬ್ರಿಟೀಷರು ದಾಖಲಿಸುವ ಪರಂಪರೆಯನ್ನು ತಿಳಿಸಿದರು. ಡಾ.ಸ್ಟೆಲ್ಲಾ ಕ್ರಾಮ್‌ರಿಶ್, ಡಗ್ಲಾಸ್ ಬ್ಯಾರೆಟ್ ಮತ್ತು ಬೇಸಿಲ್ ಗ್ರೇ, ಇ.ಬಿ. ಹ್ಯಾವೆಲ್ ಆದಿಯಾಗಿ ಆಂಗ್ಲ ವಿದ್ವಾಂಸರು ನಮ್ಮ ಕಲಾಪರಂಪರೆಯ ಮಹತ್ವ ದಾಖಲಿಸುವಿಕೆ ಸಂರಕ್ಷಣೆಯ ಕುರಿತು ಅರುಹಿದರು. ಈ ವರೆಗೂ ನಮ್ಮ ಇತಿಹಾಸದಲ್ಲಿ ಚಿತ್ರಕಲಾಕೃತಿಗಳು, ಶಿಲ್ಪಗಳು ಮುಖ್ಯವಾಗಿದ್ದವೇ ಹೊರತು ಅವುಗಳನ್ನು ರಚಿಸಿದ ಕಲಾವಿದನ ಪರಿಚಯ, ಹೆಸರುಗಳು ಮುಖ್ಯವಾಗಿರಲಿಲ್ಲ. ಅಪವಾದವೆನ್ನುವಂತೆ ಅಲ್ಲೊಂದು ಇಲ್ಲೊಂದು ಕಲಾಕೃತಿಗಳ ಮೇಲೆ ಹೆಸರುಗಳಿರಬೇಕಷ್ಟೇ. ಕಳೆದ ಶತಮಾನದಿಂದ ಕಲಾವಿದನನ್ನು ಸಂಯೋಜನೆಯ ವಿನ್ಯಾಸಕಾರ, ನಿಸರ್ಗ ಚಿತ್ರರಚನಾಕಾರ, ರೇಖಾಚಿತ್ರಕಾರ,

ವರ್ಣಚಿತ್ರಕಾರ, ನಕ್ಷಾಚಿತ್ರಕಾರ, ಭಾವ ಚಿತ್ರಕಾರ, ಹೀಗೆ ಬೇರೆ ಬೇರೆ ಪರಿಣಿತರನ್ನು ಹಾಗೂ ಕಲಾವಿದನ ಪ್ರತಿಭೆ, ವೈಶಿಷ್ಟ್ಯ ಅಭಿವ್ಯಕ್ತಿ ಎಂಬ ವಿಚಾರಗಳು ಕಳೆದ ಶತಮಾನದಲ್ಲಿ ಪ್ರಾರಂಭವಾದವು. ವ್ಯಕ್ತಿಯಿಂದ ಕಲೆಯನ್ನು ಗುರುತಿಸುವ ಹೊಸ ವಿಚಾರ ತಲೆ ಹಾಕಿತು. ಹೀಗೆ ಕಳೆದ ಶತಮಾನದಲ್ಲಿ ವೈ. ಸುಂದರಯ್ಯ, ಶಿಕಾರಿಪುರ ತಿಪ್ಪಾಜಯ್ಯ, ನಗುವನಹಳ್ಳಿ ನಾರಾಯಣಪ್ಪ ಮುಂತಾದವರು ರಾಜಾಶ್ರಯದಲ್ಲಿ ಬೆಳಗಿದರು. ಪೌರಾಣಿಕ, ರಾಜಕೀಯ, ಸಾಮಾಜಿಕ, ಚಿತ್ರಗಳನ್ನು ಭಿತ್ತಿಯಲ್ಲಿ ಮತ್ತು ಹಸ್ತಪ್ರತಿಗಳಲ್ಲಿ ರಚಿಸಿದರು. ಇವರಲ್ಲದೆ ಇನ್ನೂ ಹಲವಾರು ಕಲಾವಿದರು ದುಡಿದಿದ್ದುದು ತಿಳಿದುಬರುತ್ತದೆ.

ಬ್ರಿಟೀಷರಿಂದ ಬ್ರಿಟೀಷ ನಿರೂಪಣಾ ಕಲಾ ಶಾಲೆಗಳು ಮದ್ರಾಸ್ (ಚೆನ್ನೈ), ಕಲ್ಕತ್ತಾ, ಮುಂಬೈ, ಲಾಹೋರ್‌ಗಳಲ್ಲಿ ಪ್ರಾರಂಭವಾದವು. ಕಲಾಶಿಕ್ಷಣವು ವಿದೇಶಿ ಪಠ್ಯಕ್ರಮದೊಂದಿಗೆ ಪ್ರಾರಂಭವಾಗಿದ್ದರಿಂದ ಕಲಾಶಿಕ್ಷಕರನ್ನು ಮತ್ತು ಬ್ರಿಟೀಷರ ಬೇಡಿಕೆಯನ್ನು ಪೂರೈಸುವ ವಾಣಿಜ್ಯ ಚಿತ್ರಗಳನ್ನು ತಯಾರಿಸುವ ಕೆಲಸಗಾರರಾಗಿ ಮಾತ್ರ ನಮ್ಮನ್ನು ಬಳಸಿಕೊಂಡರು. ಮುದ್ರಣ ಸೌಲಭ್ಯವು ಇಂತಹ ಕಲೆಗೆ ಪೋಷಕವಾಗಿತ್ತು. ನಮ್ಮವರನ್ನು ಕಲಾವಿದರನ್ನಾಗಿ ಮಾಡುವ ಉದ್ದೇಶವೂ ಅವರದಾಗಿರಲಿಲ್ಲ. ಇಂತಹ ಹಿನ್ನೆಲೆಯಲ್ಲಿ ಅರಮನೆಯಿಂದ ಸಾಮಾನ್ಯರ ಮನೆವರೆಗೆ ಚಿತ್ರಪಟಗಳು ಮುಟ್ಟಲು ಕಾರಣನಾದ ವ್ಯಕ್ತಿ ರಾಜಾ ರವಿವರ್ಮ, ಸಾಮಾನ್ಯರಲ್ಲೂ ಕಲೆಯ ಕುರಿತು ಕಲಾವಿದರ ಜನಪ್ರಿಯತೆಯ ಕುರಿತು ತಿಳಿಸಿದನಲ್ಲದೇ ಕಲಾಭಿರುಚಿ ಮೂಡಲು ಕಾರಣಕರ್ತನಾದನು.[೬] ಭಾರತೀಯ ಕಲಾವಿದರು ಪರಿಚಯಿಸಿಕೊಳ್ಳುವ, ಗುರುತಿಸಿಕೊಳ್ಳುವಂತೆ ಪ್ರೇರಕನೂ ಆದ ರಾಜಾ ರವಿವರ್ಮ ಆಸ್ಥಾನದ ಕಲಾವಿದನಾಗಿ ಕಲೆಯಲ್ಲಿಯೂ ರಾಜನಾಗಿಯೇ ಬೆಳೆದ. ಬ್ರಿಟೀಷ್ ಕಲಾತಂತ್ರಗಳನ್ನು ಕರಗತಮಾಡಿಕೊಂಡ ಪಾರ್ಸಿ, ಮರಾಠಿ ನಾಟಕಗಳಿಂದ ಪ್ರಭಾವಿತನಾಗಿ ಪೌರಾಣಿಕಶಾಸ್ತ್ರ ಜ್ಞಾನವನ್ನು ಹೊಂದಿದ್ದ ಇವನು ತನ್ನ ಕಲಾಕೃತಿಗಳಲ್ಲಿ ಪೌರಾಣಿಕ ವಸ್ತು ವಿಷಯಗಳನ್ನು ಆರಿಸಿಕೊಂಡು ಪಾಶ್ಚಾತ್ಯ ತಂತ್ರಗಳೊಂದಿಗೆ ನಾಟಕೀಯ ದೃಶ್ಯದಂತೆ ಇಡೀ ಕಥೆಯ ಸಾರವನ್ನು ಹಿಡಿದಿಟ್ಟಿರುವ ಆತನ ಚಿತ್ರಗಳು ಜನಪ್ರಿಯವಾದವು.

ಇವನು ರಚಿಸಿದ ಶಿವ, ಪಾರ್ವತಿ, ಗಣೇಶ, ವೃಷಭ, ನಂದಿ, ಸರಸ್ವತಿ, ಲಕ್ಷ್ಮಿ ಹೀಗೆ ದೇವಾಧಿದೇವತೆಗಳ ಚಿತ್ರಗಳು ಜನಸಾಮಾನ್ಯರ ಮನೆಗಳಲ್ಲಿ ಪೂಜಿಸಲ್ಪಟ್ಟವು. ಈಗಲೂ ದೇವತೆಗಳಿಗೆ ಒಂದು ರೂಪವನ್ನು ನೀಡಿದವನೇ ರಾಜಾರವಿವರ್ಮ ಭಾರತೀಯ ದೇವತೆಗಳನ್ನು ದಷ್ಟ ಪುಷ್ಟವಾಗಿ, ದುಂಡುತನದಲ್ಲಿ, ಪ್ರಮಾಣಬದ್ಧವಾಗಿ, ಆಕರ್ಷಕ ವರ್ಣಗಳೊಂದಿಗೆ, ವರ್ಣಗಳ ಸಮತೋಲನ, ಸಾಮರಸ್ಯಗಳು, ತೈಲವರ್ಣದಿಂದ ರಚನೆಗೊಂಡ ಈ ಚಿತ್ರಗಳು ಜನಸಾಮಾನ್ಯರಿಗೂ ಆಕರ್ಷಕವಾದವು. ಹೀಗಾಗಿ ರವಿವರ್ಮನು ಭಾರತೀಯ ಆಧುನಿಕ ಕಲಾವಿದ ಎನಿಸಿಕೊಂಡನು. ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಅವನ ಮೂಲಕಲಾಕೃತಿಗಳನ್ನು ನೋಡಬಹುದಾಗಿದೆ.

೬. ಬಿ.ಎಂ.ಪಾಟೀಲ : ಹಾಲಭಾವಿ ಸ್ಕೂಲ ಆಫ್ ಆರ್ಟ ಧಾರವಾಡ. ಒಂದು ಐತಿಹಾಸಿಕ ಅಧ್ಯಯನ : ಎಂ.ಎ.ಎ. ಕಿರುಪ್ರಬಂಧ : ಪುಟ.

ಮುಂಬೈಯ ಜೆ.ಜೆ. ಕಲಾಶಾಲೆಯಲ್ಲಿ ಪಾಶ್ಚಾತ್ಯ ಪಠ್ಯಕ್ರಮದೊಂದಿಗೆ ಬ್ರಿಟೀಷ್ ಕಲಾವಿದರು ಕಲಾಶಿಕ್ಷಣವನ್ನು ನೀಡುತ್ತಿದ್ದು ಅಲ್ಲಿ ಬಹುತೇಕ ಕರ್ನಾಟಕದ ಅಂದಿನ ಎಲ್ಲ ಜನ ಈ ಕಲಾಶಾಲೆಯಿಂದ ಕಲಾಶಿಕ್ಷಣವನ್ನು ಪಡೆದಿದ್ದು, ದಕ್ಷಿಣ ಕರ್ನಾಟಕದ ಕೆಲವೇ ಜನ ಮದ್ರಾಸ್ ಕಲಾಶಾಲೆಯಲ್ಲಿಯೂ, ಕೆ.ವೆಂಕಟಪ್ಪ, ಶಂಕರಗೌಡ ಬೆಟದೂರ ಅವರು ಕಲಕತ್ತಾದ ಕಲಾಶಾಲೆಯಲ್ಲಿ ಅಧ್ಯಯನ ಮಾಡಲು ಹೋದರು. ಮುಂಬೈ ಕಲಾಶಾಲೆಯಿಂದ ಪಾಶ್ಚಾತ್ಯ ತಂತ್ರಗಳನ್ನು ಪ್ರಮುಖವಾಗಿಟ್ಟುಕೊಂಡು ಅಧ್ಯಯನಮಾಡುತ್ತಿರುವುದು ಹಾಗೂ ಬೆಂಗಾಲಿ ಕಲಾವಿದರು ಪಾಶ್ಚಾತ್ಯ ಸಂಸ್ಕೃತಿಯನ್ನು ಕಲಾಶಿಕ್ಷಣವನ್ನು ತೀವ್ರವಾಗಿ ವಿರೋಧಿಸಿದರು. ಸ್ವಾತಂತ್ರ್ಯ ಹೋರಾಟದ ಆ ಸಂದರ್ಭದಲ್ಲಿ ಕಲಾವಿದರೂ ಸ್ವದೇಶೀಯ ಕಲೆಯನ್ನು ಬೆಂಬಲಿಸುವ ಹಿನ್ನೆಲೆಯಲ್ಲಿ ಭಾರತೀಯ ಸಂಪ್ರದಾಯ ವಸ್ತು ವಿಷಯ ಆಕಾರ ವರ್ಣಗಾರಿಕೆಯತ್ತ ಒಲವು ತೋರಿದರು. ಅಂದಿನ ಸಂದರ್ಭದಲ್ಲಿ ಜೆ.ಜೆ.ಕಲಾಶಾಲೆ ಮತ್ತು ಬೇರೆಡೆ ಕಲಾಶಿಕ್ಷಣ ಹೊಂದಿದ ಬಹಳಷ್ಟು ಕಲಾವಿದರು ಹೊರಬರುತ್ತಿದ್ದಂತೆಯೇ ಕಲ್ಕತ್ತಾದಲ್ಲಿ ಇ.ಬಿ.ಹ್ಯಾವೆಲ್ ಮತ್ತು ಡಾ. ಆನಂದ ಕುಮಾರಸ್ವಾಮಿ ಅವರ ಮಾರ್ಗದರ್ಶನದಲ್ಲಿ ಅವನೀಂದ್ರನಾಥ ಠಾಗೋರ್ ಅವರ ನೇತೃತ್ವದಲ್ಲಿ ಬೆಂಗಾಲಿ ಯುವ ಕಲಾವಿದರಾದ ನಂದಲಾಲ್ ಭೋಸ್, ಮುಜುಮ್ದಾರ್, ಹಾಲ್ದಾರ್, ಸುರೇಂದ್ರನಾಥ ಟಾಗೋರ್, ಗಗನೇಂದ್ರನಾಥ ಟಾಗೋರ್, ಕೆ. ವೆಂಕಟಪ್ಪ ಮುಂತಾದ ಯುವ ಕಲಾವಿದರ ತಂಡವು ಪ್ರಬಲವಾಗಿಯೇ ಭಾರತೀಯ ಕಲಾಕೃತಿಗಳ ಅಧ್ಯಯನ ಮಾಡಿ ಅಜಂತಾದ ಭಿತ್ತಿ ಚಿತ್ರಗಳು ರಜಪೂತ ಕಿರುರೂಪ ಚಿತ್ರಗಳ ಅಧ್ಯಯನದಲ್ಲಿ ತೊಡಗಿದರೆ ಜ್ಯಾಮಿನಿರಾಯ್‌ರಂಥಹ ಕಲಾವಿದ ಬೆಂಗಾಲಿ ಫಟ್ ಚಿತ್ರಗಳನ್ನೇ ಪ್ರಮುಖವಾಗಿಟ್ಟು ಅಧ್ಯಯನ ಮಾಡುತ್ತ ಕಲಾಕೃತಿಗಳನ್ನು ರಚಿಸುತ್ತ ಜಾನಪದ ಕಲಾವಿದನಾಗಿ ಪ್ರಸಿದ್ಧಿ ಪಡೆದನು. ಈ ಬೆಂಗಾಲಿ ಕಲಾವಿದರು ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಕೊಂಡರು ಮತ್ತು ರವಿವರ್ಮ ಪಾಶ್ಚಾತ್ಯ ತಂತ್ರಗಳಿಂದ ರಚಿಸಿದ ದೇವನುದೇವತೆಗಳನ್ನು ಭಾರತೀಯ ಕಲಾ ತತ್ವಗಳೊಂದಿಗೆ ಸ್ಥಳೀಯ ತಂತ್ರ ವರ್ಣಗಾರಿಕೆಯೊಂದಿಗೆ ಭಾರತೀಯ ದೇವಾನುದೇವತೆಗಳನ್ನು ಪುನರುಜ್ಜೀವನಗೊಳಿಸಿದರು. ಇ.ಬಿ.ಹ್ಯಾವೆಲ್ ಪಾಶ್ಚಾತ್ಯನಾಗಿದ್ದರೂ ಡಾ.ಆನಂದ ಕುಮಾರಸ್ವಾಮಿ ಅವರೊಂದಿಗೆ ಸೇರಿಕೊಂಡು ಭಾರತೀಯರ ಕಣ್ಣನ್ನು ತೆರೆಯಿಸಿದರು. ಭಾರತೀಯ ಕಲೆ ಅಂದರೇನು, ಅದರ ತತ್ವ ಸಿದ್ಧಾಂತಗಳ ಕುರಿತು ತಿಳಿಸಿದರು. ದಿನಾಲೂ ಈ ಕುರಿತು ಡಾ.ರವೀಂದ್ರನಾಥ ಠಾಗೋರ್, ಇ.ಬಿ.ಹ್ಯಾವೆಲ್, ಡಾ.ಆನಂದಕುಮಾರಸ್ವಾಮಿ ಅವರು ಭಾರತೀಯ ವಸ್ತುವಿಷಯ ಆಕಾರ ಆಕೃತಿ, ವಿನ್ಯಾಸ, ಜೋಡಣೆ, ಹೊಂದಾಣಿಕೆ, ವರ್ಣಗಾರಿಕೆಯ ಕುರಿತು ಚರ್ಚೆಗಳು ನಡೆಯುತ್ತಿದ್ದವು. ಇದರಲ್ಲಿ ಭಾರತೀಯರಲ್ಲದೇ ವಿದೇಶಿ ಕಲಾವಿದರೂ ಭಾಗವಹಿಸುತ್ತಿದ್ದರು.[೭] ಹೀಗೆ ಗಂಭೀರವಾಗಿ ಹಾಗೂ ಪ್ರಬಲವಾದ ಈ ಚಳುವಳಿಯಿಂದಾಗಿ ಜೆ.ಜೆ. ಕಲಾಶಾಲೆಯ ವಿದ್ಯಾರ್ಥಿಗಳೂ ಭಾರತೀಯ ಸ್ವಾತಂತ್ರ್ಯ ಹೋರಾಟದತ್ತ ಮತ್ತು ಭಾರತೀಯತೆಯ ಕುರಿತು ಕಣ್ಣು ತೆಗೆದರು. ಇವರು ಅಜಂತಾದ ಭಿತ್ತಿ ಚಿತ್ರ

---

೭. ಬಿ.ಎಂ.ಪಾಟೀಲ : ಹಾಲಭಾವಿ ಸ್ಕೂಲ ಆಫ್ ಆರ್ಟ ಧಾರವಾಡ. ಒಂದು ಐತಿಹಾಸಿಕ ಅಧ್ಯಯನ : ಎಂ.ಎ.ಎ. ಕಿರು ಪ್ರಬಂಧ : ಪುಟ

ಕಿರುರೂಪ ಚಿತ್ರಗಳು ಬದಾಮಿ ವಿಜಯನಗರ ಭಿತ್ತಿಚಿತ್ರಗಳ ಅಧ್ಯಯನ ಮಾಡತೊಡಗಿದರು. ಆದರೆ, "ಪಾಶ್ಚಾತ್ಯ ತಂತ್ರಗಳು ಭಾರತೀಯ ವಿಷಯ ವಸ್ತುಗಳನ್ನು ಇಟ್ಟುಕೊಂಡು ಮುಂಬೈಯ ಜೆ.ಜೆ.ಕಲಾಶಾಲೆ ವಿದ್ಯಾರ್ಥಿಗಳು ಕಲಾಕೃತಿಗಳನ್ನು ರಚಿಸಲು ಪ್ರಾರಂಭಿಸಿದರು ಪ್ರತಿಯಾಗಿ ಭಾರತೀಯ ವಸ್ತುವಿಷಯ ಷಡಂಗಗಳನ್ನು ಇಟ್ಟುಕೊಂಡು ಕಲಾ ಕೃತಿಗಳನ್ನು ಬೆಂಗಾಲಿ ಕಲಾವಿದರು ಶಾಂತಿನಿಕೇತನ ಕಲಾಶಾಲೆಯಲ್ಲಿ ರಚಿಸತೊಡಗಿದರು. ಇದು "ಭಾರತೀಯ ಕಲೆಯ ಪುನರುಜ್ಜೀವನಕ್ಕೆ ನಾಂದಿಯಾಯಿತು". ಸ್ವಾತಂತ್ರ್ಯ ಹೋರಾಟದ ಆ ಸಂದರ್ಭದಲ್ಲಿ ಶಾಂತಿನಿಕೇತನದ ಬೆಂಗಾಲಿ ಕಲಾವಿದರು ಹಾಗೂ ಮುಂಬೈಯ ಜೆ.ಜೆ. ಕಲಾಶಾಲೆಯ ಕಲಾವಿದರು ತಮ್ಮದೇ ಆದ ಸಿದ್ಧಾಂತಗಳೊಂದಿಗೆ ಭಾರತೀಯ ಹೋರಾಟಕ್ಕೆ ಚಾಲನೆಯನ್ನು ನೀಡಿದರು. ಈ ಪ್ರಮುಖ ಕಲಾಶಾಲೆಗಳಿಂದ ಹೊರಬಂದ ವಿದ್ಯಾರ್ಥಿಗಳು ಎಂ.ಎ.ಚೆಟ್ಟಿ, ಡಾ.ಎಂ.ವಿ.ಮಿಣಜಗಿ, ಡಿ.ಜಿ.ಬಡಿಗೇರ, ಜಿ.ಎಸ್.ದಂಡಾವತಿಮಠ, ಡಿ.ವ್ಹಿ. ಹಾಲಭಾವಿ, ಸಿ.ವ್ಹಿ.ಕಾರಡಗಿ ಈ ಕಲಾವಿದರು ವೀರಶೈವ ಪುರಾಣವಾದ ಚೆನ್ನಬಸವ ಪುರಾಣಕ್ಕೆ ಚೆನ್ನಬಸವಣ್ಣನ ಪುಷ್ಪಕೋತ್ಸವ, ಪ್ರಸಾದ ಸೇವಿಸುವ ನಾಗಲಾಂಬಿಕೆ, ಜಲಂಧರನ ನಾಮಕರಣ, ಕಾಮದಹನ, ಸಿದ್ಧರಾಮೇಶ್ವರನಿಗೆ ಲಿಂಗದೀಕ್ಷೆ, ವೀರಭದ್ರಾವತಾರ, ಭಿಕ್ಷಾಟನಾ ಲೀಲೆ, ಗಿರಿಜಾ ಕಲ್ಯಾಣ, ಅರ್ಜುನನಿಗೆ ಪಾಶುಪತಾಸ್ತ್ರ ದಾನ, ಷಟ್‌ಚಕ್ರವಿವರ, ಅಂಧಕಾಸುರನ ಓಲಗ ಹೀಗೆ ಕ್ರಮವಾಗಿ ಕಲಾಕೃತಿಗಳನ್ನು ಪಾಶ್ಚಾತ್ಯ ತಂತ್ರಗಳು ಭಾರತೀಯ ವಿಷಯ ವಸ್ತು, ಸನ್ನಿವೇಶಗಳನ್ನು ಇಟ್ಟುಕೊಂಡು ಸುಂದರವಾಗಿ ಚಿತ್ರಿಸಿರುವರು. ಇದಲ್ಲದೇ ಇವರು ಇನ್ನೂ ಹಲವಾರು ವೀರಶೈವ ಧರ್ಮಕ್ಕೆ ಸಂಬಂಧಿಸಿದಂತೆ ಕಲಾಕೃತಿಗಳನ್ನು ರಚಿಸಿ ಕೊಟ್ಟಿರುವರು. ಇವರಲ್ಲಿ ಅತ್ಯಂತ ಹೆಚ್ಚು ವೀರಶೈವ ಪುರಾಣಗಳಿಗೆ ಸಂಬಂಧಿಸಿದ ಚಿತ್ರಗಳು, ಮಠಾಧೀಶರ ಪವಾಡಗಳಿಗೆ ಸಂಬಂಧಿಸಿದ ಚಿತ್ರಗಳು, ಮಠಾಧೀಶರ ಭಾವಚಿತ್ರ, ಪೂರ್ಣ ಚಿತ್ರಗಳನ್ನು ರಚಿಸುವುದರೊಂದಿಗೆ, ವೀರಶೈವ ಕಲಾವಿದನಾಗಿಯೇ ಬೆಳೆದು ಬಂದ ಶ್ರೀ ಎಂ.ಎ.ಚೆಟ್ಟಿ ಅವರು ಧಾರವಾಡದ ಮುರುಘಾಮಠ, ಹುಬ್ಬಳ್ಳಿಯ ಮೂರುಸಾವಿರಮಠ, ಅಥಣಿಯ ಗಚ್ಚಿನಮಠ, ಗದಗದ ತೋಂಟದಾರ್ಯಮಠ, ಹೀಗೆ ಸಾವಿರಾರು ವೀರಶೈವ ಕಲಾಕೃತಿಗಳು ನಾಡಿನಾದ್ಯಂತ ಮಠಮಾನ್ಯಗಳಲ್ಲಿ ಕಂಡುಬರುತ್ತವೆ. ವಿರೂಪಾಕ್ಷ ಕೃತ ಚೆನ್ನಬಸವ ಪುರಾಣ, ಗುಲಬರ್ಗಾದ ಪ್ರತಿಗೆ ಡಾ.ಮಲ್ಲಿಕಾರ್ಜುನ ಬಾಗೋಡಿ ತಮ್ಮ ಸುರಪುರ ಶೈಲಿಯ ಚಿತ್ರಕಲೆಯಲ್ಲಿ ಹೇಳಿದಂತೆ ಮೊದಲ ಬಾನಯ್ಯನು ಕಿರುರೂಪ ಚಿತ್ರಗಳಲ್ಲಿ ಈ ಪುರಾಣದ ಸನ್ನಿವೇಶಗಳನ್ನು ಆರಿಸಿಕೊಂಡು ಸುಮಾರು ಹನ್ನೊಂದು ಕಲಾಕೃತಿಗಳನ್ನು ರಚಿಸಿರುವನು. ಹೀಗೆ "ಬಸವ ಪುರಾಣಕ್ಕೂ" ಕಲಾಕೃತಿಗಳನ್ನು ಚಿತ್ರಿಸಿದ್ದು, ಆಯಾ ಪ್ರಾಂತಗಳಲ್ಲಿ ಸ್ಥಳೀಯ ಪ್ರಭಾವದೊಂದಿಗೆ ಕಲಾಕೃತಿಗಳು ರಚನೆಗೊಂಡಿವೆ. ಮೈಸೂರಿನತ್ತ ವೈ. ಸುಬ್ರಹ್ಮಣ್ಯ ರಾಜು ವೈ.ನಾಗರಾಜು, ಎಸ್. ಆರ್. ಅಯ್ಯಂಗಾರ್, ಅವರು ಮೈಸೂರು ಶೈಲಿಯಲ್ಲಿ ಧಾರ್ಮಿಕ ಚಿತ್ರಗಳನ್ನು ರಚಿಸುತ್ತಿದ್ದರು. ಇವರೆಲ್ಲ ಅಕಾಡೆಮಿಕ್ ಪದ್ಧತಿಯಲ್ಲಿ ಶಿಕ್ಷಣವನ್ನು ಪಡೆದುಕೊಂಡು ಬಂದು ಆ ಹಿನ್ನೆಲೆಯಲ್ಲಿಯೇ ಕಲಾಕೃತಿಗಳನ್ನು ರಚಿಸುತ್ತಿದ್ದರು. ಇನ್ನೊಂದು ಗುಂಪು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿಕೊಂಡಿದ್ದ ಕೆ.ಕೆ.ಹೆಬ್ಬಾರ್, ಶಂಕರರಾವ್ ಆಳಂದಕರ್, ಎ.ಎ. ಅಲ್ಮೇಲಕರ್, ಕಮಡೊಳ್ಳಿ

[illegible]

ಹೀಗೆ ಮುಂಬೈಯಿಂದ ಶಿಕ್ಷಣ ಪಡೆದು ಕಲಾಕೃತಿಗಳನ್ನು ರಚಿಸುತ್ತಿರುವ ಹಲವಾರು ಜನ ಕಲಾವಿದರಿರುವರಾದರೂ ಧಾರ್ಮಿಕವಾಗಿ ಕಲಾಕೃತಿಗಳಿಗೆ ಅಂಟಿಕೊಂಡವರಲ್ಲ. ಇವರಲ್ಲಿ ಎಸ್.ಎಂ.ಪಂಡಿತ ಅವರು ಪೌರಾಣಿಕ ಚಿತ್ರಗಳನ್ನು ರಚಿಸುತ್ತಿದ್ದರು.

ಭಾರತದಲ್ಲಿ ಕಲೆಯ ಪುನರುಜ್ಜೀವನಕ್ಕೆ ನಾಂದಿಹಾಕಿದ ಬೆಂಗಾಲಿ ಕಲಾ ಶಾಲೆಯಲ್ಲಿಯೂ ಸ್ವಾತಂತ್ರ್ಯಾನಂತರದಲ್ಲಿ ಹೋರಾಟದ ಕೆಚ್ಚು ಕಡಿಮೆಯಾಗುತ್ತ ಸಾಗಿತು. ಸ್ವಾತಂತ್ರ್ಯೋತ್ತರದ ಕರ್ನಾಟಕದಲ್ಲಿ ಧಾರ್ಮಿಕ ಪ್ರಭಾವ ಪ್ರೇರಣೆಯೊಂದಿಗೆ ಕಲಾಕೃತಿ ರಚಿಸುವವರ ಸಂಖ್ಯೆ ಕ್ಷೀಣಿಸತೊಡಗಿತು. ಮುಂಬೈಯಿಂದ ಕಲಾಶಿಕ್ಷಣ ಪಡೆದು ಬಂದವರ ಸಂಖ್ಯೆ ಬೆಳೆಯುತ್ತ ಸಾಗಿತು. ಅಲ್ಲಿಯ ಪಾಶ್ಚಾತ್ಯ ಸಂಸ್ಕೃತಿಯ ತಂತ್ರಗಳಿಗೆ ಮಾರುಹೋದ ನಮ್ಮ ಕಲಾವಿದರು ರಾಜ್ಯದಲ್ಲಿ ಡಿ.ವಿ.ಹಾಲಭಾವಿ, ಎಂ.ವಿ. ಮಿಣಜಗಿ ಅವರಾದಿಯಾಗಿ ಪಾಶ್ಚಾತ್ಯರ ಪಠ್ಯಕ್ರಮವನ್ನು ಇಲ್ಲಿಯೂ ಕಲಾಶಾಲೆಗಳಲ್ಲಿ ಅಳವಡಿಸಿಕೊಂಡರು. ಒಂದು ಹಂತದಲ್ಲಿ ೧೯೫೫ ರವರೆಗೂ ಮುಂಬೈ ಕಲಾಶಿಕ್ಷಣ ಕೇಂದ್ರವಾಗಿ ರೂಪುಗೊಂಡಿತು. ಕರ್ನಾಟಕದಾದ್ಯಂತ ಇರುವ ಬಹುತೇಕ ಕಲಾವಿದರಿಗೆ ಪರೀಕ್ಷೆಯ ಕೇಂದ್ರವಾಗಿ ಡಿ.ವಿ.ಹಾಲಭಾವಿಯವರ ಕಲಾಶಾಲೆ ಕಾರ್ಯ ಮಾಡುತ್ತಿತ್ತು. ಇದರಿಂದಾಗಿ ಪಾಶ್ಚಾತ್ಯ ಸಂಸ್ಕೃತಿಗೆ ಹೆಚ್ಚಿನ ಮಹತ್ವ ನೀಡಲಾಯಿತು. ಅತ್ತ ಮೈಸೂರು ಭಾಗದಲ್ಲಿ ಕೆ.ವೆಂಕಟಪ್ಪ ಮತ್ತು ರಾಯಚೂರಿನ ಶಂಕರಗೌಡ ಬೆಟದೂರ ಅವರು ಶಾಂತಿನಿಕೇತನ ಕಲ್ಕತ್ತಾದ ಬೆಂಗಾಲಿ ಕಲಾವಿದರೊಂದಿಗೆ ಭಾರತೀಯತೆಯ ಕುರಿತು ಹೋರಾಟ ಮಾಡಿ ಕಲಾ ಶಿಕ್ಷಣ ಪಡೆದು ಬಂದರೂ ಸಾಮಾಜಿಕವಾಗಿ ಏನನ್ನೂ ಮಾಡಲಿಲ್ಲ. ಇದರಿಂದಾಗಿ ಮುಂಬೈಯಲ್ಲಿ ಕಲಾ ಶಿಕ್ಷಣ ಪಡೆದ ಕಲಾವಿದರ ಸಂಖ್ಯೆ ಕಲಾಕೃತಿಗಳು ಪಾಶ್ಚಾತೀಕರಣಗೊಂಡವು. ಭಾರತೀಯತೆ ಭಾರತೀಯ ಸಂಸ್ಕೃತಿಯನ್ನು ಸಾರುವ ಕಲಾಕೃತಿಗಳ ರಚನೆಯು ಗೌಣವಾಗುತ್ತ ಸಾಗಿತು. ರಾಜ್ಯದಲ್ಲಿ ಮುಂಬೈ ಕಲಾಶಾಲೆಯ ಪಠ್ಯಕ್ರಮದೊಂದಿಗೆ ರಾಜ್ಯದಾದ್ಯಂತ ಕಲಾಶಾಲೆಗಳು ಪ್ರಾರಂಭವಾದವು. ಈ ವರೆಗೂ ಅದಕ್ಕನುಗುಣವಾದ ಪಠ್ಯಕ್ರಮವೇ ಇರುವುದೂ ಒಂದು ಪ್ರಮುಖ ಕಾರಣವಾಗಿದೆ. ಕಲಾಶಿಕ್ಷಣವನ್ನು ಯಾವ ಪದ್ಧತಿಯಲ್ಲಿ ಪಡೆಯುತ್ತೇವೆಯೋ ಕಲಾಕೃತಿಗಳೂ ಹಾಗೇ ರಚನೆಗೊಳ್ಳುವುದು ಸ್ವಾಭಾವಿಕವಾಗಿದೆ. ಹೀಗಾಗಿ ಇಂದಿನ ದಿನಗಳಲ್ಲಿ ಭಾರತೀಯ ಕಲಾ ಪದ್ಧತಿ, ಷಡಂಗಗಳು, ವರ್ಣಗಾರಿಕೆ ವಸ್ತು ವಿಷಯಗಳೆಲ್ಲಾ ಗೌಣವಾಗುತ್ತ ಸಾಗುತ್ತಿವೆ. ಇತ್ತೀಚಿನ ಚಿತ್ರಗಳಲ್ಲಂತೂ ವಿಷಯವೂ ಇಲ್ಲ. ಆಕೃತಿಗಳೂ ಇಲ್ಲ. ವಸ್ತುಗಳೂ ಇಲ್ಲದ, ಆಕಾರರಹಿತ, ರೇಖಾರಹಿತ, ಸಂಕೇತಪ್ರಧಾನ ಚಿತ್ರಗಳು ರಚನೆ ಆಗುತ್ತಿದ್ದು, ಸಂಸ್ಕೃತಿ ಧರ್ಮ, ಭಾರತೀಯತೆ ಅನ್ನುವ ಪದಗಳನ್ನು ಹುಡುಕುವ ಕಾಲ ಬಂದಿದೆ ಎನ್ನುವ ಸ್ಥಿತಿಯಲ್ಲಿ ನಾವಿದ್ದೇವೆ. ನಮ್ಮ ಸಂಸ್ಕೃತಿಯನ್ನು ಕಲೆಯಲ್ಲಿ ಹುಡುಕಲು ಹೊರಟರೆ ಪರಂಪರಾನುಗತ, ಸಾಂಪ್ರದಾಯಿಕವಾಗಿ ಬಂದಿರುವ ಮನೆತನಗಳಲ್ಲಿ ತಲೆಮಾರಿನಿಂದ ರಚಿಸಿಕೊಂಡು ಬಂದ ಮನೆತನಗಳಲ್ಲಿ ಮಾತ್ರ ಅಲ್ಪ ಸ್ವಲ್ಪ ಉಳಿದಿದೆ. ಜೊತೆಗೆ ಬೆರಳೆಣಿಕೆಯಷ್ಟು ಜನ ಕಲಾವಿದರು ಇಂತಹ ಕಲಾಕೃತಿಗಳಲ್ಲಿ ತೊಡಗಿಸಿಕೊಂಡಿರುವರು. ಅವರಲ್ಲಿ ಪ್ರಮುಖರಾದವರು ಗುಲಬುರ್ಗಾದ ವಿಜಯ್ ಹಾಗರಗುಂಡಗಿ ಸುರಪುರ ಚಿತ್ರಕಲೆಯನ್ನು

ಪ್ರಮುಖವಾಗಿಟ್ಟುಕೊಂಡು ಧಾರ್ಮಿಕ ಚಿತ್ರಗಳನ್ನು ರಚಿಸುತ್ತಿರುವರು. ಧಾರವಾಡದ ಎಫ್.ವಿ.ಚಿಕ್ಕಮಠ ಅಮ್ಮಿನಭಾವಿಯ ಭಿತ್ತಿ ಚಿತ್ರಗಳನ್ನು ಪ್ರಮುಖವಾಗಿಟ್ಟುಕೊಂಡು ಚಿತ್ರಿಸುತ್ತಿರುವರು. ಹಾಗೆಯೇ ಮೈಸೂರಿನ ರಘುಪತಿ ಭಟ್ಟರು ಮತ್ತು ಬೆಂಗಳೂರಿನ ಸುಭಾಷಿಣಿದೇವಿ ಅವರು ಗಂಜೀಫಾ ಚಿತ್ರಗಳನ್ನು ಪ್ರಮುಖವಾಗಿಟ್ಟುಕೊಂಡು ಕಲಾಕೃತಿಗಳನ್ನು ರಚಿಸುತ್ತಿರುವರು. ಬೆಂಗಳೂರಿನಲ್ಲಿರುವ ಬೀದರಿನ ಮನೋಹರ ಕಮ್ಮಾರ ಅವರು ವಿಜಯನಗರ ಭಿತ್ತಿ ಚಿತ್ರಗಳನ್ನು ಪ್ರಮುಖವಾಗಿಟ್ಟುಕೊಂಡು ಕಲಾಕೃತಿಗಳನ್ನು ರಚಿಸುತ್ತಿರುವರು. ಇವರಲ್ಲದೇ ಇನ್ನೂ ಕೆಲವು ಜನ ಕಲಾವಿದರಿರುವರಷ್ಟೇ ಅವರನ್ನು ಹೊರತು ಪಡಿಸಿದರೆ ಧಾರ್ಮಿಕವಾಗಿ ಭಾರತೀಯ ಕಲೆ ಕಲಾಕೃತಿಗಳು, ಸಂಸ್ಕೃತಿ ಅನ್ನುವ ಪದಗಳನ್ನು ಅಕ್ಷರದಲ್ಲಿ ಕಾಣಬೇಕಾಗುತ್ತದೆ. ಇಲ್ಲವೇ ಅಜಂತಾ, ಎಲ್ಲೋರಾ, ಬಾದಾಮಿ, ಐಹೊಳೆ, ಪಟ್ಟದಕಲ್ಲು, ಬೇಲೂರು, ಹಳೆಬೀಡುಗಳಂತಹ ಪ್ರವಾಸಿ ಸ್ಥಳಗಳಲ್ಲಿಯ ಭಿತ್ತಿ ಚಿತ್ರಗಳನ್ನು ಶಿಲ್ಪ, ವಾಸ್ತುಶಿಲ್ಪಗಳನ್ನು ನೋಡಲು ಕಳಿಸಬೇಕಷ್ಟೆ. ಈ ಕುರಿತು ನಮ್ಮ ಕಲಾತಜ್ಞರು ಗಂಭೀರವಾಗಿ ಆಲೋಚಿಸಬೇಕಾಗಿದೆ.

ಕರ್ನಾಟಕದಲ್ಲಿ ಆಧುನಿಕ ಕಲೆಯು ನೆಲೆಯೂರಿದ್ದು ಬಹುಮುಖ ಪ್ರಭಾವಗಳ ಬದುಕಿನ ಸಂದರ್ಭದಲ್ಲಿ ಪರಂಪರೆ, ಸಂಪ್ರದಾಯ ಎಂಬ ಮಾತು ಅರ್ಥಹೀನವಾಗುತ್ತಿದೆ. ಸಾಮೂಹಿಕ, ಸಾಮಾಜಿಕ, ಅನುಭವಗಳಿಗೆ ಆಧುನಿಕ ಕಲಾವಿದ ಅಭಿವ್ಯಕ್ತಿ ನೀಡುತ್ತಾನೆ ಎಂಬುದು ನಿಜ. ಆದರೆ ಅದು ವ್ಯಕ್ತಿ ವೈಶಿಷ್ಟ್ಯವನ್ನು ತಳೆಯುತ್ತದೆ. ಬದುಕು ಸಂಕೀರ್ಣವಾದಾಗ ಕಲೆಯೂ ಸಂಕೀರ್ಣ ಅನುಭವಗಳ, ಆಂತರಿಕ ತುಡಿತಗಳ ಅನ್ವೇಷಣೆ ಆಗುತ್ತದೆ, ಅಭಿವ್ಯಕ್ತಿಗೆ ಸೂಕ್ತ ಸರಳ, ಸಂಕೇತ ಪ್ರತಿಮೆಗಳ ಅನ್ವೇಷಣೆಯಾಗುತ್ತದೆ. "ಯುರೋಪಿನಲ್ಲಿ ಒಂದೇ ಬಗೆಯ ವಿಚಾರ ದೃಷ್ಟಿಯುಳ್ಳ ಕಲಾವಿದರಿಂದ ಚಳುವಳಿಗಳು ನಡೆದವು. ನಮ್ಮಲ್ಲಿ ಅಂತಹ ಸಂಘಟನೆಯಾಗಲೀ ಚಳುವಳಿಗಳಾಗಲಿ, ಮನೋಧರ್ಮದ ಸಾಮರಸ್ಯವಾಗಲಿ ಕಲಾಕ್ಷೇತ್ರದಲ್ಲಿ ಇಲ್ಲ. ಹಲವು ಕಲಾವಿದರು ಕಾಲಗತಿಯನ್ನು ಮೀರಿ, ಒಂದು ಪರಂಪರೆಯನ್ನು ಬೆಳೆಸುವ ಕಾಲ ಕಳೆದ ಶತಮಾನಕ್ಕೇ ಕೊನೆಗೊಂಡಿತು. ಇಂದು ಕಲೆ ಎನ್ನುವುದು ಭೌಗೋಲಿಕವಾಗಿ ಸಾಂಸ್ಕೃತಿಕ ಹೆಗ್ಗುರುತನ್ನು ಕಳೆದುಕೊಂಡಿದೆ. ಕ್ಷಣ ಕ್ಷಣಕ್ಕೆ ಬದಲಾಗುತ್ತಿರುವ ಬದುಕಿನಂತೆ ಕಲೆಯೂ ಬದಲಾಗುತ್ತಿದೆ. ಹೀಗಾಗಿ ಇಂದು ಕಲೆಯಲ್ಲಿ ವ್ಯಕ್ತಿ ಮುಂದಾಗಿ ಪರಂಪರೆ ಹಿಂದೆ ಉಳಿದಿದೆ.[೮] ಎನ್ನುವ ಪ್ರೊ.ಎಂ.ಎಚ್ ಕೃಷ್ಣಯ್ಯ ಅವರ ಅಭಿಪ್ರಾಯ ಸೂಕ್ತವೂ ಸಂದರ್ಭೋಚಿತವೂ ಆಗಿದೆ.

ವಿಜಯ್ ಹಾಗರಗುಂಡಗಿ ಅವರು ಇಂಥಹ ಸಂದರ್ಭದಲ್ಲೂ ಸಾಂಪ್ರದಾಯಿಕ ಕಲೆಯಲ್ಲಿ ಒಲವು ಮೂಡಲು ಸಂಗೀತವು ಪ್ರೇರಣಾ ಶಕ್ತಿಯಾಗಿದೆ ಎನ್ನುತ್ತ, ಇವರು ರಚಿಸಿದ ಹಸ್ತಪ್ರತಿ ಚಿತ್ರಗಳಲ್ಲಿ ಹಾಗೂ ಕ್ಯಾನ್ವಾಸ್ ಮೇಲಿನ ಚಿತ್ರಗಳಲ್ಲಿ ವೀರಶೈವ ಪರಂಪರೆಯ ಪೌರಾಣಿಕ ವಸ್ತು ವಿಷಯಗಳನ್ನು ಆಧರಿಸಿದ ಚಿತ್ರಗಳಲ್ಲಿ "ಗಿರಿಜಾ ಕಲ್ಯಾಣ, ಶಿವನ ಪರಿವಾರ, ವಿಷ್ಣುವಿಗೆ ಚಕ್ರದಾನ ಮಾಡುತ್ತಿರುವ ಶಿವ, ತ್ರಿಪುರಾಂತಕ ಶಿವ, ಹೀಗೆ ಹಲವಾರು ಚಿತ್ರಗಳು ವೀರಶೈವ ಧರ್ಮಕ್ಕೆ ಸಂಬಂಧಿಸಿದಂತೆ ರಚಿಸಿರುವರು. ಇದಲ್ಲದೇ ಇತ್ತೀಚೆಗೆ


೮. ಪ್ರೊ.ಎಂ.ಎಚ್. ಕೃಷ್ಣಯ್ಯ : ಶೃಂಗಾರ ಲಹರಿ : ಪುಟ ೭೮.

ಅತ್ಯಂತ ವಿಶೇಷವಾಗಿ ಭಿತ್ತಿ ಚಿತ್ರಗಳನ್ನು ಮಣಿಪಾಲದ ಶೆಣೈ ಅವರ ಕಲಾಗ್ರಾಮದಲ್ಲಿಯ ಮಠವೊಂದರಲ್ಲಿ ರಚಿಸಲಾಗಿದ್ದು, ವೀರಶೈವ ತತ್ವಗಳನ್ನು ಪ್ರತಿಪಾದಿಸುವ ಉದ್ಧರಣೆಗಳನ್ನು ತನ್ನದೇ ಆದ ಸುರಪುರ ಶೈಲಿಯ ಆಕೃತಿಗಳೊಂದಿಗೆ ಭಿತ್ತಿಚಿತ್ರಗಳಾಗಿ ರೂಪಿಸಿದ್ದು ಪರಂಪರೆಯ ವಿಶಿಷ್ಟತೆಯನ್ನು ಮರೆದಿದ್ದಾರೆ.

ಹೀಗೆ ಕರ್ನಾಟಕದ ವೀರಶೈವ ಚಿತ್ರಕಲೆಯ ಪ್ರಮುಖ ಲಕ್ಷಣಗಳು ಧಾರ್ಮಿಕವಾಗಿ, ರಾಜಕೀಯವಾಗಿ, ಐತಿಹಾಸಿಕವಾಗಿ, ಬೆಳೆದು ಬಂದ ಕಲಾಕೃತಿಯಲ್ಲಿ ವೀರಶೈವ ಪರಂಪರೆಯ ಚಿತ್ರಗಳಲ್ಲಿ ಆದ ಪ್ರಭಾವ ಪ್ರೇರಣಿ ಶೈಲಿ ತಂತ್ರಗಾರಿಕೆಗಳ ಕುರಿತು ವಿಶ್ಲೇಷಿಸಲಾಗಿದೆ.

ಅಧ್ಯಾಯ : ಏಳು

# ಕರ್ನಾಟಕದ ವೀರಶೈವ ಚಿತ್ರಕಲೆಯ ಸದ್ಯದ ಸ್ಥಿತಿಗತಿ ಹಾಗೂ ಸಂರಕ್ಷಣೋಪಾಯಗಳು



# ಕರ್ನಾಟಕದ ವೀರಶೈವ ಚಿತ್ರಕಲೆಯ ಸದ್ಯದ ಸ್ಥಿತಿಗಳು ಹಾಗೂ ಸಂರಕ್ಷಣೋಪಾಯಗಳು

ಪ್ರಕೃತಿಯಲ್ಲಿರುವ ಯಾವ ವಸ್ತುಗಳೂ ಶಾಶ್ವತವಲ್ಲ. ಅವು ಒಂದಲ್ಲಾ ಒಂದು ದಿನ ನಾಶಹೊಂದಲೇಬೇಕು. ಇದರಿಂದಾಗಿ ಪ್ರಸ್ತುತ ಭಿತ್ತಿಚಿತ್ರಗಳು, ಹಸ್ತಪ್ರತಿಗಳೂ ಸಂಕೀರ್ಣ ಚಿತ್ರಗಳೂ ಹೊರತಾಗಿಲ್ಲ. ಆದರೆ ಸೂಕ್ತವಾದ ಕ್ರಮಗಳನ್ನು ಅನುಸರಿಸುವುದರಿಂದ ಆದಷ್ಟು ಹೆಚ್ಚು ದಿನ ಈ ಕಲಾಸಂಪತ್ತನ್ನು ಉಳಿಸಿಕೊಳ್ಳಬಹುದಾಗಿದೆ.

ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿರುವ ಭಿತ್ತಿ ಚಿತ್ರಗಳು ಹಸ್ತಪ್ರತಿ ಚಿತ್ರಗಳು ಅವನತಿಯತ್ತ ಸಾಗುತ್ತಿದ್ದು ಒಂದು ದಿನ ಕಣ್ಮರೆಯಾಗುವುದು ಸ್ವಾಭಾವಿಕವಾದರೂ ಇದನ್ನು ತಪ್ಪಿಸಲು ಆಗದೇ ಇದ್ದರೂ ಕೂಡಾ ನಮ್ಮ ನಾಡಿನ ಸಾಂಸ್ಕೃತಿಕ ಆಸ್ತಿಯಾಗಿರುವ ಇಂತಹ ಚಿತ್ರಗಳನ್ನು ಮುಂದಿನ ಜನಾಂಗಕ್ಕೆ ಉಳಿಸಿಕೊಡುವುದು ನಮ್ಮೆಲ್ಲರ ಕರ್ತವ್ಯವೂ ಆಗಿದೆ. ಕೇಂದ್ರ ಹಾಗೂ ರಾಜ್ಯ ಸರಕಾರವೂ ಇವುಗಳ ಸಂರಕ್ಷಣೆಗಾಗಿ ವ್ಯವಸ್ಥೆ ಮಾಡಿದೆ. ಈ ಕಲಾಕೃತಿಗಳಿಗೆ ಆಪತ್ತುಗಳು ಬಂದಿರುವ ಕುರಿತು ಆ ಇಲಾಖೆಯ ಗಮನಕ್ಕೆ ತರುವುದು ನಮ್ಮೆಲ್ಲರ ಜವಾಬ್ದಾರಿಯಾಗಿದ್ದು ಸಂರಕ್ಷಣೆ ಮಾಡುವುದು ಇಲಾಖೆಯ ಕರ್ತವ್ಯವಾಗಿದೆ.

ವಿದ್ವಾಂಸರಾದ ಡಾ.ಶಿವರಾಮ ಕಾರಂತರು, ಸಿ.ಶಿವರಾಮಮೂರ್ತಿ, ಡಾ.ಅ.ಲ.ನರಸಿಂಹನ್, ಡಾ.ಯಾದಪ್ಪ ಪರದೇಶಿ ಅವರು "ಹಸ್ತಪ್ರತಿ ಮತ್ತು ಭಿತ್ತಿ ಚಿತ್ರಗಳ ಸಂರಕ್ಷಣೆಯ ಉಪಾಯ"ಗಳನ್ನು ಕುರಿತು ಅಧ್ಯಯನ ಮಾಡಿದ್ದು ಅವುಗಳನ್ನು ಗಮನಕ್ಕೆ ತಂದುಕೊಂಡು ಇಲ್ಲಿ ಅಧ್ಯಯನ ಮಾಡಲಾಗಿದೆ.

**I. ಭಿತ್ತಿ ಚಿತ್ರಗಳಿಗೆ ಒದಗಿರುವ ಆಪತ್ತುಗಳು**[೧]

೧. ಸ್ವಾಭಾವಿಕ ಆಪತ್ತುಗಳು        ೨) ಪ್ರಾಕೃತಿಕ ಆಪತ್ತುಗಳು

೩. ವ್ಯಕ್ತಿಗತ ಆಪತ್ತುಗಳು        ೪) ಕ್ರಿಮಿಕೀಟಗಳಿಂದಾಗುವ ಆಪತ್ತುಗಳು

**೧. ಸ್ವಾಭಾವಿಕ ಆಪತ್ತುಗಳು :**

ಕಾಲಕ್ರಮೇಣ ಭಿತ್ತಿಚಿತ್ರಗಳಿಗೆ ಉಪಯೋಗಿಸಲಾದ ವಸ್ತುಗಳ ಸತ್ವ ಕಡಿಮೆಯಾಗಿ ಭಿತ್ತಿ ಚಿತ್ರಗಳು ಹಾಳಾಗುವುದನ್ನು ಸ್ವಾಭಾವಿಕ ಆಪತ್ತುಗಳು ಎಂದು ಪರಿಗಣಿಸಲಾಗಿದೆ. ಈ ಭಿತ್ತಿ ಚಿತ್ರಗಳಿಗೆ ಬಳಸಿದ ವರ್ಣವು ಕಾಲಾಂತರದಲ್ಲಿ ನಶಿಸುತ್ತಾ ಬಂದಿರುವುದಾಗಲಿ ಉದುರಿ ಹೋಗುವುದು ಸಹಜಕ್ರಿಯೆಯಾಗಿದೆ ಹಾಗೂ ಎಲ್ಲಾ ಪ್ರಾಚೀನ ಭಿತ್ತಿ ಚಿತ್ರಗಳಲ್ಲಿಯೂ ಈ ಅಂಶಗಳನ್ನು ಕಾಣಬಹುದಾಗಿದೆ.

---

೧. ಡಾ.ಯಾದಪ್ಪ ಪರದೇಶಿ : ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ–ಒಂದು ಅಧ್ಯಯನ : ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ: ಕನ್ನಡ ವಿ.ವಿ. ಹಂಪಿ: ಪುಟ ೪೯೧

**೨. ಪ್ರಾಕೃತಿಕ ಆಪತ್ತುಗಳು :**

ಪ್ರಕೃತಿಯಲ್ಲಿಯ ನೀರು, ಬೆಂಕಿ, ಗಾಳಿಗಳಿಂದಲೂ ಭಿತ್ತಿ ಚಿತ್ರಗಳು ಹಾಳಾಗುತ್ತವೆ. ಅಂದರೆ ಭಿತ್ತಿ ಚಿತ್ರಗಳ ಮೇಲೆ ನೇರವಾಗಿ ಮತ್ತು ಸತತವಾಗಿ ನೀರಾಗಲಿ, ಗಾಳಿಯಾಗಲಿ ಬೀಳುತ್ತಿದ್ದರೆ ಭಿತ್ತಿಯು ಶಿಥಿಲಗೊಳ್ಳುವುದು, ವರ್ಣಗಳು ಮಾಸುವವು. ಇದರಿಂದಾಗಿ ಭಿತ್ತಿ ಚಿತ್ರಗಳು ಆಪತ್ತಿಗೆ ಸಿಕ್ಕುತ್ತವೆ. ಮಳೆಗಾಲದಲ್ಲಿ ಮೇಲ್ಛಾವಣಿ ಹಾಳಾಗಿ ನೀರು ಸೋರುತ್ತಿದ್ದರೆ ಗೋಡೆಯ ಬಿರುಕಿನಿಂದಾಗಿ ನೀರು ಜಿನುಗುತ್ತಿದ್ದರೆ ಭಿತ್ತಿ ಚಿತ್ರಗಳು ನೆನೆಯುತ್ತವೆ. ಗಾಳಿಯಿಂದಲೂ ಅಷ್ಟೇ ನೇರವಾಗಿ ಭಿತ್ತಿಗೆ ಗಾಳಿ ತಾಗುವಂತಿದ್ದರೆ ಗಾಳಿಯಲ್ಲಿಯ ಧೂಳಿನಲ್ಲಿರುವ ಲವಣಾಂಶವೂ ಇರುವುದರಿಂದ ಭಿತ್ತಿಗೆ ಆವರಿಸಿದ ಧೂಳಿನಿಂದಾಗಿ ಭಿತ್ತಿ ಹಾಗೂ ವರ್ಣಗಳು ನಶಿಸುತ್ತವೆ. ಭಿತ್ತಿ ಚಿತ್ರಗಳಿರುವ ಪ್ರದೇಶದ ಹತ್ತಿರದಲ್ಲಿಯೇ ಅಡುಗೆಯನ್ನು ಮಾಡುವುದು (ಜನ ವಾಸಿಸುತ್ತಿದ್ದರೆ), ಕಟ್ಟಿಗೆಯನ್ನು ತುಂಬಿದ್ದರೆ ಅವುಗಳ ಬೆಂಕಿಯಿಂದ ಹೊಗೆಯಿಂದಾಗಲಿ ಆಕಸ್ಮಿಕವಾಗಿಯಾಗಲಿ ಈ ಭಿತ್ತಿಗಳಿಗೆ ಬೆಂಕಿತಗುಲಿದರೆ ಅಂತಹ ಬೆಂಕಿಯಿಂದಲೂ ಭಿತ್ತಿ ಚಿತ್ರಗಳು ಹಾಳಾಗಿರುವುದು ತಿಳಿದುಬರುತ್ತದೆ.

**೩. ವ್ಯಕ್ತಿಗತ ಆಪತ್ತುಗಳು :**

ವ್ಯಕ್ತಿಯ ಯಾವುದೇ ಅಹಿತಕರ ಘಟನೆಗಳಿಂದ ಸಂಭವಿಸುವ ಆಪತ್ತುಗಳಿಗೆ ವ್ಯಕ್ತಿಗತ ಆಪತ್ತುಗಳೆಂದು ಕರೆಯಲಾಗಿದೆ. ಅವುಗಳಲ್ಲಿ ಪ್ರಮುಖವಾಗಿ ಎರಡು ಭಾಗಗಳನ್ನು ಮಾಡಿಕೊಳ್ಳಲಾಗಿದೆ.

೧. ರಾಜಕೀಯ ಚಟುವಟಿಕೆಗಳಿಂದಾಗುವ ಆಪತ್ತುಗಳು

೨. ಧಾರ್ಮಿಕ ಚಟುವಟಿಕೆಗಳಿಂದಾಗುವ ಆಪತ್ತುಗಳು

**೧. ರಾಜಕೀಯ ಚಟುವಟಿಕೆಗಳಿಂದಾಗುವ ಆಪತ್ತುಗಳು :**

ಹಿಂದೆ ಒಂದು ರಾಜ್ಯದ ರಾಜಕುಮಾರ ಇನ್ನೊಂದು ರಾಜ್ಯದ ಮೇಲೆ ಯುದ್ಧವನ್ನು ಕೈಗೊಂಡಾಗ ಮನೆ ಅರಮನೆ ಮಠಗಳನ್ನು ಬಿಟ್ಟು ಬೇರೆಡೆ ಆಶ್ರಯ ಹುಡುಕುತ್ತ ಹೋಗುತ್ತಿದ್ದರು. ಆಗ ಅಲ್ಲಿಯ ಭಿತ್ತಿ ಚಿತ್ರಗಳೂ ಅವರ ದಾಳಿಗೆ ತುತ್ತಾಗುತ್ತಿದ್ದವು. ವಿಜಯನಗರ ಸಾಮ್ರಾಜ್ಯ ಪತನಗೊಂಡಾಗ ಅವರ ಅರಮನೆಗಳು ಮಠಮಾನ್ಯಗಳು ನಾಶವಾಗಿರುವುದನ್ನು ಕಾಣಬಹುದಾಗಿದೆ. ವಿಜಯನಗರ ಸಾಮ್ರಾಜ್ಯದ ರಾಜಧಾನಿಯಲ್ಲಿದ್ದಂತಹ ಅರಮನೆಗಳು ಮಠಮಾನ್ಯಗಳು ದೇವಾಲಯಗಳು ಸಾರ್ವಜನಿಕ ಕಟ್ಟಡಗಳು ಭಿತ್ತಿಚಿತ್ರದಿಂದ ಅಲಂಕೃತಗೊಂಡಿದ್ದನ್ನು ಪ್ರತ್ಯಕ್ಷದರ್ಶಿಗಳಾದ ವಿದೇಶಿ ಪ್ರವಾಸಿಗರು ತಮ್ಮ ಬರಹದಲ್ಲಿ ದಾಖಲಿಸಿದ್ದಾರೆ. ಈ ಎಲ್ಲಾ ಭಿತ್ತಿ ಚಿತ್ರಗಳು ತಾಳೀಕೋಟೆ ಕದನಾನಂತರ ಮುಸ್ಲೀಂ ದಾಳಿಕೋರರು ರಾಜಧಾನಿಯ ಮೇಲೆ ನಡೆಸಿದ ವಿನಾಶಕಾರಿ ಆಕ್ರಮಣದಿಂದ ನಾಶ ಹೊಂದಿದ್ದು ಅಲ್ಲದೇ ಮುಸ್ಲೀಮರು ಹಿಂದೂಗಳನ್ನು ಬೆನ್ನಟ್ಟಿ ಬಂದು ವಿಜಯನಗರ ಸಾಮ್ರಾಜ್ಯವನ್ನು ನಾಶ ಮಾಡುವುದಲ್ಲದೇ ಲೂಟಿಯನ್ನು ಮಾಡಿದರು. ಆ ಸಂದರ್ಭದಲ್ಲಿ ಇಲ್ಲಿಯ ಮನೆ ಅರಮನೆ ಮಠಗಳಲ್ಲಿ ಹುಲ್ಲು ತುಂಬಿ ಬೆಂಕಿ ಹಚ್ಚಿದರೆಂದು ಹೇಳಲಾಗುತ್ತದೆ. ಇದರಿಂದಾಗಿ ಕಟ್ಟಡಗಳಲ್ಲಿರುವ

ಭಿತ್ತಿ ಚಿತ್ರಗಳೊಂದಿಗೆ ಕಟ್ಟಡಗಳೇ ನಾಮಾವಶೇಷವಾಗಿವೆ. ಹಂಪಿಯಲ್ಲಿ ಈಗಲೂ ಕೂಡಾ ಹಾಳಾದ ದೇವಾಲಯ, ಮನೆ, ಅರಮನೆಗಳ ಕುರುಹುಗಳನ್ನು ಕಾಣುತ್ತೇವೆ. ಈ ವಿನಾಶಕಾರಿ ಆಕ್ರಮಣದಿಂದಾಗಿ ಹಿಂದೂ ಸಾಮ್ರಜ್ಯದ ಕೊನೆಯ ಕೊಂಡಿಯೂ ಕಳಚಿಕೊಂಡಂತಾಗಿದೆ.

*** ಧಾರ್ಮಿಕ ಚಟುವಟಿಕೆಗಳಿಂದಾಗುವ ಆಪತ್ತುಗಳು :**

ಒಂದುನಾಡಿನ ಧಾರ್ಮಿಕ ಚಾರಿತ್ರ್ಯವನ್ನು ಅವಲೋಕಿಸಿದಾಗ ಮತಾಭಿಮಾನಗಳಿಂದುಂಟಾಗುವ ಮತಮತಗಳ ತಾಕಲಾಟಗಳು ಇದ್ದಿರುವುದು ತಿಳಿದುಬರುತ್ತದೆ. ಆಯಾ ಧರ್ಮಗಳಿಗೆ ಸಂಬಂಧಿಸಿದ ಮಠ, ಮಂದಿರ, ದೇವಾಲಯ, ಬಸದಿ, ಮಸೂತಿ, ಚರ್ಚುಗಳು ಆಯಾ ಮತಗಳ ಪ್ರಾಬಲ್ಯದ ಕಾಲದಲ್ಲಿ ಆಯಾ ಪ್ರದೇಶದಲ್ಲಿ ಆಯಾ ಮತದ ಭಿತ್ತಿ ಚಿತ್ರಗಳು ಮಠ ಮಂದಿರಗಳು ಹೆಚ್ಚು ಸುರಕ್ಷಿತವಾಗಿದ್ದು ಇನ್ನುಳಿದ ಮತಗಳು ನಿರ್ಲಕ್ಷ್ಯಗೊಂಡವು. ಇಂಥಹ ಘಟನೆಗಳು ಆಯಾ ದೊರೆಯ ಧಾರ್ಮಿಕ ಅಭಿಮಾನದ ಮೇಲೆ ಅವಲಂಬಿತವಾಗಿರುತ್ತವೆ. ದೇವಾಲಯಗಳನ್ನು ಕೆಡವಿ ಮಸೀದಿಗಳನ್ನು ಮಾಡಿರುವುದು, ಮಸೀದಿ ಕೆಡವಿ ದೇವಾಲಯಗಳನ್ನು ನಿರ್ಮಿಸಿರುವಾಗ ಅದರಲ್ಲಿರುವ ಭಿತ್ತಿಚಿತ್ರಗಳು ನಾಶವಾಗಿರುವುದು ಸ್ವಾಭಾವಿಕ. ಹೀಗೆ ಧರ್ಮ, ಮತಗಳು ಒಂದರ ಮೇಲೆ ಮತ್ತೊಂದು ಆಕ್ರಮಣ ಮಾಡಿವೆ. ಈಗಲೂ ಮಾಡುತ್ತಿರುವುದು ತಿಳಿದುಬರುತ್ತದೆ. ಇವುಗಳಿಗೆ ಧರ್ಮಾಭಿಮಾನದ ಆಪತ್ತುಗಳು ಎಂದು ಕರೆಯಲಾಗಿದೆ.

**೨. ಪೂಜಾವಿಧಾನಗಳಿಂದುಂಟಾಗುವ ಆಪತ್ತುಗಳು :**

ನಾಡಿನಾದ್ಯಂತ ಇರುವ ಬಹುತೇಕ ಭಿತ್ತಿ ಚಿತ್ರಗಳು ದೇವಾಲಯ ಮಠಮಾನ್ಯಗಳಂತಹ ಧಾರ್ಮಿಕ ಸ್ಥಳಗಳಲ್ಲೇ ಹೆಚ್ಚು ರಚನೆಯಾಗಿರುವುದು ಕಂಡು ಬರುತ್ತದೆ. ಇವುಗಳಲ್ಲಿ ನಡೆಯುವ ಪೂಜೆಯ ಸಂದರ್ಭದಲ್ಲಿ ಉರಿಸುವ ಎಣ್ಣೆ, ದೀವಿಗೆ, ಕರ್ಪೂರ, ಹೋಮ, ಹವನಗಳಿಂದಾಗಿ, ಎಣ್ಣೆ, ಜಿಡ್ಡುಯುಕ್ತ ಕಾಡಿಗೆ ಅಲ್ಲಿರುವ ಚಿತ್ರಗಳ ಮೇಲೆ ಆವರಿಸಿದ್ದುದು ಕಂಡುಬರುತ್ತದೆ.

ಹಂಪೆಯ ವಿರೂಪಾಕ್ಷದೇವಾಲಯದ ಚಿತ್ರಗಳು ಗರ್ಭಗುಡಿಯ ಎದುರಿಗಿರುವ ಮಂಟಪದ ಮುಚ್ಚಿಗೆಯಲ್ಲಿ ರಚನೆಗೊಂಡಿದ್ದು ನೂರಾರು ವರುಷಗಳಿಂದ ನಿತ್ಯ ಉರಿಸುವ ಎಣ್ಣೆಯ ದೀವಿಗೆ, ಕರ್ಪೂರಗಳು ಮತ್ತು ಈ ಮಂಟಪದ ಕಂಬಗಳಲ್ಲಿ ದೀಪ ಹಚ್ಚುವುದರಿಂದ ಈ ಕಂಬಗಳಲ್ಲಿ ದೀಪದ ಹಣತೆಯನ್ನಿಡಲು ಸ್ಥಳವನ್ನು ಮಾಡಿದ್ದು ಅಲ್ಲಿ ಎಣ್ಣೆಯ ದೀಪಗಳನ್ನು ಹಚ್ಚುವುದರಿಂದ ಈ ಜಿಡ್ಡುಯುಕ್ತ ಕಾಡಿಗೆ ಹೊಗೆಯಿಂದಾಗಿ ಚಿತ್ರಗಳು ಮಸುಕಾಗಿ ಅಲ್ಲಲ್ಲಿ ಕಪ್ಪು ಆವರಿಸಿಕೊಂಡಿದೆ. ಅದರಂತೆಯೆ ಈ ದೇವಾಲಯದ ಗರ್ಭಗುಡಿಯ ಹಿಂದುಗಡೆಯಲ್ಲಿರುವ ನಾಗದೇವಾಲಯದಲ್ಲಿನ ಮೇಲ್ಛಾವಣಿ ಎತ್ತರವಿಲ್ಲದಿರುವುದರಿಂದ ದಿನನಿತ್ಯದ ಪೂಜೆಯಿಂದ ಅದರ ಹೊಗೆ ನೇರವಾಗಿ ಈ ಛಾವಣೆಯಲ್ಲಿಯ ಭಿತ್ತಿ ಚಿತ್ರಗಳಿಗೆ ತಗಲುವುದರಿಂದ ಇಲ್ಲಿನ ಚಿತ್ರಗಳು ಹೆಚ್ಚಾಗಿ ಕಪ್ಪಾಗಿ, ಧೂಳು ಮತ್ತು ಎಣ್ಣೆಯ ಜಿಡ್ಡಿನಿಂದ ಕಲಾಕೃತಿಗಳು ಹಾಳಾಗಿರುವುದು ಸ್ಪಷ್ಟವಾಗಿ ಕಂಡುಬರುತ್ತವೆ.[೨]

---

೨. ಸುಚಿತ್ರಾ ಲಿಂಗದಳ್ಳಿ : ವಿಜಯನಗರ ಭಿತ್ತಿ ಚಿತ್ರಕಲೆ – ಒಂದು ಅಧ್ಯಯನ : ಅಪ್ರಕಟಿತ ಎಂ.ಫಿಲ್ ಕಿರುಪ್ರಬಂಧ. ಕನ್ನಡ ವಿ.ವಿ. ಹಂಪಿ, ಪುಟ ೮೫

ಇನ್ನು ಕೆಲವೊಂದು ದೇವಾಲಯಗಳಲ್ಲಿ ಉತ್ಸವದ ಸಂದರ್ಭದಲ್ಲಿ ಬಣ್ಣ ಸುಣ್ಣ ಬಳಿಯುವಾಗಲೂ ಈ ಭಿತ್ತಿಚಿತ್ರಗಳ ಮೇಲೆಯೇ ಬಳಿದಿದ್ದು ಆ ಚಿತ್ರಗಳು ಹಾಳಾಗಿರುವುದು ಕಂಡು ಬರುತ್ತದೆ. ಕನಕಾಚಲಪತಿಯ ದೇವಾಲಯದ ಪ್ರವೇಶದ್ವಾರದ ಮೇಲ್ಛಾವಣಿ, ನವಲಗುಂದ ಪಂಚಗೃಹ ಹಿರೇಮಠದಲ್ಲಿಯ ಮೇಲಿನ ಕಟ್ಟಿಗೆಯ ತೊಲೆಯಲ್ಲಿ ರಚಿಸಿದ ಭಿತ್ತಿ ಚಿತ್ರಗಳ ಮೇಲೆ ಬಣ್ಣವನ್ನು ಹಚ್ಚಿರುವುದು, ಅದರ ಹಿನ್ನೆಲೆಯಲ್ಲಿ ಚಿತ್ರಗಳಿರುವುದು ಈಗಲೂ ಕಾಣುತ್ತವೆ. ಇದಕ್ಕೆ ಚಿತ್ರಗಳ ಬಗ್ಗೆ ಇರುವ ನಿರಾಸಕ್ತಿ ಅಜ್ಞಾನವೇ ಕಾರಣವೆಂದು ಹೇಳಬಹುದಾಗಿದೆ.

**೪. ಕ್ರಿಮಿಕೀಟಗಳಿಂದಾಗುವ ಆಪತ್ತುಗಳು :**

ಪ್ರಾಚೀನ ದೇವಾಲಯಗಳು ಮಠಗಳಲ್ಲಿರುವ ಚಿತ್ರ ಶಿಲ್ಪಗಳ ಮೇಲೆ ಕೆಲವು ಸೂಕ್ಷ್ಮಾಣುಜೀವಿ ಶಿಲೀಂಧ್ರಗಳು ವಾಸಮಾಡಿ ಅವು ಬಿಡುಗಡೆಗೊಳಿಸುವ ಗಂಧಕಾಮ್ಲದಿಂದ ಶಿಲ್ಪಗಳನ್ನು ಪದರ ಪದರವಾಗಿ ನಾಶಗೊಳಿಸುತ್ತವೆ ಅದೇರೀತಿಯಲ್ಲಿ ಭಿತ್ತಿಚಿತ್ರಗಳು ಪುಡಿ ಪುಡಿಯಾಗಿ ಉದುರುತ್ತವೆ. ಎಂದು ಕೀಟಗಳ ಕುರಿತು ಕೆ.ಎಸ್.ರವಿಕುಮಾರ ಹೇಳುತ್ತಾರೆ.[೩]

ಹೀಗೆ ಭಿತ್ತಿ ಚಿತ್ರಗಳು ವ್ಯಾಪಿಸಿದ ದೇವಾಲಯ ಮಠಮನೆಗಳಲ್ಲಿರುವ ಭಿತ್ತಿಗಳು ವರ್ಣಗಳು ಹೀಗೆ ಹಾಳಾಗುತ್ತಿರುವುದು ಕಂಡುಬರುತ್ತವೆ.

**II. ಸಂರಕ್ಷಣಾ ಕ್ರಮಗಳು :** ನಾಶದ ಅಂಚಿನಲ್ಲಿರುವ ಇಂಥಹ ಭಿತ್ತಿ ಚಿತ್ರಗಳನ್ನು ಹಲವು ಆಧುನಿಕ ವಿಧಾನಗಳಿಂದ ಸಂರಕ್ಷಿಸಬಹುದಾಗಿದೆ. ಕಲಾಕೃತಿಯೊಂದರ ಮೇಲಾಗಿರುವ ವಿರೂಪವನ್ನು ವೈಜ್ಞಾನಿಕ ವಿಧಾನಗಳಿಂದ ಹೋಗಲಾಡಿಸಿ ಅದನ್ನು ಸಾಧ್ಯವಾದಷ್ಟು ಮಟ್ಟಿಗೆ ಮೂಲತಃ ಇದ್ದ ಸ್ಥಿತಿಗೆ ಸಮೀಪ ತರುವ ತಂತ್ರ ಕೆಲವು ರಾಸಾಯನಿಕ ಮೂಲಗಳಿಂದ ಸಾಧ್ಯವಾಗುತ್ತಿದೆ. ಆದರೂ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಇಷ್ಟೊಂದು ಪ್ರಗತಿ ಸಾಧಿಸಿದಾಗ್ಯೂ ಅವು ಹೆಚ್ಚು ದಿನಗಳವರೆಗೆ ಬಾಳಿಕೆ ಬರುತ್ತವೆ ಎಂದು ಹೇಳುವುದು ಕಷ್ಟ. ಬಳಸುವ ರಾಸಾಯನಿಕ ಮೂಲಗಳು ಭಿತ್ತಿಯ ಸತ್ವವನ್ನು ಕಳೆಯುತ್ತವೆ. ಆದ್ದರಿಂದ ರಾಸಾಯನಿಕಗಳನ್ನು ತೀರ ಅನಿವಾರ್ಯವಾದಾಗ ಬಳಸಬಹುದಾಗಿದೆ. ಈ ದಿಸೆಯಲ್ಲಿ ಪ್ರಾಚೀನರು ಅನುಸರಿಸುತ್ತಿದ್ದ ಕ್ರಮಗಳತ್ತ ಇನ್ನೂ ಅಧ್ಯಯನಗಳು ನಡೆಯಬೇಕಾಗಿವೆ. ಹಂಪೆಯ ಈ ಭಿತ್ತಿ ಚಿತ್ರಗಳನ್ನು ಮೂರು ಬಾರಿ ತಿದ್ದಲಾಗಿದೆ. ವಿದ್ಯಾರಣ್ಯರ ಮೆರವಣಿಗೆಯ ಚಿತ್ರದಲ್ಲಿ ಕಂಡುಬರುತ್ತದೆ. ಎಂದು ಡಾ.ಅ.ಲ. ನರಸಿಂಹನ್ ಹೇಳಿರುವರು.[೪] ಅರ್ಜುನನು ಮತ್ಸ್ಯಯಂತ್ರ ಭೇದಿಸುವ ಚಿತ್ರದ ಯಂತ್ರದ ಕೆಳಗಡೆ ಕೋವಿಯನ್ನು ಹಿಡಿದುಕೊಂಡ ಸೈನಿಕರ ಚಿತ್ರವನ್ನು ತಿದ್ದಿರುವುದು ನಂತರ ಕಾಲದ್ದು ಎಂದು ಡಾ.ಶಿವರಾಮ ಕಾರಂತರು ಊಹಿಸುತ್ತಾರೆ.[೫]

ಹೀಗೆ ಇವುಗಳನ್ನು ಸ್ವಚ್ಛಗೊಳಿಸಿದ ನಂತರ ಭಿತ್ತಿ ಚಿತ್ರಕಲೆಯ ಬಗ್ಗೆ ಪೂರ್ಣಮಾಹಿತಿ ಇರುವ ನುರಿತ ಕಲಾವಿದರಿಂದ ಆಧುನಿಕ ಭಿತ್ತಿಯನ್ನು ಸಿದ್ಧಗೊಳಿಸಿ ಮೂಲ ಚಿತ್ರದ ಮಾದರಿಯಲ್ಲಿ ಮತ್ತು ಚಿತ್ರದ ವರ್ಣಗಳಿಗೆ

---

೩. ಡಾ. ಎಚ್. ಎನ್. ಚಿತ್ರಗಾರ : ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ–ಒಂದು ಅಧ್ಯಯನ : ಪುಟ ೨೩೧

೪. ಡಾ. ಅ.ಲ.ನರಸಿಂಹನ್: ಕರ್ನಾಟಕದ ಭಿತ್ತಿಚಿತ್ರ ಪರಂಪರೆ: ಪುಟ ೧೫೫

೫. ಡಾ. ಶಿವರಾಮಕಾರಂತ : ಕರ್ನಾಟಕದಲ್ಲಿ ಚಿತರಕಲೆ : ಪುಟ ೩೫

ಸರಿಹೊಂದುವ ವರ್ಣವನ್ನು ತುಂಬಿ ಹಿನ್ನೆಲೆವರ್ಣಲೇಪನಕ್ಕೆ ಸಿಂಥೆಟಿಕ್ ಅಕ್ರ್ಯಾಲಿಕ್‌ನಂತಹ ವರ್ಣವನ್ನು ಬಳಸಿಕೊಂಡು ರಚಿಸಿದ ಚಿತ್ರವು ಪೂರ್ತಿಯಾಗಿ ಒಣಗಿದ ನಂತರ ಐಸೋಲೇಟಿಂಗ್ ಸಿಂಥೆಟಿಕ್ ವಾರ್ನೀಸ್ (Isolating Symthetic Varnish) ದ ಪದರವನ್ನು ಲೇಪಿಸುವುದರಿಂದ ಭಿತ್ತಿಚಿತ್ರಗಳ ಸಂರಕ್ಷಣೆಯನ್ನು ಮಾಡಬಹುದಾಗಿದೆ.[೬] ಇದರಿಂದ ಮುಂದಿನ ದಿನಗಳಲ್ಲಿ ಕಪ್ಪಾಗದೇ ಹಳದಿವರ್ಣಕ್ಕೆ ತಿರುಗದೇ ಹೆಚ್ಚು ದಿನಗಳವರೆಗೆ ಉಳಿದುಬರುವುದು. ಚಿತ್ರವು ಪೂರ್ತಿಗೊಂಡನಂತರ ಐಸೋಲೇಟಿಂಗ್ ಸಿಂಥೆಟಿಕ್ ವಾರ್ನೀಸ್‌ನ್ನು ಸ್ಪ್ರೇ ಮಾಡಬೇಕು. ಯಾಕೆಂದರೆ ವಾರ್ನೀಸ್‌ದ ಈ ಪದರು ಚಿತ್ರದ ಮೇಲ್ಮೈಭಾಗದಲ್ಲಿ ಗಾಜಿನಂತೆ ಕೆಲಸ ಮಾಡುತ್ತದೆ. ಚಿತ್ರಕ್ಕೆ ರಕ್ಷಣೆ ಕೊಡುವುದಲ್ಲದೆ ಚಿತ್ರವು ಗಾಜಿನ ಹಾಗೆ ಹೊಳಪುಳ್ಳದ್ದಾಗುವುದು. ಇಂತಹ ಭಿತ್ತಿ ಚಿತ್ರಗಳನ್ನು ಸಂರಕ್ಷಣೆಗೊಳಪಡಿಸುವ ಇತರ ಕ್ರಮಗಳನ್ನು ನೋಡಬಹುದು.

| ನೇರಕ್ರಮಗಳು | ಪೂರಕ ಕ್ರಮಗಳು |
|---|---|
| ೧) ಭಿತ್ತಿ ಚಿತ್ರವನ್ನು ಪುನಃ ರೂಪಿಸುವುದು | ೧) ಪುಸ್ತಕಗಳಲ್ಲಿ ಭಿತ್ತಿ ಚಿತ್ರಗಳನ್ನು ಮುದ್ರಿಸುವುದು |
| ೨) ಭಿತ್ತಿ ಚಿತ್ರವನ್ನು ಪ್ರತಿ ಮಾಡುವುದು | ೨) ಅಲಂಕಾರಿಕ ವಾಣಿಜ್ಯ ವಸ್ತುಗಳಲ್ಲಿ ಭಿತ್ತಿ ಚಿತ್ರಗಳನ್ನು ರೂಪಿಸುವುದು. |
| ೩) ಭಿತ್ತಿ ಚಿತ್ರದ ಛಾಯಾಚಿತ್ರಣ ಮಾಡುವುದು. | |
| ೪) ಭಿತ್ತಿ ಚಿತ್ರದ ಸ್ಲೈಡ್ಸ್ ಅಥವಾ ಸಿಡಿ, ಡಿವಿಡಿ ತಯಾರಿಸುವುದು. | |
| ೫) ವಿಡಿಯೋ ಚಿತ್ರೀಕರಣಮಾಡುವುದು. | |

ಹೀಗೆ ಭಿತ್ತಿ ಚಿತ್ರಗಳನ್ನು ಸಂರಕ್ಷಣೆಮಾಡುವ ಕ್ರಮಗಳಿಂದಾಗಿ ಉಳಿಸಿಕೊಳ್ಳಬಹುದಾಗಿದೆ.

**ಹಸ್ತಪ್ರತಿ ಚಿತ್ರಗಳ ಸ್ಥಿತಿ ಗತಿಗಳು :**

ಭಿತ್ತಿಚಿತ್ರಗಳಂತೆ ಕಾಗದದ ಮೇಲೆ ಬರೆದ ಹಸ್ತಪ್ರತಿ ಚಿತ್ರಗಳ ಸ್ಥಿತಿಯೂ ಸಹ ಬೇರೆಯಾಗಿಲ್ಲ. ಹಸ್ತಪ್ರತಿಗಳ ಸಂರಕ್ಷಣೆಗೆಂದು ಮಾಡಲಾದ ಕಟ್ಟಿಗೆಯ ಫಲಕಗಳ ಮೇಲೆಯೂ ಮೂಲ ಕಥಾವಸ್ತುವಿಗೆ ಸಂಬಂಧಿಸಿದ ಚಿತ್ರಗಳನ್ನು ಚಿತ್ರಿಸಿದ್ದಾರೆ. ಅವುಗಳಲ್ಲದೇ ಕಾಗದದ ಹಸ್ತಪ್ರತಿ ಚಿತ್ರಗಳು, ತಾಳೆಗರಿ ಹಸ್ತಪ್ರತಿ ಚಿತ್ರಗಳು, ಪಟ ಚಿತ್ರಗಳು, ಉದ್ಧರಣಿ ಚಿತ್ರಗಳು. ಹೀಗೆ ವಿವಿಧ ಮಾಧ್ಯಮಗಳಲ್ಲಿ ದೊರೆಯುತ್ತಿರುವ ಹಸ್ತಪ್ರತಿ ಚಿತ್ರಗಳನ್ನು ರಚಿಸಿರುವರು. ಸಂಶೋಧನಾ ಅಧ್ಯಯನದ ನಿಮಿತ್ತ ಕೈಗೊಂಡ ಕ್ಷೇತ್ರ ಕಾರ್ಯದಲ್ಲಿ ನಮಗೆ ದೊರೆತಿರುವ ಮಾಹಿತಿಯಂತೆ ವಿಶ್ವವಿದ್ಯಾಲಯಗಳಲ್ಲಿ ಪ್ರತ್ಯೇಕವಾಗಿ ಹಸ್ತಪ್ರತಿ ವಿಭಾಗಗಳೇ ರಚನೆಗೊಂಡಿದ್ದು ಸೂಕ್ತ ವ್ಯವಸ್ಥೆಯೊಂದಿಗೆ ಹಸ್ತಪ್ರತಿಗಳನ್ನು ಸಂರಕ್ಷಿಸಿಕೊಂಡು ಬಂದಿರುವುದು ತಿಳಿದುಬರುತ್ತದೆ. ಮಠಮಾನ್ಯಗಳಲ್ಲಿ

೬. ಡಾ. ಯಾದಪ್ಪ ಪರದೇಶಿ : ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ : ಒಂದು ಅಧ್ಯಯನ : ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ ಕನ್ನಡ ವಿ.ವಿ. ಹಂಪಿ

ಸಂಗ್ರಹಿಸಿರುವ ಹಸ್ತಪ್ರತಿಗಳನ್ನು ಕೆಲವು ಕಡೆ ಉತ್ತಮವಾಗಿ ಸಂಗ್ರಹಿಸಿದ್ದು ಇನ್ನೂ ಕೆಲವು ಕಡೆ ಸರಿಯಾದ ವ್ಯವಸ್ಥೆಯನ್ನೇ ಮಾಡಿಲ್ಲದಿರುವುದು ಕಂಡುಬರುತ್ತದೆ. ಹೀಗಾದಾಗ ಹಸ್ತಪ್ರತಿಗಳು ಮುಂದಿನ ಪೀಳಿಗೆಗೆ ನೋಡಲೂ ಸಿಗದೇ ಹೋಗುವ ಸಾಧ್ಯತೆಗಳಿವೆ. ಶಿವಯೋಗಮಂದಿರದಲ್ಲಿಯ ಕೆಲವು ಹಸ್ತಪ್ರತಿಗಳು ತಾಳೆಗರಿ, ಹಾಳೆಗಳ ಹಸ್ತ ಪ್ರತಿಗಳು ಕಪ್ಪಾಗಿ, ಹಳದಿಯಾಗಿ ಕೈಯಲ್ಲಿ ಹಿಡಿದರೆ ಪುಡಿ ಆಗುತ್ತವೆ ಏನೋ ಅನ್ನುವ ಹಾಗಿವೆ. ಬಹಳ ಹಳೆಯದಾದ ಹಸ್ತಪ್ರತಿಗಳು ಇದ್ದು ಅವುಗಳ ಸಂರಕ್ಷಣೆಯ ಅವಶ್ಯಕತೆ ಇದೆ ಎನಿಸುತ್ತಿದೆ. ಹೀಗೆ ಬಹಳಷ್ಟು ಕಡೆ ಕಂಡುಬರುತ್ತದೆ. ಶಿಲೆ, ಮರ, ಲೋಹದಂತಹ ಫಲಕದ ಮೇಲೆ ಬರೆದ ಚಿತ್ರಗಳೇ ನಶಿಸುತ್ತಿರುವಾಗ ಇನ್ನು ಹಾಳೆಯ ಮೇಲೆ ತಾಳೆಗರಿಗಳ ಮೇಲೆ, ರಚಿಸಿದ ಚಿತ್ರಗಳ ಗತಿಯೇನು? ವಿನಾಶದ ಅಂಚಿನಲ್ಲಿರುವ ಈ ಹಸ್ತಪ್ರತಿಗಳ ಸಂರಕ್ಷಣೆ ನಮ್ಮೆಲ್ಲರ ಜವಾಬ್ಧಾರಿಯಾಗಿದೆ. ಅದಕ್ಕಾಗಿ ಈ ಹಸ್ತಪ್ರತಿಗಳನ್ನು ಸಂರಕ್ಷಿಸಲು ಕಂಡುಕೊಳ್ಳಬಹುದಾದ ಮಾರ್ಗೋಪಾಯಗಳಲ್ಲದೇ ಸಂರಕ್ಷಣಾ ವಿಧಾನಗಳ ಕುರಿತು ಈ ಮುಂದೆ ಚರ್ಚಿಸಲಾಗಿದೆ.

**ಹಸ್ತಪ್ರತಿಗಳ ಸಂರಕ್ಷಣಾ ವಿಧಾನ :**

ಓಲೆಯ ಪ್ರತಿಗಳಿಗೆ ಮೇಲೆ ಹಾಗೂ ಕೆಳಗೆ ಮರದ ಹಲಗೆಗಳನ್ನು ಇಟ್ಟು ನೂಲಿನ ದಾರದಿಂದ ಕಟ್ಟುತ್ತಿದ್ದರು. ಓಲೆಯ ಆಕೃತಿಗೆ ಅನುಸಾರವಾಗಿ ರಂಧ್ರಗಳನ್ನು ಕೊರೆದು ಆ ಮೂಲಕ ನೂಲಿನ ದಾರಗಳನ್ನು ಪೋಣಿಸಿ ಕಟ್ಟುತ್ತಿದ್ದರು. ಈ ರಂಧ್ರಗಳು ಬಳಸಿದಂತೆ ದೊಡ್ಡದಾಗಬಾರದೆಂದು ಲೋಹದ ಉಂಗುರಗಳನ್ನು ಹಾಕುತ್ತಿದ್ದರು. ಓಲೆಗರಿಗಳು ಹಾಳಾಗದಂತೆ ಅವುಗಳಿಗೆ ಬಹುಶಃ ಅಗಸಿಯ ಅಥವಾ ಬೇವಿನ ಎಣ್ಣೆಯನ್ನು ತಯಾರಿಸಿ ಬಳಿಯಲಾಗುತ್ತಿತ್ತೆಂದು ತಿಳಿದು ಬರುತ್ತದೆ. ಹಸ್ತ ಪ್ರತಿಗಳಿಗೆ ಮೈಸೂರಿನ ಓರಿಯಂಟಲ್ ಲೈಬ್ರರಿಯಲ್ಲಿ ಕೆಲಸ ಮಾಡುತ್ತಿದ್ದವನೊಬ್ಬ ಸ್ವತಃ ಎಣ್ಣೆಯನ್ನು ತಯಾರಿಸುತ್ತಿದ್ದಾನೆಂದೂ ಅದು ಸುವಾಸನೆ ಉಳ್ಳದ್ದಾಗಿತ್ತೆಂದೂ ಅದನ್ನು ಹಚ್ಚುವುದರಿಂದ ತಾಳೆಗರಿಗಳು ಸುಭ್ರವಾಗಿಯೂ ಮೃದುವಾಗಿಯೂ ಇದ್ದು ಕೀಟನಾಶಕ ಶಕ್ತಿಯನ್ನು ಹೊಂದಿತ್ತು ಎಂಬುದು ತಿಳಿದುಬರುತ್ತದೆ.

ಹಸ್ತಪ್ರತಿಗಳ ಸಂರಕ್ಷಣೆಯ ಕಾರ್ಯದಲ್ಲಿ ಹಿಂದಿನಿಂದಲೂ ನಡೆದುಬಂದ ಇನ್ನೊಂದು ಪದ್ಧತಿಯೆಂದರೆ ಅವುಗಳನ್ನು ನಕಲು ಮಾಡಿಸಲು ತೊಡಗಿದ್ದರು. ಓಲೆಗರಿಗಳನ್ನಾಗಲೀ ಕಾಗದದ ಹಸ್ತಪ್ರತಿಗಳನ್ನಾಗಲಿ ಪುನಃ ಪುನಃ ಬಳಸುವುದರಿಂದ ಅವು ಜೀರ್ಣವಾಗುವುದುಂಟು. ಆದ್ದರಿಂದ, ಎಷ್ಟೋ ಹಸ್ತಪ್ರತಿಯ ಭಂಡಾರಗಳಲ್ಲಿ ಅಸಲು ಪ್ರತಿಗಳನ್ನು ಸುರಕ್ಷಿತವಾಗಿಡಲು ಈ ನಕಲು ಮಾಡುವ ಕಾರ್ಯ ಸತತವಾಗಿ ಸಾಗುತ್ತಿರುತ್ತದೆ. ಇತ್ತೀಚೆಗೆ ಝೆರಾಕ್ಸ್, ಮೈಕ್ರೋಫಿಲ್ಮ್ ಮತ್ತು ಕಂಪ್ಯೂಟರ್ ಯಂತ್ರೋಪಕರಣಗಳಿಂದ ಈ ಪ್ರತಿ ಮಾಡುವ ಕಾರ್ಯ ಅಷ್ಟೇನೂ ಕಷ್ಟವಾಗುವುದಿಲ್ಲ.

ಕಾಗದದ ಹಸ್ತಪ್ರತಿಗಳಲ್ಲಿ ಸಾಮಾನ್ಯವಾಗಿ ಎರಡು ಬಗೆಗಳನ್ನು ಕಾಣಬಹುದಾಗಿದೆ. ಮೊದಲನೆಯದು ಓಲೆಯ ಪ್ರತಿಗಳಂತೆ ಬಿಡಿಬಿಡಿಯಾದ ಕಾಗದಗಳನ್ನು ಬಳಸಿ ಒಂದರ ಮೇಲೊಂದರಂತೆ ಇಟ್ಟು ಆ ದಪ್ಪಕ್ಕೆ

ಅನುಗುಣವಾಗಿ ಕೆಳಗೊಂದು ಹಾಗೂ ಮೇಲೊಂದು ಮರದ ಹಲಗೆಗಳನ್ನು ಇಟ್ಟು ಅವುಗಳಿಗೆ ಮಧ್ಯದಲ್ಲಿ ಒಂದು ರಂಧ್ರವನ್ನು ಮಾಡಿ ಅವುಗಳಲ್ಲಿ ನೂಲಿನ ದಾರವನ್ನು ಪೋಣಿಸಿ ಆ ದಾರದಿಂದ ಆ ಕಟ್ಟನ್ನು ಸರಿಯಾಗಿ ಕಟ್ಟಿ ಇಡಲಾಗುತ್ತಿತ್ತು. ಇದನ್ನು ಬಿಟ್ಟರೆ ಪುಸ್ತಕ ರೂಪದಲ್ಲಿ ದೊರೆಯುವ ಹಸ್ತಪ್ರತಿಗಳ ಸಂಖ್ಯೆ ಅಪಾರವಾದುದಾಗಿದೆ. ಇಂತಹ ಪುಸ್ತಕಗಳಿಗೆ ಮೇಲೆ ಮತ್ತು ಕೆಳಗೆ ದಪ್ಪವಾದ ಬಟ್ಟೆಯನ್ನು ಹಾಕಿರುವುದಲ್ಲದೆ ಅದನ್ನು ಬಲವಾಗಿ ಸುತ್ತಿ ನೂಲಿನ ದಾರದಿಂದ ಕಟ್ಟಿಡಲಾಗಿದೆ. ಇಂತಹ ಗ್ರಂಥಗಳು ವೀರಶೈವ ಧರ್ಮಕ್ಕೆ ಸಂಬಂಧಿಸಿದಂತೆ ಇರುವ ತಾಳೆ ಓಲೆಗರಿಯ ಮತ್ತು ಕಾಗದದ ಕಟ್ಟುಗಳಾಗಲಿ, ಗ್ರಂಥರೂಪದ ಅರಿವೆಯ ಕಟ್ಟುಗಳಾಗಲಿ ದೇವಾಲಯ ಮಠ ಮಂದಿರಗಳಲ್ಲಿ ಇರುವುದು ಈಗಲೂ ಕಂಡುಬರುತ್ತದೆ. ವಿಶ್ವವಿದ್ಯಾಲಯಗಳಲ್ಲಿ, ಗ್ರಂಥಾಲಯಗಳಲ್ಲೂ ಹೀಗೆ ಸಂಗ್ರಹಿಸಿ ಇಡಲಾಗಿದೆ. ಬಣ್ಣದ ಬಟ್ಟೆಯನ್ನು ಕಟ್ಟಲು ಬಳಸುವುದರಿಂದ ಕೀಟಗಳು ಹಸ್ತಪ್ರತಿಗಳ ಹತ್ತಿರ ಸುಳಿಯುವುದಿಲ್ಲವೆಂದು ಇಂದಿನ ಗ್ರಂಥಾಲಯ ಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ.[೭]

ಡಾ.ಎಂ.ಎಂ. ಕಲಬುರ್ಗಿ ಅವರು ಹಸ್ತಪ್ರತಿಗಳನ್ನು ಹಸುಗೂಸಿನಂತೆ ಕಾಪಾಡಬೇಕು ಎನ್ನುತ್ತ ಹಸ್ತಪ್ರತಿ ಲಿಪಿಕಾರರು ಉದಾಹರಿಸಿದ ಶ್ಲೋಕಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ.

> "ಪುಸ್ತಕಂ ವನಿತಾವಿತ್ತಂ ಪರಹಸ್ತಗತಂ ಗತಮ್ಃ
> ಅಥವಾ ಪುನರಾಯಾತಂ ಜೀರ್ಣಂ ಭ್ರಷ್ಟಂಚ ಖಂಡಶಃ।
> ತೈಲಾದ್ರಕ್ಷೇಜ್ಜಲಾದ್ರಕ್ಷೇತ್ ರಕ್ಷೇಚ್ಛಿಥಿಲಬಂಧನಾತ್
> ಮೂರ್ಖಹಸ್ತೇ ನ ದಾತವ್ಯಮೇವಂ ವದತಿ ಪುಸ್ತಕಂ॥"

ಈ ಶ್ಲೋಕಗಳಲ್ಲಿ ಹೇಳಿರುವ ಸಂಗತಿಗಳು ಸಾರ್ವಕಾಲಿಕವಾದುವು. ಹಸ್ತಪ್ರತಿಗಳು ಹೆಣ್ಣು, ಹೊನ್ನಗಳಂತೆ ಅತ್ಯಂತ ಪವಿತ್ರವೂ ಅಮೂಲ್ಯವೂ ಆದುದಾಗಿವೆ. ಅವು ಪರರ ಪಾಲಾದರೆ ಹಿಂದಿರುಗಿ ಬರುವ ಸಾಧ್ಯತೆ ಕಡಿಮೆ ಹಾಗೆ ಹಿಂದಿರುಗಿ ಬಂದರೂ ಅವು ಪೂರ್ವಸ್ಥಿತಿಯಲ್ಲಿ ಇರುವುದಿಲ್ಲವೆಂಬುದು ಖಂಡಿತ. ಹಸ್ತಪ್ರತಿಗಳ ಆಜನ್ಮ ಶತ್ರುಗಳಲ್ಲಿ ಪ್ರಮುಖವಾದವುಗಳೆಂದರೆ ಎಣ್ಣೆ ಮತ್ತು ನೀರು. ಹಸ್ತಪ್ರತಿಗಳು ಪೂಜಾಸಾಮಗ್ರಿಗಳೆಂದು ಪರಿಗಣಿತವಾದ ಮೇಲೆ ಅವುಗಳಿಗೆ ಪ್ರತಿನಿತ್ಯವೂ ಈ ಶೈತ್ಯೋಪಚಾರವೇ ಸಲ್ಲುವುದೆಂಬ ಬಳಿಕ ಅವು ನೀರಿನಿಂದ ಪಾರಾಗಲು ಹೇಗೆ ಸಾಧ್ಯ? ಹಸ್ತಪ್ರತಿಗಳನ್ನು ಬಳಸುವಲ್ಲಿ ಎಷ್ಟು ಎಚ್ಚರಿಕೆಯಿಂದಿದ್ದರೂ ಸಾಲದು. ಓಲೆಯ ಪ್ರತಿಯೇ ಆಗಲಿ ಕಾಗದದ ಪ್ರತಿಯೇ ಆಗಲಿ, ನೂಲಿನ ದಾರದಿಂದ ಕಟ್ಟುತ್ತಿದ್ದುದರಿಂದ ಅದನ್ನು ಅತೀ ಬಿಗಿಯಾಗಿ ಕಟ್ಟಬಾರದು. ಎಲ್ಲಕ್ಕಿಂತಲೂ ಹೆಚ್ಚಾಗಿ ಮೂರ್ಖನ ಕೈಗೆ ಹಸ್ತಪ್ರತಿಗಳು ದೊರೆತರೆ ಮಂಗನ ಕೈಗೆ ಮಾಣಿಕ್ಯವನ್ನು ಕೊಟ್ಟಂತೆಯೇ ಸರಿ. ಹಸ್ತಪ್ರತಿಗಳನ್ನು ತಿಳಿಯದೇ ಇರುವ ಹಲವಾರು ಜನ ಇಂದಿಗೂ ಇದ್ದಾರೆ. ಅವುಗಳನ್ನು ಅಲಕ್ಷದಿಂದ ಕಾಣುವವರು ಅಸಂಖ್ಯಾತರಿದ್ದಾರೆ. ಹಸ್ತಪ್ರತಿಗಳನ್ನು ಅಪವಿತ್ರವಾಗದಂತೆ

---

೭. ವರದರಾವ್ : ಹಸ್ತಪ್ರತಿಗಳ ಸಂಗ್ರಹಕಾರ್ಯ ಮತ್ತು ಸಂರಕ್ಷಣೆ: ಲೇಖನ ಹಸ್ತಪ್ರತಿಶಾಸ್ತ್ರ : ಬಿ.ಎಂ.ಶ್ರೀ ಪ್ರತಿಷ್ಠಾನ ಬೆಂಗಳೂರು: ಪುಟ ೬೫

ಬೇರೆ ಯಾರ ಕೈಗೂ ಸಿಗದಂತೆ ಹೊಳೆಗೆ ಹಾಕಿರುವವರೂ ಅನೇಕರಿದ್ದಾರೆ. ಪಿತ್ರಾರ್ಜಿತವಾಗಿ ಬಂದ ಆ ಆಸ್ತಿಯ ಮೌಲ್ಯವನ್ನು ಅರಿಯದವರು ಅದಕ್ಕೆ ಬಾಹ್ಯ ಪೂಜೆ ಮಾಡಿಸಿ ಪುಣ್ಯ ಸಂಪಾದಿಸಿಕೊಳ್ಳುವುದರಲ್ಲಿಯೇ ಸಂತೃಪ್ತರಾಗುವರು. ಒಂದು ಬಾರಿಯಾದರೂ ಅದರಲ್ಲೇನಿದೆ ಎಂದು ಓದಿಸಿ ತಿಳಿದುಕೊಳ್ಳಲೂ ಪ್ರಯತ್ನಿಸದವರು ಸಾಕಷ್ಟು ಪ್ರಮಾಣದಲ್ಲಿದ್ದಾರೆ.

ಓಲೆಗರಿಗಳಿಗಾಗಲಿ ಹಸ್ತಪ್ರತಿಗಳಿಗಾಗಲಿ ಅನೇಕ ಬಗೆಯ ಪ್ರಾಕೃತಿಕ ಆಪತ್ತುಗಳುಂಟು. ಪ್ರಕೃತಿಯಲ್ಲಿನ ವಾತಾವರಣದ ವೈಪರೀತ್ಯದಿಂದ ಓಲೆಗರಿ, ಹಸ್ತಪ್ರತಿ ಗ್ರಂಥಗಳಿಗೆ ಬೂಷ್ಟು ಬರುವುದು ಸಾಮಾನ್ಯ. ಆದ್ದರಿಂದ, ಹವಾನಿಯಂತ್ರಿತ ಸ್ಥಳಗಳಲ್ಲಿ ಹಸ್ತಪ್ರತಿಗಳನ್ನಿಟ್ಟು ಸಂಗ್ರಹಿಸುವುದು ಇಂದು ಅನಿವಾರ್ಯವಾಗಿದೆ. ಇಲಿಗಳ ಬಾಯಿಗೆ ಬೀಳದಂತೆ ನೋಡಿಕೊಳ್ಳುವುದು ಎಷ್ಟು ಅಗತ್ಯವೋ ಅಷ್ಟೇ ಬೆಳ್ಳಿ ಮೀನು(Silver Fish), ಜಿರಲೆ (Cockroach), ಪುಸ್ತಕಕ್ರಿಮಿ (Book Worm), ಗೆದ್ದಲು ಹುಳು (Termite) ಮೊದಲಾದ ಸೂಕ್ಷ್ಮ ಕ್ರಿಮಿಕೀಟಗಳಿಂದ ಹಸ್ತಪ್ರತಿಗಳನ್ನು ಕಾಪಾಡುವುದು ಇಂದು ಅಗತ್ಯವಾಗಿದೆ. ಇದಕ್ಕಾಗಿ ಹಲವು ತೆರನಾದ ರಾಸಾಯನಿಕ ವಸ್ತುಗಳಿಂದ ತಯಾರಿಸಿದ ದ್ರಾವಣಗಳನ್ನು ಬಳಸುವುದನ್ನು ವೈಜ್ಞಾನಿಕ ಪ್ರಯೋಗದಿಂದ ಕಂಡುಹಿಡಿಯಲಾಗಿದೆ.

ಹಸ್ತಪ್ರತಿಗಳ ಸಂರಕ್ಷಣೆಯ ಕುರಿತಾದ ಶಾಸ್ತ್ರೀಯ ವಿವರಗಳನ್ನು ಕನ್ನಡದಲ್ಲಿ ಬರೆದಿರುವ ಶ್ರೀ ಬಿ.ಎಸ್. ಸಣ್ಣಯ್ಯನವರು ತಮ್ಮ "ಹಸ್ತಪ್ರತಿ ಶಾಸ್ತ್ರ ಪರಿಚಯ" ಪುಸ್ತಕದಲ್ಲಿ – ಓಲೆಗರಿ ಮತ್ತು ಭೂರ್ಜ ಪತ್ರಗಳ ಮಸಿ ಅಳಿಸಿದಂತೆ (Water Proof) ಇದ್ದರೆ ಪ್ರತಿ ಎಲೆಯನ್ನು ಗ್ಲಿಸರೀನ್ ಮತ್ತು ನೀರನ್ನು ಸಮ ಪ್ರಮಾಣದಲ್ಲಿ ಸೇರಿಸಿ ಅದರಿಂದ ಶುದ್ಧಗೊಳಿಸಬಹುದು. ಮಸಿಯು ಅಳಿಸುವಂತಿದ್ದರೆ ಕಾರ್ಬನ್ ಟೆಟ್ರಕ್ಲೋರೈಡ್ ಅಥವಾ ಅಸಿಟೋನ್ ಹಾಳೆಗಳಿಂದ ಸ್ವಚ್ಛಗೊಳಿಸಬೇಕು. ಕಂಠದಿಂದ ಅಕ್ಷರಗಳನ್ನು ಕೊರೆದಿರುವ ಓಲೆಗಳಿಗೆ ಗ್ರಾಫೈಟ್ ಪುಡಿಯನ್ನು ಹಚ್ಚಿ ಅಕ್ಷರಗಳು ಚೆನ್ನಾಗಿ ಕಾಣುವಂತೆ ಮಾಡಬಹುದಾಗಿದೆ. ಕೆಲವು ಸಲ ಶೀತದಿಂದಾಗಿ ಅಥವಾ ಮತ್ತಾವ ಕಾರಣದಿಂದಲಾದರೂ ಓಲೆಗಳು ಒಂದಕ್ಕೊಂದು ಅಂಟಿಕೊಂಡಿರುತ್ತವೆ. ಇವುಗಳನ್ನು ಫ್ಯಾರಫಿನ್ ದ್ರಾವಣದಲ್ಲಿ ನೆನೆಯಿಸಿ ಬಿಡಿಸಲು ಪ್ರಯತ್ನಿಸಬೇಕು. ಪತ್ರಗಳು ಮುರಿದು ತುಂಡಾಗಿದ್ದರೆ ಅಥವಾ ಅವುಗಳ ಯಾವುದೇ ಭಾಗ ಹರಿದಿದ್ದರೆ, ಆ ಭಾಗಕ್ಕೆ "ಕ್ವಿಕ್ ಫಿಕ್ಸ್" ಮೊದಲಾದ ಅಂಟುಗಳನ್ನು ಉಪಯೋಗಿಸಿ ಸರಿಪಡಿಸಬಹುದು, ಹೀಗೆ ಹೊಂದಿಸುವಾಗ ಪತ್ರದ ಒಂದು ಮಗ್ಗುಲಲ್ಲಿ ಹೊಂದಿಸಿರುದನ್ನು ಮತ್ತೊಂದು ಮಗ್ಗುಲಿಗೆ ಮುಂದುವರೆಸಿ ಮೊದಲ ಪುಟದಿಂದ ಕೊನೆಯನ್ನು ಸೇರುವಂತೆ ಮಾಡಿದರೆ ಉತ್ತಮ. ಇದರಿಂದ ಪತ್ರದ ಎರಡೂ ಅಂಚುಗಳು, ರಕ್ಷಿತವಾಗುತ್ತವೆ ಎಂದಿರುವರು.[೮] ಈ ಹಿನ್ನೆಲೆಯಲ್ಲಿ ಸಚಿತ್ರ ಓಲೆಗರಿಗಳು ಮತ್ತು ಸಚಿತ್ರ ಗ್ರಂಥಗಳಿಗೂ ಹಸ್ತಪ್ರತಿಗಳಿಗೂ ಈ ತಂತ್ರವನ್ನೇ ಬಳಸಬಹುದಾಗಿದೆ.

೮. ಡಾ. ಎಚ್.ಎನ್. ಚಿತ್ರಗಾರ : ಕರ್ನಾಟಕ ಹಸ್ತಪ್ರತಿ ಚಿತ್ರಕಲೆ–ಒಂದು ಅಧ್ಯಯನ: ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ

ಕರ್ನಾಟಕದಲ್ಲಿ ಈ ಮೊದಲಿನಿಂದಲೂ ವೀರಶೈವ ವೈಷ್ಣವ ಜೈನ ಮಠಗಳಲ್ಲಿ ಆಯಾ ಮತಕ್ಕೆ ಸಂಬಂಧಿಸಿದ ಸಚಿತ್ರ ಹಸ್ತಪ್ರತಿಗಳ ಗ್ರಂಥಗಳು ಸಂಗ್ರಹಗೊಂಡಿರುವವು. ಆದರೆ ಅವುಗಳನ್ನು ಶಾಸ್ತ್ರೀಯವಾಗಿ ವಿಂಗಡಿಸಿ ಅಕಾರಾದಿ ಸೂಚಿಗಳನ್ನು ಸಿದ್ಧಪಡಿಸಿ ಸುವ್ಯವಸ್ಥಿತವಾದ ಸಂರಕ್ಷಣೆಯ ಕಾರ್ಯಗಳ ಕಡೆಗೆ ಗಮನಹರಿಸದಿರುವ ಸಾಕಷ್ಟು ನಿದರ್ಶನಗಳು ನಮ್ಮ ಮುಂದೆಯೇ ಇವೆ. ಈಗಲಾದರೂ ಈ ಸ್ಥಿತಿ ಉತ್ತಮಗೊಳ್ಳುವುದು ಅವಶ್ಯಕವಾಗಿದೆ. ಕೆಲವು ಮಠಗಳಲ್ಲಿ ಹಾಗೂ ವಿಶ್ವವಿದ್ಯಾಲಯಗಳಲ್ಲಿ ಹಸ್ತಪ್ರತಿ ಭಂಡಾರಗಳು ಆಧುನಿಕ ಕಾಲಕ್ಕೆ ತಕ್ಕಂತೆ ಪ್ರತಿಯಾಗುತ್ತವೆ. ಹಸ್ತಪ್ರತಿಗಳ ಕುರಿತು ವರ್ಣನಾತ್ಮಕ ಸೂಚಿಯ ಸಂಪುಟಗಳು ಇತ್ತೀಚೆಗೆ ಹೊರಬರುತ್ತಿರುವುದರಿಂದ ದೇಶವಿದೇಶಗಳ ವಿದ್ವಾಂಸರಿಗೆ ಈ ವರ್ಣನಾತ್ಮಕ ಸೂಚಿಯ ಸಂಪುಟದಿಂದಾಗಿ ಹೆಚ್ಚಿನ ನೆರವನ್ನು ಪಡೆಯಲು ಸಾಧ್ಯವಾಗುತ್ತದೆ. ಹೀಗೆ ಕಳೆದ ಶತಮಾನಗಳಿಂದ ಈ ಹಸ್ತಪ್ರತಿಗಳ ಸಂರಕ್ಷಣೆ ನಡೆಯುತ್ತಾ ಬಂದಿದೆ. ಇದು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಆಗಬೇಕಷ್ಟೆ! ಅದು ಅಲ್ಲದೇ ಹಸ್ತಪ್ರತಿ ಸಂಗ್ರಹ ಮತ್ತು ಸಂರಕ್ಷಣೆಯ ಕಾರ್ಯಗಳು ಪಿತೃಋಣದಷ್ಟು ಪವಿತ್ರವಾದುದು ಎಂದು ಭಾವಿಸಿ ಕೆಲಸ ಮಾಡಬೇಕಾದುದು ಅವಶ್ಯಕವಾಗಿದೆ.

**ಸಂಕೀರ್ಣ ಮಾಧ್ಯಮದ ಚಿತ್ರಗಳ ಸ್ಥಿತಿಗತಿಗಳು :**

ಭಿತ್ತಿ ಚಿತ್ರ ಹಾಗೂ ಹಸ್ತಪ್ರತಿಚಿತ್ರಗಳಂತೆ ಸಂಕೀರ್ಣಮಾಧ್ಯಮದ ಚಿತ್ರಗಳೆಂದು ಪ್ರತ್ಯೇಕ ಅಧ್ಯಾಯವಾಗಿಸಿಕೊಂಡು ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಸಂಕೀರ್ಣಮಾಧ್ಯಮದ ಚಿತ್ರಗಳಲ್ಲಿ ಕಾಗದದ ಮಾಧ್ಯಮ, ಮರದಮಾಧ್ಯಮ ಹಾಗೂ ಬಟ್ಟೆಯ (ಕ್ಯಾನ್ವಾಸ್) ಮಾಧ್ಯಮದ ಮೇಲೆ ಬಿಡಿಸಿದ ಚಿತ್ರಗಳನ್ನು ಕುರಿತು ಇಲ್ಲಿ ಅಧ್ಯಯನ ಮಾಡಲಾಗಿದೆ. ಈ ಹಿಂದೆ ಹಸ್ತಪ್ರತಿ ಚಿತ್ರಗಳ ಸಂರಕ್ಷಣೆಯನ್ನು ಕುರಿತು ವಿವರಿಸಲಾದ ಸಂರಕ್ಷಣಾ ವಿಧಾನಗಳನ್ನೇ ಈ ಸಂಕೀರ್ಣ ಮಾಧ್ಯಮದ ಚಿತ್ರಗಳಿಗೂ ಬಳಸಬಹುದಾಗಿದೆ. ಹಸ್ತಪ್ರತಿಗಳಿಗಿಂತಲೂ ಸಂಕೀರ್ಣಮಾಧ್ಯಮದ ಚಿತ್ರಗಳು ಸುಸ್ಥಿತಿಯಲ್ಲಿವೆಯೆಂದೇ ಹೇಳಬಹುದು. ಏಕೆಂದರೆ ಹಸ್ತಪ್ರತಿಗಳ ಸಂರಕ್ಷಣೆಗೆಂದು ಮರದ ಫಲಕಗಳನ್ನು, ಇಲ್ಲವೇ ದಪ್ಪವಾದ ವರ್ಣದ ಬಟ್ಟೆಯನ್ನು ಸುತ್ತಿರುತ್ತಾರೆ. ಆದರೆ ನೀರು, ಎಣ್ಣೆಯಂತಹ ಜಿಡ್ಡು ಪದಾರ್ಥಗಳಿಂದ ಹೆಚ್ಚಿನ ಹಾನಿಯು ಸಂಭವಿಸುತ್ತದೆ ಎನ್ನುವುದನ್ನು ತಿಳಿಸಲಾಗಿತ್ತು. ಇಲ್ಲಿಯೂ ಕೂಡಾ ಈ ಸಂಕೀರ್ಣ ಚಿತ್ರಗಳನ್ನು ಮರದ ಫ್ರೇಮಿನೊಂದಿಗೆ ಗ್ಲಾಸನ್ನು ಹಾಕಿರುವುದು ಸಂರಕ್ಷಣೆಯ ದೃಷ್ಟಿಯಿಂದಾಗಿದ್ದು ಉತ್ತಮವಾಗಿರುವುದು ಕಂಡುಬರುತ್ತದೆ. ಹಸ್ತಪ್ರತಿ ಚಿತ್ರಗಳಿಗಿಂತಲೂ ಸೇಫಾಗಿರುತ್ತವೆ ನಿಜ. ಆದರೆ ಈ ಸಂಕೀರ್ಣ ಚಿತ್ರಗಳು ವೀರಶೈವ ದೇವರ ಅಥವಾ ದೇವತೆಯ ಕಲಾಕೃತಿಗಳಾಗಲಿ ಇಲ್ಲವೇ ಶೈವ ಪೌರಾಣಿಕ ಕಥೆಗಳಿಗನುಗುಣವಾದ ಕಲಾಕೃತಿಗಳಾಗಲಿ, ಇವುಗಳೊಂದಿಗೆ ಮಠಾಧೀಶರ ಕಲಾಕೃತಿಗಳೂ ಕೂಡಾ ರಚನೆಗೊಂಡಿದ್ದು, ಅವುಗಳನ್ನೆಲ್ಲಾ ಪೂಜೆ ಮಾಡುವ ಹಿನ್ನೆಲೆಯಲ್ಲಿ ನೀರನ್ನು ಹಚ್ಚಿ ತೊಳೆಯುವುದರಿಂದ ನೀರು ಕಟ್ಟಿನೊಂದಿಗೆ ಬೆರೆತು ದಿನಗಳೆದಂತೆ ಕಟ್ಟುಗಳ ಮುಖಾಂತರ ಒಳಸೇರಿ ಚಿತ್ರಕ್ಕೆ ಆವರಿಸಿರುವ ಕಲಾಕೃತಿಗಳನ್ನು ನೋಡಲಾಗಿದೆ. ಈ ರೀತಿಯ ಕಲಾಕೃತಿಗಳು ಇಂದಿಗೂ ಪೂಜೆಗೊಳ್ಳುತ್ತಲಿವೆ. ಹೀಗೆ ಹಾಳಾಗುತ್ತಿರುವ ಚಿತ್ರಗಳನ್ನು ಸಂರಕ್ಷಿಸಲು ಈ ಹಿಂದೆ ಹೇಳಿದ ಸಂರಕ್ಷಣೋಪಾಯಗಳನ್ನೇ ಇಲ್ಲಿಯೂ ಬಳಸಬಹುದಾಗಿದೆ.

ಈ ಮೇಲೆ ವಿವರಿಸಿದ ಎಲ್ಲ ಬಗೆಯ ಮಾಧ್ಯಮಗಳಲ್ಲಿ ರಚನೆಗೊಂಡ ಒಟ್ಟು ಚಿತ್ರಗಳ ಸ್ಥಿತಿ ಗತಿ, ಅವುಗಳಿಗೆ ಒದಗಿದ ಆಪತ್ತುಗಳು ಮತ್ತು ಆಪತ್ತುಗಳಿಗೀಡಾದ ಚಿತ್ರಗಳ ಸಂರಕ್ಷಣೆಯ ಕುರಿತಾದ ವಿಷಯಗಳನ್ನು ಒಟ್ಟಾರೆಯಾಗಿ ವಿಶ್ಲೇಷಿಸಲಾಗಿದೆ. ಹೀಗೆ ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳುವುದರಿಂದ ನಮ್ಮ ಭಾರತೀಯ ಸಾಂಪ್ರದಾಯಿಕ ಹಾಗೂ ಪರಂಪರೆಯ ಹಿನ್ನೆಲೆಯಲ್ಲಿ ರಚನೆಗೊಂಡ ವೀರಶೈವ ಕಲಾಕೃತಿಗಳನ್ನು ನಮ್ಮ ಮುಂದಿನ ಪೀಳಿಗೆಗೆ ಧಾರ್ಮಿಕ ಪ್ರಜ್ಞೆಯನ್ನುಂಟು ಮಾಡಲು ಸಹಕಾರಿಯಾಗುವಂತೆ ಉಳಿಸಿ ಬೆಳೆಸುವ ಜವಾಬ್ದಾರಿಯೂ ನಮ್ಮೆಲ್ಲರ ಮೇಲಿದೆ.

# ಅಧ್ಯಾಯ : ಎಂಟು

# ಸಮಾರೋಪ,



# ಸಮಾರೋಪ

ಜಗತ್ತಿಗೆ ಭಾರತೀಯ ಸಂಸ್ಕೃತಿಯನ್ನು ಪರಿಚಯಿಸಿದ ಸಿಂಧೂ ನಾಗರಿಕತೆಯು ಕ್ರಿಸ್ತ ಪೂರ್ವ ೫೦೦೦ ವರುಷಗಳಿಂದಲೇ ಪ್ರಾರಂಭವಾಗಿದ್ದು ಅಲ್ಲಿ ಶೈವ ವೀರಶೈವ ಧರ್ಮಕ್ಕೆ ಸಂಬಂಧಿಸಿದಂತೆ ಸಣ್ಣಲಿಂಗಗಳು, ದೊಡ್ಡ ಲಿಂಗಗಳು, ಮುದ್ರೆಗಳು ದೊರೆತಿದ್ದು ಇದರ ಮೇಲಿನ ಚಿತ್ರಗಳಿಂದ ದೃಢಪಟ್ಟಿದೆ. ನಂತರ ಪ್ರಾರಂಭವಾದ ಬಾದಾಮಿಯ ಚಾಲುಕ್ಯರು ಶೈವ, ವೈಷ್ಣವ ಜೈನ, ಸಂಪ್ರದಾಯದ ಚಿತ್ರ ಶಿಲ್ಪ ವಾಸ್ತು ಶಿಲ್ಪಗಳನ್ನು ಪ್ರಾರಂಭಿಸಿದರು. ರಾಷ್ಟ್ರಕೂಟರು, ಚೋಳರು, ಆನಂತರ ಬಂದ ವಿಜಯನಗರ ಸಾಮ್ರಾಜ್ಯವು ಇಡೀ ದಕ್ಷಿಣ ಭಾರತವನ್ನೇ ಆವರಿಸಿದ್ದು, ಈ ಅವಧಿಯಲ್ಲಿ ವಿಜಯನಗರ, ಲೇಪಾಕ್ಷಿ, ಪೆನುಗೊಂಡ, ಚಿದಂಬರಮ್, ತಂಜಾವೂರು ಮುಂತಾದ ಈ ಸಾಮ್ರಾಜ್ಯದೆಲ್ಲೆಡೆ ಭಿತ್ತಿ ಚಿತ್ರ, ಶಿಲ್ಪ, ವಾಸ್ತುಶಿಲ್ಪಗಳು ಬೆಳೆದುಬಂದಿದ್ದು ಶೈವ, ವೀರಶೈವ ಮತಗಳಿಗೆ ಸಂಬಂಧಿಸಿದ ಭಿತ್ತಿ ಚಿತ್ರಗಳು ರಚನೆಯಾಗಿವೆ. "ಅಜಂತಾದ ಬೌದ್ಧಮತದ ಭಿತ್ತಿ ಚಿತ್ರಗಳಿಗೆ ಪ್ರತಿಸರ್ಧಿಯೆನ್ನುವಂತೆ ಲೇಪಾಕ್ಷಿಯ ಶೈವ, ವೀರಶೈವಮತದ ಭಿತ್ತಿ ಚಿತ್ರಗಳು ರಚನೆಗೊಂಡಿವೆ." ಈ ಭಿತ್ತಿಚಿತ್ರಗಳಲ್ಲಿ ವಿವಿಧ ಪ್ರಯೋಗ ಹಾಗೂ ಸ್ಥಳೀಯ ಪ್ರಭಾವಗಳೂ ಸೇರ್ಪಡೆಗೊಂಡಿರುವವು. ಶೈವಪುರಾಣಗಳಿಗೆ ಸಂಬಂಧಿಸಿದ ಸಾವಿರಾರು ಭಿತ್ತಿಚಿತ್ರಗಳು ವಿಜಯನಗರ ಸಾಮ್ರಾಜ್ಯದಾದ್ಯಂತ ಹರಡಿಕೊಂಡಿದ್ದವು.

ವಿಜಯನಗರೋತ್ತರವಾಗಿ ಮೈಸೂರು, ಸುರಪುರು, ನಿಪ್ಪಾಣಿ, ಬಿ.ಕೆ.ಹಳ್ಳಿ ಅಮ್ಮಿನಭಾವಿ, ಮಹಾಲಿಂಗಪುರ, ಮುಡುಕುತೊರೆ, ಹರದನಹಳ್ಳಿ, ಚಾಮರಾಜೇಶ್ವರ ದೇವಾಲಯ ಹೀಗೆ ೧೮, ೧೯ನೇ ಶತಮಾನದಲ್ಲಿ ನಾಡಿನಾದ್ಯಂತ ವೀರಶೈವ ಭಿತ್ತಿಚಿತ್ರಗಳು ರಚನೆಗೊಂಡಿವೆ.

ಕಲೆಯು ಮಾನವನ ಅಭಿವ್ಯಕ್ತಿಯಿಂದುಂಟಾಗುವ ಸೃಷ್ಟಿಯಾಗಿದ್ದು ಅದು ಲೋಕಾನುಭವದ ಜೊತೆಗೆ ಆತನಲ್ಲಿರುವ ಪ್ರತಿಭೆ ಮತ್ತು ಸಂಘರ್ಷದಿಂದ ಉಂಟಾಗುವ ವಿಶಿಷ್ಟ ಕ್ರಿಯಾತ್ಮಕ ಅನುಭೂತಿಯಾಗಿದೆ. ಹೀಗಾಗಿ ಮಾನವನ ಆಂತರಿಕ ನಿತ್ಯಸತ್ಯದ ಆನಂದಾನುಭವದ, ಆತ್ಮದರ್ಶನದ, ಅಂತಃಕರಣದ ಪ್ರೇರಣೆಗೆ ಕಲೆಯು ದಾರಿಮಾಡಿಕೊಡುತ್ತದೆ. ಚಿತ್ರಕಲೆಯಲ್ಲಿನ ರೇಖೆ ಬಣ್ಣಗಳಿಗೆ ವಿಶಿಷ್ಟವಾದ ಅರ್ಥಗಳಿದ್ದು, ಅವು ಅಧ್ಯಾತ್ಮದ ಮಂತ್ರ, ತಂತ್ರಗಳ ಜೊತೆಗೆ ಮನೋವಿಜ್ಞಾನದ ಪರೋಕ್ಷಸಂಬಂಧ ಹೊಂದಿವೆ. ಹಾಗಾಗಿ ಕಲಾಕೃತಿಯಲ್ಲಿ ಕೇವಲ ತಾಂತ್ರಿಕ ನೈಪುಣ್ಯ ಒಂದಿದ್ದರೆ ಸಾಲದು. ಜೊತೆಗೆ ಕಲಾವಿದನು ಅನುಭವಿಸಿದ ಲೌಕಿಕ ಅನುಭವಗಳನ್ನು, ಆಧ್ಯಾತ್ಮಿಕ ನಿಲುವುಗಳನ್ನು, ಮನೋವಿಜ್ಞಾನದ ತತ್ವಕ್ಕನುಸರಿಸಿ ಕಲಾಕೃತಿಯಲ್ಲಿ ರೇಖೆ, ಬಣ್ಣಗಳ ಮುಖಾಂತರ ವ್ಯಕ್ತಪಡಿಸಿದಾಗ ಆ ಕಲಾಕೃತಿಯ ಮಹತ್ವ ಇನ್ನೂ ಹೆಚ್ಚಾಗುತ್ತದೆ. ಮತ್ತು ಅಂತಹ ಕಲಾಕೃತಿಗಳು ನೋಡುಗರ ಭಾವನೆಗೆ ತೀವ್ರವಾಗಿ ಸ್ಪಂದಿಸುತ್ತವೆ. ಇಂಥಹ ವಿಶಿಷ್ಟ ಗುಣಾತ್ಮಕ ಅಂಶಗಳನ್ನು ತಮ್ಮ ಕಲಾಕೃತಿಯಲ್ಲಿ

ಅಳವಡಿಸಿಕೊಂಡು ಕೃತಿ ರಚನೆ ಮಾಡುವಂತಹ ವಿಶೇಷ ಗುಂಪಿಗೆ ಸೇರಿದ ಕಲಾವಿದರು ವೀರಶೈವ ಪರಂಪರೆಯ ಚಿತ್ರಗಳನ್ನು ರಚಿಸುತ್ತಾ ಬಂದಿರುವುದು ತಿಳಿದುಬರುತ್ತದೆ.

ಈ ಮಹಾಪ್ರಬಂಧದ ವಿಷಯವು ಒಟ್ಟು ಎಂಟು ಅಧ್ಯಾಯಗಳಲ್ಲಿ ಹರಡಿಕೊಂಡಿದ್ದು ಪ್ರತಿಯೊಂದು ಅಧ್ಯಾಯದಲ್ಲಿ ಚರ್ಚಿತಗೊಂಡ ವಿಷಯಗಳ ಸಂಕ್ಷಿಪ್ತ ಸ್ವರೂಪದ ವಿವರಣೆಯನ್ನು ಮತ್ತು ಈ ಅಧ್ಯಯನದಿಂದ ಕಂಡುಕೊಂಡ ಫಲಿತಗಳನ್ನು ಸಹ ಈ ಮುಂದೆ ಸಮೀಕ್ಷಿಸಲಾಗಿದೆ.

**ಅಧ್ಯಾಯ ಒಂದರಲ್ಲಿ** ಅಧ್ಯಯನದ ಉದ್ದೇಶ, ಸ್ವರೂಪ ವ್ಯಾಪ್ತಿ ಹಾಗೂ ವೈಧಾನಿಕತೆಯನ್ನೊಳಗೊಂಡಿದ್ದು, ಕರ್ನಾಟಕದ ವೀರಶೈವ ಪರಂಪರೆಯ ಚಿತ್ರಕಲೆ ಎಂಬ ವಿಷಯದ ಪ್ರಮುಖ ಉದ್ದೇಶಗಳನ್ನು ಮತ್ತು ಅಧ್ಯಯನದ ವ್ಯಾಪ್ತಿ, ಸ್ವರೂಪವನ್ನು ಇದುವರೆಗೆ ನಡೆದ ಅಧ್ಯಯನದ ಸ್ವರೂಪವನ್ನು ಸ್ಪಷ್ಟಪಡಿಸಲಾಗಿದೆ.

**ಅಧ್ಯಾಯ ಎರಡರಲ್ಲಿ** ಕರ್ನಾಟಕದ ವೀರಶೈವಧರ್ಮ ಸಂಸ್ಕೃತಿಯೊಂದಿಗೆ ಚಿತ್ರಕಲೆಯ ನೆಲೆ ಹಿನ್ನೆಲೆಯನ್ನೊಳಗೊಂಡಿದೆ. ವೀರಶೈವ ಪರಂಪರೆಯ ಚಿತ್ರಕಲೆಯ ಇತಿಹಾಸವನ್ನು ಕಾಲಾನುಕ್ರಮವಾಗಿ ಕ್ರಮಬದ್ಧವಾಗಿ ಕಟ್ಟಿಕೊಡಲು ಪ್ರಯತ್ನಿಸಲಾಗಿದೆ. ವೀರಶೈವ ತತ್ವಗಳಾದ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಗಳನ್ನು ಚಿತ್ರಗಳಲ್ಲಿ ಪ್ರತಿಫಲನವಾಗಿರುವ ಉದ್ಧರಣೆಗಳನ್ನು ಪ್ರಮುಖವಾಗಿಟ್ಟುಕೊಂಡು ಇತರ ಸಚಿತ್ರ ಹಸ್ತ ಪ್ರತಿಗಳಾದ ಶಿವಾನುಭವಶಾಸ್ತ್ರ, ಶಿವಾಗಮಗಳು, ಶಿವನಿಧಿ, ವೃಷಭೇಂದ್ರ ವಿಳಾಸ, ಚೆನ್ನಬಸವ ಪುರಾಣ, ಸಕೀಲಗಳು ಹೀಗೆ ಹಸ್ತಪ್ರತಿಗಳಲ್ಲಿ ವೀರಶೈವ ಪರಂಪರೆಯ ಚಿತ್ರಗಳು ಬೆಳೆದುಬಂದಿರುವುದನ್ನು ಅಧ್ಯಯನ ಮಾಡಲಾಗಿದೆ.

**ಅಧ್ಯಾಯ ಮೂರರಲ್ಲಿ** ಕರ್ನಾಟಕದ ವೀರಶೈವ ಹಸ್ತಪ್ರತಿ ಚಿತ್ರಕಲೆಯ ಕುರಿತು ಅಧ್ಯಯನ ಮಾಡಲಾಗಿದೆ. ಉದ್ಧರಣೆಗಳು, ಶಿವಾನುಭವಶಾಸ್ತ್ರ, ಶಿವನಿಧಿ, ಶಿವಾಗಮಸೌರಭ, ವೃಷಭೇಂದ್ರ ವಿಳಾಸ, ಚೆನ್ನಬಸವ ಪುರಾಣ ಹೀಗೆ ಮುಂತಾದ ವೀರಶೈವ ಹಸ್ತಪ್ರತಿಗಳಲ್ಲಿ ಬರುವ ಚಿತ್ರಗಳನ್ನು ಅಧ್ಯಯನಕ್ಕೆ ಒಳಪಡಿಸಿದ್ದು ಇವನ್ನು ಜ್ಞಾನವಾಹಕಗಳಾಗಿ ಬಳಸಿಕೊಂಡು ಬಂದಿರುವ ಅರಸರು, ಆಚಾರ್ಯರು, ವಿದ್ವಾಂಸರು, ಗುರುಗಳು ಮಠಮಂದಿರಗಳಲ್ಲಿ ಹಾಗೂ ಪ್ರವಚನಕ್ಕಾಗಿ ನಾಡಿನಾದ್ಯಂತ ಸಂವರ್ಧಿಸಿದ್ದು, ಅವುಗಳನ್ನು ಬಳಸಿಕೊಂಡಿದ್ದು ಹಸ್ತಪ್ರತಿಗಳಲ್ಲಿ ವೀರಶೈವ ಪರಂಪರೆಯ ಕಲಾಕೃತಿಗಳು ರೂಪುಗೊಂಡ ಉದ್ದೇಶ ಹಾಗೂ ಸಾಮಾಜಿಕ ಬದುಕು ಹೇಗೆ ಕಲಾಜಗತ್ತಿನ ಮೇಲೆ ಪ್ರಭಾವ ಬೀರಿತು ಎಂಬುದನ್ನು ವೀರಶೈವ ಹಸ್ತಪ್ರತಿಗಳ ಮೂಲಕ ಅಧ್ಯಯನ ಮಾಡಲಾಗಿದೆ.

**ಅಧ್ಯಾಯ ನಾಲ್ಕರಲ್ಲಿ** ಕರ್ನಾಟಕದ ವೀರಶೈವ ಭಿತ್ತಿ ಚಿತ್ರಕಲೆಯ ಕುರಿತು ಅಧ್ಯಯನ ಮಾಡಲಾಗಿದ್ದು, ಆದಿಮಾನವನ ಕಾಲದಿಂದ ಈ ವರೆಗೂ ರಚನೆಗೊಂಡ ಭಿತ್ತಿಚಿತ್ರಗಳು ವ್ಯಕ್ತಿಯಿಂದ ವ್ಯಕ್ತಿಗೆ, ಸಮುದಾಯದಿಂದ ಸಮುದಾಯಕ್ಕೆ ಬೇರೆಬೇರೆಯಾಗಿ ಸೃಷ್ಟಿಗೊಂಡಿವೆ. ಆಯಾ ಪ್ರದೇಶದ ಆಚಾರವಿಚಾರ ಧಾರ್ಮಿಕ ನಂಬಿಕೆಗಳು ಭಿತ್ತಿಚಿತ್ರಗಳ ಮೇಲೆ ಪ್ರಭಾವ ಬೀರಿದ್ದು, ಈ ಪರಂಪರೆಯು ವೈವಿಧ್ಯಮಯವಾಗಿ ರೂಪಗೊಳ್ಳಲು ಕಾರಣವಾಗಿದೆ. ವೀರಶೈವ ಭಿತ್ತಿ ಚಿತ್ರಕಲಾ ಪರಂಪರೆಯನ್ನು ಧರ್ಮ ಪ್ರಚಾರದ ಸಾಧನವಾಗಿ ಸಮಾಜವನ್ನು ರೂಪಿಸುವಲ್ಲಿ

ಬಳಸಿಕೊಂಡಿರುವ ಕುರಿತು, ಭಿತ್ತಿ ಚಿತ್ರಗಳ ಶೈಲಿ ಕಾಲದಿಂದ ಕಾಲಕ್ಕೆ ಬದಲಾದ ಅಂಶಗಳು, ಚಿತ್ರರಚನೆಯ ತಂತ್ರಗಳನ್ನು ಅಧ್ಯಯನ ಮಾಡಲಾಗಿದೆ.

ಭಿತ್ತಿಚಿತ್ರಗಳಲ್ಲಿ ವೀರಶೈವ ಪರಂಪರೆಯ ಕಲಾಕೃತಿಗಳು ರೂಪಗೊಂಡ ಉದ್ದೇಶ, ಧರ್ಮ, ದೇವರು, ಗುರುಗಳು, ಭಕ್ತರ ಆರಾಧನೆ ಹಾಗೂ ಸಾಮಾಜಿಕ ಬದುಕು ಹೇಗೆ ಈ ಕಲಾ ಜಗತ್ತಿನ ಮೇಲೆ ಪ್ರಭಾವ ಬೀರಿತು ಎಂಬುದನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

**ಅಧ್ಯಾಯ ಐದರಲ್ಲಿ** ಕರ್ನಾಟಕದ ವೀರಶೈವ ಸಂಕೀರ್ಣ ಚಿತ್ರಕಲೆಯ ಕುರಿತು ಅಧ್ಯಯನ ಮಾಡಲಾಗಿದ್ದು, ವೀರಶೈವ ಪರಂಪರೆಯ ಚಿತ್ರರಚನೆ, ಗಾಜಿನಮೇಲೆ, ಗಂಜಿಫಾಕಾರ್ಡುಗಳಲ್ಲಿ, ಜನಪದರ ತೊಗಲುಗೊಂಬೆ ಮುಂತಾದ ಮಾಧ್ಯಮಗಳಲ್ಲಿ ರಚನೆಗೊಂಡಿದ್ದನ್ನು ಗುರುತಿಸಿ ಅಧ್ಯಯನ ಮಾಡಲಾಗಿದೆ.

**ಅಧ್ಯಾಯ ಆರರಲ್ಲಿ** ಕರ್ನಾಟಕದ ವೀರಶೈವ ಚಿತ್ರಕಲೆಯ ಪ್ರಮುಖ ಲಕ್ಷಣಗಳು, ಪ್ರೇರಣೆ, ಶೈಲಿ, ತಂತ್ರಗಾರಿಕೆಯ ಕುರಿತು ಅಧ್ಯಯನ ಮಾಡಲಾಗಿದ್ದು ಹರಪ್ಪಾ ಮೊಹೆಂಜೋದಾರೋ, ಚಾಲುಕ್ಯರು, ರಾಷ್ಟ್ರಕೂಟರು, ಚೋಳರು, ವಿಜಯನಗರ ಹಾಗೂ ವಿಜಯನಗರೋತ್ತರ ಕಲೆಯ ಮೇಲೆ ಆ ಸಂದರ್ಭ ಸನ್ನಿವೇಶ, ಘಟನೆಗಳು ಶೈವಾಗಮಗಳು, ಶೈವ ಪುರಾಣಗಳಿಗೆ ಸಂಬಂಧಿಸಿದಂತೆ ಇದ್ದರೂ ಕಲಾಶೈಲಿಗಳಲ್ಲಿ ವ್ಯತ್ಯಾಸಗಳಿದ್ದು ವರ್ಣಗಾರಿಕೆ ಸಂಯೋಜನಾರೀತಿ ಬಳಸಿದ ತಂತ್ರಗಳು ವೈವಿಧ್ಯಮಯವಾಗಿ ಮೂಡಿ ಬಂದಿರುವ ಕುರಿತು ವಿಶ್ಲೇಷಿಸಲಾಗಿದೆ.

**ಅಧ್ಯಾಯ ಏಳರಲ್ಲಿ** ಕರ್ನಾಟಕದ ವೀರಶೈವ ಚಿತ್ರಕಲೆಯ ಆಪತ್ತುಗಳು ಸದ್ಯದ ಸ್ಥಿತಿಗತಿಗಳು ಹಾಗೂ ಸಂರಕ್ಷಣೆಗಳ ಕುರಿತು ಅಧ್ಯಯನ ಮಾಡಲಾಗಿದ್ದು ಪ್ರಾಕೃತಿಕ ಆಪತ್ತುಗಳಲ್ಲಿ ಬಿಸಿಲು, ಮಳೆ, ಧೂಳು ಮುಂತಾದ ಘಟನೆಗಳನ್ನು ಪ್ರಕೃತಿ ನಿರ್ಮಿತ ಆಪತ್ತುಗಳೆಂದು, ಮಾನವ ನಿರ್ಮಿತವಾದಂತಹ ತಿಳಿದೋ ತಿಳಿಯದೆಯೊ ಕೈಗೊಳ್ಳುವ ಧಾರ್ಮಿಕ ಹಾಗೂ ಸಾಮಾಜಿಕ ವಿರೋಧಿ ಭಾವನೆಗಳನ್ನು ಹೊಂದಿದ ಮನಸ್ಸುಗಳು ಮಾನವನಿರ್ಮಿತ ಆಪತ್ತುಗಳೆಂದು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಭಿತ್ತಿ ಚಿತ್ರಗಳು ಹಾಗೂ ಹಸ್ತಪ್ರತಿಗಳು ಹಾಳಾಗದಂತೆ ಇತ್ತೀಚೆಗೆ ಗಜನಿಂಬೆರಸದ ಲೇಪನ ಧೂಮ ಪೆಟ್ಟಿಗೆ ಶಿಲೀಂಧ್ರಗಳ ನಿವಾರಣೆ, ಕೀಟಗಳ ನಿಯಂತ್ರಣ ಇವೆಲ್ಲ ಕ್ರಮಗಳನ್ನು ವೈಜ್ಞಾನಿಕ ತಳಹದಿಯಿಂದ ನಿರ್ವಹಿಸುವ ಕಲಾಕೃತಿಗಳ ಮೂಲವರ್ಣ ರೇಖೆಗಳು ಹಾಳಾಗದಂತೆ, ಯಥಾವತ್ತಾಗಿ ದಾಖಲಿಸುವ ವಿವಿಧ ರೀತಿಯ ಆಧುನಿಕ ಗಣಕಯಂತ್ರ ಮತ್ತು ಸಿಡಿಗಳನ್ನು ಮತ್ತು ಯಂತ್ರೋಪಕರಣಗಳನ್ನು ಬಳಸಿ ಅವುಗಳನ್ನು ಸಂರಕ್ಷಿಸುವ ವಿಧಿ ವಿಧಾನಗಳನ್ನು ಕುರಿತು ಚರ್ಚಿಸಲಾಗಿದೆ.

**ಅಧ್ಯಾಯ ಎಂಟರಲ್ಲಿ** ಸಮಾರೋಪ ಮಾಡಲಾಗಿದ್ದು ಕರ್ನಾಟಕದ ವೀರಶೈವ ಪರಂಪರೆಯ ಚಿತ್ರಕಲೆಯ ಎಲ್ಲಾ ಏಳೂ ಅಧ್ಯಾಯಗಳ ಸಂಶೋಧನೆಯ ಪ್ರಮುಖ ಅಧ್ಯಯನದ ಫಲಿತಗಳನ್ನು ಇಲ್ಲಿ ಸಮೀಕ್ಷಿಸಲಾಗಿದೆ.

*** ಪ್ರಸ್ತುತ ಅಧ್ಯಯನದಿಂದ ಕಂಡುಕೊಂಡ ಫಲಿತಗಳು :**

೧. ಚಿತ್ರಕಲೆ ಮತ್ತು ಕಲಾವಿದ ಮತಾತೀತ, ಜಾತ್ಯತೀತ, ಪಂಥಾತೀತವಾದುದು. ಆದರೆ, ಅದು ಆಶ್ರಯದಾತರ ಮತ, ಜಾತಿ, ಪಂಥ, ಅಭಿರುಚಿ ಅನುಭವ ಆಸಕ್ತಿಗಳ ಮೇಲೆ ಆಯಾ ಸಂದರ್ಭ, ಸನ್ನಿವೇಶಗಳಿಗೆ ತಕ್ಕಂತೆ ಬೆಳೆದುಬಂದಿದೆ.

೨. ಆರ್ಯರು ಸಿಂಧೂ ಕಣಿವೆಗೆ ಕಾಲಿಡುವ ಮುನ್ನವೇ ಅಲ್ಲಿ ನೆಲೆಸಿದ್ದ ಆದಿವಾಸಿಗಳಾದ ವ್ರಾತ್ಯರು (ದ್ರಾವಿಡರು) ಸುಸಂಸ್ಕೃತರಾಗಿದ್ದರು. ಅವರ ಮತಾಚರಣೆಗಳು, ತತ್ವಜ್ಞಾನ, ಚಿತ್ರ, ವಾಸುಶಿಲ್ಪ, ನಾಟ್ಯ, ಸಂಗೀತ ಮತ್ತು ಸಾಹಿತ್ಯಗಳು ಅವರಲ್ಲಿ ಸಾಕಷ್ಟು ಬೆಳೆದಿದ್ದವು ಎಂಬುದು ಅವರ ಸಂಸ್ಕೃತಿಯನ್ನು ಬಿಂಬಿಸುವ ಆಗಮಗಳಲ್ಲಿ ವ್ಯಕ್ತವಾಗಿವೆ.

೩. ಹರಪ್ಪ ಮೊಹೆಂಜೋದಾರೋದ ಕಣಿವೆಯಲ್ಲಿ ದೊರೆತಿರುವ ಹಲವು ಬಗೆಯ ಶಿವಲಿಂಗಗಳ ಚಿತ್ರಗಳನ್ನು "ಶಿವಾಂಕ" ಪುಟ ೪೫೨ ರಲ್ಲಿ ಪ್ರಕಟಿಸಲಾಗಿದೆ. ಶಿವಲಿಂಗಗಳು ಶಿವ, ಪಶುಪತಿ, ಗುರುವಿನ ಚಿತ್ರ ಮುಂತಾದ ಮೂರ್ತಿಗಳನ್ನು ಸಿದ್ಧಪಡಿಸಬೇಕಾದರೆ ಶಿಲ್ಪ ಶಾಸ್ತ್ರವು ಆಗಲೇ ಇದ್ದಿರಬೇಕು ಎಂದಿರುವರು.

೪. ಸೈಂಧವ ನಾಗರಿಕರ ಮನೆಗಳಲ್ಲಿ "ಪೀಠಗಳ ಮೇಲಿಟ್ಟು ಪೂಜಿಸುವ ಸ್ಥಾವರ ಲಿಂಗಗಳು ಶೈವ ಪ್ರಧಾನವಾಗಿ ಹಾಗೂ "ಶರೀರಗಳ ಮೇಲೆ ಧಾರಣಮಾಡಿಕೊಳ್ಳುವ ಇಷ್ಟಲಿಂಗಗಳು ವೀರಶೈವ ಪ್ರಧಾನವಾಗಿಯೂ ಬಳಕೆಯಲ್ಲಿದ್ದವು" ಎಂಬುದು ಸ್ಪಷ್ಟವಾಗುತ್ತದೆ.

೫. ಬಾದಾಮಿಯ ಭಿತ್ತಿಚಿತ್ರಗಳು ದುಂಡುಮುಖಗಳು, ನೀಳ ಆಕೃತಿ, ಕಣ್ಣುಗಳು ಕೆನ್ನೆ ಸ್ತನಗಳನ್ನು ಉತ್ಪ್ರೇಕ್ಷಿಸಿ (ಬಾರೋಕ್ ಕಲೆಯ ಹಾಗೆ) ನಿರೂಪಿಸಿರುವುದನ್ನು ಕಾಣಬಹುದು. ಸೂಕ್ಷ್ಮರೇಖೆಗಳೇ (Fore Line) ಬಾಹ್ಯ ಅಂಗಾಂಗಳ ವಿವರವನ್ನು ನಿರೂಪಿಸುತ್ತವೆ. ಸಮೂಹಚಿತ್ರಣದಲ್ಲಿಯ ಸಂಯೋಜನಾ ರೀತಿ ಅಜಂತೆಯ ಮುಂದುವರೆದ ತಂತ್ರವಾಗಿದೆಯಾದರೂ ವಸ್ತು ವಿಷಯಗಳು ವೈದಿಕ ಅವೈದಿಕ (ಶೈವ, ವೈಷ್ಣವ, ಜೈನ) ಮತಗಳ ಕಲೆಯು ರೂಪು ತಳೆದು ನಿಂತಿದೆ.

೬. ಎಲ್ಲೋರಾದ ಭಿತ್ತಿಚಿತ್ರಗಳು ಬಾದಾಮಿಯ ಭಿತ್ತಿ ಚಿತ್ರಗಳ ಮುಂದುವರೆದ ಪರಂಪರೆಯಾದರೂ ಇವರ ಭಿತ್ತಿಚಿತ್ರಗಳಲ್ಲಿ ಸ್ಪಷ್ಟ ಹಾಗೂ ಖಚಿತವಾದ ರೇಖೆಗಳು ದೃಢವಾಗಿ ಮೂಡಿಬಂದಿವೆ. ವರ್ಣಲೇಪನ ಚಪ್ಪಟೆಯಾಗಿ ಮಾಡಲಾಗಿರುವುದು. ಮುಕ್ಕಾಲು ಮುಖ ನೋಟದಲ್ಲಿ (three fourth profile) ಕಣ್ಣುರೆಪ್ಪೆ ಕೆನ್ನೆಯಾಚೆ ಚಾಚಿರುವ ಶೈಲಿ ಸ್ಪಷ್ಟವಾಗಿ ಮೂಡಿಬಂದಿದ್ದು ಚೂಪಾದ ಮೂಗು, ದುಂಡಾದ ಗಲ್ಲಗಳು ವಿಶಿಷ್ಟವಾಗಿ ಮೂಡಿಬಂದಿವೆ. ಎಲ್ಲೋರಾ ಕಲೆಯು ದೇವಾನುದೇವತೆಗಳಿಂದ ತುಂಬಿದೆ. ಶೈವ, ವೀರಶೈವ ಪ್ರಧಾನವಾದ ಚಿತ್ರಗಳು ಮೂಡಿಬಂದಿವೆ.

೭. ರಾಷ್ಟ್ರಕೂಟರ ಅವಧಿಯ ನಂತರ ಈ ಕಲಾಶೈಲಿಯು ಎರಡು ದಿಕ್ಕುಗಳಲ್ಲಿ ಹಬ್ಬಿದ್ದು ೧) ಭಾರತದ ಪಶ್ಚಿಮದಲ್ಲಿರುವ ಗುಜರಾತ್ ಮತ್ತು ರಾಜಸ್ಥಾನಗಳಲ್ಲಿ ಓಲೆಗರಿಗಳು ಮತ್ತು ಕಾಗದದ ಹಸ್ತಪ್ರತಿಗಳ ಮೇಲೆ

ಪ್ರಭಾವ ಆಗಿರುವುದು ಕಂಡುಬರುತ್ತದೆ. ಧಾರ್ಮಿಕವಾಗಿ ಇಲ್ಲಿ ಜೈನ ಮತ್ತು ವೈಷ್ಣವ ಪ್ರಧಾನವಾಗಿ ಹಸ್ತಪ್ರತಿ ಚಿತ್ರಗಳು ರಚನೆಗೊಂಡವು. ಭಾರತದ ದಕ್ಷಿಣ ಭಾಗದಲ್ಲಿ ೨) ಕರ್ನಾಟಕದಲ್ಲಿಯೂ ಹಸ್ತಪ್ರತಿ ಚಿತ್ರ ಮತ್ತು ಭಿತ್ತಿಚಿತ್ರಗಳಲ್ಲಿ ಹರಡಿಕೊಂಡಿದ್ದು ಹೊಯ್ಸಳರ ಅವಧಿಯಲ್ಲಿ ಜೈನ ಹಸ್ತಪ್ರತಿ ಧವಳಾ ಗ್ರಂಥಗಳಲ್ಲಿ ಮುಂದುವರೆದರೆ ಭಿತ್ತಿ ಚಿತ್ರಗಳಲ್ಲಿ ಹಾಗೂ ಹಸ್ತಪ್ರತಿಗಳಲ್ಲಿ ಶೈವ ವೀರಶೈವ ಪ್ರಧಾನವಾದ ಚಿತ್ರಗಳು ದೇವಾಲಯ, ಮಠಮಂದಿರ, ಅರಮನೆ, ವಾಡೆಗಳಲ್ಲಿ ಎಲ್ಲೋರಾ ಕಲಾಶೈಲಿಯ ಮುಂದುವರೆದ ಭಾಗವಾಗಿ ಬೆಳೆದು ಬಂದಿತು.

೮. ಹಸ್ತಪ್ರತಿಗಳ ರಚನೆಯು ಫಲಕಗಳಿಂದ ಓಲೆಗರಿಗಳಿಗೂ ಚಿತ್ರರಚನೆ ಹರಡಿಕೊಂಡಿತು. ಈ ಹಸ್ತಪ್ರತಿ ಚಿತ್ರಗಳನ್ನು ದಕ್ಷಿಣ ಭಾರತದಲ್ಲಿ ಓಲೆಗರಿಗಳ ಮೇಲೆ ಕಂಠದಿಂದ ರಚಿಸಿದರೆ ಉತ್ತರಭಾರತದಲ್ಲಿ ಬರವಣಿಗೆ ಮತ್ತು ಚಿತ್ರಗಳನ್ನು ಮಸಿ ಹಾಗೂ ಬಣ್ಣಗಳಿಂದ ಚಿತ್ರಿಸಿರುವರು.

೯. ವಿಜಯನಗರ ಸಾಮ್ರಾಜ್ಯದ ಅವಧಿಯಲ್ಲಿ ಭಿತ್ತಿಚಿತ್ರಗಳು ಮತ್ತು ಹಸ್ತಪ್ರತಿ ಚಿತ್ರಗಳು ಒಟ್ಟಿಗೆ ಬೆಳೆದು ಬಂದಿವೆ. ಈ ಚಿತ್ರಗಳಲ್ಲಿ ಶೈವ, ವೈಷ್ಣವ ಧರ್ಮಗಳಿಗೆ ಸಂಬಂಧಿಸಿದ ಚಿತ್ರ ಶಿಲ್ಪ, ವಾಸ್ತು ಶಿಲ್ಪಗಳು ರಚನೆಗೊಂಡವು. ಜೈನ ಮತ್ತು ಆಗತಾನೆ ಬಂದ ಇಸ್ಲಾಮ್ ಸಂಸ್ಕೃತಿಗಿಂತ ಹೆಚ್ಚಾಗಿ ಶೈವ, ವೀರಶೈವ ಮತ್ತು ವೈಷ್ಣವ ಮತಗಳಿಗೆ ಸಂಬಂಧಿಸಿದ ಚಿತ್ರಗಳು ಮಾತ್ರ ರಚನೆಗೊಂಡವು. ವೀರಶೈವ ತತ್ವಗಳನ್ನು ಪ್ರತಿಪಾದಿಸುವ ಉದ್ಧರಣಿ ಚಿತ್ರಗಳನ್ನು ಭಿತ್ತಿಯಲ್ಲಿ ಸಹ ರಚಿಸಿದ ಅಪರೂಪದ ಉದಾಹರಣೆಗಳಿವೆ.

೧೦. ವಿಜಯನಗರ ಸಾಮ್ರಾಜ್ಯವು ದಕ್ಷಿಣಭಾರತವನ್ನೆಲ್ಲಾ ಆವರಿಸಿದ್ದು ಆಯಾ ಸ್ಥಳೀಯ ಅಂಶಗಳೊಂದಿಗೆ ಕರ್ನಾಟಕ ಆಂಧ್ರಪ್ರದೇಶ ತಮಿಳುನಾಡುಗಳಲ್ಲಿ ಬೆಳೆದು ಬಂದಿವೆ. ವಿಜಯನಗರ ಚಿತ್ರಕಲೆಯು ರಾಷ್ಟ್ರಕೂಟರ ಮತ್ತು ಚೋಳರ ಚಿತ್ರಕಲೆಯ ತಾಂತ್ರಿಕ ಅಂಶಗಳೊಂದಿಗೆ ಧಾರ್ಮಿಕ ವಸ್ತುವಿಷಯಗಳೊಂದಿಗೆ ಶೈವ ಪ್ರಧಾನವಾದ ಚಿತ್ರಗಳಿಗೆ ವಿಶೇಷವಾದ ಸ್ಥಾನವನ್ನು ನೀಡಿವೆ.

೧೧. ಕರ್ನಾಟಕದ ಭಿತ್ತಿ ಚಿತ್ರಗಳಲ್ಲಿ ಪ್ರಮುಖವಾಗಿ ಎರಡು ಭಾಗಗಳನ್ನಾಗಿ ೧) ವಿಜಯನಗರದ ಅವಧಿಯ ಭಿತ್ತಿ ಚಿತ್ರಗಳು ೨) ವಿಜಯನಗರೋತ್ತರವಾದ ಭಿತ್ತಿ ಚಿತ್ರಗಳೆಂದು ಗುರುತಿಸಲಾಗಿದೆ.

೧೨. ಲೇಪಾಕ್ಷಿ, ಚಿದಂಬರಮ್, ಪೆನುಗೊಂಡ ಹೀಗೆ ಆಂಧ್ರ ಪ್ರದೇಶ, ತಮಿಳುನಾಡಿನ ಹಲವೆಡೆ ವಿಜಯನಗರದ ಅವಧಿಯ ಭಿತ್ತಿ ಚಿತ್ರಗಳು ರಚನೆಗೊಂಡರೆ ವಿಜಯನಗರೋತ್ತರವಾಗಿ ದಖ್ಖನ್ ಪ್ರಭಾವದೊಂದಿಗೆ ಉತ್ತರ ಕರ್ನಾಟಕದ ಅರಮನೆ, ವಾಡೆ, ದೇವಾಲಯ ಮಠಗಳಲ್ಲಿ ವಿಜಯನಗರ ಭಿತ್ತಿಚಿತ್ರಗಳು ರಚನೆಗೊಂಡಿವೆ. ದಕ್ಷಿಣ ಕರ್ನಾಟಕದ ದೇವಾಲಯ, ಮಠಗಳಲ್ಲಿಯ ಭಿತ್ತಿ ಚಿತ್ರಗಳಲ್ಲಿ ಮೈಸೂರಿನ ಚಿತ್ರಕಲೆಯ ಪ್ರಭಾವದೊಂದಿಗೆ ವಿಜಯನಗರ ಭಿತ್ತಿ ಚಿತ್ರಗಳು ರಚನೆಗೊಂಡಿವೆ. ಹೈದರಾಬಾದ ಕರ್ನಾಟಕದಲ್ಲಿ ವಿಜಯನಗರ ಚಿತ್ರಕಲೆಯೊಂದಿಗೆ ದಖ್ಖನ್ ಪ್ರಭಾವವೂ ಸೇರಿಕೊಂಡು ಸುರಪುರ ಶೈಲಿಯಾಗಿ ಹಸ್ತಪ್ರತಿ ಚಿತ್ರಗಳು, ಭಿತ್ತಿ ಚಿತ್ರಗಳು ರಚನೆಗೊಂಡಿರುವುದು ಗಮನಾರ್ಹ ಅಂಶವಾಗಿದೆ.

೧೩. ಹಸ್ತಪ್ರತಿಗಳಲ್ಲಿ "ಶಿವನಿಧಿ"ಯ ಶಿಷ್ಟ ಪರಂಪರೆಯ ಕಿರುರೂಪಚಿತ್ರಗಳು ಪ್ರಮಾಣಬದ್ಧವಾಗಿ ವರ್ಣಸಾಮರಸ್ಯದಿಂದ ಶೈವ ಪ್ರಧಾನವಾದ ಚಿತ್ರಗಳು ರಚನೆಗೊಂಡಿದ್ದರೆ "ವೃಷಭೇಂದ್ರ ವಿಳಾಸ"ದ ಜನಪದ ಶಿಷ್ಟ ಪರಂಪರೆಯ ಚಿತ್ರಗಳು ವಿಷಯಪ್ರಧಾನವಾಗಿ ಮೂಡಿಬಂದಿವೆ. "ಧಾರವಾಡದ ಚೆನ್ನಬಸವ ಪುರಾಣ"ದಲ್ಲಿ ಸಮಕಾಲೀನ ಅಂಶಗಳೊಂದಿಗೆ ಭಾರತೀಯ ಧಾರ್ಮಿಕ ವಿಷಯವಸ್ತುಗಳ ಸಂಗಮವೇ ಮೈದಳೆದು ನಿಂತರೆ ಇದೇ ಪುರಾಣವು ಗುಲಬುರ್ಗಾ ವಿಭಾಗದಲ್ಲಿ ಸಾಂಪ್ರದಾಯಿಕ ಕಿರುರೂಪಚಿತ್ರಗಳಾಗಿ ಸುರಪುರ ಶೈಲಿಯಲ್ಲಿ ಭಾರತೀಯ ಶೈಲಿ ತಂತ್ರ ವಸ್ತು ವಿಷಯಗಳಲ್ಲಿ ಮೈದಳೆದು ನಿಂತಿರುವುದು ಕಂಡುಬರುತ್ತದೆ.

೧೪. ವೀರಶೈವ ತತ್ವಗಳನ್ನು ಪ್ರತಿಪಾದಿಸುವ "ಉದ್ಧರಣಿ ಚಿತ್ರಗಳು" ನಾಡಿನ ನಾಲ್ಕೂ ದಿಕ್ಕುಗಳಲ್ಲಿ ಹರಡಿಕೊಂಡಿರುವುದನ್ನು ಸಂಗ್ರಹಿಸಿ ಅಧ್ಯಯನ ಮಾಡಿದ್ದು ಆಯಾ ಭಾಗದಲ್ಲಿ ರಚನೆಗೊಂಡ ಈ ಚಿತ್ರಗಳು ಸ್ಥಳೀಯ ಪ್ರಭಾವಗಳೊಂದಿಗೆ ತಾತ್ವಿಕ ಹಿನ್ನೆಲೆಯಲ್ಲಿ ಕಲಾವಿದರ ಪ್ರೌಢಿಮೆಯನ್ನು ಮೆರೆದ ಪ್ರೌಢ ಕಲಾಕೃತಿಗಳಾಗಿವೆ. ಇಲ್ಲಿಯ ವಸ್ತು ವಿಷಯಗಳು ಒಂದೇ ಆಗಿದ್ದರೂ ತಂತ್ರಗಳಲ್ಲಿ ಬಲಾವಣೆಗೊಂಡಿದ್ದು ಈ ಚಿತ್ರಗಳಿಗೆ ಯಾವುದೇ ವಿದೇಶಿ ಪ್ರಭಾವವಿಲ್ಲದೆ ದೇಶೀಯ ತಾತ್ವಿಕ ವೀರಶೈವದ ನೆಲಗಟ್ಟಿನ ಮೇಲೆ ರಚನೆಗೊಂಡ ಕಲಾಕೃತಿಗಳಾಗಿವೆ.

ಭಾರತೀಯರು ಬಹು ಮತ, ಪಂಥಗಳ ಆರಾಧಕರಾಗಿದ್ದು ಶೈವ, ವೀರಶೈವ, ಬೌದ್ಧ, ಜೈನ ವೈಷ್ಣವ, ಹೀಗೆ ಎಲ್ಲ ರೀತಿಯ ಪಂಥಗಳ ಕಲಾಕೃತಿಗಳನ್ನು ಚಿತ್ರಿಸುತ್ತ ಬಂದಿರುವ ಕಲಾವಿದರನ್ನು ಮತಗಳಿಗೆ ಪಂಥಗಳಿಗೆ (ಜಾತಿಪದ್ಧತಿಗಳಿಗೆ) ಸೀಮಿತಗೊಳಿಸುವುದು ಅಸಾಧ್ಯವಾದುದು. ಕಲೆ ಮತ್ತು ಕಲಾವಿದ ಎಲ್ಲ ಬಗೆಯ ಚಿತ್ರಗಳನ್ನು ರಚಿಸಿರುವನು. ಆಯಾ ಸಂದರ್ಭ ಸನ್ನಿವೇಶಗಳಲ್ಲಿರುವ ರಾಜಾಶ್ರಯದಲ್ಲಿ ರಾಜರು ಮಠಗಳಲ್ಲಿ ಮಠಾಧಿಪತಿಗಳು ಒಟ್ಟಾರೆ ಆಶ್ರಯದಾತರ ಅಭಿರುಚಿಗೆ ತಕ್ಕಂತೆ ೨೦ನೇ ಶತಮಾನದವರೆಗೂ ಚಿತ್ರ ರಚನೆ ನಡೆದುಬಂದಿದ್ದು, ಇತ್ತೀಚೆಗೆ ವೈಯಕ್ತಿಕವಾಗಿ ಜಾತೀಯತೆಯ ಗೊಂದಲದಲ್ಲಿ ನಾವಿದೇವೆಯೆ ಹೊರತು ಕಲೆ ಮತ್ತು ಕಲಾವಿದ ಆ ಸಂಕುಚಿತ ಭಾವನೆಯಿಂದ ಹೊರಗಿರುವುದು ಇತಿಹಾಸದುದ್ದಕ್ಕೂ ರಚನೆಗೊಂಡ ಕಲಾಕೃತಿಗಳೇ ಸಾರುತ್ತವೆ. ಇನ್ನೊಂದು ಪ್ರಮುಖ ಅಂಶವೆಂದರೆ ಈ ಕಲಾಕೃತಿಯ ಮೇಲೆ ಯಾವುದೇ ಕಲಾವಿದರು ಹೆಸರನ್ನು ಹಾಕಿಕೊಂಡಿಲ್ಲ. ಉದ್ದೇಶಪೂರ್ವಕವಾಗಿಯೋ, ಅನಿವಾರ್ಯವಾಗಿಯೋ ಕಲಾವಿದರು ಇತಿಹಾಸದುದ್ದಕ್ಕೂ ತಮ್ಮನ್ನು ಹೆಸರಿನಿಂದ ಗುರುತಿಸಿಕೊಂಡಿರುವುದು ಅಪರೂಪವಾಗಿದೆ. ಹೀಗೆ ಇತಿಹಾಸವನ್ನು ಹೇಳುತ್ತ ಬಂದ ಕಲಾಕೃತಿಗಳು ಇಂದಿನ ಸಂಶೋಧಕರಿಗೆ ಪ್ರಮುಖ ಆಕರಗಳಾಗಿವೆ. ಆದರೆ, ಕಲಾವಿದ ಮಾತ್ರ ಗೌಣವಾಗಿರುವನು. ಇಲ್ಲಿ ವೈಯಕ್ತಿಕ ಆಶೆ ಆಕಾಂಕ್ಷೆಗಳಿಗೆ ಸ್ವತಃ ಕಲಾವಿದನೇ ಒಳಪಟ್ಟಿಲ್ಲ. ಸಮೂಹದ ಆಶೆ ಆಕಾಂಕ್ಷೆಗಳನ್ನು ಧಾರ್ಮಿಕ, ರಾಜಕೀಯ, ಸಾಮಾಜಿಕ ಹಿನ್ನೆಲೆಗಳಲ್ಲಿ ಚಿತ್ರಗಳು ರಚನೆಗೊಂಡಿವೆ. ಇದರಿಂದಾಗಿಯೇ ಕಲಾಕೃತಿಗಳು ಮತ್ತು ಕಲಾವಿದರು ಮೇಲ್ಮಟ್ಟದಲ್ಲಿ ನಿಂತಿರುವುದು ಚಾರಿತ್ರಿಕ ಹಾಗೂ ಐತಿಹಾಸಿಕ ಹಿನ್ನೆಲೆಗಳಿಂದ ತಿಳಿದುಬರುತ್ತದೆ.

ನಂತರದ ದಿನಗಳಲ್ಲಿ ಕಲಾಕೃತಿಗಳ ಮೇಲೆ ಕಲಾವಿದನ ಹೆಸರು ಸೇರ್ಪಡೆಗೊಂಡಿತು. ಹಾಗೂ ಕಲಾಕೃತಿಗಳೊಂದಿಗೆ ಕಲಾವಿದನು ಪ್ರಮುಖವಾಗುತ್ತ ಸಾಗಿದನು. ಈ ಹಿನ್ನೆಲೆಯಲ್ಲಿ ವೀರಶೈವ ಪರಂಪರೆಯ ಚಿತ್ರಗಳನ್ನು ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಅವಧಿಯಲ್ಲಿ ರಚನೆಗೊಂಡ ಸಚಿತ್ರ ಹಸ್ತಪ್ರತಿ ಶ್ರೀ ತತ್ವನಿಧಿಯ ಮೂರನೇ ಸಂಪುಟ "ಶಿವನಿಧಿ" ಗೆ ಚಿತ್ರ ರಚಿಸಿದ ಕಲಾವಿದರಲ್ಲಿ ಶಿಕಾರಿಪುರದ ತಿಪ್ಪಾಜಪ್ಪನವರು ಮತ್ತು ವಿರೂಪಾಕ್ಷ ಪಂಡಿತನು ಬರೆದ "ಚೆನ್ನಬಸವ ಪುರಾಣ" ಕ್ಕೆ ಚಿತ್ರ ಬರೆದ ಕಲಾವಿದರಲ್ಲಿ ಅಥಣಿಯ ಶ್ರೀ ಎಂ.ಎ.ಚೆಟ್ಟಿ ಅವರು ಹಾಗೂ ವೀರಶೈವ ತತ್ವಗಳನ್ನು ಪ್ರತಿಪಾದಿಸುವ "ಉದ್ಧರಣಿ ಪಟ ಚಿತ್ರಗಳನ್ನು ಭಿತ್ತಿಚಿತ್ರಗಳಾಗಿ ಹೊಸರೂಪ ನೀಡಿದ" ಗುಲಬುರ್ಗಾದ ಶ್ರೀ ವಿಜಯ್ ಹಾಗರಗುಂಡಗಿ ಅವರು ಪ್ರಮುಖರಾಗಿದ್ದು, ಅವರ ಕಲಾಕೃತಿಗಳ ಒಟ್ಟು ಅಧ್ಯಯನದಿಂದ ತಿಳಿದುಬರುತ್ತದೆ.

# ಅನುಬಂಧ

## ಶ್ರೀ ಗುರು ಬಸವಲಿಂಗಾಯ ನಮಃ

## ಚಿದೈಶ್ವರ್ಯ ಚಿದಾಭರಣವೆಂಬ

## ಶಿವಾನುಭವ ಶಾಸ್ತ್ರವು

**ಅನಾದಿ ಭಕ್ತೋದ್ಧರಣೆ**

ಶ್ರೀ ವೀರಶೈವ ಸಿದ್ಧಾಂತ ಸ್ಥಾಪನಾಚಾರ್ಯರಪ್ಪಾದ್ಯರ ಅನುಮತದಿಂದುದ್ಧರಿಸಿದ, ಕುಟಿಲ ಕುಹಕ ಯಂತ್ರ ತಂತ್ರಗಳಲ್ಲದ, ಶಿವಜ್ಞಾನ ಸಾಧನವಪ್ಪ, ಶಿವಮಂತ್ರನ್ಯಾಸ ಶಿವತತ್ವ ಸ್ಥಾಪಿತ ಶಿವಲಿಂಗಾಂಗ ಸಂಬಂಧ ಪ್ರತಿಪಾದಕಾಗಮ ಗ್ರಂಥಾರ್ಥವಾಚ್ಯಂಗಳಿಂ, ಕೆಲವು ವಚನಂಗಳಿಂ ಸಂಗ್ರಹಿಸಿದ ಉದ್ಧರಣೆಯ ಪಟಲವಿದು. ಶಿವಲಿಂಗಾಂಕಿತ ಶಾಸನವೆಂದು ಶಿವಶರಣರವಧರಿಪುದು.

ಪ್ರಥಮದಲ್ಲಿ ಅನಾದಿ ಭಕ್ತೋದ್ಧರಣೆಯ ಸಂಬಂಧ : ಸರ್ವಶೂನ್ಯ ನಿರಾಲಂಬ ವಸ್ತುವಿನ ಚಿನ್ನಾದಚಿದ್ಬಿಂದು ಸ್ವರೂಪವಾದ ಗುರುಲಿಂಗಜಂಗಮ ಪ್ರಸಾದ ಪಾದೋದಕ ಗರ್ಭೀಕರಿಸಿಕೊಂಡಿರ್ಪ ಚಿತ್ಕಲಾ ಸ್ವರೂಪವಾದ ಅನಾದಿಭಕ್ತನ ನಿಲುವೆಂತೆಂದೊಡೆ: ಸತ್ತು ಚಿತ್ತು ಆನಂದನಿತ್ಯಪರಿಪೂರ್ಣ ಅಖಂಡ ಬ್ರಹ್ಮಸ್ವರೂಪಮಪ್ಪ, ಗುರುಲಿಂಗಜಂಗಮ ಪ್ರಸಾದಪಾದೋದಕ ಭಕ್ತಿಗಳೆಂಬ ಷಡ್ವ್ರತಾಚಾರವು, ಆಚಾರ, ನಿಷ್ಠೆ, ಜ್ಞಾನ, ಅನುಭವ, ಸಮರಸ, ಸಾವಧಾನವಳವಟ್ಟು ಸರ್ವಾಂಗದಲ್ಲಿ ಸಾಹಿತ್ಯಮಾಗಿ, ಬಳಿಕ ಅಷ್ಟಾವರಣದಿಂದಲಂಕೃತಮಾಗಿರ್ಪ ಅನಾದಿಭಕ್ತನ ಅಂಗಸಂಬಂಧವನುದ್ಧರಿಸುವ ಕ್ರಮವೆಂತೆಂದೊಡೆ: ಆವುದಾನೊಂದು ಶೈವವಾದ ಪಟಮಧ್ಯದಲ್ಲಿ ಒಂದಂಗಲ ಪ್ರಮಾಣದ ಚೌಕಮಂ ಬರೆದು, ಬಳಿಕದರ ನಟ್ಟ ನಡು ಮಧ್ಯವೇ ಊರ್ಧ್ವ ಭಾಗವೆನಿಸುವುದರಲ್ಲಿ ಹಕಾರ ಪ್ರಣವವನು, ಪರಮ ತೇಜೋರಾಶಿಯೆನಿಪ ಪರವಸ್ತು ಸ್ವರೂಪವೆಂದು ಬರೆದು, ಅದರ ವಾಮಭಾಗದಲ್ಲಿ ಅಕಾರವ, ಪೂರ್ವಭಾಗದಲ್ಲಿ ಉಕಾರವ, ಪಶ್ಚಿಮಭಾಗದಲ್ಲಿ ವಕಾರವ, ದಕ್ಷಿಣಭಾಗದಲ್ಲಿ ಓಂಕಾರವನಾದೊಡೆ, ಚಿನ್ನಾದಿ ಚಿದ್ಬಿಂದು ಕಲಾ ತೇಜೋಮಯವಪ್ಪ ಚಿತ್ಪ್ರಾಣ ಚಿದಂಗ ಚಿತ್‌ಶಕ್ತಿ ಚಿದಾಕಾಶ ಸ್ವರೂಪವೆಂಬ ಭಾವನೆಯಿಂ ಬರೆಯಲದು ಸೂಕ್ಷ್ಮಕರ್ಣಿಕಾವರಣಕಾರಣತನು ಸಂಬಂಧವೆನಿಸಿತ್ತು : ಬಳಿಕ ಚೌಕಮಂ ಬಳಸಿ ಅರ್ಧಂಗುಲ ಪ್ರಮಾಣವ ಹೆಚ್ಚಿಸಿ ಮತ್ತೊಂದು ಚೌಕಮಂ ಬರೆದು, ಮಧ್ಯದ ನೀಳರೇಖೆಗಳೆರಡರ ಪೂರ್ವಾಪರದ ಉದಿಗಳುನ್ನತಮಂ ಮಾಡಲು, ಸಮವಿಷಮದ ಮನೆಗಳು ನಾಲ್ಕುಪುಟ್ಟುವವವರೊಳು ಪೂರ್ವದಿಕ್ಕಿನ ಮನೆಯಲ್ಲಿ ಬಸವಾಕ್ಷರವ ಆತ್ಮತ್ರಯ ಲಿಂಗತ್ರಯ ಸ್ವರೂಪವೆಂದು, ಪಶ್ಚಿಮ ದಿಕ್ಕಿನ ಮನೆಯಲ್ಲಿ ಅ ಉ ಮಾಕ್ಷರವ ತನುತ್ರಯ ಅಂಗತ್ರಯ ಸ್ವರೂಪವೆಂದು ವಿಮುಖವಾಗಿ ಬರೆವುದು. ದಕ್ಷಿಣದಿಕ್ಕಿನ ಮನೆಯಲ್ಲಿ ಒಂದರಿಂದೊಂದು ಊರ್ಧ್ವಮುಖವಾಗಿ ಷಟ್ಪ್ರಸಾದ ಪ್ರಣವಂಗಳಂ ಷಟ್ಕರಣ ಷಟ್ಸಾದಾಖ್ಯಲಿಂಗ ಸ್ವರೂಪವೆಂದು, ಉತ್ತರ ದಿಕ್ಕಿನ ಮನೆಯಲ್ಲಿ ಒಂದರಿಂದೊಂದು ಅಧೋಮುಖವಾಗಿ ಷಡ್ವಿಧ ಮೂಲಪ್ರಣವಂಗಳಂ ಷಟ್ತತ್ವ ಷಡ್ವಿಧ ಚದಿಂಗ ಸ್ವರೂಪವೆಂದೂ ಬರೆಯಲದು ಹೃದಯಾಂತಸ್ಥವಾದ ಕರ್ಣಿಕಾವರಣ ಸೂಕ್ಷ್ಮತನುಸಂಬಂಧೆನಿಸುವುದು. ಬಳಿಕ ಚೌಕದ ಅಷ್ಟ ದಿಕ್ಕುಗಳಲ್ಲಿ ಮಧ್ಯ ಚೌಕದ ಪ್ರಮಾಣದ ಮನೆಗಳು ನಾಲ್ಕು ನಾಲ್ಕಾಗಿ ಮೂವತ್ತೆರಡು ಮನೆಗಳು. ಪೂರ್ವಾಪರದ ಮನೆಗಳೆರಡರ ಮೇಲೆರಡೆರಡು ಮನೆಗಳಲ್ಲಿ ಕ್ರಮದಿಂ ನ ಮ ಶ್ಶಿ ವಾ ಯ ಓಂ ಎಂಬ ನಕಾರಾದಿ ಷಡಕ್ಷರಂಗಳಂ ಬರೆದವರಲ್ಲಿ ಅಖಂಡತ್ವವೇ ಭಕ್ತ, ಪರಿಪೂರ್ಣತ್ವವೇ ಗುರು, ನಿತ್ಯತ್ವವೇ ಲಿಂಗ, ಚಿತ್ಪ್ರಕಾರವೇ ಜಂಗಮ, ಪರಮಾನಂದವೇ ಪ್ರಸಾದ, ಚಿದ್ರಸವೇ ಪಾದೋದಕ, ಎಂಬೀ ಷಡ್ವಿಧ ಭಕ್ತ ಲಕ್ಷಣಗಳಂ ಸಂಬಂಧಿಸುವುದು. ಅವರ ಕೆಳಗಣ ಷಡ್ವಿಧ ಭವನಂಗಳಲ್ಲಿ

ಮ ಶಿ ವಾ ಯ ಓಂ ನ ಎಂಬ ಮಕಾರಾದಿ ಷಡಕ್ಷರಂಗಳಂ ಬರೆದವರಲ್ಲಿ ಪರಿಪೂರ್ಣತ್ವವೇ ಗುರು, ನಿತ್ಯತ್ವವೇ ಲಿಂಗ, ಚಿತ್ಪ್ರಕಾಶವೇ ಜಂಗಮ, ಪರಮಾನಂದವೇ ಪ್ರಸಾದ, ಚಿದ್ರಸವೇ ಪಾದೋದಕ, ಅಖಂಡತ್ವವೇ ಭಕ್ತನೆಂಬೀಷಡ್ವಿಧ ಗುರುಲಕ್ಷಣಗಳಂ ಸಂಬಂಧಿಸುವುದು. ಬಳಿಕ ಇದರಿಂದುಳಿದ ಮನೆಗಳಲ್ಲಿ ಶಿ ಮ ವಾ ಯ ಓಂ ನ ಎಂಬ ಶಿಕಾರಾದಿ ಷಡಕ್ಷರಂಗಳಂ ಬರೆದವರಲ್ಲಿ ನಿತ್ಯತ್ವವೇ ಲಿಂಗ, ಪರಿಪೂರ್ಣತ್ವವೇ ಗುರು, ಚಿತ್ಪ್ರಕಾಶವೇ ಜಂಗಮ, ಪರಮಾನಂದವೇ ಪ್ರಸಾದ, ಚಿದ್ರಸವೇ ಪಾದೋದಕ, ಅಖಂಡತ್ವವೇ ಭಕ್ತನೆಂಬೀ ಷಡ್ವಿಧ ಲಿಂಗ ಲಕ್ಷಣಂಗಳಂ ಸಂಬಂಧಿಸುವುದು. ಬಳಿಕದರಿಂದುಳಿದ ಮನೆಗಳಲ್ಲಿ ವಾ ಮ ಶಿ ಯ ಓಂ ನ ಎಂಬ ವಕಾರಾದಿ ಷಡಕ್ಷರಂಗಳಂ ಬರೆದವರಲ್ಲಿ ಚಿತ್ಪ್ರಕಾಶವೇ ಜಂಗಮ, ಪರಿಪೂರ್ಣತ್ವವೇ ಗುರು, ನಿತ್ಯತ್ವವೇ ಲಿಂಗ, ಪರಮಾನಂದವೇ ಪ್ರಸಾದ, ಚಿದ್ರಸವೇ ಪಾದೋದಕ, ಅಖಂಡತ್ವವೇ ಭಕ್ತನೆಂಬೀ ಷಡ್ವಿಧ ಲಿಂಗ ಲಕ್ಷಣಂಗಳಂ ಸಂಬಂಧಿಸುವುದು. ಯ ಮ ಶಿವಾ ಓಂ ನ ಎಂಬ ಯಕಾರ ಷಡಕ್ಷರಂಗಳಂ ಬರೆದವರಲ್ಲಿ ಪರಮಾನಂದವೇ ಪ್ರಸಾದ, ಪರಿಪೂರ್ಣತ್ವವೇ ಗುರು, ನಿತ್ಯತ್ವವೇ ಲಿಂಗ, ಚಿತ್ಪ್ರಕಾಶವೇ ಜಂಗಮ, ಚಿದ್ರಸವೇ ಪಾದೋದಕ, ಅಖಂಡತ್ವವೇ ಭಕ್ತನೆಂಬೀ ಷಡ್ವಿಧ ಶೇಷಲಕ್ಷಣಗಳಂ ಸಂಬಂಧಿಸುವುದು. ಓಂ ಮ ಶಿ ವಾ ಯ ನ ಎಂಬ ಓಂಕಾರ ಷಡಕ್ಷರಂಗಳಂ ಬರೆದವರಲ್ಲಿ ಚಿದ್ರಸವೇ ಪಾದೋದಕ, ಪರಿಪೂರ್ಣತ್ವವೇ ಗುರು, ನಿತ್ಯತ್ವವೇ ಲಿಂಗ, ಚಿತ್ಪ್ರಕಾಶವೇ ಜಂಗಮ, ಪರಮಾನಂದವೇ ಪ್ರಸಾದ, ಅಖಂಡತ್ವವೇ ಭಕ್ತನೆಂಬೀ ಷಡ್ವಿಧ ತೀರ್ಥಲಕ್ಷಣಂಗಳಂ ಸಂಬಂಧಿಸುವುದು. ಬಳಿಕೀಪ್ರಕಾರದಿಂ ಮೂವತ್ತಾರಂಗ, ಮೂವತ್ತಾರು ಲಿಂಗ, ಮೂವತ್ತಾರು ಭಕ್ತಿಗಳಂ ಸಂಬಂಧಿಸಲು, ಷಟ್ತ್ರಿಂಶನ್ಮಂತ್ರಾಚಾರ ಲಿಂಗಾಂಗ ಸಂಬಂಧ ಸ್ವರೂಪದಿಂ ಸ್ಥೂಲತನು ಸಂಬಂಧವೆನಿಸುವುದು. ಇನ್ನು ದಕ್ಷಿಣೋತ್ತರದ ಮನೆಗಳೆರಡರ ಮೇಲೆರಡೆರಡು ಮನೆಗಳು ಪುಟ್ಟಲು ದ್ವಾದಶಾಕೃತಿಯಾಗಿರ್ಪುವವರ ಮೂಲೆಮೂಲೆಗಳ ತುದಿಯಲ್ಲಿ ದ್ವಾದಶ ದಳಂಗಳಂ ಬರೆದು, ಈಶಾನ್ಯದಳದಲ್ಲಿ ನಕಾರವ ಅಲ್ಲಿ ಗುರುವು, ಅಗ್ನಿದಳದಲ್ಲಿ ಮಕಾರವ ಅಲ್ಲಿ ಲಿಂಗವು, ದಕ್ಷಿಣದ ಮನೆಗಳೆರಡರಲ್ಲಿ ಶಿಕಾರ ವಕಾರಗಳಲ್ಲಿ ಜಂಗಮವು ಪ್ರಸಾದವು, ನೈಋತ್ಯ ದಳದಲ್ಲಿ ಯಕಾರವ, ಅಲ್ಲಿ ಪಾದೋದಕವು, ವಾಯುವ್ಯ ದಳದಲ್ಲಿ ಅಕಾರವ ಅಲ್ಲಿ ವಿಭೂತಿಯು, ಉತ್ತರದ ಮನೆಗಳೆರಡರಲ್ಲಿ ಉಕಾರ ಮಕಾರಗಳ ಬರೆದವರಲ್ಲಿ ರುದ್ರಾಕ್ಷಿ ಪಂಚಾಕ್ಷರಿಯ ಸಂಬಂಧಿಸಲು, ಇವು ಅಷ್ಟಾವರಣವೆನಿಸಿರ್ಪವು. ಇನ್ನು ಈಶಾನ್ಯ ದಳದ ಮುಂದಣ ದಳವಾದಿಯಾಗಿ ಉಳಿದ ಶೂನ್ಯದಳವೆಂಟರಲ್ಲಿ ಪರಿವಿಡಿಯಿಂದೆಂಟು ತೆರನಾದ ಲಿಂಗಾಂಗ ಮಂತ್ರಾಂಗ ಶಿವಾಂಗ ಶಕ್ತ್ಯಂಗ ಬ್ರಹ್ಮಾಂಗ ಜ್ಞಾನಾಂಗ ಪದಾರ್ಥಾಂಗ ಪ್ರಸಾದಾಂಗಂಗಳಂ ಸಂಬಂಧಿಸಲು, ಇಂತು ಸರ್ವಾಚಾರ ಸಂಪತ್ತು ಜ್ಞಾನ ಕ್ರಿಯಾಭೇದದಿಂ ಇಷ್ಟ ಪ್ರಾಣಸಂಯುಕ್ತವಹ ದೃಗ್ದೃಶ್ಯಾಂಗ ಸಂಬಂಧವಾಗಿಹವು. ಮತ್ತಂ ಪಶ್ಚಿಮದಳದಲ್ಲಿ ನಿರಂಜನಲಿಂಗ, ಶಿಖಿಯಲ್ಲಿ ಶೂನ್ಯಲಿಂಗ ಬ್ರಹ್ಮರಂಧ್ರದಲ್ಲಿ ಚಿದಂಬರ, ಭ್ರೂಮಧ್ಯದಲ್ಲಿ ಶಿವಶಕ್ತಿ, ವಿಶುದ್ಧಿಯಲ್ಲಿ ಪಂಚಶಕ್ತಿ, ಪಂಚಕಲೆ, ಪಂಚಮುಖ, ಪಂಚಸದಾಯ, ಪಂಚನಾದ, ಪಂಚಮೂರ್ತಿ, ಅನಾಹತದಲ್ಲಿ ಈಶ್ವರಾಷ್ಟಕ, ಮಣಿಪೂರಕದಲ್ಲಿ ಮಹೇಶ್ವರ ಪಂಚವಿಂಶತಿ, ಸ್ವಾಧಿಷ್ಠಾನದಲ್ಲಿ ರುದ್ರರೇಕಾದಶ, ಆಧಾರದಲ್ಲಿ ತ್ರಯಾವಯವ, ಹಿರಣ್ಯಗರ್ಭ ವಿರಣ್ಮೂರ್ತಿ ಸ್ವಾಯತವಾಗಿಹವು. ಮತ್ತಂ.

**ಸೃಷ್ಟಿ ಕ್ರಮ**

ನಾಭ್ಯಂತರದಲ್ಲಿ ಚಿದಾಕಾಶದಲ್ಲಿ, ಚಿದ್ವಾಯುವದರೊಳು ಚಿದಗ್ನಿಯದರಿಂ ಚಿಜ್ಜಲವಲ್ಲಿ ಚಿದ್ಭೂಮಿಯುದಯಿಸಿ ಸಕಲತತ್ವ ಜನನ ಸ್ಥಿತಿಕಾರಣವಾಗಿರ್ಪವು. ಇಂತು ಅನಾದಿ ಭಕ್ತೋದ್ಧರಣೆಯ ಸಂಬಂಧ ಸಮಾಪ್ತ. ಮಂಗಳಮಹಾ. ಮಂಗಳಮಸ್ತು ; ಶ್ರೀ ಶ್ರೀ ಶ್ರೀ ಶ್ರೀ ಶ್ರೀ ॥ ಶ್ರೀಗುರು ಬಸವಲಿಂಗಾಯ ನಮಃ ॥

### ೨. ಇನ್ನು ಜ್ಞಾನ ಅಷ್ಟಾವರಣೋದ್ಧರಣೆಯ ವಾಚ್ಯವು

ಹೀಗೆ ಸಗುಣ ನಿರ್ಗುಣ ಸ್ವಭಾವ ಚಾರಿತ್ರವನುಳ್ಳ ಅನಾದಿ ಭಕ್ತನ ಅಂಗದಲ್ಲಿ ಅಲಂಕೃತಮಾಗಿ ತೋರುವ ಅಷ್ಟಾವರಣದ ಜ್ಞಾನ, ಸಾಧನ, ಸಂಪತ್ತು ಉದ್ಧರಿಸುವ ಭೇದವೆಂತೆಂದೊಡೆ:– ಚಕ್ರಾಕೃತಿಯಾಗಿ ತಿರುಹಿ, ಅದರ ಮಧ್ಯದಲ್ಲಿ ಕರ್ಣಿಕಾವರಣಮಂ ಬಳಸಿ, ಚತುರ್ವಿಧ ಸ್ಥಾನಭೇದಮಾಗಿರ್ಪ ಅಷ್ಟದಳಂಗಳಂ ಬರೆದವರಲ್ಲಿ ಪೂರ್ವದಳ ಮೊದಲುಗೊಂಡು ತ್ರಿವಿಧ ತ್ರಿವಿಧ ದರ್ಶನ ಭೇದವನೊಳಕೊಂಡಿರ್ಪ ಅಷ್ಟಾವರಣಮನುದ್ಧರಿಸಿ, ಏಕೈಕಾವರಣ ತಂತ್ರವಿಧಾನದಿಂ ಸಂಬಂಧಿಸುವ ಭೇದವೆಂತೆಂದೊಡೆ :– ಶ್ರೀ ಗುರುವಿನ ಪಾದವೆ ಅವಿರಳಘನಲಿಂಗ, ಮೂರ್ತಿಯೇ ಆರ್ಯನು, ತತ್ವಸಂಬಂಧವಾದ ಸುಜ್ಞಾನವೇ ಚರಮೂರ್ತಿ, ಶಿವಲಿಂಗದ ಪೀಠವೇ ಗುರು, ಗೋಮುಖವೇ ಚರಮೂರ್ತಿ, ಗೋಳಕವೇ ಶಿವಲಿಂಗ, ಜಂಗಮದ ಶ್ರೀಪಾದವೇ ಅವಿರಳ ಘನಲಿಂಗ, ತನ್ಮೂರ್ತಿಯೇ ಚರಮೂರ್ತಿ, ತತ್ಸಂಬಂಧಸುಜ್ಞಾನವೇ ಶ್ರೀದೇಶಿಕ, ಶೇಷಸ್ವರೂಪವೇ ಮಹಾಘನಲಿಂಗ, ತದ್ರುಚಿಯೇ ಚರಮೂರ್ತಿ, ಪರಿಣಾಮವೇ ಶ್ರೀಗುರು, ಪಾದೋದಕರೂಪೇ ಶ್ರೀಗುರು, ತಚ್ಛಿದ್ರವೇ ಶಿವಲಿಂಗ, ಶಿವನ ಮುಖದಾನಂದವೇ ಚರಮೂರ್ತಿ, ಭಸ್ಮಸ್ವಯವೇ ಶಿವಲಿಂಗ, ತದ್ಗತ ಮಂತ್ರವೇ ಚರಮೂರ್ತಿ, ದ್ವಂದ್ವಗ್ರಸ್ತ ಚೈತನ್ಯವೇ ಶ್ರೀಗುರು, ಅಕ್ಷರಮೂಲವೇ ಶ್ರೀಗುರು, ತನ್ನಾಳವೇ ಶಿವಲಿಂಗ, ತನ್ಮುಖವೇ ಚರಮೂರ್ತಿ, ನಮಃ ವರ್ಣವೇ ಶಿವಲಿಂಗ, ಶಿವಾಕ್ಷರವೇ ಚರಮೂರ್ತಿ, ಆ ಯಕಾರವೇ ಶ್ರೀಗುರು.

ಇನ್ನು ತತ್ಪೂರ್ವ ಸಂಬಂಧವನೆ ನಾಮಾಕ್ಷರದಲ್ಲಿ ಸಂಬಂಧಿಸಲ್ಪಟ್ಟುದದೆಂತೆಂದೊಡೆ:– ಗುಕಾರವೇ ಚರ, ರುಕಾರವೇ ಲಿಂಗ, ದ್ವಂದ್ವೀಕರಿಸಿದ ಜ್ಞಾನವೇ ಗುರು; ಲಿಕಾರವೇ ಗುರು, ಬಿಂದುವೇ ಲಿಂಗ, ಗಕಾರವೇ ಚರ; ಜಕಾರವೇ ಗುರು, ಗಕಾರವೇ ಲಿಂಗ, ಮಕಾರವೇ ಚರ; ಪ್ರಕಾರವೇ ಚರ, ಸಾಕಾರವೇ ಲಿಂಗ, ದಕಾರವೇ ಗುರು; ಪಕಾರ ದಕಾರವೇ ಗುರು, ಉಕಾರ ದಕಾರ ಕಕಾರವೇ ಲಿಂಗ, ಉಭಯ ಸಂಬಂಧವೇ ಚರ; ವೀಯೆಂಬಕ್ಷರವೇ ಲಿಂಗ, ಭೂಯೆಂಬಕ್ಷರವೇ ಚರ, ತಿಯೆಂಬಕ್ಷರವೇ ಗುರು; ರುಕಾರವೇ ಜಂಗಮ, ದ್ರಾಕಾರವೇ ಗುರು, ಕ್ಷಕಾರವೇ ಲಿಂಗ, ಮಕಾರವೇ ಲಿಂಗ, ಬಿಂದುವೇ ಚರ, ತ್ರಕಾರವೇ ಗುರು.

ಮತ್ತಂ ಶಕ್ತಿರೂಪು ಶಿವರೂಪಾದಕಾರಣ ಗುರುಶಬ್ದಕ್ಕೆ ನಿರ್ವಚನ; ಲಯಸ್ಥಿತಿ ಸೃಷ್ಟಿಕಾರಣವಾದುದಾಗಿ ಲಿಂಗಶಬ್ದಕ್ಕೆ ನಿರ್ವಚನ; ತ್ರೈಮೂರ್ತಿ ಸ್ವರೂಪಾದ ಕಾರಣ ಚರಶಬ್ದಕ್ಕೆ ನಿರ್ವಚನ; ಪ್ರಸಾದ ಭಕ್ತಿ ಮುಕ್ತಿ ಸ್ವರೂಪಾದಕಾರಣ ಶೇಷಶಬ್ದಕ್ಕೆ ನಿರ್ವಚನ; ಸುಜ್ಞಾನ, ದೋಷನಾಶನ ಜನ್ಮದಹನ ಕರ್ಮಚ್ಛೇದನದಿಂದುದಕಶಬ್ದಕ್ಕೆ ನಿರ್ವಚನ; ಶಕ್ತಿರೂಪು ತೇಜೋರೂಪು ಶಿವರೂಪಿನಿಂ ಭೂತಿಶಬ್ದಕ್ಕೆ ನಿರ್ವಚನ; ಬಿಂದುಕಳಾನಾದ ಶಿವ ಯೆಂಬೀ ಚತುರ್ವಿಧ ಧಾತುಶಬ್ದದಿಂ ರುದ್ರಾಕ್ಷಿಶಬ್ದಕ್ಕೆ ನಿರ್ವಚನ;ಚಿತ್ಕಳಾ ಮೂಲಪ್ರಕಾಶ ಸುನಾದ ಸುಜ್ಞಾನದಿಂ ಮಂತ್ರಶಬ್ದಕ್ಕೆ ನಿರ್ವಚನ; ಗುರುವೇ ಇಷ್ಟ, ಲಿಂಗವಾ ಪ್ರಾಣ, ಜಂಗಮವೇ ಭಾವ, ಪ್ರಸಾದವೇ ಚಿತ್ಕಾಯ, ಪಾದೋದಕವೇ ಶರಣ, ವಿಭೂತಿಯೇ ಅಂತರಂಗದ ಚಿತ್ಪ್ರಕಾಶ, ರುದ್ರಾಕ್ಷಿಯೇ ಚತುರ್ದಶೇಂದ್ರಿಯಂಗಳು, ಮಂತ್ರವೇ ಷಟ್ಪ್ರಕಾರವಾದ ತತ್ವಕರಣಂಗಳು.

### ಮುಂದೆ ಲಿಂಗಾರ್ಚನ ಕ್ರಮ

ಇಷ್ಟಲಿಂಗವೇ ಕ್ಷಕಾರ ಸ್ವರೂಪ, ಪ್ರಾಣಲಿಂಗವೇ ಓಂಕಾರ ಸ್ವರೂಪ, ಭಾವಲಿಂಗವೇ ಹ್ರಾಂಕಾರ ಸ್ವರೂಪ; ಮತ್ತಂ ಇಷ್ಟಲಿಂಗದ ಪೀಠವೇ ಇಷ್ಟಲಿಂಗ, ಗೋಮುಖವೇ ಪ್ರಾಣಲಿಂಗ, ಗೋಳಕವೇ ಭಾವಲಿಂಗ; ತಾರೆದಂಡೆಗಳೆರಡು ಇಷ್ಟಲಿಂಗ, ಕುಂಡಲಾಕೃತಿ ಅರ್ಧಚಂದ್ರಾಕೃತಿಗಳೆರಡು ಪ್ರಾಣಲಿಂಗ, ದರ್ಪಣಾಕೃತಿ ಜ್ಯೋತಿರಾಕೃತಿಗಳೆರಡು ಭಾವಲಿಂಗ; ಆಕಾರ ಬಿಂದುಗಳೆರಡು ಇಷ್ಟಲಿಂಗ ಮಂತ್ರಶೃಂಗಾಗ್ನಿಗಳೆರಡು ಬೀಜಂಗಳು ಪ್ರಾಣಲಿಂಗ, ದೀರ್ಘವೊಂದೆ ಭಾವಲಿಂಗ;

ಇಂತೀತ್ರಿವಿಧ ಪ್ರಕಾರದಲ್ಲಿ ಕರ ಮನ ಭಾವಸ್ಥಲದಲ್ಲಿ ಸಂಬಂಧಿಸಿ ತ್ರಿವಿಧವೊಂದೆಯೆಂದರಿದು ಮಾಡುವ ಪೂಜಾವಿಧಾನವೆಂತೆಂದೊಡೆ, ವಿಭೂತಿ ರುದ್ರಾಕ್ಷಿ ಧಾರಣಾಲಂಕಾರವೇ ಇಷ್ಟಲಿಂಗದ ಪೂಜೆ, ಪೂಜಾವಿಧಾನವೇ ಇಷ್ಟಲಿಂಗದಲ್ಲಿ ನ್ಯಸ್ತವಾದ ಪ್ರಾಣಲಿಂಗದ ಪೂಜೆ, ಶ್ರದ್ಧಾಭಕ್ತಿಯೆ ಇಷ್ಟಲಿಂಗದಲ್ಲಿ ನ್ಯಸ್ತವಾದ ಭಾವಲಿಂಗದ ಪೂಜೆ, ಬಹುಪೂಜಾಕ್ರಮವನಂತರಂಗದಲ್ಲಿ ಅಳವಡಿಸಿಮಾಡುವುದೆ ಪ್ರಾಣಲಿಂಗದ ಪೂಜೆ, ಮಾನಸಮಂತ್ರೋಚ್ಚರಣವೇ ಪ್ರಾಣಲಿಂಗದಲ್ಲಿ ನೆಲಸಿದ ಇಷ್ಟಲಿಂಗದ ಪೂಜೆ, ಧ್ಯಾನಾರೂಢವೆ ಪ್ರಾಣಲಿಂಗದ ಸಂಬಂಧವಾದ ಭಾವಲಿಂಗದ ಪೂಜೆ, ಮನೋಲಯವೆ ಭಾವಲಿಂಗದ ಪೂಜೆ, ಸುಜ್ಞಾನವೆ ಭಾವಲಿಂಗದೊಳಗಣ ಇಷ್ಟಲಿಂಗದ ಪೂಜೆ, ಪರಿಣಾಮವೆ ಭಾವಲಿಂಗದಲ್ಲಿ ಕೂಡಿದ ಪ್ರಾಣಲಿಂಗದ ಪೂಜೆ, ಮತ್ತಂ ಅಷ್ಟಾವರಣವ ಧರಿಸಿದ ಭಕ್ತನು ಭಕ್ತಿ ಭಾವ ಭರಿತನಾದ ಕಾರಣ ಭಕ್ತನೆನಿಸಿಕೊಂಡ ಬಳಿಕ ಭಕ್ತಯೆಂಬ ತ್ರ್ಯಕ್ಷರಕ್ಕೆ ನಿರ್ವಚನ; ಶ್ರದ್ಧೆ ವಿಶ್ವಾಸದಿಂ ಭಕಾರವಾಯಿತು. ನಿರ್ವಂಚಕತ್ವದಿಂ ಕಕಾರವಾಯಿತು, ದೃಢನಿಷ್ಠೆಯಿಂ ತಯೆಂಬಕ್ಷರವಾಯಿತು. ಇಂತಪ್ಪಸ್ವರೂಪದರಿವನುಳ್ಳಾತನಾದ ಕಾರಣ ಜ್ಞಾನಿಯೆನಿಸಿಕೊಂಡನು. ಆ ಜ್ಞಾನಶಬ್ದಕ್ಕೆ ನಿರ್ವಚನ; ಶಿವತತ್ವ ವರ್ಧನವ ಮಾಡುವುದರಿಂ ಜ್ಞಾಕಾರವಾಯಿತು. ಸಂಸಾರ ಪ್ರಪಂಚ ಲೋಪವ ಮಾಡುವುದರಿಂ ನಕಾರವಾಯಿತು. ಇಂತಪ್ಪ ಸ್ವರೂಪವನರಿದಾಚರಿಸುವಾತನೀಗ ಅನಾದಿ ಭಕ್ತನೆನಿಸಿಕೊಂಡನು. ಇಂತಪ್ಪ ಭಕ್ತನ ಮನವೇ ಲಿಂಗ, ತನ್ಮನದ ಜ್ಞಾನವೇ ಜಂಗಮ, ಆ ಜ್ಞಾನದ ಪರಿಪೂರ್ಣವೇ ಗುರು, ತದ್ಭಕ್ತನೆ ಶೇಷ, ಆ ಜ್ಞಾನದ ಸಾರವೇ ಪಾದೋದಕ, ಆ ಜ್ಞಾನದ ಪ್ರಕಾಶವೇ ವಿಭೂತಿ, ಆ ಮಾಯಾಕರಣಂಗಳ ಮೇಲೆ ಕರೆದ ಜ್ಞಾನಸಾರಾಮೃತವೃಷ್ಟಿಯೇ ರುದ್ರಾಕ್ಷಿ, ಆ ಭಕ್ತನ ನಾಮವೇ ಮಂತ್ರ; ಇಂತಹ ಭಕ್ತನೆ ಪರಬ್ರಹ್ಮವೆಂದು ಶರಣೆಂದವರೆ ಧನ್ಯರು. ಅನಾದಿಭಕ್ತನ ಜ್ಞಾನಾಷ್ಟಾವರಣೋದ್ಧರಣೆಯಸಂಬಂಧ ಸಮಾಪ್ತಂ ಮಂಗಳಮಹಾ; ಶ್ರೀ ಶ್ರೀ ಶ್ರೀ ಶ್ರೀ ಶ್ರೀ. ॥ ಶ್ರೀ ಗುರು ಬಸವಲಿಂಗಾಯ ನಮಃ ॥

**೩. ಅನಾದಿಜಂಗಮೋದ್ಧರಣೆ**

ಇಂತು ಸರ್ವಾಚಾರಸಂಪತ್ತೇ ಅಂಗವಾಗಿ, ಸಕಲಕಲಾಮೂರ್ತಿಗಳ ಗರ್ಭೀಕರಿಸಿಕೊಂಡು ಅಷ್ಟಾವರಣ ದಿಂದಲಂಕೃತಮಾಗಿ ವಿರಾಜಿಸುವ ಅನಾದಿ ಭಕ್ತನ ಅಂತರಂಗದಲ್ಲಿ, ಶಿವಧರ್ಮವೆಂಬ ಕಂದದೊಡನೆ ಕೂಡಿದ ಸುಜ್ಞಾನವೆಂಬ ನಾಳಮನುಳ್ಳಚಂದ್ರ, ಸೂರ್ಯರ ಹೋಲುವ ಕಾಂತಿಯಿಂದೆಸೆವ ನಿತ್ಯೈಶ್ವರ್ಯವೆಂಬ ದಳಾಷ್ಟಕಂಗಳಿಂ, ವೈರಾಗ್ಯವೆಂಬ ಕರ್ಣಿಕೆಯಿಂ, ಶ್ರೀರುದ್ರಗಣಂಗಳೆಂಬ ಕಿಂಜಲ್ಕಂಗಳಿಂದೊಪ್ಪುವ ಹೃತ್ಕಮಲ ಮಧ್ಯದಲ್ಲಿ ಶ್ವೇತ ರಕ್ತ ಕೃಷ್ಣವರ್ಣವನುಳ್ಳ ಚಂದ್ರ ಸೂರ್ಯಾಗ್ನಿ ಮಂಡಲತ್ರಯದ ಮೇಲೆ ಅ ಉ ಮಾಕ್ಷರ ತ್ರಯವೇಕವಾದ ಪ್ರಣವಪೀಠಾಗ್ರದಲ್ಲಿ ಧ್ಯಾನಾರ್ಹಸ್ವರೂಪವಾಗಿ ಚಿನ್ಮಯ ಚಿದ್ರೂಪ ಚಿದಾನಂದ ಸುಜ್ಞಾನಭರಿತವೆನಿಸಿ ಸಕಲತತ್ವವೂ ಗರ್ಭೀಕೃತವಾದ ಅನಾದಿಜಂಗಮದ ಅಂಗಸಂಬಂಧವನುದ್ಧರಿಸುವ ಕ್ರಮವೆಂತೆಂದೊಡೆ.

ಪೂರ್ವಾಪರೋತ್ತರ ದಕ್ಷಿಣಕ್ಕೆ ಹತ್ತು ಹತ್ತು ರೇಖೆಗಳೊಳಗೆ ಅಂಗುಲ ಪ್ರಮಾಣದ ಒಂಭತ್ತೊಂಭತ್ತು ಮನೆಗಳು. ಮಧ್ಯ ರೇಖೆಗಳ ನಾಲ್ಕು ನಾಲ್ಕನುಳುಹಿ, ಮಿಕ್ಕ ರೇಖೆಗಳನೆಡಬಲಕೊಂದಂಗುಲ ಕಿರಿದಾಗಿ ಪದಮಧ್ಯ ಸ್ಥಾನಮಂ ಬಿಟ್ಟು ಬರೆಯಲು ಐವತ್ತಾರು ಮನೆಗಳಾದುವು. ಅವರೊಳು ಪೂರ್ವಾಪರಕ್ಕೆರಡೆರಡು, ಉತ್ತರದಕ್ಷಿಣಕ್ಕೆ ಮೂರುಮೂರುಮನೆಗಳಂ ಬಿಡಲು ಮಧ್ಯದಲ್ಲಿ ನೀಳವಾಗಿ ಮೂರು, ಅಡ್ಡಲಾಗಿ ಐದುಸಾಲಿನ ಮನೆಗಳುಳಿದಿರ್ಪುವು. ಅದರ ಮಧ್ಯದಲ್ಲಿ ಐದು ಅಡ್ಡ ರೇಖೆಗಳು. ಪೂರ್ವದಿಕ್ಕಿನ ನಾಲ್ಕುರೇಖೆಗಳ ನೆರಡಂಗುಲಮಂ ಹೆಚ್ಚಿಸಿ ಎರಡಡ್ಡರೇಖೆಗಳಂ, ಆಮೆ ನಡುವಣೆರಡು ರೇಖೆಗಳ ನೊಂದಂಗುಲಮಂ ಹೆಚ್ಚಿಸಿ ಅಡ್ಡರೇಖೆಯೊಂದನು ಅದರ ತುದಿಯಲ್ಲಿ ಗೋಳಕಾಕಾರಮಂ. ಎಂಟು ದಿಕ್ಕಿನಲ್ಲಿ

ಎಂಟುದಳಂಗಳಂ ಬರೆಯಲು ಅಂಗಪ್ರತ್ಯಂಗ ಸಾಂಗಾಂಗ ಉಪಾಂಗನ್ಯಾಸ ಮುಗಿಯಿತು. ಇನ್ನು ಮಂತ್ರನ್ಯಾಸ ಸ್ಥಳಕುಳಸಂಮಂಧವೆಂತೆಂದೊಡೆ.

ಮೇಲಣ ಗೋಳಕಾಕಾರದಮನೆಯ ಪಶ್ಚಿಮದಲ್ಲಿ ನಾದವ್ಯಾಸವಾದ ಹಕಾರವೆ ನಿತ್ಯನಿರಾಲಂಬ ನಿರಂಜನಬ್ರಹ್ಮಾ. ಅದರ ಕೆಳಗಣ ಮನೆಯೆ ಶಿಖಿ, ಅಲ್ಲಿ ನ್ಯಾಸವಾದ ಕ್ಷಕಾರವೆ ನಿತ್ಯನಿರಾಳ ನಿಶ್ಶ್ಯೂನ್ಯಬ್ರಹ್ಮಾ. ಅದರ ಕೆಳಗಣ ದ್ವಾದಶ ಕೋಷ್ಟಂಗಳೆ ಬ್ರಹ್ಮರಂಧ್ರ, ಅಲ್ಲಿ ಉತ್ತರದಿಂ ದಕ್ಷಿಣಕ್ಕಾಗಿ ಸಾಲ್ಗೊಂಡು ನ್ಯಾಸವಾದ ಚಿನ್ನಾದ ಚಿದ್ಬಿಂದುಕಲಾಸ್ವರೂಪವಾದ ಬಸವಾಕ್ಷರತ್ರಯವು ಸತ್ಯಾದಿಲಕ್ಷಣವನುಳ್ಳ ಹ್ರಂ ಹ್ರಿಂ ಹ್ರುಂ ಹ್ರೈಂ ಹ್ರೌಂ ಹ್ರಃ ಎಂಬ ಷಡ್ಪ್ರಸಾದ ಮಂತ್ರವು. ಶಿವಶಕ್ತ್ಯಾತ್ಮಕವಾದ ಅ, ಉ, ಮಾಕ್ಷಯತ್ರಯವೆಂಬಿವು ನಿತ್ಯನಿರವಯವ ನಿಷ್ಕಲಬ್ರಹ್ಮ, ಅದರ ಕೆಳಗಣಮನೆಯೆ ಭ್ರೂಮಧ್ಯ ಅಲ್ಲಿ ನ್ಯಾಸವಾದ ಓಂಕಾರವೆ ನಿತ್ಯಪರಿಪೂರ್ಣ ಪರಂಜ್ಯೋತಿ ಪರಬ್ರಹ್ಮ ಮತ್ತಂ ಪ್ರತ್ಯಂಗ ಸಂಬಂಧದಿಂ ವದನವೆನಿಸುವದು. ಅದರ ಕೆಳಗಣಮನೆಯೂ ಅದರೆಡ ಬಲದ ಮನೆಗಳೆರಡೂ ಆತ್ಮತ್ರಯ. ಅಲ್ಲಿ ನ್ಯಾಸವಾದ ಸುನಾದ ಮಹಾನಾದ ಸ್ವರೂಪವಾದ ಒ ಅ ಬ ಎಂಬಕ್ಷರತ್ರಯವೆ ತತ್ವತ್ರಯವು. ಅದರ ಕೆಳಗಣಮಧ್ಯ ಭವನವೆ ವಿಶುದ್ಧಿ, ಅಲ್ಲಿ ನ್ಯಾಸವಾದ ಯಕಾರವೆ ವಿಜ್ಞಾನಬ್ರಹ್ಮ, ಅದರ ಕೆಳಗಣ ಮನೆಯೆ ಅನಾಹತ, ಅಲ್ಲಿ ನ್ಯಾಸವಾದ ಯಕಾರವೆ ವಿಜ್ಞಾನಬ್ರಹ್ಮ, ಅದರ ಕೆಳಗಣ ಮನೆಯೆ ಅನಾಹತ, ಅಲ್ಲಿ ನ್ಯಾಸವಾದ ವಕಾರವೆ ಆನಂದ ಬ್ರಹ್ಮ. ಅದರ ಕೆಳಗಣ ಮನೆಯೆ ಹೃತ್ಕಮಲಕರ್ಣಿಕಾಕುಹರವದರಲ್ಲಿ ನ್ಯಾಸವಾದ ಹವಾಗ್ವವೆ ಸರ್ವಚೈತನ್ಯಾತ್ಮಕವಾಗಿ ತೊಳಗಿ ಬೆಳಗುವ ಪರಮಾತ್ಮತತ್ವ, ಅದರ ಕೆಳಗಣ ಮನೆಯೆ ಮಣಿಪೂರಕ, ಅದರಲ್ಲಿ ನ್ಯಾಸವಾದ ಶಿಕಾರವೆ ಕಲಾಬ್ರಹ್ಮ. ಬಳಿಕಂಗಸಂಬಂಧದಿಂ ಶರೀರಮಧ್ಯವೆನಿಸುವದು, ಅದರ ಕೆಳಗಣಮನೆಯೆ ಸ್ವಾಧಿಷ್ಠಾನ. ಅಲ್ಲಿ ನ್ಯಾಸವಾದ ಮಕಾರವೆ ಷಡ್‌ಬ್ರಹ್ಮ, ಅದರ ಕೆಳಗಣಮನೆಯು ಅದರೆಡ ಬಲದ ಮನೆಗಳೆರಡು ಅಂಗತ್ರಯ, ಅಲ್ಲಿ ನ್ಯಾಸವಾದ ಬಿಂದು ಚಿದ್ಬಿಂದು ಮಹಾಬಿಂದು ಸ್ವರೂಪವಾದ ಉ, ಸ, ಕ್ಷ ಎಂಬಕ್ಷರತ್ರಯವೆ ಶಕ್ತಿತ್ರಯವು ; ಇಂತೀ ನವಚಕ್ರಸ್ಥಾನದಲ್ಲಿ ಪೂರ್ವೋಕ್ತಕಲಾಮೂರ್ತಿ ಸಂಬಂಧವನರಿವುದು.

ಸ್ಥಳ ಕುಳ ಸಂಬಂಧವನಾದೊಡೆ ಮುಂದಣ ನವಚಕ್ರೋದ್ಧರಣೆಯಲ್ಲಿ ನೋಡಿಕೊಂಬುದು. ಇಂತಿವು ಕಾರಣತನುಸಂಬಂಧವೆಂದರಿವುದು. ಇನ್ನು ನಾದವೆಂಬ ಪೆಸರನುಳ್ಳ ಓಂಕಾರನ್ಯಾಸದ ಮನೆಯ ಕೆಳಗಣ ಷಡ್ವಿಧ ಭವನಂಗಳಲ್ಲಿ ನ್ಯಾವಾಗಿರ್ಪ ನಕಾರಾದಿ ಷಡ್ವರ್ಣಗಳೆ ಸರ್ವಜ್ಞತ್ವ ತೃಪ್ತತ್ವ ಅನಾದಿಬೋಧತ್ವ ಸ್ವತಂತ್ರತ್ವ ನಿತ್ಯತ್ವ ಉಪಶಕ್ತತ್ವವೆಂಬೀ ಚಿದಂಗ ಷಟ್‌ಸ್ಥಲವು. ಬಕಾರನ್ಯಾಸದ ಮನೆಯ ಕೆಳಗಣ ಷಡ್ವಿಧಭವನಂಗಳಲ್ಲಿ ನ್ಯಾಸವಾದ ಹ್ರಾಂಕಾರಾದಿ ಷಡ್ವರ್ಣಂಗಳೇ ಶಿವ ಸದಾಶಿವ ಈಶ ಬ್ರಹ್ಮೇಶ ಈಶ್ವರ ಈಶಾನ್ಯವೆಂಬ ಷಟ್ಸದಾಖ್ಯನಾಮಲಿಂಗಗಳು. ಇಂತಿವು ಸೂಕ್ಷ್ಮತನುಸಂಬಂಧವೆಂದರಿವುದು. ಇನ್ನು ವಿಶುದ್ಧಿ ಅನಾಹತದ ಮನೆಯ ಸೊಂಕಿರ್ದಮನೆಗಳೆರಡ ಪೂರ್ದಿದ ಮನೆಗಳೆರಡು ಭುಜದ್ವಯ, ಅಲ್ಲಿ ನ್ಯಾಸವಾದ ವಕಾರ ಯಕಾರಂಗಳು ಕೆಳಗಣ ಮನೆಗಳೆರಡು ಪಾದಸ್ಥಾನ, ವಲ್ಲಿ ನ್ಯಾಸವಾದ ವಕಾರ ಮಕಾರಂಗಳು ಶರೀರಮಧ್ಯಸ್ಥವಾದ ಶಿಕಾರವು ವದನಸಂಬಂಧವಾದ ಓಂಕಾರವೆಂಬಿವು ಷಡ್ವಿಧ ಮಹಾತತ್ವಂಗಳೆನಿಸಿ ಸರ್ವಕಾರಣವಾಗಿಹವು. ಇನ್ನು ಉತ್ತರ ಈಶಾನ್ಯ ಮಧ್ಯವಿದಿಕ್ಕಿನ ಮನೆಯು ಮೊದಲು, ಅಗ್ನಿ ಯಮ ಮಧ್ಯವಿದಿಕ್ಕಿನ ಮನೆ ಕಡೆಯಾಗಿ ಪಜ್ತಪಟ್ಟವಿಲ್ಲದೆ ಷಟ್ತ್ರಿಂಶಭುವನಂಗಳೆ ಷಟ್ತ್ರಿಂಶತ್ವಂಗಳು. ಅಲ್ಲಿ ನ್ಯಾಸವಾದ ನಕಾರಾದಿ ಷಟ್ತ್ರಿಂಶನ್ಮಿಶ್ರ ಪ್ರಣವಂಗಳೆ ಷಟ್ತ್ರಿಂಶದಂಗಸ್ಥಲಂಗಳು. ಅವಕ್ಕೆ ವಿವರ:– ಆಚಾರಾಂಗ ಗೌರಾಂಗ ಶಿವಾಂಗ ಚರಾಂಗ ಪ್ರಸಾದಾಂಗ ಮಹದಂಗವೆಂಬ ಭಕ್ತನಂಗವಾರು. ಆಚಾರನಿಷ್ಠೆ, ಜಂಗಮನಿಷ್ಠೆ, ಗುರುನಿಷ್ಠೆ ಲಿಂಗನಿಷ್ಠೆ ಚರನಿಷ್ಠೆ ಪ್ರಸಾದನಿಷ್ಠೆಯೆಂಬ ಮಹೇಶಂನಂಗವಾರು. ಆಚಾರಾವಧಾನಿ ಗೌರವಾವಧಾನಿ ಲಿಂಗಾವಧಾನಿ ಪ್ರಸಾದಾವಧಾನಿ ಮಹದವಧಾನಿಯೆಂಬ

[illegible]

ಪ್ರಸಾದಿಯಂಗವಾರು, ಸಾಧ್ಯ ಭೇದ್ಯ ಯೋಗ್ಯ ಸನ್ನಿಹಿತ ಮಹಾನುಭಾವಿಯೆಂಬ ಪ್ರಾಣಲಿಂಗಿಯಂಗವಾರು, ಆಯತ ಸ್ವಾಯತ ಸನ್ನಿಹಿತ ಕಳಾಗ್ರಾಹಕ ಮನೋಮಗ್ನತೆ ಘನಸಮರಸವೆಂಬ ಶರಣನಂಗವಾರು, ಆಚಾರತೃಪ್ತಿ ಗೌರವತೃಪ್ತಿ ಲಿಂಗತೃಪ್ತಿ ಚರತೃಪ್ತಿ ಪ್ರಸಾದತೃಪ್ತಿ ಮಹಾನುಭಾವನಿರ್ಭಾವ ತೃಪ್ತಿಯೆಂಬ ಐಕ್ಯನಂಗವಾರು.

ಇಂತಿವರಲ್ಲಿ ಅಂತರ್ಗತವಾದ ಲಿಂಗಸ್ಥಳ ಷಟ್ತ್ರಿಂಶವವಕ್ಕೆ ವಿವರ:– ಕ್ರಿಯೆಂ ಮಂತ್ರ ವೇದ ಯಜನ ಭಾವನ ನಿರೀಕ್ಷಣೆಯೆಂಬ ಆಚಾರಲಿಂಗಸ್ಥಳವಾರು, ಕ್ರಿಯಾದೀಕ್ಷೆ ಮಂತ್ರದೀಕ್ಷೆ ಬೋಧದೀಕ್ಷೆ ಪ್ರಸನ್ನ ದೀಕ್ಷೆ ನಿರ್ವಾಣದೀಕ್ಷೆಯೆಂಬ ಗುರುಲಿಂಗ ಸ್ಥಲವಾರು, ಕರಸ್ಥಳ ಮನಸ್ಥಳ ಹೃದಯಸ್ಥಳ ಮಂತ್ರಸ್ಥಳ ತ್ರಿಕೂಟಸ್ಥಳ ಲಯಸ್ಥಳವೆಂಬ ಶಿವಲಿಂಗ ಸ್ಥಳವಾರು, ಸ್ವಯಂ ಸ್ವತಂತ್ರ ಚರಪರಿಣಾಮಿ ನಿರುಪಾಧಿಕ ಪರಿಪೂರ್ಣವೆಂಬ ಚರಲಿಂಗ ಸ್ಥಳವಾರು, ಇಂದ್ರಿಯಾನಂದ ಪ್ರಾಣಾನಂದ ಜ್ಞಾನಾನಂದ ಭಾವಾನಂದ ತೂರ್ಯಾನಂದ ಮಹದಾನಂದವೆಂಬ ಪ್ರಸಾದಲಿಂಗ ಸ್ಥಳವಾರು, ಪಿಂಡಾಕಾಶ ಬಿಂದ್ವಾಕಾಶ ಮಹದಾಕಾಶ ಭಾವಾಗಮ್ಯ ಸರ್ವತತ್ವಾಶ್ರಯ ಪರಿಪೂರ್ಣ ಪ್ರಕಾಶವೆಂಬ ಮಹಾಲಿಂಗಸ್ಥಳವಾರು, ಇಂತಿವು ಸ್ಥೂಲತನು ಸಂಬಂಧವಾಗಿಹವೆಂದರಿವುದು.

ಇನ್ನು ಈಶಾನ್ಯೇಂದ್ರ ದಿಕ್ಕಿನ ಮಧ್ಯದಳವಾದಿಯಾಗಿ ಅಷ್ಟದಳಂಗಳಲ್ಲಿ ನ್ಯಾಸವಾದ ಬ ಸ ವ ಅ ಉ ಮ ಹ ಕ್ಷ ಯೆಂಬ ಅಷ್ಟಾಕ್ಷರಂಗಳೆ ಸತ್ತು ಚಿತ್ತು ಆನಂದ ನಿತ್ಯಪರಿಪೂರ್ಣ ತೇಜೋಮುಖ ನಾಮವನುಳ್ಳ ನಿರ್ಗುಣ ಅಷ್ಟಾವರಣ ಸ್ವರೂಪವೆಂದರಿವುದು.

ಇನ್ನು ಸಾಕಾರವಾದ ಮೂರ್ತಿಯ ಜ್ಞಾನಮುದ್ರಾಲಕ್ಷಣ:– ಬ್ರಹ್ಮಾಂಡವೇ ಕಿರೀಟವು, ಗಗನವೇ ಮುಖ, ಸಮಸ್ತ ದಿಕ್ಕುಗಳೇ ಭುಜಂಗಳೂ ಭುಜಕೀರ್ತಿಗಳು, ಚಂದ್ರಸೂರ್ಯರೆ ನೇತ್ರಂಗಳು. ನಿರವಯ ಸ್ವರೂಪವೇ ಶರೀರವು. ಪಾತಾಳವೇ ಪಾದಾರವಿಂದವು, ಕರಸ್ಥಳದಲ್ಲಿ ಶೂನ್ಯಲಿಂಗವು; ಸಮಸ್ತ ಮೇಘಂಗಳೇ ಜಡೆಗಳು; ಚಂದ್ರಜ್ಯೋತ್ಸ್ನೆಯೇ ಭಸ್ಮಲೇಪನವು, ಸಮಸ್ತ ವೇದಂಗಳೇ ಸತ್ತಿಯೆಗಳು, ನಕ್ಷತ್ರಂಗಳೇ ಕಮಂಡಲು, ಸೃಷ್ಟಿಮಯವಾದ ಜಗತ್ತೇಕಂಥೆ, ಪೃಥ್ವಿಯೇ ಸಿಂಹಾಸನವು, ದಿವಾರಾತ್ರಿಗಳೇ ಅಕಲ್ಪಿತ ಮಠವು, ತ್ರಿಕಾಲಂಗಳೇ ಜ್ಞಾನಸಂಪತ್ತು ಷಡುರುತುಗಳೇ ಷಡುಸ್ಥಳಂಗಳು, ಮಹಾಶೇಷನೇ ಕಠಿನಸೂತ್ರವು, ಸಮಸ್ತ ಶಿವಮಂತ್ರವಿದ್ಯೆಯೇ ಜ್ಞಾನಮುದ್ರೆ, ಮೇರುಗಿರಿಯೇ ದಂಡಕೋಲು, ಗುಣತ್ರಯವೇ ಕಪ್ಪರ, ಕುಲವೇ ಶಿವಕುಲವು, ವನಸ್ಪತಿಗಳೇ ರೋಮಂಗಳು, ಇಂತಪ್ಪ ಅನಾದಿ ಜಂಗಮವು ತನ್ನ ಮುಖ ಬಾಹು ತೊಡೆ ಪಾದಾದಿ ಅವಯವಂಗಳಲ್ಲಿ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರ ಮೊದಲಾದ ಸಕಲ ಜಗತ್ತಂ ನಿರ್ಮಿಸಿ ತಾನು ಜಗದ್ಧಿತಾರ್ಥಮಾಗಿ ಸಾಕಾರಮಂ ಧರಿಸಿ ಸರ್ವಲಕ್ಷಣ ಸಂಪೂರ್ಣನಾಗಿರ್ಪ.

**೪. ಜಂಗಮಸ್ವರೂಪ ಸಂಬಂಧವೆಂತೆಂದೊಡೆ**

ಪಾದತಳದಲ್ಲಿ ಅತಳಲೋಕ, ಪಾದೋರ್ಧ್ವದಲ್ಲಿ ವಿತಳಲೋಕ, ಜಂಘೆಯಲ್ಲಿ ಸುತಳಲೋಕ, ಜಾನುವಿನಲ್ಲಿ ಮಹೀತಳಲೋಕ, ಊರುವಿನಲ್ಲಿ ತಳಾತಳಲೋಕ, ಗುಹ್ಯದಲ್ಲಿ ರಸಾತಳಲೋಕ, ಕಟಿಯಲ್ಲಿ ಪಾತಾಳಲೋಕ, ನಾಭಿಯಲ್ಲಿ ಭೂಲೋಕ, ಕುಕ್ಷಿಯಲ್ಲಿ ಭುವರ್ಲೋಕ, ಹೃದಯದಲ್ಲಿ ಸುವರ್ಲೋಕ, ವಕ್ಷದಲ್ಲಿ ಮಹರ್ಲೋಕ, ಕಂಠದಲ್ಲಿ ಜನೋಲೋಕ, ಲಲಾಟದಲ್ಲಿ ತಪೋಲೋಕ, ಮೂರ್ಧ್ನದಲ್ಲಿ ಸತ್ಯಲೋಕ, ಇಂತಿವಾದಿಯಾಗಿ ಬ್ರಹ್ಮಾಂಡದ ಗುಣಂಗಳೆಲ್ಲವ ತನುಗುಣಂಗಳಲ್ಲಿ ಅಡಗಿಸಿಕೊಂಡು, ನಾನಾ ಜಗದುತ್ಪತ್ತಿ ಸ್ಥಿತಿಲಯರಹಿತನಾಗಿ ಗುಣತ್ರಯರೂಪವಾದ ತ್ರಿಮೂರ್ತ್ಯಾತ್ಮಕವೆನಿಪ ಜಂಗಮವೆಂಬಕ್ಷರ ತ್ರಯವೆ ನಾಮಸಂಜ್ಞೆಯಾಗಿ ಮತ್ತಂ ದೀರ್ಘವೇ ಶಿರಸ್ಸು, ಬಿಂದುವೇ ಮುಖ ಹ್ರಸ್ವ ಶೃಂಗಗಳೇ ಭುಜಂಗಳು, ಹಕಾರವೆ ದೇಹ ಅಮೃತರೇಖೆಯೇ ಪದಂಗಳಿಂತಪ್ಪ ಮಂತ್ರ ವಿಗ್ರಹಮೂರ್ತಿಯ ಶಿರದಲ್ಲಿ ಓಂಕಾರ, ತ್ವಕ್ಕಿನಲ್ಲಿ ವಕಾರ, ಶ್ರುತಿಪುಟದಲ್ಲಿ

ಯಕಾರ; ನೇತ್ರಯುಗ್ಮದಲ್ಲಿ ಶಿಕಾರ, ಜಿಹ್ವೆಯಲ್ಲಿ ಮಕಾರ, ನಾಸಾಪುಟದಲ್ಲಿ ನಕಾರ, ಬಳಿಕೀಷಡಕ್ಷರಿಯೇ ಮುಖ, ಭುಜಯುಗ್ಮದೇಹ, ಮಧ್ಯಪಾದದ್ವಯ ಷಡಾಧಾರಂಗಳಲ್ಲಿ ಸಂಬಂಧವಾಗಿರ್ಪ ಕಾರಣ, ಹಸ್ತಪಾದ ಅಂಗುಲಿಗಳಲ್ಲಿ ಪಂಚಾಕ್ಷರಂ ನ್ಯಾಸವಾಗಿರ್ಪವು.

ಇಂತೀ ಮೂವತ್ತೆಂಟು ಪ್ರಣವಸ್ವರೂಪವಾಗಿ ತನ್ನ ತಾ ಸ್ಮರಿಸಿಕೊಳ್ಳುತ್ತಿರ್ದ ಜಂಗಮದ ಜಪಪೂಜಾ ಲಕ್ಷಣವೆಂತೆಂದೊಡೆ:– ಕರಸ್ಥಳದಲ್ಲಿ ಶಿವಲಿಂಗವು ಬಾಹ್ಯೋಪಚಾರಂಗಳಲ್ಲಿ ಲೋಲುಪ್ತವಾಗಿ ಅಂತರಂಗಕ್ಕೆ ವೇಧಿಸಿ ಷಡಾಧಾರ ಚಕ್ರಂಗಳಲ್ಲಿ ಚತುರ್ವಿಧ ಬಿಂದುಲಿಂಗ, ಷಡ್ವಿಧಧಾತು ಲಿಂಗ, ದಶವಿಧಕ್ಷೇತ್ರಲಿಂಗ, ದ್ವಾದಶ ವಿಕೃತಲಿಂಗ, ಷೋಡಶಕಲಾಲಿಂಗ, ಆತ್ಮವಿದ್ಯಾಲಿಂಗವೆಂದಾರು ತೆರನಾಗಿರ್ಪವಾಲಿಂಗಂಗಳ ಅಂತರಂಗದಲ್ಲಿ ಚಿದಕ್ಷಮಣಿಗಳಾಗಿರ್ಪವವಕ್ಕೆ ವಿವರ:– ಕಂಠಸ್ಥಾನದ ಸ್ವರಾಕ್ಷರಸ್ವರೂಪವಾದ ಶ್ರೀಕಂಠಾದಿ ಪದಿನಾರು ರುದ್ರರು. ವಿಕಲ ಕ್ಷರಾದಿದೇವತೆಗಳೆನಿಸುವ ಅನಾಹತಾಕ್ಷರ ಸ್ವರೂಪವಾದ ಕ್ರೋಧೀಶಾದಿ ದ್ವಾದಶರುದ್ರರು, ಮಣಿಪೂರಕಾಕ್ಷರಸ್ವರೂಪವಾದ ದಾರುಕಾದಿ ದಶರುದ್ರರು, ಸ್ವಾಧಿಷ್ಠಾನಾಕ್ಷರ ಸ್ವರೂಪವಾದ ಶಿಖಿಯಾದಿ ಷಡುರುದ್ರರು, ಆಧಾರಾದಿ ಅಕ್ಷರಸ್ವರೂಪವಾದ ಪಿನಾಕೀಶಾದಿ ನಾಲ್ವರುದ್ರರು, ಆಗ್ನೇಯ ಚಕ್ರಕ್ಷರ ಸ್ವರೂಪವಾದ ಶಿವಸಂತರ್ವರ್ಕರೆಂಬೀರ್ವ ರುದ್ರರು, ತ್ರಿಶೂಲಕಪಾಲಂಗಳಂಧರಿಸಿ ರಕ್ತವರ್ಣಶರೀರದಿಂದಿರ್ಪರೀರುದ್ರ ಬೀಜಾಕ್ಷರಂಗಳೈವತ್ತು ಲೋಮವಿಲೋಮದೊಳೆಣಿಸೆ ಶತರುದ್ರ ಬೀಜಂಗಳಾಗಿಹವವರಲ್ಲಿ ಓಂ ಹ್ರಾಂ ಹ್ರೀಂ ನ ಮ ಶಿ ವಾ ಯ ಎಂಬ ಮಾಯಾಖ್ಯಂಗೊಡೆ ನೂರೆಂಟು ರುದ್ರಬೀಜಂಗಳಾಗಿ ಚಿದ್ರುದ್ರಾಕ್ಷೆಗಳೆನಿಸಿರ್ಪವು. ಇವು ತಾವೆ ಮರಳಿ ನೂರೆಂಟು ಶಕ್ತಿ ಬೀಜಂಗಳಾಗಿರ್ಪವದೆಂತೆಂದೊಡೆ:– ವಿಶುದ್ಧಿ ಅಕ್ಷರಸ್ವರೂಪವಾದ ಪೂರ್ಣೋದರಿ ಮೊದಲಾದ ಷೊಡಶಶಕ್ತಿಯರು, ವಿಕಕಾಲಕ್ಷರ ಸ್ವರೂಪಿಯರೆನಿಸುವ ಅನಾಹತಾಕ್ಷರ ಸ್ವರೂಪರಾದ ಮಹಾಕಾಳಿ ಮೊದಲಾದ ದ್ವಾದಶ ಶಕ್ತಿಯರು ಮಣಿಪೂರಕಾಕ್ಷರ ಸ್ವರೂಪರಾದ ವಿರಜೆ ಮೊದಲಾದ ಹತ್ತು ಶಕ್ತಿಯರು, ಸ್ವಾಧಿಷ್ಠಾನಾಕ್ಷರ ಸ್ವರೂಪವಾದ ವಾಗ್ಜಯೆ ಮೊದಲಾದ ಆರು ಶಕ್ತಿಯರು, ಆಧಾರಾಕ್ಷರ ಸ್ವರೂಪವಾದ ವಾಣಿ ಮೊದಲಾದ ನಾಲ್ವರು ಶಕ್ತಿಯರು, ಆಗ್ನೇಯ ಚಕ್ರಾಕ್ಷರ ಸ್ವರೂಪವಾದ ವ್ಯಾಪಿನಿ ಮಾಯಾನ್ವಿತೆ ಯೆಂಬುಭಯಶಕ್ತಿಯರು ಮಾಯಾಖ್ಯಗೊಂಡಿ, ಮೊದಲೆಣಿಸಿದೊಲೆಣಿಸಲು ನೂರೆಂಟುಶಕ್ತಿಗಳಾಗಿ ಚಿದ್ಗ್ರಂಥಿಗಳೆನಿಸಿ ಸಿಂಧೂರದೋಪಾದಿಯ ಶರೀರದಿಂ, ಕೆನ್ನಿಯ್ದಿಲು ಕಪಾಲಂಗಳಂಧರಿಸಿದ ಹಸ್ತಂಗಳಿಂ, ನೂರೆಂಟು ರುದ್ರರಿಗೆ ಸತೀಭಾವದಿಂದಿರ್ಪರೆಂದವಧರಿಪುದು. ಬಳಿಕ ಲಿಂಗವೇ ಮಂತ್ರ, ಮಂತ್ರವೇ ಚಿತ್ತುವೆಂದು ತಿಳಿದು ಜಪಿಸಲು, ಪ್ರಾಣ ವಾಯುವಿಕಾರವಳಿದು, ಸುಜ್ಞಾನಸೂತ್ರವಾಗಿರ್ಪುದದಕ್ಕೆ ಆ ನೂರೆಂಟು ಚಿದ್ರುದ್ರಾಕ್ಷಿಗಳಂ ಅವರ ಮಧ್ಯದಲ್ಲಿ ಆ ನೂರೆಂಟು ಚಿದ್ಗ್ರಂಥಿಗಳಂ ಸಂಬಂಧಿಸಿದೊಡೆ:– ಅಂತುಮಲ್ಲದೆ ಇನ್ನೊಂದು ಪ್ರಕಾರ ಅಂತರಂಗದಲ್ಲಿ ಹವಳದ ಮಣಿಯೋಪಾದಿಯಲ್ಲಿ ಪ್ರಕಾಶಿಸುತಿರ್ದ ಊರ್ಧ್ವ ಕುಂಡಲಿಯೆಂಬ ಸೂತ್ರದಿಂದೆ ಪವಣಿಸಲು ತಕ್ಕರೋಹಾವರೋಹದಿಂ ನೂರೆರಡು ವರ್ಣಂಗಳೊಳಗೆ ಹಂ ಸ ಎಂಬೆರಡಕ್ಷರಗಳಂ ಮೇರುವಿಗೆ ತೆಗೆಯಲಾಗಿ, ಮಿಕ್ಕ ನೂರುವರ್ಣಂಗಳು ಅಷ್ಟವರ್ಗಾಕ್ಷರಂಗಳಂ ಕೂಡಿ ಪೂರ್ವೋಕ್ತ ಕ್ರಮದಿಂ ಜಪಿಸಲು, ಏಕವಿಂಶತಿ ಸಹಸ್ರ ಷಟ್‌ಶತ ಜೀವಜಪವರಿತು ರೇಚಕವೇ ಪಂಚಾಕ್ಷರಿ, ಪೂರಕವೆ ಓಂಕಾರ ಕುಂಭಕವೆ ಚಿಚ್ಛಕ್ತಿ ಸ್ವರೂಪಿನಿಂ, ಉಕಾರ ಅಕಾರ ಮಕಾರವೆಂಬಕ್ಷರ ತ್ರಯಂಗಳನೊಳಕೊಂಡು ಶಿವಜಪವಾಯಿತು. ಅದು ನಿಮಿತ್ತಂ ಬಹಿರಂಗದಲ್ಲಿ ಗೋಮುಖ ವೃತ್ತವಾದ ಜಪಮಾಲಾ ಲಕ್ಷಣವನರಿದುದ್ಧರಿಸಲಾಯಿತು. ಅನಾದಿ ಜಂಗಮೋದ್ಧರಣೆಯ ಸಂಬಂಧ ಸಮಾಪ್ತ ಮಂಗಳಮಹಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀ

### ಇನ್ನ ಸೃಷ್ಟಿಯ ಕ್ರಮ

ಮಕುಟದಿಂ ಶೂನ್ಯ, ಆ ಶೂನ್ಯದಿಂ ಚಿದಂಬರ, ಆ ಚಿದಂಬರದಿಂ ಶಿವಶಕ್ತಿ, ಆ ಶಿವಶಕ್ತಿಯಿಂ ಪರಶಕ್ತಿ, ಆ ಪರಶಕ್ತಿಯಿಂ ಆದಿಶಕ್ತಿ, ಆ ಆದಿಶಕ್ತಿಯಿಂ ಇಚ್ಛಾಶಕ್ತಿ, ಆ ಇಚ್ಛಾಶಕ್ತಿಯಿಂ ಜ್ಞಾನಶಕ್ತಿ, ಆ ಜ್ಞಾನಶಕ್ತಿಯಿಂ ಕ್ರಿಯಾಶಕ್ತಿ ಆ ಕ್ರಿಯಾಶಕ್ತಿಯ ಸಾಹಸ್ರಾಂಶದಿಂ ನಾದಕೋಟಿ, ಆ ನಾದಪಂಚಕದ ಸಹಸ್ರಾಂಶದಿಂ ಪಂಚಸಾದಾಖ್ಯ ಆ ಪಂಚಸಾದಾಖ್ಯ ತತ್ವದ ಸಹಸ್ರಾಂಶದಿಂ ಈಶ್ವರಾಷ್ಟಕ ಆ ಈಶ್ವರನ ಸಹಸ್ರಾಂಶದಿಂ ಮಹೇಶ್ವರ ಪಂಚವಿಂಶತಿ, ಆ ಮಹೇಶ್ವರನ ಸಹಸ್ರಾಂಶದಿಂ ರುದ್ರರೇಕಾದಶ ಆ ರುದ್ರನ ಸಹಸ್ರಾಂಶದಿಂ ವಿಷ್ಣುದಶ ಆ ವಿಷ್ಣುವಿನ ಸಹಸ್ರಾಂಶದಿಂ ಬ್ರಹ್ಮನವ ಆ ಬ್ರಹ್ಮನವ ಸಹಸ್ರಾಂಶದಿಂ ಸ್ಥಾವರಜಂಗಮಾತ್ಮಕವಾದ ಸಕಲ ಜಗದುತ್ಪತ್ತಿಯಾಗಿರ್ಪುದೆಂದರಿವುದು. ಮುಕುಟೋದ್ಧರಣೆಯ ಸಂಬಂಧ ಸಮಾಪ್ತ ಮಂಗಳಮಹಾ. ಶ್ರೀ ಶ್ರೀ ಶ್ರೀ ಶ್ರೀ ಶ್ರೀ ॥ ಶ್ರೀ ಗುರು ಬಸವಲಿಂಗಾಯ ನಮಃ ॥

**೬. ಶೂನ್ಯಲಿಂಗೋದ್ಧರಣವು**

ಇಂತು ಸರ್ವ ಮಂತ್ರಾಲಯವಪ್ಪ ಅನಾದಿಜಂಗಮದ ಮಕುಟದಿಂದುದಯವಾದ ಶೂನ್ಯಲಿಂಗೋದ್ಧರಣೆಯ ಸಂಬಂಧವೆಂತೆಂದೊಡೆ:– ಮಾತೃಪಿತೃ ಸಹೋದರ ಬಂಧು ಸತೀಸುತ ಕುಲ ಗೋತ್ರ ನಾಮರೂಪ ತನುಕರಣಾದಿ ಭೋಗಭುವನ ಕಾಲ ಕಲ್ಪಿತ ಮಾಯೋಪಾಧಿಗಳಲ್ಲದೆ, ಬಾಹ್ಯಾಭ್ಯಂತರ ದಿಕ್ಕು ವಿದಿಕ್ಕು ಆದ್ಯಂತರಹಿತವಾಗಿ ಜ್ವಲಿಸುತಿರ್ದ ಕಾಲಾಗ್ನಿಯೋಪಾದಿಯ ಕಾಂತಿಯಂ ಕೋಟಿ ಮಿಂಚುಗಳ ಪ್ರಭಾಪುಂಜವನೊಳಕೊಂಡು ಪ್ರಕಾಶಿಸುತಿರ್ದ ಶಿಖಾಗ್ರದ ಸೂಕ್ಷ್ಮ ಚಿತ್ಕಲಾಂಗವು ಭಾವ ಮನ ದೃಷ್ಟಿಗಳಿಂ ಬಹಿಷ್ಕರಿಸಿ ವೃತ್ತಗೋಳಕ ಗೋಮುಖಾಕಾರದಿಂ ವ್ಯಕ್ತೀಕರಿಸಿ, ಸರ್ವಲಕ್ಷಣ ಸಂಪೂರ್ಣವಾಗಿ ಪರಮಲೀಲೋಲ್ಲಾಸ ಭಕ್ತಿ ಭಾವಭರಿತಾಂತಃಕರಣನಾಗಿರ್ಪ ಅನಾದಿಜಂಗಮದ ವಾಮಕರಸ್ಥಲದಲ್ಲಿ ಸ್ಥಾಪ್ಯವಾಗಿರ್ಪುದು. ಇದನುದ್ಧರಿಸುವ ಕ್ರಮವೆಂತೆಂದೊಡೆ:= ಲಿಂಗಾಕಾರವಪ್ಪಂತೆ ಪೂರ್ವಾಪರಕ್ಕೆ ನೀಳರೇಖೆಗಳಾರನು, ದಕ್ಷಿಣೋತ್ತರಕ್ಕೆ ಅಡ್ಡ ರೇಖೆಗಳೆಂಟನು, ಮೇಲೆ ಗೋಳಕಾಕಾರವನು ಬರೆಯಲು ಗೋಳಕಕ್ಕೆ ಎರಡು, ಊರ್ಧ್ವಪೀಠಕೊಂಭತ್ತು, ಅಧಃಪೀಠಕೊಂಭತ್ತು ಮನೆಗಳು ಪುಟ್ಟುವುವು. ಇವರ ಮಂತ್ರನ್ಯಾಸಕ್ರಮ:– ಗೋಳಕದ ಮನೆಯಲ್ಲಿ ನ್ಯಾಸವಾದ ಹಕಾರವೆ ನಿರಂಜನತತ್ವ, ಅದರ ಕೆಳಗಣ ಮನೆಯ ನಾಳದಲ್ಲಿ ನ್ಯಾಸವಾದ ಕ್ಷಕಾರವೆ ಶೂನ್ಯತತ್ವ, ಅದರ ಕೆಳಗಣ ಮೂರುಮನೆಗಳೆ ವರ್ತುಳ, ಅಲ್ಲಿ ನ್ಯಾಸವಾದ ಬಸವಾಕ್ಷರನೆ ನಿಷ್ಕಲ ತತ್ವ, ಅದರ ದಕ್ಷಿಣದ ಮನೆಯಲ್ಲಿ ನ್ಯಾಸವಾದ ಉಕಾರವೆ ಈಶ್ವರತತ್ವ, ಉತ್ತರದಿಕ್ಕಿನ ಮನೆಯ ಗೋಮುಖದಲ್ಲಿ ನ್ಯಾಸವಾದ ಮಕಾರವೆ ಸದಾಶಿವತತ್ವ, ಅದರ ಕೆಳಗಣ ಮೂರುಮನೆಗಳೆ ವರ್ತುಳದಂಡ, ಅಲ್ಲಿ ನ್ಯಾಸವಾದ ಯಕಾರ ಓಂಕಾರ ಮಕಾರಂಗಳೆ ಮಹಾಸದಾಖ್ಯ, ಶಿವಸದಾಖ್ಯ ಅಮೂರ್ತಿಸದಾಖ್ಯ, ಅದರ ಕೆಳಗಣ ಮನೆಯೆ ಮಧ್ಯ, ಅಲ್ಲಿ ನ್ಯಾಸವಾದ ಅಕಾರವೆ ರುದ್ರತತ್ವ, ಇಂತಿವು ಊರ್ಧ್ವ ಮುಖನ್ಯಾಸ ಶಿವಬೀಜಂಗಳೆಂದರಿವುದು. ಅದರ ಕೆಳಗಣ ಮನೆಯಲ್ಲಿ ನ್ಯಾಸವಾದ ಶಿಕಾರವೆ ಇಚ್ಛಾಶಕ್ತಿ, ಅದರ ಕೆಳಗಣ ಮೂರುಮನೆಗಳೆ ಖಂಡಿಕಾದಂಡ, ಅಲ್ಲಿ ನ್ಯಾಸವಾಗಿರ್ಪ ನಕಾರ ಓಂಕಾರ ಮಕಾರವೆ ಕ್ರಿಯಾಶಕ್ತಿ, ಚಿಚ್ಛಕ್ತಿ, ಜ್ಞಾನಶಕ್ತಿ, ಅದರ ಕೆಳಗಣ ಮನೆಗಳೆ ಶಕ್ತಿಪೀಠ, ಅಲ್ಲಿ ನ್ಯಾಸವಾದ, ನಮಃ ಶಿವಾಯ ಎಂಬ ಪಂಚಾಕ್ಷರಂಗಳೆ, ಪಂಚಶಕ್ತಿ, ಇಂತಿವು ಅಧೋಮುಖನ್ಯಾಸ ಶಕ್ತಿ ಬೀಜಂಗಳೆಂದರಿವುದು.

ಮತ್ತಂ ಊರ್ಧ್ವ ಪೀಠಿಗೆಯಲ್ಲಿ ನ್ಯಾಸವಾದ ನಮಶ್ಶಿವಾಯ ಎಂಬ ಪಂಚಾಕ್ಷರವೇ ಪಂಚಬ್ರಹ್ಮ, ವರ್ತುಳದಂಡ ಮಧ್ಯದ ಓಂಕಾರವೇ ಪರಬ್ರಹ್ಮ, ಎಡಬಲದ ಕೆಳಗಣ ಬಸವಾಕ್ಷರವೇ ಶಿವ, ಸದಾಶಿವ, ಮಹೇಶ್ವರತತ್ವ ಇಂತಿವು ಊರ್ಧ್ವಮುಖನ್ಯಾಸ ಶಿವಬೀಜಂಗಳೆಂದರಿವುದು. ಇನ್ನು ಅಧಃಪೀಠಿಕೆಯಲ್ಲಿ ನ್ಯಾಸವಾದ ನಮಶ್ಶಿವಾಯ ಎಂಬ

ಪಂಚಾಕ್ಷರಂಗಳೇ ಪಂಚಶಕ್ತಿ, ಖಂಡಿಕಾ ದಂಡಮಧ್ಯದ ಓಂಕಾರವೇ ಚಿಚ್ಛಕ್ತಿ, ಅದರ ಎಡಬಲದ ಹಿಂದಣ ಅ ಉ ಮಾಕ್ಷರವೇ ಶಕ್ತಿತ್ರಯವು. ಇಂತುವು ಅಧೋಮುಖನ್ಯಾಸ ಶಕ್ತಿಬೀಜಂಗಳೆಂದರಿವುದು. ಲಿಂಗಲಕ್ಷಣ ಉಪದೇಶಕ್ರಮ:– ಇನ್ನು ಲಿಂಗಗೋಳಕದಲ್ಲಿ ಅನಾದಿ ಜಂಗಮದ ಶೂನ್ಯಲಿಂಗ ಚಿದಂಬರ, ಶಿವಶಕ್ತ; ನಾಳದಲ್ಲಿ ಪಂಚಕಲೆ, ಪಂಚಶಕ್ತಿ, ಪಂಚಮುಖ, ಪಂಚಸಾದಾಖ್ಯ, ಪಂಚನಾದ, ಪಂಚಮೂರ್ತಿ; ಗೋಮುಖದಲ್ಲಿ ಈಶ್ವರಾಷ್ಟಕ, ವರ್ತುಳದಲ್ಲಿ ಮಹೇಶ್ವರ ಪಂಚವಿಂಶತಿ, ಮಧ್ಯದಲ್ಲಿ ರುದ್ರರೇಕಾದಶ, ಪೀಠದಲ್ಲಿ ತ್ರಯಾವಯವ ಹಿರಣ್ಯಗರ್ಭ ವಿರಾಣ್ಮೂರ್ತಿ, ಬ್ರಹ್ಮ ವಿಷ್ಣುಗಳಂ ಗರ್ಭೀಕರಿಸಿಕೊಂಡು ಷಡಧ್ವಜಗನ್ಮಾಯಾ ಭೂಮಿಯಾಗಿರ್ಪುದೆಂದರಿವುದು. ವಾಮಕರಸ್ಥಳದಲ್ಲಿ ಅಂಗುಷ್ಠಾಗ್ರದತ್ತಣ ಮುಖವಾಗಿ ಕನಿಷ್ಠಿಕಾ ಅನಾಮಿಕಾಂಗುಲಿಯಿಂ ಪಿಡಿವುದೀಗ ಧಾರಣಕ್ರಮ. ಇನ್ನು ಅಷ್ಟ ವಿಧಾರ್ಚನೆ ಮೊದಲಾದ ನಿತ್ಯನೇಮಪೂಜಾ ಮಹಾಕ್ರಿಯೆಗಳಲ್ಲಿ, ಸುಲಭವಾಗಿ ಯಥೋಚಿತ ಭಕ್ತಿ ಭಾವಸ್ವತಂತ್ರ ಲೀಲಾಚರಿತ್ರನಾಗಿ ಮಾಡುವುದೆ ಯಥಾಪೂಜಾರತಿಯೀಗ ಅರ್ಚನಕ್ರಮ. ಮತ್ತಮೀಲಿಂಗದ ಷಟ್ ಸ್ಥಾನಂಗಳಲ್ಲಿ ಶಿರಭುಜ ನಡು ಪಾದಂಗಳಲ್ಲಿ ನಮಶ್ಶಿವಾಯ ಎಂಬ ಮೂಲಮಂತ್ರ ಸಂಬಂಧವನ್ನು ಆದಿಪ್ರಣವ ಉಕಾರಪ್ರಣವ ಮಕಾರ ಪ್ರಣವ ಬಿಂದುಪ್ರಣವ ನಾದಪ್ರಣವ ಸಂಬಂಧವನು, ನಾದಬಿಂದು ಕಲಾಸಂಬಂಧವನರಿವುದು.

**ವಚನ** :– ನಿರಾಳ ಅಷ್ಟದಳ ಕಮಲದೊಳಗೆ ನಿರಂಜನ ಚೌಕಮಧ್ಯವ ನೋಡಾ । ಅದರ ಬೀಜಾಕ್ಷರದ ಭೇದವನಾರು ಬಲ್ಲರು । ನಿರಂಜನಪ್ರಣವ । ಉಕಾರಪ್ರಣವ ಮಕಾರಪ್ರಣವ । ಜ್ಯೋತಿಪ್ರಣವ ಅಖಂಡಜ್ಯೋತಿಪ್ರಣವ। ಅಖಂಡ ಮಹಾಜ್ಯೋತಿಪ್ರಣವ । ಗೋಳಕಾಕಾರ ಪ್ರಣವ । ಅಖಂಡ ಗೋಳಕಾಕಾರ ಪ್ರಣವ । ಅಖಂಡ ಮಹಾಗೋಳಕಾಕಾರ ಪ್ರಣವ । ಯಿಂತೀ । ನಿರಾಳ ದಷ್ಟದಳ ಕಮಲದೊಳಗೆ ನಿರಂಜನ ಚೌಕಮಧ್ಯವ ನೋಡಾ । ಇದರ ಬೀಜಾಕ್ಷರದ ಭೇದವ ನಿಜಲಿಂಗೈಕ್ಯರಲ್ಲದೆ ಮಿಕ್ಕಿನ ವೇಷಧಾರಿಗಳೆತ್ತ ಬಲ್ಲರಯ್ಯ । ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ ।

ಮತ್ತಂವಾಚ್ಯ. ಮೂಲಪಂಚಾಕ್ಷರ ಮೊದಲಾಗಿ ಪಂಚ ಪಂಚಾಕ್ಷರಿ ಮೂವತ್ತೆಂಟು ಪ್ರಣವಸಂಬಂಧವನರಿದು ಸ್ಮರಿಸುವುದೀಗ ಧ್ಯಾನಲಕ್ಷಣ. ಇನ್ನು ಪರಶಿವಲೀಲೆಗೊದಗಿದ ಸರ್ವಾಚಾರ ಸಂಪತ್ತು, ಅನಾದಿಚಿತ್ಸ್ವರೂಪವಾದ ಶರಣನ ತ್ಯಾಗಾಂಗದಲ್ಲಿ ನಿಂದು, ಭೋಗಾಂಗದಲ್ಲಿ ಬೆಳಗಿ; ಯೋಗಾಂಗದಲ್ಲಿ ಪ್ರಜ್ವಲಿಸಿ, ಇಷ್ಟಪ್ರಾಣಭಾವರೂಪವಾಗಿ ಗುರುಲಿಂಗ ಜಂಗಮವೆನಿಸಿ, ಅವರ ಏಕಪ್ರಸನ್ನ ಪ್ರಸಾದ, ತದೇಕಚೈತನ್ಯರಸ ಪ್ರವಾಹವೇ ಪಾದೋದಕ, ತದ್ರೂಪವೇ ಭಕ್ತ, ಆ ಭಕ್ತನ ಅವಿರಳದರಿವೇ ಜಂಗಮ, ಆ ಜಂಗಮದ ಮೂಲಜ್ಞಾನವೇ ಶೂನ್ಯಲಿಂಗ, ಆಲಿಂಗವೇ ಶಿವಾದ ರುದ್ರಾಂತಮಾದ ಭಾವನಾ ಕಲಾಮೂರ್ತಿಗಳು, ಬ್ರಹ್ಮಾದಿ ತೃಣಾಂತಮಾದ ಸಮಸ್ತ ಸೃಷ್ಟಿಗಳ ಉತ್ಪತ್ತಿ ಕಾರಣವಾಗಿಹುದು. ಇಂತಿವ ಗರ್ಭೀಕರಿಸಿಕೊಂಡಿರ್ಪ ಅನಾದಿಪಿಂಡದಲ್ಲಿ ಅಭಿನ್ನ ಜ್ಞಾನವು ಜನಿಸಿ, ಸಂಸಾರ ಹೇಯಮಾಡಿ, ಗುರುಕರುಣಮಂ ಪಡೆದು, ಲಿಂಗವನಂಗದಲ್ಲಿ ಧರಿಸಿ ವಿಭೂತಿ ರುದ್ರಾಕ್ಷಿಯ ಅಲಂಕರಿಸಿ, ಪ್ರಣವ ಪಂಚಾಕ್ಷರಿಯ ಜಪಿಸಿ, ಭಕ್ತಿ ಸ್ಥಲವನಂಗಂಗೊಡು, ಉಭಯಸ್ಥಳದಲ್ಲಿ ನಿಂದು, ತ್ರಿವಿಧ ಸಂಪನ್ನನಾಗಿ, ಚತುರ್ವಿಧ ಸಾರಾಯ ಸಂಪನ್ನವಾಗಿ ಉಪಾಧಿಯನುಪದೇಶಿಸಿ ನಿರುಪಾಧಿಕನೆನಿಸಿ, ಸಹಜ ಮಾಟವಿಡಿದು. ಗುರುಲಿಂಗ ಶಿವಲಿಂಗ ಚರಲಿಂಗ ತ್ರಿವಿಧ ತ್ರಿವಿಧದಲ್ಲಿ ಆಯತವಾಗಿ ತ್ರಿವಿಧ ಷಡ್ವಿಧಷಟ್ತ್ರಿಂಶಾಂಗ ಲಿಂಗಾವಧಾನಿಯಾದ ಭಕ್ತನು:– ಆಚಾರಲಿಂಗದಲ್ಲಿ ಐಕ್ಯವಾಗಿ, ನೈಷ್ಠಿಕಾಮುಖದಿಂ ಮಹೇಶ್ವರಸ್ಥಲವನಂಗಂಗೊಂಡು, ಲಿಂಗನಿಷ್ಠಾಪರನಾಗಿ, ಪೂರ್ವಾಶ್ರಯ ವಾಗದ್ವೈತ ಆಹ್ವಾನ್ನ ಅಷ್ಟತನುಮೂತಿ, ಸರ್ವಗತನಿರಸನವಾಗಿ, ಶಿವಜಗನ್ಮಯವೆನಿಸಿ, ಭಕ್ತದೇಹಿಕಲಿಂಗವೆಂದಂಗೀಕರಿಸಿ, ಆಗಮಲಿಂಗ, ಕಾಯಿಕಲಿಂಗ, ಆಚಾರಲಿಂಗ; ತ್ರಿವಿಧ ತ್ರವಿಧದಲ್ಲಿ ಆಯತವಾಗಿ, ತ್ರಿವಿಧ ಷಡ್ವಿಧ, ಷಟ್ತ್ರಿಂಶಾಂಗ ಲಿಂಗಾವಧಾನಿಯಾದ ಮಹೇಶ್ವರನು:– ಗುರುಲಿಂಗದಲ್ಲಿ

ಐಕ್ಯವಾಗಿ ಸಾವಧಾನಮುಖದಿಂ, ಪ್ರಸಾದಿಸ್ಥಲವನಂಗಂಗೊಂಡು, ಗುರು ಲಿಂಗ ಜಂಗಮ ಭಕ್ತ ಶರಣಪ್ರಸಾದ ಮಹತ್ವವಿಡಿದು, ಅನುಗ್ರಹಲಿಂಗ, ಅರ್ಪಿತಲಿಂಗ, ತನುಗುಣಲಿಂಗ, ತ್ರಿವಿಧ ತ್ರಿವಿಧದಲ್ಲಿ ಆಯತವಾಗಿ, ತ್ರಿವಿಧ ಷಡ್ವಿಧ ಷಟ್ತ್ರಿಂಶಾಂಗಲಿಂಗಾವಧಾನಿಯಾದ ಪ್ರಸಾದಿ:- ಶಿವಲಿಂಗದಲ್ಲಿ ಐಕ್ಯವಾಗಿ, ಅನುಭಾವಮುಖದಿಂ, ಪ್ರಾಣಲಿಂಗಿಸ್ಥಲವನಂಗಂಗೊಂಡು, ಪ್ರಾಣಲಿಂಗವನರ್ಚಿಸಿ, ಶಿವಲಿಂಗಯೋಗದಲ್ಲಿ ಸಮಾಧಿಯನೆಯ್ದಿ, ಲಿಂಗ ನಿಜ ಮನೋಮೂರ್ತಿಯಾಗಿ, ಅಂಗ ಲಿಂಗ ಸಂಬಂಧವಳವಟ್ಟು, ಒಲವು ಲಿಂಗ ನಿರೂಪ ಲಿಂಗ, ಪ್ರಸಾದ ಲಿಂಗ, ಪಾದೋದಕಲಿಂಗ, ತ್ರಿವಿಧ ತ್ರಿವಿಧದಲ್ಲಿ ಆಯತವಾಗಿ, ತ್ರಿವಿಧ ಷಡ್ವಿಧ, ಷಟ್ತ್ರಿಂಶಾಂಗ ಲಿಂಗಾವಧಾನಿಯಾದ ಶರಣನು; ಪ್ರಸಾದಲಿಂಗದಲ್ಲಿ ಐಕ್ಯವಾಗಿ, ಸಮರಸ ಮುಖದಿಂ, ಐಕ್ಯಸ್ಥಲವನಂಗಂಗೊಂಡು, ಸರ್ವಾಚಾರಸಂಪನ್ನನಾಗಿ, ಏಕಭಾಜನ ಸಹಭೋಜನವಳವಟ್ಟು, ಕೊಂಡುದೆ ಪ್ರಸಾದ, ನಿಂದುದೆ ಓಗರ, ಚರಾಚರನಾಸ್ತಿ ಎಂಬ ಗುರುಪ್ರಸಾದ, ತ್ರಿವಿಧಲಿಂಗ ಭಾಂಡ ಭಾಜನ ಅಂಗಲೇಪನವೆಂಬ ಲಿಂಗ ಪ್ರಸಾದ, ತ್ರಿವಿಧ ಸ್ವಯಪರ ನಾಸ್ತಿಭಾವ ಭಾವನಷ್ಟ ಜ್ಞಾನಲಿಂಗದಲ್ಲಿ ಶೂನ್ಯವೆಂಬ, ಜಂಗಮ ಪ್ರಸಾದ, ತ್ರಿವಿಧ ಲಿಂಗವಾಯತವಾದ ಐಕ್ಯನು; ಮಹಾಲಿಂಗದಲ್ಲಿ ಸಮರಸವಾಗಿ, ಅರಿನರಿತು, ಮರಹು ನಷ್ಟವಾಗಿ, ನಿಜದಲ್ಲಿ ನಿಂದು, ನಿಬ್ಬೆರಗಾಗಿ, ನಿಶ್ಶಬ್ದ ಗಂಭೀರವಾಗಿರ್ಪ ಷಡುಸ್ಥಲ ಬ್ರಹ್ಮದಾಚರಣೆಯನರಿದು, ಲಿಂಗಷಡ್ವಿಧ, ತ್ರಿವಿಧ, ಉಭಯ ಏಕಸ್ಥಾನವನರಿದು ಸಂಬಂಧಿಸಿ, ಲಿಂಗಸುಖ ಸಂಪನ್ನನಾಗಿರ್ಪುದೀಗ ಅನುಭಾವ ಲಕ್ಷಣ.

**ಇನ್ನು ಸೃಷ್ಟಿನಿರ್ದೇಶ**

ಮತ್ತಂ, ಈ ಶೂನ್ಯಲಿಂಗದಿಂ ನಿಷ್ಕಲಲಿಂಗ, ಆ ನಿಷ್ಕಲಲಿಂಗದಿಂ ಪರಶಕ್ತಿ, ಆ ಪರಶಕ್ತಿಯಿಂ ನಾದಬಿಂದುಗಳು, ಆ ನಾದಬಿಂದುಗಳಿಂ, ಮಹಾಲಿಂಗ ಆ ಮಹಾಲಿಂಗದಿಂ ಸದಾಶಿವೇಚ್ಛಾಶಕ್ತಿ, ಆ ಸದಾಶಿವೇಚ್ಛಾ ಶಕ್ತಿಯಿಂ ಈಶ್ವರಜ್ಞಾನಶಕ್ತಿ, ಆ ಈಶ್ವರಜ್ಞಾನಶಕ್ತಿಯಿಂ ರುದ್ರ ಕ್ರಿಯಾಶಕ್ತಿ, ಆ ರುದ್ರಕ್ರಿಯಾಶಕ್ತಿಯಿಂ ವಿಷ್ಣುಲಕ್ಷ್ಮಿಯರು, ಆ ವಿಷ್ಣುಲಕ್ಷ್ಮಿಯರಿಂ ಬ್ರಹ್ಮ ಸರಸ್ವತಿ, ಆ ಬ್ರಹ್ಮಸರಸ್ವತಿಯರಿಂ, ಜಗತ್ಸಚರಾಚರಂಗಳುದಯವಾದುವೆಂದರಿವುದು. ಶೂನ್ಯಲಿಂಗೋದ್ಧರಣೆಯ ಸಂಬಂಧ ಸಮಾಪ್ತ; ಮಂಗಳಮಹಾ. ಶ್ರೀ ಶ್ರೀ ಶ್ರೀ ಶ್ರೀ ಶ್ರೀ ॥ ಶ್ರೀ ಗುರು ಬಸವಲಿಂಗಾಯ ನಮಃ ॥

**೨. ಚಿದಂಬರೋದ್ಧರಣೆ**

ಇನ್ನು ಅನಾದಿ ಭಕ್ತನ ಹೃತ್ಕಮಲಕರ್ಣಿಕಾ ಪೀಠದಲ್ಲಿ ಸ್ವತಸಿದ್ಧವಾಗಿರ್ಪ ನಿರಂಜನ ಜಂಗಮದ ಮಕುಟದಿಂ ಜನಿಸಿದ ಶೂನ್ಯಲಿಂಗದಿಂದಾದ ಚಿದಂಬರವನುದ್ಧರಿಸುವ ಕ್ರಮವೆಂತೆಂದೊಡೆ:- ನವರಂಗಚೌಕದೋಪಾದಿಯಲ್ಲಿ ಲಕ್ಷಿಸಿ, ಪೂರ್ವಾಪರೋತ್ತರ ದಕ್ಷಿಣಕ್ಕೆ ದ್ವಾದಶ ರೇಖೆಗಳಂ, ಅವರ ತುದಿಯಲ್ಲಿ ತ್ರಿಶೂಲಂಗಳಂ, ಆ ಅಗ್ರದಲ್ಲಿ ಶ್ರೀಕಾರಂಗಳಂ, ಮಧ್ಯ ಚೌಕದಲ್ಲಿ ವೃತ್ತದ್ವಯಂಗಳಂ ಬರೆಯಲು ಯಂತ್ರನ್ಯಾಸ ಮುಗಿಯಿತು. ಇನ್ನು ವರ್ಣೋದಯ ನ್ಯಾಸಕ್ರಮ:- ದಿವ್ಯನಾದ, ನಿರಾವರಣಬಿಂದು, ನಿರುಪಮಕಲೆ, ಈ ತ್ರಿವಿಧಸ್ವರೂಪವು ಕಲೆಸಿ ಅವಾಗ್ಜಪ್ರಣವವಾಯಿತು. ಆ ಪ್ರಣವನಾದ ಚೈತನ್ಯವೇ ಬಕಾರವಾಯಿತು. ಆ ಬಕಾರ ಚಿನ್ನದವೇ ಅಕಾರ, ಚಿದ್ಬಿಂದುವೆ ಉಕಾರ, ಚಿತ್ಕಳೆಯೇ ಮಕಾರ, ಈ ತ್ರಿವಿಧವೇಕವಾಗಿ ಓಂಕಾರವಾಯಿತು. ಆ ಓಂಕಾರದ ಪಂಚಾಕೃತಿಗಳಿಂದುದಯವಾದ ಪಂಚಾಕ್ಷರವೇ ಲೋಮ ವಿಲೋಮದಿಂ ಸಕೀಲ ಸಂಬಂಧದಿಂ, ಅವಾಗ್ಜಂಗೂಡಿ ನೂರ ಮೂವತ್ತಾರು ವರ್ಣಂಗಳಾದವು. ಇವರೊಳು ಹಕಾರವನೆ ಮಧ್ಯ ವೃತ್ತದಲ್ಲಿ ನಮಶ್ಶಿವಾಯ ಯವಶಿಮನ, ಶಿವಾಯನಮಃ ಎಂಬ ಪಂಚವರ್ಣಂಗಳಂ ಮೇಲಣ ವೃತ್ತದಲ್ಲಿ ಪೂರ್ವದಿಕ್ಕು ಬಳೆಗೊಂಡು ಬಲ ಪ್ರದಕ್ಷಿಣವಾಗಿ, ಬರೆದು, ಬಳಿಕ ಅಗ್ನಿದಿಕ್ಕಿನ ಮನೆಗಳಿಪ್ಪತ್ತೈದರಲ್ಲಿ ನಮಶ್ಶಿವಾಯ. ವಾಯನಮಶಿ.

ಮಶಿವಾಯನ, ಯನಮಶಿವಾ, ಶಿವಾಯನಮ, ಎಂಬ ಪಂಚವಿಂಶತಿವರ್ಣಂಗಳಂ, ಯಮದಿಕ್ಕಿನ ಮನೆಗಳೈದರಲ್ಲಿ ಹ್ರಿಂ ಶ್ರಿಂ ಕ್ಷುಂ ಸೌಂ ಕ್ಲಿಂ ಎಂಬ ಪಂಚವರ್ಣಂಗಳಂ, ನೈಋತ್ಯ ದಿಕ್ಕಿನ ಮನೆಗಳಿಪ್ಪತ್ತೈದರಲ್ಲಿ ಯವಾಶಿಮನ, ಶಿಮನಯವಾ, ನಯವಾಶಿಮ, ವಾಶಿಮನಯ, ಮನಯವಾಶಿ ಎಂಬ ಪಂಚವಿಂಶತಿ ವರ್ಣಂಗಳಂ, ವರುಣದಿಕ್ಕಿನ ಮನೆಗಳೈದರಲ್ಲಿ ಕ್ಲಿಂ ಸೌಂ ಓಂ ಹ್ರೀಂ ಕ್ಷುಂ ಎಂಬ ಪಂಚವರ್ಣಂಗಳಂ, ವಾಯವ್ಯ ದಿಕ್ಕಿನ ಮನೆಗಳಿಪ್ಪತ್ತೈದರಲ್ಲಿ ನವಾಮಯಶಿ, ಮಯಶಿನವಾ, ಶಿನವಾಮಯ, ವಾಮಯಶಿನ, ಯಶಿನವಾಮ, ಎಂಬ ಪಂಚವಿಶಂತಿವರ್ಣಂಗಳಂ, ಕುಬೇರದಿಕ್ಕಿನ ಮನೆಗಳೈದರಲ್ಲಿ ಓಂ ಹ್ರೀಂ ಕ್ಷುಂ ಕ್ಲೀಂ ಸೌಂ ಎಂಬ ಪಂಚವರ್ಣಂಗಳಂ, ಈಶಾನ್ಯದಿಕ್ಕಿನ ಮನೆಗಳಿಪ್ಪತ್ತೈದರಲ್ಲಿ ಶಿಯಮವಾನ, ವಾನಶಿಯಮ, ಯಮವಾನಶಿ, ನಶಿಯಮವಾ, ಮವಾನಶಿಯ ಎಂಬ ಪಂಚವಿಂಶತಿ ವರ್ಣಂಗಳಂ, ಇಂದ್ರದಿಕ್ಕಿನ ಮನೆಗಳೈದರಲ್ಲಿ ಕ್ಷುಂ ಕ್ಲಿಂ ಸೌಂ ಶ್ರಿಂ ಹ್ರಿಂ ಎಂಬ ಪಂಚವರ್ಣಂಗಳಂ ಬರೆಯಲು ವರ್ಣನ್ಯಾಸ ಮುಗಿಯಿತು.

ಇನ್ನು ತತ್ವಸಂಬಂಧ:– ಪಂಚಶಕ್ತಿ, ಪಂಚಕಲೆ, ಪಂಚಸಾದಾಖ್ಯ, ಪಂಚಮುಖ, ಪಂಚಮೂರ್ತಿ, ಈ ಇಪ್ಪತ್ತೈದೂ ಅಗ್ನಿ ದಿಕ್ಕಿನ ಮನೆಗಳ ವರ್ಣಸ್ವರೂಪ ಮಹೇಶ್ವರನ ನಿರ್ಗುಣಮೂರ್ತಿ ಯಿಪ್ಪತ್ತೈದು ನೈರುತ್ಯದಿಕ್ಕಿನ ಮನೆಗಳ ವರ್ಣಸ್ವರೂಪ, ಪಂಚನಾದ, ಈಶ್ವರಾಷ್ಟಕ, ರುದ್ರರೇಕಾದಶ, ನಿಜಾತ್ಮತತ್ವ ಈ ಇಪ್ಪತ್ತೈದು ನೈರುತ್ಯ ದಿಕ್ಕಿನ ಮನೆಗಳ ವರ್ಣಸ್ವರೂಪವು. ಆತ್ಮತತ್ವವಿಪ್ಪತ್ತೈದು ಈಶಾನ್ಯ ದಿಕ್ಕಿನ ಮನೆಗಳ ವರ್ಣಸ್ವರೂಪು, ತ್ರಿತತ್ವಸಂಬಂಧವಾದ ಮೂವತ್ತಾರು ತತ್ವಂಗಳಂ ಮಧ್ಯವೃತ್ತ ದಹಕಾರವಾದಿಯಾಗಿ ಮೇಲಣ ವೃತ್ತದ ನಕಾರವ ಬಳಿಗೊಂಡು, ಇಂದ್ರದಿಕ್ಕು ಮೊದಲಾದ ನಾಲ್ಕುದಿಕ್ಕಿನ ಮನೆಗಳ ವರ್ಣಸ್ವರೂಪವೆಂದರಿವುದು.

ಇನ್ನೊಂದು ಪ್ರಕಾರ:– ಅಗ್ನಿದಿಕ್ಕಿನ ಕೋಷ್ಠಂಗಲಿಪ್ಪತ್ತೈದು ವರ್ಣಕ್ಕೆ ವಿವರ. ನಕಾರವೇ ಸತ್ತು, ಮಕಾರವೇ ಚಿತ್ತು, ಶಿಕಾರವೇ ಆನಂದ, ವಕಾರವೇ ನಿತ್ಯ, ಯಕಾರವೇ ಪರಿಪೂರ್ಣ. ಮತ್ತಂ ವಕಾರವೇ ಲಿಂಗಕ್ಷೇತ್ರ ಸಂಜ್ಞೆ ಯಕಾರವೇ ಅನಾದಿಸಂಜ್ಞೆ, ನಕಾರವೇ ಪರಮಸಂಜ್ಞೆ, ಮಕಾರವೇ ಗೂಢಸಂಜ್ಞೆ, ಶಿಕಾರವೇ ಶರೀರಸ್ಥಸಂಜ್ಞೆ ಮತ್ತಂ ಮಕಾರವೇ ಪಿಂಡಬ್ರಹ್ಮ, ಶಿಕಾರವೇ ಕಲಾಬ್ರಹ್ಮ, ವಕಾರವೇ ಆನಂದಬ್ರಹ್ಮ, ಯಕಾರವೇ ವಿಜ್ಞಾನಬ್ರಹ್ಮ, ನಕಾರವೇ ಮೂರ್ತಿಬ್ರಹ್ಮ ಮತ್ತಂ ಯಕಾರವೇ ಸದಾಶಿವ, ನಕಾರವೇ ಈಶಾನ್ಯ, ಮಕಾರವೇ ಈಶ್ವರ, ಶಿಕಾರವೇ ಬ್ರಹ್ಮೇಶ, ವಕಾರವೇ ಈಶ, ಮತ್ತಂ ಶಿಕಾರವೇ ಶಿವತತ್ವ, ವಕಾರವೇ ಈಶ್ವರತತ್ವ, ಯಕಾರವೇ ಸದಾಶಿವತತ್ವ, ನಕಾರವೇ ಆತ್ಮತತ್ವ, ವಕಾರವೇ ವಿದ್ಯಾತತ್ವ.

ಇನ್ನು ಯಮದಿಕ್ಕಿನ ಕೋಷ್ಠಂಗಳ ಬೀಜಾಕ್ಷರವೈದಕ್ಕೆ ವಿವರ. ಹ್ರಿಂ ಎಂಬುದೇ ನಿರಂಜನ, ಶ್ರಿಂ ಎಂಬುದೇ ಮಹಾಸಂಜ್ಞೆ, ಕ್ಷುಂ ಎಂಬುದೇ ಪರಬ್ರಹ್ಮ, ಸೌಂ ಎಂಬುದೇ ಶಿವಮೂರ್ತಿ, ಕ್ಷಿಂ ಎಂಬುದೇ ಪರತತ್ವ

ಇನ್ನು ನೈರುತ್ಯದಿಕ್ಕಿನ ಕೋಷ್ಠಂಗಳಿಪ್ಪತ್ತೈದು ವರ್ಣಕ್ಕೆ ವಿವರ:– ಯಕಾರವೇ ಪರಶಕ್ತಿ, ವಕಾರವೇ ಆದಿಶಕ್ತಿ, ಶಿಕಾರವೇ ಇಚ್ಛಾಶಕ್ತಿ, ಮಕಾರವೇ ಜ್ಞಾನಶಕ್ತಿ, ನಕಾರವೇ ಕ್ರಿಯಾಶಕ್ತಿ, ಮತ್ತಂ, ಶಿಕಾರವೇ ಮೂರ್ತಿಸಾದಾಖ್ಯ, ಮಕಾರವೆ ಕರ್ತೃಸಾದಾಖ್ಯ, ನಕಾರವೇ ಕರ್ಮಸಾದಾಖ್ಯ, ಯಕಾರವೆ ಶಿವಸಾದಾಖ್ಯ, ವಕಾರವೇ ಅಮೂರ್ತಿಸಾದಾಖ್ಯ, ಮತ್ತಂ ನಕಾರವೇ ನಿವೃತ್ತಿಕಲೆ, ಯಕಾರವೇ ಶಾಂತಾತೀತಕಲೆ, ವಕಾರವೇ ಶಾಂತಿಕಲೆ, ಶಿಕಾರವೇ ವಿದ್ಯಾಕಲೆ, ಮಕಾರವೇ ಪ್ರತಿಷ್ಠಾಕಲೆ:– ಮತ್ತಂ ವಕಾರವೇ ತತ್ಪುತುಷಮುಖ, ಶಿಕಾರವೇ ಅಘೋರಮುಖ, ಮಕಾರವೇ ವಾಮದೇವಮುಖ, ನಕಾರವೇ ಸದ್ಯೋಜಾತಮುಖ, ಯಕಾರವೇ ಈಶಾನ್ಯಮುಖ, ಮತ್ತಂ ಮಕಾರವೇ ಅಪ್ಪು, ನಕಾರವೇ ಪೃಥ್ವಿ, ಯಕಾರವೇ ಆಕಾಶ, ವಕಾರವೆ ವಾಯು, ಶಿಕಾರವೇ ಅಗ್ನಿ.

ಇನ್ನು ವರುಣದಿಕ್ಕಿನ ಕೋಷ್ಠಂಗಳ ಬೀಜಾಕ್ಷರ ವೈದಕ್ಕೆ ವಿವರ:– ಕ್ಲಿಂ ಎಂಬುದೆ ಚಿಚ್ಛಕ್ತಿ, ಸೌಂ ಎಂಬುದೇ ಮಹಾಸಾದಾಖ್ಯ, ಓಂ ಎಂಬುದೆ ಶಾಂತಾತೀತೋತ್ತರಕಲೆ, ಹ್ರಿಂ ಎಂಬುದೇ ಗೋಪ್ಯಮುಖ, ಕ್ಷುಂ ಎಂಬುದೆ ಆತ್ಮ.

ಇನ್ನು ವಾಯುವ್ಯದಿಕ್ಕಿನ ಕೋಷ್ಠಂಗಳಿಪ್ಪತ್ತೈದು ವರ್ಣಕ್ಕೆ ವಿವರ:– ನಕಾರವೇ ಅಸ್ಥಿ, ವಕಾರವೇ ನಾಡಿ, ಯಕಾರವೇ ರೋಮ, ಮಕಾರವೇ ಮಾಂಸ; ಶಿಕಾರವೇ ತ್ವಕ್ಕು, ಮತ್ತಂ, ಮಕಾರವೇ ರುಧಿರ, ಯಕಾರವೇ ಶ್ಲೇಷ್ಮ, ಶಿಕಾರವೇ ಶುಕ್ಲ, ನಕಾರವೆ ರಸ, ವಕಾರವೇ ಪಿತ್ತ, ಮತ್ತಂ ಶಿಕಾರವೇ ನಿದ್ರೆ, ನಕಾರವೇ ಕ್ಷುಧೆ, ವಕಾರವೇ ಆಲಸ್ಯ, ಮಕಾರವೇ ತೃಷ್ಣೆ, ಯಕಾರವೇ ಸಂಗ, ಮತ್ತಂ ವಕಾರವೇ ಯೋಗ, ಮಕಾರವೇ ವಲನ, ಯಕಾರವೇ ವಿಯೋಗ, ಶಿಕಾರವೇ ಕುಂಚನ, ನಕಾರವೇ ಧಾವನ. ಮತ್ತಂ ಯಕಾರವೇ ಮೋಹ, ಶಿಕಾರವೇ ಭಯ, ನಕಾರವೇ ರಾಗ, ವಕಾರವೇ ಲಜ್ಜೆ, ಮಕಾರವೆ ದ್ವೇಷ.

ಇನ್ನು ಕುಬೇರದಿಕ್ಕಿನ ಕೋಷ್ಠಂಗಳ ಬೀಜಾಕ್ಷರವೈದಕ್ಕೆ ವಿವರ: ಓಂ ಎಂಬುದೇ ಕಠಿಣ, ಹ್ರಿಂ ಎಂಬುದೆ ಮೃದು, ಕ್ಷುಂ ಎಂಬುದೆ ಉಷ್ಣ, ಕ್ಲಿಂ ಎಂಬುದೇ ಚಲನೆ, ಸೌಂ ಎಂಬುದೇ ಶೂನ್ಯ.

ಇನ್ನು ಈಶಾನ್ಯದಿಕ್ಕಿನ ಕೋಷ್ಠಂಗಳಿಪ್ಪತ್ತೈದು ವರ್ಣಕ್ಕೆ ವಿವರ. ಶಿಕಾರವೇ ಪಾದ, ಯಕಾರವೇ ವಾಕ್ಕು, ಮಕಾರವೇ ಗುಹ್ಯ, ವಕಾರವೇ ಪಾಣಿ, ನಕಾರವೇ ವಾಯು. ಮತ್ತಂ ವಕಾರವೇ ಸ್ಪರ್ಶನ, ನಕಾರವೇ ಗಂಧ, ಶಿಕಾರವೇ ರೂಪು, ಯಕಾರವೇ ಶಬ್ದ, ಮಕಾರವೇ ರಸ, ಮತ್ತಂ ಯಕಾರವೇ ಶ್ರೋತ್ರ, ಮಕಾರವೇ ಜಿಹ್ವೆ, ವಕಾರವೇ ತ್ವಕ್ಕು, ನಕಾರವೇ ನಾಸಿಕ, ಶಿಕಾರವೇ ನೇತ್ರ. ಮತ್ತಂ ನಕಾರವೇ ಪ್ರಾಣ, ಶಿಕಾರವೇ ವ್ಯಾನ, ಯಕಾರವೇ ಸಮಾನ, ಮಕಾರವೇ ಅಪಾನ, ವಕಾರವೇ ಉದಾನ. ಮತ್ತಂ ಮಕಾರವೇ ಬುದ್ಧಿ, ವಕಾರವೇ ಮನ, ನಕಾರವೇ ಚಿತ್ತು, ಉಕಾರವೇ ಅಹಂಕಾರ, ಯಕಾರವೇ ಜ್ಞಾನ.

ಇನ್ನು ಇಂದ್ರ ದಿಕ್ಕಿನ ಮನೆಗಳ ಬೀಜಾಕ್ಷರವೈದಕ್ಕೆ ವಿವರ:_ ಕ್ಷುಂ ಎಂಬುದೇ ಮನನ, ಕ್ಲಿಂ ಎಂಬುದೇ ತೃಪ್ತಿ, ಸೌಂ ಎಂಬುದೇ ಹೃದಯ, ಶ್ರಿಂ ಎಂಬುದೇ ಚೇತನ, ಹ್ರಿಂ ಎಂಬುದೆ ಭಾವ.

ಇನ್ನು ಎರಡನೆಯ ವೃತ್ತದ ಹದಿನೈದುವರ್ಣಂಗಳಿಗೆ ವಿವರ.

ನಕಾರವೇ ಋಗ್ವೇದ, ಮಕಾರವೇ ಯಜುರ್ವೇದ, ಶಿಕಾರವೇ ಸಾಮವೇದ, ವಕಾರವೆ ಅಥರ್ವಣವೇದ, ಯಕಾರವೇ ಅಜಪವೇದ. ಅಲ್ಲಿಂದ ಮುಂದೆ ಯಕಾರವೇ ಮಹಾದೇವ, ವಕಾರವೇ ಭೀಮ, ಶಿಕಾರವೇ ಹರ, ಮಕಾರವೇ ಮೃಡ, ನಕಾರವೇ ಭವ, ಅಲ್ಲಿಂದ ಮುಂದೆ ಶಿಕಾರವೆ ನೀಲವರ್ಣ, ವಕಾರವೆ ಶ್ವೇತವರ್ಣ, ಯಕಾರವೆ ಸ್ಫಟಿಕವರ್ಣ, ನಕಾರವೆ ಪೀತವರ್ಣ, ಮಕಾರವೆ ರಕ್ತವರ್ಣ.

ಇನ್ನು ಮಧ್ಯವೃತ್ತದ ವರ್ಣಕ್ಕೆ ವಿವರ:_ ಹಕಾರವೇ ಸಮಸ್ತವೇದ ಉಪಮಾತೀತ ಮಾಣಿಕ್ಯವರ್ಣ ಸ್ವರೂಪವೆಂದರಿದು ಸಂಬಂಧಿಸುವುದು. ಮತ್ತಂ ಮೀಯಂತ್ರವೇ ಮಹದಾಕಾಶಮಯವಪ್ಪ ಕಂಥೆ, ವೃತ್ತದ್ವಯವೇ ಪ್ರಕೃತಿ ಪುರುಷರೂಪಮಪ್ಪ ಕಂಠ. ಪಾಲುರೇಖೆಗಳೆ ಗುಣತ್ರಯಂಗಳಿಂ ಮುಪ್ಪುರಿಗೂಡಿದಾಧಾರಂಗಳು, ತ್ರಿಶೂಲಂಗಳೆ ಆಹವನೀಯ, ಗಾರ್ಹಪತ್ಯ, ದಕ್ಷಿಣಾಗ್ನಿ ಸ್ವರೂಪವಾದ ಆಯುಧ ಸೂತ್ರಂಗಳು, ಶ್ರಿಕಾರಂಗಳೇ ಅಷ್ಟ ಮಹದೈಶ್ವರ್ಯ ಸ್ವರೂಪವಾದ ಅಲಂಕಾರಗಳು, ಅಕ್ಷರನ್ಯಾಸಂಗಳೇ ಸಕಲ ತತ್ವರೂಪವಾದ ಸೂತ್ರಕೇಶಂಗಳು, ಇಂತಿದು ಪ್ರವೃತ್ತಿಮಾರ್ಗವನುಳ್ಳ ಪಂಚ ಪ್ರಣವ ಸಂಬಂಧವೆಂದರಿವುದು, ಆ ಬಿಂದು ನಾದ ಕಲೆ ಶಕ್ತಿ ಶಿವ ಸ್ವರೂಪವಾದ ಉ ಅ ಮ ಓಂ ಹ ಎಂಬ ಪಂಚಪ್ರಣವಂಗಳು ಪರಿವಿಡಿಯಿಂ ಜಾಗ್ರದಾದಿ ಪಂಚಾವಸ್ಥೆಗಳಲ್ಲಿ ಸಂಬಂಧವಾದ ನಿವೃತ್ತಿ ಮಾರ್ಗವಿಂತಾದೊಡೆ.

**ಇನ್ನು ಮಂತ್ರ ಸಂಬಂಧ**

ಮೂಲ ಪಂಚಾಕ್ಷರವಾರು, ಸ್ಥೂಲಪಂಚಾಕ್ಷರವೊಂಭತ್ತು, ಸೂಕ್ಷ್ಮ ಪಂಚಾಕ್ಷರವೈದು, ಮಾಯಾಖ್ಯ ಪಂಚಾಕ್ಷರವೆಂಟು, ಪ್ರಸಾದ ಪಂಚಾಕ್ಷರ ಹತ್ತು, ನಿರಂಜನ, ಶೂನ್ಯ ನಿಷ್ಕಲ ಮೂಲಪ್ರಣವವೆಂಬಿವು ನಾಲ್ಕು, ಷಡಕ್ಷರ ಮಂತ್ರವಾರು, ಷಡಕ್ಷರ ರೂಪವಾದ ಅಕಾರಾದಿ ಬೀಜಾಕ್ಷರ ಮಂತ್ರವೈವತ್ತೆರಡು ಇಂತೀ ಶತಮಂತ್ರಾಕ್ಷರಂಗಳು ಅಗ್ನಿದಿಕ್ಕು ಮೊದಲಾದ ನಾಲ್ಕು ದಿಕ್ಕಿನ ಮನೆಗಳ ವರ್ಣಸ್ವರೂಪವು. ಬಸವ ಅ ಉ ಮ ಎಂಬ ಬೀಜಾಕ್ಷರ ಮಂತ್ರವಾರು, ಹ್ರಂ ಹ್ರಿಂ ಹ್ರುಂ ಹ್ರೈಂ ಹ್ರೌಂ ಹ್ರಃ ಎಂಬ ಕೀಲಮಂತ್ರವಾರು, ಓಂ ಹ್ರಾಂ ಹೃದಯಾಯ ನಮಃ, ಓಂ ಹ್ರಿಂ ಶಿರಸೇ ಸ್ವಾಹಾ, ಓಂ ಹ್ರುಂ ಶಿಖಾಯೈ ವಷಟ್, ಓಂ ಹ್ರಃ ಅಸ್ತ್ರಾಯ ಫಟ್, ಎಂಬ ನ್ಯಾಸಾಕ್ಷರ ಮಂತ್ರವಾರು, ಓ ಹ್ರಂ ನಾಂ ಸದ್ಯೋಜಾತಾಯ ನಮಃ, ಓಂ ಹ್ರಿಂ ಮಾಂ ವಾಮದೇವಾಯ ನಮಃ, ಓಂ ಹ್ರುಂ ಶಿಂ ಅಘೋರಾಯ ನಮಃ, ಓಂ ಹ್ರೈಂ ವಾಂ ತತ್ಪುರುಷಾಯ ನಮಃ, ಓಂ ಹ್ರಾಂ ಯಾಂ ಈಶಾನಾಯ ನಮಃ, ಓಂ ಹ್ರಃ ಓಂ ಹೃದಯಾಯ ನಮಃ ಎಂಬ ವದನಾಕ್ಷರ ಮಂತ್ರವಾರು, ಓಂ ಹ್ರಂ ನಾಂ ಸರ್ವಜ್ಞ ಸರ್ವಶಕ್ತಿಧಾಮ್ನೇ ನಮಃ, ಓಂ ಹ್ರಿಂ ಮಾಂ ತೃಪ್ತಿ ಶಕ್ತಿಧಾಮ್ನೇ ನಮಃ, ಓಂ ಹ್ರಂ ಶಿಂ ಅನಾದಿಶಕ್ತಿಧಾಮ್ನೇ ನಮಃ, ಓಂ ಹ್ರೈಂ ವಾಂ ಸ್ವತಂತ್ರ ಶಕ್ತಿಧಾಮ್ನೇ ನಮಃ, ಓಂ ಹ್ರೌಂ ಯಾಂ ನಿತ್ಯ ಶಕ್ತಿಧಾಮ್ನೇ ನಮಃ, ಓಂ ಹ್ರಂ ಓಂ ಅಲುಪ್ತ ಶಕ್ತಿಧಾಮ್ನೇ ನಮಃ ಎಂಬ ಶಕ್ತಿ ಷಡಂಗಮಂತ್ರವಾರು, ಓಂ ಹ್ರಂ ನಾಂ ಆಚಾರಲಿಂಗಾಯ ನಮಃ, ಓಂ ಹ್ರಿಂ ಮಾಂ ಗುರುಲಿಂಗಾಯ ನಮಃ, ಓಂ ಹ್ರುಂ ಶಿಂ ಶಿವಲಿಂಗಾಯ ನಮಃ, ಓಂ ಹ್ರೈಂ ವಾಂ ಜಂಗಮಲಿಂಗಾಯ ನಮಃ, ಓಂ ಹ್ರೌಂ ಯಾಂ ಪ್ರಸಾದ ಲಿಂಗಾಯ ನಮಃ, ಓಂ ಹ್ರಃ ಓಂ ಮಹಾಲಿಂಗಾಯ ನಮಃ ಎಂಬ ಲಿಂಗಷಡಕ್ಷರ ಮಂತ್ರವಾರು; ಇಂತೀ ಷಟ್ತ್ರಿಂಶನ್ಮಂತ್ರಂಗಳು ಮಧ್ಯ ವೃತ್ತದ ಹಕಾರವಾದಿಯಾಗಿ, ಮೇಲಣ ವೃತ್ತದ ನಕಾರವ ಬಳಿಗೊಂಡು, ಇಂದ್ರದಿಕ್ಕು ಮೊದಲಾದ ನಾಲ್ಕು ದಿಕ್ಕಿನ ಮನೆಗಳ ವರ್ಣಸ್ವರೂಪು, ಜ್ಞಾನ ಶೂನ್ಯ ಸ್ಥಲ ನಿಷ್ಪತ್ತಿಸ್ಥಾನ ವಾದುದರಿಂದದನುಳುಹಿ, ಉಳಿದ ಪಿಂಡಾದಿ ಶತಸ್ಥಲಂಗಳು, ಇಂದ್ರದಿಕ್ಕು ಮೊದಲಾದ ನಾಲ್ಕುದಿಕ್ಕಿನ ಮನೆಗಳ ವರ್ಣಸ್ವರೂಪು ತ್ರಿವಿಧ ತ್ರಿವಿಧ ಮಿಶ್ರಷಡ್ವಿಧ ಅಂಗ ಲಿಂಗಸ್ಥಲಂಗಳು ಮೂವತ್ತಾರನು ಪೂರ್ವೋಕ್ತ ಕ್ರಮದಂತೆ ಅರಿವುದು.

ಇನ್ನೊಂದು ಪ್ರಕಾರ:– ಭಕ್ತನ ಯೋಗಾಂಗವೈದನು, ಮಹೇಶ್ವರನ ಯೋಗಾಂಗವೈದನು, ಪ್ರಸಾದ ಯೋಗಾಂಗವೈದನು. ಪ್ರಾಣಲಿಂಗ ಯೋಗಾಂಗವೈದನು, ಶರಣನ ಯೋಗಾಂಗವೈದನು, ಅಗ್ನಿದಿಕ್ಕಿನ ಮನೆಗಳ ವರ್ಣಂಗಳಲ್ಲಿ; ಇವರಲ್ಲಿ ಉಳಿದುವೈದನು ಯಮದಿಕ್ಕಿನ ಮನೆಗಳ ವರ್ಣಂಗಳಲ್ಲಿ ಆಚಾರ ಲಿಂಗ ಮಿಶ್ರವೈದನು, ಗುರುಲಿಂಗ ಮಿಶ್ರವೈದನು, ಶಿವಲಿಂಗ ಮಿಶ್ರವೈದನು, ಜಂಗಮಲಿಂಗ ಮಿಶ್ರವೈದನು, ಪ್ರಸಾದಲಿಂಗ ಮಿಶ್ರವೈದನು, ನೈಋತ್ಯದಿಕ್ಕಿನ ಮನೆಗಳ ವರ್ಣಂಗಳಲ್ಲಿ ಇವರಲ್ಲಿ ಉಳಿದುವೈದನು, ವರುಣದಿಕ್ಕಿನ ಮನೆಗಳು ವರ್ಣಂಗಳಲ್ಲಿ ಶ್ರದ್ಧಾಭಕ್ತಿ ಮಿಶ್ರವೈದನು, ನೈಷ್ಠಿಕಾಭಕ್ತಿ ಮಿಶ್ರವೈದನು, ಸಾವಧಾನ ಭಕ್ತಿ ಮಿಶ್ರವೈದನು, ಅನುಭಾವಭಕ್ತಿ ಮಿಶ್ರವೈದನು, ಅನಂದಭಕ್ತಿ ಮಿಶ್ರವೈದನು, ವಾಯವ್ಯದಿಕ್ಕಿನ ಮನೆಗಳ ವರ್ಣಂಗಳಲ್ಲಿ ಇವರಲ್ಲಿ ಉಳಿದು ವೈದನು, ಕುಬೇರದಿಕ್ಕಿನ ಮನೆಗಳ ವರ್ಣಂಗಳಲ್ಲಿ ಗಂಧಪ್ರಸಾದ ಮಿಶ್ರವೈದನು, ರಸಪ್ರಸಾದ ಮಿಶ್ರವೈದನು, ರೂಪಪ್ರಸಾದ ಮಿಶ್ರವೈದನು, ಸ್ಪರ್ಶನಪ್ರಸಾದ ಮಿಶ್ರವೈದನು, ಶಬ್ದಪ್ರಸಾದ ಮಿಶ್ರವೈದನು, ಈಶಾನ್ಯದಿಕ್ಕಿನ ಮನೆಗಳ ವರ್ಣಂಗಳಲ್ಲಿ ಇವರಲ್ಲಿ ಉಳಿದುವೈದನು, ಪೂರ್ವದಿಕ್ಕಿನ ಮನೆಗಳ ವರ್ಣಂಗಳಲ್ಲಿ ಐಕ್ಯನ ಯೋಗಾಂಗವೈದನು, ಮಹಾಲಿಂಗ ಮಿಶ್ರವೈದನು, ಸಮರಸಭಕ್ತಿ ಮಿಶ್ರವೈದನು, ಮೇಲಣ ವೃತ್ತದ ವರ್ಣಂಗಳಲ್ಲಿ ಇವರಲ್ಲಿ ಉಳಿದ ಮೂರನು, ತೃಪ್ತಿಪ್ರಸಾದ ಮಿಶ್ರವೈದನು, ಮಧ್ಯವೃತ್ತದ ವರ್ಣಂಗಳಲ್ಲಿ ಪೂರ್ವೋಕ್ತ ಕ್ರಮದಂತೆ ವರ್ಣಪಲ್ಲಟ ಸ್ಥಲಪಲ್ಲಟವನರಿದು ಸಂಬಂಧಿಸುವುದು, ಇನ್ನುಳಿದ ಸಕೀಲಂಗಳನು ಇವರಲ್ಲಿ ತಿಳಿಯುವುದು.

ಮತ್ತಂ ಯಂತ್ರವೆ ಚಿದಂಬರವೆಂಬ ಕಂಥೆ, ವೃತ್ತದ್ವಯಂಗಳೆ ಜ್ಞಾನ ಕ್ರಿಯಾರೂಪವಾದ ಕಂಠ, ಪಾಲುರೇಖೆಗಳೆ ಭಕ್ತಿ ಜ್ಞಾನ ವೈರಾಗ್ಯ ಮುಪ್ಪುರಿಗೂಡಿದಾಧಾರಂಗಳು, ತ್ರಿಶೂಲಂಗಳೇ ಜ್ಞಾತೃ ಜ್ಞಾನಜ್ಞೇಯಧ್ಯಾನ ಧಾರಣ ಸಮಾಧಿ, ತತ್ವಜ್ಞಾನಾನುಭವ, ಶಿವಮಂತ್ರ ಸ್ಮರಣೆ ವಸ್ತುಲಕ್ಷಾನುಸಂಧಾನ ಕ್ಷಮೆ ಧೃತಿ ವಿರಾಗವೆಂಬಾಯುಧ ಸೂತ್ರಂಗಳು, ಶ್ರೀಕಾರಂಗಳೇ ಆರಾರು ತೆರನಾದ ಮಿಶ್ರಾಷ್ಟಾವರಣ, ನಾಲ್ವತ್ತೆಂಟು ವಿಧವಾಗಿರ್ಪುವು, ಅಂತಲ್ಲದೆ ನಾಲ್ವತ್ತೆಂಟು ತೆರವಾದ ಅಷ್ಟವಿಧ ಸಕೀಲಂಗಳಾದೊಡಾಗಲಿ. ಇಂತಿವು ಅಲಂಕಾರಂಗಳು ಅಕ್ಷರನ್ಯಾಸವೇ ಸರ್ವಾಚಾರ ಸ್ವರೂಪವಾದ ಸೂತ್ರಕೇಶಂಗಳೆಂದರಿವುದು.

**ಇನ್ನು ಸೃಷ್ಟಿಕ್ರಮ**

ಹಕಾರವೇ ಸಾಕ್ಷಾತ್ಪರಶಿವನು, ಆ ಪರಶಿವನಿಂದಾದುದೇ ಓಂಕಾರ, ಆ ಓಂಕಾರವೇ ಪರಮಾತ್ಮ, ಆ ಪರಮಾತ್ಮನಿಂ ನಾದ, ನಾದದಿಂ ಬಿಂದು, ಆ ಬಿಂದುವಿನಿಂ ಕಲೆ, ಆ ಕಲೆಯಿಂ ಶಕ್ತಿ, ಆ ಶಕ್ತಿಯಿಂ ಸತ್ತು, ಆ ಸತ್ತುವಿಂ ಚಿತ್ತು, ಆ ಚಿತ್ತುವಿಂ ಪರಮತೇಜೋರಾಶಿಯೆನಿಪ ಶಿವತತ್ವ, ಆ ಶಿವತತ್ವದಿಂ ಸದಾಶಿವ, ಆ ಸದಾಶಿವನಿಂ ಈಶ್ವರ, ಆ ಈಶ್ವರನಿಂ ರುದ್ರ, ಆ ರುದ್ರ ನಿಂ ವಿಷ್ಣು, ಆ ವಿಷ್ಣುವಿನಿಂ ಬ್ರಹ್ಮ, ಆ ಬ್ರಹ್ಮನಿಂ ಜಗತ್ಸಚರಾಚರವಾಯಿತೆಂದರಿವುದು. ಚಿದಂಬರೋದ್ಧರಣೆಯ ಸಂಬಂಧ ಸಮಾಪ್ತ ಮಂಗಳಮಹಾ. ಶ್ರೀ ಶ್ರೀ ಶ್ರೀ ಶ್ರೀ ಶ್ರೀ ॥ ಶ್ರೀ ಗುರು ಬಸವಲಿಂಗಾಯ ನಮಃ ॥

**೮. ಷಡ್ಬ್ರಹ್ಮೋದ್ಧರಣೆ:**

ಇಂತು ಸರ್ವಮಂತ್ರಧಾರಣವಾಗಿ, ಸಕಲತತ್ವಂಗಳ ಗರ್ಭೀಕರಿಸಿ ಕೊಂಡಿರ್ಪ, ಚಿದಂಬರದಿಂದುದಯಿಸಿದ ಶಿವಶಕ್ತಿ ಸಂಪುಟವಾದುವೆ ಘನಕೆ ಘನವಾದ ಪರಬ್ರಹ್ಮ, ಆ ಪರಬ್ರಹ್ಮವೇ ಷಡ್ವಿಧವಾಗಿರ್ಪುದದನುದ್ಧರಿಸುವ ಕ್ರಮವೆಂತೆಂದೊಡೆ:_ ಮೇಲಣಂ ಕೆಳಗೆ ನೀಳ ರೇಖೆಗಳೇಳನು, ಬಳಿಕವರಲ್ಲಿ ಅಡ್ಡ ರೇಖೆಗಳೇಳನು ತೆಗೆಯಲು, ಮೂವತ್ತಾರು ಮನೆಗಳಾದುವು. ಆ ನೀಳ ರೇಖೆಗಳೇಳನುನ್ನತಂಮಾಡಿ ಮೇಲಡ್ಡ ರೇಖೆಯಂ ತೆಗೆಯೆ ಷಡ್ವಿಧ ಭವನಂಗಳಾದುವವರಲ್ಲಿ ಮೊದಲು ಮನೆಯ ಪರಿವಿಡಿಯಿಂ, ಪರಬ್ರಹ್ಮ ವಿಜ್ಞಾನಬ್ರಹ್ಮ ಆನಂದಬ್ರಹ್ಮ ಕಲಾಬ್ರಹ್ಮ ಪಿಂಡಬ್ರಹ್ಮ ಮೂರ್ತಿಬ್ರಹ್ಮವೆಂಬ ಷಡ್ವಿಧ ಬ್ರಹ್ಮವನು ಬಳಿಕ ದಕ್ಷಿಣಭಾಗದ ಅಡ್ಡ ರೇಖೆಗಳೇಳನುನ್ನತಂಮಾಡಿ ನೀಳವೆರಡು ರೇಖೆಗಳಂತೆಗೆಯೆ, ಹನ್ನೆರಡು ಮನೆಗಳಾದುವವರಲ್ಲಿ ಕಡೆಯ ಮೇಲಣ ಮನೆಯ ತರಂಗೊಂಡು ಆರರಲ್ಲಿ ಚಿಚ್ಛಕ್ತಿ, ಪರಶಕ್ತಿ, ಆದಿಶಕ್ತಿ, ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿ, ಎಂಬ ಷಡ್ವಿಧ ಶಕ್ತಿಗಳಂ, ಅದರೀಚೆಗೆ ಮೇಲಣ ಮನೆಯ ಬಳಿವಿಡಿದಾರಲ್ಲಿ ಶಿವಾಂಗ, ಭೂತಾಂಗ, ಯೋಗಾಂಗ, ಕಾಮಾಂಗ, ವಿದ್ಯಾಂಗ ಕರ್ಮಾಂಗ, ಎಂಬ ಷಡ್ವಿಧಾಂಗಮಂ, ಮತ್ತಂ ಮೂವತ್ತಾರು ಮನೆಗಳೊಳಗೆ ಉತ್ತರಭಾಗದ ಮೊದಲು ಮನೆಯ ಮೇಲಣಂ ಕೆಳಗೆ, ಆರರಲ್ಲಿ ಶಿವ, ಕ್ಷೇತ್ರಜ್ಞ, ಕರ್ತಾರ, ಭಾವ, ಚೈತನ್ಯ ಅಂತ್ಯಾಮಿಯೆಂಬ ಷಡ್ವಿಧ ಮೂರ್ತಿಗಳಂ ಬಳಿಕೀ ಪ್ರಕಾರದಿಂ ಎರಡನೆಯ ಪಂಕ್ತಿಯ ಮನೆಗಳಲ್ಲಿ ಸದಾಶಿವ, ಆಕಾಶ, ಶಬ್ದ, ಜ್ಞಾನ, ಶ್ರೋತ್ರ, ವಾಕ್ಕು ಎಂಬ ಷಟ್ತತ್ತ್ವಂಗಳಂ, ಮೂರನೆಯ ಪಂಕ್ತಿಯ ಮನೆಗಳಲ್ಲಿ ಈಶ್ವರ, ವಾಯು, ಸ್ಪರ್ಶನ, ಮನ, ತ್ವಕ್ಕು, ಪಾಣಿ, ಎಂಬ ಷಟ್ತತ್ತ್ವಂಗಳಂ, ನಾಲ್ಕನೆಯ ಪಂಕ್ತಿಯ ಮನೆಗಳಲ್ಲಿ ರುದ್ರ, ಅಗ್ನಿ, ರೂಪ, ಅಹಂಕಾರ, ಚಕ್ಷು, ಪಾದಯೆಂಬ ಷಟ್ತತ್ತ್ವಂಗಳಂ, ಐದನೆಯ ಪಂಕ್ತಿಯ ಮನೆಗಳಲ್ಲಿ ವಿಷ್ಣು, ಅಪ್ಪು, ರಸ, ಚಿತ್ತ, ಜಿಹ್ವೆ, ಗುಹ್ಯವೆಂಬ ಷಟ್ತತ್ತ್ವಂಗಳಂ, ಆರನೆಯ ಮನೆಗಳಲ್ಲಿ ಬ್ರಹ್ಮ, ಪೃಥ್ವಿ, ಗಂಧ, ಚಿತ್ತ, ಘ್ರಾಣ, ವಾಯು, ಎಂಬ ಷಟ್ತತ್ತ್ವಂಗಳಂ ಬರೆಯಲು ಯಂತ್ರ ಲಕ್ಷಣತತ್ವನ್ಯಾಸ ಮುಗಿಯಿತು. ಇಂತಿವರ ಪ್ರವೃತ್ತಿಮಾರ್ಗವೆಂತೆಂದೊಡೆ:_ ಷಡ್ವಿಧ ಬ್ರಹ್ಮ ವಂದೊಂದಾರಾರಾಗಿ, ಷಟ್ತ್ರಿಂಶತತ್ವವಾದುವವಕ್ಕೆ ವಿವರ:_ ಪರಬ್ರಹ್ಮದಿಂ, ಶಿವ, ಕ್ಷೇತ್ರಜ್ಞ, ಕರ್ತಾರ, ಭಾವ, ಚೈತನ್ಯ, ಅಂತರ್ಯಾಮಿಯೆಂಬ ಷಟ್ತತ್ತ್ವಂಗಳಾದವು. ವಿಜ್ಞಾನ ಬ್ರಹ್ಮದಿಂ ಸದಾಶಿವ, ಆಕಾಶ, ಶಬ್ದ, ಜ್ಞಾನ, ಶ್ರೋತ್ರ, ವಾಕ್ಕು, ಎಂಬ

ಷಟ್ತತ್ವಂಗಳಾದುವು. ಆನಂದ ಬ್ರಹ್ಮದಿಂ, ಈಶ್ವರ, ವಾಯು, ಸ್ಪರ್ಶನ, ಮನ, ತ್ವಕ್ಕು, ಪಾಣಿಯೆಂಬುವ ಷಟ್ತತ್ವಂಗಳಾದುವು. ಕಲಾಬ್ರಹ್ಮದಿಂ, ರುದ್ರ, ತೇಜ, ರೂಪು, ಅಹಂಕಾರ, ನೇತ್ರ, ಪಾದ ಎಂಬ ಷಟ್ತತ್ವಂಗಳಾದುವು. ಪಿಂಡಬ್ರಹ್ಮದಿಂ, ವಿಷ್ಣು, ಅಪ್ಪು, ರಸ, ಚಿತ್ತ, ಜಿಹ್ವೆ, ಗುಹ್ಯವೆಂಬ ಷಟ್ತತ್ವಂಗಳಾದುವು. ಮೂರ್ತಿಬ್ರಹ್ಮದಿಂ ಬ್ರಹ್ಮ, ಪೃಥ್ವಿ, ಗಂಧ, ಚಿತ್ತ, ಘ್ರಾಣ, ವಾಯುವೆಂಬ ಷಟ್ತತ್ತ್ವಂಗಳಾದವು. ಇಂತೀ ಬ್ರಹ್ಮವರ್ಗಮಂ ನಿರೂಪಿಸಿದ. ತದನಂತರದಲ್ಲಿ ಶಕ್ತಿವರ್ಗಮಂ ನಿರೂಪಿಸಲ್ಪಟ್ಟುದು. ಪರಮಜ್ಞಾನ ಶಕ್ತಿಯಿಂ ಚಿದಾದಿ ಷಡ್ವಿಧ ಶಕ್ತಿಗಳುದಯವಾಗಿ, ಶಿವಾಂಗ, ಭೂತಾಂಗ, ಯೋಗಾಂಗ, ಕಾಮಾಂಗ, ವಿದ್ಯಾಂಗ, ಕರ್ಮಾಂಗ, ಎಂಬ ಷಡಂಗಸ್ವರೂಪವಾಗಿ, ಷಟ್ತ್ರಿಂಶತ್ತತ್ವಂಗಳಿಗೆ ಕಾರಣವಾಗಿರ್ಪುವವಕ್ಕೆ ವಿವರ :_ ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಸದಾಶಿವನೆಂಬಾರಕ್ಕೆ, ಶಿವಾಂಗ, ಸ್ವರೂಪವಾದ ಚಿಚ್ಛಕ್ತಿಯೇ ಕಾರಣವು, ಭೂಮಿ, ಜಲ, ಅಗ್ನಿ, ಮಾರುತ, ಆಕಾಶ, ಕ್ಷೇತ್ರಜ್ಞ ಎಂಬಾರಕ್ಕೆ, ಭೂತಾಂಗಸ್ವರೂಪವಾದ ಪರಶಕ್ತಿಯೇ ಕಾರಣವು. ಗಂಧ, ರಸ, ರೂಪು, ಸ್ಪರ್ಶ, ಶಬ್ದ, ಕರ್ತಾರಯೆಂಬಾರಕ್ಕೆ ಯೋಗಾಂಗಸ್ವರೂಪವಾದ ಆದಿಶಕ್ತಿಯೇ ಕಾರಣವು. ಚಿತ್ತ ಬುದ್ಧಿ ಅಹಂಕಾರ ಮನ ಜ್ಞಾನ ಭಾವ ಯೆಂಬಾರಕ್ಕೆ ಕರ್ಮಾಂಗ ಸ್ವರೂಪವಾದ ಇಚ್ಛಾಶಕ್ತಿಯೇ ಕಾರಣವು. ಘ್ರಾಣ, ಜಿಹ್ವೆ, ನೇತ್ರ, ತ್ವಕ್ಕು, ಶ್ರೋತ್ರ, ಚೈತನ್ಯವೆಂಬಾರಕ್ಕೆ, ವಿದ್ಯಾಂಗಸ್ವರೂಪವಾದ ಜ್ಞಾನಶಕ್ತಿಯೇ ಕಾರಣವು. ಪಾಯು, ಗುಹ್ಯ, ಪಾದ, ಪಾಣಿ, ವಾಕ್ಕು, ಅಂತರ್ಯಾಮಿ ಯೆಂಬಾರಕ್ಕೆ ಕರ್ಮಾಂಗಸ್ವರೂಪವಾದ ಕ್ರಿಯಾಶಕ್ತಿಯೇ ಕಾರಣವು. ಇಂತಿವರ ನಿವೃತ್ತಿ ಮಾರ್ಗವೆಂತೆಂದೊಡೆ:_ ಚಿದಾದಿ ಕರ್ಮಪರ್ಯಂತಸೃಷ್ಟಿ ಪರಾದಿ ಮೂರ್ತಿ ಪರ್ಯಂತಸಂಹಾರವದಕ್ಕೆ ವಿವರ:_ ಶಿವ ಮೊದಲಾದ ಆರು ತತ್ವಂಗಳು ಪರಬ್ರಹ್ಮದಲ್ಲಿ, ಸದಾಶಿವ ಮೊದಲಾದ ಆರು ತತ್ವಂಗಳು ವಿಜ್ಞಾನ ಬ್ರಹ್ಮದಲ್ಲಿ, ಈಶ್ವರಿ ಮೊದಲಾದಾರು ತತ್ವಂಗಳು ಆನಂದಬ್ರಹ್ಮದಲ್ಲಿ, ರುದ್ರ ಮೊದಲಾದಾರು ತತ್ವಂಗಳು ಕಲಾಬ್ರಹ್ಮದಲ್ಲಿ, ವಿಷ್ಣು ಮೊದಲಾದಾರು ತತ್ವಂಗಳು ಪಿಂಡಬ್ರಹ್ಮದಲ್ಲಿ, ಬ್ರಹ್ಮಮೊದಲಾದಾರು ತತ್ವಂಗಳು ಮೂರ್ತಿಬ್ರಹ್ಮದಲ್ಲಿ ಲೀನವಾಗಲು, ಬ್ರಹ್ಮಮೊದಲಾದ ಷಡ್ವಿಧವೂ ಶಿವಾಂಗಸ್ವರೂಪವಾದ ಚಿಚ್ಛಕ್ತಿಯಲ್ಲಿ ಭೂಮಿ ಮೊದಲಾದ ಷಡ್ವಿಧವೂ ಶಿವಾಂಗಸ್ವರೂಪವಾದ ಚಿಚ್ಛಕ್ತಿಯಲ್ಲಿ ಭೂಮಿ ಮೊದಲಾದ ಷಡ್ವಿಧವೂ ಯೋಗಾಂಗಸ್ವರೂಪವಾದ ಪರಶಕ್ತಿಯಲ್ಲಿ ಗಂಧ ಮೊದಲಾದ ಷಡ್ವಿಧವೂ ಯೋಗಾಂಗಸ್ವರೂಪವಾದ ಆದಿಶಕ್ತಿಯಲ್ಲಿ ಚಿತ್ತು ಮೊದಲಾದ ಷಡ್ವಿಧವೂ ಕಾಮಾಂಗ ಸ್ವರೂಪವಾದ ಇಚ್ಛಾಶಕ್ತಿಯಲ್ಲಿ ಘ್ರಾಣ ಮೊದಲಾದ ಷಡ್ವಿಧವೂ ವಿದ್ಯಾಂಗಸ್ವರೂಪವಾದ ಜ್ಞಾನಶಕ್ತಿಯಲ್ಲಿ ವಾಯು ಮೊದಲಾದ ಷಡ್ವಿಧವೂ ಕರ್ಮಾಂಗ ಸ್ವರೂಪವಾದ ಕ್ರಿಯಾಶಕ್ತಿಯಲ್ಲಿ ಅಡಗಿದವು. ಇಂತಾಗಲಾ ಷಡ್ವಿಧಬ್ರಹ್ಮವೂ ತಾವು ಒಂದೊಂದರಲ್ಲಿ ಲೀನವಾಗಿ ಪರವಸ್ತುವಿನಲ್ಲಿ ವಿಶ್ರಾಂತಿಯಾಗಲಾ ಕ್ರಿಯಾಶಕ್ತಿ ಜ್ಞಾನಶಕ್ತಿಯ ಸಹಸ್ರಾಂಶದಲ್ಲಿ, ಆ ಜ್ಞಾನಶಕ್ತಿಯೆ ಇಚ್ಛಾಶಕ್ತಿಯೆ ಸಹಸ್ರಾಂಶದಲ್ಲಿ, ಆ ಇಚ್ಛಾಶಕ್ತಿಯೆ ಆದಿಶಕ್ತಿಯ ಸಹಸ್ರಾಂಶದಲ್ಲಿ, ಆ ಆದಿಶಕ್ತಿಯೆ ಪರಶಕ್ತಿಯ ಸಹಸ್ರಾಂಶದಲ್ಲಿ, ಆ ಪರಶಕ್ತಿ ಚಿಚ್ಛಕ್ತಿಯ ಸಹಸ್ರಾಂಶದಲ್ಲಿ, ಲೀನವಾಗಿ ಪರಜ್ಞಾನಶಕ್ತಿಯನೊಡಗೂಡಿ ಪರವಸ್ತುವಿನಲ್ಲಿ ವಿಶ್ರಾಂತಿಯಾಗಲೊಡನೆ, ಆ ಪರತತ್ವ ನಿತ್ಯ ನಿರಾಳ ನಿಶ್ಚಿಂತ ನಿರ್ಮಾಯನಾಗಿ,ಅದ್ವಿತೀಯ ಸ್ವರೂಪವಾಗಿರ್ಪುದು. ಇಂತೀ ತತ್ವನಿರ್ಣಯವನರಿವುದೇ ಬ್ರಹ್ಮಜ್ಞಾನ. ಆ ಜ್ಞಾನವೇ ಸತ್ಯಾನಂದಮಯವಾಗಿರ್ಕುಂ. ಷಡ್ಬ್ರಹ್ಮೋದ್ಧರಣೆಯ ಸಂಬಂಧ ಸಮಾಪ್ತ ಮಂಗಳಮಹಾ. ಶ್ರೀ ಶ್ರೀ ಶ್ರೀ ಶ್ರೀ ಶ್ರೀ

॥ ಶ್ರೀ ಗುರು ಬಸವಲಿಂಗಾಯ ನಮಃ ॥

**೯. ಪಂಚಮೂರ್ತಿಲಿಂಗೋದ್ಧರಣೆ**

ಇಂತೀ ಷಡ್ಬ್ರಹ್ಮೋತ್ಪತ್ತಿ ವಿಶ್ರಾಂತಿ ಸ್ಥಾನಮಪ್ಪ ನಿಷ್ಕಲ ಪರಶಿವನಿಂದಾದ ಪಂಚಮೂರ್ತಿ ಲಿಂಗೋದ್ಧರಣೆಯ ಸಂಬಂಧವೆಂತೆಂದೊಡೆ: ನಿಷ್ಕಲಶಿವನ ಮಧ್ಯದಲ್ಲಿ ಚಿಚ್ಛಕ್ತಿಯುದಯಿಸಿದಳು, ಆ ಚಿಚ್ಛಕ್ತಿಯ ಮಧ್ಯದಲ್ಲಿ

ಶಾಂತಾತೀತೋತ್ತರೆಯೆಂಬ ಕಲೆ, ಆ ಶಾಂತಾತೀತೋತ್ತರೆಯೆಂಬ ಕಲೆಯ ಮಧ್ಯದಲ್ಲಿ ಮಹಾಲಿಂಗ, ಆ ಮಹಾಲಿಂಗದ ಮಧ್ಯದಲ್ಲಿ ನಿರ್ಮುಕ್ತಸಾದಾಖ್ಯ, ಆ ನಿರ್ಮುಕ್ತ ಸಾದಾಖ್ಯದ ಮಧ್ಯದಲ್ಲಿ ಪಶುಪತಿಯೆಂಬ ಕಲಾಮೂರ್ತಿ, ಆ ಪಶುಪತಿಯೆಂಬ ಕಲಾಮೂರ್ತಿಯ ಮಧ್ಯದಲ್ಲಿ ಶಿವನೆಂಬ ಐಕ್ಯ, ಆ ಶಿವನೆಂಬ ಐಕ್ಯನ ಮಧ್ಯದಲ್ಲಿ ಉಪಮಾತೀತನು, ಆ ಉಪಮಾತೀತನ ಮಧ್ಯದಲ್ಲಿ ಆತ್ಮನು ಇಂತು ಮಹಾಸಾದಾಖ್ಯದ ಸೃಷ್ಟಿ. ಆ ನಿಷ್ಕಲ ಶಿವನ ಮಧ್ಯದಲ್ಲಿ ಪರಶಕ್ತಿ, ಆ ಪರಶಕ್ತಿಯ ಮಧ್ಯದಲ್ಲಿ ಶಾಂತಾತೀತೆಯೆಂಬ ಕಲೆ, ಆ ಶಾಂತಾತೀತೆಯೆಂಬ ಕಲೆಯ ಮಧ್ಯದಲ್ಲಿ ಪ್ರಸಾದಲಿಂಗ, ಆ ಪ್ರಸಾದಲಿಂಗದ ಮಧ್ಯದಲ್ಲಿ ಶಿವಸಾದಾಖ್ಯ, ಆ ಶಿವಸಾದಾಖ್ಯದ ಮಧ್ಯದಲ್ಲಿ ಮಹಾದೇವನೆಂಬ ಕಲಾಮೂರ್ತಿ, ಮಹಾದೇವನೆಂಬ ಕಲಾಮೂರ್ತಿಯ ಮಧ್ಯದಲ್ಲಿ ಕ್ಷೇತ್ರಜ್ಞನೆಂಬ ಶರಣ, ಆ ಕ್ಷೇತ್ರಜ್ಞನೆಂಬ ಶರಣನ ಮಧ್ಯದಲ್ಲಿ ಸದಾಶಿವನು, ಆ ಸದಾಶಿವನ ಮಧ್ಯದಲ್ಲಿ ಆಕಾಶ ಇಂತು ಶಿವನ ಸಾದಾಖ್ಯದ ಸೃಷ್ಟಿ. ಆ ನಿಷ್ಕಲ ಶಿವನ ಮಧ್ಯದಲ್ಲಿ ಆದಿಶಕ್ತಿ, ಆ ಆದಿಶಕ್ತಿಯ ಮಧ್ಯದಲ್ಲಿ ಶಾಂತಿಯೆಂಬ ಕಲೆ, ಆ ಶಾಂತಿಯೆಂಬ ಕಲೆಯ ಮಧ್ಯದಲ್ಲಿ ಜಂಗಮಲಿಂಗ, ಆ ಜಂಗಮಲಿಂಗದ ಮಧ್ಯದಲ್ಲಿ ಮೂರ್ತಿ ಸಾದಾಖ್ಯ, ಆ ಮೂರ್ತಿ ಸಾದಾಖ್ಯದ ಮಧ್ಯದಲ್ಲಿ ಭೀಮೇಶ್ವರನೆಂಬ ಕಲಾಮೂರ್ತಿ, ಆ ಭೀಮೇಶ್ವರನೆಂಬ ಕಲಾಮೂರ್ತಿಯ ಮಧ್ಯದಲ್ಲಿ ಕರ್ತಾರನೆಂಬ ಪ್ರಾಣಲಿಂಗಿ, ಆ ಕರ್ತಾರನೆಂಬ ಪ್ರಾಣಲಿಂಗಿಯ ಮಧ್ಯದಲ್ಲಿ ಈಶ್ವರ, ಆ ಈಶ್ವರನ ಮಧ್ಯದಲ್ಲಿ ವಾಯು, ಇಂತು ಆ ಮೂರ್ತಿಸಾದಾಖ್ಯದ ಸೃಷ್ಟಿ. ಆ ನಿಷ್ಕಲ ಶಿವನ ಮಧ್ಯದಲ್ಲಿ ಇಚ್ಛಾಶಕ್ತಿ, ಆ ಇಚ್ಛಾಶಕ್ತಿಯ ಮಧ್ಯದಲ್ಲಿ ವಿದ್ಯೆಯೆಂಬ ಕಲೆ, ಆ ವಿದ್ಯೆಯೆಂಬ ಕಲೆಯ ಮಧ್ಯದಲ್ಲಿ ಶಿವಲಿಂಗ, ಆ ಶಿವಲಿಂಗದ ಮಧ್ಯದಲ್ಲಿ ಮೂರ್ತಿ ಸಾದಾಖ್ಯ, ಆ ಮೂರ್ತಿ ಸಾದಾಖ್ಯದ ಮಧ್ಯದಲ್ಲಿ ಮಹಾರುದ್ರನೆಂಬ ಕಲಾಮೂರ್ತಿ, ಆ ಮಹಾರುದ್ರನೆಂಬ ಕಲಾಮೂರ್ತಿಯ ಮಧ್ಯದಲ್ಲಿ ಭಾವನೆಂಬ ಪ್ರಸಾದ, ಆ ಭಾವನೆಂಬ ಪ್ರಸಾದಿಯ ಮಧ್ಯದಲ್ಲಿ ಆ ರುದ್ರನು, ಆ ರುದ್ರನ ಮಧ್ಯದಲ್ಲಿ ಅಗ್ನಿ ಇಂತು ಮೂರ್ತಿ ಸಾದಾಖ್ಯದ ಸೃಷ್ಟಿ, ಆ ನಿಷ್ಕಲ ಶಿವನ ಮಧ್ಯದಲ್ಲಿ ಜ್ಞಾನಶಕ್ತಿ, ಆ ಜ್ಞಾನಶಕ್ತಿಯ ಮಧ್ಯದಲ್ಲಿ ಪ್ರತಿಷ್ಠೆಯೆಂಬ ಕಲೆ, ಆ ಪ್ರತಿಷ್ಠೆಯೆಂಬ ಕಲೆಯ ಮಧ್ಯದಲ್ಲಿ ಗುರುಲಿಂಗ, ಆ ಗುರುಲಿಂಗದ ಮಧ್ಯದಲ್ಲಿ, ಕರ್ತೃ ಸಾದಾಖ್ಯ, ಆ ಕರ್ತೃಸಾದಾಖ್ಯದ ಮಧ್ಯದಲ್ಲಿ ಶರ್ವನೆಂಬ ಕಲಾಮೂರ್ತಿ, ಶರ್ವನೆಂಬ ಕಲಾಮೂರ್ತಿಯ ಮಧ್ಯದಲ್ಲಿ ಚೈತನ್ಯನೆಂಬ ಮಹೇಶ್ವರ, ಆ ಚೈತನ್ಯನೆಂಬ ಮಹೇಶ್ವರನ ಮಧ್ಯದಲ್ಲಿ ವಿಷ್ಣು, ಆ ವಿಷ್ಣುವಿನ ಮಧ್ಯದಲ್ಲಿ ಅಪ್ಪು ಇಂತು ಕರ್ಮಸಾದಾಖ್ಯದ ಸೃಷ್ಟಿ, ಅನಿಷ್ಕಕ ಶಿವನ ಮಧ್ಯದಲ್ಲಿ ಕ್ರಿಯಾಶಕ್ತಿ, ಆ ಕ್ರಿಯಾಶಕ್ತಿಯ ಮಧ್ಯದಲ್ಲಿ ನಿವೃತ್ತಿಯೆಂಬ ಕಲೆ, ಆ ನಿವೃತ್ತಿಯೆಂಬ ಕಲೆಯ ಮಧ್ಯದಲ್ಲಿ ಆಚಾರಲಿಂಗ, ಆ ಆಚಾರಲಿಂಗದ ಮಧ್ಯದಲ್ಲಿ ಕರ್ಮಸಾದಾಖ್ಯ, ಆ ಕರ್ಮಸಾದಾಖ್ಯದ ಮಧ್ಯದಲ್ಲಿ ಭವನೆಂಬ ಕಲಾಮೂರ್ತಿ, ಆ ಭವನೆಂಬ ಕಲಾಮೂರ್ತಿಯ ಮಧ್ಯದಲ್ಲಿ ಅಂತರ್ಯಾಮಿಯೆಂಬ ಭಕ್ತ, ಆ ಅಂತರ್ಯಾಮಿಯೆಂಬ ಭಕ್ತನ ಮಧ್ಯದಲ್ಲಿ ಬ್ರಹ್ಮ, ಆ ಬ್ರಹ್ಮನ ಮಧ್ಯದಲ್ಲಿ ಪೃಥ್ವಿ, ಆ ಬ್ರಹ್ಮನಿಂದ ನರರು, ಸುರರು, ಅಸುರರು, ಅಂಡಜ, ಸ್ವೇದಜ, ಉದ್ಭಿಜ, ಜರಾಯುಜವೆಂಬ ಸಚರಾಚರಂಗಳೆಲ್ಲವು ಹುಟ್ಟಿದವು. ಇಂತಿವೆಲ್ಲವು ಶಿವನ ನೆನಹು ಮಾತ್ರದಿಂದಲಾದವಯ್ಯ ಮಹಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೆ! ಪಂಚಮೂರ್ತಿಲಿಂಗೋದ್ಧರಣೆಯ ಸಂಬಂಧ ಸಮಾಪ್ತ ಮಂಗಳಮಹಾ. ಶ್ರೀ ಶ್ರೀ ಶ್ರೀ ಶ್ರೀ ಶ್ರೀ ॥ ಶ್ರೀ ಗುರು ಬಸವಲಿಂಗಾಯ ನಮಃ ॥

**೧೦. ಶಾಂಭವೀಚಕ್ರೋದ್ಧರಣೆ**

ಇಂತೀ ಷಡ್ಬ್ರಹ್ಮಾದಿ ಸಕಲದೇವತಾ ಮಂತ್ರಾಕ್ಷರಸ್ವರೂಪವಾಗಿ, ಶಿವಜ್ಞಾನಮಯ ವಹಂತ ಶಾಂಭವೀಚಕ್ರವನುದ್ಧರಿಸುವ. ಲಕ್ಷಣವನು, ಅಕ್ಷರಂಗಳ ಬರೆವ ಕ್ರಮವನು, ಅಧಿದೈವಂಗಳನು, ಸೌಮ್ಯಜ್ಞಾನ ಸಾಧನ ಸಂಪತ್ತನು; ಶ್ರುತಿ ಗುರುವಚನಂಗಳಿಂ ಸಂಕ್ಷೇಪಮಾತ್ರವಾಗಿ ನಿರೂಪಿಸಲ್ತಕ್ಕುದದೆಂತೆಂದೊಡೆ:_ ತತ್ವಜ್ಞರಾದವರು ಸುಸ್ಥಲದಲ್ಲಿ ವಾತುಲತಂತ್ರ ವಿಧಾನೋಕ್ತವಾಗಿ,

ಭೂರ್ಜಪತ್ರದಲ್ಲಿ ಹನ್ನೆರಡಂಗುಲ ವಿಸ್ತಾರಮಂ ಗೊಂಡು ಗೋರೋಚನ, ಕುಂಕುಮದ ರಸ, ಕರ್ಪೂರ, ಅಗರು, ಶ್ರೀಗಂಧಂಗಳೊಡನೆ ಕೂಡಿ ಬರೆವ ವರ್ಣಂಗಳಾವುವೆಂದೊಡೆ:– ರಕ್ತ ವರ್ಣದ ಸೂತ್ರಂಗಳಿಂ ಮೂಡಣ ದಿಕ್ಕಿನಿಂ ಪಡುವಣ ದಿಕ್ಕುನ್ನೆಯ್ಯುವಹಾಗೆ ಎರಡು ಸೂತ್ರಂಗಂಳಂ, ತೆಂಕಣಿಂ ಬಡಗಣನ್ನೆಯ್ಯುವ ಹಾಗೆ ಎರಡು ಸೂತ್ರಂಗಳಿಂ ಮಿಡಿಯಲಾಗಿ, ಚತುಸ್ಸೂತ್ರ ಪಾತನವಾದ ಚಕ್ರಕ್ಷೇತ್ರವು, ಗಣಿತ ಪ್ರಮಾಣಕ್ಕೆ ನೂರನಾಲ್ವತ್ತು ನಾಲ್ಕಂಗುಲ ಪ್ರಮಾಣವಹುದು, ಬಳಿಕ ಚತುರಶ್ರಮಧ್ಯದಲ್ಲಿ ಮೂಡ ಪಡುವತೆಂಕ ಬಡಗವಾರಂಗುಲವಪ್ಪ ಹಾಗೆ, ಮಧ್ಯಸ್ಥಾನದಲ್ಲಿ ಕವೆಯಾಕಾರದ ಕೊನೆಯನೂರಿ, ಮತ್ತೊಂದು ಮೊನೆಗೆ ಬತ್ತಿಯಂಸುತ್ತಿ ಎರಡಂಗುಲ ಪ್ರಮಾಣದ ಹಾಗೆ ಮಾಡಿ ಪೀತವರ್ಣದಿಂ ತಿರುಹಲದು ಕರ್ಣಿಕಾವೃತ್ತವೆನಿಸುವುದು. ಆ ಕರ್ಣಿಕಾವೃತ್ತದ ಬಹಿಃಪ್ರದೇಶದಲ್ಲಿ ಒಂದು ವೃತ್ತವ, ಮೂರಂಗುಲ ಪ್ರಮಾಣ ವಪ್ಪಹಾಗೆ ರಕ್ತವರ್ಣದಿಂ ಮೂವತ್ತೊಂದು ವೃತ್ತವ ನಾಲ್ಕಂಗುಲ ಪ್ರಮಾಣದ ಹಾಗೆ ಹೆಚ್ಚಿಸಿ ಕೃಷ್ಣವರ್ಣದಿಂ ಮತ್ತೊಂದು ವೃತ್ತವ ಹೀಗೆ ಒಂದೊಂದು ಬಳಸಿಕೊಂಡಿಹ ಹಾಗೆ ತಿರುಹಲು, ಮಧ್ಯದಲ್ಲಿ ವರ್ಣತ್ರಯಾತ್ಮಕವಾದ ವೃತ್ತ ತ್ರಯಂಗಳು ಮಂಡಲತ್ರಯಂಗಳೆನಿಸಿಕೊಂಬುವು, ಇನ್ನು ಕರ್ಣಿಕಾವೃತ್ತದಲ್ಲಿ ಕವೆಯಾಕಾರವನೂರಿ ರಂಧ್ರವಂ ಮಾಡಲದು, ಸೂಕ್ಷ್ಮಕರ್ಣಿಕೆಯೆನಿಸುವುದು. ಬಳಿಕದರ ಹೊರವಳಯದೊಳು, ಸುತ್ತಿ ಬರಲಕ್ಕಣಿಕೆಯಲ್ಲಿ ಶ್ವೇತವರ್ಣದಿಂ ಕೇಸರಸಹಿತವಾದ ನಾಲ್ಕೆಸಳನು, ಅದರ ಮೇಲೆ ಒಂದನೆಯವೃತ್ತದಿಂ ಅಷ್ಟ ದಿಕ್ಕಿನಲ್ಲಿ ಅಷ್ಟಪತ್ರಂಗಳನು, ಅದರ ಹೊರಗಣ ಎರಡನೆಯ ವೃತ್ತದಲ್ಲಿ ಎಂಟು ದಳಂಗಳನು ಎಂಟು ಉಪದಳಂಗಳನು, ಅದರ ಹೊರಗಣ ಮೂರನೆಯ ಆವರಣದಲ್ಲಿ ರಕ್ತವರ್ಣದಿಂ ಹದಿನಾರುದಳಂಗಳಂ ಹದಿನಾರು ಉಪದಳಂಗಳನು, ಬಾಹ್ಯ ವೃತ್ತದಲ್ಲಿ ಮೂವತ್ತೆರಡು ಮುಖಾಕಾರಂಗಳಂ ಸುತ್ತಿ ಬರೆಯಲು ಚಕ್ರನ್ಯಾಸ ಮುಗಿಯಿತು.

ಇನ್ನು ಪೀತವರ್ಣದಿಂ ಬರೆವ ಅಕ್ಷರನ್ಯಾಸ:– ಆ ಕರ್ಣಿಕಾವೃತ್ತದ ಮಧ್ಯದಲ್ಲಿ, ಶಿವಬೀಜವೆಂಬ ಹಕಾರವನು, ಪೂರ್ವದಳದಲ್ಲಿ ಸಕಾರವನು, ದಕ್ಷಿಣ ದಳದಲ್ಲಿ ಅಕಾರವನು, ಪಶ್ಚಿಮದಳದಲ್ಲಿ ಐಕಾರವನು, ಉತ್ತರದಳದಲ್ಲಿ ಕ್ಷಕಾರವನು ಬರೆವುದು. ಇನ್ನು ಆವರಣತ್ರಯಂಗಳಲ್ಲಿ ಬರೆವ ನ್ಯಾಸಕಾಕ್ಷರ ವಿಕಲಕ್ಷರಂಗಳ ವಿವರ:– ಸಕಾರವನು ಪ್ರಥಮಾವರಣದ ಪೂರ್ವದಳದಲ್ಲಿ, ಅಕಾರವನು ಮಧ್ಯಾವರಣದ ಪೂರ್ವದಳಗಳಲ್ಲಿ ಅಕಾರವನು, ಇಂದ್ರಾಗ್ನಿಗಳ ಮಧ್ಯದ ಅಪದಿಶದಳದಲ್ಲಿ ಕಕಾರವನು, ಬಾಹ್ಯವೃತ್ತದ ಇಂದ್ರದಳದಲ್ಲಿ ಖಕಾರವನು, ಇಂದ್ರಾಗ್ನಿಗಳ ಮಧ್ಯವಿದಿಕ್ಕಿನ ಮಧ್ಯದಲ್ಲಿ ಗಕಾರವನು ಅಪದಿಗ್ದಳದಲ್ಲಿ ಬರೆಯಲು, ಇಂದ್ರದಳ ಮೊದಲಾದ ಮೂರುದಳಂಗಳಲ್ಲಿ ಮೂರಕ್ಷರನ್ಯಾಸ ಮುಗಿಯಿತು.

ಈ ಮೂರರ ಮುಂದಣ ಅಗ್ನಿ ದಳವ ಸೇರಿದ ದಳಂಗಳಲ್ಲಿ ಅಕ್ಷರನ್ಯಾಸವಿಲ್ಲ. ಅದೇನು ಕಾರಣವೆಂದೊಡೆ:– ಸ್ಪರ್ಶಾಕ್ಷರ ಇಪ್ಪತ್ತೈದರೊಳಗೆ ಮಕಾರವೊಂದು ಪ್ರಥಮಾವರಣದ ವ್ಯಾಪಕಾಕ್ಷರಂಗಳೊಳಗೆ ಸೇರಿದ ಕಾರಣ, ಅದನೊಂದಂ ಕಳೆದು, ಉಳಿದ ಇಪ್ಪತ್ತುನಾಲ್ಕು ಅಕ್ಷರಂಗಳನು ಬಾಹ್ಯವೃತ್ತದಲ್ಲಿಯ ಮೂವತ್ತೆರಡು ದಳಂಗಳೊಳಗೆ ಇಪ್ಪತ್ತುನಾಲ್ಕುದಳಂಗಳಲ್ಲಿ ನ್ಯಾಸಮಾಡಿದೊಡೆ ಎಂಟು ಹಳಂಗಳುಳಿವುವು. ಅದು ಕಾರಣವವರಲ್ಲಿ ನ್ಯಾಸವಿಲ್ಲ. ಈ ಕ್ರಮದಿಂದಲೇ ಈಶಾನ್ಯಾಂತಮಾಗಿ ತ್ರಿವರ್ಗಾಕ್ಷರ ನ್ಯಾಸವ ಮಾಡಬೇಕಾದುದು.

ಇನ್ನು ಷಕಾರವನು ಪ್ರಥಮಾವರಣದ ಅಗ್ನಿದಳದಲ್ಲಿ ಇಕಾರವನು, ಮಧ್ಯಾವರಣದ ಅಗ್ನಿದಳದಲ್ಲಿ ಈಕಾರವನು ಪೂರ್ವೋಕ್ತಕ್ರಮವಾಗಿಯೇ ಅದರ ಸಮೀಪದಳದಲ್ಲಿ ಫಕಾರವನು, ಬಾಹ್ಯಾವರಣದ ಅಗ್ನಿದಳದಲ್ಲಿ ಜಕಾರ ಚಕಾರಂಗಳನು, ಪೂರ್ವೋಕ್ತಕ್ರಮದಿಂದಲೇ ಮುಂದಣ ಎರಡುದಳಂಗಳಲ್ಲಿ ಶಕಾರವನು, ಪ್ರಥಮಾವರಣದ ಯಮದಳದಲ್ಲಿ ಉಕಾರವನು, ಮಧ್ಯಾವರಣದ ಯಮದಳದಲ್ಲಿ ಊಕಾರವನು, ಅದರ ಸಮೀಪದಳದಲ್ಲಿ ಛಕಾರವನು, ಬಾಹ್ಯಾವರಣದ ದಳದಲ್ಲಿ

ಜಕಾರ ಝಕಾರಂಗಳನು, ಮುಂದಣ ಎರಡು ದಳಂಗಳಲ್ಲಿ ವಕಾರವನು, ಪ್ರಥಮಾವರಣದ ನೈಋತ್ಯದಳದಲ್ಲಿ ಋಕಾರವನು, ಮಧ್ಯಾವರಣದ ನೈಋತ್ಯದಳದಲ್ಲಿ ೠಕಾರವನು, ಅದರ ಸಮೀಪದಳದಲ್ಲಿ ಞಕಾರವನು, ಬಾಹ್ಯಾವರಣದ ನೈರುತ್ಯದಳದಲ್ಲಿ ಟಕಾರ ಠಕಾರಂಗಳನು, ಮುಂದಣ ಎರಡು ದಳಂಗಳಲ್ಲಿ ಲಕಾರವನು ಪ್ರಥಮಾವರಣದ ವರುಣದಳದಲ್ಲಿ ಲ್ರುಲ್ರೂಕಾರಗಳನು, ಮಧ್ಯಾವರಣವರುಣದಳದಲ್ಲಿ ಡಕಾರವನು, ಬಾಹ್ಯಾವರಣವರುಣದಳದಲ್ಲಿ ಢಣಕಾರಗಳನು ಮುಂದಣ ಎರಡು ದಳಂಗಳಲ್ಲಿ ರಕಾರವನು, ಪ್ರಥಮಾವರಣದ ವಾಯವ್ಯದಳದಲ್ಲಿ ಏಕಾರವನು, ಮಧ್ಯಾವರಣದಳಗಳಲ್ಲಿ ಐಕಾರವನು, ಅದರ ಸಮೀಪದಳದಲ್ಲಿ ತಕಾರವನು ಬಾಹ್ಯಾವರಣದ ಮಾರುತದಳದಲ್ಲಿ ಥಕಾರ ದಕಾರಂಗಳನು, ಮುಂದಣ ಎರಡು ದಳಂಗಳಲ್ಲಿ ಯಕಾರವನು, ಪ್ರಥಮಾವರಣದ ಕುಬೇರದಳದಲ್ಲಿ ಓಂಕಾರವನು, ಮಧ್ಯಾವರಣದ ಕುಬೇರದಳದಲ್ಲಿ ಔಕಾರವನು, ಅದರ ಸಮೀಪದಳದಲ್ಲಿ ಧಕಾರವನು, ಬಾಹ್ಯಾವರಣದ ಕುಬೇರದಳದಲ್ಲಿ ನಕಾರ ಪಕಾರಂಗಳನು, ಮುಂದಣ ಎರಡು ದಳಂಗಳಲ್ಲಿ ಮಕಾರವನು, ಪ್ರಥಮಾವರಣದ ಈಶಾನ್ಯದಳದಲ್ಲಿ ಅಕ್ಕೃವನು ಪತ್ತಿರ್ದ ಬಿಂದುಸ್ವರೂಪವನು, ಮಧ್ಯಾವರಣದ ಈಶಾನ್ಯದಳದಲ್ಲಿ ಬಿಂದುದ್ವಿಭಾವವನೆಯ್ದಿ ಅಕಾರವ ಪತ್ತಿರ್ದ ನಿಸರ್ಗವನು, ಅದರ ಸಮೀಪದಳದಲ್ಲಿ ಫಕಾರವನು, ಬಾಹ್ಯಾವರಣದ ಈಶಾನ್ಯ ದಳದಲ್ಲಿ ಕಾರವ ಭಕಾರಂಗಳನು, ಮುಂದಣ ಎರಡು ದಳಂಗಳಲ್ಲಿ ನ್ಯಾಸವ ಮಾಡಲು, ಈ ಆವರಣದ ಕ್ರಮಂಗಳೊಳಗೆ ಪ್ರಥಮಾವರಣ ಪೂರ್ವದಳ ಮೊದಲಾದುವಂ ಕುರಿತು, ಆಯಾ ದಳ ಲಕ್ಷಣಂಗಳಲ್ಲಿ ನ್ಯಾಸವಾದ ನಾಲ್ವತ್ತೆಂಟಕ್ಷರಂಗಳಿಗೆ ಐವತ್ತೊಂದಕ್ಷರಂಗಳ ವಿಭಾಗಸಂಖ್ಯೆಯಾಗುದೆಂತೆಂದೊಡೆ: ಸೌರಕಲಾನ್ಯಾಸದಲ್ಲಿ ಮಕಾರ ಯಕಾರ ಕೂಡಿಹುದಾಗಿ ಆ ಮಕಾರ ಯಕಾರ ಸಮೀಪಸ್ಥವಾಗಹುದು. ಅದು ನಿಮಿತ್ತಂ ಮಕಾರವಾದಿಯಾಗಿ ವ್ಯಾಪಕಾಕ್ಷರ ಹತ್ತರೊಳಗೆ ಯ ರ ಲ ವ ಶ ಷ ಸ ಹ ಎಂಬ ಎಂಟಕ್ಷರವು ಪ್ರಥಮ ವೃತ್ತದ ಈಶಾನ್ಯದಷ್ಟ ದಳಂಗಳಲ್ಲಿ ನ್ಯಾಸವಾದುವು. ಹಕಾರ ಶಿವಬೀಜವಪ್ಪ ಕಾರಣ ಸೂಕ್ಷ್ಮ ಕರ್ಣಿಕೆಯಲ್ಲಿ ನ್ಯಾಸವಾಯಿತು. ಲಕಾರ ಳಕಾರಂಗಳಿಗೆ ಭೇದವಿಲ್ಲದ ಕಾರಣ ಆ ಳಕಾರ ಲಕಾರಾಂತರ್ಗತವಾಯಿತು. ಅಲ್ಲಿ ಆ ಲಕಾರ ಳಕಾರ ಆತ್ಮ ಬೀಜವಪ್ಪ ಕಾರಣ, ಕರ್ಣಿಕಾದಳ ನ್ಯಸ್ತವಾದ ಆ ಆತ್ಮಬೀಜವೆನಿಸುವ ಅಕಾರಾಂತರ್ಗತವಾದಡೆಯು ಅಹುದು. ಕ್ಷಕಾರ ವಿದ್ಯಾತತ್ವವಾದ ಕಾರಣ ಜ್ಞಾನ ಶಕ್ತಿಸ್ವರೂಪದಿಂ ಶಿವಸಮೀಪಸ್ಥವಾಗಿ ಬಡಗಣ ಕರ್ಣಿಕಾದಳದಲ್ಲಿ ನ್ಯಾಸವಾಯಿತು. ಸ್ವರಾಕ್ಷರಂಗಳು ತತ್ವಬೀಜ ಮೂರ್ತಿಬೀಜಂಗಳೆಂದು ಚಿದ್ರೂಪವಾಗಿಹ ಕಾರಣ ಮಧ್ಯವೃತ್ತದ ಪೂರ್ವಾದ್ಯಷ್ಟದಳ ಅಷ್ಟ ಉಪದಳಂಗಳಲ್ಲಿ ನ್ಯಾಸವಾದವು.ಸ್ಪರ್ಶಾಕ್ಷರಗಳಿಪ್ಪತ್ತು ನಾಲ್ಕು ಬಾಹ್ಯವೃತ್ತದ ಪೂರ್ವಾದಿಯಾಗಿ, ಮೂರು ಮೂರು ಕಳಂಗಳ ಮುಂದಣ ಉಪದಳಂಗಳಾದ ಉತ್ತರಾದ್ಯಷ್ಟ ದಳಂಗಳಲ್ಲಿ ಉಮೇಶ, ಚಂಡೇಶ್ವರ, ನಂದಿಕೇಶ್ವರ, ಮಹಾಕಾಳ, ಭೃಂಗಿರಿಟ, ಗಣೇಶ್ವರ, ವೃಷಭೇಶ್ವರ, ಷಣ್ಮುಖನೆಂಬ, ಒಟ್ಟು ಇಪ್ಪತ್ತನಾಲ್ಕು ದಳಂಗಳಲ್ಲಿ ನ್ಯಸ್ತವಾದವು. ಈ ಪರಿಚಕ್ರದಳಂಗಳಲ್ಲಿ ಏಕ ಪಂಚಾಶದ್ವರ್ಣ ಮುಗಿಯಿತು. ಇನ್ನು ದೇವತಾ ಕರ್ಣಿಕಾಮಧ್ಯದಲ್ಲಿ ಸಮಸ್ತ ಮಂತ್ರಾಧಾರ ಸ್ವರೂಪಿಣಿಯಾದ ಅಪರಶಕ್ತಿ ಪೂಜಾಯೋಗ್ಯಳು. ಆ ಸೂಕ್ಷ್ಮ ಕರ್ಣಿಕೆಯ ಬಳಸಿರ್ದ ಕರ್ಣಿಕಾವೃತ್ತದ ಪೂರ್ವಾದಿಯಾದ ಚತುರ್ದಳಂಗಳಲ್ಲಿ ಅಂಬಿಕೆ, ಗಣಾನಿ, ಈಶ್ವರಿ, ಮನೋನ್ಮಣಿ, ಎಂಬ ನಾಲ್ವರು ಶಕ್ತಿಯರು ಕಾರಣವಾಗಿಹರು. ಪ್ರಥಮಾವರಣದ ಪೂರ್ವಾದ್ಯಷ್ಟ ಪತ್ರಂಗಳಲ್ಲಿ ವಾಮೆ, ಜ್ಯೇಷ್ಠೆ, ರೌದ್ರಿ, ಕಾಳಿ, ಭಾವೆ, ಬಲಪ್ರಮಥಿನಿ, ಸರ್ವಭೂತದಮನಿ, ಮನೋನ್ಮಣಿ, ಎಂಬಷ್ಟ ಶಕ್ತಿಯರು ಕಾರಣವಾಗಿಹರು, ದ್ವಿತೀಯ ವರಣಷ್ಟ ಗಣೇಶ್ವರರು ಕಾರಣವಾಗಿಹರು. ಉಳಿದ ದಳಂಗಳಲ್ಲಿ ಭವ, ಶರ್ವ, ರುದ್ರ, ಮಹಾದೇವ, ಸೋಮ, ಭೀಮ, ಉಗ್ರ, ಪಶುಪತಿ, ಎಂಬಷ್ಟ ಮೂರ್ತಿಗಳು ಕಾರಣವಾಗಿಹರು. ಮೂರನೇ ಆವರಣದ ಇಪ್ಪತ್ತನಾಲ್ಕು ದಳಂಗಳಲ್ಲಿ ಅನಂತ, ಸೂಕ್ಷ್ಮ, ಶಿವೋತ್ತಮ, ಏಕನೇತ್ರ, ಏಕರುದ್ರ, ತ್ರಿಮೂರ್ತಿ, ಶ್ರೀಕಂತ,

ಶಿಖಂಡಿ, ಎಂಬ ಅಷ್ಟ ವಿಶ್ವೇಶ್ವರರು, ಇಂದ್ರ, ಅಗ್ನಿ, ಯಮ, ನೈಋತ್ಯ, ವರುಣ, ವಾಯುವ್ಯ, ಕುಬೇರ, ಈಶಾನ್ಯರೆಂಬ ಅಷ್ಟದಿಕ್ಪಾಲಕರು, ಧರ, ಧೃತ, ಸೋಮ, ಅಪ, ನೀಲ, ನಳ, ಪ್ರತ್ಯೇಕ, ಪ್ರಭಾವರೆಂಬ, ಅಷ್ಟವಸುಗಳು ಕಾರಣವಾಗಿಹರು.

ಮತ್ತಮೀಚಕ್ರ ಸಂಬಂಧವು ಶಾರದಾತಿಲಕದಲ್ಲಿ ಇನ್ನೊಂದು ಪ್ರಕಾರದಿಂ ಹೇಳಲ್ಪಟ್ಟುದು. ಮಧ್ಯ ಬಟುವಿನಲ್ಲಿರ್ದ ಹಕಾರವೇ ಉಮೆ, ಅದರಿಂದಮೇಲಣ ಬಟುವಿನ ನಾಲ್ಕೆಸಳಿನಲ್ಲಿಹ ನಾಲ್ಕಕ್ಷರಂಗಳೆ ನಾಲ್ಕು ಶಕ್ತಿ ರೂಪವನೆಯ್ದಿದ ವಿವರ, ಸಕಾರವೆ ಅಂಬಿಕೆ, ಅಕಾರವೆ ಗಣಾನಿ, ಐಕಾರವೆ ಈಶ್ವರಿ, ಕ್ಷಕಾರವೆ ಮನೋನ್ಮಣಿ, ಅದರಿಂ ಮೇಲಣ, ಬಟುವಿನ ಎಂಟೆಸಳಲ್ಲಿಹ ಎಂಟಕ್ಷರಂಗಳೆಂಟು 'ಶಕ್ತಿಸ್ವರೂಪವನೆಯ್ದಿದ ವಿವರ:_ ಸಕಾರವೆ ವಾಮೆ, ಷಕಾರವೆ ಜ್ಯೇಷ್ಠೆ, ಶಕಾರವೆ ರೌದ್ರಿ, ವಕಾರವೆ, ಕಾಳಿ, ಲಕಾರವೆ ಭಾವೆ, ರಕಾರವೆ, ಬಲ ಪ್ರಮಥನಿ, ಯಕಾರವೆ ಸರ್ವಭೂತದಮನಿ, ಮಕಾರವೆ, ಮನೋನ್ಮಣಿ, ಅದರಿಂದ ಮೇಲಣ ಬಟುವಿನ, ಹದಿನಾರು ದಳಂಗಳಲ್ಲಿ ಹದಿನಾರು ಅಕ್ಷರಂಗಳೆ ಹದಿನಾರು ಗಣೇಶ್ವರರಾದ ವಿವರ, ಅಃ ಎಂಬುದೆ ಷಣ್ಮುಖ, ಅಂ ಎಂಬುದೆ ಭವ, ಔ ಎಂಬುದೆ ಶರ್ವ, ಓ ಎಂಬುದೆ ರುದ್ರ, ಐಕಾರವೆ ಮಹಾದೇವ, ಏಕಾರವೆ ಸೋಮ, ಲೂಕಾರವೆ ಭೀಮ, ಲುಕಾರವೆ ಉಗ್ರ, ಋಕಾರವೆ ಪಶುಪತಿ, ಋೂಕಾರವೆ ಉಮೇಶ್ವರ, ಊಕಾರವೆ ಚಂಡೇಶ್ವರ, ಉಕಾರವೆ ನಂದಿಕೇಶ್ವರ, ಈಕಾರವೆ ಮಹಾಕಾಳ, ಇಕಾರವೆ ಭೃಂಗಿರಿಟ, ಆಕಾರವೆ ಗಣೇಶ್ವರ, ಅಕಾರವೆ ವೃಷಭೇಶ್ವರ, ಅದರಿಂದ ಮೇಲಣ ಬಟುವಿನ ಮೂವತ್ತೆರಡು ದಳಂಗಳೊಳಗೆ ಎಂಟು ದಳಂಗಳು ಶೂನ್ಯದಳಂಗಳು, ಉಳಿದ ಇಪ್ಪತ್ತುನಾಲ್ಕುದಳಂಗಳಲ್ಲಿಹ ಇಪ್ಪತ್ತು ನಾಲ್ಕು ಅಕ್ಷರಂಗಳ ಅಷ್ಟವಿದ್ಯೇಶ್ವರರು, ಅಷ್ಟದಿಕ್ಪಾಲಕರು, ಅಷ್ಟ ವಸುಗಳಾದ ವಿವರ, ಕಕಾರವೆ ಅನಂತ, ಖಕಾರವೆ ಸೂಕ್ಷ್ಮ, ಗಕಾರವೆ ಶಿವೋತ್ತಮ, ಘಕಾರವೆ ಏಕನೇತ್ರ, ಙಕಾರವೆ ಏಕರುದ್ರ, ಚಕಾರವೆ ತ್ರಿಮೂರ್ತಿ, ಛಕಾರವೆ ಶ್ರೀಕಂಠ, ಜಕಾರವೆ ಶಿಖಂಡಿ, ಝಕಾರವೆ ಇಂದ್ರ, ಞಕಾರವೆ ಅಗ್ನಿ, ಟಕಾರವೆ ಯಮ, ಠಕಾರವೆ ನೈಋತ್ಯ, ಡಕಾರವೆ ವರುಣ, ಢಕಾರವೆ ವಾಯುವ್ಯ, ಣಕಾರವೆ ಕುಬೇರ, ತಕಾರವೆ ಈಶಾನ್ಯ, ಥಕಾರವೆ ಧರ, ದಕಾರವೆ ಧ್ರುವ, ಧಕಾರವೆ ಸೋಮ, ನಕಾರವೆ ಅಪ, ಪಕಾರವೆ ನೀಲ, ಫಕಾರವೆ ನಳ, ಬಕಾರವೆ ಪ್ರತ್ಯೇಶ, ಭಕಾರವೆ ಪ್ರಭಾವ, ಅದರಿಂದ ಮೇಲಣ ಬಟುವಿನೊಳಗಿಹ ಮೂವತ್ತೆರಡು ದಳಂಗಳೊಳಗೆ ಇಂದ್ರದಿಕ್ಕಿನ ನಾಲ್ಕುದಳಂಗಳ ವಾಸ್ತವರು:_ ಇಂದ್ರ, ಸತ್ಯ, ಭೃಂಗಿ ಅಂತರ್ಲಕ್ಷ, ಅಗ್ನಿದಿಕ್ಕಿನ ನಾಲ್ಕು ದಳಂಗಳ ವಾಸ್ತವರು:_ ಅಗ್ನಿ, ಪೂಷಾ, ವಿಧಿದಮ, ಯಮದಿಕ್ಕಿನ ನಾಲ್ಕುದಳಂಗಳ ವಾಸ್ತವರು:_ ಯಮ, ಭಾಸ್ಕರ, ಪುಷ್ಪದತ್ತ, ಬಲಾಟ, ನೈಋತ್ಯ ದಿಕ್ಕಿನ ನಾಲ್ಕು ದಳಂಗಳ ವಾಸ್ತವರು:_ ನೈರುತ್ಯ, ದೌವಾರಿಕ, ಸುಗ್ರೀವ, ಅರುಣ, ವರುಣ ದಿಕ್ಕಿನ ನಾಲ್ಕುದಳಂಗಳ ವಾಸ್ತವರು:_ ವರುಣ, ಅಸುರ, ಗಹ್ವರ, ವೇಗ, ವಾಯುವ್ಯದಿಕ್ಕಿನ ನಾಲ್ಕುದಳಂಗಳ ವಾಸ್ತವರು:_ ಕುಬೇರ, ಅಘುರ, ದಿತಿ, ಅದಿತಿ, ಈಶಾನ್ಯ ದಿಕ್ಕಿನ ನಾಲ್ಕು ದಳಂಗಳ ವಾಸ್ತವರು:_ ಈಶಾನ್ಯ, ಪರ್ಜನ್ಯ, ಜಯಂತ, ಶಂಕರ, ಇನ್ನು ವಚನ:_ ಅಣುವಿಂಗೆ ಅಣುವಾಗಿ, ಮಹತ್ತಿಂಗೆ ಮಹತ್ತಾಗಿ, ಪರಿಪೂರ್ಣವಾದ ಪರವೆಂಬ ಪ್ರಸಾದ ಮೂರ್ತಿಯ ಇರವ ಹೇಳಿಹೆ ಕೇಳಿರಣ್ಣ! ಮುಂದೆ ತಾರಾಬೀಜ, ಹಿಂದೆ ಸುನಾದಬೀಜ, ಬಲದಲ್ಲಿ ಆತ್ಮಬೀಜ, ಎಡದಲ್ಲಿ ವಿದ್ಯಾಬೀಜ, ಎಂಟರಲ್ಲಿ ಅಷ್ಟೈಶ್ವರ್ಯ, ಅಷ್ಟ ಶಕ್ತಿ ಬೀಜ, ಹದಿನಾರರಲ್ಲಿ ಕಲೆ ಕಲಾಪತಿಗಳು, ಮೂವತ್ತೆರಡರಲ್ಲಿ ವಿಕಲೆ ವಿಕಲಾಪತಿಗಳು, ಇಂತೀ ತ್ರಿಮಂಡಲ ಮಧ್ಯದ ಸೂಕ್ಷ್ಮ ಕರ್ಣಿಕೆಯಲ್ಲಿಹ ಶುದ್ಧಪ್ರಸಾದವನು, ಮಹಾನುಭಾವರ ಸಂಗದಲ್ಲಿರ್ದರಿದೆನು ಕಣಾ! ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ! ತನುವೆಂಬ ಭೂಮಿಯ ಮೇಲೆ, ಶೃಂಗಾಟದ ಇಂದ್ರಕೂಟಗಿರಿಯೆಂಬ ಕೈಲಾಸದಲ್ಲಿ ಉತ್ತರ ದಕ್ಷಿಣ ಪೂರ್ವ ಪಶ್ಚಿಮ ದಳದಲ್ಲಿ, ಆತ್ಮಶಕ್ತಿ ಬಿಂದು ನಾದಗಳ ಮಧ್ಯದಲ್ಲಿ ಶೂನ್ಯಸಿಂಹಾಸನವೆಂಬ ಸುಜ್ಞಾನ ಪೀಠದ ಮೇಲೆ, ನೀವು ಮುಹೂರ್ತ ಗೊಂಡಿಹರಾಗಿ ಕಂಡು ಹರುಷಿತನಾದೆನು. ಸೂರ್ಯಮಂಡಲದ

ದ್ವಾತ್ರಿಂಶದ್ದಳದ ರುದ್ರರು, ರುದ್ರಶಕ್ತಿಯರು ನಿಮ್ಮನೋಲೈಸುತ್ತಿಹರು. ಚಂದ್ರಮಂಡಲದ ಷೋಡಶದಳದ ರುದ್ರರು ರುದ್ರ ಶಕ್ತಿಯರು ನಿಮ್ಮ ನೋಲೈಸುತ್ತಿಹರು. ಅಗ್ನಿ ಮಂಡಲದ ಅಷ್ಟದಳದ ರುದ್ರರು ರುದ್ರಶಕ್ತಿಯರು ನಿಮ್ಮನೋಲೈಸುತ್ತಿಹರು. ಈ ಪರಿಯಿಂದ ದೇವರ ದೇವನ ಓಲಗವನೇನೆಂದು ಹೇಳುವೆನು! ಮತ್ತೆ ಭೇರಿ, ಮೃದಂಗ, ನಾಗವರ, ಕೊಳಲು, ವೀಣೆ, ಕಹಳೆ, ಘಂಟೆ, ಶಂಖ, ನಾನಾವಿಧದ ಕೇಳಿಕೆಯವರಲ್ಲಿ ರಾಜಿಸುವ ರಾಜಯೋಗವ, ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ ನಿಮ್ಮ ಶರಣರಾದ ರಾಜಯೋಗಿಗಳೇ ಬಲ್ಲರು! ಹೃದಯಕಮಲದ ಅಷ್ಟದಳದ ದ್ವಾತ್ರಿಂಶತ್ಕುಸುಮ ಮಧ್ಯದಲ್ಲಿರ್ಪನು ಸೂರ್ಯ, ಆ ಸೂರ್ಯನ ಮಧ್ಯದಲ್ಲಿರ್ಪನು ಚಂದ್ರ, ಆ ಚಂದ್ರನ ಮಧ್ಯದಲ್ಲಿರ್ಪನು ಅಗ್ನಿ, ಆ ಅಗ್ನಿಯ ಚಧ್ಯದಲ್ಲಿರ್ಪುದು ಕಾಂತಿ, ಆ ಕಾಂತಿಯ ಮಧ್ಯದಲ್ಲಿರ್ಪುದು ಸುಜ್ಞಾನ, ಆ ಸುಜ್ಞಾನದ ಮಧ್ಯದಲ್ಲಿರ್ಪುದು ಚಿದಾತ್ಮ, ಆ ಚಿದಾತ್ಮನ ಮಧ್ಯದಲ್ಲಿರ್ಪುದು ಚಿತ್ಪ್ರಕಾಶ ಸ್ವರೂಪಮಪ್ಪ ಪರಶಿವನು. ಅಂತಪ್ಪ ಪರಶಿವನು, ಎನ್ನ ಸುಜ್ಞಾನ ಕಾಯದ ಮಸ್ತಕದ ಮೇಲೆ ಹಸ್ತವನಿರಿಸಿ, ಮನ ಭಾವ ಕರಣೇಂದ್ರಿಯಂಗಳಿಂ ಸ್ವರೂಪೀಕರಿಸಿ, ದೃಷ್ಟಿಗೆ ತೋರಿ ಕೈಯಲ್ಲಿ ಲಿಂಗವ ಕೊಟ್ಟ ಚನ್ನಬಸವಣ್ಣನ ಶ್ರೀಪಾದಕ್ಕೆ "ನಮೋ ನಮೋ" ಎಂದು ಬದುಕಿದೆನಯ್ಯ ಪ್ರಭುವೆ ಕಪಿಲ ಸಿದ್ಧಮಲ್ಲಿಕಾರ್ಜುನಾ! ಶಾಂಭವೀ ಚಕ್ರೋದ್ಧರಣೆಯ ಸಂಬಂಧ ಸಮಾಪ್ತ ಮಂಗಳಮಹಾ, ಶ್ರೀ ಶ್ರೀ ಶ್ರೀ ಶ್ರೀ ಶ್ರೀ ॥ ಶ್ರೀ ಗುರು ಬಸವಲಿಂಗಾಯನಮಃ॥

**೧೧. ವೃಷಭೋದ್ಧರಣೆ:**

ಇಂತಪ್ಪ ನಿತ್ಯ ನಿರವಯವ ನಿರಂಜನ ಸತ್ಯ ಜ್ಞಾನಾನಂದಮಯವಪ್ಪ ಅಖಂಡತೇಜೋಮೂರ್ತಿಯಾದ ಮಹಾಘನಲಿಂಗವು. ಸ್ವಲೀಲೆಯಿಂ, ಸಕಲ ತತ್ತ್ವಬ್ರಹ್ಮಾಂಡ ಜಗತ್ಸಚರಾಚರಂಗಳಂ ರಚಿಸಿ, ತಾನವಕುದ್ಧಾರಕರ್ತೃವೆನ್ನಿಸಿ ತನಗೊಂದಾಧಾರವ ಯೋಚಿಸಲ್ಕಾಕ್ಷಣ ತನ್ನನಾದಿ ಚಿಚ್ಚೈತನ್ಯವೇ ಸ್ಫುರಿಸಿ ಮೂರ್ತಿಗೊಂಡು, ಷಡುಸ್ಥಲಜ್ಞಾನವೆ ಪ್ರಾಣ, ಪಂಚಾಚಾರವೆ ಅಂಗವಾಗಿ, ಭಸ್ಮೋಧ್ದೂಳಿತ ವಿಗ್ರಹಗಾತ್ರದಿಂ ರುದ್ರಾಕ್ಷಾಭರಣ ರಜಿತಾಲಂಕಾರದಿಂ, ಪಂಚಾಕ್ಷರೀ ಮಂತ್ರಭಾಷಾ ಸಮೇತವಾಗಿ, ಭಕ್ತಿಭಾವಾಂತಃಕರಣದಿಂ, ಕರಕಮಲವಂ ಮುಗಿದು, ಬಿನ್ನವಿಸುತಿರ್ದ ಜಗದಾನಂದ, ಕಾರಣಪುರುಷ, ಅನಧ ಭಕ್ತನಪ್ಪ ನಂದಿಕೇಶ್ವರನೆ ಸದ್ಧರ್ಮವಹನವೆನಿಸಿ ಜಗವನುದ್ಧರಿಸಿದಂ, ಆ ವೃಷಭೇಶ್ವರನ ಸ್ವರೂಪಲಕ್ಷಣ ಭಕ್ತಿ ಪ್ರಭಾವಾತಿಶಯವೆಂತೆಂದೊಡೆ:_ ಅಕಾರ ಉಕಾರಂಗಳೆ ಶೃಂಗಂಗಳು, ಮಕಾರವೆ ಮುಖ, ಓಂಕಾರವೆ ಶಿರಸ್ಸು, ಯಕಾರಂಗಳೆ ಕರ್ಣಂಗಳು, ವಕಾರವೆ ತ್ವಕ್ಕು, ಶಿಕಾರಂಗಳೆ ನೇತ್ರಂಗಳು, ನಕಾರವೆ ನಾಸಾಪುಟಂಗಳು, ಬಿಂದು ಕಳೆಗಳೆ ದಂತಪಙ್ತಗಳು, ಮಕಾರವೆ ಜಿಹ್ವೆ, ನಾದವೆ ಹುಂಕಾರಸ್ವರ, ಬಸವಾಕ್ಷರ ತ್ರಯವೆ ಕೊರಳು, ಹಿಳಿಲು ಬೆನ್ನಸುಳಿ, ಹ್ರಂ ಹ್ರಿಂ ಹ್ರುಂ ಹ್ರೈಂ ಹ್ರೌಂ ಹ್ರಃ ಎಂಬುವೆ ಬಾಲಪೃಷ್ಠ, ವೃಷಣ, ಗುಹ್ಯನಾಭಿ, ಗರ್ಭ ಸಪ್ತಕೋಟಿ ಮಹಾಮಂತ್ರಂಗಂಳೆ ಚರಣಂಗಳು, ಹ್ರೇಂಕಾರವೆ ಅಂಗ, ಹಕಾರವೆ ಪ್ರಾಣ, ಇಂತಪ್ಪ ಮಂತ್ರ ಮೂರ್ತಿಯಾದ ವೃಷಭೇಶ್ವರನ ಸರ್ವಕಲಾ ಸಾರೋದ್ಧಾರವೆಂತೆಂದೊಡೆ:_ ಅಜಪಗಾತ್ರಿಯೆ ಶೃಂಗಂಗಳು, ಪರಮಶಿವಾಗಮವೆ ಶಿರಸ್ಸು ಧನುರ್ವೇದ ಗಾಂಧರ್ವವೇದವೆ ಕರ್ಣಂಗಳು, ಯಜುವೇಧ ಅಥರ್ವಣವೇದವೆ ನೇತ್ರಂಗಳು, ಹ್ರಸ್ವದೀರ್ಘಂಗಳೆ ನಾಸಾಪುಟಂಗಳು, ವ್ಯಾಪಕಾಕ್ಷರವೇ ಮುಖ, ಸ್ವಾರಾಕ್ಷರವೆ ದಂತಪಂಕ್ತಿಗಳು, ವಿಕಲಾಕ್ಷರವೆ ಜಿಹ್ವೆ, ಸ್ವರಕಾರಣಂಗಳೆ ಹುಂಕಾರರವ, ಆಗಮಂಗಳೆ ಕಂಠ, ಸ್ಮೃತಿಗಳೆ ಹಿಣಿಲು, ಪುರಾಣಂಗಳೆ ಬೆನ್ನ ಸುಳಿ, ಶಾಸ್ತ್ರಂಗಳೆ ಬಾಲ, ತರ್ಕತಂತ್ರಂಗಳೆ ಪೃಷ್ಠ, ಉಪನಿಷತ್ತುಗಳೆ ವೃಷಣ, ರಹಸ್ಯಾಗಮಂಗಳೆ ಗುಹ್ಯ, ಸರ್ವಪದಾರ್ಥಸಿದ್ಧಿಯೇ ನಾಭಿ, ಸರ್ವತತ್ವಾಂತರ್ಗತವೆ ಗರ್ಭ, ಉಪಶಾಸ್ತ್ರಂಗಳೆ ರೋಮಂಗಳು, ಉದಾತ್ತಾನುದಾತ್ತಸ್ವರಿತ ಪ್ರಚಯಂಗಳೆ ಚರಣಂಗಳು, ವೇದಂಗಳೆ ಅಂಗ, ಪರಮವೀರಶೈವಾಗಮವೆ ಪ್ರಾಣ, ಇಂತಪ್ಪ ಸರ್ವಜ್ಞ ಮೂರ್ತಿಯಾದ ವೃಷಭೇಶ್ವರನ ಭಕ್ತಿ ಸಾರೋದ್ಧಾರ ಪ್ರಭಾವವೆಂತೆಂದೊಡೆ:_ ನಿರ್ಮೋಹ ನಿರಹಂಕಾರಂಗಳೆ

ಶೃಂಗಂಗಳು, ನಮಸ್ಕಾರವೆ ಶಿರಸ್ಸು, ಅಂತರ್ಬಾಹ್ಯನಾದಂಗಳೆ ಕರ್ಣಂಗಳು, ಮನನ ನಿಧಿಧ್ಯಾಸಂಗಳೆ ನೇತ್ರಂಗಳು, ಶಿವಧ್ಯಾನ ಸಂಸ್ಕೃತ ಸೌರಭವೆ ನಾಸಾಪುಟಂಗಳು, ಸತ್ಯವೆ ಮುಖ, ಸದ್ಗುಣವೆ ದಂತಪಂಕ್ತಿಗಳು, ಶಿವರತಿಸಾರ ಸೌಖ್ಯವೆ ಜಿಹ್ವೆ, ಶಿವಾನುಭವ ಪ್ರತಿಪಾದಕ ಗುಣಷಟ್ಕವೆ ಹುಂಕಾರರವ, ದೃಢಭಾವವೆ ಕಂಠ, ನೈಷ್ಠೆಯೆ ಹಿಣಿಲು, ಏಕೋದೇವ ಪ್ರತಿಷ್ಠಾವಹಿತ್ವವೆ ಬೆನ್ನಸುಳಿ, ಭವಸಾಗರೋತ್ತಾರ ಪಾರಾವಾರಗುಣವೆ ಬಾಲ, ಆ ಲೌಕಿಕಸ್ಥಿತಿಯೆ ಪೃಷ್ಠ, ಇಷ್ಟಾರ್ಥಸಿದ್ಧಿಕರವೆ ವೃಷಣ, ಶಿವಜ್ಞಾನರಹಸ್ಯವೆ ಗುಹ್ಯ, ಚಿದಾಕಾಶವೆ ನಾಭಿ, ಶಿವಕಥಾ ಮಹಿಮ ಗುಣಗರ್ಭೀಕೃತವೆ ಗರ್ಭ, ಸಕಲ ಕ್ರಿಯಾಸಂಪತ್ತೆ ರೋಮಂಗಳು, ಕರ್ಮ ಭಕ್ತಿ ಜ್ಞಾನವೈರಾಗ್ಯಂಗಳೆ ಚರಣಂಗಳು, ಸದ್ಭಕ್ತಿಯೆ ಅಂಗ, ಸಮ್ಯಗ್‌ಜ್ಞಾನವೆ ಪ್ರಾಣ, ಇಂತಪ್ಪ ಭಕ್ತಿಪ್ರಭಾವಮೂರ್ತಿಯಾದ ವೃಷಭೇಶ್ವರನ ಸರ್ವದೇವತಾ ಸಾರೋದ್ಧರವೆಂತೆಂದೊಡೆ:_ ಶೃಂಗಾಗ್ರದಲ್ಲಿ ತುಂಬುರು ನಾರದಾದಿಗಳು, ತನ್ಮಧ್ಯದಲ್ಲಿ ಅಜಹರಿಗಳು, ಶಿರದಲ್ಲಿ ಮೇರುಮಂದರಾದಿಗಳು, ಲಲಾಟದಲ್ಲಿ ವೀರಕ ವೀರಭದ್ರಾದಿಗಳು, ಕರ್ಣಂಗಳಲ್ಲಿ ರುದ್ರಾದಿಗಳು, ನೇತ್ರಂಗಳಲ್ಲಿ ಶಶಿ ರವಿಗಳು, ನಾಸಾಪುಟಂಗಳಲ್ಲಿ ವಾಯುಪುರುಷ ಭೂದೇವತೆಯರು, ಮುಖದಲ್ಲಿ ಮಹಾಗಣಂಗಳು, ದಂತಂಗಳಲ್ಲಿ ಭೃಂಗೀಶ್ವರಾದಿ ನಿರ್ಮಾಯಾ ಗಣಂಗಳು, ಜಿಹ್ವೆಯಲ್ಲಿ ಮಂತ್ರ ಮೂರ್ತಿಗಳು, ಹುಂಕಾರ ರವದಲ್ಲಿ ನಾದ ಮೂರ್ತಿಗಳು, ಕಂಠದಲ್ಲಿ ಭುವನಭುವನೇಶ್ವರರು, ಹಿಣಿಲಲ್ಲಿ ಪ್ರಮಥ ಗಣಾಧೀಶ್ವರರು, ಬೆನ್ನ ಸುಳಿಯಲ್ಲಿ ಉಮಾಮಹೇಶ್ವರರು, ಬಾಲ ದಂಡ ರೋಮಂಗಳಲ್ಲಿ ಸಕಲ ದೇವಾದಿದೇವರ್ಕಗಳು, ಪೃಷ್ಠದಲ್ಲಿ ಯಕ್ಷ ರಾಕ್ಷಸಾದಿಗಳು, ವೃಷಣದಲ್ಲಿ ಪುಣ್ಯತೀರ್ಥಮಹಾಪುರುಷರು, ಗುಹ್ಯದಲ್ಲಿ ಗುಹ್ಯಕಾದಿಗಳು, ನಾಭಿಯಲ್ಲಿ ಸಿದ್ಧ ವಿದ್ಯಾಧರರು, ಗರ್ಭದಲ್ಲಿ ಮನುಮುನಿಗಳು, ರೋಮಂಗಳಲ್ಲಿ ಚರಾಚರ ಜೀವರಾಶಿಗಳು, ಜಾನುಜಂಘೆಯಲ್ಲಿ ಗ್ರಹರಾಶಿ ತಾರಾಪಥಂಗಳು, ಚರಣಂಗಳಲ್ಲಿ ಚತುರ್ಯುಗ ಚತುರ್ವೇದ ಚತುಃಪಾದ ಚತುಃಫಲಂಗಳು, ಅಂಗದಲ್ಲಿ ಅನಂತ ದಿವ್ಯಕ್ಷೇತ್ರಂಗಳು, ಪ್ರಾಣದಲ್ಲಿ ಪರಮ ತೇಜೋಲಿಂಗಂಗಳಿಹವು. ಇಂತಪ್ಪ ಸರ್ವ ದೇವತಾಧಾರವಪ್ಪ ವೃಷಭೇಶ್ವರನಿಂದಾದ ಸೃಷ್ಟಿಯ ಕ್ರಮವೆಂತೆಂದೊಡೆ:_ ಗೋಮಯ ಗೋಮೂತ್ರದಿಂ ಪೃಥ್ವೀಜಲಂಗಳು, ತೇಜಸ್ಸಿನಿಂದ ಅಗ್ನಿ ಉಚ್ಛ್ವಾಸ ನಿಶ್ವಾಸದಿಂ ವಾಯು, ಶಬ್ದದಿಂದಾಕಾಶ, ಕಂಗಳ ಕಾಂತಿಯಿಂ ರವಿಶಶಿಗಳು, ಬುದ್ಧಿಪ್ರಭಾವದಿಂದಾತ್ಮನೆಂಬ ಅಷ್ಟತನುಗುಣಗಳುದಯವಾಗಿ ಜಗತ್ಸಚರಾಚರಂಗಳಾದುವು. ಇಂತೀ ಸಕಲ ಜಗದಾಧಾರ ರಕ್ಷಣ ಕರ್ತುವಪ್ಪ ವೃಷಭೇಶ್ವರನ ಅಲಂಕೃತೋಪಕರಣಂಗಳಾವಾವೆಂದೊಡೆ:_ ಜ್ಞಾನಧ್ಯಾನಂಗಳೆ ಕೋಡಣಸುಗಳು, ಮಹಾನಾದ ಸುನಾದವೆ ಕಿವಿಯ ಚಮರಿ, ಶಿವಕೀರ್ತನ ಪ್ರಭಾಮಂಡಲವೆ ಕನ್ನಡಿ, ಅಣಿಮಾದ್ಯೈಶ್ವರ್ಯವೆ ಮುಕುರಂಬ, ಸಮತೆಯೆ ವಾಘೆ, ವಿಶ್ವಾಸ ಶ್ರದ್ಧೆಯೆ ಕೊರಳದಂಡೆ, ಸತ್ಯಫಲಭಾಷೆಯೆ ಕೊರಳ ಘಂಟೆ, ವೇದಾದಿ ಉಗ್ಘಡಣೆಯೆ ಉರದ ಗೆಜ್ಜೆಹಾರದ ಧ್ವನಿ, ಪ್ರಣವೋಚ್ಚರಣೆಯೆ ಅಂದುಗೆರವ, ದಯವೆ ಕಿಂಕಿಣಿದೊಡರು, ಪಂಚವರ್ಣ ಪ್ರಭಾಪುಂಜವೆ ಅಲ್ಲಣ, ಸರ್ವಕಲಾ ರಸಿಕತ್ವವೆ ಬಿಗಿವು, ಪರಮ ವೈರಾಗ್ಯವೆ ಅಂಕಣಿ, ನಿತ್ಯವೆ ಕರಿಕೆ, ಇಂತೀ ಸರ್ವಲಕ್ಷಣ ಸಂಪನ್ನನಾಗೊಪ್ಪುವ ವೃಷಭೇಶ್ವರನ ಮುಖವೆ ಗೋಮುಖ ಬಿಂದುವೆ ಪೀಠ, ಹುಂಕಾರನಾದವೆ ಶಿಖಾಗ್ರದ ತೇಜೋಮಯಲಿಂಗ, ಇಂತೀನಾದಬಿಂದು ಸಂಯುಕ್ತವಾದುದೆ ಶಿವಲಿಂಗ, ಆ ಶಿವಲಿಂಗವು ವೃಷಭೇಶ್ವರನ ಸಮ್ಮುಖದಲ್ಲಿ ಅಗಲದಿರ್ಪಕಾರನ, ಲಿಂಗಾವಲೋಕನ ದರ್ಶನಾಕಾಂಕ್ಷೆಯುಳ್ಳವರಿಗೆ ವೃಷಭಪುರುಷನ ಶೃಂಗಮಧ್ಯಾವಲೋಕನವಿಲ್ಲದಿರಲು ಆ ದರುಶನ ಸ್ವರುಶನ ಧಾರಣಾದಿಗಳು ನಿಷ್ಫಲ. ಅದು ಕಾರಣ ಬಸವಲಿಂಗನಾಮೋಚ್ಚಾರಣ ಜಪ ಕ್ರಿಯಾಲಕ್ಷಣವೆಂತೆಂದೊಡೆ, ಓಂ ಹ್ರಾಂ ಶುದ್ಧಗುರು ಬಸವ ಓಂ ಹ್ರೀಂ ನಮಃಶಿವಾಯ ಪರಮ ಪರಾಪರ ಬಸವ ಓಂ ಹ್ರೈಂ ಪ್ರಸಿದ್ಧ ಗುರುಬಸವ ಓಂ ಹ್ರೌಂ ಆ ಉ ಮ ಚರಕೆ ಚರಾಚರ ಬಸವ ಓಂ ಹ್ರಾಂ ಮಹಾಪ್ರಸಿದ್ಧ ಗುರು ಬಸವ ಓಂ ಹ್ರಃ ಬಸವ ಪವಿತ್ರ ಪಾವನ ಬಸವ ಎಂಬಷ್ಟಾಂಗನ್ಯಾಸ

ಚತುಃ ಸಾರಾಯ ಮಂತ್ರವನ್ನುಚ್ಚರಿಸಲು ಸರ್ವ ಸಿದ್ಧಿ ವೃಷಭೋದ್ಧರಣೆಯ ಸಂಬಂಧ ಸಮಾಪ್ತ ಮಂಗಳಮಹಾ. ಶ್ರೀ ಶ್ರೀ ಶ್ರೀ ಶ್ರೀ ಶ್ರೀ ॥ ಶ್ರೀ ಗುರು ಬಸವಲಿಂಗಾಯ ನಮಃ ॥

**೧೨. ನವಚಕ್ರೋದ್ಧರಣೆ:**

ಇಂತಪ್ಪ ಪರಮ ಕಾರಣಪುರುಷನಾದ ನಂದಿನಾಮಾಂಕಿತ ವೃಷಭಲಿಂಗ ಮೂರ್ತಿಬಸವೇಶ್ವರನು ಷಟುಸ್ಥಲಾನುಭಾವ ಸಂಪನ್ನರ್ನೆನಿಸಿ ಸದ್ಭಕ್ತಿ ಸ್ಥಲವನುವಾಗಿ, ಜಂಗಮ ಪ್ರಾಣಾವಧಾನಲಿಂಗ ಚೈತನ್ಯ ವಿಡಿದಿರ್ಪ ಕಾರಣ ತತ್ಪ್ರಾಣ ಲಿಂಗಪ್ರತಿಷ್ಠ ಸಂಬಂಧವಪ್ಪ ಶಿವಲಕ್ಷಣ ಲಕ್ಷಿಕವಾದ ನವಚಕ್ರ ಭೇದವೆಂತೆಂದೊಡೆ:_ ಹೃತ್ಕಮಲ ಕರ್ಣಿಕಾ ಕುಹರ ಮಧ್ಯಸ್ಥವಾದ ಸತ್ಪ್ರಣವ ಚೈತನ್ಯದಿಂದಣುಚಕ್ರ ಆ ಅಣುಚಕ್ರದಿಂ ಪಶ್ಚಿಮಚಕ್ರ, ಆ ಪಶ್ಚಿಮಚಕ್ರದಿಂ ಶಿಖಾಚಕ್ರ, ಆ ಶಿಖಾಚಕ್ರದಿಂ ಬಹ್ಮಚಕ್ರ, ಆ ಬ್ರಹ್ಮಚಕ್ರದಿಂದ ಆಜ್ಞಾಚಕ್ರ, ಆ ಆಜ್ಞಾಚಕ್ರದಿಂ, ವಿಶುದ್ಧಿಚಕ್ರ, ಆ ವಿಶುದ್ಧಿಚಕ್ರದಿಂದ ಅನಾಹತಚಕ್ರ, ಆ ಅನಾಹತಚಕ್ರದಿಂ ಮಣಿಪೂರಕಚಕ್ರ, ಮಣಿಪೂರಕಚಕ್ರದಿಂ ಸ್ವಾಧಿಷ್ಠಾನಚಕ್ರ, ಆ ಸ್ವಾಧಿಷ್ಠಾನಚಕ್ರದಿಂ ಧಾರಾಚಕ್ರಜನಿತವಾದವು. ಇಂತೀ ದಶವಿಧ ಚಕ್ರಂಗಳೊಳಗೆ ಅಣುಚಕ್ರವೆಂಬುದು ಸರ್ವ ಶೂನ್ಯ ನಿರಾಲಂಬವಾಗಿ ನಿರಾಸ್ಥಾನವಾದ ಕಾರಣ ಉಳಿದ ನವಚಕ್ರ ಸಂಬಂಧದ ವಚನ, ಗುಪ್ತದಲ್ಲಿ ಆಧಾರ ಚಕ್ರವ ಪೃಥ್ವಿಯೆಂಬ ಮಹಾಭೂತ ಆ ಭೂತ ಪೀತವರ್ಣ ಚತುಃಕೋಣ ಚೌದಳ ಪದ್ಮ ಆ ಪದ್ಮ ಸುವರ್ಣಛಾಯ, ಆ ದಳದಲಿ ವ ಶ ಷ ಸ ಎಂಬ ನಾಲ್ಕಕ್ಷರ, ಆಕರ್ಣಿಕಾ ಮಧ್ಯದಲ್ಲಿ ನಕಾರವೆಂಬ ಬೀಜಾಕ್ಷರ ಆ ನಕಾರ ಪೀತವರ್ಣ ಅದು ಪೆಣ್ದುಂಬಿನಾದ, ಅಲ್ಲಿ ಆಚಾರಲಿಂಗ, ಅಲ್ಲಿ ಪೀತವರ್ಣವುಳ್ಳ ಸದ್ಯೋಜಾತಮುಖ, ಪ್ರತಿಷ್ಠಾ ಕಲಾಪರ್ಯಾಯನಾಮವನುಳ್ಳ ಕ್ರಿಯಾಶಕ್ತಿ, ಆ ಶಕ್ತಿ ಪೀತವರ್ಣ, ಕರ್ಮಸಾದಾಖ್ಯ ಆನಾದಿಯೆಂಬ ಸಂಜ್ಞೆ, ಪಶ್ಚಿಮದಿಕ್ಕು ಋಗ್ವೇದವನುಚ್ಚರಿಸುತ್ತ ಸುಚಿತ್ತವೆಂಬ ಹಸ್ತದಿಂದ ಸುಗಂಧ ದ್ರವ್ಯವನ್ನು ಶ್ರದ್ಧಾ ಭಕ್ತಿಯಿಂದ ಘ್ರಾಣವೆಂಬ ಮುಖಕ್ಕೆ ಅರ್ಪಿಸುವಳಾ ಶಕ್ತಿ, ಬ್ರಹ್ಮ ಪೂಜಾರಿ, ಆ ಶಕ್ತಿ ಢಾಕಿಣಿ, ಭವಗಣೇಶನಧಿದೇವತೆ, ಇಂತಿವೆಲ್ಲಕ್ಕೂ ಮಾತೃ ಸ್ಥಾನವಾಗಿಹುದು ನಕಾರವೆಂಬ ಬೀಜಾಕ್ಷರ ಪ್ರಣವ, ತಾರಕಾಕೃತಿಯಲ್ಲಿಹುದು ಓಂ ಓಂ ಓಂ ನಾಂ ನಾಂ ನಾಂ ಎಂಬ ಬ್ರಹ್ಮನಾದ, ಬ್ರಹ್ಮನಾದ ಮಂತ್ರಮೂರ್ತಿ ಪ್ರಣವಕ್ಕೆ ನಮಸ್ಕಾರವು, ಇದು ಭಕ್ತಸ್ಥಲ ॥೧॥

ಅಲ್ಲಿಂದ ಮೇಲತ್ತ ಲಿಂಗಸ್ಥಾನದಲ್ಲಿ ಸ್ವಾಧಿಷ್ಟಾನಚಕ್ರ. ಅಪ್ಪು ಎಂಬ ಮಹಾಭೂತ, ಆ ಭೂತ ಶ್ವೇತವರ್ಣ ಧನುರ್ಗತಿ ಷಡ್ದಳಪದ್ಮ, ಆ ಪದ್ಮ ಶ್ವೇತ ವರ್ಣ, ಆ ದಳದಲ್ಲಿ ಬ ಭ ಮ ಯ ರಲ ಎಂಬ ಆರು ಅಕ್ಷರ, ಆ ಕರ್ಣಿಕ ಮಧ್ಯದಲ್ಲಿ ಮಕಾರವೆಂಬ ಬೀಜಾಕ್ಷರ, ಆ ಮಕಾರ ರಕ್ತವರ್ಣ, ಅಲ್ಲಿ ವೀಣಾನಾದ, ಅಲ್ಲಿ ಗುರುಲಿಂಗ, ಆ ಲಿಂಗ ಶ್ವೇತವರ್ಣ, ಶ್ವೇತವರ್ಣವನುಳ್ಳ ವಾಮದೇವಮುಖ, ನಿವೃತ್ತಿ ಕಲಾಪರ್ಯಾಯ ನಾಮವನುಳ್ಳ ಜ್ಞಾನಶಕ್ತಿ. ಆ ಶಕ್ತಿ ಶ್ವೇತವರ್ಣ ಕರ್ತೃ ಸಾದಾಖ್ಯಲಿಂಗ, ಕ್ಷೇತ್ರವೆಂಬ ಸಂಜ್ಞೆ, ಉತ್ತರದಿಕ್ಕು ಋಗ್ವೇದವನುಚ್ಚರಿಸುತ್ತಾ ಸುಬುದ್ಧಿಯೆಂಬ ಹಸ್ತದಿಂದ ಶುಚಿರಸವನ್ನು ನೈಷ್ಠಿಕ ಭಕ್ತಿಯಿಂದ ಜಿಹ್ವೆಯೆಂಬ ಮುಖಕ್ಕೆ ಅರ್ಪಿಸುವಳಾಶಕ್ತಿ. ವಿಷ್ಣುಪೂಜಾರಿ ಶಕ್ತಿಕಾಮಿನಿ, ಮೃಡನಧಿದೇವತೆ ಇಂತೆವೆಲ್ಲಕ್ಕೂ ಮಾತೃಸ್ಥಾನವಾಗಿಹುದು ಮಕಾರವೆಂಬ ಬೀಜಾಕ್ಷರ ಪ್ರಣವ, ದಂಡಕಾಕೃತಿಯಲ್ಲಿಹುದು. ಓಂ ಓಂ ಓಂ ಮಾಂ ಮಾಂ ಮಾಂ ಎಂಬ ಬ್ರಹ್ಮನಾದ ಮಂತ್ರಮೂರ್ತಿ ಪ್ರಣವಕ್ಕೆ ನಮಸ್ಕಾರವು, ಇದು ಮಹೇಶ್ವರಸ್ಥಲ ॥೨॥

ಅಲ್ಲಿಂದ ಮೇಲತ್ತ ನಾಭಿಸ್ಥಾನದಲ್ಲಿ ಮಣಿಪೂರಕ ಚಕ್ರ, ಅಗ್ನಿ ಎಂಥ ಮಹಾಭೂತ ಆ ಭೂತ ರಕ್ತವರ್ಣ, ತ್ರಿಕೋಣ, ದಶದಳಪದ್ಮ ಆ ಪದ್ಮ ಕೃಷ್ಣ ವರ್ಣ, ಆ ದಳದಲ್ಲಿ ಡ ಢ ಣ ತ ಥ ದ ಧ ನ ಪ ಫ ಎಂಬ ಹತ್ತು ಅಕ್ಷರ, ಆ ಕರ್ಣಿಕಾಮಧ್ಯದಲ್ಲಿ ಶಿಕಾರವೆಂಬ ಬೀಜಾಕ್ಷರ, ಆ ಶಿಕಾರ ನೀಲವರ್ಣ, ಅಲ್ಲಿ ಘಂಟಾನಾದ, ಅಲ್ಲಿ ಶಿವಲಿಂಗ ಕಪ್ಪು ವರ್ಣವನುಳ್ಳ ಅಘೋರಮುಖ. ವಿದ್ಯಾ ಕಲಾ ಪರ್ಯಾಯನಾಮವನುಳ್ಳ ಇಚ್ಛಾಶಕ್ತಿ, ಆ ಶಕ್ತಿ ಕೆಂಪುವರ್ಣ. ಮೂರ್ತಿ

ಸಾದಾಖ್ಯ ಶರೀರವೆಂಬ ಸಂಜ್ಞೆ, ದಕ್ಷಿಣದಿಕ್ಕು ಸಾಮವೇದವನುಚ್ಚರಿಸುತ್ತಾ ನಿರಹಂಕಾರವೆಂಬ ಹಸ್ತದಿಂದ ಸುಸ್ವರೂಪವನ್ನು ಸಾವಧಾನಭಕ್ತಿಯಿಂದ ನೇರವೆಂಬ ಮುಖಕ್ಕೆ ಅರ್ಪಿಸುವಳಾಶಕ್ತಿ, ರುದ್ರ ಪೂಜಾರಿ, ಆ ಶಕ್ತಿಶಾಕಿನಿ, ಈಶ್ವರಧಿದೇವತೆ, ಇಂತಿವೆಲ್ಲಕ್ಕೂ ಮಾತೃಸ್ಥಾನವಾಗಿಹುದು ಶಿಕಾರವೆಂಬ ಬೀಜಾಕ್ಷರ ಪ್ರಣವ, ಅದು ಕುಂಡಲಾಕೃತಿಯಲ್ಲಿಹುದು. ಓಂ ಓಂ ಓಂ ಶಿಂ ಶಿಂ ಶಿಂ ಎಂದ ಬ್ರಹ್ಮನಾದಮಂತ್ರ ಮೂರ್ತಿ ಪ್ರಣವಕ್ಕೆ ನಮಸ್ಕಾರವು, ಇದು ಪ್ರಸಾದಿ ಸ್ಥಲ ॥೩॥

ಅಲ್ಲಿಂದ ಮೇಲತ್ತ ಹೃದಯಸ್ಥಾನದಲ್ಲಿ, ಅನಾಹತಚಕ್ರ, ವಾಯುವೆಂಬ ಮಹಾಭೂತ, ಆ ಭೂತ ಮಂಜಿಷ್ಠಾವರ್ಣ, ಷಟ್ಕೋಣ ದ್ವಾದಶದಳಪದ್ಮ, ಆ ಪದ್ಮ ಕುಂಕುಮವರ್ಣ, ಆ ದಳದಲ್ಲಿ ಕ ಖ ಗ ಘ ಙ ಚ ಛ ಜ ಝ ಞ ಟ ಠ ಎಂಬ ಹನ್ನೆರಡು ಅಕ್ಷರ, ಆ ಕರ್ಣಿಕಾ ಮಧ್ಯದಲ್ಲಿ ವಕಾರವೆಂಬ ಬೀಜಾಕ್ಷರ, ಈ ವಕಾರ ಮಂಜಿಷ್ಠ ವರ್ಣ, ಅಲ್ಲಿ ಭೇರೀನಾದ, ಅಲ್ಲಿ ಚರಲಿಂಗ, ಮಂಜಿಷ್ಠ ವರ್ಣವುಳ್ಳ ತತ್ಪುರುಷಮುಖ, ಕಾಂತಿ ಕಲಾಪರ್ಯಾಯ ನಾಮವನುಳ್ಳ ಆದಿಶಕ್ತಿ, ಆ ಶಕ್ತಿ ಮಂಜಿಷ್ಠ ವರ್ಣ, ಆ ಮೂರ್ತಿ ಸಾದಾಖ್ಯ ಗೂಢವೆಂಬ ಸಂಜ್ಞೆ, ಪೂರ್ವದಿಕ್ಕು ಅಥರ್ವಣ ವೇದವನುಚ್ಚರಿಸುತ್ತಾ ಸುಮನವೆಂಬ ಹಸ್ತದಿಂದ ಸುಸ್ಪರ್ಶವನ್ನು ಅನುಭಾವಭಕ್ತಿಯಿಂದ ತ್ವಕ್ಕೆಂಬ ಮುಖಕ್ಕೆ ಅರ್ಪಿಸುವಳಾ ಶಕ್ತಿ, ಈಶ್ವರ ಪೂಜಾರಿ, ಆ ಶಕ್ತಿ ಕಂಕಾಳಿನಿ ಭೀಮನಧಿದೇವತೆ, ಇಂತಿವೆಲ್ಲಕ್ಕೂ ಮಾತೃಸ್ಥಾನವಾಗಿಹುದು ವಕಾರವೆಂಬ ಬೀಜಾಕ್ಷರ ಪ್ರಣವ, ಅರ್ಧಚಂದ್ರಾಕೃತಿಯಲ್ಲಿಹುದು. ಓಂ ಓಂ ಓಂ ವಾಂ ವಾಂ ವಾಂ ಎಂಬ ಬ್ರಹ್ಮನಾದ ಮಂತ್ರಮೂರ್ತಿ ಪ್ರಣವಕ್ಕೆ ನಮಸ್ಕಾರವು, ಇದು ಪ್ರಾಣಲಿಂಗಿಸ್ಥಲ ॥೪॥

ಅಲ್ಲಿಂದ ಮೇಲತ್ತ ಕಂಠಸ್ಥಾನದಲ್ಲಿ ವಿಶುದ್ಧಿ ಚಕ್ರ, ಆಕಾಶವೆಂಬ ಮಹಾಭೂತ, ಆ ಭೂತ ಕೃಷ್ಣವರ್ಣ, ವರ್ತುಳಾಕಾರ, ಷೋಡಶದಳಪದ್ಮ, ಆ ಪದ್ಮ ಸ್ಫಟಿಕವರ್ಣ, ಆ ದಳದಲ್ಲಿ ಅ ಆ ಇ ಈ ಉ ಊ ಋ ೠ ಌ ೡ ಏ ಐ ಓ ಔ ಅಂ ಅಃ ಎಂಬ ಹದಿನಾರು ಅಕ್ಷರ. ಆ ಕರ್ಣಿಕಾಮಧ್ಯದಲ್ಲಿ ಯಕಾರವೆಂಬ ಬೀಜಾಕ್ಷರ, ಆ ಯಕಾರ ಸ್ಫಟಿಕವರ್ಣ, ಅಲ್ಲಿ ಮೇಘಧ್ವನಿ, ಅಲ್ಲಿ ಪ್ರಸಾದಲಿಂಗ, ಆ ಲಿಂಗ ಸ್ಫಟಿಕವರ್ಣ, ಸ್ಫಟಿಕವರ್ಣವನುಳ್ಳ ಈಶಾನ್ಯ ಮುಖ, ಶಾಂತಿಕಲಾಪರ್ಯಾಯ ನಾಮವನುಳ್ಳ ಪರಶಕ್ತಿ. ಆ ಶಕ್ತಿ ಸ್ಫಟಿಕವರ್ಣ, ಶಿವಸಾದಾಖ್ಯ ನಿರಾಮಯವೆಂಬ ಸಂಜ್ಞೆ, ಊರ್ಧ್ವದಿಕ್ಕು ಗಾಯತ್ರೀ ವೇದವನುಚ್ಚರಿಸುತ್ತಾ ಸುಜ್ಞಾನವೆಂಬ ಹಸ್ತದಿಂದ ಸುಶಬ್ದವನ್ನು ಆನಂದಭಕ್ತಿಯಿಂದ ಶ್ರೋತ್ರವೆಂಬ ಮುಖಕ್ಕೆ ಅರ್ಪಿಸುವಳಾಶಕ್ತಿ. ಸದಾಶಿವ ಪೂಜಾರಿ, ಆ ಶಕ್ತಿ ಪರಾಕಿನಿ, ಮಹಾದೇವನಧಿದೇವತೆ, ಇಂತಿವೆಲ್ಲಕ್ಕೂ ಮಾತೃಸ್ಥಾನವಾಗಿಹುದು ಯಕಾರವೆಂಬ ಬೀಜಾಕ್ಷರ ಪ್ರಣವ, ದರ್ಪಣಾ ಕೃತಿಯಲ್ಲಿಹುದು, ಓಂ ಓಂ ಓಂ ಯಂ ಯಂ ಯಂ ಎಂಬ ಬ್ರಹ್ಮನಾದ ಮಂತ್ರಮೂರ್ತಿ ಪ್ರಣವಕ್ಕೆ ನಮಸ್ಕಾರವು. ಇದು ಶರಣಸ್ಥಲ ॥೫॥

ಅಲ್ಲಿಂದ ಮೇಲತ್ತ ಭ್ರೂಮಧ್ಯಸ್ಥಾನದಲ್ಲಿ ಆಗ್ನೇಯಚಕ್ರ, ಮನವೆಂಬ ಮಹಾಭೂತ, ಆ ಭೂತಾಂಧಕಾರ ದ್ವಿದಳಪದ್ಮ, ಆ ಪದ್ಮವನಂತ ಮಿಂಚಿನವರ್ಣ, ಆ ದಳದಲ್ಲಿ ಹಂ ಸಂ ಎಂಬ ಎರಡು ಅಕ್ಷರ, ಆ ಕರ್ಣಿಕಾ ಮಧ್ಯದಲ್ಲಿ ಓಂಕಾರವೆಂಬ ಬೀಜಾಕ್ಷರ, ಆ ಓಂಕಾರ ಸಕಲಾಕ್ಷರಂಗಳ ಗರ್ಭೀಕರಿಸಿಕೊಂಡಿಹುದು, ನಾದಬಿಂದು ಕಳೆಗಳಿಗೆ ಆಶ್ರಯವಾಗಿಹುದು, ತತ್ಪದ ತ್ವಂಪದ ಅಸಿಪದವನೊಳಗೊಂಡಿಹುದು, ಅಲ್ಲಿ ಪ್ರಣವನಾದ, ಅಲ್ಲಿ ಮಹಾಲಿಂಗ, ಪಥಶರೀರವನುಳ್ಳ ಚಿಚ್ಛಕ್ತಿ, ಆ ಶಕ್ತಿ ಮಹಾಘನ, ಬೆಳಕಿನ ವರ್ಣ, ನಿರ್ಮುಕ್ತಸಾದಾಖ್ಯ ನಿರಾಳವೆಂಬ ಸಂಜ್ಞೆ, ಗಂಭೀರದಿಕ್ಕು ಸದ್ಭಾವಹಸ್ತದಿಂದ ಸಕಲ ತೃಪ್ತಿ ದ್ರವ್ಯವನ್ನು ಹೃದಯವೆಂಬ ಮುಖಕ್ಕೆ ಅರ್ಪಿಸುವಳಾಶಕ್ತಿ, ಪರಶಿವ ಪೂಜಾರಿ, ಆ ಶಕ್ತಿ ಪರಾಕಿನಿ, ಮಹಾಗುರುವಧಿದೇವತೆ, ಯಿಂತಿವೆಲ್ಲಕ್ಕೂ ಮಾತೃಸ್ಥಾನವಾಗಿಹುದು ಆ ಓಂಕಾರವೆಂಬ ಬೀಜಾಕ್ಷರ ಪ್ರಣವ, ಜ್ಯೋತಿರಾಕೃತಿಯಲ್ಲಿಹುದು, ಓಂ ಓಂ ಓಂ ಓಂ ಓಂ ಓಂ ಎಂಬ ಬ್ರಹ್ಮನಾದ ಮಂತ್ರಮೂರ್ತಿ ಪ್ರಣವಕ್ಕೆ ನಮಸ್ಕಾರವು, ಇದು ಐಕ್ಯಸ್ಥಲ ॥೬॥

ಅಲ್ಲಿಂದ ಮೇಲತ್ತ ಅಜರಂಧ್ರ ಮಧ್ಯದಲ್ಲಿ ಬ್ರಹ್ಮಚಕ್ರಕ್ಕೆ ಸಹಸ್ರದಳಪದ್ಮ ಆ ಪದ್ಮ ಜ್ಯೋತಿರ್ವರ್ಣ, ಆ ಪದ್ಮದಳದಲ್ಲಿ ಸಹಸ್ರಾಕ್ಷರ. ಅನಂತ ವೇದಂಗಳನೊಳಕೊಂಡಿರ್ಪ ಅಖಂಡ ಪ್ರಣವವೇ ಮಂತ್ರ, ಅನಂತಕೋಟಿ ಸೂರ್ಯರ ಪ್ರಕಾಶವನುಳ್ಳ ಲಿಂಗ ಪರಮಾತ್ಮನಧಿದೇವತೆ, ಅಕ್ಷರಾತ್ಮಕ ಸುನಾದ, ಅನಾದಿಯೆಂಬ ಕಲೆ ಅಗಮ್ಯ ಸಾದಾಖ್ಯ ಅಪ್ರಣವವೆಂಬ ಸಂಜ್ಞೆ, ನಿರಾಮಯ ಶಕ್ತಿ, ಅವಿರಳ ದ್ರವ್ಯ ನಿರಂಜನ ಭಕ್ತಿ ಅಗಣಿತ ಪೂಜೆ ಇಂತಿವೆಲ್ಲಕ್ಕೂ ಮಾತೃ ಸ್ಥಾನವಾಗಿಹುದು, ಪ್ರಣವದ ಗೋಪ್ಯವಪ್ಪ ಬೀಜಾಕ್ಷರ ಆ ಪ್ರಣವ ಬೀಜಾಕ್ಷರ ಸಕಲ ನಿಷ್ಕಲವ ಹೊದ್ದದೆ ಬ್ರಹ್ಮನಾದ ಮಂತ್ರಮೂರ್ತಿಯಾಗಿ ಅನಿರ್ವಾಚ್ಯವಾಗಿ ನಿರಾವರಣ ನಿರಾಲಂಬ ಬಿಂದು ತಾನೇ ಆಗಿ ಇಹುದು, ಆ ನಿರಾಲಂಬ ಬಿಂದುವಿಂಗೆ ನಮಸ್ಕಾರವು.

ಅಲ್ಲಿಂದ ಮೇಲತ್ತ ಮಸ್ತಕಾಗ್ರದಲ್ಲಿ ಶಿಖಾಚಕ್ರ ತ್ರಿದಳಪದ್ಮ ಮಹಾಜ್ಯೋತಿರ್ವರ್ಣ, ಭ್ರಾಂತನಿರುಪಮ ಕಲೆ, ನಿರ್ನಾಮಸಂಜ್ಞೆ, ಅವಿರಳ ಸಾದಾಖ್ಯ ಕ್ಷಕಾರಮಂತ್ರ ಕಾಲಾಗ್ನಿ ಪ್ರಕಾಶವನುಳ್ಳ ಮಹಾಶೂನ್ಯಲಿಂಗ, ಮಹಾಲಿಂಗವೇ ಅಧಿದೇವತೆ. ಆ ಲಿಂಗದಲ್ಲಿ ದಿವ್ಯನಾದ ಪರಿಪೂರ್ಣಭಕ್ತಿ ಪರಮಾತ್ಮ ದ್ರವ್ಯ ಅಲ್ಲಿಂದ ಪಶ್ಚಿಮ ಚಕ್ರಕ್ಕೆ ಏಕದಳಪದ್ಮ ಹವಣಿಸಬಾರದ ತೇಜ ಏಕಾಕ್ಷರ ಕುರುಹಿಡಬಾರದ ನಾದ, ಆ ಪ್ರದರ್ಶನವರ್ಣ ನಿರುಪಾಧಿಕ ಶಕ್ತಿ, ಸರ್ವಾತ್ಮನೆಂಬ ಜಂಗಮವೇ ಅಧಿದೇವತೆ, ಪರಿಪೂರ್ಣ ಜಂಗಮಲಿಂಗ ಅಕ್ಷರಾತೀಕ ನಿಶ್ಯಬ್ದವಾಗಿರ್ಪುದು ಇಂತಪ್ಪ ಲಿಂಗಾಂಗವೇ ತಾನಾಗಿ ಅವಿರಳ ಜಂಗಮ ಭಕ್ತಿಯ ಮಾಡಬಲ್ಲಾತನೇ ಬಸವಪ್ರಿಯ ಕೂಡಲ ಚನ್ನಸಂಗಯ್ಯ ಸಂಗನ ಬಸವಣ್ಣನಯ್ಯ ಪ್ರಭುವೆ.

ಅಲ್ಲಿಂದ ಮೇಲತ್ತ ಮಸ್ತಕಾಗ್ರದಲ್ಲಿ ಶಿಖಿಚಕ್ರ ತ್ರಿದಳಪದ್ಮ, ಆ ಪದ್ಮ ಜ್ಯೋತಿರ್ವರ್ಣ, ತ್ರ್ಯಕ್ಷರ, ನಿರ್ಜೀವಶಕ್ತಿ, ನಿರ್ಮಲ ಸಾದಾಖ್ಯ, ಅವಿರಳ ಗಂಭೀರಕ್ಷಾಕಾರಮಂತ್ರ ಕಾಲಾಗ್ನಿ ಪ್ರಕಾಶವನುಳ್ಳ ನಿಶ್ಶೂನ್ಯಲಿಂಗ, ಮಹಾಲಿಂಗವೇ ಅಧಿದೇವತೆ, ಆ ಲಿಂಗದಲ್ಲಿ ದಿವ್ಯನಾದ, ಪರಿಪೂರ್ಣಶಕ್ತಿ ಪರಮಾತ್ಮದ್ರವ್ಯ ಲಿಂಗಸಂಜ್ಞೆ ಇದು ಶಿಖಾಸ್ಥಲ ॥೮॥

ಅಲ್ಲಿಂದ ಮೇಲತ್ತ ಪಶ್ಚಿಮಚಕ್ರಕ್ಕೆ ಏಕದಳಪದ್ಮ ಏಕಾಕ್ಷರ, ಹವಣಿಸಬಾರದ ತೇಜ, ಕುರುಹಿಡಬಾರದ ನಾದ, ನಿರುಪಮಶಕ್ತಿ ಸರ್ವಾತ್ಮಕನೆಂಬ ನಿರಂಜನಲಿಂಗ, ಹಕಾರಮಂತ್ರ, ಕ್ಷರಾಕ್ಷರ, ನಿಶ್ಯಬ್ದವಾಗಿಹುದು, ಇದು ಪಶ್ಚಿಮಸ್ಥಲ॥೯॥
ಇಂತಪ್ಪ ಬಸವನದ್ರಿಯ ಕೂಡಲ ಚೆನ್ನಸಂಗಮನ ಭಕ್ತಿಗೆ ನಿತ್ಯರು ಮತ್ತಂ

**ನವಚಕ್ರೋದ್ಧರಣೆ**

**ಮಂತ್ರಸಕೀಲ**

ಕುಳಸಂಬಂಧ:– ಆಧಾರದಲ್ಲಿ ನಕಾರ, ಸ್ವಾಧಿಷ್ಠಾನದಲ್ಲಿ ಮಕಾರ, ಮಣಿಪೂರಕದಲ್ಲಿ ಶಿಕಾರ, ಅನಾಹತದಲ್ಲಿ ವಕಾರ, ವಿಶುದ್ಧಿಯಲ್ಲಿ ಯಕಾರ, ಆಗ್ನೇಯದಲ್ಲಿ ಓಂಕಾರ, ಬ್ರಹ್ಮರಂಧ್ರದಲ್ಲಿ ಅಕಾರ, ಬಕಾರ, ಓಂಕಾರ, ಶಿಖಿಯಲ್ಲಿ ಉಕಾರ, ಸಕಾರ, ಕ್ಷಕಾರ, ಪಶ್ಚಿಮದಲ್ಲಿ ಮಕಾರ, ವಕಾರ, ಹಕಾರ ಸಂಬಂಧವಾಗಿಹವು. ಇಂತೀ ಹದಿನೈಯ್ದು ಪ್ರಣವವು, ನವವಿಧ ಲಿಂಗಾಂಗ ಸ್ಥಳಂಗಳನೊಳಕೊಂಡು, ನಾದತ್ರಯ, ಬಿಂದುತ್ರಯ, ಕಳಾತ್ರಯ, ಸ್ವರೂಪಿನಿಂ, ಲಿಂಗತ್ರಯ ಸಂಬಂಧವಾಗಿಹವು, ಮತ್ತಂ ತಾರೆ ನಂ ಹ್ರಂ ಎಂಬ ಮೂರು ಆಧಾರದಲ್ಲಿ ದಂಡೆ ಮಾಂ ಹ್ರೀಂ ಎಂಬ ಮೂರು ಸ್ವಾಧಿಷ್ಠಾನದಲ್ಲಿ ಅ ಸ ಕ್ಷ ಎಂಬ ಈ ಮೂರು ಶಿಖೆಯಲ್ಲಿ ಸಂಬಂಧ, ಈ ಒಂಭತ್ತೂ ಬಿಂದು ತ್ರಯ ಸ್ವರೂಪಿನಿಂ ಇಷ್ಟಲಿಂಗ ಸಂಬಂಧವಾಗಿಹವು. ಕುಂಡಲಿ ಶಿಂ ಹ್ರಂ ಎಂಬ ಮೂರು ಮಣಿಪೂರಕದಲ್ಲಿ, ಅರ್ಧಚಂದ್ರ ವಂ ಹ್ರೇಂ ಎಂಬ ಮೂರು ಅನಾಹತದಲ್ಲಿ, ಮ ವ ಹ ಎಂಬ ಮೂರು ಪಶ್ಚಿಮದಲ್ಲಿ ಸಂಬಂಧ ಈ ಒಂಭತ್ತೂ ಪೂರ್ವೋಕ್ತ ಬಿಂದುಸಹಿತ ಹತ್ತೂ ಕಳಾತ್ರಯ ಸ್ವರೂಪಿನಿಂ ಪ್ರಾಣಲಿಂಗ ಸಂಬಂಧವಾಗಿಹವು, ದರ್ಪಣ ಯಂ ಹ್ರೋಂ ಎಂಬ

ಮೂರು ವಿಶುದ್ಧಿಯಲ್ಲಿ ಜ್ಯೋತಿರಾಕೃತಿ, ಓಂ ಹ್ರಃ ಎಂಬ ಮೂರು ಆಗ್ನೇಯದಲ್ಲಿ ಅ ಬ ಓಂ ಎಂಬ ಮೂರು ಬ್ರಹ್ಮರಂಧ್ರದಲ್ಲಿ ಸಂಬಂಧ. ಈ ಒಂಭತ್ತೂ ಪೂರ್ವೋಕ್ತಬಿಂದು ಕಳೆ ಸಹಿತ ಹನ್ನೊಂದೂ ನಾದತ್ರಯ ಸ್ವರೂಪಿನಿಂ ಭಾವಲಿಂಗ ಸಂಬಂಧವಾಗಿಹವು. ಮತ್ತಂ ನಕಾರದಲ್ಲಿ ನ ಮ ಶಿ ವ ಈ ನಾಲ್ಕು ಆಧಾರದಲ್ಲಿ ಮಕಾರದಲ್ಲಿ ನ ಮ ಶಿ ವ ಈ ನಾಲ್ಕು ಸ್ವಾಧಿಷ್ಠಾನದಲ್ಲಿ ಇವರಲ್ಲಿ ಉಳಿದ ಯ ಓಂ ಯ ಓಂ ಈ ನಾಲಕೂ ಶಿಖಿಯಲ್ಲಿ ಸಂಬಂಧ. ಈ ಹನ್ನೆರಡು ಪ್ರಣವ ಸ್ವರೂಪವಾದ ಭಕ್ತನಂಗವಾರು, ಆಚಾರಲಿಂಗಸ್ಥಲವಾರು, ಶ್ರದ್ಧಾಭಕ್ತಿಯಾರು, ಮಹೇಶನಂಗವಾರು, ಗುರುಲಿಂಗ ಸ್ಥಲವಾರು, ನೈಷ್ಠಿಕಭಕ್ತಿಯಾರು ಈ ೪೮ ಬಿಂದುತ್ರಯ ಸ್ವರೂಪಿನಿಂ ಇಷ್ಟಲಿಂಗ ಸಂಬಂಧವಾಗಿಹವು, ಶಿಕಾರದಲ್ಲಿ ನ ಮ ಶಿ ವ ಈ ನಾಲ್ಕು ಮಣಿಪೂರಕದಲ್ಲಿ. ವಕಾರದಲ್ಲಿ ನ ಮ ಶಿ ವ ಈ ನಾಲ್ಕೂ ಅನಾಹತದಲ್ಲಿ, ಇವರಲ್ಲಿ ಉಳಿದ ಯ ಓಂ ಯ ಓಂ ಈ ನಾಲ್ಕು ಪಶ್ಚಿಮದಲ್ಲಿ ಸಂಬಂಧ, ಈ ಹನ್ನೆರಡು ಪ್ರಣವಸ್ವರೂಪವಾದ ಪ್ರಸಾದಿಯ ಅಂಗವಾರು, ಶಿವ ಲಿಂಗಸ್ಥಲವಾರು, ಸಾವಧಾನಭಕ್ತಿಯಾರು, ಪ್ರಾಣಲಿಂಗಿ ಅಂಗವಾರು, ಜಂಗಮ ಲಿಂಗಸ್ಥಲವಾರು, ಅನುಭಾವ ಭಕ್ತಿಯಾರು, ಈ ೪೮ ಕಳಾತ್ರಯಸ್ವರೂಪಿನಿಂ ಪ್ರಾಣಲಿಂಗ ಸಂಬಂಧವಾಗಿಹವು. ಯಕಾರದಲ್ಲಿ ನಮಶಿವ, ಈ ನಾಲ್ಕೂ ವಿಶುದ್ಧಿಯಲ್ಲಿ, ಓಂಕಾರದಲ್ಲಿ ನಮಶಿವ ಈ ನಾಲ್ಕು ಅಗ್ನಿಯಲ್ಲಿ, ಇವರಲ್ಲಿ ಉಳಿದ ಯ ಓಂ ಯ ಓಂ ಈ ನಾಲ್ಕೂ ಬ್ರಹ್ಮರಂಧ್ರದಲ್ಲಿ ಸಂಬಂಧ. ಈ ಹನ್ನೆರಡು ಪ್ರಣವಸ್ವರೂಪವಾದ ಶರಣನಂಗವಾರು, ಪ್ರಸಾದಲಿಂಗಸ್ಥಳವಾರು, ಆನಂದ ಭಕ್ತಿಯಾರು, ಐಕ್ಯನಂಗವಾರು, ಪ್ರಸಾದಲಿಂಗಸ್ಥಳವಾರು, ಆನಂದ ಭಕ್ತಿಯಾರು, ಐಕ್ಯನಂಗವಾರು, ಮಹಾಲಿಂಗಸ್ಥಲವಾರು, ಸಮರಸ ಭಕ್ತಿಯಾರು, ಈ ೪೮ ನಾದತ್ರಯ ಸ್ವರೂಪಿನಿಂ ಭಾವಲಿಂಗ ಸಂಬಂಧವಾಗಿಹವು. ಇನ್ನು ಪಿಂಡಜ್ಞಾನ, ಸಂಸಾರಹೇಯ, ಗುರುಕರುಣೆ, ದೀಕ್ಷಾಗುರು, ಶಿಕ್ಷಾಗುರು, ಮೋಕ್ಷಗುರು ಈ ಆರೂ, ಲಿಂಗಧಾರಣ, ಕ್ರಿಯಾಲಿಂಗ, ಭಾವಲಿಂಗ, ಜ್ಞಾನಲಿಂಗ ಈ ನಾಲ್ಕೂ, ವಿಭೂತಿ ರುದ್ರಾಕ್ಷ ಈ ೨, ಇಂತೀ ಸ್ಥಲಸಹ ೧೩ ಆಧಾರದಲ್ಲಿ, ಮಹೇಶ್ವರ ಕ್ರಿಯಾಗಮ, ಭಾವಾಗಮ, ಜ್ಞಾನಾಗಮ, ಲಿಂಗನಿಷ್ಠೆ, ಸಕಾಯ, ಅಕಾಯ, ಪರಕಾಯ ಈ ನಾಲ್ಕು, ಪೂರ್ವಾಶ್ರಯ ನಿರಸನ, ವಾಗದ್ವೈತ ನಿರಸನ, ಹಂ ನಿರಸನ, ಅಷ್ಟತನುಮೂರ್ತಿ ನಿರಸನ ಇಂತೀ ಸ್ಥಲಸಹ ೧೨ ಸ್ವಾದಿಷ್ಠಾನದಲ್ಲಿ, ಸರ್ವಗತನಿರಸನ, ಧರ್ಮಾಚಾರ, ಭಾವಾಚಾರ, ಜ್ಞಾನಾಚಾರ, ಶಿವಜಗನ್ಮಯ, ಭಕ್ತದೇಹಿಕಲಿಂಗ, ಈ ೬, ಪಂಚಾಕ್ಷರಿ, ಸ್ವಯ, ಚರ, ಪರ ಇವು ೪, ಭಕ್ತ ಉಭಯ ತ್ರಿವಿಧ ಸಂಪತ್ತು, ಚತುರ್ವಿಧ ಸಾರಾಯ, ಉಪಾಧಿ, ನಿರುಪಾಧಿ, ಸಹಜಮಾಟ ಇವು ಇಂತೀ ಸ್ಥಲಸಹ ೧೭ ಶಿಖೆಯಲ್ಲಿ ಸಂಬಂಧ, ಈ ೧೨ ಬಿಂದು, ಪರಬಿಂದು, ಆ ಪರಬಿಂದು ಸ್ವರೂಪವಾದ ಸ ಕ್ಷ ಎಂಬ ಅಕ್ಷರಾತ್ಮಕವಾಗಿಹವು. ಪ್ರಸಾದಿ, ಕಾಯಾನುಗ್ರಹ, ಇಂದ್ರಿಯಾನುಗ್ರಹ, ಪ್ರಾಣದನುಗ್ರಹ, ಇವು ನಾಲ್ಕು, ಗುರುಮಹಿಮೆ, ಲಿಂಗಮಹಿಮೆ, ಜಂಗಮಮಹಿಮೆ, ಭಕ್ತಮಹಿಮೆ, ಇವು ನಾಲ್ಕು ಶರಣಮಹಿಮೆ ಕಾಯಾರ್ಪಿತ, ಕರಣಾರ್ಪಿತ, ಭಾವಾರ್ಪಿತ, ಇವು ನಾಲ್ಕು ಸ್ಥಲಸಹ ೧೨ ಮಣಿಪೂರಕದಲ್ಲಿ, ಪ್ರಾಣಲಿಂಗಿ ಜೀವಾತ್ಮ ಅಂತರಾತ್ಮ ಪರಮಾತ್ಮ ಈ ನಾಲ್ಕು ಪ್ರಾಣಲಿಂಗಾರ್ಚನೆ ಶಿವಯೋಗ ಸಮಾಧಿ, ನಿರ್ದೇಹಾಗಮ, ನಿರ್ಭಾವಾಗಮ, ನಿಷ್ಟಾಗಮ, ಇವು ೫ ಅಂಗನಿಜ, ಆದಿಪ್ರಸಾದಿ, ಅಂತ್ಯಪ್ರಸಾದಿ, ಶೈವಪ್ರಸಾದಿ, ಇವು ನಾಲ್ಕು ಇಂತಿ ಸ್ಥಲಸಹ ೧೩ ಅನಾಹತದಲ್ಲಿ ಅಂಗ, ಲಿಂಗ, ದೀಕ್ಷಾಪಾದೋದಕ, ಜ್ಞಾನಪಾದೋದಕ, ಇವು ನಾಲ್ಕು ಪ್ರಸಾದ ಮಹಿಮೆ ಇವೂ, ಶಿಷ್ಯ ಶುಶ್ರೂಷಾ, ಶೈವ ಇವು ೩ ಇಂತಿ ಸ್ಥಲಸಹ ಒಂಭತ್ತು ವಿಶುದ್ಧಿಯಲ್ಲಿ ಇವು ೩೩ ಖಳೆ, ಪರಖಳೆ ಸ್ವರೂಪವಾದ ಮ ಹ ವ ಎಂಬ ಕ್ಷರಾತ್ರಯಾತ್ಮಕವಾಗಿಹವು. ಶರಣಕ್ರಿಯ, ನಿಷ್ಪತ್ತಿಭಾವ, ನಿಷ್ಪತ್ತಿಜ್ಞಾನ, ನಿಷ್ಪತ್ತಿ ಇವು ೪ ತಾಮಸನಿರಸನ, ಈವೊಂದೂ, ನಿರ್ದೇಶ, ಪಿಂಡಾಕಾಶ, ಬಿಂದ್ವಾಕಾಶ, ಮಹದಾಕಾಶ, ಇವು ನಾಲ್ಕು ಇಂತೀ ಸ್ಥಲಸಹ, ೯ ವಿಶುದ್ಧಿ. ಐಕ್ಯ ಕೊಂಡುದು ಪ್ರಸಾದ ನಿಂದುದು ಓಗರ, ಚರಾಚರನಾಸ್ತಿ ಇವು ನಾಲ್ಕು ಸರ್ವಾಚಾರ ಸಂಪತ್ತು, ಈ

ಒಂದು ಭಾಂಡ ಭಾಜನ, ಅಂಗಲೇಪನ, ಈ ೩ ಇಂತಿ ಸ್ಥಲಸಹ ಆಗ್ನೇಯದಲ್ಲಿ ಏಕಭಾಜನ, ಈ ೧ ಸಹಭೋಜನಾಸ್ವಯ, ಪರವರಿಯದ ಭಾವ, ಭಾವನಷ್ಟ, ಜ್ಞಾನಶೂನ್ಯ ಇವು ೪ ಶೀಲಸಂಪಾದನೆ, ಕ್ರಿಯಾಪ್ರಕಾಶ ಭಾವ ಪ್ರಕಾಶ, ಜ್ಞಾನಪ್ರಕಾಶ, ಇವು ನಾಲ್ಕು ಸ್ಥಲವಹ ಬ್ರಹ್ಮರಂಧ್ರದಲ್ಲಿ ಸಂಬಂಧ ಈ ೨೬ ನಾದ, ಪರನಾದ ಅಪರನಾದ ಸ್ವರೂಪಿನಿಂ ಆ ಓಂ ಎಂಬ ಕ್ಷರತ್ರಯಾತ್ಮಕವಾಗಿಹವು, ಈ ಸ್ಥಲಸಂಬಂಧವನು ಅನಾದಿ ಭಕ್ತಮೊದಲಾದ ಕೆಲಕೆಲವುದ್ಧರಣೆಗಳಲ್ಲಿ ಸಂಬಂಧಿಸುವುದು ನವಚಕ್ರೋದ್ಧರಣೆಯ ಸಂಬಂಧ ಸಮಾಪ್ತ ಮಂಗಳಮಹಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ॥ ಶ್ರೀ ಗುರು ಬಸವಲಿಂಗಾಯ ನಮಃ ॥

**೧೩. ತತ್ವಪಂಚೀಕರಣೋದ್ಧರಣೆ**

ಇಂತಪ್ಪ ನವಚಕ್ರಭೇದ ಪರೀಕ್ಷಿತನಾದ ಶಿವಯೋಗಿಯ, ಅಂಗ ಸಂಬಂಧವಾದ ತತ್ವಪಂಚೀಕರಣೋತ್ಪತ್ತಿ ನಿರ್ದೇಶವೆಂತೆಂದೊಡೆ:_, ಅಪ್ರತಿಮ ನಿತ್ಯ, ನಿರಂಜನ ಪರಶಿವನ ಸ್ವಲೀಲಾನಂದದ ನೆನಹೆ ಪರಶಕ್ತಿ ಸಮೇತವಾಗಿ ನಾದಮೂರ್ತಿಯಾಗಿ ತೋರ್ಪುದೆ ಅನುಪಮ ಮಹಾಘನಲಿಂಗ. ಆ ಲಿಂಗದ ಚಿಚ್ಚೈತನ್ಯಪ್ರಭಾವವೆ ಮೂರ್ತಿಗೊಂಡು ಸರ್ವಲಕ್ಷಣ ಸಂಪನ್ನನೆನಿಪ ಸದಾಶಿವನಾದಂ. ಆ ಸದಾಶಿವನ ಸ್ವಲೀಲಾರ್ಥವಾಗಿ ಗೌಪ್ಯಮುಖದಿಂದಾತ್ಮನುದಯವಾದ ಕೂಡಲೆ ಆ ಪಂಚವಕ್ತ್ರದಿಂ ಪಂಚಭೂತಂಗಳುದಯಿಸಿ ತತ್ತ್ವಾತ್ಮಕ ಶರೀರವಾಯಿತು. ಇಂತೀ ಶರೀರಸಂಬಂಧವಾದ ಆತ್ಮ ತತ್ವಭೂತ ಗುಣಂಗಳಿಗೆ ವಿವರ:_

ಆಕಾಶದಂಶ:_ ಆತ್ಮನಲ್ಲಿ ಭಾವ, ಆಕಾಶದಲ್ಲಿ ಜ್ಞಾನ, ವಾಯುವಿನಲ್ಲಿ ಮನ, ಅಗ್ನಿಯಲ್ಲಿ ಬುದ್ಧಿ, ಅಪ್ಪುವಿನಲ್ಲಿ ಚಿತ್ತ, ಪೃಥ್ವಿಯಲ್ಲಿ ಅಹಂಕಾರ ಇಂತಿವು ಆಕಾಶದಂಶಗಳು,

ವಾಯುವಿನ ಅಂಶ:_ಆತ್ಮನಲ್ಲಿ ಚೇತನ, ಆಕಾಶದಲ್ಲಿ ಸಮಾನ, ವಾಯುವಿನಲ್ಲಿ ವ್ಯಾನ, ಅಗ್ನಿಯಲ್ಲಿ ಉದಾನ, ಅಪ್ಪುವಿನಲ್ಲಿ ಅಪಾನ, ಪೃಥ್ವಿಯಲ್ಲಿ ಪ್ರಾಣ ಇಂತಿವು ವಾಯುವಿನ ಅಂಶಗಳು.

ಅಗ್ನ್ಯಂಶ:_ ಆತ್ಮನಲ್ಲಿ ಹೃದಯ, ಆಕಾಶದಲ್ಲಿ ಶ್ರೋತ್ರ, ವಾಯುವಿನಲ್ಲಿ ತ್ವಕ್ಕು, ಅಗ್ನಿಯಲ್ಲಿ ನೇತ್ರ, ಅಪ್ಪುವಿನಲ್ಲಿ ಜಿಹ್ವೆ, ಪೃಥ್ವಿಯಲ್ಲಿ ಘ್ರಾಣ, ಇಂತಿವು ಅಗ್ನಿಯ ಅಂಶಗಳು.

ಅಪ್ಪುವಿನ ಅಂಶ:_ ಆತ್ಮನಲ್ಲಿ ತೃಪ್ತಿ, ಆಕಾಶದಲ್ಲಿ ಶಬ್ದ, ವಾಯುವಿನಲ್ಲಿ ಸ್ಪರ್ಶ, ಅಗ್ನಿಯಲ್ಲಿ ರೂಪು, ಅಪ್ಪುವಿನಲ್ಲಿ ರಸ, ಪೃಥ್ವಿಯಲ್ಲಿ ಗಂಧ, ಇಂತಿವು ಅಪ್ಪುವಿನ ಅಂಶಗಳು.

ಪೃಥ್ವಿಯ ಅಂಶ:_ ಆತ್ಮನಲ್ಲಿ ಮನನ, ಆಕಾಶದಲ್ಲಿ ವಾಕ್ಕು, ವಾಯುವಿನಲ್ಲಿ ಪಾಣಿ, ಅಗ್ನಿಯಲ್ಲಿ ಪಾದ, ಅಪ್ಪುವಿನಲ್ಲಿ ರಸ ಗುಹ್ಯ, ಪೃಥ್ವಿಯಲ್ಲಿ ಪಾಯು ಇಂತಿವು ಪೃಥ್ವ್ಯಂಶಗಳು.

ಇನ್ನು ಆತ್ಮನಲ್ಲಿ ಆಕಾಶ ಭಾವ, ಆತ್ಮನಲ್ಲಿ ವಾಯು ಚೇತನ, ಆತ್ಮನಲ್ಲಿ ಅಗ್ನಿ ಹೃದಯ, ಆತ್ಮನಲ್ಲಿ ಅಪ್ಪು ತೃಪ್ತಿ, ಆತ್ಮನಲ್ಲಿ ಪೃಥ್ವಿ ಮನನ, ಇಂತಿವು ಆತ್ಮನ ಪಂಚೀಕೃತಿಗಳು. ಆಕಾಶದಲ್ಲಿ ಆಕಾಶಜ್ಞಾನ, ಆಕಾಶದಲ್ಲಿ ವಾಯು ಸಮಾನ, ಆಕಾಶದಲ್ಲಿ ಅಗ್ನಿ ಶ್ರೋತ್ರ, ಆಕಾಶದಲ್ಲಿ ಅಪ್ಪು ಶಬ್ದ, ಆಕಾಶದಲ್ಲಿ ಪೃಥ್ವಿ ವಾಕ್ಕು ಇಂತಿವುಗಳು ಆಕಾಶದ ಪಂಚೀಕೃತಿಗಳು. ವಾಯುವಿನಲ್ಲಿ ಆಕಾಶ ಮನ, ವಾಯುವಿನಲ್ಲಿ ವಾಯು ವ್ಯಾನ, ವಾಯುವಿನಲ್ಲಿ ಅಗ್ನಿ ತ್ವಕ್ಕು, ವಾಯುವಿನಲ್ಲಿ ಅಪ್ಪು ಸ್ಪರ್ಶನ, ವಾಯುವಿನಲ್ಲಿ ಪೃಥ್ವಿ ಪಾಣಿ ಇಂತಿವು ವಾಯುವಿನ ಪಂಚಿಕೃತಿಗಳು. ಅಗ್ನಿಯಲ್ಲಿ ಅಕಾಶ ಬುದ್ಧಿ, ಅಗ್ನಿಯಲ್ಲಿ ವಾಯು ಉದಾನ, ಅಗ್ನಿಯಲ್ಲಿ ಅಗ್ನಿ ನೇತ್ರ, ಅಗ್ನಿಯಲ್ಲಿ ಅಪ್ಪು ರೂಪು, ಅಗ್ನಿಯಲ್ಲಿ ಪೃಥ್ವಿ ಪಾದ, ಇಂತಿವು ಅಗ್ನಿಯ ಪಂಚೀಕೃತಿಗಳು, ಅಪ್ಪುವಿನಲ್ಲಿ ಆಕಾಶಚಿತ್ತ, ಅಪ್ಪುವಿನಲ್ಲಿ ವಾಯು ಅಪಾನ, ಅಪ್ಪುವಿನಲ್ಲಿ ಅಗ್ನಿ ಜಿಹ್ವೆ, ಅಪ್ಪುವಿನಲ್ಲಿ ರಸ, ಅಪ್ಪುವಿನಲ್ಲಿ ಪೃಥ್ವಿ ಗುಹ್ಯ ಇಂತಿವು ಅಪ್ಪುವಿನ ಪಂಚೀಕೃತಿಗಳು. ಪೃಥ್ವಿಯಲ್ಲಿ ಆಕಾಶ ಅಹಂಕಾರ, ಪೃಥ್ವಿಯಲ್ಲಿ ವಾಯು

ಪ್ರಾಣ, ಪೃಥ್ವಿಯಲ್ಲಿ ಅಗ್ನಿ ಘ್ರಾಣ, ಪೃಥ್ವಿಯಲ್ಲಿ ಅಪ್ಪು ಗಂಧ, ಪೃಥ್ವಿಯಲ್ಲಿ ಪೃಥ್ವಿಪಾಯು ಇಂತಿವು ಪೃಥ್ವಿಯ ಪಂಚೀಕೃತಿಗಳು. ಇಂತಿವು ಶರಣಂಗೆ ಜ್ಞಾನೋಪಕರಣ ಸ್ವರೂಪವಾಗಿಹವು. ತತ್ವಪಂಚೀಕರಣೋದ್ಧರಣೆಯ ಸಂಬಂಧ ಸಮಾಪ್ತ ಮಂಗಳಮಹಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ॥ ಶ್ರೀ ಗುರು ಬಸವಲಿಂಗಾಯ ನಮಃ ॥

**೧೪. ಮಂತ್ರಪಂಚೀಕರಣೋದ್ಧರಣೆ**

ಇಂತೀ ತತ್ವಪಂಚೀಕರಂಗಣಳು, ಪರಶಿವನ ಮುಖದಿಂ ಜನಿಸಿದ ಪ್ರಣವ ಪಂಚಾಕ್ಷರಿಯಿಂ ನಿವೃತಿ ಮುಖವನೆಯ್ದಿದ ಮಂತ್ರ ಪಂಚೀಕರಣೋತ್ಪತ್ತಿ ನಿರ್ದೇಶವೆಂತೆಂದೊಡೆ:_ ಯ ಓಂ ಭಾವ, ಯ ಯ ಜ್ಞಾನ, ಯ ವ ಮನ, ಯ ಶಿ ಬುದ್ಧಿ, ಯ ಮ ಚಿತ್ತ, ಯ ನ ಅಹಂಕಾರ, ಇಂತಿವು ಯಕಾರದಂಶಗಳು. ವ ಓಂ ಚಿತ್ತ. ವ ಯ ಸಮಾನ. ವ ವ ವ್ಯಾನ. ವ ಶಿ ಉದಾನ. ವ ಮ ಅಪಾನ. ವ ನ ಪ್ರಾಣ ಇಂತಿವು ವಕಾರದಂಶಗಳು. ಶಿ ಓಂ ಹೃದಯ, ಶ ಯ ಶ್ರೋತ್ರ, ಶಿ ವ ತ್ವಕ್ಕು, ಶಿ ಶಿ ಚಕ್ಷು. ಶಿ ಮ ಜಿಹ್ವೆ, ಶಿ ನ ಘ್ರಾಣ, ಇಂತಿವು ಶಿಕಾರದಂಶಗಳು, ಮ ಓಂ ತೃಪ್ತಿ, ಮ ಯ ಸ್ಪರ್ಶ, ಮ ಶಿ ರೂಪು, ಮ ಮ ಗಂಧ, ಇಂತಿವು ಮಕಾರದಂಶಗಳು. ನ ಓಂ ಮನ, ನ ಯ ವಾಕ್ಕು, ನ ವ ಪಾಣಿ, ನ ಶಿ ಪಾದ. ನ ಮ ಗುಹ್ಯ. ನ ನ ಪಾಯು ಇಂತಿವು ನಕಾರ ದಂಶಗಳು. ಮತ್ತಂ ಓಂ ಯ ಭಾವ. ಓಂ ವ ಚಿತ್ತು. ಓಂ ಶಿ ಹೃದಯ. ಓಂ ಮ ತೃಪ್ತಿ. ಓಂ ನ ಮನ. ಇಂತಿವು ಓಂಕಾರದ ಪಂಚೀಕೃತಿಗಳು. ಯ ಯ ಜ್ಞಾನ. ಯ ವ ಸಮಾನ. ಯ ಶಿ ಶ್ರೋತ್ರ, ಯ ಮ ಶಬ್ದ. ಯ ನ ವಾಕ್ಕು ಇಂತಿವು ಯಕಾರದ ಪಂಚೀಕೃತಿಗಳು, ವ ಯ ಮನ. ವ ವ ವ್ಯಾನ. ವ ಶಿ ತ್ವಕ್ಕು. ವ ಮ ಸ್ಪರ್ಶ. ವ ನ ಪ್ರಾಣ. ಇಂತಿವು ವಕಾರದ ಪಂಚೀಕೃತಿಗಳು. ಶಿ ಯ ಬುದ್ಧಿ, ಶಿ ವ ಉದಾನ. ಶಿ ಶಿ ನೇತ್ರ. ಶಿ ಮ ರೂಪು. ಶಿ ನ ಪಾದ. ಇಂತಿವು ಶಿಕಾರದ ಪಂಚೀಕೃತಿಗಳು. ವ ಯ ಚಿತ್ತ. ಮ ವ ಅಪಾನ. ಮ ಶಿ ಜಿಹ್ವೆ, ಮ ಮ ರಸ, ಮ ನ, ಗುಹ್ಯ, ಇಂತಿವು ಮಕಾರದ ಪಂಚೀಕೃತಿಗಳು. ನ ಯ ಅಹಂಕಾರ, ನ ವ ಪ್ರಾಣ. ನ ಶಿ ಘ್ರಾಣ, ನ ಮ ಗಂಧ, ನ ನ ಪಾಯು ಇಂತಿವು ನಕಾರದ ಪಂಚೀಕೃತಿಗಳು. ಇಂತಿವು ಶರಣಂಗೆ ಅರ್ಪಣಸಾಧನೋಪಕರಣ ಸಕೀಲಂಗಳಾಗಿಹವು. ಮಂತ್ರ ಪಂಚೀಕರಣೋದ್ಧರಣೆಯ ಸಂಬಂಧ ಸಮಾಪ್ತ ಮಂಗಳ ಮಹಾ. ಶ್ರೀ ಶ್ರೀ ಶ್ರೀ ಶ್ರೀ ಶ್ರೀ ॥ ಶ್ರೀ ಗುರು ಬಸವಲಿಂಗಾಯ ನಮಃ ॥

**೧೫. ಲಿಂಗಪಂಚೀಕರಣೋದ್ಧರಣೆ**

ಇಂತು ಶರಣಂಗಂಗವಾದ ಮಂತ್ರ ತತ್ವಕರಣಂಗಳು ಮಹಾಲಿಂಗವಾದಿಯಾದ ಪಂಚಲಿಂಗ ಸಂಬಂಧದಿಂ ತೋರ್ಪ ಲಿಂಗಪಂಚೀಕರಣದ ನಿರ್ದೇಶವನಾದೊಡೆ ಪೂರ್ವೋಕ್ತ ಕ್ರಮದಂತೆ ನೋಡಿಕೊಂಬುದು. ಲಿಂಗಪಂಚೀಕರಣೋದ್ಧರಣೆಯ ಸಂಬಂಧ ಸಮಾಪ್ತ ಮಂಗಳಮಹಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ॥ ಶ್ರೀ ಗುರು ಬಸವಲಿಂಗಾಯ ನಮಃ ॥

**೧೬. ಷಡಕ್ಷರೋದ್ಧರಣೆಃ**

ಇಂತಪ್ಪ ಶಿವಯೋಗಿಯ ಮನತ್ರಾಣರೂಪವಾದ ಮಂತ್ರ ಚೈತನ್ಯ ಜ್ಞಾನಾರೂಢವಪ್ಪ, ಷಡಕ್ಷರೋದ್ಧರಣೆಯ ಸಂಬಂಧವೆಂತೆಂದೊಡೆ:_ ಪೂರ್ವಾಪರ ದಕ್ಷಿಣೋತ್ತರಕ್ಕಾಗಿ ಹದಿನಾಲ್ಕು ರೇಖೆಗಳಂ ಬರೆದ ಎಂಭತ್ತೈಯ್ದು ಭವನವನುಳ್ಳ ಯಂತ್ರವೇ ಚಿದಂಗ, ಮಧ್ಯಭವನ, ಸ್ಥಾನದ ಅವಾಗ್ಜಪ್ರಣವವೆ ಚಿತ್ಪ್ರಾಣಲಿಂಗ, ಅ ಲಿಂಗವ ಸ್ಮರಿಸುವ ಎಂಭತ್ತುನಾಲ್ಕು ಭವನಸ್ಥಾನವಾದ ಮಂತ್ರಾಕ್ಷರಂಗಳೆ ಲಿಂಗ. ಜಂಗಮ ಭಾವನೆಯಿಂ ಭಜಿಸುವಲ್ಲಿ ಉಪಕರಣ ಸ್ವರೂಪವಾದ ವಿವರವೆಂತೆಂದೊಡೆ:_ ಶಿವಭಕ್ತರಲ್ಲಿ ಪ್ರೀತಿಯಾಗಿಹುದು. ಲಿಂಗವನರ್ಚಿಸುವದು, ಪುಳಕ, ನಡುಕ, ನುಡಿಪಲ್ಲಟ, ಬೆಮರು,

ಉಬ್ಬುವುದು ಮೊದಲಾಗಿ ಶಿವಲಿಂಗನಿಮಿತ್ತ ಅಂಗಚೇಷ್ಟೆ ಹುಟ್ಟುವದು. ಶಿವಕಥೆಯ ವಿನಯದಿಂ ಕೇಳುವುದು, ಸ್ವರನೋಟ ಕೈಯೆಡೆಯಾಟದಲ್ಲಿ ಮಾಡುವದು. ಅನುಶ್ರುತ ಲಿಂಗವ ನೆನೆವುದು. ಲಿಂಗೋಪಜೀವಕನಾಗಿಹುದು ಇಂತಿವು ಅಷ್ಟವಿಧಭಕ್ತಿ. ಜಲ, ಗಂಧ, ಅಕ್ಷತೆ, ಪುಷ್ಪ, ಧೂಪ, ದೀಪ, ನೈವೇದ್ಯ, ತಾಂಬೂಲ, ಇಂತಿವು ಅಷ್ಟ ವಿಧಾರ್ಚನೆ, ಲಿಂಗದಲ್ಲಿ ವಿಭೂತಿಯ ತಳಿವುದು. ಕರಣಮಂ ಮಾಡುವುದು, ಸ್ನಾನಮಂ ಮಾಡುವುದು, ಧೂಪವನೆತ್ತುವುದು, ಧೂಪದ ಹೊಗೆಯಲ್ಲಿ ಮುಳುಗಿಸುವುದು, ಗಂಧವ ಧರಿಸುವುದು, ಅಕ್ಷತೆಯನಿಡುವುದು, ಪುಷ್ಪವ ಅಲಂಕರಿಸುವದು, ದೀಪವ ಬೆಳಗುವುದು, ನೈವೇದ್ಯವ ಸಮರ್ಪಿಸುವದು, ತಾಂಬೂಲವ ಕೊಡುವದು, ವಸ್ತ್ರವ ಹೊದ್ದಿಸುವದು, ಇಂತಿವು ದ್ವಾದಶ ವಿಧಾರ್ಚನೆ, ಅರ್ಘ್ಯ, ಪಾದ್ಯ, ಅಚಮನ, ಸ್ನಾನ, ಪಂಚಾಮೃತಾಭಿಷೇಕ, ದರ್ಪಣ, ಧೂಪ, ದೀಪ, ಚಾಮರ, ಆತಪತ್ರ, ಗೀತ, ವಾದ್ಯ, ನೃತ್ಯ, ನಮಸ್ಕಾರ, ಜಪ. ಪ್ರದಕ್ಷಿಣ ಇಂತಿವು ಆಸನ, ಆಹ್ವಾನ, ಅರ್ಘ್ಯ, ಪಾದ್ಯ, ಆಚಮನ, ಯಜ್ಞೋಪವೀತ, ಪುಷ್ಪಮಾಲ್ಯ, ಅನುಲೇಪನ, ಆಭರಣ, ಬೀಸಣಿಗೆ, ಚಾಮರ, ಆತಪತ್ರ, ದರ್ಪಣ. ಘಂಟೆ, ಶಂಖ. ಗೀತ. ವಾದ್ಯ ನೃತ್ಯ ಪ್ರದಕ್ಷಿಣ, ನಮಸ್ಕಾರ. ಸ್ತುತಿ. ಯಾಚಿಸುವದು. ವಿಜ್ಞಾಪನ. ಸಜ್ಜೆಗೆ ಬಿಜಯಂಗೈಸುವದು. ಇಂತಿವು ಚತುರ್ವಿಂಶತಿ ಉಪಚಾರವು. ಇವು ಲಿಂಗಸಂಬಂಧವಾದ ಭಕ್ತಿಗಳು. ಇನ್ನು ಮಜ್ಜನ ಭಸ್ಮ ಗಂಧ ಅಕ್ಷತೆ ಪುಷ್ಪ ಮಾಲ್ಯ. ಧೂಪ ದೀಪ, ನೈವೇದ್ಯ. ಹಸ್ತಾಚಮನ. ತಾಂಬೂಲ. ಪೀತಾಂಬರ. ತೂರ್ಯಾತ್ರಯ ಮಾನಿನಿ, ಭೂಷಣ, ವಾಹನ, ಗೃಹವು ಇಂತಿ ಷೋಡಶ ವಿಧವೂ ಜಂಗಮಸಂಬಂಧವಾದ ಭಕ್ತಿಗಳೆಂದರಿದು ಸಂಬಂಧಿಸುವದು. ಇನ್ನಾ ಮಧ್ಯ ಹಕಾರಕ್ಕೆ ಸಂಮುಖವಾದ ಓಂಕಾರ ಸಹ ಓಂ ನಮಶ್ಶಿವಾಯ ಎಂದು ಬಿಡದೆ ಉಚ್ಚರಿಸಲು ಪೂರ್ವದಿಂ ದಕ್ಷಿಣಾಂತವಾಗಿ ಇಪ್ಪತ್ತೊಂದಕ್ಕೆ ೩೬ ಪ್ರಣವಂಗಳಹವು, ಅವು ಮೂವತ್ತಾರೂ ಅಂಗಸ್ವರೂಪವೆಂದರಿವುದು. ದಕ್ಷಿಣದಿಂ ಪಶ್ಚಿಮಾಂತಮಾಗಿ ೨೧ ಕ್ಕೆ ೩೬ ಪ್ರಣವಂಗಳಹವು, ಅವು ೩೬ ಲಿಂಗಸ್ವರೂಪವೆಂದರಿವುದು. ಪಶ್ಚಿಮದಿಂದುತ್ತರಾಂತವಾಗಿ ೨೧ಕ್ಕೆ ೩೬ ಪ್ರಣವಂಗಳಹವು. ಅವು ೩೬ ಭಕ್ತಿಸ್ವರೂಪವೆಂದು ಅರಿವುದು. ಉತ್ತರದಿಂ ಪೂರ್ವಾಂತಮಾಗಿ ೨೧ಕ್ಕೆ ೩೬ ಪ್ರಣವಂಗಳಹವು, ಅವು ೩೬ ಪ್ರಸಾದ ಸ್ವರೂಪವೆಂದರಿವುದು. ಬಳಿಕಿವರಲ್ಲಿ ಉಳಿದ ಸಕೀಲಂಗಳಡಗಿರ್ಪ್ಪವು. ಮತ್ತಮಿವರಲ್ಲಿ ಮೂರ್ತಿ ಸಂಬಂಧವನಾದರುತಿಳಿವುದು. ಷಡಕ್ಷರೋದ್ಧರಣೆಯ ಸಂಬಂಧ ಸಮಾಪ್ತ ಮಂಗಳಮಹಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀ

॥ ಶ್ರೀ ಗುರು ಬಸವಲಿಂಗಾಯ ನಮಃ ॥

**೧೭. ಬಸವಾಕ್ಷರೋದ್ಧರಣೆ**

ಇಂತೀ ಷಡಕ್ಷರ ಸಂಬಂಧವರಿದ ಶಿವಯೋಗಿಯ ಪರತತ್ವದ ಜ್ಞಾನ, ಸಾಧನ ಪರಮಮುಕ್ತಿ ಸಾಧನವಪ್ಪ, ಬಸವಾಕ್ಷರೋದ್ಧರಣೆಯ ಸಂಬಂಧವೆಂತೆಂದೊಡೆ:– ಪರತತ್ವದ, ಪರಜ್ಞಾನದ ಚೈತನ್ಯವೆ ಪರಶಕ್ತಿ, ಆ ಪರಶಕ್ತಿಯ ಸುನಾದ ಚೈತನ್ಯವೆ ಬಕಾರ, ಚಿತ್ಪ್ರಭಾವರಣವೆ ಸಕಾರ, ಚಿತ್ಕಲಾ ತೇಜಃಪುಂಜವೆ ವಕಾರ, ಇಂತೀ ಬಸವಾಕ್ಷರತ್ರಯಕ್ಕೆ ವಿವರ. ನೂಶ್ಯ ನಿಷ್ಕಲ, ಶಿವ ಎಂಬ ತತ್ವತ್ರಯ, ಸತ್ತು ಚಿತ್ತು ಆನಂದವೆಂಬ ಲಕ್ಷಣತ್ರಯ, ಸದಾಶಿವ, ಈಶ್ವರ, ರುದ್ರರೆಂಬ ಮೂರ್ತಿತ್ರಯ, ಇಚ್ಛಾ, ಜ್ಞಾನ, ಕ್ರಿಯೆಯೆಂಬ ಶಕ್ತಿತ್ರಯ, ಭವ ಮೃಡ ಹರರೆಂಬ ತ್ರಯಾವಯವಸ್ವರೂಪಿನಿಂ ತನುತ್ರಯ, ಜೀವತ್ರಯ ಆತ್ಮತ್ರಯ ಅವಸ್ಥಾತ್ರಯ ಮನತ್ರಯಭಾವ ಆತ್ಮತ್ರಯೋತ್ಪತ್ತಿ ಹೇತುವಿನಿಂದ ಸಕಲ ತತ್ವಕಾರಣವಾಗಿಹುದು. ಇಂತಿದು ಸೃಷ್ಟಿಯ ಭೇದ, ಇನ್ನು ನಿವೃತ್ತಿಯ ಲಕ್ಷಣ:– ಗುರುತ್ರಯ, ಲಿಂಗತ್ರಯ, ಜಂಗಮತ್ರಯ, ಪ್ರಸಾದತ್ರಯ, ಪಾದೊದಕತ್ರಯ, ಭಕ್ತಿತ್ರಯ ಸ್ವರೂಪಿನಿಂ, ಅಂಗತ್ರಯ, ಲಿಂಗತ್ರಯ, ಅವಧಾನತ್ರಯ, ಕರಣತ್ರಯ, ಮುಖತ್ರಯ, ಅರ್ಪಿತತ್ರಯ ಸಂಬಂಧದಿಂ ಸರ್ವಾಚಾರ ಸಾಧನವಾಗಿಹುದು. ಇದನುಚ್ಚರಿಸುವ ಕ್ರಮವೆಂತೆಂದೊಡೆ:–

ಬಸವ ಸವಬ ವಬಸ, ವಸಬ, ಸಬವ, ಬವಸ, ಎಂದು ಪುನಃ ಪ್ರಯೋಗದಿಂದಾರುವೇಳೆ ಸ್ಮರಿಸಲು ನೂರೆಂಟು ಪ್ರಣವವಹವು. ಎಂದಿದನರಿದು ಜಪಿಸಲು, ಶಿವಜ್ಞಾನಸಿದ್ಧಿಯಹುದಕ್ಕೆ ಸಂದೇಹವಿಲ್ಲ. ಬಸವಾಕ್ಷರೋದ್ಧರಣೆಯ ಸಂಬಂಧ ಸಮಾಪ್ತ ಮಂಗಳಮಹಾ. ಶ್ರೀ ಶ್ರೀ ಶ್ರೀ ಶ್ರೀ ಶ್ರೀ ॥ ಶ್ರೀ ಗುರು ಬಸವಲಿಂಗಾಯ ನಮಃ ॥

**೧೮. ನೂರೆಂಟು ಪ್ರಣವೋದ್ಧರಣೆ**

ಇಂತಪ್ಪ ಪರಮಮಂತ್ರ ಧ್ಯಾನರೂಢನಾದ ಶಿವಯೋಗಿ, ನೂರೆಂಟು ಪ್ರಣವಸಂಬಂಧವನರಿದು ಜಪಿಸುವ ಕ್ರಮವೆಂತೆಂದೊಡೆ:_ ಕರ್ಮಾರಣ್ಯ ಪ್ರವೇಶಮಾಗಿ, ಜರಾ ಮರಣ ಭೀತೋಪದ್ರವ ರೂಪವಾಗಿ ಸಮಸ್ತ ವಿಶ್ವದಲ್ಲುಳ್ಳ ಪಶು ಪ್ರಾಣಿಗಳಂ ಮುರಿದು ನುಂಗುತ್ತಿಹ ಕಾಲವ್ಯಾಘ್ರವೇ ಮುಖ. ಮುಂದಣ ಬಲದ ಪಾದವು ಓಂಕಾರವಹರೂಪವಾಗಿ ಸಚ್ಚಿತ್ಸುಖಸ್ವರೂಪವಾದ ಬಸವಾಕ್ಷರತ್ರಯ, ಸುನಾದಬಿಂದುಕಲಾರೂಪವಾದ ಅಉಮಾಕ್ಷರತ್ರಯ ಸತ್ಯಾದಿಲಕ್ಷಣವನುಳ್ಳ ಪ್ರಣವಾದಿ ಪಂಚಾಕ್ಷರವೆಂಬ ದ್ವಾದಶ ಪ್ರಣವಂಗಳಂ ಒಂಭತ್ತು ವೇಳೆ ಪುನಶ್ಚರಣ ಮಾಡಲು, ನೂರೆಂಟು ಪ್ರಣವಂಗಳಹವು. ಇದನರಿದು ಜಪಿಸಲು ಆತ್ಮತ್ರಯಂಗಳೆಲ್ಲವು ಬಸವಾಕ್ಷರಸ್ವರೂಪವಾದ ಗುರು, ಲಿಂಗ, ಜಂಗಮ ಸ್ವರೂಪವಹವು. ತನುತ್ರಯಂಗಳೆಲ್ಲವು. ಅ ಉ ಮಾಕ್ಷರಸ್ವರೂಪವಾದ ಇಷ್ಟ ಪ್ರಾಣ ಭಾವಲಿಂಗ ಸ್ವರೂಪವಹವು. ಷಟ್ತತ್ತ್ವಂಗಳೆಲ್ಲವು ಷಡಕ್ಷರೀ ರೂಪವಾದ ಷಡ್ವಿಧಲಿಂಗ ಸ್ವರೂಪವಹವು. ಮತ್ತಂ ಸರ್ವತತ್ತ್ವಂಗಳೆಲ್ಲವು ಮಂತ್ರಮಯಲಿಂಗ ತತ್ತ್ವಸ್ವರೂಪವಾಗಿ, ನಿಜಸಮಾಧಿ ಸಿದ್ಧಿಸಿ ಪರಶಿವಯೋಗ ಸಂಭವಿಸುವುದು. ನೂರೆಂಟು ಪ್ರಣವೋದ್ಧರಣೆಯ ಸಂಬಂಧ ಸಮಾಪ್ತ ಮಂಗಳಮಹಾ. ಶ್ರೀ ಶ್ರೀ ಶ್ರೀ ಶ್ರೀ ಶ್ರೀ ॥ ಶ್ರೀ ಗುರು ಬಸವಲಿಂಗಾಯನಮಃ ॥

**೧೯. ಅಧಃಕುಂಡಲಿ ಶಕ್ತಿ ಪ್ರಣವೋದ್ಧರಣೆ**

ಇಂತಪ್ಪ ಶಿವಮಂತ್ರ ಧ್ಯಾನಪರಾಯಣನಾದ ಶಿವಯೋಗಿಯ ಕುಂಡಲಿಯೆಂಬ ಮಹಾನಾಡಿಯೆನಿಪ ನಾಭಿಪ್ರದೇಶದಲ್ಲಿ ನೆಲಸಿ, ನಿವೃತ್ತಿ ಮುಖವಾಗಿರ್ಪ ಕುಂಡಲಿಶಕ್ತಿಯ ಪ್ರವೃತ್ತಿ ಲಕ್ಷಣವೆಂತೆಂದೊಡೆ:_ ಕರ್ಮಾರಣ್ಯ ಪ್ರವೇಶಿಯಾಗಿ, ಜರಾ ಮರಣ ಭೇದೋಪದ್ರವರೂಪವಾಗಿ, ಸಮಸ್ತ ವಿಶ್ವದಲ್ಲುಳ್ಳ ಪಶುಪ್ರಾಣಿಗಳ ಮುರಿದು ನುಂಗುತ್ತಿಹ ಕಾಲನೆಂಬ ವ್ಯಾಘ್ರವೆ ಮುಖ, ಮುಂದಣ ಬಲದ ಪಾದ, ಉರಗಾಕಾರ ವಾಹನರೂಪವಾಗಿ ಭವಾರಣ್ಯ ಪ್ರವೇಶಿಯಾಗಿ ಸಂಚಲ ಗುಣಯುತ ಸಂಬಂಧಿಯಾಗಿ, ವೃಥಾ ಭ್ರಾಂತಿಲಕ್ಷಣೆಯಾಗಿ, ಭಿನ್ನ ದೃಷ್ಟಿಗೆ ಸ್ವರೂಪಿಣಿಯಾಗಿ ತೃಣಪತಿಪತ್ತಾಗುತ್ತಿಹ ಸಂಸಾರಸುಖವನು, ವಿಷಯಾಸಾರದ ರಸೋದಕವ ಕೊಂಡು, ಜಗದಗಲಕ್ಕೆ ಹರಿದು, ಮೋಹವೆಂಬ ಮುಖದಿಂ, ವಿಶ್ವವನಗಿದಗಿದು ತಿನುತಿಹ, ಮಾಯೆಯೆಂಬ ಹರಿಣಿಯೆ, ಶಿರ, ಶೃಂಗ, ಕರ್ಣ, ನಯನ, ಹಿಂದಣ ಎಡದ, ಪಾದಾಕಾರವಾಹನಸ್ವರೂಪವಾಗಿ, ಅಹಂಕಾರವೆಂಬ ಪರ್ವತವನ್ನೇರಿ ನಿಂದು ದುರ್ವಿಮುಖಾವಲೋಕನದಿಂ ದುರ್ಮದಗ್ರಾಹಕ ಚಿತ್ತವಿಭ್ರಾಂತಿಯನುಳ್ಳ ಮೋಹವೆಂಬ ಸಿಂಹವೇ ಮುಂದಣ ಎಡದ ಪಾದ, ಅಡಿಹೊಟ್ಟೆಯ ನಡುವಿನಾಕಾರ ವಾಹನನ ರೂಪವಾಗಿ, ಸಂಸಾರಪಾಶದಿಂ ಬಿಗಿವಡೆದು ಪರತಂತ್ರವಾದ, ಜೀವವೆಂಬ ಪಶುವೆ ಹಿಂದಣ ಬಲಪಾದ; ಮೇಲೆ ಕೆಚ್ಚಲಿನಾಕಾರ ವಾಹನರೂಪವಾಗಿ, ಶಂಖಾವಿಷ ಸಂಬಂಧಿಯಪ್ಪ, ಕುಂಡಲ ಭುಜಂಗವೆ ಬಾಲವಾಗಿ, ಪಾದಾದ್ಯವಯವಂಗಳು ಮನುಜಾಕಾರವಾಗಿ. ನರಸತಿಯೋ ನಾಗಕನ್ನಿಕೆಯೋ ಕಿನ್ನರಸ್ತ್ರೀಯೋ ಯಕ್ಷವನಿತೆಯೋ ಮೃಗಕುಲಜೆಯೋ ಇದಾವ ಸತಿಯೋ ಎಂದು ವಿವರಿಸಲು ವಶವಲ್ಲದ, ದೇವತೆಯೆ ಮನುಷ್ಯಾಕಾರವಪ್ಪ ವಿಚಿತ್ರರೂಪದಿಂ, ಕಾಮರೂಪಿಯಾಗಿ ಧೂರ್ತ ವಿಗ್ರಹದಿಂ ನಾನಾಚಾರಿತ್ರವ ಮುಂದುಗೊಂಡು, ಲೋಕಮೋಹಿನಿ, ಜಗದ್ವ್ಯಾಪಿನಿ, ಅಂತರ್ಮನೊ ರೂಪಿಣಿಯಾಗಿರ್ಪಳೀಕುಂಡಲಿ ಶಕ್ತಿಯ ಸ್ವರೂಪಗುಣಲಕ್ಷಣ ಸಂಬಂಧವೆಂತೆನಲು, ಕ್ರೋಧವೆರಸಿದ ದುರ್ಮೋಹವೆ

ಮುಖ, ದುರ್ವಿವೇಕವೆ ಶಿರಸ್ಸು, ದುರ್ವಾಸನಾಸ್ವೀಕಾರವೇ ನಾಸಿಕ, ದುರ್ಮುಕ್ತಿಯೇ ಮೂಗುತಿ, ದುರಪೇಕ್ಷೆಯೇ ಜಿಹ್ವೆ, ಸಂಕಲ್ಪ ವಿಕಲ್ಪಾದಿ ಗುಣಂಗಳೇ ದಂತಪಕ್ತಿಗಳು, ಕರಣಮಥನಂಗಳೇ ಕೋರೆದಾಡೆಗಳು, ಜ್ಞಾನಾಜ್ಞಾನಂಗಳೇ ನೇತ್ರಂಗಳು, ಶ್ರುತಾಶ್ರುತಂಗಳೇ ಕರ್ಣಂಗಳು, ಆಚಾರ ಅನಾಚಾರಂಗಳೇ ಕರ್ಣಾಭರಣಂಗಳು, ದುರಹಂಕಾರ ಮಮಕಾರಂಗಳೇ ಕೋಡುಗಳು, ಅದೃಢವೇ ಕಂಠ, ಅವ್ಯಕ್ತನಿಷ್ಠೆಯೇ ಕಂಠಾಭರಣ ಸ್ವರೂಪ, ಸೂತ್ರವಿಡಿದಿರ್ಪ ಅಕ್ಷರಮಾಲೆಯೇ ಕೊರಳಹಾರ, ಕುಚಿತ್ತ ಕುಬುದ್ಧಿ, ಕುಮನ, ಕುಭಾವವೇ ಕರಚತುಷ್ಟಯಂಗಳು, ತದ್ಗುಣದೋಷಂಗಳೇ ಹಸ್ತಾಭರಣಂಗಳು, ಅಮೃತ ವಿಷಪೂರಿತವಾದ ಪಾತ್ರಾಪಾತ್ರಂಗಳೆ ಮೇಲಣ ಹಸ್ತದ್ವಯದ ಕುಂಭಂಗಳು, ಸತ್ಯವ ಮಿಥ್ಯವ ಮಾಡಿ, ಶುಭಾಶುಭಂಗಳ ಲಿಖಿಸುವ ಮೂಲಾಹಂಕಾರವೇ ಬಲದಹಸ್ತ, ಕಂಠ ಪ್ರಾರಬ್ಧ ಕಲ್ಪಿತವಾದ ಪ್ರಕೃತಿಪಿಂಡ ಸಂಬಂಧವಪ್ಪ, ಫಣೆಯ ದುರ್ಲೇಖನವೆ ಎಡದ ಅಧೋಹಸ್ತದ ಶಾಸನಪತ್ರ, ಇಹಪರಭೋಗಾಭೋಗ ಸಂಪತ್ತು, ಕರಸಂಪೂರಿತವಾದ ಶುಭಾಶುಭ ಕರ್ಮಂಗಳೇ ಸ್ತನಂಗಳು. ಅಲ್ಲಿಯ ಪ್ರಪಂಚಾಧ್ಯಾಸವೇ ಕಂಚುಕ, ತತ್ಪ್ರಪಂಚಾವಲಂಬನ ಗರ್ಭೀಕೃತವೇ ಗರ್ಭ, ತನ್ಮಧ್ಯಸ್ಥಿತಿಯೇ ನಾಭಿ, ಆ ಸ್ಥಿತಿಗತಿ ಸಂಧಾನರತಿಯೇ ನಡುವು, ಲೋಕೋತ್ಪತ್ತಿ ಹೇತುಸಾಧನಗುಣವೇ ಗೋಪ್ಯಾಂಗ, ವರ್ಣಾಂಶಿಕ ಗುಣ ಪ್ರಪಂಚಲಕ್ಷಣವನುಳ್ಳ ಅಜ್ಞಾನವೇ ಉಟ್ಟ ಪಟ್ಟಾವಳಿ ಸಂಪುಟವಸ್ತ್ರ, ದುರ್ಭಾವ ಪ್ರಕೃತಿಯೇ ಮಧ್ಯಾವರಣ, ದುರಾಚಾರ ದುಶ್ಚರಿತ್ರವೇ ಕೀಳು ಮೇಲಣ ಚರಣದ್ವಯಂಗಳು, ತತ್ಸಂಬಂಧವಾದ ಕುಟಿಲ ಕುಹಕ ಗುಣದೋಷಂಗಳೆ ಪಾದಾಭರಣಂಗಳು, ಸಾಧಕರ ಸಾಧಿಸುವ ವಿಜಯ ವಿಶಾಲ ಪ್ರತಾಪಗುಣವೆ ಬಿರುದಿನ ಕಾಲಪೆಂಡೆ, ನಿಲುವ ತೊಡರು, ಬಾಹುಲಿಗಳು. ಕ್ರೋಧವೆಂಬ ಹುಲಿ, ಜೀವವೆಂಬ ಪಶು, ಮಾಯೆಯೆಂಬ ಹರಿಣಿ, ಈ ನಾಲ್ಕು ವಾಹನಂಗಳು, ಅಧರ್ಮ ಅಜ್ಞಾನ ಅವೈರಾಗ್ಯ ಅನೈಶ್ವರ್ಯ ಈ ನಾಲ್ಕು ಚರಣಂಗಳು, ಭೋಕ್ತ ಕರ್ಮಸ್ಥಿತಿಯೇ ಕೆಚ್ಚಲು, ಧರ್ಮ ಅರ್ಥ ಕಾಮ ಮೋಕ್ಷಂಗಳೇ ಸ್ತನಂಗಳು, ಆ ಸ್ತನಂಗಳು, ಆ ಸ್ತನ್ಯಸ್ವೀ ಕೃತರಪ್ಪ ಜೀವರಾಶಿಗಳೇ ಭವಾಂಬುರಾಶಿ, ಕ್ರೀಡಿತಮತ್ಸ್ಯಂಗಳು ಮತ್ತಂ, ಶಂಕಾವಿಷಸಂಬಂಧವಪ್ಪ ಚತುರ್ದಶ ಇಂದ್ರಿಯಂಗಳೇ ಮುಖವಾಗಿ, ಅರಿಷಡ್ವರ್ಗಂಗಳೇ ಒಡಲಾಗಿ, ಪ್ರಕೃತಿ ಗುಣವೇ ಬಾಲವಾಗಿ, ಪಂಚಭೂತ ಗುಣ, ಮನೋಬುದ್ಧಿ ಅಹಂಕಾರವೆಂಬ ಅಷ್ಟಪ್ರಕೃತಿಯಿಂ ಪಂಚತನ್ಮಾತ್ರ, ಪ್ರಕೃತಿ ಮಹತ್ತ್ವವೆಂಬ ಸಪ್ತ ಕುಟಿಲಾಕಾರದಿಂ ದಾಹ್ಯ ಲೇಖನದಂತೆ ಚಾಪದಟ್ಟಿನವೊಲ್, ಬಾಲವ ಬ್ರಹ್ಮನಾಡಿಯತ್ತನೀಡಿ, ನಾಲಿಯೊಳು ತೆಕ್ಕೆಯನಿಕ್ಕಿ, ಮುಖವ ಹರಿದ್ವಾರದಲ್ಲಿರಿಸಿ, ಜನನಹೇತುವಿಂ ನಾದಬಿಂದುರೂಪವಾದ, ಕಾಳಕೂಟವಿಷವನುಗುಳಿ, ಸಂಹಾರಕಾರಣವಾಗಿ ಲೋಕೋಪದ್ರವ ಮಾಡುತ್ತಿಹ ಬಾಲವಾಗಿರ್ಪ, ಕುಂಡಲಿಸರ್ಪನ ತೊಡೆಯ ಕಣಿಕಾಲಸಂದಿಯಲ್ಲಿ ಸಿಕ್ಕಿಸಿ, ತಲೆಯೆತ್ತಲೀಯ್ಯದೆ ಅಜ್ಞಾನವೆಂಬ ಅಲಗಿನಿಂದಳಿಕಿಸಿಕೊಂಡಿರ್ಪಳು, ಮರಣರುಜೆರೂಪವಾದ ಕಾಲಮೃತ್ಯು, ಅಪಮೃತ್ಯುಗಳೆರಡು ಎಡಬಲದ ಶಿರದ್ವಯಂಗಳು, ಮತ್ತ ಮಿದನಾವರಿಸಿಕೊಂಡು, ವಿಷಮ ವಿಷಯ ಸಂಸಾರಜಲದಿಂ, ಷಡೂರ್ಮಿ, ಷಡ್ ಭ್ರಮೆ, ಷಡ್ಭಾವ ವಿಕಾರ ಸಪ್ತ ಧಾತುವ್ಯಸನಂಗಳೆಂಬ ಪೀನ! ತರಂಗಬುದ್ಬುದ ಸ್ಥಿತಿಕರ ವರ್ತುಲಂಗಳಿಂ ಮೂಲಾಹಂಕಾರವೆಂಬ ಮಹಾಕಮಠದಿಂ ಅರಿವುಮರವೆ ಗಳೆಂಬ ತಿಮಿಂಗಿಲಂಗಳಿಂ ಅರಿಷಡ್ವರ್ಗಂಗಳೆಂಬ ಜಲಸರ್ಪ ಜಲಗ್ರಾಹ ಕರ್ಕಾಟಕ ಮಂಡೂಕ ಕಮಠ ಖಡ್ಗ ಕಾಳ್ಗಡಲಿಂ ಸಕಲ ಜೀವರಾಶಿಗಳೆಂಬ ಮೀನ್ಗಳಿಂ ಕಾಲ ಕಾಮರೆಂಬ ವ್ಯಾಧರಿಂ ಜಗಜಾಲವೆಂಬ ಬೈತ್ರಂಗಳಿಂ ಪುಣ್ಯಾಪಾಪಂಗಳೆಂಬ ಶಿರಂಗಳಿಂ ಗರ್ಭೋದಕ ಶರಧಿಯಂತೆ ಭವಸಮುದ್ರದಂತೆಸೆಯುತ್ತಿಹುದು.

**೨೦. ಊರ್ಧ್ವ ಕುಂಡಲಿ ವಾಚ್ಯವು:**

ಇಂತಪ್ಪ ಕುಂಡಲಿಶಕ್ತಿ ನಿವೃತ್ತಿಮುಖವನೆಯ್ದಿ ಮಂತ್ರಶಕ್ತಿಯಾದ ವಿವರವೆಂತೆಂದೊಡೆ:– ಅಕಾಲ ಮಾಯಾ ಮೋಹ ಜೀವಜನ ಸಪ್ತಾಕಾರವಳಿದು ನಿತ್ಯ ನಿರ್ಮಾಯ ನಿರ್ಮೋಹ ಸಜೀವ ಸುಜನ, ಸತ್ತ್ರಣವಾಕಾರವಾದ ಸ್ವರೂಪಲಕ್ಷಣ

ಸಂಬಂಧವೆಂತೆನಲು ಪರಮಶಾಂತಿ ರತಿಲಾಸ ಮೋಹನವೇ ಮುಖ, ಸದ್ವಿವೇಕವೇ ಶಿರಸ್ಸು, ಶಿವಸದ್ವಾಸನಾಸ್ವೀಕಾರವೇ ನಾಸಿಕ, ನಿತ್ಯ ನಿಜ ಮುಕ್ತಿಯೇ ಮೂಗುತಿ, ಚಿದಪೇಕ್ಷೆಯೆ ಜಿಹ್ವೆ, ನಿಸ್ಸಂಕಲ್ಪ ನಿರ್ವಿಕಲ್ಪಾದಿ ಸದ್ಗುಣಂಗಳೆ ದಂತಪಂಕ್ತಿಗಳು, ಚಿತ್ಕಾರಣ ಮಥನಂಗಳೆ ಕೋರೆದಾಡೆಗಳು, ಸುಮನ ಸುಜ್ಞಾನಮಹದಜ್ಞಾನಂಗಳೇ ನಯನಂಗಳು ಸದ್ಬೋಧೆ ನಿರ್ಬೋಧೆಗಳೆ ಕರ್ಣಂಗಳು, ಅಮಾರ್ಗಕ್ರಿಯೆಯ ಮೀರಿದ ಕ್ರಿಯಾಚಾರಂಗಳೇ ಕರ್ಣಾಭರಣಂಗಳು, ನಿರಹಂಕಾರ ಮಮಕಾರಂಗಳೆ ಕೋಳ್ಗಳು, ಸದ್ಭೃಢವೇ ಕಂಠ, ನಿಜನಿಷ್ಠೆಯೇ ಕಂಠಾಭರಣ, ನಾದಸೂತ್ರವಿಡಿದಿರ್ಪ ಮಂತ್ರಾಕ್ಷರಮಾಲೆಯೇ ಕೊರಳಹಾರ, ಸುಚಿತ್ತ ಸುಬುದ್ಧಿ ಸುಮನ ಸದ್ಭಾವವೇ ಕರಚತುಷ್ಟಯಂಗಳು, ಸದ್ಗುಣಪ್ರಭಾವಂಗಳೆ ಹಸ್ತಾಭರಣಂಗಳು, ಪರಮಾಮೃತ ಚಿದಮೃತಪೂರಿತವಾದ ಪಾತ್ರಾಪಾತ್ರಂಗಳೆ ಮೇಲಣ ಹಸ್ತದ್ವಯದ ಕುಂಭಗಳು, ದುರ್ಲಿಖಿತವ ಲಿಖಿಸುವ ಮೂಲಜ್ಞಾನವೇ ಬಲದ ಹಸ್ತದ ಕಂಠ, ಪ್ರಾರಬ್ಧ ಕಲ್ಪಿತವಳಿದ ಚಿತ್ಪಿಂಡ ಸಂಬಂಧವಪ್ಪ ಫಣೆಯ ಪಂಚಾಕ್ಷರ ಲೇಖನವೇ ಎಡದ ಹಸ್ತದ ಶಾಸನ ಪತ್ರ, ಭಕ್ತಿರಸಾಮೃತಪೂರಿತವಾದ ಸತ್ಕರ್ಮ ನಿಷ್ಕರ್ಮಂಗಳೆ ಸ್ತನಂಗಳು, ಅಲ್ಲಿಯ ನಿಷ್ಪ್ರಪಂಚ ಧ್ಯಾನವೆ ಕಂಚುಕ, ತನ್ನಿಷ್ಪ್ರ ಪಂಚಮೂಲಜ್ಞಾನ ಗರ್ಭೀಕೃತವೇ ಗರ್ಭ, ತನ್ಮಧ್ಯಸ್ಥಿತಿಯೇ ನಾಭಿ, ಆ ಸ್ಥಿತಿ ಗತಿ ಸಂಧಾನರತಿಯೇ ನಡುವು, ನಿಜೋತ್ಪತ್ತಿ ಹೇತು ಸಾಧನಗುಣವೇ ಗೋಪ್ಯಾಂಗ, ಷಡ್ವಿಧ ಭಕ್ತಿ ಯುಕ್ತವಾದ ಜ್ಞಾನವೆ ಉಟ್ಟ ಪಟ್ಟಾವಳಿ ಸಂಪುಟವಸ್ತ್ರ, ಸದ್ಭಾವ ಪ್ರಕೃತಿಯೇ ಮಧ್ಯಾಭರಣ, ಸದಾಚಾರ ಸಚ್ಚರ್ಯವೆ ಚರಣದ್ವಯಂಗಳು, ತತ್ಸಂಬಂಧವಾದ ನಿಷ್ಕಪಟ ನಿಷ್ಕುಹಕ ಗುಣಪ್ರಭಾವಂಗಳೇ ಪಾದ್ಯಾಭರಣಂಗಳು, ಅಸಾಧ್ಯಸಾಧಕ ವಿಜಯ ವಿಶಾಲ ಪ್ರತಾಪಗುಣವೆ ಬಿರುದಿನ ಕಾಲಪೆಂಡೆ ನಿಲುವದೊಡರು. ಬಾಹುಲಿಗಳು, ನಿಷ್ಕ್ರೋಧ, ನಿರ್ಮೋಹ, ಸಜೀವ, ನಿರ್ಮಾಯೆ ಈ ನಾಲ್ಕು ವಾಹನಂಗಳು, ಸದ್ಧರ್ಮ, ಸುಜ್ಞಾನ ಪರಮವೈರಾಗ್ಯ, ಮಹದೈಶ್ವರ್ಯ ಈ ನಾಲ್ಕು ಚರಣಂಗಳು, ಅಭೋಕ್ತೃ ಕರ್ಮಸ್ಥಿತಿಯೇ ಕೆಚ್ಚಲು, ಶಿವಧರ್ಮ ಶಿವಜ್ಞಾನಾರ್ಥ ಶಿವರತಿಕಾಮ ಶಿವಶುಭ ಮೋಕ್ಷಂಗಳೆ ಸ್ತನಂಗಳು, ಆ ಸ್ತನ್ಯಪಾನ ಸ್ವೀಕೃತರಪ್ಪ ಸಚ್ಚಿದಾತ್ಮಕರೆ ಚಿತ್ಸುಧಾಂಬೋರಾಶಿ ಕ್ರೀಡಿತ ಮತ್ಸ್ಯಂಗಳು, ಇಂತಾಗಲು ದಂಡಾಹತವಾದ ಭುಜಂಗದಂತೆ ಸುಪ್ತವಾದ ಕುಂಡಲಿ ಸರ್ಪವನು, ಶಿವಯೋಗಸಾಧನ ಸಂಪತ್ಕರದಿಂ, ಪ್ರಬಲವಪ್ಪ ಜ್ಞಾನಾಗ್ನಿ ಮುಖದಿಂದೆಚ್ಚತ್ತು ಊರ್ಧ್ವಮುಖನಾಗಿ ಸತ್ರಾಣವ ಜ್ಞಾನಕುಂಡಲಿಯೆನಿಸಿ, ಅಗ್ನಿಮಂಡಲದಿಂ ಸೂರ್ಯಮಂಡಲಕ್ಕಡರಿ, ಅಲ್ಲಿಂದ ಚಂದ್ರಮಂಡಲವನೇರಿ, ಅಲ್ಲಿಂದ ಬಂದು ತ್ರಿಕೂಟಾದ್ರಿಯಲ್ಲಿ ನಿಂದು ಮಂತ್ರೋಚ್ಚರಿತ ಲೋಲಾನಂದ, ಬ್ರಹ್ಮನಾದಾನುಷಂಗಿಯಾಗಿ, ಪ್ರಣವಘೋಷದಿಂ ಪಶ್ಚಿಮಗಾಮಿಯಾಗಿ ಖಗರಂಧ್ರ ಸ್ಥಾನಮಂ ಸಾರಿ ಫಣಾಮಣಿ ಪ್ರಜ್ವಲಿಸುತ್ತ ಪರಮ ತೇಜೋರಾಶಿಯೆನಿಸಿರ್ಪ್ಪ, ಪರತತ್ವದೊಳಗೆ ಬೆರೆದು, ಮನಸ್ಸಮಾಧಿಯನೆಯ್ದಿಪ್ಪುದು. ಮತ್ತಮದನಾವರಿಸಿ ಪೂರ್ವೋಕ್ತಕ್ರಮದಂತೆ ನಿವೃತ್ತಿ ಮುಖವನುಳ್ಳ ಸರ್ವಸದ್ಗುಣ ಸಂಪತ್ಸಂಭ್ರಮದಿಂ ಚಿತ್ಸಮುದ್ರವೆಸೆವುತಿಪ್ಪುದು ಊರ್ಧ್ವ ಕುಂಡಲಿ ಶಕ್ತ್ಯುದ್ಧರಣೆಯ ಸಂಬಂಧ ಸಮಾಪ್ತ ಮಂಗಳಮಹಾ.

ಶ್ರೀ ಶ್ರೀ ಶ್ರೀ ಶ್ರೀ ಶ್ರೀ ॥ ಶ್ರೀ ಗುರು ಬಸವಲಿಂಗಾಯ ನಮಃ ॥

**೨೧. ಮಹಾಲಿಂಗೋದ್ಧರಣೆ:**

ಇಂತೀ ಸರ್ವಮಂತ್ರದೇವತಾಮಯವಾದ ಶಿವಚಕ್ರವೆಂಬುದು, ಶಿವ ತತ್ವವಾದ ನಿಜನಿವಾಸವೆನಿಸಿ, ಶರಣರಲ್ಲಿ ಅಂತರ್ಗತವಾದ ಶಿವತತ್ವವೆ ನಾದಲಿಂಗ ಬಿಂದು ಪೀಠ ತೇಜೋಮೂರ್ತಿಯಾಗಿ ಆದ್ಯಂತರಹಿತವೆನಿಸಿ, ಸ್ಥೂಲ ಸೂಕ್ಷ್ಮಭರಿತನಾಗಿ, ಶಿವಶರಣರಲ್ಲಿ ಕರತಳಾಮಳಕವಾಗಿ ಪ್ರಕಾಶಿಸುತಿರ್ಪ ಮಹಾಲಿಂಗಾಕಾರವಾಗಿಹುದು. ಆ ಲಿಂಗಲಕ್ಷಣವನುದ್ಧರಿಸುವ ಭೇದವ ಶಿವಾಗಮಂಗಳಿಂ ವಿಸ್ತರಿಸಲಾಯ್ತು. ಅದೆಂತೆಂದೊಡೆ

ಪೂರ್ವೋಕ್ತಬಿಂದು ವಿಧಾನದಂತೆ, ರಾಜಾನಂದದ ಹಿಟ್ಟಿನಲ್ಲಿ ಅದ್ದಲ್ಪಟ್ಟ ಸೂತ್ರದಿಂ ಪೂರ್ವಾಪರಕ್ಕಾಗಿ ಹದಿನೆಂಟು ಸೂತ್ರಂಗಳಿಂ ಮಿಡಿಯಲು, ಪೂರ್ವಾಪರ ದಕ್ಷಿಣೋತ್ತರಮುಖವಾಗಿ ಹದಿನೇಳು ಪಂಕ್ತಿಗಳನ್ನುಳ್ಳ ಲಿಂಗದಾಕಾರವಾಗಿಹುದು, ಆ ಲಿಂಗಷಡಂಗಕ್ರಮ:_ ಅಧಃಪಟ್ಟಿಕೆಯೆಂದು ಅಧಃಕಂಜವೆಂದು, ಕಂಠವೆಂದು, (ಆ ಕಂಠವೆಂಬ ಶಬ್ದಕ್ಕೆ ಮತ್ತೊಂದು ವೃತ್ತವೆಂಬ ನಾಮ ಸಲ್ವುದು) ಊರ್ಧ್ವಾಬ್ಜವೆಂದು ಊರ್ಧ್ವಪಟ್ಟಿಕೆಯೆಂದು ಆದ್ಯಪ್ರದಾರಿಕೆಯೆಂದು ಶಿವಲಿಂಗಪೀಠದ ಕೆಳಗಣ ನಾಲ್ಕುಕೊಟ್ಟಸ್ಥಾನ ಮೊದಲಾಗಿ, ಶಿವಲಿಂಗಾಕಾರದ ಮೊದಲು ಪಂಕ್ತಿಯ ನಾಲ್ಕು ಕೊಟ್ಟಸ್ಥಾನ ಕಡೆಯಾಗಿ, ಕ್ರಮದಿಂ ಕ್ರಮದಿಂ, ಷಡಂಗಗಳು ಹೇಳಲ್ಪಟ್ಟುವು. ಇಂತಿವರಲ್ಲಿ ಷಡಕ್ಷರನ್ಯಾಸಕ್ರಮ:_ ಅಧಃಕಂಜದ ಕೆಳಗಣ ಅಧಃಪಟ್ಟಿಕೆಯೆ, ಆಧಾರ ಸ್ಥಾನದಲ್ಲಿಯ ಚತುಃ ಕೋಟಂಗಳೆ ಚತುಃ ಪತ್ರವವರಲ್ಲಿ ವ ಶ ಷ ಸ ಎಂಬ ನಾಲ್ಕು ಅಕ್ಷರಂಗಳು, ಅದರಿಂದ ಮೇಲಣ ಅಧಃಕಂಜವೆ ದೇದೀಪ್ಯಮಾನ, ವಲ್ಲಿ ಷಟ್ಕೋಟಂಗಳೆ ಷಡ್ದಳ, ಅವರಲ್ಲಿ ಬ ಭ ಮ ಯ ರ ಲ ಎಂಬ ಷಡಕ್ಷರಂಗಳು. ಅದರಿಂದ ಮೇಲಣ ವೃತ್ತವೆ ಮಣಿಪೂರಕಸ್ಥಾನ, ಅವರಲ್ಲಿಯ ದಶಕೋಟಂಗಳೆ ದಶದಳ, ಅವರಲ್ಲಿ ಡ ಢ ಣ ತ ಥ ದ ಧ ನ ಪ ಫ ಎಂಬ ದಶಾಕ್ಷರಂಗಳು, ಅದರಿಂದ ಮೇಲಣ ಊರ್ಧ್ವಕಂಜವೆಂಬ ನಾಮವನುಳ್ಳ ಹೃದಯಸ್ಥಾನದಲ್ಲಿಯ ದ್ವಾದಶಕೋಟಂಗಳೆ ದ್ವಾದಶದಳ, ಅವರಲ್ಲಿ, ಕ ಖ ಗ ಘ ಙ ಚ ಛ ಜ ಝ ಞ ಟ ಠ ಎಂಬ ದ್ವಾದಶಾಕ್ಷರಂಗಳು, ಅದರಿಂದ ಮೇಲಣ ಊರ್ಧ್ವಪಟ್ಟಿಕೆಯೆ ಕಂಠಸ್ಥಾನ, ಅವರಲ್ಲಿ ಷೋಡಶ ಕೋಟಂಗಳೆ ಷೋಡಶದಳ, ಅವರಲ್ಲಿ ಅ ಆ ಇ ಈ ಉ ಊ ಋ ಲ್ರು ಲ್ರೂ ಎ ಐ ಒ ಔ ಅಂ ಅಃ ಎಂಬ ಷೋಡಶಾಕ್ಷರಂಗಳು, ಅದರಿಂದ ಮೇಲಣ ಆದ್ಯ ಪ್ರದಾರಿಕೆಯೆಂಬ ಆಜ್ಞಾ ಚಕ್ರದಲ್ಲಿ ನಾಲ್ಕುಕೊಟ್ಟಂಗಳ ಮಧ್ಯದಲ್ಲಿ ಎರಡು ದಳಂಗಳಲ್ಲಿ ಹಂ ಸ ಎಂಬಕ್ಷರದ್ವಯಂಗಳು. ಅದಲ್ಲದೆ ಹಂ ಕ್ಷಂ ಎಂಬ ದ್ವಿವರ್ಣಂಗಳನಾದೊಡು ನ್ಯಾಸವ ಮಾಡಿದ, ತದನಂತರದಲ್ಲಿ ಕುಟಿಲೆ, ಕುಂಡಲಿ, ಪರನಾದ, ಪರಬಿಂದು, ಪರವಿದ್ಯೆ, ಶಬ್ದತತ್ವ, ಶಬ್ದಬ್ರಹ್ಮ, ಶಿವತತ್ವ ಷಡಧ್ವಬೀಜ, ಶಿವಲಿಂಗಪೀಠ, ಯೋಗಪೀಠ, ಮಂತ್ರಪೀಠ, ವ್ಯೋಮಶಕ್ತಿ, ವಿದ್ಯಾಶಕ್ತಿ, ವಾಗೀಶ್ವರಿ, ಅನಾಹತೆ, ಅಘೆ, ಶವಾಕುಳೆಯೆಂಬಿವೆ ಬಿಂದುಸೂತ್ರಂಗಳು, ಆ ಬಿಂದುಸೂತ್ರಂಗಳೆ ಊರ್ಧ್ವಪ್ರವೇಶವಾದ ಹದಿನೆಂಟು ರೇಖೆಗಳು, ಬಳಿಕ ಕಾರಣಶರೀರಿ, ಸಮಷ್ಟ್ಯಭಿಮಾನಿ, ಅಗ್ನ್ಯುಪಹಿತ, ಚೈತನ್ಯ, ಕಾರಣೋಪಾಧಿಕ, ಮಾಯೋಪಾಧಿಕ, ಮಾಯಾಭಾಷೆ ಮಾಯಾವಿಜಯ, ಜಗದ್ಯೋನಿ, ಆನಂದಮಯ, ಅವ್ಯಕ್ತ ಅಧ್ಯಾಕೃತ, ಶಬಲಬ್ರಹ್ಮ ಸಗುಣಬ್ರಹ್ಮ ಪರಮ. ಪರದೇವತೆ, ತತ್ವದ ಮುಖ್ಯಾರ್ಥರೆಂಬವರು ಆ ರೇಖೆಗಳ ಮಧ್ಯದ ಭನನಸ್ವರೂಪರೆಂದರಿವುದು. ಬಳಿಕ ಆ ಭವನಂಗಳ ಮಧ್ಯದ ಏಕಪಂಚಾಶದ್ವರ್ಣಂಗಳೆ ರುದ್ರಮೂರ್ತಿ ಬೀಜಂಗಳೆಂಬ ಅರ್ಥೋದ್ಧಾರಣವು. ಶ್ರೀಕಂಠ, ಅನಂತ ಸೂಕ್ಷ್ಮ ತ್ರಿಮೂರ್ತಿ ಅಮರೇಶ್ವರ, ಅರ್ಘೇಶ ಭಾರಭೂತಿ, ವೀರೇಶ, ಸ್ಥಾಣುಕ, ಧರ, ಚಂಡೇಶ, ಜಾತಕ, ಸದ್ಯೋಜಾತ, ಅನುಗ್ರಹೇಶ್ವರ, ಅಕ್ರೂರ, ಮಹೇಶ್ವರನೆಂಬ ಹದಿನಾರು ನಾಮವನುಳ್ಳ ರುದ್ರಮೂರ್ತಿಗಳು ಕಂಠಸ್ಥಾನದ ಹದಿನಾರು ಸ್ವರಾಕ್ಷರ ರುದ್ರ ಮೂರ್ತಿಗಳೆಂದರಿವುದು. ಮರಳಿ ವಿಕಲಕ್ಷರಾದಿ ದೇವತೆಗಳ ವಿವರ, ಕ್ರೋಧೀಶ ಚಂಡೇಶ, ಪಂಚಾಂತಕ, ಶಿವೋತ್ತಮ, ಏಕರುದ್ರ, ಕೂರ್ಮ, ಏಕನೇತ್ರ, ಚತುರಾನನ, ಅಜೇಶ, ಶರ್ವ, ಸೋಮೇಶ, ಲಾಂಗುಲಿಯೆಂಬ ದ್ವಾದಶ ರುದ್ರಮೂರ್ತಿಗಳುಅನಾಹತಾಕ್ಷರ ಸ್ವರೂಪವೆಂದರಿವುದು. ದಾರುಕ, ಅರ್ಧನಾರೀಶ ಉರುಕಾಂತ ಆಷಾಢಿ ದಂಡಿ ಅತಿರುದ್ರ ಮೀನರುದ್ರ ಮೇಷರುದ್ರ ಲೋಹಿತ ಶಿಖಿಯೆಂಬ ದಶರುದ್ರರು, ಮಣಿಪೂರಕಾಕ್ಷರ ಸ್ವರೂಪರೆಂದರಿವುದು. ಸಕಲಾಂಡ, ದ್ವಿಕಲಾಂಡ, ಮಹಾಕಾಲ, ಕಪಾಲಿ, ಭುಜಂಗೇಶ, ಪಿನಾಕಿಯೆಂಬ ಆರು ರುದ್ರರು ಸ್ವಾಧಿಷ್ಠಾನಾಕ್ಷರ ಸ್ವರೂಪವೆಂದರಿವುದು. ಖಡ್ಗೀಶ, ಬಕ, ಶ್ವೇತ, ಭೃಂಗೀಶನೆಂಬ ನಾಲ್ವರುದ್ರರು ಆಧಾರಾಕ್ಷರ ಸ್ವರೂಪರೆಂದರಿವುದು. ಲಕುಲೀಶ, ಶಿವನೆಂಬೀರ್ವ ರುದ್ರರು ಆಜ್ಞಾಚಕ್ರ ಸ್ವರೂಪವೆಂದರಿವುದು. ಸರ್ವಕರ್ತನೆಂಬ ರುದ್ರನೆ ಶಿವಾಕ್ಷರ ಸ್ವರೂಪನೆಂದರಿವುದು. ಸಕಲ ವಿಕಲಾಕ್ಷರಗಳೆಂಬ ಏಕಪಂಚಾಶದ್ವರ್ಣಗಳೆಂಬ ತ್ರಿಶೂಲ

ಕಪಾಲಂಗಳೆಂದರಿದು, ರಕ್ತ ವರ್ಣಸ್ವರೂಪವುಳ್ಳ ಏಕಪಂಚಾದ್ರುದ್ರ ಬೀಜಂಗಳಾದ ಕಾರಣ ಈ ವರ್ಣಪೂರಕಮಾದ ಷಟ್ಚಕ್ರಂಗಳು ಶಿವಚಕ್ರಂಗಳೆಂದರಿವುದು. ಷಟ್ಚಕ್ರಾಂತಸ್ಥವಾದ ಏಕಪಂಚಾಶದ್ರುದ್ರಾಭಿಧಾನವನುಳ್ಳ ವರ್ಣಂಗಳು, ಶಿವಮಂತ್ರವನಾಚರಿಸುವಂತಲ್ಲಿ ಶಿವಬೀಜಂಗಳು, ಶಕ್ತಿಮಂತ್ರವನಾಚರಿಸುವಂತಲ್ಲಿ ಶಕ್ತಿಬೀಜಂಗಳಾಗಿಹ ಕಾರಣ ಪೂರ್ವೋಕ್ತ ವಿಧಾನದಂತೆ ಆಧಾರಾದಿ ಪಂಚ ಚಕ್ರಂಗಳಲ್ಲಿ ಬೇರೆ ನ್ಯಾಸಮಾಡಿ ಶೂನ್ಯಾಕಾರದೆಡಬಲದ ಮನೆಗಳಲ್ಲಿ ಕ್ಷಕಾರ ಳಕಾರಂಗಳಂ ಬರೆಯಲು ಏಕಪಂಚಾಶಚ್ಛಕ್ತಿ ಬೀಜಂಗಳು.

ಇವಕ್ಕರ್ಘೋರ್ದ್ಧರಣೆ, ಪೂರ್ಣೋದರಿ, ಪರಿಜೆ, ಶಾಲ್ಮಲಿ, ಲೋಲಾಕ್ಷಿ, ವರ್ತುಳಾಕ್ಷಿ, ದೀರ್ಘಘೋಣಿ, ದೀರ್ಘಮುಖಿ, ದೀರ್ಘಜಿಹ್ವೆ, ಕುಂಡೋದರಿ, ಊರ್ಧ್ವಕೇಶಿ, ವಿಕೃತಮುಖಿ, ಜ್ವಾಲಾಮುಖಿ, ಉಲ್ಕಾಮುಖಿ, ಶ್ರೀಮುಖಿ, ವಿದ್ಯಾಮುಖಿ, ವೈಖರಿಯೆಂಬ ಷೋಡಶ ರುದ್ರಶಕ್ತಿಯರು ಕಂಠಸ್ಥಾನದ ಸ್ವರಾಕ್ಷರ ರುದ್ರಶಕ್ತಿಯರೆಂದರಿವುದು. ಮರಳಿ ವಿಕಲಾಕ್ಷರಾದಿ ರುದ್ರಶಕ್ತಿಯರ ವಿವರ:_ ಮಹಾಕಾಳಿ, ಸರಸ್ವತಿ, ಗೌರಿ, ಮಂತ್ರಶಕ್ತಿ, ಆತ್ಮಶಕ್ತಿ, ಭೂತಮಾತೆ, ಲಂಬೋದರಿ, ದ್ರೌಪತಿ, ನಗರಿ, ಖೇಚರಿ, ಮಂಜರಿ, ರೂಪಿಣಿ ಎಂಬ ದ್ವಾದಶ ರುದ್ರಶಕ್ತಿಯರು ಅನಾಹತಾಕ್ಷರಸ್ವರೂಪಿಣಿಯೆಂದರಿವುದು. ಪರಿಜೆ, ಕಾಲೋದರಿ, ಪೂತನೆ, ಭದ್ರಕಾಳಿ, ಯೋಗಿನಿ, ಶಂಖಿನಿ, ಘರ್ಜಿನಿ, ಕಾಳಾವತಿ, ಕೂರ್ಧನಿ, ಕಪರ್ದಿ ಎಂಬ ದಶರುದ್ರಶಕ್ತಿಯರು ಮಣಿಪೂರಕಾಕ್ಷರ ಸ್ವರೂಪಿಣಿಯೆಂದರಿವುದು. ವಾಗ್ಜೆ, ಜಯೆ, ಸುಮುಖಿ, ಈಶ್ವರಿ, ರೇವತಿ ಮಾಧವಿಯೆಂಬ ಷಟ್‌ಶಕ್ತಿಯರು ಸ್ವಾಧಿಷ್ಠಾನದ ರುದ್ರಶಕ್ತಿಯರೆಂದರಿವುದು, ವಾರುಣಿ, ವಾಯವಿ, ರಕ್ಷೋವಿದಾರಣೆ, ಸಹಜೆಯೆಂಬ ನಾಲ್ವರು ಶಕ್ತಿಯರು ಆಧಾರಾಕ್ಷರ ಸ್ವರೂಪಿಣಿಯರೆಂದರಿವುದು. ಲಕ್ಷ್ಮಿ–ವ್ಯಾಪಿನಿಯೆಂಬ ಉಭಯ ಶಕ್ತಿಯರು ಅಗ್ನಿ ಚಕ್ರಾಕ್ಷರ ಸ್ವರೂಪಿಣಿಯೆಂದರಿವುದು. ಮಾಯಾನ್ವಿತೆಯೆಂಬ ಶಕ್ತಿಯೇ ವಿದ್ಯಾಬೀಜಾಕ್ಷರ ಸ್ವರೂಪಿಣಿಯೆಂದರಿವುದು. ಸಿಂದೂರದೋಪಾದಿಯ ಕೆಂಪುವರ್ಣದ ಶರೀರವನುಳ್ಳ, ಕನ್ನೈದಿಲ ಕಪಾಲಗಳಂ ಧರಿಸಿದ ಹಸ್ತಂಗಳುಳ್ಳ ಐವತ್ತೊಂದು ಶಕ್ತಿದೇವತೆಯರು, ಐವತ್ತೊಂದು ಬೀಜಂಗಳು ಪಿಂಡದಲ್ಲಿ ಇರುತ್ತಿಹವು, ಮತ್ತಂ ಹಿಂದಣ ಚಕ್ರೋದ್ಧರಣೆಯ ಪಟಲದಲ್ಲಿ ಹೇಗೆ ಕಲ್ಪಿಸಿಹವೋ ಹಾಗೆ ರುದ್ರರೂ ರುದ್ರಶಕ್ತಿಯರೂ, ಕಲ್ಪಿಸಿಹವು. ಇನ್ನು ಮಂತ್ರನ್ಯಾಸ. ಓಂಕಾರದ ಮೇಲಣ ತ್ರಿಕೋಟದೊಳು ಅ ಉ ಮ ಎಂಬ ಮಂತ್ರವನು, ಅದರ ಊರ್ಧ್ವ ತ್ರಿಕೋಟದೊಳು ಬಸವ ಎಂಬ ಮಂತ್ರವನ್ನೂ, ಅದರ ಮೇಲಣ ಕೊಟ್ಟದೊಳು ಕ್ಷಕಾರ ಮಂತ್ರವನ್ನೂ ಅದರ ಊರ್ಧ್ವ ಕೊಟ್ಟದೊಳು ಹಕಾರ ಮಂತ್ರವನ್ನೂ ಹಂಸ ಎಂಬುದಂ ಬರೆದಿರ್ಪ ಸಾಲಿನ ಊರ್ಧ್ವ ತ್ರಿಕೋಟಗಳು ಹ್ರಂ ಹ್ರಿಂ ಹ್ರುಂ ಎಂಬ ತ್ರಿಮಂತ್ರಗಳನ್ನೂ ಮತ್ತೊಂದು ಕಡೆಯಲ್ಲಿ ಹ್ರೈಂ ಹ್ರೌಂ ಹ್ರಃ ಎಂಬ ತ್ರಿಮಂತ್ರಗಳನ್ನೂ ನ್ಯಾಸವ ಮಾಡಲಿವು ಶಿವಾಗಮಮಂತ್ರಂಗಳೆನಿಸಿಹವು. ಬಳಿಕ ಶೂನ್ಯತ್ರಯಂಗಳೆ ನೇತ್ರ ಜಿಹ್ವೆಗಳು, ದ್ವಿಶೂನ್ಯಂಗಳೆ ಕರ್ಣಂಗಳೆಂದರಿವುದು. ಇನ್ನು ಷಡಂಗಂಗಳಲ್ಲಿ ಷಡಂಗಮಂತ್ರನ್ಯಾಸ.

ಅಧಃಪಟ್ಟಿಕೆಯಲ್ಲಿ ಓಂ ಹ್ರಂ ಹೃದಯಾಯ ನಮಃ ಎಂಬ ಹೃದಯಮಂತ್ರವನ್ನು, ಅಧಃಕಂಜದಲ್ಲಿ ಓಂ ಹ್ರಿಂ ಶಿರಸೇ ಸ್ವಾಹಾ ಎಂಬ ಶಿರೋಮಂತ್ರವನ್ನು, ಕಂಠಸ್ಥಾನದಲ್ಲಿ ಓಂ ಹ್ರುಂ ಶಿಖಾಯೈ ವಷಟ್ ಎಂಬ ಶಿಖಾ ಮಂತ್ರವನ್ನು, ಊರ್ಧ್ವಕಂಜದಲ್ಲಿ ಓಂ ಹ್ರೈಂ ಕವಚಾಯ ಹುಂ ಎಂಬ ಕವಚಮಂತ್ರವನ್ನು, ಊರ್ಧ್ವಪಟ್ಟಿಕೆಯಲ್ಲಿ ಓಂ ಹ್ರೌಂ ನೇತ್ರತ್ರಯಾಯ ವಷಟು ಎಂಬ ನೇತ್ರ ಮಂತ್ರವನ್ನೂ ಆದ್ಯ ಪ್ರದಾರಿಕೆಯಲ್ಲಿ ಓಂ ಹ್ರಃ ಅಸ್ತ್ರಾಯ ಫಟ್ ಎಂಬ ಅಸ್ತ್ರಮಂತ್ರವನ್ನೂ ನ್ಯಾಸಮಾಡುವುದು, ಇನ್ನು ಹಕಾರಮಂತ್ರವನ್ನು ಆದ್ಯಪ್ರದಾರಿಕೆಯ ಮೇಲಣ ಲಿಂಗದಲ್ಲಿ, ಓಂಕಾರವನು ಅಧಃಪ್ರದಾರಿಕೆಯಲ್ಲಿ, ಊರ್ಧ್ವಪಟ್ಟಿಕೆಯಿಂದ ಊರ್ಧ್ವಕಂಜಮುಟ್ಟಲು ಕಮದಿಂ ಮಕಾರವನ್ನು, ವೃತ್ತದಲ್ಲಿ ಉಕಾರವನ್ನು, ಅಧಃಕಂಜದಲ್ಲಿ ಅಧಃಪಟ್ಟಿಕೆಯಲ್ಲಿ ಅಕಾರವನ್ನು ತಿಳಿವುದು. ಇನ್ನು ಷಡಕ್ಷರ ಮಂತ್ರನ್ಯಾಸ, ಶಿವಲಿಂಗದಲ್ಲಿ ಓಂಕಾರವನ್ನು,

ಶಕ್ತಿಪೀಠದ ಊರ್ಧ್ವಪಟ್ಟಿಕೆಯಲ್ಲಿ ಯಕಾರವನ್ನೂ ಊರ್ಧ್ವಕಂಜದಲ್ಲಿ ವಕಾರವನ್ನೂ, ವೃತ್ತದ ಮಧ್ಯದಲ್ಲಿ ಶಿಕಾರವನ್ನೂ ಅಧಃಕಂಜದಲ್ಲಿ ಮಕಾರವನ್ನೂ ಅಧಃ ಪಟ್ಟಿಕೆಯಲ್ಲಿ ನಕಾರವನ್ನೂ ನ್ಯಾಸಮಾಡುವುದು. ಇನ್ನು ನಮಶಿವಾಯ ಎಂಬ ಸ್ಥೂಲ ಪಂಚಾಕ್ಷರಿಯ ಮಂತ್ರವನ್ನು ಕ್ರಮದಿಂ ಆಧಾರಾಧಿಪಂಚಚಕ್ರಂಗಳಲ್ಲಿ ನ್ಯಾಸಮಾಡುವುದು.

ಇನ್ನು ಮಂತ್ರಮೂರ್ತಿ ಬೀಜಾಕ್ಷರಂಗಳಿಗೆ ಅರ್ಥೋದ್ಧಾರಣೆ ಸರ್ವಜ್ಞತ್ವಾದಿ ಷಡಂಗಶಕ್ತಿಗಳೆ ಅ ಉ ಮ ಬ ಸ ವ ಎಂಬ ಮಂತ್ರಾಕ್ಷರ ಸ್ವರೂಪವೆಂದರಿವುದು, ಶಿವಾದಿಷಟ್ತತ್ವಂಗಳೇ ಹ್ರಂಕಾರಾದಿ ಮಂತ್ರಾಕ್ಷರ ಸ್ವರೂಪವೆಂದರಿವುದು. ಪರಶಿವಶಕ್ತಿದಳ ಕ್ಷಕಾರ ಹಕಾರ ಮಂತ್ರಾಕ್ಷರ ಸ್ವರೂಪವೆಂದರಿವುದು. ಷಡ್ಬ್ರಹ್ಮವೇ ಷಡಂಗಮಂತ್ರ ಸ್ವರೂಪವೆಂದರಿವುದು. ಸರ್ವಜ್ಞತ್ವ ಸರ್ವೇಶ್ವರತ್ವ ಸರ್ವನಿಯಂತೃತ್ವ ಸರ್ವಾಂತರ್ಯಾಮಿತ್ವ ಸರ್ವಾತ್ಮಕತ್ವ ಸರ್ವಶಕ್ತತ್ವವೆಂಬಿವು ಷಡಕ್ಷರ ಮಂತ್ರಾಕ್ಷರ ಸ್ವರೂಪವೆಂದರಿವುದು. ಉದಾನತ್ವ ಅನುಪ್ರವೇಶತ್ವ ನೇಮಕತ್ವ ರುದ್ರತ್ವಶ್ರುತ್ಯಾಚಾರತ್ವವೆಂಬ ಪಂಚಕವು ಸ್ಥೂಲ ಪಂಚಾಕ್ಷರೀ ಸ್ವರೂಪವೆಂದರಿವುದು. ಚಿತ್ಪ್ರಕಾಶವೆ ಕ್ಷರಾಕ್ಷರ ಸ್ವರೂಪವೆಂದರಿವುದು. ಇನ್ನು ಷಡಧ್ವನ್ಯಾಸ:– ಚತುರ್ವರ್ಣವನುಳ್ಳ ಅಧಃಪಟ್ಟಿಕೆಯಲ್ಲಿ ಕಾಲಾಗ್ನಿ ರುದ್ರನಭುವನ ಮೊದಲಾಗಿ, ಅನಾಶ್ರಿತಭುವನ ಕಡೆಯಾಗಿ ಇನ್ನೂರ ಇಪ್ಪತ್ತುನಾಲ್ಕು ಭುವನಾಧ್ವವನು, ಷಡುವರ್ಣವನುಳ್ಳ ಅಧಃಕಂಜದಲ್ಲಿ ವ್ಯೋಮವ್ಯಾಪಿಯೆಂಬ ಪದದಿ ಎಂಭತ್ತೆಂಟು ಪದಾಧ್ವವನು, ದಶವರ್ಣವನುಳ್ಳ ವೃತ್ತದಲ್ಲಿ ಅಕಾರಾದಿ ಕ್ಷಕಾರಾಂತಮಾದ ಐವತ್ತೊಂದು ವರ್ಣವನುಳ್ಳ ಊಧ್ವಕಂಜದಲ್ಲಿ ಈಶಾನ್ಯಾದಿ ಸದ್ಯೋಜಾತ ಕಡೆಯಾದ ಮೂವತ್ತೆಂಟು ಕಲಾಧ್ವವನು ಷೋಡಶ ವರ್ಣವನುಳ್ಳ ಊರ್ಧ್ವ ಪಟ್ಟಿಕೆಯಲ್ಲಿ ಶಿವಾದಿ ಪೃಥ್ಯ್ಯಂತಮಾದ ಮೂವತ್ತಾರು ತತ್ವವನು, ವರ್ಣದ್ವಯವನುಳ್ಳ ಅಧಃಪ್ರದಾರಿಕೆಯಲ್ಲಿ ಸದ್ಯೋಜಾತಾದಿ ಪಂಚಬ್ರಹ್ಮವೈದು, ಹೃದಯಾದಿ ಷಡಂಗ ಮಂತ್ರವಾರು, ಇಂತೀ ಏಕಾದಶಮಂತ್ರವಾದಿಯಾದ ಧ್ವವನು ನ್ಯಾಸ ಮಾಡುವುದು.

ಇನ್ನು ಏಳುಕೋಟಿ ಮಹಾಮಂತ್ರಂಗಳಿಂ ಮಂತ್ರಿಸಲ್ಪಟ್ಟ ಶಿವಲಿಂಗ ಮುಖಕಲಾವಿಶೇಷಕ್ರಮ ಶಶಿನಿ, ಅಜಗವ, ಜ್ಯೇಷ್ಠೆ, ಮರೀಚಿ, ಜ್ವಾಲಿನಿ ಇವು ಈಶಾನ್ಯಮುಖದ ಕಲೆಗಳು. ಶಾಂತಿ ವಿದ್ಯೆ ಪ್ರತಿಷ್ಠೆ ನಿವೃತ್ತಿ ಈ ೪ ತತ್ಪುರುಷ ಮುಖದ ಕಲೆಗಳು. ತಮ, ಮೋಹ, ಜಯ, ನಿದ್ರೆ, ಮೃತ್ಯು, ಮಾಯೆ, ಭಯ, ಜರೆ, ಇವೆಂಟೂ ಅಘೋರಮುಖದ ಕಲೆಗಳು, ರಜ, ರಕ್ಷರತಿ, ಪಾಲ್ಯ, ಕಾಮಿನಿ, ಸಂಜೀವಿನಿ, ಕ್ರಿಯೆ, ಪ್ರಿಯೆ, ವೃದ್ಧಿ, ಧಾಯೆ, ಧಾತ್ರಿ, ಬ್ರಹ್ಮಿಣಿ, ಮೋಹಿನಿ, ಅಭಯೆ, ಈ ಹದಿಮೂರು ವಾಮದೇವ ಮುಖದ ಕಲೆಗಳು. ಸಿದ್ಧಿ ವೃದ್ಧಿ ಧೃತಿ, ಲಕ್ಷ್ಮಿ ಮದ, ಕಾಂತಿ, ಸ್ವಾದು, ಮತಿ, ಈ ಎಂಟು ಸದ್ಯೋಜಾತ ಮುಖದ ಕಲೆಗಳೆಂದರಿವುದು. ಇನ್ನೊಂದು ಪ್ರಕಾರ ಶ್ರೀ ಪರಮೇಶ್ವರಂಗೆ ಓಂಕಾರವೇ ಚರ್ಮ, ಉಕಾರವೇ ರಕ್ತ, ಇಕಾರವೇ ಮಾಂಸ, ಋಕಾರವೇ ಮೇಧಸ್ಸು, ಮಕಾರವೇ ಮಜ್ಜೆ, ಯಕಾರವೇ ಅಸ್ಥಿ, ಅಕಾರವೇ ಶುಕ್ಲ, ವಾಯುರಂಧ್ರವೇ ಅಕಾರ, ಗುಹ್ಯರಂಧ್ರವೇ ಅಹಂಕಾರ, ರಸರಂಧ್ರವೇ ಅಕಾರ, ಪಿಂಗಳ ನಾಳವೇ ವಕಾರ, ಇಕಾರವೇ ಜ್ಞಾನಾಕಾರ, ದಕ್ಷಿಣನೇತ್ರದ್ವಾರವೇ ಋಕಾರ, ವಾಮಶ್ರೋತ್ರದ್ವಾರವೇ ಅಕಾರ, ಫಾಳನೇತ್ರ ದ್ವಾರವೇ ಹ್ರಂಕಾರ, ಸುಷುಮ್ನಾ ನಾಳವೇ ಹಕಾರ, ಅಪರಾರ್ಧ ಮೂರುವರೆಕೋಟಿ ಮಂತ್ರಂಗಳೆ ಸರ್ವಾಂಗದ ರೋಮಾವಳಿ, ಪೂರ್ವದ ಮೂರುವರೆ ಕೋಟಿ ಮಂತ್ರಗಳೆ ಸ್ಥೂಲದೇಹ, ಏಕಾದಶ ಮಂತ್ರಂಗಳೆ ಸೂಕ್ಷ್ಮದೇಹ, ಪಂಚ ಪ್ರಸಾದ ಮಂತ್ರಂಗಳೆ ಕಾರಣದೇಹ. ಬಳಿಕಿನ್ನೊಂದು ಪ್ರಕಾ–ಅಕಾರ ಆಕಾರಂಗಳೆ ಮೂರ್ಧ ಲಲಾಟಂಗಳು, ಇಕಾರ ಈಕಾರಂಗಳೆ ದಕ್ಷಿಣ ವಾಮ ನೇತ್ರಂಗಳು, ಉಕಾರ ಊಕಾರಂಗಳೆ ದಕ್ಷಿಣ ವಾಮಶ್ರೋತ್ರಂಗಳು, ಋ ಋ ಕಾರಂಗಳೆ ದಕ್ಷಿಣ ವಾಮನಾಸಾಪುಟಂಗಳು, ಲ್ರು ಲ್ರೂ ಕಾರಂಗಳೆ ದಕ್ಷಿಣವಾಮ ಕಪೋಲಂಗಳು, ಏಕಾರ ಐಕಾರಂಗಳೆ ಮೇಲು ಕೆಳಗಣ ದಂತಪಂಕ್ತಿಗಳು, ಓಕಾರ ಔಕಾರಂಗಳೆ ಮೇಲುಕೆಳಗಣ ಓಷ್ಠಂಗಳು, ಅಂಕಾರ ಅಃಕಾರಂಗಳೆ ಮೇಲುಕೆಳಗಣ ವಸಡಿಗಳು. ಇನ್ನೊಂದು ಪ್ರಕಾರ – ಕಾದಿ ಪಂಚಾಕ್ಷರಂಗಳೆ

ದಕ್ಷಿಣಪಂಚಹಸ್ತಂಗಳು, ಚಾದಿ ಪಂಚಾಕ್ಷರಂಗಳೆ ವಾಮ ಪಂಚಹಸ್ತಂಗಳು, ಪ;ಆದಿ ಪಂಚಾಕ್ಷರಂಗಳೆ ದಕ್ಷಿಣ ಪಾದಂಗಳು, ತಾದಿ ಪಂಚಾಕ್ಷರಂಗಳೆ ವಾಮಪಾದಂಗಳು, ಪಕಾರವೇ ಉದರ, ಷಕಾರವೇ ಬಲದ ಪಾರ್ಶ್ವ, ಬಕಾರವೇ ಎಡದ ಪಾರ್ಶ್ವ, ಭಕಾರವೇ ಸ್ಕಂದ, ಮಕಾರವೇ ಹೃದಯ, ಯಕಾರಾದಿ ಸಕಾರದಿಂದ ಕೂಡಿದಕ್ಷರಂಗಳೆ ತ್ವಗಾದಿ ಸಪ್ತಧಾತುಗಳು, ಷಕಾರವೇ ಆತ್ಮ, ಳಕಾರವೇ ಶಕ್ತಿ, ಕ್ಷಕಾರವೇ ಪೂಜಕರ ಜನ್ಮಾದಿರಿವು ವಿಷಯಮಾದ ಕ್ರೂರರೂಪ. ಮತ್ತಂ. ಇನ್ನು ಅಷ್ಟವರ್ಗಾಕ್ಷರಂಗಳ ಲಿಂಗತ್ರಯಸಂಬಂಧ:_ ಅ ಇ ಉ ಋ ಓ ಐ ಈ ಆರೂ ಪುಲ್ಲಿಂಗಸಂಬಂಧ, ಋ ಋ ಲ್ರು, ಲ್ರೂ ಈ ನಾಲ್ಕು ನಪುಂಸಕಲಿಂಗಸಂಬಂಧ, ಕ ಗ ಚ ಜ ಟ ಡ ತ ದ ಪ ಬ ಶ ಸ ಈ ಹನ್ನೆರಡು ಸ್ತ್ರೀಲಿಂಗಸಂಬಂಧ, ಉಳಿದುವೆಲ್ಲವು ನಪುಂಸಕಲಿಂಗ ಸಂಬಂಧವು, ಇಂತೀ ಸ್ವರ ವಿಕಲ ವ್ಯಾಪಕನೆಂಬ ತ್ರಿವಿಧ ರೂಪಪದಾರ್ಥಂಗಳು ನಾದಬಿಂದು ಕಲಾತ್ರಯ ಪಾದತ್ರಯ ತತ್ತ್ವತ್ರಯ ಸಂಬಂಧವಾಗಿರ್ಪುವೆಂದರಿವುದು. ಇನ್ನು ಅ ಆ ಇ ಮೂರೂ ಪೃಥ್ವೀ ಸಂಬಂಧ, ಈ ಉ ಊ ಮೂರೂ ಅಪ್ಪು ಸಂಬಂಧ, ಋ ಋ ಲ್ರು ಈ ಮೂರೂ ಅಗ್ನಿ ಸಂಬಂಧ, ಲ್ರೂ ಏ ಐ ಈ ಮೂರು ವಾಯು ಸಂಬಂಧ, ಓ ಔ ಅಂ ಈ ಮೂರು ಆಕಾಶ ಸಂಬಂಧ, ಅಃ ಎಂಬುದೊಂದೆ ಆತ್ಮ ಸಂಬಂಧ, ಇನ್ನು ಅವರ್ಗ ಆಕಾಶ ಸಂಬಂಧ, ಯವರ್ಗ ಶವರ್ಗಂಗಳೆರಡು ಪೃಥ್ವೀ ಸಂಬಂಧವೆಂದರಿವುದು. ಇನ್ನೊಂದು ಪ್ರಕಾರ: ಊರ್ಧ್ವಪಟ್ಟಿಕೆಯಲಿ ನಾಲ್ವತ್ತೆಂಟು, ಹಂಸ ಎಂಬ ಎರಡು, ಮ ಳ ಕ್ಷ ಎಂಬಿವು ಮೂರು, ಓಂಕಾರದ ಷಟ್ಕೃತಿಯಲ್ಲಿ ಐವತ್ತೈದು ಪಂಚಾಕ್ಷರಿ, ಅಂತು ಕೂಡಿ ನೂರೆಂಟು ಪ್ರಣವವು; ಊರ್ಧ್ವ ಪಟ್ಟಿಕೆಯಲ್ಲಿ ಐವತ್ತೆರಡು, ಜಡಾಧಾರವಾರು ಅಧಃಪಟ್ಟಿಕೆಯಲ್ಲಿ ಐವತ್ತು ಅಂತು ಕೂಡಿ ನೂರೆಂಟುಪ್ರಣವ, ಷಡಕ್ಷರಿಯಲ್ಲಿ ಐವತ್ತು ಪಂಚಾಕ್ಷರಿಯಲ್ಲಿ ನಾಲ್ವತ್ತೆಂಟು ಷಡಕ್ಷರಿ ಪಂಚಾಕ್ಷರಿ ಅಂತು ಕೂಡಿ ಪ್ರಣವ, ಇನ್ನು ಬಸವ ಅ ಉ ಮ ಹಂ ಕ್ಷಂ ಎಂಬಿವು ಅಷ್ಟಾವರಣ ಪ್ರಣವ. ಈ ಮಂತ್ರ ಸಂಬಂಧವನರಿವುದು. ಇಂತೀ ಸರ್ವಕಾರಣವಪ್ಪ ಮಹಾಲಿಂಗವೆ ವಕ್ಷಸ್ಥಲದ ಇಷ್ಟಲಿಂಗವೆಂದರಿವುದು. ಈ ಶಿವಲಿಂಗದ ಪಟ್ಟಣದಲ್ಲಿ ಸರ್ವಾಚಾರ ಸಂಪತ್ತಿನ ಸ್ಥಳ ಕಉಳ ಸಂಬಂಧವನರಿವಡೆ ಶೂನ್ಯಲಿಂಗೋದ್ಧರಣೆಯಲ್ಲಿ ನೋಡಿಕೊಂಬುದು. ಪೀಠ, ವೃತ್ತ, ಗೋಮುಖ ಮಂತ್ರಂಗಳನ್ನು ಅಖಿಳ ಬ್ರಹ್ಮಾಂಡ ಭುವನಭವನ ಸ್ಥಿತ ಚರಾಚರಾದಿ ಸಮಸ್ತ ಪ್ರಪಂಚಮಂ ಸೃಜಿಸಿ ಗರ್ಭೀಕರಿಸಿಕೊಂಡು ಅವರಾಗಮನ ಸ್ಥಿತಿ ಕಾರಣವೆನಿಸಿ ಅಖಂಡ ಪರಿಪೂರ್ಣ ಗೋಳಕಾಕಾರ ತೇಜೋಮೂರ್ತಿಯಾಗಿ ಭಕ್ತಲೀಲಾವಿನೋದ ಕಾರಣ ಸಗುಣ ನಿರ್ಗುಣ ಆನಂದಲೀಲೆಯ ನಟಿಸುತಿರ್ಪ ಮಹಾಲಿಂಗೋದ್ಧರಣೆಯ ಸಂಬಂಧ ಸಮಾಪ್ತ ಮಂಗಳಮಹಾ. ಶ್ರೀ ಶ್ರೀ ಶ್ರೀ ಶ್ರೀ ಶ್ರೀ

॥ ಶ್ರೀ ಗುರು ಬಸವಲಿಂಗಾಯ ನಮಃ ॥

**೨೨. ಲಿಂಗಷಡಕ್ಷರೋದ್ಧರಣೆ:**

ಇಂತಪ್ಪ ಶಿವಯೋಗಿಗೆ ಲಿಂಗಷಡಕ್ಷರಿಯೇ ಪ್ರಾಣವಾಗಿ ಅಂಗಷಡಕ್ಷರಿಯೇ ದೇಹವಾಗಿರ್ಪ ಭೇದವೆಂತೆಂದೊಡೆ: ವಚನ ಓಂಕಾರವೆ ಶಿವ, ಯಕಾರವೇ ಸದಾಶಿವ, ವಕಾರವೇ ಈಶ, ಶಿಕಾರವೆ ಮಹೇಶ್ವರ, ಮಕಾರವೇ ಈಶ್ವರ, ನಕಾರವೇ ಈಶಾನ, ಈ ಷಡಕ್ಷರವೇ ಷಡ್ವಿಧ ಮಂತ್ರಮೂರ್ತಿಯಾಗಿರ್ಪವಯ್ಯ: ಮತ್ತೆ ನಕಾರವೇ ಮೂರ್ತಿಬ್ರಹ್ಮ, ಮಕಾರವೇ ಪಿಂಡಬ್ರಹ್ಮ, ಶಿಕಾರವೇ ಕಲಾಬ್ರಹ್ಮ, ವಾಕಾರವೇ ಆನಂದ ಬ್ರಹ್ಮ, ಯಕಾರವೇ ವಿಜ್ಞಾನ ಬ್ರಹ್ಮ, ಓಂಕಾರವೇ ಪರಬ್ರಹ್ಮ, ಈ ಷಡಕ್ಷರವೇ ಷಡ್ವಿಧ ಬ್ರಹ್ಮವೆಂದು ಹೇಳಲ್ಪಟ್ಟಿತ್ತು ನೋಡಾ, ಮತ್ತೆ ನಕಾರವೇ ಕ್ರಿಯಾಶಕ್ತಿ, ಮಕಾರವೇ ಜ್ಞಾನಶಕ್ತಿ, ಶಿಕಾರವೇ ಇಚ್ಛಾಶಕ್ತಿ, ವಾಕಾರವೇ ಆದಿಶಕ್ತಿ, ಯಕಾರವೇ ಪರಶಕ್ತಿ, ಓಂಕಾರವೇ ಚಿಚ್ಛಕ್ತಿ ಇವು ಮಂತ್ರಶಕ್ತಿಯ ಸ್ವರೂಪವೆಂದರಿವುದು ನೋಡಾ, ಮತ್ತೆ ನಕಾರವೇ ಕರ್ಮಸಾದಾಖ್ಯ, ಮಕಾರವೇ ಕರ್ತೃಸಾದಾಖ್ಯ, ಶಿಕಾರವೇ ಮೂರ್ತಿ

ಸಾದಾಖ್ಯ, ವಾಕಾರವೇ ಅಮೂರ್ತಿಸಾದಾಖ್ಯ, ಯಕಾರವೇ ಶಿವಸಾದಾಖ್ಯ, ಓಂಕಾರವೇ ಮಹಸಾದಾಖ್ಯ ನೋಡಾ; ಮತ್ತೆ ನಕಾರವೇ ಪೀತವರ್ಣ ಮಕಾರವೇ ನೀಲವರ್ಣ ಶಿಕಾರವೇ ಕುಂಕುಮವರ್ಣ ವಾಕಾರವೇ ಶ್ವೇತವರ್ಣ, ಯಕಾರವೇ ಸ್ಫಟಿಕವರ್ಣ, ಓಂಕಾರವೇ ಜ್ಯೋತಿರ್ಮಯಸ್ವರೂಪ ಇಂತಿವು ಮಂತ್ರ ಮೂರ್ತಿಯವರ್ಣಭೇದವೆಂದರಿವುದಯ್ಯ; ಮತ್ತೆ ನಕಾರವೇ ಸದ್ಯೋಜಾತ ಮಂತ್ರಮೂರ್ತಿ, ಯಕಾರವೇ ವಾಮದೇವ ಮಂತ್ರಮೂರ್ತಿ, ಶಿಕಾರವೇ ಅಘೋರ ಮಂತ್ರಮೂರ್ತಿ, ವಾಕಾರವೇ ತತ್ಪುರುಷ ಮಂತ್ರಮೂರ್ತಿ, ಯಕಾರವೇ ಈಶಾನ್ಯ ಮಂತ್ರಮೂರ್ತಿ, ಓಂಕಾರವೇ ಮಹಮಂತ್ರಮೂರ್ತಿ, ಇವು ಮಂತ್ರಮೂರ್ತಿಯವನ ಭೇದವೆಂದರಿವುದಯ್ಯ; ಮತ್ತೆ ನಕಾರವೇ ಸತ್ತು, ಮಕಾರವೇ ಚಿತ್ತು, ಶಿಕಾರವೇ ಆನಂದ, ವಾಕಾರವೇ ನಿತ್ಯ, ಯಕಾರವೇ ಪರಿಪೂರ್ಣ, ಓಂಕಾರವೇ ನಿರಂಜನ ಸ್ವರೂಪವೆಂದರಿವುದಯ್ಯ; ಮತ್ತಂ ನಕಾರವೇ ಆಚಾರಲಿಂಗ, ಮಕಾರವೇ ಗುರುಲಿಂಗ, ಶಿಕಾರವೇ ಶಿವಲಿಂಗ, ವಾಕಾವೇ ಜಂಗಮಲಿಂಗ, ಯಕಾರವೇ ಪ್ರಸಾದಲಿಂಗ, ಓಂಕಾರವೇ ಮಹಲಿಂಗ ಇವು ಷಡಕ್ಷರ ಮಂತ್ರಗಳೆಂದರಿವುದಯ್ಯ; ಇಂತಿವು ಲಿಂಗಷಡಕ್ಷರವೆಂದು ಹೇಳಲ್ಪಟ್ಟವು ಕಾಣಾ ಮಹಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೇ, ಲಿಂಗಷಡಕ್ಷರೋದ್ಧರಣೆ ಸಂಬಂಧ ಸಮಾಪ್ತ ಮಂಗಳಮಹಾ. ಶ್ರೀ ಶ್ರೀ ಶ್ರೀ ಶ್ರೀ ಶ್ರೀ ॥ ಶ್ರೀ ಗುರು ಬಸವಲಿಂಗಾಯ ನಮಃ ॥

**೨೩. ಅಂಗಷಡಕ್ಷರೋದ್ಧರಣೆ**

ನಕಾರವೇ ಪೃಥ್ವಿ, ಮಕಾರವೇ ಅಪು, ಶಿಕಾರವೇ ಅಗ್ನಿ, ವಾಕಾರವೆ ವಾಯು, ಯಕಾರವೇ ಆಕಾಶ, ಓಂಕಾರವೇ ಆತ್ಮಸ್ವರೂಪ ನೋಡಾ; ಮತ್ತೆ ನಕಾರವೇ ಬ್ರಹ್ಮ, ಮಕಾರವೇ ವಿಷ್ಣು, ಶಿಕಾರವೇ ರುದ್ರ, ವಾಕಾರವೇ ಈಶ್ವರ, ಯಕಾರವೇ ಸದಾಶಿವ, ಓಂಕಾರವೇ ಮಹಾತ್ಮ ನೋಡಾ; ಅಂತರ್ಯಾಮಿಯೇ ನಕಾರ, ಚೈತನ್ಯವೇ ಮಕಾರ, ಭಾವನೆ ಶಿಕಾರ, ಕರ್ತಾರನೆ ವಾಕಾರ; ಕ್ಷೇತ್ರಜ್ಞನೆ ಯಕಾರ, ಶಿವನೆ ಓಂಕಾರ ನೋಡಾ; ಮತ್ತೆ ಕರ್ಮಾಂಗಸ್ವರೂಪವಪ್ಪ ಭಕ್ತನೆ ನಕಾರ, ವಿದ್ಯಾಂಗ ಸ್ವರೂಪವಪ್ಪ ಮಹೇಶ್ವರನೆ ಮಕಾರ, ಕಾಮಾಂಗ ಸ್ವರೂಪವಪ್ಪ ಪ್ರಸಾದಿಯೇ ಶಿಕಾರ, ಯೋಗಾಂಗ ಸ್ವರೂಪವಪ್ಪ ಪ್ರಾಣಲಿಂಗಿಯೇ ವಾಕಾರ, ಭೂತಾಂಗ ಸ್ವರೂಪವಪ್ಪ ಶರಣನೆ ಯಕಾರ, ಶಿವಾಂಗಸ್ವರೂಪವಪ್ಪ ಐಕ್ಯನೆ ಓಂಕಾರ ನೋಡಾ; ಮತ್ತೆ ನಕಾರವೇ ಸದ್ಭಕ್ತಿ, ಮಕಾರವೇ ನೈಷ್ಠಿಕ ಭಕ್ತಿ, ಶಿಕಾರವೇ ಅವಧಾನ ಭಕ್ತಿ, ವಾಕಾರವೇ ಅನುಭಾವ ಭಕ್ತಿ, ಯಕಾರವೇ ಆನಂದ ಭಕ್ತಿ, ಓಂಕಾರವೇ ಸಮರಸ ಭಕ್ತಿ ನೋಡಾ; ಮತ್ತೆ ಆತ್ಮತತ್ವೇ ನಕಾರ, ವಿದ್ಯಾತತ್ವೇ ಮಕಾರ, ಶಿವತತ್ವೇ ಶಿಕಾರ, ಈಶ್ವರ ತತ್ವೇ ವಾಕಾರ, ಸದಾಶಿವ ತತ್ವೇ ಯಕಾರ, ಪರತತ್ವೇ ಓಂಕಾರ ನೋಡಾ; ಮತ್ತೇ ನಕಾರವೇ ಸುಚಿತ್ತ ಹಸ್ತ, ಮಕಾರವೇ ಸುಬುದ್ಧ ಹಸ್ತ, ಶಿಕಾರವೇ ನಿರಹಂಕಾರ ಹಸ್ತ, ವಾಕಾರವೇ ಸುಮನ ಹಸ್ತ, ಯಕಾರವೇ ಸುಜ್ಞಾನ ಹಸ್ತ, ಓಂಕಾರವೇ ಸದ್ಭಾವಹಸ್ತ ಇಂತಿವು ಅಂಗಷಡಕ್ಷರ ಕಾಣಾ ಮಹಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ, ಅಂಗಷಡಕ್ಷರೋದ್ಧರಣೆ ಸಮಾಪ್ತ ಮಂಗಳಮಹಾ. ಶ್ರೀ ಶ್ರೀ ಶ್ರೀ ಶ್ರೀ ಶ್ರೀ ॥ ಶ್ರೀ ಗುರು ಬಸವಲಿಂಗಾಯ ನಮಃ ॥

**೨೪. ಜ್ಞಾನಚಕ್ರೋದ್ಧರಣೆ:**

ಇಂತಪ್ಪ ಶಿವಯೋಗಿಯ ಶಿವಜ್ಞಾನ ಚೈತನ್ಯವೇ ಅಕ್ಷರಜ್ಞತ್ವಾದಿ ಭೇದಂಗಳನೊಳಗೊಂಡು ವ್ಯಾವೃತ್ತವಾಗಿರ್ಪ ಕಾರಣದಿಂ ಜ್ಞಾನಚಕ್ರವೆನಿಸಿತು. ಇದನುದ್ಧರಿಸುವ ಕ್ರಮವೆಂತೆಂದೊಡೆ:_ ನೂರನಾಲ್ವತ್ತು ನಾಲ್ಕಂಗುಲ ಪ್ರಮಾಣಿನ ತ್ರಿಚಕ್ರ ಕ್ಷೇತ್ರಮಂ ಚತುರಾಕಾರವಾಗಿ ಬರೆದು ಅದರ ಮಧ್ಯದಲ್ಲಿ ಒಂದು ಕುರುಹನಿರಿಸಿ, ಅದರ ಮೇಲೆ ಬಳಸಿ, ಅಂಗುಲ ಪ್ರಮಾಣದಲ್ಲಿ ಷಡ್ವಿಧ ಕುರುಹುಗಳಂ ಮಾಡಿ, ಅಲ್ಲಿ ಷಟ್ಕೃತಿಯಂ ಬರೆದು, ಅದರೊಳು ಪೂರ್ವದಿಕ್ಕು ಬಳಿಗೊಂಡು ಬಲಪ್ರದಕ್ಷಿಣವಾಗಿ ವ ಮ ಬ ಅ ಸ ಉ ಎಂಬ ಷಡ್ವರ್ಣಂಗಳಂ, ಮಧ್ಯದಲ್ಲಿ ಹಕಾರವಂ, ಅದರೆಡಬಲದಲ್ಲಿ ಓಕಾರ

ಕ್ಷಕಾರಂಗಳಂ ಬರೆವುದು. ಬಳಿಕ ಷಟ್ಕೋಣಗಳ ಮೇಲೆ ನಾಲ್ಕು ನಾಲ್ಕಂಗುಲ ಪ್ರಮಾಣೋನ್ನತಮಾದ ಷಡ್ವಿಧ ಭವನಂಗಳಂ ಮೇಲೆರಡೆರಡು ರೇಖೆಗಳ ಪೂರ್ಣವಾಗಿ ಕೆಳಗು ಬರೆ, ಕೆಳಗೆರಡೆರಡು ರೇಖೆಗಳ ತ್ರಿಭಾಗದೊಳಗೊಂದು ಭಾಗ ಕಡಿಮೆಯಾಗಿ ಮೇಲು ಬರೆ ಬರೆಯಲು ಅವರ ಮಧ್ಯದಲ್ಲಿ ಆರೆಸಳು ಪುಟ್ಟುವವು, ಬಳಿಕವರೊಳು ಹ್ರಃ ಹ್ರೌಂ ಹ್ರೈಂ ಹ್ರಿಂ ಹ್ರಂ ಎಂಬ ಷಡ್ವರ್ಣಗಳಂ ಬರೆವುದು, ಮತ್ತಮಾ ಷಡ್ವಿಧ ಭವನಂಗಳಲ್ಲಿ ಮೂಲೆ ಮೂಲೆಗಳೆರಡೆವಿಡದಂತೆ ತ್ರಿಕೋಣ ಚತುರಾಕಾರದ ಮನೆಗಳ ದ್ವಾದಶಮಪ್ಪಂತೆ ಬರೆದವರಲ್ಲಿ ಬಲನೆಡ ಪ್ರದಕ್ಷಿಣವಾಗಿ, ಓಂಕಾರಾದಿ ಮಿಶ್ರಷಡ್ವರ್ಣಂಗಳ ದ್ವಾದಶಮಪ್ಪಂತೆ ಅವರ ಬಳಸಲ್ಲಿ ಮ ಅ ಉ ಎಂಬಕ್ಷರತ್ರಯಂಗಳ ಆರಾರಪ್ಪಂತೆ ಬರೆಯಲು, ಎಪ್ಪತ್ತೆರಡು ಮನೆಗಳಿಗೆ ಮಿಶ್ರಾಕ್ಷರಂಗಳು ನೂರೆಂಟಹವು, ಬಳಿಕದರ ಸಂದು ಸಂದುಗಳಲ್ಲಿ ಅಡ್ಡಚೌಕದಮನೆಗಳಾರನು ಅದರ ಮಧ್ಯದಲ್ಲಿ ಒಂಭತ್ತೊಂಭತ್ತು ಮನೆಗಳಂ ಬರೆದವರಲ್ಲಿ, ಆ ಆ ಮಿಶ್ರಷಡ್ವರ್ಣಂಗಳಂ ದ್ವಾದಶಮಪ್ಪಂತೆ ಬರೆಯಲು ಐವತ್ತು ನಾಲ್ಕು ಮನೆಗಳಿಗೆ ಮಿಶ್ರಾಕ್ಷರಂಗಳೆಪ್ಪತ್ತೆರಡಹವು. ಬಳಿಕ ಚಕ್ರದ ಮೂಲೆ ಮೂಲೆಗಳ ಬಳಸಿ ಮಧ್ಯದಲ್ಲಿ ಒಂದಂಗುಲದಗಲ ಪ್ರಮಾಣವಪ್ಪಂತೆ ರೇಖೆಗಳ ತೆಗೆಯಲು ಹನ್ನೆರಡು ಮೂಲೆಗಳು ಪುಟ್ಟುವವು. ಅವರ ಮಧ್ಯದಲಿ ನೂರೆಂಟು ಮನೆಗಳಂ ಬರೆದವರೊಳು, ಲಕಾರಾಂತರ್ಗತವಾದ ಳಕಾರವೊಂದನುಳುಹಿ, ಅಕಾರದೈವತ್ತುವರ್ಣಂಗಳಂ ಲೋಮವಿಲೋಮದಿಂ ಮಾಯಾಕ್ಕೈಂ ಗೂಡಿ, ಅಷ್ಟೋತ್ತರ ಶತಾಕ್ಷರಂಗಳಂ ಬರೆವುದು. ಮತ್ತಮಾ ಚೌಕದ ಮೂಲೆ ಮೂಲೆಗಳಲ್ಲಿ ಎರಡೆರಡು ಮನೆಗಳಂ ರಚಿಸಿ, ಅವರಲ್ಲಿ ಪೂರ್ವ ಅಗ್ನಿದಿಕ್ಕಿನ ಮನೆ ಮೊದಲ್ಗೊಂಡು ಪರಿವಿಡಿಯಿಂ ಬ ಸ ವ ಅ ಉ ಮ ಹ ಕ್ಷ ಎಂಬ ಅಷ್ಟಾಕ್ಷರಂಗಳಂ ಬರೆವುದು. ಇಲ್ಲಿಗೆ ಯಂತ್ರಾಕ್ಷರನ್ಯಾಸ ಮುಗಿಯಿತು.

ಇನ್ನು ತತ್ವಮಂತ್ರ ಕುಳಸ್ಥಲ ಸಂಬಂಧವೆಂತೆಂದೊಡೆ:_ ಮಧ್ಯದ ಹಕಾರ ಕ್ಷಕಾರ ಬಕಾರಂಗಳೆ ನಿರಂಜನ ಶೂನ್ಯ ನಿಷ್ಕಲತತ್ವ, ಶಕ್ತಿತ್ರಯ, ಪರ ಕಲಾ ನಾದಬಿಂದು ಪ್ರಣವತ್ರಯ. ಕೇವಲ ಲಿಂಗಾಂಗಸಂಬಂಧ ತ್ರಯಾತ್ಮಕವಾಗಿಹವು, ಇನ್ನು ಷಟ್ಕೋಣಗಳ ನ್ಯಾಸಾಕ್ಷರಂಗಳೊಳಗೆ ಪ ಬ ಸ ಎಂಬಕ್ಷರತ್ರಯಂಗಳು ತತ್ವತ್ರಯ, ಆತ್ಮತ್ರಯ, ಚಿತ್ಕಲಾ ನಾದಬಿಂದು ಮಂತ್ರತ್ರಯ ಲಿಂಗತ್ರಯ ಸ್ವರೂಪವಾಗಿಹವು. ಮ ಅ ಉ ಎಂಬಕ್ಷರತ್ರಯಂಗಳೇ ಶಕ್ತಿತ್ರಯ ತನುತ್ರಯ ಸತ್ಕಲಾ ನಾದಬಿಂದು ಪ್ರಣವತ್ರಯ ಅಂಗತ್ರಯ ಸ್ವರೂಪವಾಗಿಹವು. ಇನ್ನು ಮಧ್ಯದಳದ ನ್ಯಾಸಾಕ್ಷರಂಗಳೊಳಗೆ ಹ್ರಂಕಾರಾದಿ ಷಡ್ವರ್ಣಂಗಳೆ ಷಟ್ಸದಾಖ್ಯ, ಷಡಾತ್ಮ, ಷಟ್ಪ್ರಸಾದ ಮಂತ್ರ, ಷಡ್ವಿಧ ಲಿಂಗ ಸ್ವರೂಪವಾಗಿಹವು. ಓಂಕಾರಾದಿ ಷಡ್ವರ್ಣಂಗಳೆ ಷಟ್ಕಲೆ, ಷಡ್ಭೂತ, ಷಡಕ್ಷರಪ್ರಣವ ಷಟ್‌ಸ್ಥಲಾಂಗ ಸ್ವರೂಪವಾಗಿಹವು. ಇನ್ನು ನೀಳಚೌಕದ ಷಡ್ವಿಧ ಭವನ ಮಧ್ಯಸ್ಥವಾದ ಮೂಲೆಮೂಲೆಯ ಮನೆಯಲ್ಲಿ ನ್ಯಾಸವಾಗಿರ್ಪ ಬಲಪ್ರದಕ್ಷಿಣದ ಮ ಅ ಉ ಎಂಬಕ್ಷರತ್ರಯಂಗಳೆ ಲಕ್ಷಣತ್ರಯ, ವರ್ಣತ್ರಯ, ಗುಣತ್ರಯ, ಮೂರ್ತಿತ್ರಯ, ತತ್ವತ್ರಯ, ಶಕ್ತಿತ್ರಯವೆಂಬ ಹದಿನೆಂಟು ತತ್ವ, ಹದಿನೆಂಟು ಮಂತ್ರ, ಹದಿನೆಂಟು ಲಿಂಗಸ್ವರೂಪವಾಗಿಹವು. ಎಡಪ್ರದಕ್ಷಿಣದ ಅಕ್ಷರತ್ರಯಂಗಳೆ ತನುತ್ರಯ, ತನ್ಮಾತ್ರತ್ರಯ, ಇಂದ್ರಿಯತ್ರಯ, ಚೇತನ ತ್ರಯ, ಕಾರಣತ್ರಯ, ಭಾವತ್ರಯವೆಂಬ ಹದಿನೆಂಟು ಕರಣ, ಹದಿನೆಂಟು ಪ್ರಣವ, ಹದಿನೆಂಟು ಅಂಗಸ್ವರೂಪವಾಗಿಹವು. ಇನ್ನು ನಡುವಣ ಒಂಭತ್ತೊಂಭತ್ತು ಮನೆಗಳ ನ್ಯಾಸಾಕ್ಷರಂಗಳೊಳಗೆ ಬಲಪ್ರದಕ್ಷಿಣದ ಮಿಶ್ರಷಡ್ವರ್ಣಂಗಳೆ ಷಡ್ಲಕ್ಷಣ, ಷಡ್ವರ್ಣ, ಷಡ್ಗುಣ ಷಣ್ಮೂರ್ತಿ ಷಟ್ತತ್ವ, ಷಡ್ಭಕ್ತಿಗಳೆಂಬ ಮೂವತ್ತಾರುತತ್ವ, ಮೂವತ್ತಾರುಮಂತ್ರ, ಮೂವತ್ತಾರು ಲಿಂಗಸ್ವರೂಪವಾಗಿಹವು. ಎಡಪ್ರದಕ್ಷಿಣದ ಮಿಶ್ರಷಡ್ವರ್ಣಂಗಳೆ ಷಡ್ವಿಧ ಕರ್ಮೇಂದ್ರಿಯ, ಷಡ್ವಿಧವಿಷಯ, ಷಡ್ವಿಧ ಜ್ಞಾನೇಂದ್ರಿಯ, ಷಡ್ವಿಧ ವಾಯು, ಷಡ್ವಿಧ ಕರಣ, ಷಡ್ವಿಧ ಭಾವ ಎಂಬ ಮೂವತ್ತಾರು ಕರಣ, ಮೂವತ್ತಾರು ಪ್ರಣವ, ಮೂವತ್ತಾರು ಅಂಗ ಸ್ವರೂಪವಾಗಿಹವು. ಇಂತಿವನೊಟ್ಟವಿಸಲು ನೂರೆಂಟು ತತ್ವಕರಣ, ನೂರೆಂಟು ಮಂತ್ರಪ್ರಣವ, ನೂರೆಂಟು ಲಿಂಗಾಂಗಗಳಾದವು.

ಇನ್ನು ಇದೇ ಮರ್ಯಾದೆಯಲ್ಲಿ ಅಡ್ಡಚೌಕಿನ ಷಡ್ವಿಧ ಭವನಂಗಳೆ ಒಂಭತ್ತೊಂಭತ್ತು ಮನೆಗಳಲ್ಲಿ ನ್ಯಾಸವಾಗಿರ್ಪ ಮಿಶ್ರ ಷಡ್ವರ್ಗಂಗಳೆ ಪ್ರತಿ ಮಿಶ್ರ ಸಂಖ್ಯಾಭೇದದಿಂ, ಮೇಳವಿಸಲು ಇನ್ನೂರ ಹದಿನಾರು ತತ್ವಕಿರಣ ಮಂತ್ರ ಪ್ರಣವ ಲಿಂಗಾಂಗಸ್ಥಲಕುಳಂಗಳಾಗಿಹವು.

ಇಂತಿವೆಲ್ಲ ಸ್ಥಳಕುಳಂಗಳಿಗೆ ಲಿಂಗ ಹಸ್ತ ಶಕ್ತಿ ಪ್ರಸಾದ ಈ ನಾಲ್ಕು ಲಿಂಗಸಕೀಲಂಗಳು, ಅಂಗ ಮುಖ ಭಕ್ತಿ ಪದಾರ್ಥ ಈ ನಾಲ್ಕು ಅಂಗ ಸಕೀಲಂಗಳು ಈಂತೀ ಪರಿಯಲ್ಲಿ ಎಲ್ಲಾ ಸಕೀಲಂಗಳ ಸಂಬಂಧವನರಿವುದು.

ಇನ್ನು ಮೇಲಣ ದ್ವಾದಶಾಕೃತಿಗಳ ಮಧ್ಯಸ್ಥವಾದ ನೂರೆಂಟು ಮನೆಗಳ ನ್ಯಾಸಾಕ್ಷರಂಗಳೆ ಭಾವನಾ ಕಲಾಮೂರ್ತಿ, ಭಾವನಾ ತತ್ವಶಿವಶಕ್ತಿ, ಪ್ರಕೃತಿ, ಪುರುಷರೆಂಬ ನೂರೆಂಟುತತ್ವ, ನೂರೆಂಟುಕರಣ, ನೂರೆಂಟು ರುದ್ರ, ನೂರೆಂಟು ಶಕ್ತಿ, ಗುರು ಚರ ಪರವೆಂಬ ಲಿಂಗತ್ರಯ, ಮಂತ್ರ ಜ್ಞಾನ ಪ್ರಸಾದವೆಂಬ ಅಂಗತ್ರಯ, ಸರ್ವನಿರಾಲಂಬಸ್ಥಲವೊಂದು, ಅಂಗಸ್ಥಲ ೪೪, ಲಿಂಗ ಸ್ಥಲ ೫೭ ಇಂತೀ ನೂರೆಂಟು ಸ್ಥಳ ಕುಳಸ್ವರೂಪವಾಗಿಹವು. ಇನ್ನು ಚೌಕ ಮಧ್ಯಸ್ಥವಾದ ಅಷ್ಟಭವನನ್ಯಾಸಾಕ್ಷರಂಗಳೆ ಅಷ್ಟಮೂರ್ತಿ, ಅಷ್ಟತನು, ಅಷ್ಟಮಂತ್ರ, ಅಷ್ಟಾಂಗ, ಲಿಂಗಸಕೀಲ ಸಂಪತ್ತಿನಿಂ, ಮತ್ತಂ ಮೂರು ತೆರನಾದ ಅಷ್ಟಾವರಣ ಸ್ವರೂಪವಾಗಿಹವು. ಇಂತೀ ಸರ್ವಸಿದ್ಧಿ ಕಾರಣವಾದ ಜ್ಞಾನಚಕ್ರೋದ್ಧರಣೆಯ ಸಂಬಂಧ ಸಮಾಪ್ತ ಮಂಗಳಮಹಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀ.

ಸಮಾಪ್ತಂ

## ಸಂಕ್ಷೇಪ ಸೂಚಿ

| | | |
|---|---|---|
| ೧. ಕ.ವಿ.ವಿ.ಧಾ | : | ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. |
| ೨. ಕ.ವಿ.ವಿ. ಹಂ | : | ಕನ್ನಡ ವಿಶ್ವವಿದ್ಯಾಲಯ, ಹಂಪಿ. |
| ೩. ಗು.ವಿ.ವಿ.ಗು | : | ಗುಲಬುರ್ಗಾ ವಿಶ್ವವಿದ್ಯಾಲಯ, ಗುಲಬುರ್ಗಾ |
| ೪. ಬೆಂ.ವಿ.ವಿ.ಬೆಂ | : | ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು |
| ೫. ಶ್ರೀ ಮಂ.ಸಂ.ಸಂ.ಪ್ರ.ಧ | : | ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನಾ ಪ್ರತಿಷ್ಠಾನ, ಧರ್ಮಸ್ಥಳ |
| ೬. ಕ.ಸಾ.ಪ | : | ಕರ್ನಾಟಕ ಸಾಹಿತ್ಯ ಪರಿಷತ್ತು |
| ೭. ಕ.ಲ.ಕ.ಅ. | : | ಕರ್ನಾಟಕ ಲಲಿತಕಲಾ ಅಕಾಡೆಮಿ |
| ೮. ಕ್ರಿ.ಪೂ. | : | ಕ್ರಿಸ್ತ ಪೂರ್ವ |
| ೯. ಕ್ರಿ.ಶ. | : | ಕ್ರಿಸ್ತ ಶಕೆ |
| ೧೦. ಪು.ತಿ.ನೋ | : | ಪುಟ ತಿರುವಿ ನೋಡಿ |
| ೧೧. ಮ.ಪ್ರ | : | ಮಹಾಪ್ರಬಂಧ |
| ೧೨. ಕಿ.ಪ್ರ. | : | ಕಿರು ಪ್ರಬಂಧ |
| ೧೩. ಸಂ. | : | ಸಂಪಾದಕ |
| ೧೪. ಪ್ರ. ಸಂ. | : | ಪ್ರಧಾನ ಸಂಪಾದಕ |

## ಚಿತ್ರಋಣ / ನೆರವು

೧. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨. ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

೪. ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೫. ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನಾ ಪ್ರತಿಷ್ಠಾನ, ಧರ್ಮಸ್ಥಳ.

೬. "ಶಿವಾಗಮ ಸೌರಭ" : ಡಾ. ಜ. ಚ. ನಿ. ಅಧ್ಯಯನ ಪೀಠ ಮತ್ತು ಸಂಶೋಧನಾ ಸಂಸ್ಥೆ, ಬಸವನಗುಡಿ, ಬೆಂಗಳೂರು.

೭. "ಶಿವಾನುಭವ ಶಾಸ್ತ್ರ" : ಕಿರುಗ್ರಂಥ : ಕರ್ನಾಟಕ ವಿಶ್ವವಿದ್ಯಾಲಯ, ಗ್ರಂಥಾಲಯ, ಧಾರವಾಡ.

೮. "ಉದ್ಧರಣೆ ಸಾಹಿತ್ಯ" : ಕಿರುಗ್ರಂಥ : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯. ಶ್ರೀ ಮುರುಘಾಮಠ, ಧಾರವಾಡ.

೧೦. ಶ್ರೀ ವಿಜಯನಾಥ ಶೆಣೈ ಅವರ ಕಲಾಗ್ರಾಮ, ಮಣಿಪಾಲ

೧೧. ಶ್ರೀ ಜಗದ್ಗುರು ರಂಭಾಪುರಿ ಪಂಚಪೀಠ, ಬಾಳೆಹೊನ್ನೂರು.

೧೨. "ಗ್ಯಾಲರಿ ಆಫ್ ರಸ" ಚಾಮರಾಜಪೇಟೆ, ಬೆಂಗಳೂರು.

೧೩. ಕರ್ನಾಟಕ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

೧೪. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೫. ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

೧೬. ಕರ್ನಾಟಕದ ಗಾಜಿನ ಮೇಲಿನ ಚಿತ್ರಕಲೆ, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಕ,ವಿ.ವಿ., ಹಂಪಿ

೧೭. ಜೆ.ಎಸ್.ಎಸ್. ಹಾಲಭಾವಿ ಸ್ಕೂಲ್ ಆಫ್ ಆರ್ಟ, ಧಾರವಾಡ.

೧೮. ಕರ್ನಾಟಕದ ಗಂಜೀಫಾ ಚಿತ್ರಕಲೆ, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಕ. ವಿ. ವಿ., ಹಂಪಿ

೧೯. ಶ್ರೀ. ಎಫ್. ವ್ಹಿ. ಚಿಕ್ಕಮಠ ಸಂಗ್ರಹದಿಂದ.

೨೦. ಅಂತರ್ ಜಾಲ – wiki pidia.

೨೧. ಚೆನ್ನಬಸವ ಪುರಾಣ, ವಿರೂಪಾಕ್ಷ ಪಂಡಿತ

೨೨. ಸುರಪುರ ಶೈಲಿಯ ಚಿತ್ರಕಲೆ – ಒಂದು ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ವಿ., ಗುಲ್ಬರ್ಗಾ

೨೩. ನಿಪ್ಪಾಣಿ ವಾಡೆ ಭಿತ್ತಿ ಚಿತ್ರಕಲೆ–ಒಂದು ಅಧ್ಯಯನ, ಅಪ್ರಕಟಿತ ಎಂ.ಫಿಲ್. ಕಿರುಪ್ರಬಂಧ, ಕ.ವಿ.ವಿ., ಹಂಪಿ

೨೪. ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ – ಒಂದು ಅಧ್ಯಯನ, ಅಪ್ರಕಟಿತ, ಪಿಎಚ್.ಡಿ. ಮಹಾಪ್ರಬಂಧ, ಕ.ವಿ.ವಿ. ಹಂಪಿ

೨೫. ಕರ್ನಾಟಕದ ತೊಗಲು ಗೊಂಬೆ ಚಿತ್ರಕಲೆ–ಒಂದು ಅಧ್ಯಯನ, ಅಪ್ರಕಟಿತ, ಪಿಎಚ್.ಡಿ. ಮಹಾಪ್ರಬಂಧ, ಕ.ವಿ.ವಿ. ಹಂಪಿ

# ಗ್ರಂಥಋಣ


೧. **ಅವಲೋಕನ** : ಸಂ. ಎಚ್ಚೆಸ್ಕೆ
೧೯೮೫ : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ,
ಬೆಂಗಳೂರು

೨. **ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ : ಒಂದು ಅಧ್ಯಯನ** : ಡಾ. ಯಾದಪ್ಪ ಪರದೇಶಿ
೨೦೦೦ : ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ,
ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. **ಉದ್ಧರಣೆ ಸಾಹಿತ್ಯ** : ಡಾ. ಕೆ. ರವೀಂದ್ರನಾಥ
೨೦೧೧ : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ, ವಿದ್ಯಾರಣ್ಯ.

೪. **ಕರ್ನಾಟಕದಲ್ಲಿ ಚಿತ್ರಕಲೆ** : ಡಾ. ಶಿವರಾಮ ಕಾರಂತ
೧೯೭೨ : ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ,
ಮೈಸೂರು

೫. **ಕರ್ನಾಟಕದ ಜನಪದ ಚಿತ್ರಕಲೆ** : ಡಾ. ಎಸ್. ಸಿ. ಪಾಟೀಲ
೧೯೯೩ : ವೀರಶೈವ ಅಧ್ಯಯನ ಸಂಸ್ಥೆ,
ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ

೬. **ಕನ್ನಡ ಹಸ್ತಪ್ರತಿಗಳು–ಒಂದು ಅಧ್ಯಯನ** : ಡಾ. ಬಿ. ಕೆ. ಹಿರೇಮಠ
೧೯೯೭ : ವೀರಶೈವ ಅಧ್ಯಯನ ವೇದಿಕೆ, ಕಸಬಾ ಜಂಬಗಿ,
ವಿಜಾಪೂರ.

೭. **ಕರ್ನಾಟಕ ಜಾನಪದ ಕಲೆಗಳ ಕೋಶ** : ಡಾ. ಹಿ. ಚಿ. ಬೋರಲಿಂಗಯ್ಯ (ಸಂ).

೮. **ಕರ್ನಾಟಕ ಹಸ್ತಪ್ರತಿ ಚಿತ್ರಕಲೆ** : ಡಾ. ಎಚ್. ಎನ್. ಚಿತ್ರಗಾರ
೨೦೦೫ : ಕನ್ನಡ ವಿಶ್ವವಿದ್ಯಾಲಯ,
ಹಂಪಿಗೆ ಸಾದರಪಡಿಸಿದ ಅಪ್ರಕಟಿತ ಮಹಾಪ್ರಬಂಧ

೯. **ಕರ್ನಾಟಕ ಸಂಸ್ಕೃತಿ ಸಮೀಕ್ಷೆ** : ಡಾ. ಹೆಚ್. ತಿಪ್ಪೇರುದ್ರಸ್ವಾಮಿ
೧೯೬೮ : ಕೃಷ್ಣಮೂರ್ತಿಪುರಂ, ಮೈಸೂರು

೧೦. **ಕರ್ನಾಟಕದ ಭಿತ್ತಿ ಚಿತ್ರಗಳು** : ಬಿ. ವಿ. ಕೆ. ಶಾಸ್ತ್ರಿ
೧೯೮೩ : ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು

೧೧. **ಕರ್ನಾಟಕ ಭಿತ್ತಿ ಚಿತ್ರ ಪರಂಪರೆ** : ಡಾ. ಅ. ಲ. ನರಸಿಂಹನ್
೧೯೯೮ : ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು.

೧೨. **ಕರ್ನಲ್ ಮೆಕೆಂಜಿ** : ಅಜ್ಜೀಬಳ ರಾ. ಗ.
೧೯೮೪ : ಐ. ಬಿ. ಎಚ್. ಪ್ರಕಾಶನ,
ಬೆಂಗಳೂರು

೧೩. **ಕರ್ನಾಟಕ ವಾಸ್ತುಶಿಲ್ಪ ಮತ್ತು ಚಿತ್ರಕಲೆ** : ಡಾ. ಸಿಂದಗಿ ರಾಜಶೇಖರ
೧೯೮೮ : ಸುಜಾತಾ ಪಬ್ಲಿಕೇಶನ್ಸ್, ಧಾರವಾಡ

೧೪. **ಕಾಶ್ಯಪ ಶಿಲ್ಪ ಶಾಸ್ತ್ರ** : ಜಿ. ಜ್ಞಾನಾನಂದ (ಅನು)
೧೯೯೮ : ಕರ್ನಾಟಕ ಶಿಲ್ಪಕಲಾ ಅಕಾಡೆಮಿ,
ಬೆಂಗಳೂರು

೧೫. **ಕರ್ನಾಟಕ ಪ್ರಾಗಿತಿಹಾಸಕಾಲದ ಕಲೆ** : ಅ. ಸುಂದರ
೧೯೯೪ : ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು

೧೬. **ಕಲಾಕೋಶ** : ಪಿ. ಆರ್. ತಿಪ್ಪೇಸ್ವಾಮಿ (ಸಂ)
೧೯೯೪ : ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು

೧೭. **ಕಲೆನೆಲೆ** : ವಿ. ಕೃ. ಗೋಕಾಕ
೧೯೮೫ : ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ,
ಮೈಸೂರು

೧೮. **ಕರ್ನಾಟಕದ ಗಾಜಿನ ಮೇಲಿನ ಚಿತ್ರಕಲೆ** : ಡಾ. ನಿಂಗಪ್ಪ ಅಂಗಡಿ
೨೦೧೧ : ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ,
ಕ. ವಿ. ವಿ., ಹಂಪಿ

೧೯. **ಕರ್ನಾಟಕದ ಗಂಜೀಫಾ ಚಿತ್ರಕಲೆ** : ಡಾ. ಶಂಕರೆಪ್ಪ ಕುಂದಗೋಳ
೨೦೧೧ : ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ,
ಕ. ವಿ. ವಿ., ಹಂಪಿ

೨೦. **ಕರ್ನಾಟಕದ ತೊಗಲುಗೊಂಬೆ ಚಿತ್ರಕಲೆ – ಒಂದು ಅಧ್ಯಯನ** : ಡಾ. ಶಶಿಕಲಾ ಹೂಗಾರ
೨೦೦೪ : ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ,
ಕ. ವಿ. ವಿ., ಹಂಪಿ

೨೧. **ಗೌರವ** : ಬಿ. ವಿ. ಶಿರೂರ (ಸಂ)
೧೯೮೬ : ವೀರಶೈವ ಅಧ್ಯಯನ ಸಂಸ್ಥೆ,
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ

೨೨. **ನಿಜದ ನೆಲೆ** : ಡಾ. ಎಸ್. ಸಿ. ಪಾಟೀಲ ಮತ್ತು ಸತ್ಯಾನಂದ ಪಾತ್ರೋಟ (ಸಂ)
೨೦೦೩ : ಬಸವೇಶ್ವರ ವಿದ್ಯಾವರ್ಧಕ ಸಂಘ,
ಬಾಗಲಕೋಟೆ

೨೩. **ನಿರಂಜನ ವಂಶರತ್ನಾಕರ** : ಫ. ಗು. ಹಳಕಟ್ಟಿ (ಸಂ)
೧೯೩೨ : ಸಂಗ್ರಹ: ಫ. ಗು. ಹಳಕಟ್ಟಿ ಸ್ಮಾರಕ
ಬಿ. ಎಲ್. ಡಿ. ಸಂಸ್ಥೆ, ವಿಜಾಪುರ

೨೪. **ಚಿತ್ರಕಲೆ** : ಅ. ನ. ಕೃಷ್ಣರಾಯ್
೧೯೭೦ : ವಿದ್ಯಾನಿಧಿ ಬುಕ್ ಡಿಪೋ,
ಮೈಸೂರು

೨೫. **ಚಿತ್ರಕಲೆ** : ಬಿ. ಪಿ. ಬಾಯರಿ
೧೯೮೦ : ಕನ್ನಡ ಸಾಹಿತ್ಯ ಪರಿಷತ್,
ಬೆಂಗಳೂರು

೨೬. **ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು** : ಡಾ. ಎಸ್. ಸಿ. ಪಾಟೀಲ (ಸಂ)
೧೯೯೫ : ಹಾಲಭಾವಿ ಸ್ಕೂಲ ಆಫ್ ಆರ್ಟ
ಧಾರವಾಡ

೨೭. **ಚಿತ್ರಕಲಾ ಪ್ರಪಂಚ** : ಪಿ. ಆರ್. ತಿಪ್ಪೇಸ್ವಾಮಿ (ಪ್ರ. ಸಂ.)
೧೯೯೩ : ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು

೨೮. **ನಾ ಕಂಡ ಕರ್ನಾಟಕ** : ಡಾ. ಕೃಷ್ಣಾನಂದ ಕಾಮತ
೨೦೦೮ : ಕರ್ನಾಟಕ ಇತಿಹಾಸ ಸಂಶೋಧನ ಮಂಡಲ,
ಧಾರವಾಡ

೨೯. **ನಿಪ್ಪಾಣಿವಾಡೆ ಭಿತ್ತಿ ಚಿತ್ರಕಲೆ : ಒಂದು ಅಧ್ಯಯನ** : ಬಿ. ಎಂ. ಪಾಟೀಲ
೨೦೦೭ : ಅಪ್ರಕಟಿತ ಎಂ.ಫಿಲ್.ಕಿರು ಪ್ರಬಂಧ,
ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೦. **ನಿಪ್ಪಾಣಿ ದರ್ಶನ** : ಶ್ರೀ ಯಶವಂತರಾವ್ ಚವ್ಹಾಣ
ಸಂಗ್ರಹ, ನಿಪ್ಪಾಣಿಕರ್ ವಾಡೆ, ನಿಪ್ಪಾಣಿ

೩೧. **ನವಲಿಂಗ ಸಾಹಿತ್ಯ** : ಡಾ. ಜ. ಚ. ನಿ,
೧೯೬೨: ಅರವಿಂದ ಮುದ್ರಣಾಲಯ, ಕೊಪ್ಪಳ

೩೨. **ಪ್ರಾಚೀನ ಕರ್ನಾಟಕದಲ್ಲಿ ಶೈವಧರ್ಮ** : ಡಾ. ಎಸ್. ಎನ್. ಕಡಪಟ್ಟಿ
೨೦೦೮ : ಕರ್ನಾಟಕ ಇತಿಹಾಸ ಸಂಶೋಧನ ಮಂಡಲ,
ಧಾರವಾಡ

೩೩. **ಪ್ರಾಚೀನ ಭಾರತದ ಇತಿಹಾಸ ಮತ್ತು ಸಂಸ್ಕೃತಿ** : ಪ್ರೊ. ರಂಗನಾಥ
೧೯೮೧ : ವಿಜಯ ಬುಕ್ ಡಿಪೋ, ಸ್ಟೇಷನ್ ರಸ್ತೆ,
ಗದಗ

೩೪. **ಪಂಚೀಕರಣ** : ಶ್ರೀ ನಿರ್ವಾಣ ಶಿವಯೋಗಿಗಳು
ಎ. ಆರ್. ಶಿವನಾಗಪ್ಪ ಮತ್ತು ಸನ್ಸ್ ವಾಗ್ವಿಲಾಸ್
ಬುಕ್ ಡಿಪೋ ಗಾಂಧೀ ಚೌಕ, ಹುಬ್ಬಳ್ಳಿ.

೩೫. **ಭಾರತೀಯ ಸಂಸ್ಕೃತಿ ದರ್ಶನ** : ಡಾ. ಎಸ್. ಶ್ರೀಕಂಠಶಾಸ್ತ್ರಿಗಳು
೧೯೬೨ : ಲೇಖನ : ಹರಪ್ಪ ಮೊಹೆಂಜೋದಾರೋ :
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೩೬. **ಬೆಳೆದುಬಂದ ಭಾರತದ ಚಿತ್ರಕಲೆ** : ಪಿ. ಅರ್. ತಿಪ್ಪೇಸ್ವಾಮಿ
೧೯೬೨ : ಕಲಾಕ್ಷೇತ್ರ, ಮೈಸೂರು

೩೭. **ಭಾರತೀಯ ಕಲೆಗಳಲ್ಲಿ ಕಿರಾತಾರ್ಜುನೀಯ ಪ್ರಸಂಗ** : ಎಂ. ಎಸ್. ನಾಗರಾಜ್
೧೯೭೯ : ದೆಹಲಿ

೩೮. **ಬಾನಯ್ಯ ಗರುಡಾದ್ರಿ** : ಬಸವರಾಜ್ ಉಪ್ಪೀನ
೧೯೯೫ : ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು

೩೯. **ಬಸವ ಪುರಾಣ** : ಭೀಮಕವಿ
ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ

೪೦. **ಭಾರತೀಯ ಚಿತ್ರಕಲೆ** : ಡಾ. ಶಿವರಾಮ ಕಾರಂತ
೧೯೩೦ : ಕನ್ನಡ ಪುಸ್ತಕ ಪ್ರಾಧಿಕಾರ, ಚಾಮರಾಜಪೇಟೆ,
ಬೆಂಗಳೂರು

೪೧. **ಭಾರತೀಯ ಚಿತ್ರಕಲೆ** : ಸಿ. ಶಿವರಾಮ ಮೂರ್ತಿ
೧೯೯೮ : ನ್ಯಾಷನಲ್ ಬುಕ್ ಟ್ರಸ್ಟ್ ಆಫ್ ಇಂಡಿಯಾ, ಪಿ. ಆರ್. ತಿಪ್ಪೇಸ್ವಾಮಿ (ಅನು)
ಹೊಸದೆಹಲಿ

೪೨. **ಭಾರತೀಯ ಕಲೆ** : ಎನ್. ಮರಿಶಾಮಾಚಾರ್
೨೦೦೧ : ಸಿ. ಎಂ. ಎನ್. ಪ್ರಕಾಶನ, ಜಯನಗರ,
ಬೆಂಗಳೂರು.

೪೩. **ಶ್ರೀ ಮದಥಣಿ ಶಿವಯೋಗೀಶ ಮಹಿಮೆ** : ಪಂಡಿತ ಚಂದ್ರಶೇಖರ ಶಾಸ್ತ್ರಿ
೧೯೭೭ : ರಾಜ ಪ್ರಿಂಟರ್ಸ್, ಧಾರವಾಡ (ಮೂರನೇ ಮುದ್ರಣ)

೪೪. **ಮೂರ್ತಿಶಿಲ್ಪ ನೆಲೆ-ಹಿನ್ನೆಲೆ** : ಶ್ರೀ ಎನ್. ಕೆ. ರಾಮಚಂದ್ರರಾವ್
೧೯೭೫ : ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು

೪೫. **ಮರೆತು ಹೋದ ಮಹಾ ಸಾಮ್ರಾಜ್ಯ ವಿಜಯನಗರ** : ಸದಾನಂದ ಕನವಳ್ಳಿ (ಅನು)
೧೯೯೨ : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೬. **ರೇಖಾಚಿತ್ರ** : ಶ್ರೀ ಬಿ. ವಿ. ಕೆ. ಶಾಸ್ತ್ರಿ
೧೯೯೧ : ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು

೪೭. **ಲಿಂಗಾಂಗ ಸಾಮರಸ್ಯ** : ಡಾ. ಎಸ್. ಆರ್. ಸಿದ್ಧಲಿಂಗಪ್ಪ
೨೦೦೮ : ಅಪ್ರಕಟಿತಗ್ರಂಥ, ವೀರಶೈವ ಮತ್ತು ಸಮಕಾಲೀನ ಅಧ್ಯಯನ ಸಂಸ್ಥೆ : ೨ ನೇ ಮುಖ್ಯರಸ್ತೆ, ತೆಂಗಿನತೋಟ, ನಾಗರಭಾವಿ, ಬೆಂಗಳೂರು – ೭೨.

೪೮. **ವರ್ಣಸಂಚಯ** : ಡಾ. ಎಸ್. ಸಿ. ಪಾಟೀಲ
೨೦೦೧ : ವಿಜಯ ಚಿತ್ರಕಲಾ ಮಹಾ ವಿದ್ಯಾಲಯ, ಇಳಕಲ್.

೪೯. **ವೀರಶೈವದ ಉಗಮ ಮತ್ತು ಪ್ರಗತಿ** : ಡಿ. ಎನ್. ಮಲ್ಲಪ್ಪ
೧೯೬೯ : ಗುಬ್ಬಿ ತೋಟದಪ್ಪನವರ ಧರ್ಮಸಂಸ್ಥೆ, ಬೆಂಗಳೂರು

೫೦. **ವೀರಶೈವ ಸಾಹಿತ್ಯ ಮತ್ತು ಇತಿಹಾಸ** : ಶ್ರೀ ಬಿ. ಶಿವರಾಮ ಮೂರ್ತಿಶಾಸ್ತ್ರಿಗಳು
೧೯೫೩ : ಶರಣ ಸಾಹಿತ್ಯ ಕಾರ್ಯಾಲಯ, ಬಳೇಪೇಟೆ, ಬೆಂಗಳೂರು

೫೧. **ವೃಷಭೇಂದ್ರವಿಳಾಸ** : ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು
೨೦೦೮ : ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು

೫೨. **ವಿರೂಪಾಕ್ಷ ಪಂಡಿತ ಕೃತ –ಚೆನ್ನಬಸವ ಪುರಾಣ** : ಶ್ರೀ ವೀರಭದ್ರಪ್ಪ ಹಾಲಭಾವಿ, ಶ್ರೀ ಶಿವಲಿಂಗಪ್ಪ ಶಿ. ಬಸವನಾಳ (ಸಂ)
೧೯೫೪ : ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ವಾಙ್ಮಯ ಶಾಖೆ, ಧಾರವಾಡ

೫೩. **ವಿರೂಪಾಕ್ಷ ಪಂಡಿತ ಕೃತ–ಚೆನ್ನಬಸವ ಪುರಾಣ** : ಚಂದ್ರಶೇಖರ ಎಂ. (ಸಂ)
೧೯೭೯ : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೫೪. **ವಿಜಯನಗರ ಪೇಂಟಿಂಗ್ಸ್** : ಸಿ. ಶಿವರಾಮ ಮೂರ್ತಿ
೧೯೮೫ : ನ್ಯಾಷನಲ್ ಬುಕ್ ಟ್ರಸ್ಟ್ ಆಫ್ ಇಂಡಿಯಾ, ಹೊಸದಿಲ್ಲಿ.

೫೫. **ವೀರಶೈವ ಪಂಚಪೀಠ ಪರಂಪರೆ** : ಶ್ರೀ ಕಾಶಿ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯರು
೨೦೦೭ : ಶ್ರೀ ಜಗದ್ಗುರು ಸದ್ಧರ್ಮ ಸಿಂಹಾಸನ ಜ್ಞಾನಗುರು ವಿದ್ಯಾಪೀಠ, ಉಜ್ಜಯನಿ

೫೬. ವೀರಾಗಮ : ಡಾ. ಜ. ಚ. ನಿ.
೧೯೯೨ : ಶ್ರೀ ಜಗದ್ಗುರು ಪಂಚಾಚಾರ್ಯ ಸೇವಾ ಸಂಘ, ಗದಗ, ಬೆಟಗೇರಿ

೫೭. **ವೀರಶೈವ ವಿನ್ಯಾಸ** : ಡಾ. ಸಂಗಮೇಶ ಸವದತ್ತಿಮಠ
೨೦೦೦ : ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು

೫೮. **ವಚನ ಸಾಹಿತ್ಯ : ಒಂದು ಸಾಂಸ್ಕೃತಿಕ ಅಧ್ಯಯನ** : ಡಾ. ಪಿ. ವಿ. ನಾರಾಯಣ
೧೯೮೩ : ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯಮಠ, ಗದಗ

೫೯. **ವಿಜಯನಗರ ಅಧ್ಯಯನ ಸಂಪುಟಗಳು** : ಸಂಪುಟ ೭ : ಕೆ.ಆರ್.ರಾಮಕೃಷ್ಣ ಟಿ.ಎಸ್. ಗಂಗಾಧರ (ಸಂ)
೨೦೦೩ : ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ

೬೦. **ವಿಜಯನಗರ ಅಧ್ಯಯನ ಸಂಪುಟಗಳು** : ಸಂಪುಟ ೧೦ : ಡಾ. ಆರ್. ಗೋಪಾಲ, ಚಿಕ್ಕ ಮಾರೇಗೌಡ (ಸಂ)
೨೦೦೪ : ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ

೬೧. **ಶಿವಾಗಮ ಸೌರಭ** : ಎಂ. ಜಿ. ನಂಜುಂಡಾರಾಧ್ಯ (ಸಂ)
೧೯೮೬ : ಶ್ರೀ ಜ. ಚ. ನಿ. ಅಧ್ಯಯನ ಪೀಠ ಮತ್ತು ಸಂಶೋಧನಾ ಸಂಸ್ಥೆ, ಬಸವನಗುಡಿ, ಬೆಂಗಳೂರು.

೬೨. **ಶಿವಾನುಭವಶಾಸ್ತ್ರ** : ಶ್ರೀ ಸಿದ್ಧಲಿಂಗಮಹಾಸ್ವಾಮಿಗಳು
೧೯೫೮ : ಬಸವಲಿಂಗ ಗ್ರಂಥಮಾಲಾ, ಕವಿತಾಳ ಕಲ್ಮಠ, ರಾಯಚೂರು ಜಿಲ್ಲೆ.

೬೩. **ಶಿವನಿಧಿ : ಶ್ರೀ ತತ್ವನಿಧಿಯ ತೃತೀಯ ಸಂಪುಟ** : ಡಾ. ಕೆ. ವಿ. ರಮೇಶ್ (ಪ್ರ. ಸಂ.) (ಕನ್ನಡ ಅನುವಾದ)
೨೦೦೪ : ಪ್ರಾಚ್ಯವಿದ್ಯಾ ಸಂಶೋಧನಾಲಯ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೬೪. **ಶಿವಸಹಸ್ರನಾಮ ಭಾಷ್ಯ ಸಂಗ್ರಹ** : ಶ್ರೀ ದೇವುಂಡ ಹಳ್ಳಿ ನಂಜುಂಡ ದೀಕ್ಷಿತ
೧೯೧೨ : ಐರೀಷ್ ಪ್ರೆಸ್, ಬೆಂಗಳೂರು

೬೫. **ಶಿವರಾತ್ರಿ ಶಿವಾಚಾರ್ಯ** : ಶ್ರೀ ಎಂ. ಜಿ. ನಂಜುಂಡಾರಾಧ್ಯ
೧೯೬೧ : ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು

೬೬. **ಶಾಸನ ವ್ಯಾಸಂಗ** : ಡಾ. ಎಂ. ಎಂ. ಕಲಬುರ್ಗಿ :
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೬೭. **ಶ್ರೀ ಮಹಾಲಿಂಗೇಶ್ವರ ಮಹಾತ್ಮೆ** : ಅಣ್ಣಾಜಿ ಫಡತಾರೆ
ಮಹಾಲಿಂಗೇಶ್ವರ ಮಠ, ಮಹಾಲಿಂಗಪುರ, ಬಾಗಲಕೋಟೆ ಜಿಲ್ಲೆ.

೧೮. **ಶೃಂಗಾರ ಲಹರಿ** : ಪ್ರೊ. ಎಂ. ಎಚ್. ಕೃಷ್ಣಯ್ಯ
೧೯೮೯ : ಸಿ. ಎಂ. ಎನ್. ಪ್ರಕಾಶನ, ಎಸ್.ಆರ್.ನಗರ,
ಬೆಂಗಳೂರು

೧೯. **ಷಟ್‌ಸ್ಥಲ ಜ್ಞಾನ ಸಾರಾಮೃತ** : ಡಾ. ಆರ್. ಸಿ. ಹಿರೇಮಠ
೧೯೬೪ : ಮುರುಘಾಮಠ, ಧಾರವಾಡ

೨೦. **ಸಂಸ್ಕೃತಿ** : ಡಿ. ವಿ. ಜಿ. (ಸಂ)
೧೯೫೪ : ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ,
ಮೈಸೂರು ಸಂಸ್ಥಾನ

೨೧. **ಸ್ವಾತಂತ್ರ್ಯದ ಅನಾದಿತ್ವ ಅಥವಾ "ವೈದಿಕ ತಾಂತ್ರಿಕ ರಹಸ್ಯ"** : ಶ್ರೀ ಗೌರಿನಾಥ ಶಾಸ್ತ್ರಿಗಳು
೧೯೫೨ : ಕಾಟಾಪೂರ ಹಿರೇಮಠ,
ಮು ಇಲಾಳ ಅಮೀನಗಡ, ತಾಲೂಕ ಹುನಗುಂದ

~~೨೨.~~ **ಸುರಪುರ ಶೈಲಿಯ ಚಿತ್ರಕಲೆ** : ಡಾ. ಮಲ್ಲಿಕಾರ್ಜುನ ಬಾಗೋಡಿ
೨೦೦೬ : ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ,
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

೨೩. **ಸವಿ ಸಂಚಯ** : ಡಾ. ಆರ್. ಸಿ. ಹಿರೇಮಠ (ಸಂ)
೧೯೭೪ : ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ

೨೪. **ಹಸ್ತಪ್ರತಿಶಾಸ್ತ್ರ** : ಡಾ. ಎಂ. ಎಂ. ಕಲಬುರ್ಗಿ
೧೯೮೩ : ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ

೨೫. **ಜ್ಞಾನ ಗಂಗೋತ್ರಿ** : ಸಂಪುಟ – ೫ : ಕಲೆ ಸಾಹಿತ್ಯ : ಡಾ.ದೇ.ಜವರೇಗೌಡ/ನಿರಂಜನ (ಸಂ)
೧೯೭೩ : ಕರ್ನಾಟಕ ಸರಕಾರ, ಬೆಂಗಳೂರು

೨೬. **ಕ್ಷೇತ್ರಜ್ಞಸುಮನೋವಾದಂ** : ಪಂಡಿತ ಬಸವರಾಜ ಶಾಸ್ತ್ರಿಗಳು
ಬೃಹನ್ಮಠ, ಪಗಡದಿನ್ನಿ.

* * *

1. **Indian painting** : C. Sivaramamurty
   1970 : National Book Trust of India,
   New Delhi

2. **Inscriptions at Vijay Nagar** : S. Rajashekar
   1984: Sujata Publication, Dharwad

3. **Mural Paintings in India** : J. C. Nagpal
   1987 : Jain publication, Delhi

4. **South Indian Paintings** : C. Sivaramamurty
   1968 : National Museum, Delhi

5. **The Vratyas in Ancient India** : Dr.Radhakrishna Choudhary
   1964 : Varanasi The Choukamba
   Sanskrit Series Office.

6. **The Art of Indian Asia :** Volume No. II : Henrich Zimmer

7. **Vijay Nagar Paintings at Virupaksh Temele-Hampi** : C. T. M. Kotraiah
   1958

8. **Vijay Nagar Paintings from Lepakshi** : C. Sivaramamurty
   1936 : Vijaynagar Six Centenary
   Commemoration Volume, Dharwad

9. **My Contemprory Artist** : D. V. Halabhavi
   1968 : 60th Birth day, Dharwad

10. **Indian painting** : Miraseth
    2006 (The Great Mural Tredition)

